





ಶ್ರೀ ರಾಮಕೃಷ್ಣ ಲೀಲಾಪ್ರಸಂಗ





ಶ್ರೀ ರಾಮಕೃಷ್ಣ ಆಶ್ರಮ, ಮೈಸೂರು 570020

"ಧರ್ಮ, ಅಧ್ಯಾತ್ಮ, ಭಗವಂತ – ಈ ವಿಷಯಗಳಲ್ಲಿ
ನಂಬಿಕೆ ಇರುವವರಾಗಲಿ, ಇಲ್ಲದಿರುವವರಾಗಲಿ
ಶ್ರೀರಾಮಕೃಷ್ಣರಲ್ಲಿ ಗೌರವ ತಾಳದೆ ಇರುವುದು
ಅಸಾಧ್ಯ. ಏಕೆಂದರೆ ಅವರ ವ್ಯಕ್ತಿತ್ವವು ಅಷ್ಟು
ಧಾರಣವಾದದ್ದು. ತ್ಯಾಗ ಮತ್ತು ವೈರಾಗ್ಯಗಳ
ಯಿಂದ ಅಂತಹ ಅಸಮಾನವಾದ ಮತ್ತೊಬ್ಬ ವ್ಯಕ್ತಿ
ಯನ್ನು ಜಗತ್ತಿನ ಧಾರ್ಮಿಕ ಇತಿಹಾಸದಲ್ಲಿ ಕಾಣು
ವುದು ಅಸಾಧ್ಯ.... ದೇವರಿದ್ದರೆ, ಅವತಾರಗಳಿದ್ದರೆ,
ಆ ನಿಷ್ಠುರ ಶಿಲಾಮೂರ್ತಿಗಳಿಗಿಂತ ಈ ನಗುವ,
ಅಳುವ, ಜಗತ್ತಿನ ಹಿತಕ್ಕಾಗಿ ತನ್ನ ತಪಸ್ಸನ್ನು ಧಾರೆ
ಯೆರೆದ ಮುಗ್ಧ ಅನಕ್ಷರಸ್ಥ ಮಹಾಪುರುಷನು ಸಹ
[illegible] ನಾದವನೆಂಬುದು ನನ್ನಂತಹವರ
[illegible] ಡಿಯಿಂದ

ಶ್ರೀರಾಮಕೃಷ್ಣ ಲೀಲಾಪ್ರಸಂಗ

ಸ್ವಾಮಿ ಶಾರದಾನಂದ

ಶ್ರೀರಾಮಕೃಷ್ಣ ಲೀಲಾಪ್ರಸಂಗ

(ಪೂರ್ವಾರ್ಧ)

ಮೂಲ ವಂಗ ಲೇಖಕರು
ಸ್ವಾಮಿ ಶಾರದಾನಂದ



ಶ್ರೀರಾಮಕೃಷ್ಣ ಆಶ್ರಮ
ಮೈಸೂರು - ೫೭೦ ೦೨೦

ಪ್ರಕಾಶಕರು
ಅಧ್ಯಕ್ಷರು
ಶ್ರೀರಾಮಕೃಷ್ಣ ಆಶ್ರಮ
ಮೈಸೂರು-೫೭೦ ೦೨೦

ಮೊದಲನೆಯ ಪರಿಷ್ಕೃತ ಮುದ್ರಣ—೧೯೯೪
೩೦೦೦ ಪ್ರತಿಗಳು

ಮುದ್ರಕರು
ಶ್ರೀ ವೀರಾ ಪ್ರಿಂಟರ್ಸ್, ಮೈಸೂರು-೧

ಪ್ರಕಾಶಕರ ಮಾತು

'ಶ್ರೀರಾಮಕೃಷ್ಣ ಲೀಲಾಪ್ರಸಂಗ'ದ ಪ್ರತಿಗಳು ಕನ್ನಡದಲ್ಲಿ ಅನೇಕ ವರ್ಷಗಳಿಂದ ದೊರಕುತ್ತಿರಲಿಲ್ಲ. ಹಲವು ಕಡೆಗಳಿಂದ ಈ ಅಮೂಲ್ಯ ಕೃತಿಯ ಹೊಸ ಪ್ರಕಟಣೆಗಾಗಿ ಬೇಡಿಕೆಗಳು ಬರುತ್ತಿದ್ದುವು. ಈಗ ಈ ಗ್ರಂಥದ ಹೊಸ ಅನುವಾದವನ್ನು ಪ್ರಕಟಿಸಿದ್ದೇವೆ. ಈ ಅನುವಾದದ ಹಸ್ತಪ್ರತಿಯನ್ನು ಆಮೂಲಾಗ್ರವಾಗಿ ಓದಿ ಅಲ್ಲಲ್ಲಿ ತಿದ್ದುಪಡಿ ಮಾಡಿ, ಅದರಲ್ಲಿ ಬರುವ ಹಾಡುಗಳ ಪದ್ಯಾನುವಾದವನ್ನೂ ಮಾಡಿ ಕೊಟ್ಟ ಹೆಸರಾಂತ ಕನ್ನಡ ಸಾಹಿತಿಗಳಾದ ಡಾ. ಜಿ. ಎಸ್. ಶಿವರುದ್ರಪ್ಪನವರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು. ಧಾರ್ಮಿಕ ಮತ್ತು ಸಾಮಾಜಿಕ ಹಿನ್ನೆಲೆಯಲ್ಲಿ ಶ್ರೀ ರಾಮಕೃಷ್ಣರ ವೈಶಿಷ್ಟ್ಯವನ್ನು ಅತ್ಯಂತ ವಿಚಾರಪೂರ್ಣವಾಗಿ ವಿವರಿಸಿ ಪ್ರಬುದ್ಧ ಭಾಷೆಯಲ್ಲಿ ಒಂದು ಸುಂದರ ಮುನ್ನುಡಿಯನ್ನು ಬರೆದುಕೊಟ್ಟು ಈ ಗ್ರಂಥದ ಮೌಲ್ಯವನ್ನು ಹೆಚ್ಚಿಸಿರುವ ಸುಪ್ರಸಿದ್ಧ ಸಾಹಿತಿಗಳಾದ ಡಾ. ಪ್ರಭುಶಂಕರ ಅವರಿಗೂ ನಮ್ಮ ಸಪ್ರೇಮ ಕೃತಜ್ಞತೆಗಳು. ಈ ಗ್ರಂಥವು ಓದುಗರ ಮೆಚ್ಚಿಗೆಯನ್ನು ಪಡೆದು ಅವರ ಸಾರ್ಥಕ ಆಧ್ಯಾತ್ಮಿಕ ಬದುಕಿಗೆ ನೆರವಾಗುವುದೆಂಬುದು ನಮ್ಮ ಆಶಯ.

ಪ್ರಕಾಶಕರು

ವಿಷಯಸೂಚಿ

ಮೊದಲನೆಯ ಭಾಗ

ಪೂರ್ವಕಥೆ ಮತ್ತು ಬಾಲ್ಯ ಜೀವನ

	ಮುನ್ನುಡಿ	x
	ಸ್ವಾಮಿ ಶಾರದಾನಂದ	
❋	ಅವತರಣಿಕೆ	೩
೧	ಯುಗ — ಪ್ರಯೋಜನ	೧೦
೨	ಕಾಮಾರಪುಕುರ್ ಮತ್ತು ಪೂರ್ವಜರು	೧೭
೩	ಕಾಮಾರಪುಕುರದಲ್ಲಿ ಧಾರ್ಮಿಕ ಕುಟುಂಬ	೨೪
೪	ಚಂದ್ರಾದೇವಿಯ ಅಲೌಕಿಕ ಅನುಭವಗಳು	೩೫
೫	ಮಹಾಪುರುಷನ ಜನ್ಮಕಥೆ	೪೧
೬	ಬಾಲ್ಯ ಜೀವನ	೪೪
೭	ಬಾಲಕ ಗದಾಧರ	೫೫
೮	ಯೌವನದ ಹೊಸ್ತಿಲಿನಸಲ್ಲಿ	೬೪

ಎರಡನೆಯ ಭಾಗ

ಸಾಧಕಭಾವ

❋	ಸಾಧಕಭಾವ ವಿಮರ್ಶೆಯ ಪ್ರಯೋಜನ (ಪೀಠಿಕೆ)	೭೯
೧	ಸಾಧಕ ಮತ್ತು ಸಾಧನೆ	೮೯
೨	ಅವತಾರ ಜೀವನದಲ್ಲಿ ಸಾಧಕಭಾವ	೯೭
೩	ಸಾಧಕಭಾವದ ಉದಯ	೧೧೧
೪	ದಕ್ಷಿಣೇಶ್ವರದಲ್ಲಿ ಕಾಳೀ ಮಂದಿರ	೧೧೭
೫	ಅರ್ಚಕ ವೃತ್ತಿಯ ಸ್ವೀಕಾರ	೧೩೧
೬	ವ್ಯಾಕುಲತೆ ಮತ್ತು ಪ್ರಥಮ ದರ್ಶನ	೧೪೨
೭	ಸಾಧನೆ ಮತ್ತು ದಿವ್ಯೋನ್ಮತ್ತತೆ	೧೫೦
೮	ಸಾಧನೆ ಮುಂದುವರಿದುದು	೧೬೩
೯	ವಿವಾಹ ಮತ್ತು ದಕ್ಷಿಣೇಶ್ವರಕ್ಕೆ ಪುನರಾಗಮನ	೧೮೫

೧೦ ಭೈರವೀ ಬ್ರಾಹ್ಮಣಿಯ ಆಗಮನ ೧೯೩
೧೧ ಶ್ರೀರಾಮಕೃಷ್ಣರ ತಂತ್ರ ಸಾಧನೆ ೨೦೩
೧೨ ವಾತ್ಸಲ್ಯ ಸಾಧನೆ ೨೧೬
೧೩ ಮಧುರಭಾವವನ್ನು ಕುರಿತು ೨೨೮
೧೪ ಶ್ರೀರಾಮಕೃಷ್ಣರ ಮಧುರಭಾವ ಸಾಧನೆ ೨೪೩
೧೫ ಶ್ರೀರಾಮಕೃಷ್ಣರ ವೇದಾಂತ ಸಾಧನೆ ೨೫೩
೧೬ ವೇದಾಂತ ಸಾಧನೆಯ ಕೊನೆಯ ಹಂತ ಮತ್ತು ಇಸ್ಲಾಂ ಸಾಧನೆ ೨೬೭
೧೭ ಹುಟ್ಟೂರಿಗೆ ಭೇಟಿ ೨೭೫
೧೮ ತೀರ್ಥಯಾತ್ರೆ ಮತ್ತು ಹೃದಯರಾಮನ ವೃತ್ತಾಂತ ೨೮೩
೧೯ ಬಂಧುಗಳ ಮರಣ ೨೯೨
೨೦ ಷೋಡಶೀ ಪೂಜೆ ೨೯೯
೨೧ ಸಾಧಕಭಾವದ ಅಂತ್ಯೋಕ್ತಿ ೩೦೯
೨೨ ಪರಿಶಿಷ್ಟ—ಕೆಲವು ಘಟನೆಗಳು ೩೨೦

ಮೂರನೆಯ ಭಾಗ

ಗುರುಭಾವ–ಪೂರ್ವಾರ್ಧ

❀ ಮುನ್ನುಡಿ ೩೩೭
❀ ಹಿಂದೂಧರ್ಮ ಮತ್ತು ಶ್ರೀರಾಮಕೃಷ್ಣ ೩೪೦
೧ ಶ್ರೀರಾಮಕೃಷ್ಣರು ಭಾವಮುಖದಲ್ಲಿ ೩೪೫
೨ ಭಾವ, ಸಮಾಧಿ ಮತ್ತು ದರ್ಶನ ೩೭೨
೩ ಶ್ರೀರಾಮಕೃಷ್ಣರ ಗುರುಭಾವ ೪೦೯
೪ ಗುರುಭಾವದ ಮೊದಲ ವಿಕಾಸ ೪೩೧
೫ ಯೌವನದಲ್ಲಿ ಗುರುಭಾವ ೪೪೭
೬ ಗುರುಭಾವ ಮತ್ತು ಮಥುರನಾಥ ೪೫೯
೭ ಗುರುಭಾವದಲ್ಲಿ ಮಥುರನನ್ನು ಅನುಗ್ರಹಿಸಿದುದು ೪೭೮
೮ ಗುರುಭಾವದಲ್ಲಿ ತಮ್ಮ ಗುರುಜನರೊಡನೆ ಸಂಬಂಧ ೫೦೪

ಮುನ್ನುಡಿ

"ದಕ್ಷಿಣೇಶ್ವರದ ದೇವಮಾನವರು" ಎಂದೇ ಪ್ರಖ್ಯಾತರಾಗಿರುವ ಶ್ರೀ ರಾಮಕೃಷ್ಣ ಪರಮಹಂಸರು ಜಗತ್ತಿನ ಆಧ್ಯಾತ್ಮಿಕ ಇತಿಹಾಸದಲ್ಲಿ ಕೇವಲ ಒಂದು ವ್ಯಕ್ತಿ ಮಾತ್ರರಾಗಿ ಕಾಣದೆ ಒಂದು ಅದ್ಭುತ ಘಟನೆಯಾಗಿ ಪ್ರಕಾಶಿಸುತ್ತಿದ್ದಾರೆ. ಅವರ ಪರಮ ಪ್ರಿಯ ಶಿಷ್ಯರೂ, ವಿಶ್ವವಿಖ್ಯಾತ ಸಾರ್ವಭೌಮ ಸಂನ್ಯಾಸಿಯೂ ಆದ ಸ್ವಾಮಿ ವಿವೇಕಾನಂದರು ತಮ್ಮ ಅಭೂತಪೂರ್ವ ಗುರುಗಳನ್ನು "ಅವತಾರ ವರಿಷ್ಠ" ಎಂದು ಸಾರಿ ಹೇಳಿದರು. ರಾಮಕೃಷ್ಣರ ವ್ಯಕ್ತಿತ್ವವು ಅಲೌಕಿಕವಾದದ್ದು ; ಭಗವಂತನ ಸಾಕ್ಷಾತ್ಕಾರಕ್ಕಾಗಿ ಅವರು ದೀರ್ಘಕಾಲ ಆಚರಿಸಿದ ತಪಸ್ಸು ಅತ್ಯುಗ್ರ ಸ್ವರೂಪದ್ದು ; ಅವರು ಬಾಳಿದ್ದು ತ್ಯಾಗ ವೈರಾಗ್ಯ ಭಕ್ತಿ ಜ್ಞಾನಗಳ ಜೀವಂತ ಮೂರ್ತಿಯಂತೆ ; ಅವರ ಜೀವಿತೋದ್ದೇಶ ಇತರರಲ್ಲಿ ಆಧ್ಯಾತ್ಮಿಕ ಜಾಗೃತಿಯನ್ನು ಉಂಟುಮಾಡುವುದು ಮತ್ತು ನೊಂದ ಜೀವಿಗಳಿಗೆ, ಅದೇ ಆಧ್ಯಾತ್ಮ ಸಾಧನೆಯೋ ಎನ್ನುವಂತೆ, ಸೇವೆ ಸಲ್ಲಿಸುವಂತೆ ಪ್ರತಿಯೊಬ್ಬರನ್ನೂ ಪ್ರೇರೇಪಿಸುವುದು ; ಸದ್ದುಗದ್ದಲವಿಲ್ಲದೆ, ಯಾವ ಘೋಷಣೆಗಳ ಅಗತ್ಯವೂ ಇಲ್ಲದೆ, ಭಾರತೀಯ ಸಮಾಜದ ರೋಗರುಜಿನಗಳಾಗಿರುವ ಜಾತಿ ಪದ್ಧತಿಯನ್ನೂ ಸ್ತ್ರೀಯರ ಅಸಮಾನತೆಯನ್ನೂ ನಿರ್ಮೂಲನ ಮಾಡುವುದು. ಅವರು ಆಡದೆ ಮಾಡಿದ ಈ ಎಲ್ಲ ಮಹತ್ ಸಾಧನೆಗಳನ್ನು ಕಣ್ಣಾರೆ ಕಂಡವರು ಪರಮಹಂಸರ ಪ್ರಖ್ಯಾತ ಸಮಕಾಲೀನರು ಮತ್ತು ಪರಮಹಂಸರೇ ಅತ್ಯಂತ ಎಚ್ಚರಿಕೆಯಿಂದ ಆರಿಸಿಕೊಂಡ ಅವರ ಶಿಷ್ಯರು. ಆ ಶಿಷ್ಯರಾದರೋ ಅತ್ಯಂತ ಪ್ರತಿಭಾಶಾಲಿಗಳು, ತೀವ್ರ ವೈರಾಗ್ಯ ಪರರು, ಸತ್ಯವ್ರತರು, ಬದುಕಿನಲ್ಲಿ ಭಗವಂತನ ದರ್ಶನವನ್ನೂ, ಅವನ ಸೃಷ್ಟಿಯ ಸೇವೆಯನ್ನೂ ಅಲ್ಲದೆ ಬೇರೇನನ್ನೂ ಒಲ್ಲದವರು, ತಮ್ಮ ಗುರುಗಳೊಡನೆ ಹಗಲು ರಾತ್ರಿ ಕಾಲಕಳೆದವರು. ಅವರಿಂದ ವರ್ಣಿತವಾದ ಶ್ರೀರಾಮಕೃಷ್ಣರ ಜೀವನ ಸ್ವರೂಪವನ್ನು ಕೇಳಿಯೋ ಓದಿಯೋ ಜಗತ್ತಿನಾದ್ಯಂತ ಸಹಸ್ರಾರು ಮಂದಿ ಶ್ರೀರಾಮಕೃಷ್ಣ ಪರಮಹಂಸರನ್ನು ತಮ್ಮ ಆದರ್ಶವಾಗಿ ಸ್ವೀಕರಿಸಿದ್ದಾರೆ ; ಸ್ವಾಮಿ ವಿವೇಕಾನಂದರು ತಮ್ಮ ಗುರುಗಳ ವಿಷಯವಾಗಿ ಹೇಳಿದ "ಅವತಾರ ವರಿಷ್ಠ" ಎಂಬ ಮಂತ್ರ ಸದೃಶ ಪದಪುಂಜವು ಭಾವಾವೇಶದ ಉದ್ಗಾರವಲ್ಲ, ಸತ್ಯದ ಸಂಯಮಪೂರ್ಣ ನಿರೂಪಣೆ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಶ್ರೀ ರಾಮಕೃಷ್ಣ ಪರಮಹಂಸರನ್ನು ತಮ್ಮ ಇಷ್ಟ ದೇವತೆಯೆಂದು ಹೃದಯ ಮಂದಿರದಲ್ಲಿ ಸಂಸ್ಥಾಪಿಸಿ, ಧನ್ಯತೆಯ ಭಾವವನ್ನು ಅನುಭವಿಸಿ, ಆಧ್ಯಾತ್ಮಿಕ ಸಾಧನೆಯ ಪಥದಲ್ಲಿ ಮುಂದುವರಿಯುತ್ತಿರುವ ಸಹಸ್ರಾರು ಮಂದಿ ಇಂದಿಗೂ ಭಾರತದ ಒಳಗೂ ಹೊರಗೂ ಇದ್ದಾರೆ. ಅವರ ಸಂಖ್ಯೆ ದ್ವಿಗುಣವಾಗುವ, ಏಕೆ, ಶತಗುಣವಾಗುವ ಸೂಚನೆಗಳು ನಿಚ್ಚಳವಾಗಿ ಕಾಣುತ್ತಿವೆ.

ಜಗತ್ತಿನ ಆಧ್ಯಾತ್ಮಿಕ, ಧಾರ್ಮಿಕ, ಸಾಮಾಜಿಕ ಮತ್ತು ವೈಜ್ಞಾನಿಕ ಇತಿಹಾಸದಲ್ಲಿ ಇಪ್ಪತ್ತನೆಯ ಶತಮಾನದ ಈ ಕೊನೆಯ ದಶಕವು ಅತ್ಯಂತ ಸಂದಿಗ್ಧವಾದ ಅವಧಿ ಎಂಬುದು ಗಮನೀಯವಾದುದು. ಅದಕ್ಕೆ ಕಾರಣಗಳನ್ನು ಹೀಗೆ ನೀಡಬಹುದು : ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನದ ಬಹು ಭಾಗವನ್ನು ಅನೇಕ ಆಧ್ಯಾತ್ಮಿಕ ವ್ಯಕ್ತಿಗಳ ಜೀವನ ಸಂದೇಶಗಳು ದಟ್ಟವಾಗಿ ವ್ಯಾಪಿಸಿವೆ. ಶ್ರೀರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು, ಶ್ರೀರಮಣ ಮಹರ್ಷಿಗಳು ಮತ್ತು ಶ್ರೀ ಅರವಿಂದರು ಪೂರ್ವ ಪಶ್ಚಿಮ ದೇಶಗಳ ಋಷಿಗಳೂ, ಚಿಂತಕರೂ, ಸಂತರೂ ಪರಮ ಸತ್ಯವನ್ನೂ, ಜಗತ್ತಿನ ಸ್ವರೂಪವನ್ನೂ, ಜೀವ ಮತ್ತು ಪರವಸ್ತುವಿನ ನಡುವಣ ಸಂಬಂಧವನ್ನೂ ಕುರಿತಂತೆ ಮಾಡಿದ ನಿರೂಪಣೆಗಳು ಎಷ್ಟರ ಮಟ್ಟಿಗೆ ಸತ್ಯ ಎಂಬುದನ್ನು ಪರೀಕ್ಷಿಸಲು ತಮ್ಮ ಬದುಕನ್ನೇ ಪ್ರಯೋಗಶಾಲೆಗಳನ್ನಾಗಿ ಮಾಡಿಕೊಂಡರು. ಅವರ ಜೀವನವು ಹಳೆಯ ಚಿನ್ನದಿಂದ ಹೊಸದೂ, ಚಲಾವಣೆಗೆ ಬರಬಹುದೂ ಆದ ಹೊಸ ನಾಣ್ಯಗಳನ್ನು ಟಂಕಿಸುವ ಟಂಕಸಾಲೆಗಳಾದುವು. ಈ ಮೇಲೆ ಹೆಸರಿಸಿದ ನಾಲ್ವರು ಅಂತಿಮ ಸತ್ಯದ ಕ್ಷೇತ್ರದಲ್ಲಿ ನಡೆಸಿದ ಪ್ರಾಮಾಣಿಕವಾದ ಪ್ರಯೋಗಗಳನ್ನೂ, ಅವರು ತಲುಪಿದ ತೀರ್ಮಾನಗಳನ್ನೂ ಒಪ್ಪಿ, ಅವರ ಆಧ್ಯಾತ್ಮಿಕ ಪ್ರಭಾವಲಯಕ್ಕೆ ಪೂರ್ವ ಪಶ್ಚಿಮಗಳ ಸಹಸ್ರಾರು ಸ್ತ್ರೀ ಪುರುಷರು ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾ ಪೂರ್ವಕವಾಗಿಯೋ ಪ್ರವೇಶಿಸಿ, ವಾಸಿಸಿ, ಜೀವನ ಸಾರ್ಥಕ್ಯವನ್ನು ಸಾಧಿಸಿದ್ದೇವೆ ಎಂದು ಭಾವಿಸಿದ್ದಾರೆ. ಭರತಖಂಡದ ಮೂವತ್ತುಕೋಟಿ ಜನರ ಬದುಕಿಗೆ, ಹತ್ತಿರ ಹತ್ತಿರ ಅರ್ಧ ಶತಮಾನ ಕಾಲ, ಗೊತ್ತುಗುರಿಗಳನ್ನು ಕಲ್ಪಿಸಿ. ಅವರು ರಾಜಕೀಯವಾಗಿ ಸ್ವಾತಂತ್ರ್ಯವನ್ನು ಸಾಧಿಸಲು ಬಹು ಮಟ್ಟಿಗೆ ಕಾರಣರಾದ ಮಹಾತ್ಮಾ ಗಾಂಧಿಯವರು ಶ್ರೀರಾಮಕೃಷ್ಣ – ವಿವೇಕಾನಂದರಿಂದ ವಿಶೇಷವಾಗಿ ಪ್ರಭಾವಿತರಾದವರು. ಈ ಸಂದರ್ಭದಲ್ಲಿ ಗಮನಿಸಲೇಬೇಕಾದ ಅಂಶವೆಂದರೆ ತಮ್ಮ ರಾಜಕಾರಣವು ಆತ್ಮಶಕ್ತಿಯನ್ನು ಅವಲಂಬಿಸಿಯೇ ಪರಿಣಾಮಕಾರಿಯಾಗಿದೆ ಎಂದು ಗಾಂಧೀಜಿ ಘಂಟಾಘೋಷವಾಗಿ ಸಾರಿದ್ದು. ಈ ಕಾರಣದಿಂದಾಗಿ ಸ್ವಾತಂತ್ರ್ಯಪೂರ್ವದ ರಾಜಕೀಯದಲ್ಲಾದರೂ ನೀತಿ ಸಂಯಮಗಳು ಎದ್ದು ಕಾಣುವ ಅಂಶಗಳಾಗಿದ್ದು ಭಾರತದ ಬಹುಪಾಲು ಜನತೆ ಅವು ಗಳಿಗೆ ಬದ್ಧರಾಗಿ ನಡೆದುಕೊಂಡರು.

ಅಧ್ಯಾತ್ಮ ಮತ್ತು ಧರ್ಮಗಳ ಕ್ಷೇತ್ರದ ಸ್ವರೂಪ ಹಾಗಾದರೆ ಸಾಮಾಜಿಕ ಪರಿಸ್ಥಿತಿ ಏನಾಗಿದೆ ಎಂಬುದನ್ನು ಗಮನಿಸೋಣ. ಮೇಲೆ ಹೆಸರಿಸಿದ ಐವರು ಮಹಾಪುರುಷರಲ್ಲದೆ ಇನ್ನೂ ಅನೇಕ ಸಾಧಕರೂ, ಸಂತರೂ ಭರತಖಂಡದ ಸಾಮಾಜಿಕ ಕ್ಷೇತ್ರದಲ್ಲಿ ಗಣನೀಯ ವಾದ ಪರಿವರ್ತನೆಯನ್ನು ತರಲು ಪ್ರಯತ್ನಿಸಿದರು. ಸತಿ ಮುಂತಾದ ಘೋರ ಪದ್ಧತಿ ಗಳಲ್ಲಿ ಕೆಲವು, ಸಮಾಜ ಸುಧಾರಕರ ಪ್ರಯತ್ನದಿಂದ, ಬಹುಮಟ್ಟಿಗೆ ಕಣ್ಮರೆಯಾದುವು. ಆದರೆ ಜಾತಿ ಪದ್ಧತಿ, ಸ್ತ್ರೀ ಪುರುಷ ಅಸಮಾನತೆ, ಅಸ್ಪೃಶ್ಯತೆ ಇವು ಈ ದೇಶದಿಂದ

ನಿವಾರಣೆಯಾಗಲಿಲ್ಲ. ಅವರೆಲ್ಲರ ಪ್ರಯತ್ನದಿಂದ ಸಾಧಿತವಾದದ್ದು ಏನೆಂದರೆ ಈ ದಿಕ್ಕಿನಲ್ಲಿ ಶ್ರಮಿಸಬೇಕಾದ ಅಗತ್ಯವಿದೆ ಎಂಬುದು ಜನರ ಪ್ರಜ್ಞೆಯ ಆಳಕ್ಕೆ ಇಳಿಯಲು ಪ್ರಾರಂಭವಾಯಿತು.

ಈ ಮೇಲಿನ ವಿಚಾರದ ಒಂದು ಹಿನ್ನೆಲೆಯಲ್ಲಿ, ಧರ್ಮ ಮತ್ತು ಅಧ್ಯಾತ್ಮ ಎಂದು ನಾವು ನಂಬಿರುವುದನ್ನೆಲ್ಲ ವಿಜ್ಞಾನ ಮತ್ತು ವೈಚಾರಿಕತೆಗಳು ಗುಡಿಸಿ, ರಪಾಡಿಸಿ, ಒದರಿ ಹಾಕುತ್ತಿರುವ ಪರಿಸ್ಥಿತಿಯಲ್ಲಿ, ಭಾರತದ ಧರ್ಮ, ಅಧ್ಯಾತ್ಮಗಳ ಅಳಿವು–ಉಳಿವುಗಳ ಸಂಘರ್ಷ ಸಮಯದಲ್ಲಿ ಶ್ರೀರಾಮಕೃಷ್ಣ ಪರಮಹಂಸರ ಪ್ರಸ್ತುತತೆ ಏನು ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಈ ಪ್ರಶ್ನೆಗೆ ಉತ್ತರ ಒಂದಲ್ಲ, ಹಲವು. ಅವುಗಳನ್ನು ಕಂಡುಕೊಳ್ಳುವುದರಲ್ಲಿ ಶ್ರೀ ಸ್ವಾಮಿ ಶಾರದಾನಂದರು ರಚಿಸಿರುವ "ಶ್ರೀ ರಾಮಕೃಷ್ಣ ಲೀಲಾಪ್ರಸಂಗ"ವು ನಮಗೆ ಬಹುಮಟ್ಟಿಗೆ ನೆರವಾಗುತ್ತದೆ.

ಬಂಗಾಳಿಯ ಈ ಕೃತಿಯನ್ನು ರಚಿಸಿದವರು ಶ್ರೀರಾಮಕೃಷ್ಣರ ಅಂತರಂಗ ಶಿಷ್ಯ ವೃಂದದಲ್ಲಿ ಒಬ್ಬರಾಗಿದ್ದ ಶ್ರೀ ಸ್ವಾಮಿ ಶಾರದಾನಂದರು, ಸ್ವಾಮಿ ವಿವೇಕಾನಂದರ ಗುರುಭಾಯಿಗಳಲ್ಲಿ ಒಬ್ಬರು. ಶ್ರೀರಾಮಕೃಷ್ಣರು ತಮ್ಮ ಶಿಷ್ಯವೃಂದದ ವಿಷಯದಲ್ಲಿ ಅತ್ಯಂತ ಅದೃಷ್ಟಶಾಲಿಗಳು ಎಂದೇ ಹೇಳಬೇಕು. ಏಕೆಂದರೆ ಪರಮಹಂಸರ ಶಿಷ್ಯರಲ್ಲಿ ಒಬ್ಬೊಬ್ಬರೂ ಜ್ಞಾನ, ಭಕ್ತಿ, ವೈರಾಗ್ಯ ಸಂಪನ್ನರಾಗಿದ್ದು ಯಾರು ಯಾರಿಗೆ ಎರಡನೆಯವರಾಗಿದ್ದರು ಎಂಬುದನ್ನು ನಿರ್ಣಯಿಸುವುದು ಅಸಾಧ್ಯವಾದದ್ದಾಗಿದೆ. ವಿವೇಕಾನಂದರಂತೆ ವಿಶ್ವವಿಖ್ಯಾತರಾಗದಿದ್ದರೂ ಪ್ರತಿಯೊಬ್ಬರೂ ವಿಶ್ವಮಾನ್ಯತೆಗೆ ಅರ್ಹರಾದವರು. ಪೂರ್ವ, ಪಾಶ್ಚಾತ್ಯ ಶಾಸ್ತ್ರಗ್ರಂಥಗಳನ್ನು ಆಳವಾಗಿ ಅಧ್ಯಯನ ಮಾಡಿದ್ದ ಸ್ವಾಮಿ ಶಾರದಾನಂದರು ಶ್ರೀರಾಮಕೃಷ್ಣರನ್ನು ಅತ್ಯಂತ ಹತ್ತಿರದಿಂದ ನೋಡಿ ಅವರಿಗೆ ಆತ್ಮೀಯವಾದ ಸೇವೆಯನ್ನು ಸಲ್ಲಿಸಿದವರು. ಪಶ್ಚಿಮದಲ್ಲಿ ವೇದಾಂತ ಪ್ರಚಾರಕ್ಕೆ ನೆರವು ಅಗತ್ಯವಾದಾಗ ವಿವೇಕಾನಂದರು ಆ ನೆರವನ್ನು ಮೊದಲು ಬಯಸಿದ್ದು ಶ್ರೀ ಸ್ವಾಮಿ ಶಾರದಾನಂದರಿಂದ. ವಿವೇಕಾನಂದರ ಕರೆಗೆ ತಕ್ಷಣ ಪ್ರತಿಕ್ರಿಯಿಸಿ ಪಶ್ಚಿಮ ದೇಶಗಳಿಗೆ ಹೊರಟ ಶಾರದಾನಂದರು ಮೊದಲು ಲಂಡನ್ನಿನಲ್ಲಿಯೂ ಅನಂತರ ಅಮೆರಿಕೆಯಲ್ಲಿಯೂ ಸುಮಾರು ಎರಡು ವರ್ಷಗಳ ಕಾಲ ವೇದಾಂತ ಬೋಧನೆಯಲ್ಲಿ ತೊಡಗಿದ್ದರು. ಹೀಗಾಗಿ ವಿಶಾಲ ವಿಶ್ವದ ಪರಿಚಯ ಅವರಿಗೆ ದೊರೆಯಿತು. ಇಂಥ ಮೇಧಾವೀ ಸಂನ್ಯಾಸಿಯೊಬ್ಬರು ಸುಮಾರು ಸಾವಿರ ಪುಟಗಳ ವ್ಯಾಪ್ತಿಯಲ್ಲಿ ತಮ್ಮ ಗುರುಗಳ ಬದುಕಿನ ವಿವರಗಳನ್ನೆಲ್ಲ ನಿರೂಪಿಸಿ ಅವುಗಳಿಗೆ, ಅಗತ್ಯವಿದ್ದಲ್ಲೆಲ್ಲ, ಸುಸಂಬದ್ಧವಾದ ವ್ಯಾಖ್ಯಾನವನ್ನು ನೀಡಿದ್ದಾರೆ.

ಶ್ರೀರಾಮಕೃಷ್ಣ ಪರಮಹಂಸರಂತಹ ಅನ್ಯಾದೃಶ ಆಧ್ಯಾತ್ಮಿಕ ಪುರುಷರಿಗೆ ಸ್ವಾಮಿ ಶಾರದಾನಂದರಂತಹ ಅನನ್ಯ ಸಾಧಾರಣ ಜೀವನ ಚರಿತ್ರಕಾರರು ದೊರೆತಿರುವುದು ಜಗತ್ತಿನ ಆಧ್ಯಾತ್ಮಿಕ ಇತಿಹಾಸದಲ್ಲಿ ಒಂದು ಅಪೂರ್ವ ಘಟನೆಯೆಂದೇ

ಹೇಳಬೇಕು. ತಮ್ಮ ಗುರುಗಳ ಅತ್ಯಂತ ಸಾಮಾನ್ಯವೆಂದು ತೋರುವ ದೈನಂದಿನ ಚಟು ವಟಿಕೆಗಳಿಂದ ಹಿಡಿದು ಅವರ ಜೀವನದ ಪರಮಾದ್ಭುತವಾದ ಅನೇಕ ಘಟನೆಗಳವರೆಗೆ ಎಲ್ಲವನ್ನೂ ನಿರೂಪಿಸಿ ಶಾರದಾನಂದರು ಸಾಧಕರಿಗೆ ಪರಮೋಪಕಾರ ಮಾಡಿದ್ದಾರೆ. ಹಿಂದಿನ ಯಾವ ಮಹಾಪುರುಷರ ವಿಷಯವಾಗಿಯೂ ಇಷ್ಟೊಂದು ವಿವರವಾದ ಮಾಹಿತಿ ಗಳು ಇಷ್ಟು ಪ್ರಾಮಾಣಿಕವಾದ ರೀತಿಯಲ್ಲಿ ನಿರೂಪಿತವಾದುದಿಲ್ಲ. ಅದರಲ್ಲಿ ಬಹು ಮಂದಿಯ ಜೀವನದಲ್ಲಿ ನಿರೂಪಿತವಾಗಿರುವುದು ಪೌರಾಣಿಕ ಅಂಶಗಳೇ ಹೊರತು ಚಾರಿತ್ರಿಕ ಅಂಶಗಳಲ್ಲ. ಅಲ್ಲದೆ ನಮಗೆ ದೊರೆಯುವ ಜೀವನ ಚರಿತ್ರೆಗಳೂ ಅವರ ಒಡನಾಡಿಗಳಿಂದಾಗಲಿ ಸಮಕಾಲೀನರಿಂದಾಗಲಿ ರಚಿತವಾದುವಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ಕಥಾಪುರುಷನು ನಿಧನನಾದ ಬಹು ಕಾಲಾನಂತರ, ಉತ್ಸಾಹೀ ಭಕ್ತರಿಂದ ರಚಿತವಾದವು ಅವು. ಆದುದರಿಂದ ಅವು ಹೆಚ್ಚಿನ ಮಟ್ಟಿಗೆ ಪವಾಡ ಪರವಾಗಿರುತ್ತವೆಯೇ ಹೊರತು ಐತಿಹಾಸಿಕ ಸತ್ಯಪರವಾಗಿರುವುದಿಲ್ಲ. ಆದರೆ ಪ್ರಕೃತ "ಶ್ರೀರಾಮಕೃಷ್ಣ ಲೀಲಾಪ್ರಸಂಗ"ವಾದರೋ ಮೇಲೆ ಸೂಚಿಸಿದ ಗ್ರಂಥಗಳ ಗುಂಪಿಗೆ ಸೇರುವುದಿಲ್ಲ. ಇದರ ಲೇಖಕರು ಸಾಮಾನ್ಯರ ಗುಂಪಿಗೆ ಸೇರದಿರುವುದೇ ಈ ಗ್ರಂಥವು ತನ್ನದೇ ಆದ ಒಂದು ವಿಶಿಷ್ಟ ವರ್ಗವಾಗಿರುವುದಕ್ಕೆ ಕಾರಣ. ಅವರು ಆಧುನಿಕ ವಿದ್ಯಾಭ್ಯಾಸ ಪಡೆದವರು. ಅವರ ವೈಚಾರಿಕತೆಯು ಅವರ ಅಸೀಮವಾದ ಗುರುಭಕ್ತಿಗೆ ಅಂಕುಶಪ್ರಾಯವಾಗಿದೆ. ಲೇಖಕರ ಇನ್ನೊಂದು ವೈಶಿಷ್ಟ್ಯ ವೆಂದರೆ ಅವರು ಸ್ವಯಂ ಉನ್ನತ ಮಟ್ಟದ ಸಾಧಕರು, ಆಧ್ಯಾತ್ಮಿಕ ಜೀವನದ ಸಮಗ್ರ ವಾದ ಪರಿಚಯವುಳ್ಳವರು. ತಮ್ಮ ಗುರುಗಳ ಬದುಕಿನ ಅನೇಕ ವಿವರಗಳನ್ನೂ, ಅವರ ಆಧ್ಯಾತ್ಮಿಕ ಅನುಭವಗಳ ವೈವಿಧ್ಯ, ಮಹತ್ತುಗಳನ್ನೂ ನೇರವಾಗಿ ಗುರುಮುಖದಿಂದ ಕೇಳಿದವರು, ಅನೇಕವನ್ನು ನೇರವಾಗಿ ಕಂಡವರು, ತಾವೇ ನೇರವಾಗಿ ಕಾಣಲಾರದೇ ಹೋದವನ್ನು ಪ್ರತ್ಯಕ್ಷದರ್ಶಿಗಳಿಂದ ಕೇಳಿ ತಿಳಿದವರು. ಶ್ರೀರಾಮಕೃಷ್ಣಪರಮಹಂಸ ರನ್ನೂ ಸ್ವಾಮಿ ವಿವೇಕಾನಂದರನ್ನೂ ಕುರಿತು ಶ್ರೇಷ್ಠ ಮಟ್ಟದ ಜೀವನ ಚರಿತ್ರೆಗಳನ್ನು ಬರೆದಿರುವವರೂ, ಸ್ವಯಂ ದಾರ್ಶನಿಕರೂ ಮಹಾ ಸಾಹಿತಿಯೂ ಆದ ಫ್ರಾನ್ಸ್ ದೇಶದ ರೊಮ್ಯಾ ರೊಲಾ ಅವರು ಸ್ವಾಮಿ ಶಾರದಾನಂದರನ್ನು ಕುರಿತು ಹೀಗೆ ಹೇಳಿದ್ದಾರೆ :

"ಸ್ವಾಮಿ ಶಾರದಾನಂದರು ಪ್ರಮಾಣಭೂತರಾದ ತತ್ತ್ವಜ್ಞಾನಿ ಮತ್ತು ಇತಿಹಾಸ ಕಾರರು. ಅವರ ಗ್ರಂಥವು ತಾತ್ತ್ವಿಕ ಭಾವನೆಗಳಿಂದ ಶ್ರೀಮಂತವಾಗಿದೆ. ಹಿಂದೂ ವೈಚಾರಿಕತೆಯ ಅದ್ಭುತ ಸರಣಿಯಲ್ಲಿ ಶ್ರೀರಾಮಕೃಷ್ಣರ ಸ್ಥಾನವೇನು ಎಂಬುದನ್ನು ಅವರ ಗ್ರಂಥವು ನಿರ್ದಿಷ್ಟವಾದ ರೀತಿಯಲ್ಲಿ ತಿಳಿಸುತ್ತದೆ. ಅವರ ಗ್ರಂಥವನ್ನು ಓದುವ ಸಾಮಾನ್ಯನಿಗೂ ಸ್ವಾಮಿಜಿಯವರ ವಿಶಾಲ ಅನುಭವ, ಅಪಾರ ಪಾಂಡಿತ್ಯ, ವೈಚಾರಿಕ ದೃಷ್ಟಿಕೋನ ಮತ್ತು ಗಹನವಾದ ಆಧ್ಯಾತ್ಮಿಕ ಅನುಭಾವದ ಪರಿಚಯ ದೊರಕುತ್ತದೆ. ವಿಷಯ ನಿರೂಪಣೆಯಲ್ಲಿ ಲೇಖಕರು ಅದ್ಭುತವಾದ ಸಾಮರ್ಥ್ಯವನ್ನು ಪ್ರದರ್ಶಿಸಿದ್ದಾರೆ."

ಈ ಗ್ರಂಥಕ್ಕೆ ವಸ್ತುವಾಗಿರುವ ಶ್ರೀರಾಮಕೃಷ್ಣ ಪರಮಹಂಸರ ವಾಣಿಯನ್ನು

ಯಥಾವತ್ತಾಗಿ ದಾಖಲುಗೊಳಿಸಿರುವ ಮಹಾನ್ ಗ್ರಂಥವೆಂದರೆ, ಪರಮಹಂಸರ ಆಪ್ತ ಗೃಹಸ್ಥ ಶಿಷ್ಯರಾದ "ಮ" ಅಥವಾ ಮಹೇಂದ್ರನಾಥ ಗುಪ್ತರ "ಶ್ರೀರಾಮಕೃಷ್ಣ ವಚನವೇದ." ಶ್ರೀರಾಮಕೃಷ್ಣರ ಜ್ಞಾನಬೋಧಕವೂ ಸ್ವಾರಸ್ಯಪೂರ್ಣವೂ ಆದ ಮಾತುಕತೆಗಳು ಮಹೇಂದ್ರನಾಥಗುಪ್ತರ ಕೃಪೆಯಿಂದ ವಾಚಕ ವೃಂದಕ್ಕೆ ಲಭ್ಯವಾಗಿವೆ. ಜಗತ್ತಿನ ಆಧ್ಯಾತ್ಮಿಕ ಇತಿಹಾಸದಲ್ಲಿ ಅತ್ಯಪೂರ್ವ ಮತ್ತು ಏಕೈಕ ಎಂದು ಹೇಳಬಹುದಾದ ಆ ಕೃತಿಯ ಮಹತ್ವವನ್ನು ರಾಷ್ಟ್ರಕವಿ ಕುವೆಂಪುರವರ ಮಹಾಕವಿ ವಾಣಿಯಲ್ಲಿ ಆಲಿಸಬಹುದು :

" 'ಶ್ರೀರಾಮಕೃಷ್ಣ ವಚನವೇದ'ವೆಂದರೆ ಅದೊಂದು ಕರತಲ ದೇವಸ್ಥಾನ, ಕರತಲ ತಪೋ ರಂಗ, ಕರತಲ ಪುಣ್ಯಕ್ಷೇತ್ರ. ಆದರೆ ದೇವಸ್ಥಾನ ಪುಣ್ಯಕ್ಷೇತ್ರಗಳಂತೆ ತಾನೆಂದಿಗೂ ಕಲುಷಿತವಾಗುವ ಸಂಭವವಿಲ್ಲ, ಶಿಥಿಲವಾಗುವ ಸಂಭವವಿಲ್ಲ. ಯಾವ ಮನೆಯಲ್ಲಿ ಈ 'ವಚನವೇದ'ವಿರುತ್ತದೆಯೋ ಅದು ಮಂದಿರವಾಗುತ್ತದೆ. ಯಾರ ಕೈ ಇದನ್ನು ಹಿಡಿದಿರುತ್ತದೆಯೊ ಅದು ಭಗವಂತನ ಪಾದಾರವಿಂದವನ್ನೇ ಧರಿಸಿರುತ್ತದೆ. ಯಾರ ಜಿಹ್ವೆ ಇದನ್ನು ಪಠಿಸುತ್ತದೆಯೊ ಅದು ಅಮೃತವನ್ನೆ ಈಂಟುತ್ತಿರುತ್ತದೆ. ಇದು ಆನಂದದ ಆಗರ ; ಶಾಂತಿಯ ಸಾಗರ ; ದಿವ್ಯ ಜ್ಞಾನದ ಓಗರ. ಕಷ್ಟದ ಸಮಯದಲ್ಲಿ ಧೈರ್ಯವೀಯುವ ಸಖ ; ಸುಖದ ಸಮಯದಲ್ಲಿ ಸಮರ್ಪಣಭಾವವಿತ್ತು ವಿನಯ ಭಕ್ತಿಗಳನ್ನು ಪ್ರಚೋದಿಸುವ ಗುರು ; ಕತ್ತಲಲ್ಲಿ ದೀಪ ; ದಾರಿಗೆ ಊರೆಗೋಲು. ದಿಕ್ಕುಗೆಡದಂತೆ ಗುರಿದೋರುವ ಧ್ರುವತಾರೆ, ಇಲ್ಲಿ ವೇದ ವೇದಾಂತ ದರ್ಶನಾದಿ ಸರ್ವ ಸಾರವಿದೆ. ಓದು ಬರುವ ಅತ್ಯಂತ ಸಾಮಾನ್ಯನೂ ಇದನ್ನು ಓದಿದ ಮೇಲೆ ಯಾವ ಪಂಡಿತನಿಗೂ ಕರುಬುವ ಆವಶ್ಯಕತೆಯಿಲ್ಲ ; ಯಾವ ವಿದ್ವತ್‌ಪೂರ್ಣವಾದ ತತ್ತ್ವ ಜ್ಞಾನಿಗೂ ಕೀಳೆಂದು ನಾಚಬೇಕಾಗಿಲ್ಲ. ಅದಕ್ಕೆ ಬದಲು ಭಗವಂತನ ಕೃಪೆಯಿಂದ ತನಗಿಂತಲೂ ಧನ್ಯರಿಲ್ಲ ಎಂದರಿತು ನಿರ್ಮಮನಾಗುತ್ತಾನೆ, ಶಾಂತನಾಗುತ್ತಾನೆ, ಪೂರ್ಣ ನಾಗುತ್ತಾನೆ. ಆತನಿಗೆ ಗಗನದ ವೈಶಾಲ್ಯ, ಹೈಮಾಚಲದ ಔನ್ನತ್ಯ, ಅಂಬುಧಿಯ ಗಾಂಭೀರ್ಯ ಎಲ್ಲವೂ ಸಿದ್ಧಿಸುತ್ತವೆ. ಇಷ್ಟು ಸರ್ವಜನ ಸಾಮಾನ್ಯ ರೂಪದಲ್ಲಿ, ಇಷ್ಟು ಸರ್ವಸುಲಭ ರೂಪದಲ್ಲಿ ಭಗವಂತ ಎಂದೂ ಅವತರಿಸಿರಲಿಲ್ಲ, ಭಗವದ್‌ವಾಣಿ ತಾನೆಂದೂ ಕೃತಿಗೊಂಡಿರಲಿಲ್ಲ."

ಮಹಾಕವಿ ಕುವೆಂಪು ಭಾವಪರವಶರಾಗಿ, ಕವಿ ಸಹಜವಾದ ಆಲಂಕಾರಿಕ ಶಬ್ದ ಗಳಿಂದ, ತಾವು ವರ್ಣಿಸುತ್ತಿರುವುದು ತಮ್ಮ ಆರಾಧ್ಯ ದೈವವನ್ನು ಎಂಬ ಕಾರಣಕ್ಕಾಗಿ ಮೇಲಿನಂತೆ ಉದ್ಗರಿಸಿದ್ದಾರೆ ಎಂದು ಹೇಳುವಂತಿಲ್ಲ. ಪೂರ್ವ ಪಶ್ಚಿಮ ದೇಶಗಳ ಮಹಾ ದಾರ್ಶನಿಕರೂ, ಮೇಧಾವಿಗಳೂ, ಶ್ರೀರಾಮಕೃಷ್ಣರನ್ನು ಅವತಾರವೆಂದು ಒಪ್ಪಲು ಸ್ವಲ್ಪವೂ ಸಿದ್ಧರಿಲ್ಲದ ವಿಚಾರವಂತರೂ ಪರಮಹಂಸರನ್ನು ಕುರಿತು ಹೇಳಿರು ವುದನ್ನೆಲ್ಲ, ಅತ್ಯಂತ ಸಮರ್ಥವಾದ ರೀತಿಯಲ್ಲಿ, ಅತ್ಯಂತ ಶಕ್ತಿಪೂರ್ಣವಾದ ಮಾತು ಗಳಲ್ಲಿ ಕುವೆಂಪು ಮೇಲಿನ ಕೆಲವೇ ಕೆಲವು ಪಂಕ್ತಿಗಳಲ್ಲಿ ಛಟ್ಟಿಯಿಳಿಸಿ ನೀಡಿದ್ದಾರೆ.

ಯಾವ ಕಾರಣಗಳಿಂದ ಶ್ರೀರಾಮಕೃಷ್ಣರು ಆಧ್ಯಾತ್ಮಿಕ ಜೀವನದ ಉಜ್ವಲ ಸೂರ್ಯನಂತೆ ಪ್ರಕಾಶಿಸುತ್ತಿದ್ದಾರೆ, ಯಾವ ಅಂಶಗಳು ಅವರು ಭೂಮಿಯಿಂದ ಆಕಾಶದವರೆಗೂ ಮಹಾ ಪ್ರತಿಮೆಯಂತೆ ಬೆಳೆದು ನಿಲ್ಲಲು ಕಾರಣಗಳಾಗಿವೆ, ಅವೆಲ್ಲವನ್ನೂ ಶ್ರೀ ಸ್ವಾಮಿ ಶಾರದಾನಂದರು ತಮ್ಮ ಲೋಕೋತ್ತರ ಕೃತಿಯಾದ ಈ ಗ್ರಂಥದಲ್ಲಿ ಹೇಗೆ ಪ್ರತಿಪಾದಿಸಿ ಸತ್ಯವನ್ನು ಸಂಸ್ಥಾಪಿಸಿದ್ದಾರೆ ಎಂಬುದನ್ನು ಪರಿಶೀಲಿಸುವುದು ನಮಗೆ ಹೇರಳವಾದ ಪ್ರಯೋಜನವನ್ನು ಒದಗಿಸುತ್ತದೆ.

ಸಾವಿರ ಪುಟಗಳಷ್ಟು ದೀರ್ಘವಾದ ಜೀವನ ಚರಿತ್ರೆಯನ್ನು ಬರೆಯಲು ಹೊರಟ ಸ್ವಾಮಿ ಶಾರದಾನಂದರ ವಿಚಾರಶಕ್ತಿ ಎಂಥದು ಎಂಬುದಕ್ಕೆ ಕೆಲವು ನಿದರ್ಶನಗಳನ್ನು ನೀಡುವುದು ಅಗತ್ಯ.

ಪ್ರಾಚೀನ ಕಾಲದಲ್ಲಿದ್ದ ಋಷಿಗಳನ್ನು ಬರೆದವರೆಲ್ಲರನ್ನೂ ನಾವು ಮಹರ್ಷಿ ಗಳೆಂದೂ, ಎಲ್ಲರಿಗೂ ಸಮಾನವಾದ ಸಾಧನೆ, ಸಿದ್ಧಿಗಳಿದ್ದುವೆಂದೂ ನಂಬಿದ್ದೇವೆ. ಅಲ್ಲದೆ ನಮ್ಮ ಹಿರಿಯರು ಈ ಋಷಿಗಳ ವಿಷಯದಲ್ಲಿ ಹೇಳಿರುವುದನ್ನೆಲ್ಲ ಶಾಸನ ಸತ್ಯಗಳೆಂದು ನಂಬಿದ್ದೇವೆ. ಸ್ವಾಮಿ ಶಾರದಾನಂದರಾದರೋ ಆ ಋಷಿಗಳ ಶಕ್ತಿಯಲ್ಲಿದ್ದ ಅಂತರವನ್ನು ಎತ್ತಿ ತೋರಿಸುತ್ತಾರೆ :

"ವೈದಿಕ ಕಾಲದ ಮಾನವನಿಗೆ ಕೆಲವು ವ್ಯಕ್ತಿಗಳು ಇಂದ್ರಿಯಾತೀತ ಸತ್ಯವನ್ನು ಅರಿಯಲು ಸಮರ್ಥರು ಎಂಬ ಜ್ಞಾನವಿದ್ದರೂ ಆ ರೀತಿಯ ಸಿದ್ಧಪುರುಷರಲ್ಲಿದ್ದ ಶಕ್ತಿಯ ತಾರತಮ್ಯವನ್ನು ಅವನಿಗೆ ಗಮನಿಸಲಾಗಲಿಲ್ಲ. ಆದ್ದರಿಂದ ಅವರೆಲ್ಲರನ್ನೂ ಋಷಿಗಳೆಂದು ಅವನು ಕರೆದನು. ಆದರೆ ಕ್ರಮೇಣ ಮಾನವನ ಬುದ್ಧಿ ಮತ್ತು ತೌಲನಿಕ ಶಕ್ತಿ ವೃದ್ಧಿಸಿತು ; ಇದರಿಂದಾಗಿ ಋಷಿಗಳೆಲ್ಲರೂ ಸಮಾನ ಶಕ್ತಿಯವರಲ್ಲ ; ಅವರಲ್ಲಿ ಕೆಲವರು ಆಧ್ಯಾತ್ಮಿಕ ಜಗತ್ತಿನ ಸೂರ್ಯರಿದ್ದರೆ, ಇನ್ನು ಕೆಲವರು ಚಂದ್ರನಂತೆ, ಮತ್ತೆ ಕೆಲವರು ನಕ್ಷತ್ರ ಸಮಾನರು, ಇನ್ನು ಕೆಲವರು ಸಾಮಾನ್ಯ ದೀಪವಿದ್ದಂತೆ—ಎಂಬುದು ಅವನಿಗೆ ಅರಿವಾಯಿತು. ಆಗ ಋಷಿಗಳನ್ನು ಬೇರೆ ಬೇರೆ ಶ್ರೇಣಿಯವರೆಂದು ಪರಿಗಣಿಸ ಲಾಯಿತು."

ವಿಚಾರಪರರಾದ ನಮಗೆ ಶಾರದಾನಂದರ ಈ ಜಿಜ್ಞಾಸು ಬುದ್ಧಿಯು ಅವರ ಕೃತಿಯನ್ನು ಪ್ರವೇಶಿಸಲು ಆಹ್ವಾನವನ್ನು ನೀಡುತ್ತದೆ. ಏಕೆಂದರೆ ಹಿಂದಿನ ಯಾರೇ ಆಗಲಿ ಹೇಳಿದ್ದು ವೇದವಾಕ್ಯವೆಂದೂ, ಅವರೆಲ್ಲರೂ ಪರಮಜ್ಞಾನಿಗಳೆಂದೂ, ಅವರು ಹೇಳಿದುದನ್ನು ಚಕಾರವೆತ್ತದೆ ಒಪ್ಪಲೇಬೇಕೆಂದೂ ಹೇಳುವ ಸಂಪ್ರದಾಯವಾದಿಗಳ ವಾದ ಎಷ್ಟು ದೋಷಪೂರ್ಣವಾದುದು ಎಂಬುದನ್ನು ಲೇಖಕರು ತೋರಿಸಿದ್ದಾರೆ. ಹಿಂದಿನ ಋಷಿಗಳಲ್ಲಿ ತಾರತಮ್ಯವಿರುವುದರಿಂದ ಅವರು ಹೇಳಿರುವುದೆಲ್ಲ ವಿಚಾರಕ್ಕೆ ವಿಮರ್ಶೆಗೆ ಗುರಿಯಾಗತಕ್ಕದ್ದು ಎಂಬುದು ಶಾರದಾನಂದರ ಮಾತಿನಿಂದ ಸಿದ್ಧವಾಗುತ್ತದೆ.

ಶ್ರೀರಾಮಕೃಷ್ಣರು ಅವತಾರ ಪುರುಷರೇ ಎಂಬ ಪ್ರಶ್ನೆಯು ಅವರ ಸಾಕ್ಷಾತ್

ಶಿಷ್ಯ ಸ್ವಾಮಿ ವಿವೇಕಾನಂದರನ್ನೂ ಅವರ ಇತರ ಸಮಕಾಲೀನರನ್ನೂ ಕಾಡಿದಂತೆಯೇ ನಮ್ಮ ತಲೆಮಾರಿನವರನ್ನೂ ಕಾಡುತ್ತಿದೆ. ಸ್ವಾಮಿ ವಿವೇಕಾನಂದರೇನೋ ತಮ್ಮ ಜೀವಿತದ ಕೊನೆಯ ಭಾಗದಲ್ಲಿ ಶ್ರೀರಾಮಕೃಷ್ಣರನ್ನು "ಅವತಾರ ವರಿಷ್ಠ" ಎಂದು ಕರೆದರು. ಆದರೆ ದೇವರು ಈ ಭೂಮಿಯ ಮೇಲೆ ಅವತರಿಸುತ್ತಾನೆ ಎಂಬುದಕ್ಕೆ ಏನು ಅರ್ಥ ? ಶ್ರೀ ಸ್ವಾಮಿ ಶಾರದಾನಂದರು ಈ ವಿಷಯವಾಗಿ ಚಿಂತನೆ ನಡೆಸಿದ್ದಾರೆ. ಪುರಾಣಗಳ ಅವತಾರ ಕಲ್ಪನೆಯನ್ನು ಒಪ್ಪಿಯೂ ಅವರ ವಿಚಾರಧಾರೆ ಮುಂದೆ ಹರಿದಿದೆ. ಅವರು ಹೇಳುತ್ತಾರೆ: "ವೈದಿಕ ಕಾಲದ ಋಷಿಯೇ, ಕಾಲಕ್ರಮೇಣ, ಪೌರಾಣಿಕ ಯುಗದಲ್ಲಿ ಅವತಾರವೆಂದು ಪರಿಗಣಿಸಲ್ಪಟ್ಟಿರುವನು." (ಪು. ೪) ಈ ಮಾತನ್ನು ಮತ್ತಷ್ಟು ಸ್ಪಷ್ಟಪಡಿಸುತ್ತಾ, ಅವರು ಹೇಳುತ್ತಾರೆ : "ಹೀಗೆ ಪೌರಾಣಿಕ ಯುಗದಲ್ಲಿ ಅವತಾರ ತತ್ತ್ವದಲ್ಲಿ ನಂಬಿಕೆ ಉತ್ಪನ್ನವಾಯಿತು. ವೈದಿಕ ಯುಗದ ವಿಶಿಷ್ಟ ಗುಣಶಾಲಿಗಳಾದ ಋಷಿಗಳೇ ಈಶ್ವರಾವತಾರಗಳಾಗಿ ಪರಿಗಣಿಸಲ್ಪಟ್ಟರು. ಆದ್ದರಿಂದ ಅಸಾಧಾರಣ ಆಧ್ಯಾತ್ಮಿಕ ಶಕ್ತಿಸಂಪನ್ನರಾದ ಪುರುಷರ ಆವಿರ್ಭಾವವನ್ನು ನೋಡಿಯೇ ಕ್ರಮೇಣ ಈಶ್ವರಾವತಾರದ ವಿಷಯದಲ್ಲಿ ನಂಬಿಕೆಯುಂಟಾಯಿತು." (ಪು. ೫)

ಒಂದು ಮಾತಂತೂ ನಿಜ. ಶ್ರೀರಾಮಕೃಷ್ಣರ ಜೀವಿತೋದ್ದೇಶ ದುಷ್ಟಶಿಕ್ಷಣ, ಶಿಷ್ಟರಕ್ಷಣ ಖಂಡಿತ ಅಲ್ಲ. ಅವರನ್ನು ಅವತಾರವೆಂದು ಕರೆಯುವವರೂ ಅವತಾರ ತತ್ತ್ವದ ಕಲ್ಪನೆಯನ್ನು ಬದಲಾಯಿಸಿಕೊಳ್ಳಬೇಕಾದ ಆವಶ್ಯಕತೆಯನ್ನು ಶ್ರೀರಾಮಕೃಷ್ಣರು ಸೃಷ್ಟಿಸಿದರು ! ಯಾರು ದುಷ್ಟರೆನ್ನದೆ, ಶಿಷ್ಟರೆನ್ನದೆ, ಸ್ತ್ರೀಯರೆನ್ನದೆ, ಪುರುಷರೆನ್ನದೆ, ಬ್ರಾಹ್ಮಣನೆನ್ನದೆ, ಅಂತ್ಯಜನೆನ್ನದೆ ಪ್ರತಿಯೊಬ್ಬನಿಗೂ ಪರಮಜ್ಞಾನವನ್ನು ನೀಡಿ ಬಹು ಜನರ ಹಿತವನ್ನೂ, ಬಹು ಜನರ ಸುಖವನ್ನೂ, ತನ್ನ ಕಾಲದಲ್ಲಿ ಮಾತ್ರವಲ್ಲದೆ ಮುಂಬರುವ ಕಾಲದಲ್ಲಿಯೂ ಸಾಧಿಸಲು ಕಾರಣನಾಗುತ್ತಾನೋ ಅವನೇ ಪರಮಾವತಾರಿ, ಪರಮ ಜ್ಞಾನಿ ಮತ್ತು ಸಮಸ್ತ ಮಾನವತೆಯ ಪೂಜೆಗೆ ಅರ್ಹನಾದವನು. ಶ್ರೀರಾಮಕೃಷ್ಣರು ಬೇರೆ ಎಲ್ಲ ಅವತಾರಗಳಿಗಿಂತ ಭಿನ್ನರಾಗಿ, ಜನರ ಅಂತರಂಗವನ್ನು ಬೆಳಗುವ ಮಹತ್ತಾದ, ಸ್ತುತ್ಯವಾದ ಕಾರ್ಯವನ್ನು ನೆರವೇರಿಸಿದ್ದು ಇಂದು ಜಗತ್ತಿನ ಆಧ್ಯಾತ್ಮಿಕ ಇತಿಹಾಸದ ಅವಿಭಾಜ್ಯ ಅಂಗವಾಗಿದೆ. ಈ ಅರ್ಥದಲ್ಲಿ ಅವರು "ಅವತಾರ ವರಿಷ್ಠರು."

ಅವರ ಬೋಧನ ವಿಧಾನವು ಅತ್ಯಂತ ವಿಶಿಷ್ಟವಾದುದು. ಅಷ್ಟೇನೂ ಓದಿಲ್ಲದ, ಶಾಸ್ತ್ರ ಪರಿಚಯವಿಲ್ಲದ, ಕುಗ್ರಾಮದ ಸಾಮಾನ್ಯ ವ್ಯಕ್ತಿಯಾದ ಅವರು ಆಧುನಿಕ ಮನೋವಿಜ್ಞಾನಿಯಂತೆ ಜ್ಞಾನಾಪೇಕ್ಷಿಗಳಲ್ಲಿ ಒಬ್ಬೊಬ್ಬನೂ ಬೇರೆ ಬೇರೆಯೇ, ಒಬ್ಬೊಬ್ಬನ ವ್ಯಕ್ತಿತ್ವವೂ ಬೇರೆ ಬೇರೆಯಾದದ್ದು ಎಂಬುದನ್ನು ಕಂಡುಕೊಂಡರು. ಒಬ್ಬೊಬ್ಬನ ಅಂತರಂಗ ಜಗತ್ತೂ ಬೇರೆ ಬೇರೆಯಾದುದರಿಂದ, ಅಲ್ಲಿನ ಹಾಸುಹೊಕ್ಕುಗಳು ಜಟಿಲಾತಿ ಜಟಿಲವಾದುದರಿಂದ ಒಬ್ಬೊಬ್ಬನ ಅಗತ್ಯವೂ ಬೇರೆ ಬೇರೆ ಎಂದು ಅವರ ಸೂಕ್ಷ್ಮ ಮತಿಯು ಗ್ರಹಿಸಿಬಿಟ್ಟಿತು. ಆದುದರಿಂದಲೇ ಒಬ್ಬನಿಗೆ ಜ್ಞಾನ ಮಾರ್ಗದಲ್ಲಿ ಮುಂದು

ಮರಿಯುವಂತೆ ಪ್ರೋತ್ಸಾಹಿಸಿದ ಗುರುವರ್ಯರು ಮತ್ತೊಬ್ಬನನ್ನು ಭಕ್ತಿ ಮಾರ್ಗದಲ್ಲೂ ಮಗದೊಬ್ಬನನ್ನು ಕರ್ಮ ಮಾರ್ಗದಲ್ಲೂ ಮುಂದುವರಿಯಲು ಹೇಳಿದರು. ಒಬ್ಬನ ಆಹಾರವು ಮತ್ತೊಬ್ಬನಿಗೆ ವಿಷವಾಗಬಹುದು. ಹಾಗೆಯೇ ಒಬ್ಬನಿಗೆ ಒಳ್ಳೆಯ ಉಪದೇಶವಾಗಬಹುದಾದದ್ದು ಮತ್ತೊಬ್ಬನಿಗೆ ಮನೋವೈಕಲ್ಯಕ್ಕೆ ಕಾರಣವಾಗಬಹುದು ಎಂಬುದನ್ನು ಅವರು ಕಂಡುಹಿಡಿದಿದ್ದರು. ಇದನ್ನು ಸುಂದರವಾದ, ಮನೆ ಬಳಕೆಯ ಸಾಮ್ಯತೆಯೊಂದರ ನೆರವಿನಿಂದ ಅವರು ವಿವರಿಸುತ್ತಿದ್ದರು. ತಾಯಿಯು ಅಡುಗೆ ಮಾಡ ಹೊರಟು ಒಂದೇ ಮೂಲ ಸಾಮಗ್ರಿಯಿಂದ ಮಕ್ಕಳ ರುಚಿ ಭೇದವನ್ನೂ, ಜೀರ್ಣ ಶಕ್ತಿಯ ಸ್ವರೂಪವನ್ನೂ ಅರಿತು, ಅವರಿಗೆ ಬೇರೆ ಬೇರೆ ರೀತಿಯ ಅಡುಗೆಯನ್ನು ಮಾಡಿ ಬಡಿಸುವಂತೆ ಇದು.

ಶ್ರೀರಾಮಕೃಷ್ಣರನ್ನು ಅನುಭಾವೀ ದಾರ್ಶನಿಕರ ಪರಂಪರೆಯಲ್ಲಿ ಅತ್ಯುಚ್ಚ ಸ್ಥಾನಕ್ಕೆ ಏರಿಸಿರುವ ಅವರ ಮತ್ತೊಂದು ನಿಶ್ಚಿತವಾದ ನಿಲುವೆಂದರೆ ಪರಮ ಸತ್ಯದ ವಿಷಯದಲ್ಲಿ ಮಾನವ ಜ್ಞಾನವು ಅತ್ಯಂತ ಪರಿಮಿತವಾದದ್ದು ಎಂಬುದು. ಆಧುನಿಕ ವಿಜ್ಞಾನವು ಅಸಂಖ್ಯಾತ ಕ್ಷೇತ್ರಗಳಲ್ಲಿ ಪ್ರಯೋಗಗಳನ್ನು ನಡೆಸಿ ಸೃಷ್ಟಿ ಎಂಬುದು ನಾವು ಅರಿತಿರುವ ವಿಶ್ವಕ್ಕಿಂತ ಸಹಸ್ರ ಪಾಲೋ ಕೋಟಿ ಪಾಲೋ ವಿಸ್ತಾರವಾದದ್ದು, ಅದನ್ನು ಪೂರ್ಣವಾಗಿ ಅರಿಯುವ ಸಾಧನವು ಮಾನವನಿಗೆ ಲಭ್ಯವಾಗಿಲ್ಲ ಎಂಬ ತೀರ್ಮಾನಕ್ಕೆ ಬಂದಿದೆಯಷ್ಟೆ. ಉಪನಿಷತ್ತಿನ ಋಷಿಗಳು ತಮ್ಮ ಒಳ ಅರಿವನ್ನು ಬೆಳಸಿಕೊಂಡು "ಆ ಸತ್ಯದ ಸಮೀಪದಿಂದ ಮಾತು ಹಿಂದಕ್ಕೆ ಬರುತ್ತದೆ, ಮನಸ್ಸು ಅದರ ಸಮೀಪವನ್ನು ಕೂಡ ಸಾರಲಾರದು" ಎಂದು ಘೋಷಿಸಿದ್ದರಷ್ಟೆ. ಪರಮ ಸತ್ಯದ ವಿಷಯದಲ್ಲಿ ಮಾನವ ಜ್ಞಾನವು ಪರಿಮಿತವಾದದ್ದು ಎಂದು ಹೇಳಿ ರಾಮಕೃಷ್ಣರು ಆಧುನಿಕ ವಿಜ್ಞಾನದ ನಿರ್ಣಯ ಮತ್ತು ಉಪನಿಷತ್ತಿನ ಋಷಿಗಳ ಉಲ್ಲೇಖಗಳ ಮೇಲೆ ತಮ್ಮ ಆಧ್ಯಾತ್ಮಿಕ ಅನುಭೂತಿಯ ಮುದ್ರೆಯನ್ನು ಒತ್ತಿದ್ದಾರೆ. ಇದು ಅತ್ಯಂತ ಸಾಧಾರಣವಾದ ಸಂಗತಿ ಎಂದು ಯಾರೂ ಭಾವಿಸಬಾರದು. ಏಕೆಂದರೆ ಜ್ಞಾನಿಗಳು ಎನ್ನಿಸಿಕೊಂಡ ಅನೇಕರು ತಾವು ಕಂಡಿರುವುದೇ ಪೂರ್ಣಸತ್ಯವೆಂದೂ, ಪರಮ ಸತ್ಯವೆಂದೂ ನಿರ್ಣಯಿಸಿಬಿಟ್ಟಿದ್ದಾರೆ, ಪರಮಾತ್ಮ, ಜೀವಾತ್ಮ, ಜಗತ್ತು, ನರಕ, ಸ್ವರ್ಗ ಇವುಗಳ ವಿಷಯದಲ್ಲಿ—ಎಲ್ಲವನ್ನೂ ತಮ್ಮ ಆಚಾರ್ಯ ಪ್ರಜ್ಞೆ ಅರಿತಿರುವಂತೆಯೋ, ತಾವೇ ಸ್ವತಃ ಕಂಡಿರುವಂತೆಯೋ ಹೇಳಿಕೆಗಳನ್ನು ನೀಡಿದ್ದಾರೆ. ತಮ್ಮ ಮತವೊಂದೇ ಸತ್ಯಕ್ಕೆ ದಾರಿ ಎಂದು ಹೇಳಿದ ಅನೇಕರ ವಾದ ವೈಖರಿಯನ್ನು ಇಂದು ವಿಚಾರಪರರು ಪ್ರಶ್ನಿಸಿ ಅದು ಎಷ್ಟು ಹಾಸ್ಯಾಸ್ಪದ ವಾದದ್ದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಪರಮಹಂಸರಾದರೋ ಒಂದು ಸುಂದರವೂ ಸರಳವೂ ಆದ ಉಪಮೆಯ ಮೂಲಕ, ಎಲ್ಲವನ್ನೂ ತಿಳಿದಿದ್ದೇನೆ ಎನ್ನುವವನು ಒಂದು ಇರುವೆಗೆ ಸಮ ಎಂಬುದನ್ನು ತೋರಿಸಿಕೊಟ್ಟಿದ್ದಾರೆ: "ಒಂದು ಇರುವೆ ಸಕ್ಕರೆಯ ರಾಶಿಯನ್ನು ನೋಡಿತು. ಅದರಲ್ಲಿ ಒಂದು ಕಣವನ್ನು ಕಷ್ಟಪಟ್ಟು ಸಾಗಿಸುತ್ತಾ ಹೇಳಿತು: 'ಮುಂದಿನ ಸಲ ಸಕ್ಕರೆಯ ಬೆಟ್ಟವನ್ನೇ ಸಾಗಿಸಿಬಿಡುತ್ತೇನೆ!'

ಅಷ್ಟು ಮಾತ್ರವಲ್ಲ. ಆಧ್ಯಾತ್ಮದ ಸುದೀರ್ಘ ಇತಿಹಾಸದಲ್ಲಿ ಶ್ರೀರಾಮಕೃಷ್ಣ ರೊಬ್ಬರೇ ಜಗತ್ತಿನ ವಿವಿಧ ಧರ್ಮಗಳನ್ನು ಅತ್ಯಂತ ಶ್ರದ್ಧೆಯಿಂದ ಆಚರಿಸಿ ಅವೆಲ್ಲವೂ ಒಂದೇ ಸತ್ಯಕ್ಕೆ ಕೊಂಡೊಯ್ಯುವ ಪಥಗಳು ಎಂದು ಘೋಷಿಸಿದ್ದು. ಈ ವಿಷಯದಲ್ಲಿ ಅವರು ತಮ್ಮ ಅನುಭವವನ್ನು ಈ ಮಾತುಗಳಲ್ಲಿ ಕೆನೆಗಟ್ಟಿಸಿದ್ದಾರೆ :

"ನಾನು ಪ್ರತಿಯೊಂದು ಧರ್ಮವನ್ನೂ—ಹಿಂದೂ ಧರ್ಮ, ಮುಹಮ್ಮದೀಯ ಧರ್ಮ, ಕ್ರಿಸ್ತಧರ್ಮ—ಅನುಸರಿಸಿ ನೋಡಬೇಕಾಯಿತು. ಜೊತೆಗೆ ಶಾಕ್ತ, ವೈಷ್ಣವ, ವೇದಾಂತ ಈ ಮಾರ್ಗಗಳಲ್ಲೂ ನಡೆಯಬೇಕಾಗಿ ಬಂತು. ಇರತಕ್ಕವನು ಭಗವಂತನೊಬ್ಬನೇ —ಆತನ ಕಡೆ ಎಲ್ಲರೂ ಬರುತ್ತಿದ್ದಾರೆ ; ಆದರೆ ವಿವಿಧ ಮಾರ್ಗಗಳಿಂದ ಅಷ್ಟೆ."

ಭರತ ಖಂಡದ ಸಾಮಾಜಿಕ ಜೀವನದ ದೊಡ್ಡ ಕಳಂಕ ಎಂದು ಭಾವಿಸಲಾಗಿರುವ ಜಾತಿ ಪದ್ಧತಿಯ ವಿಷಯದಲ್ಲೂ, ಭಾರತದ ಘೋರ ಸಾಮಾಜಿಕ ಶಾಪವಾದ ಅಸ್ಪೃಶ್ಯತೆಯ ವಿಷಯದಲ್ಲೂ ಶ್ರೀರಾಮಕೃಷ್ಣರು ತಾಳಿದ ನಿಲುವು ಏನು ? ಶ್ರೀರಾಮಕೃಷ್ಣರು ಜನ್ಮತಃ ಬ್ರಾಹ್ಮಣರು. ಆದರೆ ಒಮ್ಮೆ ಸಾಧನೆಯ ಸಮಯದಲ್ಲಿ ಬಟ್ಟೆಯನ್ನೂ, ಜನಿವಾರವನ್ನೂ ಕಳಚಿಹಾಕಿ ಧ್ಯಾನಕ್ಕೆ ಕುಳಿತ ಅವರನ್ನು "ಹೀಗೇಕೆ ಮಾಡಿದಿರಿ ?" ಎಂದು ಪ್ರಶ್ನಿಸಿದಾಗ ಅವರು ಕೊಟ್ಟ ಉತ್ತರ ಈ ವಿಷಯದಲ್ಲಿ ಎಲ್ಲರ ಕಣ್ಣನ್ನೂ ತೆರೆಸುವಂಥದಾಗಿದೆ : "ಈ ರೀತಿ ಎಲ್ಲ ಪಾಶಗಳಿಂದ ಮುಕ್ತನಾಗಿ ಧ್ಯಾನ ಮಾಡಬೇಕು... ಈ ಜನಿವಾರವೂ 'ನಾನು ಬ್ರಾಹ್ಮಣ, ಸಕಲರಿಗಿಂತ ಉಚ್ಚ' ಎಂಬ ಅಭಿಮಾನದ ಚಿಹ್ನೆ ಮತ್ತು ಅದೊಂದು ಪಾಶ. ತಾಯಿಯನ್ನು ಕರೆಯುವಾಗ ಈ ಎಲ್ಲ ಪಾಶಗಳನ್ನೂ ಕಿತ್ತೊಗೆದು ಒಂದೇ ಮನಸ್ಸಿನಿಂದ ಕರೆಯಬೇಕು. ಆದ್ದರಿಂದಲೇ ಇದನ್ನೆಲ್ಲ ತೆಗೆದು ಹಾಕಿದ್ದೇನೆ. ಧ್ಯಾನವಾದ ಮೇಲೆ ಮತ್ತೆ ಹಾಕಿಕೊಳ್ಳುತ್ತೇನೆ."

ಇಷ್ಟೇ ಅಲ್ಲ. ತಮ್ಮ ಜಾತ್ಯಭಿಮಾನ ಪೂರ್ಣವಾಗಿ ಹೋಗಲಿ ಎಂದು ಸಾಧಕರಾಗಿದ್ದಾಗ ಉದ್ದವಾಗಿ ಬೆಳೆದಿದ್ದ ತಮ್ಮ ತಲೆಗೂದಲಿನಿಂದ ಅಂತ್ಯಜನೊಬ್ಬನ ಮನೆಯ ನೆಲವನ್ನು ಉಜ್ಜಿ ಶುದ್ಧಿಗೊಳಿಸುತ್ತಿದ್ದೆ ಎಂದು ಪರಮಹಂಸರು ಹೇಳಿಕೊಂಡಿ ದ್ದಾರೆ. ಭಕ್ತರಿಗೆ ಜಾತಿ ಗೀತಿ ಯಾವುದೂ ಇಲ್ಲ ಎಂದು ಅವರು ಮತ್ತೆ ಮತ್ತೆ ಹೇಳು ತ್ತಿದ್ದರು. ಆಚರಣೆಯಲ್ಲಿ ಅವರು ಮಾಡಿದ್ದೇನು ? ತಮ್ಮ ಸಾಧನೆ–ಸಿದ್ಧಿಗಳ ಸಕಲ ಸಂಪತ್ತನ್ನೂ ಅವರು ಧಾರೆಯೆರೆದದ್ದು ಬ್ರಾಹ್ಮಣನಲ್ಲದ, ಮುಂದೆ ಸ್ವಾಮಿ ವಿವೇಕಾ ನಂದರೆಂದು ಪ್ರಸಿದ್ಧರಾದ ನರೇಂದ್ರನಾಥ ದತ್ತನಿಗೆ ! ಜಾತಿ ವಿನಾಶ ಅವರ ಜನ್ಮೋದ್ದೇಶ ಗಳಲ್ಲಿ ಪ್ರಧಾನವಾಗಿದ್ದ ಅಂಶ ಎನ್ನುವುದಕ್ಕೆ ಇದಕ್ಕಿಂತ ಹೆಚ್ಚಿನ ಆಚರಣೆಯ ಅಗತ್ಯ ವಿಲ್ಲವಷ್ಟೆ !

ಸ್ತ್ರೀಯರ ವಿಷಯದಲ್ಲಿ ಪರಮಹಂಸರ ದೃಷ್ಟಿ ಏನು ? ಅವರು ಸನ್ಯಾಸಿ, ಆದರೂ ವಿವಾಹಿತರು, ಸತಿಯಾದವಳು ಪತಿಯ ಕಾಮವಸ್ತುವಲ್ಲ ಎಂದು ಸಾರಿ ಹೇಳಿದ್ದು ಮಾತ್ರವಲ್ಲ, ತಮ್ಮ ಸತಿಯನ್ನು ಜಗನ್ಮಾತೆಯ ಸ್ಥಾನದಲ್ಲಿ ಕೂರಿಸಿ, ಪೂಜಿಸಿ, ಆಕೆಯ

ಪದತಲದಲ್ಲಿ ತಮ್ಮ ಸಾಧನೆಯ ಸಮಸ್ತವನ್ನೂ, ಜಪಮಾಲೆಯ ಸಮೇತ ಅರ್ಪಿಸಿ "ಇನ್ನು ನನ್ನ ಸಾಧನೆ ಮುಗಿಯಿತು, ಅದರ ಅಗತ್ಯ ಇಲ್ಲ" ಎಂದರು. ಅವರ ದೃಷ್ಟಿಯಲ್ಲಿ ಸ್ತ್ರೀಯರಿಗೆ ಸಲ್ಲಬೇಕಾದದ್ದು ಸಮಾನತೆಯಲ್ಲ, ಗೌರವ, ಪೂಜೆ !

ಆಧ್ಯಾತ್ಮಿಕ ಸಾಧನೆ ಸಿದ್ಧಿಗಳ ವಿಷಯದಲ್ಲಿ ಶ್ರೀರಾಮಕೃಷ್ಣ ಪರಮಹಂಸರು ಹಿಂದಿನ ಶಾಸ್ತ್ರಾಗಮಗಳಲ್ಲಿ ಹೇಳದ ಯಾವುದೇ ಒಂದು ಹೊಸ ವಿಷಯವನ್ನು ಹೇಳಿದಂತೆ ತೋರುವುದಿಲ್ಲ. ಜ್ಞಾನ, ಭಕ್ತಿ, ವೈರಾಗ್ಯ, ತೀವ್ರವಾದ ಜಪತಪಾದಿಗಳ ಸಾಧನೆ, ಇವುಗಳಿಂದ ದೊರಕುವ ಸಾಕ್ಷಾತ್ಕಾರ ಈ ಸಿದ್ಧ ಸೂತ್ರವನ್ನೇ ಅವರೂ ಬೋಧಿಸಿದರು. ಅಧ್ಯಾತ್ಮದ ವಲಯಕ್ಕೆ ಅವರು ಸೇರಿಸಿದ ಹೊಸ ಉಪಾಸನಾ ಮೂರ್ತಿಯೆಂದರೆ ಜೀವ. ಎಂದರೆ ಜೀವವೇ ಶಿವ ಎಂದು ಶ್ರೀರಾಮಕೃಷ್ಣರು ದೇವಾಲಯದ ಗೋಪುರದ ತುದಿಯಿಂದಲೋ ಎಂಬಂತೆ ಘೋಷಿಸಿದರು. ಅದು ಅವರ ಘೋಷಣೆಯ ಮಂತ್ರಾರ್ಥ ಮಾತ್ರ. ಮಂತ್ರದ ಇನ್ನೊಂದು ಅರ್ಥವೆಂದರೆ "ಜೀವ ಸೇವೆಯೇ ಶಿವ ಸೇವೆ." ಇದು ಶ್ರೀರಾಮಕೃಷ್ಣರ ನಾಲಗೆಯ ತುದಿಯಿಂದ ಮೂಡಿದ ಅರ್ಥ ರಹಿತ ಶಬ್ದ ಸಂಕಲವಲ್ಲ. ಅವರ ಹೃದಯ ಕುಂಡದಿಂದ ಸಿಡಿದ ಮಂತ್ರದ ಕಿಡಿಗಳು. ಆದುದರಿಂದಲೇ ಅವು ಸ್ವಾಮಿ ವಿವೇಕಾನಂದರ ಜೀವವನ್ನು ಸ್ಪರ್ಶಿಸಿದ ಕೂಡಲೇ ಅವರ ವ್ಯಕ್ತಿತ್ವ ಸಮಸ್ತವೂ ಪ್ರೋಜ್ವಲಿಸುವಂತೆ ಮಾಡಿದುದು. ಸ್ವಾಮಿ ವಿವೇಕಾನಂದರ ವ್ಯಕ್ತಿತ್ವ ಮಹಿಮೆಯೂ ಅದಕ್ಕೆ ಸೇರಿ, ಶ್ರೀರಾಮಕೃಷ್ಣರು ಅಭಿಮಂತ್ರಿಸಿ ನೀಡಿದ ಈ ಉಪದೇಶ ವಾಕ್ಯವು ಭರತ ಖಂಡದ ಕೋಟ್ಯಂತರ ಹೃದಯಗಳಲ್ಲಿ ಅನುರಣಿತವಾಗುವಂತೆ ಆಯಿತು. ಇದೊಂದು ಸಾಮಾನ್ಯವಾದ ಸಿದ್ಧಿ ಎಂದು ಯಾರೂ ಭಾವಿಸಲಾಗದು.

ಈ ಮಂತ್ರ ಸ್ಫುರಣೆಗೆ ಒಂದು ವಿಶೇಷವಾದ ಸಂದರ್ಭದ ಹಿನ್ನೆಲೆಯಿದೆ. ಶ್ರೀರಾಮಕೃಷ್ಣರು ಯಾವುದೇ ಉಪದೇಶವನ್ನೂ ತಮ್ಮ ಬದುಕಿನಲ್ಲಿ ಪ್ರಯೋಗಿಸಿದ ನಂತರವೇ ನೀಡುತ್ತಿದ್ದರು. ಮೊದಲು ಆಚರಣೆ, ಅನಂತರ ಬೋಧನೆ–ಇದು ಅವರ ಬದುಕಿನಲ್ಲಿ ನಾವು ಕಾಣುವ ನಿರಂತರ ಪ್ರಕ್ರಿಯೆ. ಜೀವ ಸೇವೆಯ ವಿಷಯದಲ್ಲೂ ಅವರು ಜೀವಿಗಳ ಕಷ್ಟವನ್ನು ತೀವ್ರವಾಗಿ ಅನುಭವಿಸಿ, ಆ ಕಷ್ಟದ ಅನುಭವದಿಂದ ಅವರ ಹೃದಯವು ಹಿಂಡಿ ಹೋಗಿ, ಕಣ್ಣೀರಾಗಿ ಹರಿದು, ಅನಂತರ "ಜೀವ ಸೇವೆಯೇ ಅಧ್ಯಾತ್ಮ ಸಾಧನೆ" ಎಂಬ ಸೂತ್ರವು ಅವರಿಂದ ರೂಪಿತವಾಯಿತು. ಆ ಘಟನೆ ನಡೆದದ್ದು ಹೇಗೆ ಎಂಬುದನ್ನು ತಮ್ಮ ಗುರುಗಳ ಬಾಯಿಂದಲೇ ಕೇಳಿದ್ದ ಶ್ರೀ ಸ್ವಾಮಿ ಶಾರದಾನಂದರು ಹೀಗೆ ನಿರೂಪಿಸಿದ್ದಾರೆ :

"(ತೀರ್ಥ) ಯಾತ್ರೆಯ ಸಂದರ್ಭದಲ್ಲಿ ವೈದ್ಯನಾಥದ ಹತ್ತಿರ ಒಂದು ಗ್ರಾಮದಲ್ಲಿ ಜನರ ದುಃಖ ದಾರಿದ್ರ್ಯವನ್ನು ಕಂಡು ಶ್ರೀರಾಮಕೃಷ್ಣರ ಹೃದಯ ಕರಗಿತು. ಮಥುರನಿಗೆ ಹೇಳಿದರು : "ನೀನು ತಾಯಿಯ ಆಸ್ತಿಯನ್ನು ನೋಡಿಕೊಳ್ಳುವವನು ಅಷ್ಟೆ. ಇವರಿಗೆಲ್ಲ ತಲೆಗೆ ಎಣ್ಣೆ, ಬಟ್ಟೆ, ಒಂದು ದಿನದ ಮಟ್ಟಿಗೆ ಹೊಟ್ಟೆ ತುಂಬ ಊಟ ಹಾಕು."

ಮಥುರನು ಮೊದಲು ಸ್ವಲ್ಪ ಹಿಂದೆ ಮುಂದೆ ನೋಡಿದ : "ಯಾತ್ರೆಯ ಸಮಯದಲ್ಲಿ ತುಂಬ ಖರ್ಚು ಇರುತ್ತದೆ. ಇವರು ತುಂಬ ಜನರಿದ್ದಾರೆ. ಇವರಿಗೆಲ್ಲ ಊಟ ಬಟ್ಟೆ ನೀಡುತ್ತ ಹೋದರೆ ಹಣ ಕಡಮೆಯಾಗುತ್ತದೆ. ಈ ಅವಸ್ಥೆಯಲ್ಲಿ ಏನು ಮಾಡುವುದು ಹೇಳಿ ?" ಈ ಮಾತನ್ನೆಲ್ಲ ಕೇಳುವವರು ಯಾರು ? ಗ್ರಾಮವಾಸಿಗಳ ದುಃಖವನ್ನು ನೋಡಿ ಶ್ರೀರಾಮಕೃಷ್ಣರ ಕಣ್ಣುಗಳಿಂದ ನೀರು ಸುರಿಯುತ್ತಿದೆ, ಹೃದಯದಲ್ಲಿ ಅಪೂರ್ವ ಕರುಣೆಯ ಆವೇಶ ಉಂಟಾಗಿದೆ. ಅವರೆಂದರು : "ನೀನು ಹೊರಟು ಹೋಗು. ನಾನು ಇವರೊಡನೆಯೇ ಇದ್ದು ಬಿಡುತ್ತೇನೆ. ಇವರಿಗೆ ಯಾರೂ ಇಲ್ಲ. ಇವರನ್ನು ಬಿಟ್ಟು ನಾನು ಬರುವುದಿಲ್ಲ." ಹೀಗೆ ಹೇಳಿ ಅವರು ಬಾಲಕನಂತೆ ಹಠ ಹಿಡಿದು ಆ ಜನರ ಮಧ್ಯೆ ಹೋಗಿ ಕುಳಿತುಬಿಟ್ಟರು. ಅವರ ಆ ಕರುಣೆಯನ್ನು ನೋಡಿ (ಮಥುರ ಬಾಬು) ಕಲ್ಕತ್ತೆಯಿಂದ ಬಟ್ಟೆಯನ್ನು ತರಿಸಿ ಅವರು ಹೇಳಿದಂತೆಯೇ ಎಲ್ಲ ಕಾರ್ಯ ವನ್ನು ನೆರವೇರಿಸಿದನು. ಶ್ರೀರಾಮಕೃಷ್ಣರು ಆ ಗ್ರಾಮವಾಸಿಗಳ ಆನಂದವನ್ನು ನೋಡಿ ಸಂತೋಷದಿಂದ ನಗುನಗುತ್ತ ಮಥುರನ ಜೊತೆ ಕಾಶಿಗೆ ಹೊರಟರು... (ಪು. ೫೦೨)

ಧರ್ಮ, ಆಧ್ಯಾತ್ಮ, ಭಗವಂತ— ಈ ವಿಷಯಗಳಲ್ಲಿ ನಂಬಿಕೆ ಇರುವವರಾಗಲಿ, ಇಲ್ಲದಿರುವವರಾಗಲಿ ಶ್ರೀರಾಮಕೃಷ್ಣರಲ್ಲಿ ಗೌರವವನ್ನು ತಾಳದೆ ಇರುವುದು ಅಸಾಧ್ಯ. ಏಕೆಂದರೆ ಅವರ ವ್ಯಕ್ತಿತ್ವವು ಅಷ್ಟು ಅಸಾಧಾರಣವಾದದ್ದು. ತ್ಯಾಗ ಮತ್ತು ವೈರಾಗ್ಯಗಳ ದೃಷ್ಟಿಯಿಂದ ಅಂತಹ ಅಸಮಾನವಾದ ಮತ್ತೊಬ್ಬ ವ್ಯಕ್ತಿಯನ್ನು ಜಗತ್ತಿನ ಧಾರ್ಮಿಕ ಇತಿಹಾಸದಲ್ಲಿ ಕಾಣುವುದು ಅಸಾಧ್ಯ. ಸನ್ಯಾಸವನ್ನು ಸ್ವೀಕರಿಸಿದ್ದರೂ ಅವರು ವಿವಾಹಿತರಾಗಿದ್ದರು ಎಂದು ಈ ಹಿಂದೆಯೇ ಸೂಚಿಸಲಾಗಿದೆ. ಈ ಸಂದರ್ಭದಲ್ಲಿ ಅದ್ವೈತದ ಚರಮಸ್ಥಿತಿಯನ್ನು ತಲುಪಿದ್ದ ತೋತಾಪುರಿಯು ತನ್ನಿಂದ ಅದ್ವೈತ ದೀಕ್ಷೆ ಯನ್ನು ಪಡೆಯಲಿದ್ದ ಶ್ರೀರಾಮಕೃಷ್ಣರನ್ನು ಕುರಿತು ಹೇಳಿದ್ದೇನು ಎಂಬುದನ್ನೂ, ಆ ಪ್ರಕರಣದಲ್ಲಿ ಈ ಲೋಕದ ವಿಷಯದಲ್ಲಿಯೂ, ಅದರ ಆಗುಹೋಗುಗಳ ವಿಷಯ ದಲ್ಲಿಯೂ ಸಂಪೂರ್ಣವಾಗಿ ಉದಾಸೀನನಾಗಿದ್ದ ಗುರು ತೋತಾಪುರಿ ಮತ್ತು ಅವನಲ್ಲಿ ಶಿಷ್ಯತ್ವವನ್ನು ಸ್ವೀಕರಿಸಲಿದ್ದ ಶ್ರೀರಾಮಕೃಷ್ಣರು ಇವರ ನಡುವೆ ನಡೆದ ಸಂಭಾಷಣೆ ಯನ್ನೂ ಆ ಪ್ರಸಂಗದಲ್ಲಿ ಶ್ರೀರಾಮಕೃಷ್ಣರು ನಡೆದುಕೊಂಡ ರೀತಿಯನ್ನೂ ಶ್ರೀ ಸ್ವಾಮಿ ಶಾರದಾನಂದರ ಈ ಕೃತಿಯಿಂದ ತಿಳಿಯುವುದು ಅತ್ಯಂತ ಬೋಧಪ್ರದವಾಗಿದೆ :

"ತೋತಾಪುರಿಯು ದೇವಸ್ಥಾನಕ್ಕೆ ಬಂದು ಮೊದಲು ಮುಖ ಮಂಟಪದಲ್ಲಿ ಕುಳಿತಿದ್ದನು. ಶ್ರೀರಾಮಕೃಷ್ಣರೂ ಅಲ್ಲಿಯೇ ಇನ್ನೊಂದು ಜಾಗದಲ್ಲಿ ಅನ್ಯಮನಸ್ಕರಾದ ಕುಳಿತಿದ್ದರು. ತೋತಾಪುರಿಯ ದೃಷ್ಟಿ ಅವರ ಮೇಲೆ ಬಿತ್ತು. ತಪಸ್ಸಿನಿಂದ ತೇಜಸ್ವಿಯಾದ ಅವರ ಭಾವೋಜ್ವಲ ಮುಖವನ್ನು ಕಂಡು ಅವನು ಆಕರ್ಷಿತನಾದನು. ಅವನಿಗನಿಸಿತು, ಇವರು ಸಾಮಾನ್ಯ ವ್ಯಕ್ತಿಯಲ್ಲ, ವೇದಾಂತ ಸಾಧನೆಗೆ ಇಂಥ ಅಧಿಕಾರಿಗಳು ಅತಿ ವಿರಳ, ಎಂದು...ಅಂತಃಪ್ರೇರಣೆಯಿಂದ ಪ್ರೇರಿತನಾಗಿ ಶ್ರೀರಾಮಕೃಷ್ಣರನ್ನು ವಿಚಾರಿಸಿದ :

"ನೀನು ಉತ್ತಮ ಅಧಿಕಾರಿ ಎಂದು ಅನಿಸುತ್ತಿದೆ. ವೇದಾಂತ ಸಾಧನೆ ಮಾಡುವೆಯಾ ?"

"ಜಟಾಜೂಟಧಾರಿಯೂ, ದೀರ್ಘಕಾಯನೂ, ದಿಗಂಬರನೂ ಆಗಿದ್ದ ತೋತಾಪುರಿಯನ್ನೊಮ್ಮೆ ದಿಟ್ಟಿಸಿ ನೋಡಿ ಶ್ರೀರಾಮಕೃಷ್ಣರೆಂದರು : "ನಾನು ಏನು ಮಾಡಬೇಕು, ಏನು ಮಾಡಬಾರದು ಇದೊಂದೂ ನನಗೆ ತಿಳಿಯದು. ನನ್ನ ತಾಯಿಗೆ ಎಲ್ಲ ಗೊತ್ತು. ಅವಳು ಅಪ್ಪಣೆಯಿತ್ತರೆ ಮಾಡುತ್ತೇನೆ."

ತೋತಾಪುರಿ ಹೇಳಿದ : "ಹಾಗಾದರೆ ಹೋಗು. ನಿನ್ನ ತಾಯಿಯನ್ನು ವಿಚಾರಿಸಿಕೊಂಡು ಬಾ. ನಾನು ಇಲ್ಲಿ ಬಹಳ ಕಾಲ ನಿಲ್ಲುವುದಿಲ್ಲ."

ಶ್ರೀರಾಮಕೃಷ್ಣರು ಮರುಮಾತಾಡದೆ ನಿಧಾನವಾಗಿ ಕಾಳೀ ಮಂದಿರಕ್ಕೆ ಹೋದರು. ಭಾವಾವಸ್ಥೆಯಲ್ಲಿ ಶ್ರೀ ಜಗನ್ಮಾತೆಯ ವಾಣಿಯನ್ನು ಕೇಳಿದರು : "ಹೋಗು, ಅವನಿಂದ ಕಲಿತುಕೋ, ನಿನಗೆ ಕಲಿಸುವುದಕ್ಕಾಗಿಯೇ ಆ ಸನ್ಯಾಸಿ ಇಲ್ಲಿಗೆ ಬಂದಿರುವನು."

ಅದ್ವೈತ ದೀಕ್ಷೆಯನ್ನು ಪಡೆಯುವ ಮುನ್ನ ಶ್ರೀರಾಮಕೃಷ್ಣರು ತಮಗೆ ವಿವಾಹವಾಗಿರುವ ವಿಷಯವನ್ನು ತೋತಾಪುರಿಗೆ ತಿಳಿಸಿದರು. ಆತ ಹೇಳಿದ : "ಅದರಿಂದೇನಂತೆ? ಪತ್ನಿಯೊಡನಿದ್ದೂ ಯಾರ ತ್ಯಾಗ, ವೈರಾಗ್ಯ ವಿವೇಕಗಳು ಸ್ವಲ್ಪವೂ ಕುಂಠಿತವಾಗದೆ ಇರುವುವೋ ಅವನು ಮಾತ್ರ ಬ್ರಹ್ಮದಲ್ಲಿ ಸುಪ್ರತಿಷ್ಠನಾಗಿರುತ್ತಾನೆ. ಸ್ತ್ರೀ ಮತ್ತು ಪುರುಷ—ಇವರಿಬ್ಬರನ್ನೂ ಆತ್ಮಬುದ್ಧಿಯಿಂದ ಸಮಭಾವದಲ್ಲಿ ಯಾರು ಕಾಣುವರೊ ಮತ್ತು ಅವರೊಡನೆ ಅದೇ ಭಾವದಿಂದ ವ್ಯವಹರಿಸುವರೊ ಅವರಿಗೆ ಮಾತ್ರ ಯಥಾರ್ಥ ಬ್ರಹ್ಮಜ್ಞಾನವುಂಟಾಗಿರುತ್ತದೆ. ಸ್ತ್ರೀಪುರುಷರಲ್ಲಿ ಭೇದವನ್ನು ಕಾಣುವವರು ಎಂಥ ಸಾಧಕರಾಗಿದ್ದರೂ ಬ್ರಹ್ಮವಿದ್ಯೆಯಿಂದ ಬಹು ದೂರ ಉಳಿಯುತ್ತಾರೆ."

ಶ್ರೀರಾಮಕೃಷ್ಣರು ತಮ್ಮ ಪತ್ನಿ ಶಾರದಾದೇವಿಯವರನ್ನು ತಮ್ಮೊಡನೆ ಇರಲು ಬಿಟ್ಟು ತಮ್ಮ ಅದ್ವೈತ ಜ್ಞಾನ ಎಷ್ಟು ಅಚಲವಾದದ್ದು ಎಂಬುದನ್ನು ಪರೀಕ್ಷಿಸಿಕೊಂಡರು. ಅವರು ಸ್ತ್ರೀಪುರುಷರಲ್ಲಿ ಭೇದದನ್ನು ಕಾಣಲಾರದೆ ಅದ್ವಯ ದೃಷ್ಟಿಯನ್ನು ಸಾಧಿಸಿದ್ದರು ಎಂಬುದು ಅವರ ನಿರೂಪಣೆಯಿಂದಲೂ, ಪ್ರತ್ಯಕ್ಷದರ್ಶಿಗಳೂ ಜ್ಞಾನ ವೈರಾಗ್ಯಗಳಲ್ಲಿ ಅವರಿಗೆ ಅತ್ಯಂತ ಸಮೀಪರೂ ಆಗಿದ್ದ ಅವರ ಶಿಷ್ಯ ವೃಂದದಿಂದಲೂ ನಮಗೆ ತಿಳಿದು ಬರುತ್ತದೆ.

ಕಾಳಿದಾಸನ "ಕುಮಾರ ಸಂಭವ"ದಲ್ಲಿ ಒಂದು ಪ್ರಸಂಗ ಬರುತ್ತದೆ. ದಕ್ಷಯಜ್ಞದಲ್ಲಿ ದಾಕ್ಷಾಯಿಣಿಯು ಅವಮಾನಿತಳಾಗಿ ಅಗ್ನಿ ಕುಂಡಕ್ಕೆ ತನ್ನ ದೇಹವನ್ನು ಅರ್ಪಿಸಿಬಿಟ್ಟಳು. ಸರ್ವಸಂಗವಿರಾಗಿಯಾದ ಪಶುಪತಿಯು ಭಾರ್ಯಾವಿಯೋಗಿಯಾಗಿದ್ದಾನೆ! ಅನಂತರ ತಪಸ್ಸಿಗೆ ಕುಳಿತುಬಿಟ್ಟ. ಭಕ್ತರೆಲ್ಲರ ತಪಸ್ಸಿಗೆ ಫಲವನ್ನು ನೀಡುವ ಹರನು "ಯಾವುದೋ ಬಯಕೆಯಿಂದ ತಪಸ್ಸಿಗೆ ಕುಳಿತಿದ್ದಾನೆ" ಎನ್ನುತ್ತಾನೆ ಕವಿ. ಅಂಥ ತಪಸ್ವಿಯ ಬಳಿಗೆ

ಗಿರಿರಾಜನು ತನ್ನ ಮಗಳು ಉಮೆಯು ಜೊತೆ ಬಂದನು. ಬಂದವನೇ ಆ ತಪಸ್ವಿಯನ್ನು ಅರ್ಘ್ಯದಿಂದ ಅರ್ಚಿಸಿದ. ಅನಂತರ ಸಖಿಯರೊಡಗೂಡಿದ ತನ್ನ ಮಗಳನ್ನು ಶಿವನ ಪರಿಚರ್ಯೆಗೆ ನೇಮಿಸಿದ.

ತಪಸ್ಸಿಗೆ ಕುಳಿತ ಶಿವನು ಕನ್ಯೆಯೊಬ್ಬಳು ತನಗೆ ಸೇವೆ ಸಲ್ಲಿಸಲು ನಿಂತರೆ ಅದನ್ನು ಒಪ್ಪಿದ್ದು ಹೇಗೆ? ಕಾಳಿದಾಸ ಶ್ಲೋಕಾರ್ಧದಲ್ಲಿ ಅದಕ್ಕೆ ಸಮಾಧಾನ ಹೇಳುತ್ತಾನೆ :

ವಿಕಾರ ಹೇತೌ ಸತಿ ವಿಕ್ರಿಯಂತೇ
ಯೇಷಾಂ ನ ಚೇತಾಂಸಿ ತ ಏವ ಧೀರಾಃ ॥

"ಚಿತ್ತವನ್ನು ಕಲಕುವ ಕಾರಣಗಳು ಎಷ್ಟಿದ್ದರೇನು ? ಯಾವನಿಗೆ ಅವುಗಳಿಂದ ಮನೋವಿಕಾರವು ಉಂಟಾಗುವುದಿಲ್ಲವೋ ಅವನೀಗ ಧೀರ !"

ತಪಸ್ಸಿನಲ್ಲಿ ತೊಡಗಿರಲಿ, ತಪಸ್ಸಿನ ಫಲವಾದ ಆನಂದದ ಅನುಭವದ ಸ್ಥಿತಿಯಲ್ಲಿರಲಿ, ಕಠೋರ ತಪಸ್ವಿಯಾದ ಹರನಂತಹ ಧೀರರು ತಾವು ಎಂಬುದನ್ನು ತೋರಿಸಿ ಕೊಟ್ಟರು ಶ್ರೀರಾಮಕೃಷ್ಣರು !

ಇಂತಹ ಅಪೂರ್ವ ವೈರಾಗ್ಯ ಪುರುಷ ಪರರ ಕಷ್ಟವನ್ನು ಕಂಡು "ಇದು ಅವರ ಕರ್ಮ, ಅನುಭವಿಸಲಿ" ಎಂಬ ಶಿಲಾನಿಷ್ಠುರತೆಯನ್ನು ತಾಳಲಿಲ್ಲ. ಇತರರ ದುಃಖವನ್ನು ಕಂಡು ತಾವೂ ದುಃಖಿಸಿದರು, ಇತರರ ಕಣ್ಣೀರಿನ ಧಾರೆಯೊಡನೆ ತಮ್ಮ ಕಣ್ಣೀರಿನ ಧಾರೆಯನ್ನೂ ಸಂಗಮಗೊಳಿಸಿದರು. ಅದರ ಪರಿಹಾರಕ್ಕೆಂದು ಉಪಾಯಗಳನ್ನು ಕಂಡು ಹಿಡಿಯುವಂತೆ ತಮ್ಮ ಪ್ರಿಯ ಶಿಷ್ಯ ವಿವೇಕಾನಂದರಿಗೆ ಸೂಚನೆಯಿತ್ತರು. ಅದಕ್ಕಾಗಿ ತಮ್ಮ ತಪಸ್ಸನ್ನು ಧಾರೆಯೆರೆದುಕೊಟ್ಟರು. ದೇವರಿದ್ದರೆ, ಅವತಾರಗಳಿದ್ದರೆ, ಆ ನಿಷ್ಠುರ ಶಿಲಾಮೂರ್ತಿಗಳಿಗಿಂತ ಈ ನಗುವ, ಅಳುವ, ಜಗತ್ತಿನ ಹಿತಕ್ಕಾಗಿ ತನ್ನ ತಪಸ್ಸನ್ನು ಧಾರೆಯೆರೆದ ಮುಗ್ಧ ಅನಕ್ಷರಸ್ಥ ಮಹಾಪುರುಷನು ಸಹಸ್ರಾರು ಪಾಲು ಶ್ರೇಷ್ಠನಾದವನು ಎಂಬುದು ನನ್ನಂತಹವರ ಅಭಿಪ್ರಾಯ.

ತಮ್ಮ ಅವತಾರದ ಉದ್ದೇಶವು ಪೂರೈಸಿದ ಕೂಡಲೇ, ಇತರ ಅವತಾರಗಳಂತೆ ಈ ಮಹಾಪುರುಷ ಅಂತರ್ಧಾನನಾಗಲಿಲ್ಲ. ತಮ್ಮ ಆಪ್ತ ಶಿಷ್ಯರ ಮೂಲಕ ಅಧ್ಯಾತ್ಮ ಮತ್ತು ಸೇವೆಗಳೆರಡೂ ಒಂದೇ ನಾಣ್ಯದ ಎರಡು ಮುಖಗಳೆಂಬ ಸಂದೇಶವನ್ನು ಜಗತ್ತಿಗೆ ಸಾರಿದರು. ಆ ಉಪದೇಶ ಗಾಳಿಯಲ್ಲಿ ಕರಗಿ ಹೋಗದಂತೆ ಸದಾ ಕಾರ್ಯೋನ್ಮುಖವಾಗಿರುವಂತೆ ಮಾಡಲು ಅವರ ಶಿಷ್ಯರಾದ ಸ್ವಾಮಿ ವಿವೇಕಾನಂದರು, ಜಗತ್ತಿನಾದ್ಯಂತ ಬಹು ಶಾಖೆಗಳುಳ್ಳ ಶ್ರೀರಾಮಕೃಷ್ಣ ಮಹಾ ಸಂಘವನ್ನು ಸ್ಥಾಪಿಸಿದರು.

ಇಂತಹ ಸತ್ಯನಿಷ್ಠರೂ, ಪರರ ಕಷ್ಟವನ್ನು ಸಹಿಸಲಾರದೆ ಅವರ ಕಷ್ಟಗಳ ಪರಿಹಾರಕ್ಕಾಗಿ ಹಗಲಿರುಳೂ ಚಿಂತಿಸಿದವರೂ, ಈ ಜಗತ್ತಿನ ಸಹಸ್ರಾರು ವರ್ಷಗಳ ಇತಿಹಾಸದಲ್ಲಿ ಏಕೈಕರೂ ಎನ್ನುವಂತಹ ಮಹಾವ್ಯಕ್ತಿಯ ಜೀವನದ ನೂರಾರು ಸ್ವಾರಸ್ಯಮಯವೂ, ಆಶ್ಚರ್ಯಕರವೂ ಆದ ಸಂಗತಿಗಳನ್ನು ಸ್ವಯಂ ಸತ್ಯನಿಷ್ಠರೂ, ಮಹಾ

ತಪಸ್ವಿಗಳೂ, ಅಸಾಧಾರಣ ಬುದ್ಧಿಶಾಲಿಗಳೂ ಆದ ಶ್ರೀ ಶಾರದಾನಂದರು ತಮ್ಮ ಈ ಗ್ರಂಥದಲ್ಲಿ ದಾಖಲುಗೊಳಿಸಿದ್ದಾರೆ. ಅನೇಕಾನೇಕ ಶಾಸ್ತ್ರಗಳ ಆಧಾರಗಳನ್ನು ನೀಡಿ ಪರಮಹಂಸರು ಹಾಗೆ ನುಡಿದದ್ದು ಏಕೆ, ನಡೆದದ್ದು ಏಕೆ ಎಂಬುದನ್ನು ನಮ್ಮ ಮತಿ ಒಪ್ಪಿಕೊಳ್ಳುವಂತೆ ಸಮರ್ಥಿಸಿದ್ದಾರೆ. ಸತ್ವಯುತವೂ ಅರ್ಥಪೂರ್ಣವೂ ಆದ ಜೀವನ ವನ್ನು ನಡೆಸಬೇಕೆನ್ನುವ ಪ್ರತಿಯೊಬ್ಬ ವ್ಯಕ್ತಿಯೂ "ಶ್ರೀರಾಮಕೃಷ್ಣ ವಚನ ವೇದ" ವನ್ನು ನಿತ್ಯವೂ, ಸ್ವಲ್ಪವಾದರೂ ಓದಬೇಕು. ಹಾಗೆಯೇ ಅಂತಹ ವೇದವಾಣಿಯನ್ನು ಯಾರು ನುಡಿದರೋ ಅವರ ಬದುಕಿನ ಅರ್ಥ, ಆಶಯಗಳನ್ನು ಚೆನ್ನಾಗಿ ಅರ್ಥಮಾಡಿ ಕೊಳ್ಳಲು "ಶ್ರೀರಾಮಕೃಷ್ಣ ಲೀಲಾಪ್ರಸಂಗ"ವನ್ನು ಅಧ್ಯಯನ ಮಾಡಬೇಕು. ಜಗತ್ತಿನ ಯಾವ ಮಹಾ ಸಂತನ ಬದುಕಿನ ವಿವರಗಳನ್ನೂ, ಅವರು ನೀಡಿದ ಉಪದೇಶಗಳು ಮೈ ತಾಳಿದ ಸನ್ನಿವೇಶಗಳನ್ನೂ ಶ್ರೀಶಾರದಾನಂದರಂತೆ ವಿಚಾರಪೂರ್ವಕವಾಗಿ ದಾಖಲು ಗೊಳಿಸಿರುವ ಸಂಗತಿ ಈ ಮುನ್ನುಡಿಕಾರನಿಗಂತೂ ಖಂಡಿತ ತಿಳಿಯದು. ಹಾಗೆ ಏಕಮೇವಾ ದ್ವಿತೀಯ ಎನ್ನುವ ಸ್ಥಾನವನ್ನು ಪಡೆದಿರುವ ಈ ಕೃತಿಯು ಶ್ರೀ ಸ್ವಾಮಿ ನಿತ್ಯಸ್ಥಾನಂದರ ಶ್ರದ್ಧಾಪೂರ್ಣ ಶ್ರಮದಿಂದ ಕನ್ನಡಿಗರಿಗೆ ಲಭ್ಯವಾಗುತ್ತಿದೆ. ಸುಮಾರು ನಲವತ್ತು ವರ್ಷಗಳ ಹಿಂದೆ ಪ್ರಥಮ ಬಾರಿಗೆ ಈ ಮಹದ್‌ಗ್ರಂಥವನ್ನು ಶ್ರೀ ಸ್ವಾಮಿ ಪ್ರಣವೇಶಾ ನಂದರು ಕನ್ನಡಕ್ಕೆ ತಂದಿದ್ದರು. ಅದನ್ನು ಪರಿಷ್ಕರಿಸ ಹೊರಟ ನಿತ್ಯಸ್ಥಾನಂದರು ಹೊಸದಾಗಿಯೇ ಹೃದಯಂಗಮವಾದ ರೀತಿಯಲ್ಲಿ ಅನುವಾದ ಮಾಡಿ ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಶ್ರೀರಾಮಕೃಷ್ಣ ಮಹಾ ಸಂಘವು ಪ್ರಕಟಿಸಿರುವ ನೂರಾರು ಗ್ರಂಥಗಳಂತೆಯೇ ಈ ಕೃತಿಯೂ ನಮ್ಮ ಕನ್ನಡ ಬಂಧುಗಳ ಚೇತನವನ್ನು ಉನ್ನತಿಯಿಂದ ಉನ್ನತಿಗೆ ಕೊಂಡೊಯ್ಯುತ್ತದೆ ಎಂಬ ನಂಬಿಕೆ ನನಗಿದೆ.

ಇಬ್ಬರು ಪಾಶ್ಚಾತ್ಯ ಮನೀಷಿಗಳು ಶ್ರೀರಾಮಕೃಷ್ಣರಿಗೆ ಸಲ್ಲಿಸಿದ ನುಡಿ ನಮನ ದೊಂದಿಗೆ ಈ ಮುನ್ನುಡಿಯನ್ನು ಸಮಾಪ್ತಿಗೊಳಿಸುತ್ತೇನೆ :

"ಶ್ರೀರಾಮಕೃಷ್ಣರು ಒಬ್ಬ ವಿಶ್ವಮಾನವರಾಗಿದ್ದರು, ಯಾವುದೇ ಒಂದು ಪ್ರತ್ಯೇಕ ವರ್ಗಕ್ಕೆ ಸೇರಿಸಲಾಗದ ಒಂದು ವೈಶಿಷ್ಟ್ಯವು ಶ್ರೀರಾಮಕೃಷ್ಣರಲ್ಲಿದೆ. ಅವರು ಧರ್ಮಗಳ ಆಂತರಿಕ ಏಕತೆಯ ಜೀವಂತ ಪ್ರತೀಕವಾಗಿದ್ದರು."

—ಫ್ರಿಚಾಫ್‌ಸ್ಯೂನ್ *(Fritjof Suin)*

"ತಾವು ಯಾವ ಸಂಸ್ಕೃತಿಯ ಭಾಗವಾಗಿ ಜನಿಸಿದರೊ ಅದರ ಪರಿಧಿಯನ್ನು ಮೀರಿ ಬಹಳ ಎತ್ತರಕ್ಕೆ ಏರಿದ ಅತ್ಯಂತ ಕೆಲವೇ ಮಂದಿ ಆಧ್ಯಾತ್ಮಿಕ ಮಹಾಪುರುಷರಲ್ಲಿ ಶ್ರೀರಾಮಕೃಷ್ಣರು ಒಬ್ಬರು ಎಂದು ನನಗನಿಸುತ್ತದೆ. ಕೆಳಮಟ್ಟದ ಗಿರಿಶಿಖರಗಳ ಕಣ್ಣಿಗೆಟುಕದ ದೃಶ್ಯಗಳನ್ನು ವೀಕ್ಷಿಸುತ್ತಿರುವ ಏಕೈಕ ಮಹೋನ್ನತ ಪರ್ವತಶಿಖರ ದಂತಿರುವರು ಅವರು." —ಆಲ್ಬಿನ್ ಆರ್. ಗಿಲ್ಬರ್ಟ್ *(Albin R. Gilbert)*

—ಪ್ರಭುಶಂಕರ

ಸ್ವಾಮಿ ಶಾರದಾನಂದ

ಗ್ರಂಥಕರ್ತರಾದ ಸ್ವಾಮಿ ಶಾರದಾನಂದರ ಸಂಕ್ಷಿಪ್ತ ಜೀವನ ಪರಿಚಯವನ್ನು ನೀಡುವುದು ಉಚಿತವೆಂದು ತೋರುತ್ತದೆ. ಅದು ಈ ಗ್ರಂಥದ ಮೌಲ್ಯವನ್ನು ಹೆಚ್ಚಿಸು ವುದರಲ್ಲಿ ಸಂದೇಹವಿಲ್ಲ.

ಸ್ವಾಮಿ ಶಾರದಾನಂದರ ಪೂರ್ವಾಶ್ರಮದ ಹೆಸರು ಶರತ್‌ಚಂದ್ರ ಚಕ್ರವರ್ತಿ. ಅವರು ಕಲಕತ್ತೆಯ ಶ್ರೀಮಂತ ಬ್ರಾಹ್ಮಣ ಕುಟುಂಬದಲ್ಲಿ ೧೮೬೫, ಡಿಸೆಂಬರ್‌ನಲ್ಲಿ ಜನಿಸಿದರು. ಮುಂದಿನ ಶ್ರೇಷ್ಠತೆಯ ಲಕ್ಷಣಗಳು ಆ ಬಾಲಕನಲ್ಲಿ ಕಾಣಿಸಿಕೊಂಡವು. ಸೌಮ್ಯ ಮತ್ತು ಶಾಂತ ಸ್ವಭಾವದ ಅವನು ತೀಕ್ಷ್ಣ ಬುದ್ಧಿಶಕ್ತಿ ಮತ್ತು ಸಹಾನುಭೂತಿ ಪೂರ್ಣ ಹೃದಯವುಳ್ಳವನಾಗಿದ್ದನು. ಒರಟುತನದಿಂದಾಗಲಿ ಕಟೂಕ್ತಿಯಿಂದಾಗಲಿ ಇತರರ ಮನಸ್ಸನ್ನು ನೋಯಿಸುವವನಾಗಿರಲಿಲ್ಲ. ಆದರೂ ಅವನು ಚರ್ಚಾಸ್ಪರ್ಧೆ ಯಲ್ಲಿ ಯಶಸ್ವಿಯಾಗಿ ಭಾಗವಹಿಸುತ್ತಿದ್ದನು. ಅಸ್ವಸ್ಥರನ್ನು ಪ್ರೀತಿಯಿಂದ ಶುಶ್ರೂಷೆ ಮಾಡಲು ಅವನು ಯಾವಾಗಲೂ ಮುಂದೆ ಬರುತ್ತಿದ್ದನು. ಈ ವಿಷಯದಲ್ಲಿ ಅವನಿಗೆ ತಮ್ಮವರು, ಪರರು, ಮೇಲು, ಕೀಳು ಎಂಬ ಭೇದಭಾವವೇ ಇರಲಿಲ್ಲ ಮತ್ತು ಎಂಥ ಸಾಂಕ್ರಾಮಿಕ ರೋಗವಾದರೂ ಹಿಂಜರಿಯುತ್ತಿರಲಿಲ್ಲ. ಈ ಎಲ್ಲ ಸದ್ಗುಣಗಳೊಂದಿಗೆ ಧಾರ್ಮಿಕ ಪ್ರವೃತ್ತಿಯೂ ಸೇರಿಕೊಂಡು ಅವನ ವ್ಯಕ್ತಿತ್ವಕ್ಕೆ ಒಂದು ಹೊಸ ಮೆರಗನ್ನು ನೀಡಿತ್ತು.

ಸಾಂಪ್ರದಾಯಿಕ ಹಿಂದೂ ಧರ್ಮದಲ್ಲಿದ್ದ ಅವನ ನಿಷ್ಠೆಯು ಮುಂದೆ ಬ್ರಹ್ಮ ಸಮಾಜದ ಸಂಪರ್ಕದಿಂದಾಗಿ ವೈಚಾರಿಕ ತಳಹದಿಯನ್ನು ಪಡೆಯಿತು. ಅವನು ಸಂತ ಕ್ಸೇವಿಯರ್ ಕಾಲೇಜಿನಲ್ಲಿ ಓದುತ್ತಿದ್ದಾಗ ಬೈಬಲ್ ಗ್ರಂಥವನ್ನು ಅಧ್ಯಯನ ಮಾಡಿದನು. ಆಗ ಯೇಸುಕ್ರಿಸ್ತನ ಜೀವನ ಮತ್ತು ಬೋಧನೆ ಅವನ ಆಧ್ಯಾತ್ಮಿಕ ಜೀವನಕ್ಕೆ ಹೊಸ ಸ್ಫೂರ್ತಿಯನ್ನು ನೀಡಿತು. ಮುಂದೆ ಶ್ರೀ ರಾಮಕೃಷ್ಣರ ಸಂಪರ್ಕದಿಂದ ಅವನ ಆಧ್ಯಾತ್ಮಿಕ ಜೀವನವು ತನ್ನ ಪರಿಪೂರ್ಣತೆಯನ್ನು ಮುಟ್ಟಿತು.

ಶರತ್‌ಚಂದ್ರನು ೧೮೮೩, ಅಕ್ಟೋಬರ್‌ನಲ್ಲಿ ಮೊದಲ ಬಾರಿಗೆ ಶ್ರೀರಾಮಕೃಷ್ಣ ರನ್ನು ಸಂಧಿಸಿದನು. ಆಗ ಅವನು ಯೌವನದಲ್ಲಿ ಕಾಲಿಡುತ್ತಿದ್ದನಷ್ಟೆ. ಶ್ರೀರಾಮಕೃಷ್ಣರು ಈ ಯುವಕನನ್ನು ನೋಡಿದ ಕೂಡಲೇ ಆನಂದದಿಂದ ಅವನನ್ನು ಬರಮಾಡಿಕೊಂಡು ತಮ್ಮ ಪ್ರೇಮ ಪೂರ್ಣ ಮಾತಿನ ಮೂಲಕ ತಮ್ಮವನನ್ನಾಗಿ ಮಾಡಿಕೊಂಡರು. ಶ್ರೀ ರಾಮಕೃಷ್ಣರ ಸರಳ ಮಧುರ ಅನುಭವಾತ್ಮಕ ಮಾತುಗಳನ್ನು ಕೇಳಿ ಇಂದ್ರಿಯ ಸುಖದ ತ್ಯಾಗದಿಂದಲ್ಲದೆ ಭಗವತ್ಸಾಕ್ಷಾತ್ಕಾರ ದೊರೆಯದೆಂಬ ವಿಶ್ವಾಸ ಶರತ್‌ಚಂದ್ರನ ಮನಸ್ಸಿನಲ್ಲಿ ದೃಢವಾಯಿತು.

ಈ ಪ್ರಥಮ ಭೇಟಿಯ ನಂತರ ಶರತ್‌ಚಂದ್ರನು ಮತ್ತೆ ಮತ್ತೆ ದಕ್ಷಿಣೇಶ್ವರಕ್ಕೆ ಹೋಗಿ ಶ್ರೀರಾಮಕೃಷ್ಣರನ್ನು ಸಂಧಿಸುತ್ತ ಅವರ ದಕ್ಷ ಮಾರ್ಗದರ್ಶನದಲ್ಲಿ ಹಂತ ಹಂತವಾಗಿ ಆಧ್ಯಾತ್ಮಿಕ ಮಾರ್ಗದಲ್ಲಿ ಮುಂದುವರಿಯತೊಡಗಿದನು. ಅವನಿಗೆ ಮೃದು ಭಾವುಕತೆಯಲ್ಲಾಗಲಿ, ದಿವ್ಯ ದರ್ಶನಗಳಲ್ಲಾಗಲಿ ಆಸಕ್ತಿಯಿರಲಿಲ್ಲ. ಭಗವಂತನನ್ನು ಯಾವುದೇ ಒಂದು ಪ್ರತ್ಯೇಕ ರೂಪದ ಮೂಲಕ ಪೂಜಿಸುವುದು ಅವನಿಗೆ ಇಷ್ಟವಿರಲಿಲ್ಲ. ದೇವರು ಸರ್ವಭೂತಗಳಲ್ಲೂ ಆವಿರ್ಭವಿಸುವುದನ್ನು ನೋಡಬೇಕೆಂಬ ಬಯಕೆ ಅವನದು. ಶ್ರೀರಾಮಕೃಷ್ಣರು ಇದು ಆಧ್ಯಾತ್ಮಿಕ ಸಾಧನೆಯ ಆತ್ಯಂತಿಕ ಸ್ಥಿತಿಯೆಂದು ಹೇಳಿದಾಗಲೂ ಇದಕ್ಕಿಂತ ಕೆಳಗಿನದು ಯಾವುದೂ ತನಗೆ ತೃಪ್ತಿಯನ್ನು ನೀಡದು ಎಂದು ಹೇಳಿದನು. ಎಷ್ಟೇ ಕಷ್ಟಸಾಧ್ಯವಾದರೂ ಆ ಸ್ಥಿತಿಯನ್ನೇ ಮುಟ್ಟಬೇಕೆಂಬುದು ಅವನ ದೃಢಸಂಕಲ್ಪವಾಗಿತ್ತು. ಆತನ ಮನಃಸ್ಥೈರ್ಯವನ್ನು ಕಂಡು ಶ್ರೀರಾಮಕೃಷ್ಣರು ತುಂಬ ಸಂತೋಷಗೊಂಡರು.

ಕ್ರಮೇಣ ಶ್ರೀರಾಮಕೃಷ್ಣರ ಅದ್ಭುತ ಆಧ್ಯಾತ್ಮಿಕ ಶಕ್ತಿಯ ಅರಿವಾಗಿ ಅವರು ಕೇವಲ ಸಂತ ಶ್ರೇಷ್ಠರಲ್ಲ, ಅವತಾರ ಪುರುಷರ ಗುಂಪಿಗೆ ಸೇರಿದ ದೇವಮಾನವರೆಂದು ಶರತ್‌ಚಂದ್ರನಿಗೆ ತಿಳಿದುಬಂತು. ಅವರ ಮೇಲಿದ್ದ ಅವನ ಪ್ರೀತಿ ಮತ್ತು ಗೌರವ ಈಗ ದಿವ್ಯತೆಯ ಆರಾಧನೆಯಾಗಿ ಮಾರ್ಪಟ್ಟಿತು.

೧೮೮೫ರ ಮಧ್ಯಭಾಗದಲ್ಲಿ ಶ್ರೀರಾಮಕೃಷ್ಣರನ್ನು ಗಂಟಲು ಬೇನೆಯ ಚಿಕಿತ್ಸೆಗಾಗಿ ಕಲಕತ್ತೆಗೆ ಕರೆತರಲಾಯಿತು. ಅವರ ಖಾಯಿಲೆಯ ಸುದ್ದಿಯನ್ನು ಕೇಳಿ ಶರತ್‌ಚಂದ್ರನಿಗೆ ಅಸಾಧ್ಯ ದುಃಖವಾಯಿತು. ಇದರಿಂದ ಪ್ರಾಪಂಚಿಕ ಜೀವನದ ಆಸೆ ಅವನಿಂದ ಸಂಪೂರ್ಣ ದೂರವಾಗಿ, ತನ್ನ ವೈದ್ಯಕೀಯ ಅಧ್ಯಯನವನ್ನೂ ಬದಿಗಿರಿಸಿ, ತನ್ನ ಪ್ರೀತಿಯ ಗುರು ವನ್ನು ಶ್ರದ್ಧೆಯಿಂದ ಸೇವಿಸಲು ಅವರೆಡೆಗೆ ಧಾವಿಸಿದನು. ಮುಂದೆ ಶ್ರೀರಾಮಕೃಷ್ಣರು ಕಲಕತ್ತೆಯ ಹೊರ ವಲಯದಲ್ಲಿರುವ ಕಾಶೀಪುರದ ತೋಟದ ಮನೆಗೆ ಹೋದ ಮೇಲೆ ಶರತ್‌ಚಂದ್ರನು ಅದಮ್ಯ ಉತ್ಸಾಹದಿಂದ ಗುರುಸೇವೆಯನ್ನು ಮಾಡುತ್ತ ಅಲ್ಲಿಯೇ ವಾಸಿಸತೊಡಗಿದನು.

ಶ್ರೀರಾಮಕೃಷ್ಣರು ಸುಮಾರು ಒಂದು ವರ್ಷದ ವರೆಗೆ ಖಾಯಿಲೆಯಿಂದ ನರಳ ಬೇಕಾಯಿತು. ಈ ಸಂದರ್ಭದಲ್ಲಿ ಅವರ ಸೇವೆಗಾಗಿ ಕಲೆತ ಯುವಕ ಶಿಷ್ಯರು ನರೇಂದ್ರ ನಾಥನ ನೇತೃತ್ವದಲ್ಲಿ ಮುಂದೆ ಒಂದು ಸಂನ್ಯಾಸೀ ಕೂಟವಾಗಿ ಮಾರ್ಪಟ್ಟು ಶ್ರೀ ರಾಮಕೃಷ್ಣರು ಗಳಿಸಿದ್ದ ಆಧ್ಯಾತ್ಮಿಕ ಸಂಪತ್ತಿಕೆ ಉತ್ತರಾಧಿಕಾರಿಗಳಾದರು. ಒಂದು ದಿನ ಕಾಶೀಪುರದ ತೋಟದ ಮನೆಯಲ್ಲಿ ಈ ಯುವಕ ಶಿಷ್ಯರಿಗೆ ಶ್ರೀರಾಮಕೃಷ್ಣರೇ ಕಾವೀ ಬಟ್ಟೆಯನ್ನು ನೀಡುವುದರ ಮೂಲಕ ಶ್ರೀರಾಮಕೃಷ್ಣ ಮಹಾ ಸಂಘಕ್ಕೆ ತಳಹದಿ ಯನ್ನು ಹಾಕಿದರು. ಈ ರೀತಿ ಸಾಂಕೇತಿಕವಾಗಿ ಸಂನ್ಯಾಸ ಸ್ವೀಕರಿಸಿದವರಲ್ಲಿ ಶರತ್ ಚಂದ್ರನೂ ಒಬ್ಬನಾಗಿದ್ದನು. ಈ ಘಟನೆಯೊಂದಿಗೆ ಈ ಯುವಕರ ಆಧ್ಯಾತ್ಮಿಕ ಹಂಬಲ

ಮತ್ತೂ ತೀವ್ರವಾದ ಗುರುಸೇವೆ ಮತ್ತು ಆಧ್ಯಾತ್ಮಿಕ ಸಾಧನೆಯಲ್ಲಿ ಪ್ರಪಂಚ ಮತ್ತು ಅದರ ಆಗುಹೋಗುಗಳನ್ನು ಸಂಪೂರ್ಣ ಮರೆತರು.

೧೮೮೬ರ ಆಗಸ್ಟ್‌ನಲ್ಲಿ ಶ್ರೀರಾಮಕೃಷ್ಣರು ಮಹಾಸಮಾಧಿಯನ್ನು ಪಡೆದರೂ ಈ ಯುವಕ ಶಿಷ್ಯರ ಆಧ್ಯಾತ್ಮಿಕ ವ್ಯಾಕುಲತೆಯ ತೀವ್ರತೆ ಸ್ವಲ್ಪವೂ ಕುಗ್ಗದೆ ಅವರು ತಮ್ಮ ತಮ್ಮ ಮನೆಗಳಿಗೆ ಹಿಂದಿರುಗಲು ನಿರಾಕರಿಸಿದರು. ಕಾಶೀಪುರದ ಹತ್ತಿರ ಬಾರಾನಗರದ ಬಾಡಿಗೆ ಮನೆಯೊಂದರಲ್ಲಿ ಒಂದು ಸಂನ್ಯಾಸೀ ಮಠವು ಪ್ರಾರಂಭವಾಯಿತು. ಶರತ್‌ಚಂದ್ರನು ಸ್ವಲ್ಪ ಸಮಯದ ಮಟ್ಟಿಗೆ ಮನೆಗೆ ಹೋಗಬೇಕಾಗಿ ಬಂದರೂ ಆಗಾಗ ಮಠಕ್ಕೆ ಬಂದು ತನ್ನ ಸ್ನೇಹಿತರೊಡನೆ ಆಧ್ಯಾತ್ಮಿಕ ಸಾಧನೆ, ಶ್ರೀ ರಾಮಕೃಷ್ಣರ ಜೀವನ ಸಂದೇಶಗಳನ್ನು ಕುರಿತ ಸಂಭಾಷಣೆ ಇತ್ಯಾದಿಗಳಲ್ಲಿ ಗಂಟೆಗಟ್ಟಲೆ ಕಾಲ ಕಳೆಯುತ್ತಿದ್ದನು. ಮಗನು ಸಂನ್ಯಾಸಿಯಾಗುತ್ತಾನೆಂಬ ಭಯದಿಂದ ಅವನ ತಂದೆ ಒಂದು ದಿನ ಅವನನ್ನು ಮನೆಯ ಒಂದು ಕೋಣೆಯಲ್ಲಿ ಕೂಡಿ ಹಾಕಿದನು. ಶರತ್‌ಚಂದ್ರನು ಸ್ವಲ್ಪವೂ ವಿಚಲಿತನಾಗದೆ ಏಕಾಂತದಲ್ಲಿ ಸಾಧನೆಯನ್ನು ಮಾಡಲು ಈ ಅವಕಾಶವನ್ನು ಉಪಯೋಗಿಸಿಕೊಂಡನು. ಆದರೆ ಒಂದು ದಿನ ಅವನ ತಮ್ಮ ಸಹಾನುಭೂತಿಯಿಂದ ಕೋಣೆಯ ಬೀಗವನ್ನು ತೆಗೆದಾಗ ಶರತ್‌ಚಂದ್ರನು ತಪ್ಪಿಸಿಕೊಂಡು ನೇರವಾಗಿ ಮಠಕ್ಕೆ ಹೋದನು.

ಬಾರಾನಗರ ಮಠದಲ್ಲಿ ಈ ಯುವಕ ಸಂನ್ಯಾಸಿಗಳ ತೀವ್ರ ತಪಸ್ಸು ಮುಂದುವರಿಯಿತು. ಅವರಿಗೆ ಊಟ ಬಟ್ಟೆಗೆ ಸಾಕಷ್ಟು ಇರಲಿಲ್ಲ. ಅವರು ವಾಸವಾಗಿದ್ದುದು ಯಾವ ಸೌಕರ್ಯವೂ ಇಲ್ಲದ ಒಂದು ಪಾಳು ಬಿದ್ದ ಮನೆ. ಆದರೆ ಇವಾವುವೂ ಅವರ ಆಧ್ಯಾತ್ಮಿಕ ಹಂಬಲದ ತೀವ್ರತೆಯನ್ನು ಕುಂಠಿತಗೊಳಿಸಲಿಲ್ಲ. ಬಾರಾನಗರ ಮಠದಲ್ಲಿ ಒಂದು ದಿನ ವಿರಜಾ ಹೋಮವನ್ನು ಆಚರಿಸುವುದರ ಮೂಲಕ ವಿಧಿಪೂರ್ವಕವಾಗಿ ಸಂನ್ಯಾಸವನ್ನು ಸ್ವೀಕರಿಸಿ ಪ್ರತಿಯೊಬ್ಬರೂ ಹೊಸ ಹೆಸರನ್ನು ಪಡೆದರು. ಶರತ್‌ಚಂದ್ರನು ಅಂದಿನಿಂದ ಸ್ವಾಮಿ ಶಾರದಾನಂದರಾದರು.

ಸ್ವಲ್ಪ ಕಾಲದಲ್ಲಿಯೇ ಈ ಯುವಕ ಸಂನ್ಯಾಸಿಗಳಿಗೆ ಈ ಮಠದ ಪರಿಸರವೂ ಒಂದು ಬಂಧನವಾಗಿ ಮುಕ್ತ ಮನಸ್ಸಿನಿಂದ, ಭಗವಂತನಲ್ಲಿ ಪೂರ್ಣ ನಿರ್ಭರತೆಯಿಂದ ಪರಿವ್ರಾಜಕರಾಗಿ ತೀರ್ಥ ಪರ್ಯಟನೆ ಮಾಡುತ್ತ ಆಧ್ಯಾತ್ಮಿಕ ಸಾಧನೆಯ ಹೊಸ ಜೀವನವನ್ನು ನಡೆಸುವ ತೀವ್ರಾಕಾಂಕ್ಷೆ ಅವರಿಗುಂಟಾಯಿತು. ಈ ಒಂದು ಮುಕ್ತ ಜೀವನದ ಆಕರ್ಷಣೆಗೆ ಸ್ವಾಮಿ ಶಾರದಾನಂದರೂ ಒಳಗಾದರು.ಅವರು ಉತ್ತರ ಭಾರತ ಮತ್ತು ಹಿಮಾಲಯದ ಅನೇಕ ತೀರ್ಥ ಸ್ಥಳಗಳನ್ನು ಸಂದರ್ಶಿಸಿ, ಹಲವೆಡೆಗಳಲ್ಲಿ ತೀವ್ರ ತಪಸ್ಸಿನಲ್ಲಿ ಕಾಲ ಕಳೆದು ೧೮೯೧ರ ಸೆಪ್ಟಂಬರ್‌ನಲ್ಲಿ ಬಾರಾನಗರ ಮಠಕ್ಕೆ ಹಿಂದಿರುಗಿದರು. ಅವರ ಬಾಹ್ಯ ತೀರ್ಥಯಾತ್ರೆಯ ವಿವರವನ್ನು ನಾವು ತಿಳಿಯಬಹುದಾದರೂ ಅವರ ಆಂತರಿಕ ಆಧ್ಯಾತ್ಮಿಕ ಯಾತ್ರೆಯ ಪರಿಚಯವನ್ನು ಪಡೆಯುವುದು ಕಷ್ಟಸಾಧ್ಯ. ಸ್ವಾಮಿ ಶಾರದಾನಂದರು ತಮ್ಮ ವೈಯಕ್ತಿಕ ಸಾಧನೆ ಮತ್ತು ಅನುಭವಗಳನ್ನು ಕುರಿತು ಮಾತನಾಡುವ ಸ್ವಭಾವದವರೇ ಅಲ್ಲ.

೧೮೯೨ರಲ್ಲಿ ಬಾರಾನಗರ ಮಠವು ಆಲಂಬಜಾರಿಗೆ ವರ್ಗಾಯಿಸಲ್ಪಟ್ಟಿತು. ಬಹಳ ಕಾಲದವರೆಗೆ ಈ ಸಂನ್ಯಾಸಿ ಸಹೋದರರಿಗೆ ತಮ್ಮ ಪ್ರಿಯ ನಾಯಕನಾದ ಸ್ವಾಮಿ ವಿವೇಕಾನಂದರ ಸುಳಿವೇ ಸಿಕ್ಕಿರಲಿಲ್ಲ. ಅವರು ಚಿಕಾಗೊ ವಿಶ್ವಧರ್ಮ ಸಮ್ಮೇಳನದ ಮೂಲಕ ವಿಶ್ವವಿಖ್ಯಾತರಾದ ರೋಮಾಂಚಕ ಸುದ್ದಿಯನ್ನು ಕೇಳಿ ಸಂನ್ಯಾಸೀ ಸಹೋದರರಿಗೆಲ್ಲ ಪರಮಾನಂದವಾಯಿತು. ಆದರೆ ಈ ಆನಂದದಲ್ಲಿ ಮೈಮರೆಯುವುದಕ್ಕೆ ಸಮಯವಿರಲಿಲ್ಲ. ಈ ಹರ್ಷ ಸುದ್ದಿಯ ಜೊತೆ ಜೊತೆಗೇ ವಿವೇಕಾನಂದರ ಅಗ್ನಿಮಯ ಪತ್ರಗಳು ಬರತೊಡಗಿದವು. ಸಾಂಪ್ರದಾಯಿಕ ಸಂನ್ಯಾಸದ ಚೌಕಟ್ಟಿನಿಂದ ಹೊರಬಂದು ವೈಯಕ್ತಿಕ ಆಧ್ಯಾತ್ಮಿಕ ಉನ್ನತಿ ಮತ್ತು ಶಿವಭಾವದಲ್ಲಿ ಜೀವ ಸೇವೆಯ ಆದರ್ಶವನ್ನು ಇಟ್ಟುಕೊಂಡು ಒಂದು ಹೊಸ ಸಂನ್ಯಾಸೀ ಸಂಪ್ರದಾಯವನ್ನು ಪ್ರಾರಂಭಿಸಲು ಕಾರ್ಯೋನ್ಮುಖರಾಗುವಂತೆ ಈ ಪತ್ರಗಳ ಮೂಲಕ ತಮ್ಮ ಸೋದರ ಸಂನ್ಯಾಸಿಗಳನ್ನು ಹುರಿದುಂಬಿಸತೊಡಗಿದರು. ತಮ್ಮ ನಾಯಕನ ಅಪ್ಪಣೆಯ ಮೇರೆಗೆ ಅವರಿಗೆ ಪಶ್ಚಿಮದಲ್ಲಿ ವೇದಾಂತ ಪ್ರಚಾರದಲ್ಲಿ ಸಹಾಯ ಮಾಡಲು ಸ್ವಾಮಿ ಶಾರದಾನಂದರು ೧೮೯೬ರ ಏಪ್ರಿಲ್‌ನಲ್ಲಿ ಲಂಡನ್ನಿಗೆ ಹೋದರು. ಆಗ ಸ್ವಾಮಿ ವಿವೇಕಾನಂದರು ಅಲ್ಲಿಗೆ ಎರಡನೆಯ ಬಾರಿ ಭೇಟಿಯಿತ್ತಿದ್ದರು.

ಲಂಡನ್ನಿನಲ್ಲಿ ಕೆಲವು ಉಪನ್ಯಾಸಗಳನ್ನು ನೀಡಿದ ನಂತರ ಅಮೆರಿಕ ಸಂಯುಕ್ತ ಸಂಸ್ಥಾನಗಳಿಗೆ ಹೋಗಿ ನ್ಯೂಯಾರ್ಕ್‌ನಲ್ಲಿ ಸ್ವಾಮಿ ವಿವೇಕಾನಂದರು ಮೊದಲೇ ಸ್ಥಾಪಿಸಿದ ವೇದಾಂತ ಸಂಘದಲ್ಲಿ ಅವರು ತಮ್ಮ ಕಾರ್ಯವನ್ನು ಪ್ರಾರಂಭಿಸಿದರು. ಹಿಂದೂ ಆದರ್ಶಗಳು ಮತ್ತು ವೇದಾಂತವನ್ನು ಕುರಿತು ಆಸಕ್ತಿಪೂರ್ಣ ಉಪನ್ಯಾಸಗಳನ್ನು ನೀಡುವುದರ ಜೊತೆಗೆ ಯೋಗ ಪದ್ಧತಿಯನ್ನು ಕುರಿತು ಆತ್ಮೀಯವಾದ ಪ್ರವಚನಗಳನ್ನು ನೀಡಿದರು. ಅನುಭವದಿಂದ ಹೊರ ಮೂಡಿ ಬಂದ ಅವರ ನುಡಿಗಳು ಶ್ರೋತೃಗಳ ಮೇಲೆ ವಿಶೇಷ ಪರಿಣಾಮವನ್ನು ಉಂಟುಮಾಡಿದವು. ಇಷ್ಟೇ ಅಲ್ಲದೆ ಅವರ ಶಾಂತ ಸುಗಂಭೀರ ಸೌಜನ್ಯಪೂರ್ಣ ವ್ಯವಹಾರ, ಅವರ ಉದಾರ ದೃಷ್ಟಿಕೋನ ಮತ್ತು ವಿಶ್ವಪ್ರೇಮ ಇವು ಅನೇಕರನ್ನು ಆಕರ್ಷಿಸಿದವು. ಅವರ ಪರಿಶ್ರಮದಿಂದಾಗಿ ನ್ಯೂಯಾರ್ಕ್ ವೇದಾಂತ ಸಂಘವು ಭದ್ರವಾಗಿ ತಳವೂರುವಂತಾಯಿತು. ಆದರೆ ಅವರು ಬಹಳ ಕಾಲ ಅಲ್ಲಿರಲಾಗಲಿಲ್ಲ. ಇದಕ್ಕಿಂತಲೂ ಗುರುತರವಾದ ಜವಾಬ್ದಾರಿಯ ಕೆಲಸ ಅವರಿಗಾಗಿ ಕಾದಿತ್ತು. ನಾಯಕನ ಕರೆಗೆ ಓಗೊಟ್ಟು ೧೮೯೮ರ ಜನವರಿ ೧೨ರಂದು ಭಾರತಕ್ಕೆ ಮರಳಿ ಬಂದರು.

೧೮೯೭ರ ಜನವರಿಯಲ್ಲಿ ಸ್ವಾಮಿ ವಿವೇಕಾನಂದರು ಭಾರತಕ್ಕೆ ಬಂದು ತಮ್ಮ ವಿದ್ಯುನ್ಮಯ ಪ್ರಚಂಡ ವಾಕ್ಪ್ರವಾಹದ ಮೂಲಕ ದೇಶಾದ್ಯಂತ ನವಜಾಗ್ರತಿಯನ್ನುಂಟು ಮಾಡಿ ರಾಷ್ಟ್ರೀಯತೆಯ ಕಾಳ್ಗಿಚ್ಚನ್ನು ಹಬ್ಬಿಸಿದರು, ತಮ್ಮ ಉದ್ದೇಶದ ಸಫಲತೆಗಾಗಿ ರಾಮಕೃಷ್ಣ ಮಹಾಸಂಘವನ್ನು ಕಲಕತ್ತೆಯ ಹತ್ತಿರ ಬೇಲೂರಿನ ಗಂಗಾತೀರದಲ್ಲಿ

ಸ್ಥಾಪಿಸಿದರು. ಮುಂದೆ ಇದು ಬೇಲೂರು ಮಠವೆಂದು ಪ್ರಸಿದ್ಧವಾಯಿತು. ಈ ಮಹಾ ಸಂಘದ ಕಾರ್ಯಭಾರವನ್ನು ನಿರ್ವಹಿಸುವ ಬಹು ಮುಖ್ಯವಾದ ಕಾರ್ಯದರ್ಶಿಯ ಕೆಲಸ ಸ್ವಾಮಿ ಶಾರದಾನಂದರ ಪಾಲಿಗೆ ಬಂತು. ಸ್ವಾಮಿ ವಿವೇಕಾನಂದರ ಮೇಲಿನ ಶ್ರದ್ಧಾಭಕ್ತಿಯಿಂದ ದೈವಾಣತಿಯೆಂದು ಈ ಪವಿತ್ರ ಕಾರ್ಯವನ್ನು ಸ್ವೀಕರಿಸಿ ಸಂಘದ ಅಭಿವೃದ್ಧಿಗೆ ಅತ್ಯಂತ ದಕ್ಷತೆಯಿಂದ ಕಾರ್ಯ ನಿರ್ವಹಣೆ ಮಾಡಿದರು.

ಪಶ್ಚಿಮದಲ್ಲಿ ಕೆಲವು ಕಾಲವಿದ್ದ ಸ್ವಾಮಿ ಶಾರದಾನಂದರು ಅಲ್ಲಿ ಸಂಘಬದ್ಧ ಚಟುವಟಿಕೆಯ ಹೊಸ ಅನುಭವವನ್ನು ಪಡೆದಿದ್ದರು. ಅದರ ಆಧಾರದ ಮೇಲೆ ಮಠದ ಎಲ್ಲ ಆಗುಹೋಗುಗಳನ್ನೂ ಕ್ರಮಬದ್ಧಗೊಳಿಸಿದರು. ಸಂಘದಲ್ಲಿ ದೈನಂದಿನ ಆಧ್ಯಾತ್ಮಿಕ ಸಾಧನೆ, ಶಾಸ್ತ್ರಾಧ್ಯಯನ ಮತ್ತು ಇತರ ಚಟುವಟಿಕೆಗಳು ನಿರ್ದಿಷ್ಟ ದಿನಚರಿಗನುಗುಣ ವಾಗಿ ನಡೆಯುವಂತೆ ಮಾಡಿದರು. ಅಷ್ಟೇ ಅಲ್ಲದೆ ಪಾಶ್ಚಾತ್ಯರ ಮನೋಭಾವ ಮತ್ತು ಆವಶ್ಯಕತೆಗಳನ್ನು ಅರಿತಿದ್ದ ಅವರು ಪಶ್ಚಿಮದಲ್ಲಿ ಪ್ರಚಾರ ಕಾರ್ಯಕ್ಕಾಗಿ ಯೋಗ್ಯ ಯುವ ಸಂನ್ಯಾಸಿಗಳಿಗೆ ತರಬೇತಿ ನೀಡತೊಡಗಿದರು.

೧೯೦೨ರ ಜುಲೈ ತಿಂಗಳಲ್ಲಿ ಸ್ವಾಮಿ ವಿವೇಕಾನಂದರ ದೇಹ ತ್ಯಾಗದ ನಂತರ ರಾಮಕೃಷ್ಣ ಸಂಘವನ್ನು ನಡೆಸುವ ಬಹುಮುಖ್ಯ ಜವಾಬ್ದಾರಿ ಅದರ ಅಧ್ಯಕ್ಷರಾದ ಸ್ವಾಮಿ ಬ್ರಹ್ಮಾನಂದರು ಮತ್ತು ಕಾರ್ಯದರ್ಶಿಗಳಾದ ಸ್ವಾಮಿ ಶಾರದಾನಂದರು ಇವರ ಮೇಲೆ ಬಿತ್ತು. ತಮ್ಮ ಪ್ರೀತಿಯ ಆರಾಧ್ಯ ನಾಯಕನನ್ನು ಕಳೆದುಕೊಂಡು ತೀವ್ರ ಆಘಾತಕ್ಕೊಳಗಾಗಿದ್ದರೂ ಸ್ವಾಮಿ ಶಾರದಾನಂದರು ಸಂಘದ ಗುರುತರ ಜವಾಬ್ದಾರಿಯನ್ನು ಹೊತ್ತುಕೊಂಡು ಆಡಳಿತ ಕಾರ್ಯವನ್ನು ಯಶಸ್ವಿಯಾಗಿ ಮುಂದು ವರಿಸಿಕೊಂಡು ಹೋದರು.

ಸ್ವಲ್ಪ ಕಾಲದನಂತರ ಇನ್ನೊಂದು ದೊಡ್ಡ ಹೊಣೆಗಾರಿಕೆ ಅವರ ಹೆಗಲ ಮೇಲೆ ಬಂತು. ಸ್ವಾಮಿ ವಿವೇಕಾನಂದರು ಪ್ರಾರಂಭಿಸಿದ ಬಂಗಾಳಿ ಮಾಸಿಕ 'ಉದ್ಬೋಧನ' ವನ್ನು ನಡೆಸುತ್ತಿದ್ದ ಸ್ವಾಮಿ ತ್ರಿಗುಣಾತೀತಾನಂದರು ಪ್ರಚಾರ ಕಾರ್ಯಕ್ಕಾಗಿ ಪಶ್ಚಿಮಕ್ಕೆ ಹೋಗಬೇಕಾಯಿತು. ಆಗ ಈ ಪತ್ರಿಕೆಯನ್ನು ಸಂಪಾದಿಸಿ ಪ್ರಕಟಿಸುವ ಕಾರ್ಯವನ್ನು ಸ್ವಾಮಿ ಶಾರದಾನಂದರು ವಹಿಸಿಕೊಂಡರು. ಬಹಳ ಪರಿಶ್ರಮದಿಂದ ಅದನ್ನು ಜನಪ್ರಿಯ ಗೊಳಿಸಿ ಅದರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿದರು.

ಈ ' ಉದ್ಬೋಧನ ' ಪತ್ರಿಕೆಗೆ ತನ್ನದೇ ಆದ ಕಟ್ಟಡದ ಆವಶ್ಯಕತೆಯಿತ್ತು. ಇದಕ್ಕಿಂತ ಮುಖ್ಯವಾಗಿ ಶ್ರೀಮಾತೆ ಶಾರದಾದೇವಿಯವರು ಕಲಕತ್ತೆಗೆ ಬಂದಾಗ ಇಳಿದು ಕೊಳ್ಳಲು ಒಂದು ಸ್ಥಳ ಬೇಕಾಗಿತ್ತು. ಅವರು ಕಲಕತ್ತೆಗೆ ಬಂದಾಗಲೆಲ್ಲ ಬೇರೆ ಬೇರೆ ಭಕ್ತರ ಮನೆಯಲ್ಲಿ ಇಳಿದುಕೊಳ್ಳಬೇಕಾಗಿತ್ತು. ಈ ಸಮಸ್ಯೆಯ ಪರಿಹಾರಕ್ಕಾಗಿ ಕಲಕತ್ತೆಯಲ್ಲಿ ಒಂದು ಪ್ರತ್ಯೇಕ ಕಟ್ಟಡವನ್ನು ಕಟ್ಟಿಸುವ ಕಾರ್ಯವನ್ನು ಸ್ವಾಮಿ ಶಾರದಾ ನಂದರು ಕೈಗೊಂಡರು. ಕಟ್ಟಡ ನಿರ್ಮಾಣ ಕಾರ್ಯವನ್ನು ಬೇಗನೆ ಮುಗಿಸಲು ಶಾರದಾ ನಂದರು ತಮ್ಮ ಜವಾಬ್ದಾರಿಯ ಮೇಲೆ ಸಾಲವನ್ನು ಪಡೆಯಬೇಕಾಯಿತು. ಈ

ಕಟ್ಟಡದ ಮೇಲ್ಮಹಡಿಯನ್ನು ಶ್ರೀಮಾತೆಯವರಿಗಾಗಿ ಮೀಸಲಿರಿಸಲಾಯಿತು. ಶ್ರೀಮಾತೆಯವರು ಕಲಕತ್ತೆಗೆ ಬಂದಾಗಲೆಲ್ಲ ಈ ಮನೆಯಲ್ಲಿದ್ದು ತಂಡೋಪತಂಡವಾಗಿ ಬರುತ್ತಿದ್ದ ಭಕ್ತರನ್ನು ತಮ್ಮ ಮಾತೃವಾತ್ಸಲ್ಯದಿಂದ ಆಶೀರ್ವದಿಸಿ ಸಂತೋಷಪಡಿಸುತ್ತಿದ್ದರು. ಅವರು ೧೯೦೯ರ, ಮೇ ೨೩ ರಂದು ಈ ಮನೆಗೆ ಪ್ರಥಮ ಬಾರಿಗೆ ಕಾಲಿಟ್ಟು ಅದನ್ನು ಪಾವನಗೊಳಿಸಿದರು. ಈ ಮನೆಯ ಕೆಳಮಹಡಿ ' ಉದ್ಬೋಧನ ' ಪ್ರಕಟನಾಲಯ ವಾಯಿತು. ಇದು ಮುಂದೆ ಬಂಗಾಳೀ ಪುಸ್ತಕದ ಪ್ರಮುಖ ಪ್ರಕಟಣಾ ಕೇಂದ್ರವಾಗಿ ಮಾರ್ಪಟ್ಟಿತು.

ಸಾಲವನ್ನು ತೀರಿಸುವ ಸಲುವಾಗಿ ಸ್ವಾಮಿ ಶಾರದಾನಂದರು ಶ್ರೀರಾಮಕೃಷ್ಣರ ತಥ್ಯಪೂರ್ಣ ಜೀವನವನ್ನು ಬರೆದು ಪ್ರಕಟಿಸುವ ಆಲೋಚನೆಯನ್ನು ಮಾಡಿದರು. ಅವರು ಅತ್ಯಂತ ಪರಿಶ್ರಮದಿಂದ ಶ್ರೀರಾಮಕೃಷ್ಣರ ಜೀವನಕ್ಕೆ ಸಂಬಂಧಪಟ್ಟ ಎಲ್ಲ ಅಂಕಿ ಅಂಶಗಳನ್ನು ಸಂಗ್ರಹಿಸಿ, ಸೂಕ್ಷ್ಮ ವಿಶ್ಲೇಷಣೆಯ ಮೂಲಕ ಸತ್ಯಾಸತ್ಯಗಳನ್ನು ಬೇರ್ಪಡಿಸಿ ಸಪ್ರಮಾಣವಾದ ಶ್ರೀರಾಮಕೃಷ್ಣರ ಜೀವನ ಚರಿತ್ರೆಯನ್ನು ಬರೆಯಲು ಪ್ರಾರಂಭಿಸಿದರು. ಹಗಲು ರಾತ್ರಿ ಅನೇಕ ವರ್ಷಗಳ ಪರ್ಯಂತ ಅವರು ಒಂದು ಸಣ್ಣ ಕೊಠಡಿಯೊಳಗೆ ಬರೆಯುವ ಪೀಠದ ಮುಂದೆ ಕುಳಿತು ಈ ಮಹತ್ಕಾರ್ಯದಲ್ಲಿ ಸಂಪೂರ್ಣ ಮಗ್ನರಾಗಿರುತ್ತಿದ್ದರು. ಆಗಾಗ ಸಂದರ್ಶಕರು ಬಂದು ಹೋಗುತ್ತಿದ್ದರು ಮತ್ತು ದಿನದಿನವೂ ಬೆಳೆಯುತ್ತಿದ್ದ ರಾಮಕೃಷ್ಣ ಸಂಘದ ವ್ಯವಹಾರದ ಬಗ್ಗೆ ವಿಚಾರಿಸಲು ಯಾರಾದರೂ ಮಧ್ಯೆ ಮಧ್ಯೆ ಬರುತ್ತಿದ್ದರು. ಈ ಎಲ್ಲ ಅಡಚಣೆಗಳ ನಡುವೆ ಅವರ ಬರವಣಿಗೆಯ ಕಾರ್ಯ ಮುಂದುವರಿಯಿತು. ಇದು ಮೊದಲು ' ಉದ್ಬೋಧನ ' ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿ ಮುಂದೆ ' ಶ್ರೀ ಶ್ರೀ ರಾಮಕೃಷ್ಣ ಲೀಲಾಪ್ರಸಂಗ'ವೆಂಬ ಬೃಹತ್‌ಗ್ರಂಥವಾಗಿ ಐದು ಸಂಪುಟಗಳಲ್ಲಿ ಪ್ರಕಟ ವಾಯಿತು.

ಸಂಘಕ್ಕೆ ಸಂಬಂಧಿಸಿದ ಚಟುವಟಿಕೆಗಳು ಮತ್ತು ಶ್ರೀರಾಮಕೃಷ್ಣರ ಜೀವನ ಚರಿತ್ರೆಯನ್ನು ಬರೆದು ಪ್ರಕಟಿಸುವುದು—ಇವೆಲ್ಲಕ್ಕಿಂತ ಅವರಿಗೆ ಹೆಚ್ಚು ಪ್ರಧಾನ ವಾಗಿದ್ದುದು ಶ್ರೀಮಾತೆ ಶಾರದಾದೇವಿಯವರ ಯೋಗಕ್ಷೇಮವನ್ನು ನೋಡಿಕೊಳ್ಳು ವುದು. ಶ್ರೀಮಾತೆಯವರನ್ನು ಜಗನ್ಮಾತೆಯೆಂದೇ ಪರಿಗಣಿಸಿ ತಮ್ಮನ್ನು ಸಂಪೂರ್ಣವಾಗಿ ಅವರ ಸೇವೆಯಲ್ಲಿ ತೊಡಗಿಸಿಕೊಂಡರು. ಶ್ರೀಮಾತೆಯವರು ಜಯರಾಂಬಾಟಿ ಹಳ್ಳಿ ಯಲ್ಲಿರಲಿ ಅಥವಾ ಕಲಕತ್ತೆಯಲ್ಲಿರಲಿ ಶಾರದಾನಂದರು ಯಾವಾಗಲೂ ಅವರ ಆರೋಗ್ಯ ಸುಖ ಸೌಕರ್ಯಗಳ ಕಡೆ ಪೂರ್ಣ ಗಮನ ಹರಿಸುತ್ತಿದ್ದರು. ಶ್ರೀಮಾತೆಯವರು ಕಲಕತ್ತೆಯಲ್ಲಿ ' ಉದ್ಬೋಧನ ' ಮನೆಯಲ್ಲಿರುವಾಗ ಶಾರದಾನಂದರು ಕೆಳ ಮಹಡಿಯ ಒಂದು ಸಣ್ಣ ಕೊಠಡಿಯಲ್ಲಿ ಕುಳಿತು ಅವರನ್ನು ನೋಡಲು ಬರುತ್ತಿದ್ದ ಭಕ್ತರ ತಂಡ ವನ್ನು ನಿಯಂತ್ರಿಸುತ್ತಿದ್ದರು. ತಾವು ಶ್ರೀಮಾತೆಯವರ ' ದ್ವಾರಪಾಲಕ'ನೆಂದು ಹೇಳಿ ಕೊಳ್ಳುತ್ತಿದ್ದರು. ನಿಜವಾಗಿಯೂ ಅವರಿಗೆ ಶ್ರೀಮಾತೆಯವರ ಮೇಲಿದ್ದ ಭಕ್ತಿಯ ಆಳವನ್ನು ತಿಳಿಯುವುದು ಅಸಾಧ್ಯ. ೧೯೨೦ರಲ್ಲಿ ಶ್ರೀಮಾತೆಯವರ ದೇಹತ್ಯಾಗದ

ವರೆಗೂ ಅವರನ್ನು ಪರಮಾದರದಿಂದ ನೋಡಿಕೊಂಡು ಅವರಿಗೆ ಸಂಬಂಧಿಸಿದ ಸಾಮಾನ್ಯ ವಿಷಯಗಳನ್ನೂ ಕಡೆಗಣಿಸದೆ ಅವರ ಸೇವೆಯನ್ನು ಮಾಡಿದರು. ೧೯೨೩ರ, ಏಪ್ರಿಲ್‌ನಲ್ಲಿ ಶ್ರೀಮಾತೆಯವರ ನೆನಪಿಗಾಗಿ ಜಯರಾಂಬಾಟಿಯಲ್ಲಿ ಒಂದು ದೇವಸ್ಥಾನವನ್ನು ಕಟ್ಟಿಸಿದರು. ಇದರ ಉದ್ಘಾಟನೆಯ ಸಮಯದಲ್ಲಿ ಶ್ರೀಮಾತೆಯವರ ಮಾತೃಭಾವ ಅವರಲ್ಲಿ ಆವಿರ್ಭಾವಗೊಂಡದ್ದನ್ನು ಕಾಣಬಹುದಿತ್ತು. ಆ ಸಂದರ್ಭದಲ್ಲಿ ಅವರು ಬಂದವರಿಗೆಲ್ಲ ಯಾವ ಭೇದಭಾವವೂ ಇಲ್ಲದೆ ಆಧ್ಯಾತ್ಮಿಕ ದೀಕ್ಷೆಯನ್ನು ಅನುಗ್ರಹಿಸಿದರು.

ಅವರು ತಮ್ಮ ಜೀವನದಲ್ಲಿ ಸಾಧಿಸಿದ ಕೊನೆಯ ಮಹತ್‌ಕಾರ್ಯವೆಂದರೆ ೧೯೨೬ರಲ್ಲಿ ಸಂಘದ ಎಲ್ಲ ಕೇಂದ್ರ ಪ್ರತಿನಿಧಿಗಳ ಒಂದು ಬೃಹತ್ ಸಮ್ಮೇಳನವನ್ನು ಏರ್ಪಡಿಸಿದುದು. ಈ ಘಟನೆ ಸಂಘದ ಪ್ರಗತಿಯಲ್ಲಿ ಒಂದು ಮೈಲಿಗಲ್ಲಾಗಿದೆ. ಆ ಸಂದರ್ಭದಲ್ಲಿ ಅವರು ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡುತ್ತ ಸಂಘದ ಧ್ಯೇಯೋದ್ದೇಶಗಳನ್ನು ಹೇಳಿ, ಮುಂದೆ ಉಂಟಾಗಬಹುದಾದ ಲೋಪದೋಷಗಳ ಬಗ್ಗೆ ಎಚ್ಚರಿಕೆ ನೀಡಿ, ದೃಢ ಪ್ರತಿಜ್ಞೆಯಿಂದ ಆದರ್ಶವನ್ನು ಹಿಡಿದುಕೊಂಡು ಮುನ್ನಡೆಯಬೇಕೆಂದು ಎಲ್ಲರನ್ನೂ ಹುರಿದುಂಬಿಸಿದರು. ಇದೇ ಸಂದರ್ಭದಲ್ಲಿಯೇ ಸಂಘದ ಕಾರ್ಯದರ್ಶಿಗೆ ಎಲ್ಲ ಆಡಳಿತ ವಿಷಯದಲ್ಲಿಯೂ ಸಲಹೆಯನ್ನು ನೀಡಲು ಒಂದು ಕಾರ್ಯಕಾರಿ ಸಮಿತಿಯನ್ನು ನಿಯಮಿಸಿದರು.

ರಾಮಕೃಷ್ಣ ಸಂಘದ ಕಾರ್ಯವ್ಯಾಪ್ತಿಯು ಕಾಲಕಳೆದಂತೆ ವಿಸ್ತರಿಸತೊಡಗಿತು. ಅನೇಕ ಶಾಖೋಪಶಾಖೆಗಳು ದೇಶವಿದೇಶಗಳಲ್ಲಿ ಪ್ರಾರಂಭವಾದುವು. ಸ್ವಾಭಾವಿಕವಾಗಿಯೇ ಸಂಘದ ಕಾರ್ಯದರ್ಶಿಯಾಗಿ ಸ್ವಾಮಿ ಶಾರದಾನಂದರ ಕೆಲಸವು ಹೆಚ್ಚು ಗುರುತರವೂ ಶ್ರಮಸಾಧ್ಯವೂ ಆಯಿತು. ಆದರೆ ಇದಾವುದೂ ಅವರ ಉತ್ಸಾಹವನ್ನು ಕುಗ್ಗಿಸಲಿಲ್ಲ. ಅವರು ಯಾವಾಗಲೂ ಸಮಚಿತ್ತರಾಗಿ ಪರಿಸ್ಥಿತಿಯನ್ನು ಎದುರಿಸುತ್ತಿದ್ದರು. ಶಾಂತವಾಗಿ ಮೌನವಾಗಿ ಯಾವ ತೋರಿಕೆಯೂ ಇಲ್ಲದೆ ತಮ್ಮ ಕಾರ್ಯವನ್ನು ನಿರ್ವಹಿಸಿದರು. ಅವರ ಆಂತರಿಕ ಆಧ್ಯಾತ್ಮಿಕತೆಯ ಆಳವನ್ನು ಅವರ ಬಾಹ್ಯ ವ್ಯವಹಾರಗಳ ರೀತಿನೀತಿಗಳ ಮೂಲಕ ಅಳೆಯಬಹುದಿತ್ತು. ಎಂಥ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ಅವರು ತಮ್ಮ ಆಂತರಿಕ ಸ್ಥಿರತೆಯನ್ನು ಕಳೆದುಕೊಳ್ಳದೆ ಇರುತ್ತಿದ್ದರು ಎಂಬುದಕ್ಕೆ ಹಲವಾರು ಘಟನೆಗಳಿವೆ.

೧೮೯೮ರ ಕೊನೆಯ ಭಾಗದಲ್ಲಿ ಅವರು ಒಮ್ಮೆ ಸ್ವಾಮಿ ವಿವೇಕಾನಂದರನ್ನು ಸಂಧಿಸಲು ರಾವಲ್‌ಪಿಂಡಿಯಿಂದ ಶ್ರೀನಗರಕ್ಕೆ ಕುದುರೆ ಗಾಡಿಯಲ್ಲಿ ಹೋಗುತ್ತಿದ್ದರು. ಆಗ ಇದ್ದಕ್ಕಿದ್ದಂತೆಯೆ ಕುದುರೆಯು ಭಯಗೊಂಡು ಪರ್ವತದ ಇಳಿಜಾರು ಪ್ರದೇಶದಲ್ಲಿ ನಾಗಾಲೋಟದಿಂದ ಹುಚ್ಚುಹುಚ್ಚಾಗಿ ಓಡತೊಡಗಿತು. ಅದೃಷ್ಟವಶಾತ್ ಮಧ್ಯದಲ್ಲಿ ಒಂದು ದೊಡ್ಡ ಮರ ಸಿಕ್ಕಿ ಕುದುರೆಗಾಡಿಯು ಅಲ್ಲಿಯೆ ನಿಂತಿತು. ಸ್ವಾಮಿ ಶಾರದಾ

ನಂದರು ಶಾಂತವಾಗಿ ಗಾಡಿಯಿಂದ ಹೊರಬಂದರು. ಅಷ್ಟು ಹೊತ್ತಿಗೆ ಒಂದು ದೊಡ್ಡ ಕಲ್ಲುಬಂಡೆ ಕೆಳಗುರುಳಿ ಬಂದು ಕುದುರೆಯ ಮೇಲೆ ಬಿತ್ತು. ಅದು ಕೂಡಲೇ ಸತ್ತು ಹೋಯಿತು. ಶಾರದಾನಂದರು ಕೆಲವೇ ಇಂಚುಗಳಲ್ಲಿ ಮೃತ್ಯುವಿನಿಂದ ಪಾರಾದರು. ಆದರೆ ಈ ಎಲ್ಲ ರೋಮಾಂಚಕ ಘಟನೆಗಳನ್ನು, ಪ್ರಾಣಾಪಾಯದ ಪರಿಸ್ಥಿತಿಯಲ್ಲಿಯೂ, ಅವರು ಸ್ಥಿತಪ್ರಜ್ಞನಂತೆ ಸಾಕ್ಷಿಯಾಗಿ ನೋಡುತ್ತಿದ್ದರು. ಇವಾವುವೂ ಅವರ ಆಂತರಿಕ ಸ್ತಿಮಿತವನ್ನು ಕಲಕಲಿಲ್ಲ.

೧೮೯೬ರಲ್ಲಿ ಅವರು ಲಂಡನ್ನಿಗೆ ಹೋಗುತ್ತಿರುವಾಗ ಹಡಗು ಚಂಡಮಾರುತಕ್ಕೆ ಒಳಗಾಯಿತು. ಆ ಸಂದರ್ಭದಲ್ಲಿ ಪ್ರಯಾಣಿಕರು ಪ್ರಾಣಭೀತಿಯಿಂದ ಚೀತ್ಕಾರ ಮಾಡುತ್ತ ಅತ್ತಿಂದಿತ್ತ ಓಡಾಡುತ್ತಿರಲು ಸ್ವಾಮಿ ಶಾರದಾನಂದರು ಎಲ್ಲವನ್ನೂ ತಟಸ್ಥರಾಗಿ ನೋಡುತ್ತ ಕುಳಿತಿದ್ದರು. ಇನ್ನೊಂದು ಸಂದರ್ಭದಲ್ಲಿ ಗಂಗಾನದಿಯನ್ನು ದಾಟುತ್ತಿರುವಾಗ ಬಿರುಗಾಳಿಗೆ ಸಿಕ್ಕಿದ ದೋಣಿ ಮುಳುಗಿಹೋಗುವ ಪರಿಸ್ಥಿತಿಯಲ್ಲಿತ್ತು. ಶಾರದಾನಂದರು ಸ್ವಲ್ಪವೂ ಉದ್ವಿಗ್ನರಾಗದೆ ಏನೂ ಆಗಿಲ್ಲವೆಂಬಂತೆ ನಿರ್ವಿಕಾರಚಿತ್ತರಾಗಿ ಕುಳಿತಿದ್ದರು. ಅವರ ಉದಾಸೀನ ಭಾವವನ್ನು ಕಂಡು ದಿಗ್ಭ್ರಾಂತರಾದ ಸಹಪ್ರಯಾಣಿಕರು ಅವರನ್ನು ತೀಕ್ಷ್ಣ ದೃಷ್ಟಿಯಿಂದ ನೋಡಿದರು. ಸ್ವಾಮಿಗಳಾದರೊ ಕೇವಲ ಮುಗುಳ್ನಕ್ಕರಷ್ಟೆ.

ಅವರ ಜೀವನದಲ್ಲಿ ಇನ್ನೊಂದು ಘಟನೆ ತುಂಬ ವೈಶಿಷ್ಟ್ಯಪೂರ್ಣವಾಗಿದೆ ಹಾಗೂ ಇದು ಶಾರದಾನಂದರು ಹಿಂದಿನ ಜನ್ಮದಲ್ಲಿ ಕ್ರಿಸ್ತನ ಅನುಯಾಯಿಯಾಗಿದ್ದರೆಂಬ ಶ್ರೀ ರಾಮಕೃಷ್ಣರ ಅನುಭವಾತ್ಮಕ ಹೇಳಿಕೆಯನ್ನು ನೆನಪು ಮಾಡಿಕೊಡುತ್ತದೆ. ಭಾರತದಿಂದ ಲಂಡನ್ನಿಗೆ ಹೋಗುವಾಗ ಅವರು ಸೇಂಟ್ ಪೀಟರ್ಸ್ ಚರ್ಚಿಗೆ ಭೇಟಿಯಿತ್ತಿದ್ದರು. ಆ ಸಂದರ್ಭದಲ್ಲಿ ಅವರ ಮನಸ್ಸು ಇದ್ದಕ್ಕಿದ್ದಂತೆಯೇ ಇಂದ್ರಿಯಾತೀತ ಸ್ತರಕ್ಕೇರಿ ಅವರು ಆಳ ಸಮಾಧಿಯಲ್ಲಿ ಮುಳುಗಿದರು. ಆ ಸ್ಥಿತಿಯಲ್ಲಿ ಅವರು ಏನು ಅನುಭವಿಸಿದರು ಎಂಬುದು ರಹಸ್ಯವಾಗಿಯೇ ಉಳಿದಿದೆ. ಕ್ರಿಸ್ತನ ಶಿಷ್ಯರ ಪುಣ್ಯಸ್ಮೃತಿಯೊಡನೆ ಸಂಬಂಧಿಸಿದ ಆ ಪವಿತ್ರ ಚರ್ಚ್ ಅವರ ಹಿಂದಿನ ಜನ್ಮದ ಸ್ಮೃತಿಯನ್ನು ಕೆರಳಿಸಿರಬಹುದೆಂದು ನಾವು ಊಹಿಸಬಹುದು.

ಅವರ ಕೆಲವು ಹೇಳಿಕೆಗಳ ಮೂಲಕ ಅವರ ಆಧ್ಯಾತ್ಮಿಕ ಔನ್ನತ್ಯವನ್ನು ನಿರ್ಧರಿಸಬಹುದಾಗಿದೆ. ತಮ್ಮ ವೈಯಕ್ತಿಕ ದಿನಚರಿಯ ಪುಸ್ತಕದಲ್ಲಿ ಅವರು ಹೇಗೆ ಜಗನ್ಮಾತೆಯನ್ನು ನೇರವಾಗಿ ಸಂಪರ್ಕಿಸುತ್ತಿದ್ದರು ಎಂಬುದನ್ನು ಸೂಚಿಸಿರುವರು. "ಭಾರತದಲ್ಲಿ ಶಕ್ತಿಪೂಜೆ" ಎಂಬ ಪುಸ್ತಕದ 'ಸಮರ್ಪಣೆ'ಯಲ್ಲಿ ಅವರು ಹೀಗೆ ಹೇಳುತ್ತಾರೆ: "ಯಾರ ಅನುಗ್ರಹದ ಮೂಲಕ ಗ್ರಂಥಕರ್ತನು ಭೂಮಿಯ ಮೇಲಿನ ಪ್ರತಿಯೊಬ್ಬ ಸ್ತ್ರೀಯಲ್ಲಿಯೂ ಜಗನ್ಮಾತೆಯನ್ನು ಕಾಣುವಂತಾಗಿದೆಯೊ ಅವರಿಗೆ ಈ ಪುಸ್ತಕವು ಭಕ್ತಿಪೂರ್ವಕವಾಗಿ ಸಮರ್ಪಿಸಲ್ಪಟ್ಟಿದೆ." ಎಂಥ ಉನ್ನತ ಆಧ್ಯಾತ್ಮಿಕ ಸ್ತರದಲ್ಲಿ ಅವರ

ಮನಸ್ಸು ನೆಲೆಸಿತ್ತು ಎಂಬುದನ್ನು ಇದು ಸೂಚಿಸುತ್ತದೆ. ಮುಂದೆ ಸಾಧುವೊಬ್ಬರು ತಮ್ಮ ಆಧ್ಯಾತ್ಮಿಕ ಅನುಭವದ ಬಗ್ಗೆ ಹೇಳಬೇಕೆಂದು ಸ್ವಾಮಿ ಶಾರದಾನಂದರನ್ನು ಮತ್ತೆ ಮತ್ತೆ ಕೇಳಿಕೊಂಡಾಗ ಅವರು ಈ ಮಾತನ್ನು ಹೇಳುತ್ತಾರೆ: "ಶ್ರೀರಾಮಕೃಷ್ಣ ಲೀಲಾಪ್ರಸಂಗದಲ್ಲಿ ನನ್ನ ಆಧ್ಯಾತ್ಮಿಕ ಅನುಭವಕ್ಕೆ ಮೀರಿದ ಯಾವುದನ್ನೂ ನಾನು ಬರೆದಿಲ್ಲ." ನಮಗೆ ತಿಳಿದಿರುವಂತೆ ಈ ಗ್ರಂಥದಲ್ಲಿ ಅತ್ಯುನ್ನತ ಅನುಭವವಾದ ನಿರ್ವಿಕಲ್ಪ ಸಮಾಧಿಯೂ ಸೇರಿದಂತೆ ವಿವಿಧ ಆಧ್ಯಾತ್ಮಿಕ ಅನುಭವಗಳ ಸ್ಪಷ್ಟ ವಿವರಣೆ ದೊರೆಯುತ್ತದೆ.

ಸ್ವಾಮಿ ಶಾರದಾನಂದರು ಆದರ್ಶ ಕರ್ಮಯೋಗಿಯಂತೆ ಬಾಳಿದರು. ಪೂರ್ಣ ಅನಾಸಕ್ತಿಯಿಂದ, ಆತ್ಮ ಸಂಯಮದಿಂದ ಮತ್ತು ಅತ್ಯಂತ ನಿಷ್ಠೆಯಿಂದ ಅವರು ತಮ್ಮ ಕರ್ತವ್ಯವನ್ನು ನಿರ್ವಹಿಸಿದರು. ಕೆಲಸಕ್ಕೆ ಸಂಬಂಧಪಟ್ಟ ಅತ್ಯಂತ ಸಾಮಾನ್ಯ ವಿಷಯಕ್ಕೂ ಅವರು ಪೂರ್ಣ ಗಮನ ಕೊಡುತ್ತಿದ್ದರು. ಯಾವುದೇ ಕೆಲಸವೂ ಅವರ ಪಾಲಿಗೆ ಕೀಳಾಗಿರಲಿಲ್ಲ. ಯಾರ ಹೊಗಳಿಕೆ ತೆಗಳಿಕೆಗಳೂ ಅವರ ಕಾರ್ಯನಿಷ್ಠೆಯನ್ನು ಏರುಪೇರು ಗೊಳಿಸುತ್ತಿರಲಿಲ್ಲ. ಅವರ ವೈಚಾರಿಕ ಬುದ್ಧಿ, ದಯಾಪೂರ್ಣ ಹೃದಯ, ಶುದ್ಧ ಮತ್ತು ಶಾಂತ ಮನಸ್ಸು, ಅಪಾರ ಸಹನೆ ಮತ್ತು ಅಪೂರ್ವ ಸಂಘಟನಾ ಸಾಮರ್ಥ್ಯ—ಈ ಗುಣಗಳು ಅವರ ಎಲ್ಲ ಕಾರ್ಯಗಳಿಗೂ ಒಂದು ಹೊಸ ಕಳೆಯನ್ನು ನೀಡಿದವು. ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು, "ಶರತ್‌ನ ರಕ್ತ ಮೀನಿನಷ್ಟು ಶೀತಲ. ಯಾವುದೂ ಅದನ್ನು ಕುದಿಯುವಂತೆ ಮಾಡಲಾರದು," ಎಂದು. ಈ ಮೇಲಿನ ಗುಣಗಳಿಂದ ಅವರು ಸಂಘದ ಕಾರ್ಯದರ್ಶಿ ಹುದ್ದೆಯನ್ನು ಅಷ್ಟೊಂದು ಯಶಸ್ವಿಯಾಗಿ ನೆರವೇರಿಸಲು ಸಾಧ್ಯವಾಯಿತು.

ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ತ್ಯಾಗಿಯು ಎಲ್ಲರನ್ನೂ ಸಮಾನ ದೃಷ್ಟಿಯಿಂದ ನೋಡುತ್ತಾನೆ ಮತ್ತು ಎಲ್ಲರ ಸೇವೆಯಲ್ಲಿಯೂ ತನ್ನನ್ನು ಅರ್ಪಿಸಿ ಕೊಳ್ಳುತ್ತಾನೆ." ಈ ಹೇಳಿಕೆಗೆ ದೃಷ್ಟಾಂತ ಪ್ರಾಯರಾಗಿ ಬಾಳಿದವರು ಸ್ವಾಮಿ ಶಾರದಾ ನಂದರು. ಯಾವುದೇ ಹಿರಿತನದ ಹೆಮ್ಮೆಯಿಲ್ಲದೆ ಅವರು ಎಲ್ಲ ಜನರನ್ನು ಸಮಾನವಾಗಿ ಪ್ರೀತಿ ಮತ್ತು ದಯೆಯಿಂದ ನೋಡಿಕೊಂಡರು. ಅವರು ತಮ್ಮ ವೈಯಕ್ತಿಕ ಸುಖ ಸೌಲಭ್ಯ ಗಳನ್ನು ಲಕ್ಷಿಸಿದವರೇ ಅಲ್ಲ. ತಮ್ಮ ಶಿಷ್ಯರಿಂದಲೂ ಅವರು ಭೌತಿಕ ಸೇವೆಯನ್ನು ಸ್ವೀಕರಿ ಸುತ್ತಿರಲಿಲ್ಲ. ಆದರೆ ಇತರರನ್ನು ಅಪಾಯದಿಂದ ರಕ್ಷಿಸಲು ಎಂಥ ಕಷ್ಟವನ್ನಾದರೂ ಎದುರಿ ಸಲು, ತಮ್ಮ ಪ್ರಾಣವನ್ನೇ ಬಲಿ ಕೊಡಲು ಸಿದ್ಧರಿದ್ದರು. ಒಮ್ಮೆ ಅವರು ಹಿಮಾಲಯದಲ್ಲಿ ಬದರಿನಾಥಕ್ಕೆ ಹೋಗುವ ಹಾದಿಯಲ್ಲಿ ಒಂದು ನದಿಯನ್ನು ದಾಟುವಾಗ ತಮ್ಮ ದಂಡ ವನ್ನು ಅಪರಿಚಿತ ವೃದ್ಧೆಯೊಬ್ಬಳಿಗೆ ಕೊಟ್ಟರು. ಆಗ ಆ ಕಡಿದಾದ ಸ್ಥಳದಲ್ಲಿ ದಂಡವಿಲ್ಲದೆ ನಡೆದುಕೊಂಡು ಹೋಗುವುದು ಎಷ್ಟು ದುಃಸಾಧ್ಯ ಮತ್ತು ಅಪಾಯಕರ ಎಂಬುದನ್ನು ಸ್ವಲ್ಪವೂ ಗಮನಿಸಲಿಲ್ಲ. ಪ್ರಾಣಾಂತಿಕ ಸಾಂಕ್ರಾಮಿಕ ರೋಗದಿಂದ ನರಳುತ್ತಿರುವವರ

ಹತ್ತಿರ ಹೋಗಲು ಅವರ ಸಂಬಂಧಿಕರೇ ಹಿಂಜರಿಯುತ್ತಿರುವಾಗ ಶಾರದಾನಂದರು ಅವರ ಹಾಸಿಗೆಯ ಪಕ್ಕದಲ್ಲಿ ಕುಳಿತು ಅವರ ಆರೈಕೆ ಮಾಡುತ್ತಿದ್ದರು. ಮನೋವ್ಯಥೆಯಿಂದ ನರಳುತ್ತಿರುವ ಅನೇಕರಿಗೆ ಅವರ ಸಾಂತ್ವನದ ನುಡಿಗಳು ಸಮಾಧಾನ ನೀಡುತ್ತಿದ್ದವು.

ಅವರ ವ್ಯಕ್ತಿತ್ವದಲ್ಲಿ ಎದ್ದು ಕಾಣುತ್ತಿದ್ದ ಲಕ್ಷಣಗಳೆಂದರೆ ಘನತೆ, ಗಾಂಭೀರ್ಯ. ಅವರು ಸಭ್ಯತೆಯ ಮೂರ್ತ ರೂಪದಂತಿದ್ದರು. ಅತ್ಯಂತ ಶಿಷ್ಟಾಚಾರದ ವ್ಯಕ್ತಿಗಳೂ ಅವರ ಸಜ್ಜನಿಕೆಯಿಂದ ಆಕರ್ಷಿತರಾಗುತ್ತಿದ್ದರು. ಕಿರಿಯರು ಕೇಳುವ ಅಸಂಬದ್ಧ ಪ್ರಶ್ನೆಗಳಿಗೆ ಉತ್ತರಿಸುವುದರಲ್ಲಿ ಅವರು ತೋರಿಸುತ್ತಿದ್ದ ತಾಳ್ಮೆ ಅಗಾಧವಾದುದು. ಅವರು ಯಾರನ್ನಾದರು ಬಯ್ಯಬೇಕಾದರೂ ಅವರ ಮಧುರ ಧ್ವನಿ ಆ ಮಾತಿನ ಕಾಠಿಣ್ಯವನ್ನು ಕುಗ್ಗಿಸುತ್ತಿತ್ತು. ಆದರೂ ಅದು ತಪ್ಪಿತಸ್ಥನ ಮೇಲೆ ಸೂಕ್ತ ಪರಿಣಾಮವನ್ನು ಉಂಟುಮಾಡದೆ ಇರುತ್ತಿರಲಿಲ್ಲ.

ಈ ಮೇಲಿನ ವ್ಯಕ್ತಿಚಿತ್ರದಿಂದ ಸ್ವಾಮಿ ಶಾರದಾನಂದರು ರಾಮಕೃಷ್ಣ ಸಂಘದ ಸ್ಥಾಪನೆ ಮತ್ತು ಅದರ ಮುನ್ನಡೆಯಲ್ಲಿ ಎಂಥ ಮಹತ್ ಪಾತ್ರವನ್ನು ವಹಿಸಿದರು ಎಂಬುದನ್ನು ಅರ್ಥಮಾಡಿಕೊಳ್ಳಬಹುದು. ಶ್ರೀರಾಮಕೃಷ್ಣಲೀಲಾ ನಾಟಕದಲ್ಲಿ ತಮ್ಮ ಪಾಲಿಗೆ ಬಂದ ಪಾತ್ರವನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿ ೧೯೨೭ರ, ಆಗಸ್ಟ್ ೧೯ ರಂದು ಶಾಂತಚಿತ್ತರಾಗಿ ಈ ಜಗನ್ನಾಟಕ ರಂಗದಿಂದ ಕಣ್ಮರೆಯಾದರು. ಆದರೆ ಅವರ ಜೀವನಾದರ್ಶ ಮತ್ತು ಕಾರ್ಯವಿಧಾನ ರಾಮಕೃಷ್ಣ ಸಂಘಕ್ಕೆ ಮಾರ್ಗದರ್ಶಕವಾಗಿ ಇನ್ನೂ ಉಳಿದಿದೆ. ಅವರ ಮೇರುಕೃತಿಯಾದ 'ಶ್ರೀರಾಮಕೃಷ್ಣ ಲೀಲಾಪ್ರಸಂಗ'ವು ಧಾರ್ಮಿಕ ಸಾಹಿತ್ಯಕ್ಕೆ ಒಂದು ಅಪೂರ್ವ ಕೊಡುಗೆಯಾಗಿದ್ದು. ಅವರ ಪುಣ್ಯ ಸ್ಮೃತಿಯು ಅಚ್ಚಳಿಯದೆ ಉಳಿಯುವಂತಾಗಿದೆ.



ಮೊದಲನೆಯ ಭಾಗ

ಪೂರ್ವಕಥೆ ಮತ್ತು ಬಾಲ್ಯಜೀವನ

ಅವತರಣಿಕೆ

1. ಧರ್ಮವೇ ಭಾರತದ ಸರ್ವಸ್ವ 2. ಭಾರತದಲ್ಲಿ ಆಗಾಗ ಮಹಾಪುರುಷರು ಹುಟ್ಟುತ್ತಿದ್ದುದೇ ಇದಕ್ಕೆ ಕಾರಣ 3. ಭಗವತ್ಸಾಕ್ಷಾತ್ಕಾರದ ಮೇಲೆಯೇ ಭಾರತದ ಧರ್ಮ ನಿಂತಿರುವುದು 4. ಅವತಾರದಲ್ಲಿ ನಂಬಿಕೆ ಉಂಟಾದ ಕ್ರಮ—ಸಾಂಖ್ಯದರ್ಶನ ದಲ್ಲಿ 'ಕಲ್ಪನಿಯಾಮಕ ಈಶ್ವರ' 5. ಭಕ್ತಿಯುಗದಲ್ಲಿ ವಿರಾಟ್ ವ್ಯಕ್ತಿತ್ವವುಳ್ಳ ಈಶ್ವರನ ಕಲ್ಪನೆ 6. ಅವತಾರದಲ್ಲಿ ನಂಬಿಕೆಗೆ ಬೇರೆ ಕಾರಣ—ಗುರೂಪಾಸನೆ. 7. ವೇದ ಮತ್ತು ಸಮಾಧಿಗಳಿಂದುಂಟಾದ ಜ್ಞಾನದ ಮೇಲೆಯೇ ಅವತಾರವಾದ ನಿಂತಿರುವುದು 8. ಭಗವಂತನ ಕರುಣೆಯ ಅನುಭವದಿಂದಲೇ ಪೌರಾಣಿಕ ಯುಗ ದಲ್ಲಿ ಅವತಾರವಾದ ಪ್ರಚಾರವಾಯಿತು 9. ಅವತಾರಪುರುಷರ ದಿವ್ಯಸ್ವಭಾವ ವನ್ನು ಕುರಿತು ಶಾಸ್ತ್ರ ಏನು ಹೇಳುತ್ತದೆ 10. ಅವತಾರಪುರುಷರ ಅಖಂಡ ಸ್ಮೃತಿ ಶಕ್ತಿ 11. ಅವತಾರಪುರುಷರು ಹೊಸ ಧರ್ಮವನ್ನು ಸ್ಥಾಪಿಸುತ್ತಾರೆ 12. ಅವತಾರ ಪುರುಷರ ಆಗಮನದ ಕಾಲವನ್ನು ಕುರಿತು ಶಾಸ್ತ್ರ ಏನು ಹೇಳುತ್ತದೆ 13. ವರ್ತಮಾನ ಕಾಲದಲ್ಲಿ ಅವತಾರಪುರುಷನ ಪುನರಾಗಮನ.

1. ಭಾರತ ಮತ್ತು ಇತರ ದೇಶಗಳಲ್ಲಿ ಕಂಡುಬರುವ ಆಧ್ಯಾತ್ಮಿಕ ಭಾವಗಳ ಮತ್ತು ಎಲ್ಲ ನಂಬಿಕೆಗಳ ತುಲನೆಮಾಡಿದಾಗ ಅವುಗಳಲ್ಲಿ ಒಂದು ವಿಶೇಷವಾದ ವ್ಯತ್ಯಾಸ ನಮ್ಮ ಗಮನಕ್ಕೆ ಬರುತ್ತದೆ. ಇಂದ್ರಿಯಾತೀತ ಸತ್ಯಗಳಾದ ಈಶ್ವರ, ಆತ್ಮ, ಪರಲೋಕ ಮುಂತಾದುವುಗಳನ್ನೇ ಪರಮ ಸತ್ಯಗಳನ್ನಾಗಿ ಎಣಿಸಿ ಅವುಗಳನ್ನು ಪ್ರತ್ಯಕ್ಷವಾಗಿ ಅರಿಯುವುದೇ ಪ್ರಾಚೀನಕಾಲದಿಂದಲೂ ಭಾರತದಲ್ಲಿ ಜೀವನ ಸರ್ವಸ್ವವಾಗಿರುವುದು ಮತ್ತು ಭಗವತ್ ಸಾಕ್ಷಾತ್ಕಾರವೇ ವ್ಯಕ್ತಿಗತ ಜೀವನದ ಚರಮೋದ್ದೇಶವಾಗಿರುವುದು. ಭಾರತದ ಪ್ರತಿಯೊಂದು ಚಟುವಟಿಕೆಯೂ ಸದಾ ಆಧ್ಯಾತ್ಮಿಕತೆಯ ಕಡೆಗೆ ಕೇಂದ್ರೀಕೃತ ವಾಗಿದೆ.

2, ಇಂದ್ರಿಯಾತೀತ ವಿಷಯಗಳಲ್ಲಿ ಈ ರೀತಿಯ ಆಸಕ್ತಿಗೆ ಕಾರಣವೇನು ? ಭಾರತದಲ್ಲಿ ದಿವ್ಯಗುಣಸಂಪನ್ನರಾದ ಮತ್ತು ಪ್ರತ್ಯಕ್ಷದರ್ಶಿಗಳಾದ ಮಹಾಪುರುಷರು ಆಗಾಗ ಜನ್ಮವೆತ್ತಿದುದೇ ಇದಕ್ಕೆ ಕಾರಣ. ಅವರ ದಿವ್ಯದರ್ಶನ ಮತ್ತು ಅಸಾಧಾರಣ ಶಕ್ತಿ—ಇವುಗಳನ್ನು ನೋಡುವುದರ ಮತ್ತು ಆಲೋಚಿಸುವುದರ ಮೂಲಕ ಈ ವಿಷಯ ಗಳಲ್ಲಿ ದೃಢವಿಶ್ವಾಸ ಮತ್ತು ಆಸಕ್ತಿ ಉಂಟಾಗಿರುವುದು. ಭಾರತದ ರಾಷ್ಟ್ರೀಯ ಜೀವನವು ಪ್ರಾಚೀನಕಾಲದಿಂದಲೂ ಹೀಗೆ ಆಧ್ಯಾತ್ಮಿಕತೆಯ ಭದ್ರವಾದ ತಳಹದಿಯ

ಮೇಲೆ ನಿಂತಿದೆ ಮತ್ತು ಧಾರ್ಮಿಕ ಉನ್ನತಿಯೇ ಅದರ ಏಕಮಾತ್ರ ಗುರಿಯಾಗಿದೆ. ಹೀಗಾಗಿ ಅದು ತನ್ನದೇ ಆದ ಒಂದು ವಿಶಿಷ್ಟ ಲಕ್ಷಣವನ್ನು ಹೊಂದಿದೆ. ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸ್ವಭಾವಕ್ಕನುಗುಣವಾದ ದೈನಂದಿನ ಕರ್ಮಗಳನ್ನು ಅನುಷ್ಠಾನ ಮಾಡುತ್ತ, ಅದರ ಮೂಲಕವೇ ಉನ್ನತವುಟ್ಟವನ್ನೇರಿ ಕೊನೆಯಲ್ಲಿ ಭಗವತ್‌ಸಾಕ್ಷಾತ್ಕಾರವನ್ನು ಪಡೆಯಬೇಕು. ಇದನ್ನೇ ಲಕ್ಷ್ಯವಾಗಿಟ್ಟುಕೊಂಡು ಅದಕ್ಕನು ಗುಣವಾದ ನೀತಿ ನಿಯಮಗಳು ರಚಿಸಲ್ಪಟ್ಟಿವೆ. ಬಹುಕಾಲದಿಂದಲೂ ವಂಶಪಾರಂಪರ್ಯ ದಿಂದ ಈ ನಿಯಮಗಳನ್ನು ಪಾಲಿಸಿಕೊಂಡುಬಂದಿರುವುದರಿಂದ ಇಂದಿಗೂ ಇವು ಜೀವಂತವಾಗಿ ಉಳಿದಿವೆ. ತಪಸ್ಸು, ಸಂಯಮ, ತೀವ್ರ ವ್ಯಾಕುಲತೆ—ಇವುಗಳ ಮೂಲಕ ಪ್ರತಿಯೊಬ್ಬ ವ್ಯಕ್ತಿಯೂ ಭಗವತ್‌ಸಾಕ್ಷಾತ್ಕಾರವನ್ನು ಪಡೆಯಬಹುದು ಮತ್ತು ಭಗವಂತನೊಡನೆ ಒಂದಾಗಬಹುದು ಎಂಬ ವಿಷಯದಲ್ಲಿ ಭಾರತದ ಎಲ್ಲ ಸ್ತ್ರೀಪುರುಷರಿಗೂ ಇಂದಿಗೂ ದೃಢವಿಶ್ವಾಸವಿದೆ.

3. ಭಗವಂತನ ದರ್ಶನದ ಮೇಲೆಯೇ ಭಾರತದ ಧರ್ಮಪ್ರತಿಷ್ಠಿತವಾಗಿದೆ ಎಂಬುದನ್ನು ಸಹಜವಾಗಿಯೇ ಊಹಿಸಬಹುದು. ವೈದಿಕ ಕಾಲದಿಂದಲೂ ಧರ್ಮ ಸಂಸ್ಥಾಪಕರಾದ ಆಚಾರ್ಯರುಗಳು ಋಷಿ, ಆಪ್ತ, ಅಧಿಕಾರಿ, ಪ್ರಕೃತಿಲೀನ ಪುರುಷ ಮುಂತಾದ ಹೆಸರಿನಿಂದ ಕರೆಯಲ್ಪಟ್ಟಿರುವರು. ಇದರಿಂದಲೇ ಮೇಲಿನ ಮಾತು ಸ್ಪಷ್ಟ ವಾಗುವುದು. ಇವರೆಲ್ಲ ಇಂದ್ರಿಯಾತೀತ ವಸ್ತುವನ್ನು ಸಾಕ್ಷಾತ್ಕರಿಸಿಕೊಂಡು ಅಸಾಧಾ ರಣ ಶಕ್ತಿಯನ್ನು ಪಡೆದಿದ್ದುದರಿಂದಲೆ ಇವರು ಈ ಮೇಲಿನ ಹೆಸರುಗಳಿಂದ ಕರೆಯಲ್ಪ ಟ್ಟಿರುವರು. ವೈದಿಕ ಕಾಲದ ಋಷಿಗಳಿಂದ ಹಿಡಿದು ಪುರಾಣಯುಗದ ಅವತಾರಪುರುಷ ರೆಲ್ಲರಿಗೂ ಈ ಮಾತು ಸಮಾನವಾಗಿ ಅನ್ವಯಿಸುತ್ತದೆ.

4. ಮತ್ತೆ ವೈದಿಕ ಕಾಲದ ಋಷಿಯೇ ಕಾಲಕ್ರಮೇಣ ಪೌರಾಣಿಕ ಯುಗದಲ್ಲಿ ಅವತಾರವೆಂದು ಪರಿಗಣಿಸಲ್ಪಟ್ಟಿರುವನು. ವೈದಿಕ ಕಾಲದ ಮಾನವನಿಗೆ ಕೆಲವು ವ್ಯಕ್ತಿಗಳು ಇಂದ್ರಿಯಾತೀತ ಸತ್ಯವನ್ನು ಅರಿಯಲು ಸಮರ್ಥರು ಎಂಬ ಜ್ಞಾನವಿದ್ದರೂ ಆ ರೀತಿಯ ಸಿದ್ಧಪುರುಷರಲ್ಲಿದ್ದ ಶಕ್ತಿಯ ತಾರತಮ್ಯವನ್ನು ಅವನಿಗೆ ಗಮನಿಸಲಾಗಲಿಲ್ಲ. ಆದ್ದರಿಂದ ಅವರೆಲ್ಲರನ್ನೂ ಋಷಿಗಳೆಂದು ಅವನು ಕರೆದನು. ಆದರೆ ಕ್ರಮೇಣ ಮಾನವನ ಬುದ್ಧಿ ಮತ್ತು ತೌಲನಿಕ ಶಕ್ತಿ ವೃದ್ಧಿಸಿತು ; ಇದರಿಂದಾಗಿ ಋಷಿಗಳೆಲ್ಲರೂ ಸಮಾನಶಕ್ತಿಯವರಲ್ಲ; ಅವರಲ್ಲಿ ಕೆಲವರು ಆಧ್ಯಾತ್ಮಿಕ ಜಗತ್ತಿನ ಸೂರ್ಯರಿದ್ದರೆ, ಇನ್ನು ಕೆಲವರು ಚಂದ್ರನಂತೆ, ಮತ್ತೆ ಕೆಲವರು ನಕ್ಷತ್ರಸಮಾನರು, ಇನ್ನು ಕೆಲವರು ಸಾಮಾನ್ಯ ದೀಪವಿದ್ದಂತೆ—ಎಂಬುದು ಅವನಿಗೆ ಅರಿವಾಯಿತು. ಆಗ ಋಷಿಗಳನ್ನು ಬೇರೆ ಬೇರೆ ಶ್ರೇಣಿಯವರೆಂದು ಪರಿಗಣಿಸಲಾಯಿತು. ದಾರ್ಶನಿಕ ಯುಗದ ಆಚಾರ್ಯರು ಅವರಲ್ಲಿ ಕೆಲವರನ್ನು 'ಅಧಿಕಾರಿ ಪುರುಷ'ರೆಂದು ಕರೆದರು. ಈಶ್ವರನ ಅಸ್ತಿತ್ವವನ್ನು ಒಪ್ಪದ ಸಾಂಖ್ಯದರ್ಶನದ ಮೂಲಪುರುಷ ಆಚಾರ್ಯ ಕಪಿಲನೂ ಕೂಡ ಇಂತಹ

ಪುರುಷರನ್ನು ಒಪ್ಪಿಕೊಂಡಿರುವನು. ಏಕೆಂದರೆ ಪ್ರತ್ಯಕ್ಷವಾಗಿ ಕಾಣುವುದನ್ನು ಯಾರು ತಾನೆ ಸಂದೇಹಿಸಲು ಸಾಧ್ಯ? ಸಾಂಖ್ಯರು ಇಂತಹ 'ಅಧಿಕಾರಿ ಪುರುಷ'ರನ್ನು 'ಪ್ರಕೃತಿ ಲೀನ'ರೆಂದು ಕರೆಯುತ್ತಾರೆ. ಈ ರೀತಿಯ ವಿಶೇಷ ಶಕ್ತಿಸಂಪನ್ನ ಪುರುಷರ ಉತ್ಪತ್ತಿಯ ಕಾರಣವನ್ನು ಕುರಿತು ಚರ್ಚಿಸುತ್ತ ಸಾಂಖ್ಯರು ಹೀಗೆ ಹೇಳುತ್ತಾರೆ :

ಈ ಬಗೆಯ ಪುರುಷರು ಪವಿತ್ರತೆ ಸಂಯಮ ಮುಂತಾದ ಗುಣಗಳಿಂದ ಭೂಷಿತರಾಗಿದ್ದು ಪೂರ್ಣಜ್ಞಾನವನ್ನು ಪಡೆಯುವ ಸಾಮರ್ಥ್ಯವುಳ್ಳವರಾಗಿದ್ದರೂ ಅವರಲ್ಲಿ ಜಗತ್ತಿಗೆ ಹಿತವನ್ನುಂಟುಮಾಡುವ ತೀವ್ರ ಆಕಾಂಕ್ಷೆ ಇರುವುದರಿಂದ ತಮ್ಮ ಅನಂತ ಮಹಿಮಾನ್ವಿತ ಸ್ವಸ್ವರೂಪದಲ್ಲಿ ಲೀನರಾಗಲು ಅವರಿಗೆ ಸಾಧ್ಯವಾಗುವುದಿಲ್ಲ. ಈ ಆಕಾಂಕ್ಷೆಯ ಬಲದಿಂದ ಸರ್ವಶಕ್ತಿಮತಿಯಾದ ಪ್ರಕೃತಿಯ ಅಂಗದಲ್ಲಿ ಅವರು ಲೀನರಾಗುತ್ತಾರೆ. ಅದರ ಶಕ್ತಿ ಅವರಲ್ಲಿ ಅಭಿವ್ಯಕ್ತವಾಗಿ ಅವರು ಷಡೈಶ್ವರ್ಯಸಂಪನ್ನರಾಗುತ್ತಾರೆ. ಹೀಗೆ ಕಲ್ಪಾಂತದವರೆಗೆ ಅನೇಕ ಪ್ರಕಾರವಾಗಿ ಜನಕಲ್ಯಾಣವನ್ನು ಸಾಧಿಸಿ ಕೊನೆಯಲ್ಲಿ ಸ್ವಸ್ವರೂಪದಲ್ಲಿ ಲೀನರಾಗುತ್ತಾರೆ.

ಶಕ್ತಿಯ ತಾರತಮ್ಯಕ್ಕೆ ಅನುಸಾರವಾಗಿ ಈ ಪ್ರಕೃತಿಲೀನಪುರುಷರನ್ನು ಸಾಂಖ್ಯರು ಎರಡು ಶ್ರೇಣಿಯಲ್ಲಿ ವಿಂಗಡಿಸುತ್ತಾರೆ—ಕಲ್ಪನಿಯಾಮಕ ಈಶ್ವರ ಮತ್ತು ಈಶ್ವರ ಕೋಟಿ.

5. ದಾರ್ಶನಿಕ ಯುಗದ ಅನಂತರ ಭಾರತದಲ್ಲಿ ಭಕ್ತಿಯ ಯುಗ ವಿಶೇಷ ರೀತಿಯಲ್ಲಿ ಪ್ರಕಾಶಕ್ಕೆ ಬರುವುದನ್ನು ಕಾಣುತ್ತೇವೆ. ಆಗ ವೇದಾಂತದ ತೀವ್ರ ಪ್ರಭಾವದಿಂದಾಗಿ ಜನರು ಎಲ್ಲ ವ್ಯಕ್ತಿಗಳ ಸಮಷ್ಟಿರೂಪನಾದ ವಿರಾಟ್ ವ್ಯಕ್ತಿತ್ವವುಳ್ಳ ಈಶ್ವರನಲ್ಲಿ ವಿಶ್ವಾಸವನ್ನು ತಳೆದು ಅನನ್ಯ ಭಕ್ತಿಭಾವದಿಂದ ಅವನ ಉಪಾಸನೆಯಲ್ಲಿ ಮನಸ್ಸನ್ನು ಹರಿಸಿದರು. ಸಾಂಖ್ಯದರ್ಶನದಲ್ಲಿ ಹೇಳಿದ ಕಲ್ಪನಿಯಾಮಕ ಈಶ್ವರನು ಆಗ ನಿತ್ಯ ಶುದ್ಧ ಬುದ್ಧ ಮುಕ್ತನಾದ ವಿರಾಟ್ ಈಶ್ವರನ ಪೂರ್ಣ ಅಥವಾ ಅಂಶಿಕ ಅಭಿವ್ಯಕ್ತಿಯೆಂದು ಪರಿಗಣಿಸಲ್ಪಟ್ಟನು. ಹೀಗೆ ಪೌರಾಣಿಕಯುಗದಲ್ಲಿ ಅವತಾರತತ್ತ್ವದಲ್ಲಿ ನಂಬಿಕೆ ಉತ್ಪನ್ನವಾಯಿತು. ವೈದಿಕಯುಗದ ವಿಶಿಷ್ಟಗುಣಶಾಲಿಗಳಾದ ಋಷಿಗಳೇ ಈಶ್ವರಾವತಾರಗಳಾಗಿ ಪರಿಣಮಿಸಲ್ಪಟ್ಟರು. ಆದ್ದರಿಂದ ಅಸಾಧಾರಣ ಆಧ್ಯಾತ್ಮಿಕ ಶಕ್ತಿಸಂಪನ್ನರಾದ ಪುರುಷರ ಆವಿರ್ಭಾವವನ್ನು ನೋಡಿಯೇ ಭಾರತದಲ್ಲಿ ಕ್ರಮೇಣ ಈಶ್ವರಾವತಾರದ ವಿಷಯದಲ್ಲಿ ನಂಬಿಕೆಯುಂಟಾಯಿತು ಎಂಬುದು ಸ್ಪಷ್ಟ. ಈ ರೀತಿಯ ಮಹಾಪುರುಷರ ಅತೀಂದ್ರಿಯದರ್ಶನ ಮತ್ತು ಅನುಭವ—ಇವುಗಳ ಭದ್ರವಾದ ತಳಹದಿಯ ಮೇಲೆಯೇ ಭಾರತದ ಧರ್ಮಸೌಧ ಕಟ್ಟಲ್ಪಟ್ಟು, ಬರುಬರುತ್ತ ದೊಡ್ಡದಾಗಿ ಬೆಳೆದು ಹಿಮವತ್‌ಪರ್ವತದಂತೆ ವಿಶಾಲವಾಗಿ ಗಗನಚುಂಬಿಯಾಗಿ ಶೋಭಿಸುತ್ತಿರುವುದು. ಮನುಷ್ಯಜೀವನದ ಸರ್ವೋಚ್ಚ ಗುರಿಯನ್ನು ಮುಟ್ಟಿದ ಇಂತಹ ಮಹಾಪುರುಷರು ಸಹಜವಾಗಿಯೂ ಕೃತಾರ್ಥರು ಎಂಬ ಪೂಜ್ಯಭಾವದಿಂದ ಅವರನ್ನು ಭಾರತವು 'ಆಪ್ತರು' ಎಂದು ಕರೆಯುತ್ತದೆ ಮತ್ತು ಅವರ ನುಡಿಗಳನ್ನು ಜ್ಞಾನದ ಪರಾಕಾಷ್ಠೆಯೆಂದು

ಪರಿಗಣಿಸಿ ಅವನ್ನು 'ವೇದ' ಎಂದು ಕರೆಯುತ್ತದೆ.

6. ವಿಶಿಷ್ಟ ಲಕ್ಷಣವುಳ್ಳ ಕೆಲವು ಋಷಿಗಳನ್ನು ಈಶ್ವರಾವತಾರವೆಂದು ಪರಿಗಣಿಸು ವುದಕ್ಕೆ ಇನ್ನೊಂದು ಪ್ರಧಾನ ಕಾರಣ—ಭಾರತದಲ್ಲಿ ಪ್ರಚಲಿತವಿರುವ ಗುರುವಿನ ಉಪಾಸನೆ. ವೇದೋಪನಿಷತ್ತಿನ ಕಾಲದಿಂದಲೂ ಭಾರತದ ನರನಾರಿಯರು ಜ್ಞಾನವನ್ನು ನೀಡುವ ಆಚಾರ್ಯರನ್ನು ಗುರುವೆಂದು ಪೂಜಿಸುತ್ತಾ ಬಂದಿರುವರು. ಈ ಪೂಜ್ಯ ಭಾವನೆಯೇ ಮುಂದೆ, ಮಾನವನೊಳಗೆ ಭಗವತ್‌ಶಕ್ತಿ ಆವಿರ್ಭಾವವಾಗದೇ ಇದ್ದರೆ ಅವನೆಂದೂ ಗುರು ಪದವಿಗೇರಲಾರ ಎಂಬ ಕಲ್ಪನೆಗೆ ಎಡೆಮಾಡಿಕೊಟ್ಟಿತು. ಸಾಧಾರಣ ಮಾನವರಲ್ಲಿ ಕಂಡುಬರುವ ಸ್ವಾರ್ಥಪರತೆ ಮತ್ತು ಯಥಾರ್ಥ ಗುರುಗಳಲ್ಲಿ ಕಂಡು ಬರುವ ಅಹೇತುಕ ಪ್ರೀತಿ-- ಇವುಗಳನ್ನು ಪರಿಶೀಲಿಸಿದ ಜನರು ಮೊದಲು ಈ ಗುರು ಗಳನ್ನು ಉಚ್ಚಶ್ರೇಣಿಯ ಮಾನವರೆಂದು ಪೂಜಿಸತೊಡಗಿದರು. ಅನಂತರ ಅವರ ಆಸ್ತಿಕತೆ, ಶ್ರದ್ಧೆ ಮತ್ತು ಭಕ್ತಿ ಘನೀಭೂತವಾಗಿ ಯಥಾರ್ಥ ಗುರುಗಳಲ್ಲಿ ಎಷ್ಟರ ಮಟ್ಟಿಗೆ ಅಲೌಕಿಕ ಶಕ್ತಿಯ ಆವಿರ್ಭಾವನ್ನು ಕಾಣತೊಡಗಿದರೊ ಅಷ್ಟೂ ಅವರಲ್ಲಿ ದೇವತ್ವವನ್ನು ಕಾಣತೊಡಗಿದರು. ಭವರೋಗದಿಂದ ಪಾರಾಗಲು ಜನರು ಬಹುಕಾಲ ದಿಂದ ಭಗವಂತನ ಸಹಾಯವನ್ನು ಯಾಚಿಸುತ್ತಿದ್ದರು. ಅದೇ ಈಗ ಗುರುವಿನ ರೂಪ ದಲ್ಲಿ ಬರುತ್ತಿದೆ ಎಂದು ಅವರು ನಂಬಿದರು. ಭಗವಂತನ ಕರುಣೆಯೇ ಮೂರ್ತಿರೂಪ ವನ್ನು ಪಡೆದು ಗುರುಶಕ್ತಿಯ ರೂಪದಲ್ಲಿ ತಮ್ಮ ಮುಂದಿರುವುದೆಂದು ಅವರು ಭಾವಿಸಿದರು,

7. ಮತ್ತೆ ಈ ಗುರೂಪಾಸನೆ ಕ್ರಮೇಣ ಅತ್ಯಂತ ಪ್ರಾಮುಖ್ಯವನ್ನು ಪಡೆಯಿತು. ಆಗ ಯಾರ ಮೂಲಕ ಭಗವಂತನ ವಿಶೇಷ ಶಕ್ತಿ ಪ್ರಕಟವಾಗುತ್ತಿರುವುದೊ ಅವರೇ ಭಗವಂತನ ಜ್ಞಾನಪ್ರದ ದಕ್ಷಿಣಾಮೂರ್ತಿಯಿಂದ ಅಭಿನ್ನರು ಎಂದು ಭಾವಿಸತೊಡಗಿ ದರು. ಹೀಗೆ ಆಚಾರ್ಯೋಪಾಸನೆಯೇ ಕ್ರಮೇಣ ಅವತಾರವಾದಕ್ಕೆ ಮತ್ತು ಅದರ ಸಮರ್ಥನೆಗೆ ಸಹಾಯಕವಾಯಿತು. ಆದ್ದರಿಂದ ಅವತಾರವಾದದ ಸ್ಪಷ್ಟ ಅಭಿವ್ಯಕ್ತಿ ಪೌರಾಣಿಕ ಯುಗದಲ್ಲಿ ಕಂಡುಬಂದರೂ ಅದರ ಮೂಲ ವೈದಿಕ ಯುಗಕ್ಕೂ ವ್ಯಾಪಿಸಿರು ವುದೆಂಬುದನ್ನು, ಮತ್ತೆ ಹೇಳಬೇಕಾಗಿಲ್ಲ. ವೇದ, ಉಪನಿಷತ್ ಮತ್ತು ದರ್ಶನ ಯುಗ ದಲ್ಲಿ ಮಾನವನು ಈಶ್ವರನ ಗುಣ, ಕರ್ಮ ಮತ್ತು ಸ್ವರೂಪ - ಇವುಗಳ ಸಂಬಂಧದಲ್ಲಿ ಏನೇನು ಮಾಹಿತಿಯನ್ನು ಪಡೆದಿದ್ದನೊ ಪೌರಾಣಿಕ ಯುಗದಲ್ಲಿ ಅದೇ ಸ್ಪಷ್ಟ ಆಕಾರ ವನ್ನು ಪಡೆದು ಅವತಾರತತ್ತ್ವದಲ್ಲಿ ಶ್ರದ್ಧೆಯಾಗಿ ಮಾರ್ಪಟ್ಟಿತು. ಅಥವಾ ಇದನ್ನು ಇನ್ನೊಂದು ರೀತಿಯಲ್ಲಿ ಹೇಳಬಹುದು: ಉಪನಿಷತ್ ಕಾಲದಲ್ಲಿ ಮಾನವನು ಸಂಯಮ —ತಪಸ್ಯಾದಿಗಳ ಮೂಲಕ 'ನೇತಿ ನೇತಿ' ಮಾರ್ಗದಲ್ಲಿ ಮುಂದುವರಿದು ಸಮಾಧಿಯನ್ನು ಪಡೆದು ನಿರ್ಗುಣ ಬ್ರಹ್ಮನಲ್ಲಿ ಒಂದಾದನು. ಅನಂತರ ಆ ಅತ್ಯುನ್ನತ ಸ್ಥಿತಿಯಿಂದ ಕೆಳಗಿಳಿದು ಬಂದು ಇಡೀ ಜಗತ್ತೂ ಬ್ರಹ್ಮನ ಪ್ರಕಾಶನವೆಂದು ತಿಳಿದನು. ಆಗ ಸಗುಣ ವಿರಾಟ್ ಬ್ರಹ್ಮ ಅಥವಾ ಈಶ್ವರನಲ್ಲಿ ಪ್ರೇಮಾ ಭಕ್ತಿ ಉತ್ಪನ್ನವಾಗಿ ಅವನ ಉಪಾಸನೆ

ಯಲ್ಲಿ ಪ್ರವೃತ್ತನಾದನು. ಹಾಗೆಯೇ ಈಶ್ವರನ ಗುಣ, ಕರ್ಮ, ಸ್ವಭಾವಗಳ ವಿಷಯ ದಲ್ಲಿಯೂ ಒಂದು ಸ್ಥಿರಸಿದ್ಧಾಂತಕ್ಕೆ ಬಂದನು. ಹೀಗೆಯೇ ಕ್ರಮೇಣ ಅವನ ವಿಶೇಷ ಅವತಾರದಲ್ಲಿಯೂ ನಂಬಿಕೆಯುಂಟಾಯಿತು.

8. ಪೌರಾಣಿಕ ಯುಗದಲ್ಲಿಯೇ ಅವತಾರದಲ್ಲಿ ವಿಶ್ವಾಸ ವಿಶೇಷ ರೂಪದಲ್ಲಿ ಪ್ರಕಟವಾಯಿತು ಎಂಬುದನ್ನು ಮೊದಲೇ ಹೇಳಿಯಾಗಿದೆ. ಈ ಯುಗದ ಆಧ್ಯಾತ್ಮಿಕ ವಿಕಾಸದಲ್ಲಿ ಅನೇಕ ದೋಷಗಳು ಕಂಡುಬಂದರೂ, ಅವತಾರದ ಮಹಿಮೆಯನ್ನು ಪ್ರಕಾಶಪಡಿಸುವುದರಲ್ಲಿ ಆದರ ವಿಶೇಷತ್ವ ಮತ್ತು ಮಹತ್ವ ಅಡಗಿದೆ. ಇದಕ್ಕೆ ಕಾರಣ, ಅವತಾರದಲ್ಲಿ ವಿಶ್ವಾಸವನ್ನು ಆಶ್ರಯಿಸಿಯೇ ಮಾನವನು ಸಗುಣಬ್ರಹ್ಮನ ನಿತ್ಯಲೀಲಾ ವಿಲಾಸವನ್ನು ತಿಳಿಯಲು ಸಮರ್ಥನಾಗಿರುವನು. ಆಧ್ಯಾತ್ಮಿಕ ಜಗತ್ತಿನಲ್ಲಿ ತನಗೆ ಈಶ್ವರನೊಬ್ಬನೇ ಮಾರ್ಗದರ್ಶಕ ಎಂಬುದನ್ನು ಅವನು ಈ ವಿಶ್ವಾಸದ ಮೂಲಕ ಅರಿತುಕೊಂಡನು. ತಾನು ಎಷ್ಟೇ ಕೆಟ್ಟಮಾರ್ಗವನ್ನು ಹಿಡಿದರೂ ಭಗವಂತನು ಚಿರಕಾಲ ತನ್ನನ್ನು ಈ ವಿನಾಶದ ಹಾದಿಯಲ್ಲಿ ಹೋಗಲು ಬಿಡುವುದಿಲ್ಲ ಮತ್ತು ಯುಗ ಯುಗ ದಲ್ಲಿ ಅವತರಿಸಿ ಹೊಸ ಹೊಸ ಮಾರ್ಗವನ್ನು ಆವಿಷ್ಕರಿಸಿ ಜನರು ಧರ್ಮದ ಹಾದಿ ಯನ್ನು ಹಿಡಿಯುವಂತೆ ಮಾಡುವನು ಎಂಬುದೂ ಅವನಿಗೆ ಸ್ಪಷ್ಟವಾಯಿತು.

9. ಅವತಾರಪುರುಷರ ದಿವ್ಯ ಜನ್ಮಕರ್ಮಾದಿಗಳ ವಿಷಯದಲ್ಲಿ ಸ್ಮೃತಿ ಮತ್ತು ಪುರಾಣಗಳಲ್ಲಿ ಹೇಳಿರುವುದನ್ನು ಇಲ್ಲಿ ಸಂಕ್ಷೇಪವಾಗಿ ಉಲ್ಲೇಖಿಸುವುದು ಅಸಂಗತ ವೇನಲ್ಲ. ಅವುಗಳ ಪ್ರಕಾರ, ಅವತಾರಪುರುಷನು ಈಶ್ವರನಂತೆಯೇ ನಿತ್ಯ ಶುದ್ಧ ಬುದ್ಧ ಮುಕ್ತ ಸ್ವಭಾವದವನು. ಜೀವಿಯಂತೆ ಅವನು ಎಂದೂ ಕರ್ಮಬಂಧನಕ್ಕೆ ಒಳಗಾಗು ವುದಿಲ್ಲ. ಏಕೆಂದರೆ ಸಾಮಾನ್ಯ ಜೀವಿಗಳಂತೆ ಭೋಗಸುಖ ಪ್ರಾಪ್ತಿಗಾಗಿ ಸ್ವಾರ್ಥಕ್ರಿಯೆ ಯಲ್ಲಿ ಅವನು ತೊಡಗುವುದೇ ಇಲ್ಲ. ಶರೀರಧಾರಣೆಯಿಂದ ಹಿಡಿದು ಅವನ ಪ್ರತಿ ಯೊಂದು ಕ್ರಿಯೆಯೂ ಪರಹಿತಕ್ಕಾಗಿಯೇ ಮೀಸಲು. ಮತ್ತೆ, ಮಾಯೆಯ ಅಜ್ಞಾನದ ಬಂಧನಕ್ಕೆ ಅವನು ಎಂದೂ ಒಳಗಾಗದೇ ಇರುವುದರಿಂದ ಹಿಂದೆ ಅವನು ಪಡೆದ ಜನ್ಮಗಳ ಸ್ಮೃತಿ ಅವನಿಗೆ ಸ್ಪಷ್ಟವಾಗಿರುತ್ತದೆ.

10. ಈಗ ಒಂದು ಪ್ರಶ್ನೆ ಏಳುವುದು : ಆರೀತಿಯ ಅಖಂಡ ಸ್ಮೃತಿ ಅವನಲ್ಲಿ ಶೈಶವದಿಂದಲೂ ಇರುವುದೆ ? ಪುರಾಣಕಾರರು ಹೇಳುತ್ತಾರೆ, ಅಂತರ್ಯದಲ್ಲಿ ಅದು ಇದ್ದರೂ ಶೈಶವಾವಸ್ಥೆಯಲ್ಲಿ ಅದು ಪ್ರಕಾಶಕ್ಕೆ ಬರುವುದಿಲ್ಲ. ಆದರೆ ಶರೀರ ಮತ್ತು ಮನಸ್ಸು ಪೂರ್ಣ ಬೆಳವಣಿಗೆಯನ್ನು ಪಡೆದ ಮೇಲೆ ಸ್ವಲ್ಪ ಪ್ರಯತ್ನದಿಂದ ಅಥವಾ ಪ್ರಯತ್ನವಿಲ್ಲದೆಯೇ ಆ ಸ್ಮೃತಿ ವ್ಯಕ್ತಗೊಳ್ಳುವುದು. ಅವನ ಪ್ರತಿಯೊಂದು ಕ್ರಿಯೆಯ ಮೂಲಕ ನಾವಿದನ್ನು ಅರ್ಥಮಾಡಿಕೊಳ್ಳಬೇಕು. ಏಕೆಂದರೆ ಮನುಷ್ಯದೇಹವನ್ನು ಧರಿಸಿರುವುದರಿಂದ ಅವನ ಪ್ರತಿಯೊಂದು ಕ್ರಿಯೆಯೂ ಮನುಷ್ಯನಂತೆಯೇ ಇರುತ್ತದೆ.

11. ಹೀಗೆ ಶರೀರ ಮನಸ್ಸುಗಳು ಪೂರ್ಣ ಬೆಳವಣಿಗೆಯನ್ನು ಪಡೆದಕೂಡಲೇ ಅವತಾರಪುರುಷನು ತನ್ನ ಈಗಿನ ಅವತಾರದ ಉದ್ದೇಶವೇನು ಎಂಬುದನ್ನು ಅರ್ಥ

ಮಾಡಿಕೊಳ್ಳುವನು. ಧರ್ಮಸಂಸ್ಥಾಪನೆಗೋಸ್ಕರವೇ ತಾನು ಬಂದಿರುವೆನೆಂದು ಅವನಿಗೆ ಅರಿವುಂಟಾಗುವುದು. ಈ ಉದ್ದೇಶದ ಸಫಲತೆಗೆ ಏನೇನು ಅನುಕೂಲತೆಗಳು ಬೇಕೊ ಅವೆಲ್ಲ ಹೇಗೋ ಎಲ್ಲಿಂದಲೊ ಯಾರಿಗೂ ತಿಳಿಯದ ರೀತಿಯಲ್ಲಿ ಒದಗಿಬರುವುವು. ಸಾಧಾರಣ ಮನುಷ್ಯರಿಗೆ ಅಂಧಕಾರಮಯವಾಗಿ ಕಾಣುವ ಮಾರ್ಗ ಅವನಿಗೆ ಅತ್ಯಂತ ಪ್ರಕಾಶಮಯವಾಗಿ ಕಾಣುವುದು. ಆ ಮಾರ್ಗದಲ್ಲಿ ಅವನು ತ್ವರಿತಗತಿಯಲ್ಲಿ ಮುಂದು ವರಿದು ಪರಮಗುರಿಯನ್ನು ಮುಟ್ಟಿ ಜನಸಾಮಾನ್ಯರನ್ನು ಅದೇ ಮಾರ್ಗದಲ್ಲಿ ತೊಡಗಿ ಸುವನು. ಹೀಗೆ ಮಾಯಾತೀತ ಬ್ರಹ್ಮಸ್ವರೂಪವನ್ನೂ ಮತ್ತು ಜಗತ್ಕಾರಣನಾದ ಈಶ್ವರನನ್ನೂ ಪಡೆಯಲು ಹಿಂದೆ ಇರದ ಹೊಸ ಮಾರ್ಗಗಳನ್ನು ಅವನು ಯುಗ ಯುಗದಲ್ಲಿಯೂ ಮತ್ತೆ ಮತ್ತೆ ಆವಿಷ್ಕರಿಸುವನು.

12. ಅವತಾರಪುರುಷನ ಗುಣ, ಕರ್ಮ, ಸ್ವಭಾವಗಳನ್ನು ನಿರೂಪಿಸುವುದರಲ್ಲಷ್ಟೇ ಸಂತೃಪ್ತರಾಗದೆ ಪುರಾಣಕಾರರು ಅವನ ಆವಿರ್ಭಾವದ ಕಾಲವನ್ನೂ ವಿವರಿಸಿರುವರು. ಯಾವಾಗ ಧರ್ಮವು ಕಾಲಪ್ರಭಾವದಿಂದ ಗ್ಲಾನಿಗೊಳಗಾಗುವುದೊ, ಯಾವಾಗ ಮಾನವನು ಮಾಯೆಯ ಪ್ರಭಾವಕ್ಕೆ ವಶನಾಗಿ ಐಹಿಕ ಸುಖವನ್ನೇ ಸರ್ವಸ್ವವೆಂದೆಣಿಸಿ ಆತ್ಮ, ಈಶ್ವರ, ಮುಕ್ತಿ ಮುಂತಾದ ಇಂದ್ರಿಯಾತೀತ ನಿತ್ಯಸತ್ಯಗಳೆಲ್ಲ ಭ್ರಮೆಯೆಂದೂ, ಕವಿಕಲ್ಪನೆಗಳೆಂದೂ ಭಾವಿಸುತ್ತಾನೊ, ಮತ್ತು ಛಲ ಬಲ ಕೌಶಲಗಳಿಂದ ಲೌಕಿಕ ಸಂಪತ್ತನ್ನು ಪಡೆದೂ, ಇಂದ್ರಿಯ ಸುಖಗಳನ್ನು ಸರ್ವಪ್ರಕಾರದಲ್ಲಿ ಅನುಭವಿಸಿಯೂ ಸಂತೃಪ್ತಿಯನ್ನು ಪಡೆಯದೆ ಅಶಾಂತಿಯಿಂದ ತೊಳಲಾಡುವನೊ ಆಗ ಭಗವಂತನು ಅವತರಿಸಿ ಬರುವನು. ತನ್ನ ಮಹಿಮೆಯಿಂದ ಧರ್ಮವನ್ನು ಮತ್ತೆ ಉಜ್ವಲಗೊಳಿಸು ವನು ಮತ್ತು ಮಾನವನನ್ನು ಮತ್ತೆ ಧರ್ಮಮಾರ್ಗದಲ್ಲಿ ತೊಡಗಿಸುವನು. ಕಾರಣ ವಿಲ್ಲದೆ ಕಾರ್ಯವಿರುವುದಿಲ್ಲ. ಹಾಗೆಯೇ ಧರ್ಮವನ್ನು ಎತ್ತಿಹಿಡಿಯುವ ಪ್ರಯೋಜನ ವಿಲ್ಲದಿದ್ದರೆ ಈಶ್ವರನು ಶರೀರಗ್ರಹಣ ಮಾಡುವುದೇ ಇಲ್ಲ. ಆದರೆ ಅಧರ್ಮವು ಸಮಾಜದ ಪ್ರತಿಯೊಂದು ಅಂಗವನ್ನು ವ್ಯಾಪಿಸಿಕೊಂಡಾಗ ಭಗವಂತನ ಅನಂತ ಕರುಣೆಯೂ ಘನೀಭೂತಗೊಂಡು ಜಗದ್ಗುರುವಿನ ರೂಪದಲ್ಲಿ ಅವತರಿಸುವುದು. ಈ ರೀತಿ ಭಗವಂತನು ಮತ್ತೆ ಮತ್ತೆ ಅವತರಿಸಿರುವುದನ್ನು ಪ್ರತ್ಯಕ್ಷ ಕಂಡಿರುವುದ ರಿಂದಲೇ ಪುರಾಣಕಾರರು ಅವತಾರ ಸಿದ್ಧಾಂತವನ್ನು ರೂಪಿಸಿದರು.

13. ಆದ್ದರಿಂದ ಹೊಸ ಧರ್ಮ ಪ್ರವರ್ತಕನೂ, ಜಗದ್ಗುರುವೂ ಸರ್ವಜ್ಞನೂ ಆದ ಅವತಾರಪುರುಷನು ಯುಗಪ್ರಯೋಜನಕ್ಕಾಗಿಯೇ ಬರುವನು. ಧರ್ಮಕ್ಷೇತ್ರ ವಾದ ಭಾರತವು ಅನೇಕ ಯುಗಗಳಲ್ಲಿ ಅನೇಕಬಾರಿ ಅವತಾರಪುರುಷನ ಪುಣ್ಯ ಸ್ಪರ್ಶ ದಿಂದ ಪವಿತ್ರಗೊಂಡಿರುವುದು. ಧರ್ಮಸಂಸ್ಥಾಪನೆಯ ಆವಶ್ಯಕತೆಯಿದ್ದರೆ ಈಗಲೂ ಅಂತಹ ಅವತಾರವಾಗುವುದನ್ನು ಕಾಣಬಹುದು. ಕೇವಲ ನಾನ್ನೂರು ವರ್ಷಗಳ ಹಿಂದೆ ಶ್ರೀಕೃಷ್ಣಚೈತನ್ಯನು ಅಪೂರ್ವ ಮಹಿಮೆಯಿಂದ ಕೂಡಿದವನಾಗಿ ಶ್ರೀಹರಿನಾಮ ಸಂಕೀರ್ತನೆಯಲ್ಲಿ ಉನ್ಮತ್ತನಾಗಿದ್ದ ವಿಷಯ ಲೋಕಪ್ರಸಿದ್ಧವಾಗಿದೆ. ಮತ್ತೆ ಅಂತಹ

ಕಾಲ ಒದಗಿಬಂದಿದೆಯೆ ? ವಿದೇಶೀಯರ ತಾತ್ಸಾರಕ್ಕೆ ಒಳಗಾಗಿರುವ, ಗೌರವ ಘನತೆಯನ್ನು ಕಳೆದುಕೊಂಡಿರುವ, ದಾರಿದ್ರ್ಯದಿಂದ ನರಳುತ್ತಿರುವ ಭಾರತವು ಕರುಣಾಮಯ ಭಗವಂತನ ಅವತರಣಕ್ಕೆ ಸನ್ನದ್ಧವಾಗಿರುವುದೇ ? ಈಗ ನಾವು ವರ್ಣಿಸಲಿರುವ ಮಹಾಪುರುಷನ ಜೀವನವನ್ನು ಪರಿಶೀಲಿಸಿದಾಗ ಅಂತಹ ಪರಿಸ್ಥಿತಿ ಸನ್ನಿಹಿತವಾಗಿದೆಯೆನಿಸುವುದು. ಶ್ರೀರಾಮ, ಶ್ರೀಕೃಷ್ಣ ಮುಂತಾದ ರೂಪಗಳಲ್ಲಿ ಹಿಂದೆ ಅವತರಿಸಿ ಧರ್ಮ ಸಂಸ್ಥಾಪನೆ ಮಾಡಿದ ಭಗವಂತನು ವರ್ತಮಾನಕಾಲದ ಯುಗಪ್ರಯೋಜನಕ್ಕಾಗಿ ಮತ್ತೆ ಅವತರಿಸಿ ಭಾರತವನ್ನು ಪಾವನಗೊಳಿಸಿರುವನು.

ಮೊದಲನೆಯ ಅಧ್ಯಾಯ

ಯುಗ–ಪ್ರಯೋಜನ

1. ವರ್ತಮಾನಕಾಲದಲ್ಲಿ ಮಾನವನ ಪ್ರಗತಿ ಮತ್ತು ಶಕ್ತಿ 2. ಈ ಪ್ರಗತಿ ಮತ್ತು ಶಕ್ತಿಯ ಕೇಂದ್ರವಾದ ಪಾಶ್ಚಾತ್ಯ ಭಾವನೆಗಳು ಪೂರ್ವದಲ್ಲಿ ಹರಡುವಿಕೆ. 3. ಪ್ರಗತಿಯ ಪ್ರತಿಫಲವನ್ನು ಪಾಶ್ಚಾತ್ಯ ಜೀವನದ ಆಧಾರದ ಮೇಲೆ ನಿರ್ಣಯಿಸಬೇಕು. 4. ಪಾಶ್ಚಾತ್ಯದಲ್ಲಿ ಈ ಪ್ರಗತಿಯ ಕಾರಣ ಮತ್ತು ಇತಿಹಾಸ. 5. ಆತ್ಮಜ್ಞಾನದ ವಿಷಯದಲ್ಲಿ ಪಾಶ್ಚಾತ್ಯರ ಅಜ್ಞಾನ—ಇದರಿಂದಾಗಿ ಅಶಾಂತಿ. 6. ಪಾಶ್ಚಾತ್ಯರಂತೆ ಪ್ರಗತಿಯನ್ನು ಸಾಧಿಸಲು ಪ್ರಯತ್ನಿಸಿದರೆ ಸ್ವಾರ್ಥತೆ ಮತ್ತು ಭೋಗಲಾಲಸೆ ಉಂಟಾಗುತ್ತದೆ. 7. ಸನಾತನ ಭಾರತದ ರಾಷ್ಟ್ರಜೀವನದ ತಳಹದಿ. 8. ಧರ್ಮವೇ ಆ ತಳಹದಿಯಾಗಿದ್ದುದರಿಂದ ಭೋಗಸಾಧನ ಸಮಾಜದ ಆದರ್ಶವಾಗಿರಲಿಲ್ಲ. 9. ಪಾಶ್ಚಾತ್ಯರಿಂದ ಭಾರತದ ಆಕ್ರಮಣ ಮತ್ತು ಅದರ ಪರಿಣಾಮ. 10. ಪಾಶ್ಚಾತ್ಯ ಆದರ್ಶದ ಹಿನ್ನೆಲೆಯಲ್ಲಿ ಭಾರತ ಪುನರುತ್ಥಾನದ ಪ್ರಯತ್ನ ಮತ್ತು ಅದರ ಫಲ. 11. ಭಾರತೀಯ ರಾಷ್ಟ್ರಜೀವನದ ಗುಣ ದೋಷಗಳು. 12. ವರ್ತಮಾನ ಧರ್ಮಗ್ಲಾನಿಗೆ ಪಾಶ್ಚಾತ್ಯ ಭಾವನೆಗಳ ಹರಡುವಿಕೆಯೇ ಕಾರಣ.

1. ವಿದ್ಯೆ, ಸಂಪತ್ತು ಮತ್ತು ಪುರುಷ ಪ್ರಯತ್ನ—ಇವುಗಳ ಸಹಾಯದಿಂದ ಭೂಮಿಯ ಮೇಲೆ ಎಲ್ಲೆಡೆಯಲ್ಲಿಯೂ ಮಾನವನು ತ್ವರಿತವಾಗಿ ಮುಂದುವರಿಯುತ್ತಿದ್ದಾನೆ ಎಂಬುದು ತುಂಬ ಸ್ಥೂಲ ದೃಷ್ಟಿಯವನಿಗೂ ಅರಿವಿಗೆ ಬರುವ ವಿಷಯವಾಗಿದೆ. ಯಾವುದೇ ಕ್ಷೇತ್ರದಲ್ಲೇ ಆಗಲಿ ಮನುಷ್ಯನ ಪ್ರಗತಿಗೆ ಒಂದು ಮಿತಿಯೇ ಇಲ್ಲದಂತಾಗಿದೆ. ಭೂಮಿ ನೀರುಗಳ ಮೇಲೆ ಓಡಾಡಿ ಸಾಕಾಗದೆ ಈಗ ಗಗನದಲ್ಲಿಯೂ ಹಾರಾಡುತ್ತಿದ್ದಾನೆ. ಅವನ ಕುತೂಹಲಕ್ಕೆ ಮಿತಿಯಿಲ್ಲದೆ ಸಮುದ್ರ ತಳವನ್ನೂ ಹೊಕ್ಕಿರುವನು, ಅಗ್ನಿಯನ್ನುಗುಳುವ ಜ್ವಾಲಾಮುಖಿಯ ರಹಸ್ಯವನ್ನೂ ತಿಳಿಯಹೊರಟಿರುವನು. ಪರ್ವತಗಳ ತುದಿಗೂ ಹೋಗಿ, ದೂರ ಸಾಗರದಲ್ಲಿ ಓಡಾಡಿ ಎಲ್ಲ ಪ್ರದೇಶಗಳ ಮಾಹಿತಿಗಳನ್ನು ತಿಳಿದಿರುವನು. ಭೂಮಿಯ ಮೇಲಿರುವ ಎಲ್ಲ ಬಗೆಯ ಗಿಡಬಳ್ಳಿ ವೃಕ್ಷಗಳೆಲ್ಲದರಲ್ಲಿ ತನ್ನದೇ ಪ್ರಾಣ ಸಂಚರಿಸುತ್ತಿರುವುದನ್ನು ಕಂಡುಕೊಂಡಿರುವನು. ಎಲ್ಲ ಪ್ರಕಾರದ ಪ್ರಾಣಿ ವರ್ಗಗಳನ್ನೂ ತನ್ನ ವಿಚಾರಶಕ್ತಿಗೆ ಒಳಪಡಿಸಿ ಅವುಗಳ ಜ್ಞಾನವನ್ನು ಪಡೆದಿರುವನು. ಹೀಗೆ ಪೃಥ್ವಿ ಜಲ ತೇಜಾಸ್ಸಾದಿ ಪಂಚಭೂತಗಳ

ಮೇಲೆ ತನ್ನ ಆಧಿಪತ್ಯವನ್ನು ಸ್ಥಾಪಿಸಿ ಬಹುಶಃ ಪೃಥ್ವಿಯ ಸಮಸ್ತ ವಿಷಯವನ್ನೂ ಅರಿತವನಾಗಿ, ಅಷ್ಟರಿಂದಲೇ ತೃಪ್ತನಾಗದೆ ಬಹುದೂರದ ಗ್ರಹ ನಕ್ಷತ್ರಗಳ ಕಡೆ ತನ್ನ ದೃಷ್ಟಿಯನ್ನು ಹಾಯಿಸಿ ಅವುಗಳ ಜ್ಞಾನವನ್ನು ಪಡೆಯುವುದರಲ್ಲಿ ಸಮರ್ಥನಾಗು ತ್ತಿದ್ದಾನೆ. ಅಂತರ್ಜಗತ್ತಿನ ಅನ್ವೇಷಣೆಯಲ್ಲಿಯೂ ಅವನು ಹಿಂದೆಬಿದ್ದಿಲ್ಲ. ಪ್ರಯೋಗ ಸಂಶೋಧನೆಗಳ ಮೂಲಕ ಮಾನವನು ನೂತನ ಸಿದ್ಧಾಂತಗಳನ್ನು ರೂಪಿಸುತ್ತಿರುವನು. ಜೀವನ ರಹಸ್ಯವನ್ನು ಬಗೆಹರಿಸುತ್ತ ಒಂದು ವರ್ಗದ ಪ್ರಾಣಿ ಇನ್ನೊಂದು ವರ್ಗವಾಗಿ ವಿಕಾಸ ಹೊಂದುವುದೆಂದು ಕಂಡುಹಿಡಿದನು. ಶರೀರ ಮನಸ್ಸುಗಳ ಸ್ವಭಾವವನ್ನು ಕುರಿತು ಆಲೋಚಿಸುತ್ತ ಮನಸ್ಸೂ ಜಡವಸ್ತುವಿನಿಂದಲೇ ಆಗಿದೆ ಎಂದು ವಾದಿಸಿದನು. ಜಡಜಗತ್ತಿನಲ್ಲಿಯಂತೆ ಅಂತರ್ಜಗತ್ತಿನಲ್ಲಿಯೂ ಪ್ರತಿಯೊಂದು ಘಟನೆಯೂ ನಿರ್ದಿಷ್ಟ ನಿಯಮಾನುಸಾರವಾಗಿ ನಡೆಯುವುದೆಂದು ತಿಳಿದನು. ಆತ್ಮಹತ್ಯಾದಿ ಅಸಂಬದ್ಧ ಮನೋವಿಕಾರಗಳ ಹಿಂದೆಯೂ ಸೂಕ್ಷ್ಮ ನಿಯಮಗಳು ಕೆಲಸ ಮಾಡುತ್ತಿವೆಯೆಂದು ಕಂಡುಕೊಂಡನು. ವ್ಯಕ್ತಿಗತ ಜೀವನದ ಚಿರ ಅಸ್ತಿತ್ವದ ಸಂಬಂಧದಲ್ಲಿ ಯಾವರೀತಿಯ ನಿಶ್ಚಿತವಾದ ಪ್ರಮಾಣವೂ ಅವನಿಗೆ ದೊರೆಯದೆ ಹೋದರೂ ಇತಿಹಾಸದ ಅಧ್ಯಯನದ ಮೂಲಕ ಮಾನವಜಾತಿಯ ಅನುಕ್ರಮ ವಿಕಾಸದ ಸುಳಿವನ್ನು ಪಡೆದಿರುವನು. ವ್ಯಕ್ತಿಗತ ಜೀವನದ ಸಾರ್ಥಕತೆಯನ್ನು ಈ ರೀತಿಯ ಜಾತಿಗತ ಜೀವನದಲ್ಲಿ ಕಂಡುಕೊಂಡು ಅದರ ಸಫಲತೆಗಾಗಿ ವಿಜ್ಞಾನ ಮತ್ತು ಶಿಕ್ಷಣಗಳ ಸಹಾಯದೊಂದಿಗೆ ಅಜ್ಞಾನದ ವಿರುದ್ಧ ದಿಟ್ಟ ಹೋರಾಟ ನಡೆಸಿರುವನು. ನಿರಂತರ ಹೋರಾಟದಿಂದಲೇ ಅನಂತ ಉನ್ನತಿ ಯೆಂದು ಭಾವಿಸಿ ಒಳಹೊರ ಜಗತ್ತಿನ ಅಗೋಚರ ಪ್ರದೇಶಗಳನ್ನೆಲ್ಲ ತಲುಪುವ ಮಹತ್ವಾಕಾಂಕ್ಷೆಯಿಂದ ಮಾನವನು ಜೀವನ ನೌಕೆಯನ್ನು ವಾಸನಾಪ್ರವಾಹದಲ್ಲಿ ತೇಲಿ ಬಿಟ್ಟಿರುವನು.

2. ಈ ರೀತಿಯ ಜೀವನ ವಿಕಾಸವು ಪಾಶ್ಚಾತ್ಯ ದೇಶಗಳಿಗೆ ಅನ್ವಯಿಸುವು ದಾದರೂ ಅದರ ಪ್ರಭಾವ ಪ್ರಾಚ್ಯ ದೇಶಗಳಲ್ಲಿಯೂ ಗಮನಾರ್ಹವಾಗಿ ಕಂಡುಬರು ತ್ತಿದೆ. ವಿಜ್ಞಾನದ ಅದ್ಭುತ ಬೆಳವಣಿಗೆಯಿಂದ ಪ್ರಾಚ್ಯ ಪಾಶ್ಚಾತ್ಯಗಳ ನಡುವಿನ ಅಂತರ ಕಡಿಮೆಯಾಗುತ್ತಿದ್ದು ಪ್ರಾಚ್ಯ ಮಾನವನ ಸಾಂಪ್ರದಾಯಿಕ ಜೀವನದಲ್ಲಿ ದೊಡ್ಡ ಪರಿವರ್ತನೆಯುಂಟಾಗಿ ಪಾಶ್ಚಾತ್ಯ ಮಾದರಿಯನ್ನು ಅನುಸರಿಸತೊಡಗಿದ್ದಾನೆ. ಪರಿಣಾಮ ಏನೇ ಆದರೂ ಪಾಶ್ಚಾತ್ಯ ಚಿಂತನೆಗಳ ಪ್ರಭಾವ ಪ್ರಾಚ್ಯದೇಶಗಳ ಮೇಲೆ ಆಗಿದೆ ಎಂಬುದು ನಿಃಸಂದೇಹ ಹಾಗೂ ಮುಂದೆ ಒಂದು ಕಾಲದಲ್ಲಿ ಬಹುಶಃ ಇಡೀ ಪ್ರಪಂಚ ಪಾಶ್ಚಾತ್ಯ ಭಾವನೆಗಳಿಂದ ತುಂಬಿ ಹೋಗಬಹುದು.

3. ಈ ಭಾವ ಪ್ರಸಾರದ ಗುಣ ದೋಷಗಳನ್ನು ನಿರ್ಣಯಿಸುವುದಕ್ಕೆ ನಾವು ಪಾಶ್ಚಾತ್ಯವನ್ನೇ ಪ್ರಧಾನವಾಗಿ ಅವಲಂಬಿಸಬೇಕಾಗಿದೆ. ಪಾಶ್ಚಾತ್ಯ ಮಾನವನ ಜೀವನ ವನ್ನು ವಿಶ್ಲೇಷಿಸಿ ನೋಡಿದಾಗ–ಈ ಪ್ರಸಾರದ ಮೂಲ ಯಾವುದು, ಇದರ ಸ್ವಭಾವ ವೈಶಿಷ್ಟ್ಯವೇನು, ಇದರ ಪ್ರಭಾವದಿಂದ ಪಾಶ್ಚಾತ್ಯ ಜೀವನದ ರೀತಿ ನೀತಿಗಳಲ್ಲಿ ಯಾವ

ರೀತಿಯ ಬದಲಾವಣೆಗಳು ಉಂಟಾಗಿವೆ ಮತ್ತು ಇದರ ಪರಿಣಾಮದಿಂದ ಮಾನವನು ಹೆಚ್ಚು ಸುಖಿಯಾಗಿರುವನೆ ಅಥವಾ ದುಃಖಿಯಾಗಿರುವನೆ--ಎಂಬುದನ್ನೆಲ್ಲಾ ಅರಿಯಬಹುದು. ಪಾಶ್ಚಾತ್ಯ ಜೀವನದ ಮೇಲೆ ಅದರ ಸತ್ ಅಥವಾ ದುಷ್ಪರಿಣಾಮಗಳನ್ನು ನಿರ್ಣಯಿಸಿದ ಮೇಲೆ ಇತರ ಕಡೆಗಳಲ್ಲಿ ಅದರ ಪರಿಣಾಮವನ್ನು ಕುರಿತು ಯೋಚಿಸಬಹುದು.

4. ಇತಿಹಾಸದಿಂದ ನಮಗೆ ಸ್ಪಷ್ಟವಾಗಿ ತಿಳಿಯುವುದೇನೆಂದರೆ ಅಸಹನೀಯ ಚಳಿಯಿಂದಾಗಿ ಅತಿ ಪ್ರಾಚೀನ ಕಾಲದಿಂದಲೂ ಪಾಶ್ಚಾತ್ಯದಲ್ಲಿ ದೇಹಬುದ್ಧಿ ದೃಢವಾಗಿ ಬೇರುಬಿಟ್ಟಿದೆ ಎಂಬುದು. ಒಂದು ಕಡೆ ಅದು ಅವರನ್ನು ಸ್ವಾರ್ಥಪರರನ್ನಾಗಿಸಿತು ಮತ್ತು ಇನ್ನೊಂದೆಡೆ ಸಹಕಾರ ಜೀವನದಿಂದ ಸ್ವಾರ್ಥಸಿದ್ಧಿ ಎಂಬುದನ್ನೂ ಅವರು ಮನಗಂಡರು. ಇದರಿಂದಾಗಿ ಅವರಲ್ಲಿ ಸ್ವಜಾತಿ ಪ್ರೀತಿ ಜಾಸ್ತಿಯಾಯಿತು. ಈ ಸ್ವಾರ್ಥಪರತೆ ಮತ್ತು ಸ್ವಜಾತ್ಯಾಭಿಮಾನ ಅವರಲ್ಲಿ ಅದಮ್ಯ ಉತ್ಸಾಹವನ್ನು ಕೆರಳಿಸಿ ಬೇರೆ ಎಲ್ಲ ಜನಾಂಗಗಳ ಮೇಲೆ ಪ್ರಭುತ್ವವನ್ನು ಸಾಧಿಸಿ ಆ ಜನಾಂಗಗಳ ಸಂಪತ್ತಿನಿಂದ ತಮ್ಮ ಜೀವನವನ್ನು ಸಮೃದ್ಧಗೊಳಿಸಿಕೊಳ್ಳುವಂತೆ ಪ್ರಚೋದಿಸಿತು. ಹೀಗೆ ಅವರ ಜೀವನ ಯಾತ್ರೆ ಸುಗಮವಾಗತೊಡಗಲು ಅವರಲ್ಲಿ ನಿಧಾನವಾಗಿ ಅಂತರ್ದೃಷ್ಟಿ ಬೆಳೆಯುತ್ತ ಹೋಯಿತು. ಆಗ ಅವರು ಕ್ರಮೇಣ ವಿದ್ಯೆ ಮತ್ತು ಸದ್ಗುಣ ಸಂಪನ್ನರಾಗತೊಡಗಿದರು. ಹೀಗೆ ಬದುಕಿನ ಹೋರಾಟಕ್ಕಿಂತ ಬೇರೆಯಾದ ಉಚ್ಚ ವಿಷಯಗಳ ಕಡೆ ಅವರ ಗಮನ ಹರಿಯತೊಡಗಿತು. ಆದರೆ ಈಗ ಅವರು ಒಂದು ಅಡಚಣೆಯನ್ನು ಎದುರಿಸಬೇಕಾಯಿತು. ಧರ್ಮಶ್ರದ್ಧೆ ಮತ್ತು ಪುರೋಹಿತಶಾಹಿ ಇವು ಅವರ ಸಂಸ್ಕೃತಿ ಮತ್ತು ನಾಗರೀಕತೆಯ ಮುನ್ನಡೆಗೆ ಅಡ್ಡಿಯಾದವು. ಹೊಸ ಹೊಸ ಜ್ಞಾನ ಸಂಪಾದನೆಯಿಂದ ಭಗವಂತನ ಪ್ರಕೋಪಕ್ಕೆ ಒಳಗಾಗಿ ನರಕಕ್ಕೆ ಹೋಗಬೇಕಾಗುವುದೆಂದು ಮತಾಂಧ ಪುರೋಹಿತರು ಹೆದರಿಸಿದರು. ಇಷ್ಟೇ ಅಲ್ಲದೆ ಅವರನ್ನು ಆ ದಿಕ್ಕಿನಲ್ಲಿ ಮುಂದುವರಿಯದಂತೆ ಮೊದಲು ಪುರೋಹಿತ ವರ್ಗದವರು ತಮ್ಮ ಎಲ್ಲ ಬಲ ಕುತಂತ್ರಗಳನ್ನೂ ಉಪಯೋಗಿಸಿದರು. ಆಗ ಪಾಶ್ಚಾತ್ಯ ಮಾನವನು ತನ್ನ ಗುರಿಯನ್ನು ಮುಟ್ಟುವ ಛಲದಿಂದ ಪುರೋಹಿತಶಾಹಿಯನ್ನೇ ದೂರತಳ್ಳಿದ. ಆದರೊಂದಿಗೆ ಶಾಸ್ತ್ರ ಮತ್ತು ಧರ್ಮವಿಶ್ವಾಸ ಇವುಗಳನ್ನೂ ಬದಿಗಿರಿಸಿ ನವೀನ ಮಾರ್ಗದಲ್ಲಿ ತನ್ನ ಜೀವನವನ್ನು ಮುಂದುವರಿಸಿಕೊಂಡು ಹೋದನು. ಪಂಚೇಂದ್ರಿಯಗ್ರಾಹ್ಯವಲ್ಲದ, ನಿಶ್ಚಿತ ಪ್ರಮಾಣವಿಲ್ಲದ ಯಾವುದನ್ನೂ ನಂಬಕೂಡದೆಂಬುದು ಅವನ ಮೂಲ ಮಂತ್ರವಾಯಿತು.

ಇಂದ್ರಿಯ ಪ್ರತ್ಯಕ್ಷವನ್ನು ಆಧರಿಸಿ ವಿಚಾರದ ಮೂಲಕವೇ ಎಲ್ಲ ವಿಷಯಗಳನ್ನೂ ನಿರ್ಣಯಿಸಬೇಕು ಎಂದು ಅವನು ನಿಶ್ಚಯಿಸಿದನು. ಇದರಿಂದಾಗಿ ಅವನು ವಿಷಯವಸ್ತುವಿನ ಉಪಾಸಕನಾದ, ಹಾಗೂ ವಿಷಯಿಯನ್ನೂ ವಿಷಯ ವಸ್ತುಗಳಲ್ಲಿ ಒಂದೆಂದು ಭಾವಿಸಿ ಹಿಂದೆ ಹೇಳಿದ ಪ್ರಮಾಣದ ಮೂಲಕವೇ ಅದರ ಸ್ವಭಾವವನ್ನು ತಿಳಿಯಲು ಪ್ರಯತ್ನಿಸಿದ. ಕಳೆದ ನಾನೂರು ವರ್ಷಗಳಿಂದಲೂ ಜಗತ್ತಿನ ಪ್ರತಿಯೊಂದು ವಸ್ತು

ವನ್ನೂ ಪಂಚೇಂದ್ರಿಯಗಳ ಮೂಲಕ ಗ್ರಹಿಸಲು ಅವನು ಪ್ರಯತ್ನಿಸುತ್ತಿರುವನು. ಇದರ ಪರಿಣಾಮವಾಗಿ ಹುಟ್ಟಿದ ಜಡವಿಜ್ಞಾನವು ಈಗ ತನ್ನ ಶೈಶವಾವಸ್ಥೆಯ ಜಡತೆ ಮತ್ತು ಅಸಹಾಯಕತೆಯಿಂದ ಮುಕ್ತವಾಗಿ ಯೌವನದ ಕ್ರಿಯಾಶೀಲತೆ, ಆಸೆ, ವೀರ್ಯೋತ್ಸಾಹಗಳಿಂದ ಮೆರೆಯುತ್ತಿದೆ.

5. ಆದರೆ ಹಿಂದೆ ಹೇಳಿದ ವಿಧಾನವು ಜಡವಿಜ್ಞಾನದಲ್ಲಿ ವಿಶೇಷ ಉನ್ನತಿಯನ್ನು ಸಾಧಿಸಲು ಸಮರ್ಥವಾದರೂ ಆತ್ಮವಿಜ್ಞಾನದಲ್ಲಿ ಅದು ದಾರಿಗಾಣದೆ ಹೋಯಿತು. ಏಕೆಂದರೆ ಸಂಯಮ, ಸ್ವಾರ್ಥರಾಹಿತ್ಯ ಮತ್ತು ಅಂತರ್ಮುಖತ್ವ ಇವುಗಳೇ ಈ ವಿಜ್ಞಾನವನ್ನು ಪಡೆಯುವ ಸಾಧನಗಳು. ಬಹಿರ್ಮುಖರಾದ ಪಾಶ್ಚಾತ್ಯರು ಈ ಕ್ಷೇತ್ರದಲ್ಲಿ ದಿಕ್ಕೆಟ್ಟವರಾಗಿ ದೇಹಾತ್ಮವಾದಿಗಳೂ ನಾಸ್ತಿಕರೂ ಆಗಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಇದರಿಂದಾಗಿ ಈಗ ಅವರ ಪಾಲಿಗೆ ಐಹಿಕ ಸುಖವೇ ಪರಮೋಚ್ಚವಾಗಿರುವುದು. ವಿಜ್ಞಾನದಿಂದ ಪಡೆದ ಪದಾರ್ಥಜ್ಞಾನವನ್ನೂ ಈ ಸುಖಕ್ಕಾಗಿಯೇ ಬಳಸಿಕೊಳ್ಳುತ್ತಿರುವರು. ಆದ್ದರಿಂದ ಪಾಶ್ಚಾತ್ಯ ದೇಶಗಳಲ್ಲಿ ಸಮಾಜಪದ್ಧತಿಯು ಹಣವನ್ನಾಧರಿಸಿರುವುದು, ಹಾಗೂ ಮಾರಕ ಅಸ್ತ್ರಗಳ ಸಂಗ್ರಹ ಅಲ್ಲಿ ವೃದ್ಧಿಸುತ್ತಿರುವುದು. ಒಂದು ಕಡೆ ಅಪಾರ ಸಂಪತ್ತು ಇನ್ನೊಂದು ಕಡೆ ಕಡು ದಾರಿದ್ರ್ಯ ; ಒಂದು ಕಡೆ ಅಸಂತೋಷ, ಇನ್ನೊಂದು ಕಡೆ ಧನಪಿಪಾಸೆ—ಇವುಗಳಿಂದ ಸಮಾಜದಲ್ಲಿ ಅಸಮಾನತೆ ತಾಂಡವವಾಡುತ್ತಿದೆ. ಹಿರಿತನದ ಹೆಮ್ಮೆಯಿಂದ ಪಾಶ್ಚಾತ್ಯ ದೇಶಗಳು ಪರದೇಶಗಳ ಮೇಲೆ ದಬ್ಬಾಳಿಕೆ ನಡೆಸುತ್ತಿವೆ. ಭೋಗಸುಖದ ಚರಮಾವಸ್ಥೆಯನ್ನು ಮುಟ್ಟಿದರೂ ಆತ್ಮತೃಪ್ತಿ ಅಲ್ಲಿ ಕಂಡುಬರುತ್ತಿಲ್ಲ. ಅಲ್ಲಿಯ ವಿಚಾರವಂತರು, ಪಂಚೇಂದ್ರಿಯದಿಂದ ಉಂಟಾಗುವ ಜ್ಞಾನವು ದೇಶಕಾಲಾತೀತವಾದ ವಸ್ತುವಿನ ವಿಷಯದಲ್ಲಿ ಯಾವ ಮಾಹಿತಿಯನ್ನೂ ನೀಡದು ಎಂಬುದನ್ನು ಮನಗಾಣುತ್ತಿದ್ದಾರೆ. ವಿಜ್ಞಾನವು ಆ ವಸ್ತುವಿನ ಕ್ಷಣಿಕ ಆಭಾಸವನ್ನು ಮಾತ್ರ ನೀಡಿ ಅದನ್ನು ಗ್ರಹಿಸುವುದು ತನಗಸಾಧ್ಯವೆಂದು ನಿವೃತ್ತವಾಗುತ್ತದೆ. ಯಾವ ದೇವತೆಯ ಬಲದಿಂದ ಪಾಶ್ಚಾತ್ಯರು ಇಷ್ಟು ಕಾಲವೂ ತಮ್ಮನ್ನು ಬಲಿಷ್ಠರೆಂದು ಭಾವಿಸಿದ್ದರೋ, ಯಾರ ಅನುಗ್ರಹದಿಂದ ಸುಖ ಸಂಪತ್ತುಗಳನ್ನು ಅನುಭವಿಸಿದರೋ ಆ ದೇವತೆಯೇ ಈಗ ಪರಾಭವಗೊಂಡು ಅವರ ಆಂತರಿಕ ಹಾಹಾಕಾರ ದಿನದಿನವೂ ಹೆಚ್ಚಾಗುತ್ತಿದೆ.

6. ಪಾಶ್ಚಾತ್ಯ ಜೀವನದ ಈ ಒಂದು ಕಿರುನೋಟದಿಂದ ನಮಗೆ ತಿಳಿಯುವುದೇನೆಂದರೆ, ಅವರ ನಾಗರಿಕತೆಯ ಮೂಲ ವಿಷಯಪ್ರವಣತೆ, ಸ್ವಾರ್ಥಪರತೆ ಮತ್ತೆ ಧರ್ಮದಲ್ಲಿ ಅವಿಶ್ವಾಸ ಎಂಬುದು. ಆದ್ದರಿಂದ ವ್ಯಕ್ತಿ ಮತ್ತು ರಾಷ್ಟ್ರ ಜೀವನದಲ್ಲಿ ಪಾಶ್ಚಾತ್ಯರು ಪಡೆದ ಫಲವನ್ನು ಪಡೆಯಬೇಕಾದರೆ ಬೇರೆ ದೇಶದವರೂ ಅದೇ ಆಧಾರದ ಮೇಲೆ ತಮ್ಮ ಜೀವನವನ್ನೂ ರೂಪಿಸಿಕೊಳ್ಳಬೇಕು. ಜಪಾನ್ ಮುಂತಾದ ಕೆಲವು ಪ್ರಾಚ್ಯ ರಾಷ್ಟ್ರಗಳು ಪಾಶ್ಚಾತ್ಯ ಮಾದರಿಯಲ್ಲಿ ತಮ್ಮ ರಾಷ್ಟ್ರವನ್ನು ಕಟ್ಟಲು ಹೋಗಿರುವುದರಿಂದ ಹಿಂದೆ ಹೇಳಿದ ದೋಷಗಳೆಲ್ಲವೂ ಅಲ್ಲಿ ಕಾಣಿಸಿಕೊಳ್ಳುತ್ತಿವೆ.

ಪಾಶ್ಚಾತ್ಯ ಭಾವನೆಗಳ ಪ್ರಭಾವಕ್ಕೆ ಒಳಗಾಗುವುದರಿಂದ ಆಗುವ ಕೆಡಕು ಇದು. ಪಾಶ್ಚಾತ್ಯ ಸಂಸರ್ಗದಿಂದ ನಮ್ಮ ರಾಷ್ಟ್ರೀಯ ಜೀವನದಲ್ಲಿ ಉಂಟಾಗುತ್ತಿರುವ ಪರಿವರ್ತನೆಯನ್ನು ಗಮನಿಸಿದಾಗ ಈ ವಿಷಯ ಇನ್ನೂ ಸ್ಪಷ್ಟವಾಗುತ್ತದೆ.

7. ಈಗ ಒಂದು ಪ್ರಶ್ನೆ ಏಳುವುದು—ಪಾಶ್ಚಾತ್ಯ ಸಂಪರ್ಕ ಉಂಟಾಗುವುದಕ್ಕೆ ಮುಂಚೆ ಭಾರತದಲ್ಲಿ ಒಂದು ರಾಷ್ಟ್ರೀಯ ಜೀವನ ಎಂಬುದು ಇತ್ತೆ ? ಆ ರೀತಿ ಅದನ್ನು ಕರೆಯದಿದ್ದರೂ ಅದರ ಎಲ್ಲ ಅಂಶಗಳನ್ನು ನಾವು ಸ್ಪಷ್ಟವಾಗಿ ಕಾಣಬಹುದು. ಆಗಲೂ ಕೂಡ ಗುರು, ಗಂಗಾ ಗಾಯತ್ರೀ-ಇವುಗಳ ಮೇಲಿನ ಶ್ರದ್ಧಾಭಕ್ತಿಯನ್ನು ಭಾರತದುದ್ದಕ್ಕೂ ಕಾಣಬಹುದಿತ್ತು ; ಗೋಪೂಜೆಯು ಎಲ್ಲೆಲ್ಲಿಯೂ ಕಂಡುಬರುತ್ತಿತ್ತು ; ರಾಮಾಯಣ ಮಹಾಭಾರತಾದಿ ಧರ್ಮ ಗ್ರಂಥಗಳು ಆಬಾಲ ವೃದ್ಧರಿಗೆ ಸಮಾನವಾಗಿ ಹೃದಯ ಸ್ಪರ್ಶಿಯಾಗಿದ್ದುವು ಮತ್ತು ಅವರ ಜೀವನಕ್ಕೆ ಒಂದು ಮಾದರಿಯಾಗಿದ್ದುವು; ಹಾಗೂ ದೇಶದ ವಿವಿಧ ಭಾಗಗಳ ವಿದ್ವಾಂಸರುಗಳು ಸಂಸ್ಕೃತ ಭಾಷೆಯಲ್ಲಿ ತಮ್ಮ ವಿಚಾರ ವಿನಿಮಯ ಮಾಡಲು ಸಮರ್ಥರಾಗಿದ್ದರು ಈ ರೀತಿ ಅನೇಕ ಏಕತಾಸೂತ್ರಗಳನ್ನು ನಾವು ಉಲ್ಲೇಖಿಸಬಹುದು. ಧರ್ಮಭಾವ ಮತ್ತು ಧರ್ಮಾನುಷ್ಠಾನ--ಇವು ಏಕತೆಯ ಪ್ರಮುಖ ಅವಲಂಬನೆಯಾಗಿದ್ದವು ಎಂಬುದಂತೂ ಸಂಶಯ ದೂರವಾದುದು.

8. ಭಾರತದ ರಾಷ್ಟ್ರೀಯ ಜೀವನ ಧರ್ಮಾವಲಂಬಿಯಾಗಿದ್ದುದರಿಂದಲೇ ಸಂಯಮವು ಅದರ ನಾಗರಿಕತೆಯ ಒಂದು ಮುಖ್ಯ ವೈಶಿಷ್ಟ್ಯವಾಗಿದೆ. ಅದೇ ಅದರ ಪ್ರಾಣ ಸ್ವರೂಪ. ವ್ಯಕ್ತಿ ಮತ್ತು ರಾಷ್ಟ್ರ ಎರಡೂ ಸಂಯಮದ ಮೂಲಕ ತಮ್ಮ ಜೀವನವನ್ನು ನಿಯಂತ್ರಿಸುವಂತೆ ಭಾರತ ಶಿಕ್ಷಣವಿತ್ತಿತು. ತ್ಯಾಗಕ್ಕಾಗಿಯೇ ಭೋಗ, ಪರಜೀವನಕ್ಕಾಗಿಯೇ ಇಹಜೀವನ—ಇದೇ ಯಾವಾಗಲೂ ಎಲ್ಲರ ಸ್ಮರಣೆಯಲ್ಲಿತ್ತು, ವ್ಯಕ್ತಿ ಮತ್ತು ರಾಷ್ಟ್ರದ ವ್ಯಾವಹಾರಿಕ ಜೀವನವು ಇದನ್ನೇ ಲಕ್ಷ್ಯವಾಗಿ ಹೊಂದಿತ್ತು. ಇದರಿಂದಾಗಿ ಭಾರತೀಯ ಜಾತಿಪದ್ಧತಿಯು ಯಾವುದೇ ಶ್ರೇಣಿಯವರಿಗೂ ಅಸಂತೋಷವನ್ನುಂಟುಮಾಡಲಿಲ್ಲ. ಏಕೆಂದರೆ ಮಾನವನು ಯಾವುದೇ ಶ್ರೇಣಿ ಅಥವಾ ಸ್ತರದಲ್ಲಿ ಜನಿಸಿರಲಿ, ಅವನು ತನ್ನ ಪಾಲಿನ ಕರ್ತವ್ಯವನ್ನು ನಿಷ್ಕಾಮಭಾವದಿಂದ ಮಾಡುತ್ತ ಇತರರೊಡನೆ ಸಹಬಾಳ್ವೆ ನಡೆಸುತ್ತ ಜೀವನದ ಪರಮೋದ್ದೇಶವನ್ನು ಸಾಧಿಸಲು ಪ್ರಯತ್ನಿಸುತ್ತಿದ್ದರೆ ಆಗ ಅಸಂತೋಷಕ್ಕೆ ಎಡೆ ಎಲ್ಲಿ ? ಬೇರೆ ಬೇರೆ ಶ್ರೇಣಿಯವರ ಭೋಗಸುಖದಲ್ಲಿ ಕಂಡುಬರುವ ತಾರತಮ್ಯವು ಪಾಶ್ಚಾತ್ಯ ದೇಶದಲ್ಲಿಯಂತೆ ಭಾರತದಲ್ಲಿ ವಿರೋಧ ಭಾವನೆಗೆ ಅವಕಾಶವೀಯಲಿಲ್ಲ. ಇದಕ್ಕೆ ಕಾರಣ ಜೀವನದ ಆತ್ಯಂತಿಕ ಗುರಿಯು ಸಮಾಜದ ಪ್ರತಿಯೊಬ್ಬನಿಗೂ ಸಮಾನವಾಗಿದ್ದುದು. ಪ್ರಾಚೀನ ಭಾರತದ ರಾಷ್ಟ್ರೀಯ ಜೀವನದ ಸ್ವರೂಪವನ್ನು ಮನಸ್ಸಿಗೆ ತಂದುಕೊಂಡಾಗ ಪಾಶ್ಚಾತ್ಯ ಸಂಸರ್ಗದಿಂದ ಇಂದಿನ ಜೀವನ ಎಷ್ಟರಮಟ್ಟಿಗೆ ಪರಿವರ್ತಿತವಾಗಿದೆ ಎಂಬುದರ ಸ್ಪಷ್ಟ ಚಿತ್ರ ನಮಗೆ ಸಿಗುವುದು.

9. ಭಾರತ ಪಾಶ್ಚಾತ್ಯರ ಅಧೀನಕ್ಕೆ ಒಳಪಟ್ಟಂದಿನಿಂದ ರಾಷ್ಟ್ರ ಸಂಪತ್ತಿನ ವಿತರಣೆಯಲ್ಲಿ ವಿಶೇಷ ಪರಿವರ್ತನೆಯಾಗಿದೆ. ಆದರೆ ಪಾಶ್ಚಾತ್ಯರ ಪ್ರಭಾವ ಇದನ್ನೂ ಮೀರಿಹೋಗಿದೆ. ಪ್ರಾಚೀನಕಾಲದಿಂದ ಯಾವ ಮೌಲ್ಯಗಳು ಜೀವನಕ್ಕೆ ಆಧಾರವಾಗಿದ್ದುವೊ ಅವುಗಳು ಪಾಶ್ಚಾತ್ಯರ ಪ್ರಭಾವಕ್ಕೆ ಒಳಗಾಗಿ ಒಂದು ಅಪೂರ್ವ ಭಾವ ಪರಿವರ್ತನೆ ಉಂಟಾಗಿದೆ. ತ್ಯಾಗಕ್ಕಾಗಿ ಭೋಗ ಎನ್ನುವುದು ಪುರೋಹಿತ ವರ್ಗದವರು ಸ್ವಾರ್ಥ ಸಾಧನೆಗಾಗಿ ಇರುವಂತಹುದು ಎಂದು ಪಾಶ್ಚಾತ್ಯರು ಬೋಧಿಸಿದರು. ಮರಣಾತೀತ ಜೀವನ ಮತ್ತು ಆತ್ಮದ ಅಸ್ತಿತ್ವ ಇವೆಲ್ಲ ಅದ್ಭುತ ಕವಿಕಲ್ಪನೆಗಳು—ಎಂದರು. ಮಾನವನು ಸಮಾಜದ ಯಾವ ಸ್ತರದಲ್ಲಿ ಜನಿಸಿರುತ್ತಾನೊ ಸಾಯುವವರೆಗೂ ಅವನು ಅದೇ ಮಟ್ಟದಲ್ಲೆ ಇರಬೇಕು ಎನ್ನುವುದು ಘೋರ ಅನ್ಯಾಯ—ಎಂದು ಘೋಷಿಸಿದರು. ಭಾರತ ಕ್ರಮೇಣ ಇದನ್ನು ಒಪ್ಪತೊಡಗಿತು. ತ್ಯಾಗ ಹಾಗೂ ಸಂಯಮದಿಂದ ಕೂಡಿದ ಜೀವನ ವಿಧಾನವನ್ನು ಕಡೆಗಣಿಸಿ ಭೋಗ ಜೀವನವನ್ನು ಸ್ವೀಕರಿಸಿತು. ಹೀಗೆ ಹಿಂದಿನ ಮೂಲ ಶಿಕ್ಷಣದಿಂದ ಚ್ಯುತರಾಗಿ ನಾಸ್ತಿಕತೆ, ಪರಾನುಕರಣೆ ಮತ್ತು ಆತ್ಮವಿಶ್ವಾಸ ಹೀನತೆ--ಇವುಗಳಿಂದ ಕೂಡಿದವರಾಗಿ ಭಾರತೀಯರು ಬೆನ್ನೆಲುಬಿಲ್ಲದ ಪ್ರಾಣಿಗಳಂತೆ ನಿರ್ವೀರ್ಯರಾದರು. ಅವರು ಇದುವರೆಗೂ ಯಾವುದನ್ನು ನೆಚ್ಚಿಕೊಂಡು, ಪರಮೋಚ್ಚ ಆದರ್ಶವೆಂದು ಅನುಸರಿಸುತ್ತಿದ್ದರೊ, ಅದೆಲ್ಲಾ ಭ್ರಮೆ ಎಂದು ಅವರಿಗೆ ಅನ್ನಿಸತೊಡಗಿತು. ವಿಜ್ಞಾನದ ಬಲದಿಂದ ಪಾಶ್ಚಾತ್ಯರು ತಮ್ಮ ಎಲ್ಲ ರೀತಿನೀತಿಗಳನ್ನು ಅಸಾಂಸ್ಕೃತಿಕ ಮತ್ತು ಅನಾಗರೀಕ ಎಂದು ಕರೆಯುತ್ತಿರುವುದರಲ್ಲಿ ಸತ್ಯಾಂಶವಿದೆ ಎಂದು ಅವರು ಭಾವಿಸತೊಡಗಿದರು. ತಮ್ಮ ಹಿಂದಿನ ಇತಿಹಾಸವನ್ನೂ, ಸಾಂಸ್ಕೃತಿಕ ಹಿರಿಮೆಯನ್ನೂ, ಮರೆತರು. ಮತ್ತೆ ಪರಾಧೀನತೆಯ ಕಾರಣದಿಂದ ಐಹಿಕವಾದ ಭೋಗ ಲಾಭವೂ ಅವರಿಗೆ ಇಲ್ಲದಂತಾಯಿತು. ಹೀಗೆ ಯೋಗ ಭೋಗಗಳೆರಡೂ ಅವರಿಗೆ ಇಲ್ಲವಾಯಿತು. ಅವರ ಜೀವನ ಪರಾನುಕರಣೆಯ ಬಿರುಗಾಳಿಯಲ್ಲಿ ಅಂಬಿಗನಿಲ್ಲದ ನೌಕೆಯಂತೆ ಗೊತ್ತುಗುರಿಯನ್ನು ಕಳೆದುಕೊಂಡಿತು.

10. ಆಗ ಭಾರತದಲ್ಲಿ ರಾಷ್ಟ್ರೀಯ ಜೀವನವೆಂಬುದು ಯಾವಾಗಲೂ ಇರಲೇ ಇಲ್ಲ ಎಂದು ಎಲ್ಲೆಲ್ಲಿಯೂ ಕೂಗು ಕೇಳಿಸತೊಡಗಿತು. ಪಾಶ್ಚಾತ್ಯರ ಕೃಪೆಯಿಂದ ಇದು ಈಗ ಉದಯಿಸುತ್ತಿದೆ, ಮತ್ತು ಇದರ ಪೂರ್ಣಾವಿರ್ಭಾವ ಇನ್ನೂ ಆಗಬೇಕಷ್ಟೆ. ಅನಿವಾರ್ಯವಾದ ಅಳಿಸಲಾಗದ ಧರ್ಮ ಸಂಸ್ಕಾರವೇ ತಮ್ಮ ಸರ್ವನಾಶಕ್ಕೆ ಕಾರಣ. ಅಸಂಖ್ಯ ದೇವದೇವಿಯರ ಆರಾಧನೆ, ಈ ಮೂರ್ತಿ ಪೂಜೆ—ಇತ್ಯಾದಿಗಳು ತಮ್ಮನ್ನು ಮುಂದೆ ಬರಲು ಬಿಡಲಿಲ್ಲ. ಇದೆಲ್ಲ ನಾಶವಾದರೇನೇ ಭಾರತವು ಪುನಶ್ಚೇತನವನ್ನು ಪಡೆಯುವುದು. ಇವೇ ಮೊದಲಾದ ಭಾವನೆಗಳು ಜನರ ಮನಸ್ಸನ್ನು ಆವರಿಸಿದವು. ಕ್ರೈಸ್ತಧರ್ಮದ ಪ್ರಭಾವದಿಂದ ಏಕೇಶ್ವರವಾದ ಪ್ರಚಾರವಾಗತೊಡಗಿತು. ಪಾಶ್ಚಾತ್ಯ ಮಾದರಿಯಲ್ಲಿ ಸಭೆ ಸಮಿತಿಗಳನ್ನು ನಿರ್ಮಿಸಿ ರಾಜನೀತಿ ಸಮಾಜತತ್ತ್ವಗಳನ್ನು ಪ್ರಚಾರ ಮಾಡಿದರು ; ವಿಧವಾ ವಿವಾಹ, ಸ್ತ್ರೀ ಸ್ವಾತಂತ್ರ್ಯ ಮುಂತಾದ ಆಂದೋಲನಗಳು ತಲೆ

ಎತ್ತಿದುವು. ಆದರೆ ಒಂದು ರೀತಿಯ ಶೂನ್ಯತೆ, ಹಾಹಾಕಾರ ಇವೆಲ್ಲ ದಿನದಿಂದ ದಿನಕ್ಕೆ ಹೆಚ್ಚತೊಡಗಿದವು. ರೈಲ್ವೆ, ಟೆಲಿಗ್ರಾಫ್ ಮುಂತಾದ ಪಾಶ್ಚಾತ್ಯ ನಾಗರೀಕತೆಯ ಸೌಲಭ್ಯಗಳು ಭಾರತವನ್ನು ಪ್ರವೇಶಿಸಿದರೂ ಇವಾವುವೂ ಭಾರತವನ್ನು ಸತ್ವಪೂರ್ಣ ಗೊಳಿಸುವಲ್ಲಿ ಸಮರ್ಥವಾಗಲಿಲ್ಲ. ಸೂಕ್ತ ಔಷಧಿ ನೀಡದೆ ರೋಗ ಹೇಗೆ ಗುಣ ವಾದೀತು ? ಧರ್ಮವೇ ಪ್ರಾಣವಾಗಿರುವ ಭಾರತದ ಧರ್ಮ ಸಜೀವವಾಗದೆ ಭಾರತ ಸಜೀವವಾಗುವುದೆಂತು ? ಪಾಶ್ಚಾತ್ಯ ಭಾವಪ್ರಸಾರದಿಂದ ಆಗಿರುವ ಅಧೋಗತಿಯು ಅದರ ನಾಸ್ತಿಕತೆಯಿಂದ ಪರಿಹಾರವಾಗಲು ಹೇಗೆ ಸಾಧ್ಯ ?

11. ಪಾಶ್ಚಾತ್ಯರ ಆಳ್ವಿಕೆಗಿಂತ ಮೊದಲು ಭಾರತದ ರಾಷ್ಟ್ರೀಯ ಜೀವನದಲ್ಲಿ ಏನೂ ದೋಷವೇ ಇರಲಿಲ್ಲ ಎನ್ನುವಂತಿಲ್ಲ. ಆದರೆ ರಾಷ್ಟ್ರೀಯ ಶರೀರವು ಸುದೃಢ ವಾಗಿದ್ದುದರಿಂದ ಸ್ವತಃ ದೋಷವನ್ನು ಪರಿಹರಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿತ್ತು. ಈಗ ಆ ಸಾಮರ್ಥ್ಯದಲ್ಲಿ ಲೋಪವುಂಟಾಗಿದೆ. ದೇಶ ದುರ್ಬಲವಾಗಿರು ವುದರಿಂದ ಪಾಶ್ಚಾತ್ಯ ಭಾವಪ್ರಸಾರ ರೂಪದ ಔಷಧಿಯು ರೋಗವನ್ನು ಗುಣಪಡಿಸು ವುದರ ಬದಲು ರೋಗಿಯನ್ನೇ ಮುಗಿಸಿಬಿಡುತ್ತಿದೆ.

12. ಆದ್ದರಿಂದ ಪಾಶ್ಚಾತ್ಯ ದೇಶದ ಧರ್ಮಗ್ಲಾನಿ ಭಾರತವನ್ನೂ ಆವರಿಸಿದೆ ಎಂಬುದು ಸ್ಪಷ್ಟ. ಈ ಧರ್ಮಗ್ಲಾನಿ ಈಗ ಭೂಮಿ ಎಲ್ಲೆಡೆಯಲ್ಲಿಯೂ ಎಷ್ಟರ ಮಟ್ಟಿಗೆ ಪ್ರಬಲವಾಗಿದೆ ಎಂಬುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಧರ್ಮ ವೊಂದಿದೆ ಮತ್ತು ಅದರ ಸಿದ್ಧಿಯನ್ನು ಪಡೆಯಬಹುದು ಎಂಬ ಭಾವನೆಯಿಂದ ಭೋಗ ಪರಾಯಣನಾದ ಮಾನವನು ಈಗ ಬಹುದೂರ ಹೋಗಿರುವನು. ಇದರಿಂದಾಗಿಯೇ ಆಧುನಿಕ ವಿಜ್ಞಾನವು ಎಷ್ಟೇ ಭೋಗ ಸಾಧನಗಳನ್ನು ನೀಡಿದರೂ ಮಾನವನಿಗೆ ಶಾಂತಿ ಯನ್ನು ನೀಡಲು ಸಮರ್ಥವಾಗಲಿಲ್ಲ. ಇದನ್ನು ಪರಿಹರಿಸಬಲ್ಲವರು ಯಾರು ? ಭೂಮಿಯ ಮೇಲಿನ ಈ ಅಶಾಂತಿ ಹಾಹಾಕಾರದ ಧ್ವನಿ ಯಾರ ಹೃದಯದಲ್ಲಿ ಪ್ರತಿಧ್ವನಿತಗೊಂಡು ಅವರ ದಯೆಯು ಮೂರ್ತೀಭವಿಸಿ ಯುಗಪ್ರಯೋಜನಕ್ಕಾಗಿ ಹೊಸ ಧರ್ಮಮಾರ್ಗವನ್ನು ಪ್ರವರ್ತಿಸುವಂತಾಗುವುದು ? ಪ್ರಾಚ್ಯ ಪಾಶ್ಚಾತ್ಯಗಳ ಧರ್ಮಗ್ಲಾನಿಯನ್ನು ದೂರಗೊಳಿಸಿ ಶಾಂತಿಮಯ ಹೊಸ ಮಾರ್ಗದಲ್ಲಿ ಮಾನವನು ಜೀವನ ಸಾಗಿಸುವಂತೆ ಯಾರು ಬೋಧಿಸಬಲ್ಲರು ?

ಗೀತೆಯಲ್ಲಿ ಶ್ರೀಕೃಷ್ಣನು ಧರ್ಮೋದ್ಧಾರಕ್ಕಾಗಿ ತಾನು ಮತ್ತೆ ಮತ್ತೆ ಅವತರಿಸುವೆನೆಂದು ಹೇಳಿರುವನು. ವರ್ತಮಾನದ ದುಃಸ್ಥಿತಿ ಅವನ ಕರುಣೆಯನ್ನು ಮತ್ತೆ ಪ್ರಚೋದಿಸಲಾರದೆ ? ಮತ್ತೆ ಅವನು ದೇಹಧಾರಿಯಾಗುವಂತೆ ಮಾಡಲಾರದೆ?

ಎರಡನೆಯ ಅಧ್ಯಾಯ

ಕಾಮಾರಪುಕುರ್ ಮತ್ತು ಪೂರ್ವಜರು

1. ಬಡವರ ಮನೆಯಲ್ಲಿ ಭಗವಂತನು ಅವತರಿಸುವುದಕ್ಕೆ ಕಾರಣ 2. ಶ್ರೀ ರಾಮಕೃಷ್ಣರ ಹುಟ್ಟೂರಾದ ಕಾಮಾರಪುಕುರ್ 3. ಕಾಮಾರಪುಕುರ ಪ್ರದೇಶದ ಹಿಂದಿನ ಸಂಮೃದ್ಧಿ ಮತ್ತು ಈಗಿನ ಅವಸ್ಥೆ 4. ಆ ಗ್ರಾಮದಲ್ಲಿ ನಡೆಯುತ್ತಿದ್ದ ಧರ್ಮದೇವತೆಯ ಪೂಜೆ 5. ಹಾಲದಾರಪುಕುರ, ಭೂತೀರ್‌ಖಾಲ್, ಮಾವಿನ ತೋಪು ಇತ್ಯಾದಿಗಳ ವಿವರಣೆ 6. ಭೂರ್ಸುಭುವಿನ ಮಾಣಿಕರಾಜ್ 7. ಮಂದಾರಣ ಕೋಟೆ ಇತ್ಯಾದಿ 8. ದೇರೆ ಗ್ರಾಮದ ಜಮೀಂದಾರ ರಮಾನಂದ ರಾಯ್ 9. ದೇರೆಯ ಮಣಿಕರಾಮ ಚಟ್ಟೋಪಾಧ್ಯಾಯ 10. ಮಣಿಕರಾಮನ ಮಗ ಕ್ಷುದಿರಾಮ 11. ಕ್ಷುದಿರಾಮನ ಪತ್ನಿ ಚಂದ್ರಾದೇವಿ 12. ಜಮೀಂದಾರ ನೊಡನೆ ವಿವಾದದಿಂದ ಕ್ಷುದಿರಾಮನು ಆಸ್ತಿಯನ್ನು ಕಳೆದುಕೊಂಡನು 13. ಕ್ಷುದಿರಾಮನು ಸುಖಲಾಲ ಗೋಸ್ವಾಮಿಯ ಆಮಂತ್ರಣದ ಮೇರೆಗೆ ಕಾಮಾರ ಪುಕುರಕ್ಕೆ ಬರುತ್ತಾನೆ

1. ನಾವು ಯಾರುಯಾರನ್ನು ಅವತಾರಪುರುಷರೆಂದು ಇಂದು ಪೂಜಿಸು ತ್ತಿರುವೆವೊ ಅವರಲ್ಲಿ ಶ್ರೀರಾಮಚಂದ್ರ ಮತ್ತು ಗೌತಮಬುದ್ಧ—ಇವರನ್ನು ಹೊರತಾಗಿ ಮತ್ತೆಲ್ಲರೂ ದುಃಖ ದಾರಿದ್ರ್ಯ ಕಷ್ಟಮಯ ಪರಿಸರದಲ್ಲಿ ಜನಿಸಿದವರೇ. ಶ್ರೀಕೃಷ್ಣನು ರಾಜಕುಲದವನಾದರೂ ಕಾರಾಗೃಹದಲ್ಲಿ ಜನಿಸಿ ಗೋಪಾಲರೊಡನೆ ತನ್ನ ಬಾಲ್ಯಜೀವನ ನಡೆಸಬೇಕಾಯಿತು. ಯೇಸುಕ್ರಿಸ್ತನು ಒಂದು ಸತ್ರದ ಕುದುರೆಲಾಯದಲ್ಲಿ ಹುಲ್ಲಿನ ಮೇಲೆ ಕಡುಬಡವರಾದ ತಂದೆತಾಯಿಗಳ ಪುತ್ರನಾಗಿ ಜನಿಸಿದ. ಶ್ರೀ ಶಂಕರಾಚಾರ್ಯರೂ ಬಡ ವಿಧವೆಯ ಪುತ್ರರಾಗಿ ಜನಿಸಿದರು. ಶ್ರೀಕೃಷ್ಣಚೈತನ್ಯನು ಅತ್ಯಂತ ಸಾಧಾರಣ ವ್ಯಕ್ತಿಯ ಮನೆಯಲ್ಲಿ ಹುಟ್ಟಿದನು. ಮಹಮ್ಮದನೂ ಇಂಥದೇ ಪರಿಸರದಲ್ಲಿ ಜನಿಸಿದ; ಆದರೆ ಎಷ್ಟೇ ಕಷ್ಟ-ದಾರಿದ್ರ್ಯದ ಸ್ಥಿತಿಯಾದರೂ ಎಲ್ಲಿ ಸಂತೋಷವಿಲ್ಲವೊ, ಎಲ್ಲಿ ನಿಃಸ್ವಾರ್ಥತೆ ಪ್ರೀತಿ ಇಲ್ಲವೊ, ಎಲ್ಲಿ ತ್ಯಾಗ ತಪಸ್ಸುಗಳಿಲ್ಲವೊ, ಎಲ್ಲಿ ದೃಢತೆ ಮರ್ಯಾದೆ ಇವುಗಳ ಸಾಮಂಜಸ್ಯವಿಲ್ಲವೊ ಅಂತಹ ಕುಟುಂಬದಲ್ಲಿ ಅವರುಗಳು ಎಂದೂ ಜನಿಸಲಿಲ್ಲ.

ಈ ರೀತಿಯ ದಾರಿದ್ರ್ಯಕ್ಕೂ ಮತ್ತು ಅವರ ಮುಂದಿನ ಜೀವನಕ್ಕೂ ಒಂದು ಸೂಕ್ಷ್ಮವಾದ ಸಂಬಂಧ ಇರುವಂತೆ ಕಂಡುಬರುತ್ತದೆ. ಏಕೆಂದರೆ ಮುಂದೆ ಪ್ರೌಢಾವಸ್ಥೆ ಯಲ್ಲಿ ಯಾರು ದುಃಖಿತರ ಕಣ್ಣೊರಸಿ ಶಾಂತಿ ನೀಡಬೇಕಾಗಿದೆಯೊ ಅವರು ಮೊದಲೆ

ದುಃಖ ದಾರಿದ್ರ್ಯ ಕಷ್ಟನಷ್ಟಗಳ ಪರಿಚಯವನ್ನು ಪಡೆದಿರಬೇಕಲ್ಲವೆ ? ಅಷ್ಟೇ ಅಲ್ಲ. ನಾವು ಹಿಂದೆಯೇ ಹೇಳಿದಂತೆ ಧರ್ಮಗ್ಲಾನಿಯ ನಿವಾರಣೆಗಾಗಿಯೇ ಅವತಾರಪುರುಷರು ಬರುವುದು. ಇದಕ್ಕಾಗಿ ಮೊದಲೇ ಪ್ರಚಾರದಲ್ಲಿರುವ ಧರ್ಮಪದ್ಧತಿಯ ಪರಿಚಯ ಅವರಿಗಿರಬೇಕಾಗುತ್ತದೆ. ಅದು ಈಗ ಅಧೋಗತಿಗಿಳಿಯಲು ಕಾರಣವೇನು ಎಂಬುದನ್ನು ವಿಚಾರಮಾಡಿ ಅದಕ್ಕನುಗುಣವಾದ ಹೊಸ ಮಾರ್ಗವನ್ನು ಅವರು ಪ್ರವರ್ತಿಸಬೇಕು. ಇಂತಹ ಪರಿಚಯವಾಗುವುದು ದರಿದ್ರನ ಗುಡಿಸಲಿನಲ್ಲಿಯೇ ಹೊರತು ಧನಿಕನ ಪ್ರಾಸಾದದಲ್ಲಿಯಲ್ಲ. ದಾರಿದ್ರ್ಯ ದುಃಖದಿಂದ ಬಳಲುವ ಬಡವರೇ ಭಕ್ತಿಪರಾಯಣರಾಗಿ ಭಗವಂತನನ್ನು ನೆಚ್ಚಿಕೊಂಡಿರುತ್ತಾರೆ. ಆದ್ದರಿಂದ ಎಲ್ಲೆಲ್ಲಿಯೂ ಧರ್ಮಗ್ಲಾನಿ ಉಂಟಾಗಿದ್ದರೂ ಬಡ ಕುಟುಂಬದಲ್ಲಿ ಅದು ಇನ್ನೂ ಬೆಳಗುತ್ತಿರುತ್ತದೆ. ಬಹುಶಃ ಇದಕ್ಕಾಗಿಯೇ ಅವತಾರಪುರುಷರು ಜನ್ಮವೆತ್ತಲು ಬಡ ಕುಟುಂಬವನ್ನೇ ಆರಿಸಿಕೊಳ್ಳುತ್ತಾರೆ. ನಾವು ಹೇಳ ಹೊರಟಿರುವ ಮಹಾಪುರುಷರೂ ಈ ನಿಯಮಕ್ಕೆ ಹೊರತಾದವರೇನಲ್ಲ.

2. ಹೂಗ್ಲಿ, ಬಾಂಕುರ ಮತ್ತು ಮೇದಿನೀಪುರ ಜಿಲ್ಲೆಗಳು ಸಂಧಿಸುವ ಸೀಮಾಪ್ರದೇಶದ ಹತ್ತಿರವೆ ಶ್ರೀಪುರ, ಕಾಮಾರಪುಕುರ, ಮತ್ತು ಮುಕುಂದಪುಕುರ ಎಂಬ ಹೆಸರಿನ ಮೂರು ಗ್ರಾಮಗಳಿವೆ. ಹೆಸರು ಬೇರೆ ಬೇರೆಯಾದರೂ ಅವುಗಳಲ್ಲಿ ಎಷ್ಟೊಂದು ನಿಕಟತೆಯಿತ್ತೆಂದರೆ ಪಥಿಕರಿಗೆಲ್ಲ ಅವು ಒಂದೇ ಗ್ರಾಮದ ಮೂರು ಹಳ್ಳಿಗಳೆಂದು ಭಾಸವಾಗುತ್ತಿತ್ತು. ಸುತ್ತಮುತ್ತಲಿನ ಗ್ರಾಮಸ್ಥರೆಲ್ಲ ಈ ಮೂರನ್ನು ಕಾಮಾರಪುಕುರವೆಂದೇ ಕರೆಯುತ್ತಿದ್ದರು. ಸ್ಥಳೀಯ ಜಮೀಂದಾರರು ಬಹುಕಾಲದಿಂದ ಅಲ್ಲಿ ವಾಸಿಸುತ್ತಿದ್ದುದೂ ಇದಕ್ಕೆ ಕಾರಣವಿದ್ದಿರಬಹುದು. ನಾವು ಪ್ರಸ್ತಾಪಿಸುತ್ತಿರುವ ಆ ಕಾಲದಲ್ಲಿ ಕಾಮಾರಪುಕುರವು ಬರ್ದ್ವಾನದ ರಾಜಪುರೋಹಿತರ ವಂಶಕ್ಕೆ ಸೇರಿದ ತೆರಿಗೆರಹಿತ ಭೂಪ್ರದೇಶದ ಒಂದು ಭಾಗವಾಗಿತ್ತು. ಆ ಗೋಸ್ವಾಮಿ ವಂಶಸ್ಥರಾದ ಗೋಪೀಲಾಲ್, ಸುಖಲಾಲ್ ಮುಂತಾದವರು ಆ ಗ್ರಾಮದಲ್ಲಿ ವಾಸಿಸುತ್ತಿದ್ದರು.

ವರ್ಧಮಾನ ನಗರವು ಕಾಮಾರಪುಕುರದಿಂದ ಮೂವತ್ತೆರಡು ಮೈಲಿ ಉತ್ತರಕ್ಕೆ ಇದೆ. ವರ್ಧಮಾನದಿಂದ ಪುರಿಕ್ಷೇತ್ರಕ್ಕೆ ಹೋಗುವ ರಸ್ತೆ ಕಾಮಾರಪುಕುರದ ಮೂಲಕವೆ ಹೋಗುತ್ತಿತ್ತು. ಸಾಧುಗಳು ಮತ್ತು ಬಡ ಯಾತ್ರಿಕರು ಆ ರಸ್ತೆಯ ಮೂಲಕವೇ ಶ್ರೀಜಗನ್ನಾಥ ದರ್ಶನಕ್ಕೆ ಹೋಗುತ್ತಿದ್ದರು. ಪ್ರಸಿದ್ಧ ಶಿವನ ದೇವಸ್ಥಾನವಿರುವ ತಾರಕೇಶ್ವರವು ಕಾಮಾರಪುಕುರದಿಂದ ಹತ್ತೊಂಬತ್ತು-ಇಪ್ಪತ್ತು ಮೈಲಿ ದೂರದಲ್ಲಿದೆ. ಅಲ್ಲಿಂದ ಆರಾಂಬಾಗಿನ ಮೂಲಕ ಕಾಮಾರಪುಕುರಕ್ಕೆ ಬರುವುದಕ್ಕೆ ದಾರಿಯಿದೆ. ಇಷ್ಟೇ ಅಲ್ಲದೆ ಹದಿನೆಂಟು ಮೈಲಿ ದೂರದ ಘಾಟಾಲದಿಂದಲೂ ಮತ್ತು ಇಪ್ಪತ್ತನಾಲ್ಕು ಮೈಲಿ ದೂರದ ವಿಷ್ಣುಪುರದಿಂದಲೂ ಎರಡು ರಸ್ತೆಗಳು ಬಂದು ಅಲ್ಲಿ ಸೇರುವುವು.

3. ೧೮೬೭ರಲ್ಲಿ ಭೀಕರ ಮಲೇರಿಯಾ ರೋಗಕ್ಕೆ ತುತ್ತಾಗುವುದಕ್ಕೆ ಮುಂಚೆ ಕೃಷಿಪ್ರಧಾನವಾದ ಬಂಗಾಳಿ ಗ್ರಾಮಗಳೆಲ್ಲವೂ ಶಾಂತಿ ಸಮೃದ್ಧಿಗಳಿಂದ ಕೂಡಿದ್ದುವು.

ಹೊಚ್ಚ ಹಸಿರು ಹೊಲಗಳ ನಡುವೆ ಅಲ್ಲಲ್ಲಿ ಗ್ರಾಮಗಳು ವಿಶಾಲ ಹಸಿರು ಸಾಗರದ ಮಧ್ಯೆ ದ್ವೀಪಗಳಂತೆ ಕಂಗೊಳಿಸುತ್ತಿದ್ದುವು. ಭೂಮಿ ಫಲವತ್ತಾಗಿದ್ದುದರಿಂದ ಆಹಾರ ವಸ್ತುಗಳ ಬಾಹುಳ್ಯ ಮತ್ತು ಶುದ್ಧ ಹವೆ—ಇವುಗಳಿಂದಾಗಿ ಜನರು ಆರೋಗ್ಯವಂತರೂ ದೃಢಕಾಯರೂ ಆಗಿದ್ದರು ಮತ್ತು ಅಷ್ಟೇ ಸಂತೃಪ್ತರೂ ಆಗಿದ್ದರು. ಬಹು ಜನರಿರುವ ಗ್ರಾಮಗಳಲ್ಲಿ ಕೃಷಿಯಲ್ಲದೆ ಬೇರೆ ಕಸುಬುಗಳೂ ಪ್ರಚಲಿತವಿದ್ದುವು. ಕಾಮಾರಪುಕುರ ಈಗಲೂ ಕೂಡ ಜಿಲೇಬಿ, ನಬಾತ್ ಮುಂತಾದ ಸಿಹಿ ತಿಂಡಿಗಳಿಗೆ ಪ್ರಸಿದ್ಧವಾಗಿದೆ. ಹಾಗೆಯೇ ಹುಕ್ಕ ತಯಾರಿಸುವುದರಲ್ಲಿಯೂ ಆ ಗ್ರಾಮಸ್ಥರು ಪ್ರಸಿದ್ಧರು. ಬಟ್ಟೆ ನೆಯ್ಗೆ ಮತ್ತು ಇತರ ಕುಶಲ ಕೈಗಾರಿಕೆಗಳಿಗೆ ಕಾಮಾರಪುಕುರ ಹೆಸರುವಾಸಿಯಾಗಿತ್ತು. ಈಗಲೂ ಕೂಡ ಮಂಗಳವಾರ ಮತ್ತು ಶನಿವಾರ ಅಲ್ಲಿ ಸಂತೆ ಸೇರುವುದು. ಸುತ್ತಮುತ್ತಲಿನ ಅನೇಕ ಹಳ್ಳಿಗರು ಬಟ್ಟೆ, ಚಾಪೆ, ಬುಟ್ಟಿ, ಅಡಿಗೆ ಪಾತ್ರೆಗಳು ಮುಂತಾದುವನ್ನು ತಂದು ಅಲ್ಲಿ ಪರಸ್ಪರ ಕ್ರಯವಿಕ್ರಯ ಮಾಡಿಕೊಂಡು ಹೋಗುತ್ತಿದ್ದರು. ಆನಂದೋತ್ಸವಗಳಿಗೇನೂ ಕಡಿಮೆಯಿರಲಿಲ್ಲ. ಅನೇಕ ಹಬ್ಬ ಉತ್ಸವಗಳು ನಡೆಯುತ್ತಿದ್ದುವು. ಚೈತ್ರ ಮಾಸದಲ್ಲಿ ಮನಸಾಪೂಜೆ, ಶಿವಸಂಕೀರ್ತನೆ, ವೈಶಾಖ ಅಥವಾ ಜ್ಯೇಷ್ಠ ಮಾಸದಲ್ಲಿ ಮೂರುದಿನ ಎಡೆಬಿಡದೆ ಹರಿಸಂಕೀರ್ತನೆ—ಇತ್ಯಾದಿಗಳು ನಡದೇ ಇದ್ದುವು. ಇವಲ್ಲದೆ ಜಮೀಂದಾರರ ಮನೆಗಳಲ್ಲಿ ಹನ್ನೆರಡು ತಿಂಗಳೂ ಏನಾದರೂ ವಿಶೇಷ ಕಾರ್ಯಕ್ರಮಗಳು ಇರುತ್ತಿದ್ದುವು. ದಾರಿದ್ರ್ಯದ ದೆಸೆಯಿಂದ ಇವುಗಳಲ್ಲನೇಕವು ಈಗ ಲುಪ್ತವಾಗಿಹೋಗಿವೆ.

4. ಧರ್ಮದೇವರ ಪೂಜೆಯೂ ಇಲ್ಲಿ ಒಂದು ಕಾಲದಲ್ಲಿ ತುಂಬ ವಿಜೃಂಭಣೆಯಿಂದ ನಡೆಯುತ್ತಿತ್ತು. ಈಗ ಆ ಕಾಲ ಹೊರಟುಹೋಯಿತು. ಬೌದ್ಧರ ರತ್ನತ್ರಯಗಳಲ್ಲಿ (ಬುದ್ಧ, ಧರ್ಮ ಮತ್ತು ಸಂಘ) ಒಂದಾದ ಧರ್ಮದೇವತೆಯನ್ನು ಈಗ ಕೂರ್ಮಮೂರ್ತಿಯಾಗಿ ಭಾವಿಸಿ, ಇಲ್ಲಿ ಮತ್ತು ಸುತ್ತಲಿನ ಗ್ರಾಮಗಳಲ್ಲಿ ಅದಕ್ಕೆ ಸಾಮಾನ್ಯ ಪೂಜೆ ನಡೆಯುತ್ತಿದೆ. ಧರ್ಮದೇವರನ್ನು ಬೇರೆ ಬೇರೆ ಗ್ರಾಮಗಳಲ್ಲಿ ರಾಜಾಧಿರಾಜ, ಯಾತ್ರಾಸಿದ್ಧಿರಾಜ, ಸನ್ಯಾಸೀರಾಜ–ಹೀಗೆ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಿದ್ದರು. ಕಾಮಾರಪುಕುರದಲ್ಲಿ ಧರ್ಮದೇವರ ರಥಯಾತ್ರೆ ಬಹಳ ಸಂಭ್ರಮದಿಂದ ನಡೆಯುತ್ತಿತ್ತು. ಒಂಭತ್ತು ಗೋಪುರಗಳಿಂದ ಕೂಡಿದ ದೊಡ್ಡ ರಥ ಯಾವಾಗಲೂ ಮಂದಿರದ ಪಕ್ಕದಲ್ಲಿರುತ್ತಿತ್ತು. ಅದು ಮುರಿದುಹೋದ ಮೇಲೆ ಮತ್ತೆ ರಥ ನಿರ್ಮಿಸಲಿಲ್ಲ. ದೇವಸ್ಥಾನವೂ ನೆಲಸಮವಾಗುತ್ತಿರುವುದನ್ನು ಕಂಡು ಧರ್ಮಪಂಡಿತ ಯಜ್ಞೇಶ್ವರನು ದೇವರನ್ನು ತನ್ನ ಮನೆಗೇ ಸ್ಥಳಾಂತರಿಸಿದನು.

5. ಬ್ರಾಹ್ಮಣರು, ಕ್ಷತ್ರಿಯರು, ಕಮ್ಮಾರರು, ಕುಂಬಾರರು, ಬಡಗಿಗಳು, ಮೀನುಗಾರರು, ಡೋಂ ಎಂಬ ಕೀಳು ಜಾತಿಯವರು – ಹೀಗೆ ಎಲ್ಲ ಬಗೆಯ ಜನರೂ ಕಾಮಾರಪುಕುರದಲ್ಲಿ ವಾಸಿಸುತ್ತಿದ್ದರು. ಹಳ್ಳಿಯಲ್ಲಿ ಮೂರು ನಾಲ್ಕು ದೊಡ್ಡ ಕೊಳಗಳಿವೆ. ಅವುಗಳಲ್ಲಿ ಹಲದಾರಪುಕುರ್ ಬಹು ದೊಡ್ಡದು. ಜತೆಗೆ ಅನೇಕ ಸಣ್ಣ

ಪುಟ್ಟ ಕೊಳಗಳೂ ಇದ್ದುವು. ಸುತ್ತಲೂ ಪುಷ್ಪವೃಕ್ಷಗಳಿಂದ, ತಾವರೆ ಕನ್ನೈದಿಲೆಗಳಿಂದ ಅವು ಶೋಭಿಸುತ್ತಿದ್ದುವು. ಈಗಲೂ ಅನೇಕ ಇಟ್ಟಿಗೆಯ ಮನೆಗಳು, ಸಮಾಧಿಗಳು ಇವೆ. ಹಿಂದೆ ಇವುಗಳ ಸಂಖ್ಯೆ ಬಹಳವಿತ್ತು. ಮುರಿದುಬಿದ್ದಿರುವ ರಮಾನಂದ ಶಂಖಾರಿಯ ದೇವಾಲಯ, ಫಕೀರ್‌ದತ್ತನ ಜೀರ್ಣಾವಸ್ಥೆಯಲ್ಲಿರುವ ರಾಸವೇದಿಕೆ, ಕಾಡು ಬೆಳೆದಿರುವ ಇಟ್ಟಿಗೆಯ ಸ್ತೂಪ–ಇತ್ಯಾದಿಗಳು ಹಿಂದಿನ ಸಮೃದ್ಧತೆಯನ್ನು ಸೂಚಿಸುತ್ತವೆ. ಗ್ರಾಮದ ಈಶಾನ್ಯ ಮತ್ತು ವಾಯುವ್ಯ ದಿಕ್ಕುಗಳಲ್ಲಿ 'ಬುಧುಇ' ಮತ್ತು 'ಭೂತೀರ್‌ಖಾಲ್' ಎಂಬ ಹೆಸರಿನ ಎರಡು ಶ್ಮಶಾನಗಳಿವೆ. ಭೂತೀರ್‌ಖಾಲ್‌ನ ಪಶ್ಚಿಮಕ್ಕೆ ಒಂದು ಹುಲ್ಲುಗಾವಲು, ಮತ್ತು ಮಾವಿನ ತೋಪು ಇವೆ. ಸ್ವಲ್ಪ ದೂರ ದಲ್ಲೇ ಆಮೋದರ ನದಿ ಹರಿಯುತ್ತಿದೆ.

6. ಕಾಮಾರಪುಕುರದ ಉತ್ತರಕ್ಕೆ ಸ್ವಲ್ಪ ದೂರದಲ್ಲಿ ಭೂರಸುಬೊ ಎಂಬ ಹೆಸರಿನ ಗ್ರಾಮವಿದೆ. ಅಲ್ಲಿಯೇ ಮಾಣಿಕಚಂದ್ರ ಮಂದ್ಯೋಪಾಧ್ಯಾಯ ಎಂಬ ಖ್ಯಾತ ಶ್ರೀಮಂತನು ವಾಸಿಸುತ್ತಿದ್ದನು. ಸುತ್ತಮುತ್ತಲಿನ ಹಳ್ಳಿಗಳಲ್ಲಿ ಆತನು ಮಾಣಿಕರಾಜ ಎಂದೇ ಪ್ರಸಿದ್ಧನಾಗಿದ್ದನು. ಹಿಂದೆ ಹೇಳಿದ ಮಾವಿನತೋಪು ಮತ್ತು ದೊಡ್ಡ ಕೊಳಗಳು ಕೆಲವು ಇಂದಿಗೂ ಅವನ ಕೀರ್ತಿಯನ್ನು ಸಾರುತ್ತಿವೆ. ಅವನು ಅನೇಕಬಾರಿ ಲಕ್ಷ ಬ್ರಾಹ್ಮಣರನ್ನು ಆಮಂತ್ರಿಸಿ ಭೋಜನ ಕೊಟ್ಟ ಏರ್ಪಡಿಸಿದ್ದನು.

7. ಕಾಮಾರಪುಕುರದ ಆಗ್ನೇಯ ದಿಕ್ಕಿನಲ್ಲಿ ಮಾಂದಾರಣ ಗ್ರಾಮವಿದೆ. ಸುತ್ತ ಲಿನ ಹಳ್ಳಿಗಳನ್ನು ಶತ್ರುಗಳಿಂದ ರಕ್ಷಿಸುವ ಸಲುವಾಗಿ ಹಿಂದೆ ಯಾವುದೊ ಕಾಲದಲ್ಲಿ ಇಲ್ಲಿ ಒಂದು ದುರ್ಭೇದ್ಯ ಕೋಟೆ ಇತ್ತು. ಹತ್ತಿರದಲ್ಲಿ ಹರಿಯುತ್ತಿದ್ದ ಆಮೋದರ ನದಿಯ ಗತಿಯನ್ನು ಬದಲಾಯಿಸಿ ಅದೇ ಕೋಟೆಯ ಸುತ್ತಲಿನ ಕಂದಕವಾಗಿ ಪರಿವರ್ತಿಸ ಲಾಗಿತ್ತು. ಮಾಂದಾರಣ ಕೋಟೆಯ ಭಗ್ನಾವಶೇಷಗಳು, ಹತ್ತಿರದಲ್ಲೇ ಇರುವ ಶೈಲೇಶ್ವರ ಮಹಾದೇವನ ಮಂದಿರ ಈಗಲೂ ಇದ್ದು ಪಠಾಣರು ಆಳುತ್ತಿದ್ದಾಗ ಈ ಪ್ರದೇಶ ಎಷ್ಟು ಪ್ರಸಿದ್ಧವಾಗಿತ್ತು ಎಂಬುದನ್ನು ಸೂಚಿಸುತ್ತವೆ. ಇದರ ಪಕ್ಕದಲ್ಲೇ ವರ್ಧಮಾನಕ್ಕೆ ಹೋಗುವ ರಸ್ತೆ ಹಾದುಹೋಗುವುದು. ಈ ರಸ್ತೆಯ ಇಕ್ಕೆಲಗಳಲ್ಲಿ ವಿಶಾಲ ಕೊಳಗಳು ಕಂಗೊಳಿಸುತ್ತವೆ. ಈ ಮಾರ್ಗದ ಒಂದು ಸ್ಥಾನದಲ್ಲಿ ಭಗ್ನವಾದ ಒಂದು ಆನೆಲಾಯವಿದೆ. ಇದೆಲ್ಲದರಿಂದ ಯುದ್ಧದ ಸೌಕರ್ಯಕ್ಕಾಗಿಯೇ ಈ ರಸ್ತೆ ನಿರ್ಮಿತವಾಗಿದ್ದಿರಬಹುದು ಎಂದೆನಿಸುತ್ತದೆ. ಈ ರಸ್ತೆಯ ಪಕ್ಕದಲ್ಲೇ ಇರುವ ಮೊಗಲ ಮಾರಿ ಯುದ್ಧಭೂಮಿಯು ಇದನ್ನೇ ಸಮರ್ಥಿಸುತ್ತದೆ.

8. ಕಾಮಾರಪುಕುರದ ಎರಡು ಮೈಲಿ ಪಶ್ಚಿಮಕ್ಕೆ ಸಾತಬೇಡೇ, ನಾರಾಯಣ ಪುರ, ಮತ್ತು ದೇರೇ ಎಂಬ ಹೆಸರಿನ ಮೂರು ಹಳ್ಳಿಗಳು ಅಕ್ಕಪಕ್ಕದಲ್ಲಿವೆ. ಈ ಗ್ರಾಮ ಗಳು ಒಂದು ಕಾಲದಲ್ಲಿ ತುಂಬ ಸಮೃದ್ಧವಾಗಿದ್ದುವು. ದೇರೇ ಗ್ರಾಮದಲ್ಲಿರುವ ಕೊಳ ಮತ್ತು ಅದರ ಪಕ್ಕದಲ್ಲಿರುವ ದೇವಾಲಯ ಈ ಹೇಳಿಕೆಗೆ ಪುಷ್ಟಿಯನ್ನೀಯುತ್ತವೆ. ನಾವು ಹೇಳುತ್ತಿರುವ ಕಥಾಪ್ರಸಂಗದ ಸಮಯದಲ್ಲಿ ಈ ಮೂರೂ ಹಳ್ಳಿಗಳು ಬೇರೆ

ಬೇರೆ ಜಮೀಂದಾರರಿಗೆ ಸೇರಿದ್ದುವು. ದೇರೇ ಗ್ರಾಮದ ಜಮೀಂದಾರನಾದ ರಾಮಾನಂದ ರಾಯನು ಸಾತಬೇಡೆಯಲ್ಲಿ ವಾಸಿಸುತ್ತಿದ್ದನು. ಇವನು ಅಷ್ಟೇನೂ ಧನಿಕನಲ್ಲದಿದ್ದರೂ ತುಂಬ ಪ್ರಜಾಪೀಡಕನಾಗಿದ್ದನು. ಏನಾದರೂ ಕಾರಣಕ್ಕಾಗಿ ಅವನಿಗೆ ಯಾರ ಮೇಲಾದರು ಕೋಪವುಂಟಾದರೆ ಅವರ ಸರ್ವನಾಶಮಾಡಲು ಹಿಂಜರಿಯುತ್ತಿರಲಿಲ್ಲ. ಇವನ ಮಕ್ಕಳಾರೂ ಬದುಕಿ ಉಳಿಯಲಿಲ್ಲ. ಪ್ರಜಾಪೀಡನೆಯ ಫಲವಾಗಿಯೇ ಅವನು ವಂಶಹೀನನಾದನೆಂದು ಜನ ಆಡಿಕೊಳ್ಳುತ್ತಾರೆ. ಅವನ ಮರಣಾನಂತರ ಅವನ ಸಂಪತ್ತೆಲ್ಲವೂ ಬೇರೆಯವರಿಗೆ ಹೋಯಿತು.

9. ಸುಮಾರು ನೂರೈವತ್ತು ವರ್ಷಗಳ ಹಿಂದೆ ದೇರೇ ಗ್ರಾಮದಲ್ಲಿ ಮಧ್ಯಮ ವರ್ಗದ ಧರ್ಮಿಷ್ಠರಾದ ಒಂದು ಬ್ರಾಹ್ಮಣ ಕುಟುಂಬದವರು ವಾಸಿಸುತ್ತಿದ್ದರು. ಇವರು ತುಂಬ ಕುಲೀನರೂ, ಸಚ್ಚಾರಿತ್ರ್ಯವುಳ್ಳವರೂ ಶ್ರೀರಾಮಚಂದ್ರನ ಉಪಾಸಕರೂ ಆಗಿದ್ದರು. ಇವರು ಪ್ರತಿಷ್ಠಾಪಿಸಿದ ಶಿವಾಲಯದಿಂದ ಕೂಡಿದ ಒಂದು ಕೊಳವನ್ನು ಈಗಲೂ 'ಚಾಟುಜ್ಯೇಪುಕುರ್' ಎಂದೇ ಕರೆಯುತ್ತಾರೆ. ಈ ವಂಶದ ಮಾಣಿಕರಾಮ ಚಟ್ಟೋಪಾಧ್ಯಾಯನಿಗೆ ಮೂವರು ಗಂಡು ಮಕ್ಕಳು ಮತ್ತು ಒಬ್ಬಳು ಮಗಳು ಇದ್ದರು. ಅವರಲ್ಲಿ ಕ್ಷುದಿರಾಮನು ಹಿರಿಯವನು. ಉಳಿದ ಇಬ್ಬರು ಗಂಡು ಮಕ್ಕಳ ಹೆಸರು—ನಿಧಿರಾಮ ಮತ್ತು ಕನಾಯ್‌ರಾಮ ಎಂದು. ಮಗಳ ಹೆಸರು ರಾಮಶೀಲಾ.

10. ಕ್ಷುದಿರಾಮನು ಹಣ ಸಂಪಾದನೆಯ ವಿದ್ಯೆಯಲ್ಲಿ ಪಾರಂಗತನಾಗಿದ್ದನೊ ಇಲ್ಲವೊ ತಿಳಿಯದು. ಆದರೆ ಸತ್ಯನಿಷ್ಠೆ, ಕ್ಷಮಾಶೀಲತೆ, ತ್ಯಾಗ ಮುಂತಾದ ಗುಣಗಳಲ್ಲಿ ಅವನು ಸುಖ್ಯಾತನಾಗಿದ್ದನು. ಅವನು ಎತ್ತರವೂ ಬಲವಂತನೂ ಆಗಿದ್ದನು, ಆದರೆ ದಪ್ಪನಾಗಿರಲಿಲ್ಲ. ಅವನ ಮೈಬಣ್ಣ ಬಿಳಿ, ಮತ್ತು ನೋಡುವುದಕ್ಕೆ ಲಕ್ಷಣವಾಗಿದ್ದ. ವಂಶಾನುಗತವಾಗಿ ಅವನು ಶ್ರೀರಾಮಚಂದ್ರನ ಪರಮ ಭಕ್ತನಾಗಿದ್ದ. ಪ್ರತಿದಿನ ಸಂಧ್ಯಾವಂದನೆಯಾದ ಮೇಲೆ ತಾನೇ ಹೂವನ್ನು ಸಂಗ್ರಹಿಸಿ, ರಘುವೀರನ ಪೂಜೆಯ ನಂತರವೇ ಬೆಳಗಿನ ಉಪಾಹಾರ ಸೇವಿಸುತ್ತಿದ್ದ. ಅವನು ಶೂದ್ರರಿಂದ ಕಾಣಿಕೆ ಸ್ವೀಕರಿಸುವುದಂತೂ ದೂರದ ಮಾತು, ಶೂದ್ರರಿಗಾಗಿ ಪೂಜೆಮಾಡಿದ ಬ್ರಾಹ್ಮಣರ ಆಮಂತ್ರಣವನ್ನು ಸ್ವೀಕರಿಸುತ್ತಿರಲಿಲ್ಲ. ಹಣವನ್ನು ಸ್ವೀಕರಿಸಿ ಕನ್ಯಾದಾನ ಮಾಡುವ ಬ್ರಾಹ್ಮಣರ ಕೈಯಿಂದ ನೀರನ್ನೂ ಸ್ವೀಕರಿಸುತ್ತಿರಲಿಲ್ಲ. ಈರೀತಿಯ ನಿಷ್ಠೆ ಸದಾಚಾರಗಳಿಂದಾಗಿ ಗ್ರಾಮನಿವಾಸಿಗಳಿಗೆ ಅವನ ಮೇಲೆ ತುಂಬ ಶ್ರದ್ಧಾಭಕ್ತಿ ಇತ್ತು.

11. ತಂದೆಯ ಮರಣಾನಂತರ ಸಂಸಾರದ ಜವಾಬ್ದಾರಿ ಮತ್ತು ಹಣ ಸಂಪಾದನೆಯ ಕಾರ್ಯ ಕ್ಷುದಿರಾಮನ ಮೇಲೆ ಬಿತ್ತು. ಅವನು ಧರ್ಮಮಾರ್ಗದಿಂದ ಸ್ವಲ್ಪವೂ ವಿಚಲಿತನಾಗದೆ ಈ ಕಾರ್ಯಗಳಲ್ಲಿ ತೊಡಗಿದ. ಮೊದಲೇ ಆತನಿಗೆ ಮದುವೆಯಾಗಿತ್ತು, ಆದರೆ ಪತ್ನಿ ಅಲ್ಪ ವಯಸ್ಸಿನಲ್ಲಿಯೇ ತೀರಿಕೊಂಡಳು. ಇಪ್ಪತ್ತೈದನೇ ವಯಸ್ಸಿನಲ್ಲಿ ಅವನು ಇನ್ನೊಮ್ಮೆ ಮದುವೆಯಾದ. ವಧುವಿನ ಹೆಸರು ಚಂದ್ರಮಣಿ.

ಆದರೆ ಮನೆಯಲ್ಲಿ ಚಂದ್ರಾ ಎಂದು ಕರೆಯುತ್ತಿದ್ದರು. ಆಕೆಯ ತಂದೆಯ ಮನೆ ಸರಾಟಿಮಾಯಾಪುರ ಎಂಬ ಗ್ರಾಮ. ಆಕೆ ತುಂಬ ರೂಪವತಿಯೂ ಸರಳಳೂ ದೈವ ಭಕ್ತಳೂ ಆಗಿದ್ದಳು. ಆದರ ಅವಳ ವಿಶೇಷ ಗುಣಗಳು ಅಪಾರ ಶ್ರದ್ಧೆ, ಸ್ನೇಹ ಮತ್ತು ಪ್ರೀತಿ. ಇವುಗಳಿಂದಾಗಿಯೇ ಎಲ್ಲರ ಪ್ರೀತಿಗೂ ಒಳಗಾಗಿದ್ದಳು. ಬಹುಶಃ ೧೭೯೧ರಲ್ಲಿ ಅವಳ ಜನನ. ಮದುವೆಯಾದಾಗ ಅವಳಿಗೆ ಕೇವಲ ಎಂಟು ವರ್ಷ. ೧೮೦೫ರಲ್ಲಿ ಆಕೆಯ ಮೊದಲ ಪುತ್ರ ರಾಮಕುಮಾರ ಜನಿಸಿದ. ಐದು ವರ್ಷದ ನಂತರ ಕಾತ್ಯಾಯಿನಿ ಎಂಬ ಹೆಸರಿನ ಮಗಳು ಜನಿಸಿದಳು. ೧೮೨೬ರಲ್ಲಿ ಮೂರನೆಯ ಪುತ್ರ ರಾಮೇಶ್ವರನ ಜನನವಾಯಿತು.

12. ಧರ್ಮಮಾರ್ಗವನ್ನು ಬಿಡದೆ ಸಂಸಾರವನ್ನು ನಿರ್ವಹಿಸುವುದು ಎಷ್ಟು ಕಠಿನ ಎಂಬುದು ಕ್ಷುದಿರಾಮನಿಗೆ ವೇದ್ಯವಾಗಲು ಬಹುಕಾಲ ಹಿಡಿಯಲಿಲ್ಲ. ಮಗಳು ಹುಟ್ಟಿ ಸ್ವಲ್ಪಕಾಲವಾದಮೇಲೆ ಅವನು ಒಂದು ವಿಷಮ ಪರೀಕ್ಷೆಗೆ ಒಳಗಾದ. ಗ್ರಾಮದ ಜಮೀಂದಾರ ರಮಾನಂದ ರಾಯನು ಪ್ರಜಾಪೀಡಕನೆಂದು ಮೊದಲೇ ಹೇಳಿಯಾಗಿದೆ. ಅವನು ದೇರೇಪುರದ ಒಬ್ಬ ವ್ಯಕ್ತಿಯ ಬಗ್ಗೆ ಯಾವುದೋ ಕಾರಣಕ್ಕಾಗಿ ಮನಸ್ತಾಪ ಗೊಂಡು ಅವನ ಮೇಲೆ ಸುಳ್ಳು ಆಪಾದನೆ ಹೊರಿಸಿ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ. ತುಂಬ ನಂಬಿಗಸ್ತ ಸಾಕ್ಷಿ ಬೇಕಾಗಿದ್ದುದರಿಂದ ಆ ವ್ಯಕ್ತಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳಲು ಕ್ಷುದಿರಾಮನನ್ನು ಕೇಳಿಕೊಂಡ. ಧರ್ಮಿಷ್ಠನಾದ ಕ್ಷುದಿರಾಮನಿಗೆ ಮೊಕದ್ದಮೆ ಕೋರ್ಟು ಎಂದರೆ ಬಹುದೂರ. ಸ್ವಾಭಾವಿಕವಾಗಿಯೇ ಅವನು ಸುಳ್ಳು ಸಾಕ್ಷಿ ನೀಡಲು ಒಪ್ಪಲಿಲ್ಲ. ಇದರ ಪರಿಣಾಮ ಅವನಿಗೆ ತಿಳಿದಿತ್ತು. ಅದು ಹಾಗೆಯೇ ಆಯಿತು. ರಮಾನಂದ ರಾಯನು ಅವನ ಎಲ್ಲ ಪಿತ್ರಾರ್ಜಿತ ಆಸ್ತಿಯನ್ನು ವಶಪಡಿಸಿ ಕೊಂಡು ಅವನನ್ನು ನಿರ್ಗತಿಕನನ್ನಾಗಿ ಮಾಡಿದನು. ಅವನೀಗ ದೇರೇಗ್ರಾಮವನ್ನು ಬಿಡಬೇಕಾಯಿತು. ಊರಿನ ಜನರು ಅವನ ದುಃಖದಲ್ಲಿ ಭಾಗಿಗಳಾದರೂ ಜಮೀಂದಾರ ನಿಗೆ ಹೆದರಿ ಅವನಿಗೆ ಸಹಾಯ ಮಾಡಲು ಮುಂದೆ ಬರಲಿಲ್ಲ. ಆಗ ಕ್ಷುದಿರಾಮನಿಗೆ ಸುಮಾರು ನಲವತ್ತು ವರ್ಷ. ಪಿತ್ರಾರ್ಜಿತವಾದ ಮತ್ತು ತಾನೇ ದುಡಿದು ಸಂಪಾದಿಸಿದ ಆಸ್ತಿ ಕ್ಷಣಾರ್ಧದಲ್ಲಿ ಗಾಳಿಯಿಂದ ಮೋಡವು ಚದುರಿಹೋಗುವಂತೆ ಮಾಯವಾಗಿ ಹೋಯಿತು. ಆದರೆ ಈ ಘಟನೆ ಅವನನ್ನು ಧರ್ಮಮಾರ್ಗದಿಂದ ಸ್ವಲ್ಪವೂ ವಿಮುಖ ಗೊಳಿಸಲಿಲ್ಲ. ಶ್ರೀರಾಮಚಂದ್ರನಲ್ಲಿ ಶರಣಾಗಿ ಸ್ಥಿರವಾದ ಮನಸ್ಸಿನಿಂದ ಆ ಗ್ರಾಮ ವನ್ನೆ ಬಿಟ್ಟು ಹೊರಟನು.

13. ಕಾಮಾರಪುಕುರದ ಸುಖಲಾಲ ಗೋಸ್ವಾಮಿಯ ವಿಷಯವನ್ನು ಮೊದಲೇ ಉಲ್ಲೇಖಿಸಿರುವೆವು. ಇವನಿಗೂ ಮತ್ತು ಕ್ಷುದಿರಾಮನಿಗೂ ಅತ್ಯಂತ ನಿಕಟ ಸ್ನೇಹವಿತ್ತು. ಅವರೀರ್ವರ ಸ್ವಭಾವಸಾಮ್ಯತೆಯೇ ಇದಕ್ಕೆ ಮುಖ್ಯ ಕಾರಣ. ತನ್ನ ಸ್ನೇಹಿತನಿಗೆ ಬಂದೊದಗಿದ ದುಃಸ್ಥಿತಿಯನ್ನು ತಿಳಿದು ಅತ್ಯಂತ ಖಿನ್ನನಾಗಿ ಅವನನ್ನು

ಕಾಮಾರಪುಕುರಕ್ಕೆ ಬಂದು ವಾಸಿಸುವಂತೆ ಹೇಳಿಕಳಿಸಿದನು. ತನ್ನ ಮನೆಯ ಸ್ವಲ್ಪ ಭಾಗವನ್ನು ಸ್ನೇಹಿತನ ವಾಸಕ್ಕೆ ಬಿಟ್ಟುಕೊಟ್ಟನು. ಕ್ಷುದಿರಾಮನು ಇದು ಭಗವದಿಚ್ಛೆಯೆಂದು ಭಾವಿಸಿ ಕೃತಜ್ಞತಾಭಾವದಿಂದ ಕಾಮಾರಪುಕುರಕ್ಕೆ ಹೋಗಿ ಶಾಶ್ವತವಾಗಿ ಅಲ್ಲಿಯೇ ನೆಲಸಿದನು. ಸ್ನೇಹಿತನ ಆಗಮನದಿಂದ ತುಂಬ ಸಂಪ್ರೀತನಾದ ಸುಖಲಾಲ ಗೋಸ್ವಾಮಿಯು ಸುಮಾರು ಅರ್ಧ ಎಕರೆ ಭೂಮಿಯನ್ನು ಕ್ಷುದಿರಾಮನಿಗೆ ದಾನವಾಗಿ ಕೊಟ್ಟನು.

ಮೂರನೆಯ ಅಧ್ಯಾಯ

ಕಾಮಾರಪುಕುರದಲ್ಲಿ ಧಾರ್ಮಿಕ ಕುಟುಂಬ

1. ಕ್ಷುದಿರಾಮನು ಕಾಮಾರಪುಕುರದಲ್ಲಿ ವಾನಪ್ರಸ್ಥಿಯಂತೆ ಬಾಳಿದನು—ಇದಕ್ಕೆ ಕಾರಣ 2. ಅದ್ಭುತ ರೀತಿಯಲ್ಲಿ ರಘುವೀರ ಶಾಲಗ್ರಾಮವನ್ನು ಅವನು ಪಡೆದುದು 3. ಸಾಂಸಾರಿಕ ಕಷ್ಟಗಳಿದ್ದರೂ ಕ್ಷುದಿರಾಮನು ವಿಚಲಿತನಾಗದೆ ಭಗವಂತನನ್ನು ಆಶ್ರಯಿಸಿದ್ದನು 4. ಕ್ಷುದಿರಾಮನ ಭಕ್ತಿ ಮತ್ತು ದಿವ್ಯದರ್ಶನ. 5. ಶ್ರೀಮತಿ ಚಂದ್ರಾದೇವಿಯನ್ನು ನೆರೆಹೊರೆಯವರು ಯಾವ ದೃಷ್ಟಿಯಿಂದ ನೋಡುತ್ತಿದ್ದರು 6. ಕ್ಷುದಿರಾಮನ ತಂಗಿ ರಾಮಶೀಲಾಳ ವಿಷಯ 7. ಕ್ಷುದಿ ರಾಮನ ಸಹೋದರರಿಬ್ಬರ ವಿಷಯ 8. ಕ್ಷುದಿರಾಮನ ಸೋದರಳಿಯ ರಾಮಚಂದ್ರ 9. ಕ್ಷುದಿರಾಮನ ದೈವಭಕ್ತಿಯನ್ನು ತೋರಿಸುವ ಘಟನೆ 10. ರಾಮಕುಮಾರ ಮತ್ತು ಕಾತ್ಯಾಯಿನಿಯರ ವಿವಾಹ 11. ಕ್ಷುದಿರಾಮನ ರಾಮೇಶ್ವರ ಯಾತ್ರೆ ಮತ್ತು ರಾಮೇಶ್ವರ ಎಂಬ ಪುತ್ರನ ಜನನ 12. ರಾಮಕುಮಾರನ ದೈವೀಶಕ್ತಿ 13. ಆ ಶಕ್ತಿಗೆ ಸಂಬಂಧಿಸಿದ ಘಟನೆಗಳು 14. ರಾಮಕುಮಾರನ ಪತ್ನಿಗೆ ಸಂಬಂಧಿಸಿದ ಘಟನೆ 15. ಕ್ಷುದಿರಾಮನ ಪರಿವಾರದವರೆಲ್ಲರ ವೈಶಿಷ್ಟ್ಯಗಳು. 16. ಚಂದ್ರಾದೇವಿಯ ದಿವ್ಯದರ್ಶನ 17. ಕ್ಷುದಿರಾಮನು ಗಯಾಕ್ಷೇತ್ರಕ್ಕೆ ಹೋದುದು 18. ಗಯಾಯಾತ್ರೆಯ ಸಂಬಂಧವಾಗಿ ಹೃದಯನು ಹೇಳಿದ ಘಟನೆ 19. ಗಯಾಕ್ಷೇತ್ರದಲ್ಲಿ ಕ್ಷುದಿ ರಾಮನಿಗೆ ದಿವ್ಯಸ್ವಪ್ನ 20. ಕಾಮಾರಪುಕುರಕ್ಕೆ ಪುನರಾಗಮನ.

1. ಹತ್ತು ವರ್ಷದ ಮಗ ರಾಮಕುಮಾರ ಮತ್ತು ನಾಲ್ಕು ವರ್ಷದ ಪುತ್ರಿ ಕಾತ್ಯಾಯಿನಿಯೊಡನೆ ಕ್ಷುದಿರಾಮನು ಪತ್ನೀಸಮೇತನಾಗಿ ಕಾಮಾರಪುಕುರಕ್ಕೆ ಬಂದು ಒಂದು ಹುಲ್ಲು ಜೋಪುಡಿಯಲ್ಲಿ ತನ್ನ ಹೊಸ ಜೀವನವನ್ನು ಪ್ರಾರಂಭಿಸಿದನು. ಆಗ ಅವನ ಮನಸ್ಸು ತುಂಬ ಉದ್ವಿಗ್ನಗೊಂಡಿತ್ತು. ದ್ವೇಷ ಅಸೂಯೆಗಳಿಂದ ಕೂಡಿದ ಈ ಸಂಸಾರ ಕತ್ತಲು ಕವಿದ ಶ್ಮಶಾನ ಸದೃಶವಾಗಿ ಕಂಡಿತು ಅವನಿಗೆ. ಸ್ನೇಹ, ಪ್ರೀತಿ, ದಯೆ, ನ್ಯಾಯಪರತೆ ಮುಂತಾದ ಸದ್ಗುಣಗಳು ಮಧ್ಯೆ ಮಧ್ಯೆ ಅಲ್ಲಿ ಮಂದಪ್ರಕಾಶ ದಿಂದ ಬೆಳಗಿ ಮನಸ್ಸಿಗೆ ಸ್ವಲ್ಪ ಸುಖವನ್ನುಂಟುಮಾಡಿದರೂ, ಮರುಕ್ಷಣವೇ ಅದು ದೂರ ಸರಿದು ಹಿಂದಿನ ಕರಾಳ ಕತ್ತಲೆಯೇ ಮತ್ತೆ ವಿರಾಜಿಸುತ್ತಿತ್ತು. ಹಿಂದಿನ ಅವಸ್ಥೆಗೂ ಮತ್ತು ಈಗಿನ ಅವಸ್ಥೆಗೂ ಹೋಲಿಸಿ ನೋಡಿದಾಗ ಅವನ ಮನಸ್ಸಿನಲ್ಲಿ ಏಳುತ್ತಿದ್ದ ಭಾವನೆಗಳನ್ನು ಸುಲಭವಾಗಿ ಊಹಿಸಬಹುದು. ಸಾಮಾನ್ಯವಾಗಿ ಮನುಷ್ಯ

ದುಃಖ ಸಂಕಷ್ಟಗಳಿಗೆ ಒಳಗಾದಾಗಲೇ ಅವನಿಗೆ ಸಂಸಾರದ ಅಸಾರತೆ ಮತ್ತು ಅನಿತ್ಯತೆ ಚೆನ್ನಾಗಿ ಮನದಟ್ಟಾಗುವುದು. ಇಂತಹ ವಿಷಮಪರಿಸ್ಥಿತಿಯಲ್ಲಿ ಕ್ಷುದಿರಾಮನಲ್ಲಿ ವೈರಾಗ್ಯ ಭಾವವುಂಟಾದುದು ಸ್ವಾಭಾವಿಕವೆ. ಅಷ್ಟೇ ಅಲ್ಲದೆ, ಅನಿರೀಕ್ಷಿತವಾಗಿಯೂ ಅಯಾಚಿತವಾಗಿಯೂ ಈ ಸ್ನೇಹ ಸಹಾಯ ಅವನ ಮನಸ್ಸಿನಲ್ಲಿ ಭಗವದ್ಭಕ್ತಿಯನ್ನೂ, ನಿರ್ಭರತೆಯನ್ನೂ ಮೂಮ್ಮಡಿಸಿತು. ಅವನೀಗ ಹಣ ಸಂಪಾದನೆಯಲ್ಲಿ ಉದಾಸೀನವಾಗಿ ಶ್ರೀರಾಮಚಂದ್ರನ ಸೇವೆ ಪೂಜೆಗಳಲ್ಲಿ ದಿನಗಳನ್ನು ಕಳೆಯತೊಡಗಿದನು. ಸಂಸಾರ ದಲ್ಲಿದ್ದರೂ ಅಸಂಸಾರಿಯಾಗಿ ವಾನಪ್ರಸ್ಥರಂತೆ ಕಾಲಯಾಪನೆ ಮಾಡುತ್ತಿದ್ದನು.

2. ಈ ಸಂದರ್ಭದಲ್ಲಿ ನಡೆದ ಒಂದು ವಿಶೇಷ ಘಟನೆ ಅವನ ಧರ್ಮವಿಶ್ವಾಸ ವನ್ನು ಇನ್ನೂ ವೃದ್ಧಿಸಿತು. ಯಾವುದೋ ಕೆಲಸಕ್ಕಾಗಿ ಅವನು ಬೇರೊಂದು ಹಳ್ಳಿಗೆ ಹೋಗಬೇಕಾಯಿತು. ಹಿಂದಿರುಗಿ ಬರುವಾಗ ಬಳಲಿದ್ದರಿಂದ ಒಂದು ಮರದ ಕೆಳಗೆ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದನು. ಆ ನೀರವ ವಾತಾವರಣದಲ್ಲಿ ಅವನ ಮನಸ್ಸು ಶಾಂತವಾಯಿತು. ತಂಗಾಳಿಯು ಅವನ ಮನಸ್ಸನ್ನು ಶೀತಲಗೊಳಿಸಿತು. ಆ ಹಿತವಾದ ಸನ್ನಿವೇಶ ಅವನನ್ನು ನಿದ್ರಾವಶನನ್ನಾಗಿಸಿತು. ಆಗ ಅವನಿಗೊಂದು ಸ್ವಪ್ನವಾಯಿತು. ಅವನ ಇಷ್ಟದೇವತೆ ರಾಮಚಂದ್ರನು ಬಾಲಕವೇಷದಲ್ಲಿ ಬಂದು ಅವನ ಮುಂದೆ ನಿಂತು, ಒಂದು ಜಾಗವನ್ನು ನಿರ್ದೇಶಿಸಿ ಹೇಳಿದನು, ''ನಾನಿಲ್ಲಿ ಅನೇಕ ದಿನಗಳಿಂದ ಊಟವಿಲ್ಲದೆ, ಅನಾದರಣೆಗೊಳಗಾಗಿ ಇದ್ದೇನೆ. ನನ್ನನ್ನು ನಿನ್ನ ಮನೆಗೆ ಕರೆದುಕೊಂಡು ಹೋಗು. ನನಗೆ ನಿನ್ನ ಸೇವೆಯನ್ನು ಸ್ವೀಕರಿಸುವ ಅಭಿಲಾಷೆಯಿದೆ.'' ಇದನ್ನು ಕೇಳಿ ಕ್ಷುದಿ ರಾಮನು ಕಾತರತೆಯಿಂದ ನುಡಿದನು, ''ಪ್ರಭು, ನಾನು ಭಕ್ತಿಹೀನ ಮತ್ತು ಕಡು ಬಡವ. ನನ್ನ ಮನೆಯಲ್ಲಿ ನಿನಗೆ ಸರಿಯಾದ ಸೇವೆ ನಡೆಯಲಾರದು. ನಾನು ಸೇವಾಪರಾಧಿ ಯಾಗಿ ಘೋರ ನರಕಕ್ಕೆ ಹೋಗಬೇಕಾದೀತು. ಈ ರೀತಿ ಅಸಾಧ್ಯವಾದುದನ್ನು ನನ್ನ ಮೇಲೆ ಏಕೆ ಹೊರಿಸುತ್ತೀಯೆ ?'' ಬಾಲಕ ರಾಮನು ಪ್ರಸನ್ನ ವದನನಾಗಿ ಅವನಿಗೆ ಅಭಯವನ್ನು ನೀಡುತ್ತ ಹೀಗೆಂದನು, ''ಭಯ ಬೇಡ. ನಾನು ನಿನ್ನ ಯಾವ ಲೋಪ ದೋಷಗಳನ್ನೂ ಎಣಿಸುವುದಿಲ್ಲ. ನನ್ನನ್ನು ಕರೆದುಕೊಂಡುಹೋಗು.'' ಕ್ಷುದಿರಾಮನು ಭಗವಂತನ ಈ ರೀತಿಯ ಅನಿರೀಕ್ಷಿತ ಕೃಪೆಯಿಂದ ಮುಗ್ಧನಾಗಿ ಭಕ್ತಿಯ ಆವೇಶದಿಂದ ರೋದಿಸತೊಡಗಿದನು. ಇಷ್ಟರಲ್ಲೇ ಅವನ ನಿದ್ರೆ ಕೊನೆಗೊಂಡಿತು.

ನಿದ್ರೆಯಿಂದ ಎಚ್ಚೆತ್ತ ಕ್ಷುದಿರಾಮನಿಗೆ ಅತ್ಯಾಶ್ಚರ್ಯವಾಯಿತು, ಅಷ್ಟೇ ಆನಂದವೂ ಉಂಟಾಯಿತು. ಸ್ವಪ್ನದಲ್ಲಿ ಶ್ರೀರಾಮನು ನಿರ್ದೇಶಿಸಿದ ಸ್ಥಳದ ಕಡೆ ತನ್ನ ದೃಷ್ಟಿ ಹಾಯಿಸಿದನು. ಮೇಲೆದ್ದು ಅಲ್ಲಿಗೆ ಹೋಗಿ ನೋಡಿದಾಗ ಅಲ್ಲಿ ಒಂದು ಶಾಲಗ್ರಾಮವಿತ್ತು, ಅದರ ಮೇಲೆ ಒಂದು ಸರ್ಪವು ಹೆಡೆ ಬಿಚ್ಚಿಕೊಂಡಿತ್ತು. ಕುತೂಹಲ ದಿಂದ ಕ್ಷುದಿರಾಮನು ಶಿಲೆಯ ಬಳಿಸಾರಿದನು. ಕೂಡಲೆ ಸರ್ಪ ಕಣ್ಮರೆಯಾಯಿತು. ಶಾಲಗ್ರಾಮಶಿಲೆಯು ಆ ಹಾವಿನ ಬಿಲದ ದ್ವಾರದಲ್ಲಿತ್ತು. ಕನಸು ಸತ್ಯ ವಾಯಿತೆಂದು ಭಾವಿಸಿ ಸರ್ಪದ ಭಯವನ್ನು ತೊರೆದು ಅವನು ಭಕ್ತಿಪೂರ್ವಕವಾಗಿ ಆ

ಶಿಲೆಯನ್ನು ಕೈಗೆತ್ತಿಕೊಂಡನು. ಅನಂತರ ಅದರ ಲಕ್ಷಣಗಳನ್ನೆಲ್ಲ ಪರೀಕ್ಷಿಸಿ ಅದು 'ರಘುವೀರ' ಎಂಬ ಹೆಸರಿನ ಶಿಲೆಯೆಂದು ನಿರ್ಧರಿಸಿದನು. ಆನಂದ ವಿಸ್ಮಯಗಳೆರಡರಿಂದಲೂ ಕೂಡಿದವನಾಗಿ ಅದನ್ನು ತನ್ನ ಮನೆಗೆ ತೆಗೆದುಕೊಂಡು ಹೋದನು. ಶಾಸ್ತ್ರೋಕ್ತ ವಿಧಿಗಳ ಪೂರ್ವಕ ಅದನ್ನು ಮನೆಯಲ್ಲಿ ಗೃಹದೇವತಾರೂಪದಲ್ಲಿ ಪ್ರತಿಷ್ಠಾಪಿಸಿ ನಿತ್ಯಪೂಜೆಯನ್ನು ಸಲ್ಲಿಸತೊಡಗಿದನು. ಇದಕ್ಕೂ ಮುಂಚೆ ಕ್ಷುದಿರಾಮನು ಇಷ್ಟದೇವತೆಯಾದ ಶ್ರೀರಾಮಚಂದ್ರನ ಪೂಜೆಯಲ್ಲದೆ ಕಲಶ ಪ್ರತಿಷ್ಠಾಪನೆಯ ಮೂಲಕ ಶೀತಲಾದೇವಿಯನ್ನೂ ನಿತ್ಯ ಪೂಜಿಸುತ್ತಿದ್ದನು.

3. ಕಷ್ಟದಲ್ಲಿಯೇ ದಿನಗಳು ಉರುಳಿದುವು. ಆದರೆ ಕ್ಷುದಿರಾಮನು ಉದಾಸೀನ ಭಾವದಿಂದ ಧರ್ಮವನ್ನು ದೃಢವಾಗಿ ಹಿಡಿದುಕೊಂಡು ಸಂತಸದಿಂದಲೇ ದಿನ ಕಳೆಯುತ್ತಿದ್ದನು. ಮನೆಯಲ್ಲಿ ಕೆಲವುಬಾರಿ ಊಟಕ್ಕೆ ಸಾಕಷ್ಟು ಇರುತ್ತಿರಲಿಲ್ಲ. ಪತಿಪ್ರಾಣಳಾದ ಚಂದ್ರಮಣಿದೇವಿ ಈ ದುಃಸ್ಥಿತಿಯನ್ನು ಕ್ಷುದಿರಾಮನಲ್ಲಿ ನಿವೇದಿಸಿಕೊಂಡಾಗ ಅವನು ಆಕೆಗೆ ಆಶ್ವಾಸನೆಯಿತ್ತು ಹೇಳುತ್ತಿದ್ದನು, "ಭಯವೇಕೆ ? ಶ್ರೀ ರಘುವೀರನೇ ಉಪವಾಸವಿರಬೇಕಾದರೆ ಅವನೊಡನೆ ನಾವೂ ಉಪವಾಸ ಮಾಡೋಣ." ಸರಳಸ್ವಭಾವದ ಚಂದ್ರಮಣಿಯು ಪತಿಯ ಮಾತಿನಿಂದ ಸಮಾಧಾನಗೊಂಡು ತನ್ನ ಗೃಹಕೃತ್ಯಗಳಲ್ಲಿ ತೊಡಗುತ್ತಿದ್ದಳು; ಆಹಾರ ಪದಾರ್ಥಗಳೂ ಹೇಗೊ ಬಂದೊದಗುತ್ತಿದ್ದವು.

ಆದರೆ ಆಹಾರದ ಕೊರತೆ ಬಹುಕಾಲವಿರಲಿಲ್ಲ. ಅವನ ಸ್ನೇಹಿತ ಸುಖಲಾಲ ಗೋಸ್ವಾಮಿ ಲಕ್ಷ್ಮೀಜಲಾ ಎಂಬ ಹೆಸರಿನ ಸುಮಾರು ಅರ್ಧ ಎಕರೆ ಹೊಲವನ್ನು ಅವನಿಗೆ ದಾನವಾಗಿ ನೀಡಿದನು ಅದರಿಂದ ಒಳುವ ಉತ್ಪತ್ತಿಯಿಂದ ಸಂಸಾರದ ಖರ್ಚು ಕಳೆದು ಅತಿಥಿ ಅಭ್ಯಾಗತರ ಸೇವೆಗೂ ಮಿಗುತ್ತಿತ್ತು. ಹೊಲದ ಬೇಸಾಯ ಮಾಡಲು ಕ್ಷುದಿರಾಮನು ಸಂಬಳಕ್ಕೆ ರೈತರನ್ನು ನಿಯಮಿಸುತ್ತಿದ್ದನು. ಭತ್ತದ ಸಸಿ ಸಿದ್ಧವಾದ ಮೇಲೆ ತಾನೇ ರಘುವೀರನ ಹೆಸರಿನಲ್ಲಿ ಸ್ವಲ್ಪ ನಾಟಿ ಮಾಡಿ ಅನಂತರ ರೈತರಿಗೆ ಮಾಡಲು ಬಿಡುತ್ತಿದ್ದನು.

4. ಹೀಗೆಯೆ ಎರಡು ಮೂರು ವರ್ಷಗಳು ಕಳೆದವು. ಸಂಸಾರದ ಮೂಲಭೂತ ಆವಶ್ಯಕತೆಗಳಿಗೆ ಶ್ರೀರಾಮಚಂದ್ರನ ಕೃಪೆಯಿಂದ ಏನೂ ಕಡಿಮೆಯಾಗಲಿಲ್ಲ. ಈ ಕಠೋರ ಜೀವನದಿಂದ ಕ್ಷುದಿರಾಮನ ಮನಸ್ಸಿನಲ್ಲಿ ಶಾಂತಿ ಸಂತೋಷ ದೈವಭಕ್ತಿ ಇನ್ನೂ ಅಧಿಕವಾಯಿತು. ಬರಬರುತ್ತ ಹೆಚ್ಚು ಅಂತರ್ಮುಖಿಯಾದ. ಇದರ ಪ್ರಭಾವದಿಂದ ಆಗಾಗ ಅವನಿಗೆ ದಿವ್ಯದರ್ಶನಗಳಾಗುತ್ತಿದ್ದುವು. ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಸಂಧ್ಯಾವಂದನೆಯ ಸಮಯದಲ್ಲಿ ಗಾಯತ್ರೀ ಮಂತ್ರವನ್ನು ಜಪಿಸುವಾಗ ಅವನ ಎದೆಯು ರಕ್ತವರ್ಣವಾಗುತ್ತಿತ್ತು ಮತ್ತು ಕಣ್ಣಿನಿಂದ ಪ್ರೇಮಾಶ್ರು ಧಾರಾಕಾರವಾಗಿ ಸುರಿಯುತ್ತಿತ್ತು. ಮುಂಜಾನೆ ಅವನು ಹೂ ಕೀಳಲು ಹೋದಾಗ ಶ್ರೀ ಶೀತಲಾದೇವಿಯು ಎಂಟು ವರ್ಷದ ಬಾಲಕಿಯಾಗಿ, ಕೆಂಪು ವಸ್ತ್ರ ಮತ್ತು ನಾನಾ ಆಭರಣಗಳಿಂದ

ಭೂಷಿತಳಾಗಿ ಅವನೊಡನೆ ಹೋಗುತ್ತಿದ್ದಳು, ಮತ್ತು ಹೂವಿನ ಗಿಡದ ಕೊಂಬೆಗಳನ್ನು ಬಗ್ಗಿಸಿ ಅವನಿಗೆ ಹೂ ಕೀಳಲು ಸಹಾಯಮಾಡುತ್ತಿದ್ದಳು. ಈ ಎಲ್ಲ ದಿವ್ಯದರ್ಶನಗಳು ಅವನನ್ನು ಉಲ್ಲಾಸದಲ್ಲಿ ಇರಿಸಿದವು. ಈಶ್ವರನಲ್ಲಿದ್ದ ದೃಢಭಕ್ತಿ ಮತ್ತು ವಿಶ್ವಾಸ ಅವನ ಮುಖದಲ್ಲಿ ಪ್ರತಿಬಿಂಬಿತವಾಗಿ ಅವನು ಯಾವಾಗಲೂ ಒಂದು ದಿವ್ಯಭಾವದಲ್ಲಿ ಇರುತ್ತಿರುವಂತೆ ಕಂಡು ಬರುತ್ತಿತ್ತು. ಅವನ ಸೌಮ್ಯ ಶಾಂತ ಮುಖಮುದ್ರೆಯನ್ನು ನೋಡುತ್ತಿದ್ದ ಗ್ರಾಮವಾಸಿಗಳು ಕ್ರಮೇಣ ಅವನನ್ನು ಋಷಿಯಂತೆ ಭಕ್ತಿಭಾವದಿಂದ ಕಾಣತೊಡಗಿದರು. ಅವನು ಬರುವುದನ್ನು ಕಂಡಕೂಡಲೇ ತಮ್ಮ ಕಾಡು ಹರಟೆಯನ್ನು ನಿಲ್ಲಿಸಿ ಎದ್ದುನಿಂತು ಗೌರವಿಸುತ್ತಿದ್ದರು. ಅವನು ಕೊಳದಲ್ಲಿ ಸ್ನಾನ ಮಾಡುತ್ತಿರುವಾಗ ಯಾರೂ ಕೊಳಕ್ಕೆ ಇಳಿಯುತ್ತಿರಲಿಲ್ಲ. ಅವನ ಆಶೀರ್ವಾದ ಯಾವಾಗಲೂ ಸಫಲವಾಗುವುದೆಂಬ ವಿಶ್ವಾಸದಿಂದ ಸಂಪತ್ತು ವಿಪತ್ತು—ಎರಡೂ ಸಂದರ್ಭಗಳಲ್ಲಿ ಅವನ ಆಶೀರ್ವಾದಕ್ಕಾಗಿ ಜನ ಬರುತ್ತಿದ್ದರು.

5. ಪ್ರೀತಿ ಮತ್ತು ಸರಳತೆಯ ಮೂರ್ತಿಯಂತಿದ್ದ ಚಂದ್ರಮಣಿಯನ್ನು ಎಲ್ಲರೂ ಮಾತೃ ಭಕ್ತಿಯಿಂದ ಕಾಣುತ್ತಿದ್ದರು. ಕಷ್ಟ ಸಂಕಟಗಳ ಪರಿಸ್ಥಿತಿಯಲ್ಲಿ ಅವಳಷ್ಟು ಸಹಾನುಭೂತಿಯನ್ನು ತೋರಿಸುವವರು ಬೇರೆ ಯಾರೂ ಇರಲಿಲ್ಲ. ದರಿದ್ರರಾರಾದರು ಯಾವುದೇ ಸಂದರ್ಭದಲ್ಲಿ ಆಕೆಯೆಡೆಗೆ ಹೋದರೂ ಏನಾದರೂ ತಿನ್ನಲು ಸಿಕ್ಕಿಯೇ ಸಿಗುತ್ತಿತ್ತು. ಅಷ್ಟೇ ಅಲ್ಲದೆ ಆಕೆ ಎಷ್ಟು ಪ್ರೀತಿ ಸಹಾನುಭೂತಿಯಿಂದ ಮಾತನಾಡಿಸುತ್ತಿದ್ದಳೆಂದರೆ ಅವರ ಹೃದಯ ಸಂತೃಪ್ತಿಯಿಂದ ತುಂಬಿ ಹೋಗುತ್ತಿತ್ತು. ಭಿಕ್ಷುಕ ಸಾಧುಗಳಿಗೆ ತಿಳಿದಿತ್ತು ಈ ಮನೆ ಅವರಿಗೆ ಸದಾ ತೆರೆದಿರುತ್ತದೆ ಎಂದು. ಕೂಲಿ ಕೆಲಸ ಮಾಡುವ ಬಾಲಕ ಬಾಲಕಿಯರು ಆಕೆಯ ಹತ್ತಿರ ಹೋಗಿ ಏನಾದರೂ ಕೇಳಿದರೆ ಆಕೆ ಹೇಗಾದರೂ ಮಾಡಿ ಅದನ್ನು ನೀಡಿಯೇ ನೀಡುತ್ತಿದ್ದಳು. ಹೀಗೆ ಕೆಲಸದಾಳುಗಳೆಲ್ಲ ಕ್ಷುದಿರಾಮನ ಗುಡಿಸಿಲಿನ ಸುತ್ತ ಸಮಯ ದೊರೆತಾಗಲೆಲ್ಲ ಬಂದು ಮುತ್ತುತ್ತಿದ್ದರು. ಅಲ್ಲಿ ಅವರಿಗೆ ಶಾಂತಿ ಸಮಾಧಾನ ಯಾವಾಗಲೂ ಕಾದಿರುತ್ತಿತ್ತು.

6. ಮೊದಲೇ ಹೇಳಿದಂತೆ ಕ್ಷುದಿರಾಮನಿಗೆ ರಾಮಶೀಲಾ ಎಂಬ ಹೆಸರಿನ ಸಹೋದರಿಯೂ, ನಿಧಿರಾಮ ಮತ್ತು ಕನಾಯ್‌ರಾಮ ಎಂಬ ಹೆಸರಿನ ಕಿರಿಯ ಸಹೋದರರೂ ಇದ್ದರು. ಜಮೀಂದಾರನೊಡನೆ ವಿವಾದದಿಂದ ಸರ್ವಸ್ವವನ್ನು ಕಳೆದುಕೊಂಡು ಕಾಮಾರಪುರಕ್ಕೆ ಬರುವಾಗ ಸಹೋದರಿಗೆ ಮೂವತ್ತೈದು ವರ್ಷ ಮತ್ತು ಸಹೋದರರಿಬ್ಬರಿಗೆ ಕ್ರಮವಾಗಿ ಮೂವತ್ತು ಮತ್ತು ಇಪ್ಪತ್ತೈದು ವರ್ಷ. ಅವರೆಲ್ಲ ವಿವಾಹಿತರಾಗಿ ಸಂಸಾರಸ್ಥರಾಗಿದ್ದರು. ರಾಮಶೀಲಾಳಿಗೆ ಕಾಮಾರಪುಕುರದಿಂದ ಹನ್ನೆರಡು ಮೈಲಿ ದೂರದಲ್ಲಿರುವ ಛಿಲಿಂಪುರದ ಭಾಗವತ ಬಂದ್ಯೋಪಾಧ್ಯಾಯನಿಗೆ ಕೊಟ್ಟು ವಿವಾಹವಾಗಿತ್ತು ಮತ್ತು ರಾಮಚಂದ್ರ ಎಂಬ ಪುತ್ರನೂ, ಹೇಮಾಂಗಿನಿ ಎಂಬ ಪುತ್ರಿಯೂ ಇದ್ದರು. ಕ್ಷುದಿರಾಮನಿಗೆ ಒದಗಿದ ವಿಪತ್ತಿನ ಸಂದರ್ಭದಲ್ಲಿ ರಾಮಚಂದ್ರನ ವಯಸ್ಸು ಇಪ್ಪತ್ತೊಂದು, ಮತ್ತು ಮೇದಿನೀಪುರದಲ್ಲಿ ವಕೀಲವೃತ್ತಿ

ಮಾಡುತ್ತಿದ್ದನು. ಆಗ ಹೇಮಾಂಗಿನಿಯ ವಯಸ್ಸು ಹದಿನಾರು ವರ್ಷ. ಅವಳು ಜನಿಸಿದ್ದು ದೇರೆಪುರದ ಅಜ್ಜಿಯ ಮನೆಯಲ್ಲಿಯೇ. ಸಹೋದರರನಿಗಿಂತ ಅಧಿಕವಾಗಿ ಅವಳು ಅಲ್ಲಿ ಎಲ್ಲರ ಪ್ರೀತಿಗೆ ಒಳಗಾಗಿದ್ದಳು. ಕ್ಷುದಿರಾಮನು ತನ್ನ ಮಗಳನ್ನು ನೋಡಿಕೊಳ್ಳುವಂತೆಯೇ ಆಕೆಯನ್ನು ಸಾಕಿ ಸಲಹಿದನು. ಅವಳು ಪ್ರಾಯಕ್ಕೆ ಬಂದ ಮೇಲೆ ಹತ್ತಿರದ ಶಿಹೊರ್ ಗ್ರಾಮದ ಕೃಷ್ಣಚಂದ್ರ ಮುಖೋಪಾಧ್ಯಾಯನಿಗೆ ತಾನೇ ಮದುವೆಮಾಡಿ ಕೊಟ್ಟನು. ಅವಳು ಮುಂದೆ ನಾಲ್ಕು ಜನ ಪುತ್ರರನ್ನು ಪಡೆದಳು— ರಾಘವ, ರಾಮರತನ, ಹೃದಯರಾಮ ಮತ್ತು ರಾಜಾರಾಮ.

7. ಕ್ಷುದಿರಾಮನ ತಮ್ಮ ನಿಧಿರಾಮನಿಗೆ ಮಕ್ಕಳಿದ್ದರೊ ಇಲ್ಲವೊ ತಿಳಿಯದು. ಆದರೆ ಕಿರಿಯ ತಮ್ಮ ಕನಾಯ್‌ರಾಮನಿಗೆ ಹಲಧಾರಿ ಮತ್ತು ಕಾಲಿದಾಸ ಎಂಬ ಇಬ್ಬರು ಪುತ್ರರಿದ್ದರು. ಕನಾಯ್‌ರಾಮನು ಭಕ್ತನೂ ಭಾವುಕನೂ ಆಗಿದ್ದ. ಒಮ್ಮೆ ಅವನು ಒಂದು ಕಡೆ ಜಾತ್ರೆ(ಒಂದು ಬಗೆಯ ನಾಟಕ)ಗೆ ಹೋಗಿದ್ದನು. ರಾಮಾಯಣದ ಕಥಾಪ್ರಸಂಗ—ಶ್ರೀರಾಮನನ್ನು ಕಾಡಿಗೆ ಕಳಿಸುವ ಸನ್ನಿವೇಶ. ಆ ದುಃಖದ ಆವೇಶದಲ್ಲಿ ಮೈಮರೆತು ಕನಾಯ್‌ರಾಮನು ಕೈಕೇಯಿಯ ಪಾತ್ರಧಾರಿಯನ್ನು ಹೊಡೆಯಲು ಹೋಗಿದ್ದನು.

8. ರಾಮಶೀಲಾಳ ಪುತ್ರ ರಾಮಚಂದ್ರ ಮಂದ್ಯೋಪಾಧ್ಯಾಯನಿಗೆ ತನ್ನ ವಕೀಲ ವೃತ್ತಿಯಿಂದ ಸಾಕಷ್ಟು ಹಣ ಸಂಪಾದನೆಯಾಗುತ್ತಿತ್ತು. ಕ್ಷುದಿರಾಮನು ಕಷ್ಟದ ಪರಿಸ್ಥಿತಿಯಲ್ಲಿರುವುದನ್ನು ತಿಳಿದು ತಿಂಗಳಿಗೆ ಹದಿನೈದು ರೂಪಾಯಿ ಅವನಿಗೆ ಕಳಿಸುತ್ತಿದ್ದನು. ನಿಧಿರಾಮ ಮತ್ತು ಕನಾಯ್‌ರಾಮರಿಗೂ ತಿಂಗಳಿಗೆ ಹತ್ತು ರೂಪಾಯಿ ಕಳಿಸುತ್ತಿದ್ದನು. ಕ್ಷುದಿರಾಮನು ರಾಮಚಂದ್ರನ ಮನೆಯಿಂದ ಸ್ವಲ್ಪ ಕಾಲ ಯಾವ ಸುದ್ದಿಯೂ ಬರದಿದ್ದರೆ ತಾನೇ ಮೇದಿನೀಪುರಕ್ಕೆ ಹೋಗಿ ಕೆಲವು ದಿನ ಅಲ್ಲಿದ್ದು ಹಿಂದಿರುಗುತ್ತಿದ್ದನು. ಹೀಗೆ ಒಂದುಸಾರಿ ಮೇದಿನೀಪುರಕ್ಕೆ ಹೋಗುವಾಗ ಒಂದು ವಿಶೇಷ ಘಟನೆ ಸಂಭವಿಸಿತು. ಈ ಘಟನೆಯು ಕ್ಷುದಿರಾಮನ ಭಕ್ತಿ—ನಿಷ್ಠೆಯನ್ನು ಪರಿಚಯಿಸುತ್ತದೆ.

9. ಮೇದಿನೀಪುರ ಕಾಮಾರಪುಕುರದಿಂದ ನಲವತ್ತೊಂದು ಮೈಲಿ. ಬಹಳ ಕಾಲದಿಂದ ಸುದ್ದಿಯಿಲ್ಲದೆ ರಾಮಚಂದ್ರನನ್ನು ನೋಡಿಕೊಂಡು ಬರಲು ಕ್ಷುದಿರಾಮನು ಹೊರಟಿದ್ದನು. ಸುಮಾರು ಹತ್ತು ಮೈಲಿ ದೂರ ಹೋಗಿದ್ದಿರಬಹುದು. ಆಗ ಮಾಘ ಅಥವಾ ಫಾಲ್ಗುಣ ಮಾಸ. ಬಿಲ್ವ ವೃಕ್ಷಗಳು ಹೊಸ ಚಿಗುರಿನಿಂದ ನಲಿಯು ತ್ತಿದ್ದುವು. ಅಷ್ಟು ದಿನವೂ ಶಿವನ ಪೂಜೆಗೆ ನವ ಬಿಲ್ವಪತ್ರೆ ಸಿಗದೆ ಜನರಿಗೆ ಕಷ್ಟ ವಾಗಿತ್ತು. ಕ್ಷುದಿರಾಮನೂ ಇದೇ ಕಷ್ಟವನ್ನು ಕೆಲವು ದಿನಗಳ ಹಿಂದೆ ಅನುಭವಿಸಿದ್ದ. ಈ ಹೊಚ್ಚ ಹೊಸ ಬಿಲ್ವಪತ್ರೆಗಳನ್ನು ಕಂಡು ಅವನು ಉಲ್ಲಾಸಗೊಂಡ. ಮೇದಿನೀ ಪುರಕ್ಕೆ ಹೋಗುವುದನ್ನು ನಿಲ್ಲಿಸಿ, ಅಲ್ಲಿಯೇ ಗ್ರಾಮದಲ್ಲಿ ಒಂದು ಬುಟ್ಟಿಯನ್ನೂ ಟವಲನ್ನು ಕ್ರಯಕ್ಕೆ ಕೊಂಡುಕೊಂಡನು. ಹತ್ತಿರದ ಕೊಳದಲ್ಲಿ ಅವನ್ನು ತೊಳೆದು,

ಬುಟ್ಟಿಯು ತುಂಬ ಬಿಲ್ವಪತ್ರೆಯನ್ನು ಕಿತ್ತು, ಅದರ ಮೇಲೆ ಒದ್ದೆಯ ಟವಲನ್ನು ಮುಚ್ಚಿ ಕಾಮಾರಪುಕುರಕ್ಕೆ ಹಿಂದಿರುಗಿದಾಗ ಮಧ್ಯಾಹ್ನ ಮೂರು ಗಂಟೆಯಾಗಿತ್ತು. ಬಂದ ಕೂಡಲೆ ಸ್ನಾನ ಮುಗಿಸಿ ಬಹಳಹೊತ್ತು ಮಹಾದೇವನ ಮತ್ತು ಶೀತಲಾದೇವಿಯ ಪೂಜೆಮಾಡಿ ಸಂತೃಪ್ತಿಯನ್ನು ಪಡೆದ ನಂತರವೇ ಅವನು ಆಹಾರ ಸ್ವೀಕರಿಸಿದ್ದು. ಚಂದ್ರಮಣಿಗೆ ವಿಷಯವನ್ನು ತಿಳಿದು ಅಚ್ಚರಿಯಾಯಿತು. ಮರುದಿನ ಮತ್ತೆ ಮೇದಿನೀಪುರಕ್ಕೆ ಹೊರಟನು.

10. ಹೀಗೆ ಕಾಮಾರಪುಕುರದಲ್ಲಿ ಆರು ವರ್ಷಗಳು ಕಳೆದುವು. ಈಗ ಕ್ಷುದಿರಾಮನ ಮಗ ರಾಮಕುಮಾರನಿಗೆ ಹದಿನಾರು ವರ್ಷ ಮತ್ತು ಮಗಳಿಗೆ ಹನ್ನೊಂದು ವರ್ಷ ವಯಸ್ಸು. ಆಕೆಗೀಗ ಮದುವೆಯ ವಯಸ್ಸು. ಕಾಮಾರಪುಕುರಕ್ಕೆ ಎರಡು ಮೈಲಿ ದೂರದಲ್ಲಿರುವ ಆನೂರಿನ ಕೇನಾರಾಮ ವಂದ್ಯೋಪಾಧ್ಯಾಯನಿಗೆ ಮಗಳನ್ನು ಧಾರೆಯೆರೆದು ಕೊಟ್ಟನು. ಕೇನಾರಾಮನ ತಂಗಿಯನ್ನು ಪುತ್ರ ರಾಮಕುಮಾರನಿಗೆ ಮದುವೆ ಮಾಡಿಸಿ ಕರೆತಂದನು. ರಾಮಕುಮಾರನು ವ್ಯಾಕರಣ ಮತ್ತು ಸಾಹಿತ್ಯಗಳ ಅಧ್ಯಯನವನ್ನು ಮುಗಿಸಿ ಈಗ ಸ್ಮೃತಿಶಾಸ್ತ್ರವನ್ನು ಅಧ್ಯಯಿಸುತ್ತಿದ್ದನು.

11. ಮತ್ತೆ ನಾಲ್ಕು ವರ್ಷಗಳು ಕಳೆದುವು. ಶ್ರೀರಘುವೀರನ ಕೃಪೆಯಿಂದ ಕ್ಷುದಿರಾಮನ ಸಂಸಾರ ಸುವ್ಯವಸ್ಥಿತವಾಗಿತ್ತು. ಮತ್ತು ಅವನೂ ನಿಶ್ಚಿಂತೆಯಿಂದ ಭಗವದಾರಾಧನೆಯಲ್ಲಿ ನಿರತನಾಗಿದ್ದನು. ಸ್ವಲ್ಪ ಕಾಲದನಂತರ ರಾಮಕುಮಾರನು ಸ್ಮೃತಿಯ ಅಧ್ಯಯನವನ್ನು ಸಮಾಪ್ತಿಗೊಳಿಸಿ ಸಂಸಾರದ ನಿರ್ವಹಣೆಯನ್ನು ತಾನು ವಹಿಸಿಕೊಂಡನು. ಈಗ ಕ್ಷುದಿರಾಮನ ಮನಸ್ಸು ತೀರ್ಥಪರ್ಯಟನೆಯ ಕಡೆಗೆ ಹರಿಯಿತು. ಬಹುಶಃ ಕ್ರಿ.ಶ. ೧೮೨೪ ರಲ್ಲಿ ರಾಮೇಶ್ವರಕ್ಕೆ ಕಾಲ್ನಡಿಗೆಯಲ್ಲಿ ಹೊರಟನು. ದಕ್ಷಿಣ ಭಾರತದ ತೀರ್ಥಸ್ಥಳಗಳನ್ನೆಲ್ಲ ಸಂದರ್ಶಿಸಿ ಒಂದು ವರ್ಷದನಂತರ ಮನೆಗೆ ಮರಳಿದನು. ಬರುವಾಗ ರಾಮೇಶ್ವರದಿಂದ ಬಾಣಲಿಂಗವೊಂದನ್ನು ತಂದನು. ಅದನ್ನು ಈಗ ರಘುವೀರ ಶಾಲಗ್ರಾಮದ ಪಕ್ಕದಲ್ಲಿ ಕಾಣಬಹುದು. ೧೮೨೬ರಲ್ಲಿ ಬಹುಕಾಲದನಂತರ ಚಂದ್ರಮಣಿಯು ಎರಡನೆಯ ಪುತ್ರನಿಗೆ ಜನ್ಮವಿತ್ತಳು. ಈ ತೀರ್ಥಯಾತ್ರೆಯ ಸ್ಮೃತಿಗಾಗಿ ಆ ಮಗುವಿಗೆ ರಾಮೇಶ್ವರ ಎಂದು ಹೆಸರಿಟ್ಟರು.

12. ಇದಾದನಂತರ ಎಂಟು ವರ್ಷಗಳವರೆಗೆ ಅವರ ಜೀವನ ಒಂದೇ ಸಮನೆ ಮುಂದುವರಿಯಿತು. ಧಾರ್ಮಿಕ ಕರ್ಮಗಳ ಮೂಲಕ ರಾಮಕುಮಾರನು ಈಗ ಹಣ ಸಂಪಾದನೆ ಮಾಡುತ್ತಿದ್ದನು. ಸಂಸಾರದಲ್ಲಿ ಈಗ ಹಿಂದಿನ ಕಷ್ಟಗಳಿರಲಿಲ್ಲ. ರಾಮಕುಮಾರನು ಶಾಂತಿ ಸ್ವಸ್ತ್ಯಯನಾದಿ ಧಾರ್ಮಿಕ ಕ್ರಿಯೆಗಳಲ್ಲಿ ತುಂಬ ಪಳಗಿದ್ದನು. ಈ ವಿಷಯದಲ್ಲಿ ಅವನಿಗೆ ದೈವೀಶಕ್ತಿ ಲಭಿಸಿದೆ ಎಂದು ಜನ ಹೇಳುತ್ತಿದ್ದರು. ಶಾಸ್ತ್ರಾಧ್ಯಯನದ ಫಲವಾಗಿ ಅವನಿಗೆ ಆದ್ಯಾಶಕ್ತಿಯ ಉಪಾಸನೆಯಲ್ಲಿ ತುಂಬ ಶ್ರದ್ಧೆ ಉಂಟಾಗಿತ್ತು. ಯೋಗ್ಯ ಗುರುವಿನಿಂದ ಅವನು ದೇವಿಯ ಮಂತ್ರವನ್ನೂ ಪಡೆದಿದ್ದನು. ಒಂದುದಿನ ದೇವಿಯ ಆರಾಧನೆಯ ಸಂದರ್ಭದಲ್ಲಿ ಅವನಿಗೆ ಒಂದು ಅಪೂರ್ವ ದರ್ಶನ

ವಾಯಿತು. ಶ್ರೀದೇವಿಯು ತನ್ನ ಬೆರಳಿನಿಂದ ಜ್ಯೋತಿಷಶಾಸ್ತ್ರದ ಸಿದ್ಧಿಲಾಭಕ್ಕಾಗಿ ಅವನ ನಾಲಗೆಯ ಮೇಲೆ ಏನೊ ಮಂತ್ರವನ್ನು ಬರೆದಂತೆ ಅನುಭವವಾಯಿತು ಅವನಿಗೆ. ಇದರ ಫಲವಾಗಿ ಯಾರಾದರೂ ರೋಗಿಯನ್ನು ನೋಡಿದರೆ ಅವನ ರೋಗ ವಾಸಿಯಾಗುವುದೇ ಇಲ್ಲವೇ ಎಂದು ರಾಮಕುಮಾರನಿಗೆ ತಿಳಿಯುತ್ತಿತ್ತು, ಅವನು ಹೇಳಿದಂತೆಯೇ ಫಲಿಸುತ್ತಿತ್ತು. ಹೀಗೆ ಭವಿಷ್ಯ ನುಡಿಯುವವನೆಂದೇ ಅವನು ಊರಿನಲ್ಲಿ ಪ್ರಸಿದ್ಧನಾದ. ಕಠಿನ ರೋಗದಿಂದ ನರಳುವವನ ಪರವಾಗಿ ಸ್ವಸ್ತ್ಯಯನ ಮಾಡುತ್ತಿದ್ದನು. ಈ ಪೂಜಾ ಸ್ಥಳದಲ್ಲಿ ಬಿತ್ತುವ ಕಾಳುಗಳು ಚಿಗುರುವುದರೊಳಗೆ ರೋಗ ವಾಸಿಯಾಗುವುದೆಂದು ಅವನು ದೃಢವಾಗಿ ಹೇಳಿ ಕಾಳನ್ನು ಎಸೆದರೆ ಅವನು ಹೇಳಿದಂತೆಯೇ ಆಗುತ್ತಿತ್ತು. ಅವನ ಈ ಶಕ್ತಿಯ ಸಂಬಂಧವಾಗಿ ಒಂದು ಘಟನೆಯನ್ನು ಅವನ ಸೋದರಳಿಯ ಶಿವರಾಮನು ಹೇಳುತ್ತಾನೆ.

13. ಕಾರ್ಯಾರ್ಥವಾಗಿ ಕಲಕತ್ತೆಗೆ ಬಂದಿದ್ದ ರಾಮಕುಮಾರನು ಒಂದುದಿನ ಗಂಗಾನದಿಯಲ್ಲಿ ಸ್ನಾನ ಮಾಡುತ್ತಿದ್ದನು. ಆ ಸಮಯದಲ್ಲಿ ಓರ್ವ ಶ್ರೀಮಂತ ವ್ಯಕ್ತಿ ಪರಿವಾರ ಸಮೇತನಾಗಿ ಅಲ್ಲಿಗೆ ಸ್ನಾನಕ್ಕೆ ಬಂದನು. ಅವನ ಪತ್ನಿ ಪಲ್ಲಕ್ಕಿಯ ಒಳಗೇ ಕುಳಿತು ಸ್ನಾನ ಮುಗಿಸಿದಳು. ಆ ದೃಶ್ಯವನ್ನು ಕಂಡು ರಾಮಕುಮಾರನಿಗೆ ಅಚ್ಚರಿಯಾಯಿತು. ಪಲ್ಲಕ್ಕಿಯ ಒಳಗಿದ್ದ ಆ ಸ್ತ್ರೀಯಳ ಮುಖ ಅವನಿಗೆ ಕಾಣಿಸಿದ ಕೂಡಲೇ ಆಕೆಯ ಭವಿಷ್ಯ ಅವನಿಗೆ ಸ್ಪಷ್ಟವಾಗಿ ಕಾಣಿಸಿ ಅವನು ಹೇಳತೊಡಗಿದ: "ಯಾರನ್ನು ಇಂದು ಇಷ್ಟೊಂದು ಆದರದಿಂದ ಸ್ನಾನಮಾಡಿಸುತ್ತಿರುವರೊ ನಾಳೆ ಅವಳನ್ನೇ ಎಲ್ಲ ಜನರ ಮುಂದೆ ಗಂಗೆಯಲ್ಲಿ ವಿಸರ್ಜಿಸಬೇಕಾಗುತ್ತದೆ." ಆ ಧನಿಕನು ಈ ಮಾತನ್ನು ಕೇಳಿ ಅವನ ಮಾತಿನ ಸತ್ಯತೆಯನ್ನು ಪರೀಕ್ಷಿಸಲು ರಾಮಕುಮಾರನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿದ್ದನು. ಆ ಮಾತು ಸತ್ಯವಾಗದಿದ್ದರೆ ರಾಮಕುಮಾರನ ಅವಮಾನ ಮಾಡಬೇಕೆಂಬುದು ಅವನ ಅಪೇಕ್ಷೆಯಾಗಿತ್ತು. ಆ ಸ್ತ್ರೀಯಳೂ ಆರೋಗ್ಯವಾಗಿದ್ದುದರಿಂದ ಅಂತಹ ದುರ್ಘಟನೆಯ ಸಾಧ್ಯತೆ ಕಾಣಿಸಲಿಲ್ಲ. ಆದರೂ ರಾಮಕುಮಾರನ ಮಾತು ಸತ್ಯವಾಯಿತು. ಆ ಸ್ತ್ರೀ ಅನಿರೀಕ್ಷಿತವಾಗಿ ಪ್ರಾಣಬಿಟ್ಟಳು. ಶ್ರೀಮಂತನು ರಾಮಕುಮಾರನನ್ನು ಸನ್ಮಾನಪೂರ್ವಕ ಬೀಳ್ಕೊಟ್ಟನು.

14. ತನ್ನ ಪತ್ನಿಯ ವಿಷಯದಲ್ಲಿಯೂ ಅವನು ಒಮ್ಮೆ ಈ ರೀತಿ ಭವಿಷ್ಯ ನುಡಿದಿದ್ದನು. ಬಹುಶಃ ಕ್ರಿ.ಶ. ೧೮೨೦ರಲ್ಲಿ ಅವನ ವಿವಾಹವಾಯಿತು. ಆಗ ವಧುವಿಗೆ ಏಳುವರ್ಷ. ಆಕೆ ಮನೆಗೆ ಬಂದಾಗಿನಿಂದ ಅವರ ಭಾಗ್ಯ ಕುದುರಿತು. ಬಡತನದ ಕಷ್ಟಗಳು ದೂರವಾಗತೊಡಗಿದವು. ಇದೇ ಸಂದರ್ಭದಲ್ಲಿಯೇ ಕ್ಷುದಿರಾಮನ ಸೋದರಳಿಯ ಪ್ರತಿ ತಿಂಗಳು ಸಹಾಯಧನ ಕಳಿಸಲು ಪ್ರಾರಂಭಿಸಿದ್ದು. ಮನೆ ಸೌಭಾಗ್ಯ ದೇವತೆಯಾಗಿ ಬಂದ ರಾಮಕುಮಾರನ ಪತ್ನಿಯನ್ನು ಎಲ್ಲರೂ ಅತ್ಯಂತ ಪ್ರೀತ್ಯಾದರದಿಂದ ನೋಡಿಕೊಳ್ಳತೊಡಗಿದರು. ಇದರಿಂದ ಆಕೆಯ ಅಭಿಮಾನ ಜಾಸ್ತಿಯಾಯಿತು. ಒಳ್ಳೆಯ ಸ್ವಭಾವದವಳಾದರೂ ಈ ವಿಶೇಷ ಆದರದಿಂದ ಅವಳ ಸ್ವಾಭಿಮಾನ ವೃದ್ಧಿ

ಯಶಾದುದು ಸ್ವಾಭಾವಿಕವೆ. ತೀವ್ರ ಪ್ರೀತಿಯ ದೆಸೆಯಿಂದ ಇತರರೂ ಇದಕ್ಕೆ ಹೆಚ್ಚು ಗಮನಕೊಡಲಿಲ್ಲ. ಅವಳು ಯೌವನಕ್ಕೆ ಕಾಲಿಟ್ಟ ಮೇಲೆ ರಾಮಕುಮಾರನು ಅವಳ ಬಗ್ಗೆ ಹೀಗೆ ಭವಿಷ್ಯ ನುಡಿದಿದ್ದನ್ನು ; ''ಇವಳು ಗರ್ಭವತಿಯಾದರೆ ಇವಳ ಮೃತ್ಯು ಖಂಡಿತ.'' ಎಷ್ಟೋ ವರ್ಷಗಳಾದರೂ ಆಕೆ ಗರ್ಭಿಣಿಯಾಗಲೇ ಇಲ್ಲ. ಎಲ್ಲರೂ ಅವಳು ಬಂಜೆಯೆಂದೇ ಭಾವಿಸಿದ್ದರು. ಆದರೆ ತನ್ನ ಮೂವತ್ತೈದನೇ ವಯಸ್ಸಿನಲ್ಲಿ ಅವಳು ಗರ್ಭವತಿಯಾದಳು. ಕ್ರಿ.ಶ. ೧೮೪೯ರಲ್ಲಿ ಒಂದು ಸುಂದರ ಶಿಶುವನ್ನು ಹಡೆದು ಮೃತ್ಯುವನ್ನಪ್ಪಿದಳು. ಆ ಗಂಡು ಮಗುವಿಗೆ ಅಕ್ಷಯಕುಮಾರ ಎಂದು ಹೆಸರನ್ನಿತ್ತರು. ಇದು ಮುಂದೆ ನಡೆದ ಘಟನೆಯಾದರೂ ಅನುಕೂಲಕ್ಕಾಗಿ ಇಲ್ಲಿಯೇ ಹೇಳಲಾಗಿದೆ.

15. ಕ್ಷುದಿರಾಮನ ಧಾರ್ಮಿಕ ಸಂಸಾರದಲ್ಲಿ ಎಲ್ಲರದೂ ತಮ್ಮದೇ ಆದ ಒಂದು ವಿಶೇಷವಿತ್ತು. ಅವರೆಲ್ಲರಲ್ಲೂ ಒಂದು ಆಧ್ಯಾತ್ಮಿಕ ಶಕ್ತಿ ಪ್ರಕಾಶಿಸುತ್ತಿತ್ತು. ಕ್ಷುದಿರಾಮ ಮತ್ತು ಅವನ ಪತ್ನಿ–ಇವರೀರ್ವರಲ್ಲಿ ಆ ಶಕ್ತಿ ವಿಶೇಷ ರೀತಿಯಲ್ಲಿ ಬೆಳಗುತ್ತಿದ್ದುದರಿಂದ ಮನೆಯವರಿಗೆಲ್ಲ ಅದು ಹರಡಿತು. ಕ್ಷುದಿರಾಮನ ಆಧ್ಯಾತ್ಮಿಕ ವೈಶಿಷ್ಟ್ಯದ ಬಗ್ಗೆ ಸಾಕಷ್ಟು ಹೇಳಿಯಾಗಿದೆ. ಈಗ ಚಂದ್ರಮಣಿಯ ಬಗ್ಗೆ ಹೇಳುತ್ತೇವೆ. ಒಂದು ಘಟನೆಯಿಂದ ಆಕೆಗೂ ದಿವ್ಯ ದರ್ಶನಗಳು ಆಗುತ್ತಿದ್ದವೆಂಬುದು ಸ್ಪಷ್ಟವಾಗುತ್ತದೆ. ಈ ಘಟನೆ ನಡೆದದ್ದು ರಾಮಕುಮಾರನ ವಿವಾಹಕ್ಕಿಂತ ಸ್ವಲ್ಪ ಮೊದಲು. ಅವನಿಗಾಗ ಹದಿನೈದು ವರ್ಷ, ಪೌರೋಹಿತ್ಯದ ಮೂಲಕ ಹಣ ಸಂಪಾದನೆ ಮಾಡಿ ಸಂಸಾರಕ್ಕೆ ಸಹಾಯ ಮಾಡುತ್ತಿದ್ದನು.

16. ಅಶ್ವೀಜ ಮಾಸದಲ್ಲಿ ಕೋಜಾಗರೀ ಲಕ್ಷ್ಮೀಪೂಜೆಯ ದಿನ ರಾಮಕುಮಾರನು ಭೂರಸುಬೊ ಎಂಬ ಹಳ್ಳಿಯ ಯಜಮಾನನ ಮನೆಗೆ ಪೂಜೆಗೆ ಹೋಗಿದ್ದನು. ಅರ್ಧರಾತ್ರಿ ಕಳೆದರೂ ಪುತ್ರ ಹಿಂದಿರುಗದಿರಲು ಚಂದ್ರಮಣಿಗೆ ದಿಗಿಲಾಯಿತು. ಮನೆಯ ಹೊರಗಡೆ ಬಂದು ಕಾತರತೆಯಿಂದ ಮಗ ಬರುವುದನ್ನೇ ನಿರೀಕ್ಷಿಸುತ್ತ ನಿಂತಿದ್ದಳು. ಸ್ವಲ್ಪಹೊತ್ತಿನ ನಂತರ ಭೂರಸುಬೊ ದಿಕ್ಕಿನಿಂದ ಯಾರೊ ಬರುತ್ತಿರುವುದು ಕಾಣಿಸಿತು. ಮಗನೇ ಬರುತ್ತಿರಬೇಕೆಂದು ಭಾವಿಸಿ ಆಕೆ ಎರಡು ಹೆಜ್ಜೆ ಮುಂದೆ ಹೋದಳು. ಆದರೆ ಬರುತ್ತಿದ್ದ ವ್ಯಕ್ತಿ ಪುತ್ರನಲ್ಲ. ಓರ್ವ ಸುಂದರಿ—ನಾನಾ ಅಲಂಕಾರಗಳಿಂದ ಭೂಷಿತಳಾಗಿದ್ದಳು. ಚಂದ್ರಮಣಿದೇವಿ ತನ್ನ ಪುತ್ರನ ಬಗ್ಗೆ ಎಷ್ಟೊಂದು ಕಾತರಳಾಗಿದ್ದಳೆಂದರೆ ಆ ನಡುರಾತ್ರಿಯಲ್ಲಿ ಓರ್ವ ಯುವತಿ ಏಕಾಂಗಿಯಾಗಿ ಬರುತ್ತಿರುವುದನ್ನು ಕಂಡೂ ಅವಳು ವಿಸ್ಮಯ ವ್ಯಕ್ತಪಡಿಸಲಿಲ್ಲ. ಸರಳಭಾವದಲ್ಲಿ ಅವಳು ಆಕೆಯನ್ನು ಕುರಿತು ಕೇಳಿದಳು: ''ತಾಯಿ, ನೀನು ಎಲ್ಲಿಂದ ಬರುತ್ತಿರುವೆ?'' ಆ ಆಗಂತುಕ ಮಹಿಳೆ ''ಭೂರಸುಬೊ''ದಿಂದ ಎಂದಳು. ಚಂದ್ರಮಣಿ ಆತುರದಿಂದ ಕೇಳಿದಳು : ''ನನ್ನ ಮಗ ರಾಮಕುಮಾರನನ್ನು ನೀನು ಅಲ್ಲಿ ನೋಡಿದೆಯಾ ? ಅವನು ಮರಳಿ ಬರುತ್ತಿರುವನೆ?'' ಆ ಅಪರಿಚಿತ ಮಹಿಳೆಗೆ ತನ್ನ ಪುತ್ರನ ಪರಿಚಯ ಹೇಗಿರಬೇಕು—ಇದು ಅವಳ ಮನಸ್ಸಿಗೆ ಹೊಳೆಯಲೇ ಇಲ್ಲ. ಆ ಯುವತಿಯು ಅವಳನ್ನು

ಸಮಾಧಾನಪಡಿಸುತ್ತ ಹೇಳಿದಳು : "ಹೌದು, ನಿನ್ನ ಮಗ ಯಾರ ಮನೆಗೆ ಪೂಜೆ ಮಾಡಿಸಲು ಹೋಗಿರುವನೊ ಅದೇ ಮನೆಯಿಂದ ನಾನು ಬರುತ್ತಿದ್ದೇನೆ. ಭಯಪಡ ಬೇಡ, ನಿನ್ನ ಮಗ ಈಗಲೇ ಬಂದುಬಿಡುತ್ತಾನೆ." ಮನಸ್ಸು ಸ್ವಲ್ಪ ನಿಶ್ಚಿಂತವಾದಮೇಲೆ ಈಗ ಚಂದ್ರಾದೇವಿಯ ಗಮನ ಆ ಮಹಿಳೆಯ ಕಡೆ ಹರಿಯಿತು. ಆಕೆಯ ಅಸಾಧಾರಣ ರೂಪ, ಅತ್ಯಂತ ಬೆಲೆಬಾಳುವ ಒಡವೆಗಳು, ಇವನ್ನೆಲ್ಲ ನೋಡಿ ಮತ್ತು ಅವಳ ಮಧುರ ವಾಣಿಯನ್ನು ಕೇಳಿ ಆಶ್ಚರ್ಯದಿಂದ ಕೇಳಿದಳು: "ತಾಯಿ, ನೀನು ಕಿರುವಯಸ್ಕಳು. ಇಷ್ಟೊಂದು ಒಡವೆ ವಸ್ತ್ರಗಳನ್ನು ಧರಿಸಿ ಈ ನಡುರಾತ್ರಿಯಲ್ಲಿ ಒಬ್ಬಳೆ ಎಲ್ಲಿಗೆ ಹೊರಟಿ ರುವೆ? ನಿನ್ನ ಕಿವಿಯಲ್ಲಿರುವ ಆ ಒಡವೆ ಯಾವುದು?" ಆ ಸ್ತ್ರೀ ಸ್ವಲ್ಪ ನಕ್ಕು ನುಡಿದಳು, "ಅದರ ಹೆಸರು ಕುಂಡಲ, ನಾನಿನ್ನೂ ತುಂಬ ದೂರ ಹೋಗಬೇಕಾಗಿದೆ." ಚಂದ್ರಾದೇವಿ ಆಕೆಯು ವಿಪತ್ತಿನಲ್ಲಿರುವಳೆಂದು ಭಾವಿಸಿ, "ನಡಿ ತಾಯಿ, ನಮ್ಮ ಮನೆ ಯಲ್ಲೇ ಇವತ್ತು ಇದ್ದುಬಿಡು. ಬೆಳಗ್ಗೆ ಎದ್ದು ನೀನು ಎಲ್ಲಿಗೆ ಹೋಗಬೇಕೊ ಅಲ್ಲಿಗೆ ಹೋಗು" ಎಂದಳು. ಆದರೆ ಆ ಮಹಿಳೆ ಕೇಳಲಿಲ್ಲ, "ಇಲ್ಲ, ಇಲ್ಲ, ನಾನು ಈಗಲೇ ಹೋಗಬೇಕು. ನಿನ್ನ ಮನೆಗೆ ಇನ್ನೊಮ್ಮೆ ಬರುತ್ತೇನೆ," ಎಂದು ಹೇಳಿ ಹೊರಟು ಹೋದಳು. ಆದರೆ ರಸ್ತೆಯಲ್ಲಿ ಹೋಗುವುದರ ಬದಲು ಅವಳು ಲಾಹಾ ಮನೆಯವರ ಧಾನ್ಯದ ಕಣಜಗಳ ಕಡೆ ಹೊರಟಳು. ದಾರಿ ತಪ್ಪಿರಬೇಕೆಂದು ಭಾವಿಸಿ ಚಂದ್ರಾದೇವಿ ಮಾರ್ಗದರ್ಶನಮಾಡಲು ಮುಂದೆ ಹೋದಳು, ಆದರೆ ಆ ಮಹಿಳೆ ಎಲ್ಲಿಯೂ ಕಾಣಿಸಲೇ ಇಲ್ಲ. ಆಗ ಆ ಮಹಿಳೆಯ ಬಗ್ಗೆಯೇ ಯೋಚನೆ ಮಾಡುತ್ತಿದ್ದಂತೆ ತಾನು ಸ್ವಯಂ ಲಕ್ಷ್ಮಿಯನ್ನೇ ಕಂಡೆನೆ ಎಂದು ಚಕಿತಳಾದಳು. ಆಗ ಅವಳ ಹೃದಯದಲ್ಲಿ ಉದ್ವೇಗ ವುಂಟಾಯಿತು. ಕೂಡಲೇ ಪತಿಯ ಹತ್ತಿರ ಹೋಗಿ ಸಂಪೂರ್ಣ ಘಟನೆಯನ್ನು ವಿವರಿಸಿ ಹೇಳಿದಳು. ಕ್ಷುದಿರಾಮನು ಎಲ್ಲವನ್ನೂ ಕೇಳಿ, "ಲಕ್ಷ್ಮಿಯೇ ನಿನ್ನಮೇಲೆ ಕೃಪೆದೋರಿ ದರ್ಶನವಿತ್ತಿರುವಳು" ಎಂದು ಅವಳಿಗೆ ಆಶ್ವಾಸನೆಯಿತ್ತನು. ಸ್ವಲ್ಪ ಹೊತ್ತಿನ ನಂತರ ರಾಮಕುಮಾರನೂ ಹಿಂದಿರುಗಿ ನಡೆದ ಘಟನೆಯನ್ನು ಕೇಳಿ ಬೆರಗಾದನು.

17. ೧೮೩೫ನೇ ಇಸವಿ. ಕ್ಷುದಿರಾಮನಿಗೆ ಈಗ ಮತ್ತೊಮ್ಮೆ ಯಾತ್ರೆಗೆ ಹೋಗಬೇಕೆಂಬ ಅಭಿಲಾಷೆಯಾಯಿತು. ಪಿತೃಗಳಿಗೆ ಪಿಂಡ ಪ್ರಧಾನ ಮಾಡಲು ಗಯೆಗೆ ಹೋಗುವುದೆಂದು ನಿರ್ಣಯಿಸಿದನು. ಅವನಾಗಲೇ ಅರವತ್ತನೇ ವರ್ಷಕ್ಕೆ ಕಾಲಿಟ್ಟಿದ್ದರೂ ಗಯೆಗೆ ನಡೆದುಕೊಂಡೇ ಹೋಗುವ ಧೈರ್ಯ ಮಾಡಿದ. ಕ್ಷುದಿರಾಮನ ಸೋದರಿಯ ಮಗಳ ಮಗ ಹೃದಯರಾಮನು ಈ ಸಂಬಂಧವಾಗಿ ಒಂದು ಅದ್ಭುತ ಘಟನೆಯನ್ನು ವಿವರಿಸುತ್ತಾನೆ.

18. ಮಗಳು ಕಾತ್ಯಾಯಿನಿಯು ಅಸ್ವಸ್ಥಳಾಗಿರುವಳೆಂದು ತಿಳಿದು ಕ್ಷುದಿ ರಾಮನು ಅವಳನ್ನು ನೋಡಿಕೊಂಡುಬರಲು ಆನೂರಿಗೆ ಹೋಗಿದ್ದನು. ಕಾತ್ಯಾಯಿನಿಯ ವಯಸ್ಸು ಆಗ ಇಪ್ಪತ್ತೈದು. ಅವಳ ಮಾತು ಹಾವಭಾವಗಳನ್ನು ನೋಡಿ ಕ್ಷುದಿ ರಾಮನು ನಿಶ್ಚಯಿಸಿದ ಅವಳನ್ನು ಯಾವುದೊ ಭೂತ ಹಿಡಿದಿದೆ ಎಂದು. ಆಗ ಅವನು

ಏಕಾಗ್ರಚಿತ್ತನಾಗಿ ದೇವರನ್ನು ಸ್ಮರಿಸಿ ಮಗಳ ದೇಹವನ್ನು ಹಿಡಿದಿದ್ದ ಭೂತವನ್ನು ಕುರಿತು ಹೀಗೆಂದನು : ''ನೀನು ದೇವತೆ ಅಥವಾ ಉಪದೇವತೆ ಏನೇ ಆಗಿದ್ದರೂ ನನ್ನ ಮಗಳ ದೇಹವನ್ನು ಬಿಟ್ಟು ಹೊರಡು. ಅವಳನ್ನೇಕೆ ಪೀಡಿಸುತ್ತಿರುವೆ?'' ಈ ಮಾತನ್ನು ಕೇಳಿ ಆ ಭೂತವು ಭಯಭೀತಿಯಿಂದ ಹೇಳತೊಡಗಿತು ; ''ನೀನು ಗಯೆಗೆ ಹೋಗಿ ನನಗೆ ಪಿಂಡಪ್ರದಾನ ಮಾಡಿ ಈ ದುರ್ಗತಿಯಿಂದ ನನ್ನನ್ನು ಮುಕ್ತಗೊಳಿಸು. ಅದಕ್ಕಾಗಿ ನೀನು ಗಯೆಗೆ ಹೊರಟ ಕೂಡಲೇ ನಾನು ನಿನ್ನ ಮಗಳನ್ನು ಬಿಟ್ಟುಹೋಗುತ್ತೇನೆ.'' ಅನಂತರ ಆ ಜೀವಿಯ ದುಃಸ್ಥಿತಿಗೆ ಮರುಕಗೊಂಡು, ''ನಾನು ಆದಷ್ಟು ಬೇಗ ಗಯೆಗೆ ಹೋಗಿ ನಿನ್ನ ಅಭಿಲಾಶೆಯನ್ನು ಪೂರ್ತಿಗೊಳಿಸುತ್ತೇನೆ. ಆದರೆ ನೀನು ಬಿಟ್ಟುಹೋದುದಕ್ಕೆ ನನಗೊಂದು ಚಿಹ್ನೆ ಬೇಕು.'' ಎಂದನು. ಆಗ ಪ್ರೇತ ಹೇಳಿತು : ''ಇದಕ್ಕೆ ಪ್ರಮಾಣವಾಗಿ ಆ ಬೇವಿನ ಮರದ ದೊಡ್ಡ ಒಂದು ಕೊಂಬೆಯು ಮುರಿದು ಬೀಳುವುದು.'' ಅದು ಹಾಗೆಯೇ ಆಯಿತು—ಕ್ಷುದಿರಾಮನು ಗಯೆಗೆ ಯಾತ್ರೆ ಹೊರಟ ಕೂಡಲೇ ಬೇವಿನ ಮರದ ಒಂದು ದೊಡ್ಡ ಕೊಂಬೆ ಇದ್ದಕ್ಕಿದ್ದಂತೆ ಮುರಿದುಬಿತ್ತು. ಕಾತ್ಯಾಯಿನಿಯೂ ಸಂಪೂರ್ಣ ರೋಗಮುಕ್ತಳಾದಳು. ಹೃದಯರಾಮನು ಹೇಳಿದ ಈ ಮೇಲಿನ ಘಟನೆ ಎಷ್ಟರಮಟ್ಟಿಗೆ ಸತ್ಯವೊ ತಿಳಿಯದು. ಆ ಸಮಯದಲ್ಲಿ ಕ್ಷುದಿರಾಮನು ಗಯಾ ದರ್ಶನಕ್ಕೆ ಹೋಗಿದ್ದಂತೂ ಸತ್ಯ.

19. ೧೮೩೫ರ ಚಳಿಗಾಲದಲ್ಲಿ ಕ್ಷುದಿರಾಮನು ವಾರಾಣಸೀ ಮತ್ತು ಗಯೆ ಈ ತೀರ್ಥಕ್ಷೇತ್ರಗಳ ದರ್ಶನಕ್ಕೆ ಹೊರಟನು. ಮೊದಲು ಕಾಶಿಯ ವಿಶ್ವನಾಥ ದರ್ಶನವನ್ನು ಮುಗಿಸಿ ಗಯೆಗೆ ಬಂದಾಗ ಚೈತ್ರಮಾಸ ನಡೆಯುತ್ತಿತ್ತು. ಮಧುಮಾಸದಲ್ಲಿ ಪಿಂಡದಾನ ಮಾಡಿದರೆ ಪಿತೃಗಳಿಗೆ ಬಹಳ ಸಂತೃಪ್ತಿಯಾಗುವುದೆಂದು ಭಾವಿಸಿಯೇ ಅವನು ಅದೇ ಸಮಯಕ್ಕೆ ಸರಿಯಾಗಿ ಗಯೆಯನ್ನು ತಲುಪಿದ್ದನು. ಸುಮಾರು ಒಂದು ತಿಂಗಳು ಅಲ್ಲಿದ್ದು ಶ್ರಾದ್ಧಾದಿ ವಿಧಿಗಳನ್ನೆಲ್ಲ ಮುಗಿಸಿ ಕೊನೆಯಲ್ಲಿ ಗದಾಧರನ ಶ್ರೀಪಾದದಲ್ಲಿ ಪಿಂಡದಾನ ಮಾಡಿದನು. ಈ ಎಲ್ಲ ಪಿತೃಕಾರ್ಯಗಳನ್ನು ಮುಗಿಸಿದ ಮೇಲೆ ಕ್ಷುದಿರಾಮನಿಗಾದ ಸಂತೃಪ್ತಿ ಹೇಳತೀರದು. ಪಿತೃಋಣವು ತೀರಿದ ಮೇಲೆ ಈಗ ಅವನ ಮನಸ್ಸು ನಿಶ್ಚಿಂತವಾಯಿತು. ತನಗಿದು ಸಾಧ್ಯವಾಗುವಂತೆ ಮಾಡಿದ ಭಗವಂತನ ಬಗ್ಗೆ ಅವನಿಗೆ ತುಂಬ ಕೃತಜ್ಞತೆಯುಂಟಾಯಿತು. ಈ ಶಾಂತಿ ಸಮಾಧಾನದೊಂದಿಗೆ ಅವನು ಅಂದು ರಾತ್ರಿ ನಿದ್ರೆಹೋದನು. ಆ ಸುಖನಿದ್ರೆಯಲ್ಲಿ ಅವನಿಗೊಂದು ಸುಖಸ್ವಪ್ನವಾಯಿತು—ಅವನು ಶ್ರೀ ಗದಾಧರನ ಪಾದಪದ್ಮದಲ್ಲಿ ಪಿಂಡದಾನ ಮಾಡುತ್ತಿದ್ದಾನೆ, ಮತ್ತು ಅವನ ಪಿತೃಗಳೆಲ್ಲರೂ ದಿವ್ಯರೂಪಿಗಳಾಗಿ ಬಂದು ಪಿಂಡವನ್ನು ಸ್ವೀಕರಿಸಿ ಅವನನ್ನು ಆಶೀರ್ವದಿಸುತ್ತಿದ್ದಾರೆ. ಬಹುಕಾಲದ ನಂತರ ಅವರ ದರ್ಶನವಾದುದರಿಂದ ಭಕ್ತಿಪರವಶತೆಯಿಂದ ರೋದಿಸುತ್ತ ಅವರ ಪಾದಸ್ಪರ್ಶ ಮಾಡುತ್ತಿದ್ದಾನೆ. ಅರೆಕ್ಷಣದಲ್ಲಿಯೇ ಆ ಮಂದಿರವು ದಿವ್ಯಜ್ಯೋತಿಯಿಂದ ಬೆಳಗತೊಡಗಿತು. ಅನಂತರ ಪಿತೃಪುರುಷರೆಲ್ಲ ಭಕ್ತಿಭಾವದಿಂದ ಎರಡೂಕಡೆ ಸರಿದು ನಿಂತು ಮಧ್ಯದಲ್ಲಿ ಸಿಂಹಾಸನದ ಮೇಲೆ ರಾರಾಜಿಸುತ್ತಿದ್ದ ದಿವ್ಯ

ಪುರುಷನನ್ನು ಪೂಜಿಸತೊಡಗಿದರು. ಶ್ಯಾಮಲವರ್ಣನೂ ಜ್ಯೋತಿರ್ಮಯನೂ ಆದ ಆ ದಿವ್ಯಪುರುಷನು ಪ್ರೇಮಪೂರಿತ ದೃಷ್ಟಿಯನ್ನು ತನ್ನ ಮೇಲೆ ಹರಿಸಿ ಮಂದಸ್ಮಿತನಾಗಿ ಅವನನ್ನು ಸಮೀಪಕ್ಕೆ ಕರೆದನು. ಕ್ಷುದಿರಾಮನು ಹತ್ತಿರ ಹೋಗಿ ಅವನಿಗೆ ದಂಡವತ್ ಪ್ರಣಾಮ ಮಾಡಿ ಭಕ್ತಿಯ ಆವೇಶದಿಂದ ಅವನನ್ನು ಸ್ತುತಿಸತೊಡಗಿದನು. ಇದರಿಂದ ಸಂತೃಪ್ತಗೊಂಡವನಂತೆ ಆ ದಿವ್ಯಪುರುಷನು ವೀಣಾನಾದದಂತೆ ಮಧುರ ಧ್ವನಿಯಲ್ಲಿ ಹೀಗೆಂದನು: "ಕ್ಷುದಿರಾಮ, ನಿನ್ನ ಭಕ್ತಿಯಿಂದ ನಾನು ಪ್ರಸನ್ನನಾಗಿದ್ದೇನೆ. ಪುತ್ರ ರೂಪದಲ್ಲಿ ನಾನು ನಿನ್ನ ಮನೆಯಲ್ಲಿ ಅವತರಿಸಿ ನಿನ್ನ ಸೇವೆಯನ್ನು ಸ್ವೀಕರಿಸುತ್ತೇನೆ." ಈ ಅಪೂರ್ವ ಕೃಪೆಯನ್ನು ಕಂಡು ಅವನ ಆನಂದಕ್ಕೆ ಸೀಮೆಯೇ ಇರಲಿಲ್ಲ. ಆದರೆ ಮರುಕ್ಷಣವೇ ತನ್ನ ಕಡುದಾರಿದ್ರ್ಯವನ್ನು ನೆನೆಸಿಕೊಂಡು ಭಗವಂತನಿಗೆ ಏನು ತಿನ್ನಿಸುವುದು, ಎಲ್ಲಿರಿಸುವುದು ಅವನನ್ನು—ಎಂಬ ಚಿಂತೆಗಳು ಅವನನ್ನು ಕಾಡಿಸತೊಡಗಿದವು. ತುಂಬ ವಿಷಾದದಿಂದ ರೋದಿಸುತ್ತ ಹೇಳತೊಡಗಿದನು: "ಇಲ್ಲ ಪ್ರಭು, ನಾನು ಇಂತಹ ಸೌಭಾಗ್ಯಕ್ಕೆ ಅರ್ಹನಲ್ಲ. ನೀನು ನನಗೆ ದರ್ಶನವಿತ್ತು, ನಿನ್ನ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದೆಯಲ್ಲ ಅದೇ ದೊಡ್ಡ ಭಾಗ್ಯ. ನೀನು ಪುತ್ರನಾಗಿ ಬಂದರೆ ದರಿದ್ರನಾದ ನಾನು ಏನು ಸೇವೆ ಮಾಡಲಿ ?" ಇದನ್ನು ಕೇಳಿ ಆ ದೈವೀಪುರುಷನು ಅವನನ್ನು ಸಂತೈಸಿ ಹೇಳಿದನು: "ಭಯಪಡಬೇಡ. ನೀನು ಏನು ಕೊಡುತ್ತೀಯೊ ಅದನ್ನು ಸ್ವೀಕರಿಸುತ್ತೇನೆ. ನನ್ನ ಅಭಿಲಾಶೆಗೆ ಅಡ್ಡಿಯುಂಟುಮಾಡಬೇಡ." ಕ್ಷುದಿರಾಮನಿಗೆ ಇನ್ನೇನೂ ಮಾತನಾಡಲಾಗಲಿಲ್ಲ. ಆನಂದ ದುಃಖ ಮುಂತಾದ ಅನೇಕ ಭಾವಗಳು ಅವನನ್ನು ಏಕಕಾಲದಲ್ಲಿ ಆವರಿಸಿ ಸ್ತಂಭಿತಗೊಳಿಸಿದುವು. ಅವನು ಪ್ರಜ್ಞಾಶೂನ್ಯನಾದ. ಅಷ್ಟರಲ್ಲೇ ಅವನ ನಿದ್ರಾಭಂಗವಾಯಿತು.

20. ಅವನು ನಿದ್ರೆಯಿಂದ ಎಚ್ಚೆತ್ತಮೇಲೆ ತಾನು ಎಲ್ಲಿರುವೆನೆಂಬುದೇ ಅವನಿಗೆ ಕೂಡಲೆ ತಿಳಿಯಲಿಲ್ಲ. ಸ್ವಪ್ನದ ವಾಸ್ತವತೆಯೇ ಅವನ ಮನಸ್ಸನ್ನು ಸಂಪೂರ್ಣ ಆವರಿಸಿತ್ತು. ಕ್ರಮೇಣ ಅವನಿಗೆ ಜಾಗ್ರತಾವಸ್ಥೆಯ ಸ್ಥೂಲ ಜಗತ್ತಿನ ಅರಿವಾಗತೊಡಗಿತು. ಅವನು ಹಾಸಿಗೆಯಿಂದ ಮೇಲೆದ್ದು ಅದ್ಭುತ ಸ್ವಪ್ನವನ್ನು ನೆನಪಿಸಿಕೊಳ್ಳುತ್ತ ಏನೇನೋ ಯೋಚಿಸತೊಡಗಿದನು. ದೇವಸ್ವಪ್ನವು ಎಂದೂ ಹುಸಿಯಾಗುವುದಿಲ್ಲ ಎಂದು ಅವನ ಮನಸ್ಸಿಗೆ ದೃಢವಾಯಿತು. ಆದರೂ ಅದರ ಸಫಲತೆಯನ್ನು ಪರೀಕ್ಷಿಸದೆ ಯಾರಿಗೂ ಹೇಳಬಾರದೆಂದು ಅವನು ನಿಶ್ಚಯಿಸಿದನು. ಅಲ್ಲಿಗೆ ತನ್ನ ಯಾತ್ರೆಯನ್ನು ಮುಗಿಸಿ ಕ್ಷುದಿರಾಮನು ಕ್ರಿ.ಶ. ೧೮೩೬ರ ವೈಶಾಖ ಮಾಸದಲ್ಲಿ ಕಾಮಾರಪುಕುರಕ್ಕೆ ಹಿಂದಿರುಗಿದನು.

ನಾಲ್ಕನೆಯ ಅಧ್ಯಾಯ

ಚಂದ್ರಾದೇವಿಯ ಅಲೌಕಿಕ ಅನುಭವಗಳು

1. ಅವತಾರ ಪುರುಷರ ಜನನದ ವೇಳೆ ಅವರ ತಂದೆ ತಾಯಿಗಳಿಗೆ ಉಂಟಾಗುವ ದಿವ್ಯಾನುಭವಗಳು 2. ಇದಕ್ಕೆ ಶಾಸ್ತ್ರ ಮತ್ತು ಯುಕ್ತಿಯ ಆಧಾರ 3. ಇವು ನಂಬುವುದಕ್ಕೆ ಅಸಾಧ್ಯವಾದರೂ ಮಿಥ್ಯವೆನ್ನಲಾಗದು 4 ಚಂದ್ರಾದೇವಿಯಲ್ಲಿ ಭಾವಪರಿವರ್ತನೆ 5. ಚಂದ್ರಾದೇವಿಯ ಪುತ್ರವಾತ್ಸಲ್ಯದ ವಿಶಾಲತೆ 6. ಚಂದ್ರಾದೇವಿಯ ದೇವ–ಸ್ವಪ್ನ 7. ಶಿವಮಂದಿರದಲ್ಲಿ ಅವಳಿಗೆ ದಿವ್ಯದರ್ಶನ 8. ಈ ವಿಷಯವನ್ನು ಯಾರಿಗೂ ಹೇಳಬಾರದೆಂದು ಕ್ಷುದಿರಾಮನ ಎಚ್ಚರಿಕೆ 9. ಚಂದ್ರಾದೇವಿಯು ಗರ್ಭವತಿಯಾದುದು ಮತ್ತು ದಿವ್ಯದರ್ಶನ

1. ಜಗತ್ತನ್ನು ಪಾವನಗೊಳಿಸುವಂತಹ ಮಹಾಪುರುಷರು ಜನ್ಮವೆತ್ತುವ ಕಾಲದಲ್ಲಿ ಅವರ ತಂದೆ ತಾಯಿಗಳಿಗೆ ಅನೇಕ ದಿವ್ಯಾನುಭವಗಳಾಗುವುದನ್ನು ನಾವು ಪ್ರಪಂಚದ ಎಲ್ಲ ಧಾರ್ಮಿಕ ಗ್ರಂಥಗಳಲ್ಲಿಯೂ ಓದುತ್ತೇವೆ. ಇಂದಿಗೂ ಪೂಜಿಸಲ್ಪಡುತ್ತಿರುವ ಮಹಾಮಹಿಮರಾದ ಶ್ರೀರಾಮ, ಶ್ರೀಕೃಷ್ಣ, ಜೀಸಸ್ ಕ್ರೈಸ್ಟ್, ಬುದ್ಧ, ಶಂಕರಾಚಾರ್ಯ, ಶ್ರೀಚೈತನ್ಯ ಇವರೇ ಮುಂತಾದವರ ತಂದೆ ತಾಯಿಯರಿಗೆಲ್ಲ ಈ ಮಾತು ಅನ್ವಯಿಸುತ್ತದೆ. ಇದಕ್ಕೆ ಪ್ರಮಾಣವಾಗಿ ಕೆಲವು ಘಟನೆಗಳನ್ನು ಈ ಕೆಳಗೆ ಉಲ್ಲೇಖಿಸಲಾಗಿದೆ :

2. ಶ್ರೀರಾಮಚಂದ್ರ ಮತ್ತು ಅವನ ಮೂವರು ಸಹೋದರರೂ ಯಜ್ಞಶಿಷ್ಟ ಪಾಯಸವನ್ನು ಅವರ ತಾಯಂದಿರು ಸೇವಿಸುವುದರ ಮೂಲಕ ಜನಿಸಿದವರು. ಅಷ್ಟೇ ಅಲ್ಲದೆ ಅವರಿಗೆ ತಾವು ವಿಷ್ಣುವಿನ ಅಂಶದಿಂದ ಜನಿಸಿದವರೆಂಬ ಬೋಧೆಯೂ ಇತ್ತು; ಇದು ರಾಮಾಯಣದಲ್ಲಿ ಪ್ರಸಿದ್ಧವಾದ ವಿಷಯ. ಶ್ರೀಕೃಷ್ಣನ ತಂದೆ ತಾಯಿಯರು, ಅವನು ಗರ್ಭವನ್ನು ಪ್ರವೇಶಿಸುವ ಮೊದಲು ಮತ್ತು ಅವನ ಜನನವಾದ ತಕ್ಷಣ, ಇವನನ್ನು ಷಡೈಶ್ವರ್ಯದಿಂದ ಕೂಡಿದ ಭಗವನ್ ಮೂರ್ತಿಯಾಗಿ ಕಂಡಿದ್ದರು. ಅದಲ್ಲದೆ ಅವನ ಜನ್ಮಗ್ರಹಣವಾದಂದಿನಿಂದ ಅವರಿಗೆ ಅನೇಕ ಅದ್ಭುತ ದರ್ಶನಗಳಾದ ವಿಷಯ ಭಾಗವತ ಮತ್ತಿತರ ಗ್ರಂಥಗಳಲ್ಲಿದೆ. ಬುದ್ಧನ ಜನನಕ್ಕೆ ಮುಂಚೆ ಅವನ ತಾಯಿ ಮಾಯಾದೇವಿಗೆ ಒಂದು ಅನುಭವವಾಯಿತು. ದಿವ್ಯಪುರುಷನೋರ್ವನು ಶ್ವೇತ ವರ್ಣದ ಆನೆಯ ರೂಪದಲ್ಲಿ ಅವಳ ಉದರವನ್ನು ಪ್ರವೇಶಿಸಿದಂತಾಯಿತು. ಆಕೆಯ ಮಹತ್ ಸೌಭಾಗ್ಯವನ್ನು ಕಂಡು ಇಂದ್ರಾದಿ ದೇವತೆಗಳೂ ಅವಳಿಗೆ ಪ್ರಣಾಮ ಮಾಡಿದರು. ಜೀಸಸ್‌ನ ತಾಯಿ ಮೇರಿ ಇನ್ನೂ ಕುಮಾರಿಯಾಗಿರುವಾಗಲೆ, ತನ್ನ ಪತಿ

ಸಂಗ ಮಾಡುವುದಕ್ಕೆ ಮುಂಚೆಯೇ ಗರ್ಭವತಿಯಾಗಿದ್ದಳು. ಆ ಸಂದರ್ಭದಲ್ಲಿ ಅವಳು ದಿವ್ಯಾವೇಶಕ್ಕೆ ಒಳಗಾಗಿದ್ದಳು. ಶ್ರೀಶಂಕರಾಚಾರ್ಯರ ತಾಯಿಯೂ ಗರ್ಭವತಿಯಾಗುವ ಮುನ್ನ ಮಹಾದೇವನ ದರ್ಶನ ಪಡೆದಿದ್ದಳು. ಹಾಗೆಯೇ ಶ್ರೀಚೈತನ್ಯನ ತಾಯಿ ಶಚೀದೇವಿಯೂ ಅನೇಕ ದಿವ್ಯಾನುಭವಗಳನ್ನು ಪಡೆದಿದ್ದಳು ಎಂಬುದನ್ನು ಶ್ರೀಚೈತನ್ಯ ಚರಿತಾಮೃತದಲ್ಲಿ ಓದುತ್ತೇವೆ.

ಹಿಂದೂ, ಬೌದ್ಧ, ಕ್ರೈಸ್ತ ಮುಂತಾದ ಧರ್ಮಗಳೆಲ್ಲವೂ ಭಕ್ತಿಪೂರ್ವಕ ಈಶ್ವರೋಪಾಸನೆಯೂ ಮುಕ್ತಿಯನ್ನು ಪಡೆಯಲು ಸುಗಮ ಮಾರ್ಗ ಎಂದು ಸಾರುತ್ತವೆ. ಇವುಗಳೆಲ್ಲವೂ ಈ ವಿಷಯದಲ್ಲಿ ಒಂದೇ ಅಭಿಪ್ರಾಯವುಳ್ಳವುಗಳಾದುದರಿಂದ ಇದರ ಹಿಂದೆ ವಾಸ್ತವಿಕ ಅಂಶ ಇರಬಹುದೇ ಎಂದು ವಿಚಾರಮತಿಗಳು ಚಿಂತಿಸುವುದು ಸ್ವಾಭಾವಿಕ. ಈ ಮಹಾಪುರುಷರುಗಳ ಜೀವನದಲ್ಲಿ ಬರುವ ಈ ರೀತಿಯ ಆಖ್ಯಾಯಿಕೆಗಳ ಹಿಂದೆ ಸತ್ಯವೆಷ್ಟಿದೆ ಅಸತ್ಯವೆಷ್ಟಿದೆ ಎಂಬುದು ವಿಚಾರಾರ್ಹ.

ಯುಕ್ತಿಯೂ ಕೂಡ ಇದರಲ್ಲಿ ಸ್ವಲ್ಪ ಸತ್ಯವಿದೆ ಎಂಬುದನ್ನು ಸೂಚಿಸುತ್ತದೆ. ಆಧುನಿಕ ವಿಜ್ಞಾನದ ಪ್ರಕಾರವೂ ಸಚ್ಚಾರಿತ್ರ್ಯವುಳ್ಳ ತಂದೆ ತಾಯಿಗಳು ಮಾತ್ರ ಶ್ರೇಷ್ಠ ಪುತ್ರರನ್ನು ಪಡೆಯಲು ಸಾಧ್ಯ. ಇದರಿಂದ ಶ್ರೀಕೃಷ್ಣ ಬುದ್ಧ ಮುಂತಾದ ಮಹಾಪುರುಷರುಗಳ ತಂದೆ ತಾಯಿಗಳು ವಿಶೇಷ ಸದ್ಗುಣ ಸಂಪನ್ನರಾಗಿದ್ದರೆಂಬುದನ್ನು ನಾವು ಊಹಿಸಬಹುದು. ಅಷ್ಟೇ ಅಲ್ಲದೆ ಅಂತಹ ಪುರುಷಶ್ರೇಷ್ಠರಿಗೆ ಜನ್ಮವೀಯುವ ಸಮಯದಲ್ಲಿ ಅವರ ಮನಸ್ಸು ಉನ್ನತಭೂಮಿಕೆಯಲ್ಲಿದ್ದುದರಿಂದಲೇ ಅವರಿಗೆ ಅನೇಕ ಅಲೌಕಿಕ ಅನುಭವಗಳು ಆಗುತ್ತಿದ್ದವು.

3. ಆದರೆ ಇದಕ್ಕೆ ಪುರಾಣಗಳಲ್ಲಿ ಎಷ್ಟೊ ದೃಷ್ಟಾಂತಗಳಿದ್ದರೂ, ಯುಕ್ತಿ ಅದನ್ನು ಸಮರ್ಥಿಸಿದರೂ ಮನುಷ್ಯನು ಇದರಲ್ಲಿ ವಿಶ್ವಾಸವಿರಿಸಲಾರ. ಇದಕ್ಕೆ ಕಾರಣ ಅವನು ಪ್ರತ್ಯಕ್ಷವಾದುದನ್ನು ಮಾತ್ರ ಸಂಪೂರ್ಣ ನಂಬಲು ಸಾಧ್ಯ. ಆತ್ಮ, ಈಶ್ವರ, ಮುಕ್ತಿ ಮುಂತಾದ ವಿಷಯಗಳಲ್ಲಿ ಅಪರೋಕ್ಷಾನುಭೂತಿಗೆ ಮುಂಚೆ ನಿಃಸಂದೇಹವಾದ ಶ್ರದ್ಧೆ ಉಂಟಾಗಲು ಸಾಧ್ಯವಿಲ್ಲ. ಆದರೂ ಕೂಡ ನಿಷ್ಪಕ್ಷಪಾತ ವಿಚಾರಬುದ್ಧಿಯು ಇಂತಹ ಅಲೌಕಿಕ ವಿಷಯಗಳನ್ನು ಸುಮ್ಮನೆ ತ್ಯಜಿಸಿಬಿಡುವುದಿಲ್ಲ; ಸಾಕಷ್ಟು ಪ್ರಮಾಣಗಳನ್ನು ಸಂಗ್ರಹಿಸಿ ಯುಕ್ತಿಗೆ ಒಳಪಡಿಸಿ ಅವುಗಳ ಸತ್ಯಾಸತ್ಯತೆಗಳನ್ನು ನಿರ್ಣಯಿಸಲು ಪ್ರಯತ್ನಿಸುತ್ತದೆ.

ಇದು ಏನೇ ಇರಲಿ, ನಾವು ಈಗ ಯಾವ ಮಹಾಪುರುಷನ ಬಗ್ಗೆ ಹೇಳಲು ಹೊರಟಿರುವೆವೊ ಅವರ ಜನ್ಮಕಾಲದಲ್ಲಿಯೂ ಅವರ ತಂದೆ ತಾಯಿಯರಿಗೆ ದಿವ್ಯದರ್ಶನಗಳಾಗಿದ್ದುವು ಎಂಬುದನ್ನು ನಂಬಲರ್ಹವಾದ ಮೂಲಗಳಿಂದ ತಿಳಿದಿರುವೆವು; ಈ ವಿಷಯವನ್ನು ಉಲ್ಲೇಖಿಸದೆ ನಮಗೆ ಗತ್ಯಂತರವಿಲ್ಲ. ಹಿಂದಿನ ಅಧ್ಯಾಯದಲ್ಲಿ ಕ್ಷುದಿರಾಮನ ಕೆಲವು ವಿಷಯಗಳನ್ನು ಹೇಳಿರುವೆವು, ಈಗ ಚಂದ್ರಾದೇವಿಗೆ ಆದ ಅನುಭವಗಳನ್ನು ಕುರಿತು ಹೇಳುತ್ತೇವೆ.

4. ಕ್ಷುದಿರಾಮನು ತನಗೆ ಗಯಾಕ್ಷೇತ್ರದಲ್ಲಿ ಆದ ದಿವ್ಯ ಸ್ವಪ್ನದ ವಿಷಯವನ್ನು ಯಾರಿಗೂ ತಿಳಿಸದೆ ಅದರ ಫಲಾಫಲವನ್ನು ನಿರೀಕ್ಷಿಸುತ್ತಿದ್ದನು. ಕ್ರಮೇಣ ಆವನು ಚಂದ್ರಾದೇವಿಯಲ್ಲಿ ಒಂದು ಅದ್ಭುತ ಪರಿವರ್ತನೆಯನ್ನು ಗಮನಿಸತೊಡಗಿದನು. ಅವಳೊಂದು ದೈವೀ ಕಳೆಯಿಂದ ಶೋಭಿಸತೊಡಗಿದಳು. ಅವಳಲ್ಲಿ ಒಂದು ಸಾರ್ವತ್ರಿಕ ಪ್ರೀತಿ ಆವಿರ್ಭವಿಸಿತು. ಸಂಸಾರದ ಇತರ ಎಲ್ಲರಿಗಿಂತ ಉಚ್ಚ ಶ್ರೇಣಿಯವಳಾಗಿ ಆಕೆ ಕಾಣಿಸತೊಡಗಿದಳು. ತನ್ನ ಸಂಸಾರದವರಿಗಿಂತ ನೆರೆಹೊರೆಯವರ ಚಿಂತೆಯೇ ಅವಳಲ್ಲಿ ಪ್ರಾಬಲ್ಯವನ್ನು ಪಡೆಯಿತು. ತನ್ನ ಮನೆಗೆಲಸದ ನಡುವೆಯೂ ಅವಳು ಆಗಾಗ ಅವರೆಡೆಗೆ ಹೋಗಿ ಅವರಿಗೆ ಕೈಲಾದ ಸಹಾಯ ಮಾಡುತ್ತಿದ್ದಳು. ಅವರಿಗೆ ಬೇಕಾದು ದನ್ನು ಮನೆಯಿಂದ ಯಾರಿಗೂ ತಿಳಿಸದೆ ತೆಗೆದುಕೊಂಡು ಹೋಗಿ ಕೊಡುತ್ತಿದ್ದಳು. ಶ್ರೀರಘುವೀರನ ಪೂಜೆ ಮುಗಿಸಿ ಪತಿಪುತ್ರರಿಗೆ ಊಟ ಬಡಿಸಿ ಮಧ್ಯಾಹ್ನ ಮೂರು ಗಂಟೆಯ ಸಮಯಕ್ಕೆ ತಾನು ಊಟ ಮಾಡುವುದಕ್ಕೆ ಮುಂಚೆ ಮತ್ತೆ ನೆರೆಹೊರೆಯವರ ಮನೆಗಳಿಗೆ ಹೋಗಿ ಅವರಿಗೆಲ್ಲ ಊಟವಾಗಿದೆಯೇ ಇಲ್ಲವೇ ಎಂದು ವಿಚಾರಿಸಿಕೊಂಡು ಬರುತ್ತಿದ್ದಳು. ಎಂದಾದರೂ ಯಾರಿಗಾದರೂ ಊಟ ಸಿಗಲಿಲ್ಲವೆಂದು ತಿಳಿದರೆ ಆ ವ್ಯಕ್ತಿ ಯನ್ನು ಆದರದಿಂದ ಮನೆಗೆ ಕರೆದುಕೊಂಡು ಬಂದು ತನ್ನ ಊಟವನ್ನು ಅವನಿಗಿತ್ತು ತಾನು ಹರ್ಷಚಿತ್ತದಿಂದ ಏನಾದರೂ ಸ್ವಲ್ಪ ತಿಂಡಿ ತಿಂದು ದಿನ ಕಳೆಯುತ್ತಿದ್ದಳು.

5. ಚಂದ್ರಾದೇವಿಯು ಯಾವಾಗಲೂ ನೆರೆಹೊರೆಯ ಮಕ್ಕಳನ್ನು ಪುತ್ರ ವಾತ್ಸಲ್ಯದಿಂದ ನೋಡಿಕೊಳ್ಳುತ್ತಿದ್ದಳು. ಈಗ ಅವಳ ವಾತ್ಸಲ್ಯ ದೇವತೆಗಳನ್ನೂ ಆವರಿಸತೊಡಗಿತು. ಕುಲದೇವತೆಯಾದ ಶ್ರೀರಘುವೀರನನ್ನು ಅವಳು ತನ್ನ ಪುತ್ರರಲ್ಲೆಲ್ಲ ಶ್ರೇಷ್ಠನೆಂಬಂತೆ ನೋಡುತ್ತಿದ್ದಳು. ಹಾಗೆಯೇ ಶೀತಲಾದೇವಿ, ರಾಮೇಶ್ವರ ಬಾಣಲಿಂಗ ಇವರೂ ಅವಳ ಹೃದಯದಲ್ಲಿ ಅತ್ಯಂತ ಮೆಚ್ಚಿನ ಮಕ್ಕಳಾದರು. ಇಷ್ಟರವರೆಗೂ ಈ ದೇವತೆಗಳನ್ನು ಪೂಜಿಸುವಾಗ ಶ್ರದ್ಧಾಪೂರ್ವಕ ಭಯ ಇರುತ್ತಿತ್ತು ಅವಳಲ್ಲಿ. ಈಗ ಆ ಭಯ ಎಲ್ಲೊ ಕಣ್ಮರೆಯಾಗಿ ಪ್ರೀತಿ ವಿಜೃಂಭಿಸತೊಡಗಿತು. ಈಗ ಅವರೆಲ್ಲ ತನ್ನವರೇ ಆದರು. ಈಗ ಅವರ ಮುಂದೆ ಯಾವ ಭಯವೂ ಇಲ್ಲ, ಸಂಕೋಚವೂ ಇಲ್ಲ. ಅವರನ್ನು ತೃಪ್ತಿಗೊಳಿಸುವುದು, ಅವರೊಡನೆ ಯಾವಾಗಲೂ ಒಂದಾಗಿರುವುದು ಇದೊಂದೇ ಅವಳ ಆಕಾಂಕ್ಷೆ.

ಈ ದೈವಭಕ್ತಿ ಮತ್ತು ನಿರ್ಭರತೆ ಅವಳ ಉದಾರತೆಯನ್ನು ಇನ್ನೂ ಅಧಿಕ ಗೊಳಿಸಿತು. ಇದರ ಪ್ರಭಾವದಿಂದಲೇ ಅವಳು ಈಗ ಯಾರನ್ನೂ ಪರರೆಂದು ಭಾವಿಸು ತ್ತಿರಲಿಲ್ಲ, ಯಾರಲ್ಲೂ ಅವಿಶ್ವಾಸ ಅವಳಿಗಿರಲಿಲ್ಲ. ಆದರೆ ಸ್ವಾರ್ಥಪರ ಜನ ಸಾಮಾನ್ಯರು ಈ ಉದಾರ ಭಾವವನ್ನು ಅರ್ಥಮಾಡಿಕೊಳ್ಳಲಿಲ್ಲ. ಆಕೆಗೆ ಏನೂ ತಿಳಿವಳಿಕೆ ಸಾಲದು, ಹುಚ್ಚಿ ಎಂದೆಲ್ಲ ಭಾವಿಸತೊಡಗಿದರು. ಇದನ್ನೆಲ್ಲ ಗಮನಿಸಿದ ಕ್ಷುದಿರಾಮನು ಚಂದ್ರಾದೇವಿಗೆ ಮುನ್ನೆಚ್ಚರಿಕೆ ನೀಡಬೇಕೆಂದು ಸರಿಯಾದ ಅವಕಾಶಕ್ಕಾಗಿ ಕಾಯುತ್ತಿದ್ದನು.

6. ಅಂತಹ ಅವಕಾಶ ದೊರೆಯುವುದಕ್ಕೆ ಬಹಳ ಕಾಲ ಬೇಕಾಗಲಿಲ್ಲ. ಸರಳ ಸ್ವಭಾವದ ಚಂದ್ರಾದೇವಿಯು ತನ್ನ ಪತಿಯ ಮುಂದೆ ಏನನ್ನೂ ಬಚ್ಚಿಡುತ್ತಿರಲಿಲ್ಲ. ತನ್ನ ಸ್ನೇಹಿತರ ಹತ್ತಿರವೂ ತನ್ನ ಮನಸ್ಸಿನ ಭಾವನೆಗಳನ್ನೆಲ್ಲ ಹೇಳಿಬಿಡುತ್ತಿದ್ದಳು, ಹಾಗಿರುವಾಗ ತನಗೆ ಅತ್ಯಂತ ನಿಕಟನಾದ ಪತಿಯ ಮುಂದೆ ಹೇಗೆ ಇದನ್ನೆಲ್ಲ ಬಚ್ಚಿಟ್ಟಾಳು ? ಕ್ಷುದಿರಾಮನು ಗಯೆಯಿಂದ ಹಿಂದಿರುಗಿದ ಸ್ವಲ್ಪ ಸಮಯದ ನಂತರ ಅವನಿಲ್ಲದಿರುವಾಗ ಏನೇನು ನಡೆಯಿತು, ಏನೇನು ದರ್ಶನಗಳಾದವು ಮತ್ತು ಏನೇನು ಅನುಭವಿಸಿದಳು ಇವನ್ನೆಲ್ಲ ಸಮಯ ದೊರೆತಾಗಲೆಲ್ಲ ಒಂದೊಂದಾಗಿ ಹೇಳತೊಡಗಿದಳು. ಒಂದುದಿನ ಅವಳು ಹೇಳಿದಳು; ''ನೋಡಿ, ನೀವು ಗಯೆಗೆ ಹೋಗಿದ್ದಾಗ ನನಗೊಂದು ಅದ್ಭುತ ಸ್ವಪ್ನವಾಯಿತು. ಜ್ಯೋತಿರ್ಮಯ ದೇವತೆಯೋರ್ವನು ನನ್ನ ಹಾಸಿಗೆಯ ಮೇಲೆ ಮಲಗಿಕೊಂಡಿರುವುದನ್ನು ಕಂಡೆ. ಮೊದಲು ನೀವೇ ಇರಬೇಕೆಂದುಕೊಂಡೆ, ಆದರೆ ಮತ್ತೆ ನನಗನಿಸಿತು ಯಾವ ಮಾನವನಿಗೂ ಆ ರೀತಿಯ ರೂಪವಿರಲು ಸಾಧ್ಯವಿಲ್ಲ, ಎಂದು. ಹೀಗೆ ಭಾವಿಸುತ್ತಿದ್ದಂತೆಯೇ ನಿದ್ರೆ ಭಂಗವಾಯಿತು. ಆಗಲೂ ಆ ವ್ಯಕ್ತಿ ಹಾಸಿಗೆಯ ಮೇಲೆ ಇರುವಂತೆ ಭಾಸವಾಯಿತು. ದೇವತೆಗಳು ಈ ರೀತಿ ಮನುಷ್ಯ ರೊಡನೆ ಬಂದಿರಲು ಸಾಧ್ಯವೆ ಎಂದು ಸಂಶಯ ಬಂತು. ಆಗ ನನ್ನ ಮನಸ್ಸಿನಲ್ಲಿ ಭಯ ಅಂಕುರಿಸಿತು. ಯಾವನೊ ದುಷ್ಟ ಕೀಳು ಉದ್ದೇಶದಿಂದ ಕೋಣೆಯೊಳಗೆ ಪ್ರವೇಶಿಸಿರಬಹುದೆ ? ಅವನ ಕಾಲು ಸಪ್ಪಳದಿಂದ ನನಗಿಂತಹ ಕನಸಾಗಿರಬಹುದೆ ?– ಎಂದೆಲ್ಲ ಭಾವಿಸಿ ನನಗೆ ದಿಗಿಲಾಯಿತು. ಕೂಡಲೇ ದೀಪ ಹಚ್ಚಿದೆ. ಯಾವ ವ್ಯಕ್ತಿಯ ಸುಳಿವೂ ಇಲ್ಲ. ಬಾಗಿಲ ಅಗಳಿ ಹಾಕಿದ್ದು ಹಾಗೆಯೇ ಇದೆ. ಆದರೆ ಭಯದಿಂದ ನನಗೆ ಮತ್ತೆ ನಿದ್ರೆ ಮಾಡಲಾಗಲಿಲ್ಲ. ಯಾವನೊ ವ್ಯಕ್ತಿ ಜಾಣ್ಮೆಯಿಂದ ಅಗಳಿಯನ್ನು ತೆಗೆದು ಒಳಗೆ ಬಂದು ನಾನು ಎಚ್ಚರಿರುವುದನ್ನು ಕಂಡು ಮತ್ತೆ ಬಾಗಿಲ ಅಗಳಿ ಹಾಕಿ ಓಡಿ ಹೋಗಿರಬಹುದೇ ಎಂದು ಭಾವಿಸತೊಡಗಿದೆ. ಬೆಳಕು ಹರಿಯುತ್ತಿ ದ್ದಂತೆಯೇ ಧನಿ ಕಾಮಾರಿಣಿ ಮತ್ತು ಧರ್ಮದಾಸ ಲಾಹಾನ ಸೋದರಿ ಪ್ರಸನ್ನಾ ಇವರುಗಳನ್ನು ಕರೆಸಿ ಅವರಿಗೆಲ್ಲ ವಿಷಯ ತಿಳಿಸಿದೆ. 'ಯಾರಾದರೂ ನನ್ನ ಮನೆಯೊಳಗೆ ನುಗ್ಗಿರಲು ಸಾಧ್ಯವೇ ?' ಎಂದು ಅವರನ್ನು ವಿಚಾರಿಸಿದೆ. ಅವರು ಅದನ್ನು ಕೇಳಿ ನಕ್ಕು ನನ್ನನ್ನು ಗೇಲಿ ಮಾಡತೊಡಗಿದರು, 'ಅಯ್ಯೋ ಹುಚ್ಚಿ, ಮುದಿ ವಯಸ್ಸಿನಲ್ಲಿ ನಿನಗೆ ಏನೊ ಭ್ರಮೆ ! ಒಂದು ಕನಸು ಕಂಡು ಇಷ್ಟೆಲ್ಲ ಗಾಬರಿ ಏಕೆ ? ಬೇರೆಯವರು ಏನೆಂದಾರು ? ನಿನ್ನ ಮೇಲೆ ಏನೇನೋ ಅಪವಾದ ಹೊರಿಸಿಬಿಡುತ್ತಾರೆ. ಬೇರೆಯವರಿಗೆ ಈ ವಿಷಯ ತಿಳಿಸಿದರೆ ಹಾಸ್ಯಾಸ್ಪದವಾದೀತು. ಜೋಕೆ ಎಂದರು.' ಅವರು ಹಾಗೆ ಹೇಳಿದ ಮೇಲೆ ನಾನು ನೋಡಿರುವುದು ಸ್ವಪ್ನವೇ ಎಂದೆನಿಸಿತು. ಇನ್ನಾರಿಗೂ ಈ ವಿಷಯ ತಿಳಿಸುವುದಿಲ್ಲ, ನೀವು ಹಿಂದಿರುಗಿದ ಮೇಲೆ ನಿಮಗೆ ಮಾತ್ರ ತಿಳಿಸುವುದು ಎಂದು ನಿರ್ಧರಿಸಿದೆ.

7. ''ಇನ್ನೊಂದು ದಿನ. ನಾನು ಜುಗಿಯ ಶಿವಮಂದಿರದ ಮುಂದೆ ನಿಂತು

ಧನಿಯೊಡನೆ ಮಾತನಾಡುತ್ತಿದ್ದೆ. ಆಗ ನಾನು ನೋಡಿದೆ—ಶಿವನಿಂದ ಒಂದು ಜ್ಯೋತಿ ಒಂದು ಮಂದಿರವನ್ನೆಲ್ಲ ಆವರಿಸಿ, ಅನಂತರ ಗಾಳಿಯಂತೆ ಅಲೆಯಲೆಯಾಗಿ ನನ್ನೆಡೆಗೆ ಹರಿದು ಬರುತ್ತಿದೆ. ನಾನು ಆಶ್ಚರ್ಯದಿಂದ ಧನಿಗೆ ಈ ವಿಷಯವನ್ನು ತಿಳಿಸಬೇಕೆನ್ನು ವಷ್ಟರಲ್ಲಿ ಆ ಜ್ಯೋತಿ ನನ್ನೆಡೆಗೆ ಬಂದು ನನ್ನನ್ನು ಸಂಪೂರ್ಣ ಆವರಿಸಿ ಪ್ರಬಲ ವೇಗ ದಿಂದ ನನ್ನ ದೇಹವನ್ನು ಪ್ರವೇಶಿಸತೊಡಗಿತು. ನಾನು ಭಯ ವಿಸ್ಮಯಗಳಿಂದ ಸ್ತಂಭಿತ ಳಾಗಿ ಮೂರ್ಛೆ ಹೋಗಿ ಕೆಳಗೆ ಬಿದ್ದೆ, ಅನಂತರ ಧನಿ ನನ್ನನ್ನು ಎಚ್ಚರಗೊಳಿಸಿದ ಮೇಲೆ ಆವಳಿಗೆ ಎಲ್ಲವನ್ನೂ ವಿವರಿಸಿ ಹೇಳಿದೆ. ಆವಳು ಇದನ್ನೆಲ್ಲ ಕೇಳಿ ಹೇಳಿದಳು, 'ನಿನಗೆ ಮೂರ್ಛೆರೋಗ' ಎಂದು. ಆದರೆ ಅಂದಿನಿಂದ ನನಗನಿಸುತ್ತಿದೆ. ಆ ಜ್ಯೋತಿ ನನ್ನ ಗರ್ಭವನ್ನು ಪ್ರವೇಶಿಸಿದೆ, ನಾನು ಗರ್ಭಿಣಿಯಾದಂತೆನಿಸುತ್ತಿದೆ. ಈ ವಿಷಯವನ್ನೂ ಧನಿ ಮತ್ತು ಪ್ರಸನ್ನಾಳಿಗೆ ಹೇಳಿದ್ದೆ. ಅವರು ಕೇಳಿ 'ಬುದ್ಧಿಯಿಲ್ಲದವಳು' 'ಹುಚ್ಚಿ' ಎಂದೆಲ್ಲ ಹೇಳಿ ನನ್ನನ್ನು ತಿರಸ್ಕರಿಸಿದರು. ಇದೆಲ್ಲ ಮನಸ್ಸಿನ ಭ್ರಮೆ, ಪಿತ್ತ ನೆತ್ತಿಗೇರಿ ದಾಗ ಈ ರೀತಿಯ ಅನುಭವಗಳಾಗುತ್ತವೆ ಎಂದೆಲ್ಲ ಹೇಳಿ ತಳ್ಳಿಹಾಕಿದರು. ನಿಮ್ಮೊಡ ನಲ್ಲದೆ ಮತ್ತಾರಿಗೂ ಇದನ್ನು ಹೇಳುವುದಿಲ್ಲವೆಂದು ನಿಶ್ಚಯಿಸಿ ಇದುವರೆಗೂ ಸುಮ್ಮ ನಿದ್ದೆ. ಈಗ ನೀವು ಏನು ಹೇಳುತ್ತೀರಿ ? ಭಗವತ್ ಕೃಪೆಯಿಂದ ಇಂತಹ ಅನುಭವ ಗಳಾಗುತ್ತಿವೆಯೋ, ಅಥವಾ ಇವೆಲ್ಲ ನಿಜವಾಗಿಯೂ ವಾಯುರೋಗದ ಪರಿಣಾಮವೆ ?''

8. ಕ್ಷುದಿರಾಮನು ಇದನ್ನೆಲ ಕೇಳಿ ಗಯೆಯಲ್ಲಿ ತನಗಾದ ಸ್ವಪ್ನವನ್ನು ನೆನೆಸಿ ಕೊಂಡು ಇದು ಯಾವುದೇ ರೋಗದ ಪರಿಣಾಮವಲ್ಲದೆಯೂ ಇರಬಹುದು ಎಂದು ಆವಳನ್ನು ಸಂತೈಸುತ್ತ ನುಡಿದ; ''ಇಂದಿನಿಂದ ಈ ರೀತಿಯ ಅನುಭವಗಳನ್ನು ನನಗಲ್ಲದೆ ಮತ್ತಾರಿಗೂ ಹೇಳಬೇಡ. ಶ್ರೀ ರಘುವೀರನು ಕೃಪೆಯಿಂದ ಏನೇನು ತೋರಿಸುತ್ತಾನೊ ಅದೆಲ್ಲವೂ ನಮ್ಮ ಒಳಿತಿಗಾಗಿ ಎಂದು ಭಾವಿಸಿ ನಿಶ್ಚಿಂತಳಾಗು. ನಾನು ಗಯಾಧಾಮದ ಲ್ಲಿದ್ದಾಗ ಶ್ರೀ ಗದಾಧರನು ಅಲೌಕಿಕ ರೀತಿಯಲ್ಲಿ ನಮಗೆ ಮತ್ತೆ ಪುತ್ರಪ್ರಾಪ್ತಿಯಾಗು ವುದನ್ನು ತೋರಿಸಿಕೊಟ್ಟಿರುವನು'' ಪತಿಯ ಮಾತು ಆವಳನ್ನು ಸಮಾಧಾನಗೊಳಿಸಿತು. ಅವಳಿಗೆ ಶ್ರೀ ರಘುವೀರನಲ್ಲಿ ಇನ್ನೂ ಶ್ರದ್ಧೆ ಜಾಸ್ತಿಯಾಯಿತು.

9. ಹೀಗೆಯೇ ಮೂರು ನಾಲ್ಕು ತಿಂಗಳುಗಳು ಕಳೆದವು. ಈಗ ಎಲ್ಲರಿಗೂ ಖಚಿತವಾಯಿತು ನಲವತ್ತೈದು ವರ್ಷದ ಚಂದ್ರಮಣೀದೇವಿ ಮತ್ತೆ ಗರ್ಭವತಿ ಯಾಗಿದ್ದಾಳೆ ಎಂದು. ಗರ್ಭಧಾರಣೆಯ ಸಮಯದಲ್ಲಿ ಸಾಮಾನ್ಯವಾಗಿ ಸ್ತ್ರೀಯರ ರೂಪಲಾವಣ್ಯ ವೃದ್ಧಿಸುವುದು. ಚಂದ್ರಾದೇವಿಗೂ ಹಾಗೆಯೇ ಆಯಿತು. ಹಿಂದೆ ಯಾವಾಗಿನಿಕಿಂತಲೂ ಈ ಬಾರಿ ಅವಳ ರೂಪ ಹೆಚ್ಚು ಸುಂದರವಾಗಿತ್ತೆಂದು ನೆರೆಹೊರ ಯವರು ಹೇಳುತ್ತಾರೆ. ಕೆಲವರು ಹೀಗೆ ಮಾತನಾಡಿಕೊಳ್ಳುತ್ತಿದ್ದರು, ''ಈ ಮುದಿ ವಯಸ್ಸಿನಲ್ಲಿ ಗರ್ಭವತಿಯಾಗಿಯೂ ಎಂಥ ರೂಪ ಇವಳದು ! ಈ ಬಾರಿ ಇವಳು ಪ್ರಸವಕಾಲದಲ್ಲಿ ಸಾವನ್ನಪ್ಪಬಹುದು.''

ಅದು ಏನೇ ಇರಲಿ, ಈಗ ಚಂದ್ರಾದೇವಿಯ ದಿವ್ಯದರ್ಶನಗಳು ಅಧಿಕವಾಗ

ತೊಡಗಿದುವು. ಪ್ರತಿನಿತ್ಯವೂ ದೇವದೇವಿಯರ ದರ್ಶನಗಳಾಗುತ್ತಿದ್ದವೆಂದು ನಾವು ಕೇಳಿರುವೆವು. ಆ ದೇವದೇವಿಯರ ಸುವಾಸನೆಯಿಂದ ಮನೆ ಪೂರ್ಣವಾದಂತೆ ಅನುಭವ ವಾಗುತ್ತಿತ್ತು. ಕೆಲವೊಮ್ಮೆ ದಿವ್ಯವಾಣಿಯನ್ನು ಕೇಳಿ ವಿಸ್ಮಯಗೊಳ್ಳುತ್ತಿದ್ದಳು. ಈಗ ದೇವತೆಗಳ ಮೇಲಿನ ಅವಳ ಪುತ್ರವಾತ್ಸಲ್ಯ ಇನ್ನೂ ಅಧಿಕವಾಯಿತು. ತನಗಾದ ದರ್ಶನ ಗಳನ್ನೆಲ್ಲ ಪತಿಗೆ ಹೇಳಿ ಏಕೆ ಹೀಗಾಗುತ್ತಿದೆಯೆಂದು ಪ್ರಶ್ನಿಸುತ್ತಿದ್ದಳು. ಕ್ಷುದಿರಾಮನು ಅವಳನ್ನು ಸಮಾಧಾನಪಡಿಸಿ ಯಾವರೀತಿಯ ಸಂಶಯಕ್ಕೂ ಎಡೆಯಿಲ್ಲವೆಂದು ಹೇಳಿ ಆಶ್ವಾಸನೆ ನೀಡುತ್ತಿದ್ದನು. ಆ ಸಂದರ್ಭದಲ್ಲಿ ನಡೆದ ಒಂದು ಘಟನೆ :

ಒಂದು ದಿನ ಚಂದ್ರಮಣಿ ತನ್ನ ಪತಿಯನ್ನು ಕುರಿತು ಹೀಗೆಂದಳು : ''ಶಿವ ಮಂದಿರದ ಮುಂದೆ ದಿವ್ಯ ಜ್ಯೋತಿಯು ನನ್ನನ್ನು ಪ್ರವೇಶಿಸಿದಂದಿನಿಂದ ನನಗೆ ಏನೆಲ್ಲ ದರ್ಶನಗಳಾಗುತ್ತಿವೆ ಎಂಬುದಕ್ಕೆ ಲೆಕ್ಕವೇ ಇಲ್ಲ. ನಾನು ಕಾಣುವ ಎಷ್ಟೋ ದೇವತೆ ಗಳನ್ನು ಹಿಂದೆ ಚಿತ್ರದಲ್ಲಿಯೂ ನೋಡಿರಲಿಲ್ಲ. ಇಂದು ಒಬ್ಬ ವ್ಯಕ್ತಿ ಹಂಸದ ಮೇಲೆ ಬರುತ್ತಿರುವುದನ್ನು ಕಂಡೆ. ನೋಡಿ ಭಯವಾಯಿತು. ಆದರೆ ಬಿಸಿಲಿನ ಬೇಗೆಯಿಂದ ಅವನ ಮುಖ ಕೆಂಪಾಗಿದ್ದುದನ್ನು ಕಂಡು ನನಗೆ ಕಳವಳವುಂಟಾಯಿತು. ನಾನವನನ್ನು ಕರೆದು ಹೇಳಿದೆ, 'ಓ ಹಂಸಸವಾರನೇ, ಬಿಸಿಲಿನ ತಾಪದಿಂದ ನಿನ್ನ ಮುಖ ಹಣ್ಣಾಗಿದೆ. ಬಾ, ಮನೆಯಲ್ಲಿ ತಣಿದ ಅನ್ನವಿದೆ. ಸ್ವಲ್ಪ ತಿಂದು ದಣಿವಾರಿಸಿಕೊಂಡು ಹೋಗು.' ಅವನು ನನ್ನ ಮಾತನ್ನು ಕೇಳಿ ನಕ್ಕು ಹಾಗೆಯೇ ಕಣ್ಮರೆಯಾದನು. ಮತ್ತೆ ಆತ ಕಾಣಿಸಲಿಲ್ಲ. ಹೀಗೆ ಎಷ್ಟೋ ಮೂರ್ತಿಗಳನ್ನು ನೋಡುತ್ತೇನೆ. ಪೂಜೆ ಅಥವಾ ಧ್ಯಾನದ ವೇಳೆ ಅಲ್ಲ—ಸಹಜ ಅವಸ್ಥೆಯಲ್ಲಿಯೇ ಯಾವಾಗೆಂದರೆ ಆವಾಗ. ಕೆಲವೊಮ್ಮೆ ಅವರು ಮನುಷ್ಯರಂತೆಯೇ ನನ್ನ ಹತ್ತಿರ ಬರುತ್ತ ಬರುತ್ತ ಹಾಗೆಯೇ ಗಾಳಿಯಲ್ಲಿ ವಿಲೀನರಾಗಿ ಬಿಡುತ್ತಾರೆ. ಯಾಕೆ ನನಗೆ ಹೀಗೆಲ್ಲ ಕಾಣಿಸುತ್ತದೆ ? ನನಗೆ ಏನಾದರೂ ಕಾಯಿಲೆ ಯಾಗಿದೆಯೇ ? ಕೆಲವೊಮ್ಮೆ ನನಗನಿಸುತ್ತೆ ನನಗೆ ಗೋಸಾಯಿ ಹಿಡಿದುಕೊಂಡಿರ ಬೇಕೆಂದು''† ಆಗ ಕ್ಷುದಿರಾಮನು ತನಗೆ ಗಯೆಯಲ್ಲಿ ಆದ ಕನಸಿನ ವಿಷಯವನ್ನು ತಿಳಿಸಿ, ಅಪಾರ ಪುಣ್ಯವಶದಿಂದ ನೀನೀಗ ಪುರುಷೋತ್ತಮನನ್ನು ಗರ್ಭದಲ್ಲಿ ಧರಿಸಿರುವೆ, ಈ ಎಲ್ಲ ದಿವ್ಯ ದರ್ಶನಗಳೂ ಮಹಾ ಸೌಭಾಗ್ಯದ ಚಿಹ್ನೆ ಎಂದು ಹೇಳಿ ಸಮಾಧಾನ ಪಡಿಸಿದನು. ಇದರಿಂದ ಚಂದ್ರಾದೇವಿ ನಿಶ್ಚಿಂತಳಾದಳು.

ಹೀಗೆ ಮಹಾಪುರುಷನ ಆಗಮನವನ್ನೇ ನಿರೀಕ್ಷಿಸುತ್ತ ಭಕ್ತಿಭಾವದಲ್ಲಿ ತಲ್ಲೀನರಾಗಿ ಅವರು ದಿನಕಳೆಯುತ್ತಿದ್ದರು.

---

†ಸುಖಲಾಲ ಗೋಸ್ವಾಮಿ ತೀರಿಕೊಂಡ ನಂತರ ಅನೇಕ ಭೂತಗಳು ಕಾಣಿಸಿಕೊಳ್ಳು ತ್ತಿದ್ದುವು. ಆ ಗೋಸ್ವಾಮಿ ಅಥವಾ ಅದೇ ವಂಶಸ್ಥರಾರೊ ಮೃತ್ಯುವಿನನಂತರ ಪ್ರೇತವಾಗಿ ಅವರ ಮನೆಯ ಮುಂದಿದ್ದ ವಕುಲ ವೃಕ್ಷದಲ್ಲಿ ಅಡಗಿಕೊಂಡಿರಬಹುದೆಂದು ಹಳ್ಳಿಯ ಜನ ನಂಬಿದ್ದರು. ಯಾರಿಗಾದರೂ ದಿವ್ಯದರ್ಶನವಾದರೆ ಅವನಿಗೆ ಗೋಸಾಯಿ ಹಿಡಿದಿದೆ ಎಂದು ಜನ ಹೇಳಿಕೊಳ್ಳುತ್ತಿದ್ದರು.

ಐದನೆಯ ಅಧ್ಯಾಯ

ಮಹಾಪುರುಷನ ಜನ್ಮಕಥೆ

1. ಚಂದ್ರಾದೇವಿಯ ಆಶಂಕೆ ಮತ್ತು ಪತಿಯ ಆಶ್ವಾಸನೆ 2. ಗದಾಧರನ ಜನನ 3. ಶುಭ ಜನನವನ್ನು ಕುರಿತು ಜ್ಯೋತಿಷ್ಯಾಸ್ತ್ರದ ಹೇಳಿಕೆ 4. ಮಗುವಿನ ನಾಮಕರಣ.

ಶೀತಕಾಲ ಕಳೆದು ಕ್ರಮೇಣ ಋತುರಾಜ ವಸಂತ ಕಾಲಿಡುತ್ತಿದೆ. ಮಾಘ ಮತ್ತು ಗ್ರೀಷ್ಮಗಳ ಸುಖಸಮ್ಮಿಳನವಾಗಿ ಫಾಲ್ಗುಣಮಾಸವು ಸ್ಥಾವರಜಂಗಮಗಳಲ್ಲಿ ಒಂದು ನವಚೇತನವನ್ನು ತುಂಬುತ್ತಿದೆ. ಜೀವಜಗತ್ತಿನಲ್ಲಿ ಎಲ್ಲೆಲ್ಲಿಯೂ ಒಂದು ವಿಶಿಷ್ಟ ಉತ್ಸಾಹ ಆನಂದ ಮತ್ತು ಪ್ರೀತಿ ಇವುಗಳ ಜಾಗ್ರತಿಯನ್ನು ಕಾಣಬಹುದಿತ್ತು. ಬ್ರಹ್ಮಾನಂದದ ಒಂದೇ ಒಂದು ಕಣ ಎಲ್ಲರೊಳಗೂ ಇದ್ದುಕೊಂಡು ಅವರನ್ನು ಉಲ್ಲಾಸಗೊಳಿಸುತ್ತಿರುವುದು ಎಂದು ಶಾಸ್ತ್ರದಲ್ಲಿ ಹೇಳಿದೆ. ಆ ದಿವ್ಯಾನಂದವನ್ನೇ ಪ್ರತಿಬಿಂಬಿಸುತ್ತ ಈ ಕಾಲವು ಎಲ್ಲರನ್ನು ಉಲ್ಲಾಸಗೊಳಿಸುತ್ತಿರುವುದೆ ?

1. ಶ್ರೀರಘುವೀರನ ನೈವೇದ್ಯಕ್ಕೆ ಸಿದ್ಧಪಡಿಸುತ್ತಿರುವಾಗಲೇ ಚಂದ್ರಾದೇವಿಗೆ ಪ್ರಸವವೇದನೆ ಪ್ರಾರಂಭವಾಯಿತು. ಮನಸ್ಸು ಆನಂದ ತುಂದಿಲವಾಗಿದ್ದರೂ ದೇಹದಲ್ಲಿ ತೀವ್ರ ದಣಿವು ಕಾಣಿಸಿಕೊಂಡಿತು. ಈಗ ರಘುವೀರನ ಪೂಜೆಗೆ ಅಣಿಮಾಡುವವರು ಯಾರು ಎಂಬ ಚಿಂತೆ ಅವಳಿಗೆ. ಕೂಡಲೆ ಪತಿಗೆ ವಿಷಯ ತಿಳಿಸಿದಳು. ಕ್ಷುದಿರಾಮನು ಅವಳಿಗೆ ಆಶ್ವಾಸನೆಯಿತ್ತನು : "ಏನೂ ಭಯವಿಲ್ಲ. ನಿನ್ನ ಗರ್ಭದಲ್ಲಿರುವ ಮಹಾ ಪುರುಷನು ಖಂಡಿತ ರಘುವೀರನ ಪೂಜೆಗೆ ವಿಘ್ನವನ್ನುಂಟುಮಾಡುವುದಿಲ್ಲ. ಚಿಂತಿಸ ಬೇಡ, ಎಂದಿನಂತೆ ನಿನಗೆ ದೇವರ ಸೇವೆಯನ್ನು ಸಮಾಪ್ತಿಗೊಳಿಸಲು ಸಾಧ್ಯವಾಗುವುದು. ನಾಳೆಯಿಂದ ಇದಕ್ಕೆ ಬೇರೆ ವ್ಯವಸ್ಥೆ ಮಾಡಿದ್ದೇನೆ. ಧನಿ ಬಂದು ರಾತ್ರಿ ಇಲ್ಲಿಯೇ ಮಲಗು ವಳು." ಈ ಮಾತನ್ನು ಕೇಳಿ ಚಂದ್ರಾದೇವಿಯ ದೇಹದಲ್ಲಿ ಹೊಸ ಶಕ್ತಿ ಉಂಟಾ ದಂತಾಯಿತು, ಗೃಹಕೃತ್ಯಗಳನ್ನೆಲ್ಲ ಆನಂದದಿಂದ ಮಾಡತೊಡಗಿದಳು. ಅಂದಿನ ಪೂಜೆ ಇತ್ಯಾದಿಗಳಿಗೆ ಯಾವ ವಿಘ್ನವೂ ಉಂಟಾಗದೆ ಎಲ್ಲವೂ ಸಾಂಗವಾಗಿ ನೆರವೇರಿತು. ರಾತ್ರಿ ಆಹಾರದನಂತರ ಕ್ಷುದಿರಾಮ ಮತ್ತು ರಾಮಕುಮಾರ ಮಲಗಲು ತಮ್ಮ ಕೋಣೆಗೆ ಹೋದರು. ಧನಿ ಬಂದು ಚಂದ್ರಾದೇವಿಯೊಡನೆ ಒಂದೇ ಕೋಣೆಯಲ್ಲಿ ಮಲಗಿದಳು. ರಘುವೀರನ ದೇವರಕೋಣೆಯಲ್ಲದೆ ಮನೆಯಲ್ಲಿ ಎರಡು ಶಯನಗೃಹ ಗಳಿದ್ದುವು, ಒಂದು ಅಡಿಗೆಕೋಣೆಯಿತ್ತು. ಇನ್ನೊಂದು ಚಿಕ್ಕ ಕೋಣೆಯಲ್ಲಿ ಅಕ್ಕಿ ಮಾಡುವ ಯಂತ್ರವಿತ್ತು. ಅಲ್ಲಿಯೇ ಒಂದು ಮೂಲೆಯಲ್ಲಿ ಒಂದು ಭತ್ತ ಬೇಯಿಸುವ

ಒಲೆಯಿತ್ತು. ಬೇರೆ ಯಾವ ಸ್ಥಳವೂ ಇಲ್ಲದುದರಿಂದ ಈ ಕೋಣೆಯನ್ನೇ ಚಂದ್ರಾದೇವಿಯ ಪ್ರಸೂತಿ ಗೃಹವನ್ನಾಗಿ ಕಾದಿರಿಸಲಾಗಿತ್ತು.

2. ರಾತ್ರಿ ಕಳೆಯುವುದಕ್ಕೆ ಹತ್ತು ನಿಮಿಷವಿರುವಾಗ ಚಂದ್ರಾದೇವಿಯ ಪ್ರಸವ ವೇದನೆ ಪ್ರಾರಂಭವಾಯಿತು. ಧನಿಯ ಸಹಾಯವನ್ನು ಪಡೆದು ಅವಳು ಮೇಲೆಹೇಳಿದ ಕೋಣೆಗೆ ಹೋಗಿ ಮಲಗಿದಳು. ಸ್ವಲ್ಪಹೊತ್ತಿನಲ್ಲಿಯೇ ಪುತ್ರನ ಜನನವಾಯಿತು. ಚಂದ್ರಾದೇವಿಗೆ ಎಲ್ಲ ವ್ಯವಸ್ಥೆಮಾಡಿ ಧನಿ ನವಜಾತ ಶಿಶುವನ್ನು 'ಎತ್ತಿಕೊಳ್ಳಲು ಹೋಗುತ್ತಾಳೆ, ಆಗ ಅದು ಅಲ್ಲಿ ಕಾಣಿಸಲಿಲ್ಲ. ಧನಿ ಭಯಭೀತಳಾಗಿ ದೀಪ ಹಚ್ಚಿದಳು. ಅಲ್ಲಿ ಇಲ್ಲಿ ಹುಡುಕಿ ನೋಡಿದಾಗ ಮಗು ಒಲೆಯ ಹತ್ತಿರವಿತ್ತು, ಮೈಯೆಲ್ಲ ಬೂದಿಮಯವಾಗಿತ್ತು. ಧನಿ ಗಾಬರಿಯಿಂದ ಶಿಶುವನ್ನು ಎತ್ತಿಕೊಂಡು ಶುದ್ಧಗೊಳಿಸಿದಳು. ಆ ಪ್ರಸನ್ನ ಮುಖಮುದ್ರೆಯ ಶಿಶುವನ್ನು ನೋಡಿ ಆಶ್ಚರ್ಯವಾಯಿತು ಅವಳಿಗೆ–ಮಗು ಆರು ತಿಂಗಳ ಶಿಶುವಿನಷ್ಟು ದೊಡ್ಡದಾಗಿದೆ ! ನೆರೆಯ ಲಾಹಾಬಾಬುಗಳ ಮನೆಯಿಂದ ಪ್ರಸನ್ನಾ ಮುಂತಾದ ಕೆಲವು ಮಹಿಳೆಯರು ವಿಷಯವನ್ನು ತಿಳಿದು ಧಾವಿಸಿಬಂದರು. ಧನಿ ಅವರಿಗೆ ಎಲ್ಲ ವಿಷಯವನ್ನೂ ತಿಳಿಸಿದಳು. ನೀರವ ಬ್ರಾಹ್ಮೀ ಮುಹೂರ್ತದಲ್ಲಿ ಕ್ಷುದಿರಾಮನ ಬಡಕುಟೀರದಲ್ಲಿ ಮಹಾಪುರುಷನ ಶುಭಾಗಮನವನ್ನು ಸೂಚಿಸುವ ಶಂಖನಾದ ಮೊಳಗಿತು.

3. ಶಾಸ್ತ್ರಜ್ಞನಾದ ಕ್ಷುದಿರಾಮನು ಜನನದ ಸಮಯವನ್ನು ಅಧ್ಯಯನ ಮಾಡಿ ಶುಭಲಗ್ನವನ್ನು ನಿರ್ಧರಿಸಿದನು. ಅದೊಂದು ಅತ್ಯಂತ ಶುಭಘಳಿಗೆ–ಶಕಾಬ್ದಿ ೧೭೫೭, ಫಾಲ್ಗುಣ ೬ನೇ ತಿಥಿ, ಅಥವಾ ಕ್ರಿ. ಶ. ೧೮೩೬, ಫೆಬ್ರುವರಿ ೧೮. ಸೂರ್ಯ ಹುಟ್ಟುವುದಕ್ಕೆ ಹನ್ನೆರಡು ನಿಮಿಷ ಮುಂಚೆ ಮಗುವಿನ ಜನನವಾಯಿತು. ಶುಕ್ಲಪಕ್ಷ ದ್ವಿತೀಯ ಮತ್ತು ಪೂರ್ವಭಾದ್ರಪದ ನಕ್ಷತ್ರ ಎರಡೂ ಕೂಡಿದ ಅಂದು ಸಿದ್ಧಿ ಯೋಗದ ಶುಭಸೂಚನೆಯಾಗಿತ್ತು. ಬಾಲಕನ ಜನ್ಮಲಗ್ನದಲ್ಲಿ ರವಿ, ಚಂದ್ರ ಮತ್ತು ಬುಧ ಈ ಮೂವರೂ ಏಕತ್ರ ಕಲೆತಿದ್ದರು. ಶುಕ್ರ, ಮಂಗಲ ಮತ್ತು ಶನಿ ಗ್ರಹಗಳು ಅತ್ಯಂತ ಮೇಲಿನ ಸ್ಥಾನದಲ್ಲಿದ್ದು ಮಗುವಿನ ಅಸಾಧಾರಣ ಜೀವನವನ್ನು ಸೂಚಿಸುವಂತಿದ್ದವು. ಹಾಗೆಯೇ ರಾಹು ಕೇತುಗಳೂ ಮೇಲಿನ ಸ್ಥಾನದಲ್ಲಿದ್ದುವು. ಗುರು ಗ್ರಹ ಆಗ ಉದಯೋನ್ಮುಖವಾಗಿದ್ದು ಮಗುವಿನ ಮೇಲೆ ಪುಣ್ಯಪ್ರಭಾವವನ್ನು ಬೀರುವಂತಿತ್ತು.

ಅನಂತರ ಜ್ಯೋತಿಷಿಗಳು ನವಜಾತ ಶಿಶುವಿನ ಜನ್ಮನಕ್ಷತ್ರವನ್ನು ಪರೀಕ್ಷಿಸಿ ಹೇಳಿದರು : "ಇಂತಹ ಶುಭಲಗ್ನದಲ್ಲಿ ಹುಟ್ಟಿದ ಮಗು ಮುಂದೆ ಖಂಡಿತ ಶ್ರೇಷ್ಠ ಧರ್ಮವಿದನೂ ಪರಮ ಮಾನವ ಪ್ರೇಮಿಯೂ ಆಗುವನು ಮತ್ತು ಸದಾ ಪುಣ್ಯಕರ್ಮದಲ್ಲಿಯೇ ನಿರತನಾಗಿರುವನು. ಅನೇಕ ಶಿಷ್ಯರನ್ನು ಹೊಂದಿ ಒಂದು ದೇವಸ್ಥಾನದಲ್ಲಿ ವಾಸಮಾಡುವನು. ಹೊಸ ಧರ್ಮಪ್ರವರ್ತಕನಾಗಿ ನಾರಾಯಣಾಂಶಸಂಭೂತನೆಂದು ಲೋಕಪ್ರಸಿದ್ಧನಾಗಿ ಎಲ್ಲರಿಂದ ಪೂಜಿಸಲ್ಪಡುವನು." ಕ್ಷುದಿರಾಮನಿಗೆ ಇದನ್ನು ಕೇಳಿ

ಆಶ್ಚರ್ಯವಾಯಿತು. ತಾನು ಗಯೆಯಲ್ಲಿ ಕಂಡ ದಿವ್ಯಸ್ವಪ್ನ ಸತ್ಯವಾಯಿತೆಂದು ಭಾವಿಸಿದನು.

4. ಅನಂತರ ಜಾತಕರ್ಮವನ್ನು ಮುಗಿಸಿ ರಾಶಿಗನುಸಾರವಾಗಿ ಶಂಭುಚಂದ್ರ ಎಂದು ನಾಮಕರಣ ಮಾಡಿದನು. ಆದರೆ ಗಯಾಧಾಮದಲ್ಲಿ ಆದ ಸ್ವಪ್ನವನ್ನು ನೆನೆಸಿಕೊಂಡು ಎಲ್ಲರ ಮುಂದೆ ಗದಾಧರ ಎಂದು ಕರೆಯತೊಡಗಿದನು. ಮಗುವಿನ ಶ್ರೀಮುಖ ದರ್ಶನದಿಂದ ಮತ್ತು ಮುಂದಿನ ಭವ್ಯ ಭವಿಷ್ಯವನ್ನು ಕೇಳಿ ಕ್ಷುದಿರಾಮ ಮತ್ತು ಚಂದ್ರಮಣಿ ತಾವು ಕೃತಾರ್ಥರೆಂದು ಭಾವಿಸಿ ತಮ್ಮ ಯೋಗ್ಯತಾನುಸಾರ ಆ ಮಗುವಿನ ಲಾಲನೆಪಾಲನೆಯಲ್ಲಿ ನಿರತರಾದರು.

ಆರನೆಯ ಅಧ್ಯಾಯ

ಬಾಲ್ಯಜೀವನ

1. ರಾಮಚಂದ್ರನ ಹಸುವಿನ ದಾನ 2. ಗದಾಧರನ ಮೋಹಕರೂಪ 3. ಅನ್ನ ಪ್ರಾಶನಕ್ಕೆ ಧರ್ಮದಾಸ ಲಾಹಾನ ಸಹಾಯ 4. ಚಂದ್ರಾದೇವಿಯ ಈಗಿನ ದಿವ್ಯ ದರ್ಶನಗಳು 5. ಗದಾಧರನು ಬೃಹತ್ತಾಗಿ ಕಂಡುದು 6. ಗದಾಧರನ ತಂಗಿ ಸರ್ವಮಂಗಳೆ 7. ಗದಾಧರನ ವಿದ್ಯಾಭ್ಯಾಸ 8. ಲಾಹಾ ಕುಟುಂಬದ ಪಾಠಶಾಲೆ 9. ಬಾಲಕನ ವಿಚಿತ್ರ ವರ್ತನೆಗಳು 10. ಅದಕ್ಕೆ ಸಂಬಂಧಿಸಿದ ಘಟನೆ 11. ಗದಾಧರನ ಶಿಕ್ಷಣ ಪ್ರಗತಿ 12. ಬಾಲಕನ ಸಾಹಸ 13. ಇತರರೊಡನೆ ಬೆರೆಯುವ ಅವನ ಸಾಮರ್ಥ್ಯ 14. ಅವನ ಅಪೂರ್ವ ಕಲ್ಪನಾಶಕ್ತಿ 15. ರಾಮ ಚಂದ್ರನ ಮನೆಯಲ್ಲಿ ದುರ್ಗೋತ್ಸವ 16. ಕ್ಷುದಿರಾಮ ಮತ್ತು ರಾಮಕುಮಾರ ಅಲ್ಲಿಗೆ ಹೋಗುತ್ತಾರೆ 17. ಕ್ಷುದಿರಾಮನ ಕಾಯಿಲೆ ಮತ್ತು ಮೃತ್ಯು

1. ಶ್ರೀರಾಮ, ಶ್ರೀಕೃಷ್ಣ ಮುಂತಾದ ಅವತಾರಪುರುಷರ ತಂದೆ ತಾಯಿಯರು ಅವರು ಜಗದ್ರಕ್ಷಕರೆಂದು ತಿಳಿದಿದ್ದರೂ ಪುತ್ರವಾತ್ಸಲ್ಯದಿಂದ ಪ್ರೇರಿತರಾಗಿ ಅವರ ಪಾಲನೆ ರಕ್ಷಣೆಗಳಲ್ಲಿ ಸದಾ ಕಾತರರಾಗಿರುತ್ತಿದ್ದರೆಂಬುದನ್ನು ನಾವು ಶಾಸ್ತ್ರದಲ್ಲಿ ಓದು ತ್ತೇವೆ. ಕ್ಷುದಿರಾಮ—ಚಂದ್ರಾದೇವಿಯರಿಗೂ ಈ ಮಾತು ಅನ್ವಯಿಸುತ್ತದೆ. ಬಾಲಕನ ಶ್ರೀಮುಖವನ್ನು ನೋಡಿದಾಕ್ಷಣ ಗಯೆಯಲ್ಲಾದ ದಿವ್ಯಸ್ವಪ್ನ ಮತ್ತು ಶಿವಮಂದಿರದ ಲ್ಲಾದ ದಿವ್ಯದರ್ಶನ ಇವನ್ನೆಲ್ಲ ಮರೆತು ಅವನನ್ನು ಹೇಗೆ ಸಾಕುವುದು, ಹೇಗೆ ರಕ್ಷಿಸುವುದು ಇದೇ ದೊಡ್ಡ ಚಿಂತೆಯಾಗುತ್ತಿತ್ತು ಅವರಿಗೆ. ಮೇದಿನೀಪುರದಲ್ಲಿದ್ದ ಸೋದರಳಿಯ ರಾಮಚಂದ್ರನಿಗೆ ಪುತ್ರಸಂತಾನದ ಸುದ್ದಿಯನ್ನು ಕಳಿಸಲಾಯಿತು. ಮಾವನ ಬಡತನ ದಿಂದ ಈಗ ಹಾಲಿನ ಅಭಾವವಿರಬಹುದೆಂದು ಭಾವಿಸಿ ಅವನು ಒಂದು ಹಾಲು ಕರೆಯುವ ಹಸುವನ್ನು ಕಳಿಸಿಕೊಟ್ಟನು. ಹೀಗೆ ಶಿಶುವಿಗೆ ಏನು ಬೇಕೊ ಅವೆಲ್ಲ ಸಮಯಕ್ಕೆ ಸರಿಯಾಗಿ ಹೇಗೊ ಒದಗುತ್ತಿದ್ದರೂ ಕ್ಷುದಿರಾಮ ಚಂದ್ರಾದೇವಿಯರ ಚಿಂತೆಗೆ ಕೊನೆಯೆ ಇರಲಿಲ್ಲ. ಹೀಗೆಯೇ ಕಾಲ ಮುಂದುವರೆಯಿತು.

2. ಶಿಶುವಿನ ಚಿತ್ತಾಕರ್ಷಕ ಶಕ್ತಿ ತಂದೆತಾಯಿಯರನ್ನು ಮಾತ್ರ ಮುಗ್ಧಗೊಳಿಸಿ ದ್ದಲ್ಲದೆ ಮನೆಯವರ, ನೆರೆಯವರ, ಗ್ರಾಮಸ್ಥರೆಲ್ಲರ ಮನಸ್ಸನ್ನೂ ಸೂರೆಗೊಂಡಿತು. ಹಳ್ಳಿಯ ಮಹಿಳೆಯರು ಸಮಯ ಮಾಡಿಕೊಂಡು ಪ್ರತಿನಿತ್ಯ ಚಂದ್ರಾದೇವಿಯನ್ನು ನೋಡಲು ಬರುತ್ತಿದ್ದರು. ಕಾರಣ ಕೇಳಿದರೆ ಹೇಳುತ್ತಿದ್ದರು : "ಏನುಮಾಡುವುದು ಹೇಳು, ನಿನ್ನ ಪುತ್ರನನ್ನು ನಿತ್ಯ ನೋಡಬೇಕೆನಿಸುತ್ತೆ." ಸುತ್ತಮುತ್ತಲಿನ ಹಳ್ಳಿಯ

ಮಹಿಳೆಯರೂ ಈಗ ಬರತೊಡಗಿದರು. ಹೀಗೆಯೇ ಮಗುವಿಗೆ ಐದು ತಿಂಗಳುಗಳಾದವು ಈಗ ಅನ್ನಪ್ರಾಶನದ ಸಮಯ.

3. ಪುತ್ರನ ಅನ್ನಪ್ರಾಶನವನ್ನು ತನ್ನ ಯೋಗ್ಯತಾನುಸಾರ ಸರಳವಾಗಿ ಆಚರಿಸ ಬೇಕೆಂಬುದು ಕ್ಷುದಿರಾಮನ ಅಭಿಪ್ರಾಯವಾಗಿತ್ತು. ಶಾಸ್ತ್ರೋಕ್ತವಾಗಿ ಧಾರ್ಮಿಕ ವಿಧಿಗಳನ್ನು ಮುಗಿಸಿ ಶ್ರೀ ರಘುವೀರನ ಪ್ರಸಾದದ ಅನ್ನವನ್ನು ಪುತ್ರನಿಗೆ ಉಣಿಸುವುದು, ಮತ್ತು ಕೆಲವು ನಿಕಟವರ್ತಿಗಳನ್ನು ಮಾತ್ರ ಆಹ್ವಾನಿಸುವುದು ಎಂದು ಅವನು ನಿರ್ಧರಿಸಿದ್ದನು. ಆದರೆ ಅವನೆಣಿಸಿದಂತಾಗಲಿಲ್ಲ. ಅವನ ಪರಮ ಮಿತ್ರನಾದ ಜಮೀಂದಾರ ಧರ್ಮದಾಸ ಲಾಹಾ ರಹಸ್ಯವಾಗಿ ಕೆಲವು ಯೋಗ್ಯ ಬ್ರಾಹ್ಮಣರನ್ನು ಪ್ರೇರೇಪಿಸಿ ಕ್ಷುದಿರಾಮನೆಡೆಗೆ ಕಳಿಸಿದನು. ಅವರು ಬಂದು ಅನ್ನಪ್ರಾಶನದ ದಿನ ತಮಗೆಲ್ಲ ಭೋಜನ ಏರ್ಪಡಿಸಬೇಕೆಂದು ಒತ್ತಾಯಿಸಿದರು. ಕ್ಷುದಿರಾಮನಿಗೆ ಈಗ ಸಂದಿಗ್ಧ ಪರಿಸ್ಥಿತಿ. ಹಳ್ಳಿಯಲ್ಲಿ ಅವನ ಅಭಿಮಾನಿಗಳು ಅನೇಕರಿರುವರು, ಅವರಲ್ಲಿ ಯಾರನ್ನು ಕರೆಯುವುದು, ಯಾರನ್ನು ಬಿಡುವುದು ? ಎಲ್ಲರನ್ನೂ ಆಹ್ವಾನಿಸಿದರೆ ಅವರಿಗೆಲ್ಲ ಊಟಹಾಕುವ ಸಾಮರ್ಥ್ಯ ತನಗಿದೆಯೆ ? ಏನೇ ಆಗಲಿ, ಎಲ್ಲ ಶ್ರೀ ರಘುವೀರನ ಇಚ್ಛೆ ಎಂದು ಭಾವಿಸಿ ತನ್ನ ಸ್ನೇಹಿತನೊಡನೆ ಈ ವಿಷಯವನ್ನು ಕುರಿತು ಮಾತನಾಡೋಣವೆಂದು ಧರ್ಮದಾಸನ ಹತ್ತಿರ ಹೋದನು. ಧರ್ಮದಾಸನು ಎಲ್ಲ ಜವಾಬ್ದಾರಿಯನ್ನೂ ತಾನೇ ವಹಿಸಿಕೊಂಡು ಅದಕ್ಕೆ ಬೇಕಾಗುವ ಎಲ್ಲ ವ್ಯವಸ್ಥೆ ಮಾಡಿದನು. ಗದಾಧರನ ಅನ್ನಪ್ರಾಶನದ ದಿನ ಹಳ್ಳಿಯ ಬ್ರಾಹ್ಮಣರು ಮಾತ್ರವಲ್ಲದೆ ಬ್ರಾಹ್ಮಣೇತರರೂ, ಬಡ ಭಿಕ್ಷುಕರೂ ಬಂದು ಕ್ಷುದಿರಾಮನ ಬಡಕುಟೀರದಲ್ಲಿ ಮೃಷ್ಟಾನ್ನ ಭೋಜನ ಉಂಡು ಸಂತೃಪ್ತರಾದರು.

4. ದಿನ ಕಳೆದಂತೆ ಬಾಲಕ ಗದಾಧರನ ಬಾಲಲೀಲೆ ಹೆಚ್ಚು ಮಧುರವಾಗತೊಡಗಿತು. ಚಂದ್ರಾದೇವಿ ಅವನ ಬಾಲಕ್ರೀಡೆಯನ್ನು ನೋಡಿ ನಲಿಯುತ್ತಿದ್ದಳು. ಆದರೆ ಅವಳಿಗೆ ಭಯವೂ ಇತ್ತು. ಹಿಂದೆ ಎಂದೂ ಅವಳು ದೇವರನ್ನು ಯಾವುದಕ್ಕೂ ಪ್ರಾರ್ಥಿಸಿದವಳಲ್ಲ. ಈಗ ಪುತ್ರವಾತ್ಸಲ್ಯದಿಂದ ಅವನ ಹಿತವನ್ನು ಮನಸ್ಸಿನಲ್ಲಿಟ್ಟು ದೇವರನ್ನು ಅನೇಕ ರೀತಿಯಲ್ಲಿ ಪ್ರಾರ್ಥಿಸುತ್ತಿದ್ದಳು. ಈಗ ಪುತ್ರನ ಯೋಗಕ್ಷೇಮವೇ ಅವಳ ಮನಸ್ಸನ್ನು ಆವರಿಸಿತು. ಇದು ಸ್ವಾಭಾವಿಕವಾಗಿಯೇ ಆಕೆಯ ದಿವ್ಯದರ್ಶನಗಳಿಗೆ ತಡೆಯುಂಟುಮಾಡಿತು. ಆದರೂ ಒಮ್ಮೊಮ್ಮೆ ಅವಳಿಗೆ ದರ್ಶನಗಳಾಗುತ್ತಿದ್ದುವು. ಕೆಲವೊಮ್ಮೆ ಅವು ಆನಂದವನ್ನೀಯುತ್ತಿದ್ದುವು, ಮತ್ತೆ ಕೆಲವೊಮ್ಮೆ ಅವು ಅನಿಷ್ಟದ ಭಯವನ್ನು ಹುಟ್ಟಿಸುತ್ತಿದ್ದುವು. ಇಂಥ ಒಂದು ಘಟನೆಯನ್ನು ಈಗ ಉಲ್ಲೇಖಿಸುತ್ತೇವೆ.

5. ಗದಾಧರನಿಗೆ ಆಗ ಏಳೆಂಟು ತಿಂಗಳು ವಯಸ್ಸು. ಒಮ್ಮೆ ಚಂದ್ರಾದೇವಿ ಅವನಿಗೆ ಮೊಲೆಯುಣಿಸುತ್ತಿರುವಾಗ ಅವನು ನಿದ್ರೆಮಾಡಿದ. ತಾಯಿ ಮಗುವನ್ನು ಸೊಳ್ಳೆಪರದೆಯ ಒಳಗೆ ಮಲಗಿಸಿ ತನ್ನ ಮನೆಗೆಲಸಕ್ಕೆ ಹೋದಳು. ಸ್ವಲ್ಪ ಹೊತ್ತಿನ

ನಂತರ ಯಾವುದೋ ಕೆಲಸಕ್ಕಾಗಿ ಅಲ್ಲಿಗೆ ಬಂದು ನೋಡುತ್ತಾಳೆ ಸೊಳ್ಳೆಪರದೆಯ ಒಳಗೆ ಮಗು ಇಲ್ಲ, ಅವನ ಸ್ಥಾನದಲ್ಲಿ ಒಬ್ಬ ಅಪರಿಚಿತ ದೀರ್ಘಕಾಯ ವ್ಯಕ್ತಿ ಮಲಗಿದ್ದಾನೆ. ಚಂದ್ರಾದೇವಿ ಗಾಬರಿಯಿಂದ ಚೀರುತ್ತಾ ಪತಿಯನ್ನು ಕರೆದುಕೊಂಡು ಬರಲು ಓಡಿದಳು. ಕ್ಷುದಿರಾಮನಿಗೆ ವಿಷಯವನ್ನು ತಿಳಿಸಿ ಅವನನ್ನು ಕರೆದುಕೊಂಡು ಬಂದಳು. ಇಬ್ಬರೂ ಬಂದು ನೋಡುತ್ತಾರೆ, ಯಾರೂ ಇಲ್ಲ, ಗದಾಧರ ಮೊದಲಿನಂತೆಯೇ ಮಲಗಿ ನಿದ್ರಿಸುತ್ತಿದ್ದಾನೆ. ಆದರೆ ಚಂದ್ರಾದೇವಿಯ ಭಯ ಶಂಕೆ ದೂರವಾಗಲಿಲ್ಲ. ಅವಳೆಂದಳು : "ಇದು ಖಂಡಿತ ಯಾವುದೊ ಉಪದೇವತೆಯ ಕೆಲಸ. ಗದಾಧರನ ಸ್ಥಾನದಲ್ಲಿ ದೀರ್ಘಕಾಯ ವ್ಯಕ್ತಿಯೋರ್ವನು ಮಲಗಿದ್ದನ್ನು ನಾನು ಸ್ಪಷ್ಟವಾಗಿ ನೋಡಿದ್ದೇನೆ. ಇದು ಖಂಡಿತ ಭ್ರಮೆಯಲ್ಲ, ಏಕೆಂದರೆ ನನಗೆ ಯಾವ ಭಯವೂ ಇರಲಿಲ್ಲ. ಶೀಘ್ರವೇ ಯಾರಾದರೂ ಮಂತ್ರವಾದಿಯನ್ನು ಕರೆಸಿ ಮಗುವನ್ನು ತೋರಿಸಿ. ಇಲ್ಲದಿದ್ದರೆ ಏನಾದರೂ ಅನಿಷ್ಟ ಸಂಭವಿಸಬಹುದು." ಕ್ಷುದಿರಾಮನು ಅವಳಿಗೆ ಆಶ್ವಾಸನೆಯಿತ್ತು ಹೇಳಿದನು : "ಮಗು ಹುಟ್ಟುವುದಕ್ಕೆ ಮುಂಚೆಯೂ ನಮಗೆ ಅನೇಕ ದಿವ್ಯ ದರ್ಶನಗಳಾಗಿದ್ದವು. ಈಗಲೂ ಅಂಥದೇ ಕೆಲವು ದರ್ಶನಗಳಾದರೆ ಆಶ್ಚರ್ಯವೇನಿಲ್ಲ ಇದು ಕೆಟ್ಟದೇವತೆಯ ಕಾರ್ಯವೆಂದು ಬಗೆಯಬೇಡ. ವಿಶೇಷವಾಗಿ ಶ್ರೀ ರಘುವೀರನು ತಾನೆ ಮನೆಯಲ್ಲಿ ನೆಲಸಿರುವನು. ಹಾಗಿರುವಾಗ ಯಾವ ದೇವತೆಗೆ ತಾನೆ ಮಗುವಿಗೆ ಅನಿಷ್ಟವನ್ನುಂಟುಮಾಡಲು ಸಾಧ್ಯ ? ಆದ್ದರಿಂದ ನಿಶ್ಚಿಂತೆಯಿಂದಿರು. ಈ ವಿಷಯವನ್ನು ಯಾರಿಗೂ ಹೇಳಬೇಡ. ಶ್ರೀ ರಘುವೀರನು ಪುತ್ರನನ್ನು ಸದಾ ರಕ್ಷಿಸುತ್ತಿರುವನೆಂದು ತಿಳಿ." ಚಂದ್ರಾದೇವಿಯು ಸದ್ಯಕ್ಕೆ ಸಮಾಧಾನಗೊಂಡರೂ ಆ ಶಂಕೆಯ ಛಾಯೆ ಮನಸ್ಸಿನಲ್ಲಿ ಇನ್ನೂ ಉಳಿಯಿತು. ಅಂದೆಲ್ಲ ಅವಳು ವ್ಯಾಕುಲ ಹೃದಯಳಾಗಿ ಶ್ರೀ ರಘುವೀರನನ್ನು ಮತ್ತೆ ಮತ್ತೆ ಪ್ರಾರ್ಥಿಸುತ್ತಿದ್ದಳು.

6. ಹೀಗೆ ಆನಂದ, ಆವೇಗ, ಉತ್ಸಾಹ, ಆಶಂಕೆ ಇವುಗಳಲ್ಲಿ ಗದಾಧರನ ತಂದೆ ತಾಯಿಯರ ಜೀವನ ಕಳೆಯುತ್ತಿತ್ತು. ಗದಾಧರನೂ ಹಳ್ಳಿಗರೆಲ್ಲರ ಪ್ರೀತಿಪಾತ್ರನಾಗಿ ಬೆಳೆಯುತ್ತಿದ್ದ. ಕ್ರಮೇಣ ನಾಲ್ಕೈದು ವರ್ಷಗಳು ಕಳೆದವು. ಈ ಸಂದರ್ಭದಲ್ಲಿ ಕ್ಷುದಿರಾಮನಿಗೆ ಸರ್ವಮಂಗಳಾ ಎಂಬ ಇನ್ನೊಂದು ಪುತ್ರಿಯ ಜನನವಾಯಿತು.

7. ಗದಾಧರನು ಬೆಳೆದಂತೆಲ್ಲ ಅವನ ಅದ್ಭುತ ಮೇಧಾಶಕ್ತಿ ಮತ್ತು ಪ್ರತಿಭೆ ಕ್ಷುದಿರಾಮನನ್ನು ಆಶ್ಚರ್ಯಗೊಳಿಸಿದವು. ಯಾವುದೇ ಸ್ತೋತ್ರ ಅಥವಾ ಮಂತ್ರಗಳನ್ನಾಗಲಿ, ಪುರಾಣ ಮಹಾಕಾವ್ಯಗಳ ಯಾವುದೇ ಕಥೆಗಳನ್ನಾಗಲಿ ಒಮ್ಮೆ ಕೇಳಿದರೆ ಸಾಕು, ಅವನೆಂದೂ ಅವನ್ನು ಮರೆಯುತ್ತಿರಲಿಲ್ಲ. ಅನೇಕ ದಿನಗಳ ನಂತರ ಇನ್ನೊಮ್ಮೆ ಕೇಳಿದರೆ ಹೇಳಿಕೊಟ್ಟಂತೆಯೆ ಪುನರುಚ್ಚರಿಸುತ್ತಿದ್ದ. ಆದರೆ ಅವನಿಗೆ ಹಿಡಿಸದ ಕೆಲವು ವಿಷಯಗಳಲ್ಲಿ ಅವನು ಎಷ್ಟೊಂದು ಉದಾಸೀನನಾಗಿರುತ್ತಿದ್ದನೆಂದರೆ ಎಷ್ಟೇ ಪ್ರಯತ್ನಿಸಿದರೂ ಅವನಿಗೆ ಅದರಲ್ಲಿ ಆಸಕ್ತಿ ಹುಟ್ಟಿಸಲು ಸಾಧ್ಯವಾಗುತ್ತಿರಲಿಲ್ಲ. ಗಣಿತಶಾಸ್ತ್ರದಲ್ಲಿ ಅವನಿಗೆ ಆ ರೀತಿ ಔದಾಸೀನ್ಯವಿತ್ತು. ಈ ಚಿಕ್ಕವಯಸ್ಸಿನಲ್ಲಿ ಅವನಿಗದನ್ನು ಕಲಿಸಲು

ಪ್ರಯತ್ನಿಸಿ ಅವನಿಗೆ ತೊಂದರೆ ಕೊಡುವುದು ಬೇಡವೆಂದು ತಂದೆ ನಿರ್ಧರಿಸಿದನು. ಆದರೆ ಬಾಲಕನು ಅತ್ಯಂತ ಚಂಚಲನಾಗುತ್ತಿರುವುದನ್ನು ಕಂಡು ಐದನೇ ವರ್ಷದಲ್ಲಿಯೇ ಶಾಸ್ತ್ರೋಕ್ತವಾಗಿ ವಿದ್ಯಾರಂಭ ಮಾಡಿಸಿ ಪಾಠಶಾಲೆಗೆ ಕಳಿಸತೊಡಗಿದನು. ತನಗೆ ಸಮ ವಯಸ್ಕರಾದ ಸಂಗಾತಿಗಳು ಸಿಕ್ಕಿದ್ದರಿಂದ ಗದಾಧರನಿಗೆ ಸಂತೋಷವಾಯಿತು. ತನ್ನ ಪ್ರೇಮಪೂರ್ಣ ಸದ್ವರ್ತನೆಗಳಿಂದ ಎಲ್ಲ ಸ್ನೇಹಿತರ ಮತ್ತು ಶಿಕ್ಷಕರ ಪ್ರೀತಿಗೆ ಒಳಗಾದನು.

8. ಜಮೀಂದಾರ ಲಾಹಾಬಾಬುಗಳ ಮನೆಯ ಮುಂದಿದ್ದ ನಾಟ್ಯಮಂಟಪ ದಲ್ಲಿಯೇ ಶಾಲೆ ನಡೆಯುತ್ತಿತ್ತು. ಆ ಕುಟುಂಬದವರಿಂದಲೇ ನಿಯುಕ್ತನಾದ ಉಪಾ ಧ್ಯಾಯನು ಬಂದು ಆ ಮನೆಯವರ ಮತ್ತು ನೆರೆಹೊರೆಯವರ ಬಾಲಕರಿಗೆ ಪಾಠ ಹೇಳಿ ಕೊಡುತ್ತಿದ್ದನು. ಇದು ಕ್ಷುದಿರಾಮನ ಮನೆಯಿಂದ ತುಂಬ ದೂರವಿರಲಿಲ್ಲ. ಬೆಳಗ್ಗೆ ಮತ್ತು ಮಧ್ಯಾಹ್ನ ಎರಡು ಹೊತ್ತೂ ತರಗತಿ ನಡೆಯುತ್ತಿತ್ತು. ವಿದ್ಯಾರ್ಥಿಗಳು ಬೆಳಗ್ಗೆ ಬಂದು ಎರಡು ಮೂರು ಗಂಟೆ ಅಧ್ಯಯನ ಮಾಡಿ ಅವರವರ ಮನೆಗೆ ಊಟಕ್ಕೆ ಹೋಗುತ್ತಿದ್ದರು. ಅನಂತರ ಮಧ್ಯಾಹ್ನ ಮೂರು ಗಂಟೆಗೆ ಬಂದು ಸಂಜೆಯವರೆಗೂ ಶಾಲೆಯಲ್ಲಿದ್ದು ಮನೆಗೆ ಹಿಂದಿರುಗುತ್ತಿದ್ದರು. ಗದಾಧರನಂತಹ ಬುದ್ಧಿಶಾಲಿಗಳಿಗೆ ಅಷ್ಟೊಂದು ಪಾಠಾಭ್ಯಾಸದ ಆವಶ್ಯಕತೆಯಿರಲಿಲ್ಲ, ಆದರೂ ಅವರು ಶಾಲೆಯಲ್ಲಿ ಹಾಜ ರಿರಬೇಕಿತ್ತು. ಅವರು ಪಾಠದನಂತರ ಅಲ್ಲಿಯೇ ಕೂತಿರುತ್ತಿದ್ದರು, ಇಲ್ಲವೇ ಹೊರಗಡೆ ಬಂದು ಆಟವಾಡುತ್ತಿದ್ದರು. ಹಳೆಯ ವಿದ್ಯಾರ್ಥಿಗಳು ಹೊಸ ವಿದ್ಯಾರ್ಥಿಗಳಿಗೆ ಪಾಠ ಹೇಳಿ ಕೊಡುವುದೂ ಇತ್ತು. ಹಳೆಯ ಪಾಠಗಳನ್ನು ನಿತ್ಯ ಅಭ್ಯಾಸ ಮಾಡುತ್ತಾರೊ ಇಲ್ಲವೊ ಎಂಬುದನ್ನೂ ಅವರು ನೋಡಿಕೊಳ್ಳುತ್ತಿದ್ದರು. ಹೀಗೆ ಒಬ್ಬನೇ ಉಪಾಧ್ಯಾಯನಿದ್ದರೂ ಶಾಲೆ ಸುವ್ಯವಸ್ಥಿತವಾಗಿ ನಡೆದುಕೊಂಡು ಹೋಗುತ್ತಿತ್ತು. ಗದಾಧರನು ಮೊದಲು ಶಾಲೆಗೆ ಹೋಗಲು ಪ್ರಾರಂಭಿಸಿದಾಗ ಯದುನಾಥ ಸರ್ಕಾರನು ಅಲ್ಲಿ ಶಿಕ್ಷಕನಾಗಿದ್ದನು. ಸ್ವಲ್ಪ ಕಾಲದನಂತರ ಅವನು ಬೇರೆ ಕಾರ್ಯಗಳ ನಿಮಿತ್ತ ಉಪಾಧ್ಯಾಯ ವೃತ್ತಿಯನ್ನು ಬಿಟ್ಟ ಮೇಲೆ ರಾಜೇಂದ್ರನಾಥ ಸರ್ಕಾರನು ಆ ಸ್ಥಾನಕ್ಕೆ ಬಂದನು.

9. ಬಾಲಕನ ಜನನಕ್ಕೆ ಮೊದಲು ಅವನ ಉಜ್ವಲ ಜೀವನದ ಸಂಬಂಧವಾಗಿ ಕ್ಷುದಿರಾಮನು ಏನೇನು ದಿವ್ಯ ಸ್ವಪ್ನ ಮತ್ತು ದರ್ಶನಗಳನ್ನು ಕಂಡಿದ್ದನೊ ಅವೆಲ್ಲ ಅವನ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿದ್ದುವು. ಬಾಲ-ಸ್ವಭಾವಕ್ಕೆ ಅನುಗುಣವಾಗಿ ಗದಾಧರನು ಏನಾದರೂ ತಪ್ಪು ಮಾಡಿದರೆ ಅವನು ಮೃದುನುಡಿಗಳಿಂದಲೇ ಅವನನ್ನು ತಿದ್ದುತ್ತಿದ್ದನೇ ಹೊರತು ಎಂದೂ ಕಟುವಾಕ್ಯವನ್ನು ಉಚ್ಚರಿಸುತ್ತಿರಲಿಲ್ಲ. ಬಾಲಕನಲ್ಲಿ ಸ್ವಲ್ಪ ಸ್ವೇಚ್ಛಾವೃತ್ತಿ ಇತ್ತು. ಇದಕ್ಕೆ ಅವನ ಸ್ವಭಾವವೇ ಕಾರಣವಿದ್ದಿರಬಹುದು ಅಥವಾ ಎಲ್ಲರ ಪ್ರೀತಿಗೂ ಅವನು ಪಾತ್ರನಾಗಿದ್ದುದರಿಂದಲೂ ಇರಬಹುದು. ಆದರೆ ಬೇರೆ ತಂದೆ ತಾಯಿಗಳಂತೆ ಕ್ಷುದಿರಾಮನು ಅವನನ್ನೆಂದೂ ಈ ಕಾರಣಕ್ಕಾಗಿ ಹೊಡೆ

ಯುತ್ತಿರಲಿಲ್ಲ. ಇದೇ ಬಾಲಕನ ಉನ್ನತಿಗೆ ಕಾರಣವಾಗಬಹುದೆಂದು ಅವನು ಭಾವಿಸಿದನು. ಈ ರೀತಿ ಭಾವಿಸುವುದಕ್ಕೆ ಸಾಕಷ್ಟು ಕಾರಣಗಳು ಇದ್ದುವು. ಬಾಲಕನು ಕೆಲವೊಮ್ಮೆ ಶಾಲೆಗೆ ಚಕ್ಕರ್ ಹೊಡೆದು ಸ್ನೇಹಿತರೊಡನೆ ಗ್ರಾಮದ ಹೊರಗೆ ಆಟಕ್ಕೆ ಹೋಗುತ್ತಿದ್ದ, ಇಲ್ಲವೇ ಜಾತ್ರೆಗೆ (ಒಂದು ಬಗೆಯ ಬಯಲು ನಾಟಕ) ಹೋಗುತ್ತಿದ್ದ. ಆದರೆ ತನ್ನ ಕೃತ್ಯವನ್ನು ಮುಚ್ಚಿಡಲು ಎಂದೂ ಸುಳ್ಳು ಹೇಳುತ್ತಿರಲಿಲ್ಲ. ಅವನು ಎಂದೂ ಯಾರಿಗೂ ಅನಿಷ್ಟವನ್ನುಂಟುಮಾಡುತ್ತಿರಲಿಲ್ಲ. ಇದನ್ನು ಮಾಡು ಅಥವಾ ಮಾಡಬೇಡ ಎಂಬುದನ್ನು ಅವನಿಗೆ ಮನಮುಟ್ಟುವಂತೆ ಹೇಳದೆ ಇದ್ದರೆ ಅವನು ಅದನ್ನು ಅನುಸರಿಸುವುದಿರಲಿ ಅದಕ್ಕೆ ವಿರುದ್ಧವಾಗಿಯೇ ವರ್ತಿಸುತ್ತಿದ್ದ. ಇದರ ಬಗ್ಗೆ ಕ್ಷುದಿರಾಮನು ಸ್ವಲ್ಪ ಚಿಂತಿತನಾಗಿದ್ದ. ಪ್ರತಿಯೊಂದಕ್ಕೂ ಅವನು ಕಾರಣ ವಿಚಾರಿಸುತ್ತಿದ್ದ; ಎಲ್ಲ ವಿಷಯದಲ್ಲಿಯೂ ಆವನ ಈ ರೀತಿಯ ವಿಪರೀತ ವರ್ತನೆಯನ್ನು ನೋಡಿ ಮುಂದೆ ಇವನು ಎಲ್ಲ ಸಂಪ್ರದಾಯಗಳನ್ನೂ ಕಡೆಗಣಿಸುತ್ತಾನೋ ಎಂಬ ಭಯ ಕ್ಷುದಿರಾಮನಿಗೆ. ಆ ಸಮಯದಲ್ಲಿ ನಡೆದ ಒಂದು ಸಣ್ಣ ಘಟನೆ ಕ್ಷುದಿರಾಮನಲ್ಲಿ ಈ ರೀತಿಯ ಭಯ ಹುಟ್ಟಿಸಿತ್ತು, ಮತ್ತು ಬಾಲಕನಿಗೆ ಸರಿಯಾದ ತರಬೇತಿ ನೀಡಬೇಕೆಂದು ಎಚ್ಚರಿಕೆ ನೀಡಿತ್ತು.

10. ಮನೆಯ ಹತ್ತಿರ ಹಲದಾರಪುಕುರವೆಂಬ ಒಂದು ದೊಡ್ಡ ಕೊಳವಿದೆ. ಊರಿನ ಜನರೆಲ್ಲ ಅಲ್ಲೇ ಸ್ನಾನ ಮಾಡುವುದು ಬಟ್ಟೆ ಒಗೆಯುವುದು ಎಲ್ಲ ಮಾಡುತ್ತಿದ್ದರು. ಸ್ತ್ರೀಯರಿಗೆ ಮತ್ತು ಪುರುಷರಿಗೆ ಬೇರೆ ಬೇರೆ ಘಟ್ಟಗಳಿದ್ದುವು. ಗದಾಧರನ ವಯಸ್ಸಿನ ಬಾಲಕರು ಕೆಲವೊಮ್ಮೆ ಸ್ತ್ರೀಯರಿಗೆ ನಿರ್ದಿಷ್ಟವಾದ ಘಟ್ಟದಲ್ಲಿಯೇ ಸ್ನಾನ ಮಾಡುತ್ತಿದ್ದರು. ಒಮ್ಮೆ ಗದಾಧರನು ಇಬ್ಬರು ಮೂವರು ಸ್ನೇಹಿತರೊಡನೆ ಅಲ್ಲಿಗೆ ಸ್ನಾನಕ್ಕೆ ಬಂದನು. ನೀರಿನಲ್ಲಿ ಅವರು ಜೋರಾಗಿ ಆಟವಾಡತೊಡಗಿದರು. ಇದರಿಂದ ಅಲ್ಲಿಗೆ ಸ್ನಾನಕ್ಕಾಗಿ ಬಂದಿದ್ದ ಸ್ತ್ರೀಯರಿಗೆ ತುಂಬ ತೊಂದರೆಯುಂಟಾಯಿತು. ಸ್ನಾನ ಮಾಡಿ ಮಡಿಯಲ್ಲಿದ್ದ ಸ್ತ್ರೀಯರ ಮೈಗೆ ಸ್ವಲ್ಪ ನೀರು ತಾಕಿತು. ಅವರೆಷ್ಟೇ ಹೇಳಿದರೂ ಬಾಲಕರು ತಮ್ಮ ಚೇಷ್ಟೆ ಬಿಡಲಿಲ್ಲ. ಅವರಲ್ಲಿ ಒಬ್ಬಳು ಕೋಪ ಮಾಡಿಕೊಂಡು ಹುಡುಗರನ್ನು ಜರಿದು ನುಡಿದಳು, "ನೀವು ಯಾಕ್ರೋ ಈ ಘಟ್ಟಕ್ಕೆ ಬರೋದು ? ಗಂಡಸರ ಘಟ್ಟಕ್ಕೆ ಹೋಗಬಾರದಾ ? ಇಲ್ಲಿ ಮಹಿಳೆಯರು ಸ್ನಾನಮಾಡಿ ಉಟ್ಟ ಬಟ್ಟೆಯನ್ನು ತೊಳೆಯುತ್ತಾರೆ. ನಗ್ನ ಸ್ತ್ರೀಯರನ್ನು ನೋಡಬಾರದು ಅಂತ ಗೊತ್ತಿಲ್ಲವೇ ?" ಗದಾಧರ ಕೂಡಲೇ ಕೇಳಿದ, "ಯಾಕೆ ನೋಡಬಾರದು ?" ಎಂದು. ಅವಳ ಕೋಪ ನೆತ್ತಿಗೇರಿತು, ಅವನನ್ನು ಚೆನ್ನಾಗಿ ಬಯ್ಯತೊಡಗಿದಳು. ಮಕ್ಕಳು ಮನೆಯವರಿಗೆ ಎಲ್ಲಿ ತಿಳಿಸುತ್ತಾರೊ ಎಂದು ಹೆದರಿ ಸುಮ್ಮನಾದರು. ಆದರೆ ಗದಾಧರ ಅಷ್ಟಕ್ಕೆ ಬಿಡಲಿಲ್ಲ. ಅವನು ಎರಡು ಮೂರು ದಿನ ಸ್ತ್ರೀಯರು ಸ್ನಾನಮಾಡುವಾಗ ಬಂದು ಕೊಳದ ಪಕ್ಕದಲ್ಲಿದ್ದ ಮರದ ಸಂದಿಯಿಂದ ಅವರನ್ನು ನೋಡುತ್ತಿದ್ದನು. ಅನಂತರ ಹಿಂದೆ ತನಗೆ ಬೈದ ಮಹಿಳೆಯನ್ನು ಸಂಧಿಸಿ ಹೇಳಿದ : "ನೋಡಿ, ಮೊನ್ನೆ

ನಾಲ್ಕು ಜನ ಮಹಿಳೆಯರು ಸ್ನಾನಮಾಡುವುದನ್ನು ನೋಡಿದೆ, ನಿನ್ನೆ ಆರು ಜನ ಮತ್ತು ಇವತ್ತು ಎಂಟು ಜನರನ್ನು ನೋಡಿದೆ. ಆದರೆ ನನಗೆ ಅದರಿಂದ ಏನೂ ಆಗಲೇ ಇಲ್ಲವಲ್ಲ ?'' ಆ ಮಹಿಳೆ ಚಂದ್ರಾದೇವಿಯ ಹತ್ತಿರ ಬಂದು ನಗುನಗುತ್ತಲೆ ಎಲ್ಲವನ್ನೂ ತಿಳಿಸಿದಳು. ಚಂದ್ರಾದೇವಿಯು ಸರಿಯಾದ ಅವಕಾಶ ನೋಡಿಕೊಂಡು ಮಗನನ್ನು ಕರೆದು ಮೃದು ನುಡಿಗಳಿಂದ ಹೇಳತೊಡಗಿದಳು : ''ನೋಡು ಗದಾಯ್, ನೀನು ಈ ರೀತಿ ಮಾಡಬಾರದು. ಇದರಿಂದ ನಿನಗೇನೂ ಆಗದೆ ಇರಬಹುದು. ಆದರೆ ಮಹಿಳೆಯ ರಿಗೆ ಅವಮಾನವಾದಂತಾಗುವುದು. ಅವರೆಲ್ಲ ನನ್ನಂತೆಯೇ. ಅವರಿಗೆ ಅಪಮಾನ ಮಾಡಿದರೆ ನನಗೆ ಮಾಡಿದಂತೆಯೆ. ಆದ್ದರಿಂದ ಅವರಿಗೆ ಮಾನಹಾನಿಯಾಗುವಂಥ ಕಾರ್ಯವನ್ನು ಎಂದೂ ಮಾಡಬೇಡ. ಅವರ ಮತ್ತು ನನ್ನ ಮನಸ್ಸನ್ನು ನೋಯಿಸು ವುದು ಒಳಿತೆ ?'' ಗದಾಧರನಿಗೆ ಅರ್ಥವಾಯಿತು, ಅವನು ಮತ್ತೆಂದೂ ಅಂಥ ಕಾರ್ಯವೆಸಗಲಿಲ್ಲ.

11. ಏನೇ ಆಗಲಿ ಪಾಠಶಾಲೆಯಲ್ಲಿ ಅವನ ಓದು ಸ್ಥಗಿತವಾಗಲಿಲ್ಲ. ಅಲ್ಪ ಕಾಲದಲ್ಲಿಯೇ ಓದುಬರಹದಲ್ಲಿ ಸಮರ್ಥನಾದನು. ಆದರೆ ಸಂಖ್ಯಾಶಾಸ್ತ್ರದಲ್ಲಿ ಅರುಚಿ ಅವನಲ್ಲಿ ಚಿರಕಾಲವೂ ಉಳಿಯಿತು. ಪಠ್ಯೇತರ ಚಟುವಟಿಕೆಗಳಲ್ಲಿ ಅವನಿಗೆ ಬಹಳ ಅಭಿರುಚಿಯಿತ್ತು. ಅವನ ಪ್ರತಿಭಾಶಕ್ತಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಪಸರಿಸತೊಡಗಿತು. ಹಳ್ಳಿಯ ಕುಂಬಾರರು ಅನೇಕ ದೇವದೇವಿಯರ ಮೂರ್ತಿಗಳನ್ನು ಮಾಡುವುದನ್ನು ಗಮನವಿಟ್ಟು ನೋಡಿ ಮತ್ತು ಅವರನ್ನು ಕೇಳಿ ತಿಳಿದುಕೊಂಡು ಮನೆಗೆ ಬಂದು ತಾನೂ ಅಂಥದೇ ಮೂರ್ತಿಗಳನ್ನು ತಯಾರಿಸುತ್ತಿದ್ದನು. ಇದೂ ಒಂದು ಕ್ರೀಡೆಯಾಯಿತು ಅವನಿಗೆ. ಹಾಗೆಯೇ ಅವನು ಚಿತ್ರಬಿಡಿಸುವುದನ್ನೂ ಕಲಿತನು. ಹಳ್ಳಿಯಲ್ಲಿ ಎಲ್ಲಿ ಪುರಾಣಪಠಣ ಅಥವಾ ಜಾತ್ರೆ ನಡೆದರೂ ಅವನು ಅಲ್ಲಿಗೆ ಹೋಗುತ್ತಿದ್ದ. ಎಲ್ಲ ಪುರಾಣಕಥೆಗಳೂ ಅವನ ಬಾಯಲ್ಲಿದ್ದುವು ಅವನ್ನು ಹೇಗೆ ಹೇಳಿದರೆ ಶ್ರೋತೃಗಳನ್ನು ಮೆಚ್ಚಿಸಬಹುದು ಎಂಬುದನ್ನು ನೋಡಿ ಕಲಿತ. ಅವನ ಅಪೂರ್ವ ಸ್ಮೃತಿ ಮತ್ತು ಮೇಧಾಶಕ್ತಿ ಈ ವಿಷಯದಲ್ಲಿ ಅವನಿಗೆ ಸಹಾಯ ಮಾಡಿದುವು.

ಬಾಲಕ ತುಂಬ ಉತ್ಸಾಹಿ ಮತ್ತು ಹಾಸ್ಯಪ್ರಿಯ. ಅನುಕರಣೆಯಲ್ಲಿ ನಿಸ್ಸೀಮ. ಸ್ತ್ರೀಪುರುಷರ ಹಾವಭಾವಗಳನ್ನು ಕಣ್ಣಿಗೆ ಕಟ್ಟುವಂತೆ ಅಭಿನಯಿಸಿ ಎಲ್ಲರನ್ನೂ ರಂಜಿಸು ತ್ತಿದ್ದನು. ಅಷ್ಟೇ ಅವನ ಸರಳತೆ ಮತ್ತು ದೈವಭಕ್ತಿಯೂ ಕೂಡ. ಈ ಗುಣಗಳು ತಂದೆತಾಯಿಯರ ದೈನಂದಿನ ಅನುಷ್ಠಾನಗಳನ್ನು ಗಮನಿಸುತ್ತಿದ್ದುದರಿಂದ ಬಾಲಕನಲ್ಲಿ ದಿನ ದಿನವೂ ವೃದ್ಧಿಸುತ್ತಿದ್ದುವು. ಈ ವಿಷಯದಲ್ಲಿ ಅವನು ಎಷ್ಟರ ಮಟ್ಟಿಗೆ ಅವರಿಂದ ಪ್ರಭಾವಿತನಾಗಿದ್ದ ಎಂಬುದು ಮುಂದೆ ಅವನು ಶ್ರೀರಾಮಕೃಷ್ಣರಾಗಿ ಭಕ್ತರೊಡನೆ ಮಾತನಾಡುವಾಗ ತಮ್ಮ ತಂದೆ ತಾಯಿಯರ ಬಗ್ಗೆ ಹೇಳಿದ ಈ ಮಾತಿನಲ್ಲಿ ವ್ಯಕ್ತವಾಗಿ ರುವುದು : ''ನನ್ನ ತಾಯಿ ಸರಳತೆಯ ಮೂರ್ತಿವೆತ್ತಂತಿದ್ದಳು. ಸಂಸಾರದ ಯಾವ ವಿಷಯವೂ ಅವಳಿಗೆ ತಿಳಿಯುತ್ತಿರಲಿಲ್ಲ. ದುಡ್ಡು ಎಣಿಸುವುದು ಅವಳಿಗೆ ಬರುತ್ತಿರಲಿಲ್ಲ.

ಯಾರಿಗೆ ಯಾವ ವಿಷಯವನ್ನು ಹೇಳಬಾರದು ಎಂಬುದನ್ನೂ ತಿಳಿಯದೆ ತನಗೆ ಮನಸ್ಸಿಗೆ ಬಂದದ್ದನ್ನೆಲ್ಲ ಎಲ್ಲರಿಗೂ ಹೇಳಿಬಿಡುತ್ತಿದ್ದಳು. ಇದರಿಂದಾಗಿ ಜನ ಅವಳನ್ನು 'ದಡ್ಡಿ' ಎನ್ನುತ್ತಿದ್ದರು. ಎಲ್ಲರಿಗೂ ಊಟ ಮಾಡಿಸುವುದೆಂದರೆ ಅವಳಿಗೆ ತುಂಬ ಇಷ್ಟ. ನನ್ನ ತಂದೆ ಎಂದೂ ಶೂದ್ರರಿಂದ ದಾನ ಸ್ವೀಕರಿಸಲಿಲ್ಲ. ಪೂಜೆ, ಜಪ, ಧ್ಯಾನ ಇವುಗಳಲ್ಲಿಯೇ ದಿನದ ಹೆಚ್ಚಿನ ಸಮಯವನ್ನು ಕಳೆಯುತ್ತಿದ್ದರು. ಪ್ರತಿದಿನ ಸಂಧ್ಯಾ ವಂದನೆಯ ಸಮಯದಲ್ಲಿ 'ಆಯಾಹಿ ವರದೇ ದೇವಿ' ಎಂದು ಗಾಯತ್ರೀ ಆವಾಹನ ಮಂತ್ರವನ್ನು ಉಚ್ಚರಿಸುತ್ತಿದ್ದಂತೆಯೇ ಅವರ ಎದೆ ಕೆಂಪಗಾಗುತ್ತಿತ್ತು, ಕಣ್ಣು ಬಾಷ್ಪ ಪೂರ್ಣವಾಗುತ್ತಿತ್ತು. ಬೇರೆ ಸಂದರ್ಭದಲ್ಲಿ ಶ್ರೀ ರಘುವೀರನಿಗೆ ಹೂಮಾಲೆ ಮಾಡುವುದ ರಲ್ಲಿ ಕಾಲಕಳೆಯುತ್ತಿದ್ದರು. ಸುಳ್ಳು ಸಾಕ್ಷಿ ಹೇಳಲಾರದೆ ಮನೆ ಮಠ ಕಳೆದುಕೊಳ್ಳ ಬೇಕಾಯಿತು. ಹಳ್ಳಿಗರು ಅವರನ್ನು ಋಷಿಯಂತೆ ಗೌರವಿಸುತ್ತಿದ್ದರು.''

12. ಬಾಲಕ ಗದಾಧರನಿಗೆ ಅಸಾಧಾರಣ ಧೈರ್ಯವಿತ್ತು. ವಯಸ್ಕರೂ ಕೂಡ ಭೂತಪ್ರೇತದ ಭಯದಿಂದ ಹೋಗಲು ಹಿಂಜರಿಯುತ್ತಿದ್ದ ಸ್ಥಳಕ್ಕೆ ಇವನು ನಿರ್ಭಯ ನಾಗಿ ಹೋಗುತ್ತಿದ್ದ. ಅವನ ತಂದೆಯ ತಂಗಿ ರಾಮಶೀಲಾಳ ಮೇಲೆ ಶೀತಲಾದೇವಿಯ ಆವೇಶವುಂಟಾಗುತ್ತಿತ್ತು. ಆಗ ಆಕೆ ಸಂಪೂರ್ಣ ಬೇರೆಯೇ ವ್ಯಕ್ತಿಯಾಗಿಬಿಡುತ್ತಿದ್ದಳು. ಅವಳು ಒಮ್ಮೆ ಕಾಮಾರಪುಕುರಕ್ಕೆ ಬಂದಿದ್ದಾಗ ಈ ರೀತಿ ಆವೇಶವುಂಟಾಗಿ ಎಲ್ಲರೂ ಭಯದಿಂದ ನಡುಗತೊಡಗಿದರು. ಆದರೆ ಗದಾಧರ ಆಕೆಯ ಹತ್ತಿರ ಹೋಗಿ ಅವಳ ಭಾವಾಂತರವನ್ನು ಸೂಕ್ಷ್ಮವಾಗಿ ಈಕ್ಷಿಸತೊಡಗಿದನು. ಅನಂತರ ಹೇಳಿದ : "ನನ್ನ ಚಿಕ್ಕಮ್ಮನ ಮೈಮೇಲೆ ಬಂದದ್ದು ನನ್ನ ಮೇಲೆ ಬಂದಿದ್ದರೆ ಚೆನ್ನಾಗಿತ್ತು.''

13. ಕಾಮಾರಪುಕುರದಿಂದ ಒಂದು ಮೈಲಿ ದೂರದಲ್ಲಿ ಭುರಸುಬೊ ಎಂಬ ಗ್ರಾಮವಿದೆ. ಅಲ್ಲಿಯ ಜಮೀಂದಾರ ಮಾಣಿಕರಾಜನ ಬಗ್ಗೆ ಮೊದಲೇ ಹೇಳಿಯಾಗಿದೆ. ಕ್ಷುದಿರಾಮನ ಧರ್ಮಬುದ್ಧಿಯನ್ನು ಕಂಡು ಅವನೊಡನೆ ಗಾಢ ಸ್ನೇಹ ಬೆಳಸಿದ್ದ. ಆರು ವರ್ಷದ ಬಾಲಕ ಗದಾಧರನು ಒಮ್ಮೆ ತಂದೆಯ ಜತೆ ಮಾಣಿಕರಾಜನ ಮನೆಗೆ ಹೋಗಿದ್ದ. ಆಗ ಅವನು ಆ ಮನೆಯವರೆಲ್ಲ ತನಗೆ ಚಿರಪರಿಚಿತರೆಂಬಂತೆ ಎಷ್ಟೊಂದು ನಿಃಸಂಕೋಚನಾಗಿ ಅವರೊಡನೆ ವ್ಯವಹರಿಸಿದನೆಂದರೆ ಅಂದಿನಿಂದಲೇ ಆ ಮನೆಯವರಿಗೆಲ್ಲ ಅತ್ಯಂತ ಪ್ರಿಯನಾಗಿಬಿಟ್ಟ. ಮಾಣಿಕರಾಜನ ಸಹೋದರ ರಾಮಜಯ ಬಂದ್ಯೋಪಾ ಧ್ಯಾಯ ಅಂದು ಬಾಲಕನನ್ನು ನೋಡಿ ಮುಗ್ಧನಾಗಿ ಕ್ಷುದಿರಾಮನಿಗೆ ಹೇಳಿದ : "ಮಿತ್ರ, ನಿನ್ನ ಈ ಮಗ ಸಾಮಾನ್ಯನಲ್ಲ. ಇವನಲ್ಲಿ ದೈವಾಂಶ ವಿಶೇಷರೀತಿಯಲ್ಲಿ ಪ್ರಕಾಶಿಸುತ್ತಿದೆ, ಎಂದೆನಿಸುತ್ತಿದೆ. ನೀನು ಈ ಕಡೆ ಬರುವಾಗ ಬಾಲಕನನ್ನೂ ಕರೆದುಕೊಂಡು ಬಾ, ಅವನನ್ನು ನೋಡಿದರೆ ತುಂಬ ಆನಂದವಾಗುತ್ತದೆ." ಇದಾದನಂತರ ಅನೇಕ ದಿನಗಳ ವರೆಗೆ ಕ್ಷುದಿರಾಮನಿಗೆ ಮಾಣಿಕರಾಜನ ಮನೆಗೆ ಹೋಗುವ ಅವಕಾಶ ಒದಗಿಬರಲಿಲ್ಲ. ಮಾಣಿಕರಾಜನು ಬಾಲಕನನ್ನು ನೋಡಿಕೊಂಡುಬರಲು ಮತ್ತು ಆರೋಗ್ಯದಿಂದಿದ್ದರೆ ಕರೆದುಕೊಂಡು ಬರಲು ಮನೆಯ ಒಬ್ಬಳು ಮಹಿಳೆಯನ್ನು ಕಳಿಸಿದನು. ಗದಾಧರನು

ತಂದೆಯ ಅನುಮತಿಯನ್ನು ಪಡೆದು ಆ ಮಹಿಳೆಯೊಡನೆ ಮಾಣಿಕರಾಜನ ಮನೆಗೆ ಹೋಗಿ ಇಡೀ ದಿವಸ ಅಲ್ಲಿದ್ದು ಸಂಜೆಯ ಹೊತ್ತಿಗೆ ಅನೇಕ ಸಿಹಿತಿಂಡಿ ಅಲಂಕಾರವಸ್ತುಗಳೊಡನೆ ಮನೆಗೆ ಹಿಂದಿರುಗಿದ. ಹೀಗೆ ಅನೇಕ ದಿನ ಗದಾಧರನು ಅಲ್ಲಿಗೆ ಹೋಗದಿದ್ದರೆ ಅವರು ಜನ ಕಳಿಸುತ್ತಿದ್ದರು—ಅಷ್ಟೊಂದು ಅವರಿಗೆ ಪ್ರೀತಿಪಾತ್ರನಾಗಿದ್ದ.

14. ಬಾಲಕ ಬೆಳೆಯುತ್ತ ಏಳು ವರ್ಷದವನಾದ. ಅವನು ಬೆಳೆದಂತೆಲ್ಲ ಅವನ ವರ್ತನೆಯಲ್ಲಿಯೂ ಮಾಧುರ್ಯ ಬೆಳೆಯಿತು. ಜನರಿಗೆ ಹೆಚ್ಚು ಪ್ರಿಯನಾಗತೊಡಗಿದ. ಹಳ್ಳಿಯ ಮಹಿಳೆಯರು ಏನಾದರೂ ಒಳ್ಳೆಯ ತಿಂಡಿಯನ್ನು ಮಾಡಿದರೆ ಅದನ್ನು ಸ್ವಲ್ಪ ಗದಾಧರನಿಗೆ ಹೇಗೆ ತಿನ್ನಿಸುವುದು ಇದೇ ಚಿಂತೆ ಅವರಿಗೆ. ಅವನ ವಯಸ್ಸಿನ ಬಾಲಕ ಬಾಲಕಿಯರು ತಾವು ತಿನ್ನುವುದನ್ನು ಅವನಿಗೆ ಹಂಚಿಕೊಂಡು ತಿಂದರೆ ಮಹದಾನಂದ ಅವರಿಗೆ. ಅವನ ಮಧುರ ಸಂಭಾಷಣೆ, ಸಂಗೀತ, ಅನುಕರಣೆ ಇತ್ಯಾದಿಗಳಿಂದ ನೆರೆಹೊರೆಯವರು ಎಷ್ಟೊಂದು ನಲಿದು ಆನಂದಿಸುತ್ತಿದ್ದರೆಂದರೆ ಅವನ ಬಾಲಕ ಸಹಜ ಚೇಷ್ಟೆಯನ್ನು ಸ್ವಲ್ಪವೂ ಲೆಕ್ಕಕ್ಕೆ ತೆಗೆದುಕೊಳ್ಳುತ್ತಿರಲಿಲ್ಲ. ಈ ಸಂದರ್ಭದಲ್ಲಿ ನಡೆದ ಒಂದು ಘಟನೆ ಬಾಲಕನ ತಂದೆತಾಯಿಗಳು ಮತ್ತು ಸಂಬಂಧಿಕರು ಅವನ ವಿಷಯದಲ್ಲಿ ತುಂಬ ಚಿಂತೆಗೀಡಾಗುವಂತೆ ಮಾಡಿತು. ಬಾಲಕನ ಆರೋಗ್ಯ ಉತ್ತಮವಾಗಿತ್ತು, ಮತ್ತು ದೇಹವೂ ಶಕ್ತಿಯುತವಾಗಿತ್ತು. ಹುಟ್ಟಿದಂದಿನಿಂದ ಇದುವರೆಗೂ ಯಾವ ವಿಶೇಷ ಕಾಯಿಲೆಯೂ ಅವನಲ್ಲಿ ಕಾಣಿಸಿಕೊಂಡಿರಲಿಲ್ಲ. ಇದರಿಂದಾಗಿ ಬಾಲಕನು ಉಲ್ಲಾಸದಿಂದ ಹಕ್ಕಿಯಂತೆ ಮುಕ್ತನಾಗಿ ಓಡಾಡಿಕೊಂಡಿದ್ದ. ಶರೀರದ ಬೋಧೆ ಇಲ್ಲದಿರುವುದೇ ಪೂರ್ಣ ಆರೋಗ್ಯದ ಲಕ್ಷಣವೆಂದು ವೈದ್ಯರು ಹೇಳುತ್ತಾರೆ. ಬಾಲಕನು ಆ ರೀತಿ ಹುಟ್ಟಿದಂದಿನಿಂದಲೂ ಆರೋಗ್ಯ ಸುಖವನ್ನು ಅನುಭವಿಸಿದವನು. ಇಷ್ಟೇ ಅಲ್ಲದೆ ಅವನಿಗೆ ಏಕಾಗ್ರತೆ ಸ್ವಾಭಾವಿಕವಾಗಿತ್ತು. ಯಾವುದೇ ಒಂದು ವಿಷಯದಲ್ಲಿ ಮನಸ್ಸನ್ನು ಹರಿಸಿದರೆ ಅವನ ಶರೀರಬುದ್ಧಿಯು ಬಹುಮಟ್ಟಿಗೆ ಕಡಿಮೆಯಾಗುತ್ತಿತ್ತು ಮತ್ತು ಅವನು ಭಾವಮಯನಾಗಿರುತ್ತಿದ್ದ. ಶುದ್ಧ ಗಾಳಿಯಿಂದ ಲೋಲಾಡುವ ಹಸಿರು ವನರಾಶಿ, ನದಿಯ ನಿರಂತರ ಪ್ರವಾಹ, ಹಕ್ಕಿಗಳ ಚಿಲಿಪಿಲಿಗಾನ ಮತ್ತು ನೀಲಾಕಾಶ—ಇವೇ ಮುಂತಾದ ಸುಂದರ ದೃಶ್ಯಗಳು ಪ್ರಕೃತಿಯ ಅದ್ಭುತ ಮಹಿಮೆಯನ್ನು ಹೊರಸೂಸಿ ಅವನ ಮನಸ್ಸನ್ನು ಸೂರೆಗೊಂಡಾಗ ಅವನು ಯಾವುದೊ ಭಾವರಾಜ್ಯದಲ್ಲಿ ವಿಹರಿಸುತ್ತಿದ್ದ. ಈಗ ನಾವು ಪ್ರಸ್ತುತಪಡಿಸುವ ಘಟನೆಯೂ ಅವನ ಭಾವಪ್ರವಣತೆಯ ಪ್ರತೀಕವಾಗಿದೆ.

ಒಮ್ಮೆ ಅವನು ಹೊಲದಲ್ಲಿ ಸ್ವೇಚ್ಛೆಯಿಂದ ಓಡಾಡುತ್ತಿದ್ದನು. ಕೂಡಲೆ ಅವನಿಗೊಂದು ಸುಂದರ ದೃಶ್ಯ ಕಾಣಿಸಿತು. ಗಗನದಲ್ಲಿ ಕರಿಯ ಮೋಡ ಆವರಿಸಿದೆ, ಒಂದು ಕೊಕ್ಕರೆಯ ಗುಂಪು ತಮ್ಮ ಶ್ವೇತ ಪಕ್ಷವನ್ನು ವಿಸ್ತರಿಸಿ ಆನಂದದಿಂದ ಹಾರಾಡುತ್ತಿದೆ. ಕಾರ್ಮೋಡದ ಹಿನ್ನೆಲೆಯಲ್ಲಿ ಶ್ವೇತಪಕ್ಷಿಗಳ ಆ ಸಾಲು ಮನಮೋಹಕ ದೃಶ್ಯವಾಗಿತ್ತು. ಅದನ್ನು ನೋಡುತ್ತಿದ್ದಂತೆಯೇ ಬಾಲಕನ ಮನಸ್ಸು ಅದರಲ್ಲಿಯೇ ತಲ್ಲೀನ

ಪಾಯಿತು, ವರ್ತಮಾನದಿಂದ ದೂರವಾಗಿ ಯಾವುದೊ ಭಾವ ಜಗತ್ತನ್ನು ಪ್ರವೇಶಿಸಿತು. ಬಾಹ್ಯಪ್ರಜ್ಞೆ ತಪ್ಪಿ ಅಲ್ಲಿಯೇ ಮಾರ್ಗದಲ್ಲಿ ಉರುಳಿಬಿದ್ದ.* ಇತರ ಬಾಲಕರು ಗಾಬರಿ ಯಿಂದ ಓಡಿಹೋಗಿ ತಂದೆತಾಯಿಗಳಿಗೆ ತಿಳಿಸಿದರು. ಅನಂತರ ಅವನನ್ನು ಎತ್ತಿಕೊಂಡು ಮನೆಗೆ ಕರೆದುಕೊಂಡು ಹೋಗಲಾಯಿತು. ಸ್ವಲ್ಪ ಹೊತ್ತಿನ ನಂತರ ಅವನಿಗೆ ಬಾಹ್ಯ ಪ್ರಜ್ಞೆಯುಂಟಾದಾಗ ಅವನಿಗೆ ಯಾವರೀತಿಯ ದಣಿವೂ ಇರಲಿಲ್ಲ, ಮೊದಲಿನಂತೆಯೆ ಆರೋಗ್ಯದಿಂದಿದ್ದ. ಆದರೆ ಕ್ಷುದಿರಾಮ—ಚಂದ್ರಾದೇವಿಯರು ಈ ಘಟನೆಯಿಂದ ತುಂಬ ಚಿಂತೆಗೀಡಾದರು. ಅವರು ಇದು ಮೂರ್ಛೆರೋಗವಿರಬಹುದೆಂದು ಭಾವಿಸಿ ಅದಕ್ಕೆ ತಕ್ಕ ಔಷಧಿ ಶಾಂತಿ-ಸ್ವಸ್ತ್ಯಯನಾದಿಗಳ ಬಗ್ಗೆ ಆಲೋಚಿಸತೊಡಗಿದರು. ಆದರೆ ಗದಾಧರ ಈ ಘಟನೆಯ ಬಗ್ಗೆ ಮತ್ತೆ ಮತ್ತೆ ಹೇಳುತ್ತಿದ್ದ—ನಾನು ಆಗ ಒಂದು ಹೊಸ ಭಾವದಲ್ಲಿ ಲೀನನಾಗಿದ್ದೆ, ಹೊರಗಡೆ ಪ್ರಜ್ಞೆ ಇಲ್ಲದಂತೆ ಕಂಡರೂ ಒಳಗಡೆ ಅಪಾರ ಆನಂದವನ್ನು ಅನುಭವಿಸುತ್ತಿದ್ದೆ–ಎಂದು. ಈ ರೀತಿಯ ಸ್ಥಿತಿ ಅವನಿಗೆ ಯಾವಾಗಲೂ ಆಗದೇ ಇದ್ದುದರಿಂದ ಇದು ಮೂರ್ಛಾರೋಗದ ಪರಿಣಾಮವೆಂದು ಕ್ಷುದಿರಾಮನು ಭಾವಿಸಿದ. ಯಾವುದೊ ಕ್ಷುದ್ರದೇವತೆ ಮೈಮೇಲೆ ಬಂದು ಆ ರೀತಿ ಆಗಿರಬಹುದೆಂದು ಚಂದ್ರಾದೇವಿ ಭಾವಿಸಿದಳು. ಈ ಘಟನೆಯಿಂದಾಗಿ ಹುಡುಗನನ್ನು ಕೆಲವು ಕಾಲ ಶಾಲೆಗೆ ಕಳಿಸಲಿಲ್ಲ. ಗದಾಧರನು ಈ ಸಮಯವನ್ನು ಪಕ್ಕದ ಮನೆಗಳಿಗೆ ಹೋಗುತ್ತ ಗ್ರಾಮದಲ್ಲಿ ಸ್ವಚ್ಛಂದವಾಗಿ ಓಡಾಡುತ್ತ ಕಳೆದ.

15. ೧೮೪೩, ಶಾರದೀಯ ದುರ್ಗಾಪೂಜೆಯ ಸಮಯ. ಬಾಲಕ ಗದಾಧರನಿಗೆ ಈಗ ಏಳೂವರೆ ವರ್ಷ ವಯಸ್ಸು. ಕ್ಷುದಿರಾಮನ ಸೋದರಳಿಯ ರಾಮಚಂದ್ರ ಬಂದ್ಯೋಪಾಧ್ಯಾಯನ ವಿಷಯ ಆಗಲೇ ಹೇಳಿಯಾಗಿದೆ. ಕೆಲಸದ ನಿಮಿತ್ತ ವರ್ಷದ ಹೆಚ್ಚು ಸಮಯ ಮೇದಿನೀಪುರದಲ್ಲಿ ಕಳೆದರೂ ಅವನ ಸ್ವಂತ ಊರು ಸೇಲಾಂಪುರ. ಅವನ ಪರಿವಾರದವರೆಲ್ಲ ಅಲ್ಲಿಯೇ ವಾಸಿಸುತ್ತಿದ್ದರು. ರಾಮಚಂದ್ರನು ಪ್ರತಿವರ್ಷ ಆ ಗ್ರಾಮದಲ್ಲಿ ವಿಜೃಂಭಣೆಯಿಂದ ದುರ್ಗಾಪೂಜೆ ಆಚರಿಸುತ್ತಿದ್ದನು. ವಾದ್ಯಗೋಷ್ಠಿ, ಬ್ರಾಹ್ಮಣ ಭೋಜನ, ಬಡವರಿಗೆ ಅನ್ನವಸ್ತ್ರಾದಿಗಳ ದಾನ ಹೀಗೆ ಅನೇಕ ಕಾರ್ಯಕ್ರಮ ಗಳಿಂದ ಕೂಡಿ ಅದೊಂದು ಆನಂದೋತ್ಸವವಾಗಿತ್ತು. ಆ ಸಂದರ್ಭದಲ್ಲಿ ರಾಮಚಂದ್ರನು ತನಗೆ ಪರಮ ಶ್ರದ್ಧಾಸ್ಪದನಾದ ಮಾವ ಕ್ಷುದಿರಾಮನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಅವನೊಡನೆ ಸ್ವಲ್ಪ ಕಾಲ ಆನಂದದಿಂದ ಕಳೆಯುತ್ತಿದ್ದನು. ಈ ವರ್ಷವೂ ಕೂಡ ರಾಮಚಂದ್ರನ ಆಹ್ವಾನ ಬಂದಿತ್ತು.

16. ಕ್ಷುದಿರಾಮನಿಗೆ ಈಗ ಅರವತ್ತೆಂಟು ವರ್ಷ ಕಳೆಯುತ್ತ ಬಂದಿತ್ತು. ದೇಹದಲ್ಲಿ ಮೊದಲಿನ ಶಕ್ತಿ ಇರಲಿಲ್ಲ. ಕೆಲವು ಸಮಯದಿಂದ ಅಜೀರ್ಣ ಭೇದಿ ಇತ್ಯಾದಿ ಗಳಿಂದ ನರಳುತ್ತಿದ್ದನು. ಇಂಥ ಸ್ಥಿತಿಯಲ್ಲಿ ಅಲ್ಲಿಗೆ ಹೋಗುವುದೇ ಬೇಡವೇ ಎಂದು

---

*ಈ ಘಟನೆಯ ವಿವರಣೆಗೆ ಶ್ರೀರಾಮಕೃಷ್ಣರ ಸಾಧಕಭಾವ-ಎರಡನೆಯ ಅಧ್ಯಾಯ ನೋಡಿ.

ಯೋಚಿಸತೊಡಗಿದ. ಗದಾಧರನನ್ನು ಬಿಟ್ಟು ಹೋಗುವುದಕ್ಕೂ ಅವನಿಗೆ ಮನಸ್ಸಿರ ಲಿಲ್ಲ. ಮತ್ತೆ ಈ ಬಾರಿ ಹೋಗದೆ ಇದ್ದರೆ ಮುಂದೆ ಹೋಗುವುದೇ ಅಸಂಭವವೇನೊ ಎಂದೂ ಭಾವಿಸಿದನು. ಆದ್ದರಿಂದ ಗದಾಧರನನ್ನು ಜತೆಗೆ ಕರೆದುಕೊಂಡು ಹೋಗು ವುದೆಂದು ನಿರ್ಧರಿಸಿದ. ಆದರೆ ಗದಾಧರನನ್ನು ಕರೆದುಕೊಂಡು ಹೋದರೆ ಚಂದ್ರಮಣಿಗೆ ದುಃಖವಾಗಬಹುದೆಂದು ಯೋಚಿಸಿ ಜ್ಯೇಷ್ಠಪುತ್ರ ರಾಮಕುಮಾರನನ್ನು ಕರೆದುಕೊಂಡು ಹೋಗುವುದೆಂದು ತೀರ್ಮಾನಕ್ಕೆ ಬಂದ. ಶ್ರೀ ರಘುವೀರನಿಗೆ ಪ್ರಣಾಮ ಸಲ್ಲಿಸಿ ಎಲ್ಲ ರಿಂದಲೂ ಬೀಳ್ಕೊಂಡು ಗದಾಧರನನ್ನು ಪ್ರೀತಿಯಿಂದ ಚುಂಬಿಸಿ ರಾಮಕುಮಾರನೊಡನೆ ಸೇಲಾಂಪುರಕ್ಕೆ ಹೊರಟನು. ಪೂಜೆಗೆ ಕೆಲವು ದಿನಗಳಿಗೆ ಮುಂಚೆ ಅವನು ರಾಮ ಚಂದ್ರನ ಮನೆಗೆ ಬಂದು ಮುಟ್ಟಿದನು ರಾಮಚಂದ್ರನಿಗೆ ಮಹದಾನಂದವಾಯಿತು.

17. ಆದರೆ ಅಲ್ಲಿಗೆ ಹೋದಕೂಡಲೇ ಕ್ಷುದಿರಾಮನಿಗೆ ಆಮಶಂಕೆ ರೋಗ ಪ್ರಾರಂಭವಾಯಿತು. ಷಷ್ಠಿ, ಸಪ್ತಮಿ, ಮತ್ತು ಅಷ್ಟಮೀ ದಿನಗಳು ಆನಂದದಿಂದ ಕಳೆ ದುವು. ಆದರೆ ನವಮಿಯ ದಿನ ಕ್ಷುದಿರಾಮನ ರೋಗ ಉಲ್ಬಣಿಸಿತು, ಎಲ್ಲರ ಆನಂದ ದುಃಖವಾಗಿ ಪರಿಣಮಿಸಿತು. ರಾಮಚಂದ್ರನು ಅನೇಕ ವೈದ್ಯರುಗಳನ್ನು ಕರೆಸಿದನು. ಸೋದರಿ ಹೇಮಾಂಗಿನಿ ಮತ್ತು ರಾಮಕುಮಾರ ಇವರ ಸಹಾಯವನ್ನು ಪಡೆದು ಅವನು ಎಲ್ಲ ಔಷಧೋಪಚಾರ ಸೇವೆ ಮಾಡಿದನು. ಆದರೆ ರೋಗ ಉಪಶಮನಗೊಳ್ಳುವ ಸೂಚನೆ ಕಂಡುಬರಲಿಲ್ಲ. ನವಮೀ ದಿನ ಹೇಗೋ ಕಳೆಯಿತು. ಈಗ ಬಂಧು ಬಾಂಧ ವರು ಸಮಾವೇಶಗೊಳ್ಳುವ ಅತ್ಯಂತ ಸಂಭ್ರಮದ ದಿನ–ವಿಜಯದಶಮಿ ಬಂತು. ಕ್ಷುದಿರಾಮನು ಇಂದು ಅತ್ಯಂತ ದುರ್ಬಲನಾಗಿದ್ದ, ಅವನ ಬಾಯಿಂದ ಮಾತೇ ಹೊರಡ ದಾಯಿತು.

ಸಂಜೆಯಾಯಿತು. ರಾಮಚಂದ್ರನು ಅವಸರದಿಂದ ಮೂರ್ತಿವಿಸರ್ಜನೆ ಮಾಡಿ ಬಂದು ನೋಡುತ್ತಾನೆ ಕ್ಷುದಿರಾಮನ ಅಂತ್ಯಕಾಲ ಸನ್ನಿಹಿತವಾದಂತಿತ್ತು. ಅವನು ಬಹಳ ಹೊತ್ತಿನಿಂದ ಮಾತಿಲ್ಲದೆ ಬಾಹ್ಯಪ್ರಜ್ಞೆ ಇಲ್ಲದವನಂತೆ ಮಲಗಿದ್ದ. ಆಗ ರಾಮ ಚಂದ್ರನು ಕಂಬನಿಗರೆಯುತ್ತ ಅವನನ್ನು ಸಂಬೋಧಿಸಿ ನುಡಿದನು : "ಮಾವ, ನೀನು ಯಾವಾಗಲೂ 'ರಘುವೀರ, ರಘುವೀರ' ಎನ್ನುತ್ತಿದ್ದೆ. ಈಗ ಏಕೆ ಸುಮ್ಮನಾದೆ?" ಆ ಹೆಸರನ್ನು ಕೇಳಿದಾಕ್ಷಣ ಕ್ಷುದಿರಾಮನಿಗೆ ಪ್ರಜ್ಞೆ ಬಂತು. ಅವನು ನಿಧಾನವಾಗಿ ಕಂಪಿತ ಸ್ವರದಲ್ಲಿ ಹೇಳಿದನು : "ಯಾರು ರಾಮಚಂದ್ರನೆ, ಪ್ರತಿಮೆ ವಿಸರ್ಜನೆ ಮಾಡಿ ಬಂದೆಯಾ? ಹಾಗಾದರೆ ನನ್ನನ್ನು ಸ್ವಲ್ಪ ಎಬ್ಬಿಸಿ ಕೂರಿಸು." ಅನಂತರ ರಾಮ ಚಂದ್ರ, ಹೇಮಾಂಗಿನಿ, ರಾಮಕುಮಾರ ಇವರೆಲ್ಲ ಸೇರಿ ನಿಧಾನವಾಗಿ ಎಚ್ಚರಿಕೆಯಿಂದ ಅವನನ್ನು ಹಾಸಿಗೆಯ ಮೇಲೆ ಎತ್ತಿ ಕೂರಿಸಿದರು. ಕೂಡಲೆ ಕ್ಷುದಿರಾಮನು ಗಂಭೀರ ಸ್ವರದಲ್ಲಿ ಮೂರು ಬಾರಿ ಶ್ರೀ ರಘುವೀರನ ನಾಮೋಚ್ಚಾರಣೆ ಮಾಡಿ ದೇಹತ್ಯಾಗ ಮಾಡಿದನು. ಹೀಗೆ ಪುಣ್ಯಪುರುಷನ ಪಾವನ ಜೀವನ ಕೊನೆಗೊಂಡಿತು. ಅಂದು

ರಾತ್ರಿ ಸಂಕೀರ್ತನೆಯ ಉಚ್ಚ ಸ್ವರ ಇಡೀ ಗ್ರಾಮವನ್ನು ಆವರಿಸಿತು. ಅವನ ಪೂತ ದೇಹವನ್ನು ನದೀತೀರಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಅದಕ್ಕೆ ಅಗ್ನಿಸಂಸ್ಕಾರ ಮಾಡಲಾಯಿತು. ಮರುದಿನ ಸುದ್ದಿ ಕಾಮಾರಪುಕುರವನ್ನು ತಲುಪಿ ಇಡೀ ಗ್ರಾಮವನ್ನು ಶೋಕಸಾಗರದಲ್ಲಿ ಮುಳುಗಿಸಿತು.

ಸೂತಕ ಕಳೆದ ಮೇಲೆ ರಾಮಕುಮಾರನು ಬಹು ಬ್ರಾಹ್ಮಣ ಭೋಜನದೊಂದಿಗೆ ತಂದೆಯ ಶ್ರಾದ್ಧಾದಿ ಅಂತ್ಯಕ್ರಿಯೆಯನ್ನು ನೆರವೇರಿಸಿದನು. ಇದಕ್ಕೆ ರಾಮಚಂದ್ರನು ಐನೂರು ರೂಪಾಯಿ ಸಹಾಯಧನ ನೀಡಿದನು.

ಏಳನೆಯ ಅಧ್ಯಾಯ

ಬಾಲಕ ಗದಾಧರ

1. ಕ್ಷುದಿರಾಮನ ಮೃತ್ಯುವಿನಿಂದ ಕುಟುಂಬದ ಮೇಲೆ ಪರಿಣಾಮ 2. ಗದಾಧರನ ಮನಸ್ಸಿನ ಮೇಲೆ ಪರಿಣಾಮ 3. ತಾಯಿಯೊಡನೆ ಅವನ ವರ್ತನೆ 4. ಗದಾಧರನ ನಡೆ-ನುಡಿ, ಸಾಧುಸಂಗ 5. ಈ ವಿಷಯದಲ್ಲಿ ತಾಯಿಯ ಕಾತರತೆ ಮತ್ತು ಅದರ ನಿರಸನ 6 ಗದಾಧರನ ಎರಡನೆಯ ಭಾವಸಮಾಧಿ 7. ಅವನ ನಿಕಟ ಸ್ನೇಹಿತ ಗಯಾವಿಷ್ಣು 8. ಗದಾಧರನ ಉಪನಯನ 9. ಪಂಡಿತ ಸಭೆಯಲ್ಲಿ ಸಮಸ್ಯಾ ಪರಿಹಾರ 10. ಗದಾಧರನ ಧರ್ಮಪ್ರವೃತ್ತಿಯ ಬೆಳವಣಿಗೆ ಮತ್ತು ಮೂರನೆಯ ಬಾರಿ ಭಾವಸಮಾಧಿ 11. ಅವನಿಗೆ ಮತ್ತೆ ಮತ್ತೆ ಭಾವಸಮಾಧಿ ಯುಂಟಾದುದು 12. ವಿದ್ಯಾಭ್ಯಾಸದಲ್ಲಿ ಉದಾಸೀನತೆ 13. ಗದಾಧರನ ಶಿಕ್ಷಣ ಪ್ರಗತಿ 14 ರಾಮೇಶ್ವರ ಮತ್ತು ಸರ್ವಮಂಗಳೆಯರ ವಿವಾಹ 15. ಗರ್ಭವತಿ ಯಾದ ರಾಮಕುಮಾರನ ಪತ್ನಿಯಲ್ಲಿ ಸ್ವಭಾವ ಪರಿವರ್ತನೆ 16 ರಾಮಕುಮಾರನ ಸಾಂಸಾರಿಕ ಸ್ಥಿತಿಯಲ್ಲಿ ಬದಲಾವಣೆ 17. ರಾಮಕುಮಾರನ ಪತ್ನಿಯ ಮರಣ

1. ಕ್ಷುದಿರಾಮನ ಮರಣಾನಂತರ ಅವನ ಸಂಸಾರದಲ್ಲಿ ವಿಶೇಷ ಬದಲಾವಣೆ ಯುಂಟಾಯಿತು. ನಲವತ್ತನಾಲ್ಕು ವರ್ಷಗಳ ಸುದೀರ್ಘಕಾಲ ಚಂದ್ರಾದೇವಿಯ ಸುಖದುಃಖಗಳಲ್ಲಿ ಪಾಲುದಾರನಾಗಿದ್ದ. ಅಂಥ ಜೀವನ ಸಂಗಾತಿಯನ್ನು ಕಳೆದುಕೊಂಡ ಚಂದ್ರಾದೇವಿಗೆ ಜಗತ್ತು ಶೂನ್ಯವಾಗಿ ತೋರಿತು. ತನ್ನ ಹೃದಯದಲ್ಲಿ ಒಂದು ಅಭಾವದ ಅನುಭವ ಅವಳಿಗೆ ಯಾವಾಗಲೂ ಆಗತೊಡಗಿತು. ಎಲ್ಲದಕ್ಕೂ ಶ್ರೀರಘು ವೀರನೇ ಆಶ್ರಯನಾಗಿದ್ದ ಅವಳಿಗೆ ಈಗ ಅವನೇ ಏಕೈಕ ಗತಿಯಾದ. ಅವಳ ಮನಸ್ಸು ಸಂಸಾರದಿಂದ ವಿಮುಖವಾಗಿ ಅವನೆಡೆಗೆ ಹೆಚ್ಚು ಹರಿಯತೊಡಗಿತು. ಮನಸ್ಸು ಸಂಸಾರವನ್ನು ಬಿಡಲು ಬಯಸಿದರೂ ಕಾಲ ಬರುವವರೆಗೆ ಸಂಸಾರ ಅದನ್ನು ಬಿಡುವು ದಿಲ್ಲ. ಏಳು ವರ್ಷದ ಮಗ ಗದಾಧರ, ನಾಲ್ಕು ವರ್ಷದ ಮಗಳು ಸರ್ವಮಂಗಳ ಇವರ ಯೋಗಕ್ಷೇಮದ ಹೊರೆ ಅವಳನ್ನು ಮತ್ತೆ ಸಂಸಾರದ ಕಡೆಗೆ ಎಳೆಯಿತು. ಶ್ರೀರಘುವೀರನ ಸೇವೆ, ಚಿಕ್ಕ ಮಕ್ಕಳ ಲಾಲನೆಪಾಲನೆಗಳಲ್ಲಿ ಅವಳ ದುಃಖದ ದಿನ ಕಳೆಯತೊಡಗಿತು.

ಇತ್ತ ಹಿರಿಯ ಮಗ ರಾಮಕುಮಾರನ ಮೇಲೆ ಇಡೀ ಸಂಸಾರದ ಹೊರೆ ಬಿದ್ದಿರು ವುದರಿಂದ ಅವನು ಶೋಕದಲ್ಲಿ ಕಾಲಹರಣಮಾಡುವಂತಿರಲಿಲ್ಲ. ತಾಯಿಗೆ ಕಷ್ಟವಾಗ ದಂತೆ ನೋಡಿಕೊಳ್ಳುವುದು, ಎಳೆಯ ವಯಸ್ಸಿನ ಸೋದರ ಸೋದರಿಯರನ್ನು ಸರಿ

ಯಾಗಿ ಬೆಳೆಸುವುದು, ಹನ್ನೆರಡು ವರ್ಷದ ರಾಮೇಶ್ವರನು ವಿದ್ಯಾವಂತನಾಗಿ ಹಣ ಸಂಪಾದಿಸುವಂತೆ ಮಾಡುವುದು, ತಾನು ತನ್ನ ವರಮಾನವನ್ನು ಹೇಗೆ ವೃದ್ಧಿಸುವುದು—ಹೀಗೆ ಹಲವಾರು ಚಿಂತೆಗಳು ಅವನನ್ನು ಕಾಡತೊಡಗಿದವು. ಅವನ ಪತ್ನಿಯೂ ಚಂದ್ರಾದೇವಿಯು ದುರ್ಬಲಳಾಗಿರುವುದನ್ನು ಕಂಡು ಅಡಿಗೆ ಮುಂತಾದ ಗೃಹಕೃತ್ಯಗಳ ಹೆಚ್ಚಿನಂಶವನ್ನು ತಾನೇ ವಹಿಸಿಕೊಂಡಳು.

2. ಜ್ಞಾನಿಗಳು ಹೇಳುತ್ತಾರೆ, ಶೈಶವಾವಸ್ಥೆಯಲ್ಲಿ ಮಾತೃವಿಯೋಗ, ಬಾಲ್ಯಾವಸ್ಥೆಯಲ್ಲಿ ಪಿತೃವಿಯೋಗ ಮತ್ತು ಯೌವನಾವಸ್ಥೆಯಲ್ಲಿ ಪತ್ನಿವಿಯೋಗ—ಈ ಮೂರು ಉಂಟುಮಾಡುವಷ್ಟು ಅಭಾವಪ್ರಜ್ಞೆಯನ್ನು ಬೇರೆ ಯಾವ ಘಟನೆಯೂ ನೀಡದು. ಶಿಶುವಿಗೆ ತಾಯಿಯ ಲಾಲನೆಯೇ ಅತ್ಯಂತ ಪ್ರಧಾನ, ಆಗ ತಂದೆಯ ಮೃತ್ಯು ಅದರ ಮೇಲೆ ಅಷ್ಟೊಂದು ಪ್ರಭಾವವನ್ನುಂಟುಮಾಡದು. ಶೈಶವವು ಕಳೆದು ಬಾಲ್ಯಾವಸ್ಥೆ ಬಂದ ಮೇಲೆ ಶಿಶುವಿಗೆ ತಂದೆಯ ಅಮೂಲ್ಯ ಪ್ರೀತಿಯ ಪರಿಚಯವಾಗುತ್ತದೆ, ತಂದೆಯ ಮಾರ್ಗದರ್ಶನ ಅವನಿಗೆ ಅತ್ಯವಶ್ಯವಾಗುತ್ತದೆ. ಈಗ ತಂದೆಯು ಮೃತನಾದರೆ ಅವನಿಗೆ ತೀವ್ರ ಅಭಾವದ ಬೋಧೆಯಾಗುವುದು. ಪ್ರತಿದಿನದ ಸಣ್ಣ ಪುಟ್ಟ ಘಟನೆಯೂ ತಂದೆ ಇಲ್ಲದಿರುವಿಕೆಯನ್ನು ಮನಸ್ಸಿಗೆ ತಂದು ವೇದನೆಯನ್ನುಂಟು ಮಾಡುತ್ತದೆ—ಅದೇ ನೆನಪು ಮತ್ತೆ ಮತ್ತೆ ಕಾಡುತ್ತದೆ. ಗದಾಧರನಿಗೂ ಹೀಗೆಯೇ ಆಯಿತು. ಆದರೆ ಬೇರೆ ಎಲ್ಲ ಬಾಲಕರಂತಲ್ಲದೆ ಅವನ ಬುದ್ಧಿ ಹೆಚ್ಚು ಪರಿಪಕ್ವವಾಗಿದ್ದುದರಿಂದ ತಾಯಿಯ ಮುಂದಲ್ಲದೆ ಇತರರ ಮುಂದೆ ತನ್ನ ದುಃಖವನ್ನು ವ್ಯಕ್ತಪಡಿಸುತ್ತಿರಲಿಲ್ಲ. ಬಾಲಕ ಮೊದಲಿನಂತೆಯೇ ಆಟಪಾಟ ಚೇಷ್ಟೆಗಳಲ್ಲಿ ಕಾಲ ಕಳೆಯುತ್ತಿದ್ದಂತೆ ಎಲ್ಲರಿಗೂ ಅನಿಸುತ್ತಿತ್ತು. ಭೂತೀರ್ ಖಾಲದ ಶ್ಮಶಾನ, ಮಾಣಿಕರಾಜನ ಮಾವಿನ ತೋಪು ಇತ್ಯಾದಿ ಸ್ಥಳಗಳಲ್ಲಿ ಒಮ್ಮೊಮ್ಮೆ ಏಕಾಕಿಯಾಗಿ ವಿಹರಿಸುತ್ತಿದ್ದನು, ಬಾಲಕ ಸಹಜ ಚಾಪಲ್ಯದಿಂದ ಸುಮ್ಮನೆ ಓಡಾಡುತ್ತಿರುವನೆಂದು ಇತರರು ಭಾವಿಸಿದರು. ಬಾಲಕ ಹೆಚ್ಚು ಚಿಂತಾಮಗ್ನನೂ, ನಿರ್ಜನಪ್ರಿಯನೂ ಆದ. ಸಂಸಾರದ ಪ್ರತಿಯೊಬ್ಬರ ಬಗ್ಗೆಯೂ ಚಿಂತಿಸುತ್ತ, ಅವರ ಪ್ರತಿಯೊಂದು ಆಚರಣೆಯನ್ನೂ ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದನು.

3. ಬಂಧುವಿಯೋಗವೇ ಸಂಸಾರದಲ್ಲಿ ಪರಸ್ಪರರ ಬಾಂಧವ್ಯವನ್ನು ಗಾಢವಾಗಿಸುವುದು. ಇದಕ್ಕಾಗಿಯೇ ತಾಯಿಯ ಕಡೆ ಬಾಲಕನ ಆಕರ್ಷಣೆ ಈಗ ಅಧಿಕವಾಯಿತು. ಈಗ ಅವನು ಮೊದಲಿಗಿಂತ ಹೆಚ್ಚಾಗಿ ತಾಯಿಯೊಡನಿರುತ್ತಿದ್ದ ಮತ್ತು ಮನೆಗೆಲಸದಲ್ಲಿ ಆಕೆಗೆ ಸಹಾಯಮಾಡಿ ಅದರಿಂದ ಆನಂದ ಪಡೆಯುತ್ತಿದ್ದ. ತಾಯಿಗೂ ಮಗ ಹತ್ತಿರವಿದ್ದರೆ ದುಃಖದ ವೇದನೆ ಎಷ್ಟೋ ಕಡಿಮೆಯಾಗುತ್ತಿತ್ತು. ಆದರೆ ತಾಯಿಯೊಡನೆ ಮಗನ ವರ್ತನೆಯಲ್ಲಿ ಬದಲಾವಣೆ ಕಂಡುಬರುತ್ತಿತ್ತು. ತಂದೆಯ ಮರಣಾನಂತರ ಬಾಲಕನು ತನಗೆ ಅದು ಬೇಕು ಇದು ಬೇಕು ಎಂದು ತಾಯಿಯನ್ನು ಪೀಡಿಸುತ್ತಿರಲಿಲ್ಲ. ಏಕೆಂದರೆ ತಾನು ಕೇಳಿದ್ದನ್ನು ಕೊಡಲಾಗದೇ ಇದ್ದರೆ ಅವಳ ಮನೋವ್ಯಥೆ ತೀವ್ರ

ವಾಗುವುದೆಂದು ಅವನಿಗೆ ಗೊತ್ತಿತ್ತು. ಅವಳಿಗೆ ಯಾವರೀತಿಯಿಂದಲೂ ನೋವಾಗದಂತೆ ವರ್ತಿಸಲು ಪ್ರಯತ್ನಿಸುತ್ತಿದ್ದ.

4. ಗದಾಧರನು ಮೊದಲಿನಂತೆಯೆ ಈಗ ಪಾಠಶಾಲೆಗೆ ಹೋಗುತ್ತಿದ್ದ. ಆದರೆ ಪಠ್ಯ ವಿಷಯಕ್ಕಿಂತ ಅಧಿಕವಾಗಿ ಪುರಾಣ ಕಥೆಗಳನ್ನು ಕೇಳುವುದು, ದೇವದೇವಿಯರ ಮೂರ್ತಿ ತಯಾರಿಸುವುದು—ಇಂಥ ವಿಷಯಗಳಲ್ಲಿಯೇ ಅವನ ಆಸಕ್ತಿ ಈಗ ಜಾಸ್ತಿಯಾಯಿತು. ಪಿತೃವಿಯೋಗವನ್ನು ಮರೆಯಲೋಸುಗವೇ ಅವನು ಈ ವಿಷಯಗಳಲ್ಲಿ ಹೆಚ್ಚು ಮನಸ್ಸನ್ನು ಹರಿಸಿರಬೇಕು. ಅವನ ಸ್ವಾಭಾವಿಕ ಪ್ರವೃತ್ತಿಯೊಂದು ಈ ಸಮಯದಲ್ಲಿ ಪ್ರಕಾಶವಹಾನಕ್ಕೆ ಬಂತು. ಗ್ರಾಮದ ಆಗ್ನೇಯ ದಿಕ್ಕಿನಲ್ಲಿ ಪುರೀಧಾಮಕ್ಕೆ ಹೋಗುವ ರಸ್ತೆಯ ಪಕ್ಕದಲ್ಲಿ ಜಮೀಂದಾರ್ ಲಾಹಾಬಾಬುಗಳು ಯಾತ್ರಾರ್ಥಿಗಳಿಗಾಗಿ ಒಂದು ಛತ್ರವನ್ನು ಕಟ್ಟಿಸಿದ್ದರು. ಶ್ರೀಜಗನ್ನಾಥ ದರ್ಶನಕ್ಕೆ ಹೋಗುವ ಮತ್ತು ಹಿಂತಿರುಗುವ ಅನೇಕ ಸಾಧು ಬೈರಾಗಿಗಳು ಅಲ್ಲಿ ಬಂದು ತಂಗುತ್ತಿದ್ದರು ಮತ್ತು ಭಿಕ್ಷೆಗೆ ಮನೆಮನೆಗೆ ಬರುತ್ತಿದ್ದರು. ಗದಾಧರನು ಸಂಸಾರದ ಅನಿತ್ಯತೆಯ ಬಗ್ಗೆ ಕೇಳಿ ತಿಳಿದಿದ್ದನು. ತಂದೆಯ ಮರಣ ಈ ಭಾವನೆಯನ್ನು ಅವನಲ್ಲಿ ಇನ್ನೂ ದೃಢಗೊಳಿಸಿತು. ಸಾಧು ಬೈರಾಗಿಗಳು ಭಗವಂತನಿಗಾಗಿ ಸಂಸಾರವನ್ನು ತ್ಯಾಗ ಮಾಡಿದವರು, ಅವರ ಸಂಗ ಪಾವನವಾದುದು ಎಂದು ಅವನು ಪುರಾಣಗಳಿಂದ ತಿಳಿದಿದ್ದ. ಈಗ ಆ ಛತ್ರಕ್ಕೆ ಆಗಾಗ ಹೋಗಿ ಸಾಧುಗಳ ಸಹವಾಸ ಮಾಡತೊಡಗಿದ. ಬೆಳಿಗ್ಗೆ ಸಂಜೆ ಅಗ್ನಿಯ ಮುಂದೆ ಕುಳಿತು ಅವರು ಭಗವಂತನ ಧ್ಯಾನಮಾಡುವುದು, ಭಿಕ್ಷಾಟನೆಯಿಂದ ದೊರೆತ ಸಾಮಾನ್ಯ ಆಹಾರವನ್ನು ಭಗವಂತನಿಗೆ ಅರ್ಪಿಸಿ ಪ್ರಸಾದವನ್ನು ಸಂತೃಪ್ತಿಯಿಂದ ಸ್ವೀಕರಿಸುವುದು, ಕಾಯಿಲೆಯಾದರೆ ಕೇವಲ ಭಗವಂತನನ್ನೇ ಆಶ್ರಯಿಸಿ ಅದನ್ನು ತಾಳ್ಮೆಯಿಂದ ಸಹಿಸುವುದು, ತಮಗೆ ಪ್ರಯೋಜನವಾಗುವಂತಿದ್ದರೂ ಇತರರಿಗೆ ಯಾವ ರೀತಿಯ ತೊಂದರೆಯನ್ನೂ ಕೊಡದಿರುವುದು—ಇವೆಲ್ಲ ಈಗ ಅವನ ಗಮನ ಸೆಳೆಯತೊಡಗಿದುವು. ಉತ್ತಮ ಸಾಧುಗಳನ್ನು ಕಂಡರೆ ಅವರಿಗೆ ಸಣ್ಣಪುಟ್ಟ ಸೇವೆಮಾಡುತ್ತಿದ್ದ. ಅವರೂ ಕೂಡ ಇವನ ಸದ್ವರ್ತನೆಯಿಂದ ಮಧುರ ಸ್ವಭಾವದಿಂದ ಸಂತೃಪ್ತರಾಗಿ ಅವನಿಗೆ ಭಜನೆ ಹೇಳಿಕೊಡುತ್ತಿದ್ದರು, ಉಪದೇಶ ನೀಡುತ್ತಿದ್ದರು, ತಮ್ಮ ಭಿಕ್ಷಾನ್ನದಲ್ಲಿ ಅವನಿಗೂ ಸ್ವಲ್ಪ ಕೊಡುತ್ತಿದ್ದರು. ಯಾವುದಾದರೂ ಕಾರಣದಿಂದ ಕೆಲವು ಸಾಧುಗಳು ಆ ಛತ್ರದಲ್ಲಿ ಬಹಳಕಾಲ ತಂಗಿದರೆ ಅವರೊಡನೆಯೇ ಗದಾಧರನು ಹೆಚ್ಚು ಬೆರೆಯುತ್ತಿದ್ದ.

5. ಗದಾಧರನು ಎಂಟು ವರ್ಷದವನಿರುವಾಗ ಒಮ್ಮೆ ಕೆಲವು ಸಾಧುಗಳು ಈ ರೀತಿ ಹೆಚ್ಚು ಕಾಲ ಅಲ್ಲಿ ತಂಗಿದ್ದರು. ಬಾಲಕನು ಅವರಿಗೆ ತುಂಬ ನಿಕಟವರ್ತಿಯಾದ. ಮೊದಮೊದಲು ಅವನು ಅವರೊಡನೆ ಬೆರೆಯುವುದು ಯಾರಿಗೂ ತಿಳಿದಿರಲಿಲ್ಲ. ಆದರೆ ಕ್ರಮೇಣ ಅವರೊಡನೆ ಸಂಬಂಧ ಗಾಢವಾಗಿ, ಇನ್ನೂ ಹೆಚ್ಚು ಕಾಲ ಅವರೊಡನೆ ಕಳೆಯತೊಡಗಲು ರಹಸ್ಯ ಬಯಲಾಯಿತು. ಒಮ್ಮೆ ಗದಾಧರನು

ಸಾಧುಗಳ ಭಿಕ್ಷಾನ್ನವನ್ನು ಹೆಚ್ಚಾಗಿ ತಿಂದು ಮನೆಗೆ ಬಂದ ಮೇಲೆ ಏನೂ ಸ್ವೀಕರಿಸಲಿಲ್ಲ. ಕಾರಣ ಕೇಳಿದಾಗ ಎಲ್ಲ ವಿಷಯವನ್ನು ಹೇಳಿಬಿಟ್ಟ. ಇದು ಸಾಧುಗಳ ಆಶೀರ್ವಾದ ವೆಂದು ಭಾವಿಸಿ ಚಂದ್ರಾದೇವಿ ಅವರಿಗಾಗಿ ಖಾದ್ಯವಸ್ತುಗಳನ್ನು ಕಳಿಸತೊಡಗಿದಳು. ಆದರೆ ಇದು ಇಷ್ಟಕ್ಕೆ ನಿಲ್ಲಲಿಲ್ಲ. ಒಂದು ದಿನ ಗದಾಧರ ಸಾಧುವಿನಂತೆ ವೇಷ ಧರಿಸಿ ವಿಭೂತಿ ಬಳಿದುಕೊಂಡು ಬಂದು, "ಅಮ್ಮ, ನೋಡು, ಸಾಧುಗಳು ಹೇಗೆ ನನಗೆ ವೇಷ ತೊಡಿಸಿದ್ದಾರೆ !" ಎಂದು ಹೇಳಿದಾಗ ಚಂದ್ರಾದೇವಿಯ ಮನಸ್ಸು ಉದ್ವಿಗ್ನಗೊಂಡಿತು. ಸಾಧುಗಳು ಎಲ್ಲಿ ಇವನನ್ನು ಕರೆದುಕೊಂಡು ಹೋಗಿ ಬಿಡುತ್ತಾರೊ ಎಂದು ದಿಗಿಲಾಯಿತು ಅವಳಿಗೆ. ಒಂದುದಿನ ಕಂಬನಿ ತುಂಬಿ ಈ ವಿಷಯವನ್ನು ಗದಾಧರನಿಗೆ ಹೇಳಿದಾಗ ಅವಳಿಗೆ ಆಶ್ವಾಸನೆಯನ್ನಿತ್ತು ಸಮಾಧಾನಪಡಿಸಿದ. ಆದರೂ ಆಕೆಯ ಮನಸ್ಸು ಶಾಂತವಾಗಲಿಲ್ಲ. ತಾನು ಇನ್ನು ಮುಂದೆ ಸಾಧುಗಳ ಹತ್ತಿರ ಹೋಗುವುದಿಲ್ಲ ಎಂದು ಮಾತು ಕೊಟ್ಟ ಮೇಲೆ ಅವಳಿಗೆ ಸಮಾಧಾನವಾಯಿತು. ತನ್ನ ಸಂಕಲ್ಪಕ್ಕೆ ಅನುಸಾರವಾಗಿ ಇನ್ನು ಮುಂದೆ ತಾನು ಅಲ್ಲಿಗೆ ಬರುವುದಿಲ್ಲವೆಂದು ಹೇಳಿ ಬರಲು ಒಂದು ದಿನ ಛತ್ರಕ್ಕೆ ಹೋದ. ಸಾಧುಗಳು ಅವನ ಸಂಕಲ್ಪಕ್ಕೆ ಕಾರಣವನ್ನು ಕೇಳಿದಾಗ ತನ್ನ ತಾಯಿಯ ಸಂದೇಹವನ್ನು ಅವರಿಗೆ ತಿಳಿಸಿದ. ಅವರೆಲ್ಲ ಗದಾಧರನೊಟ್ಟಿಗೆ ಚಂದ್ರಾ ದೇವಿಯ ಮನೆಗೆ ಬಂದು ತಮಗೆ ಗದಾಧರನನ್ನು ಕರೆದುಕೊಂಡು ಹೋಗುವ ಉದ್ದೇಶ ವಿಲ್ಲ, ತಂದೆ ತಾಯಿಗಳ, ಒಪ್ಪಿಗೆಯಿಲ್ಲದೆ ಈ ರೀತಿಯ ಎಳೆ ಬಾಲಕನನ್ನು ಕರೆದು ಕೊಂಡು ಹೋಗುವುದು ಅಪಹರಣವಾಗುತ್ತದೆ, ನೀವದರ ಬಗ್ಗೆ ಚಿಂತಿಸಬೇಕಾಗಿಲ್ಲ ವೆಂದು ಭರವಸೆ ನೀಡಿದ ಮೇಲೆ ಚಂದ್ರಾದೇವಿಯ ಶಂಕೆ ಪರಿಹಾರವಾಯಿತು. ಸಾಧು ಗಳ ಕೋರಿಕೆಯಂತೆ ಗದಾಧರನಿಗೆ ಅವರೆಡೆಗೆ ಹೋಗಲು ಅನುಮತಿಯಿತ್ತಳು.

6. ಇದೇ ಸಂದರ್ಭದಲ್ಲಿ ನಡೆದ ಇನ್ನೊಂದು ಘಟನೆಯೂ ಚಂದ್ರಾದೇವಿಯ ಚಿಂತೆಯನ್ನು ಹೆಚ್ಚಿಸಿತ್ತು ಮತ್ತು ಇದು ಗದಾಧರನ ಭಾವಪ್ರವಣತೆ ಮತ್ತು ಆಳ ಚಿಂತನೆಯ ದ್ಯೋತಕವಾಗಿದೆ. ಕಾಮಾರಪುಕುರಕ್ಕೆ ಎರಡು ಮೈಲಿ ದೂರದಲ್ಲಿ ಆನೂರು ಗ್ರಾಮವಿದೆ. ಅಲ್ಲಿ ಸುಪ್ರಸಿದ್ಧ ಶ್ರೀ ವಿಶಾಲಾಕ್ಷೀ ದೇವಾಲಯವಿದೆ. ದೇವಿಯ ದರ್ಶನ ಕ್ಕಾಗಿ ಹೋಗುತ್ತಿದ್ದಾಗ ಮಾರ್ಗಮಧ್ಯದಲ್ಲಿ ಗದಾಧರನು ಮೂರ್ಛಿತನಾಗಿ ಬಿದ್ದ.* ಧರ್ಮದಾಸ ಲಾಹಾರ ಮಗಳು ಪ್ರಸನ್ನಮಯೀ ಭಾವಾವೇಶದಿಂದ ಈ ಅವಸ್ಥೆ ಉಂಟಾಯಿತೆಂದು ಹೇಳಿದರೂ ಚಂದಾದೇವಿ ನಂಬದೆ ಇದಕ್ಕೆ ಯಾವುದೊ ರೋಗ ಅಥವಾ ಇನ್ನೇನೊ ಕಾರಣವಿರಬೇಕೆಂದು ಭಾವಿಸಿ ತೀವ್ರ ಚಿಂತೆಗೊಳಗಾದಳು. ಗದಾಧರನೂ ದೇವಿಯನ್ನು ಚಿಂತಿಸುತ್ತಲೇ ತನಗೆ ಆ ಸ್ಥಿತಿ ಉಂಟಾಯಿತೆಂದು ಹೇಳಿದ.

7. ಈ ರೀತಿ ಎರಡು ವರ್ಷಗಳು ಕಳೆದವು. ಬಾಲಕನು ಇಷ್ಟರಲ್ಲಿ ಪಿತೃ ವಿಯೋಗವನ್ನು ಮರೆತು ದೈನಂದಿನ ಜೀವನದ ಸುಖ ದುಃಖಗಳಲ್ಲಿ ಮಗ್ನನಾದನು.

---

*ಈ ಘಟನೆಯ ಸವಿಸ್ತಾರ ವಿವರಣೆಗೆ "ಸಾಧಕಭಾವ"ದ ಎರಡನೆಯ ಅಧ್ಯಾಯ ನೋಡಿ.

ಧರ್ಮದಾಸ ಲಾಹಾನ ಮಗ ಗಯಾವಿಷ್ಣುವಿನೊಡನೆ ಗದಾಧರನಿಗೆ ಗಾಢಸ್ನೇಹವಿತ್ತು. ಅವರಿಬ್ಬರೂ ಯಾವಾಗಲೂ ಒಟ್ಟಿಗಿರುತ್ತಿದ್ದರು, ಒಟ್ಟಿಗೆ ಆಟಪಾಠಗಳಲ್ಲಿ ಭಾಗವಹಿಸುತ್ತಿದ್ದರು. ಹಳ್ಳಿಯವರಾರಾದರು ಗದಾಧರನನ್ನು ತಮ್ಮ ಮನೆಗೆ ಊಟ ಅಥವಾ ತಿಂಡಿಗೆ ಕರೆದರೆ ಅವನು ತನ್ನ ಗೆಳೆಯನನ್ನು ತಪ್ಪದೆ ಕರೆದುಕೊಂಡು ಹೋಗುತ್ತಿದ್ದನು. ಧನೀಕಾಮಾರಿಣಿ ಪ್ರೀತಿಯಿಂದ ಮೋದಕಾದಿಗಳನ್ನು ಮಾಡಿ ಇವನಿಗೆ ಕೊಟ್ಟರೆ ತನ್ನ ಗೆಳೆಯನಿಗೆ ಕೊಡದೆ ಅವನೆಂದೂ ತಿನ್ನುತ್ತಿರಲಿಲ್ಲ. ಎಲ್ಲರಿಗೂ ಅವರ ಗೆಳೆತನವನ್ನು ನೋಡಿ ಆನಂದವಾಯಿತು.

8. ಗದಾಧರನಿಗೆ ಒಂಬತ್ತು ವರ್ಷ ತುಂಬಿತು. ರಾಮಕುಮಾರನು ಈಗ ಅವನಿಗೆ ಉಪನಯನದ ಏರ್ಪಾಡು ಮಾಡತೊಡಗಿದ. ಉಪನಯನದ ಸಮಯದಲ್ಲಿ ತನ್ನ ಮೂಲಕ ಪ್ರಥಮ ಭಿಕ್ಷೆಯನ್ನು ಸ್ವೀಕರಿಸಿ ತನ್ನನ್ನು ತಾಯಿಯೆಂದು ಸಂಬೋಧಿಸಬೇಕೆಂದು ಧನೀಕಾಮಾರಿಣಿ ಗದಾಧರನನ್ನು ಮೊದಲೇ ಪ್ರಾರ್ಥಿಸಿಕೊಂಡಿದ್ದಳು. ಆಕೆಯ ಸರಳ ಪ್ರೀತಿಯಿಂದ ಮುಗ್ಧನಾಗಿದ್ದ ಗದಾಧರನೂ ಅದಕ್ಕೆ ಒಪ್ಪಿಗೆ ಇತ್ತಿದ್ದ. ಬಡವಳಾದ ಆಕೆ ಇದಕ್ಕಾಗಿಯೇ ಬಹಳ ಕಾಲದಿಂದ ಹಣವನ್ನು ಸಂಗ್ರಹಿಸಿಟ್ಟುಕೊಂಡು ಆ ಸಮಯಕ್ಕಾಗಿ ಕಾದುಕೊಂಡಿದ್ದಳು. ಗದಾಧರನು ತಾನು ಮಾತುಕೊಟ್ಟದ್ದನ್ನು ನೆನೆಸಿಕೊಂಡು ರಾಮಕುಮಾರನಿಗೆ ಈ ವಿಷಯವನ್ನು ಹೇಳಿದನು. ಆದರೆ ಇದು ಸಂಪ್ರದಾಯಕ್ಕೆ ವಿರುದ್ಧವಾದಕಾರಣ ರಾಮಕುಮಾರ ಇದಕ್ಕೆ ಒಪ್ಪಲಿಲ್ಲ. ಬಾಲಕನೂ ಹಠಹಿಡಿದ, ತಾನು ಮಾತು ಉಳಿಸಿಕೊಳ್ಳದಿದ್ದರೆ ಉಪನಯನಕ್ಕೆ ಅನರ್ಹ ಎಂದು ಅವನು ವಾದಿಸಿದ. ಉಪನಯನದ ದಿನ ಹತ್ತಿರ ಬರುತ್ತಿದೆ. ಅದಕ್ಕೆ ಎಲ್ಲ ವ್ಯವಸ್ಥೆ ಮಾಡಿಯಾಗಿದೆ. ಬಾಲಕ ಹಿಡಿದ ಹಠ ಬಿಡುತ್ತಿಲ್ಲ. ಈ ವಿಷಯ ಧರ್ಮದಾಸ ಲಾಹಾನ ಕಿವಿಗೆ ಬಿತ್ತು. ಅವನು ಮಧ್ಯಸ್ಥಿಕೆ ವಹಿಸಿ ಹೇಳಿದ, ಅವರ ವಂಶದಲ್ಲಿ ಈ ರೀತಿಯ ಸಂಪ್ರದಾಯ ಇಲ್ಲದಿದ್ದರೂ ಬೇರೆ ಸದ್ಬ್ರಾಹ್ಮಣರ ವಂಶದಲ್ಲಿ ಇಂಥ ಪದ್ಧತಿಯನ್ನು ನೋಡಬಹುದು, ಆದ್ದರಿಂದ ಯಾವ ನಿಂದೆಗೂ ಒಳಗಾಗುವ ಭಯವಿಲ್ಲ, ಹಾಗೂ ಬಾಲಕನ ತೃಪ್ತಿಗಾಗಿ ಈ ರೀತಿ ಮಾಡುವುದರಲ್ಲಿ ತಪ್ಪೇನಿಲ್ಲ—ಎಂದು. ಧರ್ಮದಾಸನ ಮಾತಿನಿಂದ ರಾಮಕುಮಾರನಿಗೆ ಸಮಾಧಾನವಾಯಿತು. ಯಥೋಚಿತವಾಗಿ ಉಪನಯನ ನೆರವೇರಿತು. ಧನೀಕಾಮಾರಿಣಿಯ ಆಸೆಯೂ ಪೂರ್ತಿಗೊಂಡು ಧನ್ಯತೆಯ ಭಾವವನ್ನು ಪಡೆದಳು.

9. ಉಪನಯನವಾಗಿ ಸ್ವಲ್ಪ ಸಮಯದ ನಂತರ ನಡೆದ ಒಂದು ಘಟನೆ ಗದಾಧರನ ಅಸಾಧಾರಣ ಪ್ರತಿಭೆಯನ್ನು ಪರಿಚಯಿಸುತ್ತದೆ.* ಗ್ರಾಮದ ಲಾಹಾರ ಮನೆಯಲ್ಲಿ ವಿಶೇಷ ದಿನವೊಂದರಲ್ಲಿ ಪಂಡಿತರು ಸಭೆ ಸೇರಿ ಶಾಸ್ತ್ರಚರ್ಚೆ ನಡೆಸುತ್ತಿದ್ದರು. ಒಂದು ಅತ್ಯಂತ ಜಟಿಲವಾದ ಪ್ರಶ್ನೆಯನ್ನು ಯಾರಿಗೂ ಬಗೆಹರಿಸಲಾಗಲಿಲ್ಲ. ಆಗ ಗದಾಧರನು ಮುಂದೆ ಬಂದು ಆ ಪ್ರಶ್ನೆಗೆ ಸೂಕ್ತವಾದ ಉತ್ತರವನ್ನಿತ್ತನು. ಇದನ್ನು

---

* ಈ ಘಟನೆಯ ಸವಿಸ್ತಾರ ವಿವರಣೆಯನ್ನು "ಗುರುಭಾವ-ಪೂರ್ವಾರ್ಧ"ದಲ್ಲಿ ನೋಡಿ.

ಕೇಳಿ ಎಲ್ಲರೂ ಚಕಿತರಾದರು. ಪಂಡಿತರುಗಳೂ ಅವನನ್ನು ಪ್ರಶಂಸಿಸಿ ಆಶೀರ್ವದಿಸಿದರು.

10. ಉಪನಯನದ ನಂತರ ಗದಾಧರನ ಭಾವಪ್ರವಣತೆಗೆ ಒಂದು ಹೊಸ ಆಲಂಬನೆ ದೊರೆತಂತಾಯಿತು. ಯಾವತ್ತು ಜೀವಂತ ವಿಗ್ರಹವಾಗಿ ಶ್ರೀ ರಘುವೀರನು ಕ್ಷುದಿರಾಮನಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡು ಅನಂತರ ಅವನ ಮನೆಗೆ ಆಗಮಿಸಿದನೋ ಅಂದಿನಿಂದ ಮನೆಯ ಆರ್ಥಿಕ ಪರಿಸ್ಥಿತಿ ಸುಧಾರಿಸಿತ್ತು. ಮತ್ತು ಅತಿಥಿ ಅಭ್ಯಾಗತರನ್ನು ಆದರದಿಂದ ನೋಡಿಕೊಳ್ಳುವುದಕ್ಕೂ ಅವರು ಸಮರ್ಥರಾಗಿದ್ದರು. ಈ ವಿಷಯವನ್ನು ಕೇಳಿತಿಳಿದ ಗದಾಧರನಿಗೆ ರಘುವೀರನ ಮೇಲೆ ತುಂಬ ಶ್ರದ್ಧೆ ಭಕ್ತಿ ಉಂಟಾಗಿತ್ತು. ಈಗ ಉಪನಯನದ ನಂತರ ರಘುವೀರನನ್ನು ಸ್ಪರ್ಶಿಸುವ ಮತ್ತು ಪೂಜಿಸುವ ಅಧಿಕಾರವನ್ನು ಪಡೆದನು. ಇದರಿಂದಾಗಿ ಅವನ ಭಕ್ತಿಭಾವ ನವಚೇತನವನ್ನು ಪಡೆಯಿತು. ಈಗ ಅವನು ಬೆಳಗ್ಗೆ ಮತ್ತು ಸಂಜೆ ಸಂಧ್ಯಾವಂದನೆಯನ್ನು ಮುಗಿಸಿ ರಘುವೀರನ ಪೂಜೆ ಮತ್ತು ಧ್ಯಾನದಲ್ಲಿ ಹೆಚ್ಚು ಹೊತ್ತು ಕಳೆಯತೊಡಗಿದ. ತನ್ನ ತಂದೆಗಾದಂತೆ ತನಗೂ ದಿವ್ಯ ದರ್ಶನವಾಗಬಹುದು, ಅವನ ಆದೇಶ ಪಡೆಯಬಹುದು ಎಂಬ ಆಕಾಂಕ್ಷೆಯಿಂದ ಬಹಳ ನಿಷ್ಠೆಯಿಂದ ರಘುವೀರನ ಸೇವೆ ಮಾಡತೊಡಗಿದ. ರಾಮೇಶ್ವರ ಶಿವ ಮತ್ತು ಶೀತಲಾ ದೇವಿ ಇವರ ಪೂಜೆಯನ್ನು ನಿಷ್ಠೆಯಿಂದ ಮಾಡುತ್ತಿದ್ದ. ಈ ಪೂಜೆ ಫಲಿಸಲು ಬಹಳ ಕಾಲ ಬೇಕಾಗಲಿಲ್ಲ. ಅವನ ಮನಸ್ಸು ಹೆಚ್ಚು ಏಕಾಗ್ರಗೊಂಡು ಭಾವಸಮಾಧಿ ಅವನಿಗೆ ಸುಲಭವಾಗಿ ದಕ್ಕುವಂತಾಯಿತು. ಇದರ ಪರಿಣಾಮವಾಗಿ ಅವನಿಗೆ ಆಗಾಗ ದಿವ್ಯದರ್ಶನ ಗಳಾಗುತ್ತಿದ್ದುವು.* ಇದರ ಪ್ರಥಮ ನಿದರ್ಶನ ಆ ವರ್ಷ ಶಿವರಾತ್ರಿಯಲ್ಲಿ ನಡೆದ ಒಂದು ವಿಶೇಷ ಘಟನೆ.

ಆ ದಿವಸ ಎಂದಿನಂತೆ ಉಪವಾಸವಿದ್ದು ತುಂಬ ನಿಷ್ಠೆಯಿಂದ ಮಹಾದೇವನ ಪೂಜೆಮಾಡಿದ್ದನು. ಅವನ ಗೆಳೆಯ ಗಯಾವಿಷ್ಣು ಮತ್ತು ಕೆಲವು ಬಾಲಕರು ಅಂದು ಉಪವಾಸವಿದ್ದರು. ನೆರೆಯ ಸೀತಾನಾಥ ಪಾಯಿನನ ಮನೆಯಲ್ಲಿ ರಾತ್ರಿ ಜಾಗರಣೆಯ ಸಮಯದಲ್ಲಿ ಶಿವನ ಸಂಬಂಧಿಯಾದ ಒಂದು ನಾಟಕದ ವ್ಯವಸ್ಥೆ ನಡೆದಿತ್ತು. ಪ್ರಥಮ ಪ್ರಹರದ ಪೂಜೆ ಮುಗಿಸಿ ಗದಾಧರನು ತನ್ಮಯನಾಗಿರುವಾಗ ಅವನ ಗೆಳೆಯರು ಅವಸರ ದಿಂದ ಬಂದು ಸೀತಾನಾಥನ ಮನೆಯಲ್ಲಿ ನಡೆಯುವ ನಾಟಕದಲ್ಲಿ ಅವನು ಶಿವನ ಪಾತ್ರ ಅಭಿನಯಿಸಬೇಕಾಗಿದೆ ಎಂದು ಹೇಳಿದರು. ಏಕೆಂದರೆ ಶಿವನ ಪಾತ್ರ ವಹಿಸ ಬೇಕಾದವನಿಗೆ ಮೈ ಸರಿಯಿರಲಿಲ್ಲ. ಪೂಜೆಗೆ ತೊಂದರೆಯಾಗುವುದೆಂದು ಎಷ್ಟು ಹೇಳಿದರೂ ಗೆಳೆಯರು ಕೇಳಲಿಲ್ಲ. ಶಿವನ ಪಾತ್ರ ವಹಿಸಿದರೆ ಸದಾ ಶಿವನನ್ನೇ ಚಿಂತಿಸುತ್ತಿರಬೇಕಾದುದರಿಂದ ಪೂಜೆಗಿಂತ ಅದು ಏನೂ ಕಡಿಮೆಯಲ್ಲ, ಹಾಗೂ ಇವನು ಬರದಿದ್ದರೆ ಜಾಗರಣೆ ಮಾಡುತ್ತಿರುವ ಅನೇಕರಿಗೆ ನಿರಾಸೆಯುಂಟಾಗುವುದು—ಹೀಗೆಲ್ಲ ಹೇಳಿ ಅವನ ಮನವೊಲಿಸಿದರು. ಗದಾಧರನು ಶಿವನ ಪಾತ್ರ ಧರಿಸಲು ಹೋದ.

*"ಸಾಧಕಭಾವ"—ದ್ವಿತೀಯ ಅಧ್ಯಾಯವನ್ನು ನೋಡಿ

ಅವನು ಶಿವನ ವೇಷತೊಟ್ಟು ಜಟೆ, ರುದ್ರಾಕ್ಷಿ ವಿಭೂತಿ ಇವುಗಳನ್ನು ಧರಿಸಿ ಶಿವನ ಧ್ಯಾನದಲ್ಲಿ ಮಗ್ನನಾಗುತ್ತಿದ್ದಂತೆಯೇ ಶಿವಭಾವದಲ್ಲಿ ತನ್ಮಯನಾದ, ಬಾಹ್ಯಪ್ರಜ್ಞೆ ಹೊರಟುಹೋಯಿತು. ಎಷ್ಟು ಹೊತ್ತಾದರೂ ಪ್ರಜ್ಞೆ ಬರದಿರಲು ಅಂದು ರಾತ್ರಿ ನಾಟಕ ನಿಲ್ಲಿಸಬೇಕಾಯಿತು.

11. ಈಗಿನಿಂದ ಗದಾಧರನಿಗೆ ಈ ರೀತಿಯ ಸಮಾಧಿ ಆಗಾಗ ಆಗ ತೊಡಗಿತು. ಧ್ಯಾನದ ಸಮಯದಲ್ಲಿ, ದೇವದೇವಿಯರ ಮಹಿಮಾಸೂಚಕ ಹಾಡುಗಳನ್ನು ಕೇಳುವಾಗ ಅವನ ಮನಸ್ಸು ಅದರಲ್ಲೇ ತಲ್ಲೀನವಾಗುತ್ತಿತ್ತು, ಬಾಹ್ಯಪ್ರಜ್ಞೆ ಹೊರಟುಹೋಗು ತ್ತಿತ್ತು. ಕೆಲವೊಮ್ಮೆ ಈ ತನ್ಮಯತೆ ತುಂಬ ಗಾಢವಾಗಿ ಅವನು ಜಡವಸ್ತುವಿನಂತೆ ಬಿದ್ದುಬಿಡುತ್ತಿದ್ದ. ಅವನು ಎಚ್ಚೆತ್ತ ಮೇಲೆ ಕೇಳಿದರೆ ದಿವ್ಯದರ್ಶನದ ಆನಂದದಲ್ಲಿ ತಾನು ಮುಳುಗಿದ್ದೆನೆಂದು ಹೇಳುತ್ತಿದ್ದ. ಚಂದ್ರಾದೇವಿ ಮತ್ತಿತರರಿಗೆ ಇದನ್ನು ನೋಡಿ ಮೊದಮೊದಲು ತುಂಬ ಭಯವುಂಟಾಯಿತು. ಆದರೆ ಅವನ ಆರೋಗ್ಯ ಕೆಡದಿರು ವುದನ್ನೂ, ಎಲ್ಲ ಕೆಲಸಕಾರ್ಯಗಳಲ್ಲಿ ಆನಂದದಿಂದ ಭಾಗವಹಿಸುವುದನ್ನೂ ಕಂಡು ಅವರುಗಳು ಕ್ರಮೇಣ ನಿಶ್ಚಿಂತರಾದರು. ಮತ್ತೆ ಮತ್ತೆ ಈ ಸ್ಥಿತಿ ಉಂಟಾಗುತ್ತಿರಲು ಗದಾಧರನಿಗೂ ಇದು ಅಭ್ಯಾಸವಾಗಿಹೋಯಿತು. ಇದರ ಪ್ರಭಾವದಿಂದ ಅವನ ದೃಷ್ಟಿ ಸೂಕ್ಷ್ಮವಾಯಿತು ದೇವದೇವಿಯರ ಅನೇಕ ತತ್ತ್ವಗಳು ಅವನಿಗೆ ತಿಳಿಯ ತೊಡಗಿದುವು. ಆದ್ದರಿಂದ ಅವನು ಇಂತಹ ಸ್ಥಿತಿಯಿಂದ ಶಂಕೆಗೊಳಗಾಗದೆ ಆನಂದ ಪಡುತ್ತಿದ್ದ. ಬಾಲಕನ ಧರ್ಮಪ್ರವೃತ್ತಿ ಈಗಿನಿಂದ ಹೆಚ್ಚು ವಿಕಾಸಹೊಂದತೊಡಗಿತು. ಎಲ್ಲೆಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆದರೂ ಅಲ್ಲೆಲ್ಲ ಅವನಿರುತ್ತಿದ್ದ. ಅವನ ಉದಾರ ಬುದ್ಧಿ ಸಕಲ ದೇವದೇವಿಯರ ಉಪಾಸಕರನ್ನೂ ಅವನು ಗೌರವಿಸುವಂತೆ ಮಾಡಿತು. ಅಷ್ಟೇ ಅಲ್ಲ ಅವರನ್ನೆಲ್ಲ ತನ್ನವರೆಂದೇ ಪರಿಗಣಿಸುತ್ತಿದ್ದ. ಗ್ರಾಮದ ವಾತಾವರಣವೂ ಅವನಿಗಿದರಲ್ಲಿ ಸಹಾಯಕವಾಗಿತ್ತು ಎನ್ನಬಹುದು. ಏಕೆಂದರೆ, ಬೇರೆ ಗ್ರಾಮಗಳಂತಲ್ಲದೆ ಇಲ್ಲಿ ವಿಷ್ಣುಪೂಜಕರು, ಶಿವಭಕ್ತರು, ಧರ್ಮಪೂಜಕರು—ಈ ಎಲ್ಲ ಸಂಪ್ರದಾಯದವರು ಪರಸ್ಪರ ಸದ್ಭಾವನೆಯಿಂದ, ಏಕತೆಯಿಂದ ಬಾಳುತ್ತಿದ್ದರು.

12. ಬಾಲಕನ ಧರ್ಮಪ್ರವೃತ್ತಿ ವೃದ್ಧಿಯಾದರೂ ಅವನು ವಿದ್ಯಾಭ್ಯಾಸದಲ್ಲಿ ಉದಾಸೀನನಾಗತೊಡಗಿದ. ಪಂಡಿತ, ಭಟ್ಟಾಚಾರ್ಯ ಮುಂತಾದ ಬಿರುದಾಂಕಿತ ರಲ್ಲಿದ್ದ ಭೋಗಾಸಕ್ತಿ, ಧನಲಾಲಸೆ ಇವುಗಳನ್ನು ನೋಡಿ ಅವನಿಗೆ ವಿದ್ಯಾರ್ಜನೆಯ ಬಗ್ಗೆ ತಿರಸ್ಕಾರವುಂಟಾಯಿತು. ಈಗ ಅವನ ಬುದ್ಧಿ ತೀಕ್ಷ್ಣವಾಗಿದೆ. ಪ್ರತಿಯೊಂದು ಕಾರ್ಯದ ಉದ್ದೇಶವನ್ನೂ ಸೂಕ್ಷ್ಮವಾಗಿ ಪರಿಶೀಲಿಸುವ ಸಾಮರ್ಥ್ಯ ಅವನಿಗೆ ಬಂದಿದೆ. ಅವನು ತನ್ನ ತಂದೆಯ ವೈರಾಗ್ಯ, ಸನ್ನಡತೆ, ಧರ್ಮಪರಾಯಣತೆ ಇವುಗಳನ್ನು ಕಂಡಿದ್ದ. ಬೇರೆ ಎಲ್ಲರ ಜೀವನವೂ ಬೇರೆ ರೀತಿಯಾಗಿರುವುದನ್ನು ಕಂಡು ಅವನಿಗೆ ಆಶ್ಚರ್ಯವಾಗ ತೊಡಗಿತು. ಅನಿತ್ಯ ಸಂಸಾರವನ್ನೇ ನಿತ್ಯವೆಂದು ಬಗೆದು ಜನ ಮೋಹಿತರಾಗಿರುವುದನ್ನು ಕಂಡು ಅವನು ವಿಚಾರಶೀಲನಾದ. ತನ್ನ ಜೀವನವನ್ನು ಬೇರೆ ರೀತಿಯಲ್ಲಿ ರೂಪಿಸಿ

ಕೊಳ್ಳಬೇಕೆಂದು ಅವನು ಸಂಕಲ್ಪಿಸಿದ.

13. ಪ್ರಚಲಿತ ವಿದ್ಯಾಭ್ಯಾಸದಲ್ಲಿ ಉದಾಸೀನನಾದರೂ ಗದಾಧರನು ತಪ್ಪದೆ ಪಾಠಶಾಲೆಗೆ ಹೋಗುತ್ತಿದ್ದ. ತನ್ನ ಮಾತೃಭಾಷೆಯಲ್ಲಿ ಚೆನ್ನಾಗಿ ಓದುವುದು ಬರೆಯು ವುದನ್ನು ಕಲಿತ. ವಿಶೇಷವಾಗಿ ರಾಮಾಯಣ ಮಹಾಭಾರತ ಮುಂತಾದ ಧರ್ಮ ಗ್ರಂಥಗಳನ್ನು ಭಕ್ತಿಭಾವದಿಂದ ಎಷ್ಟು ಸುಂದರವಾಗಿ ಓದುತ್ತಿದ್ದನೆಂದರೆ ಜನ ಅದನ್ನು ಕೇಳಿ ಮುಗ್ಧರಾಗುತ್ತಿದ್ದರು. ಗ್ರಾಮವಾಸಿಗಳು ಅವನ ಗ್ರಂಥಪಠನವನ್ನು ಕೇಳುವು ದರಲ್ಲಿ ತುಂಬ ಆಸಕ್ತರಾಗಿದ್ದರು. ಬಾಲಕನೂ ಅವರಿಗೆಲ್ಲ ತೃಪ್ತಿಯನ್ನುಂಟುಮಾಡಲು ಎಂದೂ ನಿರಾಕರಿಸುತ್ತಿರಲಿಲ್ಲ. ಅನೇಕರು ಅವನನ್ನು ತಮ್ಮ ಮನೆಗಳಿಗೆ ಕರೆದುಕೊಂಡು ಹೋಗಿ ಅವನ ಬಾಯಿಂದ ಎಷ್ಟೋ ಪುರಾಣ ಕಥೆಗಳನ್ನು ಕೇಳಿ ಆನಂದಿಸುತ್ತಿದ್ದರು.

ರಾಮಾಯಣ ಮಹಾಭಾರತಾದಿ ಕಥೆಗಳಲ್ಲದೆ ಹಳ್ಳಿಯ ಸುತ್ತಮುತ್ತಲಿರುವ ದೇವದೇವಿಯರಿಗೆ ಸಂಬಂಧಿಸಿದ ಕಥೆಗಳು ಕಾಮಾರಪುಕುರದಲ್ಲಿ ಪದ್ಯ ರೂಪದಲ್ಲಿ ಪ್ರಚಲಿತವಿದ್ದುವು. ತಾರಕೇಶ್ವರ ಮಹಾದೇವನು ಪ್ರಕಟವಾದ ಕಥೆ, ವನ–ವಿಷ್ಣುಪುರದ ಶ್ರೀ ಮದನಮೋಹನನ ಉಪಾಖ್ಯಾನ–ಹೀಗೆ ಅನೇಕ ದೇವದೇವಿಯರ ವೃತ್ತಾಂತ ಗಳನ್ನು ಗದಾಧರನು ಕೇಳಿ ತಿಳಿದಿದ್ದನು. ಕೆಲವೊಮ್ಮೆ ಇಂಥ ಉಪಾಖ್ಯಾನಗಳಿರುವ ಗ್ರಂಥಗಳು ದೊರೆತರೆ ಅವನು ಸ್ವಹಸ್ತದಿಂದ ಬರೆದಿಟ್ಟುಕೊಳ್ಳುತ್ತಿದ್ದನು. ಅವನು ಸ್ವಹಸ್ತದಿಂದ ಬರೆದ ರಾಮಕೃಷ್ಣಾಯಣ ಪುಂಥಿ, ಯೋಗಾದ್ಯಾರ್ ಪಾಲಾ, ಸುಬಾಹುರ್‌ಪಾಲಾ ಮುಂತಾದ ಪುಸ್ತಕಗಳು ನಮಗೆ ಕಾಮಾರಪುಕುರದ ಮನೆಯಲ್ಲಿ ಸಿಕ್ಕಿವೆ. ಉಪಾಖ್ಯಾನಗಳನ್ನೂ ಗದಾಧರನು ಗ್ರಾಮವಾಸಿಗಳಿಗೆ ಪಠನಮಾಡಿ ಕೇಳಿಸು ತ್ತಿದ್ದ ಎಂಬುದರಲ್ಲಿ ಸಂದೇಹವಿಲ್ಲ.

ಗದಾಧರನಿಗೆ ಅಂಕಗಣಿತದಲ್ಲಿ ಔದಾಸೀನ್ಯವಿತ್ತು ಎಂಬುದನ್ನು ನಾವು ಮೊದಲೇ ನೋಡಿದ್ದೇವೆ. ಆದರೂ ಶಾಲೆಗೆ ಹೋಗಿ ಆ ವಿಷಯದಲ್ಲಿಯೂ ಸಾಕಷ್ಟು ಪರಿಣತಿ ಹೊಂದಿದ್ದನು. ಆದರೆ ಉಪನಯನದನಂತರ ಅವನ ಮನಸ್ಸು ಸಂಪೂರ್ಣ ಧ್ಯಾನದ ಕಡೆ ತಿರುಗಿತು. ಆಗಾಗ ಅವನಿಗೆ ಸಮಾಧಿಯಾಗುತ್ತಿರುವುದನ್ನು ನೋಡಿ ರಾಮಕುಮಾರ ಮೊದಲಾದವರು ಅದು ಮೂರ್ಛಾರೋಗದ ಪರಿಣಾಮವೆಂದು ಭಾವಿಸಿ ಅವನನ್ನು ಯಾವುದಕ್ಕೂ ಒತ್ತಾಯಿಸುತ್ತಿರಲಿಲ್ಲ. ಅವನಿಗೆ ಇಚ್ಛೆಬಂದಂತೆ ಶಾಲೆಗೆ ಹೋಗಬಹು ದಿತ್ತು, ತನಗಿಷ್ಟವಾದ ವಿಷಯವನ್ನು ಕಲಿಯಬಹುದಿತ್ತು. ಇದರಿಂದಾಗಿಯೇ ಉಪಾ ಧ್ಯಾಯನೂ ಅವನ ವಿದ್ಯಾಭ್ಯಾಸ ಮುಂದುವರಿಯದಿರುವುದನ್ನು ಕಂಡು ಯಾವರೀತಿ ಯಲ್ಲಿಯೂ ಅವನನ್ನು ಪೀಡಿಸುತ್ತಿರಲಿಲ್ಲ.

14. ಕ್ರಮೇಣ ಗದಾಧರನಿಗೆ ಹನ್ನೆರಡು ವರ್ಷವಾಯಿತು. ಅವನ ಅಣ್ಣ ರಾಮೇಶ್ವರನಿಗೆ ಇಪ್ಪತ್ತೆರಡು ವರ್ಷ ಮತ್ತು ತಂಗಿ ಸರ್ವಮಂಗಳೆಗೆ ಒಂಬತ್ತುವರ್ಷ. ಈಗ ರಾಮೇಶ್ವರನಿಗೆ ಮದುವೆಯ ವಯಸ್ಸು. ಕಾಮಾರಪುಕುರದ ಹತ್ತಿರದಲ್ಲಿರುವ ಗೌರಹಾಟಿ ಎಂಬ ಗ್ರಾಮದ ರಾಮಸದಯ ಬಂದ್ಯೋಪಾಧ್ಯಾಯನ ತಂಗಿಯನ್ನು

ವಧುವಾಗಿ ರಾಮಕುಮಾರನು ನಿಶ್ಚಯಿಸಿದನು. ಹಾಗೂ ರಾಮಸದಯನಿಗೆ ತನ್ನ ತಂಗಿ ಸರ್ವಮಂಗಳೆಯನ್ನು ಕೊಡುವುದೆಂದು ನಿಶ್ಚಯವಾಯಿತು. ಇದರಿಂದಾಗಿ ಕನ್ಯಾ ಶುಲ್ಕದ ಸಮಸ್ಯೆ ಪರಿಹಾರವಾಯಿತು. ಇದೇ ಸಂದರ್ಭದಲ್ಲಿ ಇನ್ನೊಂದು ವಿಶೇಷ ಘಟನೆ ನಡೆಯಿತು. ಯೌವನ ಸಮಾಪ್ತಿಗೊಳ್ಳುತ್ತಿದ್ದರೂ ರಾಮಕುಮಾರನ ಸಹ ಧರ್ಮಿಣಿ ಗರ್ಭವತಿಯಾಗದಿದ್ದುದನ್ನು ಕಂಡು ಎಲ್ಲರೂ ಆಕೆ ಬಂಜೆಯೆಂದು ಭಾವಿ ಸಿದ್ದರು. ಆದರೆ ಈಗ ಅವಳು ಗರ್ಭಿಣಿಯಾದುದು ಎಲ್ಲರಿಗೂ ಆನಂದ ಮತ್ತು ದುಃಖ ಏಕಕಾಲದಲ್ಲಿ ಉಂಟಾದವು. ಏಕೆಂದರೆ ಅವಳು ಶಿಶುವನ್ನು ಹಡೆದರೆ ಮೃತ್ಯು ವಶಳಾಗುವಳೆಂದು ರಾಮಕುಮಾರನಿಂದ ಅವರೆಲ್ಲ ಕೇಳಿದ್ದರು.

15. ಪತ್ನಿ ಗರ್ಭವತಿಯಾದಂದಿನಿಂದ ರಾಮಕುಮಾರನ ಭಾಗ್ಯಚಕ್ರ ಬದ ಲಾಯಿತು. ಮೊದಲು ಯಾವ ಯಾವ ರೂಪದಲ್ಲಿ ಹಣ ಸಂಪಾದನೆ ಮಾಡುತ್ತಿದ್ದನೊ ಅದೆಲ್ಲ ಈಗ ಕಡಮೆಯಾಗತೊಡಗಿತು. ಇಷ್ಟೇ ಸಾಲದೆಂಬಂತೆ ಅವನ ಆರೋಗ್ಯವೂ ಹದಗೆಟ್ಟಿತು, ಮೊದಲಿನಷ್ಟು ದುಡಿಯುವ ದೇಹದಾರ್ಢ್ಯವಿರಲಿಲ್ಲ. ಅವನ ಪತ್ನಿಯ ಆಚರಣೆಯಲ್ಲಿಯೂ ಗಮನಾರ್ಹ ಬದಲಾವಣೆ ಕಂಡುಬಂದಿತು. ಉಪನಯನವಾಗದ ಬಾಲಕರು ಮತ್ತು ಕಾಯಿಲೆಯವರನ್ನು ಬಿಟ್ಟರೆ ಮನೆಯಲ್ಲಿ ಯಾರೂ ಕೂಡ ಶ್ರೀರಘು ವೀರನ ಪೂಜೆಗೆ ಮುಂಚೆ ತಿಂಡಿ ತಿನ್ನಬಾರದೆಂಬ ಪದ್ಧತಿ ತಂದೆ ಕ್ಷುದಿರಾಮನ ಕಾಲ ದಿಂದ ನಡೆದುಕೊಂಡುಬಂದಿತ್ತು. ಅವನ ಪತ್ನಿ ಆ ನಿಯಮವನ್ನು ಈಗ ಭಂಗಗೊಳಿಸಿ ದಳು. ಇದರಿಂದ ಅಶುಭವಾಗುವುದೆಂದು ಇತರರು ಹೇಳಿದರೂ ಆಕೆ ಲೆಕ್ಕಿಸಲಿಲ್ಲ. ಸಣ್ಣಪುಟ್ಟ ವಿಷಯಕ್ಕೂ ಇತರರೊಡನೆ ಜಗಳ ಕಾಯುತ್ತಿದ್ದಳು. ಚಂದ್ರಾದೇವಿ ಮತ್ತು ಪತಿ ರಾಮಕುಮಾರ ಇವರೊಡನೆಯೂ ಅವಳಿಗೆ ಮನಸ್ತಾಪವಿತ್ತು. ಗರ್ಭಿಣಿ ಸ್ತ್ರೀಯರ ಸ್ವಭಾವದಲ್ಲಿ ಸ್ವಲ್ಪ ಬದಲಾವಣೆಯುಂಟಾಗುವುದು ಸಹಜ ಎಂದು ಯಾರೂ ಆಕ್ಷೇಪಿಸಲಿಲ್ಲ. ಆದರೂ ಕಾಮಾರಪುಕುರದ ಈ ಧಾರ್ಮಿಕ ಕುಟುಂಬದಲ್ಲಿ ಈಗ ಅಶಾಂತಿಯು ಉದಯವಾಗತೊಡಗಿತ್ತು.

16. ರಾಮೇಶ್ವರನು ವಿದ್ಯಾಭ್ಯಾಸ ಮುಗಿಸಿದ್ದರೂ ದುಡಿಮೆಯಲ್ಲಿ ಅಷ್ಟೊಂದು ಸಮರ್ಥನಿರಲಿಲ್ಲ. ಕುಟುಂಬದಲ್ಲಿ ಜನರ ಸಂಖ್ಯೆಯೂ ಜಾಸ್ತಿಯಾಗಿ, ವರಮಾನವು ಕಡಮೆಯಾಗಿ ಸಂಸಾರದಲ್ಲಿ ಈಗ ಮೊದಲಿದ್ದ ಸೌಕರ್ಯವಿರಲಿಲ್ಲ. ರಾಮಕುಮಾರನು ಸಮಸ್ಯೆಯ ಪರಿಹಾರಕ್ಕಾಗಿ ಅನೇಕ ಉಪಾಯಗಳನ್ನು ಚಿಂತಿಸಿದ, ಆದರೆ ಯಾವುದೂ ಸಫಲವಾಗಲಿಲ್ಲ. ಇದೇ ಚಿಂತೆಯಲ್ಲಿಯೇ ದಿನಗಳು ಕಳೆದು ಅವನ ಪತ್ನಿಯ ಪ್ರಸವ ಕಾಲ ಸಂನಿಹಿತವಾಯಿತು. ಈಗ ಮೊದಲಿನ ದರ್ಶನವನ್ನು ನೆನೆಸಿಕೊಂಡ ಅವನ ಮನಸ್ಸು ಇನ್ನೂ ವಿಷಣ್ಣವಾಯಿತು.

17. ಕೊನೆಗೂ ಆ ದುರ್ದಿನ ಬಂತು. ೧೮೪೯ರಲ್ಲಿ ಅವನ ಪತ್ನಿಯು ಒಂದು ಅತ್ಯಂತ ಸುಂದರ ಗಂಡುಮಗುವಿಗೆ ಜನ್ಮವಿತ್ತು, ಆದರೆ ಮುಖವನ್ನು ನೋಡುತ್ತ ನೋಡುತ್ತಲೇ ಸಾವನ್ನಪ್ಪಿದಳು. ರಾಮಕುಮಾರನ ಬಡಕುಟುಂಬದಲ್ಲಿ ಶೋಕದ ಅಂಧಕಾರ ಕವಿಯಿತು.

ಎಂಟನೆಯ ಅಧ್ಯಾಯ

ಯೌವನದ ಹೊಸ್ತಿಲಿನಲ್ಲಿ

1. ಕಲಕತ್ತೆಯಲ್ಲಿ ರಾಮಕುಮಾರನ ಸಂಸ್ಕೃತ ಶಾಲೆ 2. ರಾಮಕುಮಾರನ ಪತ್ನಿವಿಯೋಗದಿಂದ ಸಂಸಾರದ ಮೇಲೆ ಪರಿಣಾಮ 3. ರಾಮೇಶ್ವರನನ್ನು ಕುರಿತು 4. ಗದಾಧರನ ವಿಷಯದಲ್ಲಿ ಅವನ ಭರವಸೆ 5. ಗದಾಧರನ ಮಾನಸಿಕ ಸ್ಥಿತಿ ಮತ್ತು ಚಟುವಟಿಕೆ 6. ಗ್ರಾಮಮಹಿಳೆಯರಿಗಾಗಿ ಅವನು ಭಕ್ತಿಗೀತೆಗಳನ್ನು ಹಾಡುವುದು 7. ಮಹಿಳೆಯರಿಗೆ ಅವನ ಮೇಲಿದ್ದ ಭಕ್ತಿ ವಿಶ್ವಾಸ 8. ಸ್ತ್ರೀವೇಶದಲ್ಲಿ ಗದಾಧರ 9. ಸೀತಾನಾಥನ ಮನೆಯವರೊಡನೆ ಅವನ ಸಂಬಂಧ 10. ದುರ್ಗಾದಾಸನ ಅಹಂಕಾರ ಮರ್ದನ 11. ವೈಶ್ಯಕುಟುಂಬದ ಮಹಿಳೆಯರಿಗೆ ಗದಾಧರನ ಮೇಲೆ ಭಕ್ತಿ ವಿಶ್ವಾಸ 12. ಗದಾಧರನ ವಿಷಯವಾಗಿ ರುಕ್ಮಿಣಿಯ ಮಾತು 13. ಗ್ರಾಮದ ಗಂಡಸರೆಲ್ಲರೂ ಗದಾಧರನನ್ನು ಪ್ರೀತಿಸುತ್ತಿದ್ದರು 14. ಧನಾರ್ಜನೆಯ ಶಿಕ್ಷಣದಲ್ಲಿ ಉದಾಸೀನತೆಗೆ ಕಾರಣ 15. ಗದಾಧರನ ಸ್ವಾಭಾವಿಕ ಪ್ರೇರಣೆ 16 ಶಾಲೆಯ ಪರಿತ್ಯಾಗ ಮತ್ತು ಸ್ನೇಹಿತರೊಡನೆ ನಾಟಕಾಭಿನಯ 17. ಗದಾಧರನ ಚಿತ್ರಕಲೆ ಮತ್ತು ಮೂರ್ತಿರಚನಾ ಕೌಶಲ್ಯ 18. ಗದಾಧರನು ಕಲಕತ್ತೆಗೆ ಬಂದನು

1, ಪತ್ನಿ ಪರಲೋಕವನ್ನೈದಳು, ಆದರೆ ರಾಮಕುಮಾರನ ದುಃಖ ಕಷ್ಟದ ದಿನಗಳು ಕೊನೆಗೊಳ್ಳಲಿಲ್ಲ. ಆದಾಯವು ಕಡಿಮೆಯಾಗುತ್ತ ಹೋದುದರಿಂದ ಸಂಸಾರದ ಸುಖ ಸೌಲಭ್ಯಗಳು ಕಡಿಮೆಯಾಗುತ್ತಾ ಹೋದುವು. ಲಕ್ಷ್ಮೀಜಲಾ ಹೊಲದಲ್ಲಿ ಕುಟುಂಬ ನಿರ್ವಹಣೆಗೆ ಸಾಕಾಗುವಷ್ಟು ಭತ್ತ ಬೆಳೆಯುತ್ತಿತ್ತು. ಆದರೆ ಬಟ್ಟೆಬರೆ ಇತ್ಯಾದಿಗಳಿಗೆ ಹಣ ಸಾಲುತ್ತಿರಲಿಲ್ಲ. ಇಷ್ಟೇ ಅಲ್ಲದೆ ಅವನ ವೃದ್ಧತಾಯಿ, ಮಾತೃಹೀನ ಶಿಶು ಅಕ್ಷಯ–ಇವರಿಗೆ ಪ್ರತಿನಿತ್ಯ ಹಾಲು ಬೇಕಿತ್ತು. ಪರಿಸ್ಥಿತಿಯನ್ನು ನಿಭಾಯಿಸಲು ಸಾಲ ಮಾಡಬೇಕಾಯಿತು. ಈಗ ಸಾಲ ವೃದ್ಧಿಯಾಗುತ್ತಾ ಹೋಯಿತು. ಏನು ಮಾಡಬೇಕೊ ತಿಳಿಯದೆ ರಾಮಕುಮಾರ ತೀವ್ರ ಚಿಂತೆಗೊಳಗಾದ. ಬೇರೆ ಪ್ರದೇಶಕ್ಕೆ ಹೋದರೆ ಹಣ ಸಂಪಾದನೆಯ ಮಾರ್ಗ ಸಿಗಬಹುದೆಂದು ಕೆಲವು ಸಂಬಂಧಿಕರು ಸೂಚಿಸಿದರು. ಅವನಿಗೂ ಅದು ಸರಿಯೆನಿಸಿತು. ತನ್ನ ಶೋಕತಪ್ತ ಮನಸ್ಸಿಗೂ ಸ್ವಲ್ಪ ಸಮಾಧಾನ ಸಿಗಬಹುದೆಂದು ಅವನು ಭಾವಿಸಿದ. ಮೂವತ್ತು ವರ್ಷಗಳು ತನ್ನ ಜೀವನ ಸಂಗಾತಿಯಾಗಿ ಸಂಸಾರ ನಿರ್ವಹಿಸಿದ ಪತ್ನಿಯ ವಿಯೋಗವನ್ನು ಮರೆಯಬೇಕಾದರೆ ಆಕೆಯ ಸ್ಮೃತಿಯಿಂದ ತುಂಬಿಹೋಗಿರುವ ಆ ಮನೆಯಿಂದ ಬಹುದೂರ ಹೋಗಬೇಕು.

ಕಲಕತ್ತ ಮತ್ತು ವರ್ಧಮಾನ—ಈ ಎರಡು ಸ್ಥಳಗಳಲ್ಲಿ ಎಲ್ಲಿಗೆ ಹೋಗುವುದು ಒಳಿತು ಎಂದು ವಿಚಾರಿಸುತ್ತ ಕೊನೆಗೆ ಕಲಕತ್ತೆಗೆ ಹೋಗುವುದೆಂದು ನಿರ್ಧರಿಸಿದನು. ಶಿಹೋರ್ ಗ್ರಾಮದ ಮಹೇಶಚಂದ್ರ ಚಟ್ಟೋಪಾಧ್ಯಾಯ, ದೇಶಡಾ ಗ್ರಾಮದ ರಾಮಧನ ಘೋಷ ಇವರುಗಳು ಕಲಕತ್ತೆಗೆ ಹೋಗಿ ಹಣ ಸಂಪಾದಿಸಿ ತಮ್ಮ ಸಂಸಾರದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಿಕೊಂಡಿದ್ದರು. ಈ ವಿಷಯ ಅವನಿಗೆ ಕಲಕತ್ತೆಗೆ ಹೋಗಲು ಉತ್ತೇಜನ ನೀಡಿತು. ರಾಮೇಶ್ವರನ ಮೇಲೆ ಸಂಸಾರ ನಿರ್ವಹಣೆಯ ಭಾರವನ್ನು ಹೊರಿಸಿ ರಾಮಕುಮಾರನು ಕಲಕತ್ತೆಗೆ ಹೋಗಿ ಝಾಮಾಪುಕುರ ಎಂಬ ಪ್ರದೇಶದಲ್ಲಿ ಒಂದು ಸಂಸ್ಕೃತಶಾಲೆಯನ್ನು ತೆರೆದು ಕೆಲವು ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡತೊಡಗಿದನು.

2. ರಾಮಕುಮಾರನ ಪತ್ನಿಯ ಮರಣಾನಂತರ ಗೃಹಕೃತ್ಯದ ಭಾರವೆಲ್ಲ ಮತ್ತೆ ಚಂದ್ರಾದೇವಿಯ ಮೇಲೆ ಬಿತ್ತು. ರಾಮಕುಮಾರನ ಪುತ್ರ ಅಕ್ಷಯನನ್ನು ಸಾಕುವ ಜವಾಬ್ದಾರಿಯೂ ಅವಳದೇ ಆಯಿತು. ರಾಮೇಶ್ವರನ ಮಡದಿ ಇನ್ನೂ ಚಿಕ್ಕವಳಾದ್ದರಿಂದ ಈ ಎಲ್ಲ ಕೆಲಸಗಳಲ್ಲಿ ಚಂದ್ರಾದೇವಿಗೆ ಕೇವಲ ಸಹಾಯ ಮಾಡಬಲ್ಲವಳಾಗಿದ್ದಳು ಅಷ್ಟೆ. ಶ್ರೀ ರಘುವೀರನ ಪೂಜೆ, ಅಕ್ಷಯನನ್ನು ಪೋಷಿಸುವುದು, ಅಡಿಗೆ ಮುಂತಾದ ಮನೆಗೆಲಸ—ಇವೆಲ್ಲವನ್ನೂ ಚಂದ್ರಾದೇವಿ ನಿಭಾಯಿಸಬೇಕಾಯಿತು. ಇಡೀ ದಿನ ಈ ಎಲ್ಲ ಕೆಲಸಗಳಲ್ಲಿ ಕಳೆದು ಹೋಗುತ್ತಿತ್ತು, ವಿಶ್ರಾಂತಿಗೆ ಸ್ವಲ್ಪ ಸಮಯವೂ ಸಿಗುತ್ತಿರಲಿಲ್ಲ. ಐವತ್ತೆಂಟು ವರ್ಷದ ಆಕೆ* ಇಷ್ಟೊಂದು ಕೆಲಸ ಮಾಡುವುದು ದುಃಸಾಧ್ಯವಾದರೂ ಶ್ರೀ ರಘುವೀರನ ಇಚ್ಛೆಯೆಂದು ತಿಳಿದು ಸಂತೋಷದಿಂದ ಮಾಡಿದಳು.

3. ಈಗ ಕುಟುಂಬ ನಿರ್ವಹಣೆಯ ಭಾರ ರಾಮೇಶ್ವರನದು. ಹೇಗೆ ಹಣ ಸಂಪಾದಿಸುವುದು, ಹೇಗೆ ಕುಟುಂಬದವರನ್ನು ಸುಖದಲ್ಲಿರಿಸುವುದು ಇದೇ ಚಿಂತೆ ಅವನಿಗೀಗ. ಅವನಿಗೆ ಸಾಕಷ್ಟು ವಿದ್ಯಾಭ್ಯಾಸವಿದ್ದರೂ ದುಡಿಮೆಯಲ್ಲಿ ಅಷ್ಟೊಂದು ದಕ್ಷನಾಗಿರಲಿಲ್ಲ. ಅಷ್ಟೇ ಅಲ್ಲದೆ ಸಾಧು ಸಂನ್ಯಾಸಿಗಳನ್ನು ಕಂಡರೆ ತುಂಬ ಗೌರವ ಅವನಿಗೆ. ಅಂಥವರಾರಾದರೂ ಸಿಕ್ಕಿದರೆ ಅವರೊಂದಿಗೆ ಬಹಳ ಕಾಲಕಳೆಯುತ್ತಿದ್ದ ಮತ್ತು ಅವರ ಕೊರತೆಯನ್ನು ನಿವಾರಿಸಲು ತನ್ನ ಯೋಗ್ಯತೆಗೆ ಮೀರಿ ಹಣ ಖರ್ಚು ಮಾಡುತ್ತಿದ್ದ. ಅವನು ಸಂಸಾರಿಯಾದರೂ ಹಣವನ್ನು ಕೂಡಿಡಲಿಲ್ಲ. "ಶ್ರೀ ರಘುವೀರನು ಹೇಗೊ ನಡೆಸಿಕೊಂಡುಹೋಗುತ್ತಾನೆಂದು" ಭಾವಿಸಿ ಕೆಲವೊಮ್ಮೆ ವರಮಾನಕ್ಕಿಂತ ಅಧಿಕವಾಗಿ ಖರ್ಚು ಮಾಡುತ್ತ ಕಾಲವನ್ನು ತಳ್ಳತೊಡಗಿದ.

4. ಗದಾಧರನ ಮೇಲೆ ಅವನಿಗೆ ಅತ್ಯಂತ ಪ್ರೀತಿಯಿದ್ದರೂ ಅವನ ವಿದ್ಯಾಭ್ಯಾಸದ ಕಡೆಗೆ ರಾಮೇಶ್ವರನು ಹೆಚ್ಚು ಲಕ್ಷ್ಯ ಹರಿಸಲಿಲ್ಲ. ಅವನು ಆ ರೀತಿಯ

* ಚಂದ್ರಾದೇವಿ ಹುಟ್ಟಿದ್ದು ೧೭೯೧ರಲ್ಲಿ, ದೇಹತ್ಯಾಗ ೧೮೭೬ರಲ್ಲಿ ಆಕೆ ಶ್ರೀರಾಮಕೃಷ್ಣರ ಹುಟ್ಟುಹಬ್ಬದಂದು ತೀರಿಕೊಂಡಳಂತೆ.

ಸ್ವಾಭಾವದವನೇ ಅಲ್ಲ. ಅಲ್ಲದೆ, ಹಣ ಸಂಪಾದನೆಗಾಗಿ ಅವನು ಬೇರೆ ಬೇರೆ ಕಡೆ ತಿರುಗಾಡಬೇಕಾಗುತ್ತಿತ್ತು. ಆ ಚಿಕ್ಕ ವಯಸ್ಸಿನಲ್ಲಿ ಗದಾಧರನಿಗೆ ಇದ್ದ ವಿಶೇಷ ಧರ್ಮ ಪ್ರವೃತ್ತಿಯನ್ನು ಕಂಡು ಅವನು ಸ್ವಭಾವಕ್ಕನುಗುಣವಾಗಿ ಉನ್ನತಿಗೇರುತ್ತಾನೆಯೇ ಹೊರತು ಕೆಟ್ಟ ದಾರಿ ಖಡಿತ ಹಿಡಿಯುವುದಿಲ್ಲ ಎಂಬುದು ರಾಮೇಶ್ವರನ ದೃಢ ವಿಶ್ವಾಸವಾಗಿತ್ತು. ಗ್ರಾಮವಾಸಿಗಳಿಗೆಲ್ಲ ಬಾಲಕನ ಮೇಲಿದ್ದ ವಿಶ್ವಾಸ ಮತ್ತು ಪರಮ ಪ್ರೀತಿಯನ್ನು ನೋಡಿ ರಾಮೇಶ್ವರನ ವಿಶ್ವಾಸ ಇನ್ನೂ ದೃಢವಾಯಿತು. ಸ್ವಾಭಾವಿಕ ವಾದ ಸದ್ಗುಣಗಳಿಲ್ಲದಿದ್ದರೆ ಯಾರೂ ಎಲ್ಲರ ವಿಶೇಷ ಪ್ರೀತಿಗೆ ಒಳಗಾಗಲು ಸಾಧ್ಯವಿಲ್ಲ ವೆಂದು ಅವನು ನಂಬಿದ್ದ. ಆದ್ದರಿಂದ ಬಾಲಕನಿಗೆ ಉಜ್ವಲ ಭವಿಷ್ಯವಿದೆ ಎಂದು ಅವನು ಬಾಲಕನ ಬಗ್ಗೆ ನಿಶ್ಚಿಂತನಾಗಿದ್ದ. ರಾಮಕುಮಾರ ಕಲಕತ್ತೆಗೆ ಹೊರಟಾಗ ಗದಾಧರನಿಗೆ ಹದಿಮೂರು ವರ್ಷ. ಅವನಿಗೀಗ ಯಾರೂ ನಿರ್ದಿಷ್ಟ ಪೋಷಕರಿರಲಿಲ್ಲ. ತನ್ನ ಸ್ವಭಾವಕ್ಕನುಗುಣವಾಗಿ ಮುಕ್ತವಾಗಿ ತನಗಿಷ್ಟ ಬಂದಂತೆ ಜೀವನ ಸಾಗಿಸತೊಡಗಿದ.

5. ಗದಾಧರನು ತನ್ನ ಸೂಕ್ಷ್ಮ ದೃಷ್ಟಿಯಿಂದ ಪ್ರತಿಯೊಬ್ಬ ವ್ಯಕ್ತಿಯ ಮತ್ತು ಕಾರ್ಯದ ಉದ್ದೇಶವನ್ನು ಸರಿಯಾಗಿ ಅರ್ಥಮಾಡಿಕೊಂಡುಬಿಡುತ್ತಿದ್ದ. ವಿದ್ಯಾಭ್ಯಾಸ ವಿರುವುದೆಲ್ಲ ಧನಾರ್ಜನೆಗಾಗಿ ಮತ್ತು ಬಿರುದು ಪಡೆಯಲು ಎಂಬುದನ್ನು ಅವನಾಗಲೇ ಅರ್ಥಮಾಡಿಕೊಂಡಿದ್ದನು. ಅಷ್ಟೊಂದು ಶ್ರಮದಿಂದ ಹಣ ಸಂಪಾದನೆ ಮಾಡಿ ಸಾಂಸಾರಿಕ ಸುಖವನ್ನು ವೃದ್ಧಿಸಿಕೊಂಡು ಜನರು ಧರ್ಮವಿಮುಖರಾಗುತ್ತಾರೆ ಎಂದೂ ಅವನು ಭಾವಿಸಿದ. ಗ್ರಾಮದಲ್ಲಿ ಕೆಲವು ಕುಟುಂಬದವರು ಹಣಲಾಲಸೆಯಿಂದ ಕೋರ್ಟು ಮೊಕದ್ದಮೆಗಳಲ್ಲಿ ತಲ್ಲೀನರಾಗಿರುವುದನ್ನು ಅವನು ಕಂಡಿದ್ದ. ಒಂದು ಸಣ್ಣ ತುಂಡು ಭೂಮಿಗಾಗಿ ಜನರು ಜಗಳ ಕಾಯುವುದನ್ನು ಅವನು ನೋಡಿ ಬೇಸತ್ತಿದ್ದ. ಹಣ ಮತ್ತು ಭೋಗಲಾಲಸೆ ಅನರ್ಥಕಾರಿ ಎಂಬುದನ್ನು ಅವನು ಮನಗಂಡಿದ್ದ. ಕೇವಲ ಧನಾರ್ಜ ನೆಯ ವಿದ್ಯೆ ಅವನಿಗೆ ಬೇಡವೆನಿಸಿತು. ಹೊಟ್ಟೆ ಬಟ್ಟೆಗೆ ಎಷ್ಟುಬೇಕೊ ಅಷ್ಟರಿಂದಲೇ ಸಂತುಷ್ಟನಾಗಿ ಈಶ್ವರಚಿಂತೆಯ ಮೂಲಕ ಜೀವನವನ್ನು ಸಫಲಗೊಳಿಸುವುದು ಒಳಿತೆಂದು ಅವನು ಭಾವಿಸಿದ ಅವನು ತನ್ನ ಗೆಳೆಯರೊಡನೆ ಪ್ರತಿದಿನ ಯಾವಾಗಲಾದರೊಮ್ಮೆ ಪಾಠಶಾಲೆಗೆ ಹೋಗುತ್ತಿದ್ದರೂ ತನ್ನ ಹೆಚ್ಚಿನ ಕಾಲವನ್ನು ಶ್ರೀರಘುವೀರನ ಪೂಜೆ ಯಲ್ಲಿ ಮತ್ತು ಮನೆಗೆಲಸದಲ್ಲಿ ತಾಯಿಗೆ ಸಹಾಯಮಾಡುವುದರಲ್ಲಿ ಕಳೆಯುತ್ತಿದ್ದ. ಹೀಗೆ ದಿನದ ಹೆಚ್ಚಿನ ವೇಳೆಯನ್ನು ಅವನು ಮನೆಯಲ್ಲಿಯೇ ಕಳೆಯಬೇಕಾಯಿತು.

6. ಗದಾಧರನು ಈಗ ಹೆಚ್ಚಾಗಿ ಮನೆಯಲ್ಲಿಯೇ ಕಾಲ ಕಳೆಯುವುದರಿಂದ ಹಳ್ಳಿಯ ಮಹಿಳೆಯರಿಗೆ ಅವನನ್ನು ನೋಡುವ ಅವಕಾಶ ಹೆಚ್ಚು ಸಿಕ್ಕಿತು. ತಮ್ಮ ಮನೆಗೆಲಸವಾದ ಮೇಲೆ ಚಂದ್ರಾದೇವಿಯ ಹತ್ತಿರ ಬಂದಾಗಲೆಲ್ಲ ಬಾಲಕನನ್ನು ನೋಡಿ ಆನಂದದಿಂದ ಒಂದೆರಡು ಹಾಡು ಹೇಳಲೊ ಅಥವಾ ಯಾವುದಾದರೂ ಉಪಾಖ್ಯಾನ ವನ್ನು ಪಠನಮಾಡಲೊ ಅವನನ್ನು ಒತ್ತಾಯಿಸುತ್ತಿದ್ದರು. ಬಾಲಕನೂ ತನಗೆ ಸಾಧ್ಯ ವಿದ್ದಷ್ಟೂ ಅವರ ಅಭಿಲಾಷೆಯನ್ನು ಪೂರೈಸುತ್ತಿದ್ದ. ಅವನು ಮನೆಗೆಲಸದಲ್ಲಿ

ಚಂದ್ರಾದೇವಿಗೆ ಸಹಾಯಮಾಡಬೇಕಿದ್ದುದರಿಂದ ಇವಕ್ಕೆಲ್ಲ ಹೆಚ್ಚು ಸಮಯ ಸಿಕ್ಕುತ್ತಿರಲಿಲ್ಲವಾದ್ದರಿಂದ ಆ ಮಹಿಳೆಯರೇ ಅವಳಿಗೆ ಸಹಾಯಮಾಡಿ ಅವನಿಗೆ ಬಿಡುವು ಮಾಡಿಕೊಡುತ್ತಿದ್ದರು. ಹೀಗೆ ಅವರಿಗಾಗಿ ಪಠನಮಾಡುವುದು, ಹಾಡು ಹೇಳುವುದು ಅವನ ನಿತ್ಯದ ಕೆಲಸಗಳಲ್ಲಿ ಒಂದಾಗಿ ಹೋಯಿತು. ಮಹಿಳೆಯರೂ ಕೇಳಿ ಎಷ್ಟೊಂದು ಆನಂದಿಸುತ್ತಿದ್ದರೆಂದರೆ ತಮ್ಮ ತಮ್ಮ ಮನೆಗೆಲಸಗಳನ್ನು ಆದಷ್ಟು ಬೇಗನೆ ಮುಗಿಸಿ ಚಂದ್ರಾದೇವಿಯ ಹತ್ತಿರ ಬರುತ್ತಿದ್ದರು.

ಗದಾಧರನು ಹಾಡು ಪಾಠನ ಇವುಗಳಿಂದ ಮಾತ್ರವಲ್ಲದೆ ಬೇರೆ ಅನೇಕ ವಿಧಗಳಿಂದ ಅವರನ್ನು ಆನಂದಿಸುತ್ತಿದ್ದ. ಆಗ ಗ್ರಾಮದಲ್ಲಿ ಮೂರು ಜಾತ್ರಾದಳ, ಒಂದು ದಳ ಬಾಉಲರು* ಮತ್ತು ಒಂದು ದಳ ಕವಿಗಳು† ಇದ್ದರು. ಅಲ್ಲಿ ಅನೇಕ ವೈಷ್ಣವರಿದ್ದುದರಿಂದ ಅವರ ಮನೆಗಳಲ್ಲಿ ಪ್ರತಿದಿನ ಭಾಗವತ ಪಾಠ ಮತ್ತು ಸಂಕೀರ್ತನೆಗಳು ನಡೆಯುತ್ತಿದ್ದುವು. ಗದಾಧರನು ಬಾಲ್ಯಕಾಲದಿಂದಲೂ ಇವುಗಳನ್ನು ಕೇಳುತ್ತಿದ್ದ ಮತ್ತು ಅವನದೇ ಆದ ಪ್ರತಿಭೆಯೂ ಇತ್ತು. ಹೀಗಾಗಿ ಈ ಗಾನ ಸಂಕೀರ್ತನೆಗಳನ್ನು ಚೆನ್ನಾಗಿ ಕರಗತ ಮಾಡಿಕೊಂಡಿದ್ದ. ಒಂದು ದಿನ ಬಾಉಲರ ಹಾಡು ಹೇಳುತ್ತಿದ್ದ, ಇನ್ನೊಂದು ದಿನ ಯಾವುದಾದರೂ ನಾಟಕದ ಪಾತ್ರವನ್ನು ಅಭಿನಯಿಸುತ್ತಿದ್ದ, ಮತ್ತೊಂದು ದಿನ ವೈಷ್ಣವರ ಸಂಕೀರ್ತನೆಯನ್ನು ಹಾಡುತ್ತಿದ್ದ. ಏಕಪಾತ್ರಾಭಿನಯದಲ್ಲಿ ಆತ ನಿಸ್ಸೀಮನಾಗಿದ್ದ. ಅನೇಕ ಪಾತ್ರಗಳನ್ನು ಸ್ವರವೈವಿಧ್ಯದ ಮೂಲಕ ಅಭಿನಯಿಸಿ ಎಲ್ಲರನ್ನೂ ಮುಗ್ಧಗೊಳಿಸುತ್ತಿದ್ದ. ಅವನು ಇತರರ ವಿಚಿತ್ರ ಹಾವಭಾವಗಳನ್ನು ಮಾತಿನ ಧಾಟಿಯನ್ನು ಎಷ್ಟು ಸೊಗಸಾಗಿ ಅನುಕರಿಸಿ ತೋರಿಸುತ್ತಿದ್ದನೆಂದರೆ ಎಲ್ಲರನ್ನೂ ಹಾಸ್ಯದ ಹೊನಲಿನಲ್ಲಿ ತೇಲಿಸಿಬಿಡುತ್ತಿದ್ದ.

7. ಹೀಗೆ ಗದಾಧರನು ಅವರೆಲ್ಲರ ಮೇಲೆ ಗಣನೀಯ ಪ್ರಭಾವ ಬೀರಿದ. ಬಾಲಕನ ಜನ್ಮಗ್ರಹಣದ ಸಮಯದಲ್ಲಿ ಅವನ ತಂದೆತಾಯಿಯರಿಗೆ ಆದ ದಿವ್ಯದರ್ಶನಗಳ ಕಥೆಯನ್ನು ಅವರೆಲ್ಲ ಕೇಳಿ ತಿಳಿದಿದ್ದರು. ಮತ್ತೆ ದೇವದೇವಿಯರ ಭಾವಾವೇಶದಿಂದ ಅವನಲ್ಲಾಗುತ್ತಿದ್ದ ಅವಸ್ಥಾಂತರವನ್ನು ಅವರು ಕಂಡಿದ್ದರು. ತೀವ್ರ ಭಕ್ತಿಭಾವದಿಂದ ಪುರಾಣಗಳನ್ನು ಪಠಿಸುವುದು, ಅವನ ಮಧುರಕಂಠದ ಹಾಡು, ಅವನ ಆತ್ಮೀಯತೆ, ಸರಳ ಸ್ವಭಾವ–ಇವೆಲ್ಲ ಅವರಲ್ಲಿ ಅವನ ಮೇಲೆ ಅಪೂರ್ವ ಭಕ್ತಿ, ಪ್ರೀತಿ ಉಂಟಾಗುವಂತೆ ಮಾಡಿದುವು. ಧರ್ಮದಾಸ ಲಾಹಾನ ಮಗಳು ಪ್ರಸನ್ನಮಯಿಯೇ ಮುಂತಾದ ವಯಸ್ಕ ಮಹಿಳೆಯರು ಅವನನ್ನು ಬಾಲಗೋಪಾಲನಂತೆ ಕಾಣುತ್ತಿದ್ದರು ಹಾಗೂ

---

* ವೈಷ್ಣವ ಸಂಪ್ರದಾಯಕ್ಕೆ ಸೇರಿದ ಭಕ್ತಿಗೀತೆಗಳನ್ನು ಹೇಳಿಕೊಂಡು ತಿರುಗಾಡುವ ಒಂದು ವರ್ಗದ ಭಿಕ್ಷುಕರು.

† ಆಶು ಕವಿತೆಯ ಮೂಲಕ ಗಹನ ವಿಷಯಗಳಿಗೆ ಸಂಬಂಧಿಸಿದ ಪ್ರಶ್ನೋತ್ತರಗಳನ್ನು ಹೇಳುವ ತೀಕ್ಷ್ಣಮತಿಯ ವ್ಯಕ್ತಿಗಳು.

ತಮ್ಮ ಮಕ್ಕಳಿಗಿಂತಲೂ ಹೆಚ್ಚಾಗಿ ಅವನನ್ನು ಪ್ರೀತಿಸುತ್ತಿದ್ದರು. ಅಲ್ಪ ವಯಸ್ಸಿನ ಮಹಿಳೆಯರು ಅವನಲ್ಲಿ ಶ್ರೀಕೃಷ್ಣನನ್ನು ಕಾಣುತ್ತ ಸಖ್ಯಭಾವದಿಂದ ಅವನೊಡನೆ ಸಂಬಂಧ ಬೆಳೆಸಿದ್ದರು. ಅಲ್ಲಿಯ ಮಹಿಳೆಯರೆಲ್ಲ ಹೆಚ್ಚಾಗಿ ವೈಷ್ಣವ ವಂಶದವರು, ಸರಳ ಭಾವಪ್ರಧಾನ ವಿಶ್ವಾಸವೇ ಅವರ ಧರ್ಮಜೀವನದ ತಿರುಳಾಗಿತ್ತು. ಆದ್ದರಿಂದ ಬಹುಗುಣಸಂಪನ್ನನೂ ಅತಿ ಸುಂದರನೂ ಆದ ಬಾಲಕನಲ್ಲಿ ದೇವತ್ವವನ್ನು ಆರೋಪಿಸು ವುದು ಅವರ ಪಾಲಿಗೆ ವಿಚಿತ್ರವೇನಾಗಿರಲಿಲ್ಲ. ಅವರೆಲ್ಲ ಅವನೊಡನೆ ನಿಃಸಂಕೋಚ ವಾಗಿ ಬೆರೆಯುತ್ತಿದ್ದರು, ತಮ್ಮ ಮನಸ್ಸಿನ ಭಾವನೆಗಳನ್ನೆಲ್ಲ ಹೇಳುತ್ತಿದ್ದರು ಮತ್ತು ಅವನ ಸಲಹೆಗಳನ್ನು ಕೇಳುತ್ತಿದ್ದರು. ಗದಾಧರನೂ ಅವರೊಡನೆ ಎಷ್ಟು ಚೆನ್ನಾಗಿ ಬೆರೆಯುತ್ತಿದ್ದನೆಂದರೆ ಅವನೂ ಮಹಿಳೆಯರಂತಾಗಿಬಿಡುತ್ತಿದ್ದ.

8. ಕೆಲವೊಮ್ಮೆ ಗದಾಧರನು ಸ್ತ್ರೀವೇಷವನ್ನು ಧರಿಸಿ ನಾರಿಯರ ಹಾವಭಾವ ಗಳನ್ನು ಅಭಿನಯಿಸಿ ತೋರಿಸುತ್ತಿದ್ದ. ರಾಧೆಯ ಅಥವಾ ಅವಳ ಸಖಿ ವೃಂದೆಯ ಪಾತ್ರವನ್ನು ವಹಿಸಿದಾಗ ಸ್ತ್ರೀವೇಷವನ್ನು ಧರಿಸಲು ಮಹಿಳೆಯರು ಅವನನ್ನು ಒತ್ತಾಯಿಸುತ್ತಿದ್ದರು. ಅವನೂ ಅವರು ಹೇಳಿದಂತೆಯೇ ಮಾಡುತ್ತಿದ್ದ. ಅಂಥ ಸಂದರ್ಭದಲ್ಲಿ ಅವನ ಹಾವಭಾವ, ಮಾತು, ಚಲನವಲನಗಳೆಲ್ಲ ಸಂಪೂರ್ಣ ಸ್ತ್ರೀಯರ ದಂತೆಯೇ ಇರುತ್ತಿತ್ತು. ಇದನ್ನು ನೋಡಿ ಇವನು ಸ್ತ್ರೀವೇಷ ಧರಿಸಿದರೆ ಯಾರಿಗೂ ಇವನನ್ನು ಗುರುತಿಸುವುದಕ್ಕೆ ಆಗುವುದಿಲ್ಲ ಎಂದು ಮಹಿಳೆಯರೆಲ್ಲ ಹೇಳುತ್ತಿದ್ದರು. ಸ್ತ್ರೀಯರ ವರ್ತನೆಗಳನ್ನು ಅವನು ಎಷ್ಟು ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದ ಎಂಬುದು ಇದರಿಂದ ತಿಳಿಯುತ್ತದೆ. ನಾಟಕಪ್ರಿಯ ಗದಾಧರನು ಒಂದೊಂದು ದಿನ ಸ್ತ್ರೀವೇಷ ವನ್ನು ತೊಟ್ಟು ಸೊಂಟದ ಮೇಲೆ ಬಿಂದಿಗೆಯನ್ನಿಟ್ಟುಕೊಂಡು ಗಂಡಸರ ಮುಂದೆಯೇ ಹಲದಾರಪುಕುರಕ್ಕೆ ನೀರು ತರಲು ಹೋದರೆ ಯಾರಿಗೂ ಅವನನ್ನು ಪತ್ತೆಹಚ್ಚಲಾಗು ತ್ತಿರಲಿಲ್ಲ.

9. ಗ್ರಾಮದ ಶ್ರೀಮಂತ ವೈಶ್ಯ ಸೀತಾನಾಥ ಪಯಿನನ ಬಗ್ಗೆ ನಾವು ಮೊದಲೇ ಹೇಳಿಯಾಗಿದೆ. ಅವನಿಗೆ ಏಳು ಜನ ಪುತ್ರರು ಮತ್ತು ಎಂಟು ಜನ ಪುತ್ರಿಯರಿದ್ದರು. ಪುತ್ರಿಯರು ವಿವಾಹದ ನಂತರವೂ ತಂದೆಯ ಮನೆಯಲ್ಲಿಯೇ ಇರುತ್ತಿದ್ದರು. ಅವನದು ದೊಡ್ಡ ಕುಟುಂಬ. ಅವನ ಮನೆಯಲ್ಲಿ ಪ್ರತಿದಿನ ಅಡಿಗೆ ಮಾಡಲು ಎಷ್ಟೊಂದು ಮಸಾಲೆ ಬೇಕಾಗುತ್ತಿತ್ತೆಂದರೆ ಅದನ್ನು ರುಬ್ಬಲು ಹತ್ತು ರುಬ್ಬುವ ಕಲ್ಲುಗಳು ಬೇಕಾಗುತ್ತಿತ್ತಂತೆ. ಅವನ ಸಂಬಂಧಿಕರೂ ಕೆಲವರು ಅವನ ಮನೆಯ ಹತ್ತಿರವೇ ಮನೆಮಾಡಿಕೊಂಡಿದ್ದರು. ಗ್ರಾಮದ ಆ ಭಾಗವನ್ನು 'ವ್ಯಾಪಾರಿಗಳ ಗಲ್ಲಿ' ಎಂದೇ ಕರೆಯುತ್ತಿದ್ದರು. ಅದು ಕ್ಷುದಿರಾಮನ ಮನೆಯ ಹತ್ತಿರವೇ ಇದ್ದುದರಿಂದ ಅಲ್ಲಿಯ ಮಹಿಳೆಯರನೇಕರು ಚಂದ್ರಾದೇವಿಯೆಡೆಗೆ ಬರುತ್ತಿದ್ದರು—ವಿಶೇಷವಾಗಿ ಸೀತಾನಾಥನ ಪತ್ನಿ ಮತ್ತು ಅವನ ಹೆಣ್ಣುಮಕ್ಕಳು. ಗದಾಧರನೊಡನೆ ಅವರ ಸೌಹಾರ್ದ್ಯ ತುಂಬ ಗಾಢವಾಗಿತ್ತು. ಇವರು ಅವನನ್ನು ತಮ್ಮ ಮನೆಗೆ ಕರೆದುಕೊಂಡುಹೋಗಿ ಅವನಿಗೆ ಸ್ತ್ರೀವೇಷ ಧರಿಸಿ

ಅವನಿಗೆ ಅಭಿನಯಿಸಲು ಹೇಳುತ್ತಿದ್ದರು. ಸೀತಾನಾಥನ ಸಂಬಂಧಿಕ ಮಹಿಳೆಯ ರನೇಕರು ಸಂಪ್ರದಾಯದಂತೆ ಬೇರೆ ಸ್ಥಳಗಳಿಗೆ ಹೋಗುವಂತಿರಲಿಲ್ಲ. ಆದ್ದರಿಂದ ಅವರಿಗೆ ಗದಾಧರನನ್ನು ನೋಡುವ ಅವಕಾಶ ಸಿಗುತ್ತಿರಲಿಲ್ಲ. ಇದಕ್ಕಾಗಿಯೇ ಅವನನ್ನು ತಮ್ಮ ಮನೆಗೆ ಕರೆದುಕೊಂಡುಹೋಗುತ್ತಿದ್ದರು. ಹೀಗೆ ಚಂದ್ರಾದೇವಿಯ ಹತ್ತಿರ ಬರುತ್ತಿದ್ದ ಮಹಿಳೆಯರೂ ಗದಾಧರನ ಭಕ್ತರಾಗಿಹೋದರು. ಅವನು ಸೀತಾನಾಥನ ಮನೆಗೆ ಬಂದಿದ್ದಾನೆಂದು ತಿಳಿದರೆ ಸಾಕು ಕೂಡಲೆ ಆ ಎಲ್ಲ ಮಹಿಳೆಯರೂ ಅಲ್ಲಿಗೆ ಧಾವಿಸುತ್ತಿದ್ದರು. ಮನೆಯ ಯಜಮಾನ ಸೀತಾನಾಥನಿಗೂ ಗದಾಧರನ ಮೇಲೆ ವಿಶೇಷ ಪ್ರೀತಿ. 'ವ್ಯಾಪಾರಿಗಳ ಗಲ್ಲಿಯ' ಗಂಡಸರೆಲ್ಲರೂ ಅವನ ಸದ್ಗುಣಗಳಿಗಾಗಿ ಅವನನ್ನು ಮೆಚ್ಚುತ್ತಿದ್ದರು. ಆದ್ದರಿಂದ ಅವರ ಮಹಿಳೆಯರೆಲ್ಲ ಅವನೆಡೆಗೆ ಹೋದರೆ ಯಾರೂ ಆಕ್ಷೇಪಿಸುತ್ತಿರಲಿಲ್ಲ.

10. ಅಲ್ಲಿ ದುರ್ಗಾದಾಸ ಪಾಯಿನ್ ಎಂಬ ಒಬ್ಬ ವ್ಯಕ್ತಿಯಿದ್ದ. ಅವನು ಮಾತ್ರ ಇದಕ್ಕೆ ಅಪವಾದ. ಅವನು ಕಠೋರ ಸಂಪ್ರದಾಯ ನಿಷ್ಠ. ಅವನಿಗೆ ಗದಾಧರನ ಮೇಲೆ ಪ್ರೀತಿಯಿದ್ದರೂ ತನ್ನ ಮನೆಯ ಹೆಂಗಸರನ್ನು ಅವನೆಡೆಗೆ ಹೋಗಲು ಬಿಡುತ್ತಿರಲಿಲ್ಲ. ತನ್ನ ಅಂತಃಪುರದ ವಿಚಾರ ಯಾರಿಗೂ ತಿಳಿಯದು, ತನ್ನ ಮನೆಯ ಸ್ತ್ರೀಯರನ್ನು ಯಾರಿಗೂ ನೋಡಲು ಸಾಧ್ಯವಿಲ್ಲ ಎಂದು ಜಂಬ ಕೊಚ್ಚಿಕೊಳ್ಳುತ್ತಿದ್ದ. ಸೀತಾನಾಥ ಮುಂತಾದವರು ಈ ರೀತಿ ಸಂಪ್ರದಾಯವನ್ನು ಅನುಸರಿಸುತ್ತಿರಲಿಲ್ಲವಾದ್ದರಿಂದ ಅವರ ಬಗ್ಗೆ ಒಂದು ರೀತಿಯ ಕೀಳು ಭಾವನೆ ಅವನಿಗಿತ್ತು.

ಒಂದು ದಿನ ದುರ್ಗಾದಾಸನು ಈ ರೀತಿ ಹೆಮ್ಮೆಪಟ್ಟುಕೊಳ್ಳುತ್ತಿರುವಾಗ ಗದಾಧರನು ಅಲ್ಲಿಯೇ ಇದ್ದ. ಅವನಿದನ್ನು ಕೇಳಿ ಹೇಳಿದ : "ಸ್ತ್ರೀಯರನ್ನು ಈ ರೀತಿ ರಕ್ಷಿಸಲು ಎಲ್ಲಾದರೂ ಸಾಧ್ಯವೆ ? ಉತ್ತಮ ಶಿಕ್ಷಣ ಮತ್ತು ದೈವಭಕ್ತಿಯ ಪ್ರಭಾವ ದಿಂದ ಮಾತ್ರ ಅವರಿಗೆ ರಕ್ಷಣೆ ದೊರೆಯುವುದು. ನಾನು ಇಷ್ಟಪಟ್ಟರೆ ನಿನ್ನ ಮನೆಯೊಳಗೆಲ್ಲ ಹೋಗಿ ಎಲ್ಲ ವಿಷಯವನ್ನು ತಿಳಿದುಬಿಡಬಲ್ಲೆ." ದುರ್ಗಾದಾಸನು ಇನ್ನೂ ಹೆಮ್ಮೆಯಿಂದ "ಹೇಗೆ ತಿಳಿಯುತ್ತೀಯೊ ನೋಡ್ತೀನಿ" ಎಂದು ಸವಾಲು ಹಾಕಿದ. ಗದಾಧರನು "ನೋಡುವೆಯಂತೆ" ಎಂದು ಹೇಳಿ ಅಂದು ಮನೆಗೆ ಹೋದನು.

ಒಂದು ದಿನ ಗದಾಧರನು ಯಾರಿಗೂ ತಿಳಿಸದೆ ಒಂದು ಕೊಳಕು ಸೀರೆಯನ್ನುಟ್ಟು ಒಂದು ಸಾಮಾನ್ಯ ಬೆಳ್ಳಿಯ ಬಳೆಯನ್ನು ತೊಟ್ಟು ಸೊಂಟದಲ್ಲಿ ಒಂದು ಬುಟ್ಟಿಯನ್ನಿಟ್ಟುಕೊಂಡು ನೇಯಿಗೆ ಹೆಂಗಸಿನಂತೆ ಮುಖಕ್ಕೆ ಅವಗುಂಠನ ಹಾಕಿಕೊಂಡು ಸಂಜೆ ನಸುಕಿನ ವೇಳೆಯಲ್ಲಿ ದುರ್ಗಾದಾಸನ ಮನೆಗೆ ಬಂದ. ದುರ್ಗಾದಾಸನು ಮನೆಯ ಜಗಲಿಯ ಮೇಲೆ ಕುಳಿತು ಕೆಲವರ ಹತ್ತಿರ ಮಾತನಾಡುತ್ತಿದ್ದ. ಗದಾಧರನು ತಾನು ಗ್ರಾಮಾಂತರ ದಿಂದ ನೂಲು ಮಾರಲು ಬಂದವಳೆಂದೂ ತನ್ನೊಡನೆ ಬಂದವರೆಲ್ಲ ಹೊರಟುಹೋಗಿದ್ದರಿಂದ ಇಂದು ರಾತ್ರಿ ಇಲ್ಲಿಯೇ ಉಳಿದುಕೊಳ್ಳಲು ಅವಕಾಶವೀಯಬೇಕೆಂದೂ ಕೇಳಿಕೊಂಡನು. ದುರ್ಗಾದಾಸನು ಎಲ್ಲಿಂದ ಬಂದಿರುವೆ, ಏನು ಹೆಸರು—ಇತ್ಯಾದಿ ಕೆಲವು

ಪ್ರಶ್ನೆಗಳನ್ನು ಕೇಳಿ, "ಮನೆಯ ಒಳಗೆ ಹೆಂಗಸರಿದ್ದಾರೆ, ಅವರನ್ನು ಕೇಳು," ಎಂದು ಅವನನ್ನು ಒಳಗೆ ಕಳಿಸಿದ. ಗದಾಧರ ಒಳಗೆ ಹೋಗಿ ಸ್ತ್ರೀಯರಿಗೆ ತನ್ನ ಪರಿಚಯ ಮಾಡಿಸಿ ಅವರೊಡನೆ ಮಧುರಸಲ್ಲಾಪದಲ್ಲಿ ತೊಡಗಿದನು. ಅವನ ಮಾತಿನಿಂದ ಸಂತೃಪ್ತ ರಾದ ಅವರು ಆವನಿಗೆ ಸ್ವಲ್ಪ ತಿನ್ನುವುದಕ್ಕೆ ಕೊಟ್ಟು ಅವನು ಮಲಗುವ ಜಾಗವನ್ನು ತೋರಿಸಿದರು. ಗದಾಧರನು ಈಗ ತಿಂಡಿತಿನ್ನುತ್ತ ಅಂತಃಪುರವನ್ನೆಲ್ಲ ಸೂಕ್ಷ್ಮವಾಗಿ ಪರಿಶೀಲಿಸಿದ, ಮಹಿಳೆಯರ ಚಲನವಲನಗಳನ್ನು ಸರಿಯಾಗಿ ಗಮನಿಸಿದ, ಅವರ ಮಾತು ಕತೆಗಳನ್ನು ಕಿವಿಗೊಟ್ಟು ಕೇಳಿದ. ತಾನೂ ಮಧ್ಯೆ ಮಧ್ಯೆ ಅವರ ಮಾತಿನಲ್ಲಿ ಭಾಗವಹಿಸಿದ. ಹೀಗೆಯೇ ತುಂಬಹೊತ್ತು ಕಳೆಯಿತು. ರಾತ್ರಿ ಬಹಳ ಹೊತ್ತಾದರೂ ಮಗ ಮನೆಗೆ ಬರದಿರಲು ಚಂದ್ರಾದೇವಿಯು ರಾಮೇಶ್ವರನನ್ನು ನೋಡಿಕೊಂಡು ಬರಲು ಕಳಿಸಿದಳು. ರಾಮೇಶ್ವರನು ಅಲ್ಲಿ ಇಲ್ಲಿ ವಿಚಾರಿಸುತ್ತ ಕೊನೆಗೆ ದುರ್ಗಾದಾಸನ ಮನೆಯ ಹತ್ತಿರ ಬಂದು ಅವನ ಹೆಸರು ಹಿಡಿದು ಜೋರಾಗಿ ಕರೆಯತೊಡಗಿದನು. ಒಳಗಿದ್ದ ಗದಾಧರನಿಗೆ ಇದು ಕೇಳಿಸಿತು. ಅವನು ಕೂಡಲೆ 'ಇಗೊ ಬಂದೆ' ಎಂದು ಹೇಳಿ ಹೊರಗೆ ಓಡಿ ಬಂದನು. ಆಗಲೇ ದುರ್ಗಾದಾಸ ಮತ್ತು ಅಂತಃಪುರ ಸ್ತ್ರೀಯರಿಗೆ ಅವನ ನಿಜವಾದ ಪರಿಚಯ ವಾದದ್ದು. ದುರ್ಗಾದಾಸನಿಗೆ ಮೊದಲು ಸ್ವಲ್ಪ ತನ್ನ ಅಹಂಕಾರಕ್ಕೆ ಪೆಟ್ಟುಬಿದ್ದಂತಾದರೂ ಅನಂತರ ಬಾಲಕನ ಚಮತ್ಕಾರವನ್ನು ನೆನೆದು ಸಂತೋಷಗೊಂಡನು. ಸೀತಾನಾಥ ಮುಂತಾದವರಿಗೆಲ್ಲ ಈ ವಿಷಯ ತಿಳಿದು ದುರ್ಗಾದಾಸನ ಅಹಂಕಾರ ಚೂರ್ಣವಾದುದಕ್ಕೆ ಹಿಗ್ಗಿದರು. ಇಲ್ಲಿಂದ ಮುಂದೆ ಬಾಲಕನು ಸೀತಾನಾಥನ ಮನೆಗೆ ಬಂದನೆ ದುರ್ಗಾದಾಸನ ಮನೆಯ ಮಹಿಳೆಯರೂ ಅವನನ್ನು ನೋಡಲು ಬರುತ್ತಿದ್ದರು.

11. ಸೀತಾನಾಥನ ಪರಿವಾರದವರು ಮತ್ತು ವ್ಯಾಪಾರಿಗಳ ಗಲ್ಲಿಯ ಉಳಿದ ಸ್ತ್ರೀಯರು ಗದಾಧರನನ್ನು ಬಹಳವಾಗಿ ಪ್ರೀತಿಸತೊಡಗಿದರು. ಬಾಲಕನು ಕೆಲವು ದಿನ ಅವರ ಮನೆಗೆ ಬರದಿದ್ದರೆ ಅವನಿಗೆ ಹೇಳಿಕಳಿಸುತ್ತಿದ್ದರು. ಸೀತಾನಾಥನ ಮನೆಯಲ್ಲಿ ಪಠನ ಮತ್ತು ಸಂಗೀತದ ಸಮಯದಲ್ಲಿ ಕೆಲವೊಮ್ಮೆ ಅವನಿಗೆ ಭಾವಸಮಾಧಿ ಯಾಗುತ್ತಿತ್ತು. ಇದನ್ನು ನೋಡಿದ ಅವರಿಗೆಲ್ಲ ಅವನ ಮೇಲೆ ಅಪಾರ ಭಕ್ತಿ ಉಂಟಾ ಗಿತ್ತು. ಭಾವಸಮಾಧಿಯ ಸಮಯದಲ್ಲಿ ಅವನನ್ನು ಶ್ರೀಗೌರಾಂಗ ಅಥವಾ ಶ್ರೀಕೃಷ್ಣ ಎಂದೇ ಪರಿಗಣಿಸಿ ಅವನಿಗೆ ಕೆಲವರು ಪೂಜೆಯನ್ನು ಮಾಡುತ್ತಿದ್ದರು. ಅಭಿನಯದ ಸಮಯದಲ್ಲಿ ಅವನಿಗೆ ಉಪಯುಕ್ತವಾಗಲೆಂದು ಅವರು ಒಂದು ಬಂಗಾರದ ಕೊಳಲನ್ನು ಮಾಡಿಸಿದ್ದರು ಮತ್ತು ವಿವಿಧ ಪಾತ್ರಗಳಿಗೆ ಬೇಕಾಗುವ ವಿವಿಧ ಸಲಕರಣೆಗಳನ್ನು ಅವರು ಸಿದ್ಧಪಡಿಸಿದ್ದರು.

12. ಗದಾಧರನು ತನ್ನ ಸರಳ ಮಧುರ ಸ್ವಭಾವದಿಂದ, ಸದ್ಗುಣಗಳಿಂದ ಧರ್ಮಪರಾಯಣತೆಯಿಂದ ಆ ಹಳ್ಳಿಗರ ಮೇಲೆ ಎಂಥ ಪ್ರಭಾವ ಬೀರಿದ್ದನೆಂಬುದನ್ನು ಅವರಲ್ಲಿ ಕೆಲವರ ಹೇಳಿಕೆಯಿಂದ ತಿಳಿಯಬಹುದು. ೧೮೮೩ರಲ್ಲಿ ನಾವು ಕೆಲವರು ಕಾಮಾರಪುಕುರಕ್ಕೆ ಹೋಗಿದ್ದೆವು. ಆಗ ಸೀತಾನಾಥ ಪಯಿನನ ಮಗಳು ರುಕ್ಮಿಣಿಯನ್ನು

ಭೇಟಿಯಾಗಿದ್ದೆವು ಆಕೆಗೆ ಆಗ ಸುಮಾರು ಅರವತ್ತು ವರ್ಷ. ಆಕೆ ಬಾಲಕ ಗದಾಧರನ ಬಗ್ಗೆ ಹೀಗೆ ಹೇಳುತ್ತಾಳೆ :

"ನಮ್ಮ ಮನೆ ಇಲ್ಲಿಂದ ಸ್ವಲ್ಪ ಉತ್ತರಕ್ಕೆ—ಅಲ್ಲಿ ಕಾಣುತ್ತಿದೆಯಲ್ಲ ಅದು ಈಗೆಲ್ಲ ಮನೆ ಹಾಳಾಗಿಹೋಗಿದೆ. ಕುಟುಂಬದವರೂ ಯಾರೂ ಇಲ್ಲ. ಆದರೆ ನಾನು ಹದಿನೇಳು ಹದಿನೆಂಟನೆಯ ವಯಸ್ಸಿನವಳಿರುವಾಗ ಆ ಮನೆ ದೊಡ್ಡ ಶ್ರೀಮಂತರ ಮನೆಯಂತಿತ್ತು. ನನ್ನ ತಂದೆಯ ಹೆಸರು ಸೀತಾನಾಥ ಪಾಯಿನ್. ನಮ್ಮ ದೊಡ್ಡ ಚಿಕ್ಕಪ್ಪನ ಮಕ್ಕಳೂ ಸೇರಿ ನಾವು ಹದಿನೇಳು ಹದಿನೆಂಟು ಸೋದರಿಯರಿದ್ದೆವು. ವಯಸ್ಸಿನಲ್ಲಿ ಎರಡು ಮೂರು ಅಥವಾ ನಾಲ್ಕು ವರ್ಷಗಳು ಹೆಚ್ಚುಕಡಿಮೆ ಇದ್ದರೂ ನಾವೆಲ್ಲ ಆಗ ಯುವತಿಯರು. ಗದಾಧರನು ಬಾಲ್ಯಕಾಲದಿಂದಲೂ ನಮ್ಮೊಡನೆ ಆಟ ವಾಡಿಕೊಂಡಿದ್ದ. ನಮಗೆಲ್ಲ ತುಂಬ ನಿಕಟವರ್ತಿಯಾಗಿದ್ದ. ನಾವೆಲ್ಲ ಯುವತಿಯು ರಾದರೂ ಯೌವನಕ್ಕೆ ಕಾಲಿಡುತ್ತಿದ್ದ ಅವನು ನಮ್ಮೊಡನೆ ಮುಕ್ತವಾಗಿ ಬೆರೆಯುತ್ತಿದ್ದ, ನಮ್ಮ ಮನೆಯ ಎಲ್ಲೆಲ್ಲಿಯೂ ಅವನಿಗೆ ಪ್ರವೇಶವಿತ್ತು ತಂದೆಗೆ ಅವನ ಮೇಲೆ ಅತ್ಯಂತ ಪ್ರೀತಿ, ತನ್ನ ಇಷ್ಟದೇವತೆಯ ಮೇಲಿರುವಷ್ಟು ಶ್ರದ್ಧಾಭಕ್ತಿ ಅವನ ಮೇಲಿತ್ತು. ನೆರೆಯ ಕೆಲವರು ಅವನಿಗೆ ಹೀಗೆ ಹೇಳುತ್ತಿದ್ದರು, 'ನಿನ್ನ ಮನೆಯಲ್ಲಿ ಅಷ್ಟೊಂದು ಜನ ಯುವತಿಯರಿದ್ದಾರೆ, ಗದಾಧರನಿಗೂ ಯೌವನ ಪ್ರಾಪ್ತವಾಗುತ್ತಿದೆ. ಹಾಗಿರುವಾಗ ಅವನನ್ನು ಮನೆಯ ಒಳಗೆ ಅಷ್ಟೊಂದು ಸೇರಿಸಿಕೊಳ್ಳುವುದು ಒಳ್ಳೆಯದಲ್ಲ' ಎಂದು, ನಮ್ಮ ತಂದೆ, 'ಅದಕ್ಕಾಗಿ ನೀವು ಚಿಂತಿಸಬೇಕಾಗಿಲ್ಲ. ನನಗೆ ಗದಾಧರ ಚೆನ್ನಾಗಿ ಗೊತ್ತು' ಎಂದು ಹೇಳಿ ಅವರ ಬಾಯಿ ಮುಚ್ಚಿಸುತ್ತಿದ್ದನು. ಗದಾಧರನು ಮನೆಯ ಒಳಗೆ ಬಂದು ಎಷ್ಟೊ ಪುರಾಣಕಥೆಗಳನ್ನು ಪಠಿಸುತ್ತಿದ್ದ, ಹಾಸ್ಯ ವಿನೋದಗಳ ಮೂಲಕ ನಮ್ಮನ್ನು ನಗಿಸುತ್ತಿದ್ದ. ಇವನ್ನೆಲ್ಲ ಕೇಳುತ್ತ ನಾವು ಮನೆಗೆಲಸ ಮಾಡುತ್ತಿದ್ದೆವು. ಅವನು ನಮ್ಮೊಡನಿದ್ದಾಗ ನಮಗೆಲ್ಲ ಎಂಥ ಆನಂದವಾಗುತ್ತಿತ್ತು ಎಂಬುದನ್ನು ನಾನು ವಿವರಿಸಿ ಹೇಳಲಾರೆ ! ಒಂದು ದಿನ ಅವನು ಬರದಿದ್ದರೆ ಅವನಿಗೆಲ್ಲಿ ಮೈ ಸರಿಯಿಲ್ಲವೊ ಎಂದು ಮನಸ್ಸು ಚಟಪಟಿಸುತ್ತಿತ್ತು. ಅಂದು ಏನಾದರೂ ನೆವದಿಂದ ಚಂದ್ರಾದೇವಿಯ ಹತ್ತಿರ ಹೋಗಿ ವಿಷಯ ತಿಳಿದುಕೊಂಡು ಬರುವವರೆಗೂ ನಮಗೆ ಮನಶ್ಶಾಂತಿ ಇರುತ್ತಿರ ಲಿಲ್ಲ. ಅವನ ಪ್ರತಿಯೊಂದು ಮಾತು ನಮಗೆ ಅಮೃತ ಸಮಾನವಾಗಿತ್ತು. ಅವನು ಎಂದು ನಮ್ಮ ಮನೆಗೆ ಬರುವುದಿಲ್ಲವೊ ಅಂದು ಆತನ ವಿಷಯವನ್ನೇ ಚಿಂತಿಸುತ್ತ ನಾವು ಕಾಲ ಕಳೆಯುತ್ತಿದ್ದೆವು."

13. ಕೇವಲ ಸ್ತ್ರೀಯರೊಡನೆ ಮಾತ್ರ ಅವನು ಬೆರೆಯುತ್ತಿದ್ದುದಲ್ಲ. ಅವನ ಬಹುಮುಖ ಪ್ರತಿಭೆ ಮತ್ತು ಸ್ನೇಹಮಯ ವರ್ತನೆ ಎಲ್ಲರನ್ನೂ ಆಕರ್ಷಿಸುತ್ತಿತ್ತು. ಆಬಾಲವೃದ್ಧ ಎಲ್ಲರೊಡನೆಯೂ ಅವನು ಮುಕ್ತವಾಗಿ ಬೆರೆಯುತ್ತಿದ್ದ. ಪ್ರತಿದಿನ ಸಂಜೆ ಗ್ರಾಮದ ವೃದ್ಧರು ಯುವಕರು ಎಲ್ಲೆಲ್ಲಿ ಕಲೆತು ಪುರಾಣಶ್ರವಣ, ಸಂಕೀರ್ತನೆ ಇತ್ಯಾದಿಗಳಲ್ಲಿ ಭಾಗವಹಿಸುತ್ತಿದ್ದರೂ ಅಲ್ಲೆಲ್ಲ ಗದಾಧರ ಇರುತ್ತಿದ್ದ. ಗದಾಧರ ಎಲ್ಲಿ

ಹೋದರೂ ಅಲ್ಲಿ ಆನಂದದ ಪ್ರವಾಹ ಹರಿಯುತ್ತಿತ್ತು. ಏಕೆಂದರೆ ಅವನಷ್ಟು ಸೊಗಸಾಗಿ ಭಕ್ತಿಪೂರ್ಣವಾಗಿ ಪುರಾಣಪಾಠ ಮತ್ತು ಧರ್ಮತತ್ತ್ವಗಳನ್ನು ವ್ಯಾಖ್ಯಾನ ಮಾಡು ವವರು ಯಾರೂ ಇರಲಿಲ್ಲ. ಅವನಂತೆ ಭಾವಪೂರ್ಣವಾಗಿ ಹಾಡುವವರಾಗಲಿ, ಆಶು ಕವಿತೆ ಕಟ್ಟುವವರಾಗಲಿ, ಅವನಂತೆ ನರ್ತಿಸುವವರಾಗಲಿ ಬೇರೆ ಯಾರೂ ಇರಲಿಲ್ಲ. ಅವನ ಕಂಠಶ್ರೀ ಮತ್ತಾರಿಗೂ ಇರಲಿಲ್ಲ. ಅವನಿಗಿದ್ದಂತಹ ಹಾಸ್ಯಮಯ ಪ್ರವೃತ್ತಿಯೂ ಯಾರಿಗೂ ಇರಲಿಲ್ಲ. ಹಾಸ್ಯ-ನುಡಿ, ಅನುಕರಣೆ ಇತ್ಯಾದಿಗಳ ಮೂಲಕ ಜನರನ್ನು ನಗೆ ಗಡಲಿನಲ್ಲಿ ತೇಲಿಸಿಬಿಡುತ್ತಿದ್ದ. ಪ್ರತಿದಿನ ಸಂಜೆ ಅವನ ಬರುವಿಕೆಯನ್ನೇ ಎಲ್ಲರೂ ಕಾಯುತ್ತಿರುತ್ತಿದ್ದರು. ಗದಾಧರನೂ ಒಂದೊಂದು ದಿನ ಒಂದೊಂದು ಸ್ಥಳದಲ್ಲಿ ಅವರೊಡನೆ ಸಮಭಾವದಲ್ಲಿ ಬೆರೆತು ಎಲ್ಲರನ್ನೂ ಆನಂದಿಸುತ್ತಿದ್ದನು.

ತನ್ನ ವಯಸ್ಸಿಗೆ ಮೀರಿ ಬುದ್ಧಿಶಕ್ತಿ ಗದಾಧರನಿಗೆ ಇದ್ದುದರಿಂದ ಅನೇಕರು ತಮ್ಮ ಸಾಂಸಾರಿಕ ಸಮಸ್ಯೆಗಳಿಗೂ ಆತನಿಂದ ಪರಿಹಾರ ಪಡೆಯುತ್ತಿದ್ದರು. ಧಾರ್ಮಿಕ ಮನೋಭಾವದವರು ಅವನಿಂದ ಸ್ಫೂರ್ತಿಯನ್ನು ಪಡೆದು ತಮ್ಮ ತಮ್ಮ ಮಾರ್ಗದಲ್ಲಿ ಹೆಚ್ಚು ಪ್ರಗತಿಯನ್ನು ಸಾಧಿಸುತ್ತಿದ್ದರು.* ಕೇವಲ ಕಪಟ ವ್ಯಕ್ತಿಗಳಿಗೆ ಅವನೊಡನಿರ ಲಾಗುತ್ತಿರಲಿಲ್ಲ. ಏಕೆಂದರೆ ಗದಾಧರನು ಅವರ ಅಂತರ್ಯವನ್ನು ಅರಿತು ಅವರ ಢಾಂಬಿಕತೆಯನ್ನು ಬಯಲುಮಾಡಿಬಿಡುತ್ತಿದ್ದ. ಕೆಲವೊಮ್ಮೆ ಅವರ ಢಾಂಬಿಕತೆಯನ್ನು ಅನುಕರಿಸಿ ಎಲ್ಲರನ್ನೂ ನಗಿಸುತ್ತಿದ್ದ. ಇದನ್ನು ನೋಡಿ ಅವರಿಗೆ ಕೋಪಬಂದರೂ ಎಲ್ಲರೂ ಅವನ ಪರ ಇದ್ದುದರಿಂದ ಅವರಿಗೆ ಏನೂ ಮಾಡಲಾಗುತ್ತಿರಲಿಲ್ಲ. ಕೆಲವೊಮ್ಮೆ ಅವರುಗಳು ಬಂದು ಇವನಲ್ಲಿ ಕ್ಷಮೆ ಕೋರುತ್ತಿದ್ದರು. ಗದಾಧರನಿಗೆ ಎಲ್ಲರ ಮೇಲೂ ಸಹಾನುಭೂತಿಯಿತ್ತು.

14. ಗದಾಧರನಿಗೆ ಹದಿನಾಲ್ಕು ವರ್ಷ ತುಂಬುತ್ತಿದ್ದಂತೆಯೇ ಅವನ ಭಕ್ತಿ ಮತ್ತು ಭಾವುಕತೆ ಎಷ್ಟೊಂದು ತೀವ್ರವಾಯಿತೆಂದರೆ ಪಾಠಶಾಲೆಯ ವಿದ್ಯೆ ಸಂಪೂರ್ಣ ನಿಷ್ಪ್ರಯೋಜಕ ಎಂದು ಅವನಿಗೆ ದೃಢವಾಯಿತು. ತನ್ನ ಆದರ್ಶವೇ ಬೇರೆ. ಧರ್ಮದ ಸಾಕ್ಷಾತ್ಕಾರಕ್ಕಾಗಿ ತನ್ನ ಸರ್ವಶಕ್ತಿಯನ್ನೂ ವಿನಿಯೋಗಿಸಬೇಕು ಎಂದೆನಿಸಿತು ಅವನಿಗೆ. ಈ ವಿಷಯವು ಅಸ್ಪಷ್ಟವಾಗಿ ಅವನಿಗೆ ತೋರುತ್ತಿದ್ದು ಅದಿನ್ನೂ ಪೂರ್ಣರೂಪದಲ್ಲಿ ಮೂರ್ತಿವೆತ್ತಿರಲಿಲ್ಲ. ಆದರೆ ತನ್ನ ಭವಿಷ್ಯತ್ ಜೀವನ ಹೇಗಿರಬೇಕು ಎಂಬ ಪ್ರಶ್ನೆ ಅವನ ಮನಸ್ಸಿಗೆ ಬಂದಾಗಲೆಲ್ಲ ಅವನ ಮನಃಪಟಲದಲ್ಲಿ ಎದ್ದು ಕಾಣುತ್ತಿದ್ದ ಚಿತ್ರಗಳು ಯಾವುವೆಂದರೆ—ಕಾವಿ ಬಟ್ಟೆ, ಪವಿತ್ರ ಅಗ್ನಿ, ಭಿಕ್ಷಾನ್ನ, ಮತ್ತು ನಿಃಸಂಗ ಪರಿವ್ರಾಜಕ ಜೀವನ. ಪ್ರೇಮಪೂರ್ಣಹೃದಯನಾದ ಅವನಿಗೆ ತತ್‌ಕ್ಷಣ ತಾಯಿಯ ಮತ್ತು ಬಡ ಸಂಸಾರದ ಸ್ಮರಣೆಯುಂಟಾಗಿ ಆ ಜೀವನ ಬೇಡ, ತಂದೆಯಂತೆ ಸಂಸಾರದಲ್ಲಿದ್ದು ಉಳಿದವ

---

*ಶ್ರೀನಿವಾಸ ಶಾಂಖಾರಿ ಮುಂತಾದ ಕೆಲವರು ಈ ಸಂದರ್ಭದಲ್ಲಿಯೇ ಗದಾಧರನನ್ನು ಭಗವದವತಾರವೆಂದು ಪೂಜಿಸುತ್ತಿದ್ದರು.

ರಿಗೆ ಸಹಾಯ ಮಾಡಬೇಕು ಎಂದೆನಿಸುತ್ತಿತ್ತು. ಬುದ್ಧಿ ಹೃದಯಗಳೆರಡು ಅವನನ್ನು ಬೇರೆ ಬೇರೆ ದಿಕ್ಕುಗಳಿಗೆ ಸೆಳೆಯುತ್ತಿರಲು ಭಗವಂತನ ಇಚ್ಛೆಯಂತಾಗಲಿ ಎಂದು ಅವನ ಆದೇಶವನ್ನು ನಿರೀಕ್ಷಿಸುತ್ತಿದ್ದನು. ಏಕೆಂದರೆ ಅವನು ಭಗವಂತನನ್ನೇ ಪ್ರತಿಯೊಂದು ವಿಷಯದಲ್ಲೂ ನೆಚ್ಚಿದ್ದ. ಅವನೇ ತನ್ನ ಪ್ರಶ್ನೆಯನ್ನು ಬಗೆಹರಿಸುತ್ತಾನೆಂದು ಅವನು ಶಾಂತಚಿತ್ತನಾಗಿದ್ದ. ಬುದ್ಧಿ ಹಾಗೂ ಹೃದಯಗಳಲ್ಲಿ ದ್ವಂದ್ವವುಂಟಾದಾಗ ಅವನು ಯಾವಾಗಲೂ ತನ್ನ ಪರಿಶುದ್ಧ ಹೃದಯದ ಕರೆಗೆ ಓಗೊಟ್ಟಿದ್ದ. ಅದರ ಪ್ರೇರಣೆಗನು ಸಾರವಾಗಿಯೇ ಎಲ್ಲ ಕೆಲಸವನ್ನು ನಿರ್ವಹಿಸುತ್ತಿದ್ದ.

15. ಅವನಲ್ಲಿದ್ದ ಅಪೂರ್ವ ಸಹಾನುಭೂತಿ ಅವನ ಮನಸ್ಸನ್ನು ಇನ್ನೊಂದು ವಿಷಯದೆಡೆಗೆ ಹರಿಸಿತು. ಪುರಾಣಪಾಠ ಸಂಕೀರ್ತನಾದಿಗಳ ಮೂಲಕ ಹಳ್ಳಿಯ ಜನರೆಲ್ಲರೊಡನೆ ಅವನು ಒಂದು ಗಾಢ ಸಂಬಂಧವನ್ನು ಬೆಳೆಸಿದ್ದನು. ಅವರೆಲ್ಲ ತನ್ನವರೇ ಆಗಿದ್ದರು. ಅವರ ಸುಖದುಃಖಗಳೂ ತನ್ನವೆಂದು ಅವನಿಗೆ ಅನುಭವ ವಾಗುತ್ತಿತ್ತು. ಅವನ ವೈಚಾರಿಕ ಬುದ್ಧಿ ಸಂಸಾರ ತ್ಯಾಗಕ್ಕೆ ಅವನನ್ನು ಪ್ರೇರೇಪಿಸು ತ್ತಿದ್ದರೆ ಅದೇ ಸಂದರ್ಭದಲ್ಲಿ ಹಳ್ಳಿಯ ನರನಾರಿಯರ ಸರಳ ಪ್ರೇಮಪೂರ್ಣ ವ್ಯವ ಹಾರ, ಅವರಿಗೆ ಅವನ ಮೇಲಿದ್ದ ಶ್ರದ್ಧಾಭಕ್ತಿ—ಇವು ಅವನ ಹೃದಯವನ್ನು ಸೆಳೆಯು ತ್ತಿದ್ದುವು. ತನ್ನ ಜೀವನವನ್ನು ಯಾವ ರೀತಿ ರೂಪಿಸಿಕೊಳ್ಳಬೇಕೆಂದರೆ ತನ್ನ ಪ್ರಭಾವ ದಿಂದ ಅವರೆಲ್ಲರ ಜೀವನ ಕೃತಾರ್ಥವಾಗಬೇಕು ಮತ್ತು ತನ್ನ ಹಾಗೂ ಅವರ ಈಗಿನ ಸಂಬಂಧ ಇನ್ನೂ ಆಳವಾಗಬೇಕು—ಎಂದು ಅವನಿಗನಿಸುತ್ತಿತ್ತು. ಅವನ ನಿಃಸ್ವಾರ್ಥ ಹೃದಯ ಅವನಿಗೆ ಬಾರಿ ಬಾರಿ ಹೇಳುತ್ತಿತ್ತು: "ನಿನಗಾಗಿ ಸಂಸಾರ ತ್ಯಾಗ ಮಾಡುವುದು ಸ್ವಾರ್ಥಪರತೆ. ಇವರೆಲ್ಲ ಯಾವುದರಿಂದ ಉಪಕೃತರಾಗುತ್ತಾರೊ ಅಂತಹದೇನ ನ್ನಾದರೂ ಮಾಡು."

16. ಈಗ ಅವನ ಹೃದಯ ಬುದ್ಧಿ ಎಲ್ಲ ಉಚ್ಚ ಉದಾತ್ತ ಆದರ್ಶದೆಡೆಗೆ ಅವನನ್ನು ಸೆಳೆಯುತ್ತಿತ್ತು. ತನ್ನ ಗೆಳೆಯರು ತನ್ನ ಸಂಗದಿಂದ ವಂಚಿತರಾಗಬಾರ ದೆಂದು ಅವನು ಈಗಲೂ ಪಾಠಶಾಲೆಗೆ ಹೋಗುತ್ತಿದ್ದ. ಗಯಾವಿಷ್ಣು ಮತ್ತು ಇನ್ನು ಕೆಲವರಿಗೆ ಅವನು ಪ್ರಾಣಸ್ನೇಹಿತನಾಗಿದ್ದ. ತನ್ನ ಅಸಾಧಾರಣ ಬುದ್ಧಿ ಮತ್ತು ಸಾಹಸದಿಂದಾಗಿ ಆ ಗೆಳೆಯರ ಗುಂಪಿಗೆ ಅವನು ನಾಯಕನಾಗಿದ್ದ. ಆ ಸಂದರ್ಭದಲ್ಲಿ ನಡೆದ ಒಂದು ಘಟನೆ ಅವನು ವಿದ್ಯಾಭ್ಯಾಸವನ್ನು ನಿಲ್ಲಿಸಿಬಿಡಲು ಸಹಾಯಕ ವಾಯಿತು. ಅವನ ಗೆಳೆಯರೆಲ್ಲ ಸೇರಿಕೊಂಡು ಒಂದು ಜಾತ್ರೆಯ ದಳವನ್ನು ಪ್ರಾರಂಭಿಸ ಬೇಕೆಂದು ನಿರ್ಧರಿಸಿದರು. ಗದಾಧರನು ಅಭಿನಯ ಪಟುವಾದ್ದರಿಂದ ನಿರ್ದೇಶನದ ಕೆಲಸವನ್ನು ತಾನು ವಹಿಸಿಕೊಳ್ಳಬೇಕೆಂದು ಅವರೆಲ್ಲ ಅವನನ್ನು ಒತ್ತಾಯಿಸಿದರು. ಗದಾಧರನೂ ಅದಕ್ಕೆ ಒಪ್ಪಿದ. ವಿರೋಧಿಗಳಿಗೆ ಇದು ತಿಳಿದರೆ ಅವರು ಅಡ್ಡಿಯುಂಟು ಮಾಡುತ್ತಾರೆಂದು ಭಾವಿಸಿ ಒಂದು ರಹಸ್ಯ ಜಾಗದಲ್ಲಿ ನಿರ್ದೇಶನ ನಡೆಯಬೇಕೆಂದು ನಿರ್ಧರಿಸಿದರು. ಮಾಣಿಕರಾಜನ ಮಾವಿನ ತೋಪನ್ನು ಇದಕ್ಕಾಗಿ ಆರಿಸಿಕೊಂಡರು.

ಪ್ರತಿದಿನ ಶಾಲೆಗೆ ಚಕ್ಕರ್ ಹೊಡೆದು ಇಲ್ಲಿಗೆ ಬಂದು ಅಭಿನಯವನ್ನು ಅಭ್ಯಾಸಮಾಡು ವುದೆಂದು ತೀರ್ಮಾನಿಸಿದರು.

ಹೀಗೆ ಅವರ ನಾಟಕಾಭ್ಯಾಸ ಪ್ರಾರಂಭವಾಯಿತು. ಗದಾಧರನ ದಕ್ಷ ನಿರ್ದೇಶನ ದಲ್ಲಿ ಅವರೆಲ್ಲ ತಮ್ಮ ಪಾತ್ರಗಳಲ್ಲಿ ಪರಿಣತರಾಗಿ ಶ್ರೀರಾಮ ಶ್ರೀಕೃಷ್ಣರ ಕಥೆಗಳನ್ನು ಅವಲಂಬಿಸಿದ ನಾಟಕಗಳನ್ನು ಆಡತೊಡಗಿದರು. ಇವೆಲ್ಲದರಲ್ಲೂ ಗದಾಧರನದೇ ಪ್ರಧಾನ ಪಾತ್ರ ಎಂಬುದನ್ನು ಪ್ರತ್ಯೇಕ ಹೇಳಬೇಕಾಗಿಯೆ ಇಲ್ಲ. ಮಾವಿನ ತೋಪಿನಲ್ಲಿ ಅಭಿನಯಿಸುತ್ತಿರುವಾಗಲೂ ಕೆಲವೊಮ್ಮೆ ಅವನಿಗೆ ಭಾವಸಮಾಧಿಯಾಗುತ್ತಿತ್ತು.

17. ಸಂಗೀತ ನಾಟಕಾದಿಗಳಲ್ಲಿ ಗದಾಧರನು ಮನಸ್ಸುಹರಿಸಿದ್ದರಿಂದ ಚಿತ್ರಕಲೆ ಯಲ್ಲಿ ಅವನು ಮುಂದುವರಿಯಲಾಗಲಿಲ್ಲ. ಆದರೂ ಅವನು ಚಿತ್ರ ಬರೆಯುವುದನ್ನು ಸಂಪೂರ್ಣ ನಿಲ್ಲಿಸಿರಲಿಲ್ಲ. ಈ ಸಮಯದಲ್ಲಿ ಅವನೊಂದುಬಾರಿ ಗೌರಹಾಟಿ ಗ್ರಾಮದ ತನ್ನ ಸೋದರಿ ಸರ್ವಮಂಗಳೆಯ ಮನೆಗೆ ಹೋಗಿದ್ದ. ಮನೆಯ ಒಳಗೆ ಪ್ರವೇಶಿಸು ತ್ತಿದ್ದಂತೆಯೆ ಅವನಿಗೊಂದು ದೃಶ್ಯ ಕಾಣಿಸಿತು. ಅವನ ಸಹೋದರಿ ಪ್ರಸನ್ನವದನಳಾಗಿ ತನ್ನ ಪತಿಯ ಸೇವೆ ಮಾಡುತ್ತಿರುವುದು ಅವನ ಮನಸ್ಸಿನ ಮೇಲೆ ಅಚ್ಚೊತ್ತಿತು. ಕೆಲವು ದಿನಗಳ ನಂತರ ಅದೇ ದೃಶ್ಯದ ಚಿತ್ರಬಿಡಿಸಿದ. ಆ ಚಿತ್ರದ ಸಾದೃಶ್ಯವನ್ನು ಕಂಡು ಎಲ್ಲರೂ ಬೆರಗಾಗಿದ್ದರು.

ಆದರೆ ಮೂರ್ತಿ ಮಾಡುವುದರಲ್ಲಿ ಅವನು ಸಾಕಷ್ಟು ಪಳಗಿದ್ದ. ಕಾರಣ ಅವನ ಧರ್ಮಪ್ರವೃತ್ತಿಗೆ ಅದು ಪೂರಕವಾಗಿತ್ತು. ಅನೇಕ ದೇವದೇವಿಯರ ಮೂರ್ತಿಯನ್ನು ತಯಾರಿಸಿ ತನ್ನ ಗೆಳೆಯರೊಡನೆ ಪೂಜೆಯಲ್ಲಿ ತಲ್ಲೀನನಾಗುತ್ತಿದ್ದ.

18. ಪಾಠಶಾಲೆಗೆ ಹೋಗುವುದನ್ನು ನಿಲ್ಲಿಸಿದ ಗದಾಧರನು, ಮೇಲೆ ಹೇಳಿದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮತ್ತು ಮನೆಯಲ್ಲಿ ಚಂದ್ರಾದೇವಿಗೆ ಸಹಾಯ ಮಾಡು ವುದರಲ್ಲಿ ತನ್ನ ಹೆಚ್ಚಿನ ಸಮಯವನ್ನು ಕಳೆಯುತ್ತಿದ್ದ. ಈಗ ಶಿಶು ಅಕ್ಷಯ ಅವನ ಪ್ರೀತಿಗೆ ಪಾತ್ರನಾದ. ಚಂದ್ರಾದೇವಿಗೆ ಸಹಾಯ ಮಾಡುವಾಗ ಅವನು ಶಿಶುವನ್ನು ಎತ್ತಿಕೊಳ್ಳುವುದು, ಆಟ ಆಡಿಸುವುದು ಮಾಡುತ್ತಿದ್ದ. ಹೀಗೆ ಮೂರು ವರ್ಷಗಳು ಕಳೆದು ಗದಾಧರನು ಹದಿನೇಳನೇ ವರ್ಷಕ್ಕೆ ಕಾಲಿಟ್ಟನು. ಇತ್ತ ರಾಮಕುಮಾರನ ಸಂಸ್ಕೃತ ಶಾಲೆ ಊರ್ಜಿತಗೊಳ್ಳತೊಡಗಿ, ಹೆಚ್ಚು ವಿದ್ಯಾರ್ಥಿಗಳು ಬರುತ್ತಿದ್ದುದರಿಂದ ಸಾಕಷ್ಟು ವರಮಾನ ದೊರೆಯುತ್ತಿತ್ತು.

ರಾಮಕುಮಾರನು ಹೆಚ್ಚಿನ ಸಮಯವನ್ನು ಕಲಕತ್ತೆಯಲ್ಲಿ ಕಳೆಯುತ್ತಿದ್ದರೂ ವರ್ಷದಲ್ಲಿ ಸ್ವಲ್ಪಕಾಲ ಕಾಮಾರಪುಕುರಕ್ಕೆ ಬಂದು ತಾಯಿ ಮತ್ತು ಸೋದರರ ಯೋಗ ಕ್ಷೇಮವನ್ನು ನೋಡಿಕೊಂಡು ಹೋಗುತ್ತಿದ್ದನು. ವಿದ್ಯಾಭ್ಯಾಸದಲ್ಲಿ ಗದಾಧರನ ಔದಾಸೀನ್ಯವನ್ನು ಕಂಡು ಅವನು ಚಿಂತಿತನಾದನು. ಅವನು ಹೇಗೆ ಕಾಲಕಳೆಯುತ್ತಿರುವ ನೆಂಬುದನ್ನೆಲ್ಲ ವಿಚಾರಿಸಿ ತಿಳಿದುಕೊಂಡು ತನ್ನ ತಾಯಿ ಮತ್ತು ಸಹೋದರ ರಾಮೇಶ್ವರ ಇವರೊಡನೆ ಪರಾಮರ್ಶಿಸಿ ಗದಾಧರನನ್ನು ತನ್ನೊಟ್ಟಿಗೆ ಕಲಕತ್ತೆಗೆ ಕರೆದುಕೊಂಡು

ಹೋಗುವುದೆಂದು ನಿರ್ಣಯಿಸಿದ. ವಿದ್ಯಾರ್ಥಿಗಳ ಸಂಖ್ಯೆ ವೃದ್ಧಿಯಾಗಿದ್ದರಿಂದ ಸಂಸ್ಕೃತ ಶಾಲೆಯ ಕೆಲಸವೂ ಜಾಸ್ತಿಯಾಗಿತ್ತು. ಇದಕ್ಕಾಗಿ ಇನ್ನೊಬ್ಬ ವ್ಯಕ್ತಿಯ ಸಹಾಯ ಅವನಿಗೆ ಬೇಕಿತ್ತು. ಈಗ ಗದಾಧರ ಅವನೊಡನಿದ್ದರೆ ಅವನಿಗೂ ಸಹಾಯ ವಾಗುವುದು, ಹಾಗೂ ಗದಾಧರನೂ ಉಳಿದ ವಿದ್ಯಾರ್ಥಿಗಳೊಡನೆ ವಿದ್ಯಾಭ್ಯಾಸ ಮಾಡಬಹುದು. ಗದಾಧರನಿಗೆ ಈ ವಿಷಯ ತಿಳಿಸಿದಾಗ ಅವನು ಕೂಡಲೆ ಕಲಕತ್ತೆಗೆ ಹೋಗಲು ಸಮ್ಮತಿಸಿದ—ಪಿತೃಸಮಾನನಾದ ಅಣ್ಣನಿಗೆ ಸಹಾಯ ಮಾಡುವುದು ಅವನಿಗೆ ಸಂತೋಷದ ವಿಷಯವಾಗಿತ್ತು. ಅನಂತರ ಒಂದು ಶುಭದಿನದಲ್ಲಿ ರಾಮ ಕುಮಾರ ಗದಾಧರರು ಶ್ರೀ ರಘುವೀರನಿಗೆ ವಂದಿಸಿ, ತಾಯಿ ಚಂದ್ರಾದೇವಿಯ ಪಾದ ಧೂಳಿಯನ್ನು ಸ್ವೀಕರಿಸಿ ಕಲಕತ್ತಾಭಿಮುಖವಾಗಿ ಪ್ರಯಾಣ ಬೆಳಸಿದರು. ಕಾಮಾರ ಪುಕುರದಲ್ಲಿ ಮೊದಲಿನ ಆನಂದ ಸಂಭ್ರಮ ಇನ್ನಿಲ್ಲವಾಯಿತು. ಗದಾಧರನಲ್ಲಿ ಅನುರಕ್ತ ರಾಗಿದ್ದ ಚಂದ್ರಾದೇವಿ ಮತ್ತಿತರರು ಅವನ ಮಧುರ ಸ್ಮೃತಿಯಲ್ಲಿ ಮತ್ತು ಅವನ ಮುಂದಿನ ಉಜ್ವಲ ಭವಿಷ್ಯ ಚಿಂತನೆಯಲ್ಲಿ ಕಾಲಕಳೆಯುತ್ತಿದ್ದರು.

ಎರಡನೆಯ ಭಾಗ

ಸಾಧಕಭಾವ

ಪೀಠಿಕೆ

ಸಾಧಕಭಾವ ವಿಮರ್ಶೆಯ ಪ್ರಯೋಜನ

1. ಅವತಾರಪುರುಷರ ಸಾಧನೆಯ ವಿಷಯ ದೊರೆಯುವುದಿಲ್ಲ 2. ಅವರ ಅಪರಿಪೂರ್ಣತೆಯನ್ನು ಚಿಂತಿಸಲು ಭಕ್ತರು ಇಷ್ಟಪಡುವುದಿಲ್ಲ 3. ಇದರಿಂದ ಭಕ್ತಿ ಕುಂಠಿತವಾಗುವುದೆಂಬ ಭಯ 4. ಈ ವಿಷಯದಲ್ಲಿ ಶ್ರೀರಾಮಕೃಷ್ಣರ ಉಪದೇಶ 5. ಯಾರ ಭಾವವನ್ನೂ ನಷ್ಟಗೊಳಿಸಬಾರದು—ಒಂದು ಘಟನೆ 6. ನರಲೀಲೆಯಲ್ಲಿ ಎಲ್ಲ ಕಾರ್ಯಗಳು ಸಾಧಾರಣ ಮಾನವರಂತೆಯೇ ಇರುತ್ತವೆ 7. ಅದೃಷ್ಟ ಮತ್ತು ಸ್ವಪ್ರಯತ್ನ—ಈ ಬಗ್ಗೆ ಶ್ರೀರಾಮಕೃಷ್ಣರು 8. ಈ ವಿಷಯದಲ್ಲಿ ವಿಷ್ಣು ನಾರದರ ಸಂವಾದ 9 ಮಾನವ ಅಪರಿಪೂರ್ಣತೆಯನ್ನು ಸ್ವೀಕರಿಸಿ ಅವತಾರ ಪುರುಷರು ಮುಕ್ತಿಮಾರ್ಗವನ್ನು ಕಂಡುಹಿಡಿಯುತ್ತಾರೆ 10. ಅವರನ್ನು ಮಾನವರೆಂದು ಭಾವಿಸದಿದ್ದರೆ ಅವರ ಜೀವನಕ್ರಿಯೆಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟ 11. ಬದ್ಧಮಾನವನು ಮಾನವಭಾವದಲ್ಲಿಯೇ ಅರ್ಥಮಾಡಿಕೊಳ್ಳಬಲ್ಲ 12. ಅದಕ್ಕಾಗಿಯೇ ಕರುಣೆಯಿಂದ ಭಗವಂತನು ಅವತರಿಸುತ್ತಾನೆ

1. ಜಗತ್ತಿನ ಆಧ್ಯಾತ್ಮಿಕ ಇತಿಹಾಸವನ್ನು ಪರಿಶೀಲಿಸಿದಾಗ ಬುದ್ಧ ಮತ್ತು ಚೈತನ್ಯ ಇವರಿಬ್ಬರನ್ನು ಬಿಟ್ಟರೆ ಉಳಿದ ಅವತಾರ ಪುರುಷರ ಆಧ್ಯಾತ್ಮಿಕ ಸಾಧನೆಯ ಬಗ್ಗೆ ನಮಗೆ ವಿಶೇಷ ಮಾಹಿತಿ ಸಿಕ್ಕುವುದಿಲ್ಲ. ಅವರು ಎಂಥ ವ್ಯಾಕುಲತೆಯಿಂದ ಉತ್ಸಾಹದಿಂದ ಸತ್ಯಲಾಭಕ್ಕಾಗಿ ಹೋರಾಡಿದರು, ಎಂಥೆಂಥ ಕಷ್ಟಗಳನ್ನು ಅನುಭವಿಸಿದರು, ಯಾವ ರೀತಿಯ ಹೃದ್ವೇದನೆಯನ್ನು ಅನುಭವಿಸಿದರು, ಹೇಗೆ ಅವರು ತಮ್ಮ ಲಕ್ಷ್ಯವನ್ನು ಮರೆಯದೆ ಮುನ್ನಡೆದರು—ಈ ವಿವರಗಳೆಲ್ಲ ನಮಗೆ ದೊರೆಯುವುದಿಲ್ಲ. ಅವರು ಉತ್ತರ ಜೀವನದಲ್ಲಿ ಎಸಗಿದ ಅದ್ಭುತ ಕಾರ್ಯಗಳಿಗೂ ಮತ್ತು ಪೂರ್ವ ಜೀವನದ ಕಾರ್ಯಕಲಾಪಗಳಿಗೂ ಒಂದು ಕಾರ್ಯಕಾರಣ ಸಂಬಂಧವನ್ನು ಕಾಣಲಾಗುವುದಿಲ್ಲ. ಇದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದು.

2. ಬೃಂದಾವನದ ಗೋಪಾಲಕನಾದ ಶ್ರೀಕೃಷ್ಣನು ಧರ್ಮಪ್ರತಿಷ್ಠಾಪಕನಾದ ದ್ವಾರಕಾನಾಥ ಶ್ರೀಕೃಷ್ಣನಾಗಿ ಪರಿವರ್ತಿತವಾದುದು ಹೇಗೆಂಬುದು ತಿಳಿದುಬರುವುದಿಲ್ಲ; ಯೇಸುಕ್ರಿಸ್ತನು ಧರ್ಮಪ್ರಚಾರಕನಾಗಿ ಪ್ರಸಿದ್ಧಿಗೆ ಬಂದದ್ದು ಮೂವತ್ತನೇ ವಯಸ್ಸಿನಲ್ಲಿ. ಅದಕ್ಕೆ ಮುಂಚೆ ಏನು ಸಾಧನೆ ಮಾಡಿದ ಎಂಬುದು ನಮಗೆ ತಿಳಿಯದು. ಶಂಕರಾಚಾರ್ಯರ ದಿಗ್ವಿಜಯದ ಕಥೆಯೇ ವಿಸ್ತಾರವಾಗಿ ಹೇಳಲ್ಪಟ್ಟಿದೆ. ಬೇರೆಯವರ ವಿಚಾರವೂ ಹೀಗೆಯೇ. ಇದಕ್ಕೆ ಕಾರಣ ಕಂಡುಹಿಡಿಯುವುದು ಕಷ್ಟ. ಭಕ್ತರ ಭಕ್ತಿಯ

ಅತಿಶಯತೆಯಿಂದಾಗಿ ಈ ವಿಷಯ ದಾಖಲಾಗಿಲ್ಲವೆಂದು ತೋರುತ್ತದೆ. ದೇವತಾ ಪುರುಷರಲ್ಲಿ ಮಾನವ ಸಹಜ ಅಪರಿಪೂರ್ಣತೆಗಳನ್ನು ಆರೋಪಿಸುವುದು ಉಚಿತವಲ್ಲ ವೆಂದು ಬಗೆದು ಈ ವಿಷಯವನ್ನು ಜನರಿಂದ ಮರೆಮಾಚಿರಬೇಕು. ಅಥವಾ ಈ ಮಹಾ ಪುರುಷರ ಮಹತ್ ಕಾರ್ಯಗಳನ್ನೂ, ಅವರ ಉದಾತ್ತ ಜೀವನವನ್ನೂ ಮತ್ತು ಅವರ ಆದರ್ಶ ವಿಚಾರಗಳನ್ನೂ, ಜನರ ಮುಂದಿಟ್ಟರೆ ಅದರಿಂದ ಅವರಿಗೆ ಆಗುವಷ್ಟು ಪ್ರಯೋಜನ ಆ ಮಹಾಪುರುಷರು ಆ ಸ್ಥಿತಿಯನ್ನು ಮುಟ್ಟಲು ಮಾಡಿದ ಅಸಾಧಾರಣ ಸಾಧನೆಯ ವಿವರಣೆಯಿಂದ ಆಗಲಾರದೆಂದು ಆ ಭಕ್ತರುಗಳು ಭಾವಿಸಿರಬೇಕು.

3. ಭಕ್ತನಿಗೆ ತನ್ನ ಆರಾಧ್ಯ ದೇವತೆ ಪರಿಪೂರ್ಣ ವ್ಯಕ್ತಿ. ನರಶರೀರಧಾರಣೆ ಮಾಡಿದ್ದರೂ ಮಾನವ ಸಹಜ ದುರ್ಬಲತೆ, ಅಪರಿಪೂರ್ಣತೆಗಳು ಅವನಲ್ಲಿಯೂ ಇದ್ದವು ಎಂಬುದನ್ನು ಅವನ ಮನಸ್ಸು ಒಪ್ಪದು. ಬಾಲಗೋಪಾಲನ ಬಾಯಲ್ಲಿ ಬ್ರಹ್ಮಾಂಡವನ್ನೇ ಕಾಣುವುದು ಅವರಿಗೆ ಇಷ್ಟ. ಬಾಲಕನ ಅಸಂಬದ್ಧ ಚಟುವಟಿಕೆ ಯಲ್ಲಿ ಪ್ರೌಢ ವ್ಯಕ್ತಿಯ ಬುದ್ಧಿ, ದೂರದೃಷ್ಟಿಯನ್ನು ಮಾತ್ರ ಕಾಣುವುದಲ್ಲದೆ ಸರ್ವಜ್ಞತೆ, ಸರ್ವಶಕ್ತಿತ್ವ ಸಾರ್ವತ್ರಿಕ ಪ್ರೇಮ—ಇವುಗಳನ್ನು ಕಾಣಲು ಬಯಸುತ್ತಾರೆ ಭಕ್ತರು. ಆದ್ದರಿಂದ, ತಮ್ಮ ಈಶ್ವರೀಯ ಸ್ವರೂಪವನ್ನು ಸಾಧಾರಣ ಜನರು ಗ್ರಹಿಸ ಬಾರದೆಂದು ಅವತಾರ ಪುರುಷರು, ಸಾಧನೆಯೇ ಮುಂತಾದ ಮಾನಸಿಕ ಕ್ರಿಯೆಗಳ ಹಾಗೂ ಆಹಾರ, ನಿದ್ರೆ, ದಣಿವು, ವ್ಯಾಧಿ ಮುಂತಾದ ಶಾರೀರಿಕ ಅವಸ್ಥೆಗಳ ಸೋಗು ಹಾಕಿಕೊಳ್ಳುತ್ತಾರೆ —ಎಂದು ಭಕ್ತರು ಭಾವಿಸುವುದರಲ್ಲಿ ಆಶ್ಚರ್ಯವಿಲ್ಲ. ನಮ್ಮ ಕಾಲ ದಲ್ಲಿಯೇ ಅನೇಕ ಭಕ್ತರು ಶ್ರೀರಾಮಕೃಷ್ಣರ ವ್ಯಾಧಿಯನ್ನು ಕೇವಲ ತೋರಿಕೆ ಎಂದು ಭಾವಿಸಿರುವುದನ್ನು ನಾವು ನೋಡಿರುವೆವು.

ತನ್ನ ದುರ್ಬಲತೆಯಿಂದಾಗಿಯೇ ಭಕ್ತ ಈ ರೀತಿ ಭಾವಿಸುತ್ತಾನೆನಿಸುತ್ತದೆ. ತನ್ನ ಭಕ್ತಿಗೆ ಹಾನಿಯುಂಟಾಗಬಾರದೆಂದು ಮಾನವಸಹಜ ಕ್ರಿಯೆ ಉದ್ದೇಶಗಳನ್ನು ಅವತಾರಪುರುಷರ ಮೇಲೆ ಆರೋಪಿಸುವುದಕ್ಕೆ ಅವನು ಒಪ್ಪುವುದಿಲ್ಲ. ಭಕ್ತಿಯ ಅಪರಿಪಕ್ವತೆ ಇದಕ್ಕೆ ಕಾರಣ. ಭಕ್ತಿಯ ಪ್ರಾಥಮಿಕ ಅವಸ್ಥೆಯಲ್ಲಿ ಭಕ್ತ ಭಗವಂತನ ಐಶ್ವರ್ಯವನ್ನು ಹೆಚ್ಚು ಚಿಂತಿಸುವುದು. ಇದರ ಹೊರತಾಗಿ ಭಗವಂತನನ್ನು ಅವನು ಚಿಂತಿಸಲಾರ. ಭಕ್ತಿ ಪಕ್ವಗೊಂಡಾಗ, ಭಗವತ್ ಪ್ರೀತಿ ಆಳವಾದಾಗ ಈ ರೀತಿ ಐಶ್ವರ್ಯ ಭಾವನೆಗಳು ಭಕ್ತಿಯ ಪ್ರವಾಹಕ್ಕೆ ತಡೆಯಾಗುವುವು. ಆಗ ಅವನು ಅವು ಗಳನ್ನು ದೂರವಿರಿಸುತ್ತಾನೆ. ಭಕ್ತಿಶಾಸ್ತ್ರದಲ್ಲಿ ನಾವಿದನ್ನು ಕಾಣಬಹುದು. ಯಶೋದೆಗೆ ಶ್ರೀಕೃಷ್ಣನ ದಿವ್ಯ ವಿಭೂತಿಯ ಪರಿಚಯವಿದ್ದರೂ ಅವನನ್ನು ತನ್ನ ಮಗುವೆಂದೇ ಪರಿ ಗಣಿಸಿ ಲಾಲಿಸುವುದು, ಕೆಲವೊಮ್ಮೆ ಹೊಡೆಯುವುದು ಮಾಡುತ್ತಿದ್ದಳು. ಗೋಪಿ ಯರಿಗೆ ಶ್ರೀಕೃಷ್ಣನು ಜಗತ್ಕಾರಣ ಎಂಬ ಅರಿವಿದ್ದರೂ ಅವನನ್ನು ಕಾಂತಭಾವದಲ್ಲಿಯೇ ನೋಡಲು ಬಯಸುತ್ತಿದ್ದರು. ಹೀಗೆ ಎಷ್ಟೋ ಉದಾಹರಣೆಗಳನ್ನು ಕೊಡಬಹುದು.

4. ತಮ್ಮ ಭಕ್ತರಲ್ಲಿ ಯಾರಾದರೂ ಭಗವಂತನ ವಿಶೇಷ—ಶಕ್ತಿಯ ಸಾಕ್ಷಾತ್ಕಾರ

ವನ್ನು ಬಯಸಿದರೆ ಶ್ರೀರಾಮಕೃಷ್ಣರು ಅವರಿಗೆ ಹೇಳುತ್ತಿದ್ದರು : "ಅಂಥ ದರ್ಶನ ವನ್ನು ಬಯಸುವುದು ಒಳ್ಳೆಯದಲ್ಲ. ಐಶ್ವರ್ಯವನ್ನು ನೋಡಿದರೆ ಭಯವುಂಟಾಗುತ್ತದೆ. ಭಗವಂತನನ್ನು ಪ್ರೀತಿಸಬೇಕಾದರೆ 'ನಾನು–ನೀನು ಭಾವ' ಬೇಕಾಗುತ್ತದೆ. ಆದರೆ ವಿಭೂತಿಯ ದರ್ಶನದಿಂದ ಅದು ಆಗ ಉಳಿಯುವುದಿಲ್ಲ" ಆ ರೀತಿ ದರ್ಶನ ನೀಡುವಷ್ಟು ಕೃಪೆ ನಮ್ಮ ಮೇಲೆ ಅವರಿಗಿಲ್ಲದುದರಿಂದಲೇ ಶ್ರೀರಾಮಕೃಷ್ಣರು ಈ ರೀತಿ ಸಮಾಧಾನ ಮಾಡುತ್ತಿದ್ದರೆಂದು ನಾವು ಎಷ್ಟೋ ಬಾರಿ ಭಾವಿಸಿದ್ದುಂಟು. ಯಾರಾದರೂ ಧೈರ್ಯಮಾಡಿ ಆಗ ಅವರನ್ನು ಕೇಳುತ್ತಿದ್ದರು : "ತಮ್ಮ ಕೃಪೆಯಿಂದ ಅಸಂಭವವೂ ಸಂಭವಿಸುವುದು. ಕೃಪೆಮಾಡಿ ನಮಗೂ ಅಂತಹ ದರ್ಶನಗಳಾಗುವಂತೆ ಮಾಡಿ." ಆಗ ಅವರ ಉತ್ತರ : "ನನ್ನಿಂದ ಅದು ಸಾಧ್ಯವೆ ? ತಾಯಿಯ ಇಚ್ಛೆಯಂತೆ ಆಗುವುದು." "ನಿಮ್ಮ ಇಚ್ಛೆಯಾದರೆ ತಾಯಿಯ ಇಚ್ಛೆಯಂತೆ" ಎಂದು ಹೇಳಿದರೆ ಶ್ರೀರಾಮಕೃಷ್ಣರು ಹೀಗೆನ್ನುತ್ತಿದ್ದರು : "ನಿಮಗೆಲ್ಲರಿಗೂ ಎಲ್ಲ ರೀತಿಯ ದರ್ಶನ ಆಗಲೆಂದು ನಾನು ಮನಸ್ಸಿನಲ್ಲಿ ಅಂದುಕೊಳ್ಳುತ್ತೇನೆ. ಆದರೆ ಹಾಗಾಗುವುದೆ?" ಇಷ್ಟರಿಂದಲೂ ಭಕ್ತ ಸುಮ್ಮನಾಗದಿದ್ದರೆ ಶ್ರೀರಾಮಕೃಷ್ಣರು ಮುಗುಳ್ನಕ್ಕು ಸುಮ್ಮನಾಗುತ್ತಿದ್ದರು. ಇಲ್ಲವೇ ಹೇಳುತ್ತಿದ್ದರು, "ನಾನೇನು ಹೇಳಲಿಯಪ್ಪ, ತಾಯಿಯ ಇಚ್ಛೆಯಂತಾಗಲಿ," ಎಂದು. ಎಷ್ಟೇ ಒತ್ತಾಯಿಸಿದರೂ ಶ್ರೀರಾಮಕೃಷ್ಣರು ಆ ಭಕ್ತನ ಭ್ರಮಾತ್ಮಕ ದೃಢ ವಿಶ್ವಾಸವನ್ನು ಭಂಗಗೊಳಿಸಿ ಅವನ ಆಧ್ಯಾತ್ಮಿಕ ಭಾವವನ್ನು ನಷ್ಟಗೊಳಿಸುವ ಗೋಜಿಗೆ ಹೋಗುತ್ತಿರಲಿಲ್ಲ. ಅವರೇ ಯಾವಾಗಲೂ ಹೇಳುತ್ತಿದ್ದರು, "ಯಾರ ಆಧ್ಯಾತ್ಮಿಕ ಭಾವಕ್ಕೂ ಹಾನಿಯನ್ನುಂಟುಮಾಡಬಾರದು," ಎಂದು.

5. ಪ್ರಸ್ತುತ ವಿಷಯಕ್ಕೆ ನೇರ ಸಂಬಂಧಿಸಿದುದು ಅಲ್ಲವಾದರೂ ಇಲ್ಲಿ ಒಂದು ಘಟನೆ ವಿಷಯದ ಸ್ಪಷ್ಟತೆಗಾಗಿ ಉಲ್ಲೇಖ ಯೋಗ್ಯ. ಇಚ್ಛೆ ಅಥವಾ ಸ್ಪರ್ಶಮಾತ್ರದಿಂದ ಇತರರಲ್ಲಿ ಆಧ್ಯಾತ್ಮಿಕಶಕ್ತಿ ಸಂಚಾರವಾಗುವಂತೆ ಮಾಡುವ ಸಾಮರ್ಥ್ಯ ಕೆಲವು ಮುಂದುವರಿದ ಸಾಧಕರಿಗೆ ಮಾತ್ರ ಸಾಧ್ಯ. ಸ್ವಾಮಿ ವಿವೇಕಾನಂದರಿಗೆ ಈ ಸಾಮರ್ಥ್ಯವಿತ್ತು. ಈ ಸಾಮರ್ಥ್ಯದಿಂದ ಮುಂದೆ ಅವರು ಲೋಕಕಲ್ಯಾಣವುಂಟುಮಾಡುವರು ಎಂದು ಶ್ರೀರಾಮಕೃಷ್ಣರು ನಮಗೆ ಮತ್ತೆ ಮತ್ತೆ ಹೇಳುತ್ತಿದ್ದರು. ಸ್ವಾಮಿ ವಿವೇಕಾನಂದರಂತಹ ಉತ್ತಮ ಅಧಿಕಾರಿ ಸಂಸಾರದಲ್ಲಿ ಅತಿ ವಿರಳ. ಇದನ್ನರಿತ ಶ್ರೀರಾಮಕೃಷ್ಣರು ಅವರಿಗೆ ವೇದಾಂತದ ಅದ್ವೈತ ತತ್ತ್ವವನ್ನು ಉಪದೇಶಿಸುತ್ತ ಅವರ ಜೀವನವನ್ನು ಒಂದು ವಿಶಿಷ್ಟ ಮಾದರಿಯಲ್ಲಿ ರೂಪಿಸಲು ಪ್ರಯತ್ನಿಸುತ್ತಿದ್ದರು. ಸ್ವಾಮೀಜೀ ಮೊದಲು ಬ್ರಹ್ಮ ಸಮಾಜದಲ್ಲಿದ್ದವರು. ಆದ್ದರಿಂದ 'ಸೋऽಹಂ' ಭಾವದ ಉಪಾಸನೆ ಪಾಪವೆಂದು ಅವರಿಗೆ ಅನಿಸುತ್ತಿತ್ತು. ಆದರೂ ಶ್ರೀರಾಮಕೃಷ್ಣರು ಬೇರೆ ಎಲ್ಲ ಶಿಷ್ಯರಿಗೆ ಯಾವ ಪುಸ್ತಕಗಳನ್ನು ಓದಬೇಡಿರೆಂದು ಹೇಳುತ್ತಿದ್ದರೊ ಅವನ್ನೇ ಸ್ವಾಮೀಜಿಗೆ ಓದಲು ಕೊಡುತ್ತಿದ್ದರು. ಅವರ ಕೊಠಡಿಯಲ್ಲಿ ಒಂದು 'ಅಷ್ಟಾವಕ್ರಸಂಹಿತೆ' ಪುಸ್ತಕ

ವಿತ್ತು. ಶಿಷ್ಯರೊಬ್ಬರು ಅದನ್ನು ತೆಗೆದು ಓದುತ್ತಿರುವುದನ್ನು ನೋಡಿ ಶ್ರೀರಾಮ ಕೃಷ್ಣರು ತಡೆದು 'ಮುಕ್ತಿ ಮತ್ತು ಅದರ ಸಾಧನೆ', 'ಭಗವದ್ಗೀತಾ' ಇವೇ ಮುಂತಾದ ಪುಸ್ತಕಗಳನ್ನು ಓದಬೇಕೆಂದು ತಿಳಿಸಿದರು. ಆದರೆ ಸ್ವಾಮೀಜೀ ಹೋದರೆ 'ಅಷ್ಟಾವಕ್ರ ಸಂಹಿತೆ'ಯನ್ನು ತೆಗೆದು ಓದಲು ಕೊಡುತ್ತಿದ್ದರು. ಅಥವಾ ಅಧ್ಯಾತ್ಮರಾಮಾಯಣದ ಕೆಲವು ಅಂಶಗಳನ್ನು ಓದಲು ಹೇಳುತ್ತಿದ್ದರು. "ಇಂಥ ಪುಸ್ತಕ ಓದಿ ಏನು ಪ್ರಯೋಜನ ? ನಾನು ಭಗವಂತ ಎಂದು ಚಿಂತಿಸುವುದು ಮಹಾಪಾಪ. ಅಂಥ ವಿಷಯ ಈ ಪುಸ್ತಕಗಳಲ್ಲಿವೆ. ಇವನ್ನು ಸುಟ್ಟುಹಾಕುವುದು ಲೇಸು"—ಎಂದು ಸ್ವಾಮೀಜೀ ಆಕ್ಷೇಪಿಸಿದರೆ ಶ್ರೀರಾಮಕೃಷ್ಣರು ನಕ್ಕು ಹೇಳುತ್ತಿದ್ದರು. "ನೀನು ಓದು ಎಂದು ನಾನು ಹೇಳುತ್ತಿಲ್ಲ. ನನಗೆ ಸ್ವಲ್ಪ ಓದಿ ಹೇಳು ಎಂದು ಹೇಳುತ್ತಿದ್ದೇನೆ. ನಾನೂ ಸ್ವಲ್ಪ ಕೇಳುತ್ತೇನೆ. ಇದರಿಂದ ನೀನೇನೂ 'ನಾನು ಭಗವಂತ' ಎಂದು ತಿಳಿಯಬೇಕಾಗಿಲ್ಲ." ಅವರ ಒತ್ತಾಯಕ್ಕೆ ಕಟ್ಟುಬಿದ್ದು ಸ್ವಾಮೀಜೀ ಅವರಿಗೆ ಓದಿ ಹೇಳಬೇಕಾಗುತ್ತಿತ್ತು.

ಸ್ವಾಮೀಜೀಯವರಿಗೆ ಈ ರೀತಿ ಮಾರ್ಗದರ್ಶನ ನೀಡುತ್ತಿದ್ದರೂ ಶ್ರೀರಾಮ ಕೃಷ್ಣರು ಉಳಿದ ಶಿಷ್ಯರಲ್ಲಿ ಕೆಲವರಿಗೆ ಸಾಕಾರೋಪಾಸನೆಯಲ್ಲಿಯೂ, ಇನ್ನು ಕೆಲವರಿಗೆ ನಿರಾಕಾರ ಸಗುಣೋಪಾಸನೆಯಲ್ಲಿಯೂ, ಮತ್ತೆ ಕೆಲವರಿಗೆ ಶುದ್ಧ ಭಕ್ತಿಪಥದಲ್ಲಿಯೂ ಮಾರ್ಗದರ್ಶನ ನೀಡುತ್ತಿದ್ದರು. ಅವರ ಶಿಷ್ಯರೆಲ್ಲ ಒಟ್ಟಿಗೆ ಅವರೊಡನಿದ್ದು ಒಟ್ಟಿಗೆ ಆಹಾರ ವಿಹಾರ ಚರ್ಚೆ ಇತ್ಯಾದಿಗಳಲ್ಲಿ ಭಾಗವಹಿಸುತ್ತಿದ್ದರೂ ಅವರೆಲ್ಲರ ಅಧಿಕಾರ ಭೇದಕ್ಕನುಗುಣವಾಗಿ ಶ್ರೀರಾಮಕೃಷ್ಣರು ಬೇರೆ ಬೇರೆ ರೀತಿಯಲ್ಲಿ ಮಾರ್ಗದರ್ಶನ ನೀಡಿ ಅವರವರ ಹಾದಿಯಲ್ಲಿ ಮುಂದುವರಿಯುವಂತೆ ಮಾಡುತ್ತಿದ್ದರು.

ಕ್ರಿ.ಶ. ೧೮೮೬, ಮಾರ್ಚ್ ತಿಂಗಳು. ಕಾಶೀಪುರದಲ್ಲಿ ಶ್ರೀರಾಮಕೃಷ್ಣರು ಗಂಟಲು ಬೇನೆಯಿಂದ ದಿನದಿನವೂ ಸೊರಗುತ್ತಿದ್ದಾರೆ. ಆದರೆ ಹಿಂದಿನಗಿಂತಲೂ ಹೆಚ್ಚು ಉತ್ಸಾಹದಿಂದ ಶಿಷ್ಯರಿಗೆ ಧರ್ಮೋಪದೇಶವನ್ನು ನೀಡಿ ಅವರನ್ನು ಸಾಧನಮಾರ್ಗದಲ್ಲಿ ಹುರಿದುಂಬಿಸುತ್ತಿದ್ದಾರೆ. ಅವರ ವಿಶೇಷ ಗಮನ ಸ್ವಾಮಿ ವಿವೇಕಾನಂದರ ಮೇಲಿತ್ತು. ಶ್ರೀರಾಮಕೃಷ್ಣರು ಅವರೊಬ್ಬರನ್ನೇ ಪ್ರತ್ಯೇಕ ಕರೆದು ಏಕಾಂತದಲ್ಲಿ ತಮ್ಮ ಶಿಷ್ಯರನ್ನೆಲ್ಲ ಕಲೆಹಾಕಿ ಅವರು ಸಂಘಬದ್ಧವಾಗಿ ಮುಂದುವರಿಯುವಂತೆ ಮಾಡುವುದು ಹೇಗೆ ಎಂಬುದರ ಬಗ್ಗೆ ಗಂಟೆಗಟ್ಟಲೆ ಉಪದೇಶ ನೀಡುತ್ತಿದ್ದರು. ಇದನ್ನು ಗಮನಿಸಿದ ಕೆಲವು ಭಕ್ತರು ಭಾವಿಸಿದರು— ಶ್ರೀರಾಮಕೃಷ್ಣರು ಸಂಘ ಸ್ಥಾಪನೆಗಾಗಿಯೇ ಈ ಗಂಟಲು ಬೇನೆಯ ಸೋಗುಹಾಕಿಕೊಂಡಿರುವರು, ಈ ಕಾರ್ಯ ಮುಗಿದಮೇಲೆ ಮತ್ತೆ ಮೊದಲಿನಂತೆ ಆರೋಗ್ಯವಂತರಾಗುವರು—ಎಂದು. ಕೇವಲ ಸ್ವಾಮಿ ವಿವೇಕಾನಂದರು ಮಾತ್ರ ಶ್ರೀರಾಮಕೃಷ್ಣರು ಈಗ ತಮ್ಮ ಭಕ್ತರನ್ನು ಅಗಲಿ ಹೋಗುವುದಕ್ಕಾಗಿಯೆ ಎಲ್ಲ ಸಿದ್ಧತೆಗಳನ್ನು ಮಾಡುತ್ತಿರುವರು ಎಂದು ಭಾವಿಸಿದರು. ಅವರೂ ಕೂಡ ಯಾವಾಗಲೂ ಈ ಭಾವನೆಯನ್ನು ಉಳಿಸಿಕೊಂಡಿದ್ದರೊ ಎಂಬುದು ಸಂದೇಹ.

ಸ್ವಾಮೀಜೀಯವರಲ್ಲಿ ಸಾಧನ ಬಲದಿಂದ ಇತರರಲ್ಲಿ ಆಧ್ಯಾತ್ಮಿಕ ಶಕ್ತಿಯನ್ನು ಸಂಚರಿಸುವ ಸಾಮರ್ಥ್ಯ ಆಗತಾನೆ ವ್ಯಕ್ತವಾಗುತ್ತಿತ್ತು. ಅವರಿಗಿದು ಆಗಾಗ ವೇದ್ಯವಾಗುತ್ತಿದ್ದರೂ ಅದುವರೆಗೂ ಯಾರನ್ನೂ ಸ್ಪರ್ಶಿಸಿ ಅವನ್ನು ಪರೀಕ್ಷಿಸುವ ಗೋಜಿಗೆ ಹೋಗಿರಲಿಲ್ಲ. ಅವರಿಗೀಗ ಅದ್ವೈತದಲ್ಲಿ ಸಂಪೂರ್ಣ ನಂಬಿಕೆಯುಂಟಾಗಿತ್ತು. ಚರ್ಚೆಯ ಮೂಲಕ ಇತರರ ಮುಂದೆ ಅದ್ವೈತ ವೇದಾಂತವನ್ನು ಸಮರ್ಥಿಸುತ್ತ ಅವರನ್ನು ಅದರಲ್ಲಿ ತೊಡಗಿಸಲು ಪ್ರಯತ್ನಿಸುತ್ತಿದ್ದರು. ಇದು ಕೆಲವರಲ್ಲಿ ಮಾನಸಿಕ ಅಸ್ಥಿರತೆಗೆ ಕಾರಣವಾಯಿತು. ಸ್ವಾಮಿ ವಿವೇಕಾನಂದರ ಸ್ವಭಾವ ಹೇಗೆಂದರೆ ಯಾವುದನ್ನೇ ಪರಮಸತ್ಯವೆಂದು ಸ್ವೀಕರಿಸಿದರೂ ಅದನ್ನು ಘಂಟಾಘೋಷವಾಗಿ ಎಲ್ಲರಿಗೂ ಸಾರುತ್ತಿದ್ದರು, ತರ್ಕಯುಕ್ತಿಯ ಮೂಲಕ ಬೇರೆಯವರು ಅದನ್ನು ಗ್ರಹಿಸುವಂತೆ ಮಾಡುತ್ತಿದ್ದರು. ಯಾವುದು ಸತ್ಯವೊ ಅದು ವ್ಯಾವಹಾರಿಕ ಜಗತ್ತಿನಲ್ಲಿ ಅವಸ್ಥೆ ಹಾಗೂ ಅಧಿಕಾರಿ ಭೇದದಿಂದ ಬೇರೆ ಬೇರೆಯಾಗಿ ತೋರುತ್ತದೆ ಎಂಬುದನ್ನು ಬಾಲಕರಾದ ಸ್ವಾಮೀಜೀ ಆಗಿನ್ನೂ ಅರ್ಥಮಾಡಿಕೊಂಡಿರಲಿಲ್ಲ.

ಅಂದು ಶಿವರಾತ್ರಿ. ಭಕ್ತರಲ್ಲಿ ಮೂರು-ನಾಲ್ಕು ಜನರು ಸ್ವಾಮೀಜೀಯವರೊಡನೆ ವ್ರತೋಪವಾಸ ಮಾಡುತ್ತಿದ್ದಾರೆ. ಪೂಜೆ ಹಾಗೂ ಜಾಗರಣೆಯಲ್ಲಿ ರಾತ್ರಿ ಕಳೆಯಬೇಕೆಂಬುದು ಅವರ ಇಚ್ಛೆ. ಶ್ರೀರಾಮಕೃಷ್ಣರ ನಿದ್ರೆಗೆ ತೊಂದರೆಯಾಗಬಾರದೆಂದು ಸ್ವಲ್ಪ ದೂರದಲ್ಲಿ ಅಡುಗೆಗಾಗಿ ಕಟ್ಟಿದ ಒಂದು ಕೊಠಡಿಯಲ್ಲಿ ಪೂಜೆಗೆ ಅಣಿಗೊಳಿಸಿದರು. ಸಂಜೆಯನಂತರ ಚೆನ್ನಾಗಿ ಮಳೆಯಾಯಿತು. ಮಿಂಚಿನಿಂದ ಹೊಳೆಯುವ ನವಮೇಘವು ಶಿವನ ಜಟಾಜೂಟದಂತೆ ಶೋಭಿಸುತ್ತಿತ್ತು. ಭಕ್ತರೆಲ್ಲ ಅದನ್ನು ನೋಡಿ ಆನಂದಿಸಿದರು.

ಹತ್ತುಗಂಟೆಯ ಹೊತ್ತಿಗೆ ಪ್ರಥಮ ಪ್ರಹರದ ಪೂಜೆಯನ್ನು ಮುಗಿಸಿ ಸ್ವಾಮೀಜೀ ಪೂಜೆಯ ಆಸನದ ಮೇಲೆಯೇ ಕುಳಿತು ಮಾತನಾಡುತ್ತ ವಿಶ್ರಾಂತಿ ಪಡೆಯುತ್ತಿದ್ದರು. ಅವರೊಡನಿದ್ದ ಒಬ್ಬರು ಅವರಿಗೆ ತಂಬಾಕು ಸಿದ್ಧಪಡಿಸಲು ಹೊರಗೆ ಹೋದರು. ಇನ್ನೊಬ್ಬರು ಯಾವುದೋ ಕಾರಣಕ್ಕಾಗಿ ಹೊರಗೆಹೋದರು. ಆ ಸಮಯದಲ್ಲಿ ಸ್ವಾಮೀಜೀಯವರಲ್ಲಿ ಹಿಂದೆ ಹೇಳಿದ ದಿವ್ಯ ವಿಭೂತಿಯ ಅನುಭವವಾಗತೊಡಗಿತು. ಸ್ವಾಮೀಜೀ ಇದನ್ನು ಪರೀಕ್ಷಿಸಬೇಕೆಂದು ಬಯಸಿ ತಮ್ಮ ಪಕ್ಕದಲ್ಲಿ ಕುಳಿತಿದ್ದ ಸ್ವಾಮಿ ಅಭೇದಾನಂದರಿಗೆ ತಮ್ಮನ್ನು ಸ್ಪರ್ಶಿಸಲು ಹೇಳಿದರು. ಇಷ್ಟರಲ್ಲಿ ತಂಬಾಕು ತರಲು ಹೋಗಿದ್ದವರು ಬಂದರು. ಸ್ವಾಮೀಜೀ ಸ್ಥಿರವಾಗಿ ಧ್ಯಾನಸ್ಥರಾಗಿದ್ದಾರೆ, ಅಭೇದಾನಂದರು ತಮ್ಮ ಬಲಗೈಯಿಂದ ಅವರ ಬಲಭುಜವನ್ನು ಸ್ಪರ್ಶಿಸಿದ್ದಾರೆ. ಅವರ ಕೈ ಕಂಪಿಸುತ್ತಿದೆ. ಎರಡು ಮೂರು ನಿಮಿಷಗಳನಂತರ ಸ್ವಾಮೀಜೀ ಕಣ್ಣು ತೆರೆದರು. ''ನಿನಗೆ ಹೇಗೆನಿಸಿತು ?'' ಎಂದು ಅಭೇದಾನಂದರನ್ನು ಕೇಳಿದರು. ಎಲೆಕ್ಟ್ರಿಕ್ ಬ್ಯಾಟರಿಯನ್ನು ಮುಟ್ಟಿದರೆ ಹೇಗಾಗುವುದೊ ಹಾಗಾಯಿತೆಂದು ಅವರೆಂದರು. ಇನ್ನೊಬ್ಬರಾರೊ ಈ ವಿಷಯದ ಬಗ್ಗೆ ಅಭೇದಾನಂದರನ್ನು ಕೇಳಿದಾಗ ಅವರೆಂದಿದ್ದರು ''ನಾನು ಕೈಯನ್ನು

ಎಷ್ಟೇ ಸ್ಥಿರವಾಗಿರಿಸಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ,'' ಎಂದು.

ಈ ಮಾತುಕತೆ ಅಲ್ಲಿಗೇ ಶಾಂತವಾಯಿತು. ಸ್ವಾಮೀಜೀ ತಂಬಾಕು ಸೇವಿಸ ತೊಡಗಿದರು. ಅನಂತರ ದ್ವಿತೀಯ ಪ್ರಹರದ ಪೂಜೆ ಧ್ಯಾನಗಳಲ್ಲಿ ನಿರತರಾದರು. ಅಭೇದಾನಂದರು ಆ ಸಂದರ್ಭದಲ್ಲಿ ಗಂಭೀರ ಧ್ಯಾನದಲ್ಲಿ ಮುಳುಗಿದರು. ಅವರು ಅಷ್ಟು ಆಳವಾಗಿ ಧ್ಯಾನ ಮಾಡುತ್ತಿದ್ದುದನ್ನು ನಾವು ಹಿಂದೆ ನೋಡಿರಲಿಲ್ಲ. ದೇಹ ಕಾಷ್ಠದಂತಾಯಿತು. ಬಾಹ್ಯಪ್ರಜ್ಞೆ ಲುಪ್ತವಾಯಿತು ಇದು ಸ್ವಾಮೀಜಿಯ ಸ್ಪರ್ಶದ ಪರಿಣಾಮವೆಂದು ಎಲ್ಲರೂ ಭಾವಿಸಿದರು.

ರಾತ್ರಿ ನಾಲ್ಕನೇ ಪ್ರಹರದ ಪೂಜಾದಿಗಳು ಮುಗಿದವು. ಸ್ವಾಮಿ ರಾಮಕೃಷ್ಣಾನಂದರು ಬಂದು ಶ್ರೀರಾಮಕೃಷ್ಣರು ಸ್ವಾಮೀಜೀಯವರನ್ನು ಕರೆಯುತ್ತಿರುವರೆಂದು ತಿಳಿಸಿದರು. ಸ್ವಾಮೀಜೀ ಶ್ರೀರಾಮಕೃಷ್ಣರೆಡೆಗೆ ಹೋದಕೂಡಲೇ ಅವರು ಹೇಳಿದರು: "ಏನಯ್ಯ ಇದು ? ಸ್ವಲ್ಪ ಸಂಗ್ರಹಿಸುವುದರಲ್ಲಿಯೇ ಖರ್ಚುಮಾಡಲು ಶುರುಮಾಡಿ ಬಿಟ್ಟೆಯಾ? ಮೊದಲು ನಿನ್ನೊಳಗೆ ಸಾಕಷ್ಟು ಶಕ್ತಿಯನ್ನು ಸಂಗ್ರಹಿಸಬೇಕು. ಅನಂತರ ಯಾವಾಗ ಹೇಗೆ ಖರ್ಚುಮಾಡಬೇಕೆಂಬುದು ತಾನಾಗಿಯೇ ತಿಳಿಯುವುದು. ಎಲ್ಲವನ್ನು ಜಗನ್ಮಾತೆ ತಿಳಿಸಿಕೊಡುತ್ತಾಳೆ. ಅವನೊಳಗೆ ನಿನ್ನ ಭಾವವನ್ನು ಪ್ರವಹಿಸಿ ಅವನಿಗೆ ಎಂಥ ಅಪಕಾರ ಮಾಡಿದೆ ಗೊತ್ತೆ ? ಆತ ಇದುವರೆವಿಗೂ ಒಂದು ಭಾವವನ್ನು ಹಿಡಿದು ಕೊಂಡು ಮುಂದುವರಿಯುತ್ತಿದ್ದ. ಈಗ ಅದೆಲ್ಲ ನಷ್ಟವಾಯಿತು. ಆದದ್ದು ಆಗಿ ಹೋಯಿತು. ಇನ್ನೆಂದೂ ಈ ರೀತಿ ಮಾಡಬೇಡ, ಇನ್ನೇನೂ ಅನಾಹುತವಾಗಲಿಲ್ಲವಲ್ಲ, ಒಳ್ಳೆಯದು.'' ಸ್ವಾಮೀಜೀ ಅನಂತರ ಹೇಳಿದರು: "ನಾನದನ್ನು ಕೇಳಿ ಅವಾಕ್ಕಾದೆ. ನಾನು ಪೂಜೆಯ ಸಮಯದಲ್ಲಿ ಏನೇನು ಮಾಡಿದ್ದೆನೊ ಅದೆಲ್ಲ ಶ್ರೀರಾಮಕೃಷ್ಣರಿಗೆ ತಿಳಿದುಹೋಗಿತ್ತು. ಏನು ಮಾಡಲಿ, ಅವರ ಬೈಗಳನ್ನು ಕೇಳಿ ಸುಮ್ಮನಿದ್ದೆ.''

ಇದರ ಫಲವಾಗಿ ಸ್ವಾಮೀ ಅಭೇದಾನಂದರಲ್ಲಿ ಭಾವಪರಿವರ್ತನೆಯುಂಟಾಯಿತು. ಆದರೆ ಈಗ ಅದ್ವೈತ ಭಾವವನ್ನೂ ಸರಿಯಾಗಿ ಹಿಡಿದುಕೊಳ್ಳಲಾಗಲಿಲ್ಲ. ಹೀಗಾಗಿ ಅವರ ಸಾಧನೆಯಲ್ಲಿ ಅಸ್ಥಿರತೆ ಕಾಣತೊಡಗಿತು. ಶ್ರೀರಾಮಕೃಷ್ಣರು ಅವರಿಗೆ ಅದ್ವೈತ ವನ್ನೇ ಉಪದೇಶಿಸುತ್ತ ಅವರು ತಪ್ಪುದಾರಿ ಹಿಡಿಯದಂತೆ ಮಾರ್ಗದರ್ಶನ ಮಾಡಿದರು. ಆದರೂ ಶ್ರೀರಾಮಕೃಷ್ಣರ ದೇಹತ್ಯಾಗವಾಗಿ ಬಹಳ ಸಮಯದ ನಂತರ ಅವರಿಗೆ ಯಥಾ ರೀತಿಯಲ್ಲಿ ಅನುಷ್ಠಾನ ಮಾಡಲು ಸಾಧ್ಯವಾಯಿತು.

6. ಅವತಾರಪುರುಷರು ಸತ್ಯಸಾಕ್ಷಾತ್ಕಾರಕ್ಕಾಗಿ ಮಾಡುವ ಸಾಧನೆ ಹೋರಾಟ ಗಳೆಲ್ಲ ಕೇವಲ ತೋರಿಕೆ ಎಂದು ಹೇಳುವ ಭಕ್ತರುಗಳಿಗೆ ನಾವು ಹೇಳುವುದಿಷ್ಟೆ: ಶ್ರೀರಾಮಕೃಷ್ಣರು ತಮ್ಮ ಬಗ್ಗೆ ಇಂಥ ಅಭಿಪ್ರಾಯವನ್ನು ಎಂದೂ ವ್ಯಕ್ತಪಡಿಸಿರಲಿಲ್ಲ. ಬದಲು ಅವರು ಅನೇಕ ಬಾರಿ ಹೇಳುತ್ತಿದ್ದರು: "ನರಲೀಲೆಯಲ್ಲಿ ಎಲ್ಲ ಕಾರ್ಯಗಳೂ ಸಾಮಾನ್ಯ ಮನುಷ್ಯರದಂತೆಯೇ ಇರುತ್ತವೆ. ಭಗವಂತನು ನರಶರೀರವನ್ನು ಧಾರಣೆ ಮಾಡಿದರೆ ನರರಂತೆಯೇ ಸುಖದುಃಖಗಳನ್ನು ಅನುಭವಿಸಬೇಕಾಗುತ್ತದೆ, ನರರಂತೆಯೆ

ತಪಸ್ಸು ಸಾಧನೆಗಳ ಮೂಲಕ ಪೂರ್ಣತ್ವವನ್ನು ಪಡೆಯಬೇಕಾಗುತ್ತದೆ.'' ಜಗತ್ತಿನ ಆಧ್ಯಾತ್ಮಿಕ ಇತಿಹಾಸದಲ್ಲಿಯೂ ನಾವಿದನ್ನು ಕಾಣುತ್ತೇವೆ. ಅದಿಲ್ಲದಿದ್ದರೆ ಜೀವಿಗಳ ಮೇಲಿನ ಕೃಪೆಯಿಂದ ಶರೀರಧಾರಣೆ ಮಾಡಿದುದು ಪೂರ್ಣ ಸಾರ್ಥಕತೆಯನ್ನು ಪಡೆಯುವುದಿಲ್ಲ.

7. ಶ್ರೀರಾಮಕೃಷ್ಣರ ಉಪದೇಶಗಳಲ್ಲಿ ನಾವು ಎರಡು ಭಾವಗಳನ್ನು ಕಾಣಬಹುದು. ಅವರ ಕೆಲವು ಉಕ್ತಿಗಳನ್ನು ಇಲ್ಲಿ ಉಲ್ಲೇಖಿಸಿದರೆ ಇದು ಸ್ಪಷ್ಟವಾಗುತ್ತದೆ. ಒಂದುಕಡೆ ಅವರು ಭಕ್ತರಿಗೆ ಹೇಳುತ್ತಿದ್ದರು, ''ನಾನು ಅಡುಗೆ ಮಾಡಿಯಾಗಿದೆ, ನೀವು ಕುಳಿತು ಊಟಮಾಡಿರಿ.'' ''ನಾನು ಅಚ್ಚು ತಯಾರಿಸಿದ್ದೇನೆ, ನೀವು ಅದರ ಮೂಲಕ ನಿಮ್ಮ ಮನಸ್ಸನ್ನು ರೂಪಿಸಿಕೊಳ್ಳಿ.'' ''ನಿಮಗೇನೂ ಮಾಡಲಾಗದಿದ್ದರೆ ನಿಮ್ಮ ಜವಾಬ್ದಾರಿಯನ್ನು ನಮಗೆ ಬಿಡಿ'' ಇತ್ಯಾದಿ. ಇನ್ನೊಂದು ಕಡೆ ಹೇಳುತ್ತಿದ್ದರು, ''ಒಂದೊಂದಾಗಿಯೆ ಎಲ್ಲ ವಾಸನೆಗಳನ್ನೂ ತ್ಯಜಿಸು, ಆಗಲೇ ಸಿದ್ಧಿಸುವುದು,'' ''ಗಾಳಿಗೆ ತೂರಾಡುವ ತರಗೆಲೆಯಂತೆ ಇರಿ,'' ''ನಾನು ಹದಿನಾರಾಣೆ ಮಾಡಿರುವೆನು, ನೀವು ಒಂದಾಣೆ ಮಾಡಿದರೆ ಸಾಕು'' ಇತ್ಯಾದಿ. ಶ್ರೀರಾಮಕೃಷ್ಣರ ಈ ಎರಡು ಬಗೆಯ ಉಪದೇಶಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಭಗವತ್ ಕೃಪೆ ಮತ್ತು ಪುರುಷಕಾರ — ಇವೆರಡರಲ್ಲಿ ಯಾವುದನ್ನು ನೆಚ್ಚಿಕೊಂಡು ಸಾಧನೆಯಲ್ಲಿ ಮುಂದುವರಿಯುವುದು ಎಂಬುದನ್ನು ಸ್ಥಿರವಾಗಿ ನಿರ್ಧರಿಸಲಾಗುವುದಿಲ್ಲ.

ದಕ್ಷಿಣೇಶ್ವರದಲ್ಲಿ ಒಮ್ಮೆ ನನಗೂ ಮತ್ತು ನನ್ನ ಸ್ನೇಹಿತನಿಗೂ (ಸ್ವಾಮೀ ನಿರಂಜನಾನಂದ) ಮಾನವನ ಸ್ವತಂತ್ರೇಚ್ಛೆಯ ಬಗ್ಗೆ ಸುದೀರ್ಘ ಚರ್ಚೆಯಾಯಿತು. ಯಾವ ತೀರ್ಮಾನಕ್ಕೂ ಬರಲಾಗದೆ ಶ್ರೀರಾಮಕೃಷ್ಣರೆಡೆಗೆ ಹೋದೆವು. ಅವರು ನಮ್ಮ ಚರ್ಚೆಯನ್ನು ಕೇಳಿ ಕೊನೆಗೆ ಗಂಭೀರಸ್ವರದಲ್ಲಿ ಹೇಳಿದರು : ''ಇಚ್ಛಾ ಸ್ವಾತಂತ್ರ್ಯ ಎಂಬುದಿದೆ ಎಂದುಕೊಂಡಿರಾ ? ಭಗವದಿಚ್ಛೆಯಂತೆಯೇ ಯಾವಾಗಲೂ ಎಲ್ಲ ನಡೆಯುವುದು. ಮನುಷ್ಯನಿಗೆ ಇದು ಕೊನೆಯಲ್ಲಿ ಅರ್ಥವಾಗುತ್ತದೆ. ಮರಕ್ಕೆ ಕಟ್ಟಿ ಹಾಕಲ್ಪಟ್ಟ ಹಸುವು ಮರದ ಹತ್ತಿರವೇ ಇರಬಹುದು, ಇಲ್ಲವೇ ಹಗ್ಗ ಎಷ್ಟು ಉದ್ದವಿದೆಯೋ ಅಷ್ಟು ದೂರ ಹೋಗಬಹುದು. ಮನುಷ್ಯನ ಸ್ವತಂತ್ರೇಚ್ಛೆಯೂ ಇದೇ ರೀತಿ. ಆ ಹಸುವು ಸೀಮಿತ ಪ್ರದೇಶದಲ್ಲಿ ನಿಂತಿರಬಹುದು, ಓಡಾಡಬಹುದು, ಅಥವಾ ಮಲಗಿರಬಹುದು. ಹಾಗೆಯೇ ಈಶ್ವರನೂ ಮನುಷ್ಯನಿಗೆ ಸ್ವಲ್ಪ ಸ್ವಾತಂತ್ರ್ಯ ಕೊಟ್ಟಿರುವನು. ಅದರ ಮಿತಿಯೊಳಗೆ ಅವನು ತನ್ನಿಚ್ಛೆಯಂತೆ ವರ್ತಿಸಬಹುದು. ಅದನ್ನೇ ಮನುಷ್ಯ ಸ್ವತಂತ್ರೇಚ್ಛೆ ಎಂದು ಕರೆಯುತ್ತಾನೆ. ಆದರೆ ಹಗ್ಗ ಅವನ ಕೈಯಲ್ಲಿದೆ. ಆದರೆ ಒಂದು ವಿಷಯ, ಅವನನ್ನು ವ್ಯಾಕುಲತೆಯಿಂದ ಪ್ರಾರ್ಥಿಸಿದರೆ ಅವನು ಹಗ್ಗವನ್ನು ಸ್ವಲ್ಪ ಸಡಿಲ ಬಿಡಬಹುದು, ಅಷ್ಟೇ ಅಲ್ಲ ಹಗ್ಗವನ್ನೇ ಬಿಚ್ಚಿ ಬಿಡಬಹುದು.''

ಈ ಮಾತನ್ನು ಕೇಳಿ ನಾವು ಅವರನ್ನು ಕೇಳಿದೆವು : ''ಹಾಗಾದರೆ ಮಹಾಶಯರೆ,

ಸಾಧನೆ ಭಜನೆ ಮಾಡುವುದೂ ಮನುಷ್ಯನ ಕೈಯಲ್ಲಿಲ್ಲವೇ ? ನಾನೇನು ಮಾಡುತ್ತಿರುವೆನೊ ಅದೆಲ್ಲ ಅವನಿಚ್ಛೆಯಿಂದಲೆ ಎಂದು ಎಲ್ಲರೂ ಹೇಳಬಹುದಲ್ಲ ?''

ಶ್ರೀರಾಮಕೃಷ್ಣರು : ''ಸುಮ್ಮನೆ ಹೇಳಿದರೆ ಪ್ರಯೋಜನವಿಲ್ಲ—ಅವೆಲ್ಲ ಟೊಳ್ಳು ಮಾತು. ಮುಳ್ಳು ಚುಚ್ಚಿದಾಗ ಮುಳ್ಳು ಇಲ್ಲ, ನೋವೂ ಇಲ್ಲ ಎಂದರೆ ಏನು ಪ್ರಯೋಜನ. ಮುಳ್ಳನ್ನು ಮುಟ್ಟಿದ ಕೂಡಲೆ 'ಊಃ' ಎಂದು ನರಳುತ್ತಾನೆ. ಸಾಧನೆ ಭಜನೆ ಮಾಡುವುದು ಮನುಷ್ಯನ ಕೈಯಲ್ಲಿದ್ದಿದ್ದರೆ ಎಲ್ಲರೂ ಅದನ್ನು ಕೈಗೊಳ್ಳುತ್ತಿದ್ದರು. ಹಾಗೆ ಮಾಡುತ್ತಿಲ್ಲ ಏಕೆ ? ಒಂದು ವಿಷಯ, ಅವನು ಎಷ್ಟು ಶಕ್ತಿಯನ್ನು ನೀಡುವನೊ ಅದನ್ನು ಸರಿಯಾಗಿ ಬಳಸಿಕೊಳ್ಳದಿದ್ದರೆ ಮತ್ತೆ ಅವನು ಕೊಡುವುದಿಲ್ಲ. ಇದಕ್ಕಾಗಿಯೇ ಪುರುಷಕಾರ ಅಥವಾ ಸ್ವಪ್ರಯತ್ನ ಅವಶ್ಯಕ. ಏನಾದರೂ ಸ್ವಪ್ರಯತ್ನ ಮಾಡಿದ ಮೇಲೆಯೇ ಈಶ್ವರಕೃಪೆಗೆ ಅಧಿಕಾರಿಯಾಗುವುದು. ಅವನ ಕೃಪೆಯಾದರೆ ಹತ್ತು ಜನ್ಮದ ಭೋಗ ಒಂದೇ ಜನ್ಮದಲ್ಲಿ ಕಳೆದುಹೋಗುತ್ತದೆ. ಆದರೆ ಅವನನ್ನು ಆಶ್ರಯಿಸಿ ಏನಾದರೂ ಸಾಧನೆ ಮಾಡಲೇ ಬೇಕು ಈ ವಿಷಯವಾಗಿ ಒಂದು ಕಥೆ ಇದೆ—

8. ''ತ್ರಿಲೋಕ ವಿಹಾರಿ ವಿಷ್ಣುವು ಒಮ್ಮೆ ಯಾವುದೋ ಕಾರಣಕ್ಕಾಗಿ ನಾರದರ ಮೇಲೆ ಕೋಪಗೊಂಡು ನರಕಕ್ಕೆ ಹೋಗೆಂದು ಶಾಪ ಕೊಟ್ಟನು. ನಾರದರು ಕಾತರತೆಯಿಂದ ಎಷ್ಟೇ ಪ್ರಾರ್ಥಿಸಿದರೂ ಪ್ರಯೋಜನವಾಗಲಿಲ್ಲ. ಕೊನೆಗೆ ನಾರದರು ವಿಷ್ಣುವನ್ನು ಕುರಿತು, 'ನರಕ ಎಲ್ಲಿದೆ, ಹೇಗಿದೆ' ಎಂದು ವಿಚಾರಿಸಿದರು. ವಿಷ್ಣುವು ಭೂಮಿಯ ಮೇಲೆ ನಕ್ಷೆ ಬರೆದು ಇದು ಸ್ವರ್ಗ, ಇದು ನರಕ, ಇದು ಭೂಮಿ ಎಂದೆಲ್ಲ ತೋರಿಸಿ ವಿವರಿಸಿದನು. ಕೂಡಲೇ ನಾರದರು ಅವನು ಬರೆದ ನರಕದ ಮೇಲೆ ಹೊರಳಾಡಿ 'ನೋಡು, ನನ್ನ ನರಕದ ಭೋಗ ಆಯಿತು' ಎಂದರು. 'ಅದು ಹೇಗೆ' ಎಂದು ಕೇಳಿದಾಗ ನಾರದರು, 'ಭಗವಂತನೇ, ಸ್ವರ್ಗ ನರಕಗಳು ನಿನ್ನವೇ ಸೃಷ್ಟಿ. ನೀನು ಇದನ್ನು ತೋರಿಸಿ ಇದು ನರಕ ಎಂದ ಮೇಲೆ ನಿಜವಾಗಿಯೂ ನರಕವೇ ಆಗಬೇಕಲ್ಲ ? ಮತ್ತೆ ನಾನಲ್ಲಿ ಹೊರಳಾಡಿದ ಮೇಲೆ ನನಗೆ ನರಕಭೋಗವಾದಂತಾಗಲಿಲ್ಲವೆ ?' ನಾರದರು ತುಂಬು ವಿಶ್ವಾಸದಿಂದ ಈ ಮಾತನ್ನು ಆಡಿದ್ದರು. ವಿಷ್ಣುವು ಪ್ರಸನ್ನನಾಗಿ 'ತಥಾಸ್ತು' ಎಂದನು. ನಾರದರು ದೃಢ ವಿಶ್ವಾಸದಿಂದ ನರಕದ ನಕ್ಷೆಯಮೇಲೆ ಹೊರಳಾಡಿದ್ದರಿಂದ ಅವರ ನರಕದ ದುಃಖಾನುಭವವು ಕಳೆದು ಹೋಯಿತು —ಅಷ್ಟರ ಮಟ್ಟಿಗೆ ಸ್ವಪ್ರಯತ್ನ ಮಾಡಬೇಕಾಗುತ್ತದೆ.'' ಹೀಗೆ ಶ್ರೀರಾಮಕೃಷ್ಣರು ಭಗವತ್ ಕೃಪೆಯ ರಾಜ್ಯದಲ್ಲಿಯೂ ಪುರುಷಕಾರಕ್ಕೆ ಸ್ಥಾನವಿದೆ ಎಂಬುದನ್ನು ನಮಗೆ ಆಗಾಗ ತಿಳಿಸಿಕೊಡುತ್ತಿದ್ದರು.

9. ನರದೇಹವನ್ನು ಪಡೆದ ಮೇಲೆ ಅವತಾರಪುರುಷರೂ ನಮ್ಮಂತೆಯೆ ಸ್ವಲ್ಪ ಮಟ್ಟಿಗೆ ಅಜ್ಞಾನಾದಿಗಳನ್ನು ಅನುಭವಿಸಬೇಕಾಗುತ್ತದೆ. ನಮ್ಮಂತೆಯೇ ಅವರು ಸಾಧನೆಮಾಡಿ ಅವನ್ನು ಮೀರಿಹೋಗಬೇಕು. ಎಲ್ಲಿಯವರೆಗೆ ಆ ಸ್ಥಿತಿಯಲ್ಲಿರುವರೊ ಅಲ್ಲಿಯವರೆಗೆ ಅವರಿಗೆ ತಮ್ಮ ದಿವ್ಯತೆಯ ಆಭಾಸ ಆಗಾಗ ಆಗುತ್ತಿರುತ್ತದೆ, ಆದರೆ ಮರುಕ್ಷಣವೇ ಅದು ಮುಸುಕಿಬಿಡುತ್ತದೆ. ಹೀಗೆ ಬಹುಜನ ಹಿತಕ್ಕಾಗಿ ಮಾಯೆಯ

ಆವರಣವನ್ನು ಪಡೆದುಬಂದ ಅವರು ನಮ್ಮಂತೆಯೇ ಅಂಧಕಾರದ ಮಾರ್ಗದಲ್ಲಿ ತಡವುತ್ತಾ ಮುಂದುವರಿಯಬೇಕಾಗುವುದು. ಆದರೆ ಸ್ವಾರ್ಥಸುಖದ ಆಸೆ ಲೇಶ ಮಾತ್ರವೂ ಅವರಲ್ಲಿ ಇಲ್ಲದುದರಿಂದ ಅವರಿಗೆ ನಮಗಿಂತ ಹೆಚ್ಚಾಗಿ ಬೆಳಕು ಕಾಣುತ್ತದೆ, ಅವರ ಸರ್ವಶಕ್ತಿಯೂ ಒಂದೇ ಮುಖವಾಗಿ ಹರಿದು ಬಹುಬೇಗನೆ ಗುರಿಯನ್ನು ಮುಟ್ಟುತ್ತಾರೆ.

10. ದೇವ-ಮಾನವರಾದ ಶ್ರೀರಾಮಕೃಷ್ಣರು ಮಾನವನ ಅಪರಿಪೂರ್ಣತೆಯನ್ನು ತಮ್ಮಲ್ಲಿ ಸ್ವೀಕರಿಸಿದುದರಿಂದಲೇ ಅವರ ಮಾನವಭಾವದ ವಿಶ್ಲೇಷಣೆಯಿಂದ ನಮಗೇ ಒಳಿತಾಗುತ್ತದೆ. ಆದ್ದರಿಂದ ಮಾನವಭಾವವನ್ನು ಮುಂದಿಟ್ಟುಕೊಂಡೇ ದಿವ್ಯ ಭಾವವನ್ನು ತಿಳಿಯಬೇಕು. ಅವರು ನಮ್ಮಂತೆಯೆ ಒಬ್ಬರು ಎಂದು ಭಾವಿಸದಿದ್ದರೆ ಅವರ ಅದ್ಭುತ ಅಸಾಧಾರಣ ಸಾಧನೆಗೆ ಯಾವ ಅರ್ಥವೂ ಇಲ್ಲವಾಗುತ್ತದೆ. ಅಷ್ಟೆ ಅಲ್ಲದೆ ಯಾರು ಸದಾ ಪೂರ್ಣನೊ ಅವರಿಗೇಕೆ ಸತ್ಯಸಾಕ್ಷಾತ್ಕಾರದ ಪ್ರಯತ್ನ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅವರ ಜೀವನದ ಎಲ್ಲ ಚಟುವಟಿಕೆಗಳೂ ಕೇವಲ ತೋರಿಕೆಗಾಗಿ ಎಂದೆನಿಸುತ್ತದೆ. ಅವರು ಸತ್ಯಸಾಕ್ಷಾತ್ಕಾರಕ್ಕಾಗಿ ಅಷ್ಟೊಂದು ಹೋರಾಡುವುದು, ವ್ಯಾಕುಲತೆಯಿಂದ ವಿಲಪಿಸುವುದು, ಅವರ ಅಪೂರ್ವ ತ್ಯಾಗ ಇತ್ಯಾದಿಗಳನ್ನು ನೋಡಿದಾಗ ನಮ್ಮಲ್ಲಿ ಉತ್ಸಾಹ ಕೆರಳುವ ಬದಲು, ಮನಸ್ಸು ಇನ್ನೂ ಖಿನ್ನವಾಗುತ್ತದೆ, ಈ ಸತ್ಯಸಾಕ್ಷಾತ್ಕಾರ ನಮ್ಮಿಂದಾಗದ ಕೆಲಸ ಎಂದೆನಿಸುತ್ತದೆ.

11. ಶ್ರೀರಾಮಕೃಷ್ಣರ ಕೃಪೆಗಾಗಿ ನಾವು ಹಾತೊರೆಯುವವರಾದರೂ, ಅವರು ನಮ್ಮಂತೆಯೇ ಮಾನವಭಾವದಿಂದ ಕೂಡಿದವರೆಂದು ತಿಳಿಯಬೇಕಾಗುತ್ತದೆ. ಏಕೆಂದರೆ ನಮ್ಮ ದುಃಖದಲ್ಲಿ ಸಮಭಾಗಿಗಳಾಗಿಯೆ ತಾನೆ ಅವರು ನಮ್ಮ ದುಃಖ ನಿವಾರಣೆಗೆ ಮುಂದಾಗುವುದು ? ಆದ್ದರಿಂದ ಯಾವ ದೃಷ್ಟಿಯಿಂದ ನೋಡಿದರೂ ಅವರು ಮಾನವಭಾವವುಳ್ಳವರೆಂದು ತಿಳಿಯದೆ ಗತ್ಯಂತರವಿಲ್ಲ. ಎಲ್ಲಿಯವರೆಗೆ ನಾವು ಎಲ್ಲವಿಧದ ಬಂಧನಗಳಿಂದಲೂ ಮುಕ್ತರಾಗಿ ನಿರ್ಗುಣಬ್ರಹ್ಮನಲ್ಲಿ ಪ್ರತಿಷ್ಠಿತರಾಗುವುದಿಲ್ಲವೊ ಅಲ್ಲಿಯವರೆಗೆ ಜಗತ್ಕಾರಣನಾದ ಈಶ್ವರನನ್ನೂ ಮತ್ತು ಅವನ ಅವತಾರಗಳನ್ನೂ ಮಾನವೀಯ ದೃಷ್ಟಿಯಿಂದ ನೋಡಲೇಬೇಕಾಗುತ್ತದೆ. 'ದೇವೊ ಭೂತ್ವಾ ದೇವಂ ಯಜೇತ್'— ಎಂಬುದು ವಾಸ್ತವ ಸತ್ಯ. ನಿರ್ವಿಕಲ್ಪ ಸಮಾಧಿಯನ್ನು ತಲುಪಿ ಈಶ್ವರನ ಸ್ವಸ್ವರೂಪವನ್ನು ಅರಿತಾಗಲೇ ಈ ಯಥಾರ್ಥ ಪೂಜೆ ಸಾಧ್ಯ. ಅದಕ್ಕಿಂತ ಮುಂಚೆ ನಮ್ಮ ಪೂಜೆ ಆ ದೇವತಾ ಸ್ವರೂಪವನ್ನು ಪಡೆಯುವ ಪ್ರಯತ್ನ, ಮತ್ತು ಇಲ್ಲಿ ಈಶ್ವರನನ್ನು ವಿಶಿಷ್ಟ ಶಕ್ತಿಸಂಪನ್ನ ಮಾನವನೆಂದೇ ಭಾವಿಸಬೇಕಾಗುತ್ತದೆ.

12. ದೇವತ್ವವನ್ನು ಪಡೆದು ಈಶ್ವರನ ಮಾಯಾತೀತ ದಿವ್ಯ ಸ್ವರೂಪದ ಯಥಾರ್ಥ ಪೂಜೆ ಎಲ್ಲೊ ಕೆಲವರಿಗೆ ಸಾಧ್ಯ. ನಮ್ಮಂತಹ ಸಾಮಾನ್ಯ ಭಕ್ತರಿಗೆ ಇದು ದೂರದ ಮಾತು. ಆದ್ದರಿಂದ ನಮ್ಮ ಮೇಲಿನ ಕರುಣೆಯಿಂದಲೇ ಈಶ್ವರನು ಅವತರಿಸಿ ಮಾನವೀಯ ಭಾವವನ್ನು ಸ್ವೀಕರಿಸಿ ದೇವ-ಮಾನವನಾಗುತ್ತಾನೆ. ಪುರಾತನ ದೇವ

ಮಾನವರಿಗೆ ಹೋಲಿಸಿದರೆ ಶ್ರೀರಾಮಕೃಷ್ಣರ ಸಾಧನ ಜೀವನದ ಅಧ್ಯಯನಕ್ಕೆ ನಮಗೆ ಸಾಕಷ್ಟು ಅವಕಾಶವಿದೆ. ಏಕೆಂದರೆ ಶ್ರೀರಾಮಕೃಷ್ಣರೇ ಆಗಾಗ ತಮ್ಮ ಸಾಧನೆಗಳ ಬಗ್ಗೆ ಮನಮುಟ್ಟುವಂತೆ ವಿವರಣೆ ನೀಡಿರುವರು. ಮತ್ತೆ, ನಾವು ಅವರೆಡೆಗೆ ಹೋಗುವುದಕ್ಕೆ ಸ್ವಲ್ಪ ಹಿಂದೆಯಷ್ಟೇ ಅವರು ದಕ್ಷಿಣೇಶ್ವರದಲ್ಲಿ ತಮ್ಮ ಅಮೋಘ ಸಾಧನೆಗಳಲ್ಲಿ ನಿರತ ರಾಗಿದ್ದರು ಮತ್ತು ಅವನ್ನೆಲ್ಲ ಕಣ್ಣಾರೆ ಕಂಡ ವ್ಯಕ್ತಿಗಳು ಆಗಲೂ ಅಲ್ಲಿದ್ದರು. ಅವರ ಮೂಲಕ ಶ್ರೀರಾಮಕೃಷ್ಣರ ಸಾಧನೆಗಳ ಬಗ್ಗೆ ಸಾಕಷ್ಟು ಕೇಳಿರುವೆವು. ಇದು ಏನೇ ಇರಲಿ, ನಮ್ಮ ಕಥೆಯನ್ನು ಮುಂದುವರಿಸುವ ಮೊದಲು ಸಾಧನತತ್ತ್ವದ ಮೂಲ ಸೂತ್ರಗಳ ಸ್ಥೂಲ ವಿವೇಚನೆ ಮಾಡುವುದೊಳಿತು.

ಮೊದಲನೆಯ ಅಧ್ಯಾಯ

ಸಾಧಕ ಮತ್ತು ಸಾಧನೆ

1. ಸಾಧನೆಯ ವಿಷಯದಲ್ಲಿರುವ ಭ್ರಾಂತಿ 2. ಸಾಧನೆಯ ಅಂತಿಮ ಗುರಿ ಸರ್ವಭೂತಗಳಲ್ಲಿಯೂ ಬ್ರಹ್ಮದರ್ಶನ 3. ಅಜ್ಞಾನದಿಂದಾಗಿ ಸತ್ಯ ಪ್ರತ್ಯಕ್ಷವಾಗುವುದಿಲ್ಲ 4. ಋಷಿಗಳು ಜಗತ್ತನ್ನು ಹೇಗೆ ನೋಡುತ್ತಿದ್ದರು ? 5. ಭ್ರಮೆ ಸರ್ವಸಾಮಾನ್ಯವಾದರೂ ಸತ್ಯವಲ್ಲ 6. ವಿಶ್ವಮನಸ್ಸಿನಲ್ಲಿ ಜಗತ್ಕಲ್ಪನೆ ಉಂಟಾಗಿರುವುದರಿಂದ ಭ್ರಮೆ ಸಾಮಾನ್ಯವಾಗಿದೆ 7. ಜಗತ್ಕಲ್ಪನೆ ದೇಶಕಾಲಾತೀತ— ಪ್ರಕೃತಿ ಅನಾದಿ 8. ದೇಶಕಾಲಾತೀತ ಜಗತ್ಕಾರಣವನ್ನು ತಿಳಿಯುವ ಪ್ರಯತ್ನವೇ ಸಾಧನೆ 9. 'ನೇತಿ ನೇತಿ' ಮತ್ತು 'ಇತಿ ಇತಿ' ಸಾಧನಮಾರ್ಗಗಳು 10. 'ನೇತಿ ನೇತಿ' ಮಾರ್ಗದ ಗುರಿ 11. ನಿರ್ವಿಕಲ್ಪ ಸಮಾಧಿ 12. 'ಇತಿ ಇತಿ' ಮಾರ್ಗದಿಂದ ನಿರ್ವಿಕಲ್ಪ ಸಮಾಧಿ 13. ಅವತಾರಪುರುಷರಲ್ಲಿ ದೇವ ಮತ್ತು ಮಾನವಭಾವ

1. ಶ್ರೀರಾಮಕೃಷ್ಣರ ಜೀವನದ ಸಾಧಕಭಾವವನ್ನು ಅರ್ಥಮಾಡಿಕೊಳ್ಳಬೇಕಾದರೆ ಯಾವುದನ್ನು ಸಾಧನೆಯೆಂದು ಕರೆಯುತ್ತೇವೆ ಎಂಬುದನ್ನು ತಿಳಿಯುವುದು ಆವಶ್ಯಕ. ಭಾರತದಲ್ಲಿ ಎಲ್ಲ ಕಾಲದಲ್ಲಿಯೂ ಅಧ್ಯಾತ್ಮ ಸಾಧನೆ ನಡೆದೇ ಇದೆ. ಮತ್ತೆ ಅದರ ಬಗ್ಗೆ ಹೇಳಿ ಗ್ರಂಥವನ್ನು ಬೆಳೆಸುವುದು ಅನವಶ್ಯಕ ಎಂದು ಕೆಲವರು ಆಕ್ಷೇಪಿಸಬಹುದು. ಅತ್ಯಂತ ಪ್ರಾಚೀನಕಾಲದಿಂದಲೂ ಭಾರತ ಆಧ್ಯಾತ್ಮಿಕ ರಾಜ್ಯದ ವಿವಿಧ ಸತ್ಯಗಳ ಆವಿಷ್ಕಾರದಲ್ಲಿ ತೊಡಗಿದೆ. ಈ ವಿಚಾರದಲ್ಲಿ ಇಲ್ಲಿ ನಡೆದಷ್ಟು ಪ್ರಯೋಗ ಬೇರೆ ಎಲ್ಲೂ ನಡೆದಿಲ್ಲ. ಇಲ್ಲಿ ಕಾಣುವಷ್ಟು ಸಂತ ಮಹಾಪುರುಷರನ್ನೂ, ಅವತಾರ ಪುರುಷರನ್ನೂ ಮತ್ತೆಲ್ಲಿಯೂ ಕಾಣೆವು. ಆದ್ದರಿಂದ ಸಾಧನೆಯ ಬಗ್ಗೆ ಚಿರಪರಿಚಿತರಾದ ನಮಗೆ ಮತ್ತೆ ಅದೇ ವಿಷಯವನ್ನೇ ವಿವರಿಸಿ ಹೇಳುವುದು ನಿಷ್ಪ್ರಯೋಜಕ ಎಂದು ಅನ್ನಿಸಬಹುದು.

ಇದು ನಿಜವಾದರೂ ಇದರಿಂದ ಪ್ರಯೋಜನವುಂಟು. ಏಕೆಂದರೆ ಜನರಲ್ಲಿ ಸಾಧನೆಯ ಬಗ್ಗೆ ಎಷ್ಟೊ ವಿಚಿತ್ರಭಾವನೆಗಳಿವೆ. ಸಾಧನೆಯ ನಿಜವಾದ ಉದ್ದೇಶವನ್ನು ಮರೆತು ಕೇವಲ ದೇಹದಂಡನೆ, ಯಾವುದೊ ದುಷ್ಪ್ರಾಪ್ಯ ವಸ್ತುವನ್ನೊ, ಸ್ಥಾನವನ್ನೊ ಪಡೆಯುವ ನಿರರ್ಥಕ ಪ್ರಯಾಸ, ಶ್ವಾಸಪ್ರಶ್ವಾಸ ನಿರೋಧ ಇವೇ ಮುಂತಾದುವುಗಳಲ್ಲಿ ಅನೇಕರು ತೊಡಗಿರುತ್ತಾರೆ. ಕೆಟ್ಟ ಸಂಸ್ಕಾರ ಅಭ್ಯಾಸಗಳಿಂದ ವಿಕೃತಗೊಂಡ ಮನಸ್ಸನ್ನು ಸರಿಪಡಿಸಲು ಮಹಾಪುರುಷರು ಉಪದೇಶಿಸಿದ ಕೆಲವು ವಿಲಕ್ಷಣ ಕ್ರಿಯೆ ಅಥವಾ ಉಪಾಯಗಳನ್ನೇ ಸಾಧನೆಗಳೆಂದು ಅನೇಕರು ಭಾವಿಸುವುದುಂಟು.

ವೈರಾಗ್ಯವಿಲ್ಲದೆಯೇ, ಇಂದ್ರಿಯ ಸುಖದ ಲಾಲಸೆಯನ್ನು ಬಿಡದೆಯೇ ಮಂತ್ರೌಷಧಿಗಳಿಂದ ಸರ್ಪವನ್ನು ವಶೀಕರಿಸುವಂತೆ, ಮಂತ್ರ ಅಥವಾ ವಿಶೇಷ ಕ್ರಿಯಾಕಲಾಪಗಳ ಮೂಲಕ ಜಗತ್ಕಾರಣನಾದ ಈಶ್ವರನನ್ನೂ ವಶಪಡಿಸಿಕೊಳ್ಳಬಹುದೆಂಬ ಭ್ರಾಂತಿಯಿಂದ ಅನವಶ್ಯಕವಾಗಿ ತಮ್ಮ ಶಕ್ತಿ ಮತ್ತು ಕಾಲವನ್ನು ವ್ಯಯಿಸುತ್ತಾರೆ. ಆದ್ದರಿಂದ ಸಾವಿರಾರು ವರ್ಷಗಳ ಪ್ರಯೋಗದಿಂದ ನಮ್ಮ ಋಷಿಮುನಿಗಳು ಕಂಡುಹಿಡಿದ ಯಥಾರ್ಥಸಾಧನೆಯನ್ನು ಕುರಿತು ಚರ್ಚಿಸುವುದು ಯುಕ್ತವೆನಿಸುತ್ತದೆ.

2. ಶ್ರೀರಾಮಕೃಷ್ಣರು ಹೇಳುತ್ತಿದ್ದರು. ''ಸರ್ವಭೂತಗಳಲ್ಲಿಯೂ ಬ್ರಹ್ಮ ಅಥವಾ ಈಶ್ವರನನ್ನು ನೋಡುವುದು ಸಾಧನೆಯ ಕೊನೆಯ ಹಂತ'' ಎಂದು. ವೇದೋಪನಿಷತ್ತುಗಳೂ ಇದನ್ನೇ ಸಾರುವುವು. ಈ ಜಗತ್ತಿನಲ್ಲಿ ನಾವು ಕಾಣುವ ಪ್ರತಿಯೊಂದೂ ಕೂಡ ಅದ್ವಯಬ್ರಹ್ಮವಸ್ತುವೇ—ಎಂದು ಶಾಸ್ತ್ರ ಹೇಳುತ್ತದೆ. ಒಂದೇ ಬ್ರಹ್ಮವಸ್ತುವನ್ನೇ ನಾವು ಅನೇಕ ರೂಪಗಳಲ್ಲಿ ನೋಡುತ್ತಿದ್ದೇವೆ. ಅನೇಕ ರೀತಿಯಲ್ಲಿ ಅನುಭವಿಸುತ್ತಿದ್ದೇವೆ. ನಾವು ಯಾವಾಗಲೂ ಅದರೊಂದಿಗೇ ವ್ಯವಹರಿಸುತ್ತಿದ್ದರೂ ತಿಳಿಯದೆ ಭಿನ್ನ ಭಿನ್ನ ವಸ್ತುಗಳೊಡನೆ, ವ್ಯಕ್ತಿಗಳೊಡನೆ ವ್ಯವಹರಿಸುತ್ತಿರುವುದಾಗಿ ಭಾವಿಸುತ್ತೇವೆ. ಇದನ್ನು ಕೇಳಿದಾಗ ನಮ್ಮ ಮನಸ್ಸಿನಲ್ಲಿ ಹಲವಾರು ಪ್ರಶ್ನೆಗಳು ಉದಯಿಸುವುವು. ಪ್ರಶ್ನೋತ್ತರ ರೂಪದಲ್ಲಿ ಈ ವಿಷಯವನ್ನು ಕೆಳಗೆ ನಿರೂಪಿಸುತ್ತೇವೆ :

3. ಪ್ರ : ಈ ವಿಷಯ ನಮಗೆ ಪ್ರತ್ಯಕ್ಷವಾಗಿ ಕಾಣುತ್ತಿಲ್ಲವಲ್ಲ ಏಕೆ ?

ಉ : ನಮಗೆ ಭ್ರಮೆ ಕವಿದಿದೆ. ನಾವು ಎಲ್ಲಿಯವರೆಗೆ ಈ ಭ್ರಮೆಯಲ್ಲಿರುತ್ತೇವೆಯೊ ಅಲ್ಲಿಯವರೆಗೆ ಈ ಭ್ರಮೆಯನ್ನು ಅರಿಯಲಾರೆವು. ಯಥಾರ್ಥ ವಸ್ತು ಮತ್ತು ಅವಸ್ತು-ಇವುಗಳ ತುಲನೆಯಿಂದಲೇ ನಮಗೆ ಭ್ರಮನಿರಸನವಾಗುವುದು. ಈ ಭ್ರಮೆಯನ್ನು ಅರ್ಥಮಾಡಿಕೊಳ್ಳಬೇಕಾದರೂ ನಮಗೆ ಜ್ಞಾನದ ಆವಶ್ಯಕತೆಯುಂಟು.

ಪ್ರ : ಈ ಭ್ರಮೆಗೆ ಕಾರಣವೇನು ? ಯಾವಾಗ ನಮಗೆ ಈ ಭ್ರಮೆ ಉಂಟಾಯಿತು ?

ಉ : ಎಲ್ಲ ಕಡೆಯಂತೆ ಇಲ್ಲಿಯೂ ಕೂಡ ಭ್ರಮೆಗೆ ಕಾರಣ ಅಜ್ಞಾನ. ಈ ಅಜ್ಞಾನ ಯಾವಾಗ ಉಂಟಾಯಿತೆಂದು ಹೇಗೆ ಹೇಳುವುದು ? ಎಲ್ಲಿಯವರೆಗೆ ನಾವು ಅಜ್ಞಾನದೊಳಗೇ ಇರುತ್ತೇವೆಯೊ ಅಲ್ಲಿಯವರೆಗೆ ಅದನ್ನು ತಿಳಿಯುವ ಪ್ರಯತ್ನ ವ್ಯರ್ಥ. ಎಲ್ಲಿಯವರೆಗೆ ನಾವು ಕನಸು ಕಾಣುತ್ತಿರುವೆವೊ ಅಲ್ಲಿಯವರೆಗೆ ಅದು ಸತ್ಯವೆಂದೇ ತೋರುತ್ತದೆ. ನಿದ್ರಾಭಂಗವಾದಮೇಲೆ ಜಾಗ್ರದವಸ್ಥೆಯೊಡನೆ ಅದನ್ನು ಹೋಲಿಸಿದಾಗ ಅದು ಭ್ರಮೆ ಎಂದು ಅರಿಯುವುದು. ಕೆಲವೊಮ್ಮೆ ಕನಸು ಕಾಣುತ್ತಿರುವಾಗಲೂ ಇದು ಕನಸು ಎಂದು ಅನಿಸುವುದುಂಟು. ಹಾಗಾಗುವುದೂ ಕೂಡ ಜಾಗ್ರದವಸ್ಥೆಯ ಸ್ಮೃತಿ ನಮಗುಂಟಾಗುವುದರಿಂದ. ಇದೇ ರೀತಿ ಜಾಗ್ರದವಸ್ಥೆ

ಯಲ್ಲಿ ಜಗತ್ತನ್ನು ಪ್ರತ್ಯಕ್ಷವಾಗಿ ನೋಡುತ್ತಿರುವಾಗಲೂ ಕೆಲವರಿಗೆ ಅದ್ವಯ ಬ್ರಹ್ಮ ವಸ್ತುವಿನ ಸ್ಮೃತಿ ಉಂಟಾಗುತ್ತದೆ.

4. ಪ್ರ : ಹಾಗಾದರೆ ಹಾದಿಯಾವುದು ?

ಉ : ಈ ಅಜ್ಞಾನವನ್ನು ದೂರಮಾಡಬೇಕು. ಈ ಅಜ್ಞಾನ ಅಥವಾ ಭ್ರಮೆ ಯನ್ನು ನಿವಾರಿಸಬಹುದು ಎಂಬುದನ್ನು ನಿಶ್ಚಯವಾಗಿ ಹೇಳಬಹುದು. ಹಿಂದಿನ ಋಷಿಮುನಿಗಳೆಲ್ಲ ಇದರಿಂದ ಮುಕ್ತರಾಗಿದ್ದರು ಮತ್ತು ಅವರು ಮಾರ್ಗವನ್ನೂ ತೋರಿಸಿರುವರು.

5. ಪ್ರ : ಇನ್ನೊಂದು ಪ್ರಶ್ನೆ. ನಾವೆಲ್ಲರೂ ಯಾವುದನ್ನು ನೋಡು ತ್ತಿರುವೆವೊ, ಅನುಭವಿಸುತ್ತಿರುವೆವೊ ಅದೆಲ್ಲ ಭ್ರಮೆ ಎನ್ನುತ್ತೀರಿ. ಎಲ್ಲೋ ಕೆಲವೇ ಋಷಿಮುನಿಗಳು ಯಾವುದನ್ನು ಅನುಭವಿಸಿರುವರೊ ಅದನ್ನು ನೀವು ಸತ್ಯ ಎನ್ನು ತ್ತಿರುವಿರಿ. ಅವರು ಅನುಭವಿಸಿರುವುದನ್ನೇ ಭ್ರಮೆ ಎಂದು ಏಕೆ ಹೇಳಬಾರದು ?

ಉ : ಬಹುಜನರು ಯಾವುದನ್ನು ನಂಬುತ್ತಾರೊ ಅದೇ ಯಾವಾಗಲೂ ಸತ್ಯ ಎಂಬ ನಿಯಮವೇನೂ ಇಲ್ಲ. ಋಷಿಗಳು ಕಂಡಿದ್ದನ್ನು ಸತ್ಯ ಎಂದು ಹೇಳಲು ಕಾರಣ, ಅವರು ಆ ಅನುಭವದ ಸಹಾಯದಿಂದ ದುಃಖ ಭಯಗಳಿಂದ ಮುಕ್ತರಾಗಿ ಚಿರಶಾಂತಿ ಯನ್ನು ಪಡೆದರು. ಮತ್ತೆ, ಸತ್ಯ-ಸಾಕ್ಷಾತ್ಕಾರದಿಂದ ಅವರ ಜೀವನದಲ್ಲಿ ಮಹತ್ ಪರಿವರ್ತನೆಯುಂಟಾಯಿತು. ಅವರು ಅಸಂಖ್ಯ ಸದ್ಗುಣಗಳಿಂದ ಭೂಷಿತರಾದರು. ಅವರನ್ನು ಅನುಸರಿಸಿದವರೂ ಅದೇ ಪ್ರತಿಫಲ ಪಡೆದಿರುವುದನ್ನು ನೋಡಿರುವೆವು.

6. ಪ್ರಶ್ನೆ : ಎಲ್ಲರಿಗೂ ಒಂದೇ ರೀತಿಯ ಭ್ರಮೆ ಉಂಟಾಗಿದೆಯಲ್ಲ ಹೇಗೆ? ನಾನು ಒಂದನ್ನು ಪಶುವಾಗಿ ಕಂಡರೆ ಎಲ್ಲರಿಗೂ ಅದೇ ರೀತಿ ಅದು ಕಾಣಿಸುತ್ತದೆ, ಬೇರೆಯಾಗಿ ಕಾಣಿಸುವುದಿಲ್ಲ. ಇದೇ ರೀತಿ ಎಲ್ಲ ವಿಷಯದಲ್ಲಿಯೂ ಕೂಡ. ಎಲ್ಲರೂ ಏಕಕಾಲದಲ್ಲಿ ಏಕರೀತಿಯಲ್ಲಿ ನೋಡುತ್ತಿರುವುದನ್ನು ಭ್ರಮೆ ಎಂದು ಕರೆಯುವುದು ಆಶ್ಚರ್ಯದ ಮಾತು. ಐದು ಜನರು ಒಂದು ವಿಷಯವನ್ನು ತಪ್ಪಾಗಿ ತಿಳಿದರೂ ಮತ್ತೈದು ಜನರು ಅದನ್ನು ಯಥಾರ್ಥವಾಗಿ ಕಾಣುವರು-ಇದನ್ನೇ ನಾವು ಎಲ್ಲೆಲ್ಲಿಯೂ ನೋಡುತ್ತೇವೆ. ನೀವು ಹೇಳುವುದು ಈ ನಿಯಮಕ್ಕೆ ವಿರುದ್ಧವಾಗಿ ಕಾಣುತ್ತಿದೆ. ಆದ್ದರಿಂದ ನಿಮ್ಮ ಮಾತು ಸರಿಯೆನಿಸುವುದಿಲ್ಲ.

ಉ : ಕೆಲವೇ ಕೆಲವು ಋಷಿಗಳನ್ನು ಜನಸಾಮಾನ್ಯರಿಂದ ನೀವು ಪ್ರತ್ಯೇಕಿಸು ವುದರಿಂದ ಈ ನಿಯಮ ವ್ಯತಿರಿಕ್ತವಾದಂತೆ ಅನಿಸುತ್ತದೆ. ಇಲ್ಲದಿದ್ದರೆ ಹಿಂದಿನ ಪ್ರಶ್ನೆಯ ಉತ್ತರದಲ್ಲಿಯೇ ಇದರ ಉತ್ತರವೂ ಅಡಗಿದೆ ಎಲ್ಲರಿಗೂ ಏಕಪ್ರಕಾರ ವಾಗಿ ಭ್ರಮೆ ಉಂಟಾಗಿರುವುದಕ್ಕೆ ಕಾರಣ, ಒಂದು ಅಸೀಮ ಅನಂತ ಸಮಷ್ಟಿ ಮನಸ್ಸಿ ನಲ್ಲಿ ಈ ಜಗದ್ರೂಪದ ಕಲ್ಪನೆ ಉಂಟಾಗಿದೆ. ನಮ್ಮೆಲ್ಲರ ಪ್ರತ್ಯೇಕವಾದ ಮನಸ್ಸು ಗಳು ಆ ಸಮಷ್ಟಿ ಮನಸ್ಸಿನ ಅಂಶಗಳು. ಇದರಿಂದಾಗಿ ನಮಗೆಲ್ಲರಿಗೂ ಒಂದೇ ರೀತಿಯ ಕಲ್ಪನೆಯ ಅನುಭವವಾಗುತ್ತಿದೆ, ನಾವೆಲ್ಲರೂ ಪಶುವನ್ನು ಪಶುವಾಗಿಯೇ ನೋಡ

ಬೇಕೇ ಹೊರತು, ನಮಗಿಷ್ಟ ಬಂದಂತೆ ಬೇರೆ ಬೇರೆ ರೀತಿಯಲ್ಲಿ ನೋಡಲಾಗುವುದಿಲ್ಲ. ಇದರಿಂದಾಗಿಯೇ ನಮ್ಮಲ್ಲಿ ಒಬ್ಬನು ಭ್ರಮನಿರಸನ ಹೊಂದಿ ಯಥಾರ್ಥ ಸತ್ಯವನ್ನು ತಿಳಿದರೂ ಉಳಿದೆಲ್ಲರೂ ಅದೇ ಭ್ರಮೆಯಲ್ಲಿಯೇ ಮುಳುಗಿರಬೇಕು. ಇನ್ನೊಂದು ವಿಷಯ, ಈಶ್ವರನ ವಿಶ್ವ ಮನಸ್ಸಿನಲ್ಲಿ ಜಗದ್ರೂಪದ ಕಲ್ಪನೆಯುಂಟಾಗಿದ್ದರೂ ಅವನಿಗೆ ನಮ್ಮಂತೆ ಅಜ್ಞಾನದ ಬಂಧನವಿಲ್ಲ. ಸರ್ವದರ್ಶಿಯಾದ ಅವನು ಈ ಅಜ್ಞಾನ ಕಲ್ಪಿತ ಜಗತ್ತಿನ ಒಳಹೊರಗೆಲ್ಲ ಅದ್ವಯ ಬ್ರಹ್ಮನನ್ನೇ ನೋಡುತ್ತಿರುತ್ತಾನೆ. ನಮಗದು ಸಾಧ್ಯವಿಲ್ಲದುದರಿಂದ ನಾವು ನೋಡುವುದೆಲ್ಲ ಭ್ರಮೆ. "ಸರ್ಪದ ಬಾಯಿಯಲ್ಲಿ ವಿಷ ವಿರುತ್ತದೆ. ಆದರಿಂದ ಅದಕ್ಕೇನೂ ತೊಂದರೆಯಿಲ್ಲ. ಆದರೆ ಅದು ಯಾರನ್ನು ಕಡಿಯುವುದೊ ಅವರು ಸಾಯುವರು" ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು.

7. ಶಾಸ್ತ್ರ ದೃಷ್ಟಿಯಿಂದ ಹೇಳುವುದಾದರೆ, ವಿರಾಡ್ ಮನಸ್ಸಿನ ಕಲ್ಪನಾ ಸಂಭೂತವಾದ ಈ ಜಗತ್ತು ನಮ್ಮ ಮನಸ್ಸಿನ ಕಲ್ಪನೆಯೂ ಹೌದು. ನಮ್ಮ ಈ ವ್ಯಷ್ಟಿ ಮನಸ್ಸು ವಿರಾಡ್ ಮನಸ್ಸಿನ ಅಂಗ-ಶರೀರ ಮತ್ತು ಅದರ ಅವಯವಗಳಿದ್ದಂತೆ. ಮತ್ತೆ, ಈ ಜಗದ್ರೂಪ ಕಲ್ಪನೆಯು ಒಂದು ಕಾಲದಲ್ಲಿ ವಿರಾಡ್ ಮನಸ್ಸಿನಲ್ಲಿರಲಿಲ್ಲ, ಅನಂತರ ಆರಂಭವಾಯಿತು—ಎಂದು ಹೇಳಲಾಗುವುದಿಲ್ಲ. ಏಕೆಂದರೆ, ಈ ನಾಮ-ರೂಪ, ಅಥವಾ ದೇಶ-ಕಾಲ—ಇವುಗಳಿಲ್ಲದೆ ಈ ವಿಚಿತ್ರ ದೃಶ್ಯ ಅಸಾಧ್ಯ ಮತ್ತು ಇವು ಜಗದ ಕಲ್ಪನೆಯೊಡನೆ ಅಥವಾ ವಸ್ತುವಿನೊಡನೆ ಸದಾ ಅವಿಭಾಜ್ಯವಾಗಿ ಒಂದಾಗಿವೆ—ಇವನ್ನು ಪ್ರತ್ಯೇಕಿಸಲಾಗುವುದಿಲ್ಲ. ಸೂಕ್ಷ್ಮವಾಗಿ ವಿಚಾರಮಾಡಿದಾಗ ಎಲ್ಲರಿಗೂ ತಿಳಿಯುವಂತಹ ವಿಷಯವಿದು. ಇದರಿಂದಾಗಿಯೇ ಜಗತ್ತಿನ ಮೂಲ ಕಾರಣವಾದ ಪ್ರಕೃತಿ ಅಥವಾ ಮಾಯೆಯನ್ನು ಶಾಸ್ತ್ರದಲ್ಲಿ ಅನಾದಿ ಎಂದು ಕರೆದಿರುವುದು. ಜಗತ್ತು ಮನಃಕಲ್ಪನೆಯೇದಾದರೆ ಮತ್ತು ಈ ಕಲ್ಪನೆಯ ಆರಂಭವು ಕಾಲದ ವ್ಯಾಪ್ತಿಯ ಒಳಗೆ ಬರುವುದಿಲ್ಲವೆಂದಾದರೆ, ಕಾಲರೂಪ ಕಲ್ಪನೆಯ ಒಟ್ಟೊಟ್ಟಿಗೇ ಜಗತ್‌ಕಲ್ಪನೆಯೂ ವಿರಾಡ್ ಮನಸ್ಸಿನಲ್ಲಿ ಇರುವುದು ಎಂದು ಹೇಳಬೇಕಾಗುತ್ತದೆ. ನಮ್ಮ ವ್ಯಷ್ಟಿ ಮನಸ್ಸು ಈ ಕಲ್ಪಿತ ಜಗತ್ತನ್ನು ನೋಡಿ ನೋಡಿ ಅದೇ ದೃಢ ಸತ್ಯವಾಗಿಬಿಟ್ಟಿದೆ ನಮಗೆ. ಜಗದ್ರೂಪ ಕಲ್ಪನೆಯನ್ನು ಮೀರಿದ ಬ್ರಹ್ಮವಸ್ತುವಿನ ದರ್ಶನದಿಂದ ವಂಚಿತರಾದ ನಮಗೆ ಇದೆಲ್ಲವೂ ಭ್ರಮೆ ಎಂಬುದು ಅರಿಯದಾಗಿದೆ. ಮೊದಲೇ ಹೇಳಿದಂತೆ ಯಥಾರ್ಥ ವಸ್ತು ಮತ್ತು ಅವಸ್ತು ಇವುಗಳ ತುಲನೆಯಿಂದಲೇ ಯಾವುದು ಭ್ರಮೆ ಎಂಬುದನ್ನು ನಿರ್ಣಯಿಸಲು ಸಾಧ್ಯ.

8. ಜಗತ್ತಿನ ಬಗ್ಗೆ ನಮ್ಮ ಈ ಅಭಿಪ್ರಾಯ ಮತ್ತು ಅನುಭವ ಬಹು ಕಾಲದ ಅಭ್ಯಾಸದ ಫಲವಾಗಿ ಈಗಿನ ಸ್ಥಿತಿಯನ್ನು ಮುಟ್ಟಿದೆ. ಇದರ ಯಥಾರ್ಥ ಜ್ಞಾನವನ್ನು ಪಡೆಯಬೇಕಾದರೆ ನಾಮ-ರೂಪ, ದೇಶ-ಕಾಲ, ಮನಸ್ಸು-ಬುದ್ಧಿ—ಇವುಗಳಿಗೆ ಮೀರಿದ ಸತ್ಯವಸ್ತುವಿನ ಪರಿಚಯ ನಮಗಾಗಬೇಕಾಗಿದೆ. ಈ ಪರಿಚಯವನ್ನು ಪಡೆಯುವ ಪ್ರಯತ್ನವನ್ನೇ 'ಸಾಧನೆ' ಎಂದು ಶಾಸ್ತ್ರ ಕರೆಯುವುದು. ಯಾರು

ಈ ಪ್ರಯತ್ನದಲ್ಲಿ ತೊಡಗುವರೊ ಅವರೇ ಸಾಧಕರು.

9. ಸ್ಥೂಲ ರೀತಿಯಲ್ಲಿ ಹೇಳುವುದಾದರೆ, ಅತೀತ ಸತ್ಯವನ್ನರಿಯಲು ಮೇಲೆ ಹೇಳಿರುವ ಸಾಧನೆಯಲ್ಲಿ ಎರಡು ಬಗೆಗಳಿವೆ : ಒಂದು ಶಾಸ್ತ್ರದಲ್ಲಿ ಹೇಳಿರುವ 'ನೇತಿ ನೇತಿ' ವಿಧಾನದ ಜ್ಞಾನ ಮಾರ್ಗ, ಇನ್ನೊಂದು 'ಇತಿ ಇತಿ' ವಿಧಾನದ ಭಕ್ತಿಮಾರ್ಗ. ಜ್ಞಾನಮಾರ್ಗದ ಸಾಧಕನು ಮೊದಲಿನಿಂದಲೂ ಚರಮ ಲಕ್ಷ್ಯವನ್ನು ಮನಸ್ಸಿನಲ್ಲಿಟ್ಟು ಕೊಂಡು ಅದನ್ನೇ ಸ್ಮರಿಸುತ್ತ ನೇರವಾಗಿ ಅದನ್ನು ಪಡೆಯಲು ಪ್ರಯತ್ನಿಸುತ್ತಾನೆ. ಭಕ್ತಿಮಾರ್ಗಿಗಳು ಒಂದಾದ ಮೇಲೆ ಮತ್ತೊಂದು ಉನ್ನತ ಗುರಿಗಳನ್ನಿಟ್ಟುಕೊಂಡು ಹಂತ ಹಂತವಾಗಿ ಮುಂದುವರಿದು ಕೊನೆಯಲ್ಲಿ ಅತೀತ ಸತ್ಯವಾದ ಪರಬ್ರಹ್ಮನನ್ನು ಪಡೆಯುತ್ತಾರೆ. ಜಗತ್ತನ್ನು ಕುರಿತಂತೆ ಸಾಧಾರಣ ವ್ಯಕ್ತಿಗಳ ಭಾವನೆಗಳನ್ನು ಎರಡೂ ಬಗೆಯ ಸಾಧಕರು ತ್ಯಾಗಮಾಡಬೇಕು. ಜ್ಞಾನಿಯು ಮೊದಲಿನಿಂದಲೇ ಅದನ್ನು ಸರ್ವ ವಿಧದಲ್ಲೂ ತ್ಯಜಿಸಲು ಪ್ರಯತ್ನಿಸುತ್ತಾನೆ. ಭಕ್ತನು ಅದರಲ್ಲಿ ಸ್ವಲ್ಪವನ್ನು ಗ್ರಹಿಸಿ ಇನ್ನು ಸ್ವಲ್ಪವನ್ನು ತ್ಯಜಿಸಿ ಸಾಧನೆಯಲ್ಲಿ ಮುಂದುವರಿಯುತ್ತ ಕೊನೆಯಲ್ಲಿ ಜ್ಞಾನಿ ಯಂತೆಯೇ ಎಲ್ಲವನ್ನೂ ತ್ಯಜಿಸಿ ಏಕಮೇವಾದ್ವಿತೀಯ ಸತ್ಯವನ್ನು ಪಡೆಯುತ್ತಾನೆ. ಜಗತ್ಸಂಬಂಧಿಯಾದ ಜನಸಾಧಾರಣರ ಸ್ವಾರ್ಥಪರ ಭೋಗಸುಖದ ಭಾವನೆಯ ತ್ಯಾಗ ವನ್ನೇ ಶಾಸ್ತ್ರ ವೈರಾಗ್ಯವೆಂದು ಕರೆಯುತ್ತದೆ.

ಯಾವಾಗಲೂ ಪರಿವರ್ತನೆಗೊಳ್ಳುವ, ಮೃತ್ಯು ಬದ್ಧವಾದ ಈ ಮಾನವಜೀವನ ದಲ್ಲಿ ಜಗತ್ತಿನ ಅನಿತ್ಯತೆಯ ಅರಿವು ಸಹಜವಾಗಿಯೇ ಬರುತ್ತದೆ. ಇದರಿಂದಾಗಿಯೇ ಸಾಧಕರು ಹಿಂದಿನಿಂದಲೂ 'ನೇತಿ ನೇತಿ' ಮಾರ್ಗದಿಂದ ಜಗತ್ಸಂಬಂಧದ ಸಾಧಾರಣ ಭಾವನೆಗಳನ್ನು ತ್ಯಜಿಸಿ ಜಗತ್ಕಾರಣವನ್ನು ಅರಿಯಲು ಪ್ರಯತ್ನಿಸಿದರು. ಆದ್ದರಿಂದ ಭಕ್ತಿ ಮತ್ತು ಜ್ಞಾನ ಮಾರ್ಗಗಳು ಒಟ್ಟಿಗೆ ಬೆಳೆದುಬಂದರೂ, ಭಕ್ತಿಮಾರ್ಗವು ತನ್ನ ಪರಿಪಕ್ವವನ್ನು ಮುಟ್ಟುವುದಕ್ಕೆ ಬಹಳ ಮುಂಚೆಯೇ ಜ್ಞಾನಮಾರ್ಗವು ಉಪನಿಷತ್ತಿನಲ್ಲಿ ಪರಿಪುಷ್ಟವಾಗಿ ಬೆಳೆದುನಿಂತಿದೆ.

10. ಸಾಧಕನು ಸತ್ಯವಸ್ತು ಇದಲ್ಲ, ಅದಲ್ಲ ಎಂದು 'ನೇತಿ ನೇತಿ' ಮಾರ್ಗ ವನ್ನು ಹಿಡಿದು ಅತಿ ಶೀಘ್ರವಾಗಿಯೇ ಅಂತರ್ಮುಖಿಯಾಗುವನೆಂಬುದನ್ನು ಉಪನಿ ಷತ್ತುಗಳು ತೋರಿಸಿಕೊಟ್ಟಿರುವುವು. ಎಲ್ಲದಕ್ಕೂ ಹೆಚ್ಚಾಗಿ ತನ್ನ ದೇಹ ಮನಸ್ಸು ಗಳೇ ತನ್ನನ್ನು ಜಗತ್ತಿನೊಡನೆ ಬಂಧಿಸಿವೆ ಎಂಬುದು ಮಾನವನಿಗೆ ಗೊತ್ತಿತ್ತು. ಆದ್ದ ರಿಂದ ದೇಹ ಮನಸ್ಸುಗಳನ್ನೇ ಅವಲಂಬಿಸಿ ಜಗತ್ಕಾರಣನನ್ನು ಅನ್ವೇಷಿಸುತ್ತ ಹೋದರೆ ಶೀಘ್ರ ಗುರಿಯನ್ನು ಮುಟ್ಟಬಹುದೆಂದು ಅವನು ಭಾವಿಸಿದ. ಅನ್ನದ ಒಂದು ಅಗಳನ್ನು ಒತ್ತಿ ನೋಡಿದರೆ ಪಾತ್ರೆಯಲ್ಲಿರುವ ಎಲ್ಲ ಅನ್ನವು ಬೆಂದಿದೆ ಎನ್ನಬಹುದು. ಹಾಗೆಯೇ ನಮ್ಮೊಳಗಿನ ಸತ್ಯವನ್ನು ಅರಿತರೆ ಎಲ್ಲರ ಮತ್ತು ಎಲ್ಲದರ ಸತ್ಯವನ್ನು ಅರಿ ತಂತೆ. ಆದ್ದರಿಂದ ಜ್ಞಾನಮಾರ್ಗಿಗಳ ಮುಖ್ಯ ಲಕ್ಷ್ಯ 'ನಾನು ಯಾರು' ಎಂಬುದರ ಅನ್ವೇಷಣೆ.

11. ಜಗತ್ಸಂಬಂಧಿಯಾದ ಸಾಧಾರಣ ಭಾವನೆಯನ್ನು ಜ್ಞಾನ ಮತ್ತು ಭಕ್ತಿ ಮಾರ್ಗಿಗಳಿಬ್ಬರೂ ತ್ಯಜಿಸಬೇಕಾಗುವುದೆಂದು ಮೊದಲೇ ಹೇಳಿದ್ದೇವೆ. ಈ ಭಾವನೆಯನ್ನು ಸಂಪೂರ್ಣ ತ್ಯಜಿಸಿದಾಗ ಮನಸ್ಸು ಸರ್ವವೃತ್ತಿಶೂನ್ಯವಾಗಿ, ಸಮಾಧಿ ಸ್ಥಿತಿಯನ್ನು ಮುಟ್ಟುತ್ತದೆ. ಈ ರೀತಿಯ ಸಮಾಧಿಯನ್ನೇ ನಿರ್ವಿಕಲ್ಪ ಸಮಾಧಿ ಎಂದು ಶಾಸ್ತ್ರ ಹೆಸರಿಸುತ್ತದೆ. ಜ್ಞಾನಮಾರ್ಗದ ಸಾಧಕನು 'ವಾಸ್ತವಿಕವಾಗಿ ತನ್ನ ಸ್ವರೂಪ ಏನು' ಎಂದು ಅನುಸಂಧಾನ ಮಾಡುತ್ತ ಹೇಗೆ ನಿರ್ವಿಕಲ್ಪ ಸಮಾಧಿಯನ್ನು ಮುಟ್ಟುವನು ಮತ್ತು ಆ ಅವಸ್ಥೆಯಲ್ಲಿ ಏನನ್ನು ಅನುಭವಿಸುವನು ಎಂಬುದನ್ನು ಬೇರೊಂದು ಕಡೆ ನಾವು ಹೇಳಿದ್ದೇವೆ.* ಈಗ ಭಕ್ತಿಮಾರ್ಗದ ಸಾಧಕನು ಹೇಗೆ ಆ ಸಮಾಧಿಯನ್ನು ತಲುಪುತ್ತಾನೆ ಎಂಬುದನ್ನು ವಿವರಿಸುತ್ತೇವೆ.

12. ಭಕ್ತಿಮಾರ್ಗವನ್ನು 'ಇತಿ ಇತಿ' ಸಾಧನ ಪಥವೆಂದು ನಾವು ಕರೆದೆವು. ಈಶ್ವರನಲ್ಲಿ ವಿಶ್ವಾಸವುಳ್ಳ ಈ ಸಾಧಕನು ಜಗತ್ತನ್ನು ಅನಿತ್ಯವೆಂದು ತಿಳಿದರೂ ಈಶ್ವರ ನಿರ್ಮಿತಿಯಾದ ಅದನ್ನು ಸತ್ಯವೆಂದು ಭಾವಿಸುತ್ತಾನೆ. ಅವನ ಪಾಲಿಗೆ ಎಲ್ಲವೂ ಈಶ್ವರ ಸಂಬಂಧಿಯಾದುದು, ಯಾವುದನ್ನೂ ಅಸತ್ಯವೆಂದು ಬಿಡುವಂತಿಲ್ಲ. ಈ ಸಂಬಂಧಕ್ಕೆ ಅಡ್ಡಿಯಾಗುವಂತಹುದನ್ನು ಅವನು ತ್ಯಜಿಸುವನು. ಇಷ್ಟೇ ಅಲ್ಲದೆ, ಈಶ್ವರನ ಒಂದು ರೂಪವನ್ನು ಪ್ರೀತಿಸುತ್ತ, ಧ್ಯಾನಿಸುತ್ತ ಅದರಲ್ಲೇ ತನ್ಮಯನಾಗುತ್ತಾನೆ ಮತ್ತು ಈಶ್ವರನ ಪ್ರೀತ್ಯರ್ಥವಾಗಿಯೇ ಎಲ್ಲವನ್ನೂ ಆಚರಿಸುತ್ತಾನೆ.

ರೂಪಧ್ಯಾನದಲ್ಲಿಯೇ ತನ್ಮಯತೆಯನ್ನು ಹೊಂದಿ ಜಗತ್ತಿನ ಅಸ್ತಿತ್ವವೇ ಮಾಯವಾಗಿ ನಿರ್ವಿಕಲ್ಪ ಅವಸ್ಥೆಯನ್ನು ಸಾಧಕನು ಹೇಗೆ ತಲುಪುವನು ಎಂಬುದನ್ನು ಈಗ ವಿವರಿಸುತ್ತೇವೆ. ಭಕ್ತನು ಈಶ್ವರನ ಯಾವುದೊ ಒಂದು ರೂಪವನ್ನು ತನ್ನ ಇಷ್ಟ ದೈವತವನ್ನಾಗಿ ಸ್ವೀಕರಿಸಿ ಅದರ ಚಿಂತನೆ ಧ್ಯಾನದಲ್ಲಿ ತಲ್ಲೀನನಾಗುತ್ತಾನೆ. ಮೊದ ಮೊದಲು ಧ್ಯಾನದ ವೇಳೆಯಲ್ಲಿ ಇಷ್ಟದೇವತೆಯ ಪೂರ್ಣ ಮೂರ್ತಿಯನ್ನು ಮನಸ್ಸಿನಲ್ಲಿ ಚಿಂತಿಸಲಾಗುವುದಿಲ್ಲ. ಕೆಲವೊಮ್ಮೆ ಅವನ ಹಸ್ತ, ಮತ್ತೆ ಕೆಲವೊಮ್ಮೆ ಅವನ ಪಾದ, ಇನ್ನೊಮ್ಮೆ ಅವನ ಮುಖ ಹೀಗೆ ಪ್ರತ್ಯೇಕ ಅವಯವಗಳು ಅವನ ಮನಸ್ಸಿಗೆ ಬರುವುವು. ಇವು ಕೂಡ ದರ್ಶನವಾಗುತ್ತಿದ್ದಂತೆಯೇ ಕಣ್ಮರೆಯಾಗುವುವು, ಸ್ಥಿರವಾಗಿ ಮನಸ್ಸಿನಲ್ಲಿ ಉಳಿಯುವುದಿಲ್ಲ. ಅಭ್ಯಾಸದ ಫಲವಾಗಿ ಧ್ಯಾನವು ಗಂಭೀರವಾದಾಗ ಇಷ್ಟದೇವತೆಯ ಸರ್ವಾವಯವ ಪೂರ್ಣ ಮೂರ್ತಿಯು ಮನಸ್ಸಿಗೆ ಗೋಚರವಾಗುತ್ತದೆ. ಧ್ಯಾನ ಆಳವಾದಂತೆಲ್ಲ ಈ ಮೂರ್ತಿ ಮನಸ್ಸಿನಲ್ಲಿ ಸ್ಥಿರವಾಗಿ ಉಳಿಯುತ್ತದೆ. ಹೀಗೆ ಧ್ಯಾನ ಆಳವಾದಂತೆಲ್ಲ ಇಷ್ಟದೇವತೆಯೊಡನೆ ಸಾಧಕನ ಸಂಬಂಧ ಇನ್ನೂ ನಿಕಟವಾಗಿ ಇಷ್ಟದೇವತೆ ಜೀವಂತ ಸತ್ಯವಾಗುತ್ತದೆ. ಆಗ ಅವನು ಎಲ್ಲೆಲ್ಲಿಯೂ ತನ್ನ ಇಷ್ಟದೇವತೆಯನ್ನೇ ಕಾಣುತ್ತಾನೆ. ತನ್ನ ಇಷ್ಟದೇವತೆಯೇ ಜಗತ್ತಿನ ನಾನಾ ರೂಪ

* ಗುರುಭಾವ-ಪೂರ್ವಾರ್ಧ, ಎರಡನೆಯ ಅಧ್ಯಾಯ.

ಗಳಲ್ಲಿ ಕಾಣಿಸಿಕೊಳ್ಳುತ್ತಿರುವುದು ಎಂದು ಅವನಿಗೆ ಅನುಭವವಾಗುವುದು. ಇಷ್ಟೇ ಅಲ್ಲದೆ ತನ್ನ ಇಷ್ಟದೇವತೆಯಲ್ಲಿಯೇ ಅವನು ನಾನಾ ದಿವ್ಯರೂಪಗಳನ್ನು ಕಾಣುವನು. ಶ್ರೀರಾಮಕೃಷ್ಣರು ಹೇಳುತ್ತಿದ್ದರು : ''ಯಾವ ವ್ಯಕ್ತಿಯು ಒಂದು ರೂಪವನ್ನು ಜೀವಂತವಾಗಿ ಕಾಣುವನೊ ಅವನಿಗೆ ಎಲ್ಲ ರೂಪದರ್ಶನವೂ ಸಹಜವಾಗಿಯೇ ಆಗುತ್ತದೆ.''

ಇದುವರೆಗೆ ನಾವೇನು ಹೇಳಿರುವೆವೊ ಇದರಿಂದ ಒಂದು ವಿಷಯ ತಿಳಿದುಬರುವುದು. ಯಾರಿಗೆ ಈ ರೀತಿ ಜೀವಂತ ಮೂರ್ತಿಗಳ ದರ್ಶನವನ್ನು ಪಡೆಯುವ ಭಾಗ್ಯ ವುಂಟಾಗಿದೆಯೊ ಅವರಿಗೆ ಜಾಗ್ರದವಸ್ಥೆಯಲ್ಲಿ ಕಂಡ ವಸ್ತುಗಳಂತೆಯೇ ಭಾವರಾಜ್ಯದ ಮೂರ್ತಿಗಳೂ ಸಮಾನ ಅಸ್ತಿತ್ವವುಳ್ಳವುಗಳೆಂದು ತೋರುವುದು. ಹೀಗೆ ಬಾಹ್ಯ ಜಗತ್ತು, ಭಾವರಾಜ್ಯ—ಇವು ಸಮಾನ ಅಸ್ತಿತ್ವವುಳ್ಳವುಗಳೆಂಬ ಬೋಧೆಯು ಹೆಚ್ಚು ದೃಢವಾದಂತೆಲ್ಲ ಬಾಹ್ಯ ಜಗತ್ತು ಮನಃಕಲ್ಪಿತವೆಂಬ ಬೋಧೆ ಅವನಲ್ಲಿ ದೃಢವಾಗುತ್ತ ಹೋಗುತ್ತದೆ. ಮತ್ತೆ ಧ್ಯಾನಸಮಯದಲ್ಲಿ ಭಾವರಾಜ್ಯದ ಅನುಭವವು ಎಷ್ಟೊಂದು ಪ್ರಬಲವಾಗುವುದೆಂದರೆ ಆ ಸಮಯದ ಮಟ್ಟಿಗೆ ಬಾಹ್ಯ ಜಗತ್ತಿನ ಪರಿವೆ ಸ್ವಲ್ಪವೂ ಇರುವುದಿಲ್ಲ. ಭಕ್ತ ಈ ಅವಸ್ಥೆಯನ್ನೇ ಸವಿಕಲ್ಪ ಸಮಾಧಿ ಎಂದು ಕರೆಯುವುದು. ಈ ಸಮಯದಲ್ಲಿ ಮಾನಸಿಕ ಶಕ್ತಿಯ ಪ್ರಭಾವದಿಂದ ಭಕ್ತನ ಮನಸ್ಸಿನಲ್ಲಿ ಬಾಹ್ಯ ಜಗತ್ತು ಲಯಹೊಂದಿದರೂ ಭಾವರಾಜ್ಯ ಲಯಹೊಂದುವುದಿಲ್ಲ. ನಾವು ಹೊರ ಜಗತ್ತಿನಲ್ಲಿ ವಸ್ತು ಮತ್ತು ವ್ಯಕ್ತಿಗಳೊಡನೆ ವ್ಯವಹರಿಸುತ್ತ ಹೇಗೆ ಸುಖ ದುಃಖಾದಿಗಳನ್ನು ಅನುಭವಿಸುವೆವೊ ಹಾಗೆಯೇ ಭಕ್ತ ಈ ಹಂತದಲ್ಲಿ ತನ್ನ ಇಷ್ಟ ದೇವತೆಯೊಡನೆ ವ್ಯವಹರಿಸುತ್ತ ವಿವಿಧ ಅನುಭವಗಳನ್ನು ಪಡೆಯುವನು. ಅವನ ಮನಸ್ಸಿನ ಸಂಕಲ್ಪ-ವಿಕಲ್ಪಗಳೆಲ್ಲವೂ ಅವನ ಇಷ್ಟಮೂರ್ತಿಯನ್ನೇ ಆಶ್ರಯಿಸಿರುತ್ತವೆ. ಒಂದೇ ವಿಷಯವನ್ನು ಕೇಂದ್ರವಾಗಿಟ್ಟುಕೊಂಡು ಮನಸ್ಸಿನ ಎಲ್ಲ ವೃತ್ತಿಗಳು ಏಳುವುದರಿಂದ ಈ ಅವಸ್ಥೆಯನ್ನು ಸವಿಕಲ್ಪ ಅಥವಾ ವಿಕಲ್ಪ ಸಂಯುಕ್ತ ಸಮಾಧಿ ಎಂದು ಶಾಸ್ತ್ರ ಕರೆಯುತ್ತದೆ.

ಹೀಗೆ ಭಾವರಾಜ್ಯದ ವಿಷಯವನ್ನೇ ವಿಶೇಷವಾಗಿ ಚಿಂತಿಸುತ್ತ ಭಕ್ತನ ಮನಸ್ಸಿನಲ್ಲಿ ಸ್ಥೂಲವಾದ ಬಾಹ್ಯ ಜಗತ್ತು ಮಾಯವಾಗುತ್ತದೆ ಮತ್ತು ಒಂದೇ ಭಾವನೆಯ ಪ್ರಾಬಲ್ಯದಿಂದಾಗಿ ಉಳಿದ ಎಲ್ಲ ಭಾವನೆಗಳು ವಿಲೀನಹೊಂದುವುವು. ಯಾವ ಭಕ್ತನು ಸಾಧನಪಥದಲ್ಲಿ ಇಷ್ಟೊಂದು ಮುಂದುವರಿದಿರುವನೊ ಅವನಿಗೆ ನಿರ್ವಿಕಲ್ಪ ಸಮಾಧಿ ಬಹು ದೂರ ಉಳಿಯುವುದಿಲ್ಲ. ಬಹುಕಾಲದ ಅಭ್ಯಾಸದಿಂದ ದೃಢಮೂಲವಾದ ಜಗತ್ತಿನ ಅಸ್ತಿತ್ವವೇ ಈಗ ಸಂಪೂರ್ಣ ಲುಪ್ತವಾಗಿರಬೇಕಾದರೆ ಅವನ ಮನಸ್ಸಿನಲ್ಲಿ ಎಂಥ ಒಂದು ಶಕ್ತಿ ಮತ್ತು ದೃಢಸಂಕಲ್ಪ ಇರುತ್ತದೆಂಬುದನ್ನು ಊಹಿಸಬಹುದು. ಮನಸ್ಸನ್ನು ಒಮ್ಮೆಯೇ ನಿರ್ವಿಕಲ್ಪಗೊಳಿಸಿದರೆ ಭಗವದಾನಂದಾನುಭವವು ಅಧಿಕವಾಗುವುದೇ ಹೊರತು ಕಡಮೆಯಾಗುವುದಿಲ್ಲ ಎಂದು ಅವನಿಗೆ ಈಗ ಅನಿಸಿದರೆ ಅವನ

ಮನಸ್ಸು ಆ ಕಡೆಗೆ ಉತ್ಸಾಹದಿಂದ ಧಾವಿಸತೊಡಗುತ್ತದೆ. ಗುರು ಮತ್ತು ಭಗವತ್ ಕೃಪೆಯಿಂದ ಒಮ್ಮೆ ಮನಸ್ಸು ಭಾವರಾಜ್ಯದ ಚರಮಾವಸ್ಥೆಯನ್ನು ಮುಟ್ಟಿದರೆ ಅವನಿಗೆ ಅದ್ವೈತಜ್ಞಾನವುಂಟಾಗಿ ಚಿರಶಾಂತಿಯನ್ನು ಪಡೆಯುತ್ತಾನೆ. ಅಥವಾ ಇಷ್ಟ ದೇವತೆಯಲ್ಲಿ ಅವನಿಗಿರುವ ಅತ್ಯಂತ ಆಳವಾದ ಪ್ರೀತಿಯೇ ಅವನನ್ನು ಆ ಅವಸ್ಥೆಗೆ ಒಯ್ಯುವುದು–ಎನ್ನಬಹುದು. ಆಗ, ವ್ರಜಗೋಪಿಯರಿಗಾದಂತೆ, ಆ ಪ್ರೇಮದ ಪ್ರೇರಣೆಯಿಂದ ಅವನು ತನ್ನ ಇಷ್ಟ ದೇವತೆಯೊಡನೆ ಏಕತ್ವವನ್ನು ಅನುಭವಿಸುತ್ತಾನೆ.

13. ಜ್ಞಾನಿ ಮತ್ತು ಭಕ್ತರು ತಮ್ಮ ಸಾಧನೆಯ ಚರಮಾವಸ್ಥೆಯನ್ನು ಮುಟ್ಟುವ ಈ ವಿಧಾನವು ಶಾಸ್ತ್ರೋಕ್ತವಾದುದು. ಅವತಾರ ಪುರುಷರುಗಳಲ್ಲಿ, ದಿವ್ಯ ಮತ್ತು ಮಾನವ ಭಾವಗಳೆರಡೂ ಸಂಮಿಲಿತವಾಗಿರುವುದರಿಂದ ಸಾಧನಕಾಲದಲ್ಲಿಯೇ ಆತ್ಯಂತಿಕ ಅನುಭವವು ಅವರಿಗೆ ಒಮ್ಮೊಮ್ಮೆ ಆಗುವುವು. ಮಾನವ ಮತ್ತು ದೇವ ಭೂಮಿಗಳೆರಡರಲ್ಲಿಯೂ ವಿಹರಿಸುವ ಶಕ್ತಿ ಅವರಿಗಿರುವುದರಿಂದ ಹೀಗಾಗುತ್ತದೆ. ಅಥವಾ ಆಂತರಿಕ ದೇವಭಾವವು ಅವರಿಗೆ ಸ್ವಾಭಾವಿಕವಾದುದರಿಂದ ಕೆಲವೊಮ್ಮೆ ಅದು ಮಾನವ ಮುಸುಕನ್ನು ಭೇದಿಸಿ ಹೊರಗೆ ಪ್ರಕಾಶಗೊಳ್ಳುತ್ತದೆ. ಹೇಗೇ ವಿಚಾರ ಮಾಡಿದರೂ, ಈ ರೀತಿಯ ಘಟನೆಗಳಿಂದಾಗಿ ಅವತಾರಪುರುಷರ ಜೀವನವನ್ನು ಅರ್ಥ ಮಾಡಿಕೊಳ್ಳುವುದು ಅತ್ಯಂತ ಕಠಿಣ. ಆದರೆ ಶ್ರದ್ಧೆಯಿಂದ ಅವರನ್ನು ಅನುಸರಿಸಿದರೆ ನಮ್ಮ ಜೀವನ ಸಾರ್ಥಕವಾಗುವುದೆಂಬುದರಲ್ಲಿ ಸಂಶಯವಿಲ್ಲ. ಪ್ರಾಚೀನ ಪೌರಾಣಿಕ ಯುಗದಲ್ಲಿ ಅವತಾರ ಪುರುಷರ ಮಾನವ ಭಾವವನ್ನು ಮರೆಮಾಡಿ ದೇವಭಾವವನ್ನೇ ಹೆಚ್ಚಾಗಿ ವಿವರಿಸಿರುವರು. ನಾವು ಇಲ್ಲಿ ಇವೆರಡೂ ಭಾವಗಳೂ ಏಕತ್ರ ಸಂಮಿಲಿತ ವಾಗಿರುವುದನ್ನು ತೋರಿಸಲು ಪ್ರಯತ್ನಿಸುತ್ತೇವೆ. ದೇವಮಾನವರಾದ ಶ್ರೀರಾಮ ಕೃಷ್ಣರ ಪುಣ್ಯದರ್ಶನ ನಮಗಾಗದಿದ್ದಿದ್ದರೆ ಅವತಾರ ಪುರುಷರ ಈ ಒಂದು ವಿಶಿಷ್ಟ ಲಕ್ಷಣವನ್ನು ಅರ್ಥಮಾಡಿಕೊಳ್ಳುವುದರಲ್ಲಿ ನಾವು ಸಮರ್ಥರಾಗುತ್ತಿರಲಿಲ್ಲ.

ಎರಡನೆಯ ಅಧ್ಯಾಯ

ಅವತಾರ ಜೀವನದಲ್ಲಿ ಸಾಧಕಭಾವ

1. ಶ್ರೀರಾಮಕೃಷ್ಣರಲ್ಲಿ ದೇವ ಮತ್ತು ಮಾನವಭಾವಗಳ ಮಿಲನ 2. ಎಲ್ಲ ಅವತಾರಪುರುಷರಲ್ಲಿಯೂ ಹೀಗೆಯೇ 3. ಅವತಾರಪುರುಷರಲ್ಲಿ ಸ್ವಾರ್ಥಶೂನ್ಯತೆ 4. ಅವರ ಸಾಧನೆ ಪರಾರ್ಥಕ್ಕಾಗಿ 5. ಇದಕ್ಕೆ ಒಂದು ದೃಷ್ಟಾಂತ ಕಥೆ 6. ಅವತಾರಪುರುಷರೂ ಸಂಯಮ ಮಾಡಬೇಕಾಗುತ್ತದೆ 7. ಮನಸ್ಸಿನ ಅನಂತ ವಾಸನೆಗಳು 8. ವಾಸನಾ ತ್ಯಾಗದ ವಿಷಯದಲ್ಲಿ ಶ್ರೀರಾಮಕೃಷ್ಣರ ಪ್ರೇರಣೆ 9. ಈ ವಿಷಯವಾಗಿ ಸ್ತ್ರೀಭಕ್ತರಿಗೆ ಉಪದೇಶ 10. ಸೂಕ್ಷ್ಮ ವಾಸನೆಗಳೊಡನೆ ಅವತಾರಪುರುಷರ ಹೋರಾಟ 11. ಅವತಾರಪುರುಷರ ಮಾನವಭಾವವನ್ನು ಕುರಿತು ಚರ್ಚೆ 12. ಈ ವಿಷಯದಲ್ಲಿ ಬೇರೆ ದೃಷ್ಟಿಕೋನ 13. ಉನ್ನತ ಪ್ರಜ್ಞಾ ಸ್ತರಗಳಿಂದ ಜಗತ್ತಿನ ಭಿನ್ನ ಅನುಭವ 14. ಅವತಾರಪುರುಷರ ಶಕ್ತಿಯಿಂದ ಮಾನವನು ಉನ್ನತಸ್ತರವನ್ನು ತಲುಪಿ ಅವರು ಮಾನವಭಾವ ಶೂನ್ಯರಾಗಿರುವುದನ್ನು ನೋಡುತ್ತಾನೆ 15. ಜೀವ ಮತ್ತು ಅವತಾರಪುರುಷರ ಶಕ್ತಿಭೇದ 16 ಅವತಾರಪುರುಷನು ಸರ್ವಜ್ಞ 17. ಜಡವಿಜ್ಞಾನದ ಸಾಧನದಿಂದ ಜಗತ್ಕಾರಣವನ್ನು ತಿಳಿಯುವುದು ಅಸಾಧ್ಯ 18. ಬಾಲ್ಯಕಾಲದಿಂದಲೂ ಅವತಾರಪುರುಷರಲ್ಲಿ ಭಾವತನ್ಮಯತೆ 19. ಶ್ರೀರಾಮಕೃಷ್ಣರು ಆರು ವರ್ಷದವರಿದ್ದಾಗ ಭಾವಸಮಾಧಿ 20. ವಿಶಾಲಾಕ್ಷಿ ದೇವಸ್ಥಾನಕ್ಕೆ ಹೋಗುವಾಗ ಎರಡನೆಯ ಭಾವಸಮಾಧಿ 21. ಶಿವರಾತ್ರಿಯ ದಿನ ಮೂರನೆಯ ಭಾವಸಮಾಧಿ.

1. ನಾವು ಶ್ರೀರಾಮಕೃಷ್ಣರ ದಿವ್ಯಸಂಗವನ್ನು ಪಡೆದು ಕೃತಾರ್ಥರಾದೆವು. ಅವರ ಜೀವನವನ್ನು ಅಧ್ಯಯನ ಮಾಡಿದಷ್ಟೂ ಅವರಲ್ಲಿ ನಮಗೆ ಕಂಡುಬರುವ ಒಂದು ಮೋಹಕ ಲಕ್ಷಣವೆಂದರೆ ದೇವ ಮಾನವ ಭಾವಗಳೆರಡರ ಅಪೂರ್ವ ಸಂಗಮ. ಇವೆರಡರ ಮಧುರ ಸಾಮಂಜಸ್ಯ ಒಂದೇ ನೆಲೆಯಲ್ಲಿ ಸಾಧ್ಯ ಎಂಬುದು ಅವರನ್ನು ನೋಡದಿದ್ದರೆ ನಮಗೆ ತಿಳಿಯುತ್ತಿರಲಿಲ್ಲ. ಪೂರ್ಣ ದೇವತ್ವ ಮತ್ತು ದಿವ್ಯಶಕ್ತಿ—ಇವು ಮಾನವೀಯ ಆವರಣದ ಮೂಲಕ ಪ್ರಕಾಶಿತವಾದರೆ ಏನಾಗುವುದೊ ಅದೇ ಶ್ರೀರಾಮಕೃಷ್ಣರು. ಇವೆರಡರಲ್ಲಿ ಯಾವುದೂ ಅವರಲ್ಲಿ ಕೇವಲ ತೋರಿಕೆಯದಾಗಿರಲಿಲ್ಲ. ಅವರು ಮಾನವ ಕಲ್ಯಾಣಕ್ಕಾಗಿಯೇ ಮಾನವಭಾವವನ್ನು ಯಥಾರ್ಥವಾಗಿಯೇ ಸ್ವೀಕರಿಸಿದ್ದರು. ಇದರ ಮೂಲಕ ದೇವತ್ವಕ್ಕೆ ಏರುವುದು ಹೇಗೆಂಬುದನ್ನು ಅವರು ತೋರಿಸಿದರು. ಮತ್ತೆ

ಹಿಂದಿನ ಎಲ್ಲ ಅವತಾರ ಪುರುಷರಲ್ಲಿಯೂ ಇವೆರಡೂ ಭಾವಗಳು ಸಮ್ಮಿಲಿತವಾಗಿದ್ದ ವೆಂಬುದು ನಮ್ಮ ನಂಬಿಕೆ.

2. ಅವತಾರಪುರುಷರ ಜೀವನಕಥೆಯನ್ನು ಪರಿಶೀಲಿಸಿದಾಗ ನಮಗೆ ತೋರು ವುದೇನೆಂದರೆ ಅವರು ಕೆಲವೊಮ್ಮೆ ನಮ್ಮ ಅಂತಸ್ತಿನಲ್ಲೇ ಇದ್ದು ಜಗತ್ತಿನ ಎಲ್ಲ ವಸ್ತು ಮತ್ತು ವ್ಯಕ್ತಿಗಳೊಡನೆ ನಮ್ಮಂತೆಯೇ ವ್ಯವಹರಿಸುತ್ತಾರೆ. ಮತ್ತೆ ಕೆಲವೊಮ್ಮೆ ಅವರು ಉಚ್ಚ ಭಾವ ಸಾಮ್ರಾಜ್ಯದಲ್ಲಿ ವಿಹರಿಸುತ್ತ ನಮ್ಮಿಂದ ಬಹು ದೂರವಾಗುತ್ತಾರೆ. ತಮ್ಮ ಇಚ್ಛೆಯಿಂದಲ್ಲದೆ ಯಾವುದೊ ಯೋಗಾಯೋಗದಿಂದ ಅವರಲ್ಲಿ ಈ ರೀತಿ ಯುಂಟಾಗುವುದೆಂದು ಎನಿಸುತ್ತದೆ. ಬಾಲ್ಯಾವಸ್ಥೆಯಿಂದಲೂ ಅವರಲ್ಲಿ ಈ ಭಾವಾಂತರ ವನ್ನು ಕಾಣುತ್ತೇವೆ. ಆದರೆ ಬಾಲ್ಯಾವಸ್ಥೆಯಲ್ಲಿ ಇಂಥ ವಿಶಿಷ್ಟ ಶಕ್ತಿಯು ಪ್ರಕಾಶ ವಾದರೂ ಅದು ತಮ್ಮದೇ ಮತ್ತು ತಮ್ಮೊಳಗಿನಿಂದಲೇ ಬರುತ್ತಿದೆ ಎಂದು ಅವರಿಗೆ ತಿಳಿದುಬರುವುದಿಲ್ಲ. ಆ ಶಕ್ತಿಯ ಸಹಾಯದಿಂದ ತಮ್ಮ ಇಚ್ಛಾನುಸಾರವಾಗಿ ಉನ್ನತ ಸ್ತರವನ್ನು ಏರಿ ದಿವ್ಯಭಾವದ ಬೆಳಕಿನಲ್ಲಿ ಜಗತ್ತಿನ ಎಲ್ಲ ವಸ್ತು ಮತ್ತು ವ್ಯಕ್ತಿಗಳನ್ನು ನೋಡುವ ಹಾಗೂ ಅದರಂತೆ ವ್ಯವಹರಿಸುವ ಸಾಮರ್ಥ್ಯ ಆಗ ಅವರಿಗೆ ಇರುವುದಿಲ್ಲ. ಆದರೆ ಆ ಶಕ್ತಿ ಅವರಲ್ಲಿ ಮತ್ತೆಮತ್ತೆ ಆವಿರ್ಭವಿಸುವುದರಿಂದಲೇ ಅದರ ಪರಿಚಯವನ್ನು ಪಡೆಯುವ ಉತ್ಕಟೇಚ್ಛೆ ಅವರಲ್ಲಿ ಉಂಟಾಗುತ್ತದೆ. ಇದೇ ಅವರನ್ನು ತೀವ್ರ ವ್ಯಾಕುಲತೆಯಿಂದ ಸಾಧನೆಯಲ್ಲಿ ಮುಂದುವರಿಯುವಂತೆ ಪ್ರಚೋದಿಸುತ್ತದೆ.

3. ಅವರ ಈ ಇಚ್ಛೆಯ ಹಿಂದೆ ಸ್ವಾರ್ಥದ ಗಂಧವೂ ಇರುವುದಿಲ್ಲ. ಇಹಪರ ಲೋಕಗಳ ಭೋಗಸುಖದ ಆಸೆಯಂತೂ ದೂರದ ಮಾತು. ಪ್ರಪಂಚದ ವ್ಯಕ್ತಿಗಳಿಗೆ ಏನುಬೇಕಾದರೂ ಆಗಲಿ–ಅದು ಅವರ ಹಣೆಯಬರಹ–ನಾನು ಮಾತ್ರ ಮುಕ್ತಿಯನ್ನು ಪಡೆದು ಆಸೀಮ ಆನಂದದಲ್ಲಿ ತಲ್ಲೀನನಾಗುತ್ತೇನೆ—ಇಂಥ ಭಾವನೆಯೂ ಅವರಲ್ಲಿ ಕಂಡುಬರುವುದಿಲ್ಲ. ಹುಟ್ಟಿದಂದಿನಿಂದ ತಾವು ಅನುಭವಿಸುತ್ತಿದ್ದ ದಿವ್ಯಭಾವಗಳು, ಜನಸಾಮಾನ್ಯರು ಜಗತ್ತಿನ ವಿಷಯವನ್ನು ಅನುಭವಿಸುವಷ್ಟೇ ಸಹಜವಾಗಿ ತಮ್ಮ ಭಾವರಾಜ್ಯದಲ್ಲಿ ತಾವು ಅನುಭವಿಸುವ ಜೀವಂತಸತ್ಯಗಳು—ಇವು ವಾಸ್ತವಿಕವೇ ಅಥವಾ ಚಿತ್ತವಿಭ್ರಮೆಯೇ ಎಂಬುದರ ಅನ್ವೇಷಣೆಯೇ ಅವರ ಪ್ರಧಾನ ಗುರಿ. ಏಕೆಂದರೆ ಅವರು ಪ್ರಪಂಚವನ್ನು ನೋಡುವ ಬಗೆಗೂ ಮತ್ತು ಜನಸಾಮಾನ್ಯರು ನೋಡುವ ಬಗೆಗೂ ತುಂಬ ವ್ಯತ್ಯಾಸವಿರುವುದನ್ನು ಅವರು ಕಾಣುತ್ತಾರೆ.

4. ಈ ತಾರತಮ್ಯದಿಂದ ಅವರಿಗೆ ಇನ್ನೊಂದು ವಿಷಯವೂ ಮನವರಿಕೆ ಯಾಗುವುದು. ಅವರು ಸಾಧಾರಣ ಮತ್ತು ದಿವ್ಯದೃಷ್ಟಿಗಳೆರಡರಿಂದಲೂ ಜಗತ್ತನ್ನು ನೋಡುತ್ತಾರೆ. ಇದರಿಂದಾಗಿ ಕ್ಷಣಿಕ ಪ್ರಾಪಂಚಿಕ ಸುಖದಿಂದ ಅವರು ಸಾಮಾನ್ಯ ಜನರಂತೆ ಮೋಹಕ್ಕೊಳಗಾಗುವುದಿಲ್ಲ ಮತ್ತು ನಿತ್ಯ ಪರಿವರ್ತನೆಯ ಈ ಪ್ರಪಂಚದ ದುಃಖವೈರಾಗ್ಯಾದಿ ವ್ಯತ್ಯಯಗಳು ಅವರನ್ನು ವಿಚಲಿತಗೊಳಿಸುವುದಿಲ್ಲ. ಹಿಂದೆ ಹೇಳಿದ ತಮ್ಮ ಆಂತರಿಕ ಶಕ್ತಿಯನ್ನು ತಮ್ಮದಾಗಿಸಿಕೊಂಡು ತಮ್ಮ ಇಚ್ಛಾನುಸಾರ ಹಂತಹಂತ

ವಾಗಿ ಉನ್ನತಿಗೇರುತ್ತ ಉನ್ನತಸ್ತರದಲ್ಲಿ ಮನಸ್ಸನ್ನು ಹೇಗೆ ನಿಲ್ಲಿಸುವುದು ಮತ್ತು ಇತರರನ್ನೂ ಉನ್ನತಿಗೇರುವಂತೆ ಹೇಗೆ ಮಾಡುವುದು—ಈ ಚಿಂತೆಯೇ ಅವರ ಮನಸ್ಸನ್ನು ಸಂಪೂರ್ಣ ಆಕ್ರಮಿಸುತ್ತದೆ. ಇದರಿಂದಾಗಿ ಸಾಧನೆ ಮತ್ತು ಕರುಣೆ—ಇವೆರಡೂ ಅವರಲ್ಲಿ ಒಟ್ಟಿಗೇ ಪ್ರವಹಿಸುತ್ತವೆ. ಜನಸಾಮಾನ್ಯರ ಸ್ಥಿತಿಯನ್ನು ತಮಗೆ ಹೋಲಿಸಿ ನೋಡಿದಾಗ ಅವರ ಕರುಣೆ ಇನ್ನೂ ವೃದ್ಧಿಸುತ್ತದೆ. ಆದರೂ ಹೀಗೆಯೇ ಅದು ಉತ್ಪತ್ತಿಯಾಗುವುದೆಂದು ಹೇಳಲಾಗುವುದಿಲ್ಲ. ಅವರು ಅದನ್ನು ಪಡೆದೇ ಹುಟ್ಟಿರುತ್ತಾರೆ. ಈ ವಿಷಯದಲ್ಲಿ ಶ್ರೀರಾಮಕೃಷ್ಣರ ಒಂದು ದೃಷ್ಟಾಂತವನ್ನು ಉದಾಹರಿಸಬಹುದು :

5. ''ಮೂವರು ಸ್ನೇಹಿತರು ಮೈದಾನದಲ್ಲಿ ತಿರುಗಾಡುತ್ತಿದ್ದರು. ತಿರುಗಾಡುತ್ತ ಎತ್ತರವಾದ ಗೋಡೆಗಳಿಂದ ಆವೃತವಾದ ಒಂದು ಜಾಗಕ್ಕೆ ಬಂದರು. ಒಳಗಡೆಯಿಂದ ಮಧುರಗಾನ ಕೇಳಿಬರುತ್ತಿತ್ತು. ಒಳಗೇನಿದೆ ಎಂದು ನೋಡುವ ಇಚ್ಛೆಯಾಯಿತು ಅವರಿಗೆ. ಆದರೆ ಎಲ್ಲೂ ಒಳಗೆ ಹೋಗುವುದಕ್ಕೆ ಬಾಗಿಲು ಇರಲಿಲ್ಲ. ಈಗೇನು ಮಾಡುವುದು ? ಒಬ್ಬ ವ್ಯಕ್ತಿ ಎಲ್ಲಿಂದಲೊ ಒಂದು ಏಣಿಯನ್ನು ತೆಗೆದುಕೊಂಡು ಬಂದು ಅದನ್ನೇರಿ ಮೇಲೆ ಹೋದ. ಉಳಿದಿಬ್ಬರು ಕೆಳಗೆ ಉಳಿದರು. ಮೇಲೆ ಹೋದವನು ಒಳಗೆ ನಡೆಯುವುದನ್ನು ನೋಡಿ ಆನಂದಾತಿರೇಕದಿಂದ ಹಾ ಹಾ! ಎಂದು ಉದ್ಗರಿಸುತ್ತ ಒಳಗೆ ಹಾರಿಬಿಟ್ಟ. ಅಲ್ಲೇನು ನಡೆಯುತ್ತಿದೆ ಎಂಬುದನ್ನು ಉಳಿದಿಬ್ಬರಿಗೆ ಹೇಳುವ ಗೋಜಿಗೆ ಹೋಗಲಿಲ್ಲ—ಅವರನ್ನು ಮರೆತೇಬಿಟ್ಟ. ಉಳಿದಿಬ್ಬರು ಭಾವಿಸಿದರು—ಇವನೆಂಥ ವ್ಯಕ್ತಿ, ನಮಗೊಂದು ಮಾತೂ ತಿಳಿಸಲೇ ಇಲ್ಲ, ಅಲ್ಲಿ ಏನು ನಡೀತಾ ಇದೆ ಅಂತ. ಈಗ ಎರಡನೆಯವನು ಮೇಲೆ ಹೋದ. ಆತನೂ ಮೊದಲಿನವನಂತೆಯೇ ಒಳಗೆ ನೋಡಿ ಹಾ ಹಾ ! ಎನ್ನುತ್ತಾ ಧುಮುಕಿಬಿಟ್ಟ. ಈಗ ಮೂರನೆಯವನು ಗೋಡೆ ಏರಿದ. ಒಳಗೆ ಆನಂದದ ಮೇಳವನ್ನು ನೋಡಿದ. ಮೊದಲು ತಾನೂ ಅದರಲ್ಲಿ ಮುಳುಗಿಬಿಡಬೇಕೆಂದು ಅವನಿಗನಿಸಿತು. ಮರುಕ್ಷಣವೇ ಅವನಿಗನಿಸಿತು—ನಾನೂ ಹಾರಿಬಿಟ್ಟರೆ ಇಲ್ಲಿಯ ಈ ಆನಂದದ ವಿಷಯವನ್ನು ಬೇರೆಯವರಿಗೆ ತಿಳಿಸುವವರಾರು ? ನಾನೊಬ್ಬನೇ ಆನಂದಿಸಿ ತೃಪ್ತನಾಗುವುದೆ ? ಹೀಗೆ ಯೋಚಿಸಿ ಪ್ರಯತ್ನಪೂರ್ವಕವಾಗಿ ಅವನು ಹಿಂದಿರುಗಿ ಬಂದು ಕಂಡ ಕಂಡವರಿಗೆಲ್ಲ ಆ ಸ್ಥಳದ ಬಗ್ಗೆ ಹೇಳುತ್ತ ಹೋದ. ಹೀಗೆ ಅವನು ಅನೇಕರು ಆ ಆನಂದದಲ್ಲಿ ಭಾಗಿಗಳಾಗುವಂತೆ ಮಾಡಿದ. ಇಲ್ಲಿ ಅನೇಕರು ಆ ಆನಂದವನ್ನು ಅನುಭವಿಸಬೇಕೆಂಬ ಈ ತೃತೀಯ ವ್ಯಕ್ತಿಯ ಇಚ್ಛೆಯ ಕಾರಣವನ್ನು ಹೇಗೆ ವಿವರಿಸಲಾಗುವುದಿಲ್ಲವೊ ಹಾಗೆಯೇ ಅವತಾರಪುರುಷರಲ್ಲಿ ಆಶೈಶವದಿಂದಲೂ ಕಾಣುವ ಲೋಕಕಲ್ಯಾಣದ ಇಚ್ಛೆಯನ್ನೂ ವಿವರಿಸಲಾಗುವುದಿಲ್ಲ.

6. ಮೇಲಿನ ಮಾತಿನಿಂದ ಕೆಲವರಿಗೆ ಅನಿಸಬಹುದು, ಅವತಾರಪುರುಷರು ನಮ್ಮಂತೆ ಅತಿಚಂಚಲ ಇಂದ್ರಿಯಗಳೊಡನೆ ಸೆಣಸಬೇಕಾಗಿಲ್ಲ, ಅವು ಯಾವಾಗಲೂ

ಅವರ ವಶವರ್ತಿಯಾಗಿಯೇ ಕೆಲಸಮಾಡುವುವು, ಆದ್ದರಿಂದ ಅವುಗಳನ್ನು ವಿಷಯಗಳಿಂದ ವಿಮುಖಗೊಳಿಸಿ ಉಚ್ಚ ಲಕ್ಷ್ಯದೆಡೆಗೆ ಹರಿಸುವುದು ಅವರಿಗೆ ಸುಲಭ—ಎಂದು. ಹಾಗೇನಿಲ್ಲ, ಇಲ್ಲಿಯೂ ನರರಂತೆಯೆ ನರಲೀಲೆ ನಡೆಯುವುದು. ಇಲ್ಲಿಯೂ ಕೂಡ ಅವರು ಹೋರಾಡಿ ಜಯಗಳಿಸಿ ಮುಂದೆಹೋಗಬೇಕು.

7. ಮಾನವ ಮನಸ್ಸಿನ ಸ್ವಭಾವವನ್ನು ಅರಿಯಲು ಯಾರೂ ಪ್ರಯತ್ನಿಸುತ್ತಾರೊ ಅವರಿಗೆ ಅರ್ಥವಾಗುವುದು ಮನಸ್ಸು ಸ್ಥೂಲ-ಸೂಕ್ಷ್ಮರೂಪದ ಅನಂತ ವಾಸನಾಸಮೂಹದಿಂದ ಕೂಡಿದೆ ಎಂದು. ಅವುಗಳಲ್ಲಿ ಒಂದನ್ನು ಅತಿಕ್ರಮಿಸಲು ಸಮರ್ಥರಾದರೆ ಇನ್ನೊಂದು ಮಧ್ಯೆ ಬರುವುದು. ಅದನ್ನೂ ಮೀರಿ ಹೋದರೆ ಇನ್ನೊಂದು ಬರುವುದು. ಸ್ಥೂಲ ವಾಸನೆಯನ್ನು ಹೋಗಲಾಡಿಸಿದರೆ ಸೂಕ್ಷ್ಮ ವಾಸನೆಯು ಮೇಲೇಳುವುದು. ಅದನ್ನೂ ಹತ್ತಿಕ್ಕಿದಾಗ ಅದಕ್ಕಿಂತಲೂ ಸೂಕ್ಷ್ಮವಾದ ವಾಸನೆ ತಲೆಯೆತ್ತುವುದು. ಕಾಮದಿಂದ ಮುಕ್ತವಾದರೆ ಕಾಂಚನ ಹಿಡಿದುಕೊಳ್ಳುವುದು. ಸ್ಥೂಲರೂಪದಲ್ಲಿ ಕಾಮಕಾಂಚನಗಳಿಂದ ಮುಕ್ತವಾದರೆ ಸೌಂದರ್ಯಾಸಕ್ತಿ, ಕೀರ್ತಿ, ಯಶಸ್ಸು ಇತ್ಯಾದಿಗಳು ತಡೆಯನ್ನೊಡ್ಡುವುವು. ಇವೆಲ್ಲವನ್ನು ಮೀರಿ ಹೋದ ಮೇಲೂ ಆಲಸ್ಯ ಅಥವಾ ಕರುಣೆಯ ರೂಪದಲ್ಲಿ ಬಂದು ಮಾಯೆಯು ನಮ್ಮನ್ನು ಮೋಹಪಡಿಸುವುದು.

8. ಶ್ರೀರಾಮಕೃಷ್ಣರು ಮನಸ್ಸಿನ ಈ ಸ್ವಭಾವವನ್ನು ಜ್ಞಾಪಿಸಿಕೊಟ್ಟು ವಾಸನೆಗಳ ವಿಷಯದಲ್ಲಿ ತುಂಬ ಎಚ್ಚರಿಕೆಯಿಂದಿರಬೇಕೆಂದು ನಮಗೆ ಹೇಳುತ್ತಿದ್ದರು. ಕೆಲವೊಮ್ಮೆ ತಮ್ಮ ಜೀವನದ ಘಟನೆಗಳನ್ನೇ ಉಲ್ಲೇಖಿಸಿ ನಮಗೆ ಈ ವಿಷಯವನ್ನು ಹೃದಯಕ್ಕೆ ನಾಟುವಂತೆ ಮಾಡುತ್ತಿದ್ದರು. ಸ್ತ್ರೀ ಭಕ್ತರಿಗೂ ಕೂಡ ಅವರು ಈ ವಿಷಯವನ್ನು ಒತ್ತಿ ಹೇಳುತ್ತಿದ್ದರು. ಅವರ ಜೀವನದ ಒಂದು ಸಂದರ್ಭವನ್ನು ಈ ವಿಷಯದ ಸ್ಪಷ್ಟೀಕರಣಕ್ಕಾಗಿ ಇಲ್ಲಿ ಉದಾಹರಿಸಬಹುದು.

9. ಶ್ರೀರಾಮಕೃಷ್ಣರ ಸಂಪೂರ್ಣ ನಿಷ್ಕಪಟ ವ್ಯವಹಾರ, ಕಾಮದ ಗಂಧವೂ ಇಲ್ಲದ ಅದ್ಭುತ ಪ್ರೀತಿ—ಇವು ಅವರೆಡೆಗೆ ಬರುತ್ತಿದ್ದ ಸ್ತ್ರೀ ಪುರುಷರೆಲ್ಲರನ್ನೂ ಆಕರ್ಷಿಸುತ್ತಿದ್ದುವು. ಒಮ್ಮೆ ಅವರನ್ನು ನೋಡಿದರೆ ಮತ್ತೆ ಯಾವಾಗ ಅವರನ್ನು ನೋಡಿಯೇವು ಎಂದು ಮನಸ್ಸು ಹಾತೊರೆಯುತ್ತಿತ್ತು. ತಾವು ಮಾತ್ರ ಮತ್ತೆ ಮತ್ತೆ ಬಂದು ಹೋಗುವುದಲ್ಲದೆ ತಮ್ಮ ಪರಿಚಯದ ಇತರರನ್ನೂ ಅವರೆಡೆಗೆ ಕರೆದುಕೊಂಡು ಬರುತ್ತಿದ್ದರು. ಒಂದುದಿನ ನಮಗೆ ಪರಿಚಿತ ಸ್ತ್ರೀಭಕ್ತೆಯೊಬ್ಬಳು ತನ್ನ ಸೋದರಿ ಮತ್ತು ಅವಳ ಗಂಡನ ತಂಗಿ—ಇವರೊಡನೆ ಶ್ರೀರಾಮಕೃಷ್ಣರೆಡೆಗೆ ಬಂದಳು; ಶ್ರೀರಾಮಕೃಷ್ಣರು ಅವರ ಯೋಗಕ್ಷೇಮಗಳನ್ನು ವಿಚಾರಿಸಿ ಅನಂತರ ಈಶ್ವರನನ್ನು ಪ್ರೀತಿಸುವುದೇ ಮಾನವಜೀವನದ ಏಕೈಕ ಉದ್ದೇಶ ಎಂಬೀ ವಿಷಯವನ್ನು ಕುರಿತು ಮಾತನಾಡುತ್ತ ಅವರು ಹೇಳತೊಡಗಿದರು—

''ಭಗವಂತನಲ್ಲಿ ಶರಣಾಗುವುದು ಅಷ್ಟು ಸುಲಭವೇ ? ಮಹಾ ಮಾಯೆ ಎಷ್ಟು

ಪ್ರಬಲವಾದುದು !—ಅಷ್ಟು ಸುಲಭವಾಗಿ ಬಿಡುವುದಿಲ್ಲ. ಒಬ್ಬ ವ್ಯಕ್ತಿಗೆ ಯಾರೂ ಇಲ್ಲದಿದ್ದರೆ ಅವನು ಒಂದು ಬೆಕ್ಕನ್ನು ತಂದು ಸಾಕುತ್ತಾನೆ. ಅದಕ್ಕಾಗಿ ಮೀನು ಹಾಲಿಗಾಗಿ ಊರೆಲ್ಲ ಸುತ್ತುತ್ತಾನೆ. 'ನನ್ನ ಬೆಕ್ಕಿಗೆ ಮೀನು ಹಾಲು ಇಲ್ಲದಿದ್ದರೆ ಆಗೋದೇ ಇಲ್ಲ' ಎನ್ನುತ್ತಾನೆ. ಒಂದು ಶ್ರೀಮಂತ ಮನೆತನವಿರಬಹುದು. ಗಂಡಂದಿರು ಮಕ್ಕಳು ಎಲ್ಲ ತೀರಿಹೋಗಿದ್ದಾರೆ. ಮನೆಯ ತುಂಬ ವಿಧವೆಯರೇ. ಮನೆಯೊ ಮುರಕಲು—ಒಂದೊಂದೇ ಭಾಗ ಬಿದ್ದುಹೋಗುತ್ತಿದೆ. ಗೋಡೆಯ ಮೇಲೆಲ್ಲ ಅಶ್ವತ್ಥದ ಗಿಡಗಳು ಹುಟ್ಟಿವೆ. ಅವುಗಳ ಮಧ್ಯೆ ತರಕಾರಿ ಸೊಪ್ಪು ಬೆಳೆದಿದೆ. ವಿಧವೆಯರು ಆ ಸೊಪ್ಪನ್ನು ಕಿತ್ತು ಒಳ್ಳೆಯ ಚಚ್ಚೊಡಿ (ಒಂದು ವಿಧದ ಬಂಗಾಳಿ ಪಲ್ಯ) ಮಾಡಿ ಉಣ್ಣುತ್ತಾರೆ. ಭಗವಂತನನ್ನು ಏಕೆ ಕರೆಯ ಬಾರದು ? ಅವರಿಗೆ ಆ ಸಮಯ ಬಂದಿದೆ, ಆದರೆ ಮಾಡುವುದಿಲ್ಲ. ಅಥವಾ ಒಬ್ಬಳಿಗೆ ಮದುವೆಯಾಗಿ ಕೆಲವೇ ದಿನಗಳಲ್ಲಿ ಗಂಡ ತೀರಿಹೋಗುತ್ತಾನೆ. ಈಗವಳು ಬಾಲವಿಧವೆ. ಭಗವಂತನನ್ನು ಏಕೆ ಕರೆಯಬಾರದು ? ಅದಿಲ್ಲ—ತನ್ನ ಸಹೋದರರ ಮನೆಯಲ್ಲಿ ಹಿರಿಯಕ್ಕನಾಗಿ ಇರುತ್ತಾಳೆ. ಎಲ್ಲರ ಮೇಲೂ ದಬ್ಬಾಳಿಕೆ ನಡೆಸುತ್ತಾಳೆ. ಎಲ್ಲ ಅವಳು ಹೇಳಿದಂತೆಯೇ ನಡೆಯಬೇಕು. ಸುತ್ತಮುತ್ತಲಿನವರೆಲ್ಲ ಅವಳನ್ನು ನೋಡಿ ತತ್ತರಿಸುತ್ತಾರೆ. 'ನಾನಿಲ್ಲದಿದ್ದರೆ ಈ ಸಹೋದರರಿಗೆ ಊಟಕ್ಕೂ ಗತಿಯಿಲ್ಲ ?'—ಎಂದು ಹೇಳಿಕೊಂಡು ತಿರುಗುತ್ತಾಳೆ.''

ಒಂದು ರಹಸ್ಯ ವಿಷಯ—ನಮ್ಮ ಪರಿಚಿತ ಸ್ತ್ರೀಯಳ ಜತೆ ಬಂದಿದ್ದ ಆಕೆಯ ಸೋದರಿಯ ಗಂಡನ ತಂಗಿ ವಿಧವೆಯಾಗಿ ತನ್ನ ಸಹೋದರ-ಸಹೋದರಿಯರ ಮನೆಯಲ್ಲಿ ವಾಸವಾಗಿದ್ದಳು. ಶ್ರೀರಾಮಕೃಷ್ಣರಿಗೆ ಯಾರೂ ಈ ವಿಷಯವನ್ನು ಹಿಂದೆ ಹೇಳಿರಲಿಲ್ಲ. ಆದರೂ ಅವರು ಮಾತಿನ ಮಧ್ಯೆ ಈ ಉದಾಹರಣೆಯನ್ನಿತ್ತು ಹೇಗೆ ಮನುಷ್ಯನು ವಾಸನೆಗಳಿಗೆ ದಾಸನಾಗಿ ಕುಣಿಯುತ್ತಾನೆಂಬುದನ್ನು ವಿವರಿಸಿ ಹೇಳಿದರು. ಈ ಮಾತು ಆ ಸ್ತ್ರೀಯಳ ಮನಸ್ಸಿಗೆ ಸರಿಯಾಗಿ ನಾಟಿತು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ನಮ್ಮ ಪರಿಚಿತ ಸ್ತ್ರೀಯಳ ಸೋದರಿ ಪಿಸುಗುಟ್ಟುತ್ತ ಹೇಳಿದಳು: ''ಅಯ್ಯೋ ದೇವರೇ, ಈ ಮಾತು ಯಾಕೆ ಬಂತಪ್ಪ ಇವರ ಬಾಯಿಂದ ಈಗ ! ಅವಳು ಏನು ಅಂದುಕೊಳ್ಳುತ್ತಾಳೊ ಏನೋ!'' ಪರಿಚಿತ ಸ್ತ್ರೀ ಹೇಳಿದಳು: ''ಏನು ಮಾಡೋದು ಹೇಳು ? ಅವರಿಗೆ ಯಾರೂ ಈ ವಿಷಯ ಹೇಳಿಯೇ ಇಲ್ಲ.''

10. ಮನುಷ್ಯನ ಮನಸ್ಸು ಎಷ್ಟು ಉಚ್ಚ ಸ್ಥಿತಿಗೆ ಏರುವುದೊ ಅಷ್ಟೂ ಸೂಕ್ಷ್ಮ ವಾಸನೆಗಳು ಅವನನ್ನು ಕಾಡುವುವು. ಯಾವಾಗಲೂ ಸುಳ್ಳು ಹೇಳುವ, ಕದಿಯುವ ಮತ್ತು ವಿಷಯಲಂಪಟ ವ್ಯಕ್ತಿಗಳಿಗೆ ಎಷ್ಟೇ ಅಂಥ ಕೃತ್ಯಗಳಲ್ಲಿ ತೊಡಗಿದರೂ ಏನೂ ಅನಿಸುವುದಿಲ್ಲ. ಆದರೆ ಉತ್ತಮ ವ್ಯಕ್ತಿಗಳಿಗೆ ಅವುಗಳ ಆಲೋಚನೆಯೇ ತೀವ್ರವಾದ ವೇದನೆಯನ್ನುಂಟುಮಾಡುತ್ತದೆ. ಅವತಾರಪುರುಷರು ಸ್ಥೂಲವಿಷಯಗಳಿಂದ ದೂರ ವಾಗಿದ್ದರೂ ಸೂಕ್ಷ್ಮವಾದ ವಾಸನೆಗಳೊಡನೆ ನಮ್ಮಂತೆಯೇ ಹೋರಾಡಬೇಕಾಗುತ್ತದೆ.

ಒಂದೇ ಕೆಟ್ಟ ಆಲೋಚನೆ ಮನಸ್ಸಿಗೆ ಬಂದರೂ ಅವರಿಗೆ ನಮಗಿಂತ ಅತ್ಯಧಿಕವಾದ ವೇದನೆಯುಂಟಾಗುತ್ತದೆ. ಆದ್ದರಿಂದ ಅವರ ಈ ಹೋರಾಟ ತೋರಿಕೆಯೆಂದೆಂದು ಹೇಳಲಾಗುವುದಿಲ್ಲ.

11. ಆದರೆ ಶಂಕರಾಚಾರ್ಯರು ಗೀತಾಭಾಷ್ಯದಲ್ಲಿ ಹೀಗೆ ಹೇಳಿರುವರು: "ನಿತ್ಯಶುದ್ಧಮುಕ್ತ ಸ್ವಭಾವದವನೂ, ಜೀವನಿಯಾಮಕನೂ, ಜನ್ಮರಹಿತನೂ ಆದ ಈಶ್ವರನು ಜನರನ್ನು ಅನುಗ್ರಹಿಸುವುದಕ್ಕೋಸ್ಕರ ತನ್ನ ಮಾಯಾಶಕ್ತಿಯ ಮೂಲಕ ದೇಹವುಳ್ಳವನಂತೆಯೂ, ಜನ್ಮಪಡೆದಂತೆಯೂ ಕಾಣುತ್ತಿರುವನು." ಆದ್ದರಿಂದ ಅವತಾರ ಪುರುಷರ ಸಾಧನೆ ಹೋರಾಟಗಳೆಲ್ಲ ಯಥಾರ್ಥ ಎಂದು ಹೇಗೆ ನಂಬುವುದು? ಆಚಾರ್ಯರು ಹೇಳಿರುವುದು ನಿಜ. ಅವರ ದೃಷ್ಟಿಯಲ್ಲಿ ಅವತಾರಪುರುಷರ ಜನ್ಮಗ್ರಹಣ ಮಾತ್ರ ತೋರಿಕೆಯದಲ್ಲ, ನಮ್ಮ ನಿಮ್ಮ ಮತ್ತು ಇಡೀ ಜಗತ್ತಿನ ನಾಮರೂಪಗಳೆಲ್ಲ ತೋರಿಕೆಯದೆ—ಅವು ಯಥಾರ್ಥ ಸತ್ಯಗಳಲ್ಲ. ಇಡೀ ಪ್ರಪಂಚವೇ ಬ್ರಹ್ಮವಸ್ತುವಿನ ಮೇಲಿರುವ ಮಿಥ್ಯಾರೋಪ. ಅವತಾರಪುರುಷರ ದೇಹಧಾರಣೆ ಮತ್ತು ಸುಖದುಃಖಾದಿ ಅನುಭವಗಳು ಮಾತ್ರ ತೋರಿಕೆ, ಆದರೆ ನಮಗೆ ಸಂಬಂಧಪಟ್ಟಿರುವುದೆಲ್ಲ ಸತ್ಯ—ಎಂಬುದು ಅವರ ಅಭಿಪ್ರಾಯವಲ್ಲ. ನಮ್ಮ ಅನುಭವಗಳೆಲ್ಲ ಸತ್ಯವಾದರೆ ಅವತಾರ ಪುರುಷರ ಅನುಭವಗಳನ್ನೂ ನಾವು ಸತ್ಯವೆಂದು ಗ್ರಹಿಸಬೇಕು. ನಾವು ಆಚಾರ್ಯರ ಮಾತಿಗೆ ವಿರುದ್ಧ ಹೋಗಿಯೇ ಇಲ್ಲ.

12. ಇನ್ನೊಂದು ದೃಷ್ಟಿಯಿಂದ ಈ ವಿಷಯವನ್ನು ಪರೀಕ್ಷಿಸಬಹುದು. ಜಗತ್ತಿನ ಬಗ್ಗೆ ಎರಡು ದೃಷ್ಟಿಕೋನಗಳಿವೆ—ಅದ್ವೈತದೃಷ್ಟಿ ಮತ್ತು ದ್ವೈತದೃಷ್ಟಿ. ಅದ್ವೈತಭೂಮಿಕೆಯಿಂದ ಜಗತ್ತನ್ನು ನೋಡಹೊರಟರೆ ಅದು ಇಲ್ಲವೇ ಇಲ್ಲ, ಯಾವಾಗಲೂ ಇರಲಿಲ್ಲ—ಏಕಮೇವಾದ್ವಿತೀಯ ಬ್ರಹ್ಮವಸ್ತುವಿನ ಹೊರತು ಬೇರಾವುದೂ ಇಲ್ಲ ಎಂದು ಕಂಡುಬರುತ್ತದೆ. ದ್ವೈತಭೂಮಿಕೆಯಿಂದ ನೋಡಿದರೆ ನಾನಾ ನಾಮರೂಪಗಳಿಂದ ಕೂಡಿದ ಈ ಜಗತ್ತು ಸತ್ಯವಾಗಿ ತೋರುತ್ತದೆ. ದೇಹದಲ್ಲಿದ್ದೂ ವಿದೇಹಭಾವದಿಂದ ಕೂಡಿದ ಅವತಾರಪುರುಷರು ಮತ್ತು ಜೀವನ್ಮುಕ್ತರು ತಮ್ಮ ಜೀವನದ ಅನೇಕ ಸಮಯದಲ್ಲಿ ಅದ್ವೈತ ಭೂಮಿಕೆಗೆ ಹೋಗಿ ಪುನಃ ದ್ವೈತಭೂಮಿಕೆಗೆ ಇಳಿದುಬಂದಾಗ ಜಗತ್ತು ಸ್ವಪ್ನದಂತೆ ಮಿಥ್ಯೆ ಎಂದು ಅವರಿಗನಿಸುವುದು. ಆದರೆ ಜಾಗ್ರದವಸ್ಥೆಗೆ ಹೋಲಿಸಿದರೆ ಸ್ವಪ್ನವು ಮಿಥ್ಯೆ ಎಂದೆನಿಸಿದರೂ ಸ್ವಪ್ನಾವಸ್ಥೆಯಲ್ಲಿ ಅದು ಸತ್ಯವಾಗಿಯೇ ಕಾಣುವುದು. ಹಾಗೆಯೇ ಸಮಾಧಿ ಅವಸ್ಥೆಯಲ್ಲಿ ಇಲ್ಲದಿರುವಾಗ ಅವತಾರ ಹಾಗೂ ಮುಕ್ತಪುರುಷರ ಜಗದನುಭವ ಮಿಥ್ಯೆ ಎಂದು ಕಾಣುವುದಿಲ್ಲ.

13. ಜಗತ್ತನ್ನು ನೋಡಿದಂತೆಯೇ ವ್ಯಕ್ತಿಯನ್ನು ಎರಡು ದೃಷ್ಟಿಯಿಂದ ನೋಡಬಹುದು. ದ್ವೈತಭೂಮಿಕೆಯಿಂದ ನೋಡಿದಾಗ ವ್ಯಕ್ತಿಯು ಬದ್ಧಮಾನವ ಎಂದೆನಿಸುತ್ತದೆ ಹಾಗೂ ಅದ್ವೈತಭೂಮಿಕೆಯಿಂದ ನೋಡಿದರೆ ಅವನು ನಿತ್ಯಶುದ್ಧ ಬುದ್ಧಮುಕ್ತ ಬ್ರಹ್ಮವಸ್ತು ಎನಿಸುತ್ತದೆ. ಪೂರ್ಣ ಅದ್ವೈತದೃಷ್ಟಿ ಭಾವರಾಜ್ಯದ

ಕೊನೆಯ ಹಂತ. ಇದಕ್ಕಿಂತ ಮೊದಲು ಮಾನವನು ಹಂತಹಂತವಾಗಿ ಮೇಲೇರುತ್ತ ಹೋಗಿ ಆತ್ಯಂತಿಕವಾಗಿ ಈ ಸ್ಥಿತಿಯನ್ನು ಮುಟ್ಟಬೇಕು. ಬೇರೆ ಬೇರೆ ಹಂತಗಳಲ್ಲಿ ಜಗತ್ತು ಮತ್ತು ಇತರ ವ್ಯಕ್ತಿಗಳು ಅವನಿಗೆ ಬೇರೆ ಬೇರೆ ರೂಪಗಳಲ್ಲಿ ಕಾಣುವರು. ಅವನ ಹಿಂದಿನ ದೃಷ್ಟಿ ಬದಲಾಗುತ್ತ ಹೋಗುವುದು. ಅವನಿಗೆ ಜಗತ್ತು ಭಾವಮಯ ವಾಗಿ ಕಾಣಬಹುದು. ಅಥವಾ ವ್ಯಕ್ತಿಗಳೆಲ್ಲ ಶರೀರದಿಂದ ಬೇರೆಯಾದ ಮನೋಮಯ ಅಥವಾ ದಿವ್ಯರೂಪಗಳಾಗಿ ಕಾಣಬಹುದು.

14. ಶ್ರದ್ಧಾಭಕ್ತಿಗಳಿಂದ ಅವತಾರಪುರುಷರ ಸಂಗ ಮಾಡಿದರೆ ಸಾಧಾರಣ ಮಾನವನು ತನಗರಿವಿಲ್ಲದಂತೆಯೇ ಮೇಲೆ ಹೇಳಿದ ಉಚ್ಚ ಉಚ್ಚ ಸ್ಥಿತಿಗೇರುತ್ತ ಹೋಗುವನು. ಇದು ಅವರ ಶಕ್ತಿಯ ಪ್ರಭಾವ. ಹೀಗೆ ಉಚ್ಚಸ್ಥಿತಿಯಿಂದ ಭಕ್ತರು ಅವತಾರಪುರುಷರನ್ನು ನೋಡಿದಾಗ ಅವರು ದಿವ್ಯಸ್ವರೂಪರೆಂದು, ವಿಶೇಷ ಶಕ್ತಿಶಾಲಿ ಗಳೆಂದು ಭಕ್ತರಿಗೆ ಅರಿವಾಗುತ್ತದೆ. ಇದರಿಂದಾಗಿಯೇ ಅವರ ಮಾನವಭಾವ ಕೇವಲ ತೋರಿಕೆ ಎಂದು ಆ ಭಕ್ತರಿಗೆ ಅನಿಸಿರಬೇಕು. ಭಕ್ತಿಯು ಆಳವಾದಂತೆಲ್ಲ ಭಕ್ತಸಾಧಕನು ಮೊದಲು ಭಗವದ್‌ಭಕ್ತರನ್ನೂ ಅನಂತರ ಭಗವತ್‌ಸೃಷ್ಟಿಯಾದ ಜಗತ್ತನ್ನೂ ದಿವ್ಯ ದೃಷ್ಟಿಯಿಂದ ಕಾಣುತ್ತಾನೆ.

15. ಆಗಾಗ ಅವರಿಗೆ ಉಂಟಾಗುವ ಆಧ್ಯಾತ್ಮಿಕ ಅನುಭವದಿಂದಾಗಿ ಅವತಾರ ಪುರುಷರಿಗೆ ಬಾಲ್ಯಾವಸ್ಥೆಯಿಂದಲೂ ಬಾಹ್ಯಜಗತ್ತಿಗಿಂತ ಹೆಚ್ಚಾಗಿ ಭಾವಜಗತ್ತೇ ಹೆಚ್ಚು ಸತ್ಯವಾಗುವುದು ಮತ್ತು ಮುಂದೆ ಭಾವಜಗತ್ತಿನ ವಿಶ್ವಾಸವೇ ಅಧಿಕವಾಗುತ್ತ ಹೋಗು ವುದು. ಕೊನೆಯಲ್ಲಿ ಅದ್ವೈತಸಿದ್ಧಿಯನ್ನು ಪಡೆದು ಎಲ್ಲ ನಾಮರೂಪಗಳಿಗೆ ಮೂಲ ವಾದ ಬ್ರಹ್ಮನನ್ನು ಪಡೆಯುವರು. ಜೀವನ್ಮುಕ್ತರಿಗೂ ಇದೇ ರೀತಿ ಆಗುವುದು. ಆದರೆ ಅವತಾರಪುರುಷರಿಗೆ ಸ್ವಲ್ಪ ಪ್ರಯತ್ನದಿಂದ ಈ ಸ್ಥಿತಿ ಉಂಟಾದರೆ ಇವರು ಆಜೀವ ಪರ್ಯಂತ ಇದಕ್ಕಾಗಿ ಪ್ರಯತ್ನಿಸಬೇಕು. ಅಥವಾ ತಾವೇ ಸ್ವಲ್ಪಕಾಲದಲ್ಲಿ ಅದ್ವೈತಸಿದ್ಧಿ ಯನ್ನು ಪಡೆದರೂ ಇತರರನ್ನು ಆ ಸ್ಥಿತಿಗೆ ಒಯ್ಯಲು ಅವತಾರಪುರುಷರಿಗಿರುವಷ್ಟು ಸಾಮರ್ಥ್ಯ ಇವರಿಗಿರುವುದಿಲ್ಲ. ಶ್ರೀರಾಮಕೃಷ್ಣರು ಹೇಳುವಂತೆ, ''ಶಕ್ತಿಯ ಅಭಿವ್ಯಕ್ತಿ ಯಲ್ಲಿಯೇ ಜೀವ ಮತ್ತು ಅವತಾರಗಳಿಗೆ ಇರುವ ವ್ಯತ್ಯಾಸ.''

16. ಅವತಾರಪುರುಷರು ಅದ್ವೈತಸ್ಥಿತಿಯಲ್ಲಿ ಕೆಲಕಾಲವಿದ್ದು ಅನಂತರ ನಿಮ್ನಭೂಮಿಕೆಗಿಳಿದಾಗ ಸಾಧಾರಣ ದೃಷ್ಟಿಯಿಂದ ಮಾನವರಂತೆ ಕಂಡರೂ ಅವರು ನಿಜವಾಗಿಯೂ ದೇವಮಾನವರೇ. ಆಗ ಅವರು ಜಗತ್ತನ್ನೂ ಮತ್ತು ಅದರ ಕಾರಣ ವಾದ ಬ್ರಹ್ಮವಸ್ತುವನ್ನೂ ಏಕಕಾಲದಲ್ಲಿ ಅನುಭವಿಸುತ್ತ ಜಗತ್ತಿನ ಸಕಲ ವಸ್ತುಗಳನ್ನು ಛಾಯೆಯಂತೆ ಕಾಣುತ್ತಾರೆ. ಆಗ ಅವರ ಮೂಲಕ ಅಪೂರ್ವ ದಿವ್ಯಶಕ್ತಿ ಪ್ರವಹಿಸ ತೊಡಗುವುದು. ಸಕಲ ವಸ್ತುಗಳ ಆದಿ ಅಂತ್ಯಗಳ ಅರಿವು ಅವರಿಗೆ ಉಂಟಾಗಿ ಅವರು ಸರ್ವಜ್ಞತ್ವವನ್ನು ಪಡೆಯುತ್ತಾರೆ. ಸ್ಥೂಲದೃಷ್ಟಿಯುಳ್ಳ ನಮ್ಮಂಥವರು ಅವರ ಅದ್ಭುತಶಕ್ತಿಯನ್ನು ಕಂಡು ಬೆರಗಾಗುತ್ತೇವೆ. ಅವರ ಅಮೃತವಾಣಿ ನಮ್ಮಲ್ಲಿ ಆಶಾ

ಕಿರಣವನ್ನು ಹುಟ್ಟಿಸುತ್ತದೆ ಮತ್ತು ವಿಷಯವಸ್ತುಗಳಿಂದುಂಟಾದ ಚಿತ್ತವೃತ್ತಿಗಳಿರುವ ವರೆಗೂ ಆತ್ಯಂತಿಕ ಸತ್ಯದ ಪ್ರತ್ಯಕ್ಷಾನುಭವ ಅಸಾಧ್ಯ ಎಂಬುದನ್ನು ಸೂಚಿಸುತ್ತದೆ.

17. ಆದರೆ ಬಾಹ್ಯ ವಿಷಯವಸ್ತುಗಳನ್ನು ಅವಲಂಬಿಸಿಯೇ ಅಪಾರ ವೈಜ್ಞಾನಿಕ ಜ್ಞಾನಸಂಪತ್ತು ನಮಗುಂಟಾಗಿದೆ ಮತ್ತು ಉಂಟಾಗುತ್ತಿದೆ. ಹಾಗಿರುವಾಗ ಮೇಲಿನ ಮಾತು ಸತ್ಯವಲ್ಲ ಎಂದು ಆಧುನಿಕ ವಿಜ್ಞಾನದ ಅಧ್ಯಯನಮಾಡಿದವರು ಭಾವಿಸಬಹುದು. ಇದಕ್ಕೆ ಉತ್ತರ—ಜಡವಿಜ್ಞಾನದ ಉನ್ನತಿಯಿಂದ ಮನುಷ್ಯನ ಜ್ಞಾನವೃದ್ಧಿಯಾದರೂ ಅದರಿಂದ ಪೂರ್ಣ ಸತ್ಯವನ್ನು ಪಡೆಯಲಾಗುವುದಿಲ್ಲ. ಈ ವಿಜ್ಞಾನವು ಜಡವಸ್ತುವೇ ಜಗತ್ಕಾರಣವೆಂದು ಸಾಧಿಸುವುದರಿಂದ ಮನಸ್ಸು ಬಹಿರ್ಮುಖವಾಗಿ ಸ್ಥೂಲಸುಖಗಳಲ್ಲಿಯೇ ಹೆಚ್ಚು ಆಸಕ್ತವಾಗುತ್ತದೆ. ಒಂದೇ ಮೂಲ ಜಡವಸ್ತುವಿನಿಂದ ಜಗತ್ತಿನ ಎಲ್ಲ ಜೀವಾಜೀವ ವಸ್ತುಗಳು ಉಂಟಾಗಿವೆ ಎಂದು ವೈಜ್ಞಾನಿಕವಾಗಿ ಸಾಧಿತವಾದರೂ ಅಂತರ್ಜಗತ್ತಿನ ವಿಷಯಗಳೆಲ್ಲ ನಮ್ಮ ಪಾಲಿಗೆ ಅಜ್ಞಾತವಾಗಿಯೇ ಉಳಿಯುವುವು. ಭೋಗವಾಸನೆಯ ತ್ಯಾಗ ಮತ್ತು ಅಂತರ್ಮುಖತೆ ಇದೊಂದೇ ಮುಕ್ತಿಯ ಮಾರ್ಗ. ಇದರಿಂದ ಮಾತ್ರ ದೇಶಕಾಲಾತೀತ ಅಖಂಡ ಸತ್ಯವನ್ನು ಪಡೆದು ಚಿರಶಾಂತಿಯನ್ನು ಹೊಂದಬಹುದು.

18. ಬಾಲ್ಯಕಾಲದಿಂದಲೂ ಆಗಾಗ ಆಧ್ಯಾತ್ಮಭಾವದಲ್ಲಿ ತನ್ಮಯರಾಗುವುದನ್ನು ಎಲ್ಲ ಅವತಾರಪುರುಷರಲ್ಲಿಯೂ ನಾವು ಕಾಣುತ್ತೇವೆ. ಶ್ರೀಕೃಷ್ಣನು ಬಾಲ್ಯಕಾಲದಲ್ಲಿ ತನ್ನ ದೇವತ್ವವನ್ನು ಅನೇಕರೀತಿಯಲ್ಲಿ ತಂದೆ ತಾಯಿಯರಿಗೆ ಮತ್ತು ಇತರ ಬಂಧುಗಳಿಗೆ ತೋರಿಸಿದ್ದನು. ಬುದ್ಧನು ಬಾಲ್ಯದಲ್ಲಿ ಉದ್ಯಾನವನದಲ್ಲಿ ಓಡಾಡುತ್ತ ಒಂದು ಬೋಧಿ ವೃಕ್ಷದ ಕೆಳಗೆ ಕುಳಿತು ಧ್ಯಾನಸ್ಥನಾಗಿ ಎಲ್ಲರ ಗಮನವನ್ನೂ ಸೆಳೆದಿದ್ದನು. ಕ್ರಿಸ್ತನು ತನ್ನ ಪ್ರೇಮದ ಮೂಲಕ ವನ್ಯ ಪಕ್ಷಿಗಳನ್ನು ಆಕರ್ಷಿಸಿ ತನ್ನ ಕೈಯಿಂದ ಅವುಗಳಿಗೆ ಉಣಿಸಿದ್ದನು. ಶಂಕರರು ತಮ್ಮ ದಿವ್ಯಶಕ್ತಿಯ ಪ್ರಭಾವದಿಂದ ತಮ್ಮ ತಾಯಿಯನ್ನು ಮುಗ್ಧಗೊಳಿಸಿ ಬಾಲ್ಯದಲ್ಲಿಯೇ ಸಂನ್ಯಾಸವನ್ನು ಸ್ವೀಕರಿಸಿದರು. ಶ್ರೀಚೈತನ್ಯನು ಬಾಲ್ಯದಲ್ಲಿಯೇ ದಿವ್ಯಭಾವವನ್ನು ಪಡೆದು ಮೇಲು ಕೀಳು ವಸ್ತುಗಳೆಲ್ಲದರಲ್ಲೂ ಈಶ್ವರ ಪ್ರಕಾಶಿಸುವುದನ್ನು ಕಂಡಿದ್ದನು. ಶ್ರೀರಾಮಕೃಷ್ಣರ ಜೀವನದಲ್ಲಿಯೂ ಇಂಥ ಘಟನೆಗಳಿಗೆ ಕಡಿಮೆಯಿಲ್ಲ. ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೇ ಅವರು ಭಾವರಾಜ್ಯದಲ್ಲಿ ತನ್ಮಯರಾಗುತ್ತಿದ್ದರು. ಶ್ರೀರಾಮಕೃಷ್ಣರ ಬಾಯಿಂದಲೇ ಕೇಳಿದ ಘಟನೆಯಿದು :

19. "ಆ ಹಳ್ಳಿಯಲ್ಲಿ (ಕಾಮಾರಪುಕುರದಲ್ಲಿ) ಮಕ್ಕಳಿಗೆ ಮಂಡಕ್ಕಿಯನ್ನು ಒಂದು ಸಣ್ಣ ಬುಟ್ಟಿಯಲ್ಲಿ ಕೊಡುತ್ತಿದ್ದರು. ಯಾರ ಮನೆಯಲ್ಲಿ ಈ ರೀತಿಯ ಬುಟ್ಟಿಗಳಿಲ್ಲವೊ ಅಲ್ಲಿ ಬಟ್ಟೆಯಲ್ಲಿಯೇ ಮಂಡಕ್ಕಿಯನ್ನಿಟ್ಟುಕೊಂಡು ತಿನ್ನುತ್ತಿದ್ದರು. ಮಕ್ಕಳು ಬಟ್ಟೆಯಲ್ಲಿಯೊ ಬುಟ್ಟಿಯಲ್ಲಿಯೊ ಮಂಡಕ್ಕಿಯನ್ನಿಟ್ಟುಕೊಂಡು ತಿನ್ನುತ್ತ ಹೊಲದಲ್ಲಿ ಓಡಾಡುವುದು ರೂಢಿ. ಆಗ ಜ್ಯೇಷ್ಠ ಅಥವಾ ಆಷಾಢಮಾಸ. ನನಗಾಗ ಆರು ಅಥವಾ ಏಳನೆಯ ವಯಸ್ಸು. ಒಂದುದಿನ ಬುಟ್ಟಿಯಲ್ಲಿ ಮಂಡಕ್ಕಿಯನ್ನಿಟ್ಟುಕೊಂಡು

ತಿನ್ನುತ್ತ ಗದ್ದೆಯ ಅಂಚಿನ ಮೇಲೆ ಹೋಗುತ್ತಿದ್ದೆ. ಆಕಾಶದಲ್ಲಿ ಒಂದು ಸುಂದರ ಕಾರ್ಮೋಡ ಕಾಣಿಸಿತು. ನೋಡುತ್ತಿದ್ದಂತೆಯೇ ಮೋಡ ವಿಸ್ತರಿಸತೊಡಗಿತು. ಅದೇ ಸಂದರ್ಭದಲ್ಲಿ ಒಂದು ಬೆಳ್ಳಕ್ಕಿಯ ಸಾಲು ಅದೇ ಮೋಡದ ಹಿನ್ನೆಲೆಯಲ್ಲಿ ಹಾರತೊಡಗಿತು. ಅವು ಹಾಲಿನಂತೆ ಬೆಳ್ಳಗಿದ್ದವು. ಆ ಸುಂದರ ದೃಶ್ಯವನ್ನು ನೋಡುತ್ತ ನಾನು ಭಾವೋನ್ಮತ್ತನಾದೆ, ಬಾಹ್ಯಪ್ರಜ್ಞೆಯು ಹೊರಟುಹೋಯಿತು. ನಾನು ಕೆಳಗೆ ಬಿದ್ದೆ—ಮಂಡಕ್ಕಿಯೆಲ್ಲ ನೆಲದಮೇಲೆ ಚೆಲ್ಲಿಹೋಯಿತು. ಎಷ್ಟು ಹೊತ್ತು ಆ ಸ್ಥಿತಿಯಲ್ಲಿದ್ದೆನೊ ತಿಳಿಯದು. ನೋಡಿದ ಜನ ನನ್ನನ್ನು ಎತ್ತಿಕೊಂಡು ಹೋಗಿ ಮನೆಗೆ ಬಿಟ್ಟರು. ಇದೇ ನನ್ನ ಪ್ರಥಮ ಭಾವಾವಸ್ಥೆ.''

20. ಕಾಮಾರಪುಕುರಕ್ಕೆ ಸುಮಾರು ಎರಡು ಮೈಲಿ ದೂರದಲ್ಲಿ ಆನೂರು ಎಂಬ ಗ್ರಾಮವಿದೆ. ಅಲ್ಲಿ ಒಂದು ಪ್ರಸಿದ್ಧ ವಿಶಾಲಾಕ್ಷಿದೇವಿಯ ದೇವಾಲಯವಿದೆ. ಸುತ್ತಮುತ್ತಲಿನ ಗ್ರಾಮಸ್ಥರನೇಕರು ತಮ್ಮ ಆಸೆಗಳ ಪೂರ್ತಿಗಾಗಿ ಆ ದೇವಿಗೆ ಹರಕೆ ಹೊತ್ತುಕೊಳ್ಳುವುದು, ವಿಶೇಷ ಪೂಜೆ ಮಾಡಿಸುವುದು ಅಲ್ಲಿಯ ಸಂಪ್ರದಾಯ. ಅಲ್ಲಿಗೆ ಬರುತ್ತಿದ್ದ ಭಕ್ತರ ಪೈಕಿ ಸ್ತ್ರೀಯರ ಸಂಖ್ಯೆಯೇ ಅಧಿಕ. ರೋಗ ವಾಸಿಯಾಗುವುದೆಂದು ಅನೇಕರು ಅಲ್ಲಿಗೆ ಬರುತ್ತಿದ್ದರು. ಅನೇಕ ಸತ್ಕುಲದ ಸ್ತ್ರೀಯರೂ ಆ ದೇವಿಯ ಮಹಿಮೆಯನ್ನು ಸಾರುವ ಹಾಡುಗಳನ್ನು ಹಾಡುತ್ತ ನಡೆದುಕೊಂಡು ಆ ದೇವಾಲಯಕ್ಕೆ ಹೋಗುವ ದೃಶ್ಯವನ್ನು ಈಗಲೂ ಕಾಣಬಹುದು. ಶ್ರೀರಾಮಕೃಷ್ಣರ ಬಾಲ್ಯಕಾಲದಲ್ಲಿ ಕಾಮಾರಪುಕುರ ಮತ್ತಿತರ ಗ್ರಾಮಗಳಲ್ಲಿ ಜನಸಂಖ್ಯೆ ಅಧಿಕವಾಗಿತ್ತು ಮತ್ತು ಜನರು ಹೆಚ್ಚು ಹಣವಂತರಾಗಿದ್ದರು. ಭಗ್ನಾವಶೇಷ ಇಟ್ಟಿಗೆಯ ಮನೆಗಳು, ಮುರಿದುಬಿದ್ದ ದೇವಸ್ಥಾನಗಳು, ರಾಸಮಂಚ ಇತ್ಯಾದಿಗಳನ್ನು ನೋಡಿದಾಗ ನಮಗಿದು ಅರ್ಥವಾಗುತ್ತದೆ. ಆದ್ದರಿಂದ ಆನೂರಿಗೆ ಬಹುಸಂಖ್ಯೆಯಲ್ಲಿ ಯಾತ್ರಿಕರು ಆಗ ಹೋಗುತ್ತಿದ್ದಿರಬೇಕು.

ಅಲ್ಲಿ ದೇವಸ್ಥಾನವೆಂದರೆ ಯಾವ ಕಟ್ಟಡವೂ ಇರಲಿಲ್ಲ. ಮಳೆ ಬಿಸಿಲಿನಿಂದ ರಕ್ಷಿಸಲು ಹಳ್ಳಿಗರು ವರ್ಷ ವರ್ಷವೂ ಒಂದು ಎಲೆಯ ಚಪ್ಪರ ಹಾಕುತ್ತಿದ್ದರು. ಒಂದು ಕಾಲದಲ್ಲಿ ಇಟ್ಟಿಗೆಯ ಕಟ್ಟಡವೊಂದಿತ್ತು ಎಂಬುದು ಹತ್ತಿರದಲ್ಲಿರುವ ಭಗ್ನಸ್ತೂಪದಿಂದ ತಿಳಿದುಬರುವುದು. ಗ್ರಾಮವಾಸಿಗಳನ್ನು ಈ ದೇವಸ್ಥಾನದ ಬಗ್ಗೆ ವಿಚಾರಿಸಿದಾಗ ದೇವಿಯೇ ಸ್ವಂತ ಇಚ್ಛೆಯಿಂದ ಅದನ್ನು ಒಡೆದು ಹಾಕಿದಳು ಎನ್ನುತ್ತಾರೆ. ಅವರು ಹೇಳುವ ಕಥೆಯಿದು—

ಗ್ರಾಮದ ದನಕಾಯುವ ಮಕ್ಕಳು ದೇವಿಯ ಪ್ರಿಯ ಸಂಗಡಿಗರು. ಅವರು ಪ್ರತಿನಿತ್ಯ ದನಗಳನ್ನು ಮೇಯಲು ಬಿಟ್ಟು ಆ ದೇವಸ್ಥಾನಕ್ಕೆ ಬಂದು ದೇವಿಯನ್ನು ಅಲಂಕರಿಸುವುದು, ಹಾಡುವುದು, ಆಟ ಹರಟೆ ಇತ್ಯಾದಿಗಳಲ್ಲಿ ಮಗ್ನರಾಗಿರುತ್ತಿದ್ದರು. ಯಾತ್ರಿಕರು ನೈವೇದ್ಯದ ಸಿಹಿ ತಿಂಡಿಗಳನ್ನು ಅವರಿಗೆ ಕೊಡುತ್ತಿದ್ದರು. ಈ ಮಕ್ಕಳ ಉಪಟಳ ದೇವಿಗೆ ಆನಂದದಾಯಕವಾಗಿತ್ತು. ಒಮ್ಮೆ ಒಂದು ಗ್ರಾಮದ ಶ್ರೀಮಂತನು

ತನ್ನ ಅಭೀಷ್ಟವು ಪೂರ್ಣವಾದುದಕ್ಕಾಗಿ ಆ ದೇವಿಗೆ ಒಂದು ದೇವಸ್ಥಾನವನ್ನು ಕಟ್ಟಿಸಿದ್ದನು. ಅಂದಿನಿಂದ ಒಬ್ಬ ಪೂಜಾರಿ ಒಂದು ನಿಗದಿತ ಸಮಯಕ್ಕೆ ಬಂದು ಪೂಜೆ ಮಾಡಿ ದೇವಸ್ಥಾನಕ್ಕೆ ಬೀಗಹಾಕಿ ಹೋಗುತ್ತಿದ್ದ. ಬೇರೆ ಸಮಯದಲ್ಲಿ ಬಂದ ಭಕ್ತರು ರಸ್ತೆಯ ಮಧ್ಯದಲ್ಲಿಯೇ ಪ್ರಣಾಮಮಾಡಿ ಹೋಗುತ್ತಿದ್ದರು ಮತ್ತು ಕಾಣಿಕೆಯನ್ನು ಬಾಗಿಲಿನ ಮೂಲಕ ದೇವಾಲಯದ ಒಳಗೆ ಹಾಕಿ ಹೋಗುತ್ತಿದ್ದರು. ಇದರಿಂದಾಗಿ ದನಕಾಯುವ ಹುಡುಗರಿಗೆ ತೊಂದರೆಯಾಯಿತು. ಈಗ ಹಣ ಸಿಹಿ ತಿಂಡಿ ಏನೂ ಸಿಕ್ಕುತ್ತಿಲ್ಲ. ಮೊದಲಿನಂತೆ ದೇವಿಯನ್ನು ಪೂಜಿಸುವಂತಿಲ್ಲ, ಮೊದಲಿನ ಆನಂದ ಸಂಭ್ರಮ ಎಲ್ಲ ಈಗ ನಡೆಯದಾಯಿತು. ಆ ಮಕ್ಕಳು ಖಿನ್ನರಾಗಿ ತಮ್ಮ ಕಷ್ಟವನ್ನು ದೇವಿಗೆ ಹೇಳಿಕೊಂಡರು—ನಿನ್ನ ಹೆಸರಿನಿಂದ ನಮಗೆ ಎಷ್ಟೊ ಲಡ್ಡು ಸಿಗುತ್ತಿತ್ತು. ಈಗ ಯಾರು ಕೊಡುತ್ತಾರೆ ? ಸರಳ ಮಕ್ಕಳ ನಿವೇದನೆಯನ್ನು ದೇವಿ ಆಲಿಸಿದಳು. ರಾತ್ರಿಯೇ ದೇವಾಲಯ ಬಿರುಕುಬಿಟ್ಟಿತು. ಅರ್ಚಕನು ಅದು ಬಿದ್ದುಹೋಗುವುದೆಂಬ ಭಯದಿಂದ ಮರುದಿನವೆ ದೇವಿಯನ್ನು ಮತ್ತೆ ಹೊರಗೆ ತಂದು ಪ್ರತಿಷ್ಠಾಪಿಸಿದ. ಮುಂದೆ ಯಾರು ಮಂದಿರ ಕಟ್ಟಲು ಪ್ರಯತ್ನಿಸಿದರೂ ದೇವಿಯು ಸ್ವಪ್ನದಲ್ಲಿಯೊ ಅಥವಾ ಬೇರೆ ವಿಧದಲ್ಲಿ ಅದು ತನಗಿಷ್ಟವಿಲ್ಲವೆಂಬುದನ್ನು ಸೂಚಿಸುತ್ತಿದ್ದಳು. ಕೆಲವರಿಗಂತೂ ಸ್ವಪ್ನದಲ್ಲಿ ಹೀಗೆ ಭಯಪಡಿಸಿರುವಳು : ''ನಾನು ಈ ಗೋಪಾಲ ಬಾಲಕರ ಜತೆ ಹೊಲದ ಮಧ್ಯದಲ್ಲಿ ಚೆನ್ನಾಗಿದ್ದೇನೆ. ನನ್ನನ್ನು ಮಂದಿರದೊಳಗಿಟ್ಟು ಬಂಧಿಸಿದರೆ ನಿಮ್ಮ ಸರ್ವನಾಶನಾಗುವುದು.''

ಶ್ರೀರಾಮಕೃಷ್ಣರಿಗೆ ಆಗ ಎಂಟು ವರ್ಷ ವಯಸ್ಸು. ಇನ್ನೂ ಉಪನಯನವಾಗಿರಲಿಲ್ಲ. ಗ್ರಾಮದ ಸದ್ಗೃಹಸ್ಥ ಮಹಿಳೆಯರು ಕೆಲವರು ಒಂದುದಿನ ಶ್ರೀ ವಿಶಾಲಾಕ್ಷಿ ದೇವಿಗೆ ತಮ್ಮ ಹರಕೆಯನ್ನು ಪೂರೈಸಲು ಒಂದು ಗುಂಪಾಗಿ ನಡೆದುಕೊಂಡು ಆನೂರಿಗೆ ಹೊರಟರು. ಶ್ರೀರಾಮಕೃಷ್ಣರ ಮನೆಯಿಂದಲೂ ಒಂದಿಬ್ಬರು ಮಹಿಳೆಯರು ಮತ್ತು ಧರ್ಮದಾಸ ಲಾಹಾನ ಮನೆಯಿಂದ ಪ್ರಸನ್ನಮಯೀ—ಇವರೂ ಇದ್ದರು ಆ ಗುಂಪಿನಲ್ಲಿ. ಪ್ರಸನ್ನಳ ಸರಳತೆ ಧಾರ್ಮಿಕ ಒಲವು-ಇವುಗಳಿಂದಾಗಿ ಶ್ರೀರಾಮಕೃಷ್ಣರಿಗೆ ಆಕೆಯ ಮೇಲೆ ತುಂಬ ಗೌರವವಿತ್ತು. ಪ್ರಸನ್ನಳಿಗೂ ಅವರು ಚಿಕ್ಕವರಿರುವಾಗಿನಿಂದಲೂ ಅವರ ಮೇಲೆ ಅಪಾರ ಪ್ರೀತಿ. ಅನೇಕ ವೇಳೆ ಅವಳು ಅವರನ್ನು ನಿಜವಾದ ಗದಾಧರ (ವಿಷ್ಣು) ಎಂದೇ ಭಾವಿಸುತ್ತಿದ್ದಳು. ಅವರ ದಿವ್ಯವಾಣಿ, ಭಕ್ತಿಪೂರ್ಣ ಮಧುರ ಸಂಗೀತ-ಇವನ್ನು ಕೇಳಿ ಮಂತ್ರಮುಗ್ಧಳಾಗಿ ಕೆಲವೊಮ್ಮೆ ಹೇಳುತ್ತಿದ್ದಳು: ''ಗದಾಯ್, ಕೆಲವೊಮ್ಮೆ ನೀನು ದೇವರೇ ಎಂದೆನಿಸುತ್ತೆ, ಯಾಕೆ ಹೇಳು ?'' ಶ್ರೀರಾಮಕೃಷ್ಣರು ಕೇಳಿ ಮುಗುಳು ನಗುತ್ತಿದ್ದರು. ಏನೂ ಹೇಳುತ್ತಿರಲಿಲ್ಲ. ಇಲ್ಲವೇ ವಿಷಯವನ್ನು ಬೇರೆ ಕಡೆ ಹರಿಸುತ್ತಿದ್ದರು. ಆದರೆ ಪ್ರಸನ್ನ ಬಿಡದೆ ಮತ್ತೆ ಹೇಳುತ್ತಿದ್ದಳು : ''ನೀನು ಏನೇ ಹೇಳು, ನೀನು ಮನುಷ್ಯನಂತೂ ಅಲ್ಲ.'' ಅವಳು ಒಂದು ಮಂದಿರವನ್ನು ನಿರ್ಮಿಸಿ ಶ್ರೀರಾಧಾಕೃಷ್ಣ ವಿಗ್ರಹವನ್ನು ಸ್ಥಾಪಿಸಿದ್ದಳು. ತಾನೇ ಅಲ್ಲಿ

ನಿತ್ಯ ಪೂಜೆಗೆ ಎಲ್ಲ ಅಣಿಮಾಡಿಕೊಡುತ್ತಿದ್ದಳು. ಹಬ್ಬದ ದಿನದಲ್ಲಿ ಅಲ್ಲಿ ಸಂಕೀರ್ತನೆ ನಡೆಯುತ್ತಿತ್ತು. ಪ್ರಸನ್ನಮಯಿ ಸ್ವಲ್ಪ ಮಾತ್ರ ಕೇಳುತ್ತಿದ್ದಳು ಅಷ್ಟೆ. ಕೇಳಿದರೆ ಹೇಳುತ್ತಿದ್ದಳು: "ಗದಾಯ್ ಹಾಡನ್ನು ಕೇಳಿದ ಮೇಲೆ ಬೇರೆ ಯಾರ ಹಾಡೂ ಹಿಡಿಸು ವುದಿಲ್ಲ. ಗದಾಯ್ ನನ್ನ ಕಿವಿಯನ್ನು ಕೆಡಿಸಿಬಿಟ್ಟಿದ್ದಾನೆ." ಇವೆಲ್ಲ ಮುಂದೆ ಹೇಳ ಬೇಕಾದ ವಿಷಯ.

ಹೆಂಗಸರೆಲ್ಲ ಹೋಗುತ್ತಿದ್ದಾರೆಂಬುದನ್ನು ಕೇಳಿ ಬಾಲಕ ಗದಾಧರ ತಾನೂ ಹೋಗುತ್ತೇನೆ ಎಂದು ಹೇಳಿದ. ಬಾಲಕನಿಗೆ ಅಷ್ಟು ದೂರ ನಡೆಯುವುದು ಕಷ್ಟವಾಗು ತ್ತದೆಂದು ಎಷ್ಟು ಹೇಳಿದರೂ ಕೇಳದೆ ಅವರೊಡನೆ ಹೊರಟ. ನಿಜವಾಗಿಯೂ ಆ ಮಹಿಳೆಯರಿಗೆ ಸಂತೋಷವೇ ಆಯಿತು. ಏಕೆಂದರೆ ದಾರಿಯಲ್ಲಿ ಅವನ ಹಾಡನ್ನು ಕೇಳ ಬಹುದು. ಹಿಂದಿರುಗಿ ಬರುವಾಗ ಅವನಿಗೆ ಹಸಿವಾದರೆ ದೇವಿಯ ಪ್ರಸಾದವಿರುತ್ತದೆ. ಹಾಗಿರುವಾಗ ಕರೆದುಕೊಂಡು ಹೋದರೆ ಏನೂ ತೊಂದರೆಯಿಲ್ಲ ಎಂದೆನಿಸಿತು ಅವರಿಗೆ.

ದಾರಿಯಲ್ಲಿ ಹೋಗುತ್ತಿರುವಾಗ ಅವರಾರೂ ಊಹಿಸದ ಘಟನೆಯೊಂದು ಸಂಭ ವಿಸಿತು. ಗದಾಧರನು ಹಾಡುತ್ತ ಹಾಡುತ್ತ ದಾರಿಯ ಮಧ್ಯದಲ್ಲಿ ನಿಂತುಬಿಟ್ಟ. ಇಡೀ ದೇಹ ನಿಷ್ಕಂಪ, ಕಣ್ಣಿನಿಂದ ಧಾರಾಕಾರ ಅಶ್ರು, ಏನಾಗುತ್ತಿದೆ ಎಂದು ಎಷ್ಟೇ ವಿಚಾರಿಸಿದರೂ ಮಾತೇ ಇಲ್ಲ. ಅವನಿಗೆ ನಡೆದು ಅಭ್ಯಾಸವಿಲ್ಲ, ಈ ಬಿಸಿಲಿನ ಬೇಗೆಯಿಂದ ಕೋಮಲ ಬಾಲಕನಿಗೆ ಏನೋ ಆಗಿರಬೇಕೆಂದು ಮಹಿಳೆಯರಿಗೆಲ್ಲ ದಿಗಿ ಲಾಯಿತು. ಹತ್ತಿರದ ಕೊಳದಿಂದ ನೀರನ್ನು ತಂದು ತಲೆಗೆ ಮತ್ತು ಮುಖಕ್ಕೆ ಸಿಂಪಡಿಸತೊಡಗಿದರು. ಆದರೆ ಏನೂ ಪ್ರಯೋಜನವಾಗಲಿಲ್ಲ. ಈಗೇನು ಮಾಡು ವುದು ? ದೇವಿಗೆ ಹರಕೆ ಸಲ್ಲಿಸುವುದೇ ಹೇಗೆ ? ಯಾರದೊ ಮಗುವನ್ನು ಕರೆದುಕೊಂಡು ಬಂದೆವಲ್ಲ–ಹೀಗೆ ಹಲವಾರು ಚಿಂತೆಗಳು ಅವರನ್ನು ಕಾಡಿಸತೊಡಗಿದುವು. ಸಹಾಯ ಪಡೆಯಲು ಹತ್ತಿರದಲ್ಲಿ ಯಾರೂ ಇರಲಿಲ್ಲ. ಮಹಿಳೆಯರೆಲ್ಲ ಬಾಲಕನ ಸುತ್ತ ನೆರೆದು ಅವನಿಗೆ ಗಾಳಿ ಹಾಕುವುದು, ನೀರು ಸಿಂಪಡಿಸುವುದು ಮಾಡುತ್ತ ಹತಾಶರಾಗಿ ನಿಂತಿ ದ್ದಾರೆ. ಆಗ ಇದ್ದಕ್ಕಿದ್ದಂತೆಯೇ ಪ್ರಸನ್ನಳಿಗೆ ಒಂದು ಆಲೋಚನೆ ಹೊಳೆಯಿತು— ಈ ಸರಳ ಪವಿತ್ರ ಬಾಲಕನ ಮೇಲೆ ದೇವಿಯ ಆವಿರ್ಭಾವ ಆಗಿರಬಾರದೇಕೆ ? ಇಂಥ ಪವಿತ್ರಾತ್ಮರಿಗೆ ಹೀಗಾಗುವುದು ಸ್ವಾಭಾವಿಕವಲ್ಲವೆ ? ಆಕೆ ಈ ವಿಷಯವನ್ನು ಇತರರಿಗೆ ಹೇಳಿದಳು. ಈಗ ಎಲ್ಲರೂ ಗದಾಧರನನ್ನು ಕರೆಯುವ ಬದಲು ಶ್ರೀ ವಿಶಾಲಾಕ್ಷಿಯ ಹೆಸರನ್ನು ಉಚ್ಚರಿಸತೊಡಗಿದರು. ಕೆಲವೇ ಕ್ಷಣಗಳಲ್ಲಿ ಬಾಲಕನ ಮುಖದಲ್ಲಿ ಮಧುರ ಮಂದಹಾಸ ಕಾಣಿಸಿತು. ಅವನ ದೇಹದಲ್ಲಿ ಚಲನೆ ಕಾಣಿಸಿತು. ಈಗ ಎಲ್ಲರಿಗೂ ವಿಶ್ವಾಸ ವುಂಟಾಗಿ ಮತ್ತಷ್ಟು ದೇವಿಯನ್ನು ಪ್ರಾರ್ಥಿಸತೊಡಗಿದರು. ಕ್ರಮೇಣ ಗದಾಧರನು ಪೂರ್ಣಪ್ರಕೃತಿಸ್ಥನಾದನು. ಆಶ್ಚರ್ಯವೇನೆಂದರೆ ಅವನಿಗೆ ಸ್ವಲ್ಪವೂ ಆಯಾಸವಾಗಿರ ಲಿಲ್ಲ. ಯಾವ ದುರ್ಬಲತೆಯೂ ಕಂಡುಬರಲಿಲ್ಲ. ಈಗ ಮಹಿಳೆಯರು ಗದಾಧರನನ್ನು ಕರೆದುಕೊಂಡು ತಮ್ಮ ಯಾತ್ರೆಯನ್ನು ಮುಂದುವರಿಸಿದರು. ಆನೂರಿನಲ್ಲಿ ಪೂಜಾದಿ

ಗಳನ್ನೆಲ್ಲ ಮುಗಿಸಿ ಹಿಂದಿರುಗಿ ಬಂದಮೇಲೆ ಬಾಲಕನ ತಾಯಿಗೆ ಆದ್ಯಂತವಾಗಿ ನಡೆದ ಘಟನೆಯನ್ನು ವಿವರಿಸಿದರು. ಚಂದ್ರಾದೇವಿಯು ಚಿಂತಿತಳಾಗಿ ಮಗನ ಒಳಿತಿಗಾಗಿ ತಮ್ಮ ಕುಲದೇವತೆಗೆ ಮತ್ತು ವಿಶಾಲಾಕ್ಷಿಗೂ ಕೂಡ ವಿಶೇಷ ಪೂಜೆ ಹರಕೆಗಳನ್ನು ಹೇಳಿಕೊಂಡಳು.

21. ಶ್ರೀರಾಮಕೃಷ್ಣರ ಜೀವನದ ಇನ್ನೊಂದು ಘಟನೆ ಅವರು ಮಧ್ಯೆ ಮಧ್ಯೆ ಭಾವಭೂಮಿಕೆಗೆ ಏರುತ್ತಿದ್ದರೆಂಬುದಕ್ಕೆ ಸಾಕ್ಷಿಯಾಗಿದೆ. ಕಾಮಾರಪುಕುರದ ಅವರ ಮನೆಯಿಂದ ಸ್ವಲ್ಪ ದೂರದಲ್ಲಿ ಚಿನ್ನದ ವ್ಯಾಪಾರಿಯ ಒಂದು ಕುಟುಂಬವಿತ್ತು. ಈ ಪಾಯಿನ್ ಮನೆತನದವರು ತುಂಬ ಶ್ರೀಮಂತರೆಂಬುದಕ್ಕೆ ಅವರು ಕಟ್ಟಿಸಿರುವ ಸುಂದರ ಶಿವಮಂದಿರವು ಸಾಕ್ಷಿಯಾಗಿದೆ. ಈ ವಂಶದವರಲ್ಲಿ ಒಬ್ಬಿಬ್ಬರು ಈಗಲೂ ಇರುವರು, ಅವರ ಮನೆಯೆಲ್ಲ ಭಗ್ನಾವಶೇಷವಾಗಿದೆ. ಪೈನ್ ವಂಶದವರು ಗ್ರಾಮದ ಜಮೀಂದಾರರಂತೆ ಧನಾಢ್ಯರಲ್ಲದಿದ್ದರೂ ಮಧ್ಯಮವರ್ಗದ ಶ್ರೀಮಂತರೆನ್ನಬಹುದಿತ್ತು. ಆ ಕುಟುಂಬದ ಯಜಮಾನ ತುಂಬ ಧರ್ಮನಿಷ್ಠ. ಒಂದು ಒಳ್ಳೆಯ ಮನೆಯನ್ನು ಕಟ್ಟಿಸಲು ಸಮರ್ಥನಾಗಿದ್ದರೂ ಒಂದು ಸಾಧಾರಣ ಮನೆಯಲ್ಲಿಯೇ ವಾಸವಾಗಿದ್ದ. ಆದರೆ ದೇವಸ್ಥಾನವನ್ನು ಮಾತ್ರ ಇಟ್ಟಿಗೆಯಿಂದ ಕಟ್ಟಿಸಿದ್ದ. ಅದು ಸುಂದರ ಶಿಲ್ಪಕಲೆಯಿಂದ ಕೂಡಿತ್ತು. ಅವನ ಹೆಸರು ಸೀತಾನಾಥ ಎಂದು. ಅವನಿಗೆ ಏಳುಜನ ಗಂಡು ಮತ್ತು ಎಂಟು ಜನ ಹೆಣ್ಣು ಮಕ್ಕಳು. ವಿವಾಹಿತ ಪುತ್ರಿಯರೂ ಕೂಡ ತಂದೆಯ ಮನೆಯಲ್ಲಿಯೇ ವಾಸಿಸುತ್ತಿದ್ದರು. ಅವರೆಲ್ಲ ರೂಪವತಿಯರು ಮತ್ತು ತುಂಬ ದೈವ ಭಕ್ತರು. ಬಾಲಕ ಗದಾಧರನ ಮೇಲೆ ವಿಶೇಷ ಪ್ರೀತಿ. ಅವನು ಅವರ ಮನೆಯಲ್ಲಿ ಹೆಚ್ಚು ಸಮಯ ಕಳೆಯುತ್ತಿದ್ದ. ಅಲ್ಲಿ ಅವನು ಉಚ್ಚ ಭಾವಾವಸ್ಥೆಗೇರಿದ ಎಷ್ಟೋ ಘಟನೆಗಳು ನಡೆದಿವೆ. ಮುಂದಿನ ಘಟನೆ ಶ್ರೀರಾಮಕೃಷ್ಣರೇ ಹೇಳಿದುದು.

ಕಾಮಾರಪುಕುರದಲ್ಲಿ ಶಿವಭಕ್ತರು ಮತ್ತು ವಿಷ್ಣುಭಕ್ತರು ಪರಸ್ಪರ ದ್ವೇಷವಿಲ್ಲದೆ ಸಹಿಷ್ಣುತೆಯಿಂದ ವಾಸಿಸುತ್ತಿದ್ದರು, ಆದರೆ ಶಿವಮಂದಿರ ಮತ್ತು ಶಿವಸ್ಥಾನಗಳು ವಿಷ್ಣು ಮಂದಿರಗಳಿಗಿಂತ ಅಧಿಕ. ಚಿನ್ನದ ವ್ಯಾಪಾರಿಗಳಲ್ಲಿ ಅನೇಕರು ಕಟ್ಟಾವೈಷ್ಣವರು. ನಿತ್ಯಾನಂದ ಪ್ರಭು ಉದ್ಧಾರಣ ದತ್ತನಿಗೆ ದೀಕ್ಷೆಯನ್ನಿತ್ತು ಉದ್ಧಾರಮಾಡಿದಂದಿನಿಂದ ಅವರಲ್ಲಿ ವೈಷ್ಣವ ಮತ ಹೆಚ್ಚು ಪ್ರಚಲಿತವಾಯಿತು. ಆದರೆ ಕಾಮಾರಪುಕುರದ ಪೈನ್ ಕುಟುಂಬದವರು ಶಿವ ಮತ್ತು ವಿಷ್ಣು-ಇಬ್ಬರನ್ನೂ ಪೂಜಿಸುತ್ತಿದ್ದರು, ವೃದ್ಧ ಯಜಮಾನನು ಒಂದು ಕಡೆ ಮೂರು ಹೊತ್ತೂ ಹರಿನಾಮ ಸಂಕೀರ್ತನೆ ಮಾಡುತ್ತಿದ್ದ, ಇನ್ನೊಂದು ಕಡೆ ಶಿವನ ದೇವಸ್ಥಾನವನ್ನು ಕಟ್ಟಿಸಿದ್ದ. ಪ್ರತಿವರ್ಷ ಶಿವರಾತ್ರಿ ವ್ರತ ಆಚರಿಸುತ್ತಿದ್ದ. ರಾತ್ರಿ ಜಾಗರಣೆಗೆ ಅನುಕೂಲವಾಗಲೆಂದು ಜಾತ್ರೆ ನಡೆಯುತ್ತಿತ್ತು.

ಒಮ್ಮೆ ಶಿವರಾತ್ರಿಯ ದಿನ ರಾತ್ರಿ ಜಾತ್ರೆಗೆ ವ್ಯವಸ್ಥೆ ಮಾಡಲಾಗಿತ್ತು. ಶಿವನ ಮಹಿಮೆಗೆ ಸಂಬಂಧಪಟ್ಟ ಕಥೆ ಜಾತ್ರೆಯ (ನಾಟಕದ) ಕಥಾವಸ್ತುವಾಗಿತ್ತು. ಮಧ್ಯೆ

ರಾತ್ರಿಯಲ್ಲಿ ಜಾತ್ರೆ ಪ್ರಾರಂಭವಾಗಬೇಕು. ಸಂಜೆಯ ಹೊತ್ತಿಗೆ ಸುದ್ದಿ ಬಂತು ಶಿವನ ಪಾತ್ರ ವಹಿಸಬೇಕಾಗಿದ್ದ ಬಾಲಕನಿಗೆ ಖಾಯಿಲೆಯಾಗಿದೆ ಎಂದು. ಎಷ್ಟೇ ಹುಡುಕಿದರೂ ಯೋಗ್ಯ ಬೇರೆ ಪಾತ್ರಧಾರಿ ಸಿಗಲಿಲ್ಲ. ಇವತ್ತಿನ ಮಟ್ಟಿಗೆ ಜಾತ್ರೆ ನಿಲ್ಲಿಸಬೇಕೆಂದು ಮಾಲಿಕ ಹೇಳಿಕಳಿಸಿದ. ಈಗೇನು ಮಾಡುವುದು ? ರಾತ್ರಿ ಜಾಗರಣೆ ಮಾಡುವುದು ಹೇಗೆ ? ಎಲ್ಲರೂ ಸಮಾಲೋಚನೆ ಮಾಡಿ. ಶಿವನ ಪಾತ್ರ ವಹಿಸುವವನನ್ನು ಕೊಟ್ಟರೆ ಜಾತ್ರೆ ಬಯಲಾಟ ಮಾಡಲಾಗುವುದೆ ಎಂದು ಮಾಲಿಕನಿಗೆ ಹೇಳಿ ಕಳಿಸಿದಾಗ ಅವನದಕ್ಕೆ ಒಪ್ಪಿದ. ಈಗ ಎಲ್ಲರೂ ಸೇರಿ ಒಂದು ತೀರ್ಮಾನಕ್ಕೆ ಬಂದರು. ಗದಾಧರನೇ ಶಿವನ ಪಾತ್ರಕ್ಕೆ ಯೋಗ್ಯ, ಅವನಿಗೆ ಶಿವನ ಹಾಡುಗಳು ಬಹಳ ಬರುತ್ತವೆ, ಮತ್ತೆ ಆ ಪಾತ್ರವು ಅವನಿಗೆ ಚೆನ್ನಾಗಿ ಒಪ್ಪುತ್ತದೆ. ತೀಕ್ಷ್ಣ ಬುದ್ಧಿಯುಳ್ಳವನಾದುದರಿಂದ ಸಂಭಾಷಣೆಯನ್ನು ಕಲಿಯುವುದೂ ಅವನಿಗೆ ಕಷ್ಟವಾಗುವುದಿಲ್ಲ. ಗದಾಧರನಿಗೆ ಈ ವಿಷಯ ತಿಳಿಸಿದಾಗ ಅವನೂ ಸಮ್ಮತಿಸಿದ.

ಗದಾಧರನ ಪ್ರಿಯ ಸ್ನೇಹಿತ ಗಯಾವಿಷ್ಣು ಮತ್ತಿತರರು ಅವನಿಗೆ ಚೆನ್ನಾಗಿ ಶಿವನ ಮೇಕಪ್ ಮಾಡಿದರು. ಗದಾಧರನು ಶಿವನ ಸಂಭಾಷಣೆಯನ್ನು ಮೆಲುಕುಹಾಕು ತ್ತಿರುವಾಗಲೆ ಅವನಲ್ಲಿ ಭಕ್ತಿಭಾವ ಜಾಗ್ರತವಾಗತೊಡಗಿತು. ಭಾವದಲ್ಲಿ ತಲ್ಲೀನನಾಗಿ ನಿಶ್ಚಲವಾಗಿ ಕುಳಿತಿದ್ದ. ಇತರರು ಅವನನ್ನು ನಿಧಾನವಾಗಿ ಮೇಲೆತ್ತಿ ನಡೆಸಿಕೊಂಡು ವೇದಿಕೆಗೆ ಕರೆದುಕೊಂಡು ಹೋದರು. ಯಾವ ಕಡೆಗೂ ಅವನ ಲಕ್ಷ್ಯವಿಲ್ಲ. ಮಂದ ಗತಿಯಲ್ಲಿ ಹೋಗುತ್ತಿದ್ದಾನೆ. ವೇದಿಕೆಯ ಮೇಲೆ ಹೋಗಿ ನಿಂತನು. ಈಗ ಬಾಹ್ಯ ಪ್ರಜ್ಞೆಯಿಲ್ಲ. ಅರ್ಧನಿಮೀಲಿತನೇತ್ರ, ಜಟಾಜೂಟ ಭಸ್ಮವಿಭೂಷಿತ, ತುಟಿಯಲ್ಲಿ ಕಿರುಹಾಸ್ಯ, ಮುಖಮಂಡಲದಲ್ಲಿ ದಿವ್ಯ ಶೋಭೆ–ಇವನ್ನೆಲ್ಲ ನೋಡಿ ಸಭಿಕರೆಲ್ಲ ಸಾಕ್ಷಾತ್ ಶಿವನನ್ನೇ ಮುಂದೆ ಕಾಣುತ್ತಿರುವಂತೆ ಮಂತ್ರ ಮುಗ್ಧರಾದರು–ಪರಮಾನಂದದಿಂದ ಹಾಹಾಕಾರ ಮಾಡತೊಡಗಿದರು. ಮಾಲಿಕನು ಜನಸ್ತೋಮವನ್ನು ಹಿಡಿತಕ್ಕೆ ತರಲು ಶಿವಸ್ತುತಿ ಪ್ರಾರಂಭಿಸಿದ. ಸ್ವಲ್ಪ ಸದ್ದು ಕಡಿಮೆಯಾದರೂ ಜನರು ತಮ್ಮ ತಮ್ಮಲ್ಲಿಯೇ ಮಾತನಾಡಿಕೊಳ್ಳತೊಡಗಿದರು, ''ಶಭಾಷ್, ಗದಾಯ್ ಹೇಗೆ ಅಭಿನಯಿಸುತ್ತಾನೆ ! ಈ ಹುಡುಗ ಇಷ್ಟೊಂದು ಗಟ್ಟಿಗ ಅಂತ ನಮಗೆ ಗೊತ್ತೇ ಇರಲಿಲ್ಲ, ಇವನನ್ನೇ ಮುಖ್ಯ ಪಾತ್ರಧಾರಿಯನ್ನಾಗಿಟ್ಟುಕೊಂಡು ಒಂದು ಜಾತ್ರಾಮಂಡಳಿಯನ್ನೇ ಪ್ರಾರಂಭಿಸ ಬಹುದು''—ಇತ್ಯಾದಿ. ಗದಾಧರ ಮಾತ್ರ ನಿಂತಂತೆಯೇ ನಿಂತಿದ್ದಾನೆ. ಕಣ್ಣುಗಳಿಂದ ಧಾರಾಕಾರವಾಗಿ ನೀರು ಹರಿಯುತ್ತಿದೆ. ಬಹಳ ಹೊತ್ತಾದರೂ ಅವನ ಬಾಯಿಂದ ಮಾತೇ ಹೊರಬರದಿರಲು ಮಾಲಿಕ ಮತ್ತು ಒಂದಿಬ್ಬರು ವೃದ್ಧರು ಅವನ ಸಮೀಪಕ್ಕೆ ಹೋಗಿ ಅವನ ಕೈಕಾಲುಗಳನ್ನು ಮುಟ್ಟಿ ನೋಡುತ್ತಾರೆ–ಎಲ್ಲ ನಿಶ್ಚೇಷ್ಟಿತ, ಬಾಲಕನಿಗೆ ಸ್ವಲ್ಪವೂ ಪ್ರಜ್ಞೆಯಿಲ್ಲ. ಈಗ ಗಲಾಟೆ ಜೋರಾಯಿತು. ಕೆಲವರು ನೀರು ಚುಮುಕಿಸಿ ಎಂದು ಕೂಗಿದರು, ಇನ್ನು ಕೆಲವರು ಗಾಳಿ ಹಾಕಿ ಎಂದರು, ಮತ್ತೆ ಕೆಲವರು ಶಿವ ಮೈಮೇಲೆ ಬಂದಿದ್ದಾನೆ, ಅವನ ಹೆಸರನ್ನು ಎಚ್ಚರಿಸಿ ಎಂದು ಸೂಚಿಸಿದರು. ಹೀಗೆ

ನಾನಾ ಪ್ರಕಾರವಾಗಿ ಜನ ಬೊಬ್ಬೆ ಹಾಕತೊಡಗಿದರು. ಈ ಹುಡುಗ ಎಲ್ಲವನ್ನೂ ಹಾಳುಮಾಡಿಬಿಟ್ಟ, ಇನ್ನು ಜಾತ್ರೆಯ ಆಸೆಯಿಲ್ಲ-ಎಂದೂ ಹೇಳಿದವರು ಕೆಲವರು. ಎಷ್ಟೇ ಪ್ರಯತ್ನಿಸಿದರೂ ಬಾಲಕನಿಗೆ ಎಚ್ಚರ ಬರದಿರಲು ಜಾತ್ರೆಯನ್ನು ನಿಲ್ಲಿಸಿ ಬಾಲಕನನ್ನು ಹೆಗಲ ಮೇಲೆ ಕರೆದುಕೊಂಡು ಹೋಗಿ ಮನೆಗೆ ಬಿಟ್ಟರು. ಅಂದು ರಾತ್ರಿ ಏನೇ ಮಾಡಿದರು ಅವನಿಗೆ ಪ್ರಜ್ಞೆ ಬರಲಿಲ್ಲವಂತೆ, ಮನೆಯವರೆಲ್ಲ ರೋದಿಸತೊಡಗಿದರಂತೆ ಬೆಳಕುಹರಿದ ಮೇಲೆಯೇ ಅವನು ಪ್ರಕೃತಿಸ್ಥನಾದುದು.

ಅಧ್ಯಾಯ ಮೂರು

ಸಾಧಕಭಾವದ ಉದಯ

1. ಶ್ರೀರಾಮಕೃಷ್ಣರ ಬಾಲ್ಯಜೀವನದಲ್ಲಿ ಭಾವತನ್ಮಯತೆಯ ಬೇರೆ ಘಟನೆಗಳು 2. ಆ ಘಟನೆಗಳ ವರ್ಗೀಕರಣ 3, ಅವರ ಅದ್ಭುತ ಸ್ಮೃತಿಶಕ್ತಿ ಮತ್ತು ಅವರ ದೃಢಪ್ರತಿಜ್ಞೆ 4. ಅವರ ಅಧಮ್ಯ ಧೈರ್ಯ 5. ಅವರ ಹಾಸ್ಯಪ್ರವೃತ್ತಿ 6. ಅವರ ಸ್ವಾಭಾವಿಕ ಮನಃಪ್ರವೃತ್ತಿ 7. ಸಾಧಕಭಾವದ ಪ್ರಥಮಾಭಿವ್ಯಕ್ತಿ– ಹೊಟ್ಟೆಹೊರೆಯುವ ವಿದ್ಯೆ ಬೇಡ 8. ಕಲಕತ್ತೆಯಲ್ಲಿ ಪೂಜೆಯ ಕೆಲಸ 9. ರಾಮಕುಮಾರನಿಗೆ ಸಹೋದರನ ಮನಃಪ್ರವೃತ್ತಿ ತಿಳಿದಿರಲಿಲ್ಲ 10. ರಾಮ ಕುಮಾರನ ಸಾಂಸಾರಿಕ ಪರಿಸ್ಥಿತಿ.

1. ಹಿಂದೆ ಹೇಳಿದ ಘಟನೆಗಳಲ್ಲದೆ ಶ್ರೀರಾಮಕೃಷ್ಣರ ಭಾವತನ್ಮಯತೆಗೆ ಸಂಬಂಧಪಟ್ಟ ಇನ್ನೂ ಅನೇಕ ವಿಷಯಗಳಿವೆ. ಸಣ್ಣಪುಟ್ಟ ಎಷ್ಟೋ ವಿಷಯಗಳಲ್ಲಿ ಅವರ ಈ ಮನೋಭಾವ ವ್ಯಕ್ತವಾಗುತ್ತಿತ್ತು. ಗ್ರಾಮದ ಕುಂಬಾರನು ಶಿವ ದುರ್ಗೆ ಮುಂತಾದ ವಿಗ್ರಹಗಳನ್ನು ಮಾಡುತ್ತಿದ್ದರೆ ಗದಾಧರ ತನ್ನ ಸ್ನೇಹಿತರೊಡನೆ ಓಡಾಡುತ್ತ ಅಲ್ಲಿಗೆ ಹೋಗಿ ಆ ಮೂರ್ತಿಗಳನ್ನು ಸರಿಯಾಗಿ ಪರಿಶೀಲಿಸಿ ಹೇಳುತ್ತಿದ್ದ, "ಇದೇನಿದು? ದೇವತೆಯ ಕಣ್ಣು ಹೀಗಿರುತ್ತದೆಯೆ? ಹೀಗೆ ಅದನ್ನು ಬಿಡಿಸಬೇಕು"– ಎಂದು ಕಣ್ಣಿನಲ್ಲಿ ಹೇಗೆ ದಿವ್ಯಭಾವವನ್ನು ವ್ಯಕ್ತಪಡಿಸಬೇಕು ಎಂಬುದನ್ನು ತೋರಿಸಿಕೊಡುತ್ತಿದ್ದನು. ಈ ಬಾಲಕನಿಗೆ ಯಾವ ಶಿಕ್ಷಣವೂ ಇಲ್ಲದೆ ಈ ವಿಷಯಗಳೆಲ್ಲ ಹೇಗೆ ತಿಳಿಯಿತು ಎಂದು ಎಲ್ಲರೂ ಆಶ್ಚರ್ಯಚಕಿತರಾಗುತ್ತಿದ್ದರು. ಇನ್ನೊಮ್ಮೆ ಮಕ್ಕಳೊಡನೆ ಆಟವಾಡುತ್ತಿರು ವಾಗ ಪೂಜೆಯ ಸಲುವಾಗಿ ಒಂದು ದೇವಮೂರ್ತಿಯನ್ನು ನಿರ್ಮಿಸಿದ. ಅದು ಎಷ್ಟು ಸುಂದರವಾಗಿತ್ತೆಂದರೆ ಯಾರೂ ಪ್ರಸಿದ್ಧ ಶಿಲ್ಪಿ ಇದನ್ನು ನಿರ್ಮಿಸಿರಬೇಕೆಂದು ಎಲ್ಲರೂ ಭಾವಿಸುವಂತಿತ್ತು. ಕೆಲವೊಮ್ಮೆ ಯಾರಿಗಾದರೂ ಏನಾದರು ಒಂದು ವಿಷಯವನ್ನು ಅವನು ಹೇಳಿದರೆ ಅವರಿಗೆ ಬಹುಕಾಲದಿಂದಿದ್ದ ಮನಸ್ಸಿನ ಸಂದೇಹಗಳು ದೂರವಾಗಿ ಜೀವನದಲ್ಲಿ ಹೊಸ ಬೆಳಕನ್ನು ಪಡೆಯುತ್ತಿದ್ದರು. ತಮ್ಮ ಆರಾಧ್ಯ ದೇವತೆಯೆ ಬಾಲಕನ ಬಾಯಿಂದ ಈ ಮಾತನ್ನು ಹೇಳಿಸಿರಬೇಕೆಂದು ಅವರು ಭಾವಿಸುತ್ತಿದ್ದರು. ಇನ್ನೊಮ್ಮೆ ಶಾಸ್ತ್ರಪಂಡಿತರು ಬಿಡಿಸಲಾಗದ ಜಟಿಲಪ್ರಶ್ನೆಗೆ ಬಾಲಕ ಗದಾಧರನು ಒಂದೇ ಮಾತಿನಲ್ಲಿ ಉತ್ತರಿಸಿದನು.

2. ಇವುಗಳಲ್ಲಿ ಎಲ್ಲ ಘಟನೆಗಳೂ ದಿವ್ಯಭಾವದ ಪ್ರಕಾಶ ಎಂದು ಹೇಳಲಾಗು ವುದಿಲ್ಲ. ಇವುಗಳನ್ನು ಆರು ವರ್ಗಗಳಾಗಿ ವಿಂಗಡಿಸಬಹುದು : ಕೆಲವು ಅವರ ಸ್ಮೃತಿ

ಶಕ್ತಿಯ ಫಲ, ಕೆಲವು ಅವರ ಅದ್ಭುತ ಬುದ್ಧಿಶಕ್ತಿಯ ಪರಿಣಾಮ, ಕೆಲವು ನಿಷ್ಠೆ ಮತ್ತು ದೃಢಪ್ರತಿಜ್ಞೆಯ ಫಲ, ಕೆಲವು ಅಪಾರ ಸಾಹಸದಿಂದಾದುವು, ಕೆಲವು ಅವರ ಕಲಾಪ್ರತಿಭೆಯ ಕೊಡುಗೆ ಮತ್ತು ಕೆಲವು ಅವರ ಅಸೀಮ ಪ್ರೇಮ ಅಥವಾ ಕರುಣೆಯ ಫಲ. ಆದರೆ ಮೇಲೆ ಹೇಳಿದ ಎಲ್ಲ ವರ್ಗದ ಘಟನೆಗಳಲ್ಲಿಯೂ ಅವರ ಅಸಾಧಾರಣ ವಿಶ್ವಾಸ, ಪವಿತ್ರತೆ ಮತ್ತು ನಿಃಸ್ವಾರ್ಥತೆ ಇವು ಓತಪ್ರೋತವಾಗಿವೆ. ವಿಶ್ವಾಸ, ಪವಿತ್ರತೆ ಮತ್ತು ನಿಃಸ್ವಾರ್ಥತೆ—ಇವುಗಳಿಂದಲೇ ಅವರ ಮನಸ್ಸು ನಿರ್ಮಿತವಾಗಿರುವಂತೆ ತೋರುತ್ತಿತ್ತು. ಸಂಸಾರದ ನಾನಾ ಪ್ರಕಾರದ ವಿಪತ್ತು ಆಪತ್ತುಗಳು ಅವರ ಮನಸ್ಸಿನಲ್ಲಿ ಸ್ಮೃತಿ, ಬುದ್ಧಿ, ಪ್ರತಿಜ್ಞೆ, ಸಾಹಸ, ಕಲಾರಸಿಕತೆ, ಪ್ರೇಮ, ಮತ್ತು ಕರುಣೆ—ಇವುಗಳ ಅಲೆಗಳನ್ನು ಎಬ್ಬಿಸುತ್ತಿದ್ದುವು. ಇವುಗಳ ಸಂಬಂಧವಾಗಿ ಕೆಲವು ಘಟನೆಗಳನ್ನು ಉದಾಹರಿಸಬಹುದು.

3. ಹಳ್ಳಿಯಲ್ಲಿ ರಾಮ ಅಥವಾ ಕೃಷ್ಣನಿಗೆ ಸಂಬಂಧಿಸಿದ ಜಾತ್ರೆ ನಡೆಯುತ್ತಿತ್ತು. ಎಲ್ಲರಂತೆ ಬಾಲಕ ಗದಾಧರನೂ ಅದನ್ನು ಕೇಳಿದ್ದ. ಎಲ್ಲರೂ ಮರುದಿನ ಕಥೆಯ ವಿಷಯವನ್ನು ಮರೆತು ತಮ್ಮ ತಮ್ಮ ಸ್ವಾರ್ಥ ವಿಷಯಗಳಲ್ಲಿ ಮಗ್ನರಾಗುತ್ತಿದ್ದರು. ಆದರೆ ಗದಾಧರನ ಮನಸ್ಸಿನಲ್ಲಿ ಅದು ಎಬ್ಬಿಸಿದ ಭಾವತರಂಗ ಇಳಿಯುತ್ತಿರಲಿಲ್ಲ. ಅವನು ಅದನ್ನು ಪುನರುಚ್ಚರಿಸುತ್ತಿದ್ದ. ತನ್ನ ಸ್ನೇಹಿತರನ್ನೆಲ್ಲ ಮಾವಿನ ತೋಪಿನಲ್ಲಿ ಕಲೆಹಾಕಿ ಅವರಿಗೆಲ್ಲ ಕಲಿಸಿಕೊಡುತ್ತಿದ್ದ. ನಾಟಕದಲ್ಲಿ ತಾನೇ ಪ್ರಧಾನ ಭೂಮಿಕೆಯನ್ನು ವಹಿಸಿಕೊಂಡು ಹಳ್ಳಿಯ ಬೇರೆ ಬೇರೆ ಭಾಗಗಳಲ್ಲಿ ಆ ನಾಟಕಗಳನ್ನು ಅಭಿನಯಿಸಿ ತೋರಿಸುತ್ತಿದ್ದ. ಒಂದೇಬಾರಿ ಕೇಳಿ ಇವನು ಹೇಗೆ ಕಲಿತುಕೊಂಡ ಎಂದು ಎಲ್ಲರಿಗೂ ಆಶ್ಚರ್ಯವಾಗುತ್ತಿತ್ತು. ಉಪನಯನದ ಸಮಯದಲ್ಲಿ ಸಂಪ್ರದಾಯಕ್ಕೆ ವಿರುದ್ಧವಾಗಿ ಧನೀಕಾಮಾರಿಣಿಯ ಕೈಯಿಂದ ಪ್ರಥಮ ಭಿಕ್ಷೆ ಪಡೆದಿದ್ದನು. ನಿಯಮಗಳನ್ನೆಲ್ಲ ಮೀರಿಹೋಗಿ ಆ ಕೀಳುಜಾತಿಯ ಧನೀ ಪ್ರೀತಿಯಿಂದ ಮಾಡಿದ ತಿಂಡಿಯನ್ನು ತಿಂದಿದ್ದನು.

4. ವಿಭೂತಿಯಿಟ್ಟ ಜಟಾಧಾರಿ ನಾಗಾ ಸಾಧುಗಳನ್ನು ಕಂಡರೆ ಹಳ್ಳಿ ಮತ್ತು ಗ್ರಾಮದ ಬಾಲಕರಿಗೆಲ್ಲ ತುಂಬ ಭಯ. ಇಂಥ ಸಾಧುಗಳು ಎಳೆವಯಸ್ಸಿನ ಬಾಲಕರನ್ನು ಮೋಸಪಡಿಸಿ ಕರೆದುಕೊಂಡುಹೋಗಿ ತಮ್ಮ ದಳಕ್ಕೆ ಸೇರಿಸಿಕೊಳ್ಳುತ್ತಿದ್ದರೆಂದು ವದಂತಿ ಹಬ್ಬಿತ್ತು. ಪುರಿಗೆ ಹೋಗುವ ದಾರಿಯಲ್ಲಿ ಕಾಮಾರಪುಕುರಕ್ಕೂ ಬಂದು ಇಂಥ ಸಾಧುಗಳು ಒಂದೆರಡುದಿನ ತಂಗುತ್ತಿದ್ದರು ಮತ್ತು ಭಿಕ್ಷೆಗಾಗಿ ಮನೆಮನೆಗೆ ಹೋಗುತ್ತಿದ್ದರು. ಬೇರೆ ಹುಡುಗರೆಲ್ಲ ಇವರನ್ನು ನೋಡಿ ಓಡಿಹೋದರೂ ಗದಾಧರನು ಮಾತ್ರ ಎದೆಗೆಡದೆ ಅವರೊಡನೆ ಬೆರೆಯುತ್ತಿದ್ದ, ಅವರ ಸೇವೆ ಮಾಡುತ್ತಿದ್ದ, ಅವರ ಆಚಾರ ವ್ಯವಹಾರಗಳನ್ನು ಕೇಳಿ ತಿಳಿದುಕೊಳ್ಳುತ್ತಿದ್ದ ಮತ್ತು ಅವರಿತ್ತ ಆಹಾರವನ್ನು ಸೇವಿಸುತ್ತಿದ್ದ. ಒಂದುದಿನ ಅವರಂತೆಯೇ ವೇಷಹಾಕಿಕೊಂಡು ಮನೆಗೆ ಬಂದಿದ್ದ.

5. ಗ್ರಾಮದ ಕೆಳಸ್ತರದ ಅನೇಕರಿಗೆ ರಾಮಾಯಣ ಮಹಾಭಾರತಗಳನ್ನು ಓದುವುದು ಬರುತ್ತಿರಲಿಲ್ಲ. ಅವನ್ನು ಕೇಳಬೇಕೆಂದು ಇಚ್ಛೆಯಾದರೆ ಅವರು ಯಾರಾದರೂ ಬ್ರಾಹ್ಮಣನನ್ನೊ ಅಥವಾ ಬೇರೆ ಉಚ್ಚ ಜಾತಿಯವನನ್ನೊ ಕರೆಸಿ ಓದಿಸುತ್ತಿದ್ದರು. ಅವನು ಬಂದಾಗ ಅವರು ಬಹಳ ಭಕ್ತಿ ಗೌರವದಿಂದ ಸ್ವಾಗತಿಸಿ ಕಾಲು ತೊಳೆಯುವುದಕ್ಕೆ ನೀರು ಕೊಟ್ಟು, ಅನಂತರ ತಾಂಬೂಲವನ್ನು ನೀಡಿ ಒಂದು ಆಸನದಲ್ಲಿ ಕುಳ್ಳಿರಿಸುತ್ತಿದ್ದರು. ಆ ರೀತಿ ಸನ್ಮಾನವನ್ನು ಪಡೆದ ಆ ವ್ಯಕ್ತಿಗೆ ತನ್ನ ಸಮಾನ ಯಾರೂ ಇಲ್ಲ ಈ ಪ್ರಪಂಚದಲ್ಲಿ ಎಂಬ ಹೆಮ್ಮೆ. ಬಹಳ ಧಿಮಾಕಿನಿಂದ ಆಸನದ ಮೇಲೆ ಕುಳಿತು ಏನೇನೋ ನಟನೆ ಮಾಡುತ್ತ ಪುರಾಣ ಕಥೆಯನ್ನು ಅವನು ಓದುವ ಭಂಗಿಯನ್ನು ಗದಾಧರ ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದ. ಅನಂತರ ಆ ವ್ಯಕ್ತಿಯ ಪಾಠದ ಕ್ರಮವನ್ನು ಅಭಿನಯಿಸಿ ತೋರಿಸಿ ಇತರರನ್ನು ಹಾಸ್ಯದ ಹೊನಲಿನಲ್ಲಿ ತೇಲಿಸುತ್ತಿದ್ದ.

6. ಶ್ರೀರಾಮಕೃಷ್ಣರ ಬಾಲ್ಯಜೀವನದ ಈ ಎಲ್ಲ ಘಟನೆಗಳನ್ನು ಗಮನಿಸಿದಾಗ ಅವರು ಯಾವ ಮನೋಧರ್ಮದಿಂದ ಸಾಧನಮಾರ್ಗವನ್ನು ಹಿಡಿದರು ಎಂಬುದು ತಿಳಿದುಬರುತ್ತದೆ. ಅಂತಹ ಮನಸ್ಸು ಯಾವುದನ್ನು ಹಿಡಿಯುವುದೊ ಅದನ್ನು ಮಾಡಿಯೇತೀರುತ್ತದೆ, ಯಾವುದನ್ನು ಕೇಳುವುದೊ ಅದನ್ನು ಎಂದೂ ಮರೆಯುವುದಿಲ್ಲ ಮತ್ತು ತನ್ನ ಅಭೀಷ್ಟ ಸಾಧನೆಗೆ ಯಾವುದು ಅಡ್ಡಿಯೆನಿಸುವುದೊ ಅದನ್ನು ಬಹುದೂರವಿರಿಸುತ್ತದೆ. ಇಂಥ ಮನಸ್ಸನ್ನು ಪಡೆದವರು ಭಗವಂತನಲ್ಲಿ, ತಮ್ಮಲ್ಲಿ ಮತ್ತು ಜನಸಾಧಾರಣರಲ್ಲಿ ಹುದುಗಿರುವ ದಿವ್ಯ ಪ್ರಕೃತಿಯಲ್ಲಿ ದೃಢವಿಶ್ವಾಸವುಳ್ಳವರಾಗಿಯೇ ಜೀವನದ ಎಲ್ಲ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ. ತುಚ್ಛ ಭಾವನೆಗಳಂತೂ ಅವರ ಪಾಲಿಗೆ ದೂರದ ಮಾತು. ಯಾವ ಸಂಕುಚಿತ ಭಾವನೆಗಳಿಗೂ ಅವರಲ್ಲಿ ಅವಕಾಶವಿರುವುದಿಲ್ಲ. ಅವರ ಪ್ರತಿಯೊಂದು ಕಾರ್ಯವನ್ನೂ ನಿಯಂತ್ರಿಸುವುದು ಪವಿತ್ರತೆ, ಪ್ರೇಮ ಮತ್ತು ಕರುಣೆ. ಯಾವ ಭಾವನೆಯೂ ತನ್ನ ನಿಜರೂಪವನ್ನು ಮರೆಸಿ ಬೇರೊಂದು ರೂಪದಲ್ಲಿ ಬಂದು ಅವರನ್ನು ಪೀಡಿಸಲಾಗುವುದೇ ಇಲ್ಲ. ಈ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡು ನಾವು ಮುಂದುವರಿದರೆ ಶ್ರೀರಾಮಕೃಷ್ಣರ ಸಾಧಕ ಜೀವನದ ಅಲೌಕಿಕತ್ವವನ್ನು ಅರ್ಥಮಾಡಿಕೊಳ್ಳಬಹುದು.

7. ಶ್ರೀರಾಮಕೃಷ್ಣರು ಕಲಕತ್ತೆಗೆ ಬಂದಮೇಲೆ ಅವರ ಅಣ್ಣ ರಾಮಕುಮಾರನು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸುವಂತೆ ಅವರನ್ನು ಒತ್ತಾಯಿಸಿದಾಗ ಅವರು ಕೊಟ್ಟ ಈ ಕೆಳಗಿನ ಉತ್ತರದೊಂದಿಗೆ ಅವರ ಸಾಧಕ ಭಾವದ ವಿಶೇಷ ಅಭಿವ್ಯಕ್ತಿ ಪ್ರಾರಂಭವಾಯಿತೆನ್ನಬಹುದು : "ನನಗೆ ಹಣ ಸಂಪಾದನೆಯ ವಿದ್ಯೆ ಬೇಡವೇ ಬೇಡ. ಯಾವುದರಿಂದ ಮನುಷ್ಯ ಜ್ಞಾನವನ್ನು ಪಡೆದು ಕೃತಾರ್ಥನಾಗುವನೊ ಅಂಥ ವಿದ್ಯೆ ನನಗೆ ಬೇಕು." ಅವರಿಗಾಗ ಹದಿನೇಳು ವರ್ಷವಿದ್ದಿರಬಹುದು. ಹಳ್ಳಿಯಲ್ಲಿ ಅವರ ವಿದ್ಯಾಭ್ಯಾಸ ಸರಿಯಾಗಿ ನಡೆಯುವುದಿಲ್ಲವೆಂದು ರಾಮಕುಮಾರನು ಅವರನ್ನು ಕಲಕತ್ತೆಗೆ ಕರೆದುಕೊಂಡು ಬಂದಿದ್ದನು.

8. ಝಾಮಾಪುಕುರದ ದಿವಂಗತ ದಿಗಂಬರ ಮಿತ್ರನ ಮನೆಯ ಸಮೀಪದಲ್ಲಿ ರಾಮಕುಮಾರನು ಒಂದು ಸಂಸ್ಕೃತ ಪಾಠಶಾಲೆಯನ್ನು ನಡೆಸುತ್ತಿದ್ದನು. ಅಷ್ಟೇ ಅಲ್ಲದೆ ಹತ್ತಿರದ ಕೆಲವು ಮನೆಗಳಲ್ಲಿ ದೇವರ ಪೂಜೆಯ ಕೆಲಸವನ್ನು ವಹಿಸಿಕೊಂಡಿದ್ದನು. ವಿದ್ಯಾರ್ಥಿಗಳಿಗೆ ಪಾಠ ಹೇಳುವುದರಲ್ಲಿಯೇ ಅವನ ಹೆಚ್ಚು ಸಮಯ ಹೋಗುತ್ತಿತ್ತು. ಬೇರೆ ಬೇರೆ ಮನೆಗಳಿಗೆ ದೇವರ ಪೂಜೆಗೆ ಹೋಗುವುದು ಅವನಿಗೆ ಬರಬರುತ್ತ ಕಷ್ಟವಾಗ ತೊಡಗಿತು. ಪಾಠಶಾಲೆಯಿಂದ ಬರುತ್ತಿದ್ದ ಆದಾಯ ಕಡಿಮೆಯಿದ್ದುದರಿಂದ ದೇವರ ಪೂಜೆಯ ಕೆಲಸವನ್ನು ಒಮ್ಮೆಯೇ ಬಿಡುವಂತಿರಲಿಲ್ಲ—ಅದರಿಂದ ಉತ್ತಮ ಆದಾಯವಿದ್ದುದರಿಂದ. ಹೀಗಾಗಿ ಪೂಜೆಯ ಕೆಲಸವನ್ನು ತಮ್ಮನಾದ ಗದಾಧರನಿಗೆ ವಹಿಸಿಕೊಟ್ಟನು.

ಗದಾಧರನಿಗೆ ತನ್ನ ಮನಸ್ಸಿಗೆ ಹಿಡಿಸುವಂತಹ ಕೆಲಸವೇ ಸಿಕ್ಕಿದಂತಾಯಿತು. ಇದರೊಟ್ಟಿಗೆ ಅಣ್ಣನ ಸೇವೆಯನ್ನು ಮಾಡುತ್ತಿದ್ದನು ಮತ್ತು ಅವನಿಂದ ಅಲ್ಪಸ್ವಲ್ಪ ಪಾಠವನ್ನು ಕಲಿಯುತ್ತಿದ್ದನು. ಸದ್ಗುಣಸಂಪನ್ನ ಸುಂದರ ಬಾಲಕನು ಬಹು ಬೇಗನೆ ಸುತ್ತಮುತ್ತಲಿನವರಿಗೆಲ್ಲ ಪ್ರಿಯನಾದ. ಕಾಮಾರಪುಕುರದಲ್ಲಿದ್ದಂತೆಯೇ ಇವನು ಪೂಜೆಗೆ ಹೋಗುತ್ತಿದ್ದ ಮನೆಯ ಮಹಿಳೆಯರು ಅವನ ಮಧುರ ಸಂಭಾಷಣೆ, ದೈವಭಕ್ತಿ ಇವುಗಳಿಗೆ ಮೆಚ್ಚಿ ಅವನೊಡನೆ ನಿಃಸಂಕೋಚವಾಗಿ ವ್ಯವಹರಿಸುತ್ತಿದ್ದರು. ಅವನ ಮಾತನ್ನು ಮತ್ತು ಹಾಡನ್ನು ಕೇಳಲು ಅವನನ್ನು ಹುಡುಕಿಕೊಂಡುಬರುತ್ತಿದ್ದರು. ಹೀಗೆ ಕಾಮಾರಪುಕುರದಲ್ಲಿಯಂತೆ ಇಲ್ಲಿಯೂ ಗದಾಧರನು ತನ್ನದೇ ಆದ ಒಂದು ಬಳಗವನ್ನು ಸೃಷ್ಟಿಸಿಕೊಂಡನು. ತನಗೆ ಸಮಯ ಸಿಕ್ಕಿದಾಗಲೆಲ್ಲ ಸ್ತ್ರೀ ಪುರುಷರೊಡನೆ ಬೆರೆಯುತ್ತ ಆನಂದದಿಂದ ಕಾಲಕಳೆಯುತ್ತಿದ್ದ. ಇಲ್ಲಿಗೆ ಬಂದೂ ಕೂಡ ಅವನ ವಿದ್ಯಾಭ್ಯಾಸ ಮುಂದುವರಿಯಲಿಲ್ಲ ಎಂಬುದು ಸ್ಪಷ್ಟ.

ರಾಮಕುಮಾರನೂ ಈ ವಿಷಯದಲ್ಲಿ ತಮ್ಮನನ್ನು ಒತ್ತಾಯಿಸಲು ಇಷ್ಟಪಡಲಿಲ್ಲ. ಏಕೆಂದರೆ ತಾಯಿಯ ಪ್ರೀತಿಯಿಂದ ವಂಚಿಸಿ ಒಂದು ರೀತಿಯಲ್ಲಿ ತನ್ನ ಅನುಕೂಲಕ್ಕಾಗಿಯೇ ಅವನನ್ನು ಇಲ್ಲಿಗೆ ಕರೆದುಕೊಂಡುಬಂದಿದ್ದು. ಅಷ್ಟೇ ಅಲ್ಲದೆ ಇತರರೆಲ್ಲರ ಪ್ರೀತಿಗೆ ಪಾತ್ರನಾಗಿ ಬಾಲಕನು ಅವರೆಲ್ಲರೊಡನೆ ಆನಂದದಿಂದ ಸಮಯ ಕಳೆಯುತ್ತಿದ್ದ. ಬಾಲಕನ ಆನಂದಕ್ಕೆ ವಿಘ್ನವನ್ನುಂಟುಮಾಡುವುದು ಅವನಿಗೆ ಇಷ್ಟವಿರಲಿಲ್ಲ. ಆ ರೀತಿ ಮಾಡಿದರೆ ಬಾಲಕನಿಗೆ ಕಲಕತ್ತೆಯ ವಾಸ ವನವಾಸದಂತಾಗುತ್ತದೆ. ಸಂಸಾರದಲ್ಲಿ ದಾರಿದ್ರ್ಯವಿಲ್ಲದಿದ್ದರೆ ಬಾಲಕನನ್ನು ತಾಯಿಯಿಂದ ದೂರ ಕರೆದುಕೊಂಡುಬರುವ ಅವಶ್ಯಕತೆಯಿರಲಿಲ್ಲ. ಕಾಮಾರಪುಕುರದ ಹತ್ತಿರವೇ ಯಾರಾದರೂ ಪಂಡಿತರೆಡೆಗೆ ಬಾಲಕನನ್ನು ವಿದ್ಯಾಭ್ಯಾಸಕ್ಕೆ ಕಳಿಸಬಹುದಿತ್ತು. ಹಾಗೆ ಮಾಡಿದ್ದರೆ ಬಾಲಕನು ತಾಯಿಯೊಡನಿದ್ದೇ ವಿದ್ಯಾಭ್ಯಾಸ ಮಾಡಬಹುದಿತ್ತು. ಹೀಗೆಲ್ಲ ಭಾವಿಸಿ ರಾಮಕುಮಾರನು ತಮ್ಮನಿಗೆ ಕೆಲವು ಕಾಲ ಏನೂ ಹೇಳಲಿಲ್ಲ. ಆದರೂ ಕರ್ತವ್ಯ ಪ್ರಜ್ಞೆಯ ಪ್ರೇರಣೆಯಿಂದ ಒಂದುದಿನ ಪಾಠದ ಕಡೆಗೆ ಗಮನಕೊಡಬೇಕೆಂದು ಸ್ವಲ್ಪ ಮೃದುವಾಗಿ ಬೈದು ಹೇಳಿದನು. ಏಕೆಂದರೆ

ಗದಾಧರನೂ ಮುಂದೆ ಸಂಸಾರ ನಡೆಸಬೇಕಲ್ಲವೇ ? ಈಗಿನಿಂದಲೇ ಅವನು ಸಂಸಾರ ನಿರ್ವಹಣೆಯ ವಿಧಾನವನ್ನು ಕಲಿಯದಿದ್ದರೆ ಮುಂದೆ ಯಾರು ಕಲಿಸುತ್ತಾರೆ ? ಭ್ರಾತೃ ವಾತ್ಸಲ್ಯ ಮತ್ತು ಸಂಸಾರದ ಭವಿಷ್ಯತ್ತು—ಇವೆರಡೂ ಗದಾಧರನನ್ನು ವಿದ್ಯಾಭ್ಯಾಸದಲ್ಲಿ ತೊಡಗಿಸುವಂತೆ ರಾಮಕುಮಾರನನ್ನು ಪ್ರೇರೇಪಿಸಿದ್ದುವು.

9. ರಾಮಕುಮಾರನು ಸಂಸಾರದ ವಿಷಯದಲ್ಲಿ ಎಷ್ಟೇ ಅನುಭವವುಳ್ಳವನಾದರೂ ಗದಾಧರನ ಮಾನಸಿಕ ಸ್ಥಿತಿಯ ಬಗ್ಗೆ ಅವನಿಗೆ ಸಾಕಷ್ಟು ಅರಿವು ಇರಲಿಲ್ಲ. ಬಾಲಕನು ಅಲ್ಪ ವಯಸ್ಸಿನಲ್ಲಿಯೇ ಸಂಸಾರಿ ವ್ಯಕ್ತಿಗಳ ಎಲ್ಲ ಚಟುವಟಿಕೆಯ ಮತ್ತು ಆ ಜೀವನ ಪರಿಶ್ರಮದ ಉದ್ದೇಶವೇನು ಎಂಬುದನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದನು. ಈ ಮೂರು ದಿನದ ಪ್ರತಿಷ್ಠೆ, ತುಚ್ಛ ಸಂಸಾರಸುಖ ಇವುಗಳ ಕಡೆ ಮನಸ್ಸನ್ನು ಹರಿಸದೆ ಉನ್ನತ ಉದ್ದೇಶವನ್ನು ಅವನು ಹೊಂದಿದ್ದನು—ಎಂಬ ಈ ವಿಷಯ ರಾಮಕುಮಾರನ ಮನಸ್ಸಿಗೆ ಹೊಳೆದೇ ಇರಲಿಲ್ಲ. ರಾಮಕುಮಾರನು ಬೈದಾಗ ಗದಾಧರನು ಕೊಟ್ಟ ಉತ್ತರವನ್ನು ಕೇಳಿಯೂ ಬಾಲಕನ ಮನಸ್ಸನ್ನು ಅರಿಯಲಾಗಲಿಲ್ಲ. ತಂದೆ ತಾಯಿಯರ ಅತ್ಯಂತ ಪ್ರೀತಿಯ ಮುದ್ದು ಮಗ ಈಗ ಪ್ರಥಮಬಾರಿಗೆ ಬೈಸಿಕೊಂಡು ಅಭಿಮಾನದಿಂದ ಈ ರೀತಿ ನುಡಿದಿರಬೇಕೆಂದು ರಾಮಕುಮಾರನು ಭಾವಿಸಿದನು. ತನಗೆ ಹಣ ಸಂಪಾದನೆಯ ವಿದ್ಯೆ ಬೇಡವೆಂದು ನಾನಾ ರೀತಿಯಲ್ಲಿ ಬಾಲಕನು ತನ್ನ ಮನೋದ್ದೇಶವನ್ನು ಬಿಚ್ಚಿ ತೋರಿಸಿದರೂ ಅದನ್ನು ಅಥಮಾಡಿಕೊಳ್ಳುವವರಾರು ? ಎಷ್ಟಾದರೂ ಬಾಲಕ ತಾನೆ ! ವಯೋವೃದ್ಧರೇ ಸಂಸಾರ ಸುಖದಿಂದ ವಿಮುಖರಾದರೆ ಅವರಿಗೆ ತಲೆಕೆಟ್ಟಿರಬೇಕೆಂದು ಭಾವಿಸುತ್ತೇವೆ !

ಬಾಲಕನ ಆ ಮಾತು ರಾಮಕುಮಾರನಿಗೆ ಅರ್ಥವಾಗಲಿಲ್ಲ. ಪ್ರೀತಿಯ ತಮ್ಮನನ್ನು ಬೈದದ್ದಕ್ಕಾಗಿ ಪರಿತಪಿಸುತ್ತ ಅವನನ್ನು ಅನೇಕ ರೀತಿಯಲ್ಲಿ ಸಮಾಧಾನಮಾಡಲು ಪ್ರಯತ್ನಿಸಿದನು. ಕೆಲವು ದಿನ ಅವನನ್ನು ವಿಶೇಷ ಆದರದಿಂದ ನೋಡಿಕೊಳ್ಳತೊಡಗಿದ. ಬಾಲಕನು ಮಾತ್ರ ತನ್ನ ಉದ್ದೇಶದ ಸಫಲತೆಗಾಗಿ ಕಾರ್ಯೋನ್ಮುಖನಾಗತೊಡಗಿದ.

10. ಮೇಲಿನ ಘಟನೆಯಾಗಿ ಎರಡು ವರ್ಷದ ಅವಧಿಯಲ್ಲಿ ಶ್ರೀರಾಮಕೃಷ್ಣರ ಮತ್ತು ಅವರ ಅಣ್ಣನ ಜೀವನದಲ್ಲಿ ಒಂದು ಹೊಸ ಘಟ್ಟ ಪ್ರಾರಂಭವಾಗುವ ಪರಿಸ್ಥಿತಿಯುಂಟಾಯಿತು. ಅಣ್ಣನ ಆರ್ಥಿಕ ಸ್ಥಿತಿ ದಿನದಿನಕ್ಕೂ ಕ್ಷೀಣಿಸುತ್ತ ಹೋಯಿತು. ಅದು ಉತ್ತಮವಾಗುವ ಸೂಚನೆಯೇ ಕಂಡುಬರಲಿಲ್ಲ. ಪಾಠಶಾಲೆಯನ್ನು ಮುಚ್ಚಿ ಬೇರೇನಾದರೂ ಕೆಲಸವನ್ನು ಪ್ರಾರಂಭಿಸೋಣವೆಂದು ಕೆಲವೊಮ್ಮೆ ಭಾವಿಸುತ್ತಿದ್ದ. ಇನ್ನಾವುದಾದರೂ ಜೀವನೋಪಾಯವನ್ನು ಕಂಡುಹಿಡಿಯದೆ ಇದ್ದರೆ ಸಾಲದ ಹೊರೆಯನ್ನು ಅನುಭವಿಸಬೇಕಾಗುವುದೆಂದು ಅವನಿಗೆ ಖಚಿತವಾಯಿತು. ಆದರೆ ಬೇರೆ ದಾರಿ ಎಲ್ಲಿ ? ಧಾರ್ಮಿಕ ವಿಧಿಗಳನ್ನು ಮಾಡಿಸುವುದು ಮತ್ತು ಅಧ್ಯಾಪನ—ಇವುಗಳಲ್ಲದೆ ಅವನು ಬೇರೆ ಯಾವ ಉದ್ಯೋಗವನ್ನೂ ಕಲಿತಿರಲಿಲ್ಲ. ಇನ್ನು ಅಂತಹ ಔದ್ಯೋಗಿಕ

ಶಿಕ್ಷಣವನ್ನು ಪಡೆಯುವ ಉತ್ಸಾಹವೂ ಅವನಲ್ಲಿರಲಿಲ್ಲ. ಅಥವಾ ಹಾಗೆ ಪಡೆಯಲು ಹೋದರೆ ತನ್ನ ನಿತ್ಯ ಪೂಜಾದಿ ಕ್ರಿಯೆಗಳಿಗೆ ಸಮಯವೂ ದೊರೆಯುವುದಿಲ್ಲವೆಂಬ ಭಯವಿತ್ತು ಅವನ ಮನಸ್ಸಿನಲ್ಲಿ. ಅಲ್ಪತೃಪ್ತನೂ ಸಾಧು ಸ್ವಭಾವದವನೂ ಆದ ರಾಮಕುಮಾರನು ಹಣ ಸಂಪಾದನೆಯ ವಿಷಯದಲ್ಲಿ ಅಂಥ ನಿಪುಣನಲ್ಲ. ಶ್ರೀರಘುವೀರನ ಇಚ್ಛೆಯಂತಾಗಲಿ ಎಂದು ಮನಸ್ಸಿಗೆ ಸಮಾಧಾನ ತಂದುಕೊಳ್ಳುತ್ತ ಎಂದಿನಂತೆ ಕಾಲ ತಳ್ಳುತ್ತಿದ್ದನು. ಇಂಥ ಅನಿಶ್ಚಿತ ಪರಿಸ್ಥಿತಿಯಲ್ಲಿ ಭಗವಂತನೇ ಒಂದು ಘಟನೆಯ ಮೂಲಕ ರಾಮಕುಮಾರನಿಗೆ ಒಂದು ಹೊಸ ದಾರಿಯನ್ನು ತೋರಿಸಿ ಕೊಟ್ಟನು.

ನಾಲ್ಕನೆಯ ಅಧ್ಯಾಯ

ದಕ್ಷಿಣೇಶ್ವರದಲ್ಲಿ ಕಾಳೀಮಂದಿರ

1. ಸಂಸ್ಕೃತ ಶಾಲೆಯನ್ನು ತೆರೆಯುವುದಕ್ಕೆ ಕಾರಣ 2. ರಾಣಿ ರಾಸಮಣಿ ಮತ್ತು ಅವಳ ವಿಶೇಷ ಗುಣಗಳು 3. ಅವಳ ಕಾಶೀಯಾತ್ರೆಯ ಸನ್ನಾಹ 4. ರಾಣಿಯು ದೇವೀಮಂದಿರವನ್ನು ಕಟ್ಟಿಸಿದುದು 5. ದೇವಿಗೆ ಅನ್ನಭೋಗದ ವ್ಯವಸ್ಥೆ 6. ಇದಕ್ಕೆ ಪಂಡಿತರ ಆಕ್ಷೇಪಣೆ 7. ರಾಮಕುಮಾರನ ಪರಿಹಾರ 8. ರಾಮಕುಮಾರನ ಉದಾರತೆ 9. ಯೋಗ್ಯ ಅರ್ಚಕನ ಅನ್ವೇಷಣೆ 10. ಮಹೇಶಚಂದ್ರನು ಈ ಜವಾಬ್ದಾರಿಯನ್ನು ವಹಿಸಿಕೊಂಡುದು 11. ರಾಮಕುಮಾರನ ಅರ್ಚಕಪದವಿ ಸ್ವೀಕಾರ 12. ಮಂದಿರ ಪ್ರತಿಷ್ಠಾಪನೆಯ ಉತ್ಸವ 13. ಆ ದಿನದಂದು ಶ್ರೀರಾಮಕೃಷ್ಣರ ವರ್ತನೆ 14. ಮಂದಿರ ಪ್ರತಿಷ್ಠಾಪನೆಯ ಸಂಬಂಧವಾಗಿ ಶ್ರೀರಾಮಕೃಷ್ಣರು ಹೇಳಿದುದು 15. ಧರ್ಮಪತ್ರ ನಿರ್ಣಯ 16. ಶ್ರೀರಾಮಕೃಷ್ಣರ ಆಹಾರನಿಷ್ಠೆ 17. ಅವರ ಗಂಗಾಭಕ್ತಿ 18. ಅವರು ದಕ್ಷಿಣೇಶ್ವರದಲ್ಲಿ ಸ್ವಂತ ಅಡಿಗೆ ಮಾಡಿ ಉಣ್ಣುತ್ತಿದ್ದುದು 19. ಸಂಕುಚಿತ ಮನೋಭಾವ ಮತ್ತು ಏಕನಿಷ್ಠೆ ಬೇರೆ ಬೇರೆ.

1. ೧೮೫೦ರಲ್ಲಿ ರಾಮಕುಮಾರನು ಸಂಸ್ಕೃತ ಪಾಠಶಾಲೆಯನ್ನು ತೆರೆದಾಗ ಅವನಿಗೆ ಬಹುಶಃ ಆಗ ನಲವತ್ತೈದು ವರ್ಷ. ಸಂಸಾರದ ಆರ್ಥಿಕ ಮುಗ್ಗಟ್ಟು ಆಗ ಅವನನ್ನು ಪೀಡಿಸುತ್ತಿತ್ತು. ಅವನ ಪತ್ನಿ ಏಕಮಾತ್ರ ಅಕ್ಷಯನಿಗೆ ಜನ್ಮವಿತ್ತು ಮೃತ್ಯುವಶಳಾಗಿದ್ದಳು. ಆಗ ಶ್ರೀರಾಮಕೃಷ್ಣರು ಹದಿನಾಲ್ಕನೆ ವಯಸ್ಸಿನಲ್ಲಿ ಕಾಲಿಟ್ಟಿದ್ದರು. ಸಮೃದ್ಧ ಕಲಕತ್ತೆಯಲ್ಲಿ ಧಾರ್ಮಿಕ ವಿಧಿಗಳ ಮತ್ತು ಸಂಸ್ಕೃತ ಪಾಠದ ಮೂಲಕ ಹೇಗೂ ಹಣ ಸಂಪಾದಿಸಬಹುದೆಂದು ರಾಮಕುಮಾರನು ಭಾವಿಸಿದ್ದ. ಪತ್ನೀ ವಿಯೋಗದಿಂದ ಅವನ ಹೃದಯದಲ್ಲಿ ಏನೋ ಶೂನ್ಯತೆಯು ಅನುಭವವಾಗುತ್ತಿತ್ತು. ಬೇರೆ ಕಡೆ ಹೋಗಿ ಕೆಲಸದಲ್ಲಿ ಮಗ್ನನಾದರೆ ಈ ವಿಯೋಗವನ್ನು ಮರೆಯಬಹುದೆಂದೂ ಅವನು ಚಿಂತಿಸಿರಬೇಕು. ಅಂತೂ ಅವನು ಕಲಕತ್ತೆಗೆ ಬಂದು ಪಾಠಶಾಲೆಯನ್ನು ತೆರೆದನು. ಅದಾದ ಮೂರು ವರ್ಷಗಳಲ್ಲಿ ಶ್ರೀರಾಮಕೃಷ್ಣರನ್ನೂ ಹಳ್ಳಿಯಿಂದ ಕರೆದುಕೊಂಡು ಬಂದನು. ಅವರು ಕಲಕತ್ತೆಗೆ ಬಂದು ಈಗ ಮೂರು ವರ್ಷಗಳಾಗಿವೆ. ಅವರ ಮುಂದಿನ ಜೀವನಕಥೆಯನ್ನು ಹೇಳಬೇಕಾದರೆ ಈಗ ನಾವು ಬೇರೆ ಕಡೆ ದೃಷ್ಟಿ ಹರಿಸಬೇಕಾಗಿದೆ. ಇದೇ ಸಂದರ್ಭದಲ್ಲಿ ಕಲಕತ್ತೆಯ ಇನ್ನೊಂದು ಕಡೆ ಶ್ರೀರಾಮಕೃಷ್ಣರ ಮುಂದಿನ ಜೀವನ ನಾಟಕದ ವೇದಿಕೆಯೊಂದು ಸಜ್ಜಾಗುತ್ತಿತ್ತು.

2. ಕಲಕತ್ತೆಯ ದಕ್ಷಿಣಭಾಗದಲ್ಲಿ ಜಾನ್‌ಬಜಾರ್ ಎಂಬ ಪ್ರದೇಶವಿದೆ. ಅಲ್ಲಿಯೇ ಸುಪ್ರಸಿದ್ಧ ರಾಣಿ ರಾಸಮಣಿಯ ವಾಸ. ಆಕೆಗೆ ನಾಲ್ಕು ಜನ ಹೆಣ್ಣು ಮಕ್ಕಳು ನಲವತ್ತೆರಡನೆ ವಯಸ್ಸಿನಲ್ಲಿಯೇ ಅವಳು ವಿಧವೆಯಾಗಿದ್ದಳು. ಅಂದಿನಿಂದ ದಿವಂಗತ ಪತಿ ರಾಮಚಂದ್ರದಾಸನ ಅಪಾರ ಸಂಪತ್ತಿಗೆ ಆಕೆಯೇ ಒಡತಿಯಾಗಿ ಕಲಕತ್ತೆಯಲ್ಲಿ ಪ್ರತಿಷ್ಠಿತ ವ್ಯಕ್ತಿಗಳಲ್ಲಿ ಒಬ್ಬಳಾಗಿದ್ದಳು. ಅವಳ ಪ್ರಸಿದ್ಧಿ ಅವಳು ಹೊಂದಿದ್ದ ಅಪಾರ ಸಂಪತ್ತಿನಿಂದಾಗಿ ಮಾತ್ರವಲ್ಲ. ಅವಳಲ್ಲಿದ್ದ ದೈವಭಕ್ತಿ, ವೀರ್ಯೋತ್ಸಾಹ ಮತ್ತು ಬಡವರ ಮೇಲಿನ ಅನುಕಂಪ ಇವೂ ಅದಕ್ಕೆ ಕಾರಣವಾಗಿದ್ದುವು. ದಾನ ಧರ್ಮಾದಿಗಳಿಂದ ಸಕಲರ ಪ್ರೀತಿಯನ್ನು ಗಳಿಸಿದ್ದಳು. ಅವಳಲ್ಲಿದ್ದ ಕ್ಷಾತ್ರ ಗುಣವನ್ನು ಪ್ರತಿಬಿಂಬಿಸುವ ಘಟನೆಯೊಂದಿದೆ. ಜಾನಬಜಾರಿನಲ್ಲಿ ಅವಳ ಮನೆಯ ಹತ್ತಿರ ಆಂಗ್ಲ ಸೈನಿಕರ ಒಂದು ಬ್ಯಾರಕ್ ಇತ್ತು. ಅವರಿಗೆ ತುಂಬ ಕುಡಿಯುವ ಹವ್ಯಾಸವಿತ್ತು. ಒಂದು ದಿನ ಅವರಲ್ಲಿ ಕೆಲವರು ಚೆನ್ನಾಗಿ ಕುಡಿದು ಆಕೆಯ ಮನೆಯೆಡೆಗೆ ಧಾವಿಸಿ ಬಂದರು. ಕಾವಲುಗಾರರನ್ನೆಲ್ಲ ಹೊಡೆದು ಓಡಿಸಿ ಮನೆಯೊಳಗೆ ನುಗ್ಗಿದರು. ಆಗ ರಾಸಮಣಿಯ ಅಳಿಯ ಮಥುರಾನಾಥ ಮತ್ತಿತರ ಗಂಡಸರು ಮನೆಯಲ್ಲಿರಲಿಲ್ಲ. ಆಗ ರಾಸಮಣಿಯೇ ಶಸ್ತ್ರವನ್ನು ಹಿಡಿದು ಆ ಸೈನಿಕರನ್ನು ಎದುರಿಸಿದ್ದಳು.

ಅವಳ ಬಡವರ ಮೇಲಿನ ಅನುಕಂಪೆ ಮತ್ತು ಅದ್ಭುತ ಧೈರ್ಯವನ್ನು ಸೂಚಿಸುವ ಇನ್ನೊಂದು ಘಟನೆ. ಗಂಗಾನದಿಯಲ್ಲಿ ಮೀನು ಹಿಡಿಯುವ ಮೀನುಗಾರರಿಗೆ ಬ್ರಿಟಿಷ್ ಸರ್ಕಾರ ತೆರಿಗೆ ವಿಧಿಸಿತು. ಆ ಬಡವರ ಜೀವನೋಪಾಯಕ್ಕೆ ಈಗ ಧಕ್ಕೆಯುಂಟಾಯಿತು. ಅವರೆಲ್ಲ ಬಂದು ರಾಸಮಣಿಗೆ ತಮ್ಮ ಕಷ್ಟವನ್ನು ಹೇಳಿಕೊಳ್ಳಲು. ಆಕೆ ಅವರಿಗೆ ಭರವಸೆಯಿತ್ತಳು. ಈಗ ಅವಳು ಒಂದು ಉಪಾಯ ಮಾಡಿದಳು, ಗಂಗಾನದಿಯ ಸ್ವಲ್ಪಭಾಗವನ್ನು ಮೀನು ಹಿಡಿಯುವ ಸಲುವಾಗಿ ಬ್ರಿಟಿಷ್ ಸರ್ಕಾರದಿಂದ ಖರೀದಿಸಿದಳು. ತಾನು ಖರೀದಿಸಿದ ಭಾಗದಲ್ಲಿ ಎರಡುಕಡೆಯೂ ಒಂದು ದೊಡ್ಡ ತಂತಿಯ ಬೇಲಿಯನ್ನು ಹಾಕಿಸಿ ಹಡಗು ಓಡಾಡುವುದಕ್ಕೆ ಅಡ್ಡಿಯೊಡ್ಡಿದಳು. ಸರ್ಕಾರದವರು ಇದನ್ನು ಆಕ್ಷೇಪಿಸಲು ಅವಳು ಉತ್ತರ ಕಳಿಸಿದಳು : "ನಾನು ಬಹಳ ಹಣಕೊಟ್ಟು ಆ ಭಾಗದಲ್ಲಿ ಮೀನು ಹಿಡಿಯುವ ಅಧಿಕಾರವನ್ನು ಪಡೆದಿದ್ದೇನೆ. ಆದ್ದರಿಂದ ಆ ಜಾಗದಲ್ಲಿ ನನಗೆ ಏನೂ ಮಾಡುವ ಅಧಿಕಾರವಿದೆ. ಮತ್ತೆ ಅಲ್ಲಿ ಹಡಗುಗಳು ಆಗಾಗ ಓಡಾಡುತ್ತಿದ್ದರೆ ಅಲ್ಲಿರುವ ಮೀನುಗಳೆಲ್ಲ ಬೇರೆಡೆಗೆ ಓಡಿಹೋಗುವುವು. ಇದರಿಂದ ನಮಗೆ ಅಪಾರ ನಷ್ಟವಾಗುವುದು. ಆದ್ದರಿಂದ ಆ ಬೇಲಿಯನ್ನು ತೆಗೆಯಲಾಗುವುದಿಲ್ಲ. ಆದರೆ ಮೀನು ಹಿಡಿಯಲು ನೀವು ವಿಧಿಸಿರುವ ಹೊಸ ತೆರಿಗೆಯನ್ನು ಹಿಂತೆಗೆದುಕೊಂಡರೆ ನಾನು ನನ್ನ ಆ ಜಾಗದ ಮೇಲಿನ ಅಧಿಕಾರವನ್ನು ಬಿಟ್ಟುಕೊಡಲು ಸಿದ್ಧಳಿದ್ದೇನೆ. ಇಲ್ಲದಿದ್ದರೆ ಈ ವಿಷಯದಲ್ಲಿ ನಾನು ಕೋರ್ಟಿಗೆ ಹೋಗುತ್ತೇನೆ." ಅವಳ ಚಾತುರ್ಯವನ್ನೂ, ಬಡ ಮೀನುಗಾರರ ಮೇಲೆ ಅವಳಿಗಿದ್ದ ಕಳಕಳಿಯನ್ನೂ ತಿಳಿದು ಸರಕಾರದವರು ಆ ತೆರಿಗೆಯನ್ನು ವಜಾ ಮಾಡಿದರು.

ತನ್ನ ಧೈರ್ಯ ಸಾಹಸ ಕಾರ್ಯದಕ್ಷತೆಗಳಿಂದಾಗಿ 'ರಾಣಿ' ಎಂಬ ಬಿರುದನ್ನು ಸಾರ್ಥಕಗೊಳಿಸಿದ್ದಳು. ಎಲ್ಲ ಜಾತಿಯವರ ಆದರಕ್ಕೂ ಆಕೆ ಪಾತ್ರಳಾಗಿದ್ದಳು. ನಮ್ಮ ಈ ಕಥಾ ಸಂದರ್ಭದಲ್ಲಿ ರಾಸಮಣಿಯ ಹೆಣ್ಣುಮಕ್ಕಳಿಗೆಲ್ಲ ವಿವಾಹವಾಗಿ ಅವರಿಗೆ ಮಕ್ಕಳೂ ಆಗಿತ್ತು. ಅವಳ ಮೂರನೆಯ ಪುತ್ರಿ, ಒಂದು ಗಂಡುಮಗುವಿಗೆ ಜನ್ಮವಿತ್ತು ಮರಣಹೊಂದಿದ್ದಳು. ಅನಂತರ ಆಕೆಯ ಪತಿ ಮಥುರಾನಾಥ ವಿಶ್ವಾಸನಿಗೆ ತನ್ನ ಕಿರಿಯ ಪುತ್ರಿ ಜಗದಂಬಾಳನ್ನು ಕೊಟ್ಟು ವಿವಾಹಮಾಡಿದ್ದಳು. ರಾಣಿಯ ನಾಲ್ಕು ಪುತ್ರಿಯರ ಮಕ್ಕಳು ಈಗಲೂ ಇರುವರು.

ರಾಸಮಣಿಗೆ ಶ್ರೀಕಾಳಿಕಾದೇವಿಯಲ್ಲಿ ವಿಶೇಷ ಭಕ್ತಿ. ಆಕೆಯ ಸಹಿಯ ಮುದ್ರೆಯಲ್ಲಿ ಹೀಗಿತ್ತು "ಕಾಳೀಪದ ಅಭಿಲಾಷೀ ಶ್ರೀಮತಿ ರಾಸಮಣಿ ದಾಸೀ." ಆಕೆಯ ದೈವಭಕ್ತಿ ಎಲ್ಲ ವಿಷಯಗಳಲ್ಲಿಯೂ ಪ್ರಕಾಶಗೊಂಡಿತ್ತು.

3. ಕಾಶೀಧಾಮಕ್ಕೆ ಹೋಗಿ ಶ್ರೀವಿಶ್ವನಾಥ ಮತ್ತು ಶ್ರೀಅನ್ನಪೂರ್ಣೆಯರ ದರ್ಶನ ಪಡೆದು ವಿಶೇಷ ಪೂಜೆ ಸೇವೆ ಸಲ್ಲಿಸಬೇಕೆಂಬುದು ರಾಸಮಣಿಯ ಹೃದಯದ ಬಹುಕಾಲದ ಆಸೆ. ಇದಕ್ಕಾಗಿ ತುಂಬ ಹಣ ಸಂಗ್ರಹ ಮಾಡಿಟ್ಟಿದ್ದಳು. ಆದರೆ ತನ್ನ ಪತಿ ತೀರಿಹೋಗಿ ಸಂಸಾರದ ಇಡೀ ಜವಾಬ್ದಾರಿಯನ್ನು ತಾನು ಹೊರಬೇಕಾದ್ದರಿಂದ ಇದುವರೆಗೂ ಕಾಶಿಗೆ ಹೋಗಲು ಸಾಧ್ಯವಾಗಿರಲಿಲ್ಲ. ಈಗ ಅವಳ ಅಳಿಯಂದಿರು ಆಕೆಯ ಕೌಟುಂಬಿಕ ಭಾರವನ್ನು ಎಷ್ಟೋ ಹ್ರಸ್ವಗೊಳಿಸಿದ್ದರು. ವಿಶೇಷವಾಗಿ ಮಥುರಾನಾಥ ವಿಶ್ವಾಸನು ಅವಳಿಗೆ ಬಲಗೈಯಂತೆ ಸಹಾಯಕನಾಗಿದ್ದನು. ಆದ್ದರಿಂದ ೧೮೪೮ರಲ್ಲಿ ಕಾಶಿಗೆ ಹೋಗುವುದಕ್ಕೆ ಎಲ್ಲ ಸಿದ್ಧತೆ ಮಾಡತೊಡಗಿದಳು. ಎಲ್ಲ ಸಿದ್ಧತೆಗಳೂ ಮುಗಿದು ಇನ್ನೇನು ಯಾತ್ರೆ ಪ್ರಾರಂಭಿಸಬೇಕು ಎನ್ನುವಾಗ ಅವಳಿಗೆ ರಾತ್ರಿ ಸ್ವಪ್ನದಲ್ಲಿ ದೇವಿಯ ಆದೇಶವಾಯಿತು–ನೀನು ಕಾಶಿಗೆ ಹೋಗುವ ಆವಶ್ಯಕತೆಯಿಲ್ಲ. ಇಲ್ಲಿಯೇ ಗಂಗಾತೀರದ ಒಂದು ಮನೋಹರಪ್ರದೇಶದಲ್ಲಿ ಒಂದು ದೇವಸ್ಥಾನವನ್ನು ಕಟ್ಟಿಸಿ ನನ್ನ ಮೂರ್ತಿಯನ್ನು ಪ್ರತಿಷ್ಠಾಪಿಸು. ಅಲ್ಲಿ ನೀನು ನಿತ್ಯ ಪೂಜೆಯ ವ್ಯವಸ್ಥೆ ಮಾಡಿದರೆ ಆ ಮೂರ್ತಿಯ ಮೂಲಕ ನಿನ್ನ ನಿತ್ಯಸೇವೆಯನ್ನು ಸ್ವೀಕರಿಸುತ್ತೇನೆ.* ಭಕ್ತಿಪರಾಯಣಳಾದ ಅವಳು ತನ್ನ ಯಾತ್ರೆಯ ಯೋಜನೆಯನ್ನು ಅಲ್ಲಿಗೇ ನಿಲ್ಲಿಸಿ ಸಂಗ್ರಹಿಸಿದ ಹಣವನ್ನೆಲ್ಲ ಆ ಕಾರ್ಯದಲ್ಲಿ ವಿನಿಯೋಗಿಸಲು ಸಂಕಲ್ಪ ಮಾಡಿದಳು.

4. ಶ್ರೀಕಾಳಿಯ ಮೇಲಿನ ಅವಳ ಅಪಾರ ಭಕ್ತಿ ಈಗ ಮೂರ್ತೀಭವಿಸತೊಡಗಿತು. ಭಾಗೀರಥೀ ತೀರದಲ್ಲಿ ವಿಸ್ತಾರವಾದ ಭೂಭಾಗವನ್ನು ಖರೀದಿಸಿ ಅಲ್ಲಿ

---

* ಕೆಲವರು, ರಾಣಿಯು ಯಾತ್ರೆಯನ್ನು ಪ್ರಾರಂಭಿಸಿ ಕಲಕತ್ತೆಯ ಉತ್ತರಕ್ಕೆ ಬಂದು ದಕ್ಷಿಣೇಶ್ವರ ಗ್ರಾಮದ ಹತ್ತಿರ ನೌಕೆಯಲ್ಲಿ ರಾತ್ರಿ ಕಳೆಯುತ್ತಿರುವಾಗ ಈ ಸ್ವಪ್ನವಾಯಿತೆಂದು ಹೇಳುತ್ತಾರೆ.

ಒಂದು ಬೃಹತ್ ದೇವಾಲಯವನ್ನೂ ಅದಕ್ಕೆ ಹೊಂದಿಕೊಂಡು ಒಂದು ಸುಂದರ ಉದ್ಯಾನವನ್ನೂ ನಿರ್ಮಿಸುವ ಯೋಜನೆ ಹಾಕಿದಳು. ನಿರ್ಮಾಣ ಕಾರ್ಯ ಪ್ರಾರಂಭವಾಗಿ ಏಳು ವರ್ಷ ಕಳೆದರೂ ದೇವಾಲಯ ಇನ್ನೂ ಪೂರ್ಣಗೊಂಡಿರಲಿಲ್ಲ. ಇನ್ನೂ ಇದಕ್ಕೆ ತುಂಬ ಸಮಯ ಹಿಡಿದರೆ ಶ್ರೀಜಗದಂಬೆಯ ಪ್ರತಿಷ್ಠಾಪನೆಗೆ ಮುಂಚೆಯೇ ತಾನು ಕಾಲವಾಗಬಹುದೇನೊ ಎಂಬ ಚಿಂತೆ ರಾಸಮಣಿಗೆ ಉಂಟಾಯಿತು. ಆದ್ದರಿಂದ ಆಕೆ ೧೮೫೫ರ ಜ್ಯೇಷ್ಠ ಮಾಸದಲ್ಲಿ ಸ್ನಾನಯಾತ್ರೆಯ ದಿನದಂದು ವಿಗ್ರಹ ಪ್ರತಿಷ್ಠಾಪನೆಯ ಕಾರ್ಯವನ್ನು ನೆರವೇರಿಸಿದಳು. ಇದಕ್ಕೆ ಹಿಂದಿನ ಕೆಲವು ಘಟನೆಗಳನ್ನು ಓದುಗರ ಮುಂದಿಡುತ್ತೇವೆ.

5. ದೇವಿಗೆ ಅನ್ನಭೋಗದ ವ್ಯವಸ್ಥೆಯಾಗಬೇಕೆಂಬುದು ರಾಣಿಯ ಆಶಯವಾಗಿತ್ತು. ಇದು ದಿವ್ಯಾದೇಶದ ಪರಿಣಾಮವಾಗಿರಬಹುದು, ಅಥವಾ ರಾಣಿಯ ಭಕ್ತಿಪೂರ್ಣ ಹೃದಯದಿಂದ ಉದ್ಭವಿಸಿದ ಆಸೆಯಾಗಿರಬಹುದು. ಭಕ್ತರು ಯಾವಾಗಲೂ ತಮ್ಮ ಇಷ್ಟದೇವತೆಯನ್ನು ತಮ್ಮಂತೆಯೇ ಎಂದು ಭಾವಿಸಿ ಅವರ ಸೇವೆಯನ್ನು ಮಾಡಬಯಸುವುದು ಸ್ವಾಭಾವಿಕ. ತನ್ನಿಷ್ಟದಂತೆ ಮಂದಿರ ನಿರ್ಮಾಣವಾಗಿದೆ, ಸೇವೆಯು ಮುಂದುವರಿಯಲು ಸಾಕಷ್ಟು ಹಣವನ್ನೂ ಇಡಲಾಗಿದೆ. ಇಷ್ಟೆಲ್ಲ ಆದಮೇಲೆ ದೇವಿಗೆ ನಿತ್ಯ ಅನ್ನಭೋಗವಿಲ್ಲದಿದ್ದರೆ ಎಲ್ಲ ವ್ಯರ್ಥ ಎಂದು ರಾಣಿ ಭಾವಿಸಿದಳು. ಜನ ಭಾವಿಸಬಹುದು ರಾಣಿ ರಾಸಮಣಿ ಕೀರ್ತಿಶೇಷಳಾಗಿ ಹೋದಳು ಎಂದು, ಆದರೆ ಅದರಿಂದ ತನಗೇನು ಪ್ರಯೋಜನ ? ಅವಳು ದೇವಿಯನ್ನು ಪ್ರಾರ್ಥಿಸಿದಳು : ''ಹೇ ಜಗದಂಬೆ, ಬೇರೆ ವಿಷಯದಲ್ಲಿ ನೀನು ಹೆಸರು ಕೀರ್ತಿಗಳನ್ನು ಸಾಕಷ್ಟು ಕೊಟ್ಟಿರುವೆ. ಈ ವಿಷಯದಲ್ಲಿ ನನಗೆ ನಿಃಸಾರವಾದ ಈ ಹೆಸರು ಕೀರ್ತಿ ಯಾವುದೂ ಬೇಡ. ನೀನು ಇಲ್ಲಿ ಯಾವಾಗಲೂ ಆವಿರ್ಭವಿಸಿರಬೇಕು ಮತ್ತು ಕೃಪೆತೋರಿ ನಿತ್ಯಸೇವೆಯನ್ನು ಸ್ವೀಕರಿಸಿ ಈ ದಾಸಿಯ ಕಾಮನೆಯನ್ನು ಪೂರ್ತಿಗೊಳಿಸು, ತಾಯಿ.''

6. ದೇವಿಗೆ ಅನ್ನಭೋಗದ ವ್ಯವಸ್ಥೆ ಮಾಡುವುದಕ್ಕೆ ಇರುವ ಒಂದು ದೊಡ್ಡ ವಿಘ್ನ ರಾಣಿ ರಾಸಮಣಿಯ ಜಾತಿ ಮತ್ತು ಸಾಮಾಜಿಕ ಸಂಪ್ರದಾಯ. ತಾನು ಅನ್ನಭೋಗವನ್ನು ನೀಡಿದರೆ ದೇವಿ ಸ್ವೀಕರಿಸುವುದಿಲ್ಲವೆಂದು ಅವಳು ಎಂದೂ ಭಾವಿಸಿದವಳಲ್ಲ. ಆದರೂ ಈ ವಿಚಿತ್ರ ಸಂಪ್ರದಾಯ ಏಕೆ ಪ್ರಚಲಿತವಿದೆ ? ಶಾಸ್ತ್ರಕಾರರು ಹೃದಯವಂತರಾಗಿರಲಿಲ್ಲವೆ ? ಅಥವಾ ತಮ್ಮ ಸ್ವಾರ್ಥದಿಂದಾಗಿ ಈಶ್ವರನ ಮುಂದೆ ಉಚ್ಚ ವರ್ಣದವರಿಗೆ ಉಚ್ಚ ಅಧಿಕಾರವೆಂಬ ವ್ಯವಸ್ಥೆ ಮಾಡಿರುವರೆ ? ಹೃದಯದ ಪವಿತ್ರ ಆಕಾಂಕ್ಷೆಯನ್ನು ಅನುಸರಿಸಿ ಪ್ರಚಲಿತ ಸಂಪ್ರದಾಯಕ್ಕೆ ವಿರುದ್ಧವಾಗಿ ಅನ್ನಭೋಗದ ವ್ಯವಸ್ಥೆ ಮಾಡೋಣವೆಂದರೆ ಆಗ ಬ್ರಾಹ್ಮಣ ಭಕ್ತರಾರೂ ದೇವಾಲಯಕ್ಕೆ ಬಂದು ಪ್ರಸಾದ ಸ್ವೀಕರಿಸುವುದಿಲ್ಲ. ಈಗ ಏನು ಮಾಡುವುದು ? ಅನ್ನಭೋಗದ ವಿಷಯದಲ್ಲಿ ರಾಣಿರಾಸಮಣಿಯು ಅನೇಕ ಶಾಸ್ತ್ರಜ್ಞ ಪಂಡಿತರ ಅಭಿಪ್ರಾಯಗಳನ್ನು ಸಂಗ್ರಹಿಸತೊಡಗಿದಳು. ಆದರೆ ಯಾವುದೂ ಅವಳ ಹೃದಯಕ್ಕೆ ತೃಪ್ತಿಯನ್ನು

ನೀಡಲಿಲ್ಲ.

7. ಮಂದಿರವಾಗಿದೆ, ಮೂರ್ತಿಯೂ ಆಗಿದೆ. ಆದರೆ ರಾಣಿಯ ಈ ಮೇಲಿನ ಸಂಕಲ್ಪ ಪೂರ್ತಿಯಾಗುವ ಸೂಚನೆಯೇ ಕಂಡುಬರುತ್ತಿಲ್ಲ. ಹೀಗೆ ನಿರಾಸೆಯಿಂದ ಕೂಡಿರುವಾಗ ಝಾಮಪುಕುರದ ಚತುಷ್ಪಾಟಿಯಾದ ರಾಮಕುಮಾರನಿಂದ ಒಂದು ಸಲಹೆ ಬಂತು : ಮಂದಿರದ ಪ್ರತಿಷ್ಠಾಪನೆಗೆ ಮುಂಚೆ ಮಂದಿರದ ಸಂಪತ್ತನ್ನು ಯಾವನಾದರೂ ಬ್ರಾಹ್ಮಣನಿಗೆ ದಾನ ಮಾಡಬೇಕು ಮತ್ತು ಆ ಬ್ರಾಹ್ಮಣ ಮಂದಿರದಲ್ಲಿ ದೇವಿಯನ್ನು ಪ್ರತಿಷ್ಠಾಪಿಸಿ ಅನ್ನಭೋಗದ ವ್ಯವಸ್ಥೆ ಮಾಡಬೇಕು. ಹಾಗಾದರೆ ಶಾಸ್ತ್ರ ನಿಯಮವೂ ಭಂಗವಾದಂತಾಗುವುದಿಲ್ಲ ಹಾಗೂ ಬ್ರಾಹ್ಮಣರೇ ಮುಂತಾದ ಉಚ್ಚ ವರ್ಗದವರು ದೇವಾಲಯದಲ್ಲಿ ಪ್ರಸಾದ ಸ್ವೀಕರಿಸಲು ಹಿಂಜರಿಯುವುದಿಲ್ಲ.

ಈ ಸಲಹೆಯನ್ನು ಪಡೆದ ರಾಣಿಯ ಹೃದಯದಲ್ಲಿ ಹೊಸ ಭರವಸೆ ಅಂಕುರಿಸಿತು. ದೇವಾಲಯವನ್ನು ತನ್ನ ಗುರುಗಳ ಹೆಸರಿನಲ್ಲಿ ದಾನಮಾಡಿ ಅವರ ಅನುಮತಿಯಂತೆ ತಾನು ದೇವಾಲಯ ಕಾರ್ಯವನ್ನು ನಿರ್ವಹಿಸುವ ಅಧಿಕಾರಿಯಂತೆ ಇರುವುದೆಂದು ರಾಣಿ ನಿರ್ಧರಿಸಿದಳು. ರಾಮಕುಮಾರನು ಸೂಚಿಸಿದ ಈ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತರುವ ಅವಳ ದೃಢ ನಿರ್ಧಾರವನ್ನು ತಿಳಿದ ಇತರೆ ಬ್ರಾಹ್ಮಣರನೇಕರು ಏನೇನೋ ಮಾತನಾಡಿಕೊಳ್ಳತೊಡಗಿದರು. 'ಇದು ಸಾಮಾಜಿಕ ಸಂಪ್ರದಾಯಕ್ಕೆ ವಿರುದ್ಧ'; 'ಈ ರೀತಿ ಮಾಡಿದರೂ ಉತ್ತಮ ಬ್ರಾಹ್ಮಣರಾರೂ ಅಲ್ಲಿ ಪ್ರಸಾದ ಸ್ವೀಕರಿಸುವುದಿಲ್ಲ'—ಹೀಗೆಲ್ಲ ಅವರು ಮಾತನಾಡಿಕೊಳ್ಳುತ್ತಿದ್ದರು. ಆದರೆ ಎದುರು ಬಂದು ಇದು ಶಾಸ್ತ್ರವಿರುದ್ಧವಾದ ಆಚರಣೆ ಎಂದು ಹೇಳುವ ಸಾಹಸ ಅವರಿಗಿರಲಿಲ್ಲ.

8. ಈ ಘಟನೆಯನಂತರ ರಾಸಮಣಿಗೆ ರಾಮಕುಮಾರನ ಮೇಲೆ ವಿಶೇಷ ಗೌರವ ಉಂಟಾಯಿತು ಎಂಬುದನ್ನು ನಾವು ಸುಲಭವಾಗಿ ಊಹಿಸಬಹುದು. ರಾಮಕುಮಾರನ ಈ ಸಲಹೆಯನ್ನು ಕುರಿತು ಯೋಚಿಸಿದಾಗ ಅವನ ಮನಸ್ಸು ಎಂಥ ಉದಾರವಾದದ್ದು ಎಂಬುದು ತಿಳಿದು ಬರುತ್ತದೆ. ಆಗಿನ ಕಾಲದಲ್ಲಿ ಬ್ರಾಹ್ಮಣ ಪಂಡಿತರುಗಳು ತುಂಬ ಸಂಕುಚಿತ ಮನೋಭಾವದವರಾಗಿದ್ದರು. ಶಾಸ್ತ್ರದ ವಿಧಿಗಳಿಗೆ ಉದಾರ ರೀತಿಯ ನಿರೂಪಣೆ ನೀಡಬಲ್ಲ ಮತ್ತು ಸಮಯೋಚಿತವಾದ ವಿವರಣೆ ನೀಡಬಲ್ಲ ಮುಕ್ತ ಮನಸ್ಸಿನವರು ಅವರಲ್ಲಿ ತುಂಬ ವಿರಳ, ಇದರಿಂದಾಗಿ ಅವರ ಸಲಹೆಗಳನ್ನು ಉಲ್ಲಂಘಿಸುವ ಪ್ರವೃತ್ತಿ ಜನರಲ್ಲಿ ಉದಿಸುತ್ತಿತ್ತು.

9. ಅದು ಏನೇ ಇರಲಿ, ರಾಮಕುಮಾರ ಮತ್ತು ರಾಣಿಯ ಸಂಬಂಧ ಇಲ್ಲಿಗೇ ಸಮಾಪ್ತಿಗೊಳ್ಳಲಿಲ್ಲ. ರಾಣಿಯು ತನ್ನ ಗುರು ವಂಶದವರಿಗೆ ಯಥಾ ರೀತಿಯಲ್ಲಿ ಸನ್ಮಾನ ನೀಡುತ್ತಿದ್ದರೂ ಅವರಿಗೆ ಶಾಸ್ತ್ರಜ್ಞಾನ ಅಷ್ಟಾಗಿಲ್ಲ ಎಂಬುದು ಅವಳಿಗೆ ತಿಳಿದಿತ್ತು. ಶಾಸ್ತ್ರ ಸಮ್ಮತವಾಗಿ ದೇವತಾವಿಧಿಗಳನ್ನು ನೆರವೇರಿಸುವ ಸಾಮರ್ಥ್ಯವೂ ಅವರಿಗಿಲ್ಲ ಎಂಬುದೂ ಅವಳಿಗೆ ನಿಶ್ಚಯವಾಗಿ ತಿಳಿದಿತ್ತು. ಆದ್ದರಿಂದ ಅವರಿಗೆ ನ್ಯಾಯವಾಗಿ ದೊರಕಬೇಕಾದ ವರಮಾನವನ್ನು ಕಡಿಮೆ ಮಾಡದೆ ರಾಸಮಣಿಯು

ಹೊಸ ದೇವಾಲಯದ ಕಾರ್ಯನಿರ್ವಹಣೆಗೆ ಸದಾಚಾರವುಳ್ಳ ಶಾಸ್ತ್ರಜ್ಞ ಬ್ರಾಹ್ಮಣ ಸೋರ್ವನನ್ನು ನಿಯಮಿಸುವ ಯೋಚನೆ ಮಾಡಿದಳು. ಇಲ್ಲಿಯೂ ಪ್ರಚಲಿತ ಸಾಮಾಜಿಕ ಸಂಪ್ರದಾಯವು ಅಡ್ಡಿಯಾಯಿತು. ಶೂದ್ರರು ಸ್ಥಾಪಿಸಿದ ದೇವಸ್ಥಾನದಲ್ಲಿ ಬ್ರಾಹ್ಮಣರು ಪೂಜೆ ಮಾಡುವುದಂತೂ ದೂರದ ಮಾತು. ಆ ದೇವತೆಗೆ ನಮಸ್ಕಾರ ಮಾಡುವುದೂ ತಮ್ಮ ಘನತೆಗೆ ವಿರುದ್ಧವೆಂದು ಅವರು ಭಾವಿಸುತ್ತಿದ್ದರು ! ರಾಣಿಯ ಗುರುವಂಶದವರಂತೆ ಶೂದ್ರರೊಡನೆ ಸಂಬಂಧವಿಟ್ಟುಕೊಂಡಿದ್ದ ಬ್ರಾಹ್ಮಣ ಬಂಧುಗಳನ್ನು ಶೂದ್ರರೆಂದೇ ಅವರು ಪರಿಗಣಿಸುತ್ತಿದ್ದರು. ಪೂಜಾವಿಧಾನವನ್ನು ಸರಿಯಾಗಿ ತಿಳಿದ ಸಚ್ಚಾರಿತ್ರ್ಯವುಳ್ಳ ಯಾವ ಬ್ರಾಹ್ಮಣನೂ ರಾಣಿಯ ದೇವಾಲಯದ ಅರ್ಚಕನಾಗಲು ಮುಂದೆ ಬರಲಿಲ್ಲ. ಆದರೆ ರಾಸಮಣಿ ನಿರಾಶಳಾಗಲಿಲ್ಲ. ವೇತನವನ್ನೂ ಭತ್ತೆಯನ್ನೂ ಜಾಸ್ತಿಮಾಡಿ ಅವಳು ಅರ್ಚಕನಿಗಾಗಿ ಅನೇಕ ಕಡೆ ಅರಸತೊಡಗಿದಳು.

10. ಶ್ರೀರಾಮಕೃಷ್ಣರ ಸಹೋದರಿ ಹೇಮಾಂಗಿನಿಯ ಊರು ಕಾಮಾರಪುಕುರದ ಹತ್ತಿರ ಸಿಹೋರ್ ಎಂಬ ಗ್ರಾಮ. ಅಲ್ಲಿ ಅನೇಕ ಬ್ರಾಹ್ಮಣರು ವಾಸಿಸುತ್ತಿದ್ದರು. ಅದೇ ಗ್ರಾಮದ ಮಹೇಶಚಂದ್ರ ಚಟ್ಟೋಪಾಧ್ಯಾಯ ಎಂಬುವವನು ರಾಣಿಯಎಸ್ಟೇಟಿನಲ್ಲಿ ಕೆಲಸ ಮಾಡುತ್ತಿದ್ದನು. ಅವನು ಈ ಹೊಸ ದೇವಾಲಯಕ್ಕೆ ಅರ್ಚಕನನ್ನು ಮತ್ತು ಇತರ ಸಿಬ್ಬಂದಿವರ್ಗದವರನ್ನೂ ಗೊತ್ತು ಮಾಡುವ ಜವಾಬ್ದಾರಿಯನ್ನು ವಹಿಸಿಕೊಂಡನು. ಅದರಿಂದ ಸ್ವಲ್ಪ ಹಣ ಸಿಗಬಹುದೆಂದು ಅವನು ಆಶಿಸಿದ್ದನು. ರಾಣಿಯ ದೇವಾಲಯದಲ್ಲಿ ಚಾಕರಿ ಮಾಡುವುದು ನಿಂದನೀಯವಲ್ಲವೆಂದು ಗ್ರಾಮದ ಬಡ ಬ್ರಾಹ್ಮಣರ ಮನವೊಲಿಸಲು ಅವನು ಪ್ರಯತ್ನಿಸಿದನು. ಇದಕ್ಕಾಗಿ ಅವನು ಮೊದಲು ತನ್ನ ಅಣ್ಣನಾದ ಕ್ಷೇತ್ರನಾಥನನ್ನು ಶ್ರೀರಾಧಾಗೋವಿಂದನ ಅರ್ಚಕನ ಸ್ಥಾನಕ್ಕೆ ಗೊತ್ತು ಮಾಡಿದನು. ಅವನ ವಂಶಸ್ಥನೇ ರಾಣಿಯ ದೇವಾಲಯದ ಕಾರ್ಯವನ್ನು ಸ್ವೀಕರಿಸಿದ ಮೇಲೆ ಇತರ ಬ್ರಾಹ್ಮಣರೂ ದೇವಾಲಯದ ಬೇರೆ ಬೇರೆ ಉದ್ಯೋಗಗಳಿಗಾಗಿ ಮುಂದೆ ಬಂದರು. ಆದರೆ ಎಷ್ಟೇ ಪ್ರಯತ್ನಿಸಿದರೂ ಶ್ರೀಕಾಳೀದೇವಿಯ ಅರ್ಚಕ ಸ್ಥಾನಕ್ಕೆ ಯಾವ ಯೋಗ್ಯ ಬ್ರಾಹ್ಮಣನೂ ಅವನಿಗೆ ಸಿಗಲಿಲ್ಲ.

11, ಮಹೇಶನಿಗೆ ರಾಮಕುಮಾರನ ಪರಿಚಯ ಮೊದಲಿನಿಂದಲೂ ಇತ್ತು. ರಾಮಕುಮಾರನು ಒಬ್ಬ ಸಾಧಕ ಭಕ್ತ ಮತ್ತು ಶಕ್ತಿಮಂತ್ರದ ದೀಕ್ಷೆ ಪಡೆದವನು ಎಂಬುದು ಮಹೇಶನಿಗೆ ತಿಳಿಯದೇ ಇರಲಿಲ್ಲ. ಅವನ ಬಡತನದ ವಿಷಯವೂ ಅವನಿಗೆ ತಿಳಿದಿತ್ತು. ಶ್ರೀಕಾಳಿಯ ಅರ್ಚಕನಾಗಲು ರಾಮಕುಮಾರನೇ ಯೋಗ್ಯ ಎಂದು ಅವನಿಗೆ ಅನಿಸಿತು. ಆದರೆ ಒಂದು ಸಂದೇಹ : ಕೈವರ್ತಕ ಜಾತಿಯ ರಾಣಿಯ ಮಂದಿರದಲ್ಲಿ ಅರ್ಚಕನಾಗಲು ಅವನು ಒಪ್ಪುವನೆ? ಈಗ ಪ್ರತಿಷ್ಠಾಪನೆಯ ದಿನ ಹತ್ತಿರ ಬಂದಿದೆ, ಯೋಗ್ಯ ಅರ್ಚಕನೂ ಯಾರೂ ಸಿಕ್ಕಿಲ್ಲ. ಒಮ್ಮೆ ರಾಮಕುಮಾರನನ್ನು ವಿಚಾರಿಸಿ ನೋಡಿಬಿಡುವುದೆಂದು ಮಹೇಶ ತೀರ್ಮಾನಿಸಿದ. ತಾನೇ ನೇರವಾಗಿ ಹೇಳುವುದರ ಬದಲು ಮೊದಲು ರಾಣಿಗೆ ಎಲ್ಲ ವಿಷಯವನ್ನು ತಿಳಿಸಿದನು. ಪ್ರತಿಷ್ಠಾಪನೆಯ ದಿನ

ರಾಮಕುಮಾರನು ಸ್ವತಃ ಅರ್ಚಕನಾಗಿ ಬಂದು ಎಲ್ಲ ಧಾರ್ಮಿಕಕ್ರಿಯೆಗಳನ್ನೂ ನಿರ್ವಹಿಸಬೇಕೆಂದು ಒತ್ತಾಯಿಸಿ ಅವನಿಗೆ ಆಮಂತ್ರಣ ನೀಡಬೇಕೆಂದು ಅವಳಿಗೆ ಹೇಳಿದನು. ರಾಮಕುಮಾರನ ಯೋಗ್ಯತೆಯ ಬಗ್ಗೆ ಮೊದಲೇ ಭರವಸೆಯಿಟ್ಟಿದ್ದ ರಾಣಿಗೆ ಈ ಸಲಹೆಯಿಂದ ಆನಂದವುಂಟಾಯಿತು. ಕೂಡಲೇ ಅವನಿಗೆ ವಿನಯಪೂರ್ವಕವಾಗಿ ಒಂದು ಪತ್ರ ಬರೆದಳು—"ನೀವು ಸೂಚಿಸಿದ ವ್ಯವಸ್ಥೆಗೆ ಅನುಸಾರವಾಗಿಯೇ ನಾನು ಶ್ರೀಜಗನ್ಮಾತೆಯ ಪ್ರತಿಷ್ಠಾಪನೆ ಮಾಡುವುದರಲ್ಲಿದ್ದೇನೆ, ಮುಂದಿನ ಸ್ನಾನಯಾತ್ರೆಯ ದಿನದಂದು ಆ ಕಾರ್ಯವನ್ನು ನೆರವೇರಿಸುವುದಕ್ಕೆ ಎಲ್ಲ ಅಣಿಯಾಗಿದೆ. ಶ್ರೀರಾಧಾಗೋವಿಂದನ ಪೂಜೆಗೆ ಅರ್ಚಕನು ಸಿಕ್ಕಿದ್ದಾನೆ. ಆದರೆ ಶ್ರೀಕಾಳಿ ಪೂಜೆಗೆ ಒಪ್ಪಿ ಪ್ರತಿಷ್ಠಾಪನೆಯನ್ನು ನೆರವೇರಿಸುವುದಕ್ಕೆ ಯಾವ ಯೋಗ್ಯ ಬ್ರಾಹ್ಮಣನೂ ಮುಂದೆ ಬರುತ್ತಿಲ್ಲ. ಆದುದರಿಂದ ನೀವೆ ಇದಕ್ಕೆ ಒಂದು ವ್ಯವಸ್ಥೆ ಮಾಡಿ ನನ್ನನ್ನು ಈ ಸಂಕಟದಿಂದ ಪಾರುಮಾಡಬೇಕು. ನೀವು ಉತ್ತಮ ಪಂಡಿತರು, ಶಾಸ್ತ್ರವನ್ನು ಬಲ್ಲವರು. ಯಾರೆಂದರೆ ಅವರಿಗೆ ಈ ಕೆಲಸವನ್ನು ನೀಡುವಂತಿಲ್ಲ. ಇದು ನಿಮಗೆ ತಿಳಿದ ವಿಷಯ."

ಮಹೇಶನೆ ಈ ಪತ್ರವನ್ನು ತೆಗೆದುಕೊಂಡು ರಾಮಕುಮಾರನ ಹತ್ತಿರ ಹೋದನು. ಅವನನ್ನು ನಾನಾ ರೀತಿಯಲ್ಲಿ ಒತ್ತಾಯಿಸಿ ಉತ್ತಮ ಅರ್ಚಕನು ದೊರೆಯುವವರೆಗೂ ಅರ್ಚಕನಾಗಿರಬೇಕೆಂದು ಒಪ್ಪಿಸಿದನು. ರಾಮಕುಮಾರನು ಹಣದ ಆಸೆಗಾಗಿ ಒಪ್ಪುವಂತಹವನಾಗಿರಲಿಲ್ಲ. ಶ್ರೀ ಜಗದಂಬೆಯ ಪ್ರತಿಷ್ಠಾಪನೆಯೇ ನಿಂತು ಹೋಗಬಾರದೆಂದು ಅವನು ದಕ್ಷಿಣೇಶ್ವರಕ್ಕೆ ಬಂದನು.* ಅನಂತರ ರಾಸಮಣಿ ಮತ್ತು

---

* ರಾಮಕುಮಾರನು ದಕ್ಷಿಣೇಶ್ವರಕ್ಕೆ ಆಗಮಿಸಿದ ಈ ಮೇಲಿನ ವಿವರಣೆ ಹೃದಯರಾಮನಿಂದ ಸಂಗ್ರಹಿಸಿದುದು. ಶ್ರೀರಾಮಕೃಷ್ಣರ ಅಣ್ಣನ ಮಗ ರಾಮಲಾಲನ ವಿವರಣೆ ಬೇರೆರೀತಿಯದು. ಅವನ ಪ್ರಕಾರ, ಕಾಮಾರಪುಕುರದ ಹತ್ತಿರವಿರುವ ದೇಶರಾ ಗ್ರಾಮದ ರಾಮಧನ ಘೋಷನು ರಾಣಿ ರಾಸಮಣಿಯ ಮನೆಯಲ್ಲಿ ಒಬ್ಬ ಅಧಿಕಾರಿಯಾಗಿದ್ದನು. ಅವನು ಅತ್ಯಂತ ದಕ್ಷ ಕೆಲಸಗಾರ. ಮುಂದೆ ಅವನು ರಾಣಿಯ ಕಾರ್ಯದರ್ಶಿಯಾದ. ಅವನಿಗೆ ರಾಮಕುಮಾರನ ಪರಿಚಯವಿತ್ತು. ಅವನು ಪ್ರತಿಷ್ಠಾಪನೆಯ ಸಮಯದಲ್ಲಿ ದಕ್ಷಿಣೇಶ್ವರಕ್ಕೆ ಬಂದು ಸಂಭಾವನೆ ಸ್ವೀಕರಿಸಬೇಕೆಂದು ರಾಮಕುಮಾರನಿಗೆ ಒಂದು ಆಮಂತ್ರಣ ಪತ್ರ ಕಳುಹಿಸಿದನು. ರಾಮಕುಮಾರನು ಜಾಂಬಜಾರಿನ ರಾಣಿಯ ಮನೆಗೆ ಹೋಗಿ ರಾಮಧನನನ್ನು ಕೇಳಿದನು: "ರಾಣಿಯು ಕೈವರ್ತಕ ಜಾತಿಯವಳು. ನಾವು ಬ್ರಾಹ್ಮಣರು. ಅವಳಿಂದ ಸಂಭಾವನೆ ಸ್ವೀಕರಿಸಿದರೆ ನನ್ನನ್ನು ಜಾತಿಯಿಂದ ಹೊರಹಾಕಬಹುದು !" ಆಗ ರಾಮಧನನು ಬ್ರಾಹ್ಮಣರ ಒಂದು ಪಟ್ಟಿಯನ್ನೇ ತೋರಿಸಿ ಹೇಳಿದನು: "ನೋಡು ಎಷ್ಟೊಂದು ಜನ ಬ್ರಾಹ್ಮಣರನ್ನು ಆಮಂತ್ರಿಸಲಾಗಿದೆ ! ಅವರೆಲ್ಲ ಬಂದು ರಾಣಿಯ ಸಂಭಾವನೆಯನ್ನು ಸ್ವೀಕರಿಸುತ್ತಾರೆ." ರಾಮಕುಮಾರನೂ ಒಪ್ಪಿ ಪ್ರತಿಷ್ಠಾಪನೆಯ ಹಿಂದಿನ ದಿನ ಶ್ರೀರಾಮಕೃಷ್ಣರೊಡನೆ ದಕ್ಷಿಣೇಶ್ವರಕ್ಕೆ ಹೋದನು. ಅಂದು ಕಾಳಿಕಾಮಂದಿರದಲ್ಲಿ ದೊಡ್ಡ ಸಂಭ್ರಮ. ಒಂದು ಕಡೆ ಜಾತ್ರೆ, ಇನ್ನೊಂದು ಕಡೆ ಕಾಳೀಕೀರ್ತನೆ, ಮತ್ತೊಂದು ಕಡೆ

ಮಥುರನಾಥ—ಇವರಿಬ್ಬರ ಕಳಕಳಿಯ ಪ್ರಾರ್ಥನೆಗೆ ಕಟ್ಟುಬಿದ್ದು ಅರ್ಚಕನ ಕೆಲಸವನ್ನು ಸ್ವೀಕರಿಸಿದನು. ಮುಂದೆ ಅದೇ ಸ್ಥಾನದಲ್ಲಿ ತನ್ನ ಜೀವಿತದ ಕೊನೆಯುವರೆಗೂ ಇದ್ದನು. ಶ್ರೀಜಗದಂಬೆಯ ಇಚ್ಛಾನುಸಾರವಾಗಿಯೇ ಎಲ್ಲವೂ ನಡೆಯುವುದು, ಇದೂ ಆಕೆಯ ಇಚ್ಛೆಯೆಂದು ಭಾವಿಸಿ ಅವನು ಅರ್ಚಕ ಪದವಿಯನ್ನು ಸ್ವೀಕರಿಸಿದ್ದಿರಬೇಕು.

12. ಅದು ಏನೇ ಆಗಲಿ, ಅನಿರೀಕ್ಷಿತ ರೀತಿಯಲ್ಲಿ ರಾಮಕುಮಾರನು ಅರ್ಚಕನಾಗಿ ದೊರೆತುದರಿಂದ ರಾಣಿಗೆ ತುಂಬ ಸಂತೋಷವಾಯಿತು. ಕ್ರಿ.ಶ. ೧೮೫೫ರ ಜ್ಯೇಷ್ಠ ಮಾಸದಲ್ಲಿ ಸ್ನಾನ ಯಾತ್ರೆಯ ದಿನದಂದು ಅತ್ಯಂತ ಸಂಭ್ರಮದಿಂದ ನವಮಂದಿರದ ಪ್ರತಿಷ್ಠಾಪನೆಯನ್ನು ನೆರವೇರಿಸಿದಳು. ಹಬ್ಬ, ಸಂತರ್ಪಣೆಯ ಶಬ್ದ ದೊಡ್ಡ ಕೋಲಾಹಲದಂತೆ ಅಂದು ಎಲ್ಲೆಲ್ಲಿಯೂ ಕೇಳಿ ಬರುತ್ತಿತ್ತಂತೆ. ರಾಣಿಯು ಮುಕ್ತ ಮನಸ್ಸಿನಿಂದ ಅತಿಥಿ-ಅಭ್ಯಾಗತರೆಲ್ಲರಿಗೂ ಅವರವರ ಮನಸ್ಸಿಗೆ ತೃಪ್ತಿಯಾಗುವಂತೆ ದಾನ ಮಾಡಿದಳು. ಕನ್ಯಾಕುಬ್ಜ, ವಾರಾಣಸಿ, ಸಿಲ್‌ಹಟ್, ಚಿಟ್ಟಗಾಂಗ್, ನವದ್ವೀಪ ಮುಂತಾದ ಸ್ಥಳಗಳಿಂದ ಅನೇಕ ಬ್ರಾಹ್ಮಣ ಪಂಡಿತರು ಅಂದು ಅಲ್ಲಿಗೆ ಆಗಮಿಸಿದ್ದರು. ಅವರೆಲ್ಲರಿಗೂ ರಾಣಿಯು ರೇಶ್ಮೆ ಪಂಚೆ, ಉತ್ತರೀಯ ಮತ್ತು ಚಿನ್ನದ ಪದಕ ಇವುಗಳನ್ನು ಕೊಟ್ಟು ಸನ್ಮಾನಿಸಿದಳು. ಮಂದಿರ ನಿರ್ಮಾಣ ಪ್ರತಿಷ್ಠಾಪನೆಗೆ ರಾಣಿಯು ೯೦೦,೦೦೦ ರೂಪಾಯಿಗಳನ್ನು ವ್ಯಯಿಸಿದಳಂತೆ. ಮತ್ತೆ ತ್ರೈಲೋಕ್ಯನಾಥ ಠಾಕೂರರಿಂದ ದಿನಾಜ್‌ಪುರ ಜಿಲ್ಲೆಯಲ್ಲಿ ಸಲಬಾರಿ ಪರಗಣವನ್ನು ೨೨೬೦೦೦ ರೂಪಾಯಿಗೆ ಖರೀದಿಸಿ ಅದನ್ನು ದೇವಾಲಯದ ಸೇವೆಗಾಗಿ ದಾನಪತ್ರ ಮಾಡಿಸಿದಳು.

13. ರಾಮಕುಮಾರನು ಆದಿನ ನೇರವಾಗಿ ಗಂಗಾತೀರಕ್ಕೆ ಹೋಗಿ ತಾನೇ ಅಡಿಗೆಮಾಡಿ ತನ್ನ ಇಷ್ಟದೇವಿಗೆ ನಿವೇದಿಸಿ ಊಟ ಮಾಡಿದನೆಂದು ಕೆಲವರು ಹೇಳುತ್ತಾರೆ. ಆದರೆ ಇದು ಸತ್ಯವೆಂದು ನಮಗನಿಸುವುದಿಲ್ಲ. ಏಕೆಂದರೆ ರಾಮಕುಮಾರನು ತಾನೇ ಸಲಹೆ ನೀಡಿ ದೇವಿಗೆ ಅನ್ನಭೋಗದ ವ್ಯವಸ್ಥೆ ಮಾಡಿದ್ದನು. ಈಗ ಅವನೇ ಅಲ್ಲಿ ಪ್ರಸಾದವನ್ನು ಸ್ವೀಕರಿಸದಿದ್ದರೆ ಅವನೇ ತಾನು ಮಾಡಿದ ವ್ಯವಸ್ಥೆಗೆ ವಿರುದ್ಧವಾಗಿ ವರ್ತಿಸಿದಂತಾಗುತ್ತದೆ ಹಾಗೂ ಇದು ಭಕ್ತಿಶಾಸ್ತ್ರ ವಿಧಿಯನ್ನೂ ಉಲ್ಲಂಘಿಸಿದಂತಾಗು

ಭಾಗವತ ಪಾಠ- ಹೀಗೆ ಎಲ್ಲೆಲ್ಲಿಯೂ ಆನಂದ ಪ್ರವಾಹ ಇಡೀ ರಾತ್ರಿ ಅದು ಮುಂದುವರಿಯಿತು. ರಾತ್ರಿಯು ಪ್ರಜ್ವಲಿಸುವ ದೀಪದ ಬೆಳಕಿನಿಂದ ಹಗಲಿನಂತೆಯೇ ಕಾಣುತ್ತಿತ್ತು. ಶ್ರೀರಾಮಕೃಷ್ಣರು ಹೇಳುತ್ತಿದ್ದರು, "ರಾಣಿಯು ರಜತಗಿರಿಯನ್ನೇ ತಂದು ಅಲ್ಲಿ ಕೂರಿಸಿರುವಳೊ ಎಂಬಂತೆ ಆಗ ಆ ದೇವಾಲಯವು ಕಂಗೊಳಿಸುತ್ತಿತ್ತು." ಈ ಆನಂದೋತ್ಸವವನ್ನು ನೋಡುವುದಕ್ಕಾಗಿ ರಾಮಕುಮಾರನು ಪ್ರತಿಷ್ಠಾಪನೆಯ ಹಿಂದಿನ ದಿನ ಕಾಳೀಮಂದಿರಕ್ಕೆ ಬಂದಿದ್ದನು. ರಾಮಧನ ಮತ್ತು ಮಹೇಶಚಂದ್ರ-ಇವರೀರ್ವರ ಒತ್ತಾಯದ ಮೇರೆಗೆ ರಾಮಕುಮಾರನು ದಕ್ಷಿಣೇಶ್ವರಕ್ಕೆ ಬಂದು ಅರ್ಚಕನಾಗಿ ಸೇರಿರಬಹುದು, ಎಂದೆನಿಸುತ್ತದೆ.)

ತ್ತದೆ. ಶ್ರೀರಾಮಕೃಷ್ಣರೂ ಈ ರೀತಿ ಹೇಳಿರುವುದನ್ನು ನಾವು ಕೇಳಿಲ್ಲ. ಆದ್ದರಿಂದ ರಾಮಕುಮಾರನು ಪೂಜೆಯ ನಂತರ ಶ್ರೀಜಗದಂಬೆಯ ಪ್ರಸಾದವನ್ನೇ ಸ್ವೀಕರಿಸಿರ ಬೇಕು ಎಂಬುದು ನಮ್ಮ ಅಭಿಪ್ರಾಯ. ಆದರೆ ಶ್ರೀರಾಮಕೃಷ್ಣರು ಮಾತ್ರ ಹಾಗೆ ಮಾಡ ಲಿಲ್ಲ. ಅವರು ಅಲ್ಲಿಯ ಆನಂದೋತ್ಸವಗಳಲ್ಲೆಲ್ಲಾ ಭಾಗವಹಿಸಿದರು. ಆದರೆ ಆಹಾರದ ವಿಷಯದಲ್ಲಿ ತಮ್ಮ ನಿಷ್ಠೆಗೆ ಅನುಸಾರವಾಗಿಯೆ ನಡೆದರು. ಸಂಜೆಯ ಹೊತ್ತಿಗೆ ಹತ್ತಿರದ ಅಂಗಡಿಯಲ್ಲಿ ಒಂದು ಪಯಿಸೆ ಮಂಡಕ್ಕಿಯನ್ನು ಕೊಂಡು ತಿಂದು ಝಾಮ ಪುಕುರಕ್ಕೆ ನಡೆದುಕೊಂಡು ಹೋಗಿ ಅಲ್ಲಿ ರಾತ್ರಿ ವಿಶ್ರಾಂತಿ ತೆಗೆದುಕೊಂಡರು.

14. ದಕ್ಷಿಣೇಶ್ವರದ ಕಾಳೀಮಂದಿರದ ಪ್ರತಿಷ್ಠಾಪನೆಯ ಬಗ್ಗೆ ಶ್ರೀರಾಮ ಕೃಷ್ಣರು ಅನೇಕ ವಿಷಯವನ್ನು ನಮಗೆ ಹೇಳುತ್ತಿದ್ದರು. ಒಮ್ಮೆ ಅವರೆಂದರು : ''ರಾಣಿ ರಾಸಮಣಿಯು ಕಾಶಿಗೆ ಯಾತ್ರೆ ಹೋಗಲು ಸಿದ್ಧವಾಗಿದ್ದಳು. ಯಾತ್ರೆಯ ದಿನ ನಿಶ್ಚಯವಾಗಿತ್ತು. ಸುಮಾರು ನೂರು ಸಣ್ಣ ದೊಡ್ಡ ದೋಣಿಗಳಲ್ಲಿ ಅಗತ್ಯವಾದ ಪದಾರ್ಥಗಳನ್ನು ತುಂಬಿಸಿದ್ದರು. ಯಾತ್ರೆ ಹೊರಡುವ ಹಿಂದಿನ ರಾತ್ರಿ ಸ್ವಪ್ನದಲ್ಲಿ ದೇವಿಯಿಂದ ಆದೇಶವನ್ನು ಪಡೆದು ಯಾತ್ರೆಯನ್ನು ರದ್ದುಪಡಿಸಿದಳು ಮತ್ತು ದೇವಾ ಲಯ ನಿರ್ಮಾಣಕ್ಕೆ ಯೋಗ್ಯ ಸ್ಥಳವನ್ನು ಹುಡುಕ ತೊಡಗಿದಳು.''

ಇನ್ನೊಂದು ಸಂದರ್ಭದಲ್ಲಿ ಅವರೆಂದರು : ''ಗಂಗೆಯ ಪಶ್ಚಿಮದಡ ವಾರಾಣಸಿಗೆ ಸಮಾನ ಎಂಬ ಪ್ರಚಲಿತ ನಂಬಿಕೆಗೆ ಅನುಸಾರವಾಗಿ ರಾಣಿಯು ಗಂಗೆಯ ಪಶ್ಚಿಮ ತೀರದ ಅನೇಕ ಕಡೆಗಳಲ್ಲಿ ಸ್ಥಳವನ್ನು ಹುಡುಕಿ ಸಿಕ್ಕದೆ ನಿರಾಶಳಾಗಿದ್ದಳು. ರಾಣಿಯು ಎಷ್ಟು ಬೇಕಾದರೂ ಹಣ ಕೊಡಲು ಸಿದ್ಧಳಿದ್ದಳು. ಆದರೂ ಅಲ್ಲಿಯ ಜಮೀಂದಾರರು ಗಳು ಇನ್ನೊಬ್ಬರ ಭೂಮಿಯಲ್ಲಿ ಇನ್ನೊಬ್ಬರು ಕಟ್ಟಿಸಿದ ಘಟ್ಟದ ಮೂಲಕ ತಾವು ಗಂಗೆಗೆ ಹೋಗುವುದು ಸರಿಯಲ್ಲವೆಂದು ತಮ್ಮ ಭೂಮಿಯನ್ನು ಇತರರಿಗೆ ಮಾರಲು ಸಿದ್ಧರಿರಲಿಲ್ಲ. ಅನಿವಾರ್ಯವಾಗಿ ಗಂಗಾನದಿಯ ಪೂರ್ವತೀರದ ಈ ಜಾಗವನ್ನು ರಾಸಮಣಿಯು ಖರೀದಿಸಿದಳು.''

ಇನ್ನೂ ಅವರು ಹೇಳುತ್ತಿದ್ದರು : ''ರಾಸಮಣಿಯು ಆರಿಸಿದ ಸ್ಥಳದ ಒಂದು ಭಾಗ ಒಬ್ಬ ಆಂಗ್ಲ ವ್ಯಕ್ತಿಗೆ ಸೇರಿತ್ತು. ಉಳಿದ ಭಾಗದಲ್ಲಿ ಮುಸಲ್ಮಾನರ ಒಂದು ಗೋರಿ ಇತ್ತು. ಇದು ಒಬ್ಬ ಮುಸ್ಲಿಂ ಸಂತನಿಗೆ ಸಂಬಂಧಪಟ್ಟಿತ್ತು. ಆ ಭೂಮಿ ಕೂರ್ಮದ ಬೆನ್ನಿನ ಆಕಾರವನ್ನು ಪಡೆದಿತ್ತು. ಹೀಗೆ ಕೂರ್ಮಪೃಷ್ಠಾಕಾರದ ಶ್ಮಶಾನ ಭೂಮಿಯೇ ಶಕ್ತಿಯ ಸ್ಥಾನ, ಮತ್ತು ಸಾಧನೆಗೆ ಪ್ರಶಸ್ತವಾದ ಸ್ಥಳ ಎಂದು ತಂತ್ರದಲ್ಲಿ ಹೇಳಿದೆ. ಆದ್ದರಿಂದ ದೈವೇಚ್ಛೆಯಿಂದಲೇ ರಾಣಿಯು ಆ ಸ್ಥಳವನ್ನು ಆರಿಸಿದ್ದಳು.''

ಶಕ್ತಿಪ್ರತಿಷ್ಠಾಪನೆಗೆ ಶಾಸ್ತ್ರದಲ್ಲಿ ಹೇಳಿರುವ ಉತ್ತಮವಾದ ದಿನದಲ್ಲಿ ಮಂದಿರ ಪ್ರತಿಷ್ಠಾಪನೆ ಮಾಡದೆ ವಿಷ್ಣು ಸಂಬಂಧವಾದ ಸ್ನಾನಯಾತ್ರೆಯ ದಿನದಂದು ಏಕೆ ರಾಣಿಯು ಮಂದಿರ ಪ್ರತಿಷ್ಠಾಪನೆ ಮಾಡಿದಳು?—ಈ ವಿಷಯವನ್ನು ಕುರಿತು ಅವರು ಹೇಳುತ್ತಿದ್ದರು: ''ದೇವೀ ಮೂರ್ತಿಯ ನಿರ್ಮಾಣ ಪ್ರಾರಂಭವಾದಂದಿನಿಂದ ರಾಣಿಯು

ಶಾಸ್ತ್ರಾನುಸಾರವಾಗಿ ಕಠೋರ ತಪಸ್ಸನ್ನು ಆಚರಿಸತೊಡಗಿದಳು. ತ್ರಿಸಂಧಿಯಲ್ಲಿ ಸ್ನಾನ ಮಾಡುತ್ತಿದ್ದಳು, ಹವಿಷ್ಯಾನ್ನ ಉಣ್ಣುತ್ತಿದ್ದಳು, ನೆಲದಮೇಲೆ ಮಲಗುತ್ತಿದ್ದಳು ಮತ್ತು ಸಾಧ್ಯವಾದಷ್ಟು ಜಪ ಪೂಜಾದಿಗಳನ್ನು ಮಾಡುತ್ತಿದ್ದಳು. ಮಂದಿರ ಮತ್ತು ಮೂರ್ತಿ ನಿರ್ಮಾಣವಾದ ಮೇಲೆ ಪ್ರತಿಷ್ಠಾಪನೆಗೆ ಶುಭದಿನಕ್ಕಾಗಿ ಕಾಯುತ್ತಿದ್ದಳು. ಮೂರ್ತಿಯು ಎಲ್ಲಿ ಭಗ್ನವಾಗುವುದೊ ಎಂಬ ಶಂಕೆಯಿಂದ ಅದನ್ನು ಒಂದು ಪೆಟ್ಟಿಗೆಯಲ್ಲಿ ಇರಿಸಲಾಯಿತು. ಆದರೆ ಏನೋ ಕಾರಣದಿಂದ ಮೂರ್ತಿಯು ಬೆವರು ಸುರಿಸತೊಡಗಿತು. ಒಂದುದಿನ ಕನಸಿನಲ್ಲಿ ಅವಳಿಗೆ ಆದೇಶವಾಯಿತು: "ನನ್ನನ್ನು ಎಷ್ಟು ಕಾಲ ಈ ರೀತಿ ಬಂಧಿಸಿ ಇಡುತ್ತೀಯೆ ? ನನಗೆ ತುಂಬ ಕಷ್ಟವಾಗುತ್ತಿದೆ. ಆದಷ್ಟು ಬೇಗ ನನ್ನನ್ನು ಪ್ರತಿಷ್ಠಾಪಿಸು." ರಾಣಿಯು ಕೂಡಲೆ ಶುಭದಿನವನ್ನು ಹುಡುಕತೊಡಗಿದಳು. ಸ್ನಾನಯಾತ್ರೆಗೆ ಮುಂಚೆ ಯಾವ ಶುಭದಿನವೂ ಇಲ್ಲದಿದ್ದುದರಿಂದ ಆದೇ ದಿನ ಪ್ರತಿಷ್ಠಾಪನೆ ಮಾಡುವುದೆಂದು ನಿಶ್ಚಯಿಸಿದಳು."

ಇಷ್ಟೇ ಅಲ್ಲದೆ, ದೇವಿಗೆ ಅನ್ನಭೋಗದ ವ್ಯವಸ್ಥೆಮಾಡುವುದು, ಅದಕ್ಕಾಗಿ ದೇವಾಲಯವನ್ನು ರಾಣಿಯು ತನ್ನ ಗುರುವಿನ ಹೆಸರಿನಲ್ಲಿ ಪ್ರತಿಷ್ಠಾಪಿಸುವುದು—ಈ ಎಲ್ಲ ವಿಷಯಗಳನ್ನೂ ನಾವು ಶ್ರೀರಾಮಕೃಷ್ಣರಿಂದಲೇ ಕೇಳಿ ತಿಳಿದುಕೊಂಡಿರುವುದು; ಮಂದಿರ ಪ್ರತಿಷ್ಠಾಪನೆಯ ವಿಷಯದಲ್ಲಿ ರಾಮಕುಮಾರನು ಸಲಹೆ ನೀಡಿದುದು ಮತ್ತು ಆ ಮಂದಿರದಲ್ಲಿ ಅರ್ಚಕನಾಗಿ ಸೇರಿದುದು ಸರಿಯೆಂದು ಶ್ರೀರಾಮಕೃಷ್ಣರಿಗೆ ಸಮರ್ಥಿಸಿ ತಿಳಿಸಲು ರಾಮಕುಮಾರನು ಧರ್ಮಪತ್ರದ ಆಶ್ರಯವನ್ನು ಪಡೆದುದು*—ಈ ಎರಡು ವಿಷಯಗಳನ್ನು ಮಾತ್ರ ನಾವು ಶ್ರೀರಾಮಕೃಷ್ಣರ ಸೋದರಳಿಯ ಹೃದಯರಾಮನಿಂದ ತಿಳಿದುದು.

15. ದಕ್ಷಿಣೇಶ್ವರದಲ್ಲಿ ಶಾಶ್ವತವಾಗಿ ಅರ್ಚಕನಾಗಿ ಉಳಿಯುವ ಇಚ್ಛೆ ರಾಮಕುಮಾರನಿಗೆ ಇರಲಿಲ್ಲ ಎಂಬುದು ಶ್ರೀರಾಮಕೃಷ್ಣರ ಆ ಸಮಯದ ವರ್ತನೆಯಿಂದ ತಿಳಿದು ಬರುತ್ತದೆ. ಸರಳ ಮನಸ್ಸಿನ ರಾಮಕುಮಾರನಿಗೆ ಇದು ಅರ್ಥವಾಗಿರಲಿಲ್ಲ. ಅನ್ನಭೋಗದ ವ್ಯವಸ್ಥೆಮಾಡಿ, ಅನಂತರ ಪ್ರತಿಷ್ಠಾಪನೆಯ ದಿನ ತಾನೇ ಸ್ವತಃ ಆ

---

* ಹಳ್ಳಿಗಳಲ್ಲಿ ಒಂದು ಪದ್ಧತಿಯಿತ್ತು—ವಿಚಾರದ ಮೂಲಕ ಬಗೆಹರಿಸಲಾಗದ ವಿಷಯವನ್ನು ಧರ್ಮಪತ್ರದ ಮೂಲಕ ಬಗೆಹರಿಸುತ್ತಿದ್ದರು. ಎರಡು ಬಿಲ್ವಪತ್ರೆ ಅಥವಾ ಕಾಗದದ ತುಂಡಿನ ಮೇಲೆ ಪ್ರತ್ಯೇಕವಾಗಿ 'ಸರಿ' ಮತ್ತು 'ತಪ್ಪು' ಎಂದು ಬರೆದು ಒಂದು ಖಾಲಿಪಾತ್ರೆಯಲ್ಲಿ ಇಡುತ್ತಿದ್ದರು. ಒಂದು ಮಗು ಯಾವುದಾದರೊಂದು ಎಲೆಯನ್ನು ಅಥವಾ ಕಾಗದವನ್ನು ಆರಿಸಿ ತೆಗೆಯುತ್ತಿತ್ತು. 'ಸರಿ' ಎಂದು ಬಂದರೆ ತಾನು ಮಾಡುತ್ತಿರುವುದು ಭಗವದಿಚ್ಛೆಗೆ ಅನುಸಾರವಾಗಿದೆ ಎಂದರ್ಥ ಮತ್ತು 'ತಪ್ಪು' ಎಂದು ಬಂದರೆ ಭಗವದಿಚ್ಛೆಗೆ ವಿರುದ್ಧವಾದುದು ಎಂದರ್ಥ. ಎಷ್ಟೋ ಜಗಳಗಳ ಪರಿಹಾರಕ್ಕಾಗಿ ಮತ್ತು ಆಸ್ತಿ ವಿಭಜನೆಗಾಗಿ ಈ ವಿಧಾನವನ್ನು ಅನುಸರಿಸುತ್ತಿದ್ದರು.

ಕಾರ್ಯವನ್ನು ನೆರವೇರಿಸಿ ಝಾಮಾಪುಕುರಕ್ಕೆ ಹಿಂದಿರುಗುವುದೆಂದು ಅವನು ಭಾವಿಸಿದ್ದ. ದೇವಿಗೆ ಅನ್ನಭೋಗವನ್ನು ನಿವೇದಿಸುವಾಗ ಅವನ ಮನಸ್ಸಿನಲ್ಲಿ ಸ್ವಲ್ಪವೂ ಅಳುಕಿರಲಿಲ್ಲ; ತಾನು ತಪ್ಪು ಮಾಡುತ್ತಿದ್ದೇನೆ ಅಥವಾ ಇದು ಶಾಸ್ತ್ರಕ್ಕೆ ವಿರುದ್ಧ ಎಂಬ ಭಾವನೆ ಅವನಿಗಿರಲೇ ಇಲ್ಲ. ತನ್ನ ತಮ್ಮನ ಜತೆ ಅವನು ನಡೆದುಕೊಂಡ ರೀತಿಯಿಂದ ಇದು ಸ್ಪಷ್ಟವಾಗುತ್ತದೆ.


ಪ್ರತಿಷ್ಠಾಪನೆಯ ಮರುದಿನ ಬೆಳಗ್ಗೆ ಶ್ರೀರಾಮಕೃಷ್ಣರು ದಕ್ಷಿಣೇಶ್ವರಕ್ಕೆ ಹೋದರು. ಅಣ್ಣನ ವಿಷಯವನ್ನು ತಿಳಿಯುವುದು ಮತ್ತು ಪ್ರತಿಷ್ಠಾಪನೆಯ ಅಂಗವಾಗಿ ಇನ್ನೇನು ನಡೆಯುತ್ತಿದೆ ಎಂಬುದನ್ನು ನೋಡುವುದು ಅವರ ಉದ್ದೇಶವಾಗಿತ್ತು. ಅಲ್ಲಿಗೆ ಹೋದಮೇಲೆ ಅವರಿಗೆ ತಿಳಿಯಿತು ಇಂದೂ ಕೂಡ ರಾಮಕುಮಾರನು ಝಾಮಾಪುಕುರಕ್ಕೆ ಹಿಂದಿರುವುಗುದಿಲ್ಲ ಎಂದು. ಅಂದು ಅಲ್ಲೇ ಇರಲು ರಾಮಕುಮಾರನು ಎಷ್ಟೇ ಹೇಳಿದರೂ ಕೇಳದೆ ಶ್ರೀರಾಮಕೃಷ್ಣರು ಊಟದ ಸಮಯಕ್ಕೆ ಮತ್ತೆ ಝಾಮಾಪುಕುರಕ್ಕೆ ಹಿಂದಿರುಗಿದರು. ಇದಾದನಂತರ ಐದಾರು ದಿನ ಶ್ರೀರಾಮಕೃಷ್ಣರು ಮತ್ತೆ ದಕ್ಷಿಣೇಶ್ವರಕ್ಕೆ ಹೋಗಲಿಲ್ಲ. ದಕ್ಷಿಣೇಶ್ವರದಲ್ಲಿ ಎಲ್ಲ ಕಾರ್ಯಗಳು ಮುಗಿದನಂತರ ಅಣ್ಣನು ಹಿಂದಿರುಗುವನೆಂದು ಭಾವಿಸಿದ್ದರು. ಆದರೆ ಒಂದು ವಾರ ಕಳೆದರೂ ಅಣ್ಣನು ಹಿಂದಿರುಗದಿರಲು ಅವರ ಮನಸ್ಸಿನಲ್ಲಿ ಏನೇನೊ ಆಲೋಚನೆಗಳು ಉದಿಸಿದವು. ವಿಷಯವನ್ನು ತಿಳಿದುಕೊಂಡುಬರಲು ಮತ್ತೆ ದಕ್ಷಿಣೇಶ್ವರಕ್ಕೆ ಹೋದರು. ಆಗ ಅವರಿಗೆ ತಿಳಿಯಿತು ರಾಣಿಯ ಒತ್ತಾಯಕ್ಕೆ ಕಟ್ಟುಬಿದ್ದು ಅಣ್ಣನು ಅಲ್ಲಿಯೇ ಅರ್ಚಕನಾಗಿ ಉಳಿದಿರುವನೆಂದು. ಆಗ ಶ್ರೀರಾಮಕೃಷ್ಣರ ಮನಸ್ಸಿನಲ್ಲಿ ಸಂದೇಹ ಉದಯಿಸಿತು. ತಂದೆಯು ಶೂದ್ರರ ಮನೆಯಲ್ಲಿ ಧರ್ಮವಿಧಿಗಳನ್ನು ಆಚರಿಸುತ್ತಿರಲಿಲ್ಲ, ಅಷ್ಟೇ ಅಲ್ಲ ಅವರಿಂದ ಕಾಣಿಕೆಯನ್ನೂ ಸ್ವೀಕರಿಸುತ್ತಿರಲಿಲ್ಲ. ಈ ವಿಷಯವನ್ನು ಅಣ್ಣನಿಗೆ ನೆನಪಿಸಿ ಅವನನ್ನು ಆ ಕಾರ್ಯದಿಂದ ವಿಮುಖಗೊಳಿಸಲು ಪ್ರಯತ್ನಿಸಿದರು. ರಾಮಕುಮಾರನು ಶಾಸ್ತ್ರ ಮತ್ತು ಯುಕ್ತಿಯ ಆಧಾರದ ಮೇಲೆ ತನ್ನ ಕ್ರಿಯೆಯನ್ನು ಸಮರ್ಥಿಸಲು ಪ್ರಯತ್ನಿಸಿದನು. ಇದಾವುದಕ್ಕೂ ಶ್ರೀರಾಮಕೃಷ್ಣರು ಬಗ್ಗದಿರಲು ಕೊನೆಗೆ ಈ ಧರ್ಮಪತ್ರದ ವಿಧಾನವನ್ನು ಆಶ್ರಯಿಸಿದನು. ರಾಮಕುಮಾರನು ಅರ್ಚಕ ಪದವಿಯನ್ನು ಸ್ವೀಕರಿಸಿರುವುದು ನಿಂದಿತ ಕರ್ಮವಲ್ಲ, ಆದರಿಂದ ಎಲ್ಲರಿಗೂ ಮಂಗಳವುಂಟಾಗುವುದು—ಎಂದು ಧರ್ಮಪತ್ರವು ನಿರ್ಣಯಿಸಿತು.

16. ಧರ್ಮಪತ್ರದ ನಿರ್ಣಯದಿಂದ ಶ್ರೀರಾಮಕೃಷ್ಣರ ಮನಸ್ಸಿಗೆ ಸಮಾಧಾನವುಂಟಾದರೂ, ಅವರಿಗೆ ಇನ್ನೊಂದು ಚಿಂತೆಯುಂಟಾಯಿತು. ಈಗ ಝಾಮಾಪುಕುರದ ಸಂಸ್ಕೃತ ಶಾಲೆ ನಿಂತಂತೆಯೆ, ತಾವು ಮುಂದೇನು ಮಾಡುವುದು?—ಎಂದು ಚಿಂತಿಸತೊಡಗಿದರು. ಅಂದು ಅವರು ಝಾಮಾಪುಕುರಕ್ಕೆ ಹೋಗಲಿಲ್ಲ. ರಾಮಕುಮಾರನು ಮಂದಿರದ ಪ್ರಸಾದ ಸ್ವೀಕರಿಸಲು ಹೇಳಿದರೂ ಅವರು ಅದಕ್ಕೆ ಒಪ್ಪಲಿಲ್ಲ. ರಾಮಕುಮಾರನು ಅನೇಕ ರೀತಿಯಲ್ಲಿ ಅವರಿಗೆ ತಿಳಿಸಿ ಹೇಳಿದನು: "ನೋಡು, ಇದು

ದೇವಾಲಯ, ಗಂಗಾಜಲದಲ್ಲಿ ಅಡಿಗೆ ಮಾಡಿದ್ದು, ಮತ್ತೆ ಆಹಾರ ಶ್ರೀಜಗದಂಬೆಗೆ ನಿವೇದಿಸಲ್ಪಟ್ಟದ್ದು. ಇದನ್ನು ಉಂಡರೆ ಯಾವ ದೋಷವೂ ಇಲ್ಲ.'' ಆದರೆ ಶ್ರೀರಾಮಕೃಷ್ಣರಿಗೆ ಇದಾವುದೂ ಒಪ್ಪಿಗೆಯಾಗಲಿಲ್ಲ. ಆಗ ರಾಮಕುಮಾರನು ಹೇಳಿದನು : ''ಹಾಗಾದರೆ ನೇರವಾಗಿ ಪಂಚವಟಿಗೆ ಹೋಗಿ ಗಂಗಾ ತೀರದಲ್ಲಿ ನೀನೇ ಅಡಿಗೆಮಾಡಿ ಊಟಮಾಡು. ಗಂಗಾ ತೀರದಲ್ಲಿರುವ ಪ್ರತಿಯೊಂದು ವಸ್ತುವೂ ಪವಿತ್ರ. ಇದನ್ನು ನೀನು ಒಪ್ಪುತ್ತೀಯಲ್ಲವೆ ?'' ಶ್ರೀರಾಮಕೃಷ್ಣರ ದೃಢವಾದ ಆಹಾರ ನಿಷ್ಠೆಯು ಈಗ ಅವರ ಗಂಗೆಯ ಮೇಲಿನ ಭಕ್ತಿಯ ಮುಂದೆ ಪರಾಜಿತವಾಯಿತು. ಶಾಸ್ತ್ರವೇತ್ತನಾದ ರಾಮಕುಮಾರನ ಯುಕ್ತಿಯ ಸಹಾಯದಿಂದ ಸಾಧಿಸ ಲಾಗದ ಕಾರ್ಯವನ್ನು ಭಕ್ತಿ ವಿಶ್ವಾಸಗಳು ಸಾಧಿಸಿದುವು. ಶ್ರೀರಾಮಕೃಷ್ಣರು ಆ ಮಾತಿಗೆ ಒಪ್ಪಿ ಅದೇ ಪ್ರಕಾರವಾಗಿ ಊಟವನ್ನು ಮಾಡುತ್ತ ದಕ್ಷಿಣೇಶ್ವರದಲ್ಲಿ ಇರ ತೊಡಗಿದರು.

17. ತಮ್ಮ ಜೀವನದುದ್ದಕ್ಕೂ ಶ್ರೀರಾಮಕೃಷ್ಣರಿಗೆ ಗಂಗೆಯ ಮೇಲೆ ಆಳ ವಾದ ಭಕ್ತಿಯಿದ್ದುದನ್ನು ನಾವು ಕಾಣುತ್ತೇವೆ. ನಿತ್ಯ ಶುದ್ಧ ಬ್ರಹ್ಮನೇ ಜೀವನನ್ನು ಪವಿತ್ರಗೊಳಿಸಲು ನೀರಿನ ರೂಪವನ್ನು ಪಡೆದು ಗಂಗಾನದಿಯಾಗಿ ಇಳಿದು ಬಂದಿರು ವನು—ಎಂದು ಅವರು ಹೇಳುತ್ತಿದ್ದರು. ''ನಿಜವಾಗಿಯೂ ಗಂಗೆ ಬ್ರಹ್ಮವಾರಿ ! ಗಂಗಾ ತೀರದಲ್ಲಿ ವಾಸಮಾಡಿದರೆ ದೇವತೆಗಳಿಗೆ ಸಮಾನವಾದ ಅಂತಃಕರಣವುಂಟಾಗಿ ಧರ್ಮಬುದ್ಧಿ ಸ್ವಾಭಾವಿಕವಾಗಿಯೇ ಅಂಕುರಿಸುವುದು. ಗಂಗಾಜಲಕಣವನ್ನು ಹೊತ್ತ ಗಾಳಿ ಎಷ್ಟು ದೂರ ಬೀಸುವುದೊ ಅದೆಲ್ಲ ಪುಣ್ಯಭೂಮಿ. ಆ ಭೂಮಿಯಲ್ಲಿ ವಾಸಿಸು ವವರು ಸದಾಚಾರಸಂಪನ್ನರೂ, ದೈವಭಕ್ತಿಯುಳ್ಳವರೂ, ದಾನಧರ್ಮದಲ್ಲಿ ನಿಷ್ಠೆ ಯುಳ್ಳವರೂ ಆಗಿರುತ್ತಾರೆ.'' ಇವು ಗಂಗೆಯ ಬಗ್ಗೆ ಶ್ರೀರಾಮಕೃಷ್ಣರ ಭಕ್ತಿಪೂರ್ಣ ವಾದ ನುಡಿಗಳು. ಯಾರಾದರೂ ಪ್ರಾಪಂಚಿಕ ವಿಷಯವನ್ನು ಮಾತನಾಡಿದರೆ, ಅಥವಾ ಪ್ರಾಪಂಚಿಕರ ಸಹವಾಸ ಮಾಡಿಬಂದಿದ್ದರೆ ''ಸ್ವಲ್ಪ ಗಂಗಾಜಲವನ್ನು ಕುಡಿದು ಬಾ'' ಎಂದು ಅವರು ಹೇಳುತ್ತಿದ್ದರು. ಭಕ್ತಿವಿಹೀನರಾದ ವಿಷಯಾಸಕ್ತರು ಬಂದು ಎಲ್ಲಿ ಯಾದರೂ ಕುಳಿತು ತಮ್ಮ ವಿಷಯ ಚಿಂತನೆಯ ಮೂಲಕ ಆ ಜಾಗವನ್ನು ಕಲುಷಿತ ಗೊಳಿಸಿದರೆ ಅಲ್ಲಿ ಗಂಗಾಜಲವನ್ನು ಸಿಂಪಡಿಸುತ್ತಿದ್ದರು. ಗಂಗಾ ನೀರಿನಲ್ಲಿ ಯಾರಾ ದರು ಶೌಚಾದಿಗಳನ್ನು ಮಾಡಿದರೆ ಅವರಿಗೆ ತುಂಬ ವ್ಯಥೆಯಾಗುತ್ತಿತ್ತು.

18. ಮನೋರಮವಾದ ಭಾಗೀರಥೀ ತೀರ, ಪಕ್ಷಿಗಳ ಚಿಲಿಪಿಲಿ ನಾದ, ಪಂಚ ವಟಿಯಿಂದ ಶೋಭಿಸುವ ಉದ್ಯಾನವನ, ಬೃಹತ್ತಾದ ಸುಂದರವಾದ ದೇವಾಲಯ, ಭಕ್ತಿವಂತ ಸಾಧಕರಿಂದ ನೆರವೇರಿಸಲ್ಪಡುವ ದೇವಸೇವೆ, ತಂದೆಗೆ ಸಮಾನನಾದ ಅಣ್ಣನ ನಿಷ್ಕಪಟ ಪ್ರೀತಿ, ಮತ್ತು ಪರಮಭಕ್ತರಾದ ರಾಣಿ ರಾಸಮಣಿ ಹಾಗೂ ಅಳಿಯ ಮಥುರನಾಥರ ಶ್ರದ್ಧಾಭಕ್ತಿ—ಇವೆಲ್ಲದರ ಪ್ರಭಾವದಿಂದ ದಕ್ಷಿಣೇಶ್ವರವು ಶ್ರೀರಾಮ ಕೃಷ್ಣರಿಗೆ ಕಾಮಾರಪುಕುರದ ಮನೆಯಂತೆಯೆ ಅತ್ಯಂತ ನಿಕಟವಾಯಿತು. ಅವರು



ಕಾಮಾರಪುಕುರ



ದಕ್ಷಿಣೇಶ್ವರ

ಆನಂದದಿಂದ ಮತ್ತು ನಿಶ್ಚಿಂತೆಯಿಂದ ಅಲ್ಲಿ ವಾಸಿಸತೊಡಗಿದರು. ಆದರೆ ಸ್ವತಃ ಅಡಿಗೆಮಾಡಿ ಊಟ ಮಾಡುವುದನ್ನು ಸ್ವಲ್ಪಕಾಲ ಮುಂದುವರಿಸಿದರು.

19. ಆಹಾರದ ವಿಷಯದಲ್ಲಿ ಶ್ರೀರಾಮಕೃಷ್ಣರ ನಿಷ್ಠೆಯನ್ನು ನೋಡಿದಾಗ ಒಂದು ಸಂದೇಹ ಮನಸ್ಸಿಗೆ ಬರಬಹುದು : ನಮ್ಮಂತಹ ಸಾಮಾನ್ಯರಲ್ಲಿ ಈ ರೀತಿಯ ಮಡಿವಂತಿಕೆ ಸ್ವಾಭಾವಿಕ, ಆದರೆ ಶ್ರೀರಾಮಕೃಷ್ಣರಂಥವರಲ್ಲಿಯೂ ಇದನ್ನು ಕಾಣು ವುದರಿಂದ ಇಂಥ ಮಡಿವಂತಿಕೆ ಇಲ್ಲದಿದ್ದರೆ ಸಾಧನೆಯ ಗುರಿಯನ್ನು ಮುಟ್ಟಲಾಗುವು ದಿಲ್ಲವೆ ? ಮಡಿವಂತಿಕೆ ಮತ್ತು ಏಕನಿಷ್ಠೆ—ಇವು ಒಂದೇ ಅಲ್ಲ. ಮಡಿವಂತಿಕೆ ಅಹಂ ಕಾರದಿಂದ ಹುಟ್ಟುವುದು. ಮಾನವನು ತಾನು ಏನು ತಿಳಿಯುತ್ತಾನೊ ಮತ್ತು ಮಾಡು ತ್ತಾನೊ ಅದನ್ನೇ ಸರ್ವೋಚ್ಚವೆಂದು ಭಾವಿಸಿ ತನ್ನ ಸುತ್ತ ಒಂದು ಪರಿಧಿಯನ್ನು ಹಾಕಿ ಕೊಂಡು ಅದರೊಳಗೆ ನಿಶ್ಚಿಂತನಾಗಿ ಇದ್ದು ಬಿಡುತ್ತಾನೆ. ಇದು ಮಡಿವಂತಿಕೆ. ಶಾಸ್ತ್ರ ಮತ್ತು ಮಹಾಪುರುಷರ ಮೇಲಿನ ವಿಶ್ವಾಸದಿಂದ ಜನಿಸುವುದೇ ನಿಷ್ಠೆ. ಇದು ಉದಯ ವಾದಾಗ ವ್ಯಕ್ತಿಯು ತನ್ನ ಅಹಂಕಾರವನ್ನು ಮರ್ದಿಸುತ್ತ ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿದು ಹೋಗುವನು. ನಿಷ್ಠೆಯು ಉದಯಿಸಿದ ಪ್ರಾರಂಭಾವಸ್ಥೆಯಲ್ಲಿ ವ್ಯಕ್ತಿಯು ಸ್ವಲ್ಪಕಾಲ ಮಡಿವಂತನಾಗಿ ಕಾಣಬಹುದು. ಆದರೆ ಇದರ ಸಹಾಯದಿಂದ ಅವನು ಸಾಧನ ಪಥದಲ್ಲಿ ಮುಂದುವರಿದು ಉನ್ನತ ಆಧ್ಯಾತ್ಮಿಕ ಬೆಳಕನ್ನು ಕಾಣುತ್ತಾನೆ. ಕ್ರಮೇಣ ಅವನ ಸಂಕುಚಿತ ಮನೋಭಾವ ಹೊರಟು ಹೋಗುತ್ತದೆ. ಆದ್ದರಿಂದ ಆಧ್ಯಾತ್ಮಿಕ ಜೀವನದಲ್ಲಿ ನಿಷ್ಠೆಯ ಪ್ರಯೋಜನ ಅನಿವಾರ್ಯ. ಶ್ರೀರಾಮಕೃಷ್ಣರ ಜೀವನದಲ್ಲಿ ಕಂಡುಬರುವ ಈ ನಿಷ್ಠೆಯನ್ನು ಗಮನಿಸಿದಾಗ ನಮಗೆ ಸ್ಪಷ್ಟವಾಗುವುದೇ ನೆಂದರೆ : ಶಾಸ್ತ್ರವಿಧಿಯಲ್ಲಿ ವಿಶ್ವಾಸವಿರಿಸಿ ನಾವು ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿ ದರೆ ಆಗ ಮಾತ್ರ ಯಥಾರ್ಥವಾದ ಉದಾರತೆ ನಮ್ಮಲ್ಲುಂಟಾಗಿ ಪರಮ ಶಾಂತಿಯನ್ನು ಪಡೆಯಬಹುದು, ಇಲ್ಲದಿದ್ದರೆ ಇಲ್ಲ. ಶ್ರೀರಾಮಕೃಷ್ಣರು ಹೇಳುವಂತೆ ಮುಳ್ಳಿನಿಂದಲೇ ಮುಳ್ಳನ್ನು ತೆಗೆಯಬೇಕು. ಹಾಗೆಯೇ ನಿಷ್ಠೆಯ ಮೂಲಕವೇ ನಾವು ಸತ್ಯದ ಉದಾರತೆ ಯನ್ನು ತಲಪಬೇಕು. ಶಾಸನ ನಿಯಮ ಇವುಗಳನ್ನು ಅನುಸರಿಸುತ್ತಲೇ ನಾವು ಶಾಸನಾತೀತ ನಿಯಮಾತೀತ ಅವಸ್ಥೆಯನ್ನು ಮುಟ್ಟಬೇಕು.

ಯೌವನದ ಪ್ರಾರಂಭಾವಸ್ಥೆಯಲ್ಲಿ ಶ್ರೀರಾಮಕೃಷ್ಣರ ಈ ರೀತಿಯ ಅಪರಿಪೂರ್ಣತೆ ಗಳನ್ನು ಕಂಡು ಅವರ ಅವತಾರತ್ವದಲ್ಲಿ ಸಂದೇಹ ಪಡುವವರಿದ್ದಾರೆ. ಅವರನ್ನು ಅವತಾರ ವೆಂದು ನೀವು ಪರಿಗಣಿಸಬೇಕಿದ್ದರೆ ಅವರ ಜೀವನದಲ್ಲಿ ಕಂಡುಬರುವ ಅಪರಿಪೂರ್ಣತೆ ಗಳನ್ನು ಉಲ್ಲೇಖಿಸದಿದ್ದರೇ ಒಳ್ಳೆಯದು ಎಂದು ಅವರು ವಾದಿಸಬಹುದು. ಅದಕ್ಕೆ ನಮ್ಮ ಉತ್ತರವೇನೆಂದರೆ : ಈಶ್ವರನು ಅವತಾರವೆತ್ತುವುದು ಸಾಧ್ಯವೇ ಇಲ್ಲವೆಂದು ನಾವೂ ಭಾವಿಸಿದ್ದುಂಟು. ಶ್ರೀರಾಮಕೃಷ್ಣರು ಅಹೇತುಕ ಕೃಪೆಯಿಂದ ಇದು ಸಾಧ್ಯ ಎಂಬುದನ್ನು ನಮಗೆ ತಿಳಿಸಿಕೊಟ್ಟರು. ಆಗ ನಮಗೆ ತಿಳಿಯಿತು—ಮಾನವ ದೇಹವನ್ನು ಧರಿಸಿದ ಮೇಲೆ ಮಾನವ ದೇಹದ ಅಪರಿಪೂರ್ಣತೆಗಳು ಇರುವಂತೆಯೇ ಮಾನವ

ಮನಸ್ಸಿನ ಕೆಲವು ದೋಷಗಳೂ ಅವತಾರ ಪುರುಷರಲ್ಲಿ ಉಳಿಯುವುವು. ಶ್ರೀರಾಮಕೃಷ್ಣರು ಹೇಳುತ್ತಿದ್ದರು: "ಶುದ್ಧ ಚಿನ್ನದಿಂದ ಆಭರಣ ಮಾಡುವುದಕ್ಕೆ ಆಗದೆ ಇರುವಂತೆ, ರಜಸ್ಸು ತಮಸ್ಸುಗಳಿಲ್ಲದ ಶುದ್ಧ ಸತ್ವದಿಂದ ದೇಹ ಮನಸ್ಸುಗಳು ಉಂಟಾಗುವುದು ಸಾಧ್ಯವಿಲ್ಲ." ಅವರು ತಮ್ಮ ಜೀವನದ ಎಲ್ಲ ಅಸಂಪೂರ್ಣತೆಗಳನ್ನೂ ನಿಃಸಂಕೋಚವಾಗಿ ನಮಗೆ ಹೇಳುತ್ತಿದ್ದರು. ಹಾಗೆಯೇ ಅವರು ಮತ್ತೆ ಮತ್ತೆ ನಮಗೆ ಸ್ಪಷ್ಟವಾಗಿ ಹೇಳಿರುವರು: "ಹಿಂದಿನ ಯುಗಗಳಲ್ಲಿ ಯಾರು ರಾಮ ಕೃಷ್ಣಾದಿ ರೂಪಗಳಲ್ಲಿ ಅವತರಿಸಿರುವನೊ ಅವನೇ ಇಂದು ಈ ದೇಹದೊಳಗೆ ನೆಲಸಿರುವನು. ಆದರೆ ಈ ಬಾರಿ ಗುಪ್ತ ರೀತಿಯಲ್ಲಿ ಬಂದಿರುವನು—ರಾಜನು ಛದ್ಮವೇಷದಲ್ಲಿ ಪಟ್ಟಣವನ್ನು ನೋಡಲು ಹೋಗುವಂತೆ." ಆದ್ದರಿಂದ ಶ್ರೀರಾಮಕೃಷ್ಣರ ಬಗ್ಗೆ ನಮಗೆ ತಿಳಿದಿರುವುದನ್ನೆಲ್ಲ ಹೇಳಿಬಿಡುತ್ತೇವೆ. ಅದರಲ್ಲಿ ಎಷ್ಟು ಯುಕ್ತಿಯುಕ್ತವೆನಿಸುವುದೊ ಅಷ್ಟನ್ನು ಸ್ವೀಕರಿಸಿ.

ಐದನೆಯ ಅಧ್ಯಾಯ

ಅರ್ಚಕ ವೃತ್ತಿಯ ಸ್ವೀಕಾರ

1. ಮಥುರನಾಥನು ಶ್ರೀರಾಮಕೃಷ್ಣರೆಡೆಗೆ ಆಕರ್ಷಿತನಾದುದು 2. ಶ್ರೀರಾಮಕೃಷ್ಣರ ಸೋದರಳಿಯ ಹೃದಯರಾಮನ ಆಗಮನ 3. ಹೃದಯನ ವ್ಯಕ್ತಿತ್ವ ಪರಿಚಯ 4. ಶ್ರೀರಾಮಕೃಷ್ಣ ಮತ್ತು ಹೃದಯರ ಪ್ರೀತಿಯ ಬಾಂಧವ್ಯ 5. ಶ್ರೀರಾಮಕೃಷ್ಣರು ನಿರ್ಮಿಸಿದ ಶಿವಮೂರ್ತಿಯನ್ನು ಮಥುರನು ಪ್ರಶಂಸಿಸಿದುದು 6. ಚಾಕರಿ ವಿಷಯದಲ್ಲಿ ಶ್ರೀರಾಮಕೃಷ್ಣರ ಅಭಿಪ್ರಾಯ 7. ಮಥುರನ ಹತ್ತಿರ ಹೋಗಲು ಅವರು ಸಂಕೋಚಿಸುತ್ತಿದ್ದುದು 8. ಶ್ರೀರಾಮಕೃಷ್ಣರು ದೇವಾಲಯ ಕಾರ್ಯದಲ್ಲಿ ನಿಯುಕ್ತರಾದುದು 9. ಗೋವಿಂದಜೀ ವಿಗ್ರಹ ಭಗ್ನವಾದುದು 10. ಭಗ್ನವಿಗ್ರಹದ ಪೂಜೆಯ ಬಗ್ಗೆ ಶ್ರೀರಾಕೃಷ್ಣರ ಅಭಿಪ್ರಾಯ 11. ಅವರ ಸಂಗೀತ ಪ್ರತಿಭೆ 12. ಪೂಜಾ ಸಮಯದಲ್ಲಿ ಅವರಿಗಾಗುತ್ತಿದ್ದ ಅನುಭವಗಳು 13. ರಾಮಕುಮಾರನು ಶ್ರೀರಾಮಕೃಷ್ಣರಿಗೆ ತರಬೇತಿ ನೀಡುವುದು 14. ಶಕ್ತಿ ಮಂತ್ರ ದೀಕ್ಷೆಯನ್ನು ಸ್ವೀಕರಿಸಿದುದು 15. ರಾಮಕುಮಾರನ ಮೃತ್ಯು

1. ಮಂದಿರ ಪ್ರತಿಷ್ಠಾಪನೆಯಾಗಿ ಕೆಲವು ವಾರಗಳು ಕಳೆದವು. ಶ್ರೀರಾಮಕೃಷ್ಣರ ಸೌಮ್ಯಸ್ವಭಾವ, ಕೋಮಲತೆ, ಅವರ ಧರ್ಮನಿಷ್ಠೆ, ಎಳೆ ವಯಸ್ಸು—ಇತ್ಯಾದಿಗಳೆಲ್ಲ ಮಥುರನಾಥನನ್ನು ಆಕರ್ಷಿಸಿದವು. ಸಾಮಾನ್ಯವಾಗಿ ಜೀವನದಲ್ಲಿ ಯಾರೊಡನೆ ದೀರ್ಘಕಾಲದ ಘನಿಷ್ಟ ಸಂಬಂಧ ಬೆಳೆಯುವುದೊ ಅವರೊಡನೆ ಪ್ರಥಮ ಭೇಟಿಯಿಂದಲೆ ಒಂದು ಪ್ರೀತಿಯ ಆಕರ್ಷಣೆ ತಾನೇತಾನಾಗಿ ಉಂಟಾಗುತ್ತದೆ. ಇದು ಪೂರ್ವಜನ್ಮದಲ್ಲಾದ ಸಂಬಂಧದ ಸಂಸ್ಕಾರದ ಪರಿಣಾಮ—ಎಂದು ಶಾಸ್ತ್ರ ಹೇಳುತ್ತದೆ. ಶ್ರೀರಾಮಕೃಷ್ಣರನ್ನು ನೋಡಿ ಮಥುರ ಬಾಬುವಿನ ಮನಸ್ಸಿನಲ್ಲಿ ಇದೇ ರೀತಿಯ ಅನಿರ್ವಚನೀಯವಾದ ಆಕರ್ಷಣೆ ಉಂಟಾಗಿತ್ತು. ಮುಂದೆ ಅವರಿಬ್ಬರ ನಡುವೆ ಇದ್ದ ಗಾಢವಾದ ಪ್ರೇಮ ಸಂಬಂಧವನ್ನು ನೋಡಿದಾಗ ಇದು ಸ್ಪಷ್ಟವಾಗುತ್ತದೆ.

ಶ್ರೀರಾಮಕೃಷ್ಣರು ಮುಂದೆ ಏನು ಮಾಡಬೇಕೆಂಬುದರ ಬಗ್ಗೆ ಯಾವ ನಿಶ್ಚಯಕ್ಕೂ ಬರದೆ ರಾಮಕುಮಾರನ ಸಲಹೆಯಂತೆ ಒಂದು ತಿಂಗಳ ಪರ್ಯಂತ ದಕ್ಷಿಣೇಶ್ವರದಲ್ಲಿಯೇ ಇದ್ದರು. ಇದೇ ಸಂದರ್ಭದಲ್ಲಿ ಮಥುರ ಬಾಬುವು ದೇವಿಯನ್ನು ಅಲಂಕರಿಸುವ ಕೆಲಸವನ್ನು ಇವರಿಗೆ ಕೊಡುವುದೆಂದು ನಿಶ್ಚಯಿಸಿದನು. ಈ ವಿಷಯವನ್ನು ರಾಮಕುಮಾರನಿಗೂ ತಿಳಿಸಿದನು. ರಾಮಕುಮಾರನು ತನ್ನ ತಮ್ಮನ ಮಾನಸಿಕ ಸ್ಥಿತಿಯನ್ನು ಅವನಿಗೆ ತಿಳಿಸಿ ಈ ಕೆಲಸಕ್ಕೆ ಅವರು ಒಪ್ಪದಿರಬಹುದೆಂದು ಹೇಳಿದನು.

ಮಥುರನು ಸುಲಭವಾಗಿ ಬಿಟ್ಟುಕೊಡುವ ವ್ಯಕ್ತಿಯಲ್ಲ. ತನ್ನ ಸಂಕಲ್ಪವನ್ನು ಪೂರ್ತಿಗೊಳಿಸುವುದಕ್ಕೆ ಸರಿಯಾದ ಅವಕಾಶವನ್ನು ಹುಡುಕುತ್ತಿದ್ದನು.

2. ಶ್ರೀರಾಮಕೃಷ್ಣರ ಜೀವನದೊಡನೆ ನಿಕಟ ಸಂಬಂಧವಿದ್ದ ಇನ್ನೊರ್ವ ವ್ಯಕ್ತಿ ಈಗ ದಕ್ಷಿಣೇಶ್ವರಕ್ಕೆ ಬಂದನು. ಶ್ರೀರಾಮಕೃಷ್ಣರ ಸೋದರಳಿಯ—(ತಂದೆಯ ತಂಗಿ ರಾಮಶೀಲಾಳ ಮಗಳಾದ ಹೇಮಾಂಗಿನಿಯ ಮಗ) ನಾದ ಹೃದಯರಾಮನು ಕೆಲಸವನ್ನು ಅರಸುತ್ತ ವರ್ಧಮಾನದಲ್ಲಿದ್ದನು. ಅಲ್ಲಿ ಅವನಿಗೆ ಸುದ್ದಿ ಸಿಕ್ಕಿತು ಅವನ ಮಾವಂದಿರು ದಕ್ಷಿಣೇಶ್ವರದಲ್ಲಿರುವರೆಂದು. ಅಲ್ಲಿಗೆ ಹೋದರೆ ತನ್ನ ಇಚ್ಛೆ ಪೂರ್ಣವಾಗಬಹುದೆಂದು ಭಾವಿಸಿ ಅವನು ಕೂಡಲೆ ದಕ್ಷಿಣೇಶ್ವರಕ್ಕೆ ಬಂದನು. ಅವನಿಗಾಗ ಹದಿನಾರು ವರ್ಷ. ಬಾಲ್ಯದಿಂದಲೂ ಶ್ರೀರಾಮಕೃಷ್ಣರ ಪರಿಚಯ ಚೆನ್ನಾಗಿತ್ತು. ಅವರಿಬ್ಬರೂ ಹೆಚ್ಚು–ಕಡಿಮೆ ಸಮವಯಸ್ಕರೇ ಆಗಿದ್ದರು. ಈಗ ಅವನಿಗೆ ಶ್ರೀರಾಮಕೃಷ್ಣರ ಸಂಗದಿಂದ ತುಂಬ ಆನಂದವಾಯಿತು.

3. ಹೃದಯನು ಎತ್ತರದ ಆಳು, ನೋಡುವುದಕ್ಕೆ ಲಕ್ಷಣವಾಗಿದ್ದ ಮತ್ತು ದೃಢಕಾರನೂ ಆಗಿದ್ದ. ಅವನು ಸ್ವಾಭಾವಿಕವಾಗಿಯೇ ಕ್ರಿಯಾಶೀಲನೂ, ಕೆಚ್ಚೆದೆಯುಳ್ಳವನೂ ಆಗಿದ್ದ. ಕೆಲಸದಲ್ಲಿ ದಕ್ಷತೆ, ಕಠಿನ ಪರಿಸ್ಥಿತಿಯನ್ನು ಎದುರಿಸುವ ಸಾಮರ್ಥ್ಯ ಇವೆಲ್ಲ ಇದ್ದುವು ಅವನಲ್ಲಿ. ತನ್ನ ಕಿರಿಯ ಮಾವನನ್ನು ಅವನು ಹೃತ್ಪೂರ್ವಕ ಪ್ರೀತಿಸುತ್ತಿದ್ದ ಮತ್ತು ಅವರನ್ನು ಸುಖವಾಗಿರಿಸಲು ಏನೇ ಕಷ್ಟವನ್ನೂ ಸಹಿಸಲು ಸಿದ್ಧನಿದ್ದ. ಸದಾ ಕ್ರಿಯಾಶೀಲನಾದ ಹೃದಯನಲ್ಲಿ ಅಂತರ್ಮುಖತೆ ಸ್ವಲ್ಪವೂ ಇರಲಿಲ್ಲ. ಸಾಮಾನ್ಯ ಪ್ರಾಪಂಚಿಕರಂತೆಯೇ ಅವನ ಮನಸ್ಸು ಸ್ವಾರ್ಥತೆಯಿಂದ ತುಂಬಿ ಹೋಗಿತ್ತು. ಅವನಲ್ಲಿ ಸ್ವಲ್ಪವಾದರೂ ಅಂತರ್ಮುಖತೆ ಮತ್ತು ನಿಃಸ್ವಾರ್ಥತೆ ಇದ್ದದ್ದೇ ಆದರೆ ಅದು ಶ್ರೀರಾಮಕೃಷ್ಣರ ಸಹವಾಸದ ಫಲವಾಗಿ ಮತ್ತು ಕೆಲವೊಮ್ಮೆ ಅವರನ್ನು ಅನುಕರಿಸುವ ಪ್ರಯತ್ನದ ಫಲವಾಗಿ. ಶ್ರೀರಾಮಕೃಷ್ಣರಾದರೊ ಆಹಾರ ವಿಹಾರವೇ ಮುಂತಾದ ಶರೀರಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ತುಂಬ ಉದಾಸೀನರು, ಸದಾ ಚಿಂತನಶೀಲರು, ಸ್ವಾರ್ಥದ ಗಂಧವೂ ಇಲ್ಲದೆ ಸಾಧನೆಯ ಜೀವನದಲ್ಲಿ ಮುಳುಗಿದವರು. ಅಂಥವರ ಯೋಗಕ್ಷೇಮಗಳನ್ನು ನೋಡಿಕೊಳ್ಳಲು ಹೃದಯನಂತಹ ಶ್ರದ್ಧಾವಂತನೂ, ಕ್ರಿಯಾಶೀಲನೂ, ಆದ ವ್ಯಕ್ತಿಯ ಅವಶ್ಯಕತೆ ಬಹಳವಾಗಿತ್ತು. ಶ್ರೀಜಗದಂಬೆಯೇ ಶ್ರೀರಾಮಕೃಷ್ಣರ ಸಾಧನ ಕಾಲದಲ್ಲಿ ಅವರನ್ನು ನೋಡಿಕೊಳ್ಳಲು ಹೃದಯನನ್ನು ಕರೆತಂದಿದ್ದಳೆ ? ಹೃದಯನು ಇಲ್ಲದಿದ್ದರೆ ಸಾಧನೆ ಕಾಲದಲ್ಲಿ ತಮ್ಮ ಶರೀರವು ಉಳಿಯುತ್ತಿರಲಿಲ್ಲ—ಎಂದು ಶ್ರೀರಾಮಕೃಷ್ಣರು ಅನೇಕ ಬಾರಿ ಹೇಳಿರುವರು. ಆದ್ದರಿಂದ ಶ್ರೀರಾಮಕೃಷ್ಣರ ಜೀವನದೊಡನೆ ಹೃದಯನ ಹೆಸರು ನಿತ್ಯ ಸಂಯೋಗವನ್ನು ಪಡೆದಿದೆ. ಆದರಿಂದಾಗಿಯೇ ಅವನು ನಮ್ಮೆಲ್ಲರ ಶ್ರದ್ಧಾಭಕ್ತಿಗೆ ಪಾತ್ರನಾಗಿರುವನು.

4. ಹೃದಯನು ದಕ್ಷಿಣೇಶ್ವರಕ್ಕೆ ಬಂದಾಗ ಶ್ರೀರಾಮಕೃಷ್ಣರಿಗೆ ಇಪ್ಪತ್ತು ವರ್ಷ ಕಳೆದಿದ್ದುವು. ತಮಗೊಬ್ಬ ಸಹಚರನು ಸಿಕ್ಕಿದ್ದರಿಂದ ಶ್ರೀರಾಮಕೃಷ್ಣರಿಗೆ ಅಲ್ಲಿ

ವಾಸಿಸುವುದು ಎಷ್ಟೋ ಸುಲಭವಾಯಿತು. ಯಾವಾಗಲೂ ಅವನೊಟ್ಟಿಗೆ ಇರುತ್ತಿದ್ದರು. ದೈನಂದಿನ ಎಲ್ಲ ಕಾರ್ಯಗಳಲ್ಲಿಯೂ ಅವನು ಅವರ ಸಂಗಾತಿಯಾದ, ಬಾಲಕ ಸ್ವಭಾವದ ಶ್ರೀರಾಮಕೃಷ್ಣರ ಆಚರಣೆಗಳು ಸಾಮಾನ್ಯರ ದೃಷ್ಟಿಗೆ ಅರ್ಥಹೀನವಾಗಿ ಕಂಡರೂ ಹೃದಯನು ಎಂದೂ ವಿರೋಧಿಸುತ್ತಿರಲಿಲ್ಲ, ಸಹಾನುಭೂತಿಯನ್ನೇ ತೋರಿಸುತ್ತಿದ್ದ. ಇದರಿಂದ ಅವನು ಶ್ರೀರಾಮಕೃಷ್ಣರಿಗೆ ಅತ್ಯಂತ ಪ್ರಿಯನಾದ.

ಹೃದಯನ ಬಾಯಿಂದಲೇ ನಾವಿದನ್ನು ಕೇಳಿರುವೆವು : "ಅಂದಿನಿಂದ ನನಗೆ ಶ್ರೀರಾಮಕೃಷ್ಣರ ಕಡೆ ಒಂದು ಅನಿರ್ವಚನೀಯವಾದ ಆಕರ್ಷಣೆಯ ಅನುಭವ ಉಂಟಾಯಿತು. ನೆರಳಿನಂತೆ ಸದಾ ಅವರನ್ನು ಅನುಸರಿಸುತ್ತಿದ್ದೆ. ಸ್ವಲ್ಪಹೊತ್ತು ಅವರನ್ನು ಬಿಟ್ಟಗಲಿದರೆ ಮನಸ್ಸಿಗೆ ಕಷ್ಟವಾಗುತ್ತಿತ್ತು. ತಿರುಗಾಡುವುದು, ಮಲಗುವುದು—ಎಲ್ಲ ಒಟ್ಟಿಗೆ ಮಾಡುತ್ತಿದ್ದೆವು. ಕೇವಲ ಊಟದ ಸಮಯದಲ್ಲಿ ಸ್ವಲ್ಪಹೊತ್ತು ಬೇರೆಯಾಗುತ್ತಿದ್ದೆವು. ಏಕೆಂದರೆ ಶ್ರೀರಾಮಕೃಷ್ಣರು ಪಂಚವಟಿಗೆ ಹೋಗಿ ತಾವೇ ಅಡಿಗೆ ಮಾಡಿ ಉಣ್ಣುತ್ತಿದ್ದರು ಮತ್ತು ನಾನು ದೇವಸ್ಥಾನದ ಪ್ರಸಾದವನ್ನು ಉಣ್ಣುತ್ತಿದ್ದೆ. ಅವರ ಅಡಿಗೆಗೆ ಬೇಕಾದ ಎಲ್ಲ ವ್ಯವಸ್ಥೆ ಮಾಡುತ್ತಿದ್ದೆ, ಹಾಗೂ ಕೆಲವೊಮ್ಮೆ ಅದೇ ಪ್ರಸಾದವನ್ನು ಉಣ್ಣುತ್ತಿದ್ದೆ. ಈ ರೀತಿ ಅಡಿಗೆ ಮಾಡಿ ಉಂಡರೂ ಅವರಿಗೆ ಇನ್ನೂ ಸಮಾಧಾನವಿರಲಿಲ್ಲ—ಆಹಾರದ ವಿಷಯದಲ್ಲಿ ಅವರ ನಿಷ್ಠೆ ಅಷ್ಟೊಂದು ಪ್ರಬಲವಾಗಿತ್ತು. ಮಧ್ಯಾಹ್ನ ಈ ರೀತಿ ಅಡಿಗೆ ಮಾಡಿ ಊಟ ಮಾಡಿದರೂ ರಾತ್ರಿಯವೇಳೆ ನಮ್ಮಂತೆಯೇ ಶ್ರೀಜಗದಂಬೆಯ ಪ್ರಸಾದವಾದ ಲೂಚಿಯನ್ನು ತಿನ್ನುತ್ತಿದ್ದರು. ಈ ರೀತಿ ಲೂಚಿಯನ್ನು ತಿನ್ನುತ್ತಿರುವಾಗ ಅವರ ಕಣ್ಣಿನಲ್ಲಿ ನೀರು ಬರುತ್ತಿದ್ದುದನ್ನು ನಾನು ಎಷ್ಟೊ ಬಾರಿ ನೋಡಿದ್ದೇನೆ. ಆಕ್ಷೇಪಣೆಯ ಧ್ವನಿಯಲ್ಲಿ ಶ್ರೀ ಜಗನ್ಮಾತೆಗೆ ಅವರು ಹೇಳುತ್ತಿದ್ದರು: 'ತಾಯಿ, ನಾನು ಕೈವರ್ತಕರ ಅನ್ನ ತಿನ್ನುವಂತೆ ಮಾಡಿದೆಯಲ್ಲ !'"

ಶ್ರೀರಾಮಕೃಷ್ಣರು ಸ್ವತಃ ಆ ಕಾಲದ ವಿಷಯವನ್ನು ನಮಗೆ ಹೀಗೆ ಹೇಳುತ್ತಿದ್ದರು : "ಕೈವರ್ತಕರ ಅನ್ನ ತಿನ್ನಬೇಕಲ್ಲ ಎಂದು ಮನಸ್ಸಿಗೆ ತುಂಬ ಕಷ್ಟವಾಗುತ್ತಿತ್ತು. ಅನೇಕ ಬಡವರು ಅನಾಥರು ಈ ಕಾರಣದಿಂದಾಗಿ ಅಲ್ಲಿಗೆ ಊಟಕ್ಕೆ ಬರುತ್ತಿರಲಿಲ್ಲ. ಊಟಕ್ಕೆ ಸಾಕಷ್ಟು ಜನರು ಬರದೆ ಉಳಿದ ಪದಾರ್ಥಗಳನ್ನು ದನಗಳಿಗೆ ಕೊಡುತ್ತಿದ್ದರು, ಅಥವಾ ಇನ್ನೂ ಜಾಸ್ತಿ ಉಳಿದರೆ ಗಂಗೆಗೆ ಎಸೆಯುತ್ತಿದ್ದರು." ಆದರೆ ಈ ರೀತಿ ಅಡಿಗೆ ಮಾಡಿ ಊಟ ಮಾಡುವುದು ಬಹಳ ದಿನ ನಡೆಯಲಿಲ್ಲ—ಇದನ್ನು ಹೃದಯ ಮತ್ತು ಶ್ರೀರಾಮಕೃಷ್ಣ—ಇಬ್ಬರ ಮೂಲಕವೂ ಕೇಳಿದ್ದೇವೆ. ಅವರು ಕಾಳೀಮಂದಿರದಲ್ಲಿ ಅರ್ಚಕರಾಗಿ ಕೆಲಸ ಸ್ವೀಕರಿಸುವವರೆಗೆ ಮಾತ್ರ ಇದು ಮುಂದುವರಿಯಿತು—ಎಂಬುದು ನಮ್ಮ ಅನಿಸಿಕೆ. ದೇವಾಲಯ ಪ್ರತಿಷ್ಠಾಪನೆಯಾಗಿ ಎರಡು ಮೂರು ತಿಂಗಳ ನಂತರ ಅವರು ಆ ಕೆಲಸವನ್ನು ಪ್ರಾರಂಭಿಸಿರಬೇಕು.

ಶ್ರೀರಾಮಕೃಷ್ಣರು ತನ್ನನ್ನು ತುಂಬ ಪ್ರೀತಿಸುತ್ತಿದ್ದರು ಎಂಬ ವಿಷಯ ಹೃದಯ

ನಿಗೆ ತಿಳಿದಿತ್ತು. ಅವರ ಸಂಬಂಧವಾಗಿ ಒಂದು ವಿಷಯ ಮಾತ್ರ ಅವನಿಗೆ ಏನು ಮಾಡಿದರೂ ತಿಳಿಯಲಿಲ್ಲ. ಅದೇನೆಂದರೆ—ಹಿರಿಯ ಮಾವನಾದ ರಾಮಕುಮಾರನಿಗೆ ಅವನು ಸ್ವಲ್ಪ ಸಹಾಯ ಮಾಡಲು ಹೋದಾಗ, ಮಧ್ಯಾಹ್ನ ಆಹಾರದ ನಂತರ ಅವನು ವಿಶ್ರಮಿಸಿದಾಗ, ಅಥವಾ ಮಧ್ಯಾಹ್ನ ಅವನು ಮಂದಿರದಲ್ಲಿ ಆರತಿಯನ್ನು ನೋಡಲು ಹೋದಾಗ ಶ್ರೀರಾಮಕೃಷ್ಣರು ಸ್ವಲ್ಪಹೊತ್ತು ಎಲ್ಲೋ ಕಣ್ಮರೆಯಾಗಿಬಿಡುತ್ತಿದ್ದರು. ಎಷ್ಟೇ ಹುಡುಕಿದರೂ ಅವರು ಅವನಿಗೆ ಸಿಗುತ್ತಿರಲಿಲ್ಲ. ಒಂದೆರಡು ಗಂಟೆಯ ನಂತರ ಹಿಂದಿರುಗಿದಾಗ ಕೇಳಿದರೆ "ಇಲ್ಲಿಯೇ ಎಲ್ಲೊ ಹೋಗಿದ್ದೆ" ಎಂದುಬಿಡುತ್ತಿದ್ದರು. ಎಂದಾದರೊಂದು ದಿನ ಅವರನ್ನು ಹುಡುಕಿಕೊಂಡು ಹೋದಾಗ ಅವರು ಪಂಚವಟಿಯ ಕಡೆಯಿಂದ ಬರುವುದನ್ನು ಗಮನಿಸುತ್ತಿದ್ದ. ಶೌಚಾದಿಗಳಿಗೆ ಹೋಗಿರಬೇಕೆಂದು ಭಾವಿಸಿ ಆಗ ಏನೂ ವಿಚಾರಿಸುತ್ತಿರಲಿಲ್ಲ.

5. ನಾವು ಹೃದಯನಿಂದ ಕೇಳಿರುವೆವು. ಒಂದುದಿನ ಶ್ರೀರಾಮಕೃಷ್ಣರಿಗೆ ಮೂರ್ತಿಯನ್ನು ಮಾಡಿ ಶಿವಪೂಜೆ ಮಾಡಬೇಕೆಂಬ ಇಚ್ಛೆಯಾಯಿತು. ಬಾಲ್ಯ ಕಾಲ ದಲ್ಲಿ ಅವರು ಕೆಲವೊಮ್ಮೆ ಈ ರೀತಿ ಮಾಡುತ್ತಿದ್ದರು ಎಂಬುದನ್ನು ನಾವು ಮೊದಲೇ ಹೇಳಿರುವೆವು. ಇಚ್ಛೆಯಾದ ಕೂಡಲೇ ಅವರು ಗಂಗಾತೀರಕ್ಕೆ ಹೋಗಿ ಮಣ್ಣನ್ನು ತಂದು ಒಂದು ಮೂರ್ತಿಯನ್ನು ತಾವೇ ರೂಪಿಸತೊಡಗಿದರು. ನಂದಿ ಡಮರು, ತ್ರಿಶೂಲ–ಇವೆಲ್ಲದರಿಂದ ಭೂಷಿತವಾದ ಸುಂದರ ಮೂರ್ತಿ ಸಿದ್ಧವಾಯಿತು. ಈಗ ಪೂಜೆ ಪ್ರಾರಂಭವಾಯಿತು. ಮಥುರಬಾಬುವು ಓಡಾಡುತ್ತ ಆ ಜಾಗಕ್ಕೆ ಬಂದನು. ಅವರು ತನ್ಮಯರಾಗಿ ಪೂಜೆ ಮಾಡುತ್ತಿದ್ದುದನ್ನು ಕಂಡು ಕುತೂಹಲದಿಂದ ಹತ್ತಿರ ಬಂದು ಆ ಮೂರ್ತಿಯನ್ನು ನೋಡಿದನು. ಮೂರ್ತಿ ಚಿಕ್ಕದಾದರೂ ಅತ್ಯಂತ ಸುಂದರ ವಾಗಿತ್ತು. ಮಥುರನಿಗೆ ಅದನ್ನು ನೋಡಿ ಆಶ್ಚರ್ಯವಾಯಿತು. ಅಂಗಡಿಯಲ್ಲಿ ಇಂತಹ ದೈವೀ ಕಳೆಯಿಂದ ತುಂಬಿದ ಮೂರ್ತಿ ಸಿಗುವುದಿಲ್ಲ ಎಂದು ಅದನ್ನು ನೋಡಿಯೇ ತಿಳಿಯಿತು ಅವನಿಗೆ. ಕುತೂಹಲದಿಂದ ಅವನು ಹೃದಯನನ್ನು ವಿಚಾರಿಸಿ ದನು : "ಆ ಮೂರ್ತಿ ಎಲ್ಲಿ ಸಿಕ್ಕಿತು, ಯಾರು ತಯಾರಿಸಿದ್ದು?" ಹೃದಯನ ಮೂಲಕ ಅವನಿಗೆ ತಿಳಿದುಬಂತು—ಶ್ರೀರಾಮಕೃಷ್ಣರಿಗೆ ಮೂರ್ತಿಯನ್ನು ತಯಾರಿಸಲೂ ಬರು ತ್ತದೆ, ಹಾಗೂ ಮುರಿದ ವಿಗ್ರಹವನ್ನು ಸರಿಪಡಿಸಲೂ ಬರುತ್ತದೆ ಎಂದು. ಮಥುರನಿಗೆ ಆಶ್ಚರ್ಯವಾಯಿತು. ಪೂಜೆಯನಂತರ ಮೂರ್ತಿಯನ್ನು ತನಗೆ ನೀಡಬೇಕೆಂದು ಕೇಳಿ ಕೊಂಡನು. ಹೃದಯನು ಪೂಜೆಯಾದ ಮೇಲೆ ಶ್ರೀರಾಮಕೃಷ್ಣರಿಗೆ ವಿಷಯವನ್ನು ತಿಳಿಸಿ, ಮೂರ್ತಿಯನ್ನು ಮಥುರನಿಗೆ ತೆಗೆದುಕೊಂಡು ಹೋಗಿ ಕೊಟ್ಟನು. ಮಥುರನು ಮೂರ್ತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದನು. ಅದರ ಸೌಂದರ್ಯಕ್ಕೆ ಆತ ಮುಗ್ಧನಾದನು. ಅನಂತರ ಅದನ್ನು ಅವನು ರಾಣಿ ರಾಸಮಣಿಗೆ ಕಳುಹಿಸಿಕೊಟ್ಟನು. ರಾಣಿಗೂ ಅದು ತುಂಬ ಮೆಚ್ಚಿಗೆಯಾಯಿತು. ಅದನ್ನು ತಯಾರಿಸಿದವರು ಶ್ರೀರಾಮ ಕೃಷ್ಣರೆಂದು ತಿಳಿದು ಆಶ್ಚರ್ಯವೂ ಆಯಿತು. ಶ್ರೀರಾಮಕೃಷ್ಣರನ್ನು ದೇವಾಲಯದ

ಕಾರ್ಯದಲ್ಲಿ ನಿಯೋಜಿಸಬೇಕೆಂದು ಮಥುರನು ಮೊದಲೇ ಯೋಚಿಸುತ್ತಿದ್ದನು. ಈಗ ಶ್ರೀರಾಮಕೃಷ್ಣರ ಈ ಹೊಸ ಪ್ರತಿಭೆಯನ್ನು ಕಂಡು ಅವನ ಇಚ್ಛೆ ಇನ್ನೂ ಪ್ರಬಲ ವಾಯಿತು. ಅವನ ಈ ಅಭೀಪ್ಸೆಯ ವಿಷಯವನ್ನು ಶ್ರೀರಾಮಕೃಷ್ಣರು ತಮ್ಮ ಅಣ್ಣ ನಿಂದ ಮೊದಲೇ ಕೇಳಿದ್ದರು. ಭಗವಂತನನ್ನು ಬಿಟ್ಟು ಮತ್ತಾರ ಚಾಕರಿ ಮಾಡುವು ದಿಲ್ಲ–ಎಂದು ಮನಸ್ಸಿನಲ್ಲಿಯೇ ದೃಢಪಡಿಸಿಕೊಂಡಿದ್ದ ಶ್ರೀರಾಮಕೃಷ್ಣರು ಅದನ್ನು ಕಿವಿಗೆ ಹಾಕಿಕೊಂಡಿರಲಿಲ್ಲ.

6. ಚಾಕರಿ ಮಾಡುವ ವಿಷಯದಲ್ಲಿ ಶ್ರೀರಾಮಕೃಷ್ಣರ ಈ ಬಗೆಯ ಅಭಿ ಪ್ರಾಯವನ್ನು ನಾವು ಅನೇಕ ಬಾರಿ ಅವರಿಂದ ಕೇಳಿರುವೆವು. ತುಂಬ ಅನಿವಾರ್ಯ ಪರಿಸ್ಥಿತಿಯನ್ನು ಹೊರತು ಯಾರಾದರೂ ಚಾಕರಿಯನ್ನು ವಹಿಸಿಕೊಂಡರೆ ಶ್ರೀರಾಮ ಕೃಷ್ಣರು ಆ ವ್ಯಕ್ತಿಯ ಬಗ್ಗೆ ತಿರಸ್ಕಾರ ಭಾವವನ್ನು ವ್ಯಕ್ತಪಡಿಸುತ್ತಿದ್ದರು. ಅವರ ಒಬ್ಬ ಬಾಲಕ ಭಕ್ತನು (ಮುಂದೆ ಸ್ವಾಮಿ ನಿರಂಜನಾನಂದ) ಚಾಕರಿ ಮಾಡುತ್ತಿರುವ ನೆಂದು ತಿಳಿದು ತಮ್ಮ ತೀವ್ರ ವ್ಯಥೆಯನ್ನು ವ್ಯಕ್ತಪಡಿಸಿದ್ದರು. ಅವರು ಹೇಳಿದ್ದರು, "ಅವನು ಸತ್ತುಹೋದ ಎಂದು ಕೇಳಿದ್ದರೂ ನನಗೆ ಅಷ್ಟು ಕಷ್ಟವಾಗುತ್ತಿರಲಿಲ್ಲ. ಅವನು ಚಾಕರಿ ಮಾಡುತ್ತಿದ್ದಾನೆಂದು ಕೇಳಿ ನನಗೆ ಅಷ್ಟೊಂದು ದುಃಖವಾಗುತ್ತಿದೆ." ಮುಂದೆ ಅವನನ್ನು ಭೇಟಿಯಾದಾಗ ಅವನು ತನ್ನ ವೃದ್ಧ ತಾಯಿಯ ಪೋಷಣೆಗಾಗಿ ಚಾಕರಿ ಸ್ವೀಕರಿಸಿದ್ದನೆಂದು ತಿಳಿದಾಗ ಅವರಿಗೆ ಸಮಾಧಾನವಾಯಿತು. ಆಗ ಅವರು ಪ್ರೀತಿ ಯಿಂದ ಅವನ ಮೈದಡವುತ್ತ, "ಆದರಿಂದ ಯಾವ ದೋಷವೂ ಇಲ್ಲ. ಇದಕ್ಕಾಗಿ ನೀನು ಚಾಕರಿ ಮಾಡಿದರೆ ದೋಷ ನಿನ್ನನ್ನು ಸ್ಪರ್ಶಿಸುವುದಿಲ್ಲ. ಆದರೆ ತಾಯಿಗಾಗಿ ಅಲ್ಲದೆ ನಿನ್ನಿಚ್ಛೆಯಿಂದಲೇ ಚಾಕರಿ ಮಾಡಿದ್ದರೆ ನನಗೆ ನಿನ್ನನ್ನು ಸ್ಪರ್ಶಿಸಲಾಗುತ್ತಿರಲಿಲ್ಲ. ಆದ್ದರಿಂದಲೇ ನನ್ನ ನಿರಂಜನದಲ್ಲಿ ಸ್ವಲ್ಪವೂ ಅಂಜನ (ಕಲೆ ಅಥವಾ ದೋಷ) ವಿಲ್ಲ ಎಂದು ನಾನು ಹೇಳುವುದು. ಅವನಲ್ಲಿ ಇಂಥ ಹೀನಬುದ್ಧಿ ಹೇಗೆ ಬರಲು ಸಾಧ್ಯ ?"

ಶ್ರೀರಾಮಕೃಷ್ಣರ ಈ ಅಭಿಪ್ರಾಯವನ್ನು ಕೇಳಿದಾಗ ಅಲ್ಲಿ ನೆರೆದ ಭಕ್ತರಿಗೆಲ್ಲ ಆಶ್ಚರ್ಯವಾಯಿತು. ಒಬ್ಬ ಭಕ್ತನು ಕೇಳಿಯೇ ಬಿಟ್ಟ: "ಮಹಾಶಯರೆ, ನೀವು ಚಾಕರಿಯನ್ನು ಅಷ್ಟೊಂದು ನಿಂದಿಸುತ್ತೀರಿ. ಆದರೆ ಚಾಕರಿ ಮಾಡದೆ ಸಂಸಾರವನ್ನು ನಿರ್ವಹಿಸುವುದು ಹೇಗೆ ?" ಇದಕ್ಕೆ ಉತ್ತರವಾಗಿ ಶ್ರೀರಾಮಕೃಷ್ಣರು ಹೇಳಿದರು: "ಯಾರು ಮಾಡಬೇಕೊ ಅವರು ಮಾಡಲಿ. ಎಲ್ಲರೂ ಚಾಕರಿ ಮಾಡುವುದು ಬೇಡ ವೆಂದು ನಾನು ಹೇಳುತ್ತಿಲ್ಲ. ನಾನು ಇವರುಗಳ (ನಿರಂಜನಾದಿ ಬಾಲಕ ಭಕ್ತರು) ಬಗ್ಗೆ ಹೇಳುತ್ತಿದ್ದೇನೆ. ಇವರುಗಳ ವಿಷಯ ಬೇರೆ." ಶ್ರೀರಾಮಕೃಷ್ಣರು ತಮ್ಮ ಬಾಲಕ ಭಕ್ತರ ಜೀವನವನ್ನು ಬೇರೆ ರೀತಿಯಲ್ಲಿ ರೂಪಿಸುತ್ತಿದ್ದರು. ಪೂರ್ಣ ಆಧ್ಯಾ ತ್ಮಿಕ ಭಾವಕ್ಕೂ ಚಾಕರಿ ಕೆಲಸಕ್ಕೂ ಹೊಂದಿಕೆಯಾಗುವುದಿಲ್ಲ. ಆದ್ದರಿಂದಲೇ ಅವರು ಆ ರೀತಿ ನುಡಿದಿದ್ದರು.

7. ತನ್ನ ಅಣ್ಣನಿಂದ ಮಥುರನಾಥನ ಅಭೀಪ್ಸೆಯನ್ನು ತಿಳಿದ ಶ್ರೀರಾಮ

ಕೃಷ್ಣರು ಮಥುರನಾಥನ ಮುಂದೆ ಹೋಗುವುದಕ್ಕೆ ಹಿಂಜರಿಯುತ್ತಿದ್ದರು, ಯಾವಾಗಲೂ ಅವನ ಕಣ್ಣು ತಪ್ಪಿಸಿಕೊಂಡೇ ತಿರುಗುತ್ತಿದ್ದರು. ಏಕೆಂದರೆ, ಅವರು ಸತ್ಯ ಮತ್ತು ಧರ್ಮವನ್ನು ಮನೋವಾಕ್ಕಾಯವಾಗಿ ಪರಿಪಾಲಿಸುವ ವಿಷಯದಲ್ಲಿ ಯಾರ ಮಾತಿಗೂ ಬೆಲೆ ಕೊಡುತ್ತಿರಲಿಲ್ಲ ಮತ್ತು ಹಾಗೆಯೇ ವಿಶೇಷ ಕಾರಣವಿಲ್ಲದೆ ಇನ್ನೊಬ್ಬರನ್ನು ಉಪೇಕ್ಷಿಸಿ ಅವರ ಮನಸ್ಸನ್ನು ನೋಯಿಸುವುದೂ ಅವರಿಗೆ ಆಗುತ್ತಿರಲಿಲ್ಲ. ಮತ್ತೆ, ಮನಸ್ಸಿನಲ್ಲಿ ಏನನ್ನೂ ನಿರೀಕ್ಷಿಸದೆ ಗುಣವಂತರ ಗುಣಗಳನ್ನು ಪ್ರಶಂಸಿಸುವುದು, ಗೌರವಾನ್ವಿತ ವ್ಯಕ್ತಿಗಳಿಗೆ ಸರಳ ಸ್ವಾಭಾವಿಕ ರೀತಿಯಲ್ಲಿ ಸನ್ಮಾನ ನೀಡುವುದು—ಇದು ಶ್ರೀರಾಮಕೃಷ್ಣರ ಸ್ವಭಾವದ ಒಂದು ಅಂಶವಾಗಿತ್ತು. ದೇವಾಲಯದಲ್ಲಿ ಅರ್ಚಕನಾಗಬೇಕೊ ಬೇಡವೋ ಎಂಬ ವಿಷಯದಲ್ಲಿ ತಾವೇ ಒಂದು ನಿರ್ಧಾರಕ್ಕೆ ಬರುವ ಮೊದಲೇ ಮಥುರನು ಎಲ್ಲಾದರೂ ತಮ್ಮನ್ನು ಆ ಕೆಲಸ ಸ್ವೀಕರಿಸಲು ಒತ್ತಾಯ ಮಾಡಿದರೆ ತಾವದನ್ನು ತಿರಸ್ಕರಿಸಬೇಕಾಗುವುದು ಮತ್ತು ಇದರಿಂದ ಅವನ ಮನಸ್ಸಿಗೆ ವ್ಯಥೆಯಾಗಬಹುದು. ಈ ಕಾರಣದಿಂದಲೇ ಅವರು ಆದಷ್ಟು ಅವನಿಂದ ದೂರವಿರುತ್ತಿದ್ದರು. ಅಷ್ಟೇ ಅಲ್ಲದೆ, ಆಗ ಅವರು ಓರ್ವ ನಗಣ್ಯ ವ್ಯಕ್ತಿಯಷ್ಟೇ, ಮಥುರನಾಥನಾದರೊ ರಾಣಿ ರಾಸಮಣಿಯ ಬಲಗೈಯಂತಿದ್ದ ಒಬ್ಬ ಶ್ರೇಷ್ಠ ವ್ಯಕ್ತಿ. ಇಂಥ ಪರಿಸ್ಥಿತಿಯಲ್ಲಿ ಮಥುರನಾಥನು ಹೇಳಿದುದನ್ನು ತಿರಸ್ಕರಿಸಿದರೆ ಅದನ್ನು ಬಾಲಸಹಜ ಚಪಲತೆಯೆಂದು ಪರಿಗಣಿಸಲ್ಪಡಬಹುದೆಂದು ಅವರು ಭಾವಿಸಿದರು. ಆದರೆ ದಿನ ಕಳೆದಂತೆ ಶ್ರೀರಾಮಕೃಷ್ಣರಿಗೆ ದಕ್ಷಿಣೇಶ್ವರ ವಾಸ ಹೆಚ್ಚು ಹೆಚ್ಚು ಆನಂದದಾಯಕವಾಗತೊಡಗಿತು. ಅಂತರ್ದೃಷ್ಟಿ ಸಂಪನ್ನರಾದ ಅವರಿಗೆ ಇದನ್ನು ಮುಚ್ಚಿಡಲಾಗಲಿಲ್ಲ, ಯಾವ ಗುರುತರವಾದ ಕೆಲಸದ ಜವಾಬ್ದಾರಿಯೂ ಇಲ್ಲದೆ ದಕ್ಷಿಣೇಶ್ವರದಲ್ಲಿ ಇರಲು ಸಾಧ್ಯವಾದರೆ ಅವರಿಗೆ ಅಲ್ಲಿ ಇರಲು ಯಾವ ಆಕ್ಷೇಪಣೆಯೂ ಇರಲಿಲ್ಲ ಮತ್ತು ಮೊದಲಿನಂತೆ ಕಾಮಾರಪುಕುರಕ್ಕೆ ಹಿಂತಿರುಗಿ ಹೋಗಬೇಕೆಂಬ ಆಸೆಯೂ ಅವರಿಗೆ ಇರಲಿಲ್ಲ. ಮುಂದಿನ ಘಟನೆಗಳಿಂದ ಇದು ನಮಗೆ ಸ್ಪಷ್ಟವಾಗುತ್ತದೆ.

8. ಶ್ರೀರಾಮಕೃಷ್ಣರು ಶಂಕಿಸಿದಂತೆಯೇ ಆಯಿತು. ಮಥುರಬಾಬು ಒಂದುದಿನ ದೇವಸ್ಥಾನಕ್ಕೆ ಬಂದಿದ್ದಾಗ ದೂರದಲ್ಲಿ ಶ್ರೀರಾಮಕೃಷ್ಣರನ್ನು ಕಂಡನು. ಶ್ರೀರಾಮಕೃಷ್ಣರು ಹೃದಯನೊಡನೆ ಓಡಾಡುತ್ತಿದ್ದರು. ಮಥುರನನ್ನು ಕಂಡು ಬೇರೆ ಕಡೆ ತಿರುಗಿದರು. ಮಥುರನು ಅವರಿಗೆ ಬರಬೇಕೆಂದು ಹೇಳಿ ಕಳಿಸಿದನು. ಅವನ ಆಳು ಬಂದು "ಧನಿಯವರು ನಿಮ್ಮನ್ನು ಕರೆಯುತ್ತಿದ್ದಾರೆ" ಎಂದು ಹೇಳಿದಾಗ ಅವರಿಗೆ ಈಗ ಏನು ಮಾಡಬೇಕೆಂದು ತೋಚಲಿಲ್ಲ. ಹೃದಯನಿಗೆ ಹೇಳಿದರು, "ನಾನು ಈಗ ಹೋದರೆ ಸಾಕು, ದೇವಸ್ಥಾನದಲ್ಲಿ ಕೆಲಸ ಸ್ವೀಕರಿಸಲು ಹೇಳುತ್ತಾನೆ." ಹೃದಯನು ಹೇಳಿದ: "ಆದರಿಂದ ಏನಂತೆ ? ಇಂಥ ಸ್ಥಾನದಲ್ಲಿ ಕೆಲಸ ಮಾಡುವುದು ಒಳ್ಳೆಯದೇ ಹೊರತು ಕೆಟ್ಟದ್ದಲ್ಲ, ಹಾಗಿರುವಾಗ ಏಕೆ ಹಿಂದೆ ಮುಂದೆ ನೋಡುತ್ತೀಯೆ ?"

ಶ್ರೀರಾಮಕೃಷ್ಣರು : "ಯಾವಾಗಲೂ ಚಾಕರಿಮಾಡಿಕೊಂಡಿರಲು ನನಗೆ ಇಷ್ಟ

ವಿಲ್ಲ. ಅದರಲ್ಲಿಯೂ ಇಲ್ಲಿ ಪೂಜೆಯ ಕೆಲಸವನ್ನು ಒಪ್ಪಿಕೊಂಡರೆ ದೇವಿಯ ಅಲಂಕಾರ ವಸ್ತುಗಳ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗುವುದು. ಅದು ಕಷ್ಟದ ಕೆಲಸ, ನನ್ನಿಂದಾಗದು. ನೀನು ಒಂದು ವೇಳೆ ಆ ಹೊಣೆಯನ್ನು ವಹಿಸಿಕೊಂಡು ಇಲ್ಲಿರುವುದಾದರೆ ನನಗೆ ಪೂಜೆ ಮಾಡಲು ಅಭ್ಯಂತರವಿಲ್ಲ.''

ಹೃದಯನು ಉದ್ಯೋಗವನ್ನು ಅರಸಿಕೊಂಡೆ ಅಲ್ಲಿಗೆ ಬಂದಿದ್ದನು. ಶ್ರೀರಾಮ ಕೃಷ್ಣರ ಸಲಹೆಗೆ ಆನಂದದಿಂದ ಒಪ್ಪಿಗೆಯಿತ್ತನು. ಶ್ರೀರಾಮಕೃಷ್ಣರು ಮಥುರನಾಥನ ಹತ್ತಿರಹೋಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು, ಮಥುರನಾಥನು ಅದಕ್ಕೆ ಸಂತೋಷದಿಂದ ಒಪ್ಪಿ ಅಂದಿನಿಂದಲೇ ಅವರನ್ನು ದೇವಿಗೆ ಅಲಂಕಾರ ಮಾಡುವ ಕೆಲಸಕ್ಕೆ ನಿಯೋಜಿಸಿದನು, ಹೃದಯನನ್ನು ರಾಮಕುಮಾರನಿಗೆ ಮತ್ತು ಅವರಿಗೆ ಸಹಾಯಕನನ್ನಾಗಿ ನಿಯೋಜಿಸಿದನು. ಇದರಿಂದ ರಾಮಕುಮಾರನೂ ನಿಶ್ಚಿಂತನಾದನು.

9. ದೇವಾಲಯ ಪ್ರತಿಷ್ಠಾಪನೆಯಾಗಿ ಮೂರು ತಿಂಗಳುಗಳೊಳಗೆ ಈ ಮೇಲಿನ ಘಟನೆಗಳು ನಡೆದುವು. ಕ್ರಿ.ಶ. ೧೮೫೫ರ ಭಾದ್ರಪದ ಮಾಸ ಬಂತು. ಅಂದು ಶ್ರೀಕೃಷ್ಣ ಜನ್ಮಾಷ್ಟಮಿ. ಉತ್ಸವವು ಯಥೋಚಿತವಾಗಿ ನೆರವೇರಿತು. ಮರುದಿನ ನಂದೋತ್ಸವ. ಮಧ್ಯಾಹ್ನದ ಪೂಜಾ ನೈವೇದ್ಯಾದಿಗಳೆಲ್ಲ ನೆರವೇರಿದುವು. ಅನಂತರ ಅರ್ಚಕನಾದ ಕ್ಷೇತ್ರನಾಥನು ಶ್ರೀರಾಧಾ ಗೋವಿಂದಜೀ ವಿಗ್ರಹವನ್ನು ಶಯನಕ್ಕೆ ತೆಗೆದುಕೊಂಡು ಹೋಗುವಾಗ ಕಾಲು ಜಾರಿ ಬಿದ್ದುಬಿಟ್ಟನು. ವಿಗ್ರಹದ ಒಂದು ಕಾಲು ಮುರಿದುಹೋಯಿತು. ಅನೇಕ ಪಂಡಿತರ ಅಭಿಪ್ರಾಯವನ್ನು ಪಡೆದನಂತರ ಶ್ರೀರಾಮ ಕೃಷ್ಣರ ಸೂಚನೆಯಂತೆ ಭಗ್ನವಾದ ಕಾಲನ್ನು ಸರಿಯಾಗಿ ಜೋಡಿಸಿ ಅದೇ ವಿಗ್ರಹಕ್ಕೆ ಪೂಜೆ ಮುಂದುವರಿಯಿತು.† ಶ್ರೀರಾಮಕೃಷ್ಣರು ಭಗವತ್ ಪ್ರೇಮದಲ್ಲಿ ಭಾವಾವಿಷ್ಟ ರಾಗುವುದನ್ನು ಮಥುರನು ನೋಡಿದ್ದರಿಂದ ಈ ವಿಗ್ರಹದ ವಿಷಯದಲ್ಲಿ ಅವರ ಅಭಿ ಪ್ರಾಯವನ್ನು ಪಡೆಯಲು ಅವನು ಮುಂದಾಗಿದ್ದನು. ಈ ವಿಷಯದಲ್ಲಿ ಶ್ರೀರಾಮ ಕೃಷ್ಣರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಮುಂಚೆ ಭಾವ ಸಮಾಧಿ ಯನ್ನು ಪಡೆದಿದ್ದರು ಎಂದು ಹೃದಯನು ಹೇಳುತ್ತಾನೆ. ಸಮಾಧಿಯಿಂದ ಹೊರಬಂದ ನಂತರ ಬೇರೆ ವಿಗ್ರಹವನ್ನು ತಯಾರಿಸಬೇಕಾಗಿಲ್ಲ ಎಂದು ಹೇಳಿದರು. ಶ್ರೀರಾಮ ಕೃಷ್ಣರಿಗೆ ವಿಗ್ರಹವನ್ನು ಸರಿಪಡಿಸುವ ವಿಧಾನ ಗೊತ್ತೆಂದು ಮಥುರನಿಗೆ ತಿಳಿದಿತ್ತು. ಅವನ ಕೇಳಿಕೆಯಂತೆ ಅವರೇ ವಿಗ್ರಹವನ್ನು ದುರಸ್ತಿ ಮಾಡಿದ್ದರು. ಅವರು ಎಷ್ಟು ಚೆನ್ನಾಗಿ ಮುರಿದ ಕಾಲನ್ನು ಜೋಡಿಸಿದರೆಂದರೆ ಈಗಲೂ ಸೂಕ್ಷ್ಮವಾಗಿ ಪರಿಶೀಲಿಸ ದಿದ್ದರೆ ಒಮ್ಮೆ ವಿಗ್ರಹದ ಕಾಲು ಮುರಿದಿತ್ತೆಂದು ಹೇಳಲಾಗುವುದಿಲ್ಲ.

ಶ್ರೀರಾಧಾ ಗೋವಿಂದಜೀಯ ಈ ಭಗ್ನ ವಿಗ್ರಹವನ್ನು ಪೂಜಿಸುವುದು ಸರಿಯಲ್ಲ ಎಂದು ಅನೇಕರು ಆಕ್ಷೇಪಿಸಿದರು. ಆದರೆ ರಾಣಿಗೆ ಮತ್ತು ಮಥುರನಿಗೆ ಶ್ರೀರಾಮ

---

† ಈ ಘಟನೆಯ ವಿವರಣೆ ಗುರುಭಾವ, ಪೂರ್ವಾರ್ಧ, 6ನೇ ಅಧ್ಯಾಯದಲ್ಲಿ ಬರುವುದು.

ಕೃಷ್ಣರಲ್ಲಿ ಎಷ್ಟೊಂದು ವಿಶ್ವಾಸವಿತ್ತೆಂದರೆ ಅವರು ಇವಾವುದಕ್ಕೂ ಕಿವಿಗೊಡಲಿಲ್ಲ. ಅದು ಏನೇ ಆದರೂ, ಅರ್ಚಕನಾದ ಕ್ಷೇತ್ರನಾಥನು ತನ್ನ ಅಸಡ್ಡೆತನಕ್ಕಾಗಿ ಕೆಲಸವನ್ನು ಕಳೆದುಕೊಂಡನು. ಅವನ ಸ್ಥಾನದಲ್ಲಿ ಶ್ರೀರಾಮಕೃಷ್ಣರು ಅರ್ಚಕರಾದರು. ಹೃದಯನು ಶ್ರೀಕಾಳಿಮಾತೆಯ ಅಲಂಕಾರದ ಕೆಲಸವನ್ನು ಮಾಡತೊಡಗಿದನು.

10. ಇದೇ ಘಟನೆಗೆ ಸಂಬಂಧಿಸಿದಂತೆ ಹೃದಯನು ಇನ್ನೊಂದು ವಿಷಯವನ್ನು ನಮಗೆ ಹೇಳುತ್ತಿದ್ದನು. ಕಲಕತ್ತೆಯಿಂದ ಕೆಲವು ಮೈಲಿ ದೂರವಿರುವ ಬಾರಾನಗರದಲ್ಲಿ ಒಂದು ಸ್ನಾನಘಟ್ಟ ಇತ್ತು. ಅದು ಪ್ರಸಿದ್ಧ ಜಮೀದಾರನಾದ ರತನರಾಯನಿಗೆ ಸೇರಿದ್ದು. ಆ ಘಟ್ಟದ ಹತ್ತಿರ ಒಂದು ದಶಮಹಾವಿದ್ಯೆಯ ದೇವಸ್ಥಾನವಿತ್ತು. ಮೊದಲು ಅಲ್ಲಿ ಸರಿಯಾಗಿ ಪೂಜಾದಿಗಳು ನಡೆಯುತ್ತಿದ್ದುವು. ಈಗ ಅದು ಕಡೆಗಣಿಸಲ್ಪಟ್ಟಿತ್ತು. ಮುಂದೆ ಮಥುರನು ಶ್ರೀರಾಮಕೃಷ್ಣರ ಪರಮ ಭಕ್ತನಾದ ಮೇಲೆ ಅವರಿಬ್ಬರೂ ಆ ದೇವಸ್ಥಾನವನ್ನು ನೋಡಲು ಹೋದರು. ದೇವಸ್ಥಾನದ ದುಃಸ್ಥಿತಿಯನ್ನು ಕಂಡು ಶ್ರೀರಾಮಕೃಷ್ಣರು ಮಥುರನಿಗೆ ಪ್ರತಿ ತಿಂಗಳು ಎರಡು ಮಣ ಅಕ್ಕಿ ಮತ್ತು ಎರಡು ರೂಪಾಯಿ ಅಲ್ಲಿಗೆ ಕಳಿಸಬೇಕೆಂದು ಹೇಳಿದರು. ಆದಕ್ಕೆ ಮಥುರನು ಕೂಡಲೆ ಸಮ್ಮತಿಸಿದನು. ಒಂದು ದಿನ ಶ್ರೀರಾಮಕೃಷ್ಣರು ಆ ದೇವಸ್ಥಾನಕ್ಕೆ ಹೋಗಿ ಹಿಂದಿರುತ್ತಿರುಗುವಾಗ ಆ ಸ್ಥಳದ ಪ್ರಸಿದ್ಧ ಜಮೀಂದಾರನಾದ ಜಯನಾರಾಯಣ ಬಂದ್ಯೋಪಾಧ್ಯಾಯನನ್ನು ನೋಡಿದರು. ಅವನು ತಾನೇ ನಿರ್ಮಿಸಿದ ಘಟ್ಟದ ಮೇಲೆ ನಿಂತಿದ್ದನು. ಅವನ ಪರಿಚಯವಿದ್ದದ್ದರಿಂದ ಅವರು ಅವನನ್ನು ಮಾತನಾಡಿಸಲು ಹೋದರು, ಅವನು ಅವರನ್ನು ಆದರದಿಂದ ಬರಮಾಡಿಕೊಂಡು ತನ್ನ ಜತೆಯವರಿಗೆಲ್ಲ ಅವರ ಪರಿಚಯ ಮಾಡಿಸಿದನು. ಮಾತಿನ ಸಂದರ್ಭದಲ್ಲಿ ಕಾಳೀ ದೇವಾಲಯದ ವಿಷಯ ಬಂತು. ಅವನು ಶ್ರೀರಾಮಕೃಷ್ಣರನ್ನು ಕೇಳಿದ: "ಅಲ್ಲಿಯ ದೇವಸ್ಥಾನದ ಶ್ರೀಗೋವಿಂದನು ಮುರಿದುಹೋಗಿರುವನೆ?" ಶ್ರೀರಾಮಕೃಷ್ಣರು ಅದಕ್ಕೆ ಉತ್ತರಿಸಿದರು: "ನಿನ್ನದು ಎಂಥ ಬುದ್ಧಿ? ಅಖಂಡ ಮಂಡಲಾಕಾರನಾದವನು ಮುರಿದುಹೋಗುವನೆ?" ಜಯನಾರಾಯಣನ ಪ್ರಶ್ನೆ ವ್ಯರ್ಥ ಚರ್ಚೆಗೆ ಇಳಿಯಬಹುದೆಂದು ಶ್ರೀರಾಮಕೃಷ್ಣರು ವಿಷಯವನ್ನು ಬೇರೆಡೆಗೆ ತಿರುಗಿಸಿದರು. ಪ್ರತಿಯೊಂದು ವಿಷಯದಲ್ಲಿಯೂ ಸಾರ ವಸ್ತುವನ್ನು ಸ್ವೀಕರಿಸಿ ಅಸಾರವನ್ನು ಬಿಟ್ಟುಬಿಡಬೇಕೆಂದು ಅವನಿಗೆ ಉಪದೇಶಿಸಿದರು. ಜಾಣನಾದ ಜಯನಾರಾಯಣನೂ ಶ್ರೀರಾಮಕೃಷ್ಣರ ಇಂಗಿತವನ್ನು ಅರ್ಥಮಾಡಿಕೊಂಡು ಮತ್ತೆ ಅಂಥ ಪ್ರಶ್ನೆಯನ್ನು ಎತ್ತಲಿಲ್ಲ.

11. ಹೃದಯನು ಹೇಳುತ್ತಾನೆ—ಶ್ರೀರಾಮಕೃಷ್ಣರ ಪೂಜಾ ವಿಧಾನವನ್ನು ನೋಡುವವರೆಲ್ಲ ಮುಗ್ಧರಾಗಿ ಬಿಡುತ್ತಿದ್ದರು. ಭಾವದಿಂದ ತುಂಬಿ ಹರಿಯುವ ಅವರ ಆ ಮಧುರ ಗಾನ !—ಅದನ್ನು ಒಮ್ಮೆ ಕೇಳಿದವರು ಮತ್ತೆ ಮರೆಯುತ್ತಿರಲಿಲ್ಲ. ಅವರ ಹಾಡಿನಲ್ಲಿ ಸಂಗೀತ ವಿದ್ವಾಂಸರ ಯಾವ ಆಡಂಬರವೂ ಇರಲಿಲ್ಲ. ಹಾಡಿನ

ಭಾವವನ್ನು ಅವರು ಸಂಪೂರ್ಣ ಅನುಭವಿಸುತ್ತ ರಾಗ-ತಾಳ ಬದ್ಧವಾಗಿ ಹಾಡು ತ್ತಿದ್ದರು. ಸಂಗೀತದ ಉಸಿರೇ ಭಾವ—ಇದನ್ನು ಅವರ ಹಾಡನ್ನು ಕೇಳಿದವರು ಅರ್ಥ ಮಾಡಿಕೊಳ್ಳುತ್ತಿದ್ದರು. ರಾಗ-ತಾಳ ಶುದ್ಧವಾಗಿರದಿದ್ದರೆ ಭಾವವು ಸರಿಯಾಗಿ ಅಭಿವ್ಯಕ್ತವಾಗುವುದಿಲ್ಲ ಎಂಬುದು ಅವರು ಹಾಡುವುದನ್ನು ಕೇಳಿದಾಗ ಮತ್ತು ಅವರು ಹಾಡುವುದನ್ನು ಇತರರ ಹಾಡುಗಾರಿಕೆಗೆ ಹೋಲಿಸಿದಾಗ ನಮಗೆ ಅರಿವಾಗು ತ್ತಿತ್ತು. ರಾಣಿ ರಾಸಮಣಿ ದಕ್ಷಿಣೇಶ್ವರಕ್ಕೆ ಬಂದಾಗಲೆಲ್ಲ ಶ್ರೀರಾಮಕೃಷ್ಣರನ್ನು ಕರೆದು ಅವರ ಹಾಡನ್ನು ಕೇಳುತ್ತಿದ್ದಳು. ವಿಶೇಷವಾಗಿ ಈ ಕೆಳಗಿನ ಹಾಡು ಆಕೆಗೆ ಅತ್ಯಂತ ಪ್ರಿಯವಾಗಿತ್ತು :

ಹರನೆದೆಯ ಮೇಲೇರಿ ನಿಂತಿರುವೆಯಲ್ಲ
ಇದರರ್ಥವೇನು ತಾಯೇ ?
ಪುಟ್ಟ ಹುಡುಗಿಯ ಹಾಗೆ ನಾಲಗೆಯ ಚಾಚಿರುವೆ
ಇದು ನಿನ್ನ ಹುಟ್ಟು ಗುಣವೆ ?
ನಿನ್ನ ತಾಯಿಯು ಕೂಡ, ನಿನ್ನ ತಂದೆಯ ಮೇಲೆ
ಹೀಗೆಯೇ ನಿಂತಿದ್ದಳೆ ?

ಶ್ರೀರಾಮಕೃಷ್ಣರ ಹಾಡುಗಾರಿಕೆ ಸುಶ್ರಾವ್ಯವೂ ಮಧುರವೂ ಆಗಿದ್ದುದಕ್ಕೆ ಇನ್ನೂ ಒಂದು ಕಾರಣವುಂಟು. ಅದು, ಅವರು ಹಾಡುವ ಹಾಡಿನ ಭಾವದಲ್ಲಿ ಪಡೆಯು ತಿದ್ದ ತಲ್ಲೀನತೆ. ತಾವು ಬೇರೆ ಯಾರ ಪ್ರೀತಿಗಾಗಿಯೊ ಹಾಡುತ್ತಿರುವುದೆಂಬುದನ್ನು ಸಂಪೂರ್ಣ ಮರೆತುಬಿಡುತ್ತಿದ್ದರು. ಗೀತೆಯ ಭಾವದಲ್ಲಿ ಮುಗ್ಧರಾಗಿ ತಮ್ಮನ್ನು ತಾವೇ ಆ ರೀತಿ ಮರೆಯುವುದನ್ನು ನಾವು ಬೇರಾರಲ್ಲಿಯೂ ಕಂಡಿರಲಿಲ್ಲ. ತುಂಬ ಭಾವುಕರಾದ ಗಾಯಕರೂ ಕೂಡ ಶ್ರೋತೃಗಳ ಪ್ರಶಂಸೆಯನ್ನು ಸ್ವಲ್ಪವಾದರೂ ನಿರೀಕ್ಷಿಸುತ್ತಾರೆ. ಶ್ರೀರಾಮಕೃಷ್ಣರು ಹಾಡುವುದನ್ನು ಕೇಳಿ ಯಾರಾದರೂ ಅವರನ್ನು ಪ್ರಶಂಸಿಸಿದರೆ ಆ ವ್ಯಕ್ತಿಯು ಗೀತೆಯ ಭಾವವನ್ನು ಪ್ರಶಂಸಿಸುತ್ತಿರುವನೇ ಹೊರತು, ಆ ಪ್ರಶಂಸೆ ತಮಗೆ ಸಲ್ಲಬೇಕಾದುದಲ್ಲ ಎಂದು ಹೃತ್ಪೂರ್ವಕವಾಗಿ ಅವರು ಭಾವಿಸು ತ್ತಿದ್ದರು.

12. ಶ್ರೀರಾಮಕೃಷ್ಣರು ಹಾಡುತ್ತಿದ್ದಂತೆಯೇ ಎರಡು ಕಣ್ಣಿನಿಂದಲೂ ನೀರು ಧಾರಾಕಾರವಾಗಿ ಹರಿದು ಅವರ ಎದೆ ಒದ್ದೆಯಾಗುತ್ತಿತೆಂದು ಹೃದಯ ಹೇಳುತ್ತಾನೆ. ಹಾಗೆಯೇ ಪೂಜೆಯ ಸಂದರ್ಭದಲ್ಲಿಯೂ ಅವರು ಎಷ್ಟೊಂದು ತನ್ಮಯರಾಗಿರುತ್ತಿದ್ದ ರೆಂದರೆ ಆ ಸಮಯದಲ್ಲಿ ಯಾರಾದರೂ ಅಲ್ಲಿಗೆ ಹೋದರೆ, ಮಾತನಾಡಿದರೆ ಅದೊಂದೂ ಅವರಿಗೆ ತಿಳಿಯುತ್ತಿರಲಿಲ್ಲ. ಕರನ್ಯಾಸ ಅಂಗನ್ಯಾಸಾದಿ ಪೂಜಾವಿಧಿಗಳನ್ನು ಆಚರಿಸುವಾಗ ಉಜ್ವಲವಾಗಿ ಬೆಳಗುವ ಮಂತ್ರಾಕ್ಷರಗಳು ತಮ್ಮ ದೇಹದಲ್ಲಿ ಸ್ಥಾಪಿತವಾಗುವುದು ತಮಗೆ ಕಾಣುತ್ತಿತ್ತೆಂದು ಅವರೇ ಹೇಳುತ್ತಿದ್ದರು. ಕುಂಡಲಿನಿ ಶಕ್ತಿಯು ಸುಷುಮ್ನಾ ನಾಡಿಯ ಮೂಲಕ ಮೇಲೇರಿ ಸಹಸ್ರಾರವನ್ನು ತಲುಪುವುದನ್ನು ಅವರು ಪ್ರತ್ಯಕ್ಷವಾಗಿ

ಕಾಣುತ್ತಿದ್ದರಂತೆ. ಆ ಶಕ್ತಿಯು ಒಂದೊಂದೇ ಅಂಗವನ್ನು ಬಿಟ್ಟು ಮುಂಬರಿಯು ವಾಗ ಅದು ಹಿಂದೆ ಬಿಟ್ಟ ಅಂಗಗಳು ನಿಶ್ಚಲವೂ ಅಚೇತನವೂ ಆಗುತ್ತಿದ್ದವಂತೆ. ಅವರು 'ರಂ' ಮಂತ್ರವನ್ನು ಉಚ್ಚರಿಸಿ ಸುತ್ತಲೂ ನೀರನ್ನು ಎರಚಿ ಅಗ್ನಿಪ್ರಾಕಾರವನ್ನು ಚಿಂತಿಸಿದಾಗ ನಿಜವಾಗಿಯೂ ಅವರ ಸುತ್ತ ಒಂದು ಅಗ್ನಿಯ ವರ್ತುಲವನ್ನು ಅವರು ಕಾಣುತ್ತಿದ್ದರು. ಪೂಜೆಯ ಸಮಯದಲ್ಲಿ ಶ್ರೀರಾಮಕೃಷ್ಣರ ತೇಜಃಪುಂಜವಾದ ದೇಹ ವನ್ನೂ ಆ ಅಪೂರ್ವ ಭಕ್ತಿಭಾವವನ್ನೂ ನೋಡಿ ಇತರ ಬ್ರಾಹ್ಮಣರು, "ಸಾಕ್ಷಾತ್ ವಿಷ್ಣುವೇ ನರಶರೀರವನ್ನು ಧರಿಸಿ ಪೂಜೆಮಾಡಲು ಕುಳಿತಂತಿದೆ" ಎಂದು ಭಾವಿಸು ತ್ತಿದ್ದರಂತೆ.

13. ದೇವೀಭಕ್ತನಾದ ರಾಮಕುಮಾರನು ದಕ್ಷಿಣೇಶ್ವರಕ್ಕೆ ಬಂದಮೇಲೆ ಅವನ ಆರ್ಥಿಕಪರಿಸ್ಥಿತಿ ಸುಧಾರಿಸಿದರೂ ಇನ್ನೊಂದು ಚಿಂತೆ ಅವನನ್ನು ಆಗಾಗ ಕಾಡುತ್ತಿತ್ತು. ಅದು ಅವನ ತಮ್ಮನ ವಿಚಾರವಾಗಿ. ಶ್ರೀರಾಮಕೃಷ್ಣರು ದಕ್ಷಿಣೇಶ್ವರಕ್ಕೆ ಬಂದಮೇಲೆ ಅವರು ಹೆಚ್ಚು ಹೆಚ್ಚು ನಿರ್ಜನಪ್ರಿಯರಾಗುತ್ತಿದ್ದರು. ಸಂಸಾರದ ವಿಷಯದಲ್ಲಿ ಉದಾಸೀನಭಾವ ಅವರಲ್ಲಿ ಉಂಟಾಗಿತ್ತು. ಸಂಸಾರದ ಪರಿಸ್ಥಿತಿಯನ್ನು ಉತ್ತಮ ಪಡಿಸುವುದು ಹೇಗೆ ಎಂಬ ವಿಷಯದ ಕಡೆ ಅವರು ಸ್ವಲ್ಪವೂ ಗಮನ ಹರಿಸುತ್ತಿರ ಲಿಲ್ಲ. ಬೆಳಗ್ಗೆ ಮತ್ತು ಸಂಜೆ ಮಂದಿರದಿಂದ ದೂರ ಹೋಗಿ ಗಂಗಾತೀರದಲ್ಲಿ ಓಡಾಡು ತ್ತಿದ್ದರು, ಇಲ್ಲವೇ ಪಂಚವಟಿಯಲ್ಲಿ ಸ್ಥಿರವಾಗಿ ಕುಳಿತುಬಿಡುತ್ತಿದ್ದರು. ಕೆಲವೊಮ್ಮೆ ಪಂಚವಟಿಯ ಸುತ್ತ ಇದ್ದ ಕಾಡಿನೊಳಗೆ ಹೋಗಿ ಬಹಳ ಹೊತ್ತಿನ ನಂತರ ಹಿಂದಿರುಗು ತ್ತಿದ್ದರು. ಇದನ್ನೆಲ್ಲ ನೋಡಿ ರಾಮಕುಮಾರನು ಮೊದಲು ಭಾವಿಸಿದನು ತಮ್ಮನಿಗೆ ತನ್ನ ತಾಯಿಯ ಹತ್ತಿರ ಹೋಗಬೇಕೆಂಬ ಚಿಂತೆಯಾಗಿರಬೇಕು—ಎಂದು. ಆದರೆ ತಾವು ತಾಯಿಯನ್ನು ನೋಡಲು ಕಾಮಾರಪುಕುರಕ್ಕೆ ಹೋಗಬೇಕು ಎಂದು ಅವರು ಬಾಯಿಬಿಟ್ಟು ಯಾವಾಗಲೂ ಹೇಳಿರಲಿಲ್ಲ. ಈ ಬಗ್ಗೆ ಅವರನ್ನು ವಿಚಾರಿಸಿದಾಗಲೂ ಅವರು ಈ ಆಸೆಯನ್ನು ವ್ಯಕ್ತಪಡಿಸಿರಲಿಲ್ಲ. ಆದ್ದರಿಂದ ಅವರನ್ನು ಮನೆಗೆ ಹಿಂತಿರುಗಿ ಕಳಿಸುವ ವಿಚಾರವನ್ನು ಕೈಬಿಟ್ಟನು. ತನಗೂ ವಯಸ್ಸಾಗುತ್ತಿದೆ, ದೇಹವೂ ಬಳಲಿದೆ, ಯಾವಾಗ ಪ್ರಾಣಪಕ್ಷಿ ಹಾರಿಹೋಗುವುದೊ ತಿಳಿಯದು—ಹೀಗಿರುವಾಗ ತಮ್ಮನು ತನ್ನ ಕಾಲಮೇಲೆ ತಾನು ನಿಂತು ಹಣಸಂಪಾದನೆ ಮಾಡಿ ಸಂಸಾರದ ಹೊರೆಯನ್ನು ಹೊರುವ ಸಾಮರ್ಥ್ಯ ಅವನಿಗೆ ಎಂದು ಬರುವುದು—ಇದೊಂದೇ ರಾಮಕುಮಾರನಿಗೆ ಚಿಂತೆ. ಶ್ರೀರಾಮಕೃಷ್ಣರು ದೇವಸ್ಥಾನದ ಕೆಲಸವನ್ನು ವಹಿಸಿಕೊಂಡು ಅದನ್ನು ದಕ್ಷ ರೀತಿಯಲ್ಲಿ ನೆರವೇರಿಸುತ್ತಿದ್ದುದನ್ನು ಕಂಡು ಅವನಿಗೆ ಎಷ್ಟೊ ಸಮಾಧಾನವುಂಟಾಗಿತ್ತು. ಈಗ ಅವರಿಗೆ ಚಂಡೀಪಾಠ, ಶ್ರೀಕಾಳೀ ಮತ್ತು ಇತರ ದೇವದೇವಿಯರ ಪೂಜಾ ವಿಧಾನಗಳನ್ನು ಕಲಿಸಿಕೊಡತೊಡಗಿದನು. ತಾನಿಲ್ಲದಿದ್ದರೂ ಪೂಜೆ ಸರಿಯಾಗಿ ನಡೆಯ ಬೇಕೆಂಬುದು ಅವನ ಉದ್ದೇಶವಾಗಿತ್ತು. ಶ್ರೀರಾಮಕೃಷ್ಣರು ಬಹುಬೇಗನೆ ಎಲ್ಲ ಧಾರ್ಮಿಕ ಕ್ರಿಯೆಗಳನ್ನೂ ಕಲಿತರು. ಶಕ್ತಿಮಂತ್ರದ ದೀಕ್ಷೆಪಡೆಯದೆ ದೇವೀಪೂಜೆ

ಮಾಡುವುದು ಸರಿಯಲ್ಲ ಎಂದು ಕೇಳಿದ್ದರಿಂದ ಈಗ ಅದನ್ನು ಪಡೆಯುವ ಸಂಕಲ್ಪ ಮಾಡಿದರು.

14. ಕೇನಾರಾಮ ಭಟ್ಟಾಚಾರ್ಯ ಎಂಬ ಪ್ರಸಿದ್ಧ ಶಕ್ತಿಸಾಧಕನು ಕಲಕತ್ತೆಯ ಬೈತಕ್‌ಖಾನಾ ಬಜಾರಿನಲ್ಲಿ ವಾಸಿಸುತ್ತಿದ್ದನು. ದಕ್ಷಿಣೇಶ್ವರದ ಕಾಳೀ ದೇವಾಲಯಕ್ಕೆ ಅವನು ಆಗಾಗ ಬರುತ್ತಿದ್ದನು. ಮಥುರನಾಥ ಮುಂತಾದವರ ಪರಿಚಯವೂ ಅವನಿಗೆ ಇತ್ತೆಂದು ಕಾಣುತ್ತದೆ. ಅವನ ಪರಿಚಯವಿದ್ದವರೆಲ್ಲ ಅವನನ್ನು ಸಾಧಕನೆಂದು ಪರಿಗಣಿಸಿ ವಿಶೇಷ ಆದರ ನೀಡುತ್ತಿದ್ದರೆಂದು ಹೃದಯನು ಹೇಳುತ್ತಿದ್ದನು. ರಾಮಕುಮಾರನ ಪರಿಚಯವಂತೂ ಅವನಿಗೆ ಮೊದಲಿನಿಂದಲೂ ಇತ್ತು. ಶ್ರೀರಾಮಕೃಷ್ಣರು ಇವನಿಂದ ದೀಕ್ಷೆಯನ್ನು ಸ್ವೀಕರಿಸಿದರು. ಆ ಸಂದರ್ಭದಲ್ಲಿ ಅವರು ಭಾವಾವೇಶದಿಂದ ಸಮಾಧಿಸ್ಥರಾಗಿದ್ದರು. ಕೇನಾರಾಮನು ಅವರ ಭಕ್ತಿಯನ್ನು ನೋಡಿ ಮುಗ್ಧನಾಗಿ ಅವರ ಇಷ್ಟಾರ್ಥ ಈಡೇರಲೆಂದು ಹೃತ್ಪೂರ್ವಕವಾಗಿ ಆಶೀರ್ವದಿಸಿದನು.

15. ಈಗ ರಾಮಕುಮಾರನು ಶ್ರೀರಾಮಕೃಷ್ಣರಿಗೆ ಕಾಳೀ ಪೂಜೆ ಮಾಡಲು ಹೇಳಿ ತಾನು ಶ್ರೀ ರಾಧಾಗೋವಿಂದ ದೇವಾಲಯದ ಕಾರ್ಯವನ್ನು ವಹಿಸಿಕೊಳ್ಳಬೇಕೆಂದು ನಿರ್ಧರಿಸಿದನು. ಇದು ದೇಹಬಳಲಿಕೆಯ ಕಾರಣದಿಂದಾಗಿರಬಹುದು ಅಥವಾ ಶ್ರೀರಾಮಕೃಷ್ಣರಿಗೆ ಆ ಕಾರ್ಯ ಅಭ್ಯಾಸವಾಗಲಿ ಎಂಬ ಕಾರಣದಿಂದಲೂ ಇರಬಹುದು. ಇದನ್ನು ತಿಳಿದ ಮಥುರನು ರಾಮಕುಮಾರನನ್ನೇ ಶಾಶ್ವತವಾಗಿ ವಿಷ್ಣುದೇವಾಲಯದ ಅರ್ಚಕನನ್ನಾಗಿ ನಿಯಮಿಸಿ ಶ್ರೀರಾಮಕೃಷ್ಣರನ್ನು ಕಾಳಿಯ ಅರ್ಚಕರನ್ನಾಗಿ ನಿಯಮಿಸಿದನು. ರಾಮಕುಮಾರನಿಗೆ ವಯಸ್ಸಾಗಿದೆ. ಕಾಳೀ ಪೂಜೆ ಮಾಡುವಷ್ಟು ಶಕ್ತಿಯಿಲ್ಲ ಎಂದು ಅವನಿಗೂ ಅನಿಸಿರಬೇಕು. ರಾಮಕುಮಾರನಿಗೆ ಈ ವ್ಯವಸ್ಥೆಯಿಂದ ತುಂಬ ಸಂತೋಷವಾಯಿತು. ತಮ್ಮನಿಗೆ ಪೂಜೆಗೆ ಸಂಬಂಧಪಟ್ಟ ಎಲ್ಲ ಕೆಲಸಗಳನ್ನೂ ಕಲಿಸಿಕೊಟ್ಟು ಈಗ ನಿಶ್ಚಿಂತನಾದನು. ಇದಾಗಿ ಸ್ವಲ್ಪಕಾಲದ ನಂತರ ರಾಮಕುಮಾರನು ಕೆಲವು ದಿನಗಳಮಟ್ಟಿಗೆ ಮನೆಗೆ ಹೋಗಿಬರಬೇಕೆಂದು ನಿರ್ಧರಿಸಿದನು. ವಿಷ್ಣು ಮಂದಿರದ ಪೂಜಾಕಾರ್ಯವನ್ನು ಮಥುರನಾಥನ ಅನುಮತಿಯನ್ನು ಪಡೆದು ಹೃದಯನಿಗೆ ವಹಿಸಿಕೊಟ್ಟನು. ಆದರೆ ಅವನು ಮನೆಗೆ ಹೋಗಲಾಗಲಿಲ್ಲ. ಮನೆಗೆ ಹೋಗುವ ವ್ಯವಸ್ಥೆ ನಡೆದಿತ್ತು. ಒಂದು ದಿನ ಕೆಲಸದ ನಿಮಿತ್ತ ಕಲಕತ್ತೆಯ ಉತ್ತರಕ್ಕಿರುವ ಶ್ಯಾಮನಗರ ಮೂಲಾಜೋರ್ ಎಂಬ ಸ್ಥಳಕ್ಕೆ ಹೋಗಿದ್ದಾಗ ಅಲ್ಲಿಯೇ ಮೃತ್ಯುವಶನಾದನು. ರಾಮಕುಮಾರನು ಕಾಳೀ ದೇವಾಲಯದ ಅರ್ಚಕನಾಗಿ ಕೇವಲ ಒಂದುವರ್ಷ ಕೆಲಸ ಮಾಡಿದ್ದನು. ಬಹುಶಃ ಕ್ರಿ.ಶ. ೧೮೫೬ರ ಮಧ್ಯಭಾಗದಲ್ಲಿ ಅವನು ಮೃತಪಟ್ಟಿರಬೇಕು.

ಆರನೆಯ ಅಧ್ಯಾಯ

ವ್ಯಾಕುಲತೆ ಮತ್ತು ಪ್ರಥಮ ದರ್ಶನ

1. ಈ ಕಾಲದಲ್ಲಿ ಶ್ರೀರಾಮಕೃಷ್ಣರ ವರ್ತನೆಗಳು. 2. ಅದನ್ನು ನೋಡಿ ಹೃದಯನ ಕಾತರತೆ, 3. ಆ ಸಮಯದಲ್ಲಿ ಪಂಚವಟಿ ಪ್ರದೇಶದ ಪರಿಸ್ಥಿತಿ, 4. ಶ್ರೀರಾಮಕೃಷ್ಣರು ಆಮಲಕ ವೃಕ್ಷದ ಕೆಳಗೆ ಧ್ಯಾನ ಮಾಡುತ್ತಿದ್ದರು 5. 'ಪಾಶಮುಕ್ತನಾಗಿ ಧ್ಯಾನ ಮಾಡಬೇಕು' 6. ಶ್ರೀರಾಮಕೃಷ್ಣರು ಮಾನಸಿಕ ವಾಗಿಯೂ ಭೌತಿಕವಾಗಿಯೂ ತ್ಯಾಗ ಮಾಡುತ್ತಿದ್ದರು 7. ಶ್ರೀರಾಮಕೃಷ್ಣರ ತ್ಯಾಗದ ಕ್ರಮ, 8. ಈ ತ್ಯಾಗ ಕ್ರಮವನ್ನು ಕುರಿತು ಆಕ್ಷೇಪಣೆ ಮತ್ತು ಪರಿಹಾರ 9. ಶ್ರೀರಾಮಕೃಷ್ಣರ ಪೂಜಾ ವಿಧಾನ, 10. ಅವರ ವರ್ತನೆಗಳ ಬಗ್ಗೆ ಇತರರ ಅನಿಸಿಕೆಗಳು, 11. ಭಗವತ್ಪ್ರೀತಿಯ ತೀವ್ರತೆಯಿಂದಾಗಿ ಅವರ ದೇಹದಲ್ಲಿ ಪರಿ ವರ್ತನೆ, 12. ಜಗನ್ಮಾತೆಯ ಪ್ರಥಮ ದರ್ಶನ—ಆ ಸಮಯದಲ್ಲಿ ಶ್ರೀರಾಮ ಕೃಷ್ಣರ ವ್ಯಾಕುಲತೆ.

1. ಶ್ರೀರಾಮಕೃಷ್ಣರು ಚಿಕ್ಕವರಿರುವಾಗಲೇ ಅವರ ತಂದೆಯು ಕಾಲವಾದನು. ಅನಂತರ ಅಣ್ಣ ರಾಮಕುಮಾರ ಮತ್ತು ತಾಯಿ ಚಂದ್ರಮಣಿ ಇವರ ಪಾಲನೆಯಲ್ಲಿ ಅವರು ಬೆಳೆದರು. ರಾಮಕುಮಾರನು ಶ್ರೀರಾಮಕೃಷ್ಣರಿಗಿಂತ ಸುಮಾರು ಮೂವ ತ್ತೊಂದು ವರ್ಷ ದೊಡ್ಡವನು. ಶ್ರೀರಾಮಕೃಷ್ಣರ ಪಿತೃಭಕ್ತಿಯು ಒಂದಂಶವನ್ನು ಅವನು ಪಡೆದನು. ಪಿತೃಸಮಾನನಾದ ರಾಮಕುಮಾರನು ಇದ್ದಕ್ಕಿದ್ದಂತೆಯೇ ಮೃತ್ಯು ವಶನಾಗಲು ಶ್ರೀರಾಮಕೃಷ್ಣರು ಅತ್ಯಂತ ವ್ಯಥೆಗೀಡಾದರು. ಇದರಿಂದ ಸಂಸಾರವು ಅನಿತ್ಯವೆಂಬ ಭಾವನೆ ಇನ್ನೂ ದೃಢವಾಯಿತು. ಅವರಲ್ಲಿ ವೈರಾಗ್ಯದ ಬೆಂಕಿ ಇನ್ನೂ ಜೋರಾಗಿ ಪ್ರಜ್ವಲಿಸತೊಡಗಿತು. ಈ ಘಟನೆಯ ನಂತರ ಅವರು ಪೂಜೆಯ ಕಡೆ ಹೆಚ್ಚು ಮನಸ್ಸನ್ನು ಹರಿಸಿದರು. ಜಗನ್ಮಾತೆಯ ದರ್ಶನ ವಾಸ್ತವಿಕವಾಗಿ ಸಾಧ್ಯವೇ ಎಂಬುದನ್ನು ತಿಳಿಯಲು ಅವರ ಮನಸ್ಸು ಈಗ ವ್ಯಾಕುಲವಾಯಿತು. ಪೂಜೆಯ ನಂತರ ಮಂದಿರದ ಮಧ್ಯೆ ಜಗನ್ಮಾತೆಯ ಹತ್ತಿರ ಕುಳಿತು ತದೇಕಚಿತ್ತರಾಗಿ ದಿನಕಳೆಯು ತ್ತಿದ್ದರು. ರಾಮಪ್ರಸಾದ ಮತ್ತು ಕಮಲಾಕಾಂತ ಇವರು ರಚಿಸಿದ ಹಾಡುಗಳನ್ನು ಹೇಳುತ್ತ ಭಾವವಿಹ್ವಲರಾಗಿಬಿಡುತ್ತಿದ್ದರು. ವ್ಯರ್ಥ ಮಾತಿನಿಂದ ಅವರು ಸಮಯವನ್ನು ಹಾಳುಮಾಡುತ್ತಿರಲಿಲ್ಲ. ರಾತ್ರಿ ಮಂದಿರದ ಬಾಗಿಲು ಮುಚ್ಚಿದ ಮೇಲೆ ಜನರ ಸಂಗವನ್ನು ತೊರೆದು ಪಂಚವಟಿಯ ಹತ್ತಿರದ ಕಾಡಿಗೆ ಹೋಗಿ ಜಗನ್ಮಾತೆಯ ಚಿಂತನೆ ಯಲ್ಲಿ ಕಾಲ ಕಳೆಯುತ್ತಿದ್ದರು.

2. ಶ್ರೀರಾಮಕೃಷ್ಣರ ಈ ರೀತಿಯ ವರ್ತನೆ ಹೃದಯನಿಗೆ ಮೆಚ್ಚಿಗೆಯಾಗು

ತ್ತಿರಲಿಲ್ಲ. ಆದರೆ ಅವನು ಏನುಮಾಡಿಯಾನು? ಬಾಲ್ಯದಿಂದಲೂ ಅವರು ತಾವು ಏನು ಮಾಡಬೇಕೆಂದುಕೊಳ್ಳುವರೊ ಅದರಂತೆಯೇ ಮಾಡಬೇಕು, ಇದನ್ನು ಯಾರಿಂದಲೂ ತಡೆಯಲಾಗುತ್ತಿರಲಿಲ್ಲ. ಇದು ಹೃದಯನಿಗೆ ಗೊತ್ತಿತ್ತು. ಇದಕ್ಕೆ ಅಡ್ಡಿಮಾಡುವುದ ರಿಂದ ಯಾವ ಪ್ರಯೋಜನವೂ ಇಲ್ಲ. ದಿನದಿನವೂ ಅವರ ಈ ಭಾವ ವೃದ್ಧಿಯಾಗು ತ್ತಿರಲು ಹೃದಯನಿಗೆ ಸುಮ್ಮನಿರಲು ಆಗಲಿಲ್ಲ. ಶ್ರೀರಾಮಕೃಷ್ಣರು ರಾತ್ರಿ ನಿದ್ರೆ ಮಾಡದೆ ಪಂಚವಟಿಯ ಕಡೆ ಹೋಗುವುದನ್ನು ತಿಳಿದ ಹೃದಯನು ತುಂಬ ಚಿಂತಾಮಗ್ನ ನಾದನು. ಏಕೆಂದರೆ, ಮಂದಿರದಲ್ಲಿ ಕೆಲಸದ ಪರಿಶ್ರಮವೊಂದುಕಡೆ, ಅವರು ಮೊದಲಿ ನಂತೆ ಆಹಾರವನ್ನು ಸ್ವೀಕರಿಸದೇ ಇರುವುದು ಮತ್ತೊಂದುಕಡೆ. ಈ ಪರಿಸ್ಥಿತಿಯಲ್ಲಿ ನಿದ್ರೆಯನ್ನು ಸರಿಯಾಗಿ ಮಾಡದಿದ್ದರೆ ಶರೀರದ ಆರೋಗ್ಯ ಕೆಡುವುದಿಲ್ಲವೆ? ಇದಕ್ಕೆ ಏನಾದರೂ ಮಾಡಬೇಕೆಂದು ಹೃದಯನು ನಿಶ್ಚಯಿಸಿದನು.


3. ಪಂಚವಟಿಯ ಹತ್ತಿರದ ಜಾಗ ಈಗಿನಂತೆ ಸಮತಟ್ಟಾಗಿರಲಿಲ್ಲ. ಅದು ಅನೇಕ ಹಳ್ಳ ತಿಟ್ಟುಗಳಿಂದಲೂ ಕಾಡಿನಿಂದಲೂ ತುಂಬಿಹೋಗಿತ್ತು. ಕಾಡು ಮರಗಳ ಮಧ್ಯೆ ಒಂದು ನೆಲ್ಲಿಯ (ಆಮಲಕದ) ಮರವೂ ಅಲ್ಲಿ ಬೆಳೆದಿತ್ತು. ಅದು ಕೇವಲ ಕಾಡುಮಾತ್ರವಲ್ಲ, ಶ್ಮಶಾನವೂ ಆಗಿತ್ತು. ಆದ್ದರಿಂದ ಹಗಲೂ ಕೂಡ ಜನರು ಆಕಡೆ ಹೋಗಲು ಭಯಪಡುತ್ತಿದ್ದರು. ಹೋದರೂ ಕಾಡಿನ ಒಳಗೆ ಹೋಗತ್ತಿರಲಿಲ್ಲ. ರಾತ್ರಿಯ ಸಮಯದಲ್ಲಂತೂ ಭೂತದ ಭಯದಿಂದ ಜನರು ಆಕಡೆ ತಿರುಗಿಯೂ ನೋಡು ತ್ತಿರಲಿಲ್ಲ. ಆ ಆಮಲಕ ಮರವು ಒಂದು ಹಳ್ಳದಲ್ಲಿ ಇದ್ದುದರಿಂದ ಅದರ ಕೆಳಗೆ ಕುಳಿತರೆ ಕಾಡಿನ ಹೊರಗಿನ ಉನ್ನತ ಪ್ರದೇಶದಿಂದ ನೋಡಿದರೂ ಒಳಗಿನದು ಯಾರಿಗೂ ಕಾಣಿಸುತ್ತಿರಲಿಲ್ಲ. ಶ್ರೀರಾಮಕೃಷ್ಣರು ರಾತ್ರಿಯಹೊತ್ತು ಅಲ್ಲಿಯೇ ಕುಳಿತು ಧ್ಯಾನ ಜಪಾದಿಗಳನ್ನು ಮಾಡುತ್ತಿದ್ದರು.

4. ಶ್ರೀರಾಮಕೃಷ್ಣರು ರಾತ್ರಿ ಅಲ್ಲಿಗೆ ಹೋಗುತ್ತಿರುವುದನ್ನು ಗಮನಿಸಿದ ಹೃದಯನು ಒಂದುದಿನ ಅವರ ಹಿಂದೆಯೇ ಹೋದನು. ಅವರು ಕಾಡನ್ನು ಪ್ರವೇಶಿ ಸಲು ಮುಂದೆ ಹೋದರೆ ಅವರಿಗೆ ತಿಳಿದು ಕೋಪಿಸಿಕೊಳ್ಳಬಹುದೆಂದು ಅಲ್ಲಿಯೆ ಮರೆ ಯಾಗಿ ನಿಂತನು. ಅವರಿಗೆ ಹೇಗಾದರೂ ಮಾಡಿ ಭಯ ಹುಟ್ಟಿಸಬೇಕೆಂದು ಅವನು ಸುತ್ತಮುತ್ತ ಕಲ್ಲು ಎಸೆಯತೊಡಗಿದನು. ಅವರು ಏನುಮಾಡಿದರೂ ಹಿಂದಿರುಗದಿರಲು ಅನಿವಾರ್ಯವಾಗಿ ತಾನೆ ಮನೆಗೆ ಹಿಂದಿರುಗಿದನು. ಮರುದಿನ ಅವಕಾಶಮಾಡಿಕೊಂಡು ಅವರನ್ನು ವಿಚಾರಿಸಿದ, "ರಾತ್ರಿ ಕಾಡಿನೊಳಗೆ ಹೋಗಿ ಅಲ್ಲಿ ಏನು ಮಾಡುತ್ತಿಯೆ ಹೇಳು?" ಶ್ರೀರಾಮಕೃಷ್ಣರು ಉತ್ತರಿಸಿದರು: "ಅಲ್ಲಿ ಒಂದು ಆಮಲಕ ಮರವಿದೆ, ಅದರ ಕೆಳಗೆ ಕುಳಿತು ಧ್ಯಾನಮಾಡುತ್ತೇನೆ. ಆಮಲಕ ಮರದಲ್ಲಿ ಕುಳಿತು ಯಾವ ಆಸೆ ಯಿಟ್ಟುಕೊಂಡು ಧ್ಯಾನ ಮಾಡಿದರೂ ಆ ಆಸೆ ಪೂರ್ತಿಯಾಗುವುದು ಎಂದು ಶಾಸ್ತ್ರದಲ್ಲಿ ಹೇಳಿದೆ."

5. ಈ ಘಟನೆಯ ನಂತರ ಶ್ರೀರಾಮಕೃಷ್ಣರು ಆಮಲಕ ವೃಕ್ಷದ ಕೆಳಗೆ

ಕುಳಿತು ಧ್ಯಾನಮಾಡುವಾಗ ಕಲ್ಲು ಬೀಳುವುದೇ ಮುಂತಾದ ವಿಘ್ನಗಳು ಪ್ರಾರಂಭ ವಾದವು. ಇದು ಹೃದಯನ ಕೆಲಸವೆಂದು ತಿಳಿದೂ ಅವರು ಏನೂ ಹೇಳಲಿಲ್ಲ. ಅವರಿಗೆ ಭಯಹುಟ್ಟಿಸಿ ಅವರು ಅಲ್ಲಿಗೆ ಹೋಗುವುದನ್ನು ನಿಲ್ಲಿಸಲು ಸಾಧ್ಯವಾಗದಿರಲು ಹೃದಯ ನಿಗೆ ಸುಮ್ಮನಿರಲಾಗಲಿಲ್ಲ, ಒಂದುದಿನ ಅವನು ಕಾಡಿನೊಳಗೆ ಹೋಗಿ ದೂರದಿಂದ ಅವರನ್ನು ವೀಕ್ಷಿಸಿದನು. ಅವರು ಬಟ್ಟೆಯನ್ನೂ ಯಜ್ಞೋಪವೀತವನ್ನೂ ಕಳಚಿಹಾಕಿ ಸುಖಾಸೀನರಾಗಿ ಧ್ಯಾನಮಾಡುತ್ತಿದ್ದಾರೆ. ನೋಡಿ ಹೃದಯನು ಭಾವಿಸತೊಡಗಿದ: "ಏನು, ಮಾವ ಹುಚ್ಚನಾದನೆ ? ಹುಚ್ಚರೆ ತಾನೆ ಹೀಗೆ ವರ್ತಿಸುವುದು ? ಧ್ಯಾನ ಮಾಡಬೇಕಾದರೆ ಮಾಡಲಿ, ಆದರೆ ಈ ರೀತಿ ಬರಿಮೈಯಲ್ಲಿ ಏಕೆ ?" ಕೂಡಲೆ ಅವನು ಶ್ರೀರಾಮಕೃಷ್ಣರ ಹತ್ತಿರ ಹೋಗಿ, ಅವರನ್ನು ಕುರಿತು ಹೇಳಿದ: "ಇದೇನಿದು ನೀನು ಮಾಡುತ್ತಿರುವುದು ? ಬಟ್ಟೆ ಜನಿವಾರ ಎಲ್ಲ ತೆಗೆದುಹಾಕಿ ಬರಿಮೈಯಲ್ಲಿ ಹೀಗೆ ಕುಳಿ ತಿದ್ದೀಯಲ್ಲ ?" ಕೆಲವೊಮ್ಮೆ ಕೂಗಿ ಕರೆದ ಮೇಲೆ ಶ್ರೀರಾಮಕೃಷ್ಣರಿಗೆ ಎಚ್ಚರ ವಾಯಿತು. ಹೃದಯನು ಮುಂದೆ ನಿಂತಿರುವುದನ್ನು ಕಂಡು ಹೇಳಿದರು: "ನಿನಗೇನು ಗೊತ್ತು? ಈ ರೀತಿ ಎಲ್ಲ ಪಾಶಗಳಿಂದ ಮುಕ್ತನಾಗಿ ಧ್ಯಾನ ಮಾಡಬೇಕು. ಮನುಷ್ಯನು ಘೃಣಾ, ಲಜ್ಜೆ, ಕುಲ, ಶೀಲ, ಭಯ, ಮಾನ, ಜಾತಿ ಮತ್ತು ಅಭಿಮಾನ—ಈ ಎಂಟು ಪಾಶಗಳಿಂದ ಬದ್ಧನಾಗಿರುವನು. ಈ ಜನಿವಾರವೂ 'ನಾನು ಬ್ರಾಹ್ಮಣ, ಸಕಲರಿಗಿಂತ ಉಚ್ಚ'-ಎಂಬ ಅಭಿಮಾನದ ಚಿಹ್ನೆ ಮತ್ತು ಅದೊಂದು ಪಾಶ. ತಾಯಿಯನ್ನು ಕರೆಯುವಾಗ ಈ ಎಲ್ಲ ಪಾಶಗಳನ್ನೂ ಕಿತ್ತೊಗೆದು ಒಂದೇ ಮನಸ್ಸಿನಿಂದ ಕರೆಯಬೇಕು. ಆದ್ದರಿಂದಲೇ ಇವನ್ನೆಲ್ಲ ತೆಗೆದುಹಾಕಿದ್ದೇನೆ. ಧ್ಯಾನವಾದ ಮೇಲೆ ಮತ್ತೆ ಹಾಕಿಕೊಳ್ಳು ತ್ತೇನೆ." ಹೃದಯ ಹಿಂದೆ ಇಂಥ ಮಾತನ್ನೇ ಕೇಳಿರಲಿಲ್ಲ. ಅವನಿಗೆ ಆಶ್ಚರ್ಯ ವಾಯಿತು. ಮರುಮಾತಾಡದೆ ಹಿಂದಿರುಗಿದನು.

6. ಈ ಮೇಲಿನ ಘಟನೆಗೆ ಸಂಬಂಧಿಸಿದಂತೆ ಇಲ್ಲಿ ಒಂದು ವಿಷಯವನ್ನು ಹೇಳುವುದು ಉಚಿತ, ಏಕೆಂದರೆ, ಇದೊಂದನ್ನು ಅರ್ಥಮಾಡಿಕೊಂಡರೆ ಶ್ರೀರಾಮ ಕೃಷ್ಣರ ಜೀವನದ ಮುಂದಿನ ಎಷ್ಟೋ ಘಟನೆಗಳನ್ನು ಅರ್ಥಮಾಡಿಕೊಳ್ಳುವುದು ಸುಲಭ. ಅಷ್ಟಪಾಶಗಳಿಂದ ಮುಕ್ತವಾಗಲು ಶ್ರೀರಾಮಕೃಷ್ಣರು ಕೇವಲ ಮಾನಸಿಕ ವಾಗಿ ಅವುಗಳನ್ನು ತ್ಯಾಗಮಾಡಿದರೆ ಸಾಲದೆಂದು ಭೌತಿಕವಾಗಿಯೂ ಅವುಗಳನ್ನು ತ್ಯಾಗ ಮಾಡಿದರು. ಮುಂದೆಯೂ ಕೂಡ ಅವರು ಎಲ್ಲ ವಿಷಯದಲ್ಲಿಯೂ ಇದೇ ರೀತಿ ಆಚರಿಸುತ್ತಿದ್ದುದನ್ನು ನಾವು ನೋಡುತ್ತೇವೆ. ಅಭಿಮಾನವನ್ನು ತ್ಯಜಿಸಿ ದೀನ ಭಾವ ದಿಂದಿರಲು ಅವರು ಇತರರು ದೂರದಿಂದ ಪರಿತ್ಯಜಿಸುತ್ತಿದ್ದಂತಹ ಅತ್ಯಂತ ಅಸಹ್ಯವಾದ ಜಾಗಕ್ಕೆ ಹೋಗಿ ಆ ಜಾಗವನ್ನು ಸ್ವಹಸ್ತದಿಂದ ಪರಿಶುದ್ಧಗೊಳಿಸುತ್ತಿದ್ದರು, ಚಿನ್ನ ಕಲ್ಲು ಎರಡನ್ನೂ ಸಮಾನವಾಗಿ ಕಾಣದಿದ್ದರೆ ಮಾನವ ಮನಸ್ಸು ಭೋಗೇಚ್ಛೆಯಿಂದ ಪೂರ್ಣ ಮುಕ್ತವಾಗಿ ಭಗವದಭಿಮುಖ ಹರಿಯಲಾರದು. ಇದನ್ನು ತಿಳಿದ ಶ್ರೀರಾಮ ಕೃಷ್ಣರು ಒಂದು ಕೈಯಲ್ಲಿ ಹಣವನ್ನೂ ಮತ್ತೊಂದರಲ್ಲಿ ಮಣ್ಣನ್ನು ಹಿಡಿದುಕೊಂಡು



ಭವತಾರಿಣಿ ಕಾಳಿ

'ಮಣ್ಣು ಹಣ, ಹಣ ಮಣ್ಣು' ಎಂದು ಪುನಃ ಪುನಃ ಉಚ್ಚರಿಸುತ್ತ ಎರಡನ್ನೂ ಗಂಗೆಗೆ ಎಸೆದಿದ್ದರು. ಸರ್ವ ಜೀವಗಳಲ್ಲಿಯೂ ಶಿವನಿರುವನೆಂಬುದನ್ನು ದೃಢಪಡಿಸಲು ಅವರು ದಕ್ಷಿಣೇಶ್ವರದಲ್ಲಿ ದೀನ ಅನಾಥರಿಗೆಲ್ಲ ಊಟವಾದಮೇಲೆ ಅವರ ಎಂಜಲನ್ನು ಪ್ರಸಾದ ರೂಪದಲ್ಲಿ ಭಕ್ತಿಯಿಂದ ತಿಂದು, ತಲೆಗೆ ಒತ್ತಿಕೊಂಡಿದ್ದರು. ಅನಂತರ ತಾವೇ ಎಂಜಲೆಲೆಯನ್ನು ತೆಗೆದು ಆ ಪ್ರದೇಶವನ್ನು ಶುದ್ಧಗೊಳಿಸಿದ್ದರು ತಮ್ಮ ಈ ನಶ್ವರ ಶರೀರದಿಂದ ಇಷ್ಟು ದೇವತಾ ಕಾರ್ಯ ನೆರವೇರಿತಲ್ಲ ಎಂದು ಕೃತಾರ್ಥಭಾವವನ್ನು ಪಡೆದಿದ್ದರು.

7. ಹೀಗೆ ಅನೇಕ ಘಟನೆಗಳನ್ನು ಉಲ್ಲೇಖಿಸಬಹುದು. ಎಲ್ಲ ವಿಷಯಗಳಲ್ಲಿಯೂ ಭಗವತ್ಸಾಕ್ಷಾತ್ಕಾರಕ್ಕೆ ಅಡ್ಡಿಬರುವವುಗಳನ್ನೆಲ್ಲ ಕೇವಲ ಮಾನಸಿಕವಾಗಿ ತ್ಯಜಿಸುವುದರಿಂದ ಅವರು ತೃಪ್ತರಾಗುತ್ತಿರಲಿಲ್ಲ. ಆದರೆ ಭೌತಿಕವಾಗಿಯೂ ಅವನ್ನು ತ್ಯಜಿಸುತ್ತಿದ್ದರು. ತಮ್ಮ ದೇಹೇಂದ್ರಿಯಗಳನ್ನು ಆ ಎಲ್ಲ ವಿಷಯಗಳಿಂದ ದೂರವಿರಿಸಿ ಅವಕ್ಕೆ ವಿರುದ್ಧವಾದ ಕ್ರಿಯೆಗಳಲ್ಲಿ ಅವನ್ನು ಬಲವಂತವಾಗಿ ತೊಡಗಿಸುತ್ತಿದ್ದರು. ಹೀಗೆ ಮಾಡುವುದರಿಂದ ಅವರ ಮನಸ್ಸಿನ ಎಲ್ಲ ಹಳೆಯ ಸಂಸ್ಕಾರಗಳು ನಾಶವಾಗಿ ಅದು ಹೊಸ ವಿರುದ್ಧಭಾವವನ್ನು ದೃಢವಾಗಿ ಹಿಡಿದುಕೊಳ್ಳುತ್ತಿತ್ತು. ಮತ್ತೆಂದೂ ಅದರಿಂದ ವಿಮುಖವಾಗುತ್ತಿರಲಿಲ್ಲ. ಹಳೆಯದನ್ನು ಬಿಟ್ಟು ಮನಸ್ಸು ಹೊಸ ಭಾವವನ್ನು ಸ್ವೀಕರಿಸಿದೆ ಎನ್ನಬೇಕಾದರೆ ಅದು ದೇಹೇಂದ್ರಿಯಗಳ ಮೂಲಕ ಸ್ವಲ್ಪವಾದರೂ ಕೃತಿಯಲ್ಲಿ ಇಳಿಯಬೇಕು. ಇದು ಅವರ ಅಭಿಪ್ರಾಯವಾಗಿತ್ತು.

8. ಹಳೆಯ ಸಂಸ್ಕಾರಗಳನ್ನು ಸಂಪೂರ್ಣ ಬಿಟ್ಟುಬಿಡಲು ಮನಸ್ಸಿಲ್ಲದ ನಾವು ಶ್ರೀರಾಮಕೃಷ್ಣರು ಆ ರೀತಿ ಮಾಡಬೇಕಾಗಿರಲಿಲ್ಲ ಎಂದು ಭಾವಿಸಬಹುದು. ಅಶುಚಿಯ ಪ್ರದೇಶಗಳನ್ನು ಶುಚಿಗೊಳಿಸುವುದು, 'ಮಣ್ಣು ಹಣ, ಹಣ ಮಣ್ಣು ಎಂದು ಎರಡನ್ನೂ ನೀರಿಗೆ ಎಸೆಯುವುದು—ಇವೆಲ್ಲ ಅವರದೇ ಕಲ್ಪನೆಯ ಫಲ ಇನ್ನೂ ಸುಲಭವಾದ ವಿಧಾನಗಳಿಂದ ಇದೇ ರೀತಿ ಮನಸ್ಸಿನ ಮೇಲೆ ಪ್ರಭುತ್ವವನ್ನು ಸಾಧಿಸಬಹುದು ಎಂದು ಅನೇಕರು ವಾದಿಸುತ್ತಾರೆ. ಆದರೆ ಭೌತಿಕ ತ್ಯಾಗವಿಲ್ಲದೆ ಕೇವಲ ಮಾನಸಿಕ ತ್ಯಾಗದಿಂದಲೇ, ಅಂದರೆ ಅವರು ಹೇಳುವ ಸುಲಭವಾದ ವಿಧಾನಗಳಿಂದಲೇ ಇಂದ್ರಿಯ ಮನಸ್ಸುಗಳನ್ನು ಸಂಪೂರ್ಣ ಜಯಿಸಿ ಆಧ್ಯಾತ್ಮಿಕ ಸಿದ್ಧಿಯನ್ನು ಪಡೆದವರು ಎಷ್ಟು ಜನರಿರುವರು? ಮನಸ್ಸು ಒಂದನ್ನು ಚಿಂತಿಸುತ್ತ ಒಂದು ದಿಕ್ಕಿನಲ್ಲಿ ಹೋಗುತ್ತಿರುತ್ತದೆ. ದೇಹೇಂದ್ರಿಯಗಳು ಅದಕ್ಕೆ ವಿರುದ್ಧವಾದ ಕಾರ್ಯಗಳನ್ನು ಆಚರಿಸುತ್ತಿರುತ್ತವೆ—ಈ ರೀತಿಯಿಂದ ಯಾವ ಮಹತ್ಕಾರ್ಯವನ್ನೂ ಸಾಧಿಸಲಾಗುವುದಿಲ್ಲ—ಭಗವತ್ಸಾಕ್ಷಾತ್ಕಾರವಂತೂ ದೂರದ ಮಾತು. ಆದರೆ ಭೋಗಾಸಕ್ತನಾದವನು ಈ ಮಾತನ್ನು ಒಪ್ಪುವುದಿಲ್ಲ. ವಿಷಯ ತ್ಯಾಗವು ಒಳ್ಳೆಯದೆಂದು ಅವನು ತಿಳಿದರೂ ಸಂಸ್ಕಾರಬಲಕ್ಕೆ ವಶವಾಗಿ ಶರೀರೇಂದ್ರಿಯಗಳ ಮೂಲಕ ಅದನ್ನು ತ್ಯಜಿಸಲು ಮುಂದಾಗುವುದಿಲ್ಲ. 'ಶರೀರ ಏನೇ ಕಾರ್ಯಮಾಡುತ್ತಿರಲಿ ನಾನು ಮನಸ್ಸಿನಲ್ಲಿ ಚಿಂತಿಸುವುದೇ

ಬೇರೆ' ಎಂದು ಅವನು ಭಾವಿಸುತ್ತಾನೆ. ಯೋಗ ಭೋಗ ಎರಡನ್ನೂ ಇಟ್ಟುಕೊಳ್ಳು ತ್ತೇನೆ ಎಂದು ಭಾವಿಸಿ ಅವನು ತನ್ನನ್ನು ತಾನೇ ಮೋಸಪಡಿಸುತ್ತಾನೆ. ಬೆಳಕು ಕತ್ತಲೆ ಗಳು ಒಂದೇಕಡೆ ಇರಲು ಹೇಗೆ ಸಾಧ್ಯವಿಲ್ಲವೊ ಯೋಗ-ಭೋಗಗಳೂ ಒಂದೇಕಡೆ ಇರಲಾರವು. ಕಾಮ-ಕಾಂಚನಮಯ ಸಂಸಾರವನ್ನೂ ಮತ್ತು ಭಗವಂತನನ್ನೂ ಒಟ್ಟಿಗೆ ಸೇವಿಸುವ ಸುಲಭೋಪಾಯವನ್ನು ಇದುವರೆಗೆ ಯಾರೂ ಕಂಡುಹಿಡಿದಿಲ್ಲ. ಆದ್ದರಿಂದ ಶಾಸ್ತ್ರ ಯಾವಾಗಲೂ ಹೇಳುತ್ತದೆ, ''ಯಾವುದನ್ನು ತ್ಯಜಿಸುತ್ತೀಯೋ ಮನೋ ವಾಕ್ಕಾಯವಾಗಿ ಅದನ್ನು ತ್ಯಜಿಸಬೇಕು. ಹಾಗೂ ಯಾವುದನ್ನು ಸ್ವೀಕರಿಸುತ್ತೀಯೊ ಅದನ್ನೂ ಮನೋವಾಕ್ಕಾಯವಾಗಿ ಸ್ವೀಕರಿಸಬೇಕು. ಆಗಲೇ ಸಾಧಕನು ಭಗವತ್ಸಾಕ್ಷಾ ತ್ಕಾರವನ್ನು ಪಡೆಯಲು ಅರ್ಹನಾಗುವನು.'' ಮನಸ್ಸಿನಲ್ಲಿ ಭಾವವನ್ನು ಪ್ರಚೋದಿ ಸುವ ಶಾರೀರಿಕ ಚಿಹ್ನೆ ಮತ್ತು ಅನುಷ್ಠಾನಗಳಿಲ್ಲದ ತಪಸ್ಸಿನ ಸಹಾಯದಿಂದ ಮಾನವನು ಎಂದೂ ಆತ್ಮಸಾಕ್ಷಾತ್ಕಾರವನ್ನು ಪಡೆಯಲಾರ-ಎಂದು ಋಷಿಗಳು ಹೇಳುತ್ತಾರೆ.* ಯುಕ್ತಿಯೂ ಇದನ್ನೇ ಸಮರ್ಥಿಸುವುದು—ಸ್ಥೂಲದಿಂದ ಸೂಕ್ಷ್ಮಕ್ಕೆ ಮತ್ತು ಸೂಕ್ಷ್ಮ ದಿಂದ ಕಾರಣಕ್ಕೆ ಮನುಷ್ಯನು ಕ್ರಮಶಃ ಮುಂದುವರಿಯಬೇಕು. ಇದರ ಹೊರತು ಬೇರೆ ದಾರಿಯೇ ಇಲ್ಲ.

9. ಮೊದಲೇ ಹೇಳಿದಂತೆ ಅಣ್ಣನ ಮೃತ್ಯುವಿನ ನಂತರ ಶ್ರೀರಾಮಕೃಷ್ಣರು ಜಗನ್ಮಾತೆಯ ಪೂಜೆಯಕಡೆ ಹೆಚ್ಚು ಮನಸ್ಸನ್ನು ಹರಿಸಿದರು. ತಾಯಿಯ ದರ್ಶನಕ್ಕಾಗಿ ಏನೇನು ಅನುಕೂಲವೆಂದು ಹೇಳಲ್ಪಟ್ಟಿದೆಯೊ ಅದೆಲ್ಲವನ್ನೂ ಶ್ರದ್ಧಾಪೂರ್ವಕವಾಗಿ ಉತ್ಸುಕತೆಯಿಂದ ಮಾಡತೊಡಗಿದರು. ಯಥಾರೀತಿಯಲ್ಲಿ ಪೂಜೆಯು ಮುಗಿದ ನಂತರ ರಾಮಪ್ರಸಾದ ಮುಂತಾದ ಸಿದ್ಧಪುರುಷರ ಭಜನೆಗಳನ್ನು ದೇವಿಯ ಮುಂದೆ ಹಾಡು ವುದೂ ಪೂಜೆಯ ಅಂಗವೆಂದು ಅವರು ಪರಿಗಣಿಸುತ್ತಿದ್ದರು. ಹೃದಯಾಂತರಾಳದಿಂದ ಹಾಡುತ್ತ ಹಾಡುತ್ತ ಅವರ ಮನಸ್ಸು ಉನ್ಮತ್ತವಾಗುತ್ತಿತ್ತು. ಅವರು ಚಿಂತಿಸುತ್ತಿದ್ದರು: ''ರಾಮಪ್ರಸಾದ ಮುಂತಾದವರು ಜಗಜ್ಜನನಿಯ ದರ್ಶನ ಪಡೆದಿರುವರು, ಆದ್ದರಿಂದ ಅದು ಸಾಧ್ಯ ಎಂಬುದಂತೂ ನಿಶ್ಚಯ. ಹಾಗಾದರೆ ನಾನೇಕೆ ಆಕೆಯ ದರ್ಶನ ಪಡೆಯು ತ್ತಿಲ್ಲ?'' ವ್ಯಾಕುಲ ಹೃದಯದಿಂದ ತಾಯಿಯನ್ನು ಪ್ರಾರ್ಥಿಸುತ್ತಿದ್ದರು : ''ತಾಯಿ, ನೀನು ರಾಮಪ್ರಸಾದನಿಗೆ ದರ್ಶನ ನೀಡಿರುವೆ. ನನಗೇಕೆ ನೀನು ಕಾಣಿಸಿಕೊಳ್ಳುತ್ತಿಲ್ಲ? ನನಗೆ ಧನ ಮಾನ ಭೋಗಸುಖ ಯಾವುದೂ ಬೇಡ. ನನಗೆ ದರ್ಶನ ನೀಡು.'' ಹೀಗೆ ಪ್ರಾರ್ಥಿಸುತ್ತ ಕಣ್ಣೀರಿನಿಂದ ಅವರ ಎದೆ ಒದ್ದೆಯಾಗುತ್ತಿತ್ತು. ಆಗ ಹೃದಯದ ಭಾರ ಸ್ವಲ್ಪ ಕಡಮೆಯಾಗುತ್ತಿತ್ತು. ಮುಗ್ಧ ವಿಶ್ವಾಸದ ಪ್ರೇರಣೆಯಿಂದ ಸ್ವಲ್ಪ ಭರವಸೆ ಯುಂಟಾಗಲು ಮತ್ತೆ ಹಾಡುತ್ತ ದೇವಿಯನ್ನು ಪ್ರಸನ್ನಗೊಳಿಸಲು ತೊಡಗುತ್ತಿದ್ದರು.

* ''ತಪಸೋವಾಪ್ಯಲಿಂಗಾತ್'' ಮುಂಡಕೋಪನಿಷತ್, 3, 2, 4.

ಹೀಗೆ ಪೂಜೆ, ಧ್ಯಾನ, ಭಜನೆ—ಇವುಗಳಲ್ಲಿ ದಿನ ಕಳೆಯುತ್ತಿತ್ತು. ಶ್ರೀರಾಮಕೃಷ್ಣರ ಭಕ್ತಿ, ವ್ಯಾಕುಲತೆ ದಿನದಿನವೂ ವೃದ್ಧಿಯಾಗುತ್ತ ಹೋದವು.

ದೇವಿಯ ಪೂಜೆ ಮತ್ತು ಸೇವೆಗಳು ನಿರ್ದಿಷ್ಟ ಸಮಯವನ್ನೂ ಮೀರಿಹೋಗುತ್ತಿದ್ದುವು. ಪೂಜೆ ಮಾಡುವುದಕ್ಕೆ ಕುಳಿತು ಪೂಜಾವಿಧಿಯಂತೆ ಒಂದು ಹೂವನ್ನು ತಲೆಯಮೇಲೆ ಇಟ್ಟುಕೊಂಡು ಅವರು ಧ್ಯಾನಮಾಡುತ್ತ ಕಲ್ಲಿನ ವಿಗ್ರಹದಂತೆ ಗಂಟೆಗಟ್ಟಳೆ ಕುಳಿತುಬಿಡುತ್ತಿದ್ದರು. ಆಹಾರ ನೈವೇದ್ಯ ನೀಡುವಾಗ ದೇವಿಯು ಅದನ್ನು ಸ್ವೀಕರಿಸುತ್ತಿದ್ದಾಳೆಂದು ಭಾವಿಸುತ್ತಲೇ ಬಹಳಹೊತ್ತು ಕಳೆದುಹೋಗುತ್ತಿತ್ತು. ಬೆಳಗ್ಗೆ ತಾವೇ ಹೂವನ್ನು ಕಿತ್ತು, ಮಾಲೆ ಮಾಡಿ ದೇವಿಯನ್ನು ಅಲಂಕರಿಸುವುದರಲ್ಲಿಯೇ ತುಂಬ ಸಮಯ ಕಳೆಯುತ್ತಿದ್ದರು. ಪ್ರೇಮಾವೇಶದಿಂದ ದೇವಿಗೆ ಆರತಿ ಮಾಡುತ್ತ ಅವರಿಗೆ ಸಮಯ ಕಳೆದದ್ದೇ ತಿಳಿಯುತ್ತಿರಲಿಲ್ಲ. ಮತ್ತೆ ಸಂಜೆ ಜಗನ್ಮಾತೆಯ ಮುಂದೆ ಹಾಡುತ್ತ ಕುಳಿತರೆ ಮುಗಿಯಿತು ! ಆ ಭಾವ ತನ್ಮಯತೆಯಲ್ಲಿ ಸಮಯವೇ ಮರೆತುಹೋಗುತ್ತಿತ್ತು. ಇತರರು ಎಷ್ಟೇ ಜ್ಞಾಪಕಮಾಡಿಕೊಟ್ಟರೂ ಆರತಿ ಮುಂತಾದ ಕೆಲಸಗಳನ್ನು ಸಮಯಕ್ಕೆ ಸರಿಯಾಗಿ ಮಾಡಲು ಅವರಿಗಾಗುತ್ತಿರಲಿಲ್ಲ. ಇದೇ ರೀತಿ ಕೆಲಕಾಲ ಪೂಜೆ ಮುಂದುವರಿಯಿತು.

10. ಈ ಭಕ್ತಿ ವ್ಯಾಕುಲತೆಯನ್ನು ಕಂಡ ದೇವಾಲಯದ ಇತರ ವ್ಯಕ್ತಿಗಳ ಗಮನ ಶ್ರೀರಾಮಕೃಷ್ಣರ ಕಡೆ ಹರಿಯಿತು. ಸಾಧಾರಣ ವ್ಯಕ್ತಿಗಳ ಜೀವನ ವಿಧಾನವನ್ನು ಅನುಸರಿಸದೆ ಹೊಸ ರೀತಿಯಲ್ಲಿ ಯಾರಾದರೂ ವರ್ತಿಸುವುದನ್ನು ನೋಡಿದರೆ ಜನರು ಅವರನ್ನು ಪರಿಹಾಸ ಮಾಡುವುದು ಸ್ವಾಭಾವಿಕ. ಆದರೆ ಆ ವ್ಯಕ್ತಿ ಇದಾವುದನ್ನೂ ಲೆಕ್ಕಿಸದೆ ದೃಢಸಂಕಲ್ಪದಿಂದ ತನ್ನ ಹಾದಿಯಲ್ಲಿ ಮುಂದುವರಿದರೆ ಆಗ ಪರಿಹಾಸದ ಸ್ಥಾನವನ್ನು ಶ್ರದ್ಧಾಭಕ್ತಿ ಆಕ್ರಮಿಸುತ್ತದೆ. ಶ್ರೀರಾಮಕೃಷ್ಣರ ವಿಷಯದಲ್ಲಿಯೂ ಹೀಗೆಯೇ ಆಯಿತು. ಅವರು ಈ ರೀತಿ ಪೂಜೆಮಾಡಲು ಪ್ರಾರಂಭಿಸಿದ ಕೂಡಲೇ ಅನೇಕರು ಅವರನ್ನು ನಿಂದಿಸತೊಡಗಿದರು. ಸ್ವಲ್ಪಕಾಲದ ನಂತರ ಕೆಲವರು ಅವರಿಗೆ ಶ್ರದ್ಧಾಭಕ್ತಿಯನ್ನು ತೋರಿಸತೊಡಗಿದರು. ಮಥುರಬಾಬು ಈ ಸಮಯದಲ್ಲಿ ಶ್ರೀರಾಮಕೃಷ್ಣರು ಪೂಜೆ ಮಾಡುವುದನ್ನು ನೋಡಿ ಅತ್ಯಂತ ಸಂತೃಪ್ತನಾಗಿ ರಾಣಿ ರಾಸಮಣಿಗೆ ಹೇಳಿದ್ದನು, ''ನಮಗೆ ಒಬ್ಬ ಅದ್ಭುತ ಅರ್ಚಕ ಸಿಕ್ಕಿರುವನು. ಶ್ರೀದೇವಿಯು ಶೀಘ್ರವಾಗಿಯೆ ಜಾಗ್ರತವಾಗುತ್ತಾಳೆ.'' ಜನರು ಏನೇ ಹೇಳಿದರೂ ಶ್ರೀರಾಮಕೃಷ್ಣರು ತಮ್ಮ ಮಾರ್ಗದಿಂದ ಸ್ವಲ್ಪವೂ ವಿಚಲಿತರಾಗಲಿಲ್ಲ. ಸಾಗರವನ್ನು ಸೇರಲು ಹೊರಟಿರುವ ನದಿಯಂತೆ ಅವರ ಮನಸ್ಸು ಸದಾ ನಿರಂತರವಾಗಿ ಶ್ರೀ ಜಗನ್ಮಾತೆಯ ಪಾದಪದ್ಮದೆಡೆಗೆ ಧಾವಿಸುತ್ತಿತ್ತು.

11. ದಿನಗಳುರುಳಿದಂತೆ ಶ್ರೀರಾಮಕೃಷ್ಣರ ವ್ಯಾಕುಲತೆಯೂ ವೃದ್ಧಿಯಾಗುತ್ತ ಹೋಯಿತು. ಅವರ ಈ ಮಾನಸಿಕ ಸ್ಥಿತಿ ದೇಹದ ಮೂಲಕವೂ ಅನೇಕ ರೀತಿಯಲ್ಲಿ ವ್ಯಕ್ತವಾಗತೊಡಗಿತು. ಅವರ ಆಹಾರ ಮತ್ತು ನಿದ್ರೆ ಕಡಮೆಯಾಗ

ತೊಡಗಿದವು. ಶರೀರದ ರಕ್ತಪ್ರವಾಹವು ಎದೆ ಮತ್ತು ತಲೆಯಕಡೆ ಹೆಚ್ಚು ಹರಿಯು ತ್ತಿದ್ದುದರಿಂದ ಅವರ ವಕ್ಷಃಸ್ಥಲವು ಯಾವಾಗಲೂ ರಕ್ತವರ್ಣದಿಂದ ಕೂಡಿರುತ್ತಿತ್ತು. ಕಣ್ಣುಗಳು ಜಲಭಾರದಿಂದ ಕುಂದಿಹೋಗಿದ್ದುವು. 'ಏನು ಮಾಡಲಿ, ಹೇಗೆ ಭಗವಂತ ನನ್ನು ಪಡೆಯಲಿ ?' ಇದೇ ಚಿಂತೆಯೇ ಅವರನ್ನು ಯಾವಾಗಲೂ ಕಾಡಿಸುತ್ತಿದ್ದರಿಂದ ಅವರಲ್ಲಿ ಒಂದು ರೀತಿಯ ಅಶಾಂತಿ, ಚಂಚಲತೆ ಕಂಡುಬರುತ್ತಿತ್ತು.

ಆ ಸಮಯದಲ್ಲಿ ಒಂದುದಿನ ಅವರು ದೇವಿಯ ಮುಂದೆ ಹಾಡು ಹೇಳುತ್ತಿದ್ದರು ಮತ್ತು ಆಕೆಯ ದರ್ಶನಕ್ಕಾಗಿ ಕ್ರಂದಿಸುತ್ತ ಪ್ರಾರ್ಥಿಸುತ್ತಿದ್ದರು. ಅವರು ಹೇಳು ತ್ತಿದ್ದರು, ''ತಾಯಿ, ಇಷ್ಟೊಂದು ನಾನು ಕರೆಯುತಿದ್ದೇನೆ, ನಿನಗೆ ಕೇಳಿಸುವುದೇ ಇಲ್ಲವೆ ? ರಾಮಪ್ರಸಾದನಿಗೆ ನೀನು ದರ್ಶನಕೊಟ್ಟಿದ್ದೀಯೆ, ನನಗೆ ನೀನು ದರ್ಶನ ನೀಡುವುದಿಲ್ಲವೆ ?''

12. ಆಗಿನ ತಮ್ಮ ಸ್ಥಿತಿಯನ್ನು ಅವರು ಹೀಗೆ ವಿವರಿಸುತ್ತಾರೆ : ''ದೇವಿಯ ದರ್ಶನವಾಗಲಿಲ್ಲವಲ್ಲ ಎಂದು ನನ್ನ ಹೃದಯದಲ್ಲಿ ಅಸಹ್ಯವಾದ ವೇದನೆ ಉಂಟಾಗು ತ್ತಿತ್ತು. ನೀರನ್ನು ತೆಗೆಯುವುದಕ್ಕೆ ಟವಲನ್ನು ಹಿಂಡುತ್ತಾರಲ್ಲ, ಹಾಗೆ ಯಾರೊ ನನ್ನ ಹೃದಯವನ್ನು ಹಿಂಡಿದಂತಾಗುತ್ತಿತ್ತು. ತಾಯಿಯ ದರ್ಶನ ನನಗೆಂದೂ ಆಗುವುದೇ ಇಲ್ಲ ಎಂದು ಭಾವಿಸಿ ನನ್ನ ಹೃದಯ ತೀವ್ರ ವೇದನೆಯಿಂದ ಚಡಪಡಿಸುತ್ತಿತ್ತು. ಅಸ್ಥಿರ ನಾಗಿ ಇನ್ನು ಜೀವಿಸಿದ್ದು ಪ್ರಯೋಜನವಿಲ್ಲ ಎಂದು ಚಿಂತಿಸತೊಡಗಿದೆ. ಗರ್ಭಗುಡಿಯಲ್ಲಿ ಒಂದು ಕತ್ತಿ ಇತ್ತು. ನನ್ನ ದೃಷ್ಟಿ ಕೂಡಲೇ ಅದರಮೇಲೆ ಬಿತ್ತು. ಇದರಿಂದಲೇ ಈ ಜೀವನವನ್ನು ಮುಗಿಸಿಬಿಡುತ್ತೇನೆಂದು ಹುಚ್ಚನಂತೆ ಓಡಿ ಅದನ್ನು ತೆಗೆದುಕೊಳ್ಳುವಷ್ಟ ರಲ್ಲಿ ತಾಯಿಯ ಅದ್ಭುತ ದರ್ಶನವಾಯಿತು. ಪ್ರಜ್ಞಾಶೂನ್ಯನಾಗಿ ಕೆಳಗೆ ಬಿದ್ದೆ. ಅನಂತರ ಹೊರಗಡೆ ಏನು ನಡೆಯುತ್ತಿದೆ, ಅಂದು ಮತ್ತು ಮರುದಿನ ಹೇಗೆ ಕಳೆದುಹೋಯಿತು ಇದೊಂದೂ ನನಗೆ ತಿಳಿಯಲಿಲ್ಲ. ಆದರೆ ಒಳಗೆ ಹಿಂದೆಂದೂ ಅನುಭವಿಸದ ಅದ್ಭುತ ಆನಂದದ ಪ್ರವಾಹ ಹರಿಯುತ್ತಿತ್ತು. ತಾಯಿಯ ದಿವ್ಯಜ್ಯೋತಿಯನ್ನು ನಾನು ಕಂಡೆ.''

ಈ ಮೇಲಿನ ದರ್ಶನದ ವಿಷಯವನ್ನು ಇನ್ನೊಂದು ಸಂದರ್ಭದಲ್ಲಿ ಈ ರೀತಿ ವಿವರಿಸಿರುವರು : ''ಮನೆ, ಬಾಗಿಲು, ಮಂದಿರ ಎಲ್ಲ ಮಾಯವಾದವು—ಎಲ್ಲೂ ಏನೂ ಕಾಣುತ್ತಿಲ್ಲ. ಕೇವಲ ಅಸೀಮ ಅನಂತ ಜ್ಯೋತಿಃ ಸಮುದ್ರವೊಂದೇ ಕಾಣುತ್ತಿದೆ. ಎಲ್ಲಿ ನೋಡಿದರೂ, ಎಷ್ಟೇ ದೂರ ಕಣ್ಣು ಹಾಯಿಸಿದರೂ ನಾಲ್ಕೂ ಕಡೆಯೂ ಅದರ ಉಜ್ವಲ ಜ್ವಾಲಮಾಲೆಯು ಭೋರ್ಗರೆಯುತ್ತ ಎಲ್ಲವನ್ನೂ ನುಂಗಿಹಾಕುವಂತೆ ಮುನ್ನುಗ್ಗುತ್ತಿತ್ತು. ನೋಡುತ್ತಿದ್ದಂತೆಯೇ ಅದು ನನ್ನ ಮೇಲೆ ಎರಗಿ ನನ್ನನ್ನು ಎಲ್ಲಿಯೊ ಮುಳುಗಿಸಿ ಬಿಟ್ಟಿತು. ನಾನು ಏಗುತ್ತ ಮುಳುಗುತ್ತ ಪ್ರಜ್ಞಾಶೂನ್ಯನಾಗಿ ಬಿದ್ದುಬಿಟ್ಟೆ.'' ಈ ರೀತಿ ಅವರು ತಮ್ಮ ಪ್ರಥಮ ಆಧ್ಯಾತ್ಮಿಕ ಅನುಭವದಲ್ಲಿ ಚೈತನ್ಯಜ್ಯೋತಿಯ ಸಮುದ್ರದ ದರ್ಶನವಾದುದನ್ನು ನಮಗೆ ಹೇಳಿರುವರು. ಆದರೆ ಚೈತನ್ಯಘನಳೂ ವರಾಭಯಕರಳೂ ಆದ ಜಗನ್ಮಾತೆಯ ದರ್ಶನವೂ ಆಗ ಅವರಿಗೆ ಆಗಿತ್ತೆ, ಇಲ್ಲವೆ ?

ಆಗಿತ್ತು ಎಂಬುದು ನಮ್ಮ ಅಭಿಪ್ರಾಯ. ಏಕೆಂದರೆ ಸಮಾಧಿಯ ನಂತರ ಅವರು ಸ್ವಲ್ಪ ಪ್ರಜ್ಞೆಯನ್ನು ಪಡೆದಾಗ ಕಾತರಧ್ವನಿಯಲ್ಲಿ 'ಮಾ, ಮಾ,' ಎಂದು ಉಚ್ಚರಿಸುತ್ತಿದ್ದರಂತೆ.

ಮೇಲಿನ ದರ್ಶನವಾದಮೇಲೆ ತಾಯಿಯ ಚಿನ್ಮಯ ಮೂರ್ತಿಯನ್ನು ಸದಾ ನೋಡುತ್ತಿರಬೇಕೆಂದು ಶ್ರೀರಾಮಕೃಷ್ಣರು ಹಂಬಲಿಸತೊಡಗಿದರು. ರೋದಿಸುವುದೇ ಮೊದಲಾದ ಬಾಹ್ಯ ಲಕ್ಷಣಗಳು ಮೊದಮೊದಲು ಕಾಣಿಸಿಕೊಳ್ಳದಿದ್ದರೂ ಆ ಹಂಬಲ ಯಾವಾಗಲೂ ಒಳಗಡೆ ಕುದಿಯುತ್ತಿತ್ತು. ಅದು ಒಮ್ಮೊಮ್ಮೆ ಎಷ್ಟು ವೃದ್ಧಿಯಾಗುತ್ತಿತ್ತೆಂದರೆ, ಅದನ್ನು ಮುಚ್ಚಿಡಲು ಸಾಧ್ಯವಾಗದೆ ವೇದನೆಯಿಂದ ಚಡಪಡಿಸುತ್ತ ನೆಲದ ಮೇಲೆ ಹೊರಳಾಡುತ್ತಿದ್ದರು. ''ತಾಯಿ, ನನ್ನಮೇಲೆ ಕೃಪೆದೋರು, ದರ್ಶನ ನೀಡು'' ಎಂದು ಹೇಳುತ್ತ ಎಷ್ಟೊಂದು ರೋದಿಸುತ್ತಿದ್ದರೆಂದರೆ ಜನ ಬಂದು ಸುತ್ತ ನೆರೆಯುತ್ತಿದ್ದರು. ಹೀಗೆಲ್ಲ ವರ್ತಿಸಿದರೆ ಜನ ಏನೆಂದುಕೊಳ್ಳುತ್ತಾರೆ ಎಂಬ ಯೋಚನೆಯೇ ಅವರ ಮನಸ್ಸಿಗೆ ಬರುತ್ತಿರಲಿಲ್ಲ. ಅವರು ಹೇಳುತ್ತಿದ್ದರು, ''ನಾಲ್ಕೂಕಡೆ ಜನ ನಿಂತಿದ್ದರೆ ಅವರೆಲ್ಲ ಛಾಯಾಮಾತ್ರರು ಅಥವಾ ಚಿತ್ರದ ಗೊಂಬೆಗಳು ಎಂದೆನಿಸುತ್ತಿತ್ತು. ಆದ್ದರಿಂದ ನನಗೆ ಸ್ವಲ್ಪವೂ ನಾಚಿಕೆಯಾಗುತ್ತಿರಲಿಲ್ಲ. ಈ ರೀತಿಯ ಅಸಹ್ಯ ವೇದನೆಯಿಂದ ಕೆಲವೊಮ್ಮೆ ಬಾಹ್ಯಪ್ರಜ್ಞೆಯಿಲ್ಲದೆ ಬಿದ್ದುಬಿಡುತ್ತಿದ್ದೆ. ಈ ಅವಸ್ಥೆಯ ನಂತರವೇ ವರಾಭಯಂಕರ ಚಿನ್ಮಯ ಮೂರ್ತಿಯನ್ನು ಕಾಣುತ್ತಿದ್ದೆ. ಆ ಮೂರ್ತಿ ನಗುವುದನ್ನೂ, ಮಾತನಾಡುವುದನ್ನೂ, ನನಗೆ ಸಾಂತ್ವನ ನೀಡುವುದನ್ನೂ ಕಾಣುತ್ತಿದ್ದೆ.''

ಏಳನೆಯ ಅಧ್ಯಾಯ

ಸಾಧನೆ ಮತ್ತು ದಿವ್ಯೋನ್ಮತ್ತತೆ

1. ಪ್ರಥಮ ದರ್ಶನದನಂತರ ಅವರ ಮನಃಸ್ಥಿತಿ 2. ಆ ಸಂದರ್ಭದಲ್ಲಿ ಶಾರೀರಿಕ, ಮಾನಸಿಕ ಸಂವೇದನೆ 3. ಪ್ರಥಮದರ್ಶನದಿಂದ ಶ್ರೀರಾಮಕೃಷ್ಣರಲ್ಲುಂಟಾದ ಪರಿವರ್ತನೆ 4. ಅವರ ಪೂಜಾಭಾವದಲ್ಲುಂಟಾದ ಬದಲಾವಣೆ 5. ಅವರ ಪೂಜಾದಿಗಳ ಬಗ್ಗೆ ಹೃದಯನ ಹೇಳಿಕೆ. 6. ಶ್ರೀರಾಮಕೃಷ್ಣರ ಪೂಜೆಯ ಬಗ್ಗೆ ದೇವಸ್ಥಾನದ ಅಧಿಕಾರಿಗಳ ಮಾತುಕಥೆ 7. ಪೂಜೆಯನ್ನು ನೋಡಲು ಮಥುರನು ಬರುತ್ತಾನೆ 8. ತೀವ್ರ ಭಗವತ್‌ಪ್ರೇಮದಿಂದ ರಾಗಾತ್ಮಿಕಾ ಭಕ್ತಿ 9. ಈ ಭಕ್ತಿಯ ವೇಗವನ್ನು ಅವತಾರ ವ್ಯಕ್ತಿಗಳು ಮಾತ್ರ ಸಹಿಸಬಲ್ಲರು 10. ಈ ಭಕ್ತಿಯ ಪ್ರಭಾವದಿಂದ ಉಂಟಾದ ಶಾರೀರಿಕ ವಿಕಾರಗಳು 11. ಶ್ರೀ ರಾಮಕೃಷ್ಣರು ರಾಣಿ ರಾಸಮಣಿಗೆ ಹೊಡೆದುದು 12. ಅವರು ಬಾಹ್ಯಪೂಜೆಯನ್ನು ಬಿಟ್ಟುದುದು 13. ಇದರ ಬಗ್ಗೆ ಹೃದಯನ ಹೇಳಿಕೆ 14. ಮಥುರನ ಸಂದೇಹ ಮತ್ತು ಗಂಗಾಪ್ರಸಾದ ಸೇನನಿಂದ ಚಿಕಿತ್ಸೆ 15. ಹಲಧಾರಿಯ ಆಗಮನ

1. ಶ್ರೀ ಜಗನ್ಮಾತೆಯ ಪ್ರಥಮ ದರ್ಶನದ ಆನಂದದಲ್ಲಿಯೇ ಮುಳುಗಿದ್ದ ಶ್ರೀರಾಮಕೃಷ್ಣರಿಗೆ ಕೆಲವು ದಿನ ಪೂಜಾದಿ ಕರ್ಮಗಳನ್ನು ಮಾಡಲಾಗಲಿಲ್ಲ. ಹೃದಯನು ಇನ್ನೊಬ್ಬ ಬ್ರಾಹ್ಮಣನ ನೆರವಿನಿಂದ ಅವುಗಳನ್ನೆಲ್ಲ ಮಾಡಿಮುಗಿಸುತ್ತಿದ್ದ. ಇದೇ ಸಂದರ್ಭದಲ್ಲಿ ಅವನು ಮಾವನಿಗೆ ಹುಚ್ಚು ಹಿಡಿದಿದೆಯೆಂದು ಭಾವಿಸಿ ಅವರಿಗೆ ಚಿಕಿತ್ಸೆ ಮಾಡಿಸಬೇಕೆಂದು ಯೋಚಿಸುತ್ತಿದ್ದನು. ರಾಜವೈದ್ಯನ ಪರಿಚಯ ಅವನಿಗೆ ಹೇಗೋ ಇತ್ತು. ಹೃದಯನು ಅವನ ಮೂಲಕ ಶ್ರೀರಾಮಕೃಷ್ಣರಿಗೆ ಚಿಕಿತ್ಸೆ ಮಾಡಿಸಿದನು. ಆದರೆ ರೋಗ ಸ್ವಲ್ಪವೂ ಗುಣವಾಗದಿರಲು ಕಾಮಾರಪುಕುರಕ್ಕೆ ಹೇಳಿಕಳಿಸಿದನು.

2. ಎಂದು ಅವರು ತೀವ್ರ ವ್ಯಾಕುಲತೆಯಿಂದ ಅಸ್ಥಿರರಾಗುತ್ತಿರಲಿಲ್ಲವೊ ಅಥವಾ ಬಾಹ್ಯಜ್ಞಾನವನ್ನು ಕಳೆದುಕೊಳ್ಳುತ್ತಿರಲಿಲ್ಲವೊ ಅಂದು ಅವರು ಪೂಜೆ ಮಾಡುತ್ತಿದ್ದರು. ಆಗ ಪೂಜೆ ಮತ್ತು ಧ್ಯಾನ ಮಾಡುವಾಗ ಅವರಿಗೆ ಯಾವ ರೀತಿಯ ಅನುಭವವಾಗುತ್ತಿತ್ತು ಎಂಬುದನ್ನು ಕೆಲವೊಮ್ಮೆ ನಮಗೆ ಈ ಕೆಳಗಿನಂತೆ ವಿವರಿಸಿ ಹೇಳುತ್ತಿದ್ದರು : "ನಾಟ್ಯಮಂದಿರದ ಛಾವಣಿಯ ದಂಡೆಯ ಮೇಲೆ ಇದ್ದ ಧ್ಯಾನ ಮೂರ್ತಿ ಭೈರವನನ್ನು ತೋರಿಸಿ ನನ್ನ ಮನಸ್ಸಿಗೆ ಹೇಳುತ್ತಿದ್ದೆ, 'ಈ ರೀತಿ ಸ್ಥಿರವಾಗಿ

ನಿಷ್ಪಂದವಾಗಿ ಕುಳಿತು ತಾಯಿಯ ಪಾದಪದ್ಮವನ್ನು ಚಿಂತಿಸಬೇಕು.' ಧ್ಯಾನಕ್ಕೆ ಕುಳಿತ ಕೂಡಲೆ ಶರೀರ ಮತ್ತು ಅಂಗಾಂಗಗಳ ಗ್ರಂಥಿಗಳಲೆಲ್ಲ, ಪಾದದಿಂದ ಹಿಡಿದು ಊರ್ಧ್ವ ಮುಖವಾಗಿ, ಖಟ್‌ಖಟ್ ಎಂದು ಶಬ್ದವಾಗುತ್ತಿತ್ತು. ಯಾರೋ ಒಳಗಿನಿಂದ ಬೀಗಹಾಕಿ ಬಂಧಿಸಿದಂತಾಗುತ್ತಿತ್ತು. ನಾನು ಎಷ್ಟು ಹೊತ್ತು ಧ್ಯಾನಮಾಡುತ್ತಿದ್ದೆನೊ ಅಷ್ಟು ಹೊತ್ತು ಶರೀರವನ್ನು ಯಾವ ರೀತಿಯಿಂದಲೂ ಚಲಿಸಲಾಗುತ್ತಿರಲಿಲ್ಲ, ಆಸನವನ್ನೂ ಬದಲಾಯಿಸಲಾಗುತ್ತಿರಲಿಲ್ಲ, ಅಥವಾ ಧ್ಯಾನವನ್ನು ನಿಲ್ಲಿಸಿ ಬೇರೆ ಕೆಲಸ ಮಾಡಲೂ ಆಗುತ್ತಿರಲಿಲ್ಲ. ಮೊದಲಿನಂತೆ ಮತ್ತೆ ಮೇಲಿನಿಂದ ಕೆಳಮುಖವಾಗಿ ಖಟ್‌ಖಟ್ ಎಂದು ಶಬ್ದಮಾಡುತ್ತ ಬೀಗವನ್ನು ತೆಗೆಯುವವರೆಗೂ ನಾನು ಒಂದೇ ರೀತಿ ಕುಳಿತು ಕೊಂಡಿರಬೇಕಾಗುತ್ತಿತ್ತು. ಧ್ಯಾನ ಮಾಡುವಾಗ ಪ್ರಾರಂಭದಲ್ಲಿ ಮಿಣುಕುಹುಳಗಳಂತೆ ಜ್ಯೋತಿಯ ಕಣಗಳನ್ನು ಕಾಣುತ್ತಿದ್ದೆ. ಕೆಲವೊಮ್ಮೆ ನಾಲ್ಕೂ ದಿಕ್ಕಿನಲ್ಲಿ ಮಂಜಿನಂತೆ ಜ್ಯೋತಿಯು ತುಂಬಿರುವುದನ್ನು ಕಾಣುತ್ತಿದ್ದೆ. ಮತ್ತೆ ಕೆಲವೊಮ್ಮೆ ಕರಗಿದ ಬೆಳ್ಳಿಯಂತೆ ಜ್ಯೋತಿತರಂಗವು ಎಲ್ಲವನ್ನೂ ವ್ಯಾಪಿಸಿರುವಂತೆ ಕಾಣುತ್ತಿದ್ದೆ. ಕಣ್ಣು ಮುಚ್ಚಿಕೊಂಡೆ ಇವನ್ನೆಲ್ಲ ನೋಡುತ್ತಿದ್ದೆ. ಮತ್ತೆ ಕೆಲವೊಮ್ಮೆ ಕಣ್ಣು ತೆರೆದುಕೊಂಡೂ ಇವುಗಳನ್ನು ನೋಡುತ್ತಿದ್ದೆ. ನಾನು ಏನು ನೋಡುತ್ತಿದ್ದೇನೆಂಬುದೇ ನನಗೆ ಅರ್ಥವಾಗುತ್ತಿರಲಿಲ್ಲ. ಈ ರೀತಿ ದರ್ಶನವಾಗುವುದು ಒಳ್ಳೆಯದೊ ಕೆಟ್ಟದ್ದೊ ಅದೂ ನನಗೆ ಗೊತ್ತಿರಲಿಲ್ಲ. ಕೇವಲ ತಾಯಿಯ ಮುಂದೆ ವ್ಯಾಕುಲಹೃದಯದಿಂದ ಪ್ರಾರ್ಥಿಸುತ್ತಿದ್ದೆ : 'ತಾಯಿ ಇದೇನು ನನಗೆ ಆಗುತ್ತಿರುವುದು ? ನನಗೆ ಏನೂ ತಿಳಿಯುತ್ತಿಲ್ಲ. ನಿನ್ನನ್ನು ಕರೆಯುವ ಮಂತ್ರಗಳಾವುವೂ ನನಗೆ ತಿಳಿಯದು. ಏನು ಮಾಡಿದರೆ ನಾನು ನಿನ್ನನ್ನು ಪಡೆಯ ಬಹುದೊ ಅದನ್ನು ನೀನೇ ನನಗೆ ತಿಳಿಸಿಕೊಡು. ನೀನು ತಿಳಿಸಿಕೊಡದಿದ್ದರೆ ನನಗಾರು ತಿಳಿಸಿಕೊಡುತ್ತಾರೆ, ತಾಯಿ ? ನಿನ್ನನ್ನು ಬಿಟ್ಟರೆ ನನಗೆ ಬೇರಾವ ಗತಿಯೂ ಇಲ್ಲ.' ಒಂದೇ ಮನಸ್ಸಿನಿಂದ ಈ ರೀತಿ ಪ್ರಾರ್ಥಿಸುತ್ತಿದ್ದೆ ಮತ್ತು ವ್ಯಾಕುಲತೆಯಿಂದ ರೋದಿಸುತ್ತಿದ್ದೆ.''

3. ಶ್ರೀರಾಮಕೃಷ್ಣರ ಪೂಜೆ ಧ್ಯಾನಾದಿಗಳು ಈಗ ಹೊಸ ರೂಪವನ್ನು ಪಡೆದವು. ಆ ಅದ್ಭುತ ತನ್ಮಯತೆ, ಬಾಲಕ ಸಹಜವಾದ ಸರಳ ವಿಶ್ವಾಸ ಆ ನಿರ್ಭರತೆಯ ಮಾಧುರ್ಯ—ಇವುಗಳನ್ನು ಇತರರು ಅರ್ಥಮಾಡಿಕೊಳ್ಳುವುದು ಕಠಿಣ. ಪ್ರೌಢತನ ಗಾಂಭೀರ್ಯದಿಂದ, ಪುರುಷ ಪ್ರಯತ್ನವನ್ನು ಅವಲಂಬಿಸಿ ದೇಶಕಾಲ ಪಾತ್ರಗಳಿಗನು ಸಾರವಾಗಿ ವಿಧಿ-ನಿಷೇಧಗಳನ್ನು ಪಾಲಿಸುತ್ತ ನಡೆಯುವುದು, ಅಥವಾ ಭವಿಷ್ಯತ್ತನ್ನು ಚಿಂತಿಸುತ್ತ ಪ್ರಾಪಂಚಿಕತೆ ಮತ್ತು ದೈವಿಕತೆ ಎರಡಕ್ಕೂ ಹೊಂದಿಕೊಂಡು ವ್ಯವಹಾರ ನಡೆಸುವುದೂ ಇವಾವುದೂ ಅವರ ವರ್ತನೆಯಲ್ಲಿ ಕಂಡುಬರುತ್ತಿರಲಿಲ್ಲ. ಅವರನ್ನು ನೋಡಿದರೆ ಯಾರಿಗಾದರೂ ಅನಿಸುತ್ತಿತ್ತು ಅವರ ಇಚ್ಛೆಯು ಇಚ್ಛಾಮಯನಾದ ಭಗವಂತನ ಇಚ್ಛೆಯಲ್ಲಿ ಒಂದಾಗಿಬಿಟ್ಟಿದೆ, ಅವರು ಕೇವಲ ಒಂದು ಉಪಕರಣದಂತಾಗಿ ಬಿಟ್ಟಿದ್ದಾರೆ ಎಂದು. 'ತಾಯಿ, ಶರಣಾಗತನಾದ ಬಾಲಕನು ಏನು ಹೇಳಬೇಕೊ,

ಏನು ಮಾಡಬೇಕೊ ಅದೆಲ್ಲವನ್ನೂ ನೀನೇ ಮಾಡಿಸು' ಎಂದು ಹೇಳುವ ಪೂರ್ಣ ಶರಣಾಗತಿಯ ಭಾವ ಅವರದಾಗಿತ್ತೆಂಬುದು ಅವರ ವರ್ತನೆಯಿಂದ ಅರ್ಥವಾಗುತ್ತಿತ್ತು. ಜನಸಾಧಾರಣರ ನಂಬಿಕೆ ಕಾರ್ಯಕಲಾಪಗಳಿಗೆ ವಿರುದ್ಧವಾದ ಅವರ ವರ್ತನೆಗಳನ್ನು ಗಮನಿಸಿದ ಅನೇಕರು ಅವರ ಬಗ್ಗೆ ನಾನಾ ಪ್ರಕಾರವಾಗಿ ಮಾತನಾಡಿಕೊಳ್ಳತೊಡಗಿದರು. ಮೊದಮೊದಲು ಪಿಸುಗುಟ್ಟುತ್ತಿದ್ದರು, ಅನಂತರ ಗಟ್ಟಿಯಾಗಿಯೇ ಆಡಿಕೊಳ್ಳತೊಡಗಿದರು. ಆದರೆ ಇದರಿಂದೇನಾಗುವುದು ? ಜಗನ್ಮಾತೆಯ ಮಗುವಾದ ಶ್ರೀರಾಮಕೃಷ್ಣರು ಆಕೆಯ ಇಚ್ಛಾನುಸಾರವಾಗಿ ವರ್ತಿಸುತ್ತಿದ್ದರು. ಕ್ಷುದ್ರ ಸಂಸಾರಮಂದಿಗರ ಸದ್ದುಗದ್ದಲಗಳು ಅವರ ಕಿವಿಯನ್ನು ತಾಕುತ್ತಲೇ ಇರಲಿಲ್ಲ. ಅವರು ಸಂಸಾರದಲ್ಲಿದ್ದರೂ ಸಂಸಾರದಲ್ಲಿದ್ದಂತೆ ಇರಲಿಲ್ಲ. ಬಾಹ್ಯಜಗತ್ತು ಅವರಿಗೆ ಸ್ವಪ್ನ ರಾಜ್ಯದಂತೆ ಆಗಿಬಿಟ್ಟಿತ್ತು. ಪ್ರಯತ್ನಿಸಿದರೂ ಅದರಲ್ಲಿ ಮೊದಲಿನ ವಾಸ್ತವತೆಯನ್ನು ಕಾಣಲು ಅವರಿಗೆ ಆಗುತ್ತಿರಲಿಲ್ಲ. ಶ್ರೀಜಗನ್ಮಾತೆಯ ಚಿನ್ಮಯ ಆನಂದಘನ ಮೂರ್ತಿಯೇ ಏಕಮಾತ್ರ ಸಾರವಸ್ತುವಾಗಿ ಅವರಿಗೆ ಕಾಣುತ್ತಿತ್ತು.

4. ಪೂಜೆ ಧ್ಯಾನಾದಿಗಳನ್ನು ಮಾಡಲು ಕುಳಿತಾಗ ಹಿಂದೆ ಶ್ರೀರಾಮಕೃಷ್ಣರು ಕೆಲವೊಮ್ಮೆ ತಾಯಿಯ ಕೈಗಳನ್ನೋ, ಪಾದಗಳನ್ನೋ ಅಥವಾ ಅತ್ಯಂತ ಸೌಮ್ಯವಾದ ಮಂದಹಾಸಭರಿತ ಪ್ರೇಮಮಯ ಚಂದ್ರಮುಖವನ್ನೋ ನೋಡುತ್ತಿದ್ದರು. ಈಗ ಬೇರೆ ಸಮಯದಲ್ಲಿಯೂ ಅವರು ಸರ್ವಾವಯವಗಳಿಂದ ಕೂಡಿದ ಜ್ಯೋತಿರ್ಮಯಿಯಾದ ತಾಯಿಯು ನಗುತ್ತಿರುವುದನ್ನೂ ಮಾತನಾಡುತ್ತಿರುವುದನ್ನೂ, 'ಇದು ಮಾಡು, ಅದು ಮಾಡಬೇಡ' ಎಂದು ಮಾರ್ಗದರ್ಶನ ನೀಡುವುದನ್ನೂ ಅನುಭವಿಸುತ್ತಿದ್ದರು.

ಮೊದಲು ದೇವಿಗೆ ಅನ್ನ ಮುಂತಾದುವುಗಳನ್ನು ನಿವೇದಿಸುವಾಗ ದೇವಿಯ ಕಣ್ಣುಗಳಿಂದ ಉಜ್ವಲ ಜ್ಯೋತಿರಶ್ಮಿಯು ಹೊರಬಂದು ಆಹಾರವಸ್ತುಗಳನ್ನು ಸ್ಪರ್ಶಿಸಿ ಅವುಗಳ ಸಾರವನ್ನು ಹೀರಿಕೊಂಡು ಮತ್ತೆ ಕಣ್ಣಿನೊಳಗೆ ನಿರ್ಗಮಿಸುವುದನ್ನು ಕಾಣುತ್ತಿದ್ದರು. ಈಗ ನಿವೇದಿಸುವಾಗ ಸಾಕ್ಷಾತ್ ದೇವಿಯೇ ಬಂದು ಕುಳಿತು ಆಹಾರ ಸ್ವೀಕರಿಸುವುದನ್ನು ನೋಡುತ್ತಿದ್ದರು. ಒಂದು ದಿನ ಪೂಜೆಯ ಸಮಯದಲ್ಲಿ ಹೃದಯನು ಅಲ್ಲಿಗೆ ಹೋದನು. ಅವನು ಕಂಡ ದೃಶ್ಯ : ಶ್ರೀರಾಮಕೃಷ್ಣರು ದೇವಿಗೆ ಅರ್ಘ್ಯವನ್ನು ನೀಡಲು ಹೂವು ಬಿಲ್ವಪತ್ರೆಗಳನ್ನು ಕೈಯಲ್ಲಿ ಹಿಡಿದು ತನ್ಮಯರಾಗಿ ಚಿಂತಿಸುತ್ತಿದ್ದರು. ಇದ್ದಕ್ಕಿದ್ದಂತೆ ಹೇಳತೊಡಗಿದರು. ''ಸ್ವಲ್ಪ ಇರು, ಮೊದಲು ಮಂತ್ರ ಹೇಳಿ ಮುಗಿಸುತ್ತೇನೆ. ಅನಂತರ ತಿನ್ನು'' ಎಂದು. ಪೂಜೆಯನ್ನು ಸಂಪೂರ್ಣ ಮಾಡದೆ ಮೊದಲೆ ನೈವೇದ್ಯ ಮಾಡಿ ಮುಗಿಸಿಬಿಟ್ಟರು.

ಹಿಂದೆ ಅವರು ಧ್ಯಾನ ಮತ್ತು ಪೂಜೆ ಮಾಡುತ್ತಿರುವಾಗ ದೇವಿಯ ಕಲ್ಲಿನ ವಿಗ್ರಹದಲ್ಲಿ ಒಂದು ಜೀವಂತ ಮೂರ್ತಿಯನ್ನು ಕಾಣುತ್ತಿದ್ದರು. ಈಗ ಅವರು ಮಂದಿರವನ್ನು ಪ್ರವೇಶಿಸಿದಾಗ ಕಲ್ಲಿನ ವಿಗ್ರಹವೇ ಅವರಿಗೆ ಕಾಣುತ್ತಿರಲಿಲ್ಲ. ಇಡೀ ಜಗತ್ತನ್ನೇ ಸಚೇತನಗೊಳಿಸಿರುವ ಆ ಪರಮ ಚೈತನ್ಯವೇ ಮೂರ್ತಿರೂಪದಲ್ಲಿ ವಿರಾಜಿಸು

ತ್ತಿರುವುದನ್ನು ನೋಡುತ್ತಿದ್ದರು. ಅವರು ಹೇಳುತ್ತಿದ್ದರು, ''ಮೂಗಿಗೆ ಕೈಯಿಟ್ಟು ನೋಡುತ್ತಿದ್ದೆ, ನಿಜವಾಗಿಯೂ ಉಸಿರಾಡುವುದು ಗೊತ್ತಾಗುತ್ತಿತ್ತು. ರಾತ್ರಿಯ ವೇಳೆ ದೀಪದ ಬೆಳಕಿನಿಂದ ದೇವಿಯ ದಿವ್ಯಮೂರ್ತಿಯ ಛಾಯೆ ಎಷ್ಟೇ ಗಮನವಿಟ್ಟು ನೋಡಿದರೂ ಕಾಣುತ್ತಿರಲಿಲ್ಲ. ತಾಯಿಯು ಬಾಲಕಿಯಂತೆ ಕಾಲಿಗೆ ಗೆಜ್ಜೆ ಕಟ್ಟಿ ಕೊಂಡು ಝುನ ಝುನ ನಾದಮಾಡುತ್ತ ಮಂದಿರದ ಮಹಡಿಗೆ ಮೆಟ್ಟಿಲೇರಿ ಹೋಗುವ ಶಬ್ದವನ್ನು ಕೇಳುತ್ತಿದ್ದೆ. ಕೂಡಲೆ ಓಡಿಬಂದು ನೋಡಿದರೆ ನಿಜವಾಗಿಯೂ ತಾಯಿಯು ಮಹಡಿಯ ಮೇಲೆ ಕೂದಲನ್ನು ಹರಹಿಕೊಂಡು ಒಮ್ಮೆ ಕಲಕತ್ತೆಯ ಕಡೆ, ಮತ್ತೊಮ್ಮೆ ಗಂಗೆಯ ಕಡೆ ನೋಡುತ್ತಿರುವುದನ್ನು ಕಂಡಿದ್ದೇನೆ.''

5. ಹೃದಯ ಹೇಳುತ್ತಿದ್ದನು ''ಈಗ ಕಾಳೀ ಮಂದಿರಕ್ಕೆ ಯಾರಾದರು ಹೋದರೆ ಒಂದು ಅನಿರ್ವಚನೀಯವಾದ ದಿವ್ಯಭಾವವುಂಟಾಗಿ ಶರೀರ 'ಜುಂ' ಎನ್ನು ತ್ತಿತ್ತು. ಶ್ರೀರಾಮಕೃಷ್ಣರು ಅಲ್ಲಿದ್ದಾಗ ಹೋದರಂತೂ ಕೇಳುವುದೇ ಬೇಡ ! ಪೂಜೆಯ ಸಮಯದಲ್ಲಿ ಅವರು ಹೇಗೆ ವರ್ತಿಸುತ್ತಾರೆ ಎಂಬುದನ್ನು ನೋಡಬೇಕೆಂಬ ಪ್ರಲೋಭನೆ ಯನ್ನು ನಿಗ್ರಹಿಸಲಾಗದೆ ಕೆಲವೊಮ್ಮೆ ಅಲ್ಲಿಗೆ ಹೋಗಿಬಿಡುತ್ತಿದ್ದೆ. ಆಗ ಆಶ್ಚರ್ಯಕರ ವಾದ ಭಕ್ತಿಯಿಂದ ನನ್ನ ಅಂತರಂಗ ತುಂಬಿಹೋಗುತ್ತಿತ್ತು. ಆದರೆ ಹೊರಗೆ ಬಂದ ಮೇಲೆ ಸಂದೇಹವುಂಟಾಗುತ್ತಿತ್ತು. ಮಾವನಿಗೆ ನಿಜವಾಗಿಯೂ ಹುಚ್ಚು ಹಿಡಿದಿದೆಯೇ? ಇಲ್ಲದಿದ್ದರೆ ಪೂಜೆಯ ವೇಳೆ ಹೀಗೇಕೆ ವರ್ತಿಸುತ್ತಾರೆ ? ರಾಣಿ ರಾಸಮಣಿ ಮತ್ತು ಮಥುರಬಾಬು ಇದನ್ನು ನೋಡಿದರೆ ಏನೆಂದುಕೊಳ್ಳುತ್ತಾರೆ ? ಅದನ್ನು ನೆನೆಸಿ ಕೊಂಡಾಗ ಭಯವಾಗುತ್ತಿತ್ತು. ಆದರೆ ಶ್ರೀರಾಮಕೃಷ್ಣರು ಇದಾವುದನ್ನೂ ಯೋಚಿ ಸುತ್ತಿರಲಿಲ್ಲ. ಮತ್ತೆ ಹೇಳಿದರೆ ಕೇಳುತ್ತಲೂ ಇರಲಿಲ್ಲ. ಅವರೊಡನೆ ಹೆಚ್ಚು ಮಾತ ನಾಡಲೂ ನನಗೆ ಆ ಸಂದರ್ಭದಲ್ಲಿ ಆಗುತ್ತಿರಲಿಲ್ಲ. ಏನೋ ಒಂದು ರೀತಿಯ ಭಯ ಮತ್ತು ಸಂಕೋಚದಿಂದ ಮಾತೇ ಹೊರಡದಂತಾಗುತ್ತಿತ್ತು. ನನಗೂ ಅವರಿಗೂ ಏನೋ ಒಂದು ಅಂತರವಿದೆ ಎಂದು ನನಗೆ ಅನಿಸುತ್ತಿತ್ತು. ಆದ್ದರಿಂದ ಏನೂ ಮಾತ ನಾಡದೆ ಸಾಧ್ಯವಾದಷ್ಟು ಅವರ ಸೇವೆ ಮಾಡುತ್ತಿದ್ದೆ. ಆದರೆ ಮನಸ್ಸಿನೊಳಗೆ ಏನೋ ಗಂಡಾಂತರವಾಗಬಹುದೆಂಬ ಭಯವೂ ಇತ್ತು''

ಪೂಜೆಯ ಸಮಯದಲ್ಲಿ ಮಂದಿರಕ್ಕೆ ಹೋದಾಗ ಏಕಕಾಲದಲ್ಲಿ ವಿಸ್ಮಯ ಭಯ ಭಕ್ತಿ ಈ ಭಾವನೆಗಳನ್ನು ಕೆರಳಿಸುತ್ತಿದ್ದ ಶ್ರೀರಾಮಕೃಷ್ಣರ ವರ್ತನೆಗಳ ಬಗ್ಗೆ ಹೃದಯ ಹೀಗೆ ಹೇಳುತ್ತಾನೆ : ''ಶ್ರೀರಾಮಕೃಷ್ಣರು ಅರ್ಘ್ಯವನ್ನು ಕೈಯಲ್ಲಿ ಹಿಡಿದುಕೊಂಡು ಮೊದಲು ತಮ್ಮ ತಲೆ, ಎದೆ ಸರ್ವಾಂಗಗಳಿಗೂ, ಪಾದಕ್ಕೂ ಕೂಡ ಸ್ಪರ್ಶಿಸಿ ಅನಂತರ ದೇವಿಯ ಪಾದಕ್ಕೆ ಅರ್ಪಿಸುತ್ತಿದ್ದರು. ಕುಡಿದವರಂತೆ ಅವರ ಎದೆ ಮತ್ತು ಕಣ್ಣು ರಕ್ತವರ್ಣದಿಂದ ಕೂಡಿದ್ದುವು. ಓಲಾಡುತ್ತ ಆಸನದಿಂದೆದ್ದು ಪೀಠದ ಮೇಲೆ ಹತ್ತಿ ದೇವಿಯ ಗಲ್ಲವನ್ನು ಸ್ಪರ್ಶಿಸಿ ಮಾತನಾಡುತ್ತಾ, ಹಾಡು ಹೇಳುತ್ತ ಆಕೆಯನ್ನು ಆದ ರಿಸುತ್ತಿದ್ದರು ಅಥವಾ ಶ್ರೀಮೂರ್ತಿಯ ಕೈಗಳನ್ನು ಹಿಡಿದು ನರ್ತಿಸುತ್ತಿದ್ದರು. ಒಂದು

ದಿನ ನೈವೇದ್ಯ ಮಾಡುವಾಗ ಇದ್ದಕ್ಕಿದ್ದಂತೆ ಮೇಲೆದ್ದರು. ತಟ್ಟೆಯಿಂದ ಒಂದು ತುತ್ತು ಅನ್ನವನ್ನು ತೆಗೆದು ಬೇಗನೆ ಪೀಠವನ್ನು ಏರಿ ದೇವಿಯ ಬಾಯಿಗೆ ಅದನ್ನು ಸ್ಪರ್ಶಿಸುತ್ತ ಹೇಳಿದರು: 'ತಿನ್ನು ತಾಯಿ, ಸರಿಯಾಗಿ ತಿನ್ನು' 'ಮತ್ತೆ ಹೇಳಿದರು, ನಾನು ತಿನ್ನಬೇಕೆ? ಆಯಿತು ತಿನ್ನುತ್ತೇನೆ'. ಹೀಗೆ ಹೇಳಿ ಅದರ ಸ್ವಲ್ಪ ಭಾಗವನ್ನು ತಿಂದು ಉಳಿದದ್ದನ್ನು ಅವಳ ಬಾಯಿಗೆ ಇಡುತ್ತ ಹೇಳಿದರು: 'ನಾನು ತಿಂದದಾಯಿತು. ಈಗ ನೀನು ತಿನ್ನು'. ಒಂದು ದಿನ ಅವರು ನೈವೇದ್ಯ ಮಾಡುತ್ತಿರುವಾಗ ಒಂದು ಬೆಕ್ಕು ಹೇಗೋ ಒಳಗೆ ನುಗ್ಗಿತು. ಶ್ರೀರಾಮಕೃಷ್ಣರು ಅದನ್ನು ಕಂಡು, 'ತಿನ್ನುತ್ತೀಯ, ತಾಯಿ, ತಿನ್ನುತ್ತೀಯ, ತಾಯಿ' ಎಂದು ಹೇಳುತ್ತಾ ನೈವೇದ್ಯದ ಸ್ವಲ್ಪ ಅನ್ನವನ್ನು ಬೆಕ್ಕಿಗೇ ತಿನ್ನಿಸಿಬಿಟ್ಟರು. ಕೆಲವು ದಿನ ರಾತ್ರಿ ಜಗನ್ಮಾತೆಯನ್ನು ಮಲಗಿಸುವಾಗ, 'ನಾನೂ ಹತ್ತಿರ ಮಲಗಿಕೊಳ್ಳ ಬೇಕೆ?–ಹಾಗೆಯೇ ಆಗಲಿ' ಎಂದು ಬೆಳ್ಳಿಯ ಮಂಚದ ಮೇಲೆ ಸ್ವಲ್ಪ ಹೊತ್ತು ಮಲಗುತ್ತಿದ್ದರು. ಕೆಲವೊಮ್ಮೆ ಪೂಜೆ ಮಾಡುತ್ತಿದ್ದಾಗ ಅದರಲ್ಲೇ ತನ್ಮಯರಾಗಿ ಬಾಹ್ಯಜ್ಞಾನವಿಲ್ಲದೆ ಬಹಳ ಹೊತ್ತು ಕಳೆಯುತ್ತಿದ್ದರು. ಬೆಳಗ್ಗೆ ಎದ್ದು ದೇವಿಗೆ ಹಾರ ನಿರ್ಮಿಸಲು ಅವರು ಹೂ ಕೀಳಲು ಹೋಗುತ್ತಿದ್ದರು. ಆಗಲೂ ಕೂಡ ಅವರು ಯಾರ ಸಹಿತವೂ ಮಾತನಾಡುತ್ತಿದ್ದರು, ನಗುತ್ತಿದ್ದರು, ಹಾಸ್ಯ ಮಾಡುತ್ತಿದ್ದರು. ಮತ್ತೆ ರಾತ್ರಿ ವೇಳೆ ಅವರಿಗೆ ನಿದ್ರೆಯೇ ಇರುತ್ತಿರಲಿಲ್ಲ. ನಾನು ಯಾವಾಗ ಎಚ್ಚರ ವಾದಾಗ ನೋಡಿದರೂ ಭಾವಮಯರಾಗಿ ಮಾತನಾಡುತ್ತಿದ್ದರು, ಹಾಡುತ್ತಿದ್ದರು ಅಥವಾ ಪಂಚವಟಿಗೆ ಹೋಗಿ ಧ್ಯಾನ ಮಾಡುತ್ತಿದ್ದರು''.

6. ಈ ಎಲ್ಲ ಆಚರಣೆಗಳನ್ನು ನೋಡಿ ಹೃದಯನ ಮನಸ್ಸಿನಲ್ಲಿ ಒಂದು ರೀತಿಯ ಶಂಕೆ ಇದ್ದರೂ ಬೇರೆಯವರಿಗೆ ಈ ವಿಷಯವನ್ನು ತಿಳಿಸುವ ಧೈರ್ಯ ಅವ ನಿಗೆ ಬರಲಿಲ್ಲ. ಏಕೆಂದರೆ ಇದು ದೇವಸ್ಥಾನದ ಅಧಿಕಾರಿಗಳಿಗೆ ಗೊತ್ತಾದರೆ ಅವರು ಮಥುರಬಾಬುವಿಗೆ ತಿಳಿಸಬಹುದು ಮತ್ತು ಅದರಿಂದ ಶ್ರೀರಾಮಕೃಷ್ಣರಿಗೆ ತೊಂದರೆ ಯಾಗಬಹುದು ಎಂಬ ಭಯ ಅವನಿಗಿತ್ತು. ಆದರೆ ಈ ರೀತಿ ನಡೆಯುತ್ತಿರುವಾಗ ಎಷ್ಟು ದಿನ ಇದನ್ನು ಮುಚ್ಚಿಡಲು ಸಾಧ್ಯ ? ಬೇರೆ ಕೆಲವರು ಅರ್ಚಕರು ಪೂಜಾ ಸಮಯದಲ್ಲಿ ಹೋಗಿ ಶ್ರೀರಾಮಕೃಷ್ಣರ ವರ್ತನೆಯನ್ನು ನೋಡಿ ಅನಂತರ ದೇವ ಸ್ಥಾನದ ಖಜಾಂಚಿಯೇ ಮುಂತಾದ ಅಧಿಕಾರಿಗಳಿಗೆ ಈ ವಿಷಯವನ್ನು ತಿಳಿಸಿದರು. ಅಧಿಕಾರಿಗಳು ಸ್ವತಃ ಬಂದು ಶ್ರೀರಾಮಕೃಷ್ಣರ ಪೂಜಾವಿಧಾನವನ್ನು ಕಂಡು ಆಶ್ಚರ್ಯ ಚಕಿತರಾದರು. ಶ್ರೀರಾಮಕೃಷ್ಣರು ದೇವತೆಯ ಆವೇಶವಾದಂತೆ ಕಾಣುತ್ತಿದ್ದರು. ಅವರ ಆಚರಣೆಯಲ್ಲಿ ಭಯ ಸಂಕೋಚ ಯಾವುದೂ ಇರಲಿಲ್ಲ. ಇದನ್ನೆಲ್ಲ ಗಮನಿಸಿದ ಅವರು ಭಯದಿಂದಲೂ ಸಂಕೋಚದಿಂದಲೂ ಏನೂ ಹೇಳಲಾಗದೆ ಹೊರಟು ಹೋದರು. ತಮ್ಮ ಆಫೀಸಿಗೆ ಹಿಂದಿರುಗಿದ ಮೇಲೆ ಎಲ್ಲರೂ ಸೇರಿ ಈ ವಿಷಯವಾಗಿ ಚರ್ಚಿಸತೊಡಗಿದರು, ಭಟ್ಟಾಚಾರ್ಯನಿಗೆ ಹುಚ್ಚು ಹಿಡಿದಿರಬೇಕು, ಅಥವಾ ಯಾವುದೋ

ಭೂತ ಹಿಡಿದಿರಬೇಕು; ಇಲ್ಲದಿದ್ದರೆ ಯಾರೂ ಈ ರೀತಿ ಶಾಸ್ತ್ರ ವಿರುದ್ಧವಾಗಿ ವರ್ತಿಸಲು ಸಾಧ್ಯವಿಲ್ಲ-ಹೀಗೆಲ್ಲ ಅವರು ಯೋಚಿಸತೊಡಗಿದರು. ಅಂತೂ ಪೂಜೆ ಸರಿಯಾಗಿ ನಡೆಯುತ್ತಿಲ್ಲ, ಧನಿಯವರಿಗೆ ಈ ವಿಷಯ ತಿಳಿಸಬೇಕು ಎಂದು ತೀರ್ಮಾನಿಸಿದರು.

7. ಮಥುರ ಬಾಬುವಿಗೆ ಸುದ್ದಿ ಮುಟ್ಟಿತು. ತಾನೇ ಖುದ್ದಾಗಿ ಬಂದು ವಿಷಯವೇನೆಂಬುದನ್ನು ಪರಾಂಬರಿಸುವವರೆಗೆ ಯಾರೂ ಭಟ್ಟಾಚಾರ್ಯರ ಪೂಜೆಗೆ ಅಡ್ಡಿಯುಂಟು ಮಾಡಬಾರದು ಎಂದು ಅವನು ಹೇಳಿಕಳಿಸಿದನು. ಈಗ ಎಲ್ಲರೂ ಮಥುರಬಾಬು ಬರುವುದನ್ನೇ ಕುತೂಹಲದಿಂದ ಕಾಯುತ್ತಿದ್ದರು. 'ಈಗ ಭಟ್ಟಾಚಾರ್ಯನ ಕೆಲಸ ಹೋಗುವುದು, ಧನಿಗಳು ಬಂದವರೇ ಅವನನ್ನು ಹೊರಗೆ ಹಾಕುವರು. ದೇವತಾ ಕಾರ್ಯದಲ್ಲಿ ಅಪರಾಧವನ್ನು ಎಷ್ಟು ಕಾಲ ದೇವರು ಸಹಿಸುತ್ತಾನೆ ಹೇಳು'– ಇತ್ಯಾದಿಯಾಗಿ ನಾನಾ ಪ್ರಕಾರ ಅವರು ಮಾತನಾಡಿಕೊಳ್ಳತೊಡಗಿದರು.

ಮಥುರಬಾಬುವು ಒಂದು ದಿನ ಯಾರಿಗೂ ತಿಳಿಸದೆ ದಕ್ಷಿಣೇಶ್ವರಕ್ಕೆ ಬಂದು ನೇರವಾಗಿ ದೇವಸ್ಥಾನಕ್ಕೆ ಹೋದನು. ಅಲ್ಲಿ ಅವನು ಬಹಳ ಹೊತ್ತು ಶ್ರೀರಾಮಕೃಷ್ಣರ ಕಾರ್ಯ ಕಲಾಪಗಳನ್ನು ವೀಕ್ಷಿಸಿದನು. ಭಾವಾವಿಷ್ಟರಾಗಿದ್ದ ಶ್ರೀರಾಮಕೃಷ್ಣರಿಗೆ ಇದಾವುದರ ಕಡೆಗೂ ಗಮನವೇ ಇಲ್ಲ.. ಪೂಜೆಯ ವೇಳೆಯಲ್ಲಿ ತಾಯಿಯಲ್ಲಿಯೇ ಅವರು ತನ್ಮಯರಾಗಿದ್ದು ಯಾರು ಬರುತ್ತಾರೆ ಯಾರು ಹೋಗುತ್ತಾರೆ ಏನು ನಡೆಯುತ್ತದೆ ಇದಾವುದರ ಕಡೆಗೂ ಅವರ ಗಮನಹರಿಯುತ್ತಿರಲಿಲ್ಲ. ಮಥುರನಾಥನಿಗೆ ಸಂಗತಿಯೇನೆಂಬುದು ಕೂಡಲೆ ಅರ್ಥವಾಯಿತು. ಅನಂತರ ಅವರು ಬಾಲಕನಂತೆ ಜಗನ್ಮಾತೆಯನ್ನು ಅನುನಯ ವಿನಯದಿಂದ ಆದರಿಸುವುದನ್ನು ಕಂಡು ಇದು ಪ್ರೇಮಭಕ್ತಿಯ ಫಲ ಎಂದು ಅವನಿಗೆ ಅರ್ಥವಾಯಿತು. ಇಂಥ ನಿಷ್ಕಪಟ ಭಕ್ತಿ ವಿಶ್ವಾಸದಿಂದ ತಾಯಿ ದೊರೆಯದಿದ್ದರೆ ಆಕೆಯ ದರ್ಶನ ಇನ್ನು ಹೇಗೆ ಆದೀತು?– ಎಂದು ಅವನು ಭಾವಿಸಿದನು. ಪೂಜೆಯ ವೇಳೆ ಅವರು ಕಣ್ಣೀರು ಸುರಿಸುವುದು, ಒಮ್ಮೊಮ್ಮೆ ಉಲ್ಲಾಸಭರಿತರಾಗಿರುವುದು, ಕೆಲವೊಮ್ಮೆ ಜಡರಾಗಿ ಬಾಹ್ಯಪ್ರಜ್ಞೆಯಿಲ್ಲದೆ ಕುಳಿತುಬಿಡುವುದು, ಬಾಹ್ಯ ವಿಷಯದ ಕಡೆಗೆ ಸಂಪೂರ್ಣ ಲಕ್ಷ್ಯವಿಲ್ಲದಿರುವುದು–ಇವುಗಳನ್ನೆಲ್ಲ ನೋಡಿದ ಮಥುರನಾಥನ ಮನಸ್ಸು ಒಂದು ಅಪೂರ್ವ ಆನಂದದಿಂದ ತುಂಬಿ ಹೋಯಿತು. ಮಂದಿರವು ದೇವಪ್ರಕಾಶದಿಂದ ಜಗಜಗಿಸುತ್ತಿರುವಂತೆ ಅನುಭವವಾಯಿತು ಅವನಿಗೆ. ಭಟ್ಟಾಚಾರ್ಯರು ಜಗನ್ಮಾತೆಯ ಕೃಪೆಯಿಂದ ಧನ್ಯರಾಗಿರುವರು ಎಂದು ಅವನಿಗೆ ನಂಬಿಕೆಯುಂಟಾಯಿತು. ಅನಂತರ ಭಕ್ತಿಪೂರ್ಣ ಹೃದಯದಿಂದ ಕಣ್ಣೀರು ಸುರಿಸುತ್ತ ಜಗನ್ಮಾತೆಗೂ ಅವಳ ಅಪೂರ್ವ ಅರ್ಚಕನಿಗೂ ದೂರದಿಂದಲೇ ಪುನಃ ಪುನಃ ನಮಿಸುತ್ತಾ ಹೇಳತೊಡಗಿದನು : "ಇಷ್ಟು ದಿನಗಳ ನಂತರ ಶ್ರೀದೇವಿಯ ಪ್ರತಿಷ್ಠಾಪನೆ ಸಾರ್ಥಕವಾಯಿತು. ಇಷ್ಟು ದಿನಗಳ ನಂತರ ಜಗನ್ಮಾತೆಯು ಇಲ್ಲಿ ನಿಜವಾಗಿಯೂ ಆವಿರ್ಭವಿಸಿರುವಳು. ಇಷ್ಟು ದಿನಗಳ ನಂತರ ಪೂಜೆ ಸಮರ್ಪಕವಾಗಿ ನೆರವೇರಿತು". ಅಧಿಕಾರಿಗಳಿಗೆ ಏನೂ ಹೇಳದೆ ಅವನು ಅಂದು ನೇರವಾಗಿ ಮನೆಗೆ ಹಿಂದಿರುಗಿದನು.

ಮರುದಿನ ಒಂದು ಆಜ್ಞೆಯನ್ನು ಕಳಿಸಿದ : "ಭಟ್ಟಾಚಾರ್ಯರು ಯಾವ ರೀತಿಯೋ ಪೂಜೆ ಮಾಡಲಿ. ಅವರಿಗೆ ಯಾರೂ ಅಡ್ಡಿಯನ್ನುಂಟು ಮಾಡಬಾರದು."

8. ವೈಧೀಭಕ್ತಿಯ ನಿಯಮಗಳನ್ನೆಲ್ಲ ಮೀರಿ ಶ್ರೀರಾಮಕೃಷ್ಣರ ಮನಸ್ಸು ಈಗ ಅಹೇತುಕೀ ಪ್ರೇಮಾ ಭಕ್ತಿಯ ಉಚ್ಚಮಾರ್ಗದಲ್ಲಿ ವೇಗವಾಗಿ ಹರಿಯುತ್ತಿದೆ ಎಂಬುದು ಶಾಸ್ತ್ರವನ್ನು ತಿಳಿದವರಿಗೆ ಅರ್ಥವಾಗುವ ವಿಷಯ. ಮೇಲಿನ ಘಟನೆಗಳು ಎಷ್ಟು ಸ್ವಾಭಾವಿಕವಾಗಿ ನಡೆಯುತ್ತಿದ್ದವೆಂದರೆ ಇತರರ ವಿಷಯವಿರಲಿ ಅವರಿಗೇ ಅವು ಅರ್ಥವಾಗುತ್ತಿರಲಿಲ್ಲ. ಜಗನ್ಮಾತೆಯ ಮೇಲಿನ ತೀವ್ರ ಪ್ರೀತಿಯ ಪ್ರೇರಣೆಯಿಂದ ಅವರು ಆ ರೀತಿ ವರ್ತಿಸುವುದು ಅನಿವಾರ್ಯವಾಗಿತ್ತು. ಯಾರೊ ಬಲವಂತವಾಗಿ ಆ ರೀತಿ ಮಾಡಿಸುತಿದ್ದರು ಎಂದು ಮಾತ್ರ ಅವರಿಗೆ ತಿಳಿದಿತ್ತು. ಇದರಿಂದಾಗಿ ಆಗಾಗ ಅವರಿಗೆ ಅನಿಸುತಿತ್ತು "ನನಗೆ ನಿಜವಾಗಿಯೂ ಏನಾಗುತ್ತಿದೆ? ನಾನು ಸರಿಯಾದ ಮಾರ್ಗದಲ್ಲಿ ಮುಂದುವರಿಯುತ್ತಿರುವೆನೆ"ಎಂದು ಜಗದಂಬೆಯನ್ನು ವ್ಯಾಕುಲತೆಯಿಂದ ಪ್ರಾರ್ಥಿಸುತ್ತಿದ್ದರು "ತಾಯಿ, ನನಗೆ ಇಂಥ ಅವಸ್ಥೆ ಏಕೆ ಬಂತು ಎಂದು ನನಗೆ ಅರ್ಥವೇ ಆಗುತ್ತಿಲ್ಲ. ನಾನು ಏನು ಮಾಡಬೇಕೊ ಅದನ್ನು ಮಾಡಿಸು ಮತ್ತು ನಾನು ಏನು ಕಲಿಯಬೇಕೊ ಅದನ್ನು ಕಲಿಸು, ತಾಯಿ, ಸದಾ ನನ್ನ ಕೈ ಹಿಡಿದು ನಡೆಸು." ಕಾಮ, ಕಾಂಚನ, ಮಾನ, ಯಶಸ್ಸು, ಪ್ರಪಂಚದ ಎಲ್ಲ ಭೋಗವಸ್ತುಗಳಿಂದ ಮನಸ್ಸನ್ನು ಹಿಂತೆಗೆದುಕೊಂಡು ತಮ್ಮ ಹೃದಯಾಂತರಾಳದಿಂದ ಅವರು ಈ ರೀತಿ ಪ್ರಾರ್ಥಿಸಿದರು. ಜಗನ್ಮಾತೆಯೂ ಅವರ ಕೈ ಹಿಡಿದು ನಡೆಸುತ್ತಾ ಎಲ್ಲಾ ವಿಷಯದಲ್ಲಿಯೂ ಅವರನ್ನು ರಕ್ಷಿಸಿ ಅವರ ಪ್ರಾರ್ಥನೆಯನ್ನು ಪೂರ್ತಿಗೊಳಿಸಿದ್ದಳು. ಅವರ ಸಾಧನೆಯ ಸಂದರ್ಭದಲ್ಲಿ ಅವರ ಎಲ್ಲಾ ಆವಶ್ಯಕತೆಗಳನ್ನೂ, ಅವರಿಗೆ ಬೇಕಾದ ಜನರನ್ನು ಅನಿರೀಕ್ಷಿತ ರೀತಿಯಲ್ಲಿ ಒದಗಿಸಿ ಅವರು ಭಕ್ತಿ ಮತ್ತು ಜ್ಞಾನದ ಚರಮಗುರಿಯನ್ನು ಮುಟ್ಟುವಂತೆ ಮಾಡಿದಳು. ಗೀತೆಯಲ್ಲಿ ಭಗವಂತನು ಈ ರೀತಿ ಆಶ್ವಾಸನೆ ಇತ್ತಿರುವನು :

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥

'ಯಾರು ಬೇರೇನನ್ನೂ ಚಿಂತಿಸದೆ ನನ್ನನ್ನೇ ಉಪಾಸಿಸುತ್ತ ನನ್ನಲ್ಲೇ ಪೂರ್ಣ ಮನಸ್ಸುಳ್ಳವರಾಗಿರುತ್ತಾರೊ ಅವರ ಯೋಗಕ್ಷೇಮವನ್ನು ನಾನು ನೋಡಿಕೊಳ್ಳುತ್ತೇನೆ." ಶ್ರೀರಾಮಕೃಷ್ಣರ ಜೀವನದಲ್ಲಿ ಗೀತೆಯ ಈ ಮಾತು ಅಕ್ಷರಶಃ ಸತ್ಯವಾಗಿತ್ತು ಎಂಬುದು ಅವರ ಈ ಸಮಯದ ಜೀವನವನ್ನು ಪರಿಶೀಲಿಸಿದಾಗ ನಮಗೆ ತಿಳಿದು ಬರುತ್ತದೆ, ಈ ಆಧುನಿಕ ಯುಗದಲ್ಲಿ ಗೀತೆಯ ಈ ಮಾತನ್ನು ಸಮರ್ಥಿಸುವ ಅಗತ್ಯವಿತ್ತು. ಭಗವಂತನಿಗಾಗಿ ಎಲ್ಲವನ್ನೂ ತ್ಯಜಿಸಿದರೆ ಅವನು ಸಾಧಕನಿಗೆ ಬೇಕಾದ ಎಲ್ಲವನ್ನು ಒದಗಿಸುತ್ತಾನೆ ಎಂಬುದನ್ನು ಸಾಧಕರೆಲ್ಲರೂ ತಮ್ಮ ಜೀವನದ ಮೂಲಕ ತೋರಿಸಿಕೊಟ್ಟಿದ್ದರೂ ವರ್ತಮಾನಕಾಲದಲ್ಲಿ ವಿಷಯಾಸಕ್ತನಾದ ಮಾನವನು ಇದನ್ನು ಅರ್ಥಮಾಡಿ

ಕೊಳ್ಳಲು ಸಮರ್ಥನಾಗಿಲ್ಲ. ಆದ್ದರಿಂದ ಈ ಶಾಸ್ತ್ರವಾಕ್ಯದ ಸಫಲತೆಯನ್ನು ತೋರಿಸಿಕೊಡಲು ಜಗನ್ಮಾತೆಯು ಶ್ರೀರಾಮಕೃಷ್ಣರ ಮೂಲಕ ಈ ಲೀಲೆಯನ್ನು ಮಾಡಿ ತೋರಿಸಿರುವಳು.

9. ಈಶ್ವರೀಯ ಭಾವದ ಮಹಾಪ್ರವಾಹ ಮಾನವ ಜೀವನದಲ್ಲಿ ಹರಿಯ ತೊಡಗಿತೆಂದರೆ ಅವನು ಏನೇ ಮಾಡಿದರೂ ಅದನ್ನು ತಡೆಯಲಾಗುವುದಿಲ್ಲ ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಸಾಧಾರಣ ಮಾನವನದು ಜಡದೇಹ. ಅದರ ಪ್ರಬಲ ವೇಗವನ್ನು ಸಹಿಸಲಾಗದೆ ದೇಹ ಜರ್ಝರಿತವಾಗುತ್ತದೆ. ಈ ರೀತಿ ಅನೇಕರು ಮೃತ್ಯುವಶರಾಗಿರುವರು. ಪೂರ್ಣ ಜ್ಞಾನ ಅಥವಾ ಪೂರ್ಣ ಭಕ್ತಿಯ ಆವೇಗವನ್ನು ಸಹಿಸಬಲ್ಲ ಶರೀರ ಬೇಕು. ಅವತಾರ ಪುರುಷರಿಗೆ ಮಾತ್ರ ಇಂಥ ಶರೀರವಿರುತ್ತದೆ. ಅವರು ಮಾತ್ರ ಅದರ ವೇಗವನ್ನು ಸಹಿಸಿಕೊಂಡು ಜೀವಿಸಿರಬಲ್ಲರು. ಆದ್ದರಿಂದಲೇ ಭಕ್ತಿಶಾಸ್ತ್ರವು ಅವರನ್ನು ಶುದ್ಧಸತ್ತ್ವ ವಿಗ್ರಹವಾನ್ ಎಂದು ಕರೆಯುತ್ತದೆ. ಶುದ್ಧಸತ್ವದಿಂದ ಉಂಟಾದ ಶರೀರವನ್ನು ಪಡೆದು ಅವರು ಅವತರಿಸು ತ್ತಾರೆ. ಆದ್ದರಿಂದಲೇ ಅವರು ಆಧ್ಯಾತ್ಮಿಕತೆಯ ಪೂರ್ಣಭಾವದ ವೇಗವನ್ನು ಸಹಿಸಲು ಸಮರ್ಥರಾಗಿರುತ್ತಾರೆ. ಇಂಥ ಶರೀರವನ್ನು ಪಡೆದು ಅವರು ಅನೇಕವೇಳೆ ಅದರ ಪ್ರಬಲ ವೇಗಕ್ಕೆ ಹಿಮ್ಮೆಟ್ಟುವುದನ್ನು ನಾವು ನೋಡುತ್ತೇವೆ.ಇದನ್ನು ನಾವು ಭಕ್ತಿ ಮಾರ್ಗವನ್ನು ಅನುಸರಿಸುವ ಅವತಾರ ಪುರುಷರಲ್ಲಿ ವಿಶೇಷವಾಗಿ ಕಾಣುತ್ತೇವೆ. ಭಾವ ಭಕ್ತಿಯ ಪ್ರಾಬಲ್ಯದಿಂದ ಕ್ರಿಸ್ತ ಮತ್ತು ಚೈತನ್ಯರ ಶರೀರದ ಅಂಗಾಂಗಗಳು ಶಿಥಿಲವಾ ಗುತ್ತಿದ್ದವು. ಶರೀರದ ರೋಮಕೂಪಗಳಿಂದ ಬೆವರಿನಂತೆ ರಕ್ತ ಬಿಂದುಗಳು ಹೊರಬರು ತ್ತಿದ್ದುವು. ಇಂಥ ಘಟನೆಗಳು ಮೇಲಿನ ಹೇಳಿಕೆಯನ್ನು ಸಮರ್ಥಿಸುತ್ತವೆ. ಈ ಎಲ್ಲ ಶಾರೀರಿಕ ವಿಕಾರಗಳು ತುಂಬ ಕ್ಲೇಶಕರವೆನಿಸಿದರೂ ಇವುಗಳ ಸಹಾಯದಿಂದಲೇ ಅಸಾಧಾರಣ ಭಾವೋದ್ವೇಗವನ್ನು ಭರಿಸುವ ಶಕ್ತಿ ಆ ಶರೀರಕ್ಕೆ ಬರುತ್ತದೆ. ಮುಂದೆ ಕ್ರಮೇಣ ಆ ಭಾವದ ವೇಗವು ಸ್ವಾಭಾವಿಕ-ವಾದಾಗ ಮೊದಲಿನ ಶಾರೀರಿಕ ವಿಕಾರಗಳು ಕಾಣಿಸಿಕೊಳ್ಳುವುದಿಲ್ಲ.

10. ಭಾವ ಭಕ್ತಿಯ ತೀವ್ರತೆಯಿಂದ ಶ್ರೀರಾಮಕೃಷ್ಣರ ಶರೀರದಲ್ಲಿ ಈಗ ನಾನಾ ಬಗೆಯ ವಿಕಾರಗಳು ಕಾಣಿಸಿಕೊಳ್ಳತೊಡಗಿದವು. ಸಾಧನೆಯ ಪ್ರಾರಂಭದಲ್ಲಿಯೆ ಅವರ ಇಡೀ ದೇಹ ಉರಿಯುತ್ತಿದ್ದುದರ ಬಗ್ಗೆ ಮೊದಲೇ ಪ್ರಸ್ತಾಪಿಸಿರುವೆವು. ಆ ಉರಿಯಿಂದ ಅವರು ಕಷ್ಟಪಡುತ್ತಿದ್ದರು. ಅದರ ಕಾರಣವನ್ನು ಅವರು ನಮಗೆ ಅನೇಕ ಬಾರಿ ಹೇಳಿರುವರು : "ಸಂಧ್ಯಾ ಪೂಜಾದಿಗಳನ್ನು ಆಚರಿಸುವಾಗ ಶಾಸ್ತ್ರೀಯ ರೀತಿಯಂತೆ ಒಳಗಿನ ಪಾಪಪುರುಷನು ದಹಿಸಲ್ಪಟ್ಟನೆಂದು ಚಿಂತಿಸುತ್ತಿದ್ದೆನು. ನಿಜವಾಗಿಯೂ ಪಾಪಪುರುಷನಿರುವನು ಮತ್ತು ಅವನನ್ನು ದಹಿಸಬಹುದು– ಎಂದ ಆಗ ಯಾರಿಗೆ ಗೊತ್ತು. ಸಾಧನೆಯ ಪ್ರಾರಂಭದಿಂದಲೂ ದೇಹದಲ್ಲಿ ಉರಿ ಕಾಣಿಸಿಕೊಳ್ಳುತಿತ್ತು." ಇದು ಯಾವುದೊ ಕಾಯಿಲೆ ಇರಬೇಕೆಂದು ಭಾವಿಸಿದೆ. ಕ್ರಮೇಣ

ಅದು ಜಾಸ್ತಿಯಾಗಿ ಅಸಹ್ಯವಾಗತೊಡಗಿತು. ಅನೇಕ ವೈದ್ಯರ ತೈಲಗಳನ್ನು ಹಚ್ಚಿದ್ದಾಯಿತು. ಅದಾವುದರಿಂದಲೂ ಅದು ಕಡಿಮೆಯಾಗಲಿಲ್ಲ. ಅನಂತರ ಒಂದು ದಿನ ಪಂಚವಟಿಯಲ್ಲಿ ಕುಳಿತಿದ್ದೆ. ವಿಕೃತರೂಪದ ಒಬ್ಬ ವ್ಯಕ್ತಿ ಇದರಿಂದ (ತಮ್ಮ ದೇಹವನ್ನು ನಿರ್ದೇಶಿಸಿ) ಹೊರಬಂದ – ಕಡುಗಪ್ಪು ಮೈಬಣ್ಣ ಕೆಂಗಣ್ಣುಗಳು, ಕುಡಿದವನಂತೆ ತೂರಾಡುತ್ತಿದ್ದ. ಮರುಕ್ಷಣವೇ ಇನ್ನೊಬ್ಬ ವ್ಯಕ್ತಿ ಹೊರಬಂದನು – ಅವನದು ಸೌಮ್ಯವದನ, ಗೈರಿಕವಸನ, ತ್ರಿಶೂಲವನ್ನು ಹಿಡಿದಿದ್ದ. ಅವನು ವಿಕೃತ ವ್ಯಕ್ತಿಯ ಮೇಲೆ ಆಕ್ರಮಣ ಮಾಡಿ ಅವನನ್ನು ಕೊಂದು ಹಾಕಿದನು. ಅಂದಿನಿಂದ ದೇಹದ ಉರಿ ಕಡಿಮೆಯಾಗತೊಡಗಿತು. ಈ ಘಟನೆಗೆ ಮುಂಚೆ ಆರು ತಿಂಗಳು ಕಾಲ ಉರಿಯ ದಾರುಣ ಕಷ್ಟವನ್ನು ನಾನು ಅನುಭವಿಸಿದೆ.''

ಪಾಪ ಪುರುಷನ ಸಾವಿನ ನಂತರ ಅವರ ದೇಹದ ಉರಿ ನಿಂತರೂ ಮತ್ತೆ ಸ್ವಲ್ಪ ಕಾಲದ ನಂತರ ಅದು ಶುರುವಾಯಿತೆಂದು ಅವರು ಹೇಳುತ್ತಿದ್ದರು. ಆಗ ಅವರು ವೈಧೀ ಭಕ್ತಿಯ ಹಂತವನ್ನು ಮೀರಿ ರಾಗಭಕ್ತಿಯ ಹಂತವನ್ನು ತಲುಪಿದ್ದರು. ಕ್ರಮೇಣ ದೇಹದ ಉರಿ ಎಷ್ಟು ಅಧಿಕವಾಯಿತೆಂದರೆ ತಲೆಯ ಮೇಲೆ ಒದ್ದೆಯಾದ ಟವಲನ್ನು ಹಾಕಿಕೊಂಡು ಗಂಗೆಯಲ್ಲಿ ಮೂರು ನಾಲ್ಕು ಗಂಟೆ ಮುಳುಗಿಕೊಂಡಿದ್ದರೂ ಉರಿ ಕಡಿಮೆಯಾಗುತ್ತಿರಲಿಲ್ಲ. ಭೈರವೀ ಬ್ರಾಹ್ಮಣಿ ಬಂದ ಮೇಲೆ ಅವಳ ಸಹಾಯ ದಿಂದ ಇದು ಶಮನವಾಯಿತು.* ಇದಾದ ನಂತರ ಅವರು ಮಧುರಭಾವದಲ್ಲಿ ಸಾಧನೆ ಮಾಡುತ್ತಿರುವಾಗ ಮತ್ತೆ ಈ ದೇಹದ ಉರಿ ಕಾಣಿಸಿಕೊಂಡಿತ್ತು. ಹೃದಯನು ಹೇಳು ತ್ತಿದ್ದ: ''ಎದೆಯ ಒಳಗೆ ಒಂದು ಮಡಕೆಯ ತುಂಬ ಕೆಂಡವನ್ನಿಟ್ಟರೆ ಹೇಗನಿಸುವುದೋ ಹಾಗೆ ಅವರು ವೇದನೆಯಿಂದ ನರಳುತ್ತಿದ್ದರು. ಆಗಾಗ ಅದು ಬಂದು ಅವರನ್ನು ತುಂಬ ಪೀಡಿಸುತ್ತಿತ್ತು. ಅನಂತರ ಸಾಧನೆಯ ಕಾಲ ಕಳೆದು ಕೆಲವು ವರ್ಷಗಳ ನಂತರ ಬಾರಾಸಾತ್‌ನ ಕನಾಯ್‌ಲಾಲ್ ಘೋಷಾಲನ ಪರಿಚಯವಾಯಿತು ಅವರಿಗೆ. ಅವನು ದೊಡ್ಡ ಶಕ್ತಿಸಾಧಕ. ಶ್ರೀರಾಮಕೃಷ್ಣರ ದೇಹದ ಉರಿಯ ವಿಷಯವನ್ನು ಕೇಳಿ ಒಂದು ಇಷ್ಟಕವಚವನ್ನು ಧರಿಸಬೇಕೆಂದು ಅವರಿಗೆ ಸಲಹೆಯಿತ್ತನು. ಆ ಕವಚವನ್ನು ಧರಿಸಿದ ಮೇಲೆ ಮತ್ತೆ ಎಂದೂ ಆ ರೀತಿಯ ಉರಿ ಕಾಣಿಸಿಕೊಳ್ಳಲಿಲ್ಲ''.

11. ಮಥುರನು ಶ್ರೀರಾಮಕೃಷ್ಣರ ಅದ್ಭುತ ಪೂಜಾ ವಿಧಾನವನ್ನು ಕಂಡು ಜಾನ್‌ಬಜಾರಿಗೆ ಹೋದಮೇಲೆ ರಾಣಿರಾಸಮಣಿಗೆ ಎಲ್ಲವನ್ನೂ ವಿವರಿಸಿದನು. ಭಕ್ತಿ ಮತಿಯಾದ ಆಕೆ ಇದನ್ನೆಲ್ಲ ಕೇಳಿ ರೋಮಾಂಚನಗೊಂಡಳು. ಶ್ರೀರಾಮಕೃಷ್ಣರ ಭಕ್ತಿ ಗೀತೆಗಳನ್ನು ಕೇಳಿದ ಅವಳು ಮೊದಲೇ ಅವರ ಬಗ್ಗೆ ಪ್ರೀತಿ ಗೌರವವನ್ನು ಹೊಂದಿ ದ್ದಳು ಮತ್ತು ಗೋವಿಂದನ ವಿಗ್ರಹವು ಒಡೆದು ಹೋದ ಸಂದರ್ಭದಲ್ಲಿ ಅವರ ಭಾವಾ

---

* ಈ ವಿಷಯ ಮುಂದೆ ಬರುವುದು (ಗುರುಭಾವ-ಉತ್ತರಾರ್ಧ ಮೊದಲನೆಯ ಅಧ್ಯಾಯದಲ್ಲಿ).

ವೇಶವನ್ನೂ ಅಪೂರ್ವ ಬುದ್ಧಿಶಕ್ತಿಯನ್ನೂ ಕಂಡು ಆಶ್ಚರಿಪಟ್ಟಿದ್ದಳು. ಆದ್ದರಿಂದ ಶ್ರೀರಾಮಕೃಷ್ಣರಂಥವರು ಜಗನ್ಮಾತೆಯ ಕೃಪಾಕಟಾಕ್ಷಕ್ಕೆ ಒಳಗಾಗುವ ಸಾಧ್ಯತೆಯನ್ನು ನಂಬಲು ಆಕೆಗೆ ಕಷ್ಟವಾಗಲಿಲ್ಲ. ಇದಾದ ಸ್ವಲ್ಪ ಕಾಲದ ನಂತರ ಒಂದು ವಿಚಿತ್ರ ಘಟನೆ ಸಂಭವಿಸಿತು. ಇದರಿಂದ ರಾಣಿ ಮತ್ತು ಮಥುರರಿಗೆ ಅವರ ಮೇಲಿದ್ದ ಶ್ರದ್ಧೆ ವಿಚಲಿತ ವಾಗುವ ಸಂಭವವಿತ್ತು. ರಾಣಿಯು ಒಂದು ದಿನ ಪೂಜೆಯ ಸಂದರ್ಭದಲ್ಲಿ ಮಂದಿರಕ್ಕೆ ಬಂದಿದ್ದಳು. ಅವಳು ದೇವಿಯ ಮುಂದೆ ಕುಳಿತು ಭಗವದ್ಧ್ಯಾನ ಮಾಡುವುದರ ಬದಲು ಯಾವುದೊ ಕೋರ್ಟು ಕೇಸಿನ ಬಗ್ಗೆ ಚಿಂತಿಸುತ್ತಿದ್ದಳು. ಶ್ರೀರಾಮಕೃಷ್ಣರು ಆಗ ಭಕ್ತಿಗೀತೆಯನ್ನು ಹಾಡುತ್ತಿದ್ದರು. ಭಾವಾವಿಷ್ಟರಾದ ಶ್ರೀರಾಮಕೃಷ್ಣರಿಗೆ ಆಕೆಯ ಮನಸ್ಸಿನಲ್ಲಿರುವುದು ತಿಳಿಯಿತು. "ಇಲ್ಲಿಯೂ ಇದೇ ಚಿಂತೆಯೇ !?" ಎಂದು ಹೇಳುತ್ತ ಆಕೆಯ ಕೆನ್ನೆಯ ಮೇಲೆ ಒಂದು ಪೆಟ್ಟು ಹೊಡೆದರು. ಭಕ್ತಳಾದ ರಾಣಿ ರಾಸಮಣಿಗೆ ತನ್ನ ತಪ್ಪಿನ ಅರಿವಾಗಿ ಪರಿತಪಿಸಿದಳು. ಈ ಘಟನೆಯಿಂದ ಶ್ರೀರಾಮ ಕೃಷ್ಣರ ಮೇಲೆ ಆಕೆಯ ಭಕ್ತಿ ಇನ್ನೂ ವೃದ್ಧಿಯಾಯಿತು.*

12. ಶ್ರೀರಾಮಕೃಷ್ಣರ ಭಕ್ತಿಭಾವಾವೇಶ ಮತ್ತು ಆನಂದೋಲ್ಲಾಸ ಇವು ದಿನವೂ ದಿನ ವೃದ್ಧಿಯಾಗುತ್ತ ಹೋದುವು. ಅವರಿಗೆ ನಿತ್ಯ ನೈಮಿತ್ತಿಕ ಕಾರ್ಯ ಕಲಾಪಗಳನ್ನು ನೆರವೇರಿಸುವುದೂ ಕೂಡ ಸಾಧ್ಯವಾಗಲಿಲ್ಲ. ಉನ್ನತ ಆಧ್ಯಾತ್ಮಿಕ ಅವಸ್ಥೆಯನ್ನು ಮುಟ್ಟಿದ ಮೇಲೆ ವೈಧೀಭಕ್ತಿಯ ವಿಧಿ ನಿಷೇಧಗಳು ಹೇಗೆ ಸ್ವಾಭಾವಿಕ ವಾಗಿ ಬಿಟ್ಟು ಹೋಗುವುವು ಎಂಬುದನ್ನು ಶ್ರೀರಾಮಕೃಷ್ಣರು ಒಂದು ದೃಷ್ಟಾಂತದ ಮೂಲಕ ಹೀಗೆ ವಿವರಿಸುವರು. "ಮನೆಯಲ್ಲಿ ಸೊಸೆ ಎಲ್ಲಿಯವರೆಗೆ ಗರ್ಭವತಿ ಯಾಗಿರುವುದಿಲ್ಲವೊ ಅಲ್ಲಿಯವರೆಗೆ ಅತ್ತೆಯು ಅವಳಿಗೆ ಎಲ್ಲ ತಿನ್ನಲು ಕೊಡುತ್ತಾಳೆ, ಎಲ್ಲ ಕೆಲಸ ಕೊಡುತ್ತಾಳೆ. ಆಕೆ ಗರ್ಭಿಣಿಯಾದ ಮೇಲೆ ಕೆಲಸ ಮತ್ತು ಆಹಾರದ ವಿಷಯದಲ್ಲಿ ಸ್ವಲ್ಪ ಎಚ್ಚರಿಕೆ ವಹಿಸುವಳು. ದಿನ ಕಳೆದಂತೆ ಕೆಲಸ ಕಡಿಮೆ ಮಾಡುತ್ತಾ ಹೋಗುವಳು. ಪ್ರಸವಿಸುವ ಸಮಯ ಬಂದ ಮೇಲೆ ಒಳಗಿನ ಶಿಶುವಿಗೆ ಏನಾದರೂ ಅನಿಷ್ಟ ಸಂಭವಿಸುವುದೆಂದು ಅವಳಿಗೆ ಏನೂ ಕೆಲಸ ಕೊಡುವುದಿಲ್ಲ. ಶಿಶುವಿನ ಜನನ ವಾದ ಮೇಲಂತೂ ಆಕೆಗೆ ಶಿಶುವಿನೊಡನೆ ನಲಿದಾಡುವುದೇ ಕೆಲಸ." ಶ್ರೀಜಗನ್ಮಾತೆಯ ಬಾಹ್ಯ ಪೂಜೆ ಮತ್ತು ಸೇವಾದಿಗಳ ತ್ಯಾಗವೂ ಇದೇ ರೀತಿ ಸ್ವಾಭಾವಿಕವಾಗಿ ಆಯಿತು. ಇವಾವುದನ್ನೂ ಅವರು ಸಮಯಾನುಸಾರವಾಗಿ ಮಾಡುತ್ತಿರಲಿಲ್ಲ, ಯಾವಾಗ ಯಾವ ರೀತಿ ಜಗನ್ಮಾತೆಯ ಸೇವೆ ಮಾಡಬೇಕು ಎಂದು ಅವರಿಗೆ ಅನಿಸುತ್ತಿತ್ತೊ ಆ ರೀತಿ ಮಾಡುತ್ತಿದ್ದರು ಅಷ್ಟೆ. ಕೆಲವೊಮ್ಮೆ ಪೂಜೆ ಮಾಡದೆಯೇ ನೈವೇದ್ಯ ಮಾಡಿಬಿಡು ತ್ತಿದ್ದರು. ಕೆಲವೊಮ್ಮೆ ತಮ್ಮನ್ನು ದೇವಿಯೊಡನೆ ಒಂದಾಗಿಸಿಕೊಂಡು ಗಂಧಪುಷ್ಪಾದಿ

---

* ಈ ಘಟನೆಯನ್ನು ಸವಿಸ್ತಾರವಾಗಿ ಬೇರೆ ಕಡೆ ವಿವರಿಸಿರುವೆವು (ಗುರುಭಾವ, ಮೊದಲನೆಯ ಅಧ್ಯಾಯದಲ್ಲಿ)

ಗಳಿಂದ ತಮ್ಮನ್ನೇ ಅಲಂಕರಿಸಿಕೊಂಡುಬಿಡುತ್ತಿದ್ದರು. ಒಳ ಹೊರಗೆ ಎಲ್ಲೆಲ್ಲಿಯೂ ಅವರು ದೇವಿಯನ್ನು ಕಾಣುತ್ತಿದ್ದುದರಿಂದ ಅವರು ಈ ರೀತಿ ವ್ಯವಹರಿಸುತ್ತಿದ್ದರು. ಇದನ್ನು ಅವರೆ ಅನೇಕ ಬಾರಿ ನಮಗೆ ಹೇಳಿರುವರು. ಆ ಸಮಯದಲ್ಲಿ ತನ್ಮಯತೆಯು ಕಡಿಮೆಯಾಗಿ ಸ್ವಲ್ಪ ಹೊತ್ತು ತಾಯಿಯ ದರ್ಶನವಾಗದಿದ್ದರೂ ಅವರಿಗೆ ಎಂಥ ವಿರಹ ವೇದನೆ ಉಂಟಾಗುತ್ತಿತ್ತೆಂದರೆ ಅವರು ನೆಲದ ಮೇಲೆ ಬಿದ್ದು ಹೊರಳಾಡುತ್ತ ಸುತ್ತಲೂ ಕೇಳಿಸುವಂತೆ ಗಟ್ಟಿಯಾಗಿ ರೋದಿಸುತ್ತಿದ್ದರು. ಆ ರೀತಿ ಬಿದ್ದು ಹೊರಳಾಡುವಾಗ ದೇಹದಲ್ಲೆಲ್ಲ ಘಾಯವಾಗಿ ರಕ್ತಬರುತ್ತಿದ್ದರೂ ಅವರಿಗೆ ಅದರ ಪರಿವೆಯೇ ಇರುತ್ತಿರಲಿಲ್ಲ. ಅನಂತರ ದೇವಿಯ ದರ್ಶನವಾಗಿ ಆ ಭಾವ ಹೊರಟು ಹೋಗುತ್ತಿತ್ತು. ಅವರ ಮುಖವು ಅದ್ಭುತ ತೇಜಸ್ಸಿನಿಂದ ಉಲ್ಲಾಸದಿಂದ ಬೆಳಗುತ್ತಿತ್ತು. ಆಗ ಅವರು ಬೇರೆಯೆ ವ್ಯಕ್ತಿಯಾಗಿ ಕಾಣುತ್ತಿದ್ದರು.

13. ಈ ಮೇಲಿನ ಸ್ಥಿತಿ ಉಂಟಾಗುವವರೆಗೂ ಶ್ರೀರಾಮಕೃಷ್ಣರು ಹೇಗೊ ಪೂಜೆಯನ್ನು ಮುಂದುವರಿಸಿದರು. ಇನ್ನು ಮುಂದೆ ಅವರಿಗೆ ಪೂಜೆ ಸಾಧ್ಯವಾಗದ ಕೆಲಸ ಎಂದು ಮಥುರನಿಗೆ ತೋರಿತು. ಬೇರೆ ವ್ಯವಸ್ಥೆ ಮಾಡುವ ಸಂಕಲ್ಪ ಮಾಡಿದನು. ಹೃದಯನು ಹೇಳುತ್ತಾನೆ, "ಮಥುರನು ಈ ರೀತಿ ಯೋಚಿಸುವುದಕ್ಕೆ ಒಂದು ಕಾರಣವೂ ಇತ್ತು. ಒಂದು ದಿನ ಶ್ರೀರಾಮಕೃಷ್ಣರು ಭಾವಾವಿಷ್ಟರಾಗಿ ಪೂಜಾಸನದಿಂದ ಮೇಲೆದ್ದಾಗ ಮಥುರಬಾಬು ಮತ್ತು ನಾನು ಮಂದಿರದಲ್ಲಿದ್ದುದನ್ನು ಅವರು ಕಂಡರು. ನನ್ನ ಕೈಹಿಡಿದು ಪೂಜೆಯ ಆಸನದ ಮೇಲೆ ಕೂರಿಸಿ ಮಥುರನನ್ನು ಉದ್ದೇಶಿಸಿ ಹೇಳಿದರು, 'ಇಂದಿನಿಂದ ಹೃದಯ ಪೂಜೆ ಮಾಡಲಿ. ನಾನು ಮಾಡಿದ ಪೂಜೆಯಂತೆಯೇ ಹೃದಯನು ಮಾಡುವ ಪೂಜೆಯನ್ನೂ ಒಪ್ಪಿಕೊಳ್ಳುವುದಾಗಿ ತಾಯಿ ಹೇಳುತ್ತಾಳೆ'. ಮಥುರನು ಶ್ರೀರಾಮಕೃಷ್ಣರ ಈ ಮಾತನ್ನು ದೇವಾದೇಶವೆಂದು ಸ್ವೀಕರಿಸಿದನು". ಹೃದಯನ ಈ ಮಾತು ಎಷ್ಟು ಸತ್ಯವೋ ನಮಗೆ ತಿಳಿಯದು. ಆದರೆ ಈ ಅವಸ್ಥೆಯಲ್ಲಿ ಶ್ರೀರಾಮಕೃಷ್ಣರಿಗೆ ಪೂಜೆ ಮಾಡಲು ಸಾಧ್ಯವಿಲ್ಲ ಎಂದು ಮಥುರನಿಗೆ ತಿಳಿಯಲು ಕಷ್ಟವಾಗಲಿಲ್ಲ.

14. ಶ್ರೀರಾಮಕೃಷ್ಣರನ್ನು ಮೊದಲ ಬಾರಿ ನೋಡಿದಂದಿನಿಂದಲೂ ಮಥುರನು ಅವರ ಕಡೆ ಆಕರ್ಷಿತನಾಗಿದ್ದನು. ಅಂದಿನಿಂದಲೂ ಅವರನ್ನು ಹೇಗಾದರೂ ಮಾಡಿ ದಕ್ಷಿಣೇಶ್ವರದಲ್ಲಿ ಇರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದನು. ಮುಂದೆ ಅವರ ಸದ್ಗುಣಗಳನ್ನು ಕಂಡು ಮುಗ್ಧನಾಗಿ ಸಾಧ್ಯವಾದ ರೀತಿಯಲ್ಲಿ ಅವರ ಸೇವೆ ಮಾಡಿದನು. ಇತರರಿಂದ ಅವರಿಗೆ ಯಾವ ತೊಂದರೆಯೂ ಆಗದಂತೆ ರಕ್ಷಿಸಿದನು. ಅವರಲ್ಲಿ ವಾಯು ಜಾಸ್ತಿ ಇರುವುದೆಂದು ತಿಳಿದಿದ್ದ ಅವನು ಪ್ರತಿದಿನ ಅವರಿಗೆ ಕಲ್ಲುಸಕ್ಕರೆಯ ಶರಬತ್ತಿನ ವ್ಯವಸ್ಥೆ ಮಾಡಿದನು. ಅವರು ರಾಗಾನುಗಾ ಭಕ್ತಿಯ ಮೂಲಕ ವಿಶೇಷ ರೀತಿಯಲ್ಲಿ ಪೂಜೆ ಮಾಡುವುದಕ್ಕೆ ಅಡ್ಡಿಯುಂಟಾಗದಂತೆ ಅವರಿಗೆ ಎಲ್ಲ ಅನುಕೂಲಗಳನ್ನು ಕಲ್ಪಿಸಿದ್ದನು. ಇದಕ್ಕೆ ಸಂಬಂಧಪಟ್ಟ ಇನ್ನೂ ಕೆಲವು ವೃತ್ತಾಂತಗನಳ್ನು ಬೇರೆ ಕಡೆ ವಿವರಿಸಿರು

ವೆವು.* ಆದರೆ ರಾಣಿ ರಾಸಮಣಿಗೆ ಅವರು ಹೊಡೆದುದರಿಂದ ಅವರಿಗೆ ತಲೆಕೆಟ್ಟಿರಬಹು ದೇನೊ ಎಂಬ ಸಂದೇಹ ಅವನ ಮನಸ್ಸಿನಲ್ಲಿತ್ತು ಎಂದು ತೋರುತ್ತದೆ. ಈ ಘಟನೆ ಯನ್ನು ಅವರ ಆಧ್ಯಾತ್ಮಿಕತೆಯೊಂದಿಗೆ ಹೊಂದಿಸಲು ಅವನಿಗೆ ಸಾಧ್ಯವಾಗಿರಲಿಲ್ಲ. ಆದ್ದ ರಿಂದಲೇ ಕಲಕತ್ತೆಯ ವೈದ್ಯ ಗಂಗಾಪ್ರಸಾದ ಸೇನನ ಮೂಲಕ ಅವರ ಚಿಕಿತ್ಸೆಯ ವ್ಯವಸ್ಥೆ ಮಾಡಿಸಿದ್ದನು.

ಇಷ್ಟರಿಂದಲೇ ಅವನು ಸುಮ್ಮನಾಗಲಿಲ್ಲ, ಯುಕ್ತಿಯ ಮೂಲಕ ಅವರನ್ನು ಸಮಾಧಾನಪಡಿಸಿ ಅವರು ಸರಿಯಾದ ಮಾರ್ಗದಲ್ಲಿ ಆಧ್ಯಾತ್ಮಿಕ ಉನ್ನತಿ ಪಡೆಯು ವಂತೆ ಪ್ರಯತ್ನಿಸಿದನು. ಕೆಂಪು ದಾಸವಾಳದ ಗಿಡದಲ್ಲಿ ಬಿಳಿಯ ದಾಸವಾಳ ಹೂ ಬಿಟ್ಟಿ ದ್ದನ್ನು ಕಂಡು ಅವನು ತನ್ನ ಇಂಥ ಪ್ರಯತ್ನಗಳನ್ನು ಕೈಬಿಟ್ಟ ವಿಷಯವನ್ನು ಬೇರೆ ಕಡೆ ವಿವರಿಸಿರುವೆವು.†

15. ಶ್ರೀರಾಮಕೃಷ್ಣರ ಚಿಕ್ಕಪ್ಪನ ಮಗ ರಾಮತಾರಕ ಭಟ್ಟಾಚಾರ್ಯನು ಈ ಸಂದರ್ಭದಲ್ಲಿ ಉದ್ಯೋಗವನ್ನು ಅರಸುತ್ತ ದಕ್ಷಿಣೇಶ್ವರಕ್ಕೆ ಬಂದಿದ್ದನು. ಮಥುರನು ಶ್ರೀರಾಮಕೃಷ್ಣರನ್ನು ಪೂಜೆಯಿಂದ ನಿವೃತ್ತಿಗೊಳಿಸುವ ಉದ್ದೇಶದಿಂದ ಅವನನ್ನು ದೇವಿಯ ಅರ್ಚಕನನ್ನಾಗಿ ನಿಯಮಿಸಿದನು. ಇದು ನಡೆದದ್ದು ೧೮೫೮ರಲ್ಲಿ.

ರಾಮತಾರಕನನ್ನು ಶ್ರೀರಾಮಕೃಷ್ಣರು ಹಲಧಾರಿ ಎಂದು ಕರೆಯುತ್ತಿದ್ದರು. ಇವನ ಸಂಬಂಧವಾಗಿ ಅನೇಕ ವಿಷಯಗಳನ್ನು ನಾವು ಶ್ರೀರಾಮಕೃಷ್ಣರ ಬಾಯಿಂದ ಕೇಳಿರುವೆವು. ಹಲಧಾರಿಯು ಒಳ್ಳೆಯ ಪಂಡಿತ, ಉತ್ತಮ ಸಾಧಕನೂ ಕೂಡ. ಶ್ರೀಮದ್ಭಾಗವತ, ಅಧ್ಯಾತ್ಮರಾಮಾಯಣ ಮುಂತಾದ ಗ್ರಂಥಗಳನ್ನು ನಿತ್ಯ ಪಠನ ಮಾಡುತ್ತಿದ್ದನು. ವಿಷ್ಣು ಪೂಜೆಯಲ್ಲಿ ಅವನಿಗೆ ಹೆಚ್ಚು ಆಸಕ್ತಿ ಇದ್ದರೂ ಶಕ್ತಿಪೂಜೆ ಯನ್ನು ದ್ವೇಷಿಸುತ್ತಿರಲಿಲ್ಲ. ಆದ್ದರಿಂದಲೇ ಮಥುರನ ಕೇಳಿಕೆಯಂತೆ ಶ್ರೀಕಾಳೀ ಪೂಜೆಗೆ ಸಮ್ಮತಿಸಿದ. ಪೂಜೆಯನ್ನು ಸ್ವೀಕರಿಸುವ ಮೊದಲು ಅವನು ತನ್ನ ಊಟವನ್ನು ತಾನೇ ತಯಾರಿಸಿಕೊಳ್ಳುವುದಕ್ಕೆ ಅವನು ಮಥುರನ ಅನುಮತಿ ಕೇಳಿದ್ದ. ಮಥುರನು ಇದಕ್ಕೆ ಆಕ್ಷೇಪಿಸಿ ಹೇಳಿದ್ದ, "ಅದು ಏಕೆ ? ನಿಮ್ಮ ಅಣ್ಣ ಶ್ರೀರಾಮಕೃಷ್ಣರು ಸೋದ ರಳಿಯ ಹೃದಯ ಇವರೆಲ್ಲ ದೇವಾಲಯದ ಪ್ರಸಾದ ಸ್ವೀಕರಿಸುತ್ತಾರೆ ? ನಿಮಗೇ ನಂತೆ ?" ಅದಕ್ಕೆ ಹಲಧಾರಿಯು ಬುದ್ಧಿವಂತಿಕೆ ಉತ್ತರ ನೀಡಿದ : "ಶ್ರೀರಾಮ ಕೃಷ್ಣರು ಆತ್ಮೋನ್ನತ ಸ್ಥಿತಿಯಲ್ಲಿರುವವರು. ಅವರಿಗೆ ಇದರಿಂದ ಯಾವ ದೋಷವೂ ಉಂಟಾಗುವುದಿಲ್ಲ. ನಾನಿನ್ನೂ ಆ ಅವಸ್ಥೆಯನ್ನು ಮುಟ್ಟಿಲ್ಲ. ನಾನು ವಿಧಿಯನ್ನು ಅನುಸರಿಸದಿದ್ದರೆ ದೋಷವುಂಟಾಗುವುದು." ಈ ಉತ್ತರದಿಂದ ಮಥುರ ಸಂತುಷ್ಟ ನಾಗಿದ್ದನು. ಅಂದಿನಿಂದ ಹಲಧಾರಿಯು ದೇವಾಲಯದಿಂದ ಆಹಾರಪದಾರ್ಥಗಳನ್ನು

---

* ಗುರುಭಾವ-ಪೂರ್ವಾರ್ಧ ಆರನೇ ಅಧ್ಯಾಯ

† ಗುರುಭಾವ-ಪೂರ್ವಾರ್ಧ ಆರನೇ ಅಧ್ಯಾಯ

ತೆಗೆದುಕೊಂಡು ಹೋಗಿ ಪಂಚವಟಿಯಲ್ಲಿ ತಾನೇ ಅಡಿಗೆಮಾಡಿ ಊಟಮಾಡುತ್ತಿದ್ದನು.

ದೇವಿಯ ಮೇಲೆ ಅನಾದರಣೆ ಇಲ್ಲದಿದ್ದರೂ ಆಕೆಗೆ ಪಶುಬಲಿ ನೀಡುವುದು ಹಲಧಾರಿಗೆ ಮೆಚ್ಚಿಕೆಯಾಗಿರಲಿಲ್ಲ. ವಿಶೇಷ ಹಬ್ಬದ ದಿನಗಳಲ್ಲಿ ದೇವಿಗೆ ಪಶುಬಲಿಯ ವ್ಯವಸ್ಥೆ ಇದ್ದುದರಿಂದ ಆ ದಿನಗಳಲ್ಲಿ ಅವನಿಗೆ ಆನಂದದಿಂದ ಪೂಜೆ ಮಾಡಲು ಆಗುತ್ತಿರಲಿಲ್ಲ. ಒಂದು ತಿಂಗಳ ಪೂಜೆಯ ನಂತರ ಅವನು ಒಂದು ದಿನ ಸಂಧ್ಯಾವಂದನೆ ಮಾಡಲು ಕುಳಿತಿದ್ದಾಗ ಅವನಿಗೊಂದು ದರ್ಶನವಾಯಿತು : ದೇವಿಯು ಭಯಂಕರ ರೂಪವನ್ನು ಧರಿಸಿಕೊಂಡು ಬಂದು ಅವನಿಗೆ ಹೇಳಿದಳು: 'ನೀನಿನ್ನು ನನ್ನ ಪೂಜೆ ಮಾಡ ಬೇಕಾಗಿಲ್ಲ. ಮಾಡಿದರೆ ಸೇವಾಪರಾಧದಿಂದ ನಿನ್ನ ಮಗ ಸತ್ತುಹೋಗುತ್ತಾನೆ.' ಇದು ತನ್ನ ಬುದ್ಧಿಭ್ರಮೆ ಇರಬೇಕೆಂದು ಅವನು ಇದನ್ನು ಕಡೆಗಣಿಸಿದನು. ಆದರೆ ಕೆಲವು ದಿನಗಳನಂತರ ತನ್ನ ಪುತ್ರನ ಮೃತ್ಯುವಿನ ಸುದ್ದಿ ತಿಳಿಯಲು ಅವನು ಹೋಗಿ ಎಲ್ಲವನ್ನೂ ಶ್ರೀರಾಮಕೃಷ್ಣರಿಗೆ ತಿಳಿಸಿದನು. ಅಲ್ಲಿಂದ ಮುಂದೆ ಅವನು ದೇವಿಯ ಪೂಜೆ ಮಾಡಲಿಲ್ಲ, ರಾಧಾಗೋವಿಂದನ ಪೂಜೆಯನ್ನು ಮಾಡತೊಡಗಿದನು. ಹೃದಯನು ದೇವಿಯ ಪೂಜೆಗೆ ನಿಯುಕ್ತನಾದನು. ಈ ಘಟನೆಯನ್ನು ನಾವು ಹೃದಯನ ಸಹೋದರ ರಾಜಾರಾಮನ ಮೂಲಕ ಕೇಳಿರುವೆವು.

ಎಂಟನೆಯ ಅಧ್ಯಾಯ

ಸಾಧನೆ ಮುಂದುವರಿದುದು

1. ಸಾಧನಾವಧಿಯ ನಿರ್ಣಯ ಮತ್ತು ವಿಭಾಗ 2. ಶ್ರೀರಾಮಕೃಷ್ಣರ ಸಾಧನ ಕಾಲದ ಮೊದಲ ನಾಲ್ಕು ವರ್ಷಗಳು 3. ಜಗನ್ಮಾತೆಯ ದರ್ಶನದ ನಂತರವೂ ಅವರು ಸಾಧನೆಯನ್ನು ಏಕೆ ಮಾಡಿದರು 4. ವ್ಯಾಸಪುತ್ರ ಶುಕದೇವ 5. ಶ್ರೀರಾಮಕೃಷ್ಣರ ಸಾಧನೆಗೆ ಬೇರೆ ಕಾರಣಗಳು 6. ಯಥಾರ್ಥ ವ್ಯಾಕುಲತೆ ಉಂಟಾದರೆ ಭಗವಂತನು ದೊರೆಯುತ್ತಾನೆ 7. ಶ್ರೀರಾಮಕೃಷ್ಣರ ದಾಸ್ಯಭಾವ ಸಾಧನೆ 8. ಸೀತಾದೇವಿಯ ದರ್ಶನ 9. ಶ್ರೀರಾಮಕೃಷ್ಣರೇ ಪಂಚವಟಿ ನಿರ್ಮಿಸಿದರು 10 ಅವರ ಹಠಯೋಗ ಸಾಧನೆ 11, ಹಲಧಾರಿಯ ಶಾಪ 12. ಶಾಪದ ಸತ್ಫಲ 13. ಶ್ರೀರಾಮಕೃಷ್ಣರ ವಿಷಯದಲ್ಲಿ ಹಲಧಾರಿಯ ಭಾವನೆ 14. ಹಲಧಾರಿಯ ಶಾಸ್ತ್ರಾಭಿಮಾನ 15. ಕಾಳಿಯನ್ನು ತಮೋಗುಣ ದೇವತೆಯೆಂದು ಅವನು ಹೇಳಿದುದು 16. ದರಿದ್ರರ ಎಂಜಲು ತಿಂದುದಕ್ಕಾಗಿ ಶ್ರೀರಾಮಕೃಷ್ಣರನ್ನು ಅವನು ಬೈಯ್ದುದು 17, 'ಭಾವಮುಖದಲ್ಲಿರು' ಎಂಬ ಆದೇಶವನ್ನು ಅವರು ಪಡೆದುದು 18, ಕಾಳೀಮಂದಿರದಲ್ಲಿ ಹಲಧಾರಿ ಎಷ್ಟು ಕಾಲವಿದ್ದ 19. ಶ್ರೀರಾಮಕೃಷ್ಣರ ದಿವ್ಯೋನ್ಮಾದ ಮತ್ತು ಸಹನಶಕ್ತಿ 20. ಅಜ್ಞಾನಿಗಳೇ ಅದನ್ನು ವ್ಯಾಧಿಯೆಂದು ತಿಳಿದಿದ್ದರು 21. ಅವರ ಆಚರಣೆಗಳಿಂದ ಅವರು ಹುಚ್ಚರೆನ್ನುವಂತಿರಲಿಲ್ಲ 22, ವೈಷ್ಣವಚರಣನು ಶ್ರೀರಾಮಕೃಷ್ಣರನ್ನು ಸಂಧಿಸಿದುದು 23. ಸಮದೃಷ್ಟಿಯ ಸಾಧನೆಗಳು 24. ಅವರ ಮನಸ್ಸೇ ಅವರಿಗೆ ಗುರುವಾಯಿತು—ದೃಷ್ಟಾಂತಗಳು 25. ಶ್ರೀರಾಮಕೃಷ್ಣರ ದರ್ಶನಗಳು ಎಂದೂ ಅಸತ್ಯವಾಗಲಿಲ್ಲ 26. ೧೮೮೫ ರಲ್ಲಿ ಸುರೇಶ ಮಿತ್ರನ ಮನೆಯಲ್ಲಿ ದುರ್ಗಾಪೂಜೆ ನಡೆಯುವಾಗ ಶ್ರೀರಾಮಕೃಷ್ಣರಿಗಾದ ದರ್ಶನ 27. ರಾಸಮಣಿ ಮಥುರರು ಶ್ರೀರಾಮಕೃಷ್ಣರನ್ನು ಪರೀಕ್ಷಿಸಿದುದು.

1. ಶ್ರೀರಾಮಕೃಷ್ಣರ ಸಾಧನೆಯ ಕಾಲದ ಬಗ್ಗೆ ವಿಚಾರ ಮಾಡುವಾಗ ಅವರು ಅದನ್ನು ಕುರಿತು ಏನು ಹೇಳಿರುವರು ಎಂಬುದನ್ನು ಗಮನಿಸುವುದು ಆಗತ್ಯ. ಹಾಗೆ ಮಾಡಿದಾಗ ಆ ಕಾಲದ ಘಟನೆಗಳ ಕಾಲನಿರ್ಣಯ ಸುಲಭವಾಗುತ್ತದೆ. ಅವರು ಹನ್ನೆರಡು ವರ್ಷಗಳ ಪರ್ಯಂತ ನಾನಾ ಮತಧರ್ಮಗಳ ಸಾಧನೆಗಳನ್ನು ನಿರಂತರ ಮಾಡಿರುವರು ಎಂಬುದನ್ನು ನಾವು ಮೊದಲೇ ಹೇಳಿರುವೆವು. ದಕ್ಷಿಣೇಶ್ವರ ಕಾಳೀ ಮಂದಿರವು ಕ್ರಿ. ಶ. ೧೮೫೫, ಮೇ ೩೧, ಗುರುವಾರದಂದು ಪ್ರತಿಷ್ಠಾಪಿಸಲ್ಪಟ್ಟಿತು,

ಇದಾದ ಕೆಲವು ತಿಂಗಳನಂತರ ಶ್ರೀರಾಮಕೃಷ್ಣರು ಅರ್ಚಕ ಕೆಲಸವನ್ನು ಸ್ವೀಕರಿಸಿದರು. ಆದ್ದರಿಂದ ೧೮೫೬ ರಿಂದ ೧೮೬೭ರ ವರೆಗೆ ಅವರ ಸಾಧನೆಯ ಸಮಯವೆಂದು ನಿಶ್ಚಯವಾಗಿ ಹೇಳಬಹುದು. ಇದೇ ಸಂದರ್ಭದಲ್ಲಿಯೇ ಅವರು ಕೆಲವು ತೀರ್ಥಸ್ಥಳಗಳಿಗೆ ಭೇಟಿಯಿತ್ತಿದ್ದರು. ಅಲ್ಲಿಯೂ ಅವರು ತಮ್ಮ ಸಾಧನೆಯನ್ನು ಮುಂದುವರಿಸಿದ್ದರು.

ಅವರ ಸಾಧನೆಯ ಕಾಲವನ್ನು ನಾಲ್ಕು ವರ್ಷಗಳ ಮೂಲವಶಾನದ ಮೂರು ಘಟಕಗಳನ್ನಾಗಿ ನೋಡಬಹುದು : ಅದರಲ್ಲಿ ಮೊದಲನೆಯ ಭಾಗ ೧೮೫೬ ರಿಂದ ೧೮೫೯—ಈ ನಾಲ್ಕು ವರ್ಷಗಳು. ಇದರ ಮುಖ್ಯ ಘಟನೆಗಳನ್ನು ನಾವಾಗಲೇ ನೋಡಿರುವೆವು. ಎರಡನೆಯದು ೧೮೬೦ ರಿಂದ ೧೮೬೩—ಈ ನಾಲ್ಕು ವರ್ಷಗಳಲ್ಲಿ ಭೈರವೀ ಬ್ರಾಹ್ಮಣಿಯ ನಿರ್ದೇಶದಂತೆ ಅರವತ್ತನಾಲ್ಕು ತಂತ್ರಗಳಲ್ಲಿ ಹೇಳಿರುವ ಸಾಧನೆಗಳನ್ನು ಮಾಡಿದರು. ಮೂರನೆಯ ಭಾಗ ೧೮೬೪ ರಿಂದ ೧೮೬೭ರ ವರೆಗೆ. ಈ ವೇಳೆಯಲ್ಲಿ ಅವರು ಜಟಾಧಾರಿಯಿಂದ ರಾಮ ಮಂತ್ರವನ್ನೂ ರಾಮಲಾಲನ ವಿಗ್ರಹವನ್ನೂ ಪಡೆದರು, ಮಧುರ ಭಾವದ ಸಾಧನೆ ಮಾಡುತ್ತ ಆರು ತಿಂಗಳು ಸ್ತ್ರೀ ವೇಶಧಾರಿಗಳಾಗಿದ್ದರು, ತೋತಾಪುರಿಯ ಸಹಾಯದಿಂದ ಅದ್ವೈತ ಸಾಧನೆ ಮಾಡಿದರು ಮತ್ತು ಕೊನೆಯಲ್ಲಿ ಗೋವಿಂದನ ಮೂಲಕ ಇಸ್ಲಾಂ ಧರ್ಮೋಪದೇಶವನ್ನು ಪಡೆದರು. ಈ ಹನ್ನೆರಡು ವರ್ಷಗಳ ಕಾಲಮಾನದಲ್ಲಿಯೇ ಅವರು ವೈಷ್ಣವ ಶಾಸ್ತ್ರದಲ್ಲಿ ಹೇಳಿರುವ ಸಖ್ಯಭಾವದ ಸಾಧನೆಯನ್ನೂ ಮಾಡಿದರು, ಕರ್ತಾಭಾಜ, ನವರಸಿಕ ಮುಂತಾದ ವೈಷ್ಣವ ಉಪಮತಗಳ ಸಾಧನೆಯ ಪರಿಚಯವನ್ನೂ ಪಡೆದು. ವೈಷ್ಣವ ಧರ್ಮದ ಎಲ್ಲ ಸಂಪ್ರದಾಯದ ಪರಿಚಯವೂ ಅವರಿಗೆ ಸಾಕಷ್ಟು ಇತ್ತು. ವೈಷ್ಣವಚರಣರೇ ಮುಂತಾದ ಎಲ್ಲ ಮತಗಳ ಸಾಧಕರು ಅವರೆಡೆಗೆ ಮಾರ್ಗದರ್ಶನಕ್ಕಾಗಿ ಬರುತ್ತಿದ್ದುದರಿಂದ ಈ ವಿಷಯ ಸ್ಪಷ್ಟವಾಗುತ್ತದೆ. ಈ ರೀತಿ ಮೂರು ಬಗೆಯಾಗಿ ವಿಂಗಡಿಸಿ ಅವರ ಸಾಧನೆಯ ಕಾಲವನ್ನು ಅಧ್ಯಯನ ಮಾಡುವುದರಿಂದ ಮೊದಲನೆಯ ಭಾಗದ ಸಾಧನೆಗಳಿಗೂ ಮತ್ತು ಉಳಿದೆರಡು ಭಾಗಗಳ ಸಾಧನೆಗಳಿಗೂ ಸ್ಪಷ್ಟವಾದ ವ್ಯತ್ಯಾಸವಿರುವುದು ನಮ್ಮ ಗಮನಕ್ಕೆ ಬರುತ್ತದೆ.

2. ಸಾಧನ ಕಾಲದ ಮೊದಲನೆಯ ಭಾಗದಲ್ಲಿ ಶ್ರೀರಾಮಕೃಷ್ಣರು ಬಾಹ್ಯ ಸಹಾಯವನ್ನು ಪಡೆದದ್ದೆಂದರೆ ಕೇನಾರಾಮನಿಂದ ದೀಕ್ಷೆ ಪಡೆದಿದ್ದಷ್ಟೆ. ಆಂತರಿಕ ವ್ಯಾಕುಲತೆಯೊಂದೇ ಅವರಿಗೆ ಆ ಕಾಲದಲ್ಲಿ ಏಕಮಾತ್ರ ಆಶ್ರಯವಾಗಿತ್ತು. ಅದರ ಪ್ರಾಬಲ್ಯದಿಂದಲೇ ಅವರ ಶರೀರ ಮನಸ್ಸುಗಳಲ್ಲಿ ವಿಶೇಷ ಪರಿವರ್ತನೆಯುಂಟಾಗಿತ್ತು. ಅದೇ ಅವರನ್ನು ವೈಧೀಭಕ್ತಿಯ ನಿಯಮಗಳಿಂದ ಆಚೆ ಕರೆದುಕೊಂಡು ಹೋಗಿ ರಾಗಾನುಗಾ ಭಕ್ತಿಮಾರ್ಗದಲ್ಲಿ ಅವರು ಮುಂದೆ ಸಾಗುವಂತೆ ಮಾಡಿತು. ಶ್ರೀಜಗನ್ಮಾತೆಯ ದರ್ಶನವೆಂಬ ಅಪೂರ್ವ ಐಶ್ವರ್ಯವನ್ನೂ ಯೌಗಿಕ ಶಕ್ತಿಗಳನ್ನೂ ಅವರಿಗೆ ನೀಡಿತು.

3. ಈಗ ಒಂದು ಪ್ರಶ್ನೆ ಏಳುವುದು : ಇನ್ನೇನು ಬಾಕಿ ಉಳಿದಿದೆ ? ಆಗಲೇ ಶ್ರೀರಾಮಕೃಷ್ಣರು ಭಗವತ್ಸಾಕ್ಷಾತ್ಕಾರವನ್ನು ಪಡೆದು ಯೋಗಸಿದ್ಧಿಯನ್ನೂ ಪಡೆದು ಕೃತಾರ್ಥರಾಗಿರುವರು ; ಇನ್ನು ಸಾಧನೆಯ ಆವಶ್ಯಕತೆಯೇನು ? ಇದಕ್ಕೆ ಉತ್ತರವಾಗಿ ಹೀಗೆ ಹೇಳಬಹುದು : ಒಂದು ದೃಷ್ಟಿಯಿಂದ ಅದು ನಿಜ. ಮುಂದೆಯೂ ಅವರು ಸಾಧನೆಯನ್ನು ಮುಂದುವರಿಸುವುದಕ್ಕೆ ಬೇರೆ ಕಾರಣಗಳಿದ್ದುವು. ಶ್ರೀರಾಮಕೃಷ್ಣರು ಹೇಳುತ್ತಿದ್ದರು : "ಮರ ಬಳ್ಳಿಗಳಲ್ಲಿ ಸಾಮಾನ್ಯ ನಿಯಮವೇನೆಂದರೆ ಮೊದಲು ಹೂವು ಅನಂತರ ಫಲ. ಆದರೆ ಕೆಲವು ಮರ ಬಳ್ಳಿಗಳು ಇದಕ್ಕೆ ಅಪವಾದ—ಅವುಗಳಲ್ಲಿ ಮೊದಲು ಫಲ, ಅನಂತರ ಹೂವು." ಸಾಧನ ಕ್ಷೇತ್ರದಲ್ಲಿ ಶ್ರೀರಾಮಕೃಷ್ಣರ ಮನೋ ವಿಕಾಸವೂ ಇದೇ ರೀತಿ ಆಗಿತ್ತು. ಸಾಧನ ಕಾಲದ ಪ್ರಥಮ ಭಾಗದಲ್ಲಿ ಅವರಿಗೆ ಭಗವತ್ಸಾಕ್ಷಾರವಾಗಿತ್ತು. ಜಗನ್ಮಾತೆಯ ಅದ್ಭುತ ದರ್ಶನಗಳಾಗಿದ್ದುವು. ಆದರೆ ಅವುಗಳನ್ನು ಶಾಸ್ತ್ರೋಕ್ತವಾದ ಸಾಧನೆ–ಸಿದ್ಧಿಗಳ ಜತೆ ತುಲನೆಮಾಡಿ ಪರೀಕ್ಷಿಸದ ಹೊರತು ಅವುಗಳ ಪೂರ್ಣ ಸತ್ಯತೆಯಲ್ಲಿ ವಿಶ್ವಾಸ ಅವರಿಗೆ ಉಂಟಾಗುವಂತಿರಲಿಲ್ಲ. ಕೇವಲ ಆಂತರಿಕ ವ್ಯಾಕುಲತೆಯ ಸಹಾಯದಿಂದ ಅವರು ಯಾವ ಸಿದ್ಧಿಯನ್ನು ಪಡೆದಿದ್ದರೊ ಅದನ್ನೇ ಶಾಸ್ತ್ರದಲ್ಲಿ ಹೇಳಿರುವ ಸಾಧನೆಗಳ ಮೂಲಕ ಪ್ರತ್ಯಕ್ಷವಾಗಿ ಮಾಡಿಕೊಳ್ಳುವ ಆವಶ್ಯಕತೆಯಿತ್ತು. ಗುರು ಹೇಳಿದ ಅನುಭವಗಳೊಡನೆ ಮತ್ತು ಶಾಸ್ತ್ರದಲ್ಲಿ ಹೇಳಿರುವ ಪೂರ್ವಕಾಲದ ಸಾಧಕರ ಅನುಭವಗಳೊಡನೆ ಸಾಧಕನು ತನ್ನ ಅಲೌಕಿಕ ಅನುಭವಗಳನ್ನು ತುಲನೆಮಾಡಿ ನೋಡಬೇಕು. ಅವು ಸಮಾನವಾಗಿವೆಯೆಂದು ಅವನಿಗೆ ನಿಶ್ಚಯವಾಗುವವರೆಗೂ ಅವನು ನಿಶ್ಚಿಂತನಾಗಲು ಸಾಧ್ಯವಿಲ್ಲ ಎಂದು ಶಾಸ್ತ್ರವೇ ಹೇಳುತ್ತದೆ. ಈ ಮೂರಕ್ಕೂ ಸಮಾನವಾದ ಹೊಂದಾಣಿಕೆಯಿದೆಯೆಂದು ಅವನ ಮನಸ್ಸಿಗೆ ಸಿದ್ಧವಾದ ಮೇಲೆಯೇ ಅವನು ನಿಃಸಂಶಯನಾಗಿ ಶಾಂತಿಯನ್ನು ಪಡೆಯುತ್ತಾನೆ.

4. ಈ ಮೇಲಿನ ವಿಷಯಕ್ಕೆ ದೃಷ್ಟಾಂತವಾಗಿ ವ್ಯಾಸ ಪುತ್ರ ಶುಕದೇವನ ಉದಾಹರಣೆಯನ್ನು ನೀಡಬಹುದು. ಮಾಯಾರಹಿತನಾದ ಶುಕನಿಗೆ ಜೀವನದುದ್ದಕ್ಕೂ ಅನೇಕ ವಿಧದ ದಿವ್ಯಾನುಭವಗಳು ಆಗುತ್ತಿದ್ದುವು. ಆದರೆ ತಾನು ಪೂರ್ಣ ಜ್ಞಾನ ವನ್ನು ಪಡೆದು ಕೃತಾರ್ಥನಾದುದರಿಂದಲೇ ಈ ಎಲ್ಲ ಅನುಭವಗಳಾಗುತ್ತಿವೆ ಎಂದು ಅವನಿಗೆ ನಿಶ್ಚಯವಾಗಿರಲಿಲ್ಲ. ತನ್ನ ತಂದೆಯಾದ ವ್ಯಾಸನ ಹತ್ತಿರ ಶಾಸ್ತ್ರಾಧ್ಯಯನ ವನ್ನು ಮಾಡಿ, ಅನಂತರ ಒಂದು ದಿನ ತಂದೆಯನ್ನು ಕೇಳಿದನು : "ಶಾಸ್ತ್ರಗಳು ಯಾವ ಯಾವ ಅವಸ್ಥೆಗಳನ್ನು ವಿವರಿಸುತ್ತವೆಯೊ ಅವೆಲ್ಲವನ್ನೂ ನಾನು ಅನುಭವಿಸಿದ್ದೇನೆ. ಆದರೂ ಆಧ್ಯಾತ್ಮಿಕ ರಾಜ್ಯದ ಚರಮ ಸತ್ಯವನ್ನು ನಾನು ಪಡೆದಿದ್ದೇನೆ ಎಂದು ನನಗನಿ ಸುವುದಿಲ್ಲ. ಆದ್ದರಿಂದ ಈ ವಿಷಯದಲ್ಲಿ ನಿನಗೆ ತಿಳಿದಿರುವುದನ್ನು ನನಗೆ ಹೇಳು." ವ್ಯಾಸನು ಭಾವಿಸಿದನು : "ನಾನು ಶುಕನಿಗೆ ಆಧ್ಯಾತ್ಮಿಕ ಸಂಬಂಧವಾಗಿ ಎಷ್ಟೊ ವಿಷಯ ಗಳನ್ನು ಹೇಳಿರುವೆನು, ಆದರೂ ಅವನ ಸಂದೇಹ ದೂರವಾಗಲಿಲ್ಲ. ಅವನು ಭಾವಿಸಿರ

ಬೇಕು, ಪೂರ್ಣ ಜ್ಞಾನವನ್ನು ಪಡೆದರೆ ಸಂಸಾರತ್ಯಾಗ ಮಾಡುತ್ತಾನೆಂದು ಪ್ರೇಮವಶನಾಗಿಯೊ ಅಥವಾ ಇನ್ನೇನೊ ಕಾರಣದಿಂದಲೊ ನಾನು ಅವನಿಗೆ ಎಲ್ಲವನ್ನೂ ತಿಳಿಸಿಲ್ಲ ಎಂದು. ಇನ್ನಾರಾದರೂ ಜ್ಞಾನಿಯ ಮೂಲಕ ಅವನು ಇದನ್ನು ಕೇಳುವುದು ಯುಕ್ತವಾದುದು.' ಹೀಗೆಂದುಕೊಂಡು ಅವನಿಗೆ ಹೇಳಿದನು : "ನಾನು ನಿನ್ನ ಸಂದೇಹವನ್ನು ನಿವಾರಿಸಲಾರೆ. ಮಿಥಿಲೆಯ ರಾಜ ಜನಕನು ಮಹಾಜ್ಞಾನಿ ಎಂದು ಪ್ರಸಿದ್ಧನಾಗಿರುವುದು ನಿನಗೆ ತಿಳಿದಿದೆ. ಅವನ ಹತ್ತಿರ ಹೋಗಿ ನಿನ್ನ ಎಲ್ಲ ಪ್ರಶ್ನೆಗಳನ್ನು ಕೇಳು." ಶುಕನು ಜನಕನೆಡೆಗೆ ಹೋದನು. ಅವನ ಉಪದೇಶಗಳ ಸಹಾಯದಿಂದ ಗುರು ಹೇಳಿರುವ ಹಾಗೂ ಶಾಸ್ತ್ರದಲ್ಲಿ ಬರೆದಿರುವ ಮತ್ತು ತಾನು ಪಡೆದಿರುವ ಅನುಭವಗಳಲ್ಲಿ ಸಾಮ್ಯತೆಯನ್ನು ಕಂಡು ಅವನು ಮನಃಶಾಂತಿಯನ್ನು ಪಡೆದನು.

5. ಇದಲ್ಲದೆ ಶ್ರೀರಾಮಕೃಷ್ಣರು ತಮ್ಮ ಸಾಧನೆಯನ್ನು ಮುಂದುವರಿಸುವುದಕ್ಕೆ ಇನ್ನೂ ಕೆಲವು ಮುಖ್ಯ ಕಾರಣಗಳಿವೆ. ಅವುಗಳ ಸಂಕ್ಷಿಪ್ತ ವಿವರಣೆಯನ್ನು ಇಲ್ಲಿ ನೀಡುತ್ತೇವೆ. ತಾವು ಶಾಂತಿಯನ್ನು ಪಡೆದು ಕೃತಾರ್ಥರಾದರೆ ಸಾಕೆಂಬುದಷ್ಟೇ ಅವರ ಸಾಧನೆಯ ಉದ್ದೇಶವಾಗಿರಲಿಲ್ಲ. ಶ್ರೀ ಜಗನ್ಮಾತೆಯು ಜಗತ್ತಿನ ಕಲ್ಯಾಣಕ್ಕಾಗಿ ಅವರು ಶರೀರಧಾರಣೆ ಮಾಡುವಂತೆ ಮಾಡಿದ್ದಳು. ಪರಸ್ಪರ ಕಚ್ಚಾಡಿಕೊಳ್ಳುವ ವಿವಿಧ ಧರ್ಮಗಳ ಸಾಧನೆ ಮಾಡಿ ಅವುಗಳ ಸತ್ಯಾಸತ್ಯತೆಯನ್ನು ನಿರ್ಧರಿಸುವ ಸಾಹಸ ಅವರು ಮಾಡಿದರು. ಸಮಗ್ರ ಆಧ್ಯಾತ್ಮಿಕ ಜಗತ್ತಿನ ಆಚಾರ್ಯ ಪದವಿಯನ್ನೇರಲು ಅವರು ಎಲ್ಲ ಧರ್ಮಗಳ ಸಾಧನೆ ಮಾಡಿ ಅವುಗಳ ಅಂತಿಮ ಗುರಿ ಒಂದೇ ಎಂಬುದನ್ನು ಕಂಡುಕೊಳ್ಳಬೇಕಾಗಿತ್ತು. ಇಷ್ಟೇ ಅಲ್ಲದೆ, ಯಾವ ವಿದ್ಯಾಭ್ಯಾಸದ ಸಹಾಯವಿಲ್ಲದೆ ಕೇವಲ ಸಾಧನೆಯ ಬಲದಿಂದಲೇ ಶಾಸ್ತ್ರದಲ್ಲಿ ಹೇಳಿರುವ ಎಲ್ಲ ಅವಸ್ಥೆಗಳೂ ಅವರಲ್ಲಿ ಕಾಣಿಸಿಕೊಂಡುವು. ಇದರಿಂದ ವೇದ, ಬೈಬಲ್. ಕೊರಾನ್, ಪುರಾಣ ಮುಂತಾದ ಧರ್ಮಶಾಸ್ತ್ರಗಳ ಸತ್ಯತೆಯನ್ನು ಆಧುನಿಕ ಯುಗದಲ್ಲಿ ಪುನಃ ಪ್ರತಿಷ್ಠಾಪಿಸಿದಂತಾಯಿತು. ಈ ಉದ್ದೇಶದಿಂದಲೇ ತಾವೇ ಶಾಂತಿಯನ್ನು ಪಡೆದಮೇಲೂ ಅವರ ಸಾಧನೆ ಮುಂದುವರಿಯಿತು. ಬೇರೆ ಬೇರೆ ಧರ್ಮದ ಸಿದ್ಧಪುರುಷರು ಪಂಡಿತರು ಆಯಾಯ ಸಮಯಕ್ಕೆ ದಕ್ಷಿಣೇಶ್ವರಕ್ಕೆ ಬಂದು ಆಯಾಯ ಧರ್ಮದ ಸಾಧನೆಯಲ್ಲಿ ಅವರಿಗೆ ಸಹಾಯ ಮಾಡಿದ್ದರು. ಶ್ರೀಜಗನ್ಮಾತೆಯೆ ಈ ಎಲ್ಲ ವ್ಯವಸ್ಥೆಯನ್ನು ಮಾಡಿದ್ದಳು ಮತ್ತು ಇತರರಿಂದ ಒಮ್ಮೆ ಕೇಳಿದ್ದನ್ನು ನೆನಪಿಟ್ಟುಕೊಳ್ಳುವ ಅದ್ಭುತ ಸ್ಮೃತಿ ಶಕ್ತಿಯನ್ನು ಕೊಟ್ಟಿದ್ದಳು— ಎಂಬುದು ಅವರ ಜೀವನವನ್ನು ಅಧ್ಯಯನ ಮಾಡಿದಾಗ ನಮಗೆ ತಿಳಿದುಬರುತ್ತದೆ.

6. ಮೊದಲ ನಾಲ್ಕು ವರ್ಷಗಳ ಸಾಧನೆಯಲ್ಲಿ ಆಂತರಿಕ ವ್ಯಾಕುಲತೆಯೇ ಶ್ರೀ ರಾಮಕೃಷ್ಣರಿಗೆ ಪ್ರಧಾನ ಆಲಂಬನೆಯಾಗಿತ್ತು ಎಂದು ಮೊದಲೇ ಹೇಳಿದೆವು. ಆಗ ಶಾಸ್ತ್ರಾನುಸಾರವಾಗಿ ಅವರಿಗೆ ಮಾರ್ಗದರ್ಶನ ನೀಡುವುದಕ್ಕೆ ಯಾರೂ ಇರಲಿಲ್ಲ. ಇದರಿಂದ ಯಾವ ಬಾಹ್ಯ ಆಲಂಬನೆ ಇಲ್ಲದಿದ್ದರೂ ಕೇವಲ ಆಂತರಿಕ ವ್ಯಾಕುಲತೆಯ ಬಲದಿಂದಲೆ ಈಶ್ವರಸಾಕ್ಷಾತ್ಕಾರವನ್ನು ಪಡೆಯಬಹುದು ಎಂಬುದನ್ನು ಅವರು

ಪ್ರಮಾಣೀಕರಿಸಿದರು. ಆದರೆ ಆ ರೀತಿ ಸಿದ್ಧಿಯನ್ನು ಪಡೆಯಲು ಆ ವ್ಯಾಕುಲತೆ ಅದೆಷ್ಟು ತೀವ್ರವಾಗಿರಬೇಕೆಂಬುದನ್ನು ನಾವು ಮರೆಯುತ್ತೇವೆ. ಶ್ರೀರಾಮಕೃಷ್ಣರ ಆ ಸಮಯದ ಜೀವನವನ್ನು ಪರಿಶೀಲಿಸಿದಾಗ ಆ ತೀವ್ರತೆ ಎಷ್ಟಿರಬೇಕೆಂಬುದು ನಮಗೆ ಅರ್ಥವಾಗುವುದು. ಅವರಲ್ಲಿ ಆ ವ್ಯಾಕುಲತೆ ಎಷ್ಟೊಂದು ತೀವ್ರವಾಗಿತ್ತೆಂದರೆ ಅದರ ಪ್ರಭಾವದಿಂದ ಆಹಾರ, ನಿದ್ರೆ, ಲಜ್ಜೆ, ಭಯ, ಮುಂತಾದ ಶಾರೀರಿಕ ಮತ್ತು ಮಾನಸಿಕ ದೃಢಮೂಲವಾದ ಸಂಸ್ಕಾರಗಳು ಮತ್ತು ಅಭ್ಯಾಸಗಳು ಎಲ್ಲೊ ಲುಪ್ತವಾಗಿ ಹೋದುವು. ಶರೀರದ ಆರೋಗ್ಯ ರಕ್ಷಣೆಯ ವಿಚಾರವಂತೂ ದೂರದ ಮಾತು, ಜೀವನ ರಕ್ಷಣೆಯ ಕಡೆಗೂ ಅವರ ಲಕ್ಷ್ಯವಿರಲಿಲ್ಲ! ಶ್ರೀರಾಮಕೃಷ್ಣರು ಹೇಳುತ್ತಿದ್ದರು: ''ದೇಹಿಕ ಶುಚಿಯ ಕಡೆ ಸ್ವಲ್ಪವೂ ಗಮನವೇ ಇಲ್ಲದಿದ್ದುದರಿಂದ ಆ ಸಮಯದಲ್ಲಿ ತಲೆಯ ಕೂದಲು ಉದ್ದನಾಗಿ ಬೆಳೆದು ಧೂಳು ಕೊಳೆ ಎಲ್ಲ ಸೇರಿಕೊಂಡು ಅದೇ ಜಟೆಯಾಗಿಬಿಟ್ಟಿತ್ತು. ಧ್ಯಾನದ ಸಮಯದಲ್ಲಿ ಶರೀರವು ಕಲ್ಲಿನಂತೆ ಸ್ಥಿರವಾಗಿರುತ್ತಿತ್ತು. ಪಕ್ಷಿಗಳು ಬಂದು ನಿಃಸಂಕೋಚವಾಗಿ ತಲೆಯಮೇಲೆ ಕುಳಿತು ಜಟೆಯನ್ನು ಕುಕ್ಕುತ್ತ ಹುಳಗಳನ್ನು ಅರಸುತ್ತಿದ್ದುವು, ಮತ್ತೆ ಕೆಲವೊಮ್ಮೆ ಭಗವದ್ವಿರಹವನ್ನು ತಾಳಲಾರದೆ ನೆಲದಮೇಲೆ ಬಿದ್ದು ಮುಖವನ್ನು ಉಜ್ಜುತ್ತಿದ್ದೆನು. ಆಗ ಘಾಯವಾಗಿ ರಕ್ತ ಹೊರ ಬರುತ್ತಿತ್ತು. ಹೀಗೆ ಧ್ಯಾನ ಭಜನೆ ಪ್ರಾರ್ಥನೆಗಳಲ್ಲಿ ದಿನ ಹೇಗೆ ಕಳೆದುಹೋಗುತ್ತಿತ್ತೊ ಅದರ ಪ್ರಜ್ಞೆಯೇ ನನಗಿರುತ್ತಿರಲಿಲ್ಲ. ಸಂಜೆಯಾಗುತ್ತಲೇ ಸುತ್ತಲೂ ಶಂಖ ಗಂಟೆಗಳ ಧ್ವನಿ ಕೇಳಿಸುತ್ತಿರುವಾಗ ನನಗನಿಸುತ್ತಿತ್ತು–ಹಗಲು ಕಳೆಯಿತು, ಮತ್ತೆ ಒಂದು ದಿನ ವ್ಯರ್ಥವಾಗಿ ಕಳೆದುಹೋಯಿತು, ಇನ್ನೂ ತಾಯಿಯ ದರ್ಶನವಾಗಲಿಲ್ಲ—ಎಂದು. ಆಗ ಎಂಥ ವ್ಯಾಕುಲತೆ ಉಂಟಾಗುತ್ತಿತ್ತೆಂದರೆ ನನಗೆ ಸುಮ್ಮನಿರಲಾಗದೆ ನೆಲದ ಮೇಲೆ ಬಿದ್ದು ಹೊರಳಾಡುತ್ತ 'ತಾಯಿ, ಇನ್ನೂ ನೀನು ದರ್ಶನ ನೀಡಲಿಲ್ಲವಲ್ಲ' ಎಂದು ಗಟ್ಟಿಯಾಗಿ ರೋದಿಸುತ್ತ ಸಂಕಟ ತಡೆಯಲಾಗದೆ ಚಡಪಡಿಸುತ್ತಿದ್ದೆ. ನೋಡಿದ ಜನ ಹೇಳುತ್ತಿದ್ದರು, 'ಹೊಟ್ಟೆ ನೋವಿರಬೇಕು, ಅದಕ್ಕೆ ಇಷ್ಟೊಂದು ಅಳುತ್ತಿದ್ದಾನೆ' ಎಂದು.'' ಸಾಧನೆಗೆ ತೀವ್ರ ವ್ಯಾಕುಲತೆಯ ಆವಶ್ಯಕತೆಯನ್ನು ವಿವರಿಸುತ್ತ ಮೇಲಿನ ವೃತ್ತಾಂತವನ್ನು ಹೇಳಿ ಕೊನೆಗೆ ಹೇಳುತ್ತಿದ್ದರು : ''ಜನರು ಪತ್ನಿಪುತ್ರರು ತೀರಿ ಹೋದಾಗ, ಸಂಪತ್ತು ಕಳುವಾದಾಗ ಕೊಡಗಟ್ಟಲೆ ಕಣ್ಣೀರು ಸುರಿಸುತ್ತಾರೆ. ಆದರೆ ಭಗವತ್ಸಾಕ್ಷಾತ್ಕಾರವಾಗಲಿಲ್ಲವಲ್ಲ ಎಂದು ಎಷ್ಟು ಜನ ಆ ರೀತಿ ಮಾಡುತ್ತಾರೆ ಹೇಳು!? ಮತ್ತೆ ಹೇಳುತ್ತಾರೆ, 'ಅವನಿಗಾಗಿ ಎಷ್ಟೊಂದು ಕರೆದೆ, ಆದರೂ ಅವನು ದರ್ಶನ ನೀಡಲಿಲ್ಲ, ಎಂದು. ಈಶ್ವರನಿಗಾಗಿ ಆ ರೀತಿಯ ವ್ಯಾಕುಲತೆಯಿಂದ ಒಮ್ಮೆ ಕೂಗಿ ಕರೆಯಲಿ, ಅವನು ದರ್ಶನ ನೀಡುತ್ತಾನೊ ಇಲ್ಲವೊ ನೋಡೋಣ!'' ಈ ಮಾತನ್ನು ಕೇಳಿದಾಗ ನಮ್ಮನ್ನು ಬಡಿದೆಬ್ಬಿಸಿದಂತಾಗುತ್ತಿತ್ತು. ಕೇಳಿದರೇ ಗೊತ್ತಾಗುತ್ತಿತ್ತು ತಮ್ಮ ಜೀವನದಲ್ಲಿ ಅನುಭವಿಸಿ ಅವರು ಈ ರೀತಿ ನುಡಿಯುತ್ತಿರುವರು ಎಂದು.

7. ಸಾಧನೆಯ ಪ್ರಥಮ ನಾಲ್ಕು ವರ್ಷಗಳಲ್ಲಿ ಶ್ರೀರಾಮಕೃಷ್ಣರು ಶ್ರೀ

ಜಗನ್ಮಾತೆಯ ದರ್ಶನವನ್ನು ಪಡೆಯುವಷ್ಟರಲ್ಲೇ ತೃಪ್ತರಾಗಿರಲಿಲ್ಲ. ಇದಾದ ನಂತರ ಅವರ ಕುಲದೇವತೆ ಶ್ರೀರಘುವೀರನ ಕಡೆಗೆ ಅವರ ದೃಷ್ಟಿ ಹರಿಯಿತು. ಹನುಮಂತನಿಗಿದ್ದ ಅನನ್ಯಭಕ್ತಿಯಿಂದಲೇ ಶ್ರೀರಾಮಚಂದ್ರನ ದರ್ಶನವಾಗುವುದು ಸಾಧ್ಯ ಎಂದು ಭಾವಿಸಿ ದಾಸ್ಯಭಾವದಲ್ಲಿ ಸಾಧನೆ ಮಾಡತೊಡಗಿದರು. ತಮ್ಮನ್ನು ಹನುಮಂತನೆಂದು ಕಲ್ಪಿಸಿಕೊಂಡು ಆ ಭಾವದಲ್ಲಿ ಎಷ್ಟೊಂದು ತನ್ಮಯರಾಗಿದ್ದರೆಂದರೆ ತಮ್ಮ ಪ್ರತ್ಯೇಕ ಅಸ್ತಿತ್ವವನ್ನೇ ಮರೆತುಬಿಟ್ಟಿದ್ದರು. ಅವರೇ ಹೇಳುತ್ತಿದ್ದರು : ''ಆ ಸಮಯದಲ್ಲಿ ನನ್ನ ಆಹಾರವಿಹಾರಗಳೆಲ್ಲ ಹನುಮಂತನಂತೆಯೇ ಇರುತ್ತಿದ್ದುವು, ನಾನು ಉದ್ದೇಶ ಪೂರ್ವಕವಾಗಿ ಹಾಗೆ ಮಾಡುತ್ತಿರಲಿಲ್ಲ, ತಾನೇತಾನಾಗಿ ನನ್ನ ರೀತಿನೀತಿಗಳು ಬದಲಾಗಿದ್ದುವು. ನಾನು ಬಟ್ಟೆಯನ್ನು ಒಂದು ಬಾಲ ಇಳಿಬೀಳುವಂತೆ ಸೊಂಟಕ್ಕೆ ಕಟ್ಟಿಕೊಳ್ಳುತ್ತಿದ್ದೆ, ನೆಗೆಯುತ್ತ ನಡೆಯುತ್ತಿದ್ದೆ, ಫಲಮೂಲಾದಿಗಳನ್ನಲ್ಲದೆ ಬೇರೇನನ್ನೂ ತಿನ್ನುತ್ತಿರಲಿಲ್ಲ. ಅವನ್ನೂ ಸಿಪ್ಪೇ ತೆಗೆಯದೇ ತಿಂದುಬಿಡುತ್ತಿದ್ದೆ. ಮರದ ಮೇಲೆಯೇ ಹೆಚ್ಚು ಸಮಯ ಕಳೆಯುತ್ತಿದ್ದೆ ಮತ್ತು ಯಾವಾಗಲೂ 'ರಘುವೀರ, ರಘುವೀರ' ಎಂದು ಉಚ್ಚರಿಸುತ್ತಿದ್ದೆ. ಕಣ್ಣುಗಳೆರಡೂ ಆ ಸಮಯದಲ್ಲಿ ತುಂಬ ಚಂಚಲವಾಗಿದ್ದುವು. ಇನ್ನೊಂದು ಆಶ್ಚರ್ಯದ ವಿಷಯವೆಂದರೆ ಬೆನ್ನೆಲುಬಿನ ತಳಭಾಗದಲ್ಲಿ ಮೂಳೆಯು ಒಂದು ಇಂಚು ಮುಂದೆ ಬಂದಿತ್ತು. (Enlargement of the Coccyx).'' ಶ್ರೀರಾಮಕೃಷ್ಣರ ಬಾಯಿಂದಲೇ ಈ ಮೇಲಿನ ವಿಷಯವನ್ನು ಕೇಳಿದಾಗ ನಾವು ಅವರನ್ನು ಪ್ರಶ್ನಿಸಿದ್ದೆವು: ''ನಿಮ್ಮ ಶರೀರದ ಆ ಭಾಗ ಈಗಲೂ ಅದೇ ರೀತಿ ಇದೆಯೆ ?'' ಅವರು ಉತ್ತರಿಸಿದ್ದರು : ''ಇಲ್ಲ, ಮನಸ್ಸಿನ ಮೇಲೆ ಆ ಭಾವದ ಪ್ರಭಾವವು ಹೊರಟುಹೋದ ಮೇಲೆ ಕ್ರಮೇಣ ಅದು ಮೊದಲಿನ ಸ್ಥಿತಿಯನ್ನು ಪಡೆಯಿತು.''

8. ದಾಸ್ಯಭಾವದ ಭಕ್ತಿಸಾಧನೆಯ ಸಮಯದಲ್ಲಿ ಶ್ರೀರಾಮಕೃಷ್ಣರಿಗೆ ಜೀವನದಲ್ಲಿ ಒಂದು ಅಪೂರ್ವ ದರ್ಶನ ಮತ್ತು ಅನುಭವ ಆಗಿತ್ತು. ಆ ಅನುಭವ ಹಿಂದಿನ ಅನುಭವಗಳಿಗಿಂತ ಸಂಪೂರ್ಣ ಬೇರೆ ರೀತಿಯದ್ದೆ ಆಗಿತ್ತು. ಅದು ಎಂದೆಂದೂ ಮರೆಯದಂತೆ ಮನಸ್ಸಿನಲ್ಲಿ ಆಳವಾಗಿ ಅಚ್ಚೊತ್ತಿತ್ತು. ಅವರು ಹೇಳುತ್ತಿದ್ದರು: ''ಆಗ ನಾನು ಒಂದು ದಿನ ಪಂಚವಟಿಯಲ್ಲಿ ಕುಳಿತಿದ್ದೆ. ನಾನೇನೂ ಧ್ಯಾನ ಮಾಡುತ್ತಿರಲಿಲ್ಲ, ಹಾಗೆಯೆ ಕುಳಿತುಕೊಂಡಿದ್ದೆ. ಆ ಸಮಯದಲ್ಲಿ ಹತ್ತಿರದಲ್ಲಿ ಒಂದು ಸ್ತ್ರೀಮೂರ್ತಿ ಸುತ್ತಲಿನ ಪ್ರದೇಶವನ್ನೂ ಬೆಳಗುತ್ತ ಪ್ರತ್ಯಕ್ಷವಾಯಿತು. ಕೇವಲ ಆ ಮೂರ್ತಿಯೊಂದನ್ನೇ ನಾನು ನೋಡುತ್ತಿರಲಿಲ್ಲ, ಸುತ್ತಲಿನ ಮರಗಿಡ ನದಿ ಎಲ್ಲ ನನಗೆ ಕಾಣಿಸುತ್ತಿದ್ದುವು. ಅದು ಮಾನವೀಯ ಮೂರ್ತಿ, ಏಕೆಂದರೆ ದೇವಿಯ ಮೂರ್ತಿಗಿರುವಂತೆ ಮೂರು ಕಣ್ಣುಗಳಿರಲಿಲ್ಲ. ಆದರೆ ಆ ಮುಖಮುದ್ರೆಯಲ್ಲಿ ಕಂಡುಬರುತ್ತಿದ್ದ ಪ್ರೇಮ ದುಃಖ ಕರುಣೆ-ಸಹಿಷ್ಣುತಾಪೂರ್ಣವಾದ ಅಪೂರ್ವ ತೇಜಸ್ಸು ಮತ್ತು ಗಾಂಭೀರ್ಯ ದೇವಿಯ ಮೂರ್ತಿಗಳಲ್ಲಿಯೂ ಕಂಡುಬರುತ್ತಿರಲಿಲ್ಲ. ಪ್ರಸನ್ನದೃಷ್ಟಿಯಿಂದ ಮುಗ್ಧಗೊಳಿಸುತ್ತ ಆ ದೇವೀಮಾನವೀಯು ನಿಧಾನವಾಗಿ ಹೆಜ್ಜೆಹಾಕುತ್ತ ನನ್ನೆಡೆಗೆ ಬರುತ್ತಿದ್ದಳು.

ನಾನು ಚಕಿತನಾಗಿ 'ಯಾರಿದು' ಎಂದು ಯೋಚಿಸತೊಡಗಿದೆ. ಅಷ್ಟು ಹೊತ್ತಿಗೆ ಸರಿಯಾಗಿ ಎಲ್ಲಿಂದಲೋ ಒಂದು ಕಪಿಯು ಓಡಿಬಂದು ಆಕೆಯ ಪಾದದಡಿಯಲ್ಲಿ ಹೊರಳಾಡತೊಡಗಿತು. ಆಗ ನನ್ನ ಮನಸ್ಸಿಗೆ ಹೊಳೆಯಿತು, 'ಸೀತೆ, ಜನ್ಮಾವಧಿ ದುಃಖವನ್ನು ಅನುಭವಿಸಿದ ಸೀತೆ, ಜನಕರಾಜಕುಮಾರಿ ಸೀತೆ, ರಾಮಪ್ರಾಣಳಾಗಿದ್ದ ಸೀತೆ !' ಆಗ 'ತಾಯಿ, ತಾಯಿ' ಎಂದು ಆತುರದಿಂದ ಆಕೆಯ ಪಾದಕ್ಕೆರಗಬೇಕೆನ್ನು ವಷ್ಟರಲ್ಲಿ ಅವಳು ಬೇಗನೆ (ತಮ್ಮ ದೇಹವನ್ನು ನಿರ್ದೇಶಿಸಿ) ಇದನ್ನು ಪ್ರವೇಶಿಸಿದಳು. ನಾನು ಆನಂದ ಮತ್ತು ವಿಸ್ಮಯಗಳೆರಡರ ವಶವರ್ತಿಯಾಗಿ ಬಾಹ್ಯಜ್ಞಾನ ಶೂನ್ಯವಾಗಿ ಬಿದ್ದುಬಿಟ್ಟೆ. ಧ್ಯಾನ ಚಿಂತನೆಗಳಾವುವೂ ಇಲ್ಲದೆ ಈ ರೀತಿಯ ದರ್ಶನ ನನಗೆ ಹಿಂದೆ ಯಾವಾಗಲೂ ಆಗಿರಲಿಲ್ಲ. ಜನ್ಮವಿಡೀ ದುಃಖವನ್ನು ಅನುಭವಿಸಿದ ಸೀತೆಯನ್ನು ಮೊಟ್ಟಮೊದಲು ನೋಡಿದುದರಿಂದಲೇ ಆಕೆಯಂತೆಯೇ ನಾನು ಆಜನ್ಮ ದುಃಖವನ್ನು ಅನುಭವಿಸುತ್ತಿರಬೇಕು.''

9. ಪವಿತ್ರ ಜಾಗದಲ್ಲಿ ತಪಸ್ಸನ್ನಾಚರಿಸುವುದು ಆವಶ್ಯಕವೆನಿಸಿ ಶ್ರೀರಾಮ ಕೃಷ್ಣರು ಹೃದಯನಿಗೆ ಒಂದು ಹೊಸ ಪಂಚವಟಿ ನಿರ್ಮಿಸಲು ಹೇಳಿದರು. ಹೃದಯನು ಹೇಳುತ್ತಿದ್ದ: ''ಪಂಚವಟಿಯ ಹತ್ತಿರವಿರುವ ಹಂಸಪುಕುರವೆಂಬ ಕೊಳವನ್ನು ಆಗ ತೋಡಲಾಯಿತು. ಅದರ ಮಣ್ಣನ್ನು ತೆಗೆದು ಹಳೆಯ ಪಂಚವಟಿಯ ಹತ್ತಿರವಿದ್ದ ಹೊಂಡವನ್ನು ಮುಚ್ಚಿ ಸಮತಟ್ಟು ಮಾಡಲಾಯಿತು. ಇದರಿಂದ ಶ್ರೀರಾಮಕೃಷ್ಣರು ಹಿಂದೆ ಯಾವ ಆಮಲಕ ಮರದ ಕೆಳಗೆ ಕುಳಿತು ಧ್ಯಾನ ಮಾಡುತ್ತಿದ್ದರೊ ಅದು ಹೊರಟುಹೋಯಿತು.'' ಅನಂತರ ಈಗ ಸಾಧನಕುಟೀರವಿರುವ ಪಶ್ಚಿಮಕ್ಕೆ ಶ್ರೀರಾಮ ಕೃಷ್ಣರೇ ಸ್ವಹಸ್ತದಿಂದ ಒಂದು ಅಶ್ವತ್ಥದ ಗಿಡವನ್ನು ನೆಟ್ಟರು. ಮತ್ತೆ ಹೃದಯನ ಮೂಲಕ ಆಲ, ಆಮಲಕ ಬಿಲ್ವ ಮತ್ತು ಅಶೋಕ–ಈ ಗಿಡಗಳನ್ನು ನೆಡಿಸಿದರು. ಅನಂತರ ತುಲಸೀಗಿಡ, ಅಪರಾಜಿತ ಬಳ್ಳಿ–ಈ ಎಲ್ಲ ಸಸಿಗಳನ್ನು ನೆಟ್ಟು ಆ ಜಾಗವನ್ನು ತುಂಬಿದರು. ದನಕರುಗಳು ಬಂದು ಗಿಡಗಳನ್ನು ತಿಂದು ಹಾಕದಿರಲೆಂದು ಭರ್ತಾಭರಿ ಎಂಬ ಹೆಸರಿನ ತೋಟದ ಮಾಲಿಯ ಮೂಲಕ ಇಡೀ ಜಾಗಕ್ಕೆ ಬೇಲಿ ಹಾಕಿಸಿದರು. ಈ ಅದ್ಭುತ ಘಟನೆಯನ್ನು ಬೇರೆಡೆ ವಿವರಿಸಿರುವೆವು.* ತುಲಸೀ ಮತ್ತು ಅಪರಾಜಿತಾ ಗಿಡಗಳಿಗೆ ಅವರೇ ನೀರು ಹಾಕಿ ಬಹುಬೇಗನೆ ಅವು ದೊಡ್ಡದಾಗಿ ಬೆಳೆಯುವಂತೆ ಮಾಡಿ ದರು. ಅಲ್ಲಿ ಆಗ ಅವರು ಧ್ಯಾನಮಾಡಲು ಕುಳಿತರೆ ಹೊರಗಿನವರಿಗಾರಿಗೂ ಕಾಣಿಸು ತ್ತಲೇ ಇರಲಿಲ್ಲ.

10. ಶ್ರೀಕಾಳಿಮಂದಿರದ ಪ್ರತಿಷ್ಠಾಪನೆಯಾದ ನಂತರ ಪುರಿ ಮತ್ತು ಗಂಗಾಸಾಗರಕ್ಕೆ ಯಾತ್ರೆ ಹೋಗುವ ಯಾತ್ರಿಕ ಸಾಧುಗಳು ರಾಣಿ ರಾಸಮಣಿಯ ಉದಾರ ಆತಿಥ್ಯವನ್ನು ಸ್ವೀಕರಿಸಿ ದಕ್ಷಿಣೇಶ್ವರದಲ್ಲಿ ಕೆಲಕಾಲ ಇದ್ದು ವಿಶ್ರಾಂತಿಯನ್ನು

* ಗುರುಭಾವ, ಪೂರ್ವಾರ್ಧ ಎರಡನೆ ಅಧ್ಯಾಯ.

ಪಡೆಯುತ್ತಿದ್ದರು. ಹೀಗೆ ಅನೇಕ ಸಾಧಕರು ಸಿದ್ಧಪುರುಷರು ಅಲ್ಲಿಗೆ ಬರುತ್ತಿದ್ದರೆಂದು ಶ್ರೀ ರಾಮಕೃಷ್ಣರು ಹೇಳುತ್ತಿದ್ದರು. ಇವರ ಸಹಾಯದಿಂದ ಪ್ರಾಣಾಯಾಮಮಾಡಿ ಹಠಯೋಗದ ಸಾಧನೆಗಳನ್ನು ಅವರು ಮಾಡುತ್ತಿದ್ದರೆಂದು ತೋರುತ್ತದೆ. ಹಲಧಾರಿಗೆ ಸಂಬಂಧಿಸಿದ ಒಂದು ಘಟನೆಯನ್ನು ವಿವರಿಸುವಾಗ ಅವರು ನಮಗೆ ಇದರ ಬಗ್ಗೆ ಸೂಚನೆ ನೀಡಿದ್ದರು. ತಾವೇ ಸ್ವತಃ ಹಠಯೋಗದ ಸಾಧನೆಗಳನ್ನು ಮಾಡಿ ಅವುಗಳ ಗುಣದೋಷಗಳನ್ನು ಹೃದ್ಗತಮಾಡಿಕೊಂಡು ಮುಂದೆ ನಮಗೆ ಅವುಗಳನ್ನು ಮಾಡಬೇಡಿ ರೆಂದು ಉಪದೇಶಿಸುತ್ತಿದ್ದರು. ಹಠಯೋಗದ ವಿಷಯದಲ್ಲಿ ಉಪದೇಶವನ್ನು ಪಡೆಯಲು ಯಾರಾದರು ಅವರ ಹತ್ತಿರ ಹೋದರೆ ಅವರು ಹೇಳುತ್ತಿದ್ದರು: "ಈ ಎಲ್ಲ ಸಾಧನೆಗಳು ಈಗಿನ ಕಾಲಕ್ಕೆ ಯೋಗ್ಯವಾದವುಗಳಲ್ಲ. ಕಲಿಯುಗದಲ್ಲಿ ಜೀವಿಗಳು ಅಲ್ಪಾಯುಗಳು ಮತ್ತು ಅನ್ನಗತಪ್ರಾಣರು. ಈಗ ಹಠಯೋಗದ ಅಭ್ಯಾಸದ ಮೂಲಕ ಶರೀರವನ್ನು ದೃಢಪಡಿಸಿಕೊಂಡು ರಾಜಯೋಗದ ಮೂಲಕ ಭಗವಂತನನ್ನು ಕರೆಯುವಷ್ಟು ಸಮಯವೆಲ್ಲಿದೆ? ಹಠಯೋಗದ ಸಾಧನೆಗಳನ್ನೆಲ್ಲ ಮಾಡಬೇಕಾದರೆ ಸಿದ್ಧಗುರುವಿನ ಜತೆ ವಾಸಿಸಬೇಕಾಗುತ್ತದೆ ಮತ್ತು ಆಹಾರಾದಿ ವಿಷಯಗಳಲ್ಲಿ ಕಠೋರ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ನಿಯಮದಲ್ಲಿ ಸ್ವಲ್ಪ ವ್ಯತ್ಯಾಸವಾದರೆ ಶರೀರ ವ್ಯಾಧಿಗ್ರಸ್ತವಾಗುವುದು, ಅಷ್ಟೇ ಅಲ್ಲ ಸಾವೂ ಬರಬಹುದು. ಆದ್ದರಿಂದ ಅವನ್ನೆಲ್ಲ ಮಾಡುವ ಆವಶ್ಯಕತೆಯಿಲ್ಲ. ಮನಸ್ಸನ್ನು ನಿರೋಧಿಸುವುದಕ್ಕಾಗಿಯೆ ತಾನೆ ಪ್ರಾಣಾ ಯಾಮ ಕುಂಭಕ ಇತ್ಯಾದಿ ವಾಯುನಿರೋಧ ಸಾಧನೆಗಳನ್ನು ಮಾಡುವುದು? ಭಗವದ್ಭಕ್ತಿ ಪೂರ್ಣವಾದ ಧ್ಯಾನದಿಂದ ಮನಸ್ಸು ಮತ್ತು ವಾಯು ಸ್ವಾಭಾವಿಕವಾಗಿಯೆ ನಿರೋಧಿಸ ಲ್ಪಡುತ್ತವೆ. ಕಲಿಯುಗದಲ್ಲಿ ಜೀವಿಗಳು ಅಲ್ಪಾಯುಗಳು ಮತ್ತು ಶಕ್ತಿ ಕಡಮೆ ಎಂದು ಹೇಳಿ ಭಗವಂತನು ಕೃಪೆಮಾಡಿ ಸುಗಮವಾದ ಹಾದಿಯನ್ನು ತೋರಿಸಿಕೊಟ್ಟಿರು ವನು. ಹೆಂಡತಿ ಮಕ್ಕಳ ವಿಯೋಗದಿಂದ ಯಾವರೀತಿ ವ್ಯಾಕುಲತೆ ಮತ್ತು ಶೂನ್ಯತೆ ಉಂಟಾಗುವುದೊ ಅದೇ ರೀತಿ ಭಗವಂತನಿಗಾಗಿ ಇಪ್ಪತ್ತನಾಲ್ಕು ಗಂಟೆ ವ್ಯಾಕುಲತೆ ಯುಂಟಾದರೆ ಅವನು ದರ್ಶನ ನೀಡಿಯೇ ನೀಡುತ್ತಾನೆ."

11. ಸ್ಮೃತಿಯನ್ನು ಅನುಸರಿಸುವ ಕೆಲವು ಸಾಧಕಭಕ್ತರು ತಂತ್ರವನ್ನು ಆಶ್ರ ಯಿಸುತ್ತಾರೆ. ವೈಷ್ಣವ ಸಂಪ್ರದಾಯಕ್ಕೆ ಸೇರಿದ ಅವರು ಪರಕೀಯ ಪ್ರೇಮವೆಂಬ ಸಾಧನಮಾರ್ಗವನ್ನು ಅನುಸರಿಸುತ್ತಾರೆ. ವೈಷ್ಣವ ಮತದ ಕಡೆಗೆ ಒಲವಿದ್ದ ಹಲ ಧಾರಿಯು ರಾಧಾಗೋವಿಂದನ ಪೂಜೆಯನ್ನು ಪ್ರಾರಂಭಿಸಿದ ಮೇಲೂ ಗುಪ್ತವಾಗಿ ಈ ಮೇಲಿನ ಸಾಧನೆಯಲ್ಲಿ ತೊಡಗಿದ್ದನು. ಜನರಿಗೆ ಈ ವಿಷಯ ಗೊತ್ತಾಗಿ ಹಿಂದಿನಿಂದ ಏನೇನೊ ಆಡಿಕೊಳ್ಳತೊಡಗಿದರು. ಅವನ ಎದುರಿಗೆ ಏನೂ ಹೇಳುತ್ತಿರಲಿಲ್ಲ. ಏಕೆಂದರೆ ಅವನು ಯಾರಿಗೆ ಏನು ಹೇಳುತ್ತಾನೊ ಹಾಗೆಯೇ ಆಗುವುದೆಂಬ ಪ್ರತೀತಿಯಿದ್ದುದರಿಂದ ಅವನ ಕೋಪಕ್ಕೆ ಒಳಗಾಗುವುದು ಯಾರಿಗೂ ಇಷ್ಟವಿರಲಿಲ್ಲ. ಜನ ಈ ರೀತಿ ಮಾತನಾಡಿಕೊಳ್ಳುವುದು ಶ್ರೀ ರಾಮಕೃಷ್ಣರ ಕಿವಿಗೆ ಬಿತ್ತು. ಶ್ರೀರಾಮಕೃಷ್ಣರನು

ಬಿಚ್ಚು ಮನಸ್ಸು. ಯಾವುದಕ್ಕೂ ಭಯಪಡುವವರಲ್ಲ. ಅವರು ಎಲ್ಲ ವಿಷಯವನ್ನೂ ಹಲಧಾರಿಗೆ ಹೇಳಿದರು. ತನ್ನ ಸಾಧನೆಯ ಬಗ್ಗೆ ತಪ್ಪು ಅರ್ಥ ಕಲ್ಪಿಸಿಕೊಂಡುದಕ್ಕಾಗಿ ಹಲಧಾರಿ ಕುಪಿತನಾಗಿ ಹೇಳಿದನು: ''ನನಗಿಂತ ಕಿರಿಯನಾದ ನೀನು ನನಗೆ ಈ ರೀತಿ ಅವಮಾನ ಮಾಡುತ್ತಿರುವೆಯಾ ? ನಿನ್ನ ಬಾಯಿಂದ ರಕ್ತ ಸುರಿಯಲಿ'' ಶ್ರೀರಾಮಕೃಷ್ಣರು ಅವನನ್ನು ಎಷ್ಟೇ ಸಮಾಧಾನಪಡಿಸಿದರೂ ಅವನು ಕೇಳಲೇ ಇಲ್ಲ.

ಈ ಘಟನೆಯಾಗಿ ಸ್ವಲ್ಪ ಸಮಯದನಂತರ ಒಂದುದಿನ ರಾತ್ರಿ ಎಂಟು ಅಥವಾ ಒಂಬತ್ತು ಗಂಟೆಯ ಹೊತ್ತಿಗೆ ಶ್ರೀರಾಮಕೃಷ್ಣರ ನಾಲಿಗೆಯ ಮೇಲೆ ಏನೊ ಹರಿದಂತೆ ಸಂವೇದನೆಯಾಯಿತು. ಮರುಕ್ಷಣವೇ ಬಾಯಿಂದ ರಕ್ತ ಸುರಿಯತೊಡಗಿತು. ಈ ಬಗ್ಗೆ ಅವರು ಹೇಳುತ್ತಿದ್ದರು :

''ಅದು ಎಷ್ಟು ದಪ್ಪನಾಗಿತ್ತೆಂದರೆ ಸ್ವಲ್ಪ ಬಾಯಿಂದ ಹೊರಗೆ ಬಿದ್ದು ಮತ್ತೆ ಸ್ವಲ್ಪ ಬಾಯೊಳಗೇ ಗಟ್ಟಿಯಾಗಿ ಮುಂಭಾಗದ ಹಲ್ಲಿನ ಮೂಲಕ ಹೊರಬಂದು ಆಲದ ಮರದ ಬೇರಿನಂತೆ ನೇತಾಡುತ್ತಿತ್ತು. ಬಟ್ಟೆಯಿಂದ ಬಾಯನ್ನು ಒತ್ತಿಹಿಡಿದು ರಕ್ತವನ್ನು ನಿಲ್ಲಿಸಲು ಪ್ರಯತ್ನಿಸಿದೆ. ಆದರೂ ಅದು ನಿಲ್ಲದಿರಲು ಭಯವುಂಟಾಯಿತು. ವಿಷಯವನ್ನು ತಿಳಿದು ಎಲ್ಲರೂ ಓಡಿಬಂದರು. ಹಲಧಾರಿಯು ಆಗ ಮಂದಿರದಲ್ಲಿ ಕೆಲಸ ಮಾಡುತ್ತಿದ್ದ. ವಿಷಯವನ್ನು ಕೇಳಿ ಅವನೂ ಓಡಿಬಂದ. ಅವನಿಗೆ ಹೇಳಿದೆ, 'ಅಣ್ಣ, ನೀನು ಶಾಪ ಕೊಟ್ಟು ನನಗೆ ಎಂಥ ಪರಿಸ್ಥಿತಿಯುಂಟಾಯಿತು, ನೋಡು?' ತನ್ನ ಕಾತರತೆಯನ್ನು ಕಂಡು ಅವನೂ ಅಳತೊಡಗಿದ.

12. ''ಅಂದು ದಕ್ಷಿಣೇಶ್ವರಕ್ಕೆ ಒಬ್ಬ ಒಳ್ಳೆಯ ಸಾಧು ಬಂದಿದ್ದ. ಅವನೂ ಗಲಾಟೆಯನ್ನು ನೋಡಿ ಓಡಿಬಂದ. ರಕ್ತದ ಬಣ್ಣವನ್ನೂ ಮತ್ತು ಅದು ಎಲ್ಲಿಂದ ಒಸರುತ್ತಿದೆ ಎಂಬುದನ್ನೂ ಪರೀಕ್ಷಿಸಿ ಅವನು ನುಡಿದ: 'ಭಯವಿಲ್ಲ, ರಕ್ತ ಹೊರಬಂದದ್ದು ಒಳ್ಳೆಯದೇ ಆಯಿತು. ನೀನು ಯೋಗಸಾಧನೆ ಮಾಡುತ್ತಿದ್ದೆ ಎಂದು ಕಾಣಿಸುತ್ತದೆ. ಹಠಯೋಗದ ಕೊನೆಯಲ್ಲಿ ಜಡಸಮಾಧಿಯಾಗುವುದು. ನಿನಗೂ ಹಾಗೆಯೇ ಆಗಬೇಕಿತ್ತು, ಸುಷುಮ್ನಾ ದ್ವಾರವು ತೆರೆದು ಶರೀರದ ರಕ್ತ ತಲೆಗೆ ಏರುತ್ತಿತ್ತು, ಅದು ತಲೆಗೆ ಹೋಗದೆ ತಾನೇ ದಾರಿಮಾಡಿಕೊಂಡು ಈ ರೀತಿ ಹೊರಬಂದದ್ದು ಒಳ್ಳೆಯದೇ ಆಯಿತು, ಏಕೆಂದರೆ ಜಡಸಮಾಧಿಯಾಗಿದ್ದರೆ ಅದು ಭಂಗವಾಗುತ್ತಲೇ ಇರಲಿಲ್ಲ. ನಿನ್ನ ಶರೀರದ ಮೂಲಕ ಶ್ರೀ ಜಗನ್ಮಾತೆಯ ವಿಶೇಷ ಕಾರ್ಯ ನಡೆಯಬೇಕಾಗಿದೆ. ಆದ್ದರಿಂದಲೇ ಅವಳು ನಿನ್ನನ್ನು ಈ ರೀತಿ ರಕ್ಷಿಸಿದಳು.' ಸಾಧುವಿನ ಈ ಮಾತು ಕೇಳಿ ಸಮಾಧಾನಗೊಂಡೆ.'' ಹಲಧಾರಿಯ ಶಾಪ ವರವಾಗಿ ಪರಿಣಮಿಸಿತು.

13. ಹಲಧಾರಿಯೊಡನೆ ಶ್ರೀರಾಮಕೃಷ್ಣರ ಆಚರಣೆಯಲ್ಲಿ ಒಂದು ರಹಸ್ಯಮಯ ಮಾಧುರ್ಯವಿತ್ತು. ಮೊದಲೇ ಹೇಳಿದಂತೆ ಅವನು ಶ್ರೀರಾಮಕೃಷ್ಣರ ಚಿಕ್ಕಪ್ಪನ ಮಗ, ಅವರಿಗಿಂತ ವಯಸ್ಸಿನಲ್ಲಿ ದೊಡ್ಡವನು. ಬಹುಶಃ ೧೮೫೮ರಲ್ಲಿ

ಅವನು ದಕ್ಷಿಣೇಶ್ವರಕ್ಕೆ ಬಂದು ಶ್ರೀರಾಧಾಗೋವಿಂದನ ಅರ್ಚಕನಾಗಿ ಸೇರಿಕೊಂಡನು. ೧೮೬೫ರವರೆಗೆ ಅವನು ಅದೇ ಕೆಲಸ ಮಾಡುತ್ತಿದ್ದನು. ಆದ್ದರಿಂದ ಅವನು ಶ್ರೀರಾಮಕೃಷ್ಣರ ಸಾಧನ ಸಮಯದಲ್ಲಿ ಸುಮಾರು ಏಳು ವರ್ಷಗಳು ದಕ್ಷಿಣೇಶ್ವರದಲ್ಲಿದ್ದನು. ಶ್ರೀರಾಮಕೃಷ್ಣರ ನಿಕಟ ಪರಿಚಯ ಅವನಿಗಿತ್ತು. ಆದರೂ ಅವನಿಗೆ ಶ್ರೀರಾಮಕೃಷ್ಣರ ಬಗ್ಗೆ ಒಂದು ನಿರ್ದಿಷ್ಟವಾದ ಅಭಿಪ್ರಾಯಕ್ಕೆ ಬರಲು ಸಾಧ್ಯವಾಗಲಿಲ್ಲ. ಅವನು ಸ್ವತಃ ಆಚರಣೆಯಲ್ಲಿ ನಿಷ್ಠಾವಂತನಾಗಿದ್ದನು. ಶ್ರೀರಾಮಕೃಷ್ಣರು ಭಾವಾವೇಶದಲ್ಲಿ ಬಟ್ಟೆ ಜನಿವಾರ ತೆಗೆದು ಹಾಕುವುದು ಅವನಿಗೆ ಹಿಡಿಸುತ್ತಿರಲಿಲ್ಲ. ತಮ್ಮನನ್ನು ಸ್ವೇಚ್ಛಾಚಾರಿ, ಇಲ್ಲವೇ ಹುಚ್ಚನಾಗಿರಬೇಕು ಎಂದು ಭಾವಿಸುತ್ತಿದ್ದನು. ಹೃದಯನು ಹೇಳುತ್ತಿದ್ದನು : ''ಅವನು ಆಗಾಗ ನನಗೆ ಹೇಳುತ್ತಿದ್ದ : 'ಹೃದು, ಅವರು ಬಟ್ಟೆ ಬಿಚ್ಚಿ ಹಾಕುತ್ತಾರೆ, ಜನಿವಾರ ತೆಗೆದು ಹಾಕುತ್ತಾರೆ, ಇದು ಒಳ್ಳೆಯದಲ್ಲ. ಎಷ್ಟೋ ಜನ್ಮಗಳ ಪುಣ್ಯದಿಂದ ಬ್ರಾಹ್ಮಣವಂಶದಲ್ಲಿ ಹುಟ್ಟುವುದು. ಅವರು ಈ ಬ್ರಾಹ್ಮಣತ್ವವನ್ನೇ ಕಡೆಗಣಿಸುತ್ತಿದ್ದಾರೆ. ಆದನ್ನು ತ್ಯಜಿಸುವಷ್ಟು ಉನ್ನತ ಸ್ಥಿತಿಯನ್ನು ಅವರು ಮುಟ್ಟಿರುವರೆ? ಹೃದು, ಅವರು ನಿನ್ನ ಮಾತು ಸ್ವಲ್ಪ ಕೇಳುತ್ತಾರೆ. ಅವರು ಈ ರೀತಿ ವರ್ತಿಸದಂತೆ ನೋಡಿಕೊ. ಅವರ ಕೈಕಾಲು ಕಟ್ಟಿಯಾದರೂ ಅವರು ಈ ರೀತಿ ಮಾಡದಂತೆ ನೋಡಿಕೊಳ್ಳುವುದು ಉಚಿತ.''

ಪೂಜೆಯ ಸಂದರ್ಭದಲ್ಲಿ ಅವರು ಪ್ರೇಮಾಶ್ರುವನ್ನು ಸುರಿಸುವುದು, ಭಗವಂತನ ನಾಮಗುಣಶ್ರವಣದಲ್ಲಿ ಅವರಿಗಿದ್ದ ಅತ್ಯುತ್ಸಾಹ ಮತ್ತು ಭಗವತ್ಸಾಕ್ಷಾತ್ಕಾರಕ್ಕಾಗಿ ಅವರಲ್ಲಿದ್ದ ಅಪೂರ್ವ ವ್ಯಾಕುಲತೆ – ಇವನ್ನೆಲ್ಲ ನೋಡಿ ಹಲಧಾರಿಗೆ ಅನಿಸುತ್ತಿತ್ತು ಇದು ನಿಜವಾಗಿಯೂ ಉನ್ನತ ಆಧ್ಯಾತ್ಮಿಕ ಅವಸ್ಥೆ, ಸಾಧಾರಣ ಮನುಷ್ಯರಲ್ಲಿ ಇಂಥ ಸ್ಥಿತಿಯನ್ನು ಕಾಣಲಾಗುವುದಿಲ್ಲ ಎಂದು. ಈ ರೀತಿ ಭಾವಿಸುತ್ತ ಅವನು ಹೃದಯನಿಗೆ ಹೇಳುತ್ತಿದ್ದ, ''ಹೃದು, ನೀನು ನಿಜವಾಗಿಯೂ ಅವರೊಳಗೆ ಏನೊ ಅದ್ಭುತವನ್ನು ಕಂಡಿರುವೆ, ಇಲ್ಲದಿದ್ದರೆ ಅಷ್ಟೊಂದು ಅವರ ಸೇವೆ ಮಾಡಲಾಗುತ್ತಿರಲಿಲ್ಲ.''

14. ಈ ರೀತಿ ಹಲಧಾರಿಯ ಮನಸ್ಸು ಸಂದೇಹದಿಂದ ದೋಲಾಯಮಾನವಾಗಿತ್ತು. ಶ್ರೀರಾಮಕೃಷ್ಣರ ಸ್ಥಿತಿಯ ಬಗ್ಗೆ ಒಂದು ನಿರ್ದಿಷ್ಟ ನಿರ್ಣಯಕ್ಕೆ ಬರಲು ಅವನಿಗೆ ಸಾಧ್ಯವಾಗಲಿಲ್ಲ. ಶ್ರೀರಾಮಕೃಷ್ಣರು ಹೇಳುತಿದ್ದರು. ''ಎಷ್ಟೋ ಬಾರಿ ನಾನು ಪೂಜೆ ಮಾಡುವುದನ್ನು ನೋಡಿ ಮೋಹಿತನಾಗಿ ಹಲಧಾರಿ ಹೇಳುತ್ತಿದ್ದ, 'ರಾಮಕೃಷ್ಣ, ಈಗ ನಿನ್ನನ್ನು ಗುರುತಿಸಿಬಿಟ್ಟೆ'' ಎಂದು. ಆದನ್ನು ಕೇಳಿ ನಾನು ಹಾಸ್ಯಕ್ಕಾಗಿ ಹೇಳುತ್ತಿದ್ದೆ,'ನೋಡು, ಮತ್ತೆ ನೀನು ಗೊಂದಲಕ್ಕೀಡಾಗಬಹುದು.' ಅದಕ್ಕವನು ಹೇಳುತಿದ್ದ, 'ಈ ಬಾರಿ ನೀನು ನನ್ನನ್ನು ಮೋಸಪಡಿಸಲಾರೆ. ನಿನ್ನಲ್ಲಿ ನಿಜವಾಗಿಯೂ ಈಶ್ವರೀಯ ಭಾವ ಉಂಟಾಗಿದೆ. ಈಗ ಸರಿಯಾಗಿ ನಿನ್ನನ್ನು ಅರ್ಥಮಾಡಿಕೊಂಡಿದ್ದೇನೆ'. ಅನಂತರ ದೇವಸ್ಥಾನದ ಕೆಲಸವನ್ನೆಲ್ಲ ಮುಗಿಸಿ ನಶ್ಯ ಮೂಗಿಗೇರಿಸಿ ಭಗವತ್‌ಗೀತಾ ರಾಮಾಯಣಾದಿ ಶಾಸ್ತ್ರಗಳ ಅಧ್ಯಯನಕ್ಕೆ ಕುಳಿತನೆಂದರೆ ಆಗ ಅಭಿಮಾನದಿಂದ

ಉಬ್ಬಿಹೋಗಿ ಬೇರೆ ವ್ಯಕ್ತಿಯೆ ಆಗಿಬಿಡುತ್ತಿದ್ದ. ಆಗ ನಾನು ಅವನ ಹತ್ತಿರ ಹೋಗಿ ಹೇಳುತ್ತಿದ್ದೆ, 'ನೀನು ಶಾಸ್ತ್ರದಲ್ಲಿ ಏನೇನು ಓದಿರುವೆಯೋ ಅವನ್ನೆಲ್ಲ ನಾನು ಪಡೆದು ಬಿಟ್ಟಿದ್ದೇನೆ. ನನಗೆ ಅವೆಲ್ಲ ಅರ್ಥವಾಗುತ್ತವೆ'. ಅವನು ರೇಗಿ ಹೇಳುತ್ತಿದ್ದ, 'ಹಾಂ, ನೀನು ಶುದ್ಧ ಮೂರ್ಖ, ನಿನಗೆ ಇವೆಲ್ಲ ಅರ್ಥವಾಗುತ್ತವಂತೆ!' ನಾನು ಹೇಳುತ್ತಿದ್ದೆ, (ತಮ್ಮ ದೇಹವನ್ನು ನಿರ್ದೇಶಿಸಿ)'ಸತ್ಯವಾಗಿ ಹೇಳುತ್ತೇನೆ. ಇದರೊಳಗೆ ಯಾವನಿರುವನೊ ಅವನು ಇವೆಲ್ಲವನ್ನೂ ತಿಳಿಸಿಕೊಡುವನು. ನೀನು ಆಗ ಹೇಳಿದೆಯಲ್ಲ ಇದರೊಳಗೆ ಈಶ್ವರ ಭಾವವಿದೆ ಎಂದು, ಅದೇ ಎಲ್ಲವನ್ನೂ ತಿಳಿಸಿಕೊಡುವುದು. ಹಲಧಾರಿಯು ಇದನ್ನು ಕೇಳಿ ಬಿಸಿಬಿಸಿಯಾಗಿ ಹೇಳುತ್ತಿದ್ದ, 'ಹೋಗು, ಮೂರ್ಖ, ಕಲಿಯುಗದಲ್ಲಿ ಕಲ್ಕಿ ಅವತಾರವಲ್ಲದೆ ಬೇರೆ ಯಾವ ಅವತಾರಗಳ ವಿಷಯವೂ ಶಾಸ್ತ್ರದಲ್ಲಿಲ್ಲ. ನಿನಗೆ ಹುಚ್ಚು ಹಿಡಿದಿದೆ. ಅದಕ್ಕೆ ಹೀಗೆಲ್ಲ ಭಾವಿಸುತ್ತೀಯೆ ?' ನಾನು ನಕ್ಕು ಹೇಳುತ್ತಿದ್ದೆ: 'ಸ್ವಲ್ಪ ಮುಂಚೆ ಹೇಳುತ್ತಿದ್ದೆ, ಇನ್ನು ಗೊಂದಲಕ್ಕೊಳಗಾಗುವುದಿಲ್ಲ ಎಂದು?' ಆದರೆ ಆ ಮಾತನ್ನು ಕೇಳುವರಾರು ? ಈ ರೀತಿ ಎಷ್ಟೊ ಸರಿ ಆಯಿತು. ಮುಂದೆ ಒಂದು ದಿನ ನಾನು ಮೈಮೇಲೆ ಬಟ್ಟೆಯಿಲ್ಲದೆ ಮರದ ಮೇಲೆ ಕುಳಿತು ಬಾಲಕನಂತೆ ಮೂತ್ರ ಮಾಡುತ್ತಿರುವುದನ್ನು ಅವನು ಕಂಡನು. ಅಂದು ಅವನು ನನಗೆ ಬ್ರಹ್ಮದೈತ್ಯ ಹಿಡಿದಿದೆ ಎಂದು ದೃಢನಿಶ್ಚಯಕ್ಕೆ ಬಂದನು.''

15, ಹಲಧಾರಿಯ ಪುತ್ರನ ಮೃತ್ಯುವಿನ ಬಗ್ಗೆ ಆಗಲೇ ಹೇಳಿಯಾಗಿದೆ. ಆದಾದನಂತರ ಶ್ರೀಕಾಳಿಯನ್ನು ತಮೋಮಯೀ ಎಂದು ಪರಿಗಣಿಸತೊಡಗಿದನು. ಒಂದು ದಿನ ಶ್ರೀರಾಮಕೃಷ್ಣರಿಗೂ ಇದನ್ನು ಹೇಳಿದ: ''ತಾಮಸೀ ಮೂರ್ತಿಯ ಉಪಾಸನೆಯಿಂದ ಆಧ್ಯಾತ್ಮಿಕ ಉನ್ನತಿ ಖಂಡಿತ ಆಗುವುದಿಲ್ಲ. ನೀನು ಆ ದೇವಿಯನ್ನು ಏಕೆ ಆರಾಧಿಸುತ್ತೀಯ?'' ಶ್ರೀರಾಮಕೃಷ್ಣರು ಆಗ ಅದಕ್ಕೆ ಉತ್ತರವಾಗಿ ಏನೂ ಹೇಳಿರಲಿಲ್ಲ. ಆದರೆ ತಮ್ಮ ಇಷ್ಟದೇವತೆಯ ನಿಂದೆಯನ್ನು ಕೇಳಿ ಅವರ ಮನಸ್ಸಿಗೆ ವ್ಯಥೆಯುಂಟಾಗಿತ್ತು. ಅನಂತರ ಕಾಳೀಮಂದಿರಕ್ಕೆ ಹೋಗಿ ಕಣ್ಣೀರು ಸುರಿಸುತ್ತ ಜಗನ್ಮಾತೆಯನ್ನು ಕೇಳಿದರು: ''ತಾಯಿ, ಹಲಧಾರಿ ದೊಡ್ಡ ಪಂಡಿತ. ನೀನು ತಮೋಮಯೀ ಎಂದು ಅವನು ಹೇಳುತ್ತಾನೆ. ಅದು ನಿಜವೇ, ತಾಯಿ ?'' ಅನಂತರ ದೇವಿಯ ಮೂಲಕ ಯಥಾರ್ಥ ವಿಷಯವನ್ನು ತಿಳಿದು ಅವರಿಗೆ ಸಂತೋಷವಾಯಿತು. ಕೂಡಲೇ ಹಲಧಾರಿಯ ಹತ್ತಿರ ಓಡಿ ಹೋಗಿ ಅವನ ಹೆಗಲ ಮೇಲೆ ಹತ್ತಿ ಕುಳಿತು ಆವೇಶದಿಂದ ಹೇಳತೊಡಗಿದರು: ''ನೀನು ನನ್ನ ತಾಯಿಯನ್ನು ತಾಮಸೀ ಎಂದೆಯಾ ? ಅವಳು ತಾಮಸಿಯೇನು ? ಅವಳು ತ್ರಿಗುಣಮಯೀ. ಮತ್ತೆ ಶುದ್ಧ ಸತ್ತ್ವಗುಣಮಯೀ ಕೂಡ !'' ಭಾವಾವೇಶದಲ್ಲಿ ಆಡಿದ ಶ್ರೀರಾಮಕೃಷ್ಣರ ಆ ಮಾತಿನಿಂದ ಮತ್ತು ಅವರ ಸ್ಪರ್ಶದಿಂದ ಹಲಧಾರಿಯ ಆಂತರಿಕ ಚಕ್ಷು ತೆರೆದಂತಾಯಿತು. ಅವನು ಆಗ ಪೂಜೆಯ ಆಸನದ ಮೇಲೆ ಕುಳಿತಿದ್ದ. ಅವರ ಮಾತನ್ನು ಹೃತ್ಪೂರ್ವಕವಾಗಿ ಸ್ವೀಕರಿಸಿದ. ಅಷ್ಟೇ ಅಲ್ಲದೆ ಅವರಲ್ಲಿ ಆಗ ಜಗನ್ಮಾತೆಯ ವಿಶೇಷ ಆವಿರ್ಭಾವವನ್ನು ಕಂಡು

ಅವರ ಪಾದಕ್ಕೆ ಭಕ್ತಿಯಿಂದ ಪುಷ್ಪಾಂಜಲಿ ಅರ್ಪಿಸಿದ. ಇದಾದ ಮರುಕ್ಷಣವೇ ಹೃದಯನು ಬಂದು ವಿಚಾರಿಸಿದ, "ಮಾವ, ಇದೀಗ ಹೇಳುತ್ತಿದ್ದೆ ರಾಮಕೃಷ್ಣರಿಗೆ ಭೂತ ಹಿಡಿದಿದೆ. ಎಂದು. ಮತ್ತೆ ಈಗ ಅವರಿಗೆ ಪೂಜೆ ಮಾಡುತ್ತಿದ್ದೀಯಲ್ಲ ?" ಹಲಧಾರಿ ಹೇಳಿದ, "ಏನು ಮಾಡಲಿ, ಹೃದು, ಕಾಳೀಮಂದಿರದಿಂದ ಹಿಂತಿರುಗಿ ಬಂದು ಏನೊ ಮಾಡಿಬಿಟ್ಟ, ನಾನು ಎಲ್ಲವನ್ನೂ ಮರೆತು ಅವನಲ್ಲಿ ಈಶ್ವರನೇ ಸಾಕ್ಷಾತ್ ಪ್ರಕಾಶಿಸುವುದನ್ನು ಕಂಡೆನು. ಕಾಳೀ ಮಂದಿರದಲ್ಲಿ ನಾನು ರಾಮಕೃಷ್ಣನನ್ನು ನೋಡಿ ದಾಗಲೆಲ್ಲ ನನಗೆ ಹೀಗೇ ಆಗುವುದು. ಇದೊಂದು ಆಶ್ಚರ್ಯಕರ ಸಂಗತಿ–ನನಗೆ ಅರ್ಥವೇ ಆಗುತ್ತಿಲ್ಲ."

16. ಹೀಗೆ ಶ್ರೀರಾಮಕೃಷ್ಣರಲ್ಲಿ ಮತ್ತೆ ಮತ್ತೆ ದೇವಪ್ರಕಾಶವನ್ನು ಕಾಣು ತ್ತಿದ್ದರೂ ಹಲಧಾರಿಯು ನಶ್ಯ ಏರಿಸಿ ಶಾಸ್ತ್ರಾಧ್ಯಯನಕ್ಕೆ ಕುಳಿತರೆ ಪಾಂಡಿತ್ಯಾಭಿಮಾನ ದಿಂದ ಮತ್ತನಾಗಿ ಪುನರ್ನಾಸ್ತಿಕನಾಗುತ್ತಿದ್ದ. ಕಾಮಕಾಂಚನಾಸಕ್ತಿ ಹೋಗದೆ ಬಾಹ್ಯ ಶುದ್ಧಿ, ಸದಾಚಾರ ಮತ್ತು ಶಾಸ್ತ್ರಜ್ಞಾನ–ಇವುಗಳಿಂದ ಏನೂ ಪ್ರಯೋಜನವಿಲ್ಲ, ಸತ್ಯ ತತ್ತ್ವವನ್ನು ಗ್ರಹಿಸಲು ಸಾಧ್ಯವಾಗುವುದಿಲ್ಲ–ಎಂಬುದು ಹಲಧಾರಿಯ ವೃತ್ತಾಂತದಿಂದ ನಮಗೆ ಸ್ಪಷ್ಟವಾಗುತ್ತದೆ. ಊಟಕ್ಕಾಗಿ ದಕ್ಷಿಣೇಶ್ವರಕ್ಕೆ ಬರುತ್ತಿದ್ದ ದೀನದಲಿತರ ಎಂಜಲನ್ನು ಶ್ರೀರಾಮಕೃಷ್ಣರು ತಿನ್ನುತ್ತಿದ್ದ ವಿಷಯವನ್ನು ಮೊದಲೇ ಹೇಳಿರುವೆವು. ಹಲಧಾರಿಯು ಇದನ್ನು ನೋಡಿ ತಿರಸ್ಕಾರದಿಂದ ಹೇಳಿದ್ದನು, "ನಿನ್ನ ಮಕ್ಕಳಿಗೆ ಹೇಗೆ ವಿವಾಹಮಾಡುತ್ತೀಯೊ ನೋಡುತ್ತೇನೆ!" ಶ್ರೀರಾಮಕೃಷ್ಣರು ಇದನ್ನು ಕೇಳಿ ರೋಷ ದಿಂದ ಹೇಳಿದರು, "ಆಯ್ಯೊ ಮೂರ್ಖ, ಶಾಸ್ತ್ರ ವ್ಯಾಖ್ಯಾನಮಾಡುವಾಗ ನೀನು ಬ್ರಹ್ಮ ಸತ್ಯ ಜಗತ್ತು ಮಿಥ್ಯೆ, ಸರ್ವಭೂತಗಳಲ್ಲಿಯೂ ಬ್ರಹ್ಮನನ್ನು ಕಾಣಬೇಕು ಎಂದೆಲ್ಲ ಹೇಳುತ್ತೀಯಲ್ಲ! ನಾನು ನಿನ್ನಂತೆಯೇ ಜಗನ್ಮಿಥ್ಯೆ ಎಂದು ಹೇಳುತ್ತ ಮಕ್ಕಳ ತಂದೆ ಯಾಗುತ್ತೇನೆಂದುಕೊಂಡಿದ್ದೀಯ ? ನಿನ್ನ ಶಾಸ್ತ್ರಜ್ಞಾನಕ್ಕೆ ಬೆಂಕಿ ಹಾಕ !"

17. ಬಾಲಕ ಸ್ವಭಾವದ ಶ್ರೀರಾಮಕೃಷ್ಣರು ಕೆಲವೊಮ್ಮೆ ಹಲಧಾರಿಯ ಶಾಸ್ತ್ರಾಧಾರಿತ ಹೇಳಿಕೆಗಳಿಂದ ಗೊಂದಲಕ್ಕೀಡಾಗಿ ಶ್ರೀಜಗನ್ಮಾತೆಯ ಅಭಿಪ್ರಾಯ ವನ್ನು ಕೇಳಲು ಹೋಗುತ್ತಿದ್ದರು. ಭಾವಾವೇಶದಲ್ಲಿ ಕಾಣುವ ಐಶ್ವರೀಯ ರೂಪಗಳೆಲ್ಲ ಮಿಥ್ಯೆಯೆಂದೂ, ಈಶ್ವರನು ಭಾವಾಭಾವಗಳಿಗೆ ಅತೀತನೆಂದೂ ಶಾಸ್ತ್ರ ಹೇಳುತ್ತದೆ–ಎಂದು ಹಲಧಾರಿಯು ಶ್ರೀರಾಮಕೃಷ್ಣರಿಗೆ ಒಂದು ದಿನ ಹೇಳಿದ. ಅವರಿಗೆ ಸಂದೇಹವುಂಟಾಯಿತು. ಅವರು ಹೇಳುತ್ತಾರೆ, "ಹಾಗಾದರೆ ಭಾವಾವೇಶದಲ್ಲಿ ಏನೇನು ಐಶ್ವರೀಯ ರೂಪಗಳನ್ನು ನೋಡುತ್ತೇನೊ, ಆದೇಶ ಪಡೆಯುತ್ತೇನೊ ಅವೆಲ್ಲ ಸುಳ್ಳು? ತಾಯಿಯು ನನ್ನನ್ನು ಮೋಸಪಡಿಸುತ್ತಿರುವಳೆ ?–ಎಂದು ಭಾವಿಸತೊಡಗಿದೆ. ನಾನು ತುಂಬ ಖಿನ್ನಮನಸ್ಕನಾದೆ. ಅಳುತ್ತ ತಾಯಿಗೆ ಹೇಳತೊಡಗಿದೆ : 'ತಾಯಿ, ನಾನು ನಿರಕ್ಷರಕುಕ್ಷಿಯೆಂದು ನೀನು ಹೀಗೆ ನನಗೆ ಮೋಸ ಮಾಡುವುದೆ ?' ಅಳುವಿನ ತೀವ್ರತೆ ಕಡಿಮೆಯಾಗುತ್ತಲೇ ಇಲ್ಲ. ಕಮಲಕುಟೀರದಲ್ಲಿ ಕುಳಿತು ರೋದಿಸುತ್ತಿದ್ದೆ. ಸ್ವಲ್ಪ

ಹೊತ್ತಿನ ನಂತರ ನನ್ನ ಮುಂದೆ ನೆಲದ ಮೇಲಿಂದ ಮಂಜಿನಂತಹ ಹೊಗೆ ಮೇಲೆದ್ದಿತು; ಅದರ ಮಧ್ಯೆ ಬಂಗಾರವರ್ಣದ ಅತ್ಯಂತ ಸುಂದರ ಜೀವಂತ ಮುಖವನ್ನು ಕಂಡೆ. ಆ ಮೂರ್ತಿ ನನ್ನ ಮೇಲೆ ನೆಟ್ಟ ದೃಷ್ಟಿಯಿಂದ ಗಂಭೀರ ಸ್ವರದಲ್ಲಿ ಹೇಳತೊಡಗಿತು: 'ಅರೆ. ನೀನು ಭಾವಮುಖದಲ್ಲಿರು, ಭಾವಮುಖದಲ್ಲಿರು, ಭಾವಮುಖದಲ್ಲಿರು.' ಈ ರೀತಿ ಮೂರು ಬಾರಿ ಹೇಳಿ ಆ ಮೂರ್ತಿಯು ಅದೇ ಮಂಜಿನಲ್ಲಿ ಕರಗಿಹೋಯಿತು. ಹಾಗೆಯೇ ಹೊಗೆಯೂ ಮಾಯವಾಯಿತು. ಆ ದರ್ಶನವಾದ ಮೇಲೆ ನನಗೆ ಸಮಾಧಾನವಾಯಿತು''. ಈ ಘಟನೆಯನ್ನು ಸ್ವಾಮಿ ಪ್ರೇಮಾನಂದರಿಗೆ ಶ್ರೀರಾಮಕೃಷ್ಣರು ಸ್ವತಃ ಹೇಳಿದ್ದರು. ಹಲಧಾರಿಯ ಮಾತಿನಿಂದ ಇನ್ನೊಂದು ದಿನ ಅದೇ ರೀತಿ ಸಂದೇಹ ಉಂಟಾಗಿತ್ತೆಂದು ಅವರು ಹೇಳುತ್ತಾರೆ : ''ಪೂಜೆಗೆ ಕುಳಿತಾಗ ನಾನು ತಾಯಿಯನ್ನು ಅಂಗಲಾಚಿ ಬೇಡಿಕೊಂಡೆ. ತಾಯಿಯು ಆಗ ಕಳಶದ ಪಕ್ಕದಲ್ಲಿ 'ರತಿಯ ತಾಯಿ'ಯ ರೂಪದಲ್ಲಿ ಕಾಣಿಸಿಕೊಂಡು 'ಭಾವಮುಖದಲ್ಲಿರು' ಎಂದು ಆದೇಶವಿತ್ತಿದ್ದಳು''. ಮತ್ತೆ ತೋತಾಪುರಿಯು ಬಂದು ವೇದಾಂತದ ಉಪದೇಶ ಮಾಡಿ ಹೋದ ಮೇಲೆ ಅವರು ಆರು ತಿಂಗಳು ನಿರಂತರವಾಗಿ ನಿರ್ವಿಕಲ್ಪ ಸಮಾಧಿಯಲ್ಲಿ ನಿಮಗ್ನರಾಗಿದ್ದು ಅಂತ್ಯದಲ್ಲಿ ಜಗನ್ಮಾತೆಯ ವಾಣಿ ಕೇಳಿಸಿತು : ''ನೀನು ಭಾವಮುಖದಲ್ಲಿರು.''

18. ಹಲಧಾರಿಯು ದಕ್ಷಿಣೇಶ್ವರದಲ್ಲಿ ಸುಮಾರು ಏಳು ವರ್ಷ ವಾಸಿಸಿದ್ದನು. ಪಿಶಾಚಿಯಂತೆ ವರ್ತಿಸುತ್ತಿದ್ದ ಪೂರ್ಣಜ್ಞಾನಿಯಾದ ಸಾಧು, ಭೈರವೀ ಬ್ರಾಹ್ಮಣೀ, ಜಟಾಧಾರಿ ಮತ್ತು ತೋತಾಪುರಿ–ಇವರುಗಳು ಒಬ್ಬರಾದ ಮೇಲೆ ಒಬ್ಬರು ದಕ್ಷಿಣೇಶ್ವರಕ್ಕೆ ಬಂದುದನ್ನು ಹಲಧಾರಿಯು ಸ್ವತಃ ಕಂಡಿರುವನು. ಹಲಧಾರಿಯು ತೋತಾಪುರಿಯೊಡನೆ ಅಧ್ಯಾತ್ಮ ರಾಮಾಯಣವೇ ಮುಂತಾದ ಶಾಸ್ತ್ರಾಧ್ಯಯನ ಮಾಡುತ್ತಿದ್ದ ಎಂದು ಶ್ರೀರಾಮಕೃಷ್ಣರೇ ಹೇಳುತ್ತಿದ್ದರು. ಹಲಧಾರಿಗೆ ಸಂಬಂಧಿಸಿದ ಮೇಲೆ ಹೇಳಿದ ಘಟನೆಗಳು ಈ ಏಳು ವರ್ಷಗಳ ನಡುವೆ ಬೇರೆ ಬೇರೆ ಸಮಯದಲ್ಲಿ ನಡೆದವುಗಳು. ಅನುಕೂಲಕ್ಕಾಗಿ ಅವನ್ನೆಲ್ಲ ಒಟ್ಟಿಗೆ ಇಲ್ಲಿ ಹೇಳಿರುವೆವು,

19. ಸಾಧನೆಯ ಸಮಯದಲ್ಲಿ ಶ್ರೀರಾಮಕೃಷ್ಣರನ್ನು ಜನಸಾಮಾನ್ಯರು ಹುಚ್ಚರೆಂದು ತಿಳಿದಿದ್ದರೂ ಅವರಿಗೆ ಯಾವ ಬುದ್ಧಿವಿಕಾರವಾಗಲಿ ಅಥವಾ ಮನೋವ್ಯಾಧಿಯಾಗಲಿ ಇರಲಿಲ್ಲ. ಇದುವರೆಗಿನ ಅವರ ಸಾಧಕ ಜೀವನವನ್ನು ಅಧ್ಯಯನ ಮಾಡಿದಾಗ ನಮಗೆ ನಿಃಸಂಶಯವಾಗಿ ತಿಳಿದು ಬರುವ ವಿಷಯ ಇದು. ಭಗವತ್ ಸಾಕ್ಷಾತ್ಕಾರಕ್ಕಾಗಿ ತೀವ್ರ ವ್ಯಾಕುಲತೆಯ ಪ್ರಭಾವದಿಂದ ಅವರು ಜನಸಾಮಾನ್ಯರಿಗೆ ವಿಚಿತ್ರವೆನಿಸುವ ರೀತಿಯಲ್ಲಿ ವರ್ತಿಸುತ್ತಿದ್ದರು. ಅವರ ಹೃದಯದಲ್ಲಿ ವ್ಯಾಕುಲತೆ ಅಗ್ನಿಯಂತೆ ದಹಿಸುತ್ತಿತ್ತು. ಇದರಿಂದಾಗಿ ಸಾಧಾರಣ ಜನರಂತೆ ವ್ಯಾವಹಾರಿಕ ವಿಷಯಗಳಿಗೆ ಮನಸ್ಸನ್ನು ಕೊಡಲು ಅವರಿಗಾಗುತ್ತಿರಲಿಲ್ಲ. ಆದ್ದರಿಂದ ಜನ ಅವರನ್ನು ಹುಚ್ಚ ಎಂದು ಪರಿಗಣಿಸುತ್ತಿದ್ದರು. ಹೃದಯದ ತೀವ್ರ ವೇದನೆಯು ಮಾನವನ ಸಹನ ಶಕ್ತಿಯನ್ನು ಮೀರಿ ಹೋದಾಗ ಯಾರಿಗೆ ತಾನೆ ಸಾಮಾನ್ಯ ಲೋಕ ವ್ಯವಹಾರದಲ್ಲಿ ಎಲ್ಲ

ರಂತೆ ಭಾಗವಹಿಸಲು ಸಾಧ್ಯವಾಗುವುದು ? ಈಗ ಒಂದು ಪ್ರಶ್ನೆ ಏಳಬಹುದು. ಸಹನ ಶಕ್ತಿ ಎಲ್ಲರಿಗೂ ಒಂದೇ ಸಮಾನವಾಗಿ ಇರುವುದಿಲ್ಲ. ಕೆಲವರು ಅಲ್ಪಸುಖದುಃಖ ದಿಂದಲೇ ವಿಚಲಿತರಾಗುತ್ತಾರೆ. ಇನ್ನು ಕೆಲವರು ಎಂಥ ದುಃಖಬಂದರೂ, ಎಂಥ ವಿಪತ್ತು ಒದರೂ ಸಮುದ್ರದಂತೆ ಅಚಲವಾಗಿ ಉಳಿಯುತ್ತಾರೆ. ಆದ್ದರಿಂದ ಶ್ರೀರಾಮಕೃಷ್ಣರ ಸಹನ ಶಕ್ತಿಯ ಪರಿಮಾಣ ಎಷ್ಟಿದ್ದಿರಬಹುದು ? ಇದನ್ನು ತಿಳಿಯು ವುದೆಂತು ? ಅವರ ಜೀವನದ ಬೇರೆ ಘಟನೆಗಳನ್ನೆಲ್ಲ ಪರಿಶೀಲಿಸಿದಾಗ ಅವರಿಗೆ ಅದ್ಭುತ ಸಹನಶಕ್ತಿಯಿತ್ತು ಎಂಬುದು ನಮಗೆ ತಿಳಿದು ಬರುತ್ತದೆ. ಹನ್ನೆರಡು ವರ್ಷಗಳ ದೀರ್ಘ ಕಾಲ ಸರಿಯಾಗಿ ಊಟವಿಲ್ಲದೆ, ನಿದ್ರೆಯಿಲ್ಲದೆ ಸಾಧನೆಯನ್ನು ಮುಂದುವರಿಸಿಕೊಂಡು ಹೋಗುವುದು ಸಾಮಾನ್ಯ ಸಹನಶಕ್ತಿಯಿಂದ ಸಾಧ್ಯವೇ ? ಅಪಾರ ಸಂಪತ್ತು ಎಷ್ಟೋ ಬಾರಿ ಅವರ ಕಾಲಬುಡಕ್ಕೆ ಬಂದು ಬಿದ್ದಾಗಲೂ ಅದು ಭಗವತ್ಸಾಕ್ಷಾತ್ಕಾರಕ್ಕೆ ಅಡ್ಡಿ ಎಂದು ತಿಳಿದು ಅದನ್ನು ತಿರಸ್ಕರಿಸಲಿಲ್ಲವೆ? ಇದು ಸಾಮಾನ್ಯ ಸಹನ ಶಕ್ತಿಯಿಂದ ಸಾಧ್ಯವೆ ? ಹೀಗೆ ಎಷ್ಟೋ ಘಟನೆಗಳು ಗಮನಕ್ಕೆ ಬರುವುವು.

20. ಕಾಮಕಾಂಚನಾಸಕ್ತರಿಗೆ ಮಾತ್ರ ಶ್ರೀರಾಮಕೃಷ್ಣರು ವ್ಯಾಧಿಗ್ರಸ್ತ ರೆಂದು ಅನಿಸುತ್ತಿತ್ತು. ನಿಜವಾಗಿಯೂ ಮಥುರನಾಥನೊಬ್ಬನನ್ನು ಬಿಟ್ಟರೆ, ಅವರ ಮಾನಸಿಕ ಸ್ಥಿತಿಯನ್ನು ಸ್ವಲ್ಪಮಟ್ಟಿಗಾದರೂ ಅರ್ಥಮಾಡಿ ಕೊಳ್ಳುವ ಸಾಮರ್ಥ್ಯ ವುಳ್ಳವರು ಆಗ ದಕ್ಷಿಣೇಶ್ವರದಲ್ಲಿ ಯಾರೂ ಇರಲಿಲ್ಲ. ಕೇನಾರಾಮಭಟ್ಟನು ಶ್ರೀರಾಮ ಕೃಷ್ಣರಿಗೆ ದೀಕ್ಷೆ ಇತ್ತು ಅನಂತರ ಕಾಣಿಸಿಕೊಳ್ಳಲೇ ಇಲ್ಲ. ದೇವಸ್ಥಾನದ ಲೋಭಿ ಅಧಿಕಾರಿಗಳು ಶ್ರೀರಾಮಕೃಷ್ಣರನ್ನು ಯಾವ ರೀತಿ ಕಂಡರು ಎಂಬುದನ್ನು ಒಂದು ಪ್ರಮಾಣವಾಗಿ ಸ್ವೀಕರಿಸಲಾಗುವುದಿಲ್ಲ. ಆದ್ದರಿಂದ ಆಗ ದಕ್ಷಿಣೇಶ್ವರಕ್ಕೆ ಬರುತ್ತಿದ್ದ ಸಿದ್ಧರೂ ಸಾಧಕರೂ ಆದ ಸಾಧುಗಳು ಅವರ ಸ್ಥಿತಿಯ ಬಗ್ಗೆ ಏನು ಹೇಳಿರುವರೊ ಅದರಲ್ಲಿ ನಾವು ವಿಶ್ವಾಸವಿಡಬಹುದು. ಶ್ರೀರಾಮಕೃಷ್ಣರ ಮೂಲಕ ಮತ್ತು ಇತರರ ಮೂಲಕ ನಾವೇನು ಕೇಳಿರುವೆವೊ ಅದರಿಂದ ಅಂಥ ಸಾಧುಗಳು ಅವರನ್ನು ಹುಚ್ಚ ರೆಂದು ತಿಳಿಯುವುದಂತೂ ದೂರದ ಮಾತು, ಅವರ ಬಗ್ಗೆ ಮಹೋನ್ನತ ಅಭಿಪ್ರಾಯ ವುಳ್ಳವರಾಗಿದ್ದರು ಎಂಬುದು ನಮಗೆ ತಿಳಿದು ಬರುತ್ತದೆ.

21. ಶ್ರೀರಾಮಕೃಷ್ಣರು ಭಗವದ್ವ್ಯಾಕುಲತೆಯಿಂದ ದೇಹಬೋಧೆಯೇ ಇಲ್ಲದೆ ಇರುವಂತಹ ಸ್ಥಿತಿಯನ್ನು ಬಿಟ್ಟು ಬೇರೆ ಸಮಯದಲ್ಲಿ ದೇಹಾರೋಗ್ಯದ ವಿಷಯದಲ್ಲಿ ಏನು ಹೇಳಿದರೂ ಅದರಂತೆಯೇ ಅನುಸರಿಸುತ್ತಿದ್ದರು. ಚಿಕಿತ್ಸೆ ಆಗಬೇಕೆಂದು ಹೇಳಿದರೆ ಅದಕ್ಕೆ ಒಪ್ಪುತ್ತಿದ್ದರು. ಕಾಮಾರಪುಕುರದಲ್ಲಿರುವ ಅವರ ತಾಯಿಯ ಹತ್ತಿರ ಕರೆದು ಕೊಂಡು ಹೋಗುವುದಕ್ಕೆ ಸಮ್ಮತಿಸಿದರು. ವಿವಾಹ ಮಾಡಬೇಕೆಂದರೆ ಅದಕ್ಕೂ ಬೇಡವೆನ್ನಲಿಲ್ಲ. ಅವರ ಈ ರೀತಿಯ ವರ್ತನೆಗಳನ್ನು ಹುಚ್ಚರ ವರ್ತನೆಗಳೊಂದಿಗೆ ಹೇಗೆ ಹೋಲಿಸಲು ಸಾಧ್ಯ ?

ಮತ್ತೆ ತಮಗೆ ದಿವ್ಯೋನ್ಮಾದ ಉಂಟಾದಂದಿನಿಂದ ಶ್ರೀರಾಮಕೃಷ್ಣರು ಪ್ರಾಪಂಚಿಕ

ವ್ಯಕ್ತಿಗಳಿಂದ ಮತ್ತು ಪ್ರಾಪಂಚಿಕತೆಗೆ ಸಂಬಂಧಿಸಿದ ವ್ಯವಹಾರಗಳಿಂದ ಸದಾ ದೂರ ವಿರಲು ಪ್ರಯತ್ನಿಸುತ್ತಿದ್ದರು. ಆದರೂ ಭಗವತ್ ಸಂಬಂಧವಾದ ಪೂಜೆ ಸಂಕೀರ್ತನೆ ಇತ್ಯಾದಿಗಳು ಎಲ್ಲಿಯಾದರೂ ನಡೆಯುತ್ತಿದ್ದರೆ ಅದರಲ್ಲಿ ಭಾಗವಹಿಸಲು ಅವರು ಅತ್ಯಂತ ಉತ್ಸುಕರಾಗಿರುತ್ತಿದ್ದರು. ಅವರು ಬಾರಾನಗರದಲ್ಲಿ ದಶಮಹಾ ವಿದ್ಯೆಯ ದೇವಸ್ಥಾನಕ್ಕೆ ಹೋಗುತ್ತಿದ್ದರು. ಮತ್ತೆ ಪ್ರತಿವರ್ಷ ಪಾಣಿಹಾಟಿಯ ಉತ್ಸವದಲ್ಲಿ ಭಾಗವಹಿಸುತ್ತಿದ್ದರು. ಈ ಎಲ್ಲ ಸ್ಥಳಗಳಲ್ಲಿ ವಿದ್ವಾಂಸರಾದ ಸಾಧಕರೊಡನೆ ಅವರು ಸಂಭಾಷಣೆ ನಡೆಸುತ್ತಿದ್ದರು. ಆ ಸಾಧಕರೂ ಶ್ರೀರಾಮಕೃಷ್ಣರಿಗೆ ಉನ್ನತಸ್ಥಾನ ನೀಡು ತ್ತಿದ್ದರೆಂಬುದು ಆ ವಿಷಯದ ಬಗ್ಗೆ ನಮಗೆ ತಿಳಿದಿರುವ ಅಲ್ಪ ಸ್ವಲ್ಪ ಮಾಹಿತಿಯ ಆಧಾರದ ಮೇಲೆ ಹೇಳಬಹುದು.

22. ಇದಕ್ಕೆ ದೃಷ್ಟಾಂತವಾಗಿ ಶ್ರೀರಾಮಕೃಷ್ಣರು ೧೮೫೮ರಲ್ಲಿ ಪಾಣಿಹಾಟಿ ಉತ್ಸವದಲ್ಲಿ ಭಾಗವಹಿಸಿದಾಗ ನಡೆದ ಘಟನೆಯನ್ನು ಇಲ್ಲಿ ಉಲ್ಲೇಖಿಸಬಹುದು. ಉತ್ಸವಾನಂದ ಗೋಸ್ವಾಮಿಯ ಪುತ್ರನಾದ ವೈಷ್ಣವಚರಣನನ್ನು ಅವರು ಅಲ್ಲಿ ಪ್ರಥಮ ಬಾರಿಗೆ ಭೇಟಿಯಾದರು. ಶ್ರೀರಾಮಕೃಷ್ಣರು ಪಾಣಿಹಾಟಿಯ ಮಣಿಮೋಹನ ಸೇನನ ಮನೆಯಲ್ಲಿ ಕುಳಿತಿದ್ದರು. ಆಗ ವೈಷ್ಣವಚರಣನು ಅಲ್ಲಿಗೆ ಬಂದನು. ಅವರನ್ನು ನೋಡಿದ ಕೂಡಲೆ ಇವರು ಆಧ್ಯಾತ್ಮಿಕ ಉಚ್ಚ ಅವಸ್ಥೆಯಲ್ಲಿರುವ ಮಹಾಪುರುಷರೆಂದು ಅವನಿಗೆ ದೃಢವಾಯಿತು. ವೈಷ್ಣವಚರಣನು ಅಂದು ಉತ್ಸವದ ಸಮಯದಲ್ಲಿ ಹೆಚ್ಚು ಸಮಯ ಅವರೊಡನೆ ಕಳೆದ. ಮಂಡಕ್ಕಿ ಮಾವಿನಹಣ್ಣು ಸಿಹಿ ತಿಂಡಿ ಮೊಸರು ಇವು ಗಳನ್ನು ಕೊಂಡುಕೊಂಡು ಅದರ ರುಚಿಕರ ಮಿಶ್ರಣವನ್ನು ದೇವರಿಗೆ ನೈವೇದ್ಯ ಮಾಡಿಸಿ ಪ್ರಸಾದವನ್ನು ಶ್ರೀರಾಮಕೃಷ್ಣರೊಡನೆ ತಿಂದು ಆನಂದಿಸಿದ್ದನು. ಉತ್ಸವದನಂತರ ಕಲಕತ್ತೆಗೆ ಹಿಂದಿರುಗುವಾಗ ಶ್ರೀರಾಮಕೃಷ್ಣರನ್ನು ನೋಡಲು ದಕ್ಷಿಣೇಶ್ವರಕ್ಕೆ ಹೋಗಿದ್ದನು. ಆದರೆ ಅವರು ಇನ್ನೂ ಉತ್ಸವದಿಂದ ಹಿಂದಿರುಗಲಿಲ್ಲವೆಂದು ತಿಳಿದು ತುಂಬ ನಿರಾಸೆಯನ್ನು ವ್ಯಕ್ತಪಡಿಸಿದ್ದನು. ಈ ಘಟನೆಯಾಗಿ ನಾಲ್ಕು ವರ್ಷಗಳನಂತರ ವೈಷ್ಣವಚರಣನು ಶ್ರೀರಾಮಕೃಷ್ಣರನ್ನು ಭೇಟಿಯಾಗಿ ಅವರೊಡನೆ ನಿಕಟ ಸಂಬಂಧ ಬೆಳಸಿದನು. ಈ ವಿಷಯ ಮುಂದೆ ಬರುತ್ತದೆ.*

23. ಈ ನಾಲ್ಕು ವರ್ಷಗಳ ಅವಧಿಯಲ್ಲಿಯೇ ಶ್ರೀರಾಮಕೃಷ್ಣರು ಹೊನ್ನು ಮಣ್ಣು ಎರಡನ್ನೂ ಸಮಾನವಾಗಿ ಕಾಣುವ ಸಾಧನೆ ಮಾಡಿದ್ದರು. ಭಗವತ್ಸಾಕ್ಷಾ ತ್ಕಾರವೇ ಜೀವನದ ಏಕೈಕ ಉದ್ದೇಶವಾಗಿರುವ ವ್ಯಕ್ತಿ ಮಣ್ಣಿನಂತೆಯೇ ಹೊನ್ನಿ ನಿಂದಲೂ ಯಾವ ಪ್ರಯೋಜನವನ್ನೂ ಅಪೇಕ್ಷಿಸುವುದಿಲ್ಲ. ಅವನ ದೃಷ್ಟಿಯಲ್ಲಿ ಹೊನ್ನು ಮಣ್ಣು, ಎರಡರ ಬೆಲೆಯೂ ಒಂದೇ. ಈ ವಿಷಯವನ್ನು ಮನಸ್ಸಿಗೆ ದೃಢ

---

* ಗುರು ಭಾವ-ಉತ್ತರಾರ್ಧ, ಒಂದನೆ ಅಧ್ಯಾಯ

ಪಡಿಸಲು ಅವರು ಹೊನ್ನು ಮಣ್ಣು ಎರಡನ್ನೂ ಕೈಯಲ್ಲಿ ಹಿಡಿದು 'ಹೊನ್ನು-ಮಣ್ಣು ಮಣ್ಣು-ಹೊನ್ನು' ಎಂದು ಹೇಳುತ್ತ ಎರಡನ್ನೂ ಗಂಗೆಗೆ ಎಸೆದಿದ್ದರು. ಸರ್ವ ಭೂತಗಳಲ್ಲಿಯೂ ಭಗವಂತನು ಪ್ರಕಾಶಿಸುತ್ತಿರುವನೆಂಬುದನ್ನು ಮನಸ್ಸಿಗೆ ದೃಢ ಪಡಿಸಲು ದೀನದಲಿತರ ಎಂಜಲನ್ನು ತಿಂದಿದ್ದರು. ತಾವು ಯಾವ ರೀತಿಯಲ್ಲಿಯೂ ಇತರರಿಗೆ ಮೇಲಿನವರಲ್ಲ ಎಂಬ ಭಾವದಿಂದ ಮನಸ್ಸಿನ ಅಭಿಮಾನವನ್ನು ಕಿತ್ತು ಹಾಕಲು ಅವರು ಅಸ್ಪೃಶ್ಯರಂತೆ ಅತ್ಯಂತ ಅಸಹ್ಯವಾದ ಕೊಳಚೆ ಪ್ರದೇಶವನ್ನು ತಮ್ಮ ಸ್ವಹಸ್ತದಿಂದ ಶುಚಿಗೊಳಿಸಿದ್ದರು. ಎಲ್ಲ ವಸ್ತುಗಳೂ ಪಂಚಭೂತಗಳಿಂದ ನಿರ್ಮಿತವಾಗಿರುವುದರಿಂದ ಚಂದನ ಮತ್ತು ಮಲ ಎರಡೂ ಒಂದೇ ಆಗಿರಬೇಕು. ಈ ಭಾವನೆಯನ್ನು ದೃಢಪಡಿಸಿ ತಿರಸ್ಕಾರ ಪುರಸ್ಕಾರಗಳೆರಡನ್ನೂ ತ್ಯಜಿಸಲು ಅವರು ಇತರರ ಮಲವನ್ನು ನಿರ್ವಿಕಾರ ಚಿತ್ತರಾಗಿ ನಾಲಿಗೆಯಿಂದ ಸ್ಪರ್ಶಿಸಿದ್ದರು. ಈ ಎಲ್ಲ ಅಪೂರ್ವ ಸಾಧನೆಗಳನ್ನು ಇದೇ ಅವಧಿಯಲ್ಲಿಯೇ ಮಾಡಿದ್ದರು. ಈ ಎಲ್ಲ ಅದ್ಭುತ ಸಾಧನೆಗಳನ್ನು ನೋಡಿದಾಗ ಎಂಥ ಒಂದು ಅಸಾಧಾರಣ ಆಧ್ಯಾತ್ಮಿಕ ಹಂಬಲ ಅವರ ಮನಸ್ಸನ್ನು ಆವರಿಸಿತ್ತು ಮತ್ತು ಎಂಥ ಒಂದು ಅಲೌಕಿಕ ವಿಶ್ವಾಸದಿಂದ ಸಾಧನ ರಾಜ್ಯವನ್ನು ಅವರು ಪ್ರವೇಶಿಸಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಮತ್ತೆ ಬೇರೆ ಯಾರ ನೆರವಿಲ್ಲದೆ ಕೇವಲ ವ್ಯಾಕುಲತೆಯ ಬಲದಿಂದಲೇ ಆ ಸಮಯದಲ್ಲಿ ಅವರು ಶ್ರೀಜಗನ್ಮಾತೆಯ ಪೂರ್ಣ ದರ್ಶನ ಪಡೆದಿದ್ದರು.

24. ಮನಸ್ಸು ಸಂಪೂರ್ಣ ಸಾಧಕನ ವಶವರ್ತಿಯಾಗಿ ಪವಿತ್ರವಾದಾಗ ಅದೇ ಅವನಿಗೆ ಗುರುವಾಗುವುದು ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಅಂಥ ಶುದ್ಧ ಮನಸ್ಸಿನಲ್ಲಿ ಏಳುವ ಭಾವತರಂಗಗಳು ಅವನನ್ನು ತನ್ನ ಗುರಿಯೆಡೆಗೆ ಶೀಘ್ರವಾಗಿ ಮುಂದುವರಿಯಲು ಪ್ರಚೋದಿಸುವುವು. ಅವನನ್ನು ಮಾರ್ಗದಿಂದ ವಿಮುಖಗೊಳಿಸುವು ದಂತೂ ದೂರದ ಮಾತು. ಆದ್ದರಿಂದ ಹುಟ್ಟಿದಂದಿನಿಂದಲೂ ಶುದ್ಧವಾಗಿದ್ದ ಶ್ರೀರಾಮಕೃಷ್ಣರ ಮನಸ್ಸು ಅವರ ಸಾಧನೆಯ ನಾಲ್ಕು ವರ್ಷಗಳ ಅವಧಿಯಲ್ಲಿ ಅವರಿಗೆ ಗುರುವಾಗಿ ಮಾರ್ಗದರ್ಶನವಿತ್ತು, ಅವರಿಗೆ ಭಗವತ್ ಸಾಕ್ಷಾತ್ಕಾರವಾಗುವಂತೆ ಮಾಡಿತ್ತು. ಅವರೇ ಹೇಳುತ್ತಿದ್ದಂತೆ, ಅದು ಅವರಿಗೆ ಏನು ಮಾಡಬೇಕು, ಏನು ಮಾಡ ಬಾರದು ಎಂಬುದದನ್ನು ತಿಳಿಸಿಕೊಡುವುದಷ್ಟೇ ಅಲ್ಲದೆ ಕೆಲವೊಮ್ಮೆ ಅದು ಸ್ಥೂಲರೂಪ ವನ್ನು ಪಡೆದು ಒಂದು ವ್ಯಕ್ತಿಯಂತೆ ಅವರ ಮುಂದೆ ನಿಂತು ಅವರನ್ನು ಹುರಿದುಂಬಿಸು ತ್ತಿತ್ತು. ಧ್ಯಾನವನ್ನು ಸರಿಯಾಗಿ ಮಾಡುವಂತೆ ಬೆದರಿಸುತ್ತಿತ್ತು. ಏನಾದರೂ ವಿಶೇಷ ಅನುಷ್ಠಾನ ಮಾಡಬೇಕಿದ್ದರೆ ಅದನ್ನೂ ತಿಳಿಸಿಕೊಡುತ್ತಿತ್ತು ಮತ್ತು ಅನುಷ್ಠಾನದ ಲೋಪದೋಷಗಳನ್ನೂ ತಿಳಿಸಿಕೊಡುತ್ತಿತ್ತು. ಆ ಸಮಯದಲ್ಲಿ ಅವರು ಧ್ಯಾನ ಮಾಡು ತ್ತಿರುವಾಗ ತ್ರಿಶೂಲಧಾರಿಯಾದ ಒಬ್ಬ ಸಂನ್ಯಾಸಿಯು ಅವರ ದೇಹದಿಂದ ಹೊರ ಬಂದು ಅವರಿಗೆ ಹೇಳುತ್ತಿದ್ದನು: "ಬೇರೆ ಎಲ್ಲ ಆಲೋಚನೆಗಳನ್ನು ಬಿಟ್ಟು ಕೇವಲ ಇಷ್ಟದೇವತೆಯನ್ನು ಚಿಂತಿಸದಿದ್ದರೆ ಈ ತ್ರಿಶೂಲದಿಂದ ನಿನ್ನ ಎದೆಯನ್ನು ಇರಿಯು

ತ್ತೇನೆ''. ಭೋಗವಾಸನೆಯಿಂದ ಕೂಡಿದ ಪಾಪಪುರುಷನು ಅವರ ದೇಹದಿಂದ ಹೊರ ಬರುತ್ತಿದ್ದಂತೆಯೇ ಈ ಸಂನ್ಯಾಸಿಯೂ ಹೊರಬಂದು ಅವನನ್ನು ಕೊಂದು ಹಾಕಿರುವು ದನ್ನು ಅವರು ಒಮ್ಮೆ ಕಂಡಿದ್ದರು. ದೂರದಲ್ಲಿರುವ ದೇವದೇವಿಯರ ಮೂರ್ತಿಯನ್ನು ನೋಡುವ ಮತ್ತು ಸಂಕೀರ್ತನೆಯನ್ನು ಕೇಳುವ ಆಸೆಯಾಗುತ್ತಿತ್ತು. ಆಗ ಅವರನ್ನೇ ಹೋಲುವ ಉಜ್ವಲಾಕೃತಿಯ ಸಂನ್ಯಾಸಿಯು ಅವರ ದೇಹದಿಂದ ಬರುತ್ತಿದ್ದನು. ಜ್ಯೋತಿರ್ಮಯ ಮಾರ್ಗದಲ್ಲಿ ಅವನು ಅಲ್ಲಿಗೆ ಹೋಗಿ ಅಲ್ಲಿ ಆ ಭಗವದಾನಂದವನ್ನು ಅನುಭವಿಸಿ ಅನಂತರ ಅದೇ ಜ್ಯೋತಿರ್ಮಯ ಮಾರ್ಗದಿಂದ ಹಿಂತಿರುಗಿ ಬಂದು ಮತ್ತೆ ಅವರ ದೇಹವನ್ನು ಪ್ರವೇಶಿಸುತ್ತಿದ್ದನು.

ಸಾಧನೆಯ ಪ್ರಾರಂಭದಿಂದಲೇ ಶ್ರೀರಾಮಕೃಷ್ಣರು ತಮ್ಮ ದೇಹದೊಳಗೆ ಕನ್ನಡಿಯೊಳಗಿನ ಪ್ರತಿಬಿಂಬದಂತೆ ತಮ್ಮಂತೆಯೇ ಇರುವ ಆ ಯುವಕ ಸಂನ್ಯಾಸಿಯನ್ನು ಕಾಣುತ್ತಿದ್ದರು. ಕ್ರಮೇಣ ಎಲ್ಲ ವಿಚಾರಗಳಲ್ಲಿಯೂ ಅವನ ನಿರ್ದೇಶನದಂತೆ ನಡೆಯು ವುದು ಅವರಿಗೆ ಅಭ್ಯಾಸವಾಯಿತು. ಸಾಧಕ ಜೀವನದಲ್ಲಿ ಅವರಿಗಾದ ಅಪೂರ್ವ ಅನು ಭವಗಳನ್ನು ಕುರಿತು ಮಾತನಾಡುತ್ತ ಅವರು ಒಂದು ದಿನ ನಮಗೆ ಹೇಳಿದರು: ''ನನ್ನಂತೆಯೇ ಕಾಣುವ ಓರ್ವ ಸಂನ್ಯಾಸಿ ಯುವಕ ಒಳಗಿನಿಂದ ಹೊರಬಂದು ಎಲ್ಲ ವಿಷಯಗಳಲ್ಲಿಯೂ ನನಗೆ ಉಪದೇಶ ನೀಡುತ್ತಿದ್ದನು. ಅವನು ಆ ರೀತಿ ಹೊರ ಬಂದಾಗ ಕೆಲವೊಮ್ಮೆ ಬಾಹ್ಯಪ್ರಜ್ಞೆ ನನಗೆ ಇರುತ್ತಿತ್ತು, ಮತ್ತೆ ಕೆಲವೊಮ್ಮೆ ನಾನು ಪ್ರಜ್ಞೆ ತಪ್ಪಿ ಜಡವಾಗಿ ಬಿದ್ದು ಬಿಡುತ್ತಿದ್ದೆ, ಕೇವಲ ಅವನ ಕ್ರಿಯೆ ನನಗೆ ಕಾಣಿಸು ತ್ತಿತ್ತು ಮತ್ತು ಅವನ ಮಾತು ಕೇಳಿಸುತ್ತಿತ್ತು. ಅವನ ಬಾಯಿಂದ ನಾನು ಏನೇನು ಕೇಳಿದ್ದೆನೊ ಅದನ್ನೆ ಬ್ರಾಹ್ಮಣಿ ಮತ್ತು ತೋತಾಪುರಿ ಅನಂತರ ಉಪದೇಶಿಸಿದರು. ನಾನು ಏನು ತಿಳಿದಿದ್ದೆನೊ ಅದನ್ನೇ ಅವರುಗಳು ಮತ್ತೆ ನನಗೆ ತಿಳಿಸಿದರು. ಶಾಸ್ತ್ರ ವಿಧಿಗೆ ಮಾನ್ಯತೆ ನೀಡುವುದಕ್ಕಾಗಿಯೇ ಅವರು ಗುರುರೂಪದಲ್ಲಿ ಬಂದಿದ್ದರು ಎಂದು ತೋರುತ್ತದೆ. ಇಲ್ಲದಿದ್ದರೆ ತೋತಾಪುರಿ ಮೊದಲಾದವರನ್ನು ಗುರುರೂಪದಲ್ಲಿ ಪಡೆ ಯುವ ಅವಶ್ಯಕತೆ ಕಂಡು ಬರುವುದಿಲ್ಲ''.

25. ಸಾಧನೆಯ ಈ ನಾಲ್ಕು ವರ್ಷಗಳ ಅವಧಿಯ ಕೊನೆಯಲ್ಲಿ ಶ್ರೀರಾಮ- ಕೃಷ್ಣರು ಕಾಮಾರಪುಕುರಕ್ಕೆ ಹೋಗಿದ್ದಾಗ ಒಂದು ಅಪೂರ್ವ ಅನುಭವವಾಯಿತು ಅವರಿಗೆ. ಕಾಮಾರಪುಕುರದಿಂದ ಶಿಹೊರಿಗೆ ಪಲ್ಲಕ್ಕಿಯಲ್ಲಿ ಹೃದಯನ ಜತೆ ಹೋಗು ತ್ತಿರುವಾಗ ಅವರಿಗೆ ಆ ದರ್ಶನವಾಗಿತ್ತು. ಸುನೀಲ ಗಗನದ ಕೆಳಗೆ ಸುವಿಸ್ತಾರವಾಗಿ ಹರಡಿರುವ ಭೂಪ್ರದೇಶ, ಹಚ್ಚ ಹಸರಿನಿಂದ ನಲಿದಾಡುವ ಧಾನ್ಯದ ಹೊಲ, ಪಕ್ಷಿಗಳ ನಾದದಿಂದ ತುಂಬಿ ಶೀತಲ ಛಾಯೆಯಿಂದ ಕೂಡಿದ ಅಶ್ವತ್ಥ ವಟ ಮುಂತಾದ ವೃಕ್ಷ ಗಳ ಸಾಲು ಮತ್ತು ಸುವಾಸನೆಯ ಪುಷ್ಪಗಳಿಂದ ಶೋಭಿಸುವ ತರುಲತೆಗಳು—ಈ ಎಲ್ಲ ವನ್ನು ನೋಡಿ ಆನಂದಿಸುತ್ತ ಅವರು ಹೋಗುತ್ತಿದ್ದರು. ಆಗ ಅವರಿಗೊಂದು ದರ್ಶನ ವಾಯಿತು. ಅವರ ದೇಹದಿಂದ ಎಳೆಯ ವಯಸ್ಸಿನ ಇಬ್ಬರು ಸುಂದರ ಬಾಲಕರು

ಹೊರಬಂದರು. ಅವರು ಒಮ್ಮೊಮ್ಮೆ ಹೂವು ಮುಂತಾದುವುಗಳನ್ನು ಹುಡುಕುತ್ತ ದೂರ ಹೋಗುತ್ತಿದ್ದರು. ಮತ್ತೆ ಪಲ್ಲಕ್ಕಿಯ ಹತ್ತಿರ ಬರುತ್ತಿದ್ದರು. ಹೀಗೆ ಹಾಸ್ಯ ಮಾಡುತ್ತ, ನಗುತ್ತ, ಮಾತನಾಡುತ್ತ ಅದೇ ದಾರಿಯಲ್ಲಿ ಮುಂದೆ ಹೋಗುತ್ತಿದ್ದರು. ಬಹಳ ಹೊತ್ತು ಹೀಗೆ ಆನಂದದಿಂದ ವಿಹರಿಸುತ್ತ ಇದ್ದು ಅನಂತರ ಮತ್ತೆ ಅವರ ದೇಹವನ್ನು ಪ್ರವೇಶಿಸಿದರು. ಈ ದರ್ಶನವಾಗಿ ಒಂದೂವರೆ ವರ್ಷಗಳ ನಂತರ ಭೈರವೀ ಬ್ರಾಹ್ಮಣಿ ದಕ್ಷಿಣೇಶ್ವರಕ್ಕೆ ಬಂದಳು. ಮಾತಿನ ಸಂದರ್ಭದಲ್ಲಿ ಶ್ರೀರಾಮಕೃಷ್ಣರ ಮೂಲಕ ಈ ಮೇಲಿನ ದರ್ಶನದ ವಿಷಯವನ್ನು ತಿಳಿದು ಆಕೆ ಹೇಳಿದ್ದಳು, "ನೋಡು ನೀನು ಸರಿಯಾಗಿಯೇ ನೋಡಿದೆ ಈ ಬಾರಿ ಚೈತನ್ಯನು ನಿತ್ಯಾನಂದನ ದೇಹದ ಮೂಲಕ ಆವಿರ್ಭವಿಸಿರುವನು. ನಿತ್ಯಾನಂದ ಮತ್ತು ಚೈತನ್ಯ ಈ ಬಾರಿ ಒಟ್ಟಿಗೆ ಬಂದು ನಿನ್ನೊಳಗೆ ನೆಲೆಸಿರುವರು. ಇದರಿಂದಲೇ ನಿನಗೆ ಈ ರೀತಿಯ ದರ್ಶನವಾಯಿತು." ಇದನ್ನು ಹೇಳಿ ಆಕೆ ಚೈತನ್ಯ ಭಾಗವತದಿಂದ ಈ ಕೆಳಗಿನ ಎರಡು ಶ್ಲೋಕಗಳನ್ನು ಉದ್ಧರಿಸಿದಳು : "ಅದ್ವೈತ ಗೋಸ್ವಾಮಿಯನ್ನು ಆಲಂಗಿಸಿಕೊಂಡು ಶ್ರೀಚೈತನ್ಯನು ಮತ್ತೆ ಮತ್ತೆ ಹೇಳಿದ, 'ನನ್ನ ಅದ್ಭುತ ಲೀಲೆಯನ್ನು ಮತ್ತೆ ವ್ಯಕ್ತಪಡಿಸುತ್ತೇನೆ. ಭಗವತ್ ಸಂಕೀರ್ತನೆಯ ಸಮಯದಲ್ಲಿ ನಾನು ಆನಂದರೂಪವನ್ನು ಪಡೆಯುತ್ತೇನೆ.' ಗೌರಾಂಗನು ಇಂದೂ ಲೀಲೆಯಾಡುತ್ತಿರುವನು ಭಾಗ್ಯಶಾಲಿಗಳಿಗೆ ಮಾತ್ರ ಅದು ಕಾಣಿಸುತ್ತದೆ."

ನಾವು ಈ ದರ್ಶನದ ಬಗ್ಗೆ ಅವರನ್ನು ಪ್ರಶ್ನಿಸಿದಾಗ ಅವರೆಂದರು : "ಈ ರೀತಿ ನೋಡಿರುವುದಂತೂ ಸತ್ಯ, ಅದರ ನಿಜವಾದ ಅರ್ಥವೇನು ಎಂಬುದನ್ನು ನಾನು ಹೇಗೆ ಹೇಳಲಿ ?" ಅದು ಏನೇ ಆದರೂ, ತುಂಬ ಪ್ರಾಚೀನ ಕಾಲದಿಂದಲೂ ಭೂಮಿಯ ಮೇಲೆ ಸುಪರಿಚಿತನಾದ ಜೀವನೊಬ್ಬನು ಯಾವುದೋ ವಿಶೇಷ ಕಾರ್ಯಕ್ಕಾಗಿ ತಮ್ಮ ದೇಹ ಮನಸ್ಸನ್ನು ಆಶ್ರಯಿಸಿಕೊಂಡಿರುವನು ಎಂಬುದು ಅವರಿಗೆ ಈ ವೇಳೆಗಾಗಲೇ ಸ್ಪಷ್ಟವಾಗಿತ್ತು. ಹೀಗೆ ಅವರು ತಮ್ಮ ನೈಜ ವ್ಯಕ್ತಿತ್ವದ ಬಗ್ಗೆ ಎಷ್ಟೋ ಕುರುಹು ಗಳನ್ನು ಪಡೆದಿದ್ದರು. ಇವುಗಳಿಂದಾಗಿ ಮುಂದೆ ಅವರು ತಾವು ಅವತಾರಪುರುಷರಲ್ಲಿ ಒಬ್ಬರೆಂದು ದೃಢಪಡಿಸಿಕೊಂಡರು. ಅಯೋಧ್ಯೆಯಲ್ಲಿ ರಾಮನಾಗಿಯೂ, ಬೃಂದಾವನ ದಲ್ಲಿ ಕೃಷ್ಣನಾಗಿಯೂ ಯಾರು ಜನ್ಮವೆತ್ತಿದರೋ ಅವರೆ ಈಗ ಹೊಸಯುಗದಲ್ಲಿ ಹೊಸ ಧರ್ಮವನ್ನು ಪ್ರತಿಷ್ಠಾಪಿಸಲು ಶ್ರೀರಾಮಕೃಷ್ಣರೂಪದಲ್ಲಿ ಅವತರಿಸಿರುವರು— ಎಂಬ ವಿಶ್ವಾಸ ಅವರಿಗುಂಟಾಯಿತು. ಅವರು ಅನೇಕ ಬಾರಿ ಹೀಗೆ ಹೇಳಿದ್ದನ್ನು ನಾವು ಕೇಳಿದ್ದೇವೆ : "ಯಾರು ರಾಮನೋ, ಯಾರು ಕೃಷ್ಣನೋ ಅವನೇ (ತಮ್ಮ ದೇಹವನ್ನು ನಿರ್ದೇಶಿಸಿ) ಈ ಕೋಶದಲ್ಲಿ ಆವಿರ್ಭವಿಸಿರುವನು. ರಾಜನು ಮಾರುವೇಷದಲ್ಲಿ ನಗರ ದಲ್ಲಿ ಸುತ್ತಾಡಲು ಹೋಗುವಂತೆ ಈ ಬಾರಿ ಗುಪ್ತವಾಗಿ ಅವನು ಭೂಮಿಗಿಳಿದು ಬಂದಿರುವನು".

ಮೇಲೆ ಪ್ರಸ್ತಾಪಿಸಿದ ದರ್ಶನದ ಸತ್ಯತೆಯನ್ನು ನಿರ್ಣಯಿಸುವಾಗ ಶ್ರೀರಾಮ

ಕೃಷ್ಣರು ಹೇಳಿದ ಮಾತುಗಳಲ್ಲಿ ವಿಶ್ವಾಸವಿಡುವುದಲ್ಲದೆ ಬೇರೆ ಯಾವ ಉಪಾಯವೂ ನಮಗೆ ಕಂಡುಬರುವುದಿಲ್ಲ. ಈ ದರ್ಶನವನ್ನು ಬಿಟ್ಟು ಬೇರೆ ಎಲ್ಲ ದರ್ಶನಗಳ ಸತ್ಯತೆಯ ವಿಷಯವಾಗಿ ನಾವು ದೃಢ ನಿರ್ಣಯಕ್ಕೆ ಬರಬಹುದು. ಏಕೆಂದರೆ ಇಂಥ ದರ್ಶನಗಳು ಅವರಿಗೆ ನಾವು ಅವರೆಡೆಗೆ ಹೋಗುತ್ತಿರುವಾಗಲೂ ಪ್ರತಿನಿತ್ಯ ಆಗುತ್ತಿದ್ದುವು. ಅವರ ಇಂಗ್ಲೀಷ್ ಕಲಿತ ಸುಶಿಕ್ಷಿತ ಶಿಷ್ಯರು ಇವುಗಳನ್ನೆಲ್ಲ ಪರೀಕ್ಷಿಸಲು ಹೋಗಿ ಸೋತುಹೋಗಿ ಕೊಂಡಿರುವರು. ಈ ವಿಷಯ ಮುಂದೆ ಬರುವುದಾದರೂ* ಓದುಗರ ತೃಪ್ತಿಗಾಗಿ ಇಲ್ಲಿ ಒಂದು ದೃಷ್ಟಾಂತವನ್ನು ಪ್ರಸ್ತಾಪಿಸುತ್ತೇವೆ.

26. ಕ್ರಿ. ಶ. ೧೮೮೫ರ ಕೊನೆಯ ಭಾಗ. ದುರ್ಗಾಪೂಜೆಯ ಸಮಯ. ಕಲಕತ್ತೆಯಲ್ಲಿ ಆಬಾಲವೃದ್ಧರೆಲ್ಲರೂ ಆ ಉತ್ಸವದ ಆನಂದದಲ್ಲಿ ಮಗ್ನರಾಗಿದ್ದಾರೆ. ಶ್ರೀರಾಮಕೃಷ್ಣರ ಶಿಷ್ಯರ ಅಂತರವನ್ನೂ ಆ ಆನಂದ ಪ್ರವಾಹವು ತಾಕಿದರೂ ಅದನ್ನು ಹೊರಗೆ ವ್ಯಕ್ತಪಡಿಸುವುದಕ್ಕೆ ಒಂದು ದೊಡ್ಡ ತಡೆ ಇತ್ತು. ಯಾರನ್ನು ಕೇಂದ್ರವಾಗಿಟ್ಟು ಕೊಂಡು ಅವರು ಆನಂದೋತ್ಸವವನ್ನು ಆಚರಿಸಬೇಕಿತ್ತೊ, ಆ ಶ್ರೀರಾಮಕೃಷ್ಣರೇ ಗಂಟಲು ಬೇನೆಯಿಂದ ನರಳುತ್ತಿದ್ದರು. ಆಗ ಅವರು ಕಲಕತ್ತೆಯ ಶ್ಯಾಮಪುಕುರದಲ್ಲಿ ಒಂದು ಬಾಡಿಗೆಯ ಮನೆಯಲ್ಲಿ ಚಿಕಿತ್ಸೆಗಾಗಿ ನೆಲೆಸಿದ್ದರು. ಕಲಕತ್ತೆಯ ಸುಪ್ರಸಿದ್ಧ ವೈದ್ಯನಾದ ಮಹೇಂದ್ರಲಾಲ ಸರ್ಕಾರ್ ಅವರ ಚಿಕಿತ್ಸೆ ನಡೆಸುತ್ತಿದ್ದ. ಆದರೆ ವ್ಯಾಧಿ ಉಪಶಮವಾಗುವ ಬದಲು ವೃದ್ಧಿಯೇ ಆಗುತ್ತಿತ್ತು. ಗೃಹಸ್ಥ ಭಕ್ತರು ಬೆಳಗ್ಗೆ ಮತ್ತು ಸಂಜೆ ಬಂದು ಎಲ್ಲ ವ್ಯವಸ್ಥೆ ಮಾಡಿಹೋಗುತ್ತಿದ್ದರು. ವಿದ್ಯಾರ್ಥಿಗಳಾಗಿದ್ದ ಯುವಕ ಶಿಷ್ಯರುಗಳಲ್ಲಿ ಕೆಲವರು ಊಟಕ್ಕೆ ಮಾತ್ರ ತಮ್ಮ ಮನೆಗಳಿಗೆ ಹೋಗಿ ಉಳಿದ ಸಮಯ ವನ್ನು ಶ್ರೀರಾಮಕೃಷ್ಣರ ಸೇವೆ ಮಾಡುತ್ತ ಅವರೊಡನೆ ಕಳೆಯುತ್ತಿದ್ದರು. ಕೆಲವೊಮ್ಮೆ ಆವಶ್ಯಕವಾದರೆ ಊಟಕ್ಕೂ ಮನೆಗೆ ಹೋಗದೆ ಇಪ್ಪತ್ತನಾಲ್ಕು ಗಂಟೆಯೂ ಅಲ್ಲಿಯೇ ಇರುತ್ತಿದ್ದರು.

ಹೆಚ್ಚು ಮಾತನಾಡಿದರೆ ಮತ್ತು ಆಗಾಗ ಸಮಾಧಿಸ್ಥರಾಗುತ್ತಿದ್ದರೆ ರಕ್ತವು ಮೇಲ್ಮುಖವಾಗಿ ಹರಿದು ಹುಣ್ಣಿರುವ ಜಾಗದಲ್ಲಿ ಒತ್ತಡ ಜಾಸ್ತಿಯಾಗುವುದರಿಂದ ರೋಗ ವಾಸಿಯಾಗುವುದು ಅಸಾಧ್ಯ. ಆದ್ದರಿಂದ ವೈದ್ಯರು ಈ ಎರಡರ ವಿಚಾರದಲ್ಲಿ ತುಂಬ ಎಚ್ಚರಿಕೆಯಿಂದಿರಬೇಕೆಂದು ಹೇಳಿದ್ದರು. ಇದಕ್ಕನುಗುಣವಾಗಿ ನಡೆಯಲು ಶ್ರೀರಾಮಕೃಷ್ಣರು ಪ್ರಯತ್ನಿಸುತ್ತಿದ್ದರು. ಆದರೆ ಎಷ್ಟೊ ವೇಳೆ ನಿಯಮವನ್ನು ವ್ಯತಿ ಕ್ರಮಿಸುತ್ತಿದ್ದರು. ಏಕೆಂದರೆ ಅವರ ಪಾಲಿಗೆ ಈ ದೇಹ ಕೇವಲ ಒಂದು ಎಲುಬು ಮಾಂಸದ ಹಂದರವಾಗಿತ್ತು. ಅವರು ತಮ್ಮ ಮನಸ್ಸನ್ನು ಎಂದೋ ಅದರಿಂದ ನಿವೃತ್ತ ಗೊಳಿಸಿದ್ದರು. ಹಾಗಿರುವಾಗ ಸಾಧಾರಣ ಮನುಷ್ಯರಂತೆ ದೇಹ ರಕ್ಷಣೆಯ ವಿಷಯದಲ್ಲಿ ಅಷ್ಟೊಂದು ಎಚ್ಚರಿಕೆ ವಹಿಸುವುದು ಅವರಿಗೆ ಹೇಗೆ ಸಾಧ್ಯವಾದೀತು? ಭಗವದ್

---

* ಗುರುಭಾವ, ಉತ್ತರಾರ್ಧ ನಾಲ್ಕನೆಯ ಅಧ್ಯಾಯ

ವಿಷಯ ಬಂದಕೂಡಲೇ ಅವರು ತಮ್ಮ ಶರೀರದ ವಿಚಾರವನ್ನು ಮರೆತು ಅದರಲ್ಲಿ ಭಾಗವಹಿಸಿ ಮತ್ತೆ ಮತ್ತೆ ಸಮಾಧಿಸ್ಥರಾಗುತ್ತಿದ್ದರು. ಹಿಂದೆ ಅವರ ದರ್ಶನವನ್ನು ಪಡೆಯದ ಎಷ್ಟೊ ವ್ಯಕ್ತಿಗಳು ಬರುತ್ತಿದ್ದರು. ಅವರ ಹಂಬಲವನ್ನು ಕಂಡು ಸುಮ್ಮ ನಿರಲಾಗದೆ ಅವರಿಗೆ ಮೃದು ಸ್ವರದಲ್ಲಿ ಸಾಧನೆಯ ಬಗ್ಗೆ ಉಪದೇಶ ನೀಡುತ್ತಿದ್ದರು. ಈ ಕಾರ್ಯದಲ್ಲಿ ಅವರಿಗಿದ್ದ ಆನಂದ ಉತ್ಸಾಹವನ್ನು ನೋಡಿ ಭಕ್ತರನೇಕರು ಅವರ ವ್ಯಾಧಿಯನ್ನು ಅಷ್ಟೊಂದು ಗಂಭೀರವಾಗಿ ಸ್ವೀಕರಿಸಲಿಲ್ಲ. ಹೊಸದಾಗಿ ಬಂದ ವ್ಯಕ್ತಿಗಳ ಮೇಲೆ ಕೃಪೆದೋರಲು ಮತ್ತು ಅನೇಕರಿಗೆ ಧರ್ಮೋಪದೇಶ ಮಾಡಲು ಶ್ರೀರಾಮಕೃಷ್ಣರು ತಮ್ಮ ಸ್ವಂತ ಇಚ್ಛೆಯಿಂದ ಖಾಯಿಲೆಯನ್ನು ಸ್ವಲ್ಪ ಕಾಲದ ಮಟ್ಟಿಗೆ ಆರೋಪಿಸಿಕೊಂಡಿರುವರು—ಎಂದು ಚಿಂತಿಸುವವರೂ ಇದ್ದರು. ಮನುಷ್ಯನ ಕಲ್ಪನೆಗೆ ಮಿತಿಯುಂಟೇ !

ಡಾಕ್ಟರ್ ಕೆಲವುದಿನ ಬೆಳಗ್ಗೆ, ಮತ್ತೆ ಕೆಲವು ದಿನ ಮಧ್ಯಾಹ್ನ ಬರುತ್ತಿದ್ದರು. ಅವರನ್ನು ಪರೀಕ್ಷಿಸಿಯಾದ ಮೇಲೆ ಅವರ ಭಗವದಾಲಾಪವನ್ನು ಕೇಳುತ್ತ ಮುಗ್ಧರಾಗಿ ಕುಳಿತು ಬಿಡುತ್ತಿದ್ದರು. ಕೆಲವೊಮ್ಮೆ ಎರಡು ಮೂರು ಗಂಟೆಗಳಾದರೂ ಮೇಲೇಳುತ್ತಲೇ ಇರಲಿಲ್ಲ. ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಕೇಳುತ್ತ ಅವರಿಂದ ಅದ್ಭುತ ಸಮಾಧಾನವನ್ನು ಪಡೆಯುತ್ತಿದ್ದರು. ಹೀಗೆ ಬಹಳ ಹೊತ್ತು ಕಳೆದ ಮೇಲೆ ಕೆಲವೊಮ್ಮೆ ಡಾಕ್ಟರ್ ಪಶ್ಚಾತ್ತಾಪದಿಂದ ಹೇಳುತ್ತಿದ್ದರು. "ಇಂದು ನೀವು ಬಹಳ ಹೊತ್ತು ಮಾತನಾಡುವಂತೆ ಮಾಡಿದೆ. ನಾನು ಹಾಗೆ ಮಾಡಬಾರದಿತ್ತು. ಆಗಲಿ, ಇಡೀ ದಿನ ಇನ್ನಾರ ಹತ್ತಿರವೂ ಮಾತನಾಡಬೇಡಿ. ಆಗ ಏನೂ ತೊಂದರೆಯಾಗುವುದಿಲ್ಲ. ನಿಮ್ಮ ಮಾತಿನಲ್ಲಿ ಏನೊ ಆಕರ್ಷಣೆ ಇದೆ. ನೋಡಿ, ನಿಮ್ಮ ಮಾತನ್ನು ಕೇಳುತ್ತಾ ನನ್ನ ಕೆಲಸವನ್ನೆಲ್ಲ ಮರೆತು ಇಲ್ಲಿಯೇ ಕುಳಿತುಬಿಟ್ಟಿದ್ದೇನೆ. ಮೇಲೇಳಲೇ ಮನಸ್ಸಾಗುತ್ತಿಲ್ಲ. ಹೇಗೆ ಸಮಯ ಕಳೆದುಹೋಗುವುದೊ ಗೊತ್ತೇ ಆಗುತ್ತಿಲ್ಲ ! ಅದು ಏನೇ ಆಗಲಿ, ಬೇರೆ ಯಾರ ಹತ್ತಿರವೂ ಈ ರೀತಿ ಬಹಳ ಹೊತ್ತು ಮಾತನಾಡಬೇಡಿ. ಕೇವಲ ನಾನು ಬಂದಾಗ ಮಾತ್ರ ಮಾತನಾಡಬೇಕು. ಅದರಿಂದ ದೋಷವಿಲ್ಲ" (ಡಾಕ್ಟರ್ ಮತ್ತು ಎಲ್ಲ ಭಕ್ತರು ನಗುತ್ತಾರೆ).

ಸುರೇಂದ್ರನಾಥ ಮಿತ್ರ ಶ್ರೀರಾಮಕೃಷ್ಣರ ಪರಮ ಭಕ್ತ. ಅವರು ಅವನನ್ನು ಸುರೇಶ ಮಿತ್ರ ಎಂದು ಕರೆಯುತ್ತಿದ್ದರು. ಸಿಮುಲಾದಲ್ಲಿರುವ ಅವನ ಮನೆಯಲ್ಲಿ ಈ ವರ್ಷ ದುರ್ಗೋತ್ಸವ ನಡೆಯುವುದಿತ್ತು. ಹಿಂದೆ ಅವನ ಮನೆಯಲ್ಲಿ ಪ್ರತಿವರ್ಷ ಪೂಜೆ ನಡೆಯುತ್ತಿತ್ತು. ಆದರೆ ಒಂದು ವರ್ಷ ಏನೋ ವಿಘ್ನವುಂಟಾದುದರಿಂದ ಆ ವರ್ಷದಿಂದ ಪೂಜೆ ನಿಂತು ಹೋಗಿತ್ತು. ಮತ್ತೆ ಆ ಕುಟುಂಬದಲ್ಲಿ ಯಾರಿಗೂ ಪೂಜೆ ಪ್ರಾರಂಭಿಸುವ ಧೈರ್ಯವಿರಲಿಲ್ಲ. ಯಾರಾದರೂ ಪೂಜೆ ಮಾಡಲು ಪ್ರಯತ್ನಪಟ್ಟರೆ ಇತರರು ಆಕ್ಷೇಪಣೆ ಎತ್ತುತ್ತಿದ್ದರು. ಸುರೇಂದ್ರನಾಥನು ಶ್ರೀರಾಮಕೃಷ್ಣರ ಶಕ್ತಿ ತನ್ನ ಹಿಂದೆ ಇರುವುದರಿಂದ ಯಾವ ದೈವವಿಘ್ನವೂ ಉಂಟಾಗುವುದಿಲ್ಲವೆಂದು ದೃಢವಾಗಿ

ನಂಬಿದ್ದ. ಮತ್ತೆ ಒಮ್ಮೆ ಅವನು ಮನಸ್ಸಿನಲ್ಲಿ ಸಂಕಲ್ಪ ಮಾಡಿದರೆ ಯಾರ ಮಾತಿಗೂ ಬಗ್ಗುವವನಲ್ಲ. ಮನೆಯವರೆಲ್ಲ ಎಷ್ಟೇ ಹೇಳಿದರೂ ಅವನು ಈ ವರ್ಷ ಪೂಜೆ ಮಾಡುವ ನಿರ್ಣಯವನ್ನು ಬಿಟ್ಟುಕೊಡಲೇ ಇಲ್ಲ ಅವನು ಶ್ರೀರಾಮಕೃಷ್ಣರಿಗೆ ತಿಳಿಸಿ ಎಲ್ಲ ಖರ್ಚನ್ನು ತಾನೇ ವಹಿಸಿಕೊಂಡು ಶ್ರೀಜಗನ್ಮಾತೆಯನ್ನು ಮನೆಗೆ ಕರೆದನು. ದೇಹಸೌಖ್ಯವಿಲ್ಲದಿದ್ದುದರಿಂದ ಶ್ರೀರಾಮಕೃಷ್ಣರಿಗೆ ಬರುವುದಕ್ಕೆ ಆಗುವುದಿಲ್ಲವಲ್ಲ ಎಂಬುದೊಂದೇ ಅವನಿಗೆ ದುಃಖದ ವಿಷಯ. ಪೂಜೆಗೆ ಕೆಲವೇ ದಿನಗಳ ಹಿಂದೆ ಮನೆಯಲ್ಲಿ ಒಂದಿಬ್ಬರಿಗೆ ಕಾಯಿಲೆ ಆಗಿದ್ದುದರಿಂದ ಅವನೇ ಅದಕ್ಕೆ ಜವಾಬ್ದಾರನೆಂದು ಮನೆಯವರೆಲ್ಲ ಅವನನ್ನು ದೂಷಿಸಿದರು. ಇದಾವುದರಿಂದಲೂ ವಿಚಲಿತನಾಗದೆ ಪೂಜೆಯನ್ನು ಪ್ರಾರಂಭಿಸಿದ. ಶ್ರೀರಾಮಕೃಷ್ಣರ ಭಕ್ತರಿಗೆಲ್ಲ ಆಮಂತ್ರಣ ನೀಡಿದ.

ಸಪ್ತಮಿಯ ಪೂಜೆ ಮುಗಿದು ಇಂದು ಅಷ್ಟಮಿಯ ಪೂಜೆ ನಡೆಯಬೇಕು. ಶ್ಯಾಮಪುಕುರದ ಶ್ರೀರಾಮಕೃಷ್ಣರು ವಾಸಿಸುತ್ತಿದ್ದ ಮನೆಯಲ್ಲಿ ಅನೇಕ ಭಕ್ತರು ನೆರೆದಿದ್ದಾರೆ, ಭಗವದಾಲಾಪ ಭಜನೆ ಮುಂತಾದವುಗಳಲ್ಲಿ ಆನಂದ ಪಡುತ್ತಿದ್ದಾರೆ. ಮಧ್ಯಾಹ್ನ ನಾಲ್ಕು ಗಂಟೆಯ ಹೊತ್ತಿಗೆ ಡಾಕ್ಟರ್ ಬಂದರು. ಸ್ವಲ್ಪ ಹೊತ್ತಿನನಂತರ ನರೇಂದ್ರನು (ಸ್ವಾಮಿ ವಿವೇಕಾನಂದ) ಭಜನೆ ಪ್ರಾರಂಭಿಸಿದ ಅವನ ದಿವ್ಯಗಾನವನ್ನು ಕೇಳಿ ಎಲ್ಲರೂ ಪ್ರೇಮಮರೆತರು. ಶ್ರೀರಾಮಕೃಷ್ಣರು ಸಮೀಪದಲ್ಲಿ ಕುಳಿತಿದ್ದ ಡಾಕ್ಟರಿಗೆ ಹಾಡಿನ ಅರ್ಥವನ್ನು ಮೆಲುಧ್ವನಿಯಲ್ಲಿ ವಿವರಿಸಿ ಹೇಳುತ್ತಿದ್ದರು. ಮತ್ತು ಆಗಾಗ ಸ್ವಲ್ಪ ಕ್ಷಣದ ಮಟ್ಟಿಗೆ ಸಮಾಧಿಸ್ಥರಾಗುತ್ತಿದ್ದರು. ಭಕ್ತರಲ್ಲಿಯೂ ಕೆಲವರು ಭಾವಾವೇಶದಲ್ಲಿ ಬಾಹ್ಯ ಜ್ಞಾನವನ್ನು ಕಳೆದುಕೊಳ್ಳುತ್ತಿದ್ದರು.

ಹೀಗೆ ಆನಂದ ಪ್ರವಾಹದಿಂದ ಕೊಠಡಿಯು ತುಂಬಿಹೋಗಿತ್ತು. ನೋಡುತ್ತಿದ್ದಂತೆಯೇ ಸಂಜೆ ಏಳು ಗಂಟೆಯಾಯಿತು. ಡಾಕ್ಟರಿಗೆ ಈಗ ಸಮಯದ ಅರಿವಾಯಿತು. ನರೇಂದ್ರನನ್ನು ಪುತ್ರನಂತೆ ಪ್ರೀತಿಯಿಂದ ಆಲಂಗಿಸಿದರು. ಅನಂತರ ಶ್ರೀರಾಮಕೃಷ್ಣರಿಂದ ಬೀಳ್ಕೊಂಡು ಮೇಲೆದ್ದರು. ಶ್ರೀರಾಮಕೃಷ್ಣರೂ ನಗುನಗುತ್ತ ಮೇಲೇಳುತ್ತಿದ್ದಂತೆಯೇ ಗಂಭೀರ ಸಮಾಧಿಯಲ್ಲಿ ಮುಳುಗಿದರು. ಭಕ್ತರೆಲ್ಲ ಪಿಸಿಪಿಸಿ ಮಾತನಾಡಿಕೊಳ್ಳತೊಡಗಿದರು: ''ಈಗ ಸಂಧೀಪೂಜೆ ತಾನೆ, ಆದರಿಂದಾಗಿಯೇ ಅವರು ಸಮಾಧಿಸ್ಥರಾಗಿದ್ದಾರೆ. ಸಂಧಿಕ್ಷಣದ ವಿಷಯವನ್ನೇ ತಿಳಿಯದೆ ಆ ಸಮಯದಲ್ಲಿ ದಿವ್ಯಾವೇಶದಲ್ಲಿ ಸಮಾಧಿಸ್ಥರಾಗುವುದು ಸಾಮಾನ್ಯ ವಿಷಯವೇನಲ್ಲ!'' ಸುಮಾರು ಅರ್ಧ ಗಂಟೆಯ ನಂತರ ಅವರ ಸಮಾಧಿ ಭಂಗವಾಯಿತು ಮತ್ತು ಡಾಕ್ಟರೂ ಬೀಳ್ಕೊಂಡು ಹೊರಟು ಹೋದರು.

ಶ್ರೀರಾಮಕೃಷ್ಣರು ಈಗ ಸಮಾಧಿಯಲ್ಲಿ ತಾವು ಏನು ಕಂಡರೊ ಅದನ್ನು ಭಕ್ತರಿಗೆ ವಿವರಿಸತೊಡಗಿದರು. ''ಇಲ್ಲಿಂದ ಸುರೇಂದ್ರನ ಮನೆಯವರೆಗೆ ಒಂದು ಜ್ಯೋತಿಯ ದಾರಿ ಸೃಷ್ಟಿಯಾಯಿತು. ಅವನ ಭಕ್ತಿಗೆ ತಾಯಿಯು ಪ್ರತಿಮೆಯಲ್ಲಿ ಆವಿರ್ಭವಿಸಿರುದನ್ನು ಕಂಡೆ. ಮೂರನೆಯ ಕಣ್ಣಿನಿಂದ ಜ್ಯೋತಿಯ ಕಿರಣ ಹೊರಬರು

ತ್ತಿದೆ. ಮುಂದಿನ ವರಾಂಡದಲ್ಲಿ ದೀಪದ ಮಾಲೆ ಉರಿಯುತ್ತಿತ್ತು. ಸುರೇಂದ್ರನು ತಾಯಿಯ ಮುಂದೆ ಕುಳಿತು ವ್ಯಾಕುಲತೆಯಿಂದ ಅಳುತ್ತಿದ್ದಾನೆ. ನೀವೆಲ್ಲ ಅವನ ಮನೆಗೆ ಈಗಲೇ ಹೋಗಿ. ನಿಮ್ಮನ್ನೆಲ್ಲ ನೋಡಿದಾಗ ಅವನಿಗೆ ಎಷ್ಟೋ ಸಮಾಧಾನವಾಗು ತ್ತದೆ''

ಅನಂತರ ನರೇಂದ್ರಾದಿ ಭಕ್ತರೆಲ್ಲ ಶ್ರೀರಾಮಕೃಷ್ಣರಿಗೆ ನಮಸ್ಕರಿಸಿ ಸುರೇಂದ್ರ ನಾಥನ ಮನೆಗೆ ಹೊರಟರು. ಅಲ್ಲಿ ಅವನನ್ನು ವಿಚಾರಿಸಿದಾಗ ಅವರಿಗೆ ತಿಳಿದುಬಂತು– ಶ್ರೀರಾಮಕೃಷ್ಣರು ಹೇಳಿದಂತೆಯೇ ವರಾಂಡದಲ್ಲಿ ದೀಪಮಾಲೆ ಉರಿಯುತ್ತಿತ್ತು. ಅಲ್ಲಿ ಶ್ರೀರಾಮಕೃಷ್ಣರು ಸಮಾಧಿಸ್ಥರಾದ ಸಮಯದಲ್ಲಿಯೇ ಸುರೇಂದ್ರನು ''ಮಾ, ಮಾ'' ಎನ್ನುತ್ತ ವ್ಯಾಕುಲತೆಯ ಆವೇಶದಲ್ಲಿ ಸುಮಾರು ಒಂದು ಗಂಟೆ ರೋದಿಸಿದ್ದನು. ಶ್ರೀರಾಮಕೃಷ್ಣರು ಸಮಾಧಿಯಲ್ಲಿ ಕಂಡ ದರ್ಶನ ಹೀಗೆ ಬಾಹ್ಯ ಘಟನೆಯೊಂದಿಗೆ ಹೊಂದಿಕೆಯಾದುದನ್ನು ನೋಡಿ ಭಕ್ತರಿಗೆಲ್ಲ ಆಶ್ಚರ್ಯವಾಯಿತು.

27. ಅಖಂಡ ಬ್ರಹ್ಮಚರ್ಯದ ಫಲವಾಗಿ ಉಂಟಾದ ಬುದ್ಧಿವಿಕಾರವೇ ಆಧ್ಯಾತ್ಮಿಕ ವ್ಯಾಕುಲತೆಯ ರೂಪದಲ್ಲಿ ವ್ಯಕ್ತವಾಗುತ್ತಿದೆ ಎಂದು ಇದೇ ಸಂದರ್ಭ ದಲ್ಲಿಯೇ ರಾಣಿ ರಾಸಮಣಿ ಮತ್ತು ಅವಳ ಅಳಿಯ ಮಥುರನಾಥ ಭಾವಿಸಿದ್ದರು. ಅವರ ಬ್ರಹ್ಮಚರ್ಯ ಭಂಗವಾದರೆ ಅವರ ದೇಹಾರೋಗ್ಯ ಸುಧಾರಿಸಬಹುದೆಂದು ತಿಳಿದು ಅವರನ್ನು ಪ್ರಲೋಭನೆಗೆ ಒಳಪಡಿಸಲು ಪ್ರಯತ್ನಿಸಿದರು. ಲಛ್ಮೀಬಾಯಿ ಮುಂತಾದ ವೇಶ್ಯಾಸ್ತ್ರೀಯರನ್ನು ಈ ಕಾರ್ಯದಲ್ಲಿ ತೊಡಗಿಸಿದರು. ಅವರು ಒಮ್ಮೆ ದಕ್ಷಿಣೇಶ್ವರದಲ್ಲಿಯೂ, ಮತ್ತೊಮ್ಮೆ ಕಲಕತ್ತೆಯ ಒಂದು ಮನೆಯಲ್ಲಿಯೂ ಅವರನ್ನು ಪ್ರಲೋಭಿಸಲು ಪ್ರಯತ್ನಿಸಿ ವಿಫಲರಾದರು. ಶ್ರೀರಾಮಕೃಷ್ಣರು ಹೇಳುತ್ತಿದ್ದರು, ಆ ಎಲ್ಲ ಸ್ತ್ರೀಯರಲ್ಲಿ ಅವರು ಶ್ರೀಜಗನ್ಮಾತೆಯನ್ನೇ ಕಂಡು ''ಮಾ, ಮಾ'' ಎನ್ನುತ್ತ ಬಾಹ್ಯಜ್ಞಾನವನ್ನು ಕಳೆದುಕೊಂಡರಂತೆ ಮತ್ತು ಅವರ ಇಂದ್ರಿಯ ಸಂಕುಚಿತವಾಗಿ ಕೂರ್ಮಾಂಗದಂತೆ ಶರೀರದ ಒಳಗೆ ಪ್ರವೇಶಿಸಿತಂತೆ. ಆ ಸ್ತ್ರೀಯರು ಬಾಲಕ ಸಹಜ ವರ್ತನೆಯನ್ನು ಕಂಡು ಮುಗ್ಧರಾಗಿ ಅವರಲ್ಲಿ ವಾತ್ಸಲ್ಯ ಭಾವ ಜಾಗ್ರತವಾಯಿತು. ಅನಂತರ ತಾವು ಅವರ ಬ್ರಹ್ಮಚರ್ಯವನ್ನು ಕೆಡಿಸಲು ಪ್ರಯತ್ನಿಸಿ ಅಪರಾಧ ಮಾಡಿದೆ ವೆಂದು ತಿಳಿದು ಅವರ ಕ್ಷಮೆಯನ್ನುಯಾಚಿಸುತ್ತ ಮತ್ತೆ ಮತ್ತೆ ಅವರಿಗೆ ನಮಸ್ಕರಿಸಿ ಹೊರಟು ಹೋದರು.

ಒಂಬತ್ತನೆಯ ಅಧ್ಯಾಯ

ವಿವಾಹ ಮತ್ತು ದಕ್ಷಿಣೇಶ್ವರಕ್ಕೆ ಪುನರಾಗಮನ

1. ಶ್ರೀರಾಮಕೃಷ್ಣರು ಕಾಮಾರಪುಕುರಕ್ಕೆ ಹೋದುದು 2. ಅವರಿಗೆ ಭೂತ ಹಿಡಿದಿರಬಹುದೆಂದು ಜನರು ಭಾವಿಸಿದರು 3. ಮಂತ್ರವಾದಿಯಿಂದ ಭೂತೋಚ್ಚಾಟನೆ 4. ಶ್ರೀರಾಮಕೃಷ್ಣರು ಸಾಮಾನ್ಯ ಸ್ಥಿತಿಯಲ್ಲಿದ್ದರು 5. ಅವರ ಯೋಗಶಕ್ತಿಯ ನಿದರ್ಶನ 6. ವಿವಾಹ ಸಂಕಲ್ಪ 7. ಶ್ರೀರಾಮಕೃಷ್ಣರು ವಿವಾಹಕ್ಕೆ ಒಪ್ಪಿದುದು 8. ಅವರೇ ತಮ್ಮ ಪತ್ನಿಯನ್ನು ಆರಿಸಿಕೊಂಡರು 9. ವಿವಾಹ ಮಹೋತ್ಸವ 10. ಅನಂತರದ ಘಟನೆಗಳು 11. ಶ್ರೀರಾಮ ಕೃಷ್ಣರು ಕಲಕತ್ತೆಗೆ ಹಿಂದಿರುಗಿದರು 12. ಎರಡನೆಯ ಬಾರಿ ದಿವ್ಯೋನ್ಮಾದಾವಸ್ಥೆ 13. ಚಂದ್ರಾದೇವಿಯ ಪ್ರಾಯೋಪವೇಶನ 14. ಆ ಸಂದರ್ಭದಲ್ಲಿ ಶ್ರೀರಾಮಕೃಷ್ಣರ ಸ್ಥಿತಿ 15. ಮಥುರನಿಗೆ ಅವರು ಶಿವ-ಕಾಳೀ ರೂಪದಲ್ಲಿ ಕಾಣಿಸಿಕೊಂಡರು.

1. ಶ್ರೀರಾಮಕೃಷ್ಣರು ಪೂಜೆಯ ಕೆಲಸ ಬಿಟ್ಟು ಬಿಟ್ಟಿದ್ದಾರೆಂಬ ಸುದ್ದಿ ಕಾಮಾರಪುಕುರಕ್ಕೆ ತಲುಪಿತು. ತಾಯಿ ಮತ್ತು ಸಹೋದರರು ಇದನ್ನು ಕೇಳಿ ಚಿಂತೆಗೊಳಗಾದರು. ರಾಮಕುಮಾರನು ಮೃತ್ಯುವನ್ನಪ್ಪಿ ಇನ್ನೂ ಎರಡು ವರ್ಷ ಕಳೆದಿರಲಿಲ್ಲ. ಅಷ್ಟರಲ್ಲೇ ಶ್ರೀರಾಮಕೃಷ್ಣರಿಗೆ ಬುದ್ಧಿಭ್ರಮಣೆಯಾಗಿದೆ ಎಂಬುದನ್ನು ಕೇಳಿ ತಾಯಿ ಚಂದ್ರಾದೇವಿ ಮತ್ತು ಅಣ್ಣ ರಾಮೇಶ್ವರ ಇಬ್ಬರೂ ಬಹಳ ನೊಂದರು. ಮನುಷ್ಯನಿಗೆ ಕಷ್ಟ ಬರಲು ಶುರುವಾದರೆ ಒಂದಾದ ಮೇಲೊಂದು ಬಂದು ಅವನ ಜೀವನಾಕಾಶವನ್ನು ವರ್ಷಕಾಲದ ಮೋಡದಂತೆ ಆವರಿಸಿಬಿಡುತ್ತದೆ. ಗದಾಧರನು ಚಂದ್ರಾದೇವಿಯು ತುಂಬು ವಯಸ್ಕಳಾದ ಮೇಲೆ ಹುಟ್ಟಿದ ಪ್ರೀತಿಯ ಕಿರಿಯ ಮಗ. ಅವರ ಪರಿಸ್ಥಿತಿಯನ್ನು ಕೇಳಿ ತುಂಬ ದುಃಖಿತಳಾಗಿ ಅವರನ್ನು ಊರಿಗೆ ಕರೆಸಿಕೊಂಡಳು. ಅವರ ಔದಾಸೀನ್ಯ, 'ಮಾ, ಮಾ' ಎಂದು ಆಗಾಗ ರೋದಿಸುವುದು—ಇವನ್ನೆಲ್ಲ ನೋಡಿ ಆಕೆ ಕಾತರಳಾದಳು. ಯಾವುದಾದರೂ ರೀತಿಯಲ್ಲಿ ಈ ರೋಗವನ್ನು ಗುಣಪಡಿಸಬೇಕೆಂದು ಪ್ರಯತ್ನಿಸಿದಳು. ಅನೇಕ ಔಷಧಿಗಳ ಪ್ರಯೋಗವಾಯಿತು, ಏನೇನೊ ಶಾಂತಿ ಸ್ವಸ್ತ್ಯಯನಾದಿ ಧಾರ್ಮಿಕ ಕ್ರಿಯೆಗಳನ್ನು ಮಾಡಿಸಿದ್ದಾಯಿತು. ಇದೆಲ್ಲ ನಡೆದದ್ದು ೧೮೫೮ರ ಕೊನೆಯ ಭಾಗದಲ್ಲಿ.

2. ಮನೆಗೆ ಹಿಂದಿರುಗಿದ ಮೇಲೆ ಶ್ರೀರಾಮಕೃಷ್ಣರು ಕೆಲವೊಮ್ಮೆ ಎಲ್ಲರಂತೆಯೇ ಇರುತ್ತಿದ್ದರು. ಮತ್ತೆ ಕೆಲವೊಮ್ಮೆ ಭಾವಾವೇಶದಲ್ಲಿ ಮೈಮರೆಯುತ್ತಿದ್ದರು. ಅವರು

ಮೊದಲಿನಂತೆಯೇ ಸತ್ಯ, ಸರಳತೆ, ಮಾತೃಭಕ್ತಿ ಮತ್ತು ಸ್ನೇಹಿತರ ಮೇಲೆ ಪ್ರೀತಿ ಇವುಗಳನ್ನು ವ್ಯಕ್ತಪಡಿಸುತ್ತಿದ್ದರು. ಆದರೆ ಅದೇ ಸಂದರ್ಭದಲ್ಲಿಯೇ ಸಾಂಸಾರಿಕ ವಿಷಯಂದಲ್ಲಿ ಅತ್ಯಂತ ಉದಾಸೀನತೆ ಅವರಲ್ಲಿ ಕಂಡು ಬರುತ್ತಿತ್ತು. ಸಾಧಾರಣರಿಗೆ ಅಪರಿಚಿತವಾದ ವಿಷಯಂದಲ್ಲಿ ವ್ಯಾಕುಲತೆ, ಭಯ ಸಂಕೋಚಗಳಿಲ್ಲದೆ ಗುರಿಯನ್ನು ತಲಪುವ ಪ್ರಬಲ ಇಚ್ಛೆ–ಈ ಗುಣಗಳು ಅವರಲ್ಲಿ ಎದ್ದು ಕಾಣುತ್ತಿದ್ದವು. ಇದನ್ನೆಲ್ಲ ಗಮನಿಸಿದ ಜನರು ಅವರಿಗೆ ಯಾವುದೊ ಭೂತ ಹಿಡಿದಿರಬೇಕೆಂದು ಭಾವಿಸಿದರು.

3. ಚಂದ್ರಾದೇವಿಯ ಮನಸ್ಸಿನಲ್ಲೂ ಈ ಭಾವನೆ ಉದಿಸಿತ್ತು. ಇತರರೂ ಇದೇ ರೀತಿ ಯೋಚಿಸುತ್ತಿರುವುದನ್ನು ಕಂಡ ಆಕೆ ಭೂತ ಬಿಡಿಸಲು ಒಬ್ಬ ಮಂತ್ರ ವಾದಿಯನ್ನು ಕರೆಸಬೇಕೆಂದು ತೀರ್ಮಾನಿಸಿದಳು. ಇದರ ಬಗ್ಗೆ ಶ್ರೀರಾಮಕೃಷ್ಣರು ಹೇಳುತ್ತಿದ್ದರು : ''ಒಂದು ದಿನ ಒಬ್ಬ ಮಂತ್ರವಾದಿ ಬಂದನು. ಒಂದು ಬತ್ತಿಯನ್ನು ಮಂತ್ರಿಸಿ ಅದನ್ನು ಸುಟ್ಟು ಅದರ ವಾಸನೆಯನ್ನು ನನಗೆ ಸೇವಿಸಲು ಹೇಳಿದ. ಅವನು ಹೇಳಿದ, 'ಎಲ್ಲಾದರೂ ಭೂತವಿದ್ದರೆ ಅದು ಓಡಿಹೋಗುವುದು'. ಆದರೆ ಏನೂ ಆಗಲೇ ಇಲ್ಲ. ಆನಂತರ ಕೆಲವು ಪ್ರಮುಖ ಮಂತ್ರವಾದಿಗಳು ಹೋಮಹವನಾದಿ ಗಳನ್ನು ಮಾಡಿ ಚಂಡನನ್ನು ಆಹ್ವಾನಿಸಿದರು. ಅವನು ಪೂಜೆ ಬಲಿ ಎಲ್ಲವನ್ನೂ ಸ್ವೀಕರಿಸಿ ಅವರಿಗೆ ಹೇಳಿದ, 'ಇವನಿಗೆ ಭೂತವೂ ಹಿಡಿದಿಲ್ಲ, ಯಾವ ರೋಗವೂ ಇಲ್ಲ' ಎಂದು. ಆನಂತರ ಎಲ್ಲರ ಮುಂದೆ ನನ್ನನ್ನು ಉದ್ದೇಶಿಸಿ ಹೇಳಿದ : 'ಗದಾಯ್, ನೀನು ಸಾಧುವಾಗಬೇಕೆಂದಿದ್ದೀಯೆ, ಆದರೆ ಅಷ್ಟೊಂದು ಅಡಕೆ ತಿನ್ನುತ್ತೀಯೆ, ಏಕೆ ? ಬಹಳ ಅಡಿಕೆ ತಿಂದರೆ ಕಾಮ ವೃದ್ಧಿಯಾಗುವುದು.' ನಿಜವಾಗಿಯೂ ನನಗೆ ಅಡಿಕೆ ತಿನ್ನುವುದು ತುಂಬ ಇಷ್ಟವಾಗಿತ್ತು ಮತ್ತು ಆಗಾಗ ತಿನ್ನುತ್ತಿದ್ದೆ. ಚಂಡ ಹಾಗೆ ಹೇಳಿದ ಮೇಲೆ ಅದನ್ನು ತಿನ್ನುವುದನ್ನು ಸಂಪೂರ್ಣ ನಿಲ್ಲಿಸಿಬಿಟ್ಟೆ''.

4. ಶ್ರೀರಾಮಕೃಷ್ಣರಿಗೆ ಆಗ ಇಪ್ಪತ್ತಮೂರನೆಯ ವರ್ಷ ಪೂರ್ತಿಯಾಗು ವುದರಲ್ಲಿತ್ತು. ಕಾಮಾರಪುಕುರದಲ್ಲಿ ಕೆಲವು ತಿಂಗಳುಗಳು ಕಳೆದಮೇಲೆ ಅವರು ಎಷ್ಟೊ ಸಾಮಾನ್ಯ ಸ್ಥಿತಿಗೆ ಬಂದರು. ಶ್ರೀ ಜಗನ್ಮಾತೆಯ ದರ್ಶನ ಅವರಿಗೆ ಆಗಾಗ ಆಗುತ್ತಿದ್ದುದ ರಿಂದಲೇ ಅವರು ಶಾಂತರಾಗಿದ್ದರು. ಆ ಸಂದರ್ಭದ ಎಷ್ಟೋ ವಿಷಯಗಳನ್ನು ಅವರ ಸಂಬಂಧಿಕರಿಂದ ಕೇಳಿ ತಿಳಿದಿರುವೆವು. ಇವನ್ನು ಈಗ ವಿವರಿಸುತ್ತೇವೆ.

5. ಕಾಮಾರಪುಕುರದ ಪಶ್ಚಿಮ ಮತ್ತು ವಾಯುವ್ಯದ ತುದಿಯಲ್ಲಿ ಭೂತೀರ್ ಖಾಲ್ ಮತ್ತು ಬುಧುಇಮೊಡಲ್ ಎಂಬ ಎರಡು ಭಯವನ್ನು ಹುಟ್ಟಿಸುವ ಶ್ಮಶಾನ ಗಳಿದ್ದವು. ಶ್ರೀರಾಮಕೃಷ್ಣರು ಅಲ್ಲಿ ದಿನದ ಮತ್ತು ರಾತ್ರಿಯ ವೇಳೆಯ ಹೆಚ್ಚು ಸಮಯವನ್ನು ಕಳೆಯುತ್ತಿದ್ದರು. ಅವರಲ್ಲಿ ಅಪೂರ್ವ ಶಕ್ತಿಯ ಆವಿರ್ಭಾವವನ್ನು ಅವರ ಸಂಬಂಧಿಕರು ಆಗಾಗ ಕಾಣುತ್ತಿದ್ದರು. ಅವರು ಒಂದು ಮಡಿಕೆಯಲ್ಲಿ ಸಿಹಿತಿಂಡಿ ಗಳನ್ನು ತೆಗೆದುಕೊಂಡುಹೋಗಿ ಶ್ಮಶಾನದಲ್ಲಿರುವ ನರಿ ಭೂತಗಳಿಗೆ ಬಲಿ ಅರ್ಪಿಸುತ್ತಿದ್ದ ರೆಂದು ನಾವು ಕೇಳಿದ್ದೇವೆ. ನಾಲ್ಕು ಕಡೆಗಳಿಂದಲೂ ನರಿಗಳು ಹಿಂಡುಹಿಂಡಾಗಿ ಬಂದು

ಬಲಿಯನ್ನು ತಿನ್ನುತ್ತಿದ್ದವಂತೆ. ಭೂತಗಳಿಗೆ ನೀಡಿದ ಬಲಿ ಮಡಕೆಯ ಸಮೇತ ಗಾಳಿಯಲ್ಲಿ ಮಾಯವಾಗಿಬಿಡುತ್ತಿತ್ತಂತೆ. ಆ ಭೂತಗಳನ್ನು ಅವರು ಕೆಲವೊಮ್ಮೆ ನೋಡುತ್ತಿದ್ದರಂತೆ. ಕೆಲವೊಮ್ಮೆ ನಡುರಾತ್ರಿಯಾದರೂ ಅವರು ಮನೆಗೆ ಹಿಂದಿರುಗದಿರಲು ಅವರ ಅಣ್ಣ ರಾಮೇಶ್ವರನು ಶ್ಮಶಾನದ ಹತ್ತಿರ ಹೋಗಿ ಅವರ ಹೆಸರು ಹಿಡಿದು ಕೂಗುತ್ತಿದ್ದ. ಶ್ರೀರಾಮಕೃಷ್ಣರು ಗಟ್ಟಿಯಾಗಿ ಉತ್ತರಿಸುತ್ತಿದ್ದರು: "ಬರ್ತೀನಿ, ಅಣ್ಣ. ನೀನು ಈಕಡೆ ಬರಬೇಡ. ಈ ಉಪದೇವತೆಗಳು ನಿನಗೇನಾದರೂ ತೊಂದರೆ ಕೊಡಬಹುದು." ಭೂತೀರ್‌ಖಾಲ್ ಶ್ಮಶಾನದಲ್ಲಿ ಶ್ರೀರಾಮಕೃಷ್ಣರೇ ಒಂದು ಬಿಲ್ವದ ಗಿಡವನ್ನು ನೆಟ್ಟಿದ್ದರು. ಅವರು ಅಲ್ಲಿಯೇ ಇದ್ದ ಹಳೆಯ ಅಶ್ವತ್ಥದ ಮರದ ಕೆಳಗೆ ಕುಳಿತು ಧ್ಯಾನ ಜಪ ಮಾಡುತ್ತಿದ್ದರು. ಅವರಿಗೆ ಈಗ ಎಷ್ಟೊ ಆಧ್ಯಾತ್ಮಿಕ ಅನುಭವಗಳು ಆಗುತ್ತಿದ್ದುದರಿಂದ ಅವರಲ್ಲಿ ಈಗ ವಿರಹ ವೇದನೆ ಎಷ್ಟೊ ಕಡಿಮೆಯಾಗಿತ್ತು. ಈ ವಿಷಯ ಅವರ ಸಂಬಂಧಿಕರಿಂದ ನಮಗೆ ತಿಳಿದುಬಂದಿದೆ. ಅವರಿಗೆ ಆಗಾಗ ಶ್ರೀ ಜಗನ್ಮಾತೆಯ ಚಿನ್ಮಯಮೂರ್ತಿಯ ದರ್ಶನವಾಗುತ್ತಿತ್ತು. ಆಕೆಯ ಆದೇಶವನ್ನು ಪಡೆದು ಅವರು ಅದರಂತೆ ನಡೆದುಕೊಳ್ಳುತ್ತಿದ್ದರು. ಶ್ರೀ ಜಗನ್ಮಾತೆಯ ತಡೆಯಿಲ್ಲದ ನಿರಂತರ ದರ್ಶನ ಪಡೆಯುವ ಭಾಗ್ಯ ತಮಗೆ ಬಹುಬೇಗನೆ ಉಂಟಾಗುವುದೆಂದು ಅವರಿಗೆ ದೃಢವಾಗಿತ್ತು.

ಮುಂದಾಗುವುದನ್ನು ಕಾಣುವ ಶಕ್ತಿಯನ್ನು ಅವರು ಈ ಸಮಯದಲ್ಲಿ ಪಡೆದಿದ್ದರು. ಕಾಮಾರಪುಕುರ ಮತ್ತು ಜಯರಾಮಬಾಟಿಯ ಅನೇಕರು ಹಾಗೂ ಹೃದಯರಾಮನೂ ಕೂಡ ಇದಕ್ಕೆ ಸಾಕ್ಷಿಯಾಗಿರುವರು. ಶ್ರೀರಾಮಕೃಷ್ಣರು ನಮಗೆ ಕೆಲವೊಮ್ಮೆ ಸೂಚ್ಯವಾಗಿ ಇದನ್ನು ತಿಳಿಸಿರುವರು. ಈ ಕೆಳಗಿನ ಘಟನೆಗಳ ಮೂಲಕ ಇದು ನಮಗೆ ಸ್ಪಷ್ಟವಾಗುತ್ತದೆ.

6. ಶ್ರೀರಾಮಕೃಷ್ಣರ ವರ್ತನೆಯಲ್ಲಿ ಮತ್ತು ಕಾರ್ಯಕಲಾಪಗಳಲ್ಲಿ ಕಂಡುಬಂದ ಸಾಕಷ್ಟು ಬದಲಾವಣೆಯನ್ನು ಗಮನಿಸಿದ ಅವರ ತಾಯಿ ದೈವಕೃಪೆಯಿಂದ ಅವರ ಉನ್ಮಾದ ಕಡಿಮೆಯಾಗುತ್ತಿದೆ ಎಂದು ಭಾವಿಸಿದಳು. ಮೊದಲಿನಂತೆ ಅವರು ವ್ಯಾಕುಲತೆಯಿಂದ ರೋದಿಸುತ್ತಿರಲಿಲ್ಲ, ಊಟ ನಿದ್ರೆ ಮುಂತಾದುವುಗಳನ್ನು ಸಮಯಕ್ಕೆ ಸರಿಯಾಗಿ ಮಾಡುತ್ತಿದ್ದರು ಮತ್ತು ಸಾಮಾನ್ಯವಾಗಿ ಎಲ್ಲ ವಿಷಯಗಳಲ್ಲಿಯೂ ಜನಸಾಧಾರಣರಂತೆಯೇ ವರ್ತಿಸುತ್ತಿದ್ದರು. ಆದರೂ ಯಾವಾಗಲೂ ದೇವರ ವಿಷಯದಲ್ಲೇ ಮಗ್ನರಾಗಿರುವುದು, ಶ್ಮಶಾನಕ್ಕೆ ಹೋಗುವುದು, ಉಟ್ಟ ಬಟ್ಟೆಯನ್ನು ತೆಗೆದುಹಾಕಿ ಧ್ಯಾನ ಮಾಡುವುದು ಮತ್ತು ಇಂಥ ವಿಷಯಗಳಲ್ಲಿ ಇತರರ ಮಾತನ್ನು ಕೇಳದಿರುವುದು ಇವೆಲ್ಲ ಈಗಲೂ ಇದ್ದುವು. ಆದರೆ ಇವು ಚಿಕ್ಕಂದಿನಿಂದಲೂ ಅವರಿಗೆ ಸ್ವಾಭಾವಿಕವಾಗಿದ್ದುದರಿಂದ ಇವನ್ನು ಹುಚ್ಚುತನದ ಚಿಹ್ನೆಯೆಂದು ಪರಿಗಣಿಸಲಿಲ್ಲ. ಸಂಸಾರದ ವಿಷಯದಲ್ಲಿ ಅವರ ಪೂರ್ಣ ಉದಾಸೀನತೆ, ಮತ್ತು ಆಧ್ಯಾತ್ಮಿಕತೆಯ ಒಲವು—ಇವನ್ನು ದೂರ ಮಾಡುವುದು ಹೇಗೆಂಬುದು ಎಲ್ಲರ ಚಿಂತೆಯಾಯಿತು. ಸಂಸಾರದ ಕಡೆ

ಮನಸ್ಸು ಹರಿದು ಆಧ್ಯಾತ್ಮ ಭಾವ ಸಂಪೂರ್ಣ ಶಾಂತವಾಗದಿದ್ದರೆ ಮತ್ತೆ ಹುಚ್ಚು ಮರುಕಳಿಸಬಹುದೆಂದು ಭಯವಿತ್ತು. ಹೇಗಾದರೂ ಮಾಡಿ ಇದರಿಂದ ಅವರನ್ನು ರಕ್ಷಿಸುವುದಕ್ಕಾಗಿ ಅವರ ತಾಯಿ ಮತ್ತು ಅಣ್ಣ ಯೋಗ್ಯ ವಧುವನ್ನು ಆರಿಸಿ ಅವರಿಗೆ ಮದುವೆ ಮಾಡಿಸುವುದೆಂದು ನಿರ್ಧರಿಸಿದರು. ಉತ್ತಮ ಪತ್ನಿಯ ಕಡೆ ಅವರ ಮನಸ್ಸು ಹರಿದರೆ ಸ್ವಾಭಾವಿಕವಾಗಿಯೇ ಆಧ್ಯಾತ್ಮಿಕ ಹುಚ್ಚು ಕಡಿಮೆಯಾಗಿ ಸಂಸಾರದ ಜವಾಬ್ದಾರಿಯನ್ನು ಅವರು ಹೊರುತ್ತಾರೆ ಎಂಬುದು ಅವರ ಎಣಿಕೆಯಾಗಿತ್ತು.

7. ಶ್ರೀರಾಮಕೃಷ್ಣರಿಗೆ ಗೊತ್ತಾದರೆ ಅವರು ಆಕ್ಷೇಪಿಸಬಹುದೆಂದು ತಾಯಿ ಮತ್ತು ಪುತ್ರರು ಗುಪ್ತವಾಗಿ ಹೆಣ್ಣನ್ನು ಅರಸುತ್ತಿದ್ದರು. ಆದರೆ ಇದರ ಸುಳಿವು ಗೊತ್ತಾಗಲು ಶ್ರೀರಾಮಕೃಷ್ಣರಿಗೆ ಬಹಳಕಾಲ ಹಿಡಿಯಲಿಲ್ಲ. ವಿಷಯ ತಿಳಿದ ಮೇಲೂ ಅವರು ಅದಕ್ಕೆ ಯಾವ ಅಡ್ಡಿಯನ್ನು ಉಂಟುಮಾಡಲಿಲ್ಲ. ಮನೆಯಲ್ಲಿ ಹೊಸತೇನಾದರೂ ಚಟುವಟಿಕೆಗಳು ನಡೆದರೆ ಮಕ್ಕಳು ಆನಂದಪಡುವಂತೆ ಇವರೂ ವರ್ತಿಸುತ್ತಿದ್ದರು. ಶ್ರೀಜಗನ್ಮಾತೆಯ ಮೂಲಕ ಈ ವಿಷಯದಲ್ಲಿ ಏನು ಮಾಡಬೇಕೆಂಬುದರ ಬಗ್ಗೆ ಆದೇಶವನ್ನು ಪಡೆದು ಅವರು ಆ ರೀತಿ ಆನಂದವನ್ನು ವ್ಯಕ್ತಪಡಿಸುತ್ತಿದ್ದರೇ, ಅಥವಾ ಬಾಲಕರಿಗಿರುವಂತೆ ದೂರದೃಷ್ಟಿ ಮತ್ತು ಚಿಂತೆಯ ಅಭಾವವೇ ಇದಕ್ಕೆ ಕಾರಣವೆ ? ಈ ವಿಷಯವನ್ನು ನಾವು ಬೇರೆಕಡೆ ಚರ್ಚಿಸಿರುವೆವು.*

8. ಹೆಣ್ಣನ್ನು ಅರಸಲು ನಾಲ್ಕೂ ದಿಕ್ಕಿಗೆ ಜನರನ್ನು ಕಳಿಸಿದ್ದಾಯಿತು. ಆದರೆ ಎಲ್ಲಿಯೂ ಮೆಚ್ಚಿಕೆಯಾಗುವಂತಹ ವಧು ಸಿಗಲಿಲ್ಲ. ಕೆಲವರು ಸಿಕ್ಕಿದರೂ ಅವರ ತಂದೆ ತಾಯಿಗಳು ಅತ್ಯಧಿಕ ವಿವಾಹಧನ ಕೇಳಿದರು. ಅದಕ್ಕೆ ಚಂದ್ರಾದೇವಿ ಮತ್ತು ರಾಮೇಶ್ವರ ಸಿದ್ಧರಿರಲಿಲ್ಲ. ಹೀಗಾಗಿ ಅವರಿಬ್ಬರೂ ತುಂಬ ಚಿಂತೆಗೀಡಾದರು. ಇದನ್ನು ನೋಡಿ ಒಂದುದಿನ ಶ್ರೀರಾಮಕೃಷ್ಣರು ಭಾವಮಯವಾಗಿ ನುಡಿದರು: "ಅಲ್ಲಿ ಇಲ್ಲಿ ಹುಡುಕಿದರೆ ಏನು ಪ್ರಯೋಜನ ? ಜಯರಾಂಬಾಟಿಯ ರಾಮಚಂದ್ರ ಮುಖ್ಯೋಪಾಧ್ಯಾಯರ ಮನೆಗೆ ಹೋಗಿ. ಅಲ್ಲಿ ಒಂದು ಹೆಣ್ಣನ್ನು ನನಗಾಗಿ ಕಾದಿರಿಸಲಾಗಿದೆ."

9. ಶ್ರೀರಾಮಕೃಷ್ಣರ ಈ ಮಾತಿನಲ್ಲಿ ವಿಶ್ವಾಸವುಂಟಾಗದಿದ್ದರೂ ತಾಯಿ ಮತ್ತು ಅಣ್ಣ ಜಯರಾಂಬಾಟಿಗೆ ಜನರನ್ನು ಕಳಿಸಿದರು. ಅಲ್ಲಿ ಯೋಗ್ಯ ವಧು ಇರುವುದೇನೊ ನಿಜ, ಆದರೆ ಆಕೆ ಇನ್ನೂ ತುಂಬ ಚಿಕ್ಕವಳು–ಕೇವಲ ಐದು ವರ್ಷ ತುಂಬಿದೆ ಅಷ್ಟೆ ಎಂದು ತಿಳಿದು ಬಂತು. ಹೀಗೆ ಅನಿರೀಕ್ಷಿತವಾಗಿ ಸಂಬಂಧ ಕೂಡಿಬಂದದ್ದರಿಂದ ಈ ಹುಡುಗಿಗೇ ಗದಾಧರನನ್ನು ಕೊಟ್ಟು ಮದುವೆ ಮಾಡಿಬಿಡುವುದೆಂದು ನಿರ್ಧರಿಸಿದಳು ಚಂದ್ರಾದೇವಿ. ಕೆಲವೇ ದಿನಗಳಲ್ಲಿ ವಿವಾಹದ ಎಲ್ಲ ಮಾತುಕತೆಗಳು ಮುಗಿದುವು. ಶುಭ ದಿನದಂದು ಶುಭಮುಹೂರ್ತದಲ್ಲಿ ರಾಮೇಶ್ವರನು ತಮ್ಮನಾದ ಗದಾಧರನನ್ನು ಮೂರು ಮೈಲಿ ದೂರದಲ್ಲಿದ್ದ ಜಯರಾಂಬಾಟಿಗೆ ಕರೆದುಕೊಂಡು ಹೋಗಿ ಶುಭವಿವಾಹದ

* ಗುರುಭಾವ, ಪೂರ್ವಾರ್ಧ, ನಾಲ್ಕನೆ ಅಧ್ಯಾಯ.

ಕ್ರಿಯೆಯನ್ನು ನೆರವೇರಿಸಿದನು. ಮುನ್ನೂರು ರೂಪಾಯಿ ವಿವಾಹಧನ ಕೊಡ ಬೇಕಾಯಿತು, ಇದು ನಡೆದಿದ್ದು ೧೮೫೯ರ ಮೇ ತಿಂಗಳಲ್ಲಿ. ಶ್ರೀರಾಮಕೃಷ್ಣರಿಗೆ ಆಗ ಇಪ್ಪತ್ತನಾಲ್ಕು ವರ್ಷ.

10. ಶ್ರೀರಾಮಕೃಷ್ಣರಿಗೆ ವಿವಾಹವಾದ ಮೇಲೆ ಚಂದ್ರಾದೇವಿಯು ಎಷ್ಟೊ ನಿಶ್ಚಿಂತಳಾದಳು. ಪುತ್ರನು ವಿವಾಹದ ಎಲ್ಲ ನಿಯಮಗಳನ್ನೂ ಪಾಲಿಸಿದ್ದ, ಮತ್ತು ಬೇರೆಲ್ಲ ವಿಷಯಗಳಲ್ಲಿಯೂ ತನ್ನ ಮಾತಿನಂತೆಯೇ ನಡೆಯುತ್ತಿದ್ದ. ಇದನ್ನೆಲ್ಲ ನೋಡಿ ತಮ್ಮ ಅದೃಷ್ಟ ಒಳ್ಳೆಯದಿದೆಯೆಂದು ಅವಳು ಭಾವಿಸಿದಳು. ಉನ್ಮತ್ತನಾದ ಮಗ ಮನೆಗೆ ಬಂದು ಈಗ ಸರಿಯಾಗಿದ್ದಾನೆ, ಒಳ್ಳೆಯ ಮನೆತನದ ಸೊಸೆ ಸಿಕ್ಕಿದ್ದಾಳೆ, ಆರ್ಥಿಕ ಮುಗ್ಗಟ್ಟು ಈಗ ಅಷ್ಟಾಗಿಲ್ಲ, ಮತ್ತು ಪುತ್ರ ಸಾಂಸಾರಿಕ ಜೀವನ ಪ್ರವೇಶಿಸಿದ್ದಾನೆ—ಇಷ್ಟೆಲ್ಲ ಆಗಿರುವಾಗ ದೈವಾನುಗ್ರಹ ತಮ್ಮ ಮೇಲೆ ಉಂಟಾಗಿದೆ ಎಂದು ಆಕೆ ಭಾವಿಸಿದುದು ಯುಕ್ತವೇ ಆಗಿದೆ. ಸರಳಹೃದಯಳೂ ಧರ್ಮಪರಾಯಣಳೂ ಆದ ಚಂದ್ರಾದೇವಿ ಈಗ ಎಷ್ಟೊ ಸುಖಿಯಾಗಿದ್ದಳು ಎಂದು ಹೇಳಬಹುದು. ಆದರೆ ಇದು ಬಹಳಕಾಲ ಉಳಿಯಲಿಲ್ಲ. ವಧುವಿನ ಮನೆಯವರನ್ನು ತೃಪ್ತಿಪಡಿಸಲು ಮತ್ತು ವಿವಾಹದ ಆಡಂಬರವನ್ನು ಉಳಿಸಿಕೊಳ್ಳಲು ಲಾಹಾರ ಮನೆಯಿಂದ ವಧುವಿಗಾಗಿ ಆಭರಣಗಳನ್ನು ಎರವಲು ತಂದಿದ್ದರು. ಈಗ ಅವನ್ನು ಹಿಂದಿರುಗಿಸುವ ಸಮಯ ಬಂತು. ಈಗ ಮತ್ತೆ ಚಂದ್ರಾದೇವಿಗೆ ತಮ್ಮ ಸಂಸಾರದ ದಾರಿದ್ರ್ಯದ ಅರಿವಾಗಿ ತುಂಬ ನೊಂದಳು. ನವ ವಧುವನ್ನು ಅವಳು ವಿವಾಹದ ದಿನದಿಂದಲೇ ತನ್ನವಳನ್ನಾಗಿ ಮಾಡಿಕೊಂಡಿದ್ದಳು. ಈಗ ಆ ಹುಡುಗಿಯ ಮೈಯಿಂದ ಆಭರಣಗಳನ್ನು ಹೇಗೆ ಕಳಚುವುದು—ಇದನ್ನು ಯೋಚಿಸುತ್ತ ಆಕೆ ಕಣ್ಣೀರಿಟ್ಟಳು. ತನ್ನ ವ್ಯಥೆಯನ್ನು ಯಾರಿಗೂ ವ್ಯಕ್ತಪಡಿಸದಿದ್ದರೂ ಶ್ರೀರಾಮಕೃಷ್ಣರಿಗೆ ಇದು ಗೊತ್ತಾಗಿಹೋಯಿತು. ಅವರು ತಾಯಿಯನ್ನು ಸಮಾಧಾನ ಪಡಿಸಿ ವಧು ನಿದ್ರಿಸಿರುವಾಗ ಆಕೆಗೆ ಸ್ವಲ್ಪವೂ ತಿಳಿಯದಂತೆ ಅತ್ಯಂತ ಕೌಶಲದಿಂದ ಒಡವೆಗಳನ್ನೆಲ್ಲ ಕಳಚಿದರು. ನಿದ್ರೆಯಿಂದ ಎದ್ದನಂತರ ಹುಡುಗಿ ಮೈಯೆಲ್ಲ ಮುಟ್ಟಿ ನೋಡಿಕೊಳ್ಳುತ್ತ ಹೇಳಿದಳು : "ಅಯ್ಯೊ, ನನ್ನ ಮೈಮೇಲಿದ್ದ ಒಡವೆಗಳೆಲ್ಲ ಏನಾದವು ?" ಚಂದ್ರಾದೇವಿಗೆ ದುಃಖ ತಡೆಯಲಾಗಲಿಲ್ಲ. ಬಾಲಕಿಯನ್ನು ತೊಡೆಯ ಮೇಲೆ ಕೂರಿಸಿಕೊಂಡು, ಸಮಾಧಾನಪಡಿಸುತ್ತ ಹೇಳಿದಳು, "ಮಗು, ಗದಾಧರ ಮುಂದೆ ಇನ್ನೂ ಒಳ್ಳೆಯ ಒಡವೆಗಳನ್ನು ತಂದುಕೊಡುತ್ತಾನೆ." ಈ ಘಟನೆ ಇಲ್ಲಿಗೆ ನಿಲ್ಲಲಿಲ್ಲ. ವಧುವಿನ ಚಿಕ್ಕಪ್ಪ ಅಂದು ಕಾಮಾರಪುಕುರಕ್ಕೆ ಬಂದನು. ಅವನು ಒಡವೆಯ ಕತೆಯನ್ನು ಕೇಳಿ ಕೋಪಗೊಂಡು ಅಂದೇ ಹುಡುಗಿಯನ್ನು ಕರೆದುಕೊಂಡು ಹೋದನು. ತಾಯಿಗೆ ಇದರಿಂದ ತುಂಬ ದುಃಖವಾಗಿರುವುದನ್ನು ಕಂಡು ಶ್ರೀರಾಮಕೃಷ್ಣರು ಆಕೆಯ ದುಃಖವನ್ನು ದೂರಮಾಡಲು ಹಾಸ್ಯಮಯವಾಗಿ ನುಡಿದರು : "ಈಗ ಅವರು ಏನೇ ಹೇಳಲಿ, ಏನೇ ಮಾಡಲಿ. ಆದ ವಿವಾಹವನ್ನು ರದ್ದುಪಡಿಸಲಾಗುವುದಿಲ್ಲವಲ್ಲ !"

11. ವಿವಾಹವಾದಮೇಲೆ ಶ್ರೀರಾಮಕೃಷ್ಣರು ಸುಮಾರು ಒಂದು ವರ್ಷ ಏಳು

ತಿಂಗಳು ಕಾಮಾರಪುಕುರದಲ್ಲಿದ್ದರು. ಅವರ ಆರೋಗ್ಯ ಸಂಪೂರ್ಣ ಸುಧಾರಿಸದೆ ಕಲಕತ್ತೆಗೆ ಹೋದರೆ ಮತ್ತೆ ಅವರಿಗೆ ಹುಚ್ಚು ಹಿಡಿಯಬಹುದೆಂದು ಚಂದ್ರಾದೇವಿಯು ಅವರನ್ನು ಅಲ್ಲಿಯೇ ಇರಿಸಿಕೊಂಡಿದ್ದಳು. ಅವರ ಪತ್ನಿಗೆ ಏಳು ವರ್ಷ ತುಂಬಿದಾಗ ಅವರು ಸಂಪ್ರದಾಯಾನುಸಾರವಾಗಿ ಮಾವನ ಮನೆಗೆ ಹೋಗಿದ್ದರು. ಅಲ್ಲಿ ಕೆಲವು ದಿನಗಳಿದ್ದು ಅನಂತರ ಒಂದು ಶುಭ ದಿನದಲ್ಲಿ ಪತ್ನೀ ಸಮೇತರಾಗಿ ಕಾಮಾರಪುಕುರಕ್ಕೆ ಹಿಂದಿರುಗಿದ್ದರು. ಇದಾದ ಕೆಲವೇ ದಿನಗಳಲ್ಲಿ ಅವರು ಕಲಕತ್ತೆಗೆ ಹಿಂದಿರುಗುವ ನಿರ್ಧಾರ ಮಾಡಿದರು. ತಾಯಿ ಮತ್ತು ಸಹೋದರರು ಇನ್ನೂ ಸ್ವಲ್ಪಕಾಲ ಇರಬೇಕೆಂದು ಒತ್ತಾಯಿಸಿದರೂ ಅವರು ಕೇಳಲಿಲ್ಲ. ಕುಟುಂಬದ ಆರ್ಥಿಕ ದುಃಸ್ಥಿತಿ ಅವರಿಗೆ ತಿಳಿದಿತ್ತು; ಆದ್ದರಿಂದ ದಕ್ಷಿಣೇಶ್ವರಕ್ಕೆ ಹೋಗಿ ಕೆಲಸದಲ್ಲಿ ತೊಡಗಬೇಕೆಂದು ತೀರ್ಮಾನಿಸಿದರು.

12. ದಕ್ಷಿಣೇಶ್ವರಕ್ಕೆ ಹೋಗಿ ಪೂಜೆಯನ್ನು ಪ್ರಾರಂಭಿಸಿದರು. ಕೆಲವೇ ದಿನಗಳಲ್ಲಿ ಅವರು ಅದರಲ್ಲಿ ಎಷ್ಟು ತನ್ಮಯರಾದರೆಂದರೆ ತಾಯಿ, ಅಣ್ಣ, ಪತ್ನಿ, ಅವರ ಸಂಸಾರ, ಆರ್ಥಿಕ ಮುಗ್ಗಟ್ಟು— ಹೀಗೆ ಕಾಮಾರಪುಕುರದ ಎಲ್ಲ ವಿಷಯಗಳೂ ಅವರ ಮನಸ್ಸಿನ ಯಾವುದೊ ಮೂಲೆಯಲ್ಲಿ ಸೇರಿಕೊಂಡುಬಿಟ್ಟವು. ಶ್ರೀಜಗನ್ಮಾತೆಯನ್ನು ಎಲ್ಲ ಸಮಯದಲ್ಲಿಯೂ, ಎಲ್ಲದರಲ್ಲಿಯೂ ನೋಡುವುದು ಹೇಗೆಂಬ ಚಿಂತೆಯೇ ಅವರ ಮನಸ್ಸನ್ನು ಸಂಪೂರ್ಣ ಆವರಿಸಿಬಿಟ್ಟಿತು. ಹಗಲುರಾತ್ರಿ ಸ್ಮರಣೆ, ಮನನ ಧ್ಯಾನ ಜಪ ಮುಂತಾದ ಸಾಧನೆಗಳಲ್ಲಿ ನಿರತರಾಗಿದ್ದುದರಿಂದ ಅವರ ಎದೆ ಮತ್ತೆ ರಕ್ತವರ್ಣಕ್ಕೆ ತಿರುಗಿತು; ಸಾಂಸಾರಿಕ ವಿಷಯ ಅವರಿಗೆ ವಿಷಸಮಾನವಾಗತೊಡಗಿತು; ಮತ್ತೆ ದೇಹದ ಉರಿ ಪ್ರಾರಂಭವಾಯಿತು; ಮತ್ತು ನಿದ್ರೆ ಎಲ್ಲಿಯೋ ಹೊರಟುಹೋಯಿತು. ಆದರೆ ಇಂತಹ ಸ್ಥಿತಿಯನ್ನು ಅವರು ಮೊದಲೇ ಅನುಭವಿಸಿದ್ದುದರಿಂದ ಹಿಂದಿನಂತೆ ಅಧೀರರಾಗಲಿಲ್ಲ.

ಅವರ ನಿದ್ರಾಹೀನತೆ, ದೇಹದ ಉರಿ-ಇವನ್ನೆಲ್ಲ ಗುಣಪಡಿಸಲು ಮಥುರನು ಕಲಕತ್ತೆಯ ಪ್ರಸಿದ್ಧ ವೈದ್ಯನಾದ ಗಂಗಾಪ್ರಸಾದನಿಂದ ಚಿಕಿತ್ಸೆಮಾಡಿಸಿದನು. ಅನೇಕ ಬಗೆಯ ಔಷಧಿ ತೈಲ ಇತ್ಯಾದಿಗಳ ಪ್ರಯೋಗ ಮಾಡಿದರೂ ರೋಗ ಗುಣಮುಖವಾಗುವಂತೆ ಕಂಡುಬರಲಿಲ್ಲ. ಆದರೆ ಹೃದಯನು ಆಗಾಗ ಅವರನ್ನು ವೈದ್ಯರ ಮನೆಗೆ ಕರೆದುಕೊಂಡು ಹೋಗುತ್ತಲೇ ಇದ್ದನು. ಶ್ರೀರಾಮಕೃಷ್ಣರು ಹೇಳುತ್ತಿದ್ದರು: "ಒಂದು ದಿನ ಹೀಗೆ ಗಂಗಾಪ್ರಸಾದನ ಮನೆಗೆ ಹೋಗಿದ್ದೆವು. ಚಿಕಿತ್ಸೆಯಿಂದ ಏನೂ ಪ್ರಯೋಜನವಾಗದಿರುವುದನ್ನು ಕಂಡು ಅವನು ಹೊಸ ಔಷಧಿಯನ್ನು ಸೂಚಿಸಿದನು. ಆಗ ಅಲ್ಲಿ ಪೂರ್ವಬಂಗಾಳದ ಒಬ್ಬ ವೈದ್ಯನೂ ಇದ್ದನು. ರೋಗದ ಎಲ್ಲ ಲಕ್ಷಣಗಳನ್ನು ಕೇಳಿ ಅವನು ಹೇಳಿದ್ದ: 'ಇವರಿಗೆ ದೇವೋನ್ಮಾದವಾಗಿದೆಯೆಂದು ಕಾಣಿಸುತ್ತದೆ. ಇದು ಯೋಗದಿಂದ ಉಂಟಾಗುವ ಕಾಯಿಲೆ; ಔಷಧಿಯಿಂದ ಗುಣವಾಗುವಂತಹುದಲ್ಲ.'†

---

† ಕೆಲವರು ಹೇಳುತ್ತಾರೆ, ಈ ವಿಷಯವನ್ನು ತಿಳಿಸಿದವನು ಗಂಗಾಪ್ರಸಾದನ ಸಹೋದರನಾದ ದುರ್ಗಾಪ್ರಸಾದನು ಎಂದು.

ರೋಗದಂತೆ ಕಂಡುಬರುವ ನನ್ನ ಶಾರೀರಿಕ ವಿಕಾರಗಳ ನಿಜವಾದ ಕಾರಣವನ್ನು ಸೂಚಿಸಿದವನು ಇವನೇ, ಆದರೆ ಆಗ ಯಾರೂ ಅವನ ಮಾತಿಗೆ ಬೆಲೆ ಕೊಡಲಿಲ್ಲ.'' ಹೀಗೆ ಮಥುರನೇ ಮುಂತಾದ ಶ್ರೀರಾಮಕೃಷ್ಣರ ಹಿತೈಷಿಗಳನೇಕರು ಅವರ ಕಾಯಿಲೆಯನ್ನು ಹೇಗಾದರು ಮಾಡಿ ಗುಣಪಡಿಸಲು ಪ್ರಯತ್ನಿಸಿದರು. ಆದರೆ ಯಾವುದರಿಂದಲೂ ಪ್ರಯೋಜನವಾಗಲಿಲ್ಲ, ರೋಗ ಉಲ್ಬಣಿಸುತ್ತಲೇ ಹೋಯಿತು.

13. ಈ ಸುದ್ದಿ ಕಾಮಾರಪುಕುರವನ್ನು ತಲಪಿತು. ಚಂದ್ರಾದೇವಿಯು ಇನ್ನೇನೂ ಉಪಾಯ ಕಾಣದೆ ಪ್ರಾಯೋಪವೇಶನ ಮಾಡುವುದೆಂದು ನಿರ್ಧರಿಸಿದಳು. ಕಾಮಾರಪುಕುರದ 'ಪುರಾತನ' ಶಿವನು ಜಾಗ್ರತ ದೇವತೆಯೆಂದು ಅವಳು ತಿಳಿದಿದ್ದಳು. ಆ ಶಿವನ ಮಂದಿರದ ಮುಂದೆ ಅನ್ನ ನೀರು ಬಿಟ್ಟು ಪ್ರಾರ್ಥಿಸುತ್ತ ಕುಳಿತಳು. 'ಮುಕುಂದಪುರದ ಶಿವನ ಮುಂದೆ ಪ್ರಾಯೋಪವೇಶಮಾಡಿದರೆ ಮನೋಭೀಷ್ಟ ಪೂರ್ತಿಯಾಗುವುದೆ'ಂದು ಆದೇಶ ಬಂತು. ಮುಕುಂದಪುರದ ಶಿವನ ಮುಂದೆ ಅಭೀಷ್ಟಪೂರ್ತಿಗಾಗಿ ಪ್ರಾಯೋಪವೇಶನ ಮಾಡುವ ಪದ್ಧತಿ ಇರಲಿಲ್ಲ. ಆದರೂ ಆದೇಶವನ್ನು ಪಾಲಿಸಬೇಕೆಂದು ಸ್ವಲ್ಪವೂ ಹಿಂಜರಿಯದೆ ಮುಕುಂದಪುರಕ್ಕೆ ಹೋಗಿ ಅಲ್ಲಿ ಪ್ರಾಯೋಪವೇಶನ ಮಾಡಿದಳು. ಎರಡುಮೂರು ದಿನಗಳನಂತರ ಅವಳಿಗೊಂದು ಸ್ವಪ್ನವಾಯಿತು : ಬೆಳಗುವ ಜಟೆಯಿಂದ ಕೂಡಿದ ವ್ಯಾಘ್ರಾಜಿನಧಾರಿಯಾದ ಅದ್ಭುತಕಾಂತಿಮಯನಾದ ಮಹಾದೇವನು ಮುಂದೆ ಕಾಣಿಸಿಕೊಂಡು ಅವಳಿಗೆ ಭರವಸೆಯಿತ್ತನು, ''ಭಯ ಬೇಡ, ನಿನ್ನ ಪುತ್ರನಿಗೆ ಹುಚ್ಚು ಹಿಡಿದಿಲ್ಲ. ಭಗವದಾವೇಶದಿಂದ ಅವನಿಗೆ ಆ ಸ್ಥಿತಿ ಉಂಟಾಗಿದೆ.'' ಭಕ್ತಿಮತಿಯಾದ ಚಂದ್ರಾದೇವಿಯು ಸಮಾಧಾನಗೊಂಡು ಮಹಾದೇವನಿಗೆ ಪೂಜೆಯನ್ನು ಸಲ್ಲಿಸಿ ಮನೆಗೆ ಹಿಂದಿರುಗಿದಳು. ಪುತ್ರನ ಒಳಿತಿಗಾಗಿ ಕುಲದೇವತೆಯಾದ ರಘುವೀರನಿಗೆ ಮತ್ತು ಶೀತಲಾದೇವಿಗೆ ಸೇವೆ ಸಲ್ಲಿಸತೊಡಗಿದಳು. ಅಂದಿನಿಂದ ಮುಕುಂದಪುರದ ಶಿವಾಲಯದಲ್ಲಿ ಬಯಕೆಗಳ ಪೂರ್ತಿಗಾಗಿ ಪ್ರಾಯೋಪವೇಶನ ಮಾಡುವುದು ಪ್ರಾರಂಭವಾಯಿತು.

14. ಈ ಸಮಯದ ತಮ್ಮ ದಿವ್ಯೋನ್ಮಾದವನ್ನು ಸ್ಮರಿಸಿಕೊಂಡು ಶ್ರೀರಾಮಕೃಷ್ಣರು ನಮಗೆ ಅನೇಕ ಬಾರಿ ಹೇಳಿರುವರು : ''ಆಧ್ಯಾತ್ಮಿಕ ಭಾವದ ತೀವ್ರತೆಯಿಂದ ಉಂಟಾಗುವ ಈ ರೀತಿಯ ದೇಹ-ಮನಸ್ಸಿನ ವಿಕಾರಗಳು ಸಾಧಾರಣ ಜನರಲ್ಲಿ ಆಗುವುದಂತೂ ದೂರದ ಮಾತು, ಇದರಲ್ಲಿ ನಾಲ್ಕನೇ ಒಂದಂಶದಷ್ಟು ಅವರಿಗೆ ಆದರೂ ಅವರ ದೇಹ ಉಳಿಯಲಾರದು. ಹಗಲು ರಾತ್ರಿ ಹೆಚ್ಚಿನ ವೇಳೆ ಮಾತೆಯ ಯಾವುದಾದರೂ ರೂಪವನ್ನು ಕಂಡು ಮೈಮರೆಯುತ್ತಿದ್ದುದರಿಂದ ನಾನು ಉಳಿದುಕೊಂಡೆ. ಇಲ್ಲದಿದ್ದರೆ ಈ ಕೋಶ (ದೇಹ) ಇರುತ್ತಿರಲಿಲ್ಲ. ಈ ಸಮಯದಿಂದ ಹಿಡಿದು ಆರು ವರ್ಷಗಳು ನನಗೆ ಎಳ್ಳಷ್ಟೂ ನಿದ್ರೆ ಬರಲಿಲ್ಲ. ಕಣ್ಣು ಮಿಟುಕಿಸುವುದನ್ನೇ ನಿಲ್ಲಿಸಿತ್ತು. ಕೆಲವೊಮ್ಮೆ ಪ್ರಯತ್ನಿಸಿದರೂ ಕಣ್ಣು ಮುಚ್ಚಲು ಆಗುತ್ತಿರಲಿಲ್ಲ. ಎಷ್ಟು ಸಮಯ ಕಳೆದು ಹೋಯಿತೊ ಅದರ ಅರಿವೇ ಇರುತ್ತಿರಲಿಲ್ಲ. ಶರೀರ ಉಳಿಸಿಕೊಳ್ಳಬೇಕು ಎಂಬ

ವಿಷಯವೇ ಮರೆತು ಹೋಗುತ್ತಿತ್ತು. ಶರೀರದ ಕಡೆ ಗಮನ ಹರಿದಾಗ ಅದರ ಅವಸ್ಥೆಯನ್ನು ನೋಡಿ ಭಯವಾಗುತ್ತಿತ್ತು. ನನಗೇನು ಹುಚ್ಚು ಹಿಡಿದಿದೆಯೋ ಎಂದೆನಿಸುತ್ತಿತ್ತು. ಕನ್ನಡಿಯ ಮುಂದೆ ನಿಂತು ಕಣ್ಣಿಗೆ ಬಟ್ಟನ್ನಿಟ್ಟು ನೋಡುತ್ತಿದ್ದೆ-ಕಣ್ಣು ರೆಪ್ಪೆ ಬಡಿಯುವುದೊ ಇಲ್ಲವೊ ಎಂದು. ಆದರಿಂದಲೂ ಕಣ್ಣಿನ ರೆಪ್ಪೆ ಹಂದಾಡುತ್ತಿರಲಿಲ್ಲ. ಭಯದಿಂದ ಅಳುತ್ತ ತಾಯಿಯನ್ನು ಕೇಳುತ್ತಿದ್ದೆ: 'ತಾಯಿ ನಿನ್ನನ್ನು ಕರೆವವರ, ನಿನ್ನ ಮೇಲೆ ದೃಢ ವಿಶ್ವಾಸ ಇಟ್ಟವರ ಗತಿ ಇದೆಯೇನು? ಶರೀರ ಭೀಷಣ ರೋಗದಿಂದ ನರಳಬೇಕೆ ? ' ಮತ್ತೆ ಮರುಕ್ಷಣವೇ ಹೇಳುತ್ತಿದ್ದೆ: 'ಆಗಲಿ ಏನು ಆಗಬೇಕೊ ಆಗಲಿ, ಶರೀರ ಬೇಕಾದರೆ ಹೋಗಲಿ, ಆದರೆ ನನ್ನನ್ನು ಕೈಬಿಡಬೇಡ ತಾಯಿ, ನನಗೆ ದರ್ಶನ ನೀಡು. ನನ್ನ ಮೇಲೆ ಕೃಪೆದೋರು. ನಾನು ನಿನ್ನಲ್ಲಿ ಸಂಪೂರ್ಣ ಶರಣಾಗಿದ್ದೇನೆ. ನೀನಿಲ್ಲದೆ ನನಗೆ ಬೇರೆ ಯಾವ ಗತಿಯೂ ಇಲ್ಲ.' ಹೀಗೆ ರೋದಿಸುತ್ತಿದ್ದಂತೆಯೇ ಮನಸ್ಸಿನಲ್ಲಿ ಅದ್ಭುತ ಉತ್ಸಾಹ ಉಂಟಾಗುತ್ತಿತ್ತು. ಶರೀರ ಅತ್ಯಂತ ತುಚ್ಛವೆನಿಸುತ್ತಿತ್ತು. ತಾಯಿಯ ದರ್ಶನವನ್ನು ಕಂಡು, ಅವಳ ಅಭಯವಾಣಿಯನ್ನು ಕೇಳಿ ಮನಸ್ಸಿಗೆ ಸಮಾಧಾನವಾಗುತ್ತಿತ್ತು.''

15. ಈ ಸಮಯದಲ್ಲಿಯೇ ಮಥುರನು ಶ್ರೀರಾಮಕೃಷ್ಣರಲ್ಲಿ ದೇವತ್ವವನ್ನು ಕಂಡಿದ್ದನು. ಅದೊಂದು ಅದ್ಭುತ ಘಟನೆ, ಶ್ರೀ ಜಗನ್ಮಾತೆಯ ಲೀಲೆ ! ಒಂದು ದಿವಸ ಅವನು ಅವರಲ್ಲಿ ಶ್ರೀಕಾಳಿ ಮತ್ತು ಶಿವ ಇವರಿಬ್ಬರನ್ನೂ ಕಂಡನು. ಈ ಘಟನೆಯ ವಿವರವನ್ನು ಓದುಗರು ಗುರುಭಾವದ ಪೂರ್ವಾರ್ಧದಲ್ಲಿ ಕಾಣಬಹುದು. ಅಂದಿನಿಂದ ಶ್ರೀರಾಮಕೃಷ್ಣರ ಬಗ್ಗೆ ಅವನ ದೃಷ್ಟಿ ಸಂಪೂರ್ಣ ಬದಲಾಯಿತು, ಅವರ ಮೇಲೆ ಭಕ್ತಿವಿಶ್ವಾಸ ಅಧಿಕವಾಯಿತು. ಸಾಧಕ ಜೀವನದಲ್ಲಿ ಅವನ ಸಹಾಯ ಬಹಳ ವಿದ್ದುದರಿಂದಲೇ ಶ್ರೀಜಗನ್ಮಾತೆ ಈ ಘಟನೆಯ ಮೂಲಕ ಅವರಿಬ್ಬರನ್ನು ಅವಿಚ್ಛೇದ್ಯವಾದ ಪ್ರೇಮ ಬಂಧನದಲ್ಲಿ ಕಟ್ಟಿ ಹಾಕಿದಳೆಂದು ತೋರುತ್ತದೆ.

ಹತ್ತನೆಯ ಅಧ್ಯಾಯ

ಭೈರವೀ ಬ್ರಾಹ್ಮಣಿಯ ಆಗಮನ

1. ರಾಣಿ ರಾಸಮಣಿಯ ತೀವ್ರ ವ್ಯಾಧಿ 2. ದಿನಾಜಪುರದ ಆಸ್ತಿಯನ್ನು ಅವಳು ದೇವಸ್ಥಾನಕ್ಕಾಗಿ ಬರೆದುಕೊಟ್ಟದ್ದು 3. ಅವಳ ಮೃತ್ಯು ಮತ್ತು ಆ ಸಂದರ್ಭ ದಲ್ಲಿ ಅವಳು ಕಂಡ ದರ್ಶನ 4. ರಾಣಿ ಮೃತ್ಯು ಸಂದರ್ಭದಲ್ಲಿ ಶಂಕಿಸಿದಂತೆಯೇ ಆಯಿತು. 5. ಮಥುರನ ಸಾಂಸಾರಿಕ ಪರಿಸ್ಥಿತಿ ಉತ್ತಮಗೊಂಡು ದೇವಸ್ಥಾನದ ಸೇವೆಯ ವ್ಯವಸ್ಥೆ ಮಾಡಿದನು 6. ಮಥುರನ ಸಂಪತ್ತು, ಅಧಿಕಾರ ಶ್ರೀರಾಮ ಕೃಷ್ಣರ ಸಹಾಯಕ್ಕಾಗಿ 7. ಶ್ರೀರಾಮಕೃಷ್ಣರ ಸಂಬಂಧವಾಗಿ ಮಥುರ ಮತ್ತಿತರರ ಭಾವನೆ 8. ಭೈರವೀ ಬ್ರಾಹ್ಮಣಿಯ ಆಗಮನ 9. ಶ್ರೀರಾಮಕೃಷ್ಣರ ಪ್ರಥಮ ದರ್ಶನ 10. ಅವರು ತಮ್ಮ ಅನುಭವಗಳನ್ನೆಲ್ಲ ಆಕೆಗೆ ಹೇಳುತ್ತಾರೆ. 11. ಪಂಚವಟಿಯಲ್ಲಿ ಭೈರವಿಗಾದ ಅಪೂರ್ವ ದರ್ಶನ 12. ಪಂಚವಟಿಯಲ್ಲಿ ಶಾಸ್ತ್ರಪ್ರಸಂಗ 13. ಭೈರವಿಯು ದೇವಮಂಡಲ ಘಟ್ಟದಲ್ಲಿ ವಾಸಿಸುತ್ತಾಳೆ 14. ಶ್ರೀರಾಮಕೃಷ್ಣರು ಅವತಾರವೆಂದು ಭೈರವಿಯ ವಿಶ್ವಾಸ 15. ಅವರು ಅವತಾರವೆಂದು ಅವಳು ಮಥುರನಿಗೆ ಹೇಳಿದುದು 16. ವೈಷ್ಣವಚರಣನು ದಕ್ಷಿಣೇಶ್ವರಕ್ಕೆ ಬರಲು ಕಾರಣ.

1. ಕ್ರಿ.ಶ. ೧೮೬೧ರಲ್ಲಿ ಶ್ರೀರಾಮಕೃಷ್ಣರು ಕಾಮಾರಪುಕುರದಿಂದ ದಕ್ಷಿಣೇಶ್ವರಕ್ಕೆ ಹಿಂದಿರುಗಿದಮೇಲೆ ಎರಡು ಘಟನೆಗಳು ಸಂಭವಿಸಿದುವು. ಈ ಎರಡೂ ಘಟನೆಗಳು ಅವರ ಜೀವನದಲ್ಲಿ ವಿಶೇಷ ಪರಿವರ್ತನೆ ಉಂಟುಮಾಡಿದವುಗಳಾಗಿವೆ. ಆದ್ದರಿಂದ ಅವುಗಳ ಬಗ್ಗೆ ಇಲ್ಲಿ ಹೇಳುವುದು ಆವಶ್ಯಕವಾಗಿದೆ. ೧೮೬೧ರ ಪ್ರಾರಂಭದಲ್ಲಿ ರಾಣಿ ರಾಸಮಣಿಗೆ ಆಮಶಂಕೆ ರೋಗ ಉಂಟಾಯಿತು. ಒಂದುದಿನ ರಾಸಮಣಿ ಇದ್ದಕ್ಕಿದ್ದಂತೆ ಬಿದ್ದುಬಿಟ್ಟಳು. ಇದರಿಂದ ಜ್ವರ, ಮೈ ಕೈ ನೋವು ಶುರುವಾಯಿತು, ಅನಂತರ ಅಜೀರ್ಣ, ಹೀಗೆ ಕ್ರಮೇಣ ಆಮಶಂಕೆ ಶುರುವಾಯಿತು. ವ್ಯಾಧಿ ಬರಬರುತ್ತ ಉಲ್ಬಣ ವಾಯಿತು.

2. ನಾವು ಮೊದಲೇ ಹೇಳಿರುವಂತೆ ರಾಣಿ ರಾಸಮಣಿಯು ದೇವಿಯ ಪ್ರತಿಷ್ಠೆ ಮಾಡಿದುದು ೧೮೫೫, ಮೇ ೩೧ನೇ ತಾರೀಖು ಗುರುವಾರದಂದು. ದೇವಸ್ಥಾನದ ಖರ್ಚಿ ಗಾಗಿ ಅದೇ ವರ್ಷ ಆಗಸ್ಟ್ ತಿಂಗಳಲ್ಲಿ ದಿನಾಜಪುರ ಜಿಲ್ಲೆಯಲ್ಲಿ ೨೨೬೦೦೦ ರೂಪಾಯಿಗೆ ಮೂರು ಎಸ್ಟೇಟುಗಳನ್ನು ಖರೀದಿಸಿದ್ದಳು. ಆದರೆ ಅವಳು ಮನಸ್ಸಿನಲ್ಲಿ ಸಂಕಲ್ಪಿ ಸಿದ್ದರೂ ಇನ್ನೂ ದಾನಪತ್ರ ಮಾಡಿಸಿ ಅದನ್ನು ದೇವಸ್ಥಾನಕ್ಕೆ ಒಪ್ಪಿಸಿರಲಿಲ್ಲ. ತನ್ನ

ಸಾವು ಸಮೀಪಿಸುತ್ತಿದೆಯೆಂದು ತಿಳಿದ ಅವಳು ಈ ಕಾರ್ಯವನ್ನು ಬೇಗ ಮುಗಿಸ ಬೇಕೆಂದು ಆಶಿಸಿದಳು. ರಾಣಿಯ ನಾಲ್ಕು ಹೆಣ್ಣುಮಕ್ಕಳ ಪೈಕಿ ಎರಡನೆಯ ಮತ್ತು ಮೂರನೆಯವರಾದ ಕುಮಾರಿ ಮತ್ತು ಕರುಣಾಮಯಿ ಕಾಳೀ ಮಂದಿರದ ಪ್ರತಿಷ್ಠಾಪ ನೆಗೆ ಮುಂಚೆಯೇ ತೀರಿಹೋಗಿದ್ದರು. ಈಗ ಉಳಿದಿರುವವರು ಪದ್ಮಮಣಿ ಮತ್ತು ಜಗದಂಬಾ ದಾಸೀ ಇವರಿಬ್ಬರೇ. ದಾನಪತ್ರ ಸಿದ್ಧವಾದ ಮೇಲೆ ಮುಂದೆ ಯಾವ ತೊಂದರೆಯೂ ಆಗದಿರಲೆಂದು ಅದಕ್ಕೆ ತಮ್ಮ ಒಪ್ಪಿಗೆಯ ಸಹಿ ಹಾಕಬೇಕೆಂದು ರಾಣಿ ತನ್ನ ಮಕ್ಕಳಿಬ್ಬರನ್ನು ಕೇಳಿಕೊಂಡಳು. ಜಗದಂಬಾ ದಾಸಿಯು ಕೂಡಲೇ ಸಮ್ಮತಿಸಿ ಸಹಿ ಹಾಕಿದಳು, ಆದರೆ ಪದ್ಮಮಣಿಯು ಸಹಿ ಹಾಕಲು ನಿರಾಕರಿಸಿದಳು. ಇದರಿಂದ ರಾಣಿಯ ಮನಸ್ಸಿನ ಶಾಂತಿ ಕದಡಿತು. ಕೊನೆಗೆ ದೈವೇಚ್ಛೆಯಂತಾಗಲೆಂದು ನಿರ್ಧರಿಸಿ ಪತ್ರಕ್ಕೆ ತನ್ನ ಸಹಿಯನ್ನು ಹಾಕಿ ಮುಗಿಸಿದಳು. ಇದರ ಮರುದಿನ ೧೮೬೧, ಫೆಬ್ರುವರಿ ೧೮ನೇ ದಿನಾಂಕ ರಾತ್ರಿ ವೇಳೆಯಲ್ಲಿ ರಾಣಿಯು ಶರೀರವನ್ನು ತ್ಯಜಿಸಿ ದೇವಿಯ ಸಂನಿಧಿಯನ್ನು ಸೇರಿದಳು,

3. ಸಾವಿಗೆ ಕೆಲವು ದಿನಗಳ ಹಿಂದೆ ರಾಣಿ ರಾಸಮಣಿಯು ಕಾಳಿ ಘಾಟಿನ ಆದಿ ಗಂಗಾ ತೀರದಲ್ಲಿದ್ದ ಮನೆಗೆ ಬಂದು ಅಲ್ಲಿ ವಾಸಿಸುತ್ತಿದ್ದಳು ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಮೃತ್ಯುವಿಗೆ ಮುಂಚೆ ಅವಳನ್ನು ಗಂಗಾತೀರಕ್ಕೆ ಕರೆದುಕೊಂಡು ಹೋದಾಗ ಅಲ್ಲಿ ತನ್ನ ಮುಂದೆ ಅನೇಕ ದೀಪಗಳು ಉರಿಯುತ್ತಿರುವುದನ್ನು ನೋಡಿ ದಳು. ಕೂಡಲೇ ಅವಳಂದಳು, "ಅದನ್ನೆಲ್ಲ ತೆಗೆಯಿರಿ, ಅವೆಲ್ಲ ಆಡಂಬರ ನನಗೀಗ ಬೇಕಿಲ್ಲ. ಈಗ ನನ್ನ ತಾಯಿ (ಶ್ರೀ ಜಗನ್ಮಾತೆ) ಬಂದಿರುವಳು. ಅವಳ ಪ್ರಭೆಯಿಂದ ನಾಲ್ಕು ದಿಕ್ಕೂ ಬೆಳಗುತ್ತಿದೆ." ಸ್ವಲ್ಪ ಹೊತ್ತಿನ ನಂತರ ಹೇಳಿದಳು, "ತಾಯಿ, ಬಂದೆಯಾ ! ಪದ್ಮ ಸಹಿ ಹಾಕಲಿಲ್ಲ, ಏನಾಗುವುದೊ, ತಾಯಿ !" ಹೀಗೆ ಹೇಳುತ್ತಲೆ ರಾಣಿಯು ಶಾಂತಭಾವದಿಂದ ತಾಯಿಯ ಮಡಿಲಲ್ಲಿ ತಲೆಯಿಟ್ಟು ಮಲಗಿ ಚಿರನಿದ್ರೆಯಲ್ಲಿ ತಲ್ಲೀನಳಾದಳು. ಆಗ ನಡುರಾತ್ರಿ, ಸುತ್ತಲೂ ನರಿಗಳ ಕೂಗು ಕೇಳಿಸಿತು.*

4. ಮುಂದೆ ಈ ದೇವಸ್ಥಾನದ ಆಸ್ತಿಗೆ ಸಂಬಂಧಿಸಿದಂತೆ ರಾಣಿಯ ಮೊಮ್ಮಕ್ಕ ಳಲ್ಲಿ ಬಹಳ ಜಗಳ ಮೊಕದ್ದಮೆಗಳು ನಡೆದುವು. ಇದನ್ನು ಗಮನಿಸಿದಾಗ ದೂರದೃಷ್ಟಿ ಯುಳ್ಳ ರಾಣಿಯು ಏಕೆ ಸಹಿ ಪಡೆಯುವ ವಿಷಯದಲ್ಲಿ ಅಷ್ಟೊಂದು ಕಾತರಳಾಗಿದ್ದಳು ಎಂಬುದನ್ನು ಅರ್ಥಮಾಡಿಕೊಳ್ಳಬಹುದು. ಶ್ರೀ ದೇವಿಯ ಸೇವೆ ಯಥೋಚಿತವಾಗಿ ನಡೆಯಬೇಕೆಂದು ಅವಳೆಷ್ಟು ಚಿಂತಿತಳಾಗಿದ ಳೆಂಬುದು ಇದರಿಂದ ತಿಳಿದುಬರುತ್ತದೆ. ಹಿರಿಯ ಮಗಳು ಸಹಿ ಹಾಕದಿದ್ದಾಗ ಅವಳಿಗೆ ರೋಗದ ಸಂಕಟಕ್ಕಿಂತ ಇದರ ಸಂಕಟವೇ ತೀವ್ರವಾಗಿತ್ತೆಂದು ತೋರುತ್ತದೆ. ಮೊಕದ್ದಮೆಯ ಖರ್ಚಿನಿಂದುಂಟಾದ ಸಾಲವನ್ನು

* ದೇವಿಯು ನರಿಗಳಿಂದ ಸುತ್ತುವರಿದಿರುತ್ತಾಳೆ. ಆದ್ದರಿಂದ ನರಿಯ ಕೂಗು ಶುಭ ಸೂಚಕವೆಂದು ಪರಿಗಣಿಸುತ್ತಾರೆ.

ತೀರಿಸಲು ಆ ದೇವಸ್ಥಾನದ ಆಸ್ತಿಯನ್ನು ಕೇವಲ ಒಂದುಲಕ್ಷ ರೂಪಾಯಿಗೆ ಒತ್ತೆಯಿಡ ಬೇಕಾಯಿತೆಂದು (mortgaged) ಕೋರ್ಟಿನ ಕಾಗದ ಪತ್ರಗಳಿಂದ ತಿಳಿದುಬರು ವುದು. ರಾಣಿ ರಾಸಮಣಿಯ ಮಹತ್‌ಕಾರ್ಯದ ಕೀರ್ತಿ ಈ ದುರದೃಷ್ಟಕರ ವಿವಾದ ದಿಂದಾಗಿ ಕೇವಲ ಹೆಸರಿಗೆ ಮಾತ್ರ ಉಳಿಯುವುದೆ ಮತ್ತು ಕ್ರಮೇಣ ಲುಪ್ತವಾಗಿ ಹೋಗುವುದೆ ? ಈ ಪ್ರಶ್ನೆಯನ್ನು ಕಾಲವೇ ಉತ್ತರಿಸುವುದು.

5. ರಾಣಿಯ ಕಿರಿಯ ಅಳಿಯ ಮಥುರಮೋಹನ ವಿಶ್ವಾಸನು ಅವಳ ಎಲ್ಲ ಕಾರ್ಯಕಲಾಪಗಳಲ್ಲಿ ಬಲಗೈಯಂತೆ ಇದ್ದನು. ದೇವಸ್ಥಾನದ ಪ್ರತಿಷ್ಠಾಪನೆಯಾದಂದಿ ನಿಂದ ಅದರ ಎಲ್ಲ ಕಾರ್ಯಭಾರವನ್ನು ತಾನು ವಹಿಸಿಕೊಂಡು ಅವಳ ಇಚ್ಛೆಯಂತೆ ಎಲ್ಲ ವ್ಯವಸ್ಥೆ ಮಾಡುತ್ತಿದ್ದನು. ರಾಣಿಯ ಮೃತ್ಯುವಿನ ನಂತರವೂ ಅವನು ಎಲ್ಲ ಜವಾಬ್ದಾರಿಯನ್ನು ತಾನು ವಹಿಸಿಕೊಂಡು ದಕ್ಷರೀತಿಯಲ್ಲಿ ತನ್ನ ಕಾರ್ಯವನ್ನು ಮುಂದು ವರಿಸಿದನು. ಶ್ರೀರಾಮಕೃಷ್ಣರ ಪ್ರಭಾವದಿಂದ ಭಗವದ್‌ಭಕ್ತಿ ಅವನ ಮನಸ್ಸಿನಲ್ಲಿ ತನ್ನ ಅಧಿಕಾರವನ್ನು ಇನ್ನೂ ವಿಸ್ತರಿಸಿತು. ದಕ್ಷಿಣೇಶ್ವರದಲ್ಲಿ ಮಾತೃಸೇವೆಯು ರಾಣಿಯ ಮೃತ್ಯುವಿನಿಂದ ಯಾವ ರೀತಿಯಲ್ಲಿಯೂ ಕುಂಠಿತವಾಗಲಿಲ್ಲ.

6. ಶ್ರೀರಾಮಕೃಷ್ಣ ಮತ್ತು ಮಥುರ ಬಾಬು ಇವರ ನಿಕಟಸಂಬಂಧದ ವಿಷಯ ವನ್ನು ಮೊದಲೇ ಹೇಳಿಯಾಗಿದೆ. ಈಗ ಶ್ರೀರಾಮಕೃಷ್ಣರು ಸುದೀರ್ಘ ತಂತ್ರಸಾಧನೆ ಗಳಲ್ಲಿ ನಿರತರಾಗುವ ಸಮಯ. ಮಥುರನ ಸಹಾಯದ ಆವಶ್ಯಕತೆ ಅವರಿಗೆ ಬಹಳವಿತ್ತು. ಅವನೂ ಈ ಅವಕಾಶವನ್ನು ಸರಿಯಾಗಿ ಉಪಯೋಗಿಸಿಕೊಂಡನು. ಅವನು ರಾಣಿ ರಾಸಮಣಿಯ ಆಧಿಪತ್ಯವನ್ನು ವಹಿಸಿಕೊಂಡುದು ಇದಕ್ಕಾಗಿಯೇ ಏನೊ ಎಂಬಂತಿತ್ತು. ಶ್ರೀರಾಮಕೃಷ್ಣರನ್ನು ದಿವ್ಯಪುರುಷರೆಂದು ಪರಿಗಣಿಸಿ ಅವರ ಸೇವೆ ಮಾಡುವುದೇ ಅವನ ಪ್ರಧಾನ ಕಾರ್ಯವಾಯಿತು. ದೀರ್ಘಕಾಲ ಒಂದೇಸಮನೆ ದೃಢವಿಶ್ವಾಸವನ್ನು ಉಳಿಸಿ ಕೊಂಡು ಉಚ್ಚಜೀವನವನ್ನು ನಡೆಸಿಕೊಂಡುಹೋಗುವುದು ದೈವಕೃಪೆಯಿಂದ ಮಾತ್ರ ಸಾಧ್ಯ. ರಾಣಿಯ ವಿಪುಲ ಸಂಪತ್ತಿನ ಒಡೆಯನಾಗಿಯೂ ದುರ್ಮಾರ್ಗಕ್ಕಿಳಿಯಲಿಲ್ಲ. ಅವನಲ್ಲಿ ಶ್ರೀರಾಮಕೃಷ್ಣರ ಮೇಲೆ ಶ್ರದ್ಧಾಭಕ್ತಿ ಅಧಿಕವಾಗುತ್ತ ಹೋಯಿತು. ಅಂದಿ ನಿಂದ ಹನ್ನೊಂದು ವರ್ಷಗಳವರೆಗೆ ಸಮಭಾವದಲ್ಲಿ ಅವರ ಸೇವೆಯನ್ನು ಮಾಡಿದನು. ಇದೊಂದು ಅವನ ದೊಡ್ಡ ಭಾಗ್ಯವೆಂದೇ ಹೇಳಬೇಕು.

7. ಇದುವರೆವಿಗೂ ಕೇವಲ ಆಧ್ಯಾತ್ಮಿಕ ಸಾಧಕರು ಮಾತ್ರ ಶ್ರೀರಾಮಕೃಷ್ಣರ ದಿವ್ಯೋನ್ಮಾದವನ್ನು ಅರ್ಥಮಾಡಿಕೊಂಡಿದ್ದರು. ಉಳಿದವರೆಲ್ಲ ಅವರಿಗೆ ಹುಚ್ಚು ಎಂದೇ ಭಾವಿಸಿದ್ದರು. ಏಕೆಂದರೆ ಅವರಿಗೆ ಪ್ರಾಪಂಚಿಕ ಭೋಗಸುಖಗಳಕಡೆ ಗಮನವೇ ಇರಲಿಲ್ಲ, ಯಾವಾಗಲೂ ಜನಸಾಮಾನ್ಯರ ಬುದ್ಧಿಗೆ ನಿಲುಕದ ಭಾವಪ್ರಪಂಚದಲ್ಲಿ ವಿಹರಿಸುತ್ತ ಕೆಲವೊಮ್ಮೆ 'ಹರಿ, ಹರ' ಎನ್ನುತ್ತ, ಕೆಲವೊಮ್ಮೆ 'ರಾಮ, ರಾಮ' ಎನ್ನುತ್ತಾ, ಕೆಲವೊಮ್ಮೆ 'ಮಾ, ಮಾ' ಎನ್ನುತ್ತ ದಿನ ಕಳೆಯುತ್ತಿದ್ದರು. ರಾಣಿ ರಾಸಮಣಿ ಮತ್ತು ಮಥುರನಾಥ ಇವರ ಮನಸ್ಸನ್ನು ಒಲಿಸಿ ಎಷ್ಟೊಂದು ಜನ ಹಣವಂತರಾಗಿರು

ವರು ! ಆದರೆ ಶ್ರೀರಾಮಕೃಷ್ಣರು ಅವರ ಪ್ರೀತಿಗೆ ಒಳಗಾಗಿಯೂ ತಮ್ಮ ಸಾಂಸಾರಿಕ ಪರಿಸ್ಥಿತಿಯನ್ನು ಉತ್ತಮಪಡಿಸುವ ಗೋಜಿಗೆ ಹೋಗಲಿಲ್ಲ. ಇದನ್ನೆಲ್ಲ ಗಮನಿಸಿದ ಜನರು ಶ್ರೀರಾಮಕೃಷ್ಣರನ್ನು ಹಿತ-ಅಹಿತ ಪರಿಜ್ಞಾನವಿಲ್ಲದ ಹುಚ್ಚರೆಂದು ಪರಿಗಣಿಸಿದುದು ಸ್ವಾಭಾವಿಕವೆ. ಆದರೆ ಅವರ ಕೆಲವು ವಿಶಿಷ್ಟ ಗುಣಗಳು ಜನಸಾಮಾನ್ಯರನ್ನೂ ಆಕರ್ಷಿಸದೆ ಬಿಡಲಿಲ್ಲ. ಅವರ ಉಜ್ವಲ ಕಣ್ಣುಗಳು, ಅವರ ಗಂಭೀರ ನಡೆ-ನುಡಿ, ಅವರ ಮಧುರ ಕಂಠ, ಅವರ ಮಾತಿನ ಚಾಕಚಕ್ಯತೆ ಮತ್ತು ಅವರ ಚುರುಕು ಬುದ್ಧಿ— ಈ ಗುಣಗಳು ಎಲ್ಲರ ಗಮನವನ್ನೂ ಸೆಳೆದುವು. ಜನಸಾಮಾನ್ಯರು ಯಾರ ಮುಂದೆ ಹೋಗಲು ಹಿಂಜರಿಯುತ್ತಾರೊ ಅಂಥ ಶ್ರೀಮಂತರು ಪಂಡಿತರುಗಳನ್ನೂ ನಿಃಸಂಕೋಚವಾಗಿ ಸಂಧಿಸಿ ಬಹುಬೇಗನೆ ಅವರ ಮೆಚ್ಚಿಕೆಗೆ ಪಾತ್ರರಾಗಿಬಿಡುವ ಸಾಮರ್ಥ್ಯ ಅವರಿಗಿತ್ತು. ಜನಸಾಮಾನ್ಯರು ಮತ್ತು ದೇವಸ್ಥಾನದ ಅಧಿಕಾರಿಗಳು ಅವರ ಬಗ್ಗೆ ಏನೇ ಭಾವಿಸಿದರೂ ಮಥುರನಾಥನ ನಂಬಿಕೆ ಏನೆಂದರೆ, "ಶ್ರೀಜಗನ್ಮಾತೆಯ ಕೃಪೆ ಅವರ ಮೇಲೆ ಇರುವುದರಿಂದಲೇ ಅವರಿಗೆ ಈ ರೀತಿ ಉನ್ಮತ್ತಾವಸ್ಥೆ ಉಂಟಾಗಿದೆ—" ಎಂದು.

8. ರಾಣಿ ರಾಸಮಣಿಯ ಮೃತ್ಯುವಿನ ಸ್ವಲ್ಪ ಕಾಲದ ನಂತರ ಇನ್ನೊಂದು ವಿಶೇಷ ಘಟನೆ ಸಂಭವಿಸಿತು. ದಕ್ಷಿಣೇಶ್ವರದ ಪಶ್ಚಿಮದ ಕಡೆಗೆ ಗಂಗಾತೀರದಲ್ಲಿ ಮೊದಲು ಒಂದು ಸುಂದರ ಪುಷ್ಪೋದ್ಯಾನವಿತ್ತು, ಶ್ರಮಪಟ್ಟು ಅದನ್ನು ರಕ್ಷಿಸುತ್ತಿದ್ದುದರಿಂದ ಅಲ್ಲಿ ಮರ ಗಿಡ ಬಳ್ಳಿಗಳು ಸುಂದರ ಪುಷ್ಪಗಳಿಂದ ಶೋಭಿಸುತ್ತಿದ್ದುವು. ಅವುಗಳ ಸುಗಂಧ ಸುತ್ತಲೂ ಹರಡಿ ಎಲ್ಲರನ್ನೂ ಆಹ್ವಾನಿಸುತ್ತಿತ್ತು. ಈಗ ಶ್ರೀರಾಮಕೃಷ್ಣರು ಪೂಜೆ ಮಾಡುತ್ತಿರಲಿಲ್ಲ. ಆದರೂ ಅವರು ಈ ಹೂದೋಟಕ್ಕೆ ಬಂದು ಹೂವುಗಳನ್ನು ಕಿತ್ತು ಮಾಲೆ ಮಾಡಿ ತಾವೇ ದೇವಿಯನ್ನು ಅಲಂಕರಿಸುತ್ತಿದ್ದರು. ತೋಟದ ಮಧ್ಯದಲ್ಲಿಯೇ ಗಂಗೆಯಿಂದ ದೇವಾಲಯಕ್ಕೆ ಹೋಗಲು ಸೋಪಾನಪಂಕ್ತಿ ಈಗಲೂ ಇದೆ. ನದೀದಂಡೆಯ ಉತ್ತರಕ್ಕೆ ಸ್ತ್ರೀಯರ ಬಳಕೆಗಾಗಿ ಒಂದು ಇಟ್ಟಿಗೆಯಿಂದ ನಿರ್ಮಿತವಾದ ಘಟ್ಟ ಇದೆ. ಕಾಳೀ ದೇವಸ್ಥಾನದ ಉತ್ತರಕ್ಕೆ ನಹಬತ್ ಇದೆ. ಅಲ್ಲಿ ಒಂದು ಬಕುಲ ವೃಕ್ಷವಿದ್ದುದರಿಂದ ಆ ಘಟ್ಟವನ್ನು ಜನರು ಬಕುಲ-ಘಾಟ್ ಎಂದು ಕರೆಯುತ್ತಿದ್ದರು.

ಶ್ರೀರಾಮಕೃಷ್ಣರು ಒಂದು ದಿನ ಬೆಳಗ್ಗೆ ಹೂ ಕೀಳುತ್ತಿದ್ದರು. ಆಗ ಬಕುಲ ಘಾಟಿಗೆ ಒಂದು ದೋಣಿ ಬಂತು. ಕಾವಿಬಟ್ಟೆಯುಟ್ಟು, ಕೆದರಿದ ನೀಳವಾದ ತಲೆಗೂದಲಿನಿಂದ ಕೂಡಿದ, ಭೈರವೀ ವೇಷ ಧರಿಸಿದ್ದ ಸುಂದರ ಸ್ತ್ರೀಯೊಬ್ಬಳು ದೋಣಿಯಿಂದ ಇಳಿದು ದೇವಸ್ಥಾನದ ಮುಖಮಂಟಪದ ಕಡೆ ಹೊರಟಳು. ಪ್ರೌಢ ವಯಸ್ಕಳಾದರೂ ಯೌವನದ ಸೌಂದರ್ಯ ಅವಳ ಶರೀರವನ್ನು ಇನ್ನೂ ಬಿಟ್ಟಿರಲಿಲ್ಲ. ಆಕೆಯ ವಯಸ್ಸು ಆಗ ಸುಮಾರು ನಲವತ್ತು ವರ್ಷ ಇದ್ದಿರಬಹುದೆಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಆಕೆಯೊಡನೆ ತಮ್ಮ ಮುಂದಿನ ನಿಕಟ ಸಂಬಂಧದ ಬಗ್ಗೆ ಅವರಿಗೆ ಆಗ ಸುಳಿವು ಸಿಕ್ಕಿತ್ತೊ, ಇಲ್ಲವೊ ಹೇಳಲಾಗುವುದಿಲ್ಲ. ನಿಕಟ ಆತ್ಮೀಯರನ್ನು ಕಂಡಾಗ ಹೇಗೆ ಆಕರ್ಷಣೆ

ಉಂಟಾಗುವುದೊ ಹಾಗೆಯೇ ಅವಳನ್ನು ನೋಡಿದಾಗ ಶ್ರೀರಾಮಕೃಷ್ಣರಿಗೂ ಆಯಿತು. ಅವರು ತಮ್ಮ ಕೊಠಡಿಗೆ ಹಿಂದಿರುಗಿ ಅವಳನ್ನು ಕರೆದುಕೊಂಡು ಬರಲು ಹೃದಯನಿಗೆ ಹೇಳಿದರು. ಅವನು ಹಿಂದೆ ಮುಂದೆ ನೋಡತೊಡಗಿದ. ''ಅಪರಿಚಿತ ಸ್ತ್ರೀಯನ್ನು ಹೇಗೆ ಕರೆಯುವುದು ?'' ಎಂದು ಕೇಳಿದನು. ''ನನ್ನ ಹೆಸರನ್ನು ಹೇಳಿ ಕರೆದರೆ ಬರುತ್ತಾಳೆ'' ಎಂದರು ಶ್ರೀರಾಮಕೃಷ್ಣರು. ಅಪರಿಚಿತ ಸಂನ್ಯಾಸಿನಿಯ ಹತ್ತಿರ ಮಾತನಾಡಬೇಕೆಂದು ಅವರು ಬಯಸುವುದನ್ನು ನೋಡಿ ತನಗೆ ಅತ್ಯಾಶ್ಚರ್ಯವಾಯಿತು ಎಂದು ಹೃದಯನು ಹೇಳುತ್ತಿದ್ದನು, ಅವರು ಈ ರೀತಿ ವರ್ತಿಸಿದುದನ್ನು ಅವನು ಎಂದೂ ಕಂಡಿರಲಿಲ್ಲ.

9. ಮಾವನ ಮಾತನ್ನು ನಿರಾಕರಿಸಲಾಗದೆ ಹೃದಯನು ಭೈರವಿಯನ್ನು ಕರೆಯಲು ಹೋದನು. ಅವಳು ಮುಖಮಂಟಪದಲ್ಲಿ ಕುಳಿತುಕೊಂಡಿದ್ದಳು, ಆಕೆಯನ್ನು ಸಂಬೋಧಿಸಿ ಹೇಳಿದನು, ತನ್ನ ಭಗವದ್ ಭಕ್ತನಾದ ಮಾವನು ಆಕೆಯ ದರ್ಶನಕ್ಕಾಗಿ ಪ್ರಾರ್ಥಿಸುತ್ತಿರುವನು ಎಂದು. ಈ ಮಾತನ್ನು ಕೇಳಿ ಮರು ಮಾತಾಡದೆ ಭೈರವಿಯು ಅವನೊಡನೆ ಹೋಗಲು ಮೇಲೆದ್ದಳು. ಇದು ಅವನನ್ನು ಇನ್ನೂ ಚಕಿತಗೊಳಿಸಿತು,

ಶ್ರೀರಾಮಕೃಷ್ಣರ ಕೋಣೆಯನ್ನು ಪ್ರವೇಶಿಸಿ ಅವರನ್ನು ನೋಡಿದಾಕ್ಷಣ ಭೈರವಿಯು ಆನಂದದಿಂದ ತುಂಬಿಹೋದಳು, ಕಣ್ಣುಗಳು ಹನಿಗೂಡಿದವು. ಚಿರಪರಿಚಿತಳಂತೆ ಹೇಳತೊಡಗಿದಳು : ''ಹೋ, ನೀನು ಇಲ್ಲಿ ಇದ್ದೀಯ ? ನೀನು ಗಂಗಾತೀರದಲ್ಲೆಲ್ಲೋ ಇರುವೆಯೆಂದು ತಿಳಿದು ನಿನಗಾಗಿ ಹುಡುಕುತ್ತಿದ್ದೆ. ಇಷ್ಟು ದಿನಗಳಾದ ಮೇಲೆ ನೀನು ಸಿಕ್ಕಿದೆ''. ಶ್ರೀರಾಮಕೃಷ್ಣರು ಕೇಳಿದರು : ''ನಿನಗೆ ಹೇಗಮ್ಮ ನನ್ನ ವಿಚಾರ ತಿಳಿಯಿತು ?'' ಭೈರವಿಯು ಉತ್ತರಿಸಿದಳು : ''ನೀವು ಮೂವರನ್ನು ನಾನು ನೋಡಬೇಕೆಂದು ಶ್ರೀಜಗನ್ಮಾತೆಯು ನನಗೆ ತಿಳಿಸಿಕೊಟ್ಟಿರುವಳು, ಇಬ್ಬರನ್ನು ಪೂರ್ವ ಬಂಗಾಳದಲ್ಲಿ ನೋಡಿದೆ. ಇಂದು ಇಲ್ಲಿ ನಿನ್ನನ್ನು ನೋಡಿದೆ.''

10, ಶ್ರೀರಾಮಕೃಷ್ಣರು ಆಕೆಯ ಸಮೀಪ ಕುಳಿತು ಬಾಲಕನು ತನ್ನ ತಾಯಿಯ ಮುಂದೆ ತನ್ನ ಎಲ್ಲ ವಿಷಯವನ್ನು ಹೇಳುವಂತೆ ತಮ್ಮ ಅಲೌಕಿಕ ದರ್ಶನಗಳು, ತಾವು ಭಾವಾವೇಶದಲ್ಲಿ ಮೈಮರೆಯುವುದು, ದೇಹದ ಉರಿ, ನಿದ್ರಾಹೀನತೆ, ದೈಹಿಕ ವಿಕಾರಗಳು—ಹೀಗೆ ತಮಗೇನೇನಾಗುತ್ತಿತ್ತೊ ಅವನ್ನೆಲ್ಲ ಬಿಚ್ಚು ಮನಸ್ಸಿನಿಂದ ಹೇಳತೊಡಗಿದರು. ಮತ್ತೆ ಮತ್ತೆ ಆಕೆಯನ್ನು ಕೇಳಿದರು: ''ಇದೇನು ನನಗೆ ಹೀಗೆಲ್ಲ ಆಗುತ್ತಿದೆ ? ನಾನು ನಿಜವಾಗಿಯೂ ಹುಚ್ಚನಾಗಿರುವೆನೆ ? ಜಗನ್ಮಾತೆಯನ್ನು ಹೃನ್ಮನ ಪೂರ್ವಕವಾಗಿ ಕರೆದುದರ ಫಲವೇ ಇದು ?'' ಅವರ ಮಾತನ್ನೆಲ್ಲ ಕೇಳುತ್ತ ಭೈರವಿಯು ಒಮ್ಮೊಮ್ಮೆ ಆನಂದಿಸಿದಳು. ಒಮ್ಮೊಮ್ಮೆ ಉತ್ಸಾಹಭರಿತಳಾದಳು, ಕೊನೆಯಲ್ಲಿ ಕರುಣಾಮಯಿ ಜನನಿಯಂತೆ ಅವರನ್ನು ಸಮಾಧಾನಪಡಿಸಿದಳು : ''ನಿನ್ನನ್ನು ಯಾರಪ್ಪ ಹುಚ್ಚ ಎಂದು ಕರೆಯುವುದು ? ಇದು ಹುಚ್ಚಲ್ಲ. ನಿನಗೆ ಮಹಾಭಾವ ಉಂಟಾಗಿದೆ. ಆದ್ದರಿಂದಲೇ ಹೀಗೆಲ್ಲ ಆಗುತ್ತಿದೆ. ನಿನ್ನ ಸ್ಥಿತಿಯನ್ನು ಸಾಮಾನ್ಯರು ಅರ್ಥಮಾಡಿಕೊಳ್ಳಲು ಸಾಧ್ಯವೆ ? ಆದಕ್ಕಾಗಿಯೇ ಅವರು ಹಾಗೆ ಹೇಳುತ್ತಾರೆ. ಶ್ರೀರಾಧೆಗೆ ಇಂಥ ಅವಸ್ಥೆ

ಉಂಟಾಗಿತ್ತು ಮತ್ತು ಶ್ರೀಚೈತನ್ಯನಿಗೂ ಆಗಿತ್ತು. ಈ ವಿಷಯ ಭಕ್ತಿಶಾಸ್ತ್ರದಲ್ಲಿದೆ. ಭಗವಂತನನ್ನು ಒಂದೇ ಮನಸ್ಸಿನಿಂದ ಕರೆಯುವವರಿಗೆಲ್ಲ ಇದೇ ರೀತಿಯಾಗುವುದೆಂದು ನನ್ನಲ್ಲಿರುವ ಗ್ರಂಥಗಳಲ್ಲಿ ತೋರಿಸುತ್ತೇನೆ''. ಭೈರವೀ ಬ್ರಾಹ್ಮಣಿಯು ತನ್ನ ಮಾವನೊಡನೆ ಈ ರೀತಿ ಆತ್ಮೀಯತೆಯಿಂದ ಮಾತನಾಡುವುದನ್ನು ಕೇಳಿ ಹೃದಯನ ವಿಸ್ಮಯಕ್ಕೆ ಪಾರವೇ ಇಲ್ಲವಾಯಿತು.

11, ಹೀಗೆ ಮಾತನಾಡುತ್ತ ತುಂಬ ಸಮಯ ಕಳೆಯಿತು. ಶ್ರೀರಾಮಕೃಷ್ಣರು ದೇವಿಯ ಪ್ರಸಾದವಾದ ಹಣ್ಣು ಸಿಹಿತಿಂಡಿ ಮುಂತಾದುವುಗಳನ್ನು ಅವಳಿಗೆ ತಿನ್ನಲು ಕೊಟ್ಟರು, ವಾತ್ಸಲ್ಯ ಸ್ವರೂಪಳಾದ ಆಕೆ ಪುತ್ರನು ತಿನ್ನದೆ ಹೇಗೆ ಮೊದಲು ತಿಂದಾಳು ! ಅದಕ್ಕಾಗಿಯೇ ಅವರು ಅದರಲ್ಲಿ ಸ್ವಲ್ಪಾಂಶವನ್ನು ತಾವು ಮೊದಲು ಸ್ವೀಕರಿಸಿದರು. ದೇವತಾದರ್ಶನ ತಿಂಡಿ ಎಲ್ಲ ಆದ ಮೇಲೆ ಭೈರವಿಯು ತನ್ನ ಕುತ್ತಿಗೆಯಲ್ಲಿ ಧರಿಸಿದ್ದ ರಘುವೀರ ಶಿಲೆಗೆ ನೈವೇದ್ಯವನ್ನು ಅರ್ಪಿಸಲು ದೇವಸ್ಥಾನದ ಉಗ್ರಾಣದಿಂದ ಹಿಟ್ಟು ಅಕ್ಕಿ ಮುಂತಾದುವುಗಳನ್ನು ಭಿಕ್ಷಾರೂಪದಲ್ಲಿ ಪಡೆದು ಪಂಚವಟಿಯಲ್ಲಿ ಅಡಿಗೆ ಮಾಡ ತೊಡಗಿದಳು. ಅಡಿಗೆ ಮುಗಿಯಿತು. ರಘುವೀರನಿಗೆ ನೈವೇದ್ಯವನ್ನು ಅರ್ಪಿಸಿ ತನ್ನ ಇಷ್ಟ ದೇವತೆಯ ಧ್ಯಾನದಲ್ಲಿ ತಲ್ಲೀನಳಾದಳು. ಅವಳಿಗಾಗ ಅದ್ಭುತ ದರ್ಶನವಾಯಿತು. ಬಾಹ್ಯಜ್ಞಾನವಿರಲಿಲ್ಲ. ಎರಡೂ ಕಣ್ಣಿನಿಂದ ಪ್ರೇಮಾಶ್ರು ಇಳಿಯುತ್ತಿತ್ತು. ಶ್ರೀರಾಮಕೃಷ್ಣರು ಅದಾವುದೊ ಆಂತರಿಕ ಆಕರ್ಷಣೆಗೆ ಒಳಗಾಗಿ ಇದ್ದಕ್ಕಿದ್ದಂತೆ ಅಲ್ಲಿಗೆ ಬಂದುಬಿಟ್ಟರು. ದಿವ್ಯಾವೇಶಕ್ಕೆ ಒಳಗಾದವರಾಗಿ ಬ್ರಾಹ್ಮಣಿಯು ನೈವೇದ್ಯಕ್ಕೆ ಇಟ್ಟಿದ್ದನ್ನು ತಾವೇ ತಿನ್ನತೊಡಗಿದರು. ಸ್ವಲ್ಪ ಹೊತ್ತಿನ ನಂತರ ಬ್ರಾಹ್ಮಣಿಯು ಕಣ್ಣು ತೆರೆದು ನೋಡಿದಳು. ಶ್ರೀರಾಮಕೃಷ್ಣರು ಭಾವಾವಿಷ್ಟರಾಗಿ ತಿನ್ನುತ್ತಿರುವುದನ್ನು ಕಂಡು ತನಗಾದ ದರ್ಶನಕ್ಕೂ ಮತ್ತು ಈ ಕ್ರಿಯೆಗೂ ಹೊಂದಿಕೆಯಾದುದನ್ನು ಅರಿತು ಆನಂದದಿಂದ ರೋಮಾಂಚನಗೊಂಡಳು. ಶ್ರೀರಾಮಕೃಷ್ಣರು ಪ್ರಜ್ಞಾವಸ್ಥೆಗೆ ಬಂದ ಮೇಲೆ ತಾವೇನು ಮಾಡುತ್ತಿರುವೆವೆಂಬುದರ ಅರಿವಾಗಿ ಬ್ರಾಹ್ಮಣಿಗೆ ಹೇಳಿದರು : ''ನಾನೇನು ಮಾಡಿಬಿಟ್ಟೆ ! ಬಾಹ್ಯಪ್ರಜ್ಞೆಯಿಲ್ಲದಾಗ ನಾನೇಕೆ ಹೀಗೆಲ್ಲ ಮಾಡುತ್ತೇನೆ ?'' ಬ್ರಾಹ್ಮಣಿಯು ತಾಯಿಯಂತೆ ಅವರನ್ನು ಸಮಾಧಾನ ಪಡಿಸುತ್ತ ಹೇಳಿದಳು:' 'ನೀನು ಒಳ್ಳೆಯದೆ ಮಾಡಿದೆ. ಇದು ನೀನು ಮಾಡಿರುವುದಲ್ಲ. ನಿನ್ನೊಳಗೆ ಯಾರಿರುವರೊ ಅವರು ಮಾಡಿದ್ದು. ಇದನ್ನು ಯಾರು ಮಾಡಿದ್ದು ಅಥವಾ ಏಕೆ ಮಾಡಿದ್ದು ಎಂಬುದನ್ನು ನಾನು ಧ್ಯಾನದ ಸಮಯದಲ್ಲಿ ಸ್ಪಷ್ಟವಾಗಿ ಅರಿತುಕೊಂಡೆನು. ಇನ್ನು ನನಗೆ ಪೂಜೆಯ ಅವಶ್ಯಕತೆಯಿಲ್ಲ. ಇಷ್ಟು ದಿನಗಳ ನಂತರ ನನ್ನ ಪೂಜೆ ಸಾರ್ಥಕತೆಯನ್ನು ಪಡೆಯಿತು''. ಅನಂತರ ಬ್ರಾಹ್ಮಣಿಯು ಸ್ವಲ್ಪವೂ ಹಿಂಜರಿಯದೇ ನೈವೇದ್ಯದಲ್ಲಿ ಉಳಿದ ಭಾಗವನ್ನು ಪ್ರಸಾದದಂತೆ ಸ್ವೀಕರಿಸಿದಳು. ತನ್ನ ಶ್ರೀರಘುವೀರನು ಶ್ರೀರಾಮಕೃಷ್ಣರಲ್ಲಿ ಜೀವಂತವಾಗಿರುವುದನ್ನು ಅರಿತುಕೊಂಡು ಇದುವರೆಗೂ ತಾನು ಪೂಜಿಸುತ್ತಿದ್ದ ರಘುವೀರಶಿಲೆಯನ್ನು ಭಕ್ತಿಪರವಶತೆಯಿಂದ ಗಂಗೆಯಲ್ಲಿ ವಿಸರ್ಜಿಸಿದಳು.

12. ಶ್ರೀರಾಮಕೃಷ್ಣ ಮತ್ತು ಬ್ರಾಹ್ಮಣಿ ಇವರ ನಡುವೆ ಪ್ರಥಮದರ್ಶನದಿಂದಲೇ ಉಂಟಾದ ಪ್ರೀತಿ ಆಕರ್ಷಣೆ ದಿನದಿನವೂ ವೃದ್ಧಿಯಾಗುತ್ತ ಹೋಯಿತು. ಬ್ರಾಹ್ಮಣಿಯು ಶ್ರೀರಾಮಕೃಷ್ಣರ ಮೇಲಿನ ವಾತ್ಸಲ್ಯ ಪ್ರೇಮದಿಂದ ಬಂಧಿತಳಾಗಿ ದಕ್ಷಿಣೇಶ್ವರದಲ್ಲಿಯೇ ಇದ್ದುಬಿಟ್ಟಳು. ಆಧ್ಯಾತ್ಮಿಕ ವಿಷಯವನ್ನು ಮಾತನಾಡುತ್ತ ದಿನಗಳು ಕಳೆದದ್ದೇ ಇಬ್ಬರಿಗೂ ಗೊತ್ತಾಗಲೇ ಇಲ್ಲ. ತಮ್ಮ ಆಧ್ಯಾತ್ಮಿಕ ದರ್ಶನ, ವಿವಿಧ ಅವಸ್ಥೆಗಳು ಇವುಗಳಿಗೆ ಸಂಬಂಧಿಸಿದ ಅನೇಕ ರಹಸ್ಯಗಳನ್ನು ಅವಳಿಗೆ ಹೇಳುತ್ತ ಶ್ರೀರಾಮಕೃಷ್ಣರು ಪ್ರಶ್ನೆಗಳ ಮೇಲೆ ಪ್ರಶ್ನೆ ಕೇಳುತ್ತಿದ್ದರು. ಭೈರವಿಯು ತಂತ್ರಶಾಸ್ತ್ರಗಳನ್ನೂ ಭಕ್ತಿಶಾಸ್ತ್ರಗಳನ್ನೂ ಭಕ್ತಿಗ್ರಂಥಗಳನ್ನೂ ಆಧಾರವಾಗಿಟ್ಟುಕೊಂಡು ಅವರ ಪ್ರಶ್ನೆಗಳಿಗೆಲ್ಲ ಉತ್ತರ ನೀಡುತ್ತಿದ್ದಳು. ಹೀಗೆ ಪಂಚವಟಿಯಲ್ಲಿ ಅನೇಕ ದಿನಗಳು ದಿವ್ಯಾನಂದದ ಪ್ರವಾಹ ಹರಿಯಿತು.

13. ಆರೇಳು ದಿನಗಳು ಹೀಗೆ ಕಳೆದ ಮೇಲೆ ಶ್ರೀರಾಮಕೃಷ್ಣರಿಗೆ ಅನಿಸಿತು, ಬ್ರಾಹ್ಮಣಿಯನ್ನು ಅಲ್ಲಿ ಆ ರೀತಿ ಇರಗೊಡುವುದು ಉಚಿತವಲ್ಲ ಎಂದು. ಬ್ರಾಹ್ಮಣಿಯ ಪವಿತ್ರತೆಯನ್ನು ಅರ್ಥಮಾಡಿಕೊಳ್ಳಲಾಗದ ಜನಸಾಮಾನ್ಯರು ಅವಳ ಬಗ್ಗೆ ಏನೇನಾದರೂ ಆಡಿಕೊಳ್ಳಬಹುದೆಂದು ಭಾವಿಸಿದರು. ಬ್ರಾಹ್ಮಣಿಗೆ ಇದನ್ನು ಸೂಚಿಸಿದಕೂಡಲೇ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡಳು. ಆನಂತರ ಅವಳು ಹತ್ತಿರದ ಗ್ರಾಮದಲ್ಲಿ ಹೋಗಿ ವಾಸವಾಗಿದ್ದು ಪ್ರತಿದಿನ ಹಗಲು ಸ್ವಲ್ಪ ಹೊತ್ತು ಬಂದು ಶ್ರೀರಾಮಕೃಷ್ಣರನ್ನು ನೋಡುವುದೆಂದು ನಿರ್ಧರಿಸಿದಳು.

ಕಾಳೀಮಂದಿರದ ಉತ್ತರಕ್ಕೆ ಇರುವ ದಕ್ಷಿಣೇಶ್ವರ ಗ್ರಾಮಕ್ಕೆ ಸೇರಿದ ದೇವಮಂಡಲ ಘಟ್ಟದಲ್ಲಿ ಬ್ರಾಹ್ಮಣಿಯು ವಾಸಿಸತೊಡಗಿದಳು.† ಗ್ರಾಮದಲ್ಲಿ ಓಡಾಡುತ್ತ ಮಹಿಳೆಯರೊಡನೆ ಮಾತನಾಡುತ್ತ ಅವರೆಲ್ಲರ ಶ್ರದ್ಧಾಭಕ್ತಿಗೆ ಪಾತ್ರಳಾದಳು. ಅಲ್ಲಿ ಆಕೆ ಇರುವುದಕ್ಕೆ ಮತ್ತು ಭಿಕ್ಷೆಗೆ ಯಾವ ತೊಂದರೆಯೂ ಇರಲಿಲ್ಲ. ಪ್ರತಿನಿತ್ಯ ಶ್ರೀರಾಮಕೃಷ್ಣರ ದರ್ಶನವೂ ಆಗುತ್ತಿತ್ತು. ಜನರ ನಿಂದೆಯ ಭಯವಿಲ್ಲದೆ ಕಾಳೀಮಂದಿರಕ್ಕೆ ಹೋಗಿ ಶ್ರೀರಾಮಕೃಷ್ಣರೊಡನೆ ಮಾತನಾಡುತ್ತಿದ್ದಳು. ಕೆಲವೊಮ್ಮೆ ಗ್ರಾಮದ ಜನರು ಕೊಟ್ಟ ತಿಂಡಿಯನ್ನು ತಂದು ಅವರಿಗೆ ತಿನಿಸುತ್ತಿದ್ದಳು.

---

† ಹೃದಯ ಹೀಗೆ ಹೇಳುತ್ತಾನೆ : ದೇವಮಂಡಲ ಘಟ್ಟದಲ್ಲಿ ವಾಸಿಸುವ ಸಲಹೆಯನ್ನು ಶ್ರೀರಾಮಕೃಷ್ಣರೇ ಕೊಟ್ಟರು. ಅವರು ಆಕೆಯನ್ನು ಮಂಡಲರ ಮನೆಗೆ ಕಳಿಸಿದರು. ಅವಳು ಅಲ್ಲಿಗೆ ಹೋದಕೂಡಲೇ ನವೀನಚಂದ್ರನಿಯೋಗಿಯ ಪತ್ನಿಯು ಶ್ರದ್ಧಾಭಕ್ತಿಯಿಂದ ಅವಳನ್ನು ಬರಮಾಡಿಕೊಂಡಳು. ಘಟ್ಟದಲ್ಲಿ ಒಂದು ಕೋಣೆಯನ್ನು ಅವಳಿಗೆ ವಾಸಿಸಲು ಬಿಟ್ಟುಕೊಟ್ಟದ್ದು ಮಾತ್ರವಲ್ಲದೆ ಅವಳಿಗೆ ಒಂದು ಮಂಚವನ್ನೂ, ಅಕ್ಕಿ ತುಪ್ಪ ಬೇಳೆ ಮುಂತಾದ ಅಡಿಗೆ ಪದಾರ್ಥಗಳನ್ನೂ ಆ ಭಕ್ತಿಪರಾಯಣೆಯಾದ ಮಹಿಳೆ ನೀಡಿದಳು.

14. ಅಸಾಧಾರಣ ಭಕ್ತಿಯ ಪರಿಣಾಮವಾಗಿಯೇ ಶ್ರೀರಾಮಕೃಷ್ಣರಿಗೆ ಅಲೌಕಿಕ ದರ್ಶನಗಳಾಗುತ್ತಿವೆ ಮತ್ತು ವಿಚಿತ್ರಾವಸ್ಥೆಗಳು ಉಂಟಾಗುತ್ತಿವೆ ಎಂದು ಬ್ರಾಹ್ಮಣಿಗೆ ಮೊದಲೇ ತಿಳಿದಿತ್ತು. ಈಗ ಅವರೊಡನೆ ನಡೆದ ಸಂಭಾಷಣೆಗಳಿಂದ ಅವರು ಆಗಾಗ ಭಾವಸಮಾಧಿಗೆ ಹೋಗುವುದು, ಸಂಕೀರ್ತನೆಯಲ್ಲಿ ಅವರು ಅನುಭವಿಸುವ ಪರಮಾನಂದ—ಇವನ್ನೆಲ್ಲ ನೋಡುವುದರಿಂದ ಅವರು ಸಾಮಾನ್ಯ ಸಾಧಕರಲ್ಲ ಎಂದು ಆಕೆಯ ಮನಸ್ಸಿಗೆ ದೃಢವಾಯಿತು. 'ಚೈತನ್ಯಚರಿತಾಮೃತ' 'ಚೈತನ್ಯಭಾಗವತ' ಮುಂತಾದ ಗ್ರಂಥಗಳಲ್ಲಿ, ಚೈತನ್ಯನು ಲೋಕಕಲ್ಯಾಣಕ್ಕಾಗಿ ಮತ್ತೆ ಅವತರಿಸಿ ಬರುವ ವಿಷಯ ಅಲ್ಲಲ್ಲಿ ಬರುತ್ತದೆ. ಶ್ರೀರಾಮಕೃಷ್ಣರನ್ನು ನೋಡಿದಾಗ ಆ ಮಾತುಗಳು ಭೈರವಿಗೆ ಮತ್ತೆ ಮತ್ತೆ ನೆನಪಾಗತೊಡಗಿದವು. ಅವಳು ಸಕಲ ಶಾಸ್ತ್ರವಿಶಾರದಳು. ಶ್ರೀ ಚೈತನ್ಯ ಮತ್ತು ನಿತ್ಯಾನಂದ ಇವರುಗಳ ಬಗ್ಗೆ ಹೇಳಿದ ವಿಷಯಗಳಿಗೂ ಮತ್ತು ಶ್ರೀರಾಮ ಕೃಷ್ಣರ ಜೀವನ ಘಟನೆಗಳಿಗೂ ಇರುವ ಹೋಲಿಕೆಯನ್ನು ಅವಳು ಗಮನಿಸಿದಳು. ಭಾವಾವೇಶದಲ್ಲಿ ಇತರರನ್ನು ಸ್ಪರ್ಶಿಸಿ ಅವರಲ್ಲಿ ಧರ್ಮಜಾಗೃತಿಯನ್ನುಂಟುಮಾಡುವ ಶಕ್ತಿ ಶ್ರೀ ಚೈತನ್ಯನಿಗಿತ್ತು. ಶ್ರೀರಾಮಕೃಷ್ಣರಲ್ಲಿಯೂ ಆ ಶಕ್ತಿ ಇದ್ದುದನ್ನು ಆಕೆ ಕಂಡಳು. ಭಗವದ್ ವಿರಹವೇದನೆಯಿಂದ ದೇಹದಲ್ಲಿ ಉರಿ ಕಾಣಿಸಿಕೊಂಡಾಗ ಶ್ರೀಗಂಧ ವನ್ನು ಮೈಮೇಲೆ ಸವರಿದಾಗ ಉರಿ ಕಡಮೆಯಾಗುತ್ತಿತ್ತು—ಎಂಬ ವಿಚಾರ ಶ್ರೀ ಚೈತನ್ಯನ ಜೀವನದಲ್ಲಿ ಬರುತ್ತದೆ. ಈ ಪ್ರಯೋಗವನ್ನು ಭೈರವಿಯು ಶ್ರೀರಾಮಕೃಷ್ಣರ ಮೇಲೂ ಮಾಡಿ ಅದೇ ಫಲವನ್ನು ಪಡೆದಳು. ಶ್ರೀಚೈತನ್ಯ ಮತ್ತು ನಿತ್ಯಾನಂದ ಇಬ್ಬರೂ ಶ್ರೀರಾಮಕೃಷ್ಣರ ದೇಹವನ್ನು ಆಶ್ರಯಿಸಿಕೊಂಡು ಅವತರಿಸಿರುವರು ಎಂದು ಅವಳು ದೃಢವಾಗಿ ನಂಬಿದಳು. ಶಿಹೋರ್ ಗ್ರಾಮಕ್ಕೆ ಹೋಗುವಾಗ ಶ್ರೀರಾಮ ಕೃಷ್ಣರು ತಮ್ಮ ದೇಹದಿಂದ ಇಬ್ಬರು ಬಾಲಕರು ಹೊರಬಂದುದನ್ನು ಕಂಡಿದ್ದರು. ಈ ದರ್ಶನದ ವಿಷಯವನ್ನು ಶ್ರೀರಾಮಕೃಷ್ಣರಿಂದ ಕೇಳಿ ಅವಳ ವಿಶ್ವಾಸ ಇನ್ನೂ ದೃಢ ವಾಯಿತು.

15. ನೈಜಸಂನ್ಯಾಸಿನಿಯಾದ ಭೈರವಿಯು ಯಾರಿಂದಲೂ ಏನನ್ನೂ ಅಪೇಕ್ಷಿಸು ತ್ತಿರಲಿಲ್ಲ. ಆದ್ದರಿಂದ ತಾನು ಸತ್ಯವೆಂದು ಎಣಿಸಿದುದನ್ನು ಇತರರಿಗೆ ಹೇಳಿದರೆ ಅವರು ನಿಂದಿಸಬಹುದು ಅಥವಾ ಹಾಸ್ಯಮಾಡಬಹುದು ಎಂಬುದರ ಬಗ್ಗೆ ಅವಳು ಯೋಚಿಸಲೇ ಇಲ್ಲ. ಶ್ರೀರಾಮಕೃಷ್ಣರ ಬಗ್ಗೆ ತಾನು ಭಾವಿಸಿದುದನ್ನು ಇತರರಿಗೆ ಹೇಳಲು ಅವಳು ಸ್ವಲ್ಪವೂ ಹಿಂಜರಿಯಲಿಲ್ಲ. ಒಂದುದಿನ ಶ್ರೀರಾಮಕೃಷ್ಣರು ಪಂಚವಟಿಯಲ್ಲಿ ಮಥುರನ ಜತೆ ಮಾತನಾಡುತ್ತ ಕುಳಿತಿದ್ದರು. ಹೃದಯನೂ ಅಲ್ಲಿಯೇ ಇದ್ದನು. ಮಾತಿನ ಸಂದರ್ಭದಲ್ಲಿ ಶ್ರೀರಾಮಕೃಷ್ಣರು ತಮ್ಮ ಬಗ್ಗೆ ಭೈರವಿಯ ಅಭಿಪ್ರಾಯವೇನೆಂಬುದನ್ನು ಹೇಳಿದರು. ಅವರೆಂದರು : "ಅವತಾರಪುರುಷರಲ್ಲಿ ಯಾವ ಲಕ್ಷಣಗಳು ಕಂಡುಬರುತ್ತ ವೆಯೊ ಅವು ಈ ಶರೀರ-ಮನಸ್ಸಿನಲ್ಲಿಯೂ ಕಾಣಿಸುವುವು. ಅವಳು ಅನೇಕ ಶಾಸ್ತ್ರ

ಓದಿರುವಳು. ಮತ್ತು ಅವಳೊಡನೆ ತುಂಬ ಗ್ರಂಥಗಳಿವೆ.'' ಮಥುರನು ಕೇಳಿ ನಕ್ಕು ನುಡಿದನು: ''ಅವಳು ಏನೇ ಹೇಳಲಿ, ಅವತಾರಗಳು ಹತ್ತೇ ಹತ್ತು. ಅವಳ ಮಾತು ಹೇಗೆ ಸತ್ಯವಾದೀತು ? ಆದರೆ, ನಿಮ್ಮ ಮೇಲೆ ತಾಯಿ ಕಾಳಿಯ ವಿಶೇಷ ಕೃಪೆಯಾಗಿದೆ —ಇದು ಸತ್ಯ''

ಹೀಗೆ ಮಾತು ಮುಂದುವರಿಯುತ್ತಿರಲು ಅತ್ತಕಡೆ ಒಬ್ಬಳು ಸನ್ಯಾಸಿನಿ ಬಂದಳು. ಮಥುರನು ಆಕೆಯನ್ನು ನೋಡಿ ಕೇಳಿದ, ''ಇವರೇ ಏನು ಅವರು?'' ಶ್ರೀರಾಮಕೃಷ್ಣರು ಹೌದೆಂದರು. ಬ್ರಾಹ್ಮಣಿಯ ಕೈಯಲ್ಲಿ ತಿಂಡಿಯ ತಟ್ಟೆಯಿತ್ತು. ಯಶೋದೆಯು ಕೃಷ್ಣನಿಗೆ ತಿನ್ನಿಸಲು ಅವನನ್ನು ಹುಡುಕಿಕೊಂಡು ಬರುವಂತೆ ಅವಳು ಭಾವಮಯಳಾಗಿ ಅವರೆಡೆಗೆ ಬರುತ್ತಿದ್ದಳು. ಮಥುರನು ಇರುವುದನ್ನು ನೋಡಿ ಸ್ವಲ್ಪ ಹಿಂಜರಿದು ಶ್ರೀರಾಮಕೃಷ್ಣರಿಗೆ ತಿಂಡಿ ಕೊಡೆಂದು ಹೇಳಿ ತಟ್ಟೆಯನ್ನು ಹೃದಯನಿಗೆ ಕೊಟ್ಟಳು. ಆಗ ಶ್ರೀರಾಮಕೃಷ್ಣರು ಮಥುರನಾಥನನ್ನು ತೋರಿಸಿ ಆಕೆಗೆ ಹೇಳಿದರು : ''ನೋಡು ನೀನು ನನ್ನ ಬಗ್ಗೆ ಏನೇನು ಹೇಳುತ್ತಿದ್ದೆಯೊ ಅದನ್ನೆಲ್ಲ ಇವನಿಗೆ ಹೇಳುತ್ತಿದ್ದೆ. ಇವನು ಹೇಳುತ್ತಾನೆ. ಅವತಾರ ಕೇವಲ ಹತ್ತು ಎಂದು.'' ಮಥುರನಾಥನೂ ಅವಳಿಗೆ ವಂದಿಸಿ ತಾನು ಹೇಳಿರುವುದನ್ನು ಒಪ್ಪಿಕೊಂಡನು. ಬ್ರಾಹ್ಮಣಿಯು ಅವನನ್ನು ಆಶೀರ್ವದಿಸಿ ಉತ್ತರಿಸಿದಳು: ''ಏಕೆ? ಶ್ರೀಮತ್ ಭಾಗವತದಲ್ಲಿ ಇಪ್ಪತ್ತನಾಲ್ಕು ಅವತಾರಗಳ ವಿಷಯ ಬರುತ್ತದೆ. ಇದನ್ನು ವಿವರಿಸಿಯಾದಮೇಲೆ ವ್ಯಾಸನು ಹೇಳುತ್ತಾನೆ, ಶ್ರೀಹರಿಯು ಅಸಂಖ್ಯ ಬಾರಿ ಅವತರಿಸುವನೆಂದು. ವೈಷ್ಣವ ಗ್ರಂಥಗಳಲ್ಲಿ ಗೌರಾಂಗ ಮಹಾ ಪ್ರಭುವು ಮತ್ತೆ ಅವತರಿಸಿ ಬರುವ ವಿಷಯವಿದೆ. ಅಷ್ಟೇ ಅಲ್ಲದೆ ಶ್ರೀ ಚೈತನ್ಯನಿಗೂ ಮತ್ತು ಇವರಲ್ಲಿ ಕಂಡುಬರುವ ಲಕ್ಷಣಗಳಿಗೂ ಬಹಳ ಸಾದೃಶ್ಯವಿದೆ.'' ಹೀಗೆ ಬ್ರಾಹ್ಮಣಿಯು ತನ್ನ ಅಭಿಪ್ರಾಯವನ್ನು ಸಮರ್ಥಿಸಿ ಮತ್ತೆ ಹೇಳಿದಳು, ವೈಷ್ಣವ ಪಂಡಿತರು ಈ ವಿಷಯವನ್ನು ಒಪ್ಪಲೇಬೇಕು, ತಾನು ಅವರ ಮುಂದೆ ಇದನ್ನು ಸಮರ್ಥಿಸ ಬಲ್ಲೆ—ಎಂದು. ಬ್ರಾಹ್ಮಣಿಯ ಈ ಮಾತನ್ನು ಕೇಳಿ ಮಥುರನಿಗೆ ಏನೂ ಮಾತನಾಡ ಲಾಗಲಿಲ್ಲ.

16. ಶ್ರೀರಾಮಕೃಷ್ಣರ ಬಗೆಗಿನ ಬ್ರಾಹ್ಮಣಿಯ ಅಭಿಪ್ರಾಯವು ಕ್ರಮೇಣ ದೇವಸ್ಥಾನದ ಜನರಿಗೆಲ್ಲ ತಿಳಿಯಿತು. ಈ ವಿಷಯವನ್ನು ಕುರಿತು ತುಂಬ ವಾದವಿವಾದ ಗಳಾದವು. ಇದರ ವಿವರವನ್ನು ನಾವು ಬೇರೆಕಡೆ ನೀಡಿರುವೆವು.* ಎಲ್ಲರ ಮುಂದೆ ಬ್ರಾಹ್ಮಣಿಯು ತಮ್ಮನ್ನು ದೇವತೆಯ ಸ್ಥಾನಕ್ಕೆ ಏರಿಸಿದರೂ ಶ್ರೀರಾಮಕೃಷ್ಣರಲ್ಲಿ ಸ್ವಲ್ಪವೂ ವಿಕಾರ ಕಂಡುಬರಲಿಲ್ಲ. ಆದರೆ ಈ ವಿಷಯದಲ್ಲಿ ಪಂಡಿತರುಗಳು ಹೇಗೆ ತಮ್ಮ ವಾದವನ್ನು ಮಂಡಿಸುತ್ತಾರೆ ಎಂಬುದನ್ನು ತಿಳಿಯುವ ಉತ್ಸುಕತೆ ಅವರಲ್ಲಿತ್ತು. ಆದ್ದರಿಂದ ಬಾಲಕ

* ಗುರುಭಾವ, ಪೂರ್ವಾರ್ಧ, ಅಧ್ಯಾಯ, 5, 6

ಸ್ವಭಾವದ ಅವರು ಒಂದು ಪಂಡಿತ ಸಭೆಯನ್ನು ಕರೆಯಲು ಮಥುರನಾಥನನ್ನು ಒತ್ತಾಯಿಸಿದರು. ಇದರ ಫಲವಾಗಿಯೇ ವೈಷ್ಣವಚರಣನೇ ಮುಂತಾದ ಪ್ರಮುಖ ಪಂಡಿತರುಗಳು ದಕ್ಷಿಣೇಶ್ವರಕ್ಕೆ ಬರುವಂತಾಯಿತು. ವೈಷ್ಣವಚರಣನ ಮುಂದೆ ಬ್ರಾಹ್ಮಣಿಯು ಹೇಗೆ ತನ್ನ ಸಿದ್ಧಾಂತವನ್ನು ಸಮರ್ಥಿಸಿದಳು ಎಂಬುದನ್ನು ಬೇರೆಕಡೆ ವಿವರಿಸಿರುವೆವು.*

---

* ಗುರುಭಾವ, ಉತ್ತರಾರ್ಧ, ಅಧ್ಯಾಯ 1

ಹನ್ನೊಂದನೆಯ ಅಧ್ಯಾಯ

ಶ್ರೀರಾಮಕೃಷ್ಣರ ತಂತ್ರಸಾಧನೆ

1. ಭೈರವಿಯು ತನ್ನ ದಿವ್ಯದೃಷ್ಟಿಯಿಂದ ಶ್ರೀರಾಮಕೃಷ್ಣರ ಅವಸ್ಥೆಯನ್ನು ಯಥಾರ್ಥವಾಗಿ ತಿಳಿದುಕೊಂಡಳು 2. ಅವರಿಗೆ ತಂತ್ರಸಾಧನೆಯನ್ನು ಮಾಡುವಂತೆ ಹೇಳಲು ಕಾರಣ 3. ಅವರು ಅವತಾರವೆಂದು ತಿಳಿದಿದ್ದರೂ ಅವರನ್ನು ಸಾಧನೆಯಲ್ಲಿ ಹೇಗೆ ತೊಡಗಿಸಿದಳು 4. ತನ್ನ ತಪಸ್ಸಿನ ಫಲವನ್ನೆಲ್ಲ ಶ್ರೀರಾಮಕೃಷ್ಣರು ಅನುಭವಿಸಬೇಕೆಂದು ಅವಳು ಆಶಿಸಿದಳು. 5. ಜಗನ್ಮಾತೆಯ ಅನುಜ್ಞೆಯಂತೆ ಶ್ರೀರಾಮಕೃಷ್ಣರು ತಂತ್ರಸಾಧನೆಯನ್ನು ಪ್ರಾರಂಭಿಸಿದರು 6. ಶ್ರೀರಾಮಕೃಷ್ಣರು ತಮ್ಮ ಸಾಧನೆಯ ಆಸಕ್ತಿಯ ಬಗ್ಗೆ 7. ಪಂಚಮುಂಡಾಸನ ನಿರ್ಮಾಣ ಮತ್ತು ಅರವತ್ತನಾಲ್ಕು ತಂತ್ರಸಾಧನೆಗಳು 8. ಸ್ತ್ರೀಮೂರ್ತಿಯಲ್ಲಿ ದೇವೀದರ್ಶನ 9. ದ್ವೇಷತ್ಯಾಗ 10. ಬೇರೆ ತಾಂತ್ರಿಕ ಸಿದ್ಧಿಗಳು ಮತ್ತು ತಂತ್ರಸಾಧನೆಯ ಸಮಯದಲ್ಲಿ ಶ್ರೀರಾಮಕೃಷ್ಣರ ವರ್ತನೆ 11. ಗಣೇಶ ಮತ್ತು ಕಾರ್ತಿಕೇಯರ ಕಥೆ 12. ತಂತ್ರಸಾಧನೆಯಲ್ಲಿ ಶ್ರೀರಾಮಕೃಷ್ಣರ ವೈಶಿಷ್ಟ್ಯ 13. ಶ್ರೀರಾಮಕೃಷ್ಣರು ಸಾಧನೆಯಲ್ಲಿ ಸ್ತ್ರೀಯನ್ನು ಸ್ವೀಕರಿಸದುದು ಏನನ್ನು ಸೂಚಿಸುತ್ತದೆ 14. ತಂತ್ರಸಾಧನೆಗಳ ಉದ್ದೇಶ 15. ಶ್ರೀರಾಮಕೃಷ್ಣರ ತಂತ್ರಸಾಧನೆಗೆ ಇನ್ನೊಂದು ಕಾರಣ 16. ತಂತ್ರಸಾಧನೆಯ ಸಮಯದಲ್ಲಿ ಅವರಿಗಾದ ವಿವಿಧ ಅನುಭವಗಳು 17. ಅಷ್ಟಸಿದ್ಧಿಗಳ ಬಗ್ಗೆ ವಿವೇಕಾನಂದರೊಡನೆ ಸಂಭಾಷಣೆ 18. ಮೋಹಿನೀ ಮಾಯಾ ದರ್ಶನ 19. ಷೋಡಶೀ ಮೂರ್ತಿಯ ಸೌಂದರ್ಯ 20. ತಂತ್ರಸಾಧನೆಯ ಸಮಯದಲ್ಲಿ ಶ್ರೀರಾಮಕೃಷ್ಣರ ಶರೀರಕಾಂತಿ 22. ಭೈರವೀ ಬ್ರಾಹ್ಮಣಿಯು ಯೋಗಮಾಯೆಯ ಅಂಶ.

1. ಶ್ರೀರಾಮಕೃಷ್ಣರ ಬಗೆಗಿನ ತನ್ನ ಸಿದ್ಧಾಂತವನ್ನು ಯುಕ್ತಿಯ ಮೂಲಕ ಪ್ರಮಾಣೀಕರಿಸುವಷ್ಟರಿಂದಲೇ ಭೈರವಿಯು ತೃಪ್ತಳಾಗಲಿಲ್ಲ. ಶ್ರೀರಾಮಕೃಷ್ಣರೂ ಸೇರಿದಂತೆ ಮೂವರು ಸಾಧಕರಿಗೆ ಅವಳು ಆಧ್ಯಾತ್ಮಿಕ ಜೀವನದಲ್ಲಿ ಸಹಾಯ ಮಾಡಬೇಕಿತ್ತು. ಶ್ರೀರಾಮಕೃಷ್ಣರನ್ನು ಸಂಧಿಸುವುದಕ್ಕಿಂತ ಮುಂಚೆಯೇ ಅವಳು ಈ ವಿಷಯದಲ್ಲಿ ಆದೇಶವನ್ನು ಪಡೆದಿದ್ದಳು. ತನ್ನ ಸಾಧನೆಯ ಪ್ರಭಾವದಿಂದ ಉಂಟಾದ ದಿವ್ಯದೃಷ್ಟಿಯಿಂದಲೇ ಬಹುಬೇಗನೆ ಶ್ರೀರಾಮಕೃಷ್ಣರನ್ನು ಈ ರೀತಿ ಅರ್ಥಮಾಡಿಕೊಳ್ಳಲು ಆಕೆಗೆ ಸಾಧ್ಯವಾಯಿತು ಎಂದು ತೋರುತ್ತದೆ. ದಕ್ಷಿಣೇಶ್ವರಕ್ಕೆ ಬಂದು ಶ್ರೀರಾಮಕೃಷ್ಣರೊಡನೆ ನಿಕಟ ಸಂಬಂಧವುಂಟಾದ ಮೇಲೆ ತಾನು ಅವರಿಗೆ ಎಷ್ಟರ

ಮಟ್ಟಿಗೆ ಸಹಾಯಮಾಡಬಲ್ಲೆ ಎಂದು ಆವಳಿಗೆ ಸ್ಪಷ್ಟವಾಗತೊಡಗಿತು. ಆದ್ದರಿಂದ ಶ್ರೀರಾಮಕೃಷ್ಣರ ಬಗ್ಗೆ ಜನರಿಗಿದ್ದ ತಪ್ಪು ಭಾವನೆಯನ್ನು ಹೋಗಲಾಡಿಸುವುದಷ್ಟೇ ಅವಳ ಕರ್ತವ್ಯವಾಗಿರಲಿಲ್ಲ. ಶಾಸ್ತ್ರೋಕ್ತವಾದ ಸಾಧನೆಗಳಲ್ಲಿ ಶ್ರೀರಾಮಕೃಷ್ಣರನ್ನು ತೊಡಗಿಸಿ ಶ್ರೀಜಗನ್ಮಾತೆಯ ಪ್ರೀತ್ಯರ್ಥವಾಗಿ ಅವರನ್ನು ಪೂರ್ಣ ದಿವ್ಯಭಾವದಲ್ಲಿ ಪ್ರತಿಷ್ಠಿತರಾಗುವಂತೆ ಮಾಡುವ ಪ್ರಯತ್ನದಲ್ಲಿ ತೊಡಗಿದಳು.

2. ಗುರುಪರಂಪರೆಯನ್ನೂ ಶಾಸ್ತ್ರದ ಮಾರ್ಗದರ್ಶನವನ್ನೂ ಅನುಸರಿಸಿ ಅವರು ಸಾಧನೆಯನ್ನು ಮಾಡಿರಲಿಲ್ಲ. ಕೇವಲ ವ್ಯಾಕುಲತೆಯ ಸಹಾಯದಿಂದಲೇ ಭಗವದ್ದರ್ಶನವನ್ನು ಪಡೆದಿದ್ದರು. ಇದರಿಂದಾಗಿಯೇ ಶ್ರೀರಾಮಕೃಷ್ಣರು ತಮ್ಮ ಉಚ್ಚಾವಸ್ಥೆಯನ್ನು ಸರಿಯಾಗಿ ಅರ್ಥಮಾಡಿಕೊಂಡಿರಲಿಲ್ಲ ಎಂಬುದನ್ನು ಬ್ರಾಹ್ಮಣಿಯು ಅರಿತುಕೊಂಡಳು. ತಮಗಾಗುವ ಅಪೂರ್ವ ದರ್ಶನಗಳು ಬುದ್ಧಿಭ್ರಮಣೆಯಿಂದ ಉಂಟಾಗುತ್ತಿರಬಹುದು ಮತ್ತು ಶಾರೀರಿಕ ವಿಕಾರಗಳೆಲ್ಲ ಕಾಯಿಲೆಯಿಂದಾಗಿರಬಹುದು ಎಂಬ ಸಂದೇಹ ಶ್ರೀರಾಮಕೃಷ್ಣರಿಗೆ ಆಗಾಗ ಉಂಟಾಗುತ್ತಿತ್ತು. ಇದರಿಂದ ಅವರನ್ನು ಮುಕ್ತಗೊಳಿಸಲು ಭೈರವಿಯು ತಂತ್ರೋಕ್ತವಾದ ಸಾಧನೆಗಳನ್ನು ಮಾಡಲು ಅವರಿಗೆ ಉತ್ತೇಜನ ನೀಡಿದಳು. ಸಾಧಕನು ಏನೇನು ಮಾಡಿದರೆ ಏನೇನು ಫಲ ದೊರೆಯುವುದು ಎಂಬುದರ ವಿವರಣೆ ತಂತ್ರದಲ್ಲಿದೆ. ಶ್ರೀರಾಮಕೃಷ್ಣರು ಅವುಗಳನ್ನನುಸರಿಸಿ ಅವುಗಳಿ ಗನುಗುಣವಾದ ಫಲವನ್ನು ಪಡೆದಾಗ ಅವರಿಗೇ ಅವುಗಳಲ್ಲಿ ದೃಢವಿಶ್ವಾಸವುಂಟಾಗು ತ್ತದೆ ; ಸಾಧನೆಯಲ್ಲಿ ಮುಂದುವರಿದು ಹೆಚ್ಚು ಹೆಚ್ಚು ಉನ್ನತ ಸ್ತರವನ್ನು ತಲುಪಿ ದಂತೆಲ್ಲ ಶರೀರ ಮನಸುಗಳಲ್ಲಿ ವಿಚಿತ್ರ ಬದಲಾವಣೆಗಳು ಕಂಡುಬರುವುವು ಎಂಬುದನ್ನು ಅವರೇ ಮನಗಾಣುವರು. ಇನ್ನು ಮುಂದೆ ಅವರಿಗೆ ಯಾವುದೇ ಅನುಭವಗಳಾದರೂ ಅದರಿಂದ ವಿಚಲಿತರಾಗದೆ ಅದರ ಸತ್ಯತೆಯನ್ನು ಅರ್ಥಮಾಡಿಕೊಂಡು ನಿಶ್ಚಿಂತರಾಗಿ ಉಳಿಯುವರು. ಆದ್ದರಿಂದ ಶ್ರೀರಾಮಕೃಷ್ಣರು ಶಾಸ್ತ್ರಸಮ್ಮತವಾದ ಸಾಧನೆಗಳಲ್ಲಿ ತೊಡಗುವುದು ಆವಶ್ಯಕವೆಂದು ಭೈರವೀ ಬ್ರಾಹ್ಮಣಿಯು ಭಾವಿಸಿದುದು ಉಚಿತ ವಾಗಿಯೇ ಇದೆ.

3. ಶ್ರೀರಾಮಕೃಷ್ಣರನ್ನು ಅವತಾರಪುರುಷರೆಂದು ಪರಿಗಣಿಸಿಯೂ ಬ್ರಾಹ್ಮ ಣಿಯು ಅವರನ್ನು ಸಾಧನೆಯಲ್ಲಿ ತೊಡಗಿಸುವುದರಲ್ಲಿ ಯಾವ ಅರ್ಥವಿದೆ ? ಎಂಬ ಪ್ರಶ್ನೆ ಏಳುವುದು. ದಿವ್ಯ ಮಹಿಮಾನ್ವಿತರಾದ ಅವತಾರ ಪುರುಷರು ಎಲ್ಲ ರೀತಿ ಯಲ್ಲಿಯೂ ಪರಿಪೂರ್ಣರು, ಅವರು ಸಾಧನೆ ಮಾಡುವುದು ಕೇವಲ ತೋರಿಕೆಗೆ ಮಾತ್ರ ವಲ್ಲವೆ ? ಶ್ರೀರಾಮಕೃಷ್ಣರ ದಿವ್ಯ ಮಹಿಮೆಯ ಅರಿವು ಬ್ರಾಹ್ಮಣಿಯಲ್ಲಿ ಯಾವಾ ಗಲೂ ಇದ್ದಿದ್ದರೆ ಮೇಲಿನ ಮಾತು ಸತ್ಯವಾಗುತ್ತಿತ್ತು. ಆದರೆ ಅವಳು ಮೊದಲಿ ನಿಂದಲೂ ಶ್ರೀರಾಮಕೃಷ್ಣರನ್ನು ಪುತ್ರವಾತ್ಸಲ್ಯದಿಂದಲೇ ಕಂಡವಳು. ಇಂಥ ಪ್ರೀತಿ ಯಲ್ಲಿ ದಿವ್ಯ ಮಹಿಮೆಯ ಜ್ಞಾನವಿರಲು ಸಾಧ್ಯವಿಲ್ಲ. ಆದ್ದರಿಂದ ಶುದ್ಧ ಪ್ರೀತಿಯ ಪ್ರೇರಣೆಯಿಂದಲೇ ಭೈರವಿಯು ಅವರನ್ನು ಸಾಧನೆಯಲ್ಲಿ ಮುಂದುವರಿಯುವಂತೆ

ಪ್ರೇರೇಪಿಸಿದಳು. ಎಲ್ಲ ಅವತಾರ ಪುರುಷರ ಜೀವನದಲ್ಲಿಯೂ ನಾವಿದನ್ನು ಕಾಣು ತ್ತೇವೆ. ಅವರನ್ನು ಅತ್ಯಧಿಕವಾಗಿ ಪ್ರೀತಿಸುತ್ತಿದ್ದವರೆಲ್ಲರೂ, ಆಗಾಗ ಅವರ ದಿವ್ಯ ಮಹಿಮೆಯನ್ನು ಕಂಡು ಬೆರಗಾಗುತ್ತಿದ್ದರೂ, ಬೇರೆ ಸಮಯದಲ್ಲಿ ಅದನ್ನು ಮರೆತು ಅವರನ್ನು ಸಾಧಾರಣ ವ್ಯಕ್ತಿಯನ್ನು ಪ್ರೀತಿಸುವಂತೆ ಪ್ರೀತಿಸುತ್ತ ಅವರ ಹಿತಸಾಧನೆಗೆ ಪ್ರಯತ್ನಿಸುತ್ತಿದ್ದರು. ಶ್ರೀರಾಮಕೃಷ್ಣರ ಅಲೌಕಿಕ ಭಾವಾವೇಶ, ದಿವ್ಯಶಕ್ತಿ ಇವುಗಳನ್ನು ಕಂಡು ಭೈರವಿಯು ಕೆಲವೊಮ್ಮೆ ಸ್ತಂಭಿತಳಾಗುತ್ತಿದ್ದಳು, ನಿಜ. ಆದರೆ ಶ್ರೀರಾಮಕೃಷ್ಣ ರಿಗೆ ಅವಳ ಮೇಲೆ ಇದ್ದ ಭಕ್ತಿ ವಿಶ್ವಾಸ ಮತ್ತು ನಿರ್ಭರತೆ ಅವಳಲ್ಲಿ ಕೋಮಲ ಮಾತೃಪ್ರೇಮವನ್ನು ಜಾಗ್ರತಗೊಳಿಸುತ್ತಿತ್ತು. ಆಗ ಅವರ ದಿವ್ಯ ಮಹಿಮೆಯನ್ನೆಲ್ಲ ಮರೆತು ಅವರನ್ನು ಸಂತೋಷಪಡಿಸಲು ಅವರಿಗೆ ಎಲ್ಲ ರೀತಿಯ ಸಹಾಯವನ್ನು ಮಾಡುತ್ತಿದ್ದಳು.

4. ಯೋಗ್ಯ ವ್ಯಕ್ತಿಯೊಬ್ಬನಿಗೆ ವಿದ್ಯೆ ಕಲಿಸುವುದೆಂದರೆ ಗುರುವಿಗೆ ಎಲ್ಲಿಲ್ಲದ ಆನಂದ ಮತ್ತು ಉತ್ಸಾಹ. ಶ್ರೀರಾಮಕೃಷ್ಣರಂತಹ ಉತ್ತಮ ಅಧಿಕಾರಿಗೆ ಶಿಕ್ಷಣ ನೀಡುವ ಅವಕಾಶ ಸಿಕ್ಕಿದ್ದು ತನ್ನ ದೊಡ್ಡ ಸೌಭಾಗ್ಯ ಎಂದು ಬ್ರಾಹ್ಮಣಿಯು ಭಾವಿಸಿ ದಳು. ತಾನು ಜೀವನವಿಡೀ ಮಾಡಿದ ಅಧ್ಯಯನ ಮತ್ತು ಸಾಧನೆಯಿಂದ ಯಾವ ಫಲವನ್ನು ಪಡೆದಿದ್ದಳು, ಅದನ್ನು ಶ್ರೀರಾಮಕೃಷ್ಣರು ಅತ್ಯಲ್ಪ ಕಾಲದಲ್ಲಿ ಅನುಭವಿಸು ವಂತೆ ಮಾಡಬೇಕೆಂಬುದು ಅವಳ ಮಹತ್ವಾಕಾಂಕ್ಷೆಯಾಗಿತ್ತು.

5. ಶ್ರೀರಾಮಕೃಷ್ಣರು ತಂತ್ರಸಾಧನೆಯನ್ನು ಪ್ರಾರಂಭಿಸುವುದಕ್ಕೆ ಮುಂಚೆ ಆ ವಿಷಯದಲ್ಲಿ ಶ್ರೀಜಗನ್ಮಾತೆಯ ಅನುಮತಿಯನ್ನು ಪಡೆದಿದ್ದರು. ಇದನ್ನು ಶ್ರೀರಾಮ ಕೃಷ್ಣರೇ ನಮಗೆ ಅನೇಕ ಬಾರಿ ಸೂಚಿಸಿದ್ದರು. ಆದ್ದರಿಂದ ಕೇವಲ ಬ್ರಾಹ್ಮಣಿಯ ಪ್ರೇರಣೆಯಿಂದಲೇ ಅವರು ಈ ಸಾಧನೆಯಲ್ಲಿ ಉತ್ಸುಕರಾದುದಲ್ಲ, ತಮ್ಮ ಸಾಧನೆ ಯಿಂದ ಪಡೆದ ದಿವ್ಯದೃಷ್ಟಿಯೂ ಅವರು ಈ ಸಾಧನೆಯನ್ನು ಸ್ವೀಕರಿಸುವಂತೆ ಮಾಡಿತ್ತು. ಶಾಸ್ತ್ರಸಮ್ಮತವಾದ ಸಾಧನೆಗಳ ಮೂಲಕವೂ ಶ್ರೀಜಗನ್ಮಾತೆಯ ಪ್ರತ್ಯಕ್ಷ ದರ್ಶನವನ್ನು ಪಡೆಯುವ ಅವಶ್ಯಕತೆಯನ್ನು ಅವರು ಮನಗಂಡರು. ಬ್ರಾಹ್ಮಣಿಯು ನಿರ್ದೇಶಿಸಿದ ಮಾರ್ಗದಲ್ಲಿ ಅವರ ಮನಸ್ಸು ಈಗ ಏಕನಿಷ್ಠೆಯಿಂದ ಧಾವಿಸತೊಡಗಿತು. ಅವರ ಆಸಕ್ತಿಯ ಪ್ರಮಾಣ ಮತ್ತು ತೀವ್ರತೆಯನ್ನು ನಮ್ಮಂತಹ ಸಾಮಾನ್ಯ ವ್ಯಕ್ತಿ ಗಳು ಅರ್ಥಮಾಡಿಕೊಳ್ಳಲಾರೆವು. ಅನೇಕ ವಿಷಯಗಳಲ್ಲಿ ಹರಿದು ಹಂಚಿ ಹೋಗಿರುವ ನಮಗೆ ಆ ರೀತಿಯ ಉಪರತಿ ಮತ್ತು ಏಕನಿಷ್ಠೆ ಇರಲಾರದು. ಅಂತಃಸಮುದ್ರದ ವಿಚಿತ್ರ ರಂಗುರಂಗಿನ ಅಲೆಗಳ ಮೇಲೆ ತೇಲಾಡುತ್ತಿರುವ ನಮಗೆ ಒಮ್ಮೆಯೇ ಒಳಗೆ ಮುಳುಗಿ ಅದರ ತಳವನ್ನು ಸ್ಪರ್ಶಿಸುವ ಧೈರ್ಯ ಹೇಗೆ ಬಂದೀತು ? 'ಒಮ್ಮೆಯೇ ಮುಳುಗು' 'ನಿನ್ನೊಳಗೇ ನೀನು ಮುಳುಗು' ಎಂದು ಶ್ರೀರಾಮಕೃಷ್ಣರು ನಮಗೆ ಮತ್ತೆ ಮತ್ತೆ ಉತ್ತೇಜನ ನೀಡುತ್ತಿದ್ದರು. ಈ ರೀತಿ ಜಗತ್ತಿನ ಎಲ್ಲ ವಸ್ತುಗಳ ಆಸೆ ಯನ್ನು ತೊರೆದು, ಶರೀರದ ಬಗೆಗಿನ ಮಾಯಾ ಮಮತೆಯನ್ನು ಕತ್ತರಿಸಿ ಆಧ್ಯಾತ್ಮಿಕ

ಜಗತ್ತಿನ ಗಂಭೀರ ಆಳಕ್ಕೆ ಮುಳುಗುವುದು ಸುಲಭವೇ ? ಶ್ರೀರಾಮಕೃಷ್ಣರು ವಿರಹ ವೇದನೆಯಿಂದ ನರಳುತ್ತ 'ತಾಯಿ, ದರ್ಶನ ನೀಡು' ಎಂದು ರೋದಿಸುತ್ತ ತಮ್ಮ ಮುಖವನ್ನು ನೆಲಕ್ಕೆ ಉಜ್ಜುತ್ತಿದ್ದರು. ಹೀಗೆ ಎಷ್ಟು ದಿನಗಳು ಕಳೆದವೊ ಯಾರಿಗೂ ತಿಳಿಯದು. ಈ ವಿಷಯವನ್ನು ಕೇಳಿದಾಗ ಅದು ಕಿವಿಗೆ ತಾಕುತ್ತಿತ್ತೇ ಹೊರತು ನಮ್ಮ ಹೃದಯದಲ್ಲಿ ಅದೇ ರೀತಿಯ ವ್ಯಾಕುಲತೆ ಜಾಗ್ರತವಾಗುತ್ತಿರಲಿಲ್ಲ. ಅದು ಆಗುವುದಾದರೂ ಹೇಗೆ ? ಈ ಜಗನ್ಮಾತೆಯು ನಿಜವಾಗಿಯೂ ಇರುವಳು ಮತ್ತು ಎಲ್ಲವನ್ನೂ ತ್ಯಜಿಸಿ ಅವಳನ್ನು ಕರೆದರೆ ಅವಳ ದರ್ಶನವನ್ನು ಪಡೆಯಬಹುದು—ಈ ವಿಷಯದಲ್ಲಿ ಶ್ರೀರಾಮಕೃಷ್ಣರಿಗಿದ್ದಂತಹ ಸರಳ ವಿಶ್ವಾಸ ನಮಗಿದೆಯೇ ?

6. ಸಾಧನ ಕಾಲದಲ್ಲಿ ಅವರಿಗಿದ್ದ ಆಧ್ಯಾತ್ಮಿಕ ಉತ್ಸಾಹದ ಪರಿಮಾಣ ಮತ್ತು ತೀವ್ರತೆ ಎಷ್ಟಿತ್ತೆಂಬುದನ್ನು ಅವರೊಂದು ದಿನ ಕಾಶೀಪುರದಲ್ಲಿ ನಮಗೆ ಸೂಚ್ಯ ವಾಗಿ ಹೇಳಿದ್ದರು. ಅದನ್ನು ಕೇಳಿಯೇ ನಾವು ಸ್ತಂಭಿತರಾಗಿದ್ದೆವು. ಆ ಸಂದರ್ಭದಲ್ಲಿ ನಮಗೆ ಹೇಗೆ ಅನಿಸಿತು ಎಂಬುದನ್ನು ಓದುಗರ ಮುಂದೆ ಇಡಲಾಗುವುದಿಲ್ಲ. ಆ ಘಟನೆ ಯನ್ನು ಮಾತ್ರ ವಿವರಿಸುವೆವು.

ಭಗವತ್ ಸಾಕ್ಷಾತ್ಕಾರಕ್ಕಾಗಿ ಸ್ವಾಮಿ ವಿವೇಕಾನಂದರಲ್ಲಿ ಎಂಥ ವ್ಯಾಕುಲತೆ ಯಿತ್ತು ಎಂಬುದನ್ನು ನಾವು ಕಾಶೀಪುರದಲ್ಲಿ ಕಣ್ಣಾರೆ ನೋಡಿರುವೆವು. ಲಾ ಪರೀಕ್ಷೆಗೆ ಶುಲ್ಕ ಕಟ್ಟಲು ಹೋದಾಗ ಅವರಲ್ಲಿ ಅಂತರ್ಜಾಗ್ರತಿಯುಂಟಾಯಿತು. ಕೂಡಲೇ ಎಲ್ಲವನ್ನೂ ಮರೆತು ಉಟ್ಟಬಟ್ಟೆಯಲ್ಲಿಯೇ ಬರಿಗಾಲಲ್ಲಿಯೇ ಉನ್ಮತ್ತರಂತೆ ಕಾಶೀ ಪುರಕ್ಕೆ ಓಡಿಬಂದರು. ಗುರುವಿನ ಮುಂದೆ ತಮ್ಮ ಮನಸ್ಸಿನ ವೇದನೆಯನ್ನು ತೋಡಿ ಕೊಂಡರು. ಅವರ ಆಶೀರ್ವಾದವನ್ನು ಪಡೆದು ಅಂದಿನಿಂದ ಆಹಾರನಿದ್ರೆಯನ್ನು ತ್ಯಜಿಸಿ ಧ್ಯಾನ–ಜಪಗಳಲ್ಲಿ ಮುಳುಗಿದರು. ಸಾಂಸಾರಿಕ ದಾರುಣ ಪರಿಸ್ಥಿತಿಯು ಅವರ ಮನಸ್ಸನ್ನು ವಿಚಲಿತಗೊಳಿಸಲಿಲ್ಲ. ಗುರುವಿನ ಮಾರ್ಗದರ್ಶನದಂತೆ ಸಾಧನೆಯಲ್ಲಿ ತ್ವರಿತ ವಾಗಿ ಮುಂದುವರಿದು ಒಂದಾದಮೇಲೆ ಒಂದು ಅನುಭವಗಳನ್ನು ಪಡೆಯುತ್ತ ನಾಲ್ಕು ತಿಂಗಳಲ್ಲಿಯೇ ನಿರ್ವಿಕಲ್ಪ ಸಮಾಧಿಯ ಅನುಭವವನ್ನು ಪಡೆದರು. ಅವರ ಈ ಸಾಹಸ ವನ್ನು ಕಂಡು ನಾವು ಬೆರಗಾದೆವು. ಆಗ ಶ್ರೀರಾಮಕೃಷ್ಣರೂ ಸ್ವಾಮೀಜೀಯವರ ಭಕ್ತಿ ವ್ಯಾಕುಲತೆ ಸಾಧನೆಯಲ್ಲಿ ಉತ್ಸಾಹ—ಇವುಗಳನ್ನು ಪ್ರತಿನಿತ್ಯ ಮುಕ್ತಕಂಠದಿಂದ ಹೊಗಳುತ್ತಿದ್ದರು. ಅಂಥ ಸಂದರ್ಭದಲ್ಲಿ ಒಂದು ದಿನ ತಮ್ಮಲ್ಲಿದ್ದ ವ್ಯಾಕುಲತೆಯನ್ನು ಸ್ವಾಮೀಜೀಯವರ ವ್ಯಾಕುಲತೆಯೊಡನೆ ಹೋಲಿಸಿ ಹೇಳಿದರು : "ನರೇಂದ್ರನ ಭಕ್ತಿ ಉತ್ಸಾಹ ನಿಜವಾಗಿಯೂ ಅದ್ಭುತ. ಆದರೆ (ತಮ್ಮಕಡೆ ಬೊಟ್ಟುಮಾಡಿ) ಇಲ್ಲಿ ಸಾಧನೆಯ ಕಾಲದಲ್ಲಿ ಉಂಟಾಗಿದ್ದ ವ್ಯಾಕುಲತೆ, ಅದರ ತೀವ್ರತೆಗೆ ಹೋಲಿಸಿದರೆ ಇದು ಏನೂ ಅಲ್ಲ—ಅದರ ನಾಲ್ಕನೇ ಒಂದು ಭಾಗವೂ ಆಗುವುದಿಲ್ಲ." ಶ್ರೀರಾಮಕೃಷ್ಣರ ಈ ಮಾತನ್ನು ಕೇಳಿ ನಮ್ಮಲ್ಲಿ ಎಂಥ ಭಾವನೆ ಉಂಟಾಗಿರಬಹುದು ಎಂಬುದನ್ನು ನೀವೇ ಊಹಿಸಿಕೊಳ್ಳಿ.

7. ಅದು ಏನೇ ಆಗಲಿ, ಶ್ರೀಜಗನ್ಮಾತೆಯ ಇಚ್ಛೆಯಂತೆ ಶ್ರೀರಾಮಕೃಷ್ಣರು ಎಲ್ಲವನ್ನೂ ಮರೆತು ಸಾಧನೆಯಲ್ಲಿ ತೊಡಗಿದರು. ಬ್ರಾಹ್ಮಣಿಯು ತಾಂತ್ರಿಕಸಾಧನೆಗೆ ಬೇಕಾದ ಎಲ್ಲ ವಸ್ತುಗಳನ್ನೂ ಸಂಗ್ರಹಿಸಿ ಅವರಿಗೆ ಸಹಾಯಮಾಡಲು ಉದ್ಯುಕ್ತಳಾದಳು. ಮನುಷ್ಯನೂ ಸೇರಿದಂತೆ ಪಂಚಪ್ರಾಣಿಗಳ ತಲೆಬುರುಡೆಗಳನ್ನು ಬಹು ದೂರ ಪ್ರದೇಶಗಳಿಂದ ತರಿಸಲಾಯಿತು. ಎರಡು ಸಾಧನೆಯ ವೇದಿಕೆಯನ್ನು ನಿರ್ಮಿಸಲಾಯಿತು—ಒಂದು ಬಿಲ್ವಮರದ ಕೆಳಗೆ, ಇನ್ನೊಂದು ಪಂಚವಟಿಯ ಕೆಳಗೆ.*

ಪ್ರಯೋಜನಕ್ಕೆ ಅನುಗುಣವಾಗಿ ಶ್ರೀರಾಮಕೃಷ್ಣರು ಎರಡೂ ಬಗೆಯ ಮುಂಡಾಸನಗಳ ಮೇಲೆ ಕುಳಿತು ಜಪ ಧ್ಯಾನ ಮಾಡುತ್ತಿದ್ದರು. ಅವರು ಸಾಧನೆ ಮಾಡುತ್ತ ದಿನಗಳು ಉರುಳಿದ್ದೆ ಅವರಿಗೆ ತಿಳಿಯಲಿಲ್ಲ. ಶ್ರೀರಾಮಕೃಷ್ಣರು ಹೇಳುತ್ತಿದ್ದರು: "ಬ್ರಾಹ್ಮಣಿಯು ಹಗಲುಹೊತ್ತು ಎಲ್ಲೆಲ್ಲೋ ಓಡಾಡಿ ತಂತ್ರಸಾಧನೆಗೆ ಬೇಕಾದ ಆವಶ್ಯಕ ವಸ್ತುಗಳನ್ನು ಕಷ್ಟಪಟ್ಟು ಸಂಗ್ರಹಿಸಿ ತರುತ್ತಿದ್ದಳು. ರಾತ್ರಿಯ ವೇಳೆ ಬಿಲ್ವ ಮರದಡಿ ಇಲ್ಲವೆ ಪಂಚವಟಿಯಲ್ಲಿ ಸಾಧನೆಯ ಎಲ್ಲ ವ್ಯವಸ್ಥೆಮಾಡಿ ನನ್ನನ್ನು ಕರೆಯುತ್ತಿದ್ದಳು. ಅವಳು ತಂದ ಎಲ್ಲ ಪದಾರ್ಥಗಳನ್ನು ಉಪಯೋಗಿಸಿ ಶ್ರೀಜಗನ್ಮಾತೆಯ ಪೂಜೆಯನ್ನು ಮಾಡಿ ಜಪ-ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದೆ. ಆದರೆ ಪೂಜೆಯ ಕೊನೆಯಲ್ಲಿ ಜಪಮಾಡಲು ಆಗುತ್ತಲೇ ಇರಲಿಲ್ಲ. ಜಪಮಾಲೆಯನ್ನು ಹಿಡಿದು ತಿರುಗಿಸಲು ಶುರುಮಾಡುವಷ್ಟರಲ್ಲಿ ಮನಸ್ಸು ಸಮಾಧಿ ಮಗ್ನವಾಗುತ್ತಿತ್ತು. ಹೀಗೆ ಆ ಸಂದರ್ಭದಲ್ಲಿ ದರ್ಶನಗಳ ಮೇಲೆ ದರ್ಶನಗಳಾಗುತ್ತಿದ್ದವು. ಎಂಥೆಂಥ ಅದ್ಭುತ ಅನುಭವಗಳಾಗುತ್ತಿದ್ದವೆಂಬುದನ್ನು ಹೇಳಿ ಮುಗಿಸುವುದಕ್ಕಾಗುವುದಿಲ್ಲ. ಅರವತ್ತನಾಲ್ಕು ತಂತ್ರಗಳಲ್ಲಿ ಹೇಳಿರುವ ಎಲ್ಲ ಸಾಧನೆಗಳನ್ನೂ ಬ್ರಾಹ್ಮಣಿಯು ನನ್ನಿಂದ ಮಾಡಿಸಿದಳು. ಕೆಲವು ಅತ್ಯಂತ ಕಠಿಣಸಾಧನೆಗಳು. ಅವುಗಳಲ್ಲಿ ತೊಡಗುವ ಹೆಚ್ಚಿನ

---

* ಸಾಧಕರು ಸಾಮಾನ್ಯವಾಗಿ ಐದು ತಲೆಬುರುಡೆಯ ವೇದಿಕೆಯನ್ನು (ಮುಂಡಾಸನ) ನಿರ್ಮಿಸಿ ಅದರ ಮೇಲೆ ಕುಳಿತು ಧ್ಯಾನ ಜಪ ಮಾಡುತ್ತಾರೆ. ಆದರೆ ಶ್ರೀರಾಮಕೃಷ್ಣರು ಎರಡು ಬಗೆಯ ಮುಂಡಾಸನದ ಬಗ್ಗೆ ಹೇಳುತ್ತಿದ್ದರು—ಬಿಲ್ವಮರದ ಕೆಳಗೆ ಮೂರು ಮನುಷ್ಯನ ತಲೆ ಬುರುಡೆಯಿಂದ ಕೂಡಿದ ಆಸನ, ಐದು ವಿವಿಧಪ್ರಾಣಿಗಳ ತಲೆಬುರುಡೆಯ ಆಸನ ಪಂಚವಟಿಯಲ್ಲಿ. ಈ ಸಾಧನೆಯಲ್ಲಿ ಪೂರ್ಣತೆಯನ್ನು ಪಡೆದಕೂಡಲೆ ಶ್ರೀರಾಮಕೃಷ್ಣರು ತಲೆಬುರುಡೆಗಳನ್ನೆಲ್ಲ ಗಂಗೆಗೆ ಎಸೆದು ವೇದಿಕೆಗಳನ್ನು ಮುರಿದುಹಾಕಿದರು. ತ್ರಿಮುಂಡಾಸನದ ಮೇಲೆ ಸಾಧನೆ ಮಾಡುವುದು ಹೆಚ್ಚು ಪ್ರಶಸ್ತವಾದುದರಿಂದಲೊ, ಅಥವಾ ಆಗಿನಕಾಲದಲ್ಲಿ ಬಿಲ್ವಮರವಿದ್ದ ಜಾಗ ಹೆಚ್ಚು ಏಕಾಂತವಾಗಿದ್ದುದರಿಂದಲೋ ಎರಡು ವೇದಿಕೆಗಳನ್ನು ರಚಿಸಲಾಯಿತು. ಅಥವಾ ಬಿಲ್ವಮರದ ಹತ್ತಿರ ಸರ್ಕಾರದ ಶಸ್ತ್ರಶಾಲೆ ಇದ್ದುದರಿಂದ ಅಲ್ಲಿ ಹೋಮಕ್ಕೆ ಬೆಂಕಿ ಉರಿಸಲಾಗದ ಕಾರಣ ಪಂಚವಟಿಯಲ್ಲಿ ಇನ್ನೊಂದು ವೇದಿಕೆಯನ್ನು ನಿರ್ಮಿಸಿದ್ದಿರಬಹುದು.

ಸಾಧಕರು ಹಾದಿತಪ್ಪಿಬಿಡುತ್ತಾರೆ. ಆದರೆ ತಾಯಿಯ ಕೃಪೆಯಿಂದ ಅವುಗಳೆಲ್ಲದ ರಲ್ಲಿಯೂ ನಾನು ಉತ್ತೀರ್ಣನಾದೆ.

8. ''ಒಂದುದಿನ ರಾತ್ರಿ ಬ್ರಾಹ್ಮಣಿಯು ಸುಂದರಿಯಾದ ಯುವತಿಯೊಬ್ಬಳನ್ನು ಕರೆದುಕೊಂಡು ಬಂದಳು. ಪೂಜೆಗೆ ಎಲ್ಲ ಅಣಿಗೊಳಿಸಿ ದೇವಿಯ ಆಸನದ ಮೇಲೆ ಆಕೆಯನ್ನು ಬೆತ್ತಲೆಯಾಗಿ ಕುಳ್ಳಿರಿಸಿ 'ಈಕೆಯನ್ನು ದೇವಿ ಎಂದು ತಿಳಿದು ಪೂಜಿಸು' ಎಂದು ನನಗೆ ಹೇಳಿದಳು. ಪೂಜೆ ಮುಗಿದಮೇಲೆ ಹೇಳಿದಳು, 'ಈಕೆಯನ್ನು ಸಾಕ್ಷಾತ್ ಜಗಜ್ಜನನಿಯೆಂದು ಭಾವಿಸಿ ಅವಳ ತೊಡೆಯಮೇಲೆ ಕುಳಿತು ಏಕಾಗ್ರತೆಯಿಂದ ಜಪ ಮಾಡು.' ಆಗ ನನಗೆ ದಿಗಿಲಾಯಿತು. ಅಳುತ್ತ ಶ್ರೀ ಜಗನ್ಮಾತೆಗೆ ಹೇಳಿದೆ, ''ತಾಯಿ, ನಿನ್ನಲ್ಲಿ ಶರಣಾಗತನಾದ ನನಗೆ ಇದೆಂಥ ಆದೇಶ ನೀಡುತ್ತಿರುವೆ ? ಈ ದುರ್ಬಲ ಪುತ್ರ ನಿಗೆ ಆ ಸಾಹಸ ಸಾಧ್ಯವೆ?'' ಹೀಗೆ ಹೇಳುತ್ತಿದ್ದಂತೆ ನನ್ನಲ್ಲಿ ದಿವ್ಯಶಕ್ತಿ ಸಂಚಾರವಾದಂತಾ ಯಿತು. ಭಾವಮಯನಾಗಿ ಮಂತ್ರವನ್ನು ಉಚ್ಚರಿಸುತ್ತ ಆ ಸ್ತ್ರೀಯ ತೊಡೆಯಮೇಲೆ ಕುಳಿತೆನು. ಕೂಡಲೆ ಸಮಾಧಿಮಗ್ನನಾದೆ. ಅನಂತರ ನನಗೆ ಬಾಹ್ಯಪ್ರಜ್ಞೆಯುಂಟಾದಾಗ ಬ್ರಾಹ್ಮಣಿ ಹೇಳಿದಳು: 'ಕ್ರಿಯೆ ಪೂರ್ಣವಾಯಿತು. ಇತರರು ಬಹಳ ಕಷ್ಟದಿಂದ ಧೈರ್ಯ ತಂದುಕೊಂಡು ಎಲ್ಲೊ ಸ್ವಲ್ಪಮಾತ್ರ ಜಪಮಾಡಿ ಮುಗಿಸಿಬಿಡುತ್ತಾರೆ. ನೀನು ಒಮ್ಮೆಯೆ ಶರೀರಜ್ಞಾನವೇ ಇಲ್ಲದೆ ಸಮಾಧಿಸ್ಥನಾಗಿಬಿಟ್ಟೆ!' ಇದನ್ನು ಕೇಳಿ ನನಗೆ ಭರವಸೆಯುಂಟಾ ಯಿತು. ಈ ಪರೀಕ್ಷೆಯಲ್ಲಿ ಉತ್ತೀರ್ಣಗೊಳಿಸಿದ್ದಕ್ಕೆ ತಾಯಿಗೆ (ಶ್ರೀ ಜಗನ್ಮಾತೆಗೆ) ಕೃತಜ್ಞತಾಪೂರ್ವಕವಾಗಿ ಮತ್ತೆ ಮತ್ತೆ ವಂದಿಸಿದೆ.

9. ''ಇನ್ನೊಂದು ದಿನ ಅವಳು ಶವದ ತಲೆ ಬುರುಡೆಯಲ್ಲಿ ಮೀನನ್ನು ಬೇಯಿಸಿ ಶ್ರೀ ಜಗನ್ಮಾತೆಗೆ ತರ್ಪಣ ನೀಡಿದಳು. ಅನಂತರ ನನ್ನಿಂದಲೂ ಅದೇ ರೀತಿ ಮಾಡಿಸಿ ಅದನ್ನು ಸ್ವೀಕರಿಸಲು ಹೇಳಿದಳು. ಯಾವ ತಿರಸ್ಕಾರ ಭಾವವೂ ಇಲ್ಲದೆ ನಾನು ಸ್ವೀಕರಿಸಿದೆ.

''ಆದರೆ ಒಂದು ದಿನ ಬ್ರಾಹ್ಮಣಿಯು ಕೊಳೆತ ಮಾಂಸವನ್ನು ತಂದು ತರ್ಪಣದ ನಂತರ ಅದನ್ನು ನಾಲಿಗೆಯಿಂದ ಸ್ಪರ್ಶಿಸಲು ಹೇಳಿದಾಗ ನನಗೆ ಅಸಹ್ಯವಾಯಿತು. 'ಹಾಗೆ ಮಾಡಲು ಎಂದಾದರೂ ಸಾಧ್ಯವೆ ?' ಎಂದು ನಾನು ಆಕ್ಷೇಪಿಸಿದಾಗ ಅವಳು ಹೇಳಿದಳು: 'ಇದೇನು ಹೇಳುತ್ತೀಯೆ, ನೀನು ? ನೋಡು, ನಾನು ತಿನ್ನುತ್ತೇನೆ'. ಹೀಗೆ ಒಂದು ಸಣ್ಣ ತುಂಡನ್ನು ಬಾಯಿಗೆ ಹಾಕಿಕೊಂಡಳು. 'ಯಾವುದಕ್ಕೂ ಅಸಹ್ಯ ಪಡಬಾರದು.' ಎಂದು ಹೇಳಿ ಅದರ ಸ್ವಲ್ಪ ಭಾಗವನ್ನು ನನ್ನ ಮುಂದೆ ಹಿಡಿದಳು. ಆಗ ನನ್ನಲ್ಲಿ ಪ್ರಚಂಡ ಚಂಡಿಕಾ ಮೂರ್ತಿಯು ಉದ್ದೀಪನವಾಯಿತು, ಮಾ ಮಾ ಎಂದು ಹೇಳುತ್ತಾ ಭಾವಾವಿಷ್ಟನಾದೆ. ಆಗ ಬ್ರಾಹ್ಮಣಿಯು ಅದನ್ನು ನನ್ನ ಬಾಯೊಳಗೆ ಹಾಕಿದಾಗಲೂ ಅಸಹ್ಯವುಂಟಾಗಲಿಲ್ಲ.

10. ''ಬ್ರಾಹ್ಮಣಿಯು ನನಗೆ ಪೂರ್ಣಾಭಿಷೇಕ ದೀಕ್ಷೆಯನ್ನು ನೀಡಿದ ಮೇಲೆ ಏನೇನಲ್ಲ ತಾಂತ್ರಿಕ ಅನುಷ್ಠಾನಗಳನ್ನು ನನ್ನಿಂದ ಮಾಡಿಸಿದಳೊ ಅವನ್ನೆಲ್ಲ ಹೇಳಿ

ಮುಗಿಸಲಾಗುವುದಿಲ್ಲ. ಎಲ್ಲವೂ ಎಲ್ಲ ಸಮಯದಲ್ಲಿಯೂ ಈಗ ನೆನಪಿಗೆ ಬರುವುದಿಲ್ಲ; ಆದರೆ ಒಂದು ವಿಷಯ ಮನಸ್ಸಿನಲ್ಲಿದೆ. ಸಂಭೋಗಕ್ರಿಯೆಯಲ್ಲಿ ಮಗ್ನರಾಗಿದ್ದ ನರ-ನಾರಿಯರ ದರ್ಶನವನ್ನು ನನಗೆ ಮಾಡಿಸಿದಾಗ ನಾನು ಅದನ್ನು ಶಿವಶಕ್ತಿಯ ಲೀಲೆಯೆಂದು ಭಾವಿಸಿ ಸಮಾಧಿಮಗ್ನನಾಗಿದ್ದೆ. ಅಂದು ಬಾಹ್ಯ ಚೈತನ್ಯ ಬಂದಾಗ ಬ್ರಾಹ್ಮಣಿ ಹೇಳಿದಳು, 'ನೀನು ಅತ್ಯಂತ ಕಷ್ಟಸಾಧ್ಯವಾದ ತಂತ್ರ ಸಾಧನೆಯಲ್ಲಿ ಸಿದ್ಧಿಯನ್ನು ಪಡೆದು ದಿವ್ಯಭಾವದಲ್ಲಿ ಪ್ರತಿಷ್ಠಿತನಾಗಿದ್ದೀಯೆ. ಇದೇ ವೀರಭಾವ ಸಾಧನೆಯ ಅಂತಿಮ ಗಡುವು.' ಇದಾದ ಸ್ವಲ್ಪಕಾಲದ ನಂತರ ಇನ್ನೊರ್ವ ಭೈರವಿಯ ಸಹಾಯದಿಂದ ಕಾಳೀಮಂದಿರದ ನಾಟ್ಯಶಾಲೆಯಲ್ಲಿ ಹಗಲುಹೊತ್ತು ಎಲ್ಲರ ಮುಂದೆ ಸ್ತ್ರೀಮೂರ್ತಿಯನ್ನು ಪೂಜಿಸಿ ವೀರಭಾವದ ಸಾಧನೆಯನ್ನು ಮಾಡಿ ಮುಗಿಸಿದೆ, ಈ ಎಲ್ಲ ತಂತ್ರ ಸಾಧನೆಗಳ ಸಮಯದಲ್ಲಿ ಎಲ್ಲ ಸ್ತ್ರೀಯರ ಬಗ್ಗೆಯೂ ಮಾತೃಭಾವವೇ ದೃಢವಾಗಿತ್ತು. ಹಾಗೆಯೇ ಆ ಸಮಯದಲ್ಲಿ ಒಂದು ಹನಿ ಮದ್ಯ (ಕಾರಣ)ವನ್ನೂ ಕುಡಿದಿರಲಿಲ್ಲ. ಕಾರಣದ ಹೆಸರು ಕೇಳಿದಾಕ್ಷಣ ಜಗತ್ ಕಾರಣದಲ್ಲಿ ಮನಸ್ಸು ಲೀನವಾಗುತ್ತಿತ್ತು. ಹಾಗೆಯೇ 'ಯೋನಿ' ಶಬ್ದವನ್ನು ಕೇಳಿದಾಕ್ಷಣ ಜಗದ್ಯೋನಿಯು ನೆನಪಾಗಿ ಮನಸ್ಸು ಸಮಾಧಿಮಗ್ನವಾಗುತ್ತಿತ್ತು.''

11. ದಕ್ಷಿಣೇಶ್ವರದಲ್ಲಿರುವಾಗ ಶ್ರೀರಾಮಕೃಷ್ಣರು ಒಂದು ದಿನ ಸ್ತ್ರೀಯರೆಲ್ಲರನ್ನೂ ತಾವು ಮಾತೃಭಾವದಿಂದ ಕಾಣುವ ವಿಷಯವನ್ನು ಹೇಳುತ್ತ ಒಂದು ಪೌರಾಣಿಕ ಕಥೆಯನ್ನು ಉಲ್ಲೇಖಿಸಿದ್ದರು, ಶ್ರೀಗಣಪತಿಯ ಹೃದಯದಲ್ಲಿ ಈ ರೀತಿಯ ಮಾತೃಭಾವ ಹೇಗೆ ಉಂಟಾಯಿತು ಎಂಬುದನ್ನು ಕುರಿತಾದುದು ಆ ಕಥೆ. ವಿಕೃತ ರೂಪವುಳ್ಳ ಲಂಬೋದರ ಗಜಾನನನ ವಿಷಯದಲ್ಲಿ ನಮಗೆ ಮೊದಲು ಅಷ್ಟೊಂದು ಭಕ್ತಿ ಇರಲಿಲ್ಲ; ಆದರೆ ಶ್ರೀರಾಮಕೃಷ್ಣರ ಬಾಯಿಂದ ಇದನ್ನು ಕೇಳಿದ ಮೇಲೆ ಶ್ರೀಗಣಪತಿಯು ನಿಜವಾಗಿಯೂ ಅಗ್ರಪೂಜೆಗೆ ಅರ್ಹನಾದವನು ಎಂದೆನಿಸಿತು ನಮಗೆ.

ಗಣಪತಿಯು ಆಗ ಇನ್ನೂ ಬಾಲಕ. ಒಂದು ದಿನ ಆಟವಾಡುತ್ತಿರುವಾಗ ಒಂದು ಬೆಕ್ಕು ಬಂತು. ಬಾಲ ಸಹಜ ಚಪಲತೆಯಿಂದ ಅದನ್ನು ಪೀಡಿಸಿ ಹೊಡೆದು ಕಷ್ಟಕ್ಕೊಳಪಡಿಸಿದ. ಬೆಕ್ಕು ಹೇಗೊ ತಪ್ಪಿಸಿಕೊಂಡು ಓಡಿ ಹೋಯಿತು. ಅನಂತರ ಗಣಪತಿಯು ತಾಯಿ ಪಾರ್ವತಿಯ ಹತ್ತಿರ ಹೋದ. ಹೋಗಿ ನೋಡುತ್ತಾನೆ ತಾಯಿಯ ಮೈಮೇಲೆಲ್ಲ ಏಟಿನ ಘಾಯ ! ಗಣಪತಿಯು ಅತ್ಯಂತ ದುಃಖದಿಂದ ಕಾರಣವನ್ನು ಕೇಳಿದಾಗ ಪಾರ್ವತಿ ಹೇಳಿದಳು : ''ನನ್ನ ಈ ದುರವಸ್ಥೆಗೆ ನೀನೇ ಕಾರಣ.'' ಗಣಪತಿಗೆ ಆಶ್ಚರ್ಯವಾಯಿತು . ಮತ್ತೆ ಇನ್ನಷ್ಟು ವ್ಯಥೆಯಾಯಿತು. ''ಅದು ಹೇಗೆ ತಾಯಿ ? ನಾನು ಯಾವಾಗ ನಿನ್ನನ್ನು ಹೊಡೆದೆ ? ಅಥವಾ ನೀನು ಬೇರೆಯವರಿಂದ ಈ ರೀತಿ ಅಪಮಾನಕ್ಕೆ ಕಾರಣಳಾಗುವಂತಹ ಯಾವ ತಪ್ಪನ್ನೂ ನನಗೆ ಮಾಡಿದ ನೆನಪಿಲ್ಲ.'' ಆಗ ದೇವಿಯು ಹೇಳಿದಳು : ''ಯೋಚಿಸಿ ನೋಡು, ನೀನು ಇಂದು ಯಾವು

ದಾದರೂ ಜೀವಿಗೆ ಹೊಡೆದಿಲ್ಲವೆ ?'' "ಹೊಡೆದಿದ್ದು ನಿಜ. ಸ್ವಲ್ಪ ಹೊತ್ತಿಗೆ ಮುಂಚೆ ಒಂದು ಬೆಕ್ಕಿಗೆ ಸರಿಯಾಗಿ ಹೊಡೆದೆ.'' ಬೆಕ್ಕು ಯಾರಿಗೆ ಸೇರಿತ್ತೊ, ಅವನು ಬಂದು ತಾಯಿಗೆ ಹೊಡೆದಿರಬೇಕೆಂದು ಭಾವಿಸಿ ಗಣೇಶನು ಅಳತೊಡಗಿದನು. ಆಗ ದೇವಿಯು ಪುತ್ರನನ್ನು ಭರಸೆಳೆದು ತಬ್ಬಿಕೊಂಡು ಹೇಳಿದಳು: "ಹಾಗಲ್ಲ, ಮಗು. ಯಾರೂ ನನ್ನನ್ನು ಹೊಡೆಯಲಿಲ್ಲ. ಸಕಲ ಜೀವಿಗಳ ರೂಪದಲ್ಲಿ ವಿಹರಿಸುತ್ತಿರುವವಳು ನಾನೇ. ಆದ್ದರಿಂದ ನೀನು ಬೆಕ್ಕಿಗೆ ಹೊಡೆದ ಚಿಹ್ನೆ ನನ್ನ ದೇಹದ ಮೇಲೆ ಕಾಣಿಸುತ್ತಿದೆ. ನೀನು ತಿಳಿಯದೆ ಹೀಗೆ ಮಾಡಿದೆ, ದುಃಖಿಸಬೇಡ. ಸ್ತ್ರೀರೂಪದಲ್ಲಿರುವ ಎಲ್ಲ ಜೀವಿಗಳೂ ನನ್ನ ಅಂಶ ಮತ್ತು ಪುರುಷರೂಪದ ಎಲ್ಲ ಜೀವಿಗಳೂ ನಿನ್ನ ತಂದೆಯ ಅಂಶ ಎಂಬುದನ್ನು ತಿಳಿ. ಶಿವಶಕ್ತಿಯನ್ನು ಬಿಟ್ಟು ಈ ಪ್ರಪಂಚದಲ್ಲಿ ಯಾವುದೂ ಇಲ್ಲವೇ ಇಲ್ಲ.'' ಈ ಮಾತು ಗಣೇಶನ ಹೃದಯವನ್ನು ತಾಕಿತು. ಅವನಿಗೆ ಮದುವೆಯ ವಯಸ್ಸು ಬಂದ ಮೇಲೆ ಯಾರನ್ನು ಮದುವೆಯಾದರೂ ತಾಯಿಯನ್ನು ಮದುವೆಯಾದಂತಾಗುವುದೆಂದು ಅವನು ಮದುವೆಯಾಗುವುದಕ್ಕೆ ಒಪ್ಪಲೇ ಇಲ್ಲ. ಹೀಗೆ ಅವನು ಚಿರಕಾಲವೂ ಬ್ರಹ್ಮಚಾರಿಯಾಗಿ ಉಳಿದನು. ಜಗತ್ತು ಶಿವಶಕ್ತ್ಯಾತ್ಮಕವಾದುದು ಎಂಬ ಭಾವನೆ ಅವನ ಮನಸ್ಸಿನಲ್ಲಿ ದೃಢವಾಗಿ ಬೇರೂರಿದ್ದುದರಿಂದ ಅವನು ಜ್ಞಾನಿಗಳಲ್ಲಿ ಅಗ್ರಗಣ್ಯನಾದನು.

ಶ್ರೀಗಣೇಶನು ಎಂಥ ಉನ್ನತ ಜ್ಞಾನಿಯಾಗಿದ್ದ ಎಂಬುದನ್ನು ಸೂಚಿಸುವ ಇನ್ನೊಂದು ಕಥೆಯನ್ನು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಒಮ್ಮೆ ಪಾರ್ವತೀ ದೇವಿಯು ತನ್ನ ಇಬ್ಬರು ಮಕ್ಕಳಾದ ಗಣೇಶ ಮತ್ತು ಕಾರ್ತಿಕೇಯ ಇವರನ್ನು ಕರೆದು ಒಂದು ಬಹುಮೂಲ್ಯ ಮುತ್ತಿನಹಾರವನ್ನು ತೋರಿಸಿ ಹೇಳಿದಳು : "ನಿಮ್ಮಿಬ್ಬರಲ್ಲಿ ಯಾರು ಚತುರ್ದಶ ಭುವನದಿಂದ ಕೂಡಿದ ಇಡೀ ಜಗತ್ತಿಗೆ ಒಂದು ಸುತ್ತು ಹಾಕಿಕೊಂಡು ಬೇಗ ಬರುತ್ತೀರೊ ಅವರಿಗೆ ಈ ಹಾರವನ್ನು ಕೊಡುತ್ತೇನೆ.'' ಗಣೇಶನದು ದೊಡ್ಡ ದೇಹ, ಡೊಳ್ಳು ಹೊಟ್ಟೆ, ಅವನ ವಾಹನವಾದರೊ ಮಂದಗತಿಯ ಇಲಿ– ಹೀಗಿರುವಾಗ ಹಾರ ತನಗೇ ದಕ್ಕಿದಂತೆ ಎಂದು ಭಾವಿಸಿದ ನವಿಲುವಾಹನನಾದ ಕಾರ್ತಿಕೇಯ. ಅವನು ಗಣೇಶನ ಸ್ಥಿತಿಯನ್ನು ಕಂಡು ಹಾಸ್ಯ ಮಾಡುತ್ತ ಕೂಡಲೇ ನವಿಲನ್ನೇರಿ ಜಗತ್ತನ್ನು ಸುತ್ತುವುದಕ್ಕೆ ಹೊರಟ. ಅವನು ಹೊರಟು ಹೋಗಿ ಬಹಳ ಸಮಯದ ನಂತರ ಗಣೇಶನು ನಿಧಾನವಾಗಿ ಮೇಲೆದ್ದ. ತನ್ನ ತಂದೆ ತಾಯಿಗಳಾದ ಶಿವ–ಪಾರ್ವತಿಯರಲ್ಲಿಯೇ ಇಡೀ ಜಗತ್ತನ್ನು ಕಾಣುತ್ತ ಅವನು ಮೆಲ್ಲಮೆಲ್ಲನೆ ಅಡಿಯಿಡುತ್ತ ಅವರಿಬ್ಬರಿಗೆ ಒಂದು ಸುತ್ತು ಬಂದು ವಂದಿಸಿ ಸುಮ್ಮನೆ ಕುಳಿತುಬಿಟ್ಟ. ಕಾರ್ತಿಕೇಯನು ಹಿಂತಿರುಗಿದ ಮೇಲೆ ಪಾರ್ವತಿಯು ಮುತ್ತಿನಹಾರವನ್ನು ಗಣಪತಿಯ ಕೊರಳಿಗೆ ಹಾಕಿದಳು.

ಹೀಗೆ ಸ್ತ್ರೀಯರೆಲ್ಲರನ್ನೂ ಮಾತೃಭಾವದಿಂದ ಕಾಣುತ್ತಿದ್ದ ಗಣಪತಿಯ ವಿಷಯವನ್ನು ಹೇಳಿ ಶ್ರೀರಾಮಕೃಷ್ಣರು ಅನಂತರ ನುಡಿಯುತ್ತಿದ್ದರು. "ಸ್ತ್ರೀಯರ ವಿಷಯ

ದಲ್ಲಿ ನನ್ನ ಭಾವವೂ ಇದೇ ಆದ್ದರಿಂದಲೇ ವಿವಾಹಿತ ಪತ್ನಿಯ ಒಳಗೆ ಶ್ರೀಜಗನ್ಮಾತೆಯನ್ನೇ ಕಾಣುತ್ತ ಅವಳನ್ನು ಪೂಜಿಸಿ ಆಕೆಯ ಪಾದಕ್ಕೆರಗಿದ್ದೆ.''

12. ಸ್ತ್ರೀಯರನ್ನು ಮಾತೃಭಾವದಿಂದ ಕಾಣುತ್ತ ತಂತ್ರದಲ್ಲಿ ಹೇಳಿರುವ ವೀರಭಾವದ ಸಾಧನೆಯನ್ನು ಮಾಡುವ ವಿಚಾರವನ್ನು ನಾವು ಎಲ್ಲಿಯೂ ಕೇಳಿರಲೇ ಇಲ್ಲ. ಇದುವರೆಗೂ ವೀರಭಾವದ ಸಾಧಕನು ಯಾವಾಗಲೂ ಸಾಧನೆಯ ಸಮಯದಲ್ಲಿ ಓರ್ವ ಮಹಿಳೆಯನ್ನು ತನ್ನೊಡನೆ ಇಟ್ಟುಕೊಂಡಿರುತ್ತಿದ್ದನು. ಸ್ತ್ರೀ ಜತೆಯಲ್ಲಿಲ್ಲದಿದ್ದರೆ ಸಾಧನೆಯು ಸಿದ್ಧಿಯಾಗಲಿ, ಶ್ರೀ ಜಗದಂಬೆಯ ಕೃಪೆಯಾಗಲಿ ಆಗುವುದಿಲ್ಲ ಎಂಬುದು ವೀರಭಾವಸಾಧಕರ ನಂಬಿಕೆ. ಇದರಿಂದಾಗಿ ಕೆಲವೊಮ್ಮೆ ಸಾಧಕರು ತಮ್ಮ ಪಾಶವೀ ಪ್ರವೃತ್ತಿಗೆ ಒಳಗಾಗಿ ಕೆಟ್ಟ ಹಾದಿ ಹಿಡಿಯುವ ಸಂಭವವುಂಟು. ಆದ್ದರಿಂದ ಜನರು ತಂತ್ರದ ಈ ವೀರಭಾವ ಸಾಧನೆಯನ್ನು ನಿಂದಿಸುತ್ತಾರೆ.

ಯುಗಾವತಾರರಾದ ಶ್ರೀರಾಮಕೃಷ್ಣರು ಮಾತ್ರ ಕನಸಿನಲ್ಲಿಯೂ ತಾವು ಸ್ತ್ರೀಸಂಗವನ್ನು ಮಾಡಿಲ್ಲವೆಂದು ನಮಗೆ ಹೇಳಿರುವರು. ಆದ್ದರಿಂದ ಆಜನ್ಮ ಮಾತೃಭಾವದವರಾದ ಶ್ರೀರಾಮಕೃಷ್ಣರು ವೀರಭಾವ ಸಾಧನೆಯನ್ನು ಮಾಡುವುದರಲ್ಲಿ ಏನೋ ಅರ್ಥವಿರಬೇಕು.

13. ಯಾವುದೇ ಸಾಧನೆಯಲ್ಲಾದರೂ ಅದರ ಸಿದ್ಧಿಯನ್ನು ಪಡೆಯಲು ತಮಗೆ ಮೂರು ದಿನಗಳಿಗಿಂತ ಹೆಚ್ಚು ಹಿಡಿಯುತ್ತಿರಲಿಲ್ಲ ಎಂದು ಶ್ರೀರಾಮಕೃಷ್ಣರು ನಮಗೆ ಹೇಳುತ್ತಿದ್ದರು. ''ವಿಶಿಷ್ಟ ಸಾಧನೆಯನ್ನು ಆರಿಸಿಕೊಂಡು ಅದರ ಸಿದ್ಧಿಯನ್ನು ಪಡೆಯಬೇಕೆಂಬ ತೀವ್ರಾಕಾಂಕ್ಷೆಯಿಂದ ಶ್ರೀಜಗನ್ಮಾತೆಯನ್ನು ಪ್ರಾರ್ಥಿಸಿದರೆ ಮೂರೇ ದಿನಗಳಲ್ಲಿ ಅದರ ಸಿದ್ಧಿಯನ್ನು ಪಡೆಯುತ್ತಿದ್ದೆ.'' ಅವರು ಸ್ತ್ರೀಸಂಗವಿಲ್ಲದೆ ವೀರಭಾವ ಸಾಧನೆಯಲ್ಲಿ ಬಹುಬೇಗನೆ ಸಿದ್ಧಿಯನ್ನು ಪಡೆದುದರ ಅರ್ಥವೇನೆಂದರೆ, ಈ ಅನುಷ್ಠಾನಗಳಲ್ಲಿ ಸ್ತ್ರೀಸಂಗ ಅಥವಾ ಪಂಚ'ಮ'ಕಾರ ಆವಶ್ಯಕ ಅಂಗಗಳಲ್ಲ ಎಂಬುದು. ಸಾಕಷ್ಟು ಸಂಯಮವಿಲ್ಲದ ಸಾಧಕನು ದೌರ್ಬಲ್ಯವಶನಾಗಿ ಈ ರೀತಿ ಮಾಡುತ್ತಾನೆ. ಸಾಧಕನು ಹೀಗೆ ಮಾಡಿದರೂ ತಂತ್ರಶಾಸ್ತ್ರವು ಅವನಿಗೆ ಅಭಯದಾನವನ್ನಿತ್ತು ಪುನಃ ಪುನಃ ಅಭ್ಯಾಸ ಮಾಡುವುದರಿಂದ ಅವನು ಮುಂದೆ ದಿವ್ಯಭಾವದಲ್ಲಿ ಪ್ರತಿಷ್ಠಿತನಾಗುತ್ತಾನೆ ಎಂದು ಹೇಳಿರುವುದು ಆ ಶಾಸ್ತ್ರದ ಪರಮಕಾರುಣ್ಯವನ್ನೇ ಸೂಚಿಸುತ್ತದೆ.

14. ರೂಪರಸಾದಿಗಳು ಸಾಧಾರಣ ಮಾನವರನ್ನು ಪ್ರಲೋಭನೆಗೆ ಒಳಪಡಿಸಿ ಸಂಸಾರದಲ್ಲಿ ಬಂಧಿಸುವುವು. ಭಗವಂತನನ್ನು ಕಾಣುವುದಕ್ಕೆ ಮತ್ತು ಆತ್ಮ ಸಾಕ್ಷಾತ್ಕಾರವನ್ನು ಪಡೆಯುವುದಕ್ಕೆ ಅವು ಬಿಡುವುದಿಲ್ಲ. ಆತ್ಮನಿಗ್ರಹದ ಮೂಲಕ ಮತ್ತು ನಿರಂತರ ಅಭ್ಯಾಸದ ಮೂಲಕ ಅವುಗಳೆಲ್ಲವನ್ನೂ ಭಗವದಂಶವೆಂದು ತಿಳಿಯುವುದನ್ನು ಕಲಿಯಬೇಕು. ಈ ರೀತಿ ಕಲಿಯುವಂತೆ ಮಾಡುವುದೇ ತಂತ್ರದ ಉದ್ದೇಶವೆಂದು ಅನುಮಾನಿಸಬಹುದು. ಸಾಧಕರ ಆತ್ಮ ನಿಗ್ರಹದಲ್ಲಿ ಮತ್ತು ಸರ್ವಭೂತಗಳಲ್ಲಿ ಭಗವಂತನನ್ನು ಕಾಣುವ ಶಕ್ತಿಯಲ್ಲಿ ತಾರತಮ್ಯವಿರುತ್ತದೆ. ಈ ತಾರತಮ್ಯಕ್ಕೆ

ಅನುಸಾರವಾಗಿ ತಂತ್ರವು ಪಶು, ವೀರ ಮತ್ತು ದಿವ್ಯಭಾವದ ಸಾಧನೆಗಳನ್ನು ಸೂಚಿಸಿದೆ. ಈ ಮೂರು ಈಶ್ವರೋಪಾಸನೆಯ ವಿವಿಧ ಹಂತಗಳು. ಆದರೆ ಈ ಎಲ್ಲ ಸಾಧನೆಗಳ ಹಿನ್ನಲೆಯಾಗಿ ಆತ್ಮಸಂಯಮವಿದ್ದಾಗ ಮಾತ್ರ ಯಶಸ್ವಿಯಾಗಲು ಸಾಧ್ಯ. ಇಲ್ಲದಿದ್ದರೆ ಇಲ್ಲ. ಈ ವಿಷಯವನ್ನು ಕಾಲಕ್ರಮೇಣ ಜನ ಮರೆತರು. ಅಂಥ ಸಾಧಕರು ಮಾಡಿದ ಕುತ್ಸಿತ ಕ್ರಿಯೆಗಳಿಗೆ ತಂತ್ರವೇ ಜವಾಬ್ದಾರಿಯೆಂದು ಜನಸಾಧಾರಣರು ಅದನ್ನು ನಿಂದಿಸತೊಡಗಿದರು. ಸರ್ವಸ್ತ್ರೀಯರಲ್ಲಿಯೂ ಮಾತೃತ್ವವನ್ನು ಕಾಣುತ್ತ ಶ್ರೀರಾಮಕೃಷ್ಣರು ಈ ಎಲ್ಲ ಸಾಧನೆಗಳಲ್ಲಿ ಸಾಫಲ್ಯವನ್ನು ಪಡೆದು ಉಳಿದ ಸಾಧಕರು ಈ ಸಾಧನೆಗಳಲ್ಲಿ ಯಾವ ರೀತಿ ಮುಂದುವರಿಯಬೇಕು ಎಂಬುದನ್ನು ತೋರಿಸಿ ಕೊಟ್ಟಿರುವರು. ಹಾಗೆಯೇ ಇದರ ಮೂಲಕ ತಂತ್ರಶಾಸ್ತ್ರದ ಪ್ರಾಮಾಣ್ಯವನ್ನೂ ದೃಢೀಕರಿಸಿರುವರು.

15. ಶ್ರೀರಾಮಕೃಷ್ಣರು ಈ ಸಮಯದಲ್ಲಿ ತಂತ್ರದ ರಹಸ್ಯ ಸಾಧನೆಗಳನ್ನು ಒಂದಾದ ಮೇಲೊಂದರಂತೆ ಮೂರು ನಾಲ್ಕು ವರ್ಷಗಳವರೆಗೆ ಮಾಡಿರುವರು. ಇವುಗಳ ಪೂರ್ಣ ವಿವರವನ್ನು ಅವರು ನಮ್ಮಲ್ಲಿ ಯಾರಿಗಾದರೂ ಹೇಳಿರುವರೆಂದು ನಮಗನಿಸುವುದಿಲ್ಲ. ಸಾಧನ ಮಾರ್ಗದಲ್ಲಿ ನಮಗೆ ಉತ್ತೇಜನ ನೀಡಲು ಆಗಾಗ ಕೆಲವು ವಿಷಯಗಳನ್ನು ಹೇಳುತ್ತಿದ್ದರು. ಇಲ್ಲವೇ ವ್ಯಕ್ತಿಯ ಪ್ರಯೋಜನಕ್ಕನುಗುಣವಾಗಿ ಕೆಲವು ಬಗೆಯ ಸಾಧನೆಗಳನ್ನು ಮಾಡಿಸಿರುವರು. ವಿವಿಧ ಮನೋಭಾವದ ಸಾಧಕರು ಬರುತ್ತಾರೆ. ಅವರಿಗೆಲ್ಲ ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ನೀಡಬೇಕಾದರೆ ತಂತ್ರ ಸಾಧನೆಗಳನ್ನು ಮಾಡಿ ಅವುಗಳ ಪ್ರತ್ಯಕ್ಷ ಅನುಭವವನ್ನು ಪಡೆದಿರಬೇಕಾಗುತ್ತದೆ. ಆದ್ದರಿಂದಲೇ ಶ್ರೀಜಗನ್ಮಾತೆಯು ಶ್ರೀರಾಮಕೃಷ್ಣರಿಂದ ಈ ಎಲ್ಲ ಸಾಧನೆಗಳನ್ನು ಮಾಡಿಸಿದಳು. ಶರಣಾಗತರಾಗಿ ತಮ್ಮಲ್ಲಿಗೆ ಬಂದ ಭಕ್ತರಿಗೆ ಅವರು ಹೇಗೆ ತರಬೇತಿಯಿತ್ತು ಸಾಧನ ಮಾರ್ಗದಲ್ಲಿ ಮುಂದುವರಿಯುವಂತೆ ಮಾಡುತ್ತಿದ್ದರು ಎಂಬುದನ್ನು ಬೇರೆ ಕಡೆ * ವಿವರಿಸಿರುವೆವು. ಅದನ್ನು ಓದಿದಾಗ ಮೇಲಿನ ಮಾತಿನ ಅರ್ಥ ಸ್ಪಷ್ಟವಾಗುತ್ತದೆ.

16. ಮೇಲೆ ಹೇಳಿದ ತಂತ್ರಸಾಧನೆಗಳಲ್ಲದೆ ಶ್ರೀರಾಮಕೃಷ್ಣರು ಆ ಸಂದರ್ಭದಲ್ಲಿ ತಾವು ಪಡೆಯುತ್ತಿದ್ದ ದರ್ಶನಗಳು ಮತ್ತು ಅನುಭವಗಳ ಬಗ್ಗೆಯೂ ಹೇಳುತ್ತಿದ್ದರು. ಅವುಗಳಲ್ಲಿ ಕೆಲವನ್ನು ಇಲ್ಲಿ ಹೇಳುತ್ತೇವೆ.

ತಂತ್ರೋಕ್ತ ಸಾಧನೆಯ ಸಮಯದಲ್ಲಿ ಅವರ ಹಿಂದಿನ ಸ್ವಭಾವದಲ್ಲಿ ಸಂಪೂರ್ಣ ಬದಲಾವಣೆ ಉಂಟಾಗಿತ್ತು. ಶ್ರೀಜಗನ್ಮಾತೆಯು ಕೆಲವೊಮ್ಮೆ ನರಿಯ ರೂಪವನ್ನು ಧರಿಸಿರುತ್ತಾಳೆ ಎಂದು ಅವರು ಕೇಳಿದ್ದರು. ಆದ್ದರಿಂದ ಅವರು ತಂತ್ರಸಾಧನೆಯ

---

* ಗುರುಭಾವ, ಪೂರ್ವಾರ್ಧ ಅಧ್ಯಾಯ 1. 2

ಸಂದರ್ಭದಲ್ಲಿ ಅವುಗಳ ಎಂಜಲನ್ನು ಪವಿತ್ರಭಾವದಿಂದ ಸ್ವೀಕರಿಸುತ್ತಿದ್ದರು. ಮನಸ್ಸಿನಲ್ಲಿ ಯಾವ ರೀತಿಯ ಅಸಹ್ಯವೂ ಉಂಟಾಗುತ್ತಿರಲಿಲ್ಲ.

ಶ್ರೀಜಗನ್ಮಾತೆಗೆ ತಮ್ಮ ದೇಹ ಮನ ಪ್ರಾಣಗಳನ್ನು ಅರ್ಪಿಸಿ ಅವರು ಆ ಸಂದರ್ಭದಲ್ಲಿ ತಮ್ಮ ಒಳ ಹೊರಗೆಲ್ಲ ಜ್ಞಾನಾಗ್ನಿಯು ವ್ಯಾಪ್ತವಾಗಿರುವುದನ್ನು ಕಾಣುತ್ತಿದ್ದರು.

ಕುಂಡಲಿನಿಯು ಜಾಗ್ರತವಾಗಿ ಅದು ಶಿರಸ್ಸಿಗೆ ಏರುವಾಗ ಮೂಲಾಧಾರದಿಂದ ಹಿಡಿದು ಸಹಸ್ರಾರದವರೆಗೆ ಎಲ್ಲ ಪದ್ಮಗಳೂ ಅರಳಿ ಊರ್ಧ್ವಮುಖವಾಗುತ್ತಿದ್ದುವು. ಇವು ಒಂದಾದ ಮೇಲೆ ಒಂದು ಅರಳಿದಂತೆಲ್ಲ ಅಪೂರ್ವ ಅನುಭವಗಳು ಅವರಿಗಾಗುತ್ತಿದ್ದುವು. ಓರ್ವ ಜ್ಯೋತಿರ್ಮಯ ದಿವ್ಯ ಪುರುಷನು ಸುಷುಮ್ನಾದ ಮಧ್ಯದಲ್ಲಿ ಬಂದು ಪದ್ಮಗಳನ್ನು ನಾಲಿಗೆಯಿಂದ ಸ್ಪರ್ಶಿಸಿ ಅವು ಅರಳುವಂತೆ ಮಾಡುತ್ತಿದ್ದುದನ್ನು ಅವರು ಕಂಡಿದ್ದರು.

ಸ್ವಾಮಿ ವಿವೇಕಾನಂದರು ಒಂದು ಸಾರಿ ಧ್ಯಾನ ಮಾಡಲು ಕುಳಿತಿದ್ದಾಗ ಅವರ ಮುಂದೆ ಬೃಹತ್ತಾದ ಜ್ಯೋತಿರ್ಮಯ ತ್ರಿಕೋಣವೊಂದು ಕಾಣಿಸಿಕೊಂಡಿತು. ಆ ತ್ರಿಕೋಣವು ಜೀವಂತವಾಗಿರುವಂತೆ ಅವರಿಗೆ ಅನಿಸಿತ್ತು. ತಮ್ಮ ಈ ಅನುಭವವನ್ನು ಅವರು ಶ್ರೀರಾಮಕೃಷ್ಣರಿಗೆ ಹೇಳಿದಾಗ ಅವರೆಂದರು : "ಒಳ್ಳೆಯದು, ನಿನಗೆ ಬ್ರಹ್ಮಯೋನಿಯ ದರ್ಶನವಾಗಿದೆ. ಬಿಲ್ವಮರದ ಕೆಳಗೆ ಸಾಧನೆ ಮಾಡುತ್ತಿರುವಾಗ ನನಗೂ ಅಂಥದೇ ದರ್ಶನವಾಗಿತ್ತು. ಪ್ರತಿಕ್ಷಣವೂ ಅದರಿಂದ ಅಸಂಖ್ಯ ಬ್ರಹ್ಮಾಂಡಗಳು ಪ್ರಸವಿಸುತ್ತಿರುವುದನ್ನು ನಾನು ಕಂಡಿದ್ದೆ."

ಈ ಬ್ರಹ್ಮಾಂಡದ ಬೇರೆ ಬೇರೆ ಧ್ವನಿಗಳೆಲ್ಲದರ ಒಟ್ಟು ಮೊತ್ತವಾದ ಸಮಷ್ಟಿ ಪ್ರಣವಧ್ವನಿಯೂ ಯಾವಾಗಲೂ ಎಲ್ಲೆಲ್ಲಿಯೂ ಕೇಳಿಬರುತ್ತಿರುವುದು. ಇದನ್ನು ಶ್ರೀರಾಮಕೃಷ್ಣರು ಪ್ರತ್ಯಕ್ಷ ಅನುಭವಿಸಿದ್ದರು. ಆ ಕಾಲದಲ್ಲಿ ಅವರು ಪಶು ಪಕ್ಷಿಗಳ ಧ್ವನಿಯನ್ನೂ ಅರ್ಥಮಾಡಿಕೊಳ್ಳುತ್ತಿದ್ದರು. ಸ್ತ್ರೀಯೋನಿಯಲ್ಲಿ ಸಾಕ್ಷಾತ್ ಜಗನ್ಮಾತೆಯೇ ಪ್ರತಿಷ್ಠಿತಳಾಗಿರುವುದನ್ನು ಅವರು ಆ ಸಂದರ್ಭದಲ್ಲಿ ಕಂಡಿದ್ದರು.

ಈ ಅವಧಿಯ ಕೊನೆಯಲ್ಲಿ ಶ್ರೀರಾಮಕೃಷ್ಣರಿಗೆ ಅಣಿಮಾದಿ ಅಷ್ಟಸಿದ್ಧಿಗಳು ಉಂಟಾಗಿದ್ದುವು. ಈ ಸಿದ್ಧಿಗಳ ಪ್ರಯೋಗವನ್ನು ಕುರಿತು ಶ್ರೀಜಗನ್ಮಾತೆಯನ್ನು ಕೇಳಿದಾಗ—ಈ ಸಿದ್ಧಿಗಳು ವೇಶ್ಯೆಯ ಮಲದಂತೆ ತುಚ್ಛ, ಎಲ್ಲ ರೀತಿಯಿಂದಲೂ ಬಿಟ್ಟುಬಿಡತಕ್ಕವುಗಳು—ಎಂದು ಅವಳು ತೋರಿಸಿಕೊಟ್ಟಳಂತೆ. ಅಂದಿನಿಂದ ಅವರಿಗೆ ಪವಾಡ ಶಬ್ದವನ್ನು ಕೇಳಿದರೆ ಅಸಹ್ಯವಾಗುತ್ತಿತಂತೆ.

17. ಇದಕ್ಕೆ ಸಂಬಂಧಿಸಿದ ಇನ್ನೊಂದು ಘಟನೆ ನೆನಪಿಗೆ ಬರುತ್ತದೆ. ಅವರು ಒಂದುದಿನ ಸ್ವಾಮಿ ವಿವೇಕಾನಂದರನ್ನು ಪಂಚವಟಿಗೆ ಕರೆದುಕೊಂಡು ಹೋಗಿ ಏಕಾಂತದಲ್ಲಿ ಹೇಳಿದರು : "ನೋಡು, ನನ್ನಲ್ಲಿ ಪ್ರಸಿದ್ಧ ಅಷ್ಟಸಿದ್ಧಿಗಳಿವೆ. ನಾನು ಅವುಗಳನ್ನು ಯಾವಾಗಲೂ ಪ್ರಯೋಗಿಸುವುದೇ ಇಲ್ಲ. ಇದನ್ನು ಬಹಳ ಹಿಂದೆಯೇ ನಿಶ್ಚಯಿಸಿಬಿಟ್ಟ

ದ್ದೇನೆ. ಮತ್ತೆ ಅವುಗಳನ್ನು ಪ್ರಯೋಗಿಸುವ ಆವಶ್ಯಕತೆಯೂ ನನಗೆ ಕಂಡುಬರುವುದಿಲ್ಲ. ನೀನು ಧರ್ಮಪ್ರಚಾರ ಮುಂತಾದ ಬಹಳ ಕಾರ್ಯ ಮಾಡಬೇಕು. ನಿನಗೇ ಅವನ್ನೆಲ್ಲ ಒಪ್ಪಿಸಿಬಿಡುತ್ತೇನೆ, ಸ್ವೀಕರಿಸಿಸು.'' ಸ್ವಾಮೀಜೀ ಪ್ರಶ್ನಿಸಿದರು : ''ಮಹಾಶಯರೇ, ಇವುಗಳು ಭಗವಂತನನ್ನು ಪಡೆಯಲು ನನಗೆ ಸಹಾಯಕವಾಗುವುವೇ?'' ಶ್ರೀರಾಮ ಕೃಷ್ಣರು ಇಲ್ಲವೆಂದಾಗ ತಮಗವು ಬೇಡವೆಂದರು ಸ್ವಾಮೀಜೀ. ಇದರಿಂದ ಶ್ರೀರಾಮ ಕೃಷ್ಣರಿಗೆ ತುಂಬ ಮೆಚ್ಚಿಕೆಯಾಯಿತು.

18. ಶ್ರೀ ಜಗನ್ಮಾತೆಯ ಮೋಹ–ಮಾಯೆಯ ದರ್ಶನ ಪಡೆಯಬೇಕೆನಿಸಿತು ಒಮ್ಮೆ ಶ್ರೀರಾಮಕೃಷ್ಣರಿಗೆ. ಒಂದುದಿನ ಸುಂದರ ಮಹಿಳೆಯೊಬ್ಬಳು ಗಂಗಾನದಿಯಿಂದ ಮೇಲೆದ್ದು ಬಂದು ನಿಧಾನವಾಗಿ ಹೆಜ್ಜೆಹಾಕುತ್ತ ಪಂಚವಟಿಗೆ ಬಂದಳು. ನೋಡು ತ್ತಿದ್ದಂತೆಯೇ ಅವಳು ಗರ್ಭವತಿಯಾದಳು. ಅನಂತರ ಒಂದು ಸುಂದರ ಶಿಶುವನ್ನು ಹೆತ್ತು ಅದನ್ನು ಅತ್ಯಂತ ಮಮತೆಯಿಂದ ಮುದ್ದಿಸತೊಡಗಿದಳು. ಮರುಕ್ಷಣವೇ ಆ ಮಹಿಳೆಯು ಕರಾಳವದನಳಾಗಿ ಆ ಶಿಶುವನ್ನು ತಿಂದು ಮತ್ತೆ ಗಂಗೆಯನ್ನು ಪ್ರವೇಶಿ ಸಿದಳು.

19. ಈ ಸಂದರ್ಭದಲ್ಲಿ ಶ್ರೀರಾಮಕೃಷ್ಣರು ಎಷ್ಟು ದೇವಿ ಮೂರ್ತಿಗಳನ್ನು ಕಂಡಿದ್ದರೊ ಅದಕ್ಕೆ ಮಿತಿಯಿಲ್ಲ. ಕೆಲವು ದ್ವಿಭುಜ, ಕೆಲವು ದಶಭುಜ—ಹೀಗೆ ಅನೇಕ ಬಗೆಯ ರೂಪಗಳನ್ನು ಕಂಡಿದ್ದರು. ಅವರಲ್ಲಿ ಕೆಲವರು ಶ್ರೀರಾಮಕೃಷ್ಣರಿಗೆ ಅನೇಕ ರೀತಿಯಲ್ಲಿ ಉಪದೇಶ ನೀಡುತ್ತಿದ್ದರು. ಅವರೆಲ್ಲರೂ ಅಪೂರ್ವ ಸೌಂದರ್ಯದಿಂದ ಕೂಡಿದವರಾದರೂ ಶ್ರೀರಾಜರಾಜೇಶ್ವರೀ ಅಥವಾ ಷೋಡಶೀ ಮೂರ್ತಿಯ ಸೌಂದರ್ಯಕ್ಕೆ ಇವರಾರದನ್ನೂ ಹೋಲಿಸುವಂತಿರಲಿಲ್ಲವಂತೆ. ಅವರು ಹೇಳುತ್ತಿದ್ದರು: ''ಷೋಡಶೀ ಮೂರ್ತಿಯ ಅಂಗದಿಂದ ರೂಪ ಸೌಂದರ್ಯವು ಕರಗಿ, ಸುತ್ತಲೂ ಹರಡಿ ನಾಲ್ಕೂ ದಿಕ್ಕನ್ನು ಬೆಳಗುತ್ತಿದ್ದದನ್ನು ಕಂಡೆ.'' ಇಷ್ಟೇ ಅಲ್ಲದೆ ಭೈರವನೇ ಮುಂತಾದ ಎಷ್ಟೋ ದೇವತೆಗಳನ್ನು ಅವರು ಕಂಡಿದ್ದರು. ತಂತ್ರ ಸಾಧನೆಯ ಸಮಯದಿಂದ ಹಿಡಿದು ಶ್ರೀರಾಮಕೃಷ್ಣರ ಜೀವನದಲ್ಲಿ ಪ್ರತಿನಿತ್ಯ ಏನೇನು ಅಲೌಕಿಕ ಅನುಭವಗಳಾಗುತ್ತಿದ್ದವೊ ಅವೆಲ್ಲವನ್ನೂ ಸರಿಯಾಗಿ ವಿವರಿಸುವುದು ಮನುಷ್ಯ ಶಕ್ತಿಗೆ ಮೀರಿದುದೆಂದು ನಮ್ಮ ಅಭಿಪ್ರಾಯ.

20. ತಂತ್ರ ಸಾಧನೆಯನ್ನು ಪ್ರಾರಂಭಿಸಿದಂದಿನಿಂದ ತಮ್ಮ ಸುಷುಮ್ನಾ ನಾಡಿಯು ಪೂರ್ಣ ತೆರೆಯಿತೆಂದೂ ಮತ್ತು ತಮ್ಮ ಸ್ವಭಾವವು ಬಾಲಕನದಂತಾಯಿ ತೆಂದೂ ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಈ ಸಮಯದ ಕೊನೆಯ ಭಾಗದಲ್ಲಿ ಉಟ್ಟ ಬಟ್ಟೆಯನ್ನೂ ಯಜ್ಞೋಪವೀತವನ್ನೂ ಪ್ರಯತ್ನಿಸಿದರೂ ಮೈಮೇಲೆ ಇಟ್ಟು ಕೊಂಡಿರಲು ಆಗುತ್ತಿರಲಿಲ್ಲವಂತೆ. ಅವು ಯಾವಾಗ ಜಾರಿ ಹೋಗುತ್ತಿದ್ದವೊ ಅವರಿಗೆ ತಿಳಿಯುತ್ತಿರಲಿಲ್ಲ. ಶ್ರೀಜಗನ್ಮಾತೆಯಲ್ಲಿಯೇ ಮನಸ್ಸು ಸಂಪೂರ್ಣ ಲೀನವಾಗಿ ಶರೀರ ಪ್ರಜ್ಞೆಯೇ ಇಲ್ಲದಿದ್ದುದರಿಂದ ಅವರಿಗೆ ಹೀಗಾಗುತ್ತಿತ್ತೆಂದು ಮತ್ತೆ ಹೇಳಬೇಕಾಗಿಲ್ಲ.

ಬೇಕೆಂತಲೇ ಅವರು ಆ ರೀತಿ ಮಾಡುತ್ತಿರಲಿಲ್ಲ ಅಥವಾ ಪರಮಹಂಸರಂತೆ ನಗ್ನರಾಗಿರ ಬೇಕೆಂದು ಅಭ್ಯಾಸವನ್ನೂ ಮಾಡುತ್ತಿರಲಿಲ್ಲ. ಈ ಮಾತನ್ನು ನಾವು ಅವರ ಬಾಯಿಂ ದಲೇ ಕೇಳಿರುವೆವು. ಈ ಎಲ್ಲ ಸಾಧನೆಯ ಕೊನೆಯಲ್ಲಿ ಅವರಿಗೆ ಎಲ್ಲ ವಸ್ತು ಗಳಲ್ಲಿಯೂ ಅದ್ವೈತಬುದ್ಧಿ ಉಂಟಾಗಿತ್ತು. ಅದು ಎಷ್ಟು ಬಲವಾಗಿತ್ತೆಂದರೆ ಅವರು ಬಾಲ್ಯದಿಂದಲೂ ಯಾವುದನ್ನು ತುಚ್ಛವೆಂದೂ ಕೀಳೆಂದೂ ಪರಿಗಣಿಸುತ್ತಿದ್ದರೊ ಅವೆಲ್ಲವೂ ಈಗ ಪವಿತ್ರ ವಸ್ತುಗಳಿಗೆ ಸಮಾನವಾಗಿ ತೋರತೊಡಗಿದವು. ಅವರು ಹೇಳುತ್ತಿದ್ದರು. ''ತುಲಸೀಪತ್ರೆ ಮತ್ತು ನುಗ್ಗೆಸೊಪ್ಪು ಎರಡೂ ಸಮಾನವಾಗಿ ಪವಿತ್ರ ವೆನಿಸುತ್ತಿತ್ತು.''

21. ಆಗ ಅವರ ಅವಯವಗಳ ಕಾಂತಿ ಎಷ್ಟು ಅಧಿಕವಾಯಿತೆಂದರೆ ಯಾವಾ ಗಲೂ ಜನರ ದೃಷ್ಟಿ ಅವರ ಮೇಲೆಯೆ! ನಿರಭಿಮಾನಿಗಳಾದ ಅವರಿಗೆ ಇದರಿಂದ ಮುಜಗರವುಂಟಾಗಿ ಶ್ರೀ ಜಗನ್ಮಾತೆಯನ್ನು ಪ್ರಾರ್ಥಿಸಿದರು : ''ತಾಯಿ, ಈ ಬಾಹ್ಯ ರೂಪದಿಂದ ನನಗಾವ ಪ್ರಯೋಜನವೂ ಇಲ್ಲ. ಇದನ್ನು ಹಿಂತೆಗೆದುಕೊಂಡು ನನಗೆ ಆಂತರಿಕ ಆಧ್ಯಾತ್ಮಿಕ ಸೌಂದರ್ಯವನ್ನು ಕೊಡು.' ಮುಂದೆ ಅವರ ಪ್ರಾರ್ಥನೆ ಈಡೇರಿತು.

22. ತಂತ್ರಸಾಧನೆಯಲ್ಲಿ ಹೇಗೆ ಬ್ರಾಹ್ಮಣಿಯು ಶ್ರೀರಾಮಕೃಷ್ಣರಿಗೆ ಸಹಾಯ ಮಾಡಿದಳೊ ಹಾಗೆಯೆ ಅವಳ ಆಧ್ಯಾತ್ಮಿಕ ಜೀವನದ ಪೂರ್ಣತೆಗೆ ಅವರು ಮುಂದೆ ಸಹಾಯಮಾಡಿದರು. ಅವರು ಆ ರೀತಿ ಮಾಡದಿದ್ದರೆ ಬ್ರಾಹ್ಮಣಿಯು ದಿವ್ಯಭಾವದಲ್ಲಿ ಪ್ರತಿಷ್ಠಿತಳಾಗಲು ಆಗುತ್ತಿರಲಿಲ್ಲ ಎಂಬುದನ್ನು ಸೂಕ್ಷ್ಮವಾಗಿ ಬೇರೆಕಡೆ ವಿವರಿ ಸಿರುವೆವು.* ಬ್ರಾಹ್ಮಣಿಯ ಹೆಸರು ಯೋಗೇಶ್ವರೀ ಎಂದು. ಶ್ರೀರಾಮಕೃಷ್ಣರು ಆಕೆಯನ್ನು ಯೋಗಮಾಯೆಯ ಅಂಶ ಎಂದು ಹೇಳುತ್ತಿದ್ದರು.

ತಂತ್ರಸಾಧನೆಯ ಪ್ರಭಾವದಿಂದ ದಿವ್ಯಶಕ್ತಿಯನ್ನು ಪಡೆದ ಶ್ರೀರಾಮಕೃಷ್ಣರಿಗೆ ಇನ್ನೊಂದು ವಿಷಯ ತಿಳಿದುಬಂತು. ಮುಂದೆ ಅನೇಕ ವ್ಯಕ್ತಿಗಳು ಧರ್ಮಲಾಭಕ್ಕಾಗಿ ತಮ್ಮೆಡೆಗೆ ಬರುತ್ತಾರೆ ಎಂಬುದನ್ನು ಶ್ರೀ ಜಗನ್ಮಾತೆಯ ಕೃಪೆಯಿಂದ ಅರಿತುಕೊಂಡರು. ಮಥುರ ಮತ್ತು ಹೃದಯ ಇವರಿಗೆ ಈ ವಿಷಯವನ್ನು ಹೇಳಿದ್ದರು. ಮಥುರನು ಅದಕ್ಕೆ ಹೇಳಿದ್ದನು, ''ಒಳ್ಳೆಯದೇ ಆಯಿತು. ಎಲ್ಲರೂ ಸೇರಿ ನಿಮ್ಮನ್ನು ಕೇಂದ್ರ ವಾಗಿಟ್ಟುಕೊಂಡು ಆನಂದಪಡೋಣ.''

---

* ಗುರುಭಾವ-ಪೂರ್ವಾರ್ಧ.

ಹನ್ನೆರಡನೆಯ ಅಧ್ಯಾಯ

ವಾತ್ಸಲ್ಯಭಾವ ಸಾಧನೆ

1. ಶ್ರೀರಾಮಕೃಷ್ಣರ ಕೃಪೆಯಿಂದ ಮಥುರನಿಗೆ ಅನುಭವ 2. ಮಥುರನ ಅನ್ನಮೇರು ಉತ್ಸವ 3. ಶ್ರೀರಾಮಕೃಷ್ಣರು ಪದ್ಮಲೋಚನನನ್ನು ಸಂಧಿಸುತ್ತಾರೆ. 4. ವೈಷ್ಣವ ಸಾಧನೆ ಮಾಡುವುದಕ್ಕೆ ಕಾರಣ 5. ಶ್ರೀರಾಮಕೃಷ್ಣರಲ್ಲಿ ಸ್ತ್ರೀ ಭಾವವು ಉದಯಿಸಿತು 6. ಅವರ ಮಾನಸಿಕ ರಚನೆ ಎಂತಹುದು 7. ಅವರ ಮನಸ್ಸಿನಲ್ಲಿ ಸಂಸ್ಕಾರ ಬಂಧನವಿರಲಿಲ್ಲ 8. ಸಾಧನೆಯನ್ನು ಪ್ರಾರಂಭಿಸುವುದಕ್ಕೆ ಮುಂಚೆ ಅವರ ಮನಸ್ಸು ಹೇಗೆ ಗುಣಸಂಪನ್ನವಾಗಿತ್ತು 9. ಶ್ರೀರಾಮಕೃಷ್ಣರ ಮನಸ್ಸು ಅಸಾಧಾರಣವಾದುದು 10. ಶ್ರೀರಾಮಕೃಷ್ಣರ ಅಪ್ಪಣೆಯಂತೆ ಮಥುರನ ಸಾಧುಸೇವೆ 11. ಜಟಾಧಾರಿಯ ಆಗಮನ 12. ಜಟಾಧಾರಿಯೊಡನೆ ಶ್ರೀರಾಮ ಕೃಷ್ಣರ ಸಂಬಂಧ 13. ವಾತ್ಸಲ್ಯಭಾವ ಸಾಧನೆಯಲ್ಲಿ ತೊಡಗಿದುದು 14. ಯಾವುದೇ ಭಾವವುಂಟಾದರೂ ಅದರ ಅಂತಿಮ ಮಿತಿಯನ್ನು ಮುಟ್ಟುವವರೆಗೂ ಅವರು ಪ್ರಯತ್ನಿಸುತ್ತಿದ್ದರು 15. ನಿರ್ಭರಶೀಲ ಸಾಧಕರಿಗೆ ಆಸೆಗಳನ್ನು ನಿಗ್ರಹಿಸುವುದು ಆವಶ್ಯಕವಲ್ಲ 16. ಇಂತಹ ಸಾಧಕರು ಮೃತ್ಯುವಿನಿಂದ ವಿಚಲಿತರಾಗುವುದಿಲ್ಲ 17. ಸ್ವಾರ್ಥಪರ ಆಸೆ ಅವರಲ್ಲಿ ಇರುವುದೇ ಇಲ್ಲ 18. ಅವರ ಎಲ್ಲ ಮಾನಸಿಕ ಭಾವನೆಗಳೂ ಯಥಾರ್ಥವಾಗಿರುತ್ತವೆ 19. ಶ್ರೀರಾಮಕೃಷ್ಣರ ವಾತ್ಸಲ್ಯಭಾವ ಸಾಧನೆ ಮತ್ತು ಸಿದ್ಧಿ 20. ವಾತ್ಸಲ್ಯ ಸಾಧನೆಯಲ್ಲಿ ಭೈರವೀ ಬ್ರಾಹ್ಮಣಿಯ ಸಹಾಯ.

1. ೧೮೬೧ರ ಕೊನೆಯ ಭಾಗದಲ್ಲಿ ರಾಣಿ ರಾಸಮಣಿಯು ಕಾಲವಾದನಂತರ ಶ್ರೀಯೋಗೇಶ್ವರಿಯು ದಕ್ಷಿಣೇಶ್ವರಕ್ಕೆ ಬಂದಳು. ಅಂದಿನಿಂದ ೧೮೬೩ರವರೆಗೆ ಶ್ರೀರಾಮಕೃಷ್ಣರು ವಿಶೇಷವಾಗಿ ತಂತ್ರಸಾಧನೆಗಳನ್ನು ಮಾಡಿದರು. ಮಥುರಬಾಬುವು ಆ ಸಂದರ್ಭದಲ್ಲಿ ಶ್ರೀರಾಮಕೃಷ್ಣರಿಗೆ ಅನೇಕ ರೀತಿಯಲ್ಲಿ ಸೇವೆ ಮಾಡುವ ಅವಕಾಶ ಪಡೆದನು. ಇದಕ್ಕೆ ಮುಂಚೆಯೇ ಶ್ರೀರಾಮಕೃಷ್ಣರ ಅಪೂರ್ವ ಭಗವದ್ಭಕ್ತಿ ಆತ್ಮ ಸಂಯಮ, ತ್ಯಾಗ ವೈರಾಗ್ಯ ಇವುಗಳ ವಿಷಯದಲ್ಲಿ ಅವನಿಗೆ ದೃಢ ವಿಶ್ವಾಸವುಂಟಾಗಿತ್ತು. ಆದರೆ ಆಧ್ಯಾತ್ಮಿಕತೆಯ ಜತೆಯಲ್ಲೇ ಸ್ವಲ್ಪ ಬುದ್ಧಿವಿಕಾರವೂ ಇರಬಹುದೇನೊ ಎಂಬ ಸಂದೇಹ ಅವನಿಗೆ ಆಗಾಗ ಉಂಟಾಗುತ್ತಿತ್ತು. ತಂತ್ರ ಸಾಧನೆಯ ಸಮಯದಲ್ಲಿ ಈ ಸಂಶಯ ಅವನಿಂದ ಸಂಪೂರ್ಣ ದೂರವಾಯಿತು. ಅಷ್ಟೇ ಅಲ್ಲ ತನ್ನ ಇಷ್ಟ ದೇವತೆಯಾದ ಶ್ರೀದೇವಿಯೇ ಶ್ರೀರಾಮಕೃಷ್ಣರ ದೇಹವನ್ನು ಆಶ್ರಯಿಸಿ ತನ್ನ

ಸೇವೆಯನ್ನು ಸ್ವೀಕರಿಸುತ್ತಿರುವಳು ಎಂಬ ದೃಢ ವಿಶ್ವಾಸವೂ ಅವನಲ್ಲಿ ಮೂಡಿತು. ಇದಕ್ಕೆ ಮುಖ್ಯ ಕಾರಣ ಅವರಲ್ಲಿ ಆಗಾಗ ಅಲೌಕಿಕ ಶಕ್ತಿಯನ್ನು ಅವನು ಕಾಣುತ್ತಿದ್ದುದು. ಈಗ ಜಗನ್ಮಾತೆಯ ಮೇಲಿನ ಅವನ ಭಕ್ತಿಯೂ ಅಧಿಕವಾಯಿತು. ತನ್ನನ್ನೂ ತನ್ನ ಸಂಪತ್ತನ್ನೂ ಸದಾ ಅವಳು ರಕ್ಷಿಸುತ್ತಿರುವಳು, ತನ್ನ ಎಲ್ಲ ಯಶಸ್ಸಿಗೆ ಗೌರವ ಘನತೆಗೆ ಅವಳೇ ಕಾರಣಳು ಎಂದು ಅವನು ನಂಬತೊಡಗಿದ. ಆಗ ಅವನು ಯಾವುದೇ ಕಾರ್ಯವನ್ನು ಸ್ವೀಕರಿಸಿದರೂ ಅದರಲ್ಲಿ ಯಶಸ್ವಿಯಾಗುತ್ತಿದ್ದ. ಇದೆಲ್ಲ ಶ್ರೀರಾಮಕೃಷ್ಣರ ಕೃಪೆಯಿಂದ ಎಂದು ಅವನಿಗೆ ಅನಿಸಿತು. ಆದ್ದರಿಂದ ಅವನು ಸ್ವಾಭಾವಿಕವಾಗಿಯೇ ಅವರ ಸಾಧನೆಗೆ ಏನೇನು ವಸ್ತುಗಳು ಆವಶ್ಯಕವೊ ಅವನ್ನೆಲ್ಲ ಒದಗಿಸಿದ. ಅವರ ನಿರ್ದೇಶದಂತೆ ಅನೇಕ ದೇವ ಸೇವೆಗಳನ್ನೂ ಮತ್ತು ಇತರ ಸತ್ಕರ್ಮಗಳನ್ನು ಮಾಡಿದ.

ಶ್ರೀರಾಮಕೃಷ್ಣರಲ್ಲಿ ಆಧ್ಯಾತ್ಮಿಕ ಶಕ್ತಿ ಹೆಚ್ಚು ಹೆಚ್ಚು ಪ್ರಕಾಶವಾದಂತೆ ಅವರನ್ನು ಆಶ್ರಯಿಸಿದ್ದ ಮಥುರನಾಥನ ಉತ್ಸಾಹವೂ ಸಾಹಸವೂ ಬಲವೂ ವೃದ್ಧಿಯಾಗತೊಡಗಿದುವು. ಭಗವಂತನಲ್ಲಿ ಪೂರ್ಣವಿಶ್ವಾಸವಿರಿಸಿ ಅವನ ಆಶ್ರಯವನ್ನು ಪಡೆದ ಭಕ್ತನ ಹೃದಯದಲ್ಲಿ ಹೇಗೆ ಅಪೂರ್ವ ಉತ್ಸಾಹ ಮತ್ತು ಶಕ್ತಿಯ ಅನುಭವವಾಗುವುದೋ ಅದೇ ರೀತಿಯ ಅನುಭವವಾಗಿತ್ತು ಮಥುರನಿಗೆ. ಆದರೆ ಮಥುರನು ರಜೋಗುಣಿಯಾದ ಸಂಸಾರಿ. ಅವನ ಭಕ್ತಿ ಶ್ರೀರಾಮಕೃಷ್ಣರ ಸೇವೆ ಮತ್ತು ಇತರ ಪುಣ್ಯ ಕಾರ್ಯಗಳಿಗೆ ಮಾತ್ರ ಸೀಮಿತವಾಗಿತ್ತು. ಆಧ್ಯಾತ್ಮಿಕ ರಾಜ್ಯವನ್ನು ಪ್ರವೇಶಿಸಿ ಅದರ ಗೂಢ ರಹಸ್ಯಗಳನ್ನು ಅರಿಯುವುದರಲ್ಲಿ ಅವನು ಪ್ರವೃತ್ತನಾಗಲಿಲ್ಲ. ಆದರೂ ತನ್ನ ಸರ್ವಸ್ವವೂ ಶ್ರೀರಾಮಕೃಷ್ಣರೇ ಎಂಬ ಭರವಸೆಯಿತ್ತು. ತನ್ನ ಎಲ್ಲ ಅಧಿಕಾರ ಸಂಪತ್ತು ಮರ್ಯಾದೆ ಇವೆಲ್ಲಕ್ಕೂ ಅವರೇ ಮೂಲಕಾರಣರು ಎಂದು ಅವನು ನಂಬಿದ್ದ.

2. ಶ್ರೀರಾಮಕೃಷ್ಣರ ಕೃಪೆಯಿಂದ ತನ್ನ ಪ್ರಾಪಂಚಿಕ ಜೀವನ ಸದೃಢವಾಗಿದೆ ಎಂಬ ಭರವಸೆ ಅವನಿಗೆ ಇತ್ತೆಂಬುದನ್ನು ಅವನು ಆ ಸಮಯದಲ್ಲಿ ಕೈಕೊಂಡ ಕಾರ್ಯಕ್ರಮಗಳು ಸಾಕ್ಷಿಯಾಗಿವೆ. ೧೮೬೪ರಲ್ಲಿ ಮಥುರನು ಬಹಳ ಹಣವನ್ನು ವ್ಯಯ ಮಾಡಿ 'ಅನ್ನಮೇರು' (ಅನ್ನಪರ್ವತ ದಾನ) ಎಂಬ ಧಾರ್ಮಿಕ ಕಾರ್ಯವನ್ನು ಆಚರಿಸಿದ್ದನು. ಈ ವಿಷಯ 'ರಾಣಿ ರಾಸಮಣಿಯ ಜೀವನ ವೃತ್ತಾಂತ' ಎಂಬ ಪುಸ್ತಕದಲ್ಲಿದೆ. ಈ ಸಂದರ್ಭದಲ್ಲಿ ಅವನು ಬ್ರಾಹ್ಮಣ ಪಂಡಿತರಿಗೆ ಚಿನ್ನ ಹಣ ಮಾತ್ರವಲ್ಲದೆ ಒಂದು ಸಾವಿರ ಮಣ ಅಕ್ಕಿ ಮತ್ತು ಒಂದು ಸಾವಿರ ಮಣ ಎಳ್ಳು ದಾನ ಮಾಡಿದ್ದನೆಂದು ಹೃದಯನು ಹೇಳುತ್ತಾನೆ. ಸಹಚಾರಿ ಎಂಬ ಪ್ರಸಿದ್ಧ ಗಾಯಕಿಯಿಂದ ಹಾಡುಗಾರಿಕೆಯನ್ನೂ ರಾಜನಾರಾಯಣನಿಂದ ಚಂಡೀಪಾಠವನ್ನೂ ಏರ್ಪಡಿಸಿದ್ದನಂತೆ. ಆಗ ದಕ್ಷಿಣೇಶ್ವರದಲ್ಲಿ ಕೆಲವು ದಿನಗಳ ಮಟ್ಟಿಗೆ ದೊಡ್ಡ ಉತ್ಸವವೇ ನಡೆಯಿತು. ಶ್ರೀರಾಮಕೃಷ್ಣರು ಗಾಯಕರ ಭಕ್ತಿಗೀತೆಗಳನ್ನು ಕೇಳಿ ಆಗಾಗ ಭಾವ ಸಮಾಧಿಗೆ ಹೋಗುತ್ತಿದ್ದರು. ಇದರಿಂದ ಶ್ರೀರಾಮಕೃಷ್ಣರು ಸಂತೃಪ್ತರಾದರೆಂದು

ಭಾವಿಸಿ ಮಥುರನು ಗಾಯಕರಿಗೆ ಬೆಲೆಬಾಳುವ ಶಾಲು, ರೇಶ್ಮೆ ವಸ್ತ್ರ ಬಹಳಷ್ಟು ಹಣ ಇವನ್ನೆಲ್ಲ ಕಾಣಿಕೆಯಾಗಿ ಕೊಟ್ಟನು.

3. ಈ ಅನ್ನಸತ್ರಕ್ಕೆ ಸ್ವಲ್ಪ ಮುಂಚೆ ಶ್ರೀರಾಮಕೃಷ್ಣರು ವರ್ಧಮಾನ ರಾಜನ ಸಭಾ ಪಂಡಿತನಾದ ಪದ್ಮಲೋಚನನನ್ನು ನೋಡಲು ಹೋಗಿದ್ದರು. ಅವನು ಮಹಾ ಪಂಡಿತನೆಂದೂ ನಿರಭಿಮಾನಿಯೆಂದೂ ಅವರು ಕೇಳಿದ್ದರು. ಅನ್ನಮೇರು ಕಾರ್ಯಕ್ರಮಕ್ಕೆ ಅವನೂ ಬಂದು ತನ್ನ ಆತಿಥ್ಯವನ್ನು ಸ್ವೀಕರಿಸಬೇಕೆಂಬುದು ಮಥುರನ ಆಸೆಯಾಗಿತ್ತು. ಅವನಿಗೆ ಶ್ರೀರಾಮಕೃಷ್ಣರ ಮೇಲೆ ಅಪಾರ ಭಕ್ತಿಯಿರುವುದನ್ನು ತಿಳಿದಿದ್ದ ಮಥುರನು ಆ ಪಂಡಿತನಿಗೂ ಆಮಂತ್ರಣ ನೀಡಲು ಹೃದಯರಾಮನನ್ನು ಕಳಿಸಿದ್ದನು. ಆದರೆ ಹಲವು ಕಾರಣಗಳಿಂದಾಗಿ ಪದ್ಮಲೋಚನನು ಆಮಂತ್ರಣವನ್ನು ಸ್ವೀಕರಿಸಲಿಲ್ಲ.

4. ತಾಂತ್ರಿಕ ಸಾಧನೆಗಳೆಲ್ಲ ಮುಗಿದ ಮೇಲೆ ಶ್ರೀರಾಮಕೃಷ್ಣರು ವೈಷ್ಣವ ಸಾಧನೆಗಳ ಕಡೆ ಆಕರ್ಷಿತರಾದರು. ಇದಕ್ಕೆ ಕೆಲವು ಸ್ವಾಭಾವಿಕ ಕಾರಣಗಳಿವೆ ಎನ್ನ ಬಹುದು. ಮೊದಲನೆಯದಾಗಿ ಬ್ರಾಹ್ಮಣಿಯು ವೈಷ್ಣವ ದರ್ಶನದ ಪಂಚಭಾವ ಸಾಧನೆಯಲ್ಲಿ ಪರಿಣಿತಳಾಗಿದ್ದಳು ಮತ್ತು ಅವುಗಳಲ್ಲಿ ಯಾವುದಾದರೊಂದು ಭಾವ ದಲ್ಲಿ ತನ್ಮಯಳಾಗಿ ಬಹಳ ಕಾಲ ಇರಬಲ್ಲವಳಾಗಿದ್ದಳು. ಯಶೋದೆಯ ಭಾವ ವನ್ನು ಆಶ್ರಯಿಸಿ ಶ್ರೀರಾಮಕೃಷ್ಣರನ್ನು ಬಾಲಗೋಪಾಲನೆಂಬ ಭಾವನೆಯಿಂದ ಅವರಿಗೆ ಉಣಿಸಿದ ವಿಷಯವನ್ನು ಮೊದಲೇ ನಾವು ಪ್ರಸ್ತಾಪಿಸಿರುವೆವು. ಆದ್ದರಿಂದ ಅವಳು ವೈಷ್ಣವ ಸಾಧನೆಯನ್ನು ಮಾಡಲು ಶ್ರೀರಾಮಕೃಷ್ಣರನ್ನು ಪ್ರೇರೇಪಿಸಿದುದೂ ಸ್ವಾಭಾವಿಕವೇ ಆಗಿದೆ. ಎರಡನೆಯದಾಗಿ ಶ್ರೀರಾಮಕೃಷ್ಣರು ವೈಷ್ಣವ ಕುಲದಲ್ಲಿಯೇ ಜನಿಸಿದವರು. ಆದ್ದರಿಂದ ಅದರ ಕಡೆ ಆಕರ್ಷಣೆ ಇದ್ದೇ ಇರುತ್ತದೆ. ಕಾಮಾರಪುಕುರದ ಕಡೆ ಈ ಎಲ್ಲ ಸಾಧನೆಗಳು ಪ್ರಚಲಿತವಿದ್ದುದರಿಂದ ಶ್ರೀರಾಮಕೃಷ್ಣರು ಬಾಲ್ಯದಿಂದಲೇ ಅವುಗಳಲ್ಲಿ ಶ್ರದ್ಧೆಯುಳ್ಳವರಾಗಿದ್ದರು. ಎಲ್ಲಕ್ಕಿಂತ ಮುಖ್ಯ ಕಾರಣ ಶ್ರೀರಾಮ ಕೃಷ್ಣರ ವ್ಯಕ್ತಿತ್ವದಲ್ಲಿ ಪುರುಷ ಮತ್ತು ಸ್ತ್ರೀ ಸ್ವಭಾವಗಳೆರಡೂ ಅತ್ಯಂತ ಸುಂದರವಾಗಿ ಮಿಳಿತಗೊಂಡಿದ್ದವು. ಇವುಗಳಲ್ಲಿ ಒಂದರ ಪ್ರಭಾವದಿಂದ ಅವರು ಪುರುಷಸಿಂಹರಂತೆ ನಿರ್ಭೀತರಾಗಿರುತ್ತಿದ್ದರು, ಯಾವುದೇ ವಿಷಯದಲ್ಲಾದರೂ ಅದರ ತಳಮುಟ್ಟುವವರೆಗೂ ಅವರು ತೃಪ್ತರಾಗುತ್ತಿರಲಿಲ್ಲ. ಇನ್ನೊಂದರ ಪ್ರಭಾವದಿಂದ ಅವರು ಅತ್ಯಂತ ಕೋಮಲ ಪ್ರಕೃತಿಯವರಾಗಿದ್ದರು, ಜಗತ್ತಿನ ಯಾವುದೇ ವ್ಯಕ್ತಿಯನ್ನಾಗಲಿ, ವಸ್ತು ವನ್ನಾಗಲಿ ಅವರು ಹೃದಯದಿಂದ ನೋಡುತ್ತಿದ್ದರು ಮತ್ತು ಅಳೆಯುತ್ತಿದ್ದರು. ಇದರ ದೆಸೆಯಿಂದ ಅವರು ಕೆಲವು ವಿಷಯಗಳಲ್ಲಿ ತೀವ್ರ ಅನುರಾಗವನ್ನೂ ಮತ್ತು ಇನ್ನು ಕೆಲವು ವಿಷಯಗಳಲ್ಲಿ ತೀವ್ರ ವಿರಾಗವನ್ನೂ ವ್ಯಕ್ತಪಡಿಸುತ್ತಿದ್ದರು. ಭಾವವಶಕ್ಕೆ ಒಳ ಗಾಗಿ ಎಷ್ಟೇ ಕಷ್ಟವನ್ನೂ ಸಂತೋಷದಿಂದ ಸಹಿಸುತ್ತಿದ್ದರೇ ಹೊರತು ಜನಸಾಮಾನ್ಯ ರಂತೆ ಭಾವವಿಹೀನರಾಗಿ ಯಾವುದೇ ಕಾರ್ಯವನ್ನೂ ಅವರು ನೆರವೇರಿಸುತ್ತಿರಲಿಲ್ಲ.

5. ಸಾಧನ ಕಾಲದ ಪ್ರಥಮ ನಾಲ್ಕು ವರ್ಷಗಳ ಅವಧಿಯಲ್ಲಿ ಶ್ರೀರಾಮ ಕೃಷ್ಣರು ವೈಷ್ಣವ ಶಾಸ್ತ್ರದ ಶಾಂತ, ದಾಸ್ಯ ಮತ್ತು ಸಖ್ಯ ಭಾವದ ಸಾಧನೆಗಳನ್ನು ಸ್ವಯಂ ಪ್ರೇರಿತರಾಗಿಯೇ ಮಾಡಿದ್ದರು. ಸುದಾಮನೇ ಮೊದಲಾದ ಶ್ರೀಕೃಷ್ಣನ ಬೃಂದಾವನ ಸ್ನೇಹಿತರ ಭಾವವನ್ನು ತಮ್ಮ ಮೇಲೆ ಆರೋಪಿಸಿಕೊಂಡು ಸಖ್ಯಭಾವದ ಸಾಧನೆಯನ್ನು ಮಾಡಿದ್ದರು. ಪ್ರಸಿದ್ಧ ರಾಮಭಕ್ತನಾದ ಮಹಾವೀರನನ್ನು ಆದರ್ಶ ವಾಗಿ ಸ್ವೀಕರಿಸಿ ದಾಸ್ಯಭಕ್ತಿಯನ್ನು ಅಭ್ಯಾಸ ಮಾಡಿದ್ದರು. ಈ ವಿಷಯವನ್ನು ಮೊದಲೇ ಹೇಳಿಯಾಗಿದೆ. ಆದ್ದರಿಂದ ಈಗ ವಾತ್ಸಲ್ಯ ಮತ್ತು ಮಧುರಭಾವದ ಸಾಧನೆಗಳನ್ನು ಕುರಿತು ಹೇಳುತ್ತೇವೆ. ಈ ಕಾಲದಲ್ಲಿ ಶ್ರೀರಾಮಕೃಷ್ಣರು ತಮ್ಮನ್ನು ಶ್ರೀಜಗನ್ಮಾತೆಯ ಸಖಿಯೆಂದು ಭಾವಿಸುತ್ತ ಅವಳಿಗೆ ಚಾಮರ ಬೀಸುತ್ತಿದ್ದರು. ದುರ್ಗಾ ಪೂಜೆಯ ಸಮಯದಲ್ಲಿ ಮಥುರನಾಥನ ಕಲಕತ್ತೆಯ ಮನೆಗೆ ಹೋಗಿ ಸ್ತ್ರೀಯುಡಿಗೆ ತೊಟ್ಟು ಅಲ್ಲಿಯ ಸ್ತ್ರೀಯರೊಡನೆ ಪೂಜೆಯಲ್ಲಿ ಭಾಗವಹಿಸುತ್ತಿದ್ದರು ಮತ್ತು ತಾವು ಪುರುಷರೆಂಬುದನ್ನೇ ಸಂಪೂರ್ಣ ಮರೆತು ಬಿಡುತ್ತಿದ್ದರು. ನಾವು ದಕ್ಷಿಣೇಶ್ವರಕ್ಕೆ ಹೋಗು ತ್ತಿದ್ದಾಗಲೂ ಕೆಲವೊಮ್ಮೆ ಶ್ರೀರಾಮಕೃಷ್ಣರಿಗೆ ಪ್ರಕೃತಿಭಾವ ಉಂಟಾಗುತ್ತಿತ್ತು. ಆದರೆ ಅದು ದೀರ್ಘಕಾಲ ಇರುತ್ತಿರಲಿಲ್ಲ. ಆಗ ಅದರ ಅವಶ್ಯಕತೆಯೂ ಇರಲಿಲ್ಲ. ಏಕೆಂದರೆ ಸ್ತ್ರೀಪುರುಷ ಸ್ವಭಾವ ಮತ್ತು ಅದನ್ನು ಮೀರಿದ ಅದ್ವೈತ ಭಾವ ಅವರಿಗೆ ಆಗ ಅತ್ಯಂತ ಸ್ವಾಭಾವಿಕವಾಗಿದ್ದುವು. ತಮ್ಮೆಡೆಗೆ ಬರುತ್ತಿದ್ದ ವ್ಯಕ್ತಿಗಳ ಒಳತಿಗಾಗಿ ಯಾವಾಗ ಯಾವ ಭಾವವನ್ನು ಆಶ್ರಯಿಸಬೇಕೊ ಅದನ್ನು ಆಶ್ರಯಿಸುತ್ತಿದ್ದರು.

6. ಶ್ರೀರಾಮಕೃಷ್ಣರ ಸಾಧನಕಾಲದ ಮಹಿಮೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾದರೆ ಅವರ ಮನಸ್ಸು ಎಂಥಾದ್ದು, ಚಿಕ್ಕಂದಿನಿಂದಲೂ ಅವರು ಹೇಗೆ ಸಂಸಾರದಲ್ಲಿ ನಡೆದುಕೊಂಡರು ಮತ್ತು ಆಧ್ಯಾತ್ಮಿಕ ಬಿರುಗಾಳಿಗೆ ಒಳಗಾಗಿ ಮೊದಲು ಎಂಟು ವರ್ಷಗಳಲ್ಲಿ ಎಂಥ ಪರಿವರ್ತನೆ ಉಂಟಾಗಿತ್ತು ಎಂಬುದನ್ನು ನಾವು ಚಿಂತಿಸಿ ನೋಡಬೇಕು. ೧೮೫೫ರಲ್ಲಿ ಅವರು ದಕ್ಷಿಣೇಶ್ವರಕ್ಕೆ ಬಂದಾಗ ತಮ್ಮ ಪೂರ್ವಜ ರಂತೆಯೇ ಉತ್ತಮ ಗೃಹಸ್ಥ ಜೀವನವನ್ನು ನಡೆಸಬೇಕೆಂಬುದು ಅವರ ಇಚ್ಛೆಯಾಗಿತ್ತು. ಇದನ್ನು ಅವರೇ ನಮಗೆ ಹೇಳಿದ್ದುಂಟು. ತುಂಬ ಸರಳ ಸ್ವಭಾವದ ಅವರು ಇತರ ಸಂಸಾರಿಗಳಿಗಿಂತ ತಾವು ಅತ್ಯಂತ ಬೇರೆ ಸ್ವಭಾವದವರು, ವಿಶೇಷಗುಣ ಸಂಪನ್ನರು ಎಂದು ಭಾವಿಸಿರಲೇ ಇಲ್ಲ. ಆದರೆ ಕಾರ್ಯಕ್ಷೇತ್ರಕ್ಕೆ ಧುಮುಕಿದ ಮೇಲೆ ಹೆಚ್ಚು ಹೆಚ್ಚಾಗಿ ಅವರ ಅಸಾಧಾರಣ ವೈಶಿಷ್ಟ್ಯ ಪ್ರಕಾಶಗೊಳ್ಳತೊಡಗಿತು. ಒಂದು ಅಪೂರ್ವ ದೈವ ಶಕ್ತಿ ಅವರನ್ನು ನಡೆಸಿಕೊಂಡು ಹೋಗುತ್ತಿತ್ತು. ಸಂಸಾರದ ರೂಪರಸಾದಿಗಳ ಅನಿತ್ಯತೆ ಯನ್ನೂ, ನಿಸ್ಸಾರತೆಯನ್ನೂ ಅವರ ಕಣ್ಮುಂದೆ ಸ್ಪಷ್ಟವಾಗಿ ತೋರಿಸಿ ಅದು ಅವರನ್ನು ಅವುಗಳ ವಿರುದ್ಧ ದಿಕ್ಕಿನಲ್ಲಿ ಚಲಿಸುವಂತೆ ಮಾಡುತ್ತಿತ್ತು. ಅದರ ನಿರ್ದೇಶದಂತೆಯೇ ನಡೆಯುವುದು ಸ್ವಾರ್ಥಶೂನ್ಯರಾದ ಶ್ರೀರಾಮಕೃಷ್ಣರಿಗೆ ಅಭ್ಯಾಸವಾಗಿಬಿಟ್ಟಿತು. ಅವರಿಗೆ

ಪ್ರಪಂಚದ ಭೋಗವಸ್ತುವನ್ನು ಪಡೆಯುವ ಆಸೆಯಿದ್ದಿದ್ದರೆ ಹಾಗೆ ಮಾಡಲು ಆಗುತ್ತಿರಲಿಲ್ಲ ಎಂಬುದು ಸ್ಪಷ್ಟ.

7. ಶ್ರೀರಾಮಕೃಷ್ಣರು ಹುಟ್ಟಿದಂದಿನಿಂದಲೂ ಎಲ್ಲ ವಿಷಯಗಳಲ್ಲಿಯೂ ಹೇಗೆ ವ್ಯವಹರಿಸುತ್ತಿದ್ದರು ಎಂಬುದನ್ನು ನೆನೆಸಿಕೊಂಡಾಗ ಮೇಲಿನ ವಿಷಯ ಮನಸ್ಸಿಗೆ ಸ್ಪಷ್ಟವಾಗುತ್ತದೆ. ಹೊಟ್ಟೆ ತುಂಬಿಸುವ ವಿದ್ಯೆ ಬೇಡವೆಂದು ಪೂಜೆಯ ಕೆಲಸವನ್ನು ಭಗವತ್ಸಾಕ್ಷಾತ್ಕಾರಕ್ಕಾಗಿ ಬಳಸಿಕೊಂಡರು. ವಿವಾಹ ಮಾಡಿಕೊಂಡರೂ ಎಂದೂ ಸ್ತ್ರೀಸಂಗ ಮಾಡಲಿಲ್ಲ. ಕೂಡಿಡುವ ಪ್ರವೃತ್ತಿಯುಳ್ಳ ವ್ಯಕ್ತಿ ಭಗವಂತನನ್ನು ಕಾಣಲಾರ ಎಂದು ಅವರು ಹಣವನ್ನಾಗಲಿ ಅಥವಾ ಇತರೆ ಯಾವ ವಸ್ತುವನ್ನೇ ಆಗಲಿ ಕೂಡಿ ಹಾಕುವ ಗೋಜಿಗೇ ಹೋಗಲಿಲ್ಲ—ಮನಸ್ಸಿನಲ್ಲಿಯೂ ಅದನ್ನು ಯೋಚಿಸುತ್ತಿರಲಿಲ್ಲ. ಹೀಗೆ ಶ್ರೀರಾಮಕೃಷ್ಣರ ಬಗ್ಗೆ ಅನೇಕ ವಿಷಯ ಹೇಳಬಹುದು. ಇತರ ಸಾಮಾನ್ಯ ಜನರನ್ನು ಯಾವುದು ಮೋಹಗೊಳಿಸುತ್ತಿದ್ದುವೊ ಅದಾವುದೂ ಅವರ ಮೇಲೆ ಬಾಲ್ಯದಿಂದಲೂ ಪ್ರಭಾವ ಬೀರಲೇ ಇಲ್ಲ ಎಂಬುದು ಇದರಿಂದ ತಿಳಿದುಬರುತ್ತದೆ. ಅವರು ಎಷ್ಟೊಂದು ದೃಢಸಂಕಲ್ಪದವರಾಗಿದ್ದರೆಂದರೆ ಯಾವುದೇ ಸಂಸ್ಕಾರಕ್ಕೂ ಅವರು ಹಿಡಿದ ಮಾರ್ಗದಿಂದ ಅವರನ್ನು ವಿಚಲಿತಗೊಳಿಸಲು ಆಗುತ್ತಿರಲಿಲ್ಲ.

8. ಇನ್ನೊಂದು ವಿಷಯ—ಶ್ರೀರಾಮಕೃಷ್ಣರು ಬಾಲ್ಯದಿಂದಲೂ ಶ್ರುತಿಧರರಾಗಿದ್ದರು. ಒಮ್ಮೆ ಕೇಳಿದ್ದನ್ನು ಅದೇ ರೀತಿ ಪುನರುಚ್ಚರಿಸುವ ಸಾಮರ್ಥ್ಯ ಅವರಿಗಿತ್ತು, ಮತ್ತು ಒಮ್ಮೆ ಕೇಳಿದ್ದನ್ನು ಅವರು ಎಂದೂ ಮರೆಯುತ್ತಿರಲಿಲ್ಲ. ಬಾಲ್ಯಕಾಲದಲ್ಲಿ ರಾಮಾಯಣಾದಿ ಕಥೆಗಳನ್ನೂ, ಹಾಡುಗಳನ್ನೂ ಒಮ್ಮೆ ಕೇಳಿ, ಅನಂತರ ತಮ್ಮ ಸ್ನೇಹಿತರಿಗೆ ಅವನ್ನೆಲ್ಲ ಹೇಗೆ ಪುನರುಚ್ಚರಿಸುತ್ತಿದ್ದರು ಎಂಬುದನ್ನು ಮೊದಲೇ ಹೇಳಿಯಾಗಿದೆ. ಆದ್ದರಿಂದ ಅಪೂರ್ವ ಸತ್ಯದ ಒಲವು, ಶ್ರುತಿಧರತ್ವ ಮತ್ತು ಅದ್ಭುತ ದೃಢಸಂಕಲ್ಪ—ಈ ದೇವೀ ಗುಣಗಳಿಂದ ಒಡಗೂಡಿದವರಾಗಿ ಅವರು ಸಾಧನ ರಾಜ್ಯವನ್ನು ಪ್ರವೇಶಿಸಿದ್ದರು. ಸಾಮಾನ್ಯ ಸಾಧಕರಿಗೆ ಇಂಥ ಅನುರಾಗ ದೃಢತೆ ಇತ್ಯಾದಿ ಗುಣಗಳನ್ನು ಪಡೆಯಲು ಇಡಿ ಜೀವನವೇ ಶ್ರಮಿಸಿದರೂ ಸಾಧ್ಯವಾಗದೇ ಇರಬಹುದು. ಆದರೆ ಅವು ಶ್ರೀರಾಮಕೃಷ್ಣರ ಸಾಧನೆಯ ತಳಹದಿಯಾಗಿದ್ದವು. ಆದ್ದರಿಂದ ಅವರು ಯಾವುದೇ ಸಾಧನೆಯನ್ನು ತೆಗೆದುಕೊಂಡರೂ ಅತ್ಯಲ್ಪಕಾಲದಲ್ಲಿಯೇ ಅದರ ಫಲವನ್ನು ಪಡೆಯುತ್ತಿದ್ದುದು ಆಶ್ಚರ್ಯವೇನಲ್ಲ. ಅವರು ಮೂರೇ ದಿನಗಳಲ್ಲಿ ಸಾಧನೆಯ ಸಿದ್ಧಿಯನ್ನು ಪಡೆಯುತ್ತಿದ್ದರು ಎಂಬುದನ್ನು ಕೇಳಿದಾಗ ಬೆರಗಾಗುತ್ತಿದ್ದೆವು. ಇದಕ್ಕೆ ಕಾರಣ ನಮಗಾಗ ಅವರ ಅಸಾಮಾನ್ಯ ಮಾನಸಿಕ ಸ್ಥಿತಿಯ ಅರಿವಿರಲಿಲ್ಲ.

9. ಶ್ರೀರಾಮಕೃಷ್ಣರ ಜೀವನದಲ್ಲಿ ಬರುವ ಕೆಲವು ಘಟನೆಗಳನ್ನು ಇಲ್ಲಿ ಉಲ್ಲೇಖಿಸಿದರೆ ನಾವು ಮೇಲೆ ಹೇಳಿದ ವಿಷಯ ಸ್ಪಷ್ಟವಾಗುತ್ತದೆ. ಶ್ರೀರಾಮಕೃಷ್ಣರು ಮಣ್ಣು, ಹೊನ್ನು ಎರಡನ್ನು ಒಂದೇಸಮವೆಂದು ತಿಳಿದು ಎರಡನ್ನೂ ಗಂಗೆಗೆ ಎಸೆದರು. ಇದರಿಂದ ಕಾಂಚನಾಸಕ್ತಿ ಅವರ ಮನಸ್ಸಿನಿಂದ ಸಂಪೂರ್ಣ ಹೊರಟುಹೋಯಿತು. ಯಾವ

ಸ್ಥಳವನ್ನು ಜನರು ಅತ್ಯಂತ ಹೊಲಸೆಂದು ಪರಿಗಣಿಸಿ ಅಲ್ಲಿಗೆ ಹೋದರೆ ಸ್ನಾನ ಮಾಡು ತ್ತಾರೊ, ಶ್ರೀರಾಮಕೃಷ್ಣರು ಆ ಸ್ಥಳವನ್ನು ತಮ್ಮ ಸ್ವಂತ ಕೈಯಿಂದ ಶುಚಿಗೊಳಿಸಿದ್ದರು. ಇದರಿಂದ ಅವರ ಜಾತ್ಯಭಿಮಾನ ಸಂಪೂರ್ಣ ಹೊರಟುಹೋಗಿ ಎಲ್ಲರನ್ನೂ ಸಮಾನ ವಾಗಿ ತಿಳಿಯತೊಡಗಿದರು. 'ಸ್ತ್ರಿಯಃ ಸಮಸ್ತಾಃ ಸಕಲಾ ಜಗತ್ಸು' ಎಂಬ ಶಾಸ್ತ್ರ ವಾಕ್ಯಾನುಸಾರವಾಗಿ ಎಲ್ಲ ಸ್ತ್ರೀಯರಲ್ಲೂ ಭಗವತಿಯನ್ನು ಕಾಣುತ್ತ ಭೋಗವಾಸನೆ ಯನ್ನು ಸಂಪೂರ್ಣ ಕಿತ್ತುಹಾಕಿದರು. ಈ ವಿಷಯವನ್ನೆಲ್ಲ ಕೇಳಿ ನಮಗೆ ಅತ್ಯಾಶ್ಚರ್ಯ ವಾಗುತ್ತಿತ್ತು. ಏಕೆಂದರೆ ಆಗ ನಮ್ಮ ಮಾನಸಿಕ ಸ್ಥಿತಿಯನ್ನು ನೋಡಿಕೊಂಡಾಗ ನಮಗನಿ ಸುತ್ತಿತ್ತು—ಸಾವಿರಾರು ಬಾರಿ ಹೊನ್ನು-ಮಣ್ಣನ್ನು ನೀರಿಗೆ ಎಸೆದರೂ ನಮ್ಮ ಕಾಂಚನಾ ಸಕ್ತಿ ಹೊರಟು ಹೋಗುವಂತಿರಲಿಲ್ಲ; ಸಾವಿರಾರು ಬಾರಿ ಕೊಳಚೆ ಪ್ರದೇಶವನ್ನು ಶುಚಿಗೊಳಿಸಿದರೂ ನಮ್ಮ ಮನಸ್ಸಿನ ಅಭಿಮಾನ ಹೊರಟುಹೋಗುವಂತಿರಲಿಲ್ಲ; ಭಗವತಿಯೇ ಸ್ತ್ರೀರೂಪದಲ್ಲಿರುವಳು ಎಂದು ಸಾವಿರಾರು ಬಾರಿ ಕೇಳಿದರೂ ಸ್ತ್ರೀಯ ರೆಲ್ಲರೂ ತಾಯಿಯ ಸಮಾನರು ಎಂಬ ಭಾವ ನಮ್ಮಲ್ಲಿ ಉದಯವಾಗುವಂತಿರಲಿಲ್ಲ. ನಮ್ಮ ತಿಳುವಳಿಕೆಯು ಪೂರ್ವಕರ್ಮ ಸಂಸ್ಕಾರಗಳಿಂದ ಮಸುಕಾಗಿರುವುದರಿಂದ ಈ ಎಲ್ಲ ವಿಷಯಗಳಲ್ಲಿ ಶ್ರೀರಾಮಕೃಷ್ಣರಂತೆ ಫಲವನ್ನು ಪಡೆಯಲು ನಮಗೆ ಸಾಧ್ಯವಾಗು ವುದಿಲ್ಲ, ನಾವು ಆತ್ಮ-ನಿಗ್ರಹವಿಲ್ಲದೆ, ಆಳ ಪರಿಜ್ಞಾನವಿಲ್ಲದೆ, ಪೂರ್ವಸಂಸ್ಕಾರಗಳಿಗೆ ಬಲಿಯಾಗಿರುವ ಮನಸ್ಸಿನೊಂದಿಗೆ ಸಾಧನೆ ಮಾಡಲು ಹೊರಟಿರುವೆವು. ಇದಕ್ಕನುಗುಣ ವಾಗಿಯೇ ನಮಗೆ ಫಲವೂ ದೊರೆಯುವುದು.

ಶ್ರೀರಾಮಕೃಷ್ಣರಂತಹ ವಿಶಿಷ್ಟಶಕ್ತಿಯುಳ್ಳ ಮನಸ್ಸನ್ನು ಪಡೆದವರು ನಾಲ್ಕು ಐದು ಶತಮಾನಗಳಿಗೊಮ್ಮೆಯಾದರೂ ಬರುತ್ತಾರೊ ಇಲ್ಲವೊ ಸಂದೇಹ. ಸಂಯಮ ಶೀಲರೂ, ಅಪೂರ್ವ ಧಾರಣಶಕ್ತಿಯುಳ್ಳವರೂ, ಪೂರ್ವಸಂಸ್ಕಾರಗಳ ಪೀಡೆ ಇಲ್ಲದವರೂ ಆಗಿ ಶ್ರೀರಾಮಕೃಷ್ಣರು ಹಲವು ವರ್ಷಗಳ ಸತತ ಸಾಧನೆಯಿಂದ ಎಂಥೆಂಥ ಅನುಭವ ಗಳನ್ನು ಪಡೆದಿದ್ದರು, ಎಂತಹ ಅಪೂರ್ವ ಶಕ್ತಿಯನ್ನು ಪಡೆದಿದ್ದರು ಎಂಬುದನ್ನು ನಮಗೆ ಕಲ್ಪಿಸಿಕೊಳ್ಳುವುದೂ ಅಸಂಭವ.

10. ರಾಣಿ ರಾಸಮಣಿಯ ಮರಣದಿಂದ ದಕ್ಷಿಣೇಶ್ವರದಲ್ಲಿ ದೇವಕಾರ್ಯಗಳಿಗೆ ಸ್ವಲ್ಪವೂ ಕುಂದುಂಟಾಗಲಿಲ್ಲ ಎಂಬುದನ್ನು ಮೊದಲೇ ಹೇಳಿರುವೆವು. ಮಥುರನು ದೇವಸೇವೆಯನ್ನು ನಿಯಮಿತ ರೀತಿಯಲ್ಲಿ ಮುಂದುವರಿಸಿಕೊಂಡುಹೋದುದು ಮಾತ್ರ ವಲ್ಲದೆ ಶ್ರೀರಾಮಕೃಷ್ಣರ ನಿರ್ದೇಶದಂತೆ ಕೆಲವೊಮ್ಮೆ ದೇವಸೇವೆಗೆ ಹೆಚ್ಚು ಖರ್ಚು ಮಾಡುತ್ತಿದ್ದ. ದೇವಕಾರ್ಯದ ಹೊರತಾಗಿ ಸಾಧು ಭಕ್ತರ ಸೇವೆಯಲ್ಲಿಯೂ ಅವನಿಗೆ ವಿಶೇಷ ಆಸಕ್ತಿಯಿತ್ತು. ಶ್ರೀರಾಮಕೃಷ್ಣರ ಪ್ರಭಾವದಿಂದಾಗಿ ಸಾಧುಭಕ್ತರನ್ನು ಅವನು ಈಶ್ವರನ ಪ್ರತಿರೂಪವೆಂದು ಪರಿಗಣಿಸುತ್ತಿದ್ದನು. ಸಾಧುಭಕ್ತರುಗಳಿಗೆ ಕೇವಲ ಅನ್ನದಾನ ಮಾತ್ರವಲ್ಲದೆ ವಸ್ತ್ರ ಕಂಬಳಿ ಕಮಂಡಲು ಮುಂತಾದ ಆವಶ್ಯಕ ವಸ್ತುಗಳನ್ನು ನೀಡ ಬೇಕೆಂದು ಶ್ರೀರಾಮಕೃಷ್ಣರು ಹೇಳಿದಾಗ ಮಥುರನು ಅವನ್ನೆಲ್ಲ ಖರೀದಿಸಿ ದಕ್ಷಿಣೇಶ್ವರದ

ಒಂದು ಉಗ್ರಾಣದಲ್ಲಿ ತುಂಬಿಸಿಟ್ಟನು. ಶ್ರೀರಾಮಕೃಷ್ಣರ ಆದೇಶದಂತೆ ಅವನ್ನು ಯಾರಿಗೆಬೇಕೊ ಅವರಿಗೆ ನೀಡಬೇಕೆಂದು ಅಲ್ಲಿಯ ಕರ್ಮಚಾರಿಗಳಿಗೆ ತಿಳಿಸಿದ್ದನು. ಎಲ್ಲ ಸಂಪ್ರದಾಯದ ಸಾಧಕರಿಗೂ ಅವರ ಸಾಧನೆಗೆ ಬೇಕಾದ ವಸ್ತುಗಳನ್ನು ದಾನವಾಗಿ ಕೊಡಬೇಕೆಂದು ಶ್ರೀರಾಮಕೃಷ್ಣರಿಗೆ ಬಯಕೆಯುಂಟಾಯಿತು. ಇದನ್ನು ತಿಳಿದ ಮಥುರನು ಅದರ ವ್ಯವಸ್ಥೆ ಮಾಡಿದ್ದನು. ಹೀಗೆ ಶ್ರೀರಾಮಕೃಷ್ಣರ ಇಚ್ಛೆಯಂತೆ ಅನೇಕ ರೀತಿಯಲ್ಲಿ ಸಾಧುಸೇವೆ ಮಾಡಿದ್ದನು. ದಕ್ಷಿಣೇಶ್ವರದಲ್ಲಿ ನಡೆಯುವ ಸಾಧುಸೇವೆಯ ವಿಷಯ ಎಲ್ಲೆಲ್ಲಿಯೂ ಪ್ರಚಾರವಾಗಿತ್ತು. ರಾಣಿ ರಾಸಮಣಿಯ ಜೀವಿತಕಾಲದಲ್ಲಿಯೇ ದಕ್ಷಿಣೇಶ್ವರವು ಒಂದು ಯಾತ್ರಿಕರ ತಾಣವೆಂದು ಪ್ರಸಿದ್ಧವಾಗಿತ್ತು. ಈಗ ಅದರ ಪ್ರಸಿದ್ಧಿ ಇನ್ನೂ ಹರಡಿತು. ಅನೇಕ ಸಂಪ್ರದಾಯದ ಯಾತ್ರಿಕ ಸಾಧುಗಳು ಭಕ್ತರು ಅಲ್ಲಿಗೆ ಬಂದು ಆತಿಥ್ಯವನ್ನು ಸ್ವೀಕರಿಸಿ ಸಂತೃಪ್ತರಾಗಿ ಮುಂದೆ ತಮ್ಮ ಯಾತ್ರೆಯನ್ನು ಬೆಳಸುತ್ತಿದ್ದರು.

11. ಜಟಾಧಾರಿ ಎಂಬ ರಾಮಾವತ್ ಸಂಪ್ರದಾಯದ ಸಾಧುವು ಈ ಸಂದರ್ಭದಲ್ಲಿ ದಕ್ಷಿಣೇಶ್ವರಕ್ಕೆ ಬಂದನು. ಅವನಿಂದ ಶ್ರೀರಾಮಕೃಷ್ಣರು ರಾಮಮಂತ್ರವನ್ನು ಮತ್ತು ಶ್ರೀರಾಮಲಾಲ್ ಎಂಬ ರಾಮಚಂದ್ರನ ಬಾಲವಿಗ್ರಹವನ್ನೂ ಪಡೆದರು. ಇದು ನಡೆದದ್ದು ಬಹುಶಃ ೧೮೬೪ರಲ್ಲಿ. ಶ್ರೀರಾಮಚಂದ್ರನ ಮೇಲೆ ಜಟಾಧಾರಿಗೆ ಇದ್ದ ಅದ್ಭುತ ಪ್ರೀತಿಯ ಬಗ್ಗೆನಾವು ಆಗಾಗ ಶ್ರೀರಾಮಕೃಷ್ಣರ ಬಾಯಿಂದ ಕೇಳಿರುವೆವು. ಬಾಲಕ ರಾಮಚಂದ್ರನ ಮೂರ್ತಿಯೇ ಅವನಿಗೆ ಅತ್ಯಂತ ಪ್ರಿಯವಾಗಿತ್ತು. ಆ ಮೂರ್ತಿಯ ಬಹುಕಾಲದ ಸೇವೆಯಿಂದ ಅವನ ಮನಸ್ಸು ಭಕ್ತಿಭಾವದಿಂದ ತುಂಬಿ ಹೋಗಿತ್ತು. ಅವನ ಭಕ್ತಿ ಎಷ್ಟು ಪರಿಣತವಾಗಿತ್ತೆಂದರೆ ಬಾಲರಾಮನ ಜ್ಯೋತಿರ್ಮಯ ಮೂರ್ತಿ ಅವನ ಮುಂದೆ ಕಾಣಿಸಿಕೊಂಡು ಅವನ ಸೇವೆಯನ್ನು ಸ್ವೀಕರಿಸುತ್ತಿತ್ತು. ಮೊದಮೊದಲು ಈ ರೀತಿಯ ದರ್ಶನ ಕ್ಷಣಮಾತ್ರ ಆಗುತ್ತಿತ್ತು. ಅವನು ಸಾಧನೆಯಲ್ಲಿ ಮುಂದುವರಿದಂತೆಲ್ಲ ಆ ದರ್ಶನ ಇನ್ನೂ ಘನೀಭೂತವಾಯಿತು ಮತ್ತು ಅದು ದೀರ್ಘ ಕಾಲ ಉಳಿಯುತ್ತಿತ್ತು. ಮುಂದೆ ಅದು ಪ್ರತಿನಿತ್ಯ ನೋಡುವ ವಸ್ತುಗಳಂತೆ ಆಗಿಬಿಟ್ಟಿತು. ಕ್ರಮೇಣ ಬಾಲರಾಮಚಂದ್ರನು ಅವನ ನಿತ್ಯ ಸಹಚರನಾಗಿಬಿಟ್ಟನು. ಜಟಾಧಾರಿಯು ರಾಮಲಾಲನ ಸೇವೆ ಮಾಡುತ್ತ ಭಾರತದ ಎಲ್ಲ ತೀರ್ಥಪರ್ಯಟನೆ ಮಾಡತೊಡಗಿದ. ಆ ಸಂದರ್ಭದಲ್ಲಿಯೇ ಅವನು ದಕ್ಷಿಣೇಶ್ವರಕ್ಕೆ ಬಂದದ್ದು.

12. ತನಗೆ ಬಾಲ-ರಾಮನ ದರ್ಶನವಾಗುತ್ತಿರುವುದನ್ನು ಜಟಾಧಾರಿಯು ಯಾರಿಗೂ ಹೇಳಿರಲಿಲ್ಲ. ಜನರು ಭಾವಿಸಿದ್ದರು ಅವನು ಒಂದು ಲೋಹದ ವಿಗ್ರಹವನ್ನು ಅತ್ಯಂತ ಪ್ರೀತಿಯಿಂದ ಇಟ್ಟುಕೊಂಡಿರುವನು ಎಂದು. ಆದರೆ ಭಾವ ರಾಜ್ಯದ ಅಧಿಪತಿಯಾದ ಶ್ರೀರಾಮಕೃಷ್ಣರು ಮೊದಲ ದರ್ಶನದಲ್ಲಿಯೇ ಸ್ಥೂಲಪರದೆಯ ಹಿಂದಿರುವ ಗೂಢರಹಸ್ಯವನ್ನು ಕಂಡುಹಿಡಿದಿದ್ದರು. ಆದ್ದರಿಂದಲೇ ಮೊದಲಿನಿಂದಲೇ ಅವರು ಜಟಾಧಾರಿಯನ್ನು ಶ್ರದ್ಧಾಭಕ್ತಿಯಿಂದ ನೋಡತೊಡಗಿದರು. ಅವನಿಗೆ ಬೇಕಾದ ವಸ್ತುಗಳನ್ನೆಲ್ಲ ಒದಗಿಸಿದರು. ಅವನೊಡನೆ ಬಹಳ ಹೊತ್ತು ಮಾತನಾಡುತ್ತಿದ್ದರು.

ಯಾವಾಗಲೂ ಅವನ ಸೇವೆ ಮಾಡಲು ಕಾದುಕೊಂಡಿರುತ್ತಿದ್ದರು. ಅವರಿಗೂ ರಾಮಚಂದ್ರನ ದರ್ಶನವಾಗಿದ್ದುದರಿಂದಲೇ ಅವರು ಈರೀತಿ ಮಾಡುತ್ತಿದ್ದರು ಎಂಬುದನ್ನು ಬೇರೆಕಡೆ ವಿವರಿಸಿರುವೆವು.* ಕ್ರಮೇಣ ಅವರಿಬ್ಬರ ಸಂಬಂಧ ಹೆಚ್ಚು ಹೆಚ್ಚು ಘನಿಷ್ಠವಾಗತೊಡಗಿತು.

13. ಈ ಸಮಯದಲ್ಲಿ ಶ್ರೀರಾಮಕೃಷ್ಣರು ತಮ್ಮಮೇಲೆ ಸ್ತ್ರೀಭಾವವನ್ನು ಆರೋಪಿಸಿಕೊಂಡು ಅದರಲ್ಲೇ ತನ್ಮಯರಾಗಿ ಬಹಳ ಕಾಲಕಳೆಯುತ್ತಿದ್ದರು. ತಮ್ಮನ್ನು ಶ್ರೀಜಗನ್ಮಾತೆಯ ನಿತ್ಯಸಂಗಾತಿಯೆಂದು ಭಾವಿಸುತ್ತ ಬಹಳಹೊತ್ತು ಸ್ತ್ರೀ ವೇಷವನ್ನು ಹಾಕಿಕೊಂಡು ಇರುತ್ತಿದ್ದರು. ಹೂಮಾಲೆಯನ್ನು ಮಾಡಿ ದೇವಿಗೆ ತೊಡಿಸುತ್ತಿದ್ದರು ; ಸೆಕೆಯಾಗದಿರಲೆಂದು ಅವಳಿಗೆ ಚಾಮರ ಬೀಸುತ್ತಿದ್ದರು ; ಮಥುರನಿಗೆ ಹೇಳಿ ಹೊಸ ಆಭರಣಗಳನ್ನು ಮಾಡಿಸಿ ಅವಳನ್ನು ಅಲಂಕರಿಸುತ್ತಿದ್ದರು ; ಮತ್ತು ಅವಳ ಸಂತೃಪ್ತಿಗಾಗಿ ಹಾಡಿ ನರ್ತಿಸುತ್ತಿದ್ದರು. ಈಗ ಜಟಾಧಾರಿಯ ಪ್ರಭಾವದಿಂದ ರಾಮನ ಮೇಲಿನ ಪ್ರೀತಿ ಮತ್ತೆ ಪ್ರಬಲವಾಯಿತು. ಅವನ ಭಾವಘನ ಶೈಶವ ಮೂರ್ತಿಯ ದರ್ಶನವನ್ನು ಪಡೆದರು. ಸ್ತ್ರೀಭಾವದಲ್ಲಿದ್ದ ಅವರಲ್ಲಿ ಈಗ ವಾತ್ಸಲ್ಯ ಭಾವ ಅಂಕುರಿಸಿತು. ತಾಯಿಗೆ ಶಿಶುವನ್ನು ಕಂಡಾಗ ಹೇಗೆ ಪ್ರೇಮ ಉಕ್ಕಿಬರುವುದೊ ಹಾಗೆಯೇ ಬಾಲರಾಮನನ್ನು ನೋಡಿದಾಗ ಶ್ರೀರಾಮಕೃಷ್ಣರಿಗಾಯಿತು. ಆ ಪ್ರೇಮ ಆಕರ್ಷಣೆಗಳ ಬಲದಿಂದ ಶ್ರೀರಾಮಕೃಷ್ಣರು ಜಟಾಧಾರಿಯ ರಾಮಲಾಲ ವಿಗ್ರಹದೊಡನೆ ಎಷ್ಟುಹೊತ್ತು ಕಳೆಯುತ್ತಿದ್ದರೂ ಅವರಿಗೇ ತಿಳಿಯುತ್ತಿರಲಿಲ್ಲ. ಆ ಉಜ್ವಲ ದೇವಶಿಶುವು ಮಧುರ ಬಾಲಚೇಷ್ಟೆಯಿಂದ ಅವರ ಮೈಮರೆಸುತ್ತಿತ್ತು. ಅವರನ್ನು ಬೇರೆಕಡೆ ಹೋಗಲು ಬಿಡುತ್ತಲೇ ಇರಲಿಲ್ಲ. ಅವರು ಇಲ್ಲದಿದ್ದಾಗ ವ್ಯಾಕುಲತೆಯಿಂದ ಅವರು ಬರುವುದನ್ನೇ ಕಾಯುತ್ತಿತ್ತು. ಬೇಡವೆಂದರೂ ಕೇಳದೆ ಅವರು ಎಲ್ಲಿಹೋದರೆ ಅವರೊಡನೆ ಹೋಗಲು ಮುಂದಾಗುತ್ತಿತ್ತು.

14. ಶ್ರೀರಾಮಕೃಷ್ಣರ ಕ್ರಿಯಾಶೀಲ ಮನಸ್ಸು ಯಾವುದೇ ಕಾರ್ಯವನ್ನು ಅರ್ಧದಲ್ಲಿ ನಿಲ್ಲಿಸಲು ಬಿಡುತ್ತಿರಲಿಲ್ಲ. ಇದು ಭೌತಿಕ ಕಾರ್ಯಗಳಿಗೆ ಮಾತ್ರ ಅನ್ವಯಿಸುವುದಲ್ಲ, ಭಾವರಾಜ್ಯದ ಕಾರ್ಯಗಳಿಗೂ ಅನ್ವಯಿಸುತ್ತಿತ್ತು. ಯಾವುದೇ ಭಾವವಿಶೇಷವು ಅವರ ಹೃದಯವನ್ನು ವ್ಯಾಪಿಸಿಕೊಂಡರೆ ಅದರ ತಂತ್ರತುದಿಯನ್ನು ಮುಟ್ಟುವವರೆಗೂ ಅವರು ಶಾಂತರಾಗುತ್ತಿರಲಿಲ್ಲ. ಅವರ ಈ ಸ್ವಭಾವವನ್ನು ಕುರಿತು ಕೆಲವರು ಆಕ್ಷೇಪಿಸಬಹುದು : 'ಇದು ಒಳ್ಳೆಯದೇ ? ಹೃದಯದಲ್ಲಿ ಯಾವ ಭಾವ ಉದಯವಾದರೂ ಅದರ ಆಳಾಗಿ ಅದರ ಬೆನ್ನು ಹತ್ತಿ ಹೋಗುವುದು ಮಾನವನ ಮುನ್ನಡೆಗೆ ಒಳ್ಳೆಯದೇ ? ದುರ್ಬಲ ಮನುಷ್ಯನಲ್ಲಿ ಒಳ್ಳೆಯ ಮತ್ತು ಕೆಟ್ಟ ಭಾವಗಳೆರಡೂ ನಿರಂತರವಾಗಿ ಏಳುತ್ತಿರುತ್ತವೆ. ಶ್ರೀರಾಮಕೃಷ್ಣರ ಈ ರೀತಿಯ ಸ್ವಭಾವ

* ಗುರುಭಾವ, ಉತ್ತರಾರ್ಧ, ಅಧ್ಯಾಯ-2.

ಅವರನ್ನು ಕೆಟ್ಟ ಮಾರ್ಗಕ್ಕೆ ಎಳೆಯದಿದ್ದರೂ ಸಾಧಾರಣ ಮನುಷ್ಯನಿಗೆ ಅನುಕರಣೀಯ ವಾಗಲಾರದು. ಉತ್ತಮ ಭಾವಗಳೇ ಮನಸ್ಸಿನಲ್ಲಿ ಏಳುತ್ತವೆ ಎಂಬ ಆತ್ಮವಿಶ್ವಾಸ ಸರಿಯಲ್ಲ. ಆದ್ದರಿಂದ ಸಂಯಮದ ಕಡಿವಾಣದಿಂದ ಭಾವಾಶ್ವಗಳೆಲ್ಲವನ್ನೂ ಹತೋಟಿ ಯಲ್ಲಿಟ್ಟುಕೊಳ್ಳಬೇಕು.'

15. ಈ ಮಾತು ಯುಕ್ತಿಪೂರ್ಣವಾದುದು ನಿಜ. ಆದರೆ ಇದಕ್ಕೆ ಉತ್ತರ ವಾಗಿ ನಾವು ಸ್ವಲ್ಪ ಹೇಳುವುದಿದೆ. ತೀವ್ರ ಭೋಗಾಸಕ್ತಿಯುಳ್ಳ ಮನಸ್ಸುಳ್ಳವರು ಅತಿಯಾಗಿ ಅದರ ಮೇಲೆ ವಿಶ್ವಾಸವಿಡುವುದು ತಪ್ಪು. ಆದ್ದರಿಂದ ಸಾಧಾರಣ ಮಾನವರ ವಿಚಾರದಲ್ಲಿ ಭಾವಸಂಯಮದ ಆವಶ್ಯಕತೆಯನ್ನು ನಿರಾಕರಿಸುವುದು ಮೂರ್ಖತನವಾಗುತ್ತದೆ. ಆದರೆ ವೇದಾದಿ ಶಾಸ್ತ್ರಗಳ ಪ್ರಕಾರ, ಕೆಲವು ಅಪೂರ್ವ ವ್ಯಕ್ತಿಗಳಲ್ಲಿ ಸಂಯಮವು ಉಸಿರಾಟದಂತೆ ಸ್ವಾಭಾವಿಕವಾಗಿರುತ್ತದೆ. ಅಂಥವರ ಮನಸ್ಸು ಕಾಮಕಾಂಚನಾಸಕ್ತಿಯಿಂದ ಸಂಪೂರ್ಣ ಮುಕ್ತವಾಗಿರುತ್ತದೆ. ಕೇವಲ ಸದ್ಭಾವ ಗಳೇ ಅವರಲ್ಲಿ ಮನೆ ಮಾಡಿಕೊಂಡಿರುತ್ತವೆ. ದುರ್ಭಾವಗಳು ಅವರ ಮನಸ್ಸಿನಲ್ಲಿ ತಲೆ ಎತ್ತುವದು ಸಾಧ್ಯವೇ ಇಲ್ಲ. ಶ್ರೀರಾಮಕೃಷ್ಣರು ಹೇಳುವಂತೆ, ''ಶ್ರೀಜಗನ್ಮಾತೆಯು ಅವರನ್ನು ಜಾರಲು ಬಿಡುವುದೇ ಇಲ್ಲ.'' ಇಂಥ ಸ್ಥಿತಿಯಲ್ಲಿರುವವರು ಆಯಾಯ ಕಾಲದ ತಮ್ಮ ಮನೋಭಾವದಲ್ಲಿ ವಿಶ್ವಾಸವಿರಿಸಿದರೆ ಅದರಿಂದ ಯಾವ ಹಾನಿಯೂ ಆಗುವುದಿಲ್ಲ, ಅದರ ಬದಲು ಇತರರಿಗೆ ಒಳಿತೇ ಆಗುವುದು. ಏಕೆಂದರೆ ಅವರಲ್ಲಿರುವ ಅಹಂಕಾರವು ವಿಶ್ವಾತ್ಮದೊಡನೆ ಒಂದಾಗಿರುವುದರಿಂದ ಅವರಲ್ಲಿ ಸ್ವಾರ್ಥಪರವಾದ ಯಾವ ವಿಚಾರವೂ ಬರುವುದೇ ಇಲ್ಲ. ಎಲ್ಲರ ಹಿತಕಾರಿಯಾದ ಈಶ್ವರೇಚ್ಛೆಯೇ ಅವರಲ್ಲಿ ಎಲ್ಲರ ಒಳಿತಿಗಾಗಿ ವಿವಿಧ ಮನೋಭಾವರೂಪದಲ್ಲಿ ವ್ಯಕ್ತವಾಗುತ್ತಿರುತ್ತದೆ. ಅವರಲ್ಲಿ 'ನಾನು ಯಂತ್ರ, ನೀನು ಯಂತ್ರಿ' ಎಂಬ ಭಾವನೆ ಪ್ರತಿಕ್ಷಣವೂ ಅನುಭವ ವೇದ್ಯವಾಗಿರುತ್ತದೆ. ಮನಸ್ಸಿನಲ್ಲೇಳುವ ಭಾವನೆಗಳೆಲ್ಲವೂ ಅನುಭವವೇದ್ಯವಾಗಿರು ತ್ತವೆ. ಮನಸ್ಸಿನಲ್ಲೇಳುವ ಭಾವನೆಗಳೆಲ್ಲವೂ ಈಶ್ವರನ ಸಂಕಲ್ಪದಿಂದಲೇ ಎಂಬ ದೃಢವಿಶ್ವಾಸ ಅವರಲ್ಲಿರುತ್ತದೆ. ಆದ್ದರಿಂದ ಅವುಗಳಿಗನುಗುಣವಾಗಿ ನಡೆಯಲು ಅವರು ಸ್ವಲ್ಪವೂ ಹಿಂಜರಿಯುವುದಿಲ್ಲ. ಅದರ ಪರಿಣಾಮವೂ ಯಾವಾಗಲೂ ಇತರರಿಗೆ ಹಿತ ಕಾರಿಯೇ ಆಗುವುದನ್ನು ನಾವು ನೋಡುತ್ತೇವೆ. ಶ್ರೀರಾಮಕೃಷ್ಣರಂತಹ ದಿವ್ಯ ಪುರುಷರ ಜೀವನದಲ್ಲಿ ಇಂಥ ಸ್ಥಿತಿ ಬಹಳ ಬೇಗನೆ ಬರುವುದು. ಇಂತಹ ಮಹಾ ಪುರುಷರು ತಮ್ಮ ಮನಸ್ಸಿನಲ್ಲಿ ಏಳುವ ಭಾವನೆಗಳನ್ನು ವಿಚಾರಕ್ಕೆ ಒಳಪಡಿಸದೆ ಪೂರ್ಣ ವಿಶ್ವಾಸದಿಂದ ಅವುಗಳಿಗನುಗುಣವಾಗಿ ನಡೆಯಲು ಮುಂದಾಗುತ್ತಾರೆ. ಈಶ್ವರೇಚ್ಛೆ ಯೊಡನೆ ತಮ್ಮ ಅಲ್ಪೇಚ್ಛೆಯನ್ನು ಒಂದಾಗಿಸಿಕೊಂಡಿರುವ ಅವರು ಸಾಧಾರಣ ಮನಸ್ಸಿಗೆ ಹೊಳೆಯದ ವಿಷಯಗಳನ್ನೂ ಗ್ರಹಿಸುವ ಸಾಮರ್ಥ್ಯವನ್ನು ಹೊಂದಿರು ತ್ತಾರೆ. ಏಕೆಂದರೆ ಆ ವಿಷಯಗಳೆಲ್ಲವೂ ವಿಶ್ವಮನಸ್ಸಿನಲ್ಲಿ ಸೂಕ್ಷ್ಮಭಾವದಲ್ಲಿ ಯಾವಾ ಗಲೂ ಪ್ರಕಾಶಗೊಳ್ಳುತ್ತಿರುವುವು.

16. ಅವರು ಎಷ್ಟೊಂದು ನಿರ್ಭಯರೂ, ಸ್ವಾರ್ಥಶೂನ್ಯರೂ ಆಗಿರುತ್ತಾರೆಂದರೆ ತಮ್ಮ ಮೃತ್ಯುವು ಯಾರಿಂದ ಅಥವಾ ಯಾವುದರಿಂದ ಹೇಗೆ ಆಗುತ್ತದೆ ಎಂಬುದನ್ನು ಮೊದಲೇ ತಿಳಿದಿದ್ದರೂ ಆ ವ್ಯಕ್ತಿಯು ಅಥವಾ ವಸ್ತುವಿನ ಬಗ್ಗೆ ಸ್ವಲ್ಪವೂ ದ್ವೇಷಭಾವವನ್ನು ಹೊಂದಿರುವುದಿಲ್ಲ. ಅದರ ಬದಲು ಅವರಿಗೆ ಆ ಕಾರ್ಯದಲ್ಲಿ ಸಹಾಯ ಮಾಡುವರು. ಇದಕ್ಕೆ ಕೆಲವು ದೃಷ್ಟಾಂತಗಳನ್ನು ನೀಡಬಹುದು. ಶ್ರೀರಾಮಚಂದ್ರನು ಸೀತೆ ಪರಿಶುದ್ಧಳೆಂದು ತಿಳಿದಿದ್ದರೂ ಮುಂದಾಗುವುದನ್ನು ಅರಿತು ಅವಳನ್ನು ಕಾಡಿಗೆ ಕಳಿಸಿದನು. ಮತ್ತೆ ತನ್ನ ಪ್ರಾಣಪ್ರಿಯನಾದ ಲಕ್ಷ್ಮಣನನ್ನು ತ್ಯಜಿಸಿದರೆ ತನ್ನ ಅವತಾರವು ಕೊನೆಗೊಳ್ಳುವುದೆಂದು ತಿಳಿದಿದ್ದರೂ ಅವನನ್ನು ಕಳಿಸಿಕೊಟ್ಟನು. ಯದು ವಂಶ ಧ್ವಂಸವಾಗುವುದನ್ನು ಅರಿತಿದ್ದರೂ ಶ್ರೀಕೃಷ್ಣನು ಅದು ಯಥಾಕಾಲದಲ್ಲಿ ಸಂಭವಿಸಲು ಸಹಾಯ ಮಾಡಿದನು. ವ್ಯಾಧನಿಂದ ತನಗೆ ಮೃತ್ಯು ಎಂಬುದನ್ನು ತಿಳಿದಿದ್ದರೂ ವ್ಯಾಧನು ತನ್ನನ್ನು ಕೊಲ್ಲುವುದಕ್ಕೆ ಅವನು ಸಹಾಯ ಮಾಡಿದನು. ಕಾಡಿನಲ್ಲಿ ತನ್ನ ಶರೀರವನ್ನು ಮರೆ ಮಾಡಿಕೊಂಡು ಎರಡು ಪಾದಗಳು ಮಾತ್ರ ಕಾಣುವಂತೆ ಇಟ್ಟುಕೊಂಡನು. ವ್ಯಾಧನು ಪಕ್ಷಿ ಎಂಬ ಭ್ರಮೆಯಿಂದ ಬಾಣ ಬಿಟ್ಟನು. ತನ್ನ ತಪ್ಪಿಗಾಗಿ ಪಶ್ಚಾತ್ತಾಪ ಪಡುತ್ತಿದ್ದ ವ್ಯಾಧನನ್ನು ಆಶೀರ್ವದಿಸಿ, ಅವನನ್ನು ಸಂತೈಸಿ ಅನಂತರ ದೇಹಬಿಟ್ಟನು.

ಒಬ್ಬ ಚಂಡಾಲನ ಆಹಾರದಿಂದ ತನಗೆ ಪರಿನಿರ್ವಾಣವಾಗುವುದೆಂದು ಬುದ್ಧನಿಗೆ ಮೊದಲೇ ತಿಳಿದಿತ್ತು. ಆದರೂ ಆ ಆಹಾರವನ್ನು ಉಂಡು ಅವನನ್ನು ಆ ಅಪವಾದದಿಂದ ಮುಕ್ತಗೊಳಿಸಿ ಪರಿನಿರ್ವಾಣವನ್ನು ಹೊಂದಿದನು. ಮತ್ತೆ ಸ್ತ್ರೀಯರನ್ನು ಸಂನ್ಯಾಸೀ ಸಂಘಕ್ಕೆ ಸೇರಿಸಿಕೊಂಡರೆ ಸಂಘದ ಅವನತಿಯಾಗುವುದೆಂದು ಅವನಿಗೆ ತಿಳಿದಿದ್ದರೂ ತನ್ನ ಚಿಕ್ಕಮ್ಮನಾದ ಗೌತಮಿಯು ಸಂನ್ಯಾಸ ಸ್ವೀಕರಿಸಲು ಅನುಮತಿಯಿತ್ತನು.

ಯೇಸು ಕ್ರಿಸ್ತನು ತನ್ನ ಶಿಷ್ಯನಾದ ಜುಡಾ ಧನಲೋಭದಿಂದ ತನ್ನನ್ನು ಶತ್ರುಗಳಿಗೆ ಒಪ್ಪಿಸುವನು ಮತ್ತು ಅದರಿಂದಲೇ ತನ್ನ ಜೀವನ ಅಂತ್ಯಗೊಳ್ಳುವುದು ಎಂದು ಮೊದಲೇ ತಿಳಿದಿದ್ದನು, ಆದರೂ ಅವನನ್ನು ಸಮಾನವಾಗಿ ಪ್ರೀತಿಸಿ ಅವನ ಶ್ರೇಯಸ್ಸನ್ನೇ ಬಯಸಿದರು,

17. ಅವತಾರಪುರುಷರು ಇರಲಿ, ಸಾಮಾನ್ಯ ಸಿದ್ಧಪುರುಷರ ಜೀವನದಲ್ಲಿಯೂ ಇಂಥದೇ ಘಟನೆಗಳನ್ನು ಕಾಣುತ್ತೇವೆ. ಅವತಾರಪುರುಷರ ಜೀವನದಲ್ಲಿ ಒಂದು ಕಡೆ ತೀವ್ರ ಕಾರ್ಯಶೀಲತೆಯನ್ನು ಕಾಣುತ್ತೇವೆ, ಮತ್ತೊಂದು ಕಡೆ ಈಶ್ವರೇಚ್ಛೆಯಲ್ಲಿ ಸಂಪೂರ್ಣ ನಿರ್ಭರತೆಯನ್ನು ಕಾಣುತ್ತೇವೆ. ಇವೆರಡೂ ಅವರ ವ್ಯಕ್ತಿತ್ವದಲ್ಲಿ ಸಾಮರಸ್ಯದಿಂದ ಕೂಡಿರುತ್ತವೆ. ಇದರಿಂದ ನಮಗೆ ತಿಳಿಯುವುದೇನೆಂದರೆ ಈಶ್ವರೇಚ್ಛೆಯೇ ಅವರಲ್ಲಿ ಪ್ರಚಂಡ ಕ್ರಿಯಾಶೀಲತೆಯಾಗಿ ಪ್ರಕಾಶಗೊಳ್ಳುತ್ತಿರುವುದು

ಎಂದು. ಆದ್ದರಿಂದ ಈಶ್ವರೇಚ್ಛೆಯನ್ನೇ ಅನುಸರಿಸುವವರಲ್ಲಿ ಸ್ವಾರ್ಥಸಂಸ್ಕಾರಗಳು ಸಂಪೂರ್ಣ ನಾಶವಾಗಿರುತ್ತವೆ. ಅವರಲ್ಲಿ ಶುದ್ಧ ಭಾವಗಳು ಮಾತ್ರ ಉದಯವಾಗುತ್ತವೆ. ಇಂತಹ ಸಾಧಕರು ತಮ್ಮ ಮನೋಭಾವಗಳಲ್ಲಿ ವಿಶ್ವಾಸವಿರಿಸಿ ಅವುಗಳನ್ನು ಅನುಸರಿಸಿ ಕೊಂಡು ಹೋಗುವುದರಲ್ಲಿ ಯಾವ ದೋಷವೂ ಇಲ್ಲ. ಶ್ರೀರಾಮಕೃಷ್ಣರ ಈ ರೀತಿಯ ಆಚರಣೆ ಜನಸಾಮಾನ್ಯರಿಗೆ ಅನುಕರಣೀಯವಲ್ಲದಿದ್ದರೂ ಮೇಲೆ ಹೇಳಿದ ಅಸಾಧಾರಣ ಸ್ಥಿತಿಯನ್ನು ಹೊಂದಿದ ಸಾಧಕರಿಗೆ ಅದು ಬೆಳಕು ನೀಡಬಹುದು. ಇಂತಹ ಅವಸ್ಥೆ ಯಲ್ಲಿರುವವರ ಆಹಾರವಿಹಾರಾದಿ ಮೂಲಭೂತ ಆವಶ್ಯಕತೆಗಳಿಗೆ ಸಂಬಂಧಿಸಿದ ಆಸೆ ಗಳನ್ನು ಶಾಸ್ತ್ರವು ಸತ್ತ್ವಹೀನ ಬೀಜಕ್ಕೆ ಹೋಲಿಸುತ್ತದೆ. ಹೇಗೆ ಸುಟ್ಟ ಬೀಜವು ಮತ್ತೆ ಚಿಗುರಿ ಮರವಾಗಲಾರದೊ ಹಾಗೆಯೆ ಅವರ ಈ ಆಸೆಗಳೂ ಮತ್ತೆ ಅವರಲ್ಲಿ ಭೋಗಾಸಕ್ತಿಯನ್ನು ಹುಟ್ಟಿಸಲಾರವು. ಲೋಹದ ಕತ್ತಿಯು ಸ್ಪರ್ಶಮಣಿಯ ಸಂಪರ್ಕ ದಿಂದ ಚಿನ್ನದ ಕತ್ತಿಯಾದಮೇಲೆ ಅದಕ್ಕೆ ಕತ್ತಿಯ ಆಕಾರವಿರುತ್ತದೆಯೇ ಹೊರತು, ಅದರಿಂದ ಯಾರನ್ನೂ ಹಿಂಸಿಸಲಾಗುವುದಿಲ್ಲ—ಈ ದೃಷ್ಟಾಂತದಿಂದ ಶ್ರೀರಾಮಕೃಷ್ಣರು ಈ ಮೇಲಿನ ವಿಷಯವನ್ನು ವಿವರಿಸುತ್ತಿದ್ದರು.

18. ಇಂಥ ಸ್ಥಿತಿಯನ್ನು ಮುಟ್ಟಿದ ಸಾಧಕರನ್ನು ಸತ್ಯಸಂಕಲ್ಪರೆಂದು ಕರೆಯು ತ್ತವೆ ಉಪನಿಷತ್ತುಗಳು. ಅಂದರೆ ಅವರ ಒಳಗೆ ಉದಿಸುವ ಸಂಕಲ್ಪಗಳು ಸತ್ಯವಲ್ಲದೆ ಎಂದೂ ಮಿಥ್ಯವಾಗುವುದಿಲ್ಲ. ಭಾವಮುಖ ಸ್ಥಿತಿಯಲ್ಲಿದ್ದ ಶ್ರೀರಾಮಕೃಷ್ಣರ ಮನಸ್ಸಿನಲ್ಲೇಳುವ ಆಲೋಚನೆಗಳೆಲ್ಲವನ್ನೂ ಪರೀಕ್ಷಿಸಿ ಅವು ಸತ್ಯವೆಂದು ನಮಗೆ ತೋರಿ ದುದರಿಂದಲೇ ಮೇಲಿನ ಉಪನಿಷತ್ತಿನ ಮಾತನ್ನು ನಂಬಲು ನಮಗೆ ಸಾಧ್ಯವಾಯಿತು. ಯಾವುದೇ ಆಹಾರವಸ್ತುವನ್ನು ಅವರು ಸ್ವೀಕರಿಸಲು ಹಿಂಜರಿದರೆ ಅದು ದೋಷಯುಕ್ತ ವಾಗಿತ್ತೆಂದು ಅನಂತರ ವಿಚಾರಿಸಿದಾಗ ತಿಳಿದುಬರುತ್ತಿತ್ತು. ಯಾರಾದರೂ ವ್ಯಕ್ತಿಗೆ ಭಗವದ್ವಿಷಯವನ್ನು ಹೇಳಲು ಹೋದಾಗ ಅವರ ಗಂಟಲು ಹಿಡಿದುಹೋದರೆ ಆ ವ್ಯಕ್ತಿ ನಿಜವಾಗಿಯೂ ಆ ವಿಷಯವನ್ನು ಕೇಳಲು ಅನರ್ಹನೆಂಬುದು ಸಾಬೀತಾಗುತ್ತಿತ್ತು. ಯಾವುದಾದರೂ ವ್ಯಕ್ತಿಯ ಬಗ್ಗೆ ಇವನು ಆಧ್ಯಾತ್ಮಿಕತೆಯನ್ನು ಪಡೆದಿರುವನೆಂದಾಗಲಿ, ಅಥವಾ ಇಲ್ಲವೆಂದಾಗಲಿ ಅವರು ಹೇಳಿದರೆ ಅದರಂತೆಯೇ ಆಗಿರುತ್ತಿತ್ತು. ಯಾವನಾ ದರು ವ್ಯಕ್ತಿಯನ್ನು ನೋಡಿದಾಗ ಅವರಲ್ಲಿ ಯಾವುದೇ ವಿಶೇಷ ದೈವೀಭಾವವುಂಟಾದರೆ ಆ ವ್ಯಕ್ತಿ ಆ ಭಾವದವನೆಂಬುದು ಸಿದ್ಧವಾಗಿರುತ್ತಿತ್ತು. ಆಂತರಿಕ ಭಾವಪ್ರೇರಣೆಯಿಂದ ಅವರು ಯಾರಿಗಾದರೂ ಏನಾದರೂ ಇದ್ದಕ್ಕಿದ್ದಂತೆ ಹೇಳಿದರೆ ಆ ವ್ಯಕ್ತಿ ಆ ಮಾತಿನಲ್ಲಿ ವಿಶೇಷ ಬೆಳಕನ್ನು ಕಂಡು ಅವನ ಜೀವನವೇ ಪರಿವರ್ತಿತವಾಗುತ್ತಿತ್ತು. ಹೀಗೆ ಶ್ರೀರಾಮಕೃಷ್ಣರ ವಿಷಯದಲ್ಲಿ ಬಹಳಷ್ಟು ಹೇಳಬಹುದು.

19. ಶ್ರೀರಾಮಕೃಷ್ಣರು ವಾತ್ಸಲ್ಯಭಾವದಿಂದ ಬಾಲರಾಮಚಂದ್ರನನ್ನು ಪೂಜಿಸುತ್ತಿದ್ದ ಬಗ್ಗೆ ನಾವು ಹೇಳುತ್ತಿದ್ದೆವು. ಕುಲದೇವತೆಯಾದ ಶ್ರೀರಘುವೀರನ ಪೂಜೆಗಾಗಿ ಅವರು ಮೊದಲೇ ರಾಮಮಂತ್ರವನ್ನು ಪಡೆದಿದ್ದರು. ಆದರೆ ಈ ಹಿಂದೆ

ಅವರು ಶ್ರೀರಾಮನನ್ನು ಪ್ರಭುವೆಂದು ಮಾತ್ರ ಕಾಣುತ್ತಿದ್ದರೇ ಹೊರತು ಬೇರೆ ಯಾವ ಭಾವದಿಂದಲೂ ಕಾಣುತ್ತಿರಲಿಲ್ಲ. ಈಗ ಅವರಲ್ಲಿ ವಾತ್ಸಲ್ಯಭಾವ ಉಟಾಗಿದೆ. ಇದಕ್ಕನುಗುಣವಾದ ಸಾಧನೆ ಮಾಡಲು ಹೊಸ ಮಂತ್ರವನ್ನು ಸ್ವೀಕರಿಸಬಯಸಿದರು. ಜಟಾಧಾರಿಯೂ ತನ್ನ ಇಷ್ಟಮಂತ್ರವನ್ನು ಸಂತೋಷದಿಂದ ಅವರಿಗಿತ್ತನು. ಈ ಮಂತ್ರದ ಸಹಾಯದಿಂದ ವಾತ್ಸಲ್ಯಭಾವದ ಸಾಧನೆ ಮಾಡಿ ಬಾಲರಾಮನ ದಿವ್ಯ ದರ್ಶನವನ್ನು ಪಡೆದರು. ಶ್ರೀರಾಮನು ಕೇವಲ ದಶರಥ ಪುತ್ರನಲ್ಲ, ಪ್ರತಿ ಶರೀರ ದಲ್ಲಿಯೂ ಜೀವಭಾವದಲ್ಲಿ ಪ್ರಕಾಶಿಸುತ್ತಿರುವವನು ; ಮತ್ತೆ ಅವನು ಜಗದ್ರೂಪದಲ್ಲಿ ಪ್ರಕಾಶಿಸುತ್ತಿದ್ದಾಗ್ಯೂ ಅವನು ಜಗತ್ತಿನ ಎಲ್ಲ ಪದಾರ್ಥಗಳನ್ನು ಮೀರಿರುವವನು, ಸದಾ ಮಾಯಾರಹಿತನೂ ನಿರ್ಗುಣನೂ ಆಗಿರುವನು—ಎಂಬುದನ್ನು ಶ್ರೀರಾಮಕೃಷ್ಣರು ಅನುಭವದಿಂದ ಅರಿತುಕೊಂಡರು,

ಜಟಾಧಾರಿಯು ತನ್ನೊಡನಿದ್ದ 'ರಾಮಲಾಲ'ನ ಜೀವಂತ ಮೂರ್ತಿಯನ್ನೂ ಶ್ರೀರಾಮಕೃಷ್ಣರಿಗೆ ಕೊಟ್ಟಿದ್ದನು. ಏಕೆಂದರೆ ತಾನಿನ್ನು ಶ್ರೀರಾಮಕೃಷ್ಣರೊಡನೆ ಇರುವೆನೆಂದು 'ರಾಮಲಾಲ'ನು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದನಂತೆ. ಆ ಮೂರ್ತಿಯು ಶ್ರೀರಾಮಕೃಷ್ಣರು ಮತ್ತು ಜಟಾಧಾರಿಯೊಡನೆ ನಡೆಸಿದ ಅದ್ಭುತ ಲೀಲೆಯನ್ನು ಬೇರೆ ಕಡೆ ವಿವರಿಸಿರುವೆವು.*

20. ಶ್ರೀರಾಮಕೃಷ್ಣರು ವಾತ್ಸಲ್ಯಭಾವದ ಸಾಧನೆ ಮಾಡುತ್ತಿರುವಾಗ ಭೈರವೀ ಬ್ರಾಹ್ಮಣಿಯೂ ದಕ್ಷಿಣೇಶ್ವರದಲ್ಲಿದ್ದಳು. ವೈಷ್ಣವ ಧರ್ಮದ ಪಂಚಭಾವ ಸಾಧನೆಗಳಲ್ಲಿ ಅವಳು ತುಂಬ ಪರಿಣತಳಿದ್ದಳೆಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ವಾತ್ಸಲ್ಯ ಹಾಗೂ ಮಧುರ ಭಾವಸಾಧನೆಗಳಲ್ಲಿ ಅವಳು ಶ್ರೀರಾಮಕೃಷ್ಣರಿಗೆ ಏನಾ ದರೂ ಸಹಾಯ ಮಾಡಿದಳೋ ಇಲ್ಲವೊ ತಿಳಿಯದು. ಅವಳು ಶ್ರೀರಾಮಕೃಷ್ಣರಲ್ಲಿ ಬಾಲಗೋಪಾಲನನ್ನು ಕಾಣುತ್ತ ವಾತ್ಸಲ್ಯ ಭಾವದಿಂದ ಅವರ ಸೇವೆ ಮಾಡುತ್ತಿದ್ದ ಳೆಂಬುದು ನಿಜ. ಇದರಿಂದ ತಮ್ಮ ಸಾಧನೆಗೂ ಆಕೆಯಿಂದ ಏನಾದರೂ ನೆರವು ಪಡೆದಿರಬಹುದೆಂದು ಊಹಿಸಬಹುದು. ವಿಶೇಷ ಸಹಾಯವನ್ನೇನೂ ಪಡೆಯ ದಿದ್ದರೂ, ಅವಳು ಆ ರೀತಿ ಸಾಧನೆ ಮಾಡುವುದನ್ನು ನೋಡಿ ಮತ್ತು ಅದರ ವಿಷಯ ವನ್ನೂ ಅದರ ಪ್ರಶಂಸೆಯನ್ನೂ ಅವಳ ಬಾಯಿಂದ ಕೇಳಿ ಅವರಲ್ಲಿಯೂ ಈ ಸಾಧನೆ ಗಳನ್ನು ಮಾಡುವ ಬಯಕೆ ಪ್ರಬಲವಾಗಿದ್ದಿರಬೇಕು.

---

* ಗುರುಭಾವ– ಉತ್ತರಾರ್ಧ- ಅಧ್ಯಾಯ-2

ಹದಿಮೂರನೆಯ ಅಧ್ಯಾಯ

ಮಧುರಭಾವವನ್ನು ಕುರಿತು

1. ಸಾಧಕನ ಅಂತರಂಗ ಹೋರಾಟ ಮತ್ತು ಗುರಿ 2. ಅಸಾಧಾರಣ ಸಾಧಕರ ಸ್ವಾಭಾವಿಕ ಪ್ರವೃತ್ತಿಯೇ ನಿರ್ವಿಕಲ್ಪ ಸಮಾಧಿಯಲ್ಲಿರುವುದು 3. 'ಶೂನ್ಯ' ಮತ್ತು 'ಪೂರ್ಣ' ಒಂದೇ 4. ಅದ್ವೈತ ಭಾವದ ಸ್ವರೂಪ 5 ಶಾಂತಾದಿ ಪಂಚ ಭಾವಗಳು 6. ಅವುಗಳ ಸ್ವರೂಪ 7. ಭಾವಸಾಧನೆಗಳಲ್ಲಿ ಪ್ರೇಮವೇ ಪರಮ, ಸಗುಣ ಈಶ್ವರನೇ ಆಲಂಬನ 8. ಪ್ರೇಮದಲ್ಲಿ ಐಶ್ವರ್ಯ ಜ್ಞಾನವು ಲೋಪ ವಾಗುತ್ತದೆ 9. ಶಾಂತಾದಿ ಭಾವಗಳಿಂದ ಅದ್ವೈತ ಸಿದ್ಧಿ 10. ಈ ವಿಷಯದಲ್ಲಿ ಆಕ್ಷೇಪಣೆ ಮತ್ತು ಪರಿಹಾರ 11. ಬೇರೆ ಬೇರೆ ಯುಗಗಳಲ್ಲಿ ಬೇರೆ ಬೇರೆ ಭಾವ ಸಾಧನೆ ಪ್ರಧಾನ 12. ದೇಶವಿದೇಶಗಳಲ್ಲಿ ಈ ಪಂಚಭಾವಗಳ ಪರಿಣತಿ 13. ಸಾಧಕನ ಭಾವದ ಗಭೀರತೆಯನ್ನು ಸೂಚಿಸುವುದಾವುದು 14. ಶ್ರೀರಾಮಕೃಷ್ಣರು ಎಲ್ಲ ಭಾವಗಳಲ್ಲೂ ಸಿದ್ಧಿಯನ್ನು ಪಡೆದುದು ಏನನ್ನು ಸೂಚಿಸುತ್ತದೆ 15. ಆಧ್ಯಾತ್ಮಿಕ ವೀರರ ಸಾಧನಕಥೆಯ ಬಗ್ಗೆ ಸಾಕಷ್ಟು ಮಾಹಿತಿ ದೊರೆಯದಿರುವುದನ್ನು ಕುರಿತು 16. ಉದಾಹರಣೆ : ಶ್ರೀಕೃಷ್ಣ, ಬುದ್ಧ. ಜೀಸಸ್, ಶಂಕರ ಮತ್ತು ಚೈತನ್ಯ 17. ಮಧುರಭಾವ ಮತ್ತು ವೈಷ್ಣವ ಆಚಾರ್ಯರು 18. ಬೃಂದಾವನ ಲೀಲೆಯ ಐತಿಹಾಸಿಕತೆ 19. ಚೈತನ್ಯನು ಪುರುಷರನ್ನೂ ಮಧುರಭಾವ ಸಾಧನೆಗೆ ಪ್ರಚೋದಿಸಲು ಕಾರಣ 20 ಆ ಕಾಲದಲ್ಲಿ ದೇಶದ ಆಧ್ಯಾತ್ಮಿಕ ಪರಿಸ್ಥಿತಿ ಮತ್ತು ಶ್ರೀಚೈತನ್ಯನ ಸುಧಾರಣೆ 21. ಮಧುರಭಾವದ ಸ್ಥೂಲ ವಿವರಣೆ 22. ಪ್ರೇಯಸಿಯು ಪ್ರಿಯನನ್ನು ಪ್ರೀತಿಸುವಂತೆ ದೇವರನ್ನು ಪ್ರೀತಿಸಬೇಕು 23. ಮಧುರಭಾವದಲ್ಲಿ ಎಲ್ಲ ಭಾವಗಳೂ ಒಳಕೊಳ್ಳುತ್ತವೆ 24. ಮಧುರಭಾವದ ಮೂಲಕ ಚೈತನ್ಯನು ಹೇಗೆ ಲೋಕಹಿತವನ್ನುಂಟುಮಾಡಿದನು 25. ವೇದಾಂತಿಯ ದೃಷ್ಟಿಯಲ್ಲಿ ಮಧುರಭಾವ 26. ರಾಧೆಯ ಭಾವವನ್ನು ಪಡೆಯುವುದೇ ಮಧುರ ಭಾವದ ಗುರಿ

1. ಸಾಧಕನಾಗದೆ ಸಾಧಕ ಜೀವನದ ಇತಿಹಾಸವನ್ನು ತಿಳಿಯುವುದು ಬಹಳ ಕಷ್ಟ. ಏಕೆಂದರೆ, ಸಾಧನೆಯು ಸೂಕ್ಷ್ಮ ಭಾವರಾಜ್ಯಕ್ಕೆ ಸಂಬಂಧಿಸಿದ ವಿಷಯ. ಅಲ್ಲಿ ರೂಪರಸಾದಿ ಸ್ಥೂಲ ವಿಷಯಗಳು ಗೋಚರಿಸುವುದಿಲ್ಲ, ಬಾಹ್ಯ ವಸ್ತುಗಳಿಗೆ ಮತ್ತು ವ್ಯಕ್ತಿಗಳಿಗೆ ಸಂಬಂಧಿಸಿದ ಘಟನಾವಳಿಗಳಾವುವೂ ಅಲ್ಲಿ ನಡೆಯುವುದಿಲ್ಲ. ರಾಗದ್ವೇಷಾದಿ ಗಳಿಂದ ಬದ್ಧರಾಗಿ ಪ್ರಾಪಂಚಿಕ ಸುಖಭೋಗಗಳಿಗಾಗಿ ಜನರು ನಾ ಮುಂದು ತಾ ಮುಂದು

ಎಂದು ಮನುಷ್ಯನನ್ನುಗ್ಗುವ ಆ ಪ್ರಚಂಡ ಕ್ರಿಯಾಶೀಲತೆ ಅಲ್ಲಿ ಕಾಣಿಸುವುದಿಲ್ಲ, ಅಲ್ಲಿ ಇರವುದು ಸಾಧಕನ ನಿಜ ಅಂತರಂಗ ಮತ್ತು ನಿರಂತರ ಪ್ರವಹಿಸುವ ಅದರ ಜನ್ಮಜನ್ಮಾಂತರದ ಸಂಸ್ಕಾರಗಳು. ಬಾಹ್ಯ ವಸ್ತು ಮತ್ತು ವ್ಯಕ್ತಿಗಳೊಡನೆ ಸಂಘರ್ಷವುಂಟಾಗಿ ಉಚ್ಚ ಭಾವ ಮತ್ತು ಲಕ್ಷ್ಯದ ಕಡೆ ಆಕರ್ಷಣೆಯೆ ಅಲ್ಲಿ ಕಂಡುಬರುತ್ತದೆ. ಈ ಗುರಿಯನ್ನು ಸಾಧಿಸಲು ಅಡ್ಡಿ ಬರುವ ಸಂಸ್ಕಾರಗಳ ಜತೆ ಕೊನೆಯಿಲ್ಲದ ಆಂತರಿಕ ಹೋರಾಟ ಅಲ್ಲಿ ನಡೆಯುತ್ತದೆ. ಬಾಹ್ಯವಸ್ತುಗಳಿಂದ ಮನಸ್ಸನ್ನು ಹಿಂತೆಗೆದುಕೊಂಡು ತನ್ನಲ್ಲಿ ತಾನು ಮುಳುಗುವ ಕ್ರಿಯೆ ಅಲ್ಲಿ ನಡೆಯುವುದು. ಅಂತರಂಗದಲ್ಲಿ ಆಳ–ಆಳಕ್ಕೆ ಮುಳುಗಿ ಹೆಚ್ಚು ಹೆಚ್ಚು ಸೂಕ್ಷ್ಮವಾದ ಆಧ್ಯಾತ್ಮಿಕ ಸತ್ಯವನ್ನು ಅರಿಯಬೇಕು ಅಲ್ಲಿ. ಕೊನೆಯಲ್ಲಿ ತನ್ನ ವ್ಯಕ್ತಿತ್ವದ ತಳಾತಳವನ್ನು ಮುಟ್ಟಿ ಅದರೊಡನೆ ಒಂದಾಗಬೇಕು. ಇನ್ನೂ ಹಳೆಯ ಸಂಸ್ಕಾರಗಳೆಲ್ಲ ನಾಶವಾಗದೆ ಉಳಿದಿದ್ದರೆ ಸಾಧಕನು ಈ ಅದ್ವಯ ಸ್ಥಿತಿಯಿಂದ ಕೆಳಗಿಳಿದು ಬಂದು ಬಾಹ್ಯ ಜಗತ್ತನ್ನು ಅನುಭವಿಸಬೇಕು. ಹೀಗೆ ಸಮಾಧಿಗೆ ಏರುವುದು ಮತ್ತು ಹೊರ ಜಗತ್ತಿಗೆ ಇಳಿದು ಬರುವುದು—ಇದು ಮತ್ತೆ ಮತ್ತೆ ಆಗುತ್ತಿರುತ್ತದೆ.

2. ಆದರೆ ಆಧ್ಯಾತ್ಮಿಕ ಇತಿಹಾಸದಲ್ಲಿ ಕೆಲವರು ಅಪೂರ್ವ ಮಹಾ ಪುರುಷರು ಇರುವರು. ಅವರ ಸ್ವಾಭಾವಿಕ ಸ್ಥಿತಿಯೇ ಪ್ರಜ್ಞಾತೀತಾವಸ್ಥೆಯಾಗಿರುತ್ತದೆ. ಅವರು ಜನಹಿತಕ್ಕಾಗಿ ಬಲಾತ್ಕಾರದಿಂದ ತಮ್ಮ ಮನಸ್ಸನ್ನು ಸಾಮಾನ್ಯಸ್ಥಿತಿಗೆ ಎಳೆದು ತರುತ್ತಾರೆ. ಶ್ರೀರಾಮಕೃಷ್ಣರ ಮಾನಸಿಕ ಸ್ಥಿತಿಯೂ ಇಂಥದೇ ಎಂದು ಅವರ ಜೀವನದ ಅಧ್ಯಯನದಿಂದ ತಿಳಿದು ಬರುವುದು. ಆ ರೀತಿ ತಿಳಿವಳಿಕೆ ಉಂಟಾಗದಿದ್ದರೆ ಅದಕ್ಕೆ ಗ್ರಂಥಕರ್ತನ ನ್ಯೂನತೆಯೇ ಕಾರಣ. ಏಕೆಂದರೆ ಶ್ರೀರಾಮಕೃಷ್ಣರು ನಮಗೆ ಮತ್ತೆ ಮತ್ತೆ ಹೇಳಿರುವರು. "ಸಣ್ಣ ಪುಟ್ಟ ಆಸೆಯನ್ನು ಇಟ್ಟುಕೊಂಡು ಅದನ್ನು ಆಧರಿಸಿ ನಿಮ್ಮೆಲ್ಲರ ಸಲುವಾಗಿ ಮನಸ್ಸನ್ನು ಕೆಳಗಿರಿಸಿಕೊಂಡಿದ್ದೇನೆ. ಇಲ್ಲದಿದ್ದರೆ ಅದರ ಸ್ವಾಭಾವಿಕ ಪ್ರವೃತ್ತಿ ಅಖಂಡದಲ್ಲಿ ಒಂದಾಗಿರುವುದು".

3. ಸಮಾಧಿಯಲ್ಲಿ ಅನುಭವಕ್ಕೆ ಬರುವ ಅದ್ವಯ ವಸ್ತುವನ್ನು ಕೆಲವು ಋಷಿಗಳು ಎಲ್ಲ ಭಾವಗಳ ಅಭಾವ ಅಥವಾ 'ಶೂನ್ಯ' ಎಂದು ಕರೆಯುತ್ತಾರೆ. ಇನ್ನು ಕೆಲವರು ಎಲ್ಲ ಭಾವಗಳ ಸಮ್ಮಿಲನ, ಅಂದರೆ 'ಪೂರ್ಣ' ಎಂದು ಕರೆಯುತ್ತಾರೆ. ಎಲ್ಲರು ಹೇಳುವುದೂ ಒಂದೇ. ಏಕೆಂದರೆ, ಅದೇ ಎಲ್ಲ ವಸ್ತುಗಳ ಉತ್ಪತ್ತಿ ಮತ್ತು ಲಯಸ್ಥಾನ. ಭಗವಾನ್ ಬುದ್ಧನು ಯಾವುದನ್ನು ಸರ್ವಭಾವಗಳ ಲಯಸ್ಥಾನ, ಶೂನ್ಯ ಎಂದು ಕರೆದನೊ ಅದನ್ನೇ ಶಂಕರನು ಸರ್ವಭಾವಗಳ ಮಿಲನಭೂಮಿ, ಪೂರ್ಣ ಎಂದು ಕರೆಯುತ್ತಾನೆ. ಮುಂದಿನ ಬೌದ್ಧಾಚಾರ್ಯರ ಮತಗಳನ್ನು ಬಿಟ್ಟು ಇವರಿಬ್ಬರ ಅಭಿಪ್ರಾಯವನ್ನು ವಿಚಾರ ಮಾಡಿದರೆ ನಾವು ಈ ಮೇಲಿನ ಸಿದ್ಧಾಂತಕ್ಕೆ ಬರಬಹುದು.

4. ಶೂನ್ಯ ಅಥವಾ ಪೂರ್ಣ ಎಂದು ಯಾವ ಅದ್ವೈತಾವಸ್ಥೆಯನ್ನು ಕರೆಯುತ್ತೇವೆಯೊ ಅದನ್ನೇ ಉಪನಿಷತ್ತು ಅಥವಾ ವೇದಾಂತ ಭಾವಾತೀತ ಅವಸ್ಥೆ ಎಂದು ನಿರ್ದೇಶಿಸುತ್ತದೆ. ಏಕೆಂದರೆ ಆ ಸ್ಥಿತಿಗೆ ಏರಿದವನ ಮನಸ್ಸು ಈಶ್ವರನ ಈ ಲೀಲಾ

ಪ್ರಪಂಚಕ್ಕೆ ಸಂಬಂಧಿಸಿದ ಎಲ್ಲ ವಸ್ತುಗಳನ್ನು ಎಲ್ಲ ಭಾವಗಳನ್ನು ಮೀರಿಹೋಗಿ ಸಮರಸದಲ್ಲಿ ಒಂದಾಗುವುದು. ಆದ್ದರಿಂದ ಈ ಅದ್ವೈತಸ್ಥಿತಿಯು ಶಾಂತದಾಸ್ಯಾದಿ ಭಾವಗಳನ್ನು ಮೀರಿದ್ದು. ಸಾಧಕನು ಈ ಭಾವಗಳ ಮೂಲಕ ಭಗವಂತನೊಡನೆ ಒಂದು ಸಂಬಂಧವನ್ನು ಬೆಳಸುತ್ತಾನೆ. ಆದರೆ ಅದ್ವೈತದಲ್ಲಿ ಯಾವ ಸಂಬಂಧವೂ ಇರುವುದಿಲ್ಲ. ಸಾಮಾನ್ಯ ಮಾನವನು ಎಲ್ಲ ಭೋಗಸುಖಗಳನ್ನೂ ಮೀರಿಹೋಗಿ ಉನ್ನತ ಆಧ್ಯಾತ್ಮಿಕ ಸ್ಥಿತಿಯನ್ನು ಮುಟ್ಟಿದಾಗ ಈ ಅದ್ವೈತ ಅನುಭವವನ್ನು ಪಡೆಯುವನು.

5. ಈ ಅದ್ವೈತ ಭಾವವನ್ನು ಬಿಟ್ಟರೆ ಆಧ್ಯಾತ್ಮಿಕ ರಾಜ್ಯದಲ್ಲಿ ಶಾಂತ, ದಾಸ್ಯ, ಸಖ್ಯ, ವಾತ್ಸಲ್ಯ, ಮತ್ತು ಮಧುರ–ಎಂಬ ಪಂಚಭಾವ ಸಾಧನೆಗಳಿವೆ. ಇವುಗಳೆಲ್ಲದರ ಧ್ಯೇಯವಸ್ತು ಈಶ್ವರ ಅಥವಾ ಸಗುಣಬ್ರಹ್ಮ. ನಿತ್ಯ-ಶುದ್ಧ–ಬುದ್ಧ–ಮುಕ್ತ ಸ್ವಭಾವದವನಾದ, ಸರ್ವಶಕ್ತನಾದ, ಸರ್ವನಿಯಂತೃವಾದ ಈಶ್ವರನ ಮೇಲೆ ಇವುಗಳಲ್ಲಿ ಯಾವುದಾದರೊಂದು ಭಾವವನ್ನು ಆರೋಪಿಸಿ ಭಕ್ತನು ಅವನ ಪ್ರತ್ಯಕ್ಷ ದರ್ಶನವನ್ನು ಪಡೆಯಲು ಪ್ರಯತ್ನಿಸುತ್ತಾನೆ. ಈಶ್ವರನು ಸಾಧಕನ ಭಕ್ತಿಗೆ ಮೆಚ್ಚಿ ಆ ಭಾವಕ್ಕನುಗುಣವಾದ ಶರೀರವನ್ನು ಧರಿಸಿ ಅವನಿಗೆ ದರ್ಶನವಿತ್ತು ಕೃತಾರ್ಥನನ್ನಾಗಿಸುವನು. ಹೀಗೆ ಈಶ್ವರನು ಬೇರೆಬೇರೆ ಯುಗಗಳಲ್ಲಿ ಅನೇಕ ಬಗೆಯ ಭಾವಮಯ, ಚಿನ್ಮಯ ರೂಪವನ್ನು ಧರಿಸಿರುವನು. ಅಷ್ಟೇ ಅಲ್ಲ, ಸ್ಥೂಲ ಮನುಷ್ಯ ರೂಪದಲ್ಲಿಯೂ ಅವತರಿಸಿ ಸಾಧಕನ ಅಭೀಷ್ಟವನ್ನು ಪೂರ್ಣಗೊಳಿಸಿರುವನು. ಈ ವಿಚಾರ ಶಾಸ್ತ್ರಗಳಲ್ಲಿವೆ.

6. ಮಾನವನು ಸಂಸಾರದಲ್ಲಿರುವಾಗ ವಿವಿಧ ಭಾವಗಳ ಮೂಲಕ ಇತರರೊಡನೆ ಸಂಬಂಧ ಬೆಳಸುವನು. ಶಾಂತ ದಾಸ್ಯಾದಿ ಭಾವಗಳು ಈ ಸಾಂಸಾರಿಕ ಭಾವಗಳ ಶುದ್ಧ ಮತ್ತು ಸೂಕ್ಷ್ಮರೂಪ. ಸಂಸಾರದಲ್ಲಿ ತಂದೆ ತಾಯಿ, ಗಂಡ ಹೆಂಡತಿ ಸ್ನೇಹಿತ ಒಡೆಯ ಆಳು ಪುತ್ರ ಪುತ್ರಿ, ರಾಜ ಪ್ರಜೆ ಗುರು ಶಿಷ್ಯ–ಇವರುಗಳ ನಡುವೆ ಒಂದೊಂದು ರೀತಿಯ ವಿಶೇಷ ಸಂಬಂಧ ಇರುತ್ತದೆ ಮತ್ತು ಇತರರುಗಳೊಡನೆ, ಅವರು ಶತ್ರುಗಳಲ್ಲದಿದ್ದರೆ, ಶ್ರದ್ಧಾಪೂರ್ಣವಾದ ಶಾಂತರೀತಿಯ ವ್ಯವಹಾರವಿರುತ್ತದೆ. ಆಚಾರ್ಯರು ಈ ಸಂಬಂಧಗಳನ್ನು ಶಾಂತವೇ ಮುಂತಾದ ಐದು ಶ್ರೇಣಿಗಳಾಗಿ ವಿಂಗಡಿಸಿರುವರು. ಸಾಧಕನು ತನ್ನ ಅಧಿಕಾರಕ್ಕೆ ತಕ್ಕಂತೆ ಇವುಗಳಲ್ಲಿ ಯಾವುದಾದರೊಂದನ್ನು ಭಗವಂತನ ಮೇಲೆ ಆರೋಪಿಸಿ ಸಾಧನೆ ಮಾಡಬೇಕು. ಏಕೆಂದರೆ, ಮನುಷ್ಯನಿಗೆ ಈ ಶಾಂತಾದಿ ಭಾವಗಳ ಪರಿಚಯ ಯಾವಾಗಲೂ ಇರುತ್ತದೆ, ಅವುಗಳಲ್ಲಿ ಒಂದನ್ನು ಆಶ್ರಯಿಸಿ ಭಗವಂತನನ್ನು ಪಡೆಯುವುದು ಅವನಿಗೆ ಸುಗಮವಾಗುತ್ತದೆ. ಅಷ್ಟೇ ಅಲ್ಲದೆ, ಈ ಭಾವಗಳನ್ನು ಆಶ್ರಯಿಸಿರುವ ಮೊದಲು ಕೆಟ್ಟಹಾದಿಗೆ ಎಳೆಯುತ್ತಿದ್ದ ರಾಗ ದ್ವೇಷಾದಿ ಪ್ರವೃತ್ತಿಗಳು ಈಗ ಅವನ ಮನಸ್ಸನ್ನು ಇನ್ನೂ ಭಗವಂತನ ಕಡೆಗೇ ಹೋಗುವಂತೆ ಮಾಡುತ್ತವೆ. ರಾಗವು ಭಗವದನುರಾಗವಾಗುತ್ತದೆ. ದ್ವೇಷವು ಭಗವಂತನ ಹಾದಿಯಲ್ಲಿ ಬರುವ ಅಡೆತಡೆಗಳ ಮೇಲೆ ಕೋಪವಾಗಿ ಪರಿಣಮಿಸುತ್ತದೆ. ಆರಾಧ್ಯ ವಸ್ತುವಾದ ಈಶ್ವರನ ಪ್ರೇಮ–ಸೌಂದರ್ಯವನ್ನು ಸವಿಯುವುದರಲ್ಲೆ ಅವನ ಮನಸ್ಸು ಉನ್ಮತ್ತವಾಗುತ್ತದೆ. ಈಶ್ವರನ

ಪುಣ್ಯದರ್ಶನವನ್ನು ಪಡೆದು ಕೃತಾರ್ಥರಾದ ವ್ಯಕ್ತಿಗಳಲ್ಲಿ ಕಾಣುವ ಅಪೂರ್ವ ಆಧ್ಯಾತ್ಮಿಕ ಶೋಭೆಯನ್ನು ಕಂಡು ಅದನ್ನು ತಾನೂ ಪಡೆಯಬೇಕೆಂದು ಅವನ ಮನಸ್ಸು ಹಾತೊರೆಯುವುದು.

7. ಶಾಂತದಾಸ್ಯಾದಿ ಭಾವಗಳನ್ನು ಈಶ್ವರನ ಮೇಲೆ ಆರೋಪಿಸುವುದನ್ನು ಮನುಷ್ಯನು ಯಾವುದೇ ಒಂದು ಸಮಯದಲ್ಲಾಗಲಿ ಅಥವಾ ಯಾವುದೇ ಒಂದು ವ್ಯಕ್ತಿಯಿಂದಾಗಲಿ ಕಲಿಯಲಿಲ್ಲ. ಯುಗಯುಗಗಳಲ್ಲಿಯೂ ಅನೇಕ ಮಹಾಪುರುಷರು ಈ ಭಾವಗಳನ್ನು ಆಶ್ರಯಿಸಿ ಸಾಧನೆ ಮಾಡಿ, ಅದರ ಮೂಲಕ ಭಗವಂತನನ್ನು ಪಡೆದು ಈ ಮಾರ್ಗವನ್ನು ಮನುಷ್ಯನಿಗೆ ತೋರಿಸಿಕೊಟ್ಟಿರುವರು. ಈ ಮಹಾಪುರುಷರ ಜೀವನವನ್ನು ನೋಡಿದಾಗ ನಮಗೆ ಸ್ಪಷ್ಟವಾಗುವುದೇನೆಂದರೆ ಪ್ರೇಮವೊಂದೇ ಈ ಭಾವ ಸಾಧನೆಯ ತಳಹದಿ ಮತ್ತು ಈಶ್ವರನ ಯಾವುದಾದರೂ ವ್ಯಕ್ತಿತ್ವವನ್ನು ಅವಲಂಬಿಸಿಯೇ ಈ ಪ್ರೇಮ ಹರಿಯುವುದು. ಎಲ್ಲಿಯವರೆಗೆ ಅದ್ವೈತಭಾವವು ಮನುಷ್ಯನಿಗೆ ಸಿದ್ಧಿಸುವುದಿಲ್ಲವೊ ಅಲ್ಲಿಯವರೆಗೆ ಅವನು ಈಶ್ವರನ ಯಾವುದಾದರೂ ಸಾಕಾರ ವ್ಯಕ್ತಿತ್ವವನ್ನು ಆರಾಧಿಸಲೇ ಬೇಕಾಗುತ್ತದೆ.

8. ಪ್ರೇಮದ ಸ್ವರೂಪದ ಬಗ್ಗೆ ವಿಚಾರ ಮಾಡಿದಾಗ ನಮಗೆ ತಿಳಿದುಬರುವ ಒಂದು ವಿಷಯವೇನೆಂದರೆ ಪ್ರೇಮಿಗಳಿಬ್ಬರ ನಡುವಿನ ಭೇದಜ್ಞಾನವು ಕ್ರಮೇಣ ಕಡಿಮೆಯಾಗುವುದು–ಪರಸ್ಪರರ ಶಕ್ತಿವಿಶೇಷಗಳ ಕಡೆ ಅವರ ಗಮನ ಹರಿಯುವುದಿಲ್ಲ, ಭಗವಂತನ ವಿಷಯದಲ್ಲಿಯೂ ಹೀಗೆಯೇ ಆಗುವುದು. ಭಗವಂತನ ಐಶ್ವರೀಯ ಶಕ್ತಿಗಳೆಲ್ಲ ಮರೆಯಾಗಿ ಕೇವಲ ಒಂದು ಪ್ರೇಮಾಸ್ಪದ ವ್ಯಕ್ತಿಯಾಗಿ ಸಾಧಕನ ಮುಂದೆ ಕಾಣಿಸಿಕೊಳ್ಳುವನು ಇದರಿಂದಾಗಿ ಸಾಧಕನು ಪ್ರೇಮದಿಂದ ಈಶ್ವರನು ತನ್ನವನೆಂದೇ ಭಾವಿಸುತ್ತಾನೆ. ಅವನೊಡನೆ ಮಾತನಾಡುತ್ತಾನೆ. ಕೆಲವೊಮ್ಮೆ ಅವನ ಮೇಲೆ ಕೋಪ ಮಾಡಿಕೊಳ್ಳುತ್ತಾನೆ. ಕೆಲವೊಮ್ಮೆ ನಿಂದಿಸುತ್ತಾನೆ. ಹೀಗೆ ಈಶ್ವರನ ಐಶ್ವರ್ಯವನ್ನು ಮರೆತು ಅವನೊಡನೆ ಒಂದು ನಿಕಟ ಸಂಬಂಧವನ್ನು ಬೆಳೆಸುತ್ತಾನೆ ಈ ವಿಷಯದಲ್ಲಿ ಯಾವ ಭಾವವು ಹೆಚ್ಚು ಯಶಸ್ವಿಯಾಗುವುದೊ ಅದು ಈ ಐದು ಭಾವಗಳಲ್ಲಿ ಶ್ರೇಷ್ಠವಾದುದು. ಇವುಗಳಲ್ಲಿ ಮಧುರ ಭಾವವೇ ಅತ್ಯಂತ ಶ್ರೇಷ್ಠವಾದುದೆಂದು ಆಚಾರ್ಯರು ಹೇಳುತ್ತಾರೆ. ಇಲ್ಲದಿದ್ದರೆ ಈ ಎಲ್ಲ ಭಾವಗಳೂ ಭಗವಂತನನ್ನು ಪಡೆಯಲು ಸಮರ್ಥವಾದವುಗಳು ಎಂಬುದನ್ನು ಈ ಆಚಾರ್ಯರು ಹೇಳುತ್ತಾರೆ.

9. ಯಾವುದೇ ಒಂದು ಭಾವವು ತನ್ನ ಪೂರ್ಣತೆಯನ್ನು ಮುಟ್ಟಿದಾಗ ಸಾಧಕನು ತನ್ನ ಪ್ರಿಯನ ಸುಖವಲ್ಲಿಯೇ ತನ್ನ ಸುಖವನ್ನು ಕಾಣುತ್ತಾನೆ ಮತ್ತು ಅವನ ವಿರಹದಲ್ಲಿ ಅವನ ಚಿಂತೆಯಲ್ಲಿಯೇ ಮನಸ್ಸು ಮಗ್ನವಾಗಿ ಆಗಾಗ ತನ್ನ ಅಸ್ತಿತ್ವವನ್ನೇ ಮರೆತುಬಿಡುತ್ತಾನೆ. ಬೃಂದಾವನದ ವ್ರಜಗೋಪಿಯರು ತಮ್ಮ ಪ್ರಿಯ ಶ್ರೀಕೃಷ್ಣನ ಚಿಂತೆಯಲ್ಲಿ ತಮ್ಮ ಅಸ್ತಿತ್ವವನ್ನೇ ಮರೆಯುತ್ತಿದ್ದುದು ಮಾತ್ರವಲ್ಲದೆ, ಕೆಲವೊಮ್ಮೆ ತಮ್ಮನ್ನೇ ಶ್ರೀಕೃಷ್ಣನೆಂದು ಭಾವಿಸುತ್ತಿದ್ದರು. ಕ್ರಿಸ್ತನು ಶಿಲುಬೆಗೆ ಏರುವಾಗ

ಅನುಭವಿಸಿದ ಅಸಾಧ್ಯ ಕಷ್ಟವನ್ನು ತೀವ್ರವಾಗಿ ಚಿಂತಿಸುತ್ತ ಕೆಲವು ಸಾಧಕರು ಅದೇ ರೀತಿಯ ಕಷ್ಟವನ್ನು ಅನುಭವಿಸಿದ ಉದಾಹರಣೆಗಳಿವೆ.† ಆದ್ದರಿಂದ ಈ ಭಾವಗಳ ಸಹಾಯದಿಂದಲೂ ಸಾಧಕನು ತನ್ನ ಆರಾಧ್ಯ ವಸ್ತುವಿನೊಡನೆ ಪೂರ್ಣ ತನ್ಮಯತೆಯನ್ನು ಹೊಂದಿ ಅದ್ವೈತ ಭಾವವನ್ನು ಪಡೆಯಬಹುದು ಎಂಬುದು ಕಂಡುಬರುತ್ತದೆ. ಶ್ರೀರಾಮಕೃಷ್ಣರ ಸಾಧಕ ಜೀವನವು ಈ ವಿಷಯದಲ್ಲಿ ನಮಗೆ ಹೆಚ್ಚು ಬೆಳಕನ್ನು ತೋರಿಸುವುದು. ಪ್ರತಿಯೊಂದು ಭಾವಸಾಧನೆಯಲ್ಲಿ ಆ ಭಾವದ ಚರಮಾವಸ್ಥೆಯನ್ನು ಪಡೆದಾಗ ಅವರು ತಮ್ಮ ಪ್ರೇಮ ವಸ್ತುವಿನೊಡನೆ ತನ್ಮಯತೆಯನ್ನು ಹೊಂದಿ ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಮರೆತು ಅದ್ವೈತದ ಅನುಭವವನ್ನು ಪಡೆದಿದ್ದರು.

10. ಶಾಂತ ದಾಸ್ಯ ಮುಂತಾದ ಭಾವಗಳನ್ನು ಆಶ್ರಯಿಸಿ ಸಾಧನೆ ಮಾಡಿದರೆ ಭಾವಾತೀತ ವಸ್ತುವನ್ನು ಪಡೆಯುವುದು ಹೇಗೆ ಸಾಧ್ಯ ?—ಎಂದು ಪ್ರಶ್ನಿಸಬಹುದು. ಏಕೆಂದರೆ ಯಾವುದೇ ಭಾವಸಂಬಂಧಕ್ಕೆ ಎರಡು ವ್ಯಕ್ತಿಗಳು ಬೇಕೇಬೇಕು.

ಅದು ನಿಜ. ಆದರೆ ಯಾವುದೇ ಒಂದು ಭಾವವು ಪೂರ್ಣ ಪರಿಪಕ್ವವಾದಾಗ ಅದು ಸಾಧಕನ ಮನಸ್ಸನ್ನು ಸಂಪೂರ್ಣ ಆವರಿಸಿಕೊಂಡು ಬೇರೆ ಎಲ್ಲ ಭಾವನೆಗಳನ್ನೂ ಮರೆಸಿಬಿಡುತ್ತದೆ. ಆಗ ಸಾಧಕನ ಮನಸ್ಸಿನಲ್ಲಿ 'ನೀನು' 'ನಾನು' ಎಂಬ ಭೇದಭಾವ ಹೊರಟುಹೋಗುವುದು ಮತ್ತು ಅದನ್ನಾಶ್ರಯಿಸಿರುವ ಶಾಂತ ಇತ್ಯಾದಿ ಭಾವಗಳೂ ಮರೆತುಹೋಗುವುವು. ಕೇವಲ 'ತ್ವಂ' ಶಬ್ದವಾಚ್ಯವಾದ ಧ್ಯೇಯವಸ್ತುವೊಂದೇ ಉಳಿಯುವುದು. ಪುರಾತನ ಆಚಾರ್ಯಶ್ರೇಷ್ಠರ ಪ್ರಕಾರ, ಮಾನವನ ಮನಸ್ಸಿಗೆ 'ನಾನು', 'ನೀನು' ಮತ್ತು ಇವೆರಡರ ನಡುವಿನ ಭಾವಸಂಬಂಧ—ಈ ಮೂರನ್ನೂ ಒಟ್ಟಿಗೇ ಅನುಭವಿಸಲಾಗುವುದಿಲ್ಲ. ಒಮ್ಮೆ ಅದು 'ನೀನು' ಶಬ್ದವಾಚ್ಯವಾದ ವಸ್ತುವನ್ನು, ಇನ್ನೊಮ್ಮೆ 'ನಾನು' ಶಬ್ದವಾಚ್ಯವಾದ ವಸ್ತುವನ್ನು ಕಾಣುವುದು. ಈ ಎರಡು ವಸ್ತುಗಳ ನಡುವೆ ಮನಸ್ಸು ವೇಗದಿಂದ ಓಡಾಡುವುದರಿಂದ ಅವೆರಡರ ನಡುವೆ ಒಂದು ಸಂಬಂಧದ ಕಲ್ಪನೆ ಮನಸ್ಸಿನಲ್ಲಿ ಉಂಟಾಗುವುದು. ಆಗ ಆ ಎರಡು ವಸ್ತುಗಳನ್ನೂ ಮತ್ತು ಅವುಗಳ ನಡುವಿನ ಸಂಬಂಧವನ್ನೂ ಒಟ್ಟಿಗೇ ಅರಿಯುತ್ತಿರುವುದಾಗಿ ಅನಿಸುವುದು. ಭಾವವು ಪರಿಪಕ್ವವಾದಾಗ ಅದರ ಪ್ರಭಾವದಿಂದ ಮನಸ್ಸಿನ ಚಂಚಲತೆ ಹೊರಟುಹೋಗುವುದು. ಆಗ ಮೇಲೆ ಹೇಳಿರುವ ವಿಷಯ ಅರ್ಥವಾಗುತ್ತದೆ. ಧ್ಯಾನದಲ್ಲಿ ಮನಸ್ಸು ಹೆಚ್ಚು ಹೆಚ್ಚು ವೃತ್ತಿಹೀನವಾದಷ್ಟೂ ಒಂದೇ ಅದ್ವಯ ವಸ್ತುವು ಒಂದು ದೃಷ್ಟಿಯಿಂದ 'ನೀನು' (object) ಎಂಬ ವಸ್ತುವಾಗಿಯೂ, ಮತ್ತೊಂದು ದೃಷ್ಟಿಯಿಂದ 'ನಾನು' (subject) ಎಂಬ ವಸ್ತುವಾಗಿಯೂ ಕಾಣುತ್ತಿತ್ತು—ಒಂದೇ ಎರಡು ಪ್ರತ್ಯೇಕ ವಸ್ತುಗಳಾಗಿ ಕಾಣುತ್ತಿತ್ತು—ಎಂದು ತಿಳಿದುಬರುತ್ತದೆ.

11. ಈ ಪ್ರತಿಯೊಂದು ಭಾವಗಳೂ ಮೇಲೆ ಹೇಳಿದ ಅದ್ವೈತಾನುಭವವನ್ನು

---

† ಅಸೆಸಿಯ ಸಂತ ಫ್ರಾನ್ಸಿಸ್ ಮತ್ತು ಸಿಯೆನ್ನದ ಸಂತ ಕ್ಯಾತರಿನ್.

ಪಡೆಯುವಷ್ಟು ಪರಿಪಕ್ವತೆಯನ್ನು ಮುಟ್ಟಲು ಎಷ್ಟು ಕಾಲ ಬೇಕಾಯಿತು, ಮತ್ತು ಎಷ್ಟೊಂದು ಜನ ಸಾಧಕರು ಎಂಥ ಅದ್ಭುತ ಪ್ರಯತ್ನ ಪಡಬೇಕಾಯಿತು ಎಂಬುದನ್ನು ನೋಡಿದಾಗ ಆಶ್ಚರ್ಯವಾಗುವುದು. ಧಾರ್ಮಿಕ ಇತಿಹಾಸವನ್ನು ಅಧ್ಯಯನ ಮಾಡಿದಾಗ ನಮಗೆ ತಿಳಿದು ಬರುವುದು—ಒಂದೊಂದು ಯುಗದಲ್ಲಿ ಒಂದೊಂದು ಭಾವವು ಸಾಧಕನ ಉಪಾಸನೆಯ ಪ್ರಧಾನ ಆಲಂಬನೆಯಾಗಿತ್ತು, ಎಂದು. ಆದರ ಮೂಲಕವೇ ಆ ಯುಗದ ಸಾಧಕರು ಈಶ್ವರನನ್ನು ಪಡೆದರು. ಅವರಲ್ಲಿ ಅಪೂರ್ವ ಶಕ್ತಿಸಂಪನ್ನರು ಕೆಲವರು ಅದ್ವಯ ಬ್ರಹ್ಮವಸ್ತುವನ್ನೂ ಪಡೆದರು. ವೈದಿಕ ಮತ್ತು ಬೌದ್ಧಯುಗದಲ್ಲಿ ಶಾಂತಭಾವವು ಪ್ರಧಾನವಾಗಿತ್ತು. ಉಪನಿಷತ್ಕಾಲದಲ್ಲಿ ಇದೇ ಭಾವವು ಪರಿಪಕ್ವವಾಗಿ ಅದ್ವೈತಭಾವದಲ್ಲಿ ಪರ್ಯವಸಾನಗೊಂಡಿತು. ಇದೇ ಯುಗದಲ್ಲಿಯೇ ದಾಸ್ಯ ಮತ್ತು ಪಿತೃಭಾವಗಳ ಪ್ರಾಧಾನ್ಯವನ್ನೂ ಕಾಣುತ್ತೇವೆ.† ರಾಮಾಯಣ ಮಹಾಭಾರತದ ಕಾಲದಲ್ಲಿ ಶಾಂತ ಮತ್ತು ನಿಷ್ಕಾಮ ಕರ್ಮದಿಂದ ಕೂಡಿದ ದಾಸ್ಯ ಭಾವಗಳು ಪ್ರಧಾನವಾಗಿದ್ದವು, ತಾಂತ್ರಿಕ ಯುಗದಲ್ಲಿ ಮಾತೃಭಾವ ಮತ್ತು ಮಧುರಭಾವಗಳು ಪ್ರಧಾನವಾಗಿದ್ದುವು. ವೈಷ್ಣವ ಯುಗದಲ್ಲಿ ಸಖ್ಯ, ವಾತ್ಸಲ್ಯ ಮತ್ತು ಮಧುರ ಭಾವಗಳ ಪರಿಪಕ್ವತೆಯನ್ನು ಕಾಣುತ್ತೇವೆ.

12. ಭಾರತದ ಆಧ್ಯಾತ್ಮಿಕ ಇತಿಹಾಸದಲ್ಲಿ ಮಾತ್ರ ಈ ಪಂಚ ಭಾವ ಸಾಧನೆಗಳ ವಿಚಾರ ಬರುತ್ತದೆ. ವಿಶ್ವದ ಇತರ ಧರ್ಮಗಳಲ್ಲಿ ಶಾಂತ, ದಾಸ್ಯ ಮತ್ತು ಪಿತೃಭಾವಗಳು ಮಾತ್ರ ಕಂಡುಬರುತ್ತವೆ. ಸಾಲೋಮನನ ಪದ್ಯಗಳಲ್ಲಿ ಸಖ್ಯ ಮತ್ತು ಮಧುರ ಭಾವಗಳು ವ್ಯಕ್ತವಾಗಿದ್ದರೂ ಯಹೂದಿ, ಕ್ರೈಸ್ತ ಮತ್ತು ಮುಸಲ್ಮಾನ್ ಧರ್ಮಗಳ ಪ್ರವರ್ತಕರು ಅವುಗಳಿಗೆ ಬೇರೆ ಅರ್ಥವನ್ನು ಕಲ್ಪಿಸಿರುವರು. ಇಸ್ಲಾಂನ ಸೂಫಿ ಪಂಥದಲ್ಲಿ ಸಖ್ಯ ಮತ್ತು ಮಧುರ ಭಾವಗಳು ಪ್ರಚಲಿತವಿದ್ದರೂ ಸಾಧಾರಣವಾಗಿ ಮುಸಲ್ಮಾನರು ಆ ರೀತಿಯ ಈಶ್ವರೋಪಾಸನೆ ಕುರಾನಿಗೆ ವಿರುದ್ಧವಾದುದೆಂದು ತಿಳಿಯುತ್ತಾರೆ. ಹಾಗೆಯೇ ಕ್ರೈಸ್ತ ಕ್ಯಾಥೊಲಿಕ್ ಧರ್ಮದಲ್ಲಿ ಕ್ರಿಸ್ತನ ತಾಯಿಯಾದ ಮೇರಿಯ ಮಾತೃಭಾವದ ಉಪಾಸನೆ ಪ್ರಚಲಿತವಿದೆ. ಆದರೆ ಅದು ಹಿಂದೂಧರ್ಮದಲ್ಲಿರುವಂತೆ ಜಗನ್ಮಾತೆಯ ಮಾತೃಭಾವೋಪಾಸನೆಯ ಸ್ಥಾನವನ್ನು ಪಡೆದಿಲ್ಲ. ಅದು ಫಲ್ಗು ನದಿಯಂತೆ ಅರ್ಧದಲ್ಲಿಯೇ ಕಣ್ಮರೆಯಾಗಿ ಹೋಯಿತು.

13. ಮೊದಲೇ ಹೇಳಿದಂತೆ ಯಾವುದಾದರೊಂದು ಭಾವವನ್ನು ಅವಲಂಬಿಸಿ ಸಾಧಕನು ಈಶ್ವರನನ್ನು ಚಿಂತಿಸತೊಡಗಿದಾಗ ಕ್ರಮೇಣ ಅವನ ಮನಸ್ಸು ಬಾಹ್ಯ ಜಗತ್ತಿನಿಂದ ವಿಮುಖವಾಗಿ ಈಶ್ವರನಲ್ಲೇ ಮಗ್ನವಾಗುತ್ತದೆ. ಹೀಗಾಗುವಾಗ ಮನಸ್ಸಿನ ಪೂರ್ವ ಸಂಸ್ಕಾರಗಳು ತಡೆಯನ್ನುಂಟುಮಾಡಿ ಅವನ ಮನಸ್ಸನ್ನು ಮತ್ತೆ ಬಹಿರ್ಮುಖಗೊಳಿಸಲು ಪ್ರಯತ್ನಿಸುವುವು. ಈ ಕಾರಣದಿಂದಾಗಿ ಪೂರ್ವ ಸಂಸ್ಕಾರಗಳು ಪ್ರಬಲ

---

† ಅಪತ್ಯ, ಅಂದರೆ ಭಗವಂತನನ್ನು ತಂದೆ ಅಥವಾ ತಾಯಿ ಎಂದು ಪೂಜಿಸುವುದು.

ವಾಗಿರುವ ಸಾಧಾರಣ ವ್ಯಕ್ತಿಗಳಿಗೆ ಒಂದೇ ಭಾವದಲ್ಲಿ ತನ್ಮಯತೆಯನ್ನು ಪಡೆಯುವುದಕ್ಕೂ ಕೂಡ ಒಂದೇ ಜನ್ಮ ಸಾಕಾಗದೆ ಇರಬಹುದು. ಆದ್ದರಿಂದ ಸಾಮಾನ್ಯವಾಗಿ ಜನರು ಮೊದಲು ನಿರುತ್ಸಾಹಿಗಳಾಗುತ್ತಾರೆ, ಅನಂತರ ಪ್ರಯತ್ನವನ್ನು ನಿಲ್ಲಿಸುತ್ತಾರೆ, ಕೊನೆಯಲ್ಲಿ ಸಾಧ್ಯ ವಸ್ತುವಾದ ಈಶ್ವರನ ಮೇಲಿನ ವಿಶ್ವಾಸವನ್ನೇ ಕಳೆದುಕೊಂಡು ಮತ್ತೆ ಪ್ರಾಪಂಚಿಕ ಸುಖದ ಬೆನ್ನು ಹತ್ತುತ್ತಾರೆ. ಆದ್ದರಿಂದ ಬಾಹ್ಯ ವಿಷಯಗಳಿಂದ ವಿಮುಖತೆ, ಪ್ರಿಯವಸ್ತುವಿನ ಧ್ಯಾನದಲ್ಲಿ ತನ್ಮಯತೆ ಮತ್ತು ಭಾವದಿಂದ ಉತ್ಪನ್ನವಾದ ಉಲ್ಲಾಸ–ಇವು ಗುರಿಯನ್ನು ತಲುಪಲು ಇರಬೇಕಾದ ಮುಖ್ಯ ಲಕ್ಷಣಗಳು.

14. ಯಾವುದೇ ಭಾವದ ಸಾಧನೆಯ ಮೂಲಕ ಅದರಲ್ಲಿ ತನ್ಮಯತೆಯನ್ನು ಪಡೆಯಲು ಪ್ರಯತ್ನಿಸದೆ ಯಾವುದೇ ಪೂರ್ವ ಸಂಸ್ಕಾರಗಳ ತಡೆಯನ್ನು ಅನುಭವಿಸದವನು ಈ ಸಾಧನೆಯ ಹೋರಾಟವನ್ನು ಸ್ವಲ್ಪವೂ ಅರ್ಥಮಾಡಿಕೊಳ್ಳಲಾರ. ಯಾರು ಆ ಹೋರಾಟವನ್ನು ಎದುರಿಸಿರುವರೊ ಅವರು ಮಾತ್ರ ಈ ತನ್ಮಯತೆಯನ್ನು ಪಡೆಯಲು ಎಂಥ ದುಃಖವನ್ನು ಅನುಭವಿಸಬೇಕು ಎಂಬುದನ್ನು ಅರಿಯಬಲ್ಲರು. ಅವರು ಮಾತ್ರ ಶ್ರೀರಾಮಕೃಷ್ಣರು ಈ ಭಾವಗಳ ಸಾಧನೆಗಳನ್ನು ಮಾಡಿ ಅವುಗಳಲ್ಲಿ ಅದ್ಭುತ ತನ್ಮಯತೆಯನ್ನು ಪಡೆಯುವುದನ್ನು ಕಂಡು ಬೆರಗಾಗಿ ಇದು ಮನುಷ್ಯಶಕ್ತಿಗೆ ಮೀರಿದುದು ಎಂದು ಉದ್ಗರಿಸಬಲ್ಲರು.

15. ಅವತಾರ ಪುರುಷರು ಮಾಡಿದ ಆಧ್ಯಾತ್ಮಿಕ ಸಾಧನೆಯ—ವಿವರವನ್ನು ಸರಿಯಾಗಿ ಬರೆದಿಡದೇ ಇರುವುದಕ್ಕೆ ಕಾರಣ ಜನಸಾಧಾರಣರು ಅದನ್ನು ಅರ್ಥ ಮಾಡಿಕೊಳ್ಳಲಾರರು ಎಂದಿರಬಹುದೆ ? ಅವರ ತ್ಯಾಗ ವೈರಾಗ್ಯ ಲೋಕಹಿತ ಕಾರ್ಯ ಇವುಗಳ ವಿಷಯವೇ ಹೆಚ್ಚು ವಿಸ್ತಾರವಾಗಿ ವಿವರಿಸಲ್ಪಟ್ಟಿದೆ, ಆಂತರಿಕ ಪೂರ್ವ ಸಂಸ್ಕಾರಗಳನ್ನೆಲ್ಲ ಮೂಲೋತ್ಪಾಟನ ಮಾಡಿ ತಮ್ಮ ಮೇಲೆ ಪೂರ್ಣ ಹತೋಟಿಯನ್ನು ಪಡೆಯಲು ಅವರು ಎಂಥ ಹೋರಾಟ ನಡೆಸಿದರು ಎಂಬುದರ ಹೊಳಹು ಮಾತ್ರ ನಮಗೆ ಸಿಕ್ಕುತ್ತದೆಯಷ್ಟೆ. ಇಲ್ಲವೇ ಅವರ ಹೋರಾಟವನ್ನು ರೂಪಕಗಳ ಮೂಲಕ ಅಲಂಕಾರಗಳ ಮೂಲಕ ಎಷ್ಟೋಂದು ಕಾವ್ಯಮಯವಾಗಿ ವಿವರಿಸಿರುವರೆಂದರೆ ಅದರಲ್ಲಿ ಸತ್ಯಾಂಶವನ್ನು ಕಂಡುಹಿಡಿಯುವುದೇ ಬಹಳ ಕಷ್ಟದ ಕೆಲಸ. ಕೆಲವು ಉದಾಹರಣೆಗಳ ಮೂಲಕ ಇದನ್ನು ಸ್ಪಷ್ಟಪಡಿಸಬಹುದು.

16. ಭಗವಾನ್ ಶ್ರೀಕೃಷ್ಣನು ಲೋಕಹಿತ ಸಾಧನೆಗಾಗಿ ವಿಶೇಷ ಶಕ್ತಿಯನ್ನು ಪಡೆಯಲು ಅನೇಕ ತಪಸ್ಸನ್ನಾಚರಿಸಿದ್ದನೆಂಬುದು ನಮಗೆ ತಿಳಿದು ಬರುತ್ತದೆ. ಇದಕ್ಕಾಗಿ ಅವನು ನೀರು-ಗಾಳಿಯನ್ನು ಮಾತ್ರ ಸೇವಿಸಿ ಒಂಟಿಕಾಲಿನಲ್ಲಿ ನಿಂತುಕೊಂಡುದು ಇತ್ಯಾದಿಗಳ ಸಂಕ್ಷಿಪ್ತ ವಿವರಣೆಗಳನ್ನು ಬಿಟ್ಟರೆ ಅವನ ಆಂತರಿಕ ಹೋರಾಟದ ವಿಷಯ ನಮಗೆ ತಿಳಿದುಬರುವುದಿಲ್ಲ. ಹಾಗೆಯೇ ಬುದ್ಧನ ಸಂಸಾರ ತ್ಯಾಗ, ಅನಂತರ ಧರ್ಮಪ್ರಚಾರ ಕಾರ್ಯ ಇವುಗಳ ಸವಿಸ್ತಾರ ವಿವರಣೆ ಇರುವಷ್ಟು ಅವನ ಸಾಧನೆಯ ವಿವರಣೆ ಇಲ್ಲ.

ಬೇರೆ ಅವತಾರ ಪುರುಷರ ಸಾಧನೆಯ ಬಗ್ಗೆ ನಮಗೇನೂ ತಿಳಿಯುವುದಿಲ್ಲ. ಆದರೆ ಬುದ್ಧನ ಸಾಧನೆಯ ಬಗ್ಗೆ ನಮಗೆ ಅಲ್ಪಸ್ವಲ್ಪ ಮಾಹಿತಿ ಸಿಕ್ಕುತ್ತದೆ. ಅವನು ಸಿದ್ಧಿಯನ್ನು ಪಡೆಯಲೇಬೇಕೆಂಬ ದೃಢ ಸಂಕಲ್ಪ ಮಾಡಿ ಒಂದೇ ಆಸನದಲ್ಲಿ ಆರು ವರ್ಷ ಧ್ಯಾನ ತಪಸ್ಸುಗಳನ್ನಾಚರಿಸಿದನೆಂಬುದನ್ನು ಓದುತ್ತೇವೆ. ತನ್ನ ಪ್ರಾಣಶಕ್ತಿಯನ್ನು ನಿಗ್ರಹಿಸಿ ಕೊನೆಯಲ್ಲಿ ಸಮಾಧಿಸ್ಥನಾಗಿದ್ದನು. ಆದರೆ ತನ್ನ ಪೂರ್ವ ಸಂಸ್ಕಾರಗಳ ವಿರುದ್ಧ ಅವನ ಹೋರಾಟವನ್ನು ಕಾವ್ಯಮಯವಾಗಿ ಸ್ಥೂಲವಾದ ಬಾಹ್ಯ ಯುದ್ಧವನ್ನು ವಿವರಿಸುವಂತೆ ಚಿತ್ರಿಸಿರುವರು. ಕ್ರಿಸ್ತನ ಸಾಧನೆಯ ವಿಷಯವನ್ನು ಸ್ವಲ್ಪವೂ ಬರೆದಿಡಲಿಲ್ಲ. ಅವನ ಬಾಲ್ಯದ ಹನ್ನೆರಡು ವರ್ಷಗಳ ಕೆಲವು ಘಟನೆಗಳು ನಮಗೆ ದೊರೆಯುತ್ತವೆ. ಆನಂತರ ಅವನು ತನ್ನ ಮೂವತ್ತನೆ ವಯಸ್ಸಿನಲ್ಲಿ ದೀಕ್ಷೆಯನ್ನು ಪಡೆದು (Baptism) ಒಂದು ಮರುಭೂಮಿಯಲ್ಲಿ ನಲವತ್ತು ದಿನಗಳು ಧ್ಯಾನ ತಪಸ್ಸು ಮಾಡಿದ ವಿಷಯ ಬರುತ್ತದೆ. ಅಲ್ಲಿ ಅವನು ಸೈತಾನನಿಂದ ಪ್ರಲೋಭನೆಗಳಿಗೆ ಒಳಪಟ್ಟು ಆ ಹೋರಾಟದಲ್ಲಿ ಜಯಶೀಲನಾಗಿ ಹಿಂದಿರುಗಿ ಬರುತ್ತಾನೆ. ಅನಂತರ ಅವನು ಲೋಕಕಲ್ಯಾಣ ಕಾರ್ಯದಲ್ಲಿ ತೊಡಗುತ್ತಾನೆ. ಇದಾದ ಮೇಲೆ ಅವನು ಕೇವಲ ಮೂರು ವರ್ಷಗಳು ಮಾತ್ರ ಸ್ಥೂಲ ಶರೀರದಲ್ಲಿದ್ದನು. ಅವನು ಹನ್ನೆರಡನೇ ವರ್ಷದಿಂದ ಮೂವತ್ತನೆ ವರ್ಷದವರೆಗೆ ಹೇಗೆ ಕಾಲವನ್ನು ಕಳೆದ ಎಂಬುದರ ಬಗ್ಗೆ ಯಾವ ಮಾಹಿತಿಯೂ ದೊರೆಯುವುದಿಲ್ಲ. ಶ್ರೀ ಶಂಕರಾಚಾರ್ಯರ ಜೀವನದ ಬಗ್ಗೆ ಸಾಕಷ್ಟು ವಿವರಣೆ ದೊರೆತಿದ್ದರೂ ಅವರ ಆಂತರಿಕ ಹೋರಾಟದ ಬಗ್ಗೆ ನಮಗೇನೂ ತಿಳಿಯುವುದಿಲ್ಲ.

ಶ್ರೀ ಚೈತನ್ಯನ ಸಾಧನೆಯ ಬಗ್ಗೆ ನಮಗೆ ಸಾಕಷ್ಟು ವಿವರ ದೊರೆಯುವುದು. ಆದರೆ ಅವನ ಶುದ್ಧ ಈಶ್ವರ ಪ್ರೇಮವನ್ನು ಶ್ರೀ ರಾಧಾಕೃಷ್ಣರ ಪ್ರಣಯ ವಿಹಾರದ ರೂಪಕವನ್ನವಲಂಬಿಸಿ ವಿವರಿಸಿರುವುದರಿಂದ ಜನಸಾಧಾರಣರಿಗೆ ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾಗುವುದಿಲ್ಲ. ಆದರೂ ಅವನು ಮತ್ತು ಅವನ ಪ್ರಮುಖ ಸಂಗಡಿಗರು ಅನುಸರಿಸಿದ ಸಖ್ಯ, ವಾತ್ಸಲ್ಯ ಮತ್ತು ವಿಶೇಷವಾಗಿ ಮಧುರ ಭಾವಗಳ ಸಾಧನೆಯ ಸವಿಸ್ತಾರವಾದ ವಿವರಣೆ ನಮಗೆ ದೊರೆಯುವುದು ಎಂಬುದನ್ನು ನಾವು ಮರೆಯುವಂತಿಲ್ಲ. ಈ ಸಾಧನೆಗಳ ಹಲವು ಹಂತಗಳಲ್ಲಿ ಉಂಟಾಗುವ ವಿವಿಧ ಭಾವಾವಸ್ಥೆಗಳನ್ನು ಮತ್ತು ಅನುಭವಗಳನ್ನು ರೂಪಕಗಳ ಮೂಲಕ ಎಷ್ಟು ಸಾಧ್ಯವೊ ಅಷ್ಟು ವಿವರಿಸಿರುವರು. ಈ ಭಾವ ಸಾಧನೆಗಳ ಅಂತಿಮ ಅವಸ್ಥೆಯಲ್ಲಿ ಸಾಧಕನು ತನ್ನ ಪ್ರೇಮವಸ್ತುವಿನೊಡನೆ ಏಕತ್ವವನ್ನು ಹೊಂದಿ ಅದ್ವೈತಾನುಭವವನ್ನು ಪಡೆಯುವನು ಎಂಬ ವಿಷಯವನ್ನು ಮಾತ್ರ ಅವರು ಹೇಳುವುದಿಲ್ಲ. ಹೇಳಿದರೂ ಅದು ಹೀನಾವಸ್ಥೆ, ಸಾಧಕನು ಆ ಸ್ಥಿತಿಗೆ ಹೋಗದಂತೆ ಎಚ್ಚರಿಕೆ ವಹಿಸಬೇಕು ಎನ್ನುವರು. ಶ್ರೀರಾಮಕೃಷ್ಣರ ಅದ್ಭುತ ಸಾಧನೆಯ ಇತಿಹಾಸವು ಈ ಯುಗದಲ್ಲಿ ನಮಗೆ ಈ ಚರಮ ತತ್ತ್ವವನ್ನು ವಿಶದವಾಗಿ ತಿಳಿಸಿಕೊಡುವುದು. ಜಗತ್ತಿನಲ್ಲಿರುವ

ವಿವಿಧ ಧರ್ಮಗಳ ವಿವಿಧ ಭಾವಗಳು ಒಂದೇ ಗುರಿಗೆ ಸಾಧಕನನ್ನು ಒಯ್ಯುವುವು ಎಂಬುದನ್ನು ಶ್ರೀರಾಮಕೃಷ್ಣರ ಅನುಭವಗಳು ಸೂಚಿಸುತ್ತವೆ. ಅವರ ಜೀವನ ದಿಂದ ಕಲಿಯಬಹುದಾದ ಇನ್ನೂ ಎಷ್ಟೋ ವಿಷಯಗಳನ್ನು ಕಡೆಗಣಿಸಿದರೂ, ಅವರು ಸರ್ವ ಭಾವಗಳ ಗುರಿಯೂ ಒಂದೇ ಎಂಬುದನ್ನು ತಮ್ಮ ಸಾಧನೆಯ ಮೂಲಕ ತೋರಿಸಿ ಕೊಟ್ಟು ನಮ್ಮ ದೃಷ್ಟಿಯನ್ನು ವಿಶಾಲಗೊಳಿಸಿದರು, ಒಂದು ಸಮನ್ವಯ ದೃಷ್ಟಿಯನ್ನು ನಮಗಿತ್ತರು ಎಂಬುದನ್ನು ಮರೆಯುವಂತೆಯೇ ಇಲ್ಲ.

17. ಶ್ರೀ ಚೈತನ್ಯ ಮತ್ತು ಅವನ ಅನುಯಾಯಿಗಳ ಪ್ರಧಾನ ಕೊಡುಗೆ ಮಧುರಭಾವ ಸಾಧನೆ. ಅವರು ಈ ಮಾರ್ಗವನ್ನು ತೋರಿಸದಿದ್ದಿದ್ದರೆ ಅನೇಕರು ಅದನ್ನು ಅವಲಂಬಿಸಿ ಅದರ ಮೂಲಕ ಶಾಂತಿಯನ್ನು ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಶ್ರೀಕೃಷ್ಣನ ಬೃಂದಾವನಲೀಲೆಯು ನಿರರ್ಥಕವಾದುದಲ್ಲ ಎಂಬುದನ್ನು ಅವರು ಮೊದಲು ಅರಿತುಕೊಂಡು, ಇತರರಿಗೂ ತಿಳಿಸಿಕೊಟ್ಟರು. ಶ್ರೀ ಚೈತನ್ಯನು ಬರದಿದ್ದಿದ್ದರೆ ಬೃಂದಾ ವನವು ಒಂದು ಸಾಮಾನ್ಯ ವನವಾಗಿ ಉಳಿಯುತ್ತಿತ್ತು.

ಆಧುನಿಕ ಇತಿಹಾಸಕಾರರು ಕೇವಲ ಸ್ಥೂಲ ಘಟನೆಗಳನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳುತ್ತಾರೆ. ವೃಂದಾವನ ಲೀಲೆ ನೀವು ಯಾವ ರೀತಿ ನಡೆಯಿತೆಂದು ಹೇಳುತ್ತೀರೊ ಹಾಗೆಯೇ ನಡೆಯಿತೆಂಬುದಕ್ಕೆ ಯಾವ ಪ್ರಮಾಣವೂ ಇಲ್ಲ ಎಂದು ಅವರು ಹೇಳುತ್ತಾರೆ. ನೀವು ಹೇಳುವ ಅಳು-ನಗು-ಭಾವ-ಮಹಾಭಾವ-ಇವೆಲ್ಲ ವ್ಯರ್ಥ ಪ್ರಲಾಪ ಎಂಬುದು ಅವರ ಅಭಿಪ್ರಾಯ. ಇದಕ್ಕೆ ಉತ್ತರವಾಗಿ ವೈಷ್ಣವಾಚಾರ್ಯರು ಪುರಾಣದ ದೃಷ್ಟಿಯಿಂದ ನಾವು ಈ ರೀತಿ ಹೇಳುತ್ತೇವೆ ಎನ್ನುತ್ತಾರೆ. ಅದು ಹಾಗೆ ನಡೆಯಲಿಲ್ಲ ಎಂಬುದನ್ನು ನಿಃಸಂಶಯವಾಗಿ ಸಾಬೀತುಪಡಿಸಲು ನಿಮಗೆ ಸಾಧ್ಯವೇ ?–ಎಂದು ಅವರು ಕೇಳುತ್ತಾರೆ. ಬಹು ಪ್ರಾಚೀನ ಯುಗದ ಬಗ್ಗೆ ನಿಮ್ಮ ಇತಿಹಾಸ ಏನು ಹೇಳುವುದೊ ಅದು ನಿಃಸಂಶಯವಾಗಿ ಪ್ರಮಾಣಬದ್ಧವಾಗುವವರೆಗೆ ನಿಮ್ಮ ಸಂದೇಹವೂ ವ್ಯರ್ಥ ಪ್ರಲಾಪವೆಂದು ಅವರು ಹೇಳುತ್ತಾರೆ. ಒಂದುವೇಳೆ ಅದನ್ನು ಪ್ರಮಾಣೀಕರಿಸಿದರೂ ಅವರ ವಿಶ್ವಾಸಕ್ಕೆ ಹಾನಿಯಾಗುವುದಿಲ್ಲ. ನಿತ್ಯ–ಬೃಂದಾವನದಲ್ಲಿ ಭಗವಂತನ ನಿತ್ಯಲೀಲೆಯನ್ನು ಅದು ಕಿಂಚಿತ್ತೂ ಸ್ಪರ್ಶಿಸುವುದಿಲ್ಲ. ಆ ರಹಸ್ಯಲೀಲೆಯು ಭಾವರಾಜ್ಯದಲ್ಲಿ ಚಿರಕಾಲವೂ ಸಮಾನ ಸತ್ಯವಾಗಿ ಉಳಿಯುವುದು. ಚಿನ್ಮಯ ಧಾಮ ದಲ್ಲಿ ಚಿನ್ಮಯ ರಾಧಾಶ್ಯಾಮರ ಆ ಅಪೂರ್ವ ಪ್ರೇಮಲೀಲೆಯನ್ನು ನೋಡಬೇಕಾದರೆ ಮನುಷ್ಯನು ಕಾಮವಾಸನೆಯಿಂದ ಸಂಪೂರ್ಣ ಮುಕ್ತನಾಗಬೇಕು ಮತ್ತು ಶ್ರೀಮತಿಯ ಸಖಿಯರಲ್ಲಿ ಒಬ್ಬರನ್ನು ಅನುಸರಿಸಿ ನಿಃಸ್ವಾರ್ಥ ಸೇವೆ ಮಾಡುವುದನ್ನು ಕಲಿಯಬೇಕು. ಆಗ ಅವನು ತನ್ನ ಹೃದಯದಲ್ಲಿಯೇ ಶ್ರೀಹರಿಯ ಲೀಲಾಭೂಮಿಯಾದ ಶ್ರೀ ಬೃಂದಾ ವನವನ್ನು ಕಾಣುವನು ಮತ್ತು ಅಲ್ಲಿಯೇ ಶ್ರೀಹರಿಯು ಅವನೊಡನೆ ಕ್ರೀಡಿಸುವನು.

ಭಾವರಾಜ್ಯವು ಸತ್ಯವೆಂದೆನಿಸಿ ಬಾಹ್ಯ ಘಟನೆಗಳು ಗೌಣವಾಗಬೇಕು ಮತ್ತು ಶುದ್ಧ ಭಾವೇತಿಹಾಸವನ್ನೇ ಆಲೋಚಿಸುವುದನ್ನು ಕಲಿಯಬೇಕು. ಆಗ ಮಾತ್ರ

ಬೃಂದಾವನಲೀಲೆಯ ಸತ್ಯತೆಯನ್ನೂ ಮತ್ತು ಅದರ ಮಾಧುರ್ಯವನ್ನೂ ಅರ್ಥಮಾಡಿಕೊಳ್ಳಲು ಸಾಧ್ಯ. ಶ್ರೀ ರಾಮಕೃಷ್ಣರು ಈ ಲೀಲಾಕಥೆಯನ್ನು ಅತ್ಯುತ್ಸಾಹದಿಂದ ಹೇಳುತ್ತಿದ್ದರು. ಅಂಥ ಸಂದರ್ಭದಲ್ಲಿ ಇಂಗ್ಲಿಷ್ ಕಲಿತವರು ಕೆಲವರಿಗೆ ಅದು ರುಚಿಸದಿರುವುದನ್ನು ಗಮನಿಸಿ ಅವರು ಹೇಳುತ್ತಿದ್ದರು : "ನೀವುಗಳು ಈ ಲೀಲೆಯಲ್ಲಿ ಶ್ರೀಕೃಷ್ಣನನ್ನು ಕುರಿತು ರಾಧಾರಾಣಿಯ ಮನಸ್ಸಿನಲ್ಲಿದ್ದ ಆ ಅಪೂರ್ವ ಆಕರ್ಷಣೆಯನ್ನು ಗಮನಿಸಬೇಕು, ಅದನ್ನು ಗ್ರಹಿಸಬೇಕು. ಈಶ್ವರನ ಕಡೆ ಈ ರೀತಿಯ ಸೆಳೆತವಿದ್ದರೆ ಆಗ ಅವನು ಲಭಿಸುವನು. ನೋಡಿ, ಆ ಗೋಪಿಯರು ತಮ್ಮ ಪತಿ ಪುತ್ರ ಕುಲ ಶೀಲ ಮಾನ ಅಪಮಾನ ಲಜ್ಜೆ ತಿರಸ್ಕಾರ ಸಮಾಜ ಭಯ—ಎಲ್ಲವನ್ನೂ ಕಡೆಗಣಿಸಿ ಶ್ರೀ ಗೋವಿಂದನಿಗಾಗಿ ಉನ್ಮತ್ತರಾಗಿದ್ದರು ! ಈ ರೀತಿ ಮಾಡಲು ಸಾಧ್ಯವಾದರೆ ಆಗ ಭಗವಂತನು ದೊರಕುವನು." ಮತ್ತೆ ಅವರು ಹೇಳುತ್ತಿದ್ದರು : "ಕಾಮವಾಸನೆ ಸಂಪೂರ್ಣ ಹೋಗದಿದ್ದರೆ ಮಹಾಭಾವಮಯಿಯಾದ ಶ್ರೀ ರಾಧೆಯ ಭಾವವನ್ನು ಅರಿಯಲಾಗುವುದಿಲ್ಲ. ಸಚ್ಚಿದಾನಂದ ಘನನಾದ ಶ್ರೀಕೃಷ್ಣನನ್ನು ನೋಡಿದಾಕ್ಷಣ ಗೋಪಿಯರಿಗೆ ಕೋಟಿ ರಮಣ ಸುಖದ ಅನುಭವವಾಗಿ ದೇಹಬುದ್ಧಿಯೇ ಹೊರಟು ಹೋಗುತ್ತಿತ್ತು. ಆಗ ತುಚ್ಛ ದೇಹ ಸುಖದ ಆಸೆ ಅವರ ಮನಸ್ಸಿನಲ್ಲಿ ಉದಿಸಲು ಸಾಧ್ಯವೆ ? ಶ್ರೀಕೃಷ್ಣನ ಅಂಗದ ದಿವ್ಯ ಜ್ಯೋತಿಯು ಅವರ ಶರೀರವನ್ನು ಸ್ಪರ್ಶಿಸಿದಾಗ ಪ್ರತಿ ರೋಮಕೂಪದಲ್ಲಿಯೂ ರಮಣ ಸುಖಕ್ಕಿಂತ ಅಧಿಕವಾದ ಆನಂದದ ಅನುಭವ ಅವರಿಗಾಗುತ್ತಿತ್ತು.

18. ಸ್ವಾಮಿ ವಿವೇಕಾನಂದರು ಒಮ್ಮೆ ಶ್ರೀ ಬೃಂದಾವನಲೀಲೆಯ ಐತಿಹಾಸಿಕತೆಯನ್ನು ವಿರೋಧಿಸಿದಾಗ ಶ್ರೀರಾಮಕೃಷ್ಣರು ಅವರಿಗೆ ಹೇಳಿದರು : "ಒಳ್ಳೆಯದು, ಶ್ರೀಮತಿ ರಾಧಿಕಾ ಎಂಬ ವ್ಯಕ್ತಿ ಇರಲೇ ಇಲ್ಲ, ಇದು ಯಾವನೋ ಒಬ್ಬ ಸಾಧಕನ ಕಲ್ಪನೆ ಎಂದು ಭಾವಿಸೋಣ. ಆದರೆ ಆ ಸಾಧಕನು ಅಂಥ ವ್ಯಕ್ತಿಯನ್ನು ಕಲ್ಪಿಸುವಾಗ ಶ್ರೀ ರಾಧೆಯ ಭಾವ ಅವನಲ್ಲುಂಟಾಗಿತ್ತು ಎಂಬುದನ್ನು ನೀನು ಒಪ್ಪುತ್ತೀಯಲ್ಲವೆ ? ಹಾಗಾದರೆ ಆ ಸಾಧಕನೇ ಆ ಸಂದರ್ಭದಲ್ಲಿ ತನ್ನನ್ನು ಮರೆತು ರಾಧೆಯೇ ಆಗಿದ್ದನು. ಬೃಂದಾವನಲೀಲೆಯು ಈ ರೀತಿ ಸ್ಥೂಲವಾಗಿಯೂ ನಡೆದಿತ್ತು ಎಂಬುದನ್ನು ಒಪ್ಪಿಕೊಳ್ಳಬೇಕಾಗುವುದು."

ಶ್ರೀಕೃಷ್ಣನ ಬೃಂದಾವನದ ಪ್ರೇಮಲೀಲೆಯನ್ನು ಎಷ್ಟೋ ರೀತಿಯಲ್ಲಿ ಆಕ್ಷೇಪಿಸಬಹುದು. ಆದರೆ ಅದರ ಆಧ್ಯಾತ್ಮಿಕ ಸತ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಶ್ರೀಚೈತನ್ಯನೇ ಮೊದಲಾದ ವೈಷ್ಣವಾಚಾರ್ಯರುಗಳಿಂದ ಮೊದಲು ಕಂಡುಹಿಡಿಯಲ್ಪಟ್ಟು ಅವರ ಜೀವನದಲ್ಲಿ ಪ್ರಕಾಶಗೊಂಡ ಈ ಮಧುರ ಭಾವವು ಚಿರಕಾಲವೂ ಸತ್ಯವಾಗಿ ಉಳಿಯುವುದು. ತನ್ನನ್ನು ಸ್ತ್ರೀಯೆಂದು ಭಾವಿಸಿ ಭಗವಂತನನ್ನು ಪತಿಯೆಂದು ನೋಡುತ್ತ ಸಾಧನೆ ಮಾಡುವ ಯೋಗ್ಯ ಸಾಧಕರು ಎಲ್ಲ ಕಾಲದಲ್ಲಿಯೂ ಇದ್ದೇ ಇರುತ್ತಾರೆ.

19. ಭಗವಂತನನ್ನು ಪತಿಯೆಂದು ಭಾವಿಸಿ ಸಾಧನೆ ಮಾಡುವುದು ಸ್ತ್ರೀಯರಿಗೆ

ಸ್ವಾಭಾವಿಕವಾಗಿರುತ್ತದೆ. ಪುರುಷರಿಗೆ ಇದು ಅಸ್ವಾಭಾವಿಕವೆನಿಸಬಹುದು. ಆದ್ದರಿಂದ ಶ್ರೀಚೈತನ್ಯನು ಇಂಥ ಅಸ್ವಾಭಾವಿಕವಾದ ಸಾಧನಮಾರ್ಗವನ್ನು ಏಕೆ ಪ್ರಚಲಿತಗೊಳಿಸಿದ ಎಂಬ ಪ್ರಶ್ನೆ ಏಳುವುದು. ಯುಗಾವತಾರ ಪುರುಷರ ಪ್ರತಿಯೊಂದು ಕಾರ್ಯವೂ ಲೋಕಕಲ್ಯಾಣಕ್ಕಾಗಿಯೇ. ಆ ಕಾಲದಲ್ಲಿ ಸಾಧಕರು ಯಾವ ಆಧ್ಯಾತ್ಮಿಕ ಆದರ್ಶವನ್ನು ಹೊಂದಲು ಉತ್ಸುಕರಾಗಿದ್ದರು ಎಂಬುದನ್ನು ಗಮನಿಸಿ ಅದಕ್ಕನುಗುಣವಾಗಿ ಶ್ರೀ ಚೈತನ್ಯನು ಮಧುರಭಾವದ ಸಾಧನೆಯನ್ನು ಪ್ರಚಲಿತಗೊಳಿಸಿದನು. ಅವನು ತನಗಾಗಿಯೇ ಆ ಸಾಧನೆಯನ್ನು ಮಾಡಿ, ಅದೊಂದು ಆದರ್ಶ ಸಾಧನೆಯೆಂದು ಸಮಾಜದಲ್ಲಿ ಪ್ರತಿಷ್ಠಿತಗೊಳಿಸಿದ ಎಂದು ಹೇಳಲಾಗುವುದಿಲ್ಲ. ಶ್ರೀ ರಾಮಕೃಷ್ಣರು ಹೇಳುತ್ತಿದ್ದರು, ''ಆನೆಯ ಬಾಹ್ಯ ದಂತವು ಶತ್ರುವಿನ ಮೇಲೆ ಆಕ್ರಮಣ ಮಾಡುವುದಕ್ಕಾಗಿ ಇರುತ್ತದೆ ಮತ್ತು ಒಳಗಿನ ಹಲ್ಲು ಆಹಾರವನ್ನು ಅಗಿದು ತನ್ನ ದೇಹ ಪೋಷಣೆಗಾಗಿ ಇರುತ್ತದೆ. ಹಾಗೆಯೇ ಶ್ರೀಗೌರಾಂಗನಲ್ಲಿ ಒಳಗೆ ಮತ್ತು ಹೊರಗೆ ಬೇರೆ ಬೇರೆ ಭಾವಗಳು ಪ್ರಕಾಶಿಸುತ್ತಿದ್ದುವು. ಹೊರಗಡೆ ಮಧುರ ಭಾವದ ಸಹಾಯದಿಂದ ಲೋಕಕಲ್ಯಾಣವನ್ನು ಸಾಧಿಸುತ್ತಿದ್ದನು ಮತ್ತು ಒಳಗೆ ಅದ್ವೈತ ಭಾವದಲ್ಲಿ ಪ್ರತಿಷ್ಠಿತನಾಗಿ ಭೂಮಾನಂದವನ್ನು ಅನುಭವಿಸುತ್ತಿದ್ದನು.''

20. ಬೌದ್ಧಧರ್ಮದ ಅವಸಾನ ಕಾಲದಲ್ಲಿ ವಜ್ರಯಾನವೆಂಬ ಪಂಥವು ದೇಶದಲ್ಲಿ ಪ್ರಚಲಿತವಾಯಿತು ಎಂದು ಇತಿಹಾಸಕಾರರು ಹೇಳುತ್ತಾರೆ. ಅವರ ಪ್ರಕಾರ, ಸಾಧಕನು ಎಲ್ಲ ವಾಸನೆಗಳಿಂದ ಮುಕ್ತನಾಗಿ ಮಹಾಶೂನ್ಯದಲ್ಲಿ ವಿಲೀನನಾಗುವ ಸ್ಥಿತಿಯಲ್ಲಿರುವಾಗ 'ನಿರಾತ್ಮ' ಎಂಬ ದೇವಿಯು ಅವನ ಮುಂದೆ ಬರುವಳು. ಅವಳು ಅವನನ್ನು ಶೂನ್ಯದಲ್ಲಿ ವಿಲೀನನಾಗಲು ಬಿಡದೆ ತನ್ನ ಅಂಗದೊಡನೆ ಅವನು ಒಂದಾಗುವಂತೆ ಮಾಡುವಳು. ಆಗ ಭೋಗಾಯತನವಾದ ಸ್ಥೂಲ ಶರೀರವು ಸಾಧಕನಿಗೆ ಇರುವುದಿಲ್ಲ. ಆದರೂ ಸೂಕ್ಷ್ಮಶರೀರದ ಮೂಲಕ ಅವನು ಎಲ್ಲ ಇಂದ್ರಿಯ ಸುಖಗಳನ್ನು ಅನುಭವಿಸುವಂತೆ ಮಾಡುವಳು. ಸ್ಥೂಲವಾದ ವಿಷಯ ಸುಖಗಳ ತ್ಯಾಗದಿಂದ ಈ ಭಾವರಾಜ್ಯದ ಸೂಕ್ಷ್ಮರೂಪದ ಭೋಗ ಸುಖವು ಲಭಿಸುವಂತಹದು. ಆದರೆ ಇದೇ ಕಾಲಕ್ರಮೇಣ ವಿಕೃತರೂಪವನ್ನು ಪಡೆದು ಸ್ಥೂಲ ಸುಖಭೋಗವೇ ಧರ್ಮಾನುಷ್ಠಾನದ ಅಂಗವಾಗಿಬಿಟ್ಟಿತು. ಇದು ದೇಶದಲ್ಲಿ ವ್ಯಭಿಚಾರವನ್ನು ಹೆಚ್ಚಿಸಿದುದರಲ್ಲಿ ಆಶ್ಚರ್ಯವಿಲ್ಲ. ಶ್ರೀಚೈತನ್ಯನ ಕಾಲದಲ್ಲಿ ಅಶಿಕ್ಷಿತ ಜನಸಾಧಾರಣರು ಬೌದ್ಧಧರ್ಮದ ಈ ತುಚ್ಛ ಮಾರ್ಗವನ್ನು ಅವಲಂಬಿಸಿದುದರ ಪರಿಣಾಮವಾಗಿ ಅನೇಕ ಸಂಪ್ರದಾಯಗಳು ಹುಟ್ಟಿಕೊಂಡಿದ್ದುವು. ಸಮಾಜದ ಉಚ್ಚ ವರ್ಗದವರು ತಂತ್ರದ ಕುತ್ಸಿತ ವಾಮಾಚಾರ ಪಂಥವನ್ನು ಅನುಸರಿಸಿದುದರ ಪರಿಣಾಮವಾಗಿ ಭೋಗ ಸುಖವೇ ಪ್ರಧಾನವಾದ ಅನೇಕ ಸಾಧನೆಗಳು ಹುಟ್ಟಿಕೊಂಡಿದ್ದುವು. ನಿಜವಾದ ಸಾಧಕರು ತಾವು ಹೇಗೆ ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿದು ನಿಜವಾದ ಆನಂದವನ್ನು ಪಡೆಯುವುದು ಎಂಬುದೇ ತಿಳಿಯದಂತಾಗಿತ್ತು. ಶ್ರೀ ಚೈತನ್ಯನು ತನ್ನ ಜೀವನದ ಮೂಲಕ ತ್ಯಾಗ ವೈರಾಗ್ಯದ

ಆದರ್ಶವನ್ನು ಅವರ ಮುಂದಿಟ್ಟನು. ಅನಂತರ ತನ್ನನ್ನು ಪ್ರಕೃತಿಯೆಂದು ಭಾವಿಸಿ ಈಶ್ವರನನ್ನು ಪತಿಯ ರೂಪದಲ್ಲಿ ಆರಾಧಿಸಿ ಅದರ ಮೂಲಕ ಯಾವ ಯಾವ ದಿವ್ಯ ಅನುಭವಗಳನ್ನು ಪಡೆಯಬಹುದೊ ಅದನ್ನು ಅವರಿಗೆ ತೋರಿಸಿಕೊಟ್ಟನು. ಜನ ಸಾಮಾನ್ಯರಿಗೆ ಭಗವಂತನ ನಾಮೋಚ್ಚಾರಣೆ ಮತ್ತು ಸಂಕೀರ್ತನೆ–ಇವುಗಳನ್ನು ಆದರ್ಶವಾಗಿ ನೀಡಿದನು. ಹೀಗೆ ಗುರಿತಪ್ಪಿದ ಜನರಿಗೆ ಸರಿಯಾದ ಮಾರ್ಗದರ್ಶನ ಮಾಡಿದನು. ನೀಚ ಪಾಪಾಚಾರ ಮಾರ್ಗವನ್ನು ಹಿಡಿದಿದ್ದವರು ಮೊದಮೊದಲು ಅವನನ್ನು ವಿರೋಧಿಸಿದರೂ ಅನಂತರ ಅವನ ಅದ್ಭುತ ಜೀವನದಿಂದ ಪ್ರಭಾವಿತರಾಗಿ ತ್ಯಾಗ ಮಾರ್ಗವನ್ನು ಹಿಡಿದರು. ಶ್ರೀ ಚೈತನ್ಯನ ಜನನವಾದಾಗ ಶೂನ್ಯವಾದಿ ಬೌದ್ಧರೂ ಕೂಡ ಹರ್ಷವನ್ನು ವ್ಯಕ್ತಪಡಿಸಿದರೆಂದು 'ಚೈತನ್ಯ-ಮಂಗಲ' ಎಂಬ ಗ್ರಂಥದಲ್ಲಿ ಹೇಳಿದೆ.

21. ಸಚ್ಚಿದಾನಂದ ಸ್ವರೂಪನಾದ ಶ್ರೀಕೃಷ್ಣನೇ ಏಕಮಾತ್ರ ಪುರುಷ ; ಜಗತ್ತಿನಲ್ಲಿರುವ ಸ್ಥೂಲ ಸೂಕ್ಷ್ಮ ಜೀವಿಗಳೆಲ್ಲವೂ ಅವನ ಪ್ರಕೃತಿಯ ಅಂಶಗಳು—ಅಂದರೆ ಅವನ ಪತ್ನಿಯರು. ಆದ್ದರಿಂದ ಪವಿತ್ರ ಜೀವನವನ್ನು ನಡೆಸುತ್ತ ಜೀವನು ಈಶ್ವರನನ್ನು ಪತಿರೂಪದಲ್ಲಿ ಪೂಜಿಸಿದರೆ ಅವನ ಕೃಪೆಯಿಂದ ಮುಕ್ತಿಯನ್ನೂ ಆನಂದವನ್ನೂ ಪಡೆಯಬಹುದು. ಇದೇ ಶ್ರೀ ಚೈತನ್ಯನು ತೋರಿಸಿಕೊಟ್ಟ ಮಧುರಭಾವದ ಒಂದು ಸ್ಥೂಲ ಪರಿಚಯ. ಮಹಾಭಾವದಲ್ಲಿ ಎಲ್ಲ ಭಾವಗಳೂ ಸಮಾವೇಶಗೊಳ್ಳುವುವು. ಪ್ರಧಾನ ಗೋಪಿಯಾದ ಶ್ರೀ ರಾಧೆಯು ಈ ಮಹಾ ಭಾವಸ್ವರೂಪಿಣಿಯು ಮತ್ತು ಉಳಿದ ಗೋಪಿಕಾಸ್ತ್ರೀಯರು ಮಹಾಭಾವದಲ್ಲಿ ಅಡಕವಾಗಿರುವ ಉಳಿದ ಭಾವಗಳ ಪ್ರತಿನಿಧಿಗಳು. ಈ ವ್ರಜಗೋಪಿಯರ ಭಾವಗಳನ್ನು ಅನುಸರಿಸಿ ಸಾಧನೆ ಮಾಡುತ್ತ ಹೋದರೆ ಸಾಧಕನು ಆ ಎಲ್ಲ ಭಾವಗಳನ್ನು ತನ್ನದಾಗಿಸಿಕೊಳ್ಳಬಹುದು. ಹಾಗೂ ಕೊನೆಯಲ್ಲಿ ಮಹಾಭಾವದಲ್ಲಿ ನೆಲೆ ನಿಲ್ಲಬಹುದು. ಮಹಾಭಾವಸ್ವರೂಪಿಣಿಯಾದ ಶ್ರೀ ರಾಧೆಯ ಭಾವವನ್ನು ಧ್ಯಾನಮಾಡುತ್ತ ತನ್ನ ಸುಖವನ್ನು ಪರಿತ್ಯಜಿಸಿ ಮನೋವಾಕ್ಕಾಯವಾಗಿ ಶ್ರೀಕೃಷ್ಣನ ಸುಖದಲ್ಲಿಯೇ ಸುಖವನ್ನು ಕಾಣುವುದು—ಇದೇ ಈ ಮಾರ್ಗದ ಪರಮ ಗುರಿ.

22. ಸಾಮಾಜಿಕ ವಿವಾಹ ಪದ್ಧತಿಯಂತೆ ಮದುವೆಯಾದ ಪ್ರೇಮಿಗಳ ಪರಸ್ಪರ ಪ್ರೀತಿಯು ಜಾತಿ ಕುಲ ಶೀಲ ಜನ ಭಯ—ಇವೇ ಮುಂತಾದವುಗಳಿಂದ ನಿಯಂತ್ರಿತವಾಗಿರುತ್ತದೆ. ಅವರು ಒಂದು ಸಾಮಾಜಿಕ ಮಿತಿಗೆ ಒಳಪಟ್ಟಿರುವುದರಿಂದ ಅನೇಕ ಕಾರ್ಯಗಳ ಕಡೆ ಗಮನಹರಿಸಬೇಕಾಗುತ್ತದೆ ಮತ್ತು ಪರಸ್ಪರರ ಸುಖಕ್ಕಾಗಿ ಎಷ್ಟೋ ತ್ಯಾಗ ಮಾಡಬೇಕಾಗುತ್ತದೆ. ಪತ್ನಿಯು ಸಾಮಾಜಿಕ ಕಠೋರ ನಿಯಮಗಳನ್ನು ಪಾಲಿಸಬೇಕಾಗಿರುವುದರಿಂದ ತನ್ನ ಪತಿಯೊಡನೆಯ ಪ್ರೇಮ ಸಂಬಂಧವನ್ನು ಎಷ್ಟೊ ವೇಳೆ ಕಡೆಗಣಿಸಬೇಕಾಗುತ್ತದೆ. ಆದರೆ ಪ್ರೇಯಸಿಯ ಪ್ರೇಮಾಚರಣೆಯೇ ಬೇರೆಯಾಗಿರುತ್ತದೆ. ಪ್ರೇಮದ ಪ್ರಾಬಲ್ಯದಿಂದ ಅವಳು ಯಾವ ನಿಯಮಗಳನ್ನೂ ಲೆಕ್ಕಿಸದೆ, ತನ್ನ ಸ್ಥಾನ-ಮಾನವನ್ನೂ ಲೆಕ್ಕಿಸದೆ ತನ್ನ ಪ್ರಿಯನೊಡನೆ ಬೆರೆಯಲು ಅವಳು ಹಿಂಜರಿಯುವುದಿಲ್ಲ

ವೈಷ್ಣವಾಚಾರ್ಯರು ಈ ಸರ್ವಗ್ರಾಸೀ ಪ್ರೀತಿಯನ್ನು ಈಶ್ವರನ ಮೇಲೆ ಆರೋಪಿಸಲು ಉಪದೇಶಿಸುತ್ತಾರೆ. ಶ್ರೀರಾಧೆಯು ಅಯನ ಘೋಷನ ಪತ್ನಿಯಾಗಿದ್ದರೂ ಶ್ರೀಕೃಷ್ಣನಿಗಾಗಿ ತನ್ನ ಸರ್ವಸ್ವವನ್ನೂ ತ್ಯಜಿಸಿದಳು.

23. ವೈಷ್ಣವಾಚಾರ್ಯರು, ಮಧುರ ಭಾವದಲ್ಲಿ ಶಾಂತಾದಿ ಭಾವಗಳ ಸಾರ ಅಡಗಿದೆ ಮತ್ತು ಅದೇ ಸರ್ವಶ್ರೇಷ್ಠ ಎಂದು ಹೇಳುತ್ತಾರೆ. ಪ್ರೇಯಸಿಯು ತನ್ನ ಪ್ರಿಯತಮನನ್ನು ದಾಸಿಯಂತೆ ಸೇವಿಸುತ್ತಾಳೆ, ಸಖಿಯಂತೆ ಅವನ ಸುಖದುಃಖಗಳಲ್ಲಿ ಭಾಗಿಯಾಗುತ್ತಾಳೆ, ತಾಯಿಯಂತೆ ಅವನನ್ನು ಪೋಷಿಸುತ್ತಾಳೆ, ಅವನ ಹಿತವನ್ನು ಬಯಸುತ್ತಾಳೆ. ಹೀಗೆ ತನ್ನನ್ನು ಮರೆತು ಪ್ರಿಯತಮನ ಸುಖವನ್ನೇ ಯಾವಾಗಲೂ ಬಯಸುತ್ತ ಅದರಲ್ಲಿಯೇ ಅಪಾರ ಶಾಂತಿಯನ್ನು ಪಡೆಯುವಳು. ಇದೇ ಸರ್ವಶ್ರೇಷ್ಠ ಪ್ರೇಮ. ಸ್ವಾರ್ಥದಿಂದ ಕೂಡಿದ ಉಳಿದ ಪ್ರೀತಿಯನ್ನು ಸಮಂಜಸ ಮತ್ತು ಸಾಧಾರಣ ಪ್ರೀತಿಯೆಂದು ಕರೆಯುತ್ತಾರೆ, ಸಮಂಜಸ ಪ್ರೀತಿಯಲ್ಲಿ ಪ್ರೇಮಿಯು ತನ್ನ ಪ್ರಿಯನ ಸುಖದಂತೆ ತನ್ನ ಸುಖದ ಕಡೆಗೂ ಗಮನ ಕೊಡುತ್ತಾಳೆ. ಸಾಧಾರಣ ಪ್ರೀತಿಯಲ್ಲಿ ಪ್ರೇಮಿಯು ತನ್ನ ಸುಖಕ್ಕಾಗಿಯೇ ಪ್ರಿಯನನ್ನು ಪ್ರೀತಿಸುತ್ತಾಳೆ.

24. ಶ್ರೀಚೈತನ್ಯನು ವಿಷಯ ಸುಖವನ್ನು ವಿಷದಂತೆ ಪರಿತ್ಯಜಿಸುವುದರ ಮೂಲಕ ತನ್ನ ಜೀವನವನ್ನು ನಿಯಂತ್ರಿಸಿಕೊಂಡು ಶ್ರೀರಾಧೆಯಂತೆ ಶ್ರೀಕೃಷ್ಣನನ್ನು ಪ್ರೀತಿಸುತ್ತ ಸಾಧನೆ ಮಾಡಬೇಕೆಂದು—ತೋರಿಸಿಕೊಟ್ಟನು. ಅವನು ನಾಮಮಾಹಾತ್ಮ್ಯವನ್ನು ಪ್ರಚಾರ ಮಾಡಿದನು. ಇದರಿಂದ ಆ ಕಾಲದಲ್ಲಿದ್ದ ವ್ಯಭಿಚಾರವನ್ನು ನಿವಾರಿಸಿ ಸಮಾಜ ಕಲ್ಯಾಣವನ್ನೂ ಮಾಡಿದನು. ಈ ಮೂಲಕ ಅವನು ಹಾದಿ ತಪ್ಪಿದವರಿಗೆ ಸರಿಯಾದ ಹಾದಿ ತೋರಿಸಿದನು, ಸಮಾಜಭ್ರಷ್ಟರನ್ನು ಹೊಸ ಸಮಾಜದ ಚೌಕಟ್ಟಿನಲ್ಲಿ ಸೇರಿಸಿದನು, ಜಾತಿಯಿಂದ ಹೊರಗಿರುವವರನ್ನು ಭಗವದ್ ಭಕ್ತರ ಜಾತಿಗೆ ಸೇರಿಸಿಕೊಂಡನು ಮತ್ತು ಸರ್ವಸಂಪ್ರದಾಯಗಳ ಮುಂದೆ ತ್ಯಾಗ ವೈರಾಗ್ಯದ ಉಚ್ಚ ಆದರ್ಶವನ್ನು ಎತ್ತಿ ಹಿಡಿದನು. ಸಾಧಾರಣ ಪ್ರೇಮಿಗಳ ಪ್ರಣಯದಲ್ಲಿ ಎಂಟು ಸಾತ್ವಿಕ ವಿಕಾರಗಳು ಉಂಟಾಗುವುವು.† ಈ ಶಾರೀರಿಕ ಮತ್ತು ಮಾನಸಿಕ ವಿಕಾರಗಳು ಭಗವಂತನನ್ನು ತೀವ್ರವಾಗಿ ಪ್ರೀತಿಸಿದಾಗಲೂ ಉಂಟಾಗುವುವು ಎಂಬುದು ಶ್ರೀಚೈತನ್ಯನ ಜೀವನದಲ್ಲಿ ಕಂಡುಬರುತ್ತದೆ. ಇದರಿಂದಾಗಿ ಆ ಕಾಲದ ಅಲಂಕಾರ ಶಾಸ್ತ್ರವು ಆಧ್ಯಾತ್ಮಿಕ ಶಾಸ್ತ್ರದ ಒಂದು ಅಂಗವಾಗಿ ಪರಿಣಮಿಸಿತು ಮತ್ತು ಅಲಂಕಾರಿಕ ತತ್ತ್ವಗಳನ್ನು ಅಳವಡಿಸಿಕೊಂಡ ಬರೆದ ಆಧ್ಯಾತ್ಮಿಕ ವಿಚಾರಗಳು ಸಾಧಕರಿಗೆ ಹೆಚ್ಚು ರುಚಿಕರವಾಗಿ ಅವರ ಆಧ್ಯಾತ್ಮಿಕ ಪ್ರಗತಿಗೆ ಸಹಾಯಕವಾದುವು. ಅಷ್ಟೇ ಅಲ್ಲದೆ, ಭಗವಂತನನ್ನು ತಮ್ಮವನನ್ನಾಗಿ ಮಾಡಿಕೊಂಡು, ತಮ್ಮ ಕಾಮಕ್ರೋಧಾದಿ ಕೀಳು ಪ್ರವೃತ್ತಿಗಳನ್ನೂ ಹೇಗೆ ಅವನೆಡೆಗೆ ತಿರುಗಿಸಬಹುದೆಂಬುದನ್ನು ತೋರಿಸಿಕೊಟ್ಟುವು.

---

† ಸ್ತಬ್ಧ, ಸ್ವೇದ, ರೋಮಾಂಚ, ಸ್ವರಭೇದ, ಕಂಪನ, ವಿವರ್ಣ, ಅಶ್ರು, ಪ್ರಲಯ.

25. ಪಾಶ್ಚಾತ್ಯಪ್ರಭಾವಕ್ಕೆ ಒಳಗಾಗಿರುವ ಆಧುನಿಕರು ಮಧುರ ಭಾವವು ಪುರುಷರಿಗೆ ಅಸ್ವಾಭಾವಿಕ ಮತ್ತು ಅನುಚಿತ ಎಂದು ಭಾವಿಸಬಹುದು. ಆದರೆ ವೇದಾಂತ ವಾದಿಗಳು ಆದರ ಮಹೌಲ್ಯವನ್ನು ಒಪ್ಪಿಕೊಂಡಿರುವರು. ಅವರ ಪ್ರಕಾರ, ಬಹುಕಾಲದ ಅಭ್ಯಾಸದಿಂದ ವಿವಿಧ ಭಾವಗಳು ಮನಸ್ಸಿನಲ್ಲಿ ದೃಢಮೂಲವಾಗುವುವು. ಜನ್ಮಜನ್ಮಾಂತ ರದ ಈ ಸಂಸ್ಕಾರದ ಬಲದಿಂದಲೇ ಮನುಷ್ಯನು ಒಂದೇ ಅದ್ವೈತ ವಸ್ತುವಿನ ಸ್ಥಾನದಲ್ಲಿ ಈ ವಿಚಿತ್ರ ಜಗತ್ತನ್ನು ನೋಡುತ್ತಿರುವನು. ಭಗವದನುಗ್ರಹದಿಂದ ಈ ಮುಹೂರ್ತದಲ್ಲಿ ಇಲ್ಲಿ ಈ ಜಗತ್ತು ಇಲ್ಲ ಎಂದು ದೃಢವಾಗಿ ಹೇಳಲು ಸಾಧ್ಯವಾದರೆ ಆಗ ಇದೇ ಕ್ಷಣದಲ್ಲಿ ಅದು ಇಂದ್ರಿಯಗಳಿಗೆ ಅಗೋಚರವಾಗಿ ಎಲ್ಲೋ ಮಾಯವಾಗುತ್ತದೆ. ಜಗತ್ತು ಇದೇ ಎಂದು ನಾವು ಭಾವಿಸುವುದರಿಂದಲೇ ಅದು ನಮಗೆ ಕಾಣಿಸುತ್ತಿದೆ. ನಾನು ಪುರುಷನೆಂದು ಭಾವಿಸುವುದರಿಂದಲೇ ಪುರುಷಸ್ವಭಾವದವನಾಗಿದ್ದೇನೆ, ಹಾಗೆಯೇ ಸ್ತ್ರೀಯೂ ತಾನು ತನ್ನನ್ನು ಸ್ತ್ರೀಯೆಂದು ಭಾವಿಸುತ್ತಿರುವುದರಿಂದ ಸ್ತ್ರೀಯಾಗಿರುವಳು. ಮನುಷ್ಯನ ಹೃದಯದಲ್ಲಿ ಒಂದು ಭಾವವು ಪ್ರಬಲವಾಗಿ ಉಳಿದರೆ ಅದು ಸಕಲ ಭಾವಗಳನ್ನೂ ಹತ್ತಿಕ್ಕುವುದು, ಇಲ್ಲವೇ ನಾಶಮಾಡುವುದು, ಆದ್ದರಿಂದ ಭಗವಂತನ ವಿಷಯದಲ್ಲಿ ಮಧುರಭಾವವನ್ನು ರೂಪಿಸಿಕೊಂಡು ಸಾಧನೆ ಮಾಡಿದರೆ ಆಗ ಕ್ರಮೇಣ ಸಾಧಕನ ಮನಸ್ಸಿನಲ್ಲಿರುವ ಇತರ ಭಾವಗಳೆಲ್ಲ ನಾಶವಾಗುವುವು. ಇದು ಒಂದು ಮುಳ್ಳಿನಿಂದ ಮತ್ತೊಂದು ಮುಳ್ಳನ್ನು ತೆಗೆದಹಾಗೆ, ಮಾನವ ಮನಸ್ಸಿನಲ್ಲಿ ಎಲ್ಲ ಸಂಸ್ಕಾರಗಳಿಗೆ ಆಧಾರವಾಗಿರುವುದು 'ನಾನು ದೇಹ' ಎಂಬ ಬೋಧೆ. ಇದರಿಂದಲೇ 'ನಾನು ಪುರುಷ ಅಥವಾ ಸ್ತ್ರೀ' ಎಂಬ ಸಂಸ್ಕಾರಗಳು ಉಂಟಾಗುವುವು. ಭಗವಂತನನ್ನು ಪತಿಯೆಂದು ಭಾವಿಸಿ ತನ್ನನ್ನು ಸ್ತ್ರೀಯೆಂದು ಭಾವಿಸಿ ಪುರುಷ ಸಾಧಕನು ಸಾಧನೆ ಮಾಡುತ್ತ ಹೋದರೆ ಕ್ರಮೇಣ ತನ್ನ ಪುರುಷ ಭಾವವನ್ನು ಕಳೆದುಕೊಳ್ಳುವನು. ಅನಂತರ 'ನಾನು ಸ್ತ್ರೀ' ಎಂಬ ಭಾವವನ್ನೂ ಸುಲಭವಾಗಿ ಹೋಗಲಾಡಿಸಿ ಭಾವಾತೀತ ಅವಸ್ಥೆಯನ್ನು ಮುಟ್ಟುವನು. ಆದ್ದರಿಂದ ಸಾಧಕನು ಮಧುರ ಭಾವ ಸಾಧನೆಯಲ್ಲಿ ಸಿದ್ಧಿಯನ್ನು ಪಡೆದು ಭಾವಾತೀತ ಸ್ಥಿತಿಯ ಅತಿ ಹತ್ತಿರ ತಲುಪುವುದು ವೇದಾಂತಿಯ ದೃಷ್ಟಿಯಲ್ಲಿ ಯುಕ್ತಿಯುಕ್ತವಾಗಿಯೇ ಇದೆ.

26. ಹಾಗಾದರೆ ರಾಧಾಭಾವವನ್ನು ಪಡೆಯುವುದೇ ಸಾಧಕನ ಪರಮೋ ದ್ದೇಶವೆ ? ಎಂಬ ಪ್ರಶ್ನೆ ಏಳಬಹುದು. ವರ್ತಮಾನಕಾಲದ ವೈಷ್ಣವರು, ರಾಧೆಯ ಸಖಿಯರ ಭಾವಮಾತ್ರ ಸಾಧ್ಯ, ಮಹಾ ಭಾವಮಯಿಯಾದ ರಾಧಿಕೆಯ ಭಾವವನ್ನು ಪಡೆಯುವುದು ಸಾಧಕರಿಗೆ ಅಸಾಧ್ಯ ಎಂದು ಹೇಳುತ್ತಾರೆ. ಆದರೂ ಅದೇ ಪರಮಗುರಿ ಎಂಬುದೇ ಅನುಮಿತವಾಗುವುದು. ಏಕೆಂದರೆ ಸಖಿಯರ ಭಾವಕ್ಕೂ ರಾಧೆಯ ಭಾವಕ್ಕೂ ಗುಣದಲ್ಲಿ ವ್ಯತ್ಯಾಸವಿಲ್ಲ, ಕೇವಲ ಪರಿಮಾಣದಲ್ಲಿ ವ್ಯತ್ಯಾಸವಷ್ಟೆ. ರಾಧೆಯಂತೆಯೇ ಅವಳ ಸಖಿಯರೂ ಶ್ರೀಕೃಷ್ಣನನ್ನು ಪತಿಯೆಂದು ಆರಾಧಿಸುತ್ತಿದ್ದರು; ರಾಧೆಯೊಡನೆ ಇದ್ದಾಗ ಶ್ರೀಕೃಷ್ಣನಿಗೆಹೆಚ್ಚು ಆನಂದವಾಗುತ್ತಿದ್ದುದನ್ನು ತಿಳಿದ ಅವರು ಅವರಿಬ್ಬರ

ಮಿಲನಕ್ಕಾಗಿ ಪ್ರಯತ್ನಿಸುತ್ತಿದ್ದರು. ರೂಪ, ಸನಾತನ, ಜೀವ ಗೋಸ್ವಾಮಿ ಮುಂತಾದ ಶ್ರೇಷ್ಠ ವೈಷ್ಣವಭಕ್ತರು ಬೃಂದಾವನದಲ್ಲಿ ಶ್ರೀಕೃಷ್ಣನ ಮೂರ್ತಿಯನ್ನು ಪೂಜಿಸುತ್ತಿದ್ದಾಗ ಆ ಮೂರ್ತಿಯ ಪಕ್ಕದಲ್ಲಿ ಶ್ರೀರಾಧೆಯ ಮೂರ್ತಿಯನ್ನು ಇಟ್ಟಿರಲಿಲ್ಲವಂತೆ. ಇದಕ್ಕೆ ಕಾರಣ ತಮ್ಮನ್ನೇ ಶ್ರೀರಾಧೆ ಎಂದು ಅವರು ಭಾವಿಸುತ್ತಿದ್ದುದು ಎಂದು ಹೇಳುತ್ತಾರೆ. ಇದರಿಂದಲೂ ರಾಧೆಯ ಭಾವವೇ ಚರಮ ಲಕ್ಷ್ಯ ಎಂಬುದು ಸಿದ್ಧವಾಗುವುದು.

ಮಧುರ ಭಾವದ ಬಗ್ಗೆ ಹೆಚ್ಚಿನ ವಿವರವನ್ನು ತಿಳಿಯಬೇಕೆನ್ನುವವರು ರೂಪ, ಸನಾತನ ಮತ್ತು ಜೀವ ಗೋಸ್ವಾಮಿಯರ ಪ್ರಮುಖ ಗ್ರಂಥಗಳ ಅಧ್ಯಯನ ಮಾಡಬೇಕು. ವೈಷ್ಣವ ಕವಿಗಳಾದ ವಿದ್ಯಾಪತಿ ಮತ್ತು ಚಂಡೀದಾಸ ಇವರ ಕವನಗಳಲ್ಲಿಯೂ ಮಧುರ ಭಾವದ ಚಿತ್ರ ನಮಗೆ ದೊರೆಯುವುದು. ಇವರು ಈ ಭಾವದ ಅಂಗಗಳಾದ ಪೂರ್ವರಾಗ (ದಿವ್ಯಪ್ರೇಮದ ಉದಯ), ದಾನ (ಅರ್ಪಣೆ), ಮಾನ (ಭಾವಾತಿರೇಕದಿಂದ ಪ್ರಿಯನ ಪ್ರಣಯವನ್ನು ತಿರಸ್ಕರಿಸುವುದು), ಅಭಿಮಾನ (ನೊಂದ ಪ್ರೀತಿಯ ಭಾವ) ಮತ್ತು ಮಾಥುರ (ವಿರಹ ವೇದನೆ)—ಇವುಗಳನ್ನು ವಿಶದವಾಗಿ ವಿವರಿಸುವರು. ಶ್ರೀರಾಮಕೃಷ್ಣರು ಮಧುರ ಭಾವದ ಸಾಧನೆಯಲ್ಲಿ ಉನ್ನತಿಯ ಪರಾಕಾಷ್ಠೆಯನ್ನು ಮುಟ್ಟಿದ್ದರು ಎಂಬುದನ್ನು ತೋರಿಸುವುದಕ್ಕೆ ನಾವು ಇಲ್ಲಿ ಆ ಭಾವದ ಸಾರವನ್ನು ಚರ್ಚಿಸಿರುವೆವು.

ಹದಿನಾಲ್ಕನೆಯ ಅಧ್ಯಾಯ

ಶ್ರೀರಾಮಕೃಷ್ಣರ ಮಧುರಭಾವ ಸಾಧನೆ

1. ಶ್ರೀರಾಮಕೃಷ್ಣರ ಭಾವತನ್ಮಯತೆ 2. ಸಾಧನ ಕಾಲದಲ್ಲಿ ಅದರ ಪರಿವರ್ತನೆ 3. ಸಾಧನೆಯ ಕಾಲಕ್ಕೆ ಮುಂಚೆ ಅವರಿಗೆ ಮಧುರಭಾವ ಹಿಡಿಸುತ್ತಿರಲಿಲ್ಲ 4. ಶ್ರೀರಾಮಕೃಷ್ಣರ ಸಾಧನೆಗಳು ಎಂದೂ ಶಾಸ್ತ್ರವಿರೋಧಿಯಲ್ಲ 5. ಅವರಿಗೆ ಶಾಸ್ತ್ರದಲ್ಲಿದ್ದ ಗೌರವ 6. ಮಧುರಭಾವದ ಸಾಧನೆಯ ವೇಳೆ ಅವರು ಸ್ತ್ರೀಯರಂತೆ ವೇಶ ಧರಿಸಿದರು 7. ಆಗ ಅವರ ಎಲ್ಲ ಆಚರಣೆಗಳೂ ಸ್ತ್ರೀಯರಂತಿದ್ದವು 8. ಅವರು ಮಥುರನ ಮನೆಯಲ್ಲಿ ಸ್ತ್ರೀಯರ ಗೆಳತಿಯಾಗಿದ್ದುದು 9. ಅವರು ಸ್ತ್ರೀವೇಶದಲ್ಲಿದ್ದಾಗ ಗುರುತಿಸುವುದೇ ಕಷ್ಟವಾಗುತ್ತಿತ್ತು 10. ಮಧುರಭಾವ ಸಾಧನೆಯ ವೇಳೆ ಶ್ರೀರಾಮಕೃಷ್ಣರ ವರ್ತನೆ ಮತ್ತು ಭೌತಿಕ ಬದಲಾವಣೆ 11. ಅವರ ಅತೀಂದ್ರಿಯ ಪ್ರೀತಿಗೂ ನಮ್ಮ ಪ್ರೀತಿಗೂ ಹೋಲಿಕೆ 12. ರಾಧಾಪ್ರೇಮದ ಬಗ್ಗೆ ಭಕ್ತಿಶಾಸ್ತ್ರದ ಹೇಳಿಕೆ 13. ರಾಧಾಪ್ರೇಮವನ್ನು ತಿಳಿಸಿಕೊಡುವುದಕ್ಕಾಗಿಯೇ ಚೈತನ್ಯನ ಆಗಮನ 14. ಶ್ರೀರಾಮಕೃಷ್ಣರ ರಾಧಿಕಾ ಉಪಾಸನೆ ಮತ್ತು ದರ್ಶನ 15. ತಾವು ರಾಧೆ ಎಂಬ ಅವರ ಅನುಭವ 16. ಸ್ತ್ರೀಭಾವದಲ್ಲಿ ಅವರ ಅದ್ಭುತ ದೈಹಿಕ ಪರಿವರ್ತನೆ 17. ಮನಸ್ಸು ದೇಹವನ್ನು ಸೃಷ್ಟಿಸುತ್ತದೆ 18. ಶ್ರೀರಾಮಕೃಷ್ಣರಿಗೆ ಶ್ರೀಕೃಷ್ಣದರ್ಶನ 19 ಅವರು ಯುವಕರಾಗಿದ್ದಾಗ ಬಾಲಕಿಯಾಗಿ ಹುಟ್ಟಬೇಕೆಂಬ ಆಸೆ 20. 'ಭಾಗವತ ಭಕ್ತ ಭಗವಾನ್'—ಈ ಮೂರೂ ಒಂದೇ

1. ಶ್ರೀರಾಮಕೃಷ್ಣರ ಏಕಾಗ್ರವಾದ ಮನಸ್ಸಿನಲ್ಲಿ ಯಾವುದೇ ಭಾವವು ಉದಯವಾದರೂ ಅದರಲ್ಲಿಯೇ ಅವರು ಸ್ವಲ್ಪಕಾಲ ತನ್ಮಯರಾಗಿ ಉಳಿಯುತ್ತಿದ್ದರು. ಆಗ ಆ ಭಾವವು ಉಳಿದ ಎಲ್ಲ ಭಾವಗಳನ್ನೂ ದೂರವಾಗಿಸುತ್ತಿತ್ತು. ಆ ಭಾವದ ಪ್ರಕಾಶಕ್ಕೆ ಅನುಗುಣವಾಗಿ ದೇಹವು ಪರಿವರ್ತನಗೊಳ್ಳುತ್ತಿತ್ತು. ಬಾಲ್ಯಕಾಲದಿಂದಲೂ ಅವರಲ್ಲಿ ಈ ರೀತಿಯ ಸ್ವಭಾವ ಕಂಡುಬರುತ್ತಿತ್ತು. ನಾವು ದಕ್ಷಿಣೇಶ್ವರಕ್ಕೆ ಬಂದು ಹೋಗುತ್ತಿದ್ದಾಗ ಪ್ರತಿನಿತ್ಯ ಅವರಲ್ಲಿ ಈ ಸ್ವಭಾವವನ್ನು ಗಮನಿಸುತ್ತಿದ್ದೆವು. ಸಂಗೀತ ಶ್ರವಣದಿಂದಲೋ ಅಥವಾ ಬೇರೆ ರೀತಿಯಲ್ಲಿ ಅವರ ಮನಸ್ಸು ಒಂದು ಭಾವದಲ್ಲಿ ಮಗ್ನವಾಗಿದ್ದಾಗ ಬೇರೆ ಭಾವದ ಹಾಡನ್ನೊ ಅಥವಾ ಮಾತನ್ನೊ ಪ್ರಾರಂಭಿಸಿದರೆ ಅವರಿಗೆ ತೀವ್ರ ವೇದನೆ ಉಂಟಾಗುತ್ತಿತ್ತು. ಒಂದೇ ಗುರಿಯೆಡೆಗೆ ಹರಿಯುತ್ತಿರುವ ಚಿತ್ತವೃತ್ತಿಯ ಗತಿಯನ್ನು ತಟ್ಟನೆ ಬೇರೆಡೆ ತಿರುಗಿಸುವುದರಿಂದಲೇ ಅವರಿಗೆ ಕಷ್ಟ

ವುಂಟಾಗುತ್ತಿತ್ತು ಎಂಬುದು ಸ್ಪಷ್ಟ. ಮನಸ್ಸು ಒಂದೇ ಭಾವದ ಚಿತ್ತವೃತ್ತಿಯಿಂದ ಕೂಡಿದ್ದರೆ ಪತಂಜಲಿಯು ಅದನ್ನು ಸವಿಕಲ್ಪ ಸಮಾಧಿ ಎಂದು ಕರೆಯುತ್ತಾನೆ. ಭಕ್ತಿ ಪಂಥಗಳಲ್ಲಿ ಇದನ್ನೇ ಭಾವಸಮಾಧಿ ಎಂದು ಕರೆಯುವುದು. ಆದ್ದರಿಂದ ಈ ರೀತಿಯ ಸಮಾಧಿಯನ್ನು ಹೊಂದುವ ಸಾಮರ್ಥ್ಯ ಶ್ರೀರಾಮಕೃಷ್ಣರಿಗೆ ಚಿಕ್ಕಂದಿನಲ್ಲಿಯೂ ಇತ್ತು ಎಂದು ಕಂಡು ಬರುವುದು.

2. ಅವರು ಸಾಧನೆಯಲ್ಲಿ ತೊಡಗಿದ ಕಾಲದಲ್ಲಿ ಮೇಲೆ ಹೇಳಿದ ಅವರ ಈ ಸ್ವಭಾವವು ಒಂದು ಬೇರೆ ರೂಪವನ್ನು ಪಡೆಯಿತು. ಈಗ ಅವರ ಮನಸ್ಸು ಹಿಂದಿನಂತೆ ಯಾವುದೇ ಒಂದು ಭಾವದಲ್ಲಿ ಸ್ವಲ್ಪ ಕಾಲವಿದ್ದು ಅನಂತರ ಬೇರೆ ಭಾವವನ್ನು ಹಿಡಿಯುತ್ತಿರಲಿಲ್ಲ. ಒಂದು ಭಾವವನ್ನು ಅವರು ಒಪ್ಪಿಕೊಂಡರೆ ಆ ಭಾವದ ಅಂತಿಮ ಸ್ಥಿತಿಯನ್ನು ಮುಟ್ಟಿ ಅದ್ವೈತಾನುಭವವನ್ನು ಪಡೆಯುವವರೆಗೂ ಮನಸ್ಸು ಅದೇ ಭಾವದಲ್ಲಿಯೇ ಇರುತ್ತಿತ್ತು. ಅವರು ದಾಸ್ಯಭಾವದ ಪರಮಾವಸ್ಥೆಯನ್ನು ಮುಟ್ಟುವವರೆಗೂ ಮಾತೃಭಾವವನ್ನು ಅಂಗೀಕರಿಸಿಕೊಳ್ಳಲಿಲ್ಲ. ಹಾಗೆಯೇ ಮಾತೃಭಾವದ ಸಾಧನೆಯಲ್ಲಿ ಅಂತಿಮ ಸಿದ್ಧಿಯನ್ನು ಪಡೆದ ಹೊರತೂ ಅವರು ವಾತ್ಸಲ್ಯಭಾವದ ಸಾಧನೆಯಲ್ಲಿ ತೊಡಗಿರಲಿಲ್ಲ. ಅವರ ಸಾಧನ ಕಾಲದ ವೃತ್ತಾಂತವನ್ನು ಪರಿಶೀಲಿಸಿದಾಗ ನಮಗಿದು ಸ್ಪಷ್ಟವಾಗಿ ಕಂಡುಬರುವುದು.

3. ಭೈರವೀ ಬ್ರಾಹ್ಮಣಿಯು ದಕ್ಷಿಣೇಶ್ವರಕ್ಕೆ ಬರುವ ಸಂದರ್ಭದಲ್ಲಿ ಶ್ರೀರಾಮಕೃಷ್ಣರು ಮಾತೃಭಾವ ಸಾಧನೆಯಲ್ಲಿ ಮಗ್ನರಾಗಿದ್ದರು. ಪ್ರಪಂಚದ ಸಕಲ ವಸ್ತುಗಳಲ್ಲೂ ವ್ಯಕ್ತಿಗಳಲ್ಲೂ ಶ್ರೀಜಗನ್ಮಾತೆಯನ್ನೇ ಕಾಣುತ್ತಿದ್ದರು. ಸ್ತ್ರೀಯರೆಲ್ಲರೂ ಅವರಿಗೆ ಮಾತೃಸಮಾನರಾಗಿದ್ದರು. ಆದ್ದರಿಂದಲೇ ಭೈರವೀ ಬ್ರಾಹ್ಮಣಿಯನ್ನು ಕಂಡಾಕ್ಷಣ ತಾಯಿಯೆಂದೇ ಸಂಬೋಧಿಸಿದ್ದರು. ಕೆಲವೊಮ್ಮೆ ಆಕೆಯ ತೊಡೆಯ ಮೇಲೆ ಕುಳಿತು ಅವಳ ಕೈಯಿಂದ ಆಹಾರವನ್ನು ಉಣ್ಣುತ್ತಿದ್ದರು. ಬ್ರಾಹ್ಮಣಿಯು ಕೆಲವೊಮ್ಮೆ ಮಧುರಭಾವದಿಂದ ತುಂಬಿದವಳಾಗಿ ಪ್ರೇಮಗೀತೆಯನ್ನು ಹಾಡಿದರೆ ಅದು ತಮಗೆ ಹಿಡಿಸುವುದಿಲ್ಲವೆಂದು ಶ್ರೀರಾಮಕೃಷ್ಣರು ಆಕ್ಷೇಪಿಸುತ್ತಿದ್ದರು. ಆ ಭಾವವನ್ನು ಬಿಟ್ಟು ಮಾತೃಭಾವಕ್ಕೆ ಸಂಬಂಧಿಸಿದ ಹಾಡುಗಳನ್ನು ಹಾಡಲು ಅವರು ಒತ್ತಾಯಿಸುತ್ತಿದ್ದರು. ಬ್ರಾಹ್ಮಣಿಯೂ ಇದನ್ನು ಅರ್ಥಮಾಡಿಕೊಂಡು ಶ್ರೀಜಗನ್ಮಾತೆಯ ದಾಸೀಭಾವದ ಹಾಡನ್ನು ಹಾಡುತ್ತಿದ್ದಳು. ಇಲ್ಲವೇ ಯಶೋದೆಯ ವಾತ್ಸಲ್ಯ ಭಾವದ ಹಾಡುಗಳನ್ನು ಹಾಡುತ್ತಿದ್ದಳು. ಈ ಘಟನೆಗಳು ಶ್ರೀರಾಮಕೃಷ್ಣರು ಮಧುರಭಾವ ಸಾಧನೆಯನ್ನು ಪ್ರಾರಂಭಿಸುವುದಕ್ಕೆ ಬಹಳ ಮುಂಚಿನ ಕಾಲಕ್ಕೆ ಸಂಬಂಧಿಸಿದುವು. ಅವರ "ಭಾವದ ಮನೆಯಲ್ಲಿ ಕಳವು" ಎಂದೂ ಆಗುತ್ತಿರಲಿಲ್ಲ.

ಇದಾದ ಕೆಲವು ವರ್ಷಗಳ ನಂತರ ಅವರ ಮನಸ್ಸು ವಾತ್ಸಲ್ಯಭಾವದಿಂದ ತುಂಬಿ ಹೋಯಿತು. ಈ ಸಾಧನೆಯ ನಂತರ ಅವರು ಮಧುರಭಾವದ ಸಾಧನೆಯನ್ನು ಪ್ರಾರಂಭಿಸಿದರು. ಅದನ್ನು ಕುರಿತು ಇಲ್ಲಿ ಹೇಳುತ್ತೇವೆ.

4. ಶ್ರೀರಾಮಕೃಷ್ಣರು ಅನಕ್ಷರಸ್ಥರೇನೋ ನಿಜ. ಆದರೆ ಅವರ ಇಡೀ

ಜೀವನವೂ ಶಾಸ್ತ್ರಾನುಸಾರವಾಗಿಯೇ ನಡೆಯಿತು ಎಂಬುದನ್ನು ನೋಡಿದಾಗ ನಮಗೆ ಆಶ್ಚರ್ಯವಾಗುವುದು. ಅವರು ಆಧ್ಯಾತ್ಮಿಕ ಗುರುವಿನಿಂದ ದೀಕ್ಷೆ ಪಡೆಯುವುದಕ್ಕೆ ಮುಂಚೆ ತಮ್ಮ ಸ್ವಂತ ಉತ್ಸಾಹದಿಂದಲೇ ಏನೇನು ಸಾಧನವಿಧಾನಗಳನ್ನು ಅನುಸರಿಸಿ ದರೂ ಅವೆಲ್ಲ ಶಾಸ್ತ್ರಾನುಸಾರವಾಗಿಯೇ ಇದ್ದವು, ಎಂದೂ ಅದಕ್ಕೆ ವಿರುದ್ಧವಾಗಿರ ಲಿಲ್ಲ. ಯಾರು ಶುದ್ಧಮನಸ್ಸಿನಿಂದ, ಶುದ್ಧ ಭಾವದಿಂದ ಕೂಡಿದವರಾಗಿ ಭಗವಂತ ನನ್ನು ಕಾಣಬೇಕೆಂಬ ಉತ್ಸಾಹದಿಂದ ಮುಂದುವರಿಯುವರೋ ಅವರ ಕ್ರಿಯೆಗಳೆಲ್ಲವೂ ಶಾಸ್ತ್ರಸಮ್ಮತವಾಗಿಯೇ ಇರುತ್ತವೆಯೆಂಬುದನ್ನು ಇದು ತೋರಿಸುತ್ತದೆ. ಏಕೆಂದರೆ ಇಂಥ ಮಾನಸಿಕ ಸ್ಥಿತಿಯುಳ್ಳವರೇ ಶಾಸ್ತ್ರಗಳನ್ನು ಬರೆದವರು. ಮಹಾಪುರುಷರು ಬರೆದಿಟ್ಟ ತಮ್ಮ ಸಾಧನೆ ಮತ್ತು ಸಿದ್ಧಿ–ಇವುಗಳ ವಿಷಯಗಳೇ ಮುಂದೆ ಶಾಸ್ತ್ರವೆಂದೇ ಪರಿಗಣಿಸಲ್ಪಟ್ಟಿದ್ದು. ಅದು ಏನೇ ಇರಲಿ, ನಿರಕ್ಷರರಾದ ಶ್ರೀರಾಮಕೃಷ್ಣರು ಶಾಸ್ತ್ರ ದಲ್ಲಿ ಹೇಳಿರುವ ಅನುಭವಗಳನ್ನು ಯಥಾವತ್ತಾಗಿ ಪಡೆದುದರಿಂದ ಶಾಸ್ತ್ರ ಪ್ರಮಾಣವು ಹೆಚ್ಚಿದಂತಾಯಿತು. ಶಾಸ್ತ್ರದ ಸತ್ಯತೆಯನ್ನು ಪ್ರಮಾಣೀಕರಿಸುವುದಕ್ಕಾಗಿಯೇ ಶ್ರೀರಾಮಕೃಷ್ಣರು ನಿರಕ್ಷರರಾಗಿ ಅವತರಿಸಿ ಬಂದರು ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ.

5. ಇದಕ್ಕೆ ಕೆಲವು ಉದಾಹರಣೆಗಳನ್ನು ಕೊಡಬಹುದು. ಶ್ರೀರಾಮ ಕೃಷ್ಣರು ವಿವಿಧ ಭಾವದ ಪ್ರೇರಣೆಗೆ ಒಳಪಟ್ಟಾಗ ವಿವಿಧ ಬಗೆಯ ಉಡುಪನ್ನು ಧರಿಸುತ್ತಿದ್ದರು. ಉಪನಿಷತ್ತಿನಲ್ಲಿ ಹೇಳಿದೆ 'ತಪಸೋವಾಪ್ಯಲಿಂಗಾತ್' ಅಂದರೆ ಬಾಹ್ಯ ಆಲಂಬನೆಗಳಿಲ್ಲದೆ ಕೇವಲ ತಪಸ್ಸಿನಿಂದ ಸಿದ್ಧಿಯಾಗುವುದಿಲ್ಲ. ಅದರಂತೆಯೇ ಶ್ರೀರಾಮ ಕೃಷ್ಣರೂ ಯಾವ ಭಾವ ಸಾಧನೆಗಳಲ್ಲಿ ನಿರತರಾಗುತ್ತಿದ್ದರೊ ತಮ್ಮ ಆಂತರಿಕ ಪ್ರೇರಣೆ ಯಿಂದಲೇ ಅದಕ್ಕೆ ಅನುಕೂಲವಾದ ವೇಶಭೂಷಣಗಳನ್ನು ಅಥವಾ ಬಾಹ್ಯ ಚಿಹ್ನೆ ಗಳನ್ನು ಧರಿಸುತ್ತಿದ್ದರು. ತಂತ್ರದಲ್ಲಿ ಹೇಳಿರುವ ಮಾತೃಭಾವದ ಸಾಧನೆಯನ್ನು ಮಾಡುವಾಗ ಅವರು ರಕ್ತವಸ್ತ್ರ ವಿಭೂತಿ, ಸಿಂಧೂರ ಮತ್ತು ರುದ್ರಾಕ್ಷಿ ಇತ್ಯಾದಿಗಳನ್ನು ಧರಿಸುತ್ತಿದ್ದರು. ವೈಷ್ಣವಶಾಸ್ತ್ರ ಸಮ್ಮತವಾದ ಸಾಧನೆಗಳನ್ನು ಮಾಡುವಾಗ ಅವರು ಶ್ವೇತಚಂದನ, ಶ್ವೇತವಸ್ತ್ರ, ತುಲಸೀಮಾಲೆ ಇತ್ಯಾದಿಗಳಿಂದ ತಮ್ಮ ದೇಹವನ್ನು ಅಲಂಕರಿಸಿಕೊಳ್ಳುತ್ತಿದ್ದರು. ವೇದಾಂತದ ಅದ್ವೈತಭಾವ ಸಾಧನೆಯ ಸಮಯದಲ್ಲಿ ಶಿಖಾಸೂತ್ರಗಳನ್ನು ಪರಿತ್ಯಜಿಸಿ ಕಾವಿ ಬಟ್ಟೆಯನ್ನು ಧರಿಸಿದ್ದರು. ಪುರುಷ ಭಾವದ ಸಾಧನೆಯಲ್ಲಿ ಪುರುಷ ವೇಶವನ್ನು ಧರಿಸಿದಂತೆ ಸ್ತ್ರೀಭಾವದ ಸಾಧನೆಯ ಸಂದರ್ಭದಲ್ಲಿ ಅವರು ಸ್ತ್ರೀವೇಷವನ್ನು ಧರಿಸಲು ಹಿಂಜರಿದಿರಲಿಲ್ಲ. ಶ್ರೀರಾಮಕೃಷ್ಣರು ನಮಗೆ ಯಾವಾಗಲೂ ಹೇಳುತ್ತಿದ್ದರು, ಲಜ್ಜೆ ಘೃಣ ಭಯ ಜಾತಿ ಕುಲ ಶೀಲಾಭಿಮಾನ— ಇವೇ ಮುಂತಾದ ಅಷ್ಟ ಪಾಶಗಳನ್ನು ತ್ಯಜಿಸದೆ ಯಾರೂ ಯಾವಾಗಲೂ ಭಗವಂತನನ್ನು ಪಡೆಯಲಾಗುವುದಿಲ್ಲ, ಎಂದು. ತಾವೇ ತಮ್ಮ ಸಾಧನೆಯ ಕಾಲದಲ್ಲಿ ಪೂರ್ಣ ಭಾವದಲ್ಲಿ ತಮ್ಮ ಪ್ರತಿಯೊಂದು ಆಗು ಹೋಗು ಗಳಲ್ಲಿಯೂ ಇದನ್ನು ಅನುಸರಿಸಿದ್ದರು.

6. ಶ್ರೀರಾಮಕೃಷ್ಣರು ಮಧುರಭಾವದ ಸಾಧನೆಯಲ್ಲಿ ಪ್ರವೃತ್ತರಾದಾಗ ಸ್ತ್ರೀಯರ ವೇಷಭೂಷಣಗಳನ್ನು ಧರಿಸುವ ಮನಸ್ಸು ಮಾಡಿದರು. ಪರಮಭಕ್ತನಾದ ಮಥುರನಾಥನು ಅವರಿಗೆ ಇವನ್ನೆಲ್ಲ ಒದಗಿಸಿಕೊಟ್ಟನು. ಅಷ್ಟೇ ಅಲ್ಲದೆ ತಾನೇ ಅವರಿಗೆ ಆ ವೇಷಭೂಷಣಗಳನ್ನು ತೊಡಿಸಿ ಆನಂದಿಸುತ್ತಿದ್ದನು. ಮಥುರನ ಈ ಕೊಡುಗೆಯು ಅನೇಕರು ಶ್ರೀರಾಮಕೃಷ್ಣರ ತ್ಯಾಗದ ಬಗ್ಗೆ ಏನೇನೊ ಆಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿತೆಂದು ವಿಶ್ವಸ್ತ ಮೂಲಗಳು ತಿಳಿಸುತ್ತವೆ. ಆದರೆ ಇದಾವುದಕ್ಕೂ ಕಿವಿಗೊಡದೆ ಅವರಿಬ್ಬರೂ ತಮ್ಮ ತಮ್ಮ ಲಕ್ಷ್ಯದ ಕಡೆ ಮನಸ್ಸನ್ನು ಹರಿಸಿದರು. ಶ್ರೀರಾಮಕೃಷ್ಣರು ವ್ರಜಗೋಪಿಯರ ಭಾವದಲ್ಲಿ ಎಷ್ಟೊಂದು ಒಂದಾಗಿದ್ದರೆಂದರೆ ಅವರ ಹಾವಭಾವಗಳೆಲ್ಲ ಸ್ತ್ರೀಯರದಂತೆಯೇ ಆಗಿತ್ತು. ತಾವು ಪುರುಷರೆಂಬ ಪ್ರಜ್ಞೆಯೇ ಹೊರಟುಹೋಗಿತ್ತು. ಅವರು ಮಧುರಭಾವ ಸಾಧನೆಯ ಕಾಲದಲ್ಲಿ ಆರು ತಿಂಗಳು ಸ್ತ್ರೀವೇಷದಲ್ಲಿದ್ದರಂತೆ. ಇದನ್ನು ಅವರ ಬಾಯಿಂದಲೇ ನಾವು ಕೇಳಿರುವೆವು.

7. ಶ್ರೀರಾಮಕೃಷ್ಣರಲ್ಲಿ ಸ್ತ್ರೀ ಮತ್ತು ಪುರುಷ ಭಾವಗಳೆರಡೂ ಸಮಾವೇಶಗೊಂಡಿದ್ದವು ಎಂಬುದನ್ನು ಮೊದಲೇ ಹೇಳಿಯಾಗಿದೆ. ಆದ್ದರಿಂದ ಈಗ ಸ್ತ್ರೀವೇಷಧಾರಣೆಯಿಂದ ಅವರಲ್ಲಿ ಸ್ತ್ರೀಭಾವ ಉದ್ದೀಪನವಾದುದರಲ್ಲಿ ಆಶ್ಚರ್ಯವೇನಿಲ್ಲ. ಆದರೆ ಈ ಭಾವದ ಪ್ರೇರಣೆಯಿಂದ ಚಲನವಲನಗಳು, ಹಾವಭಾವಗಳು, ಮಾತು ಧ್ವನಿ ಎಲ್ಲ ವಿಷಯದಲ್ಲಿಯೂ ಅವರು ಸ್ತ್ರೀಯರಂತೆಯೇ ಆದದ್ದು ಅತ್ಯಾಶ್ಚರ್ಯಕರ. ನಾವು ದಕ್ಷಿಣೇಶ್ವರಕ್ಕೆ ಬಂದು ಹೋಗುತ್ತಿದ್ದಾಗ ಅವರು ಕೆಲವೊಮ್ಮೆ ಹಾಸ್ಯಕ್ಕೆ ಸ್ತ್ರೀಯರ ನಡೆ ನುಡಿಗಳನ್ನು ಅಭಿನಯಿಸಿ ತೋರಿಸುತ್ತಿದ್ದರು. ಅದು ಎಷ್ಟೊಂದು ವಾಸ್ತವವಾಗಿರುತ್ತಿತ್ತೆಂದರೆ ಸ್ತ್ರೀಯರಿಗೂ ಅದನ್ನು ನೋಡಿ ಆಶ್ಚರ್ಯವಾಗುತ್ತಿತ್ತು.

8. ಶ್ರೀರಾಮಕೃಷ್ಣರು ಈ ಸಂದರ್ಭದಲ್ಲಿ ಕಲಕತ್ತೆಯ ಮಥುರನ ಮನೆಗೆ ಹೋಗಿ ಅಲ್ಲಿಯ ಸ್ತ್ರೀಯರೊಡನೆ ಇರುತ್ತಿದ್ದರು. ಕಾಮವಾಸನೆಯಿಂದ ಸಂಪೂರ್ಣ ಮುಕ್ತವಾದ ಶ್ರೀರಾಮಕೃಷ್ಣರ ವರ್ತನೆಯ ಪರಿಚಯ ಮೊದಲೇ ಇದ್ದ ಆ ಸ್ತ್ರೀಯರು ಅವರನ್ನು ದೇವತೆಯಂತೆ ಕಾಣುತ್ತಿದ್ದರು. ಈಗ ಅವರ ಸ್ತ್ರೀಸಹಜ ಆಚರಣೆಯಿಂದ ಮತ್ತು ಅವರ ಸ್ನೇಹದಿಂದ ಮುಗ್ಧರಾಗಿ ಆ ಸ್ತ್ರೀಯರು ಅವರನ್ನು ತಮ್ಮ ಸಂಗಡಿಗರನ್ನಾಗಿ ಮಾಡಿಕೊಂಡುಬಿಟ್ಟರು. ಎಷ್ಟೊಂದು ನಿಕಟತೆಯಿತ್ತೆಂದರೆ ಅವರ ಮುಂದೆ ಯಾವ ಲಜ್ಜೆ ಸಂಕೋಚವೂ ಇರುತ್ತಿರಲಿಲ್ಲ ಆ ಸ್ತ್ರೀಯರಿಗೆ. ಈ ಸಂದರ್ಭದಲ್ಲಿ ಆ ಸ್ತ್ರೀಯರಲ್ಲಿ ಯಾರಾದರೂ ಒಬ್ಬರ ಪತಿ ಮನೆಗೆ ಬಂದರೆ ಶ್ರೀರಾಮಕೃಷ್ಣರೇ ಸ್ವಂತ ಕೈಯಿಂದ ಆ ಸ್ತ್ರೀಯನ್ನು ಅಲಂಕರಿಸುತ್ತಿದ್ದರಂತೆ ಮತ್ತು ಪತಿಯನ್ನು ಒಲಿಸುವ ಉಪಾಯಗಳನ್ನು ಆಕೆಗೆ ತಿಳಿಸಿಕೊಟ್ಟು ಅವಳ ಕೈಯನ್ನು ಹಿಡಿದು ನಡೆಸಿಕೊಂಡು ಹೋಗಿ ಪತಿಯ ಪಕ್ಕದಲ್ಲಿ ಕೂರಿಸಿ ಬರುತ್ತಿದ್ದರಂತೆ. ಇದನ್ನು ಶ್ರೀರಾಮಕೃಷ್ಣರ ಬಾಯಿಂದಲೇ ಕೇಳಿರುವೆವು. ಅವರು ಹೇಳುತ್ತಿದ್ದರು : "ಆ ಸ್ತ್ರೀಯರು ನನ್ನನ್ನು

ತಮ್ಮ ಸಖೀ ಎಂದು ಭಾವಿಸಿ ಸ್ವಲ್ಪವೂ ಸಂಕೋಚವಿಲ್ಲದೆ ನನ್ನೊಡನೆ ವ್ಯವಹರಿಸು ತ್ತಿದ್ದರು.

9. ಹೃದಯನು ಹೇಳುತ್ತಿದ್ದ: "ಶ್ರೀರಾಮಕೃಷ್ಣರು ಆ ರೀತಿ ಸ್ತ್ರೀಯ ರೊಡನೆ ಇರುವಾಗ ಅತ್ಯಂತ ಪರಿಚಿತರಿಗೂ ಅವರನ್ನು ಗುರುತಿಸುವುದು ಕಷ್ಟವಾಗು ತ್ತಿತ್ತು. ಆ ಸಂದರ್ಭದಲ್ಲಿ ಒಮ್ಮೆ ಮಥುರಬಾಬು ನನ್ನನ್ನು ಒಳಮನೆಗೆ ಕರೆದು ಕೊಂಡು ಹೋಗಿ ಅಲ್ಲಿದ್ದ ಸ್ತ್ರೀಯರನ್ನು ತೋರಿಸಿ ಕೇಳಿದನು : 'ನೋಡು ಇವರುಗಳ ಮಧ್ಯೆ ನಿನ್ನ ಮಾವ ಯಾರು ಹೇಳು ನೋಡೋಣ?' ಅವರೊಡನೆ ಅಷ್ಟು ಕಾಲ ಇದ್ದು ಅವರ ಸೇವೆ ಮಾಡಿದ್ದರೂ ನನಗೆ ಆಗ ಅವರನ್ನು ಗುರುತಿಸಲಾಗಲಿಲ್ಲ! ಆಗ ಅವರು ದಕ್ಷಿಣೇಶ್ವರದಲ್ಲಿರುವಾಗ ಪ್ರತಿದಿನ ಹೂ ಕೀಳಲು ಹೋಗುತ್ತಿದ್ದರು. ಅವರು ನಡೆಯುವುದನ್ನು ಗಮನವಿಟ್ಟು ನೋಡುತ್ತಿದ್ದೆ. ನಡೆಯುವಾಗ ಸ್ವಾಭಾವಿಕವಾಗಿಯೇ ಅವರು ಎಡಗಾಲನ್ನೇ ಮೊದಲು ಇಡುತ್ತಿದ್ದರು. ಬ್ರಾಹ್ಮಣೀ ಹೇಳುತ್ತಿದ್ದಳು, 'ಅವರು ಹಾಗೆ ಹೂ ಕೀಳುತ್ತಿರುವಾಗ ನಾನು ಕೆಲವೊಮ್ಮೆ ಅವರು ಶ್ರೀರಾಧೆಯೆಂದೇ ಭ್ರಮಿಸಿದ್ದೆ.' ಹೂ ಕಿತ್ತು ಆಗ ಅವರು ಒಳ್ಳೆಯ ಮಾಲೆಗಳನ್ನು ಮಾಡಿ ಶ್ರೀರಾಧಾ ಗೋವಿಂದನನ್ನು ಅಲಂಕರಿಸುತ್ತಿದ್ದರು. ಕೆಲವೊಮ್ಮೆ ಶ್ರೀಜಗದಂಬೆಗೂ ಮಾಲೆಯನ್ನು ತೊಡಿಸಿ ಶ್ರೀಕೃಷ್ಣನ ದರ್ಶನಕ್ಕಾಗಿ ಅವಳನ್ನು ಕಂಬನಿತುಂಬಿ ಪ್ರಾರ್ಥಿಸುತ್ತಿದ್ದರು."

10. ಹೀಗೆ ಶ್ರೀಜಗದಂಬೆಯ ಪೂಜಾ ಸೇವಾದಿಗಳನ್ನು ಮಾಡುತ್ತ ಶ್ರೀಕೃಷ್ಣನ ದರ್ಶನಕ್ಕಾಗಿ, ಅವನನ್ನು ಪತಿಯಂತೆ ಪಡೆಯುವುದಕ್ಕಾಗಿ ಶ್ರೀರಾಮಕೃಷ್ಣರು ಪ್ರಾರ್ಥನೆ ನಿರೀಕ್ಷಣೆಗಳಲ್ಲಿ ಕಾಲವನ್ನು ಕಳೆಯುತ್ತಿದ್ದರು. ಹಗಲು ರಾತ್ರಿ ಎಂಬುದಿಲ್ಲದೆ ಅವರ ಪ್ರಾರ್ಥನೆ ನಿರಂತರವಾಗಿ ಮುಂದುವರಿಯಿತು. ಪಕ್ಷ ಮಾಸಗಳು ಕಳೆದರೂ ನಿರಾಶರಾಗದೆ ಶ್ರೀಕೃಷ್ಣನ ದರ್ಶನಕ್ಕಾಗಿ ಕಾದುಕೊಂಡಿದ್ದರು. ಕ್ರಮೇಣ ಅವರ ಪ್ರಾರ್ಥನೆ ರೋದನೆಯಾಯಿತು ಮತ್ತು ನೀರೀಕ್ಷೆ ಉನ್ಮತ್ತತೆಯಾಯಿತು. ತೀವ್ರ ಉತ್ಕಂಠತೆಯಿಂದ ಮನಸ್ಸು ಅಸ್ಥಿರವಾಯಿತು. ಅವರ ಆಹಾರ ನಿದ್ರೆಗಳೆಲ್ಲ ದೂರ ವಾದುವು. ಮತ್ತೆ ಆ ವಿರಹವೇದನೆ ಎಂತಹದು! ತನ್ನ ಪ್ರಿಯನೊಡನೆ ಮಿಲನ ಹೊಂದಬೇಕೆಂದು ಹಾತೊರೆಯುತ್ತಿರುವಾಗ ಅದಕ್ಕೆ ಅನೇಕ ಅಡಚಣೆಗಳು ಉಂಟಾದರೆ ಹೃದಯವನ್ನು ಕಿತ್ತು ತಿನ್ನುವಂತಹ ವಿರಹವೇದನೆಯುಂಟಾಗುವುದು. ಹೃದಯದ ಈ ತೀವ್ರ ಸಂಕಟವು ಶ್ರೀರಾಮಕೃಷ್ಣರಲ್ಲಿ ಅನೇಕ ಮಾನಸಿಕ ವಿಕಾರಗಳ ರೂಪದಲ್ಲಿ ವ್ಯಕ್ತ ವಾಯಿತು. ಅಷ್ಟೇ ಅಲ್ಲದೆ ಹಿಂದಿನಂತೆಯೇ ದೇಹದಲ್ಲಿ ಅಸಾಧ್ಯ ಉರಿ ಕಾಣಿಸಿ ಕೊಂಡಿತು. "ಶ್ರೀಕೃಷ್ಣವಿರಹದ ಪ್ರಬಲವಾದ ಪ್ರಭಾವದಿಂದ ನನ್ನ ದೇಹದ ರೋಮ ಕೂಪದಲ್ಲಿ ಆಗಾಗ ರಕ್ತದ ಹನಿ ಹೊರಬರುತ್ತಿದ್ದುವು ; ದೇಹದ ಗ್ರಂಥಿಗಳೆಲ್ಲ ಶಿಥಿಲ ವಾದಂತೆ ಕಾಣುತ್ತಿದ್ದುವು. ಹೃದಯದ ತೀವ್ರ ವೇದನೆಯಿಂದಾಗಿ ಇಂದ್ರಿಯಗಳೆಲ್ಲ ನಿಶ್ಚೇಷ್ಟವಾಗುತ್ತಿದ್ದುವು. ಹಾಗೂ ದೇಹವು ಮೃತಪಟ್ಟಂತೆ ಬಿದ್ದಿರುತ್ತಿತ್ತು"—ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು.

11. ದೇಹಬುದ್ಧಿಯುಳ್ಳವರಾದ ನಾವು ಪ್ರೇಮವೆಂದರೆ ಒಂದು ದೇಹದ ಕಡೆಗೆ ಮತ್ತೊಂದು ದೇಹದ ಆಕರ್ಷಣೆ ಎಂದು ತಿಳಿಯುತ್ತೇವೆ. ದೇಹಬುದ್ಧಿಯನ್ನು ಸ್ವಲ್ಪ ಮೀರಿಹೋದ ಮೇಲೆ ದೇಹದ ಮೂಲಕ ಪ್ರಕಾಶಿಸುವ ಗುಣಗಳಕಡೆ ಆಕರ್ಷಣೆಯೇ ಪ್ರೇಮವೆಂದು ತಿಳಿಯುತ್ತೇವೆ. ಇದನ್ನೇ 'ಅತೀಂದ್ರಿಯ ಪ್ರೇಮ' ಎಂದು ವರ್ಣಿಸಿ ಇದರ ಗುಣಗಾನ ಮಾಡುತ್ತೇವೆ. ಈ ಅತೀಂದ್ರಿಯ ಪ್ರೇಮವು ಸ್ಥೂಲ ದೇಹಬುದ್ಧಿ ಮತ್ತು ಸೂಕ್ಷ್ಮ ಭೋಗಲಾಲಸೆಯಿಂದ ಮುಕ್ತವಾಗಿಲ್ಲ ಎಂಬುದನ್ನು ತಿಳಿಯಲು ಬಹಳ ಕಾಲ ಹಿಡಿಯುವುದಿಲ್ಲ. ಶ್ರೀರಾಮಕೃಷ್ಣರ ಜೀವನದಲ್ಲಿ ಪ್ರಕಾಶಿತವಾದ ಯಥಾರ್ಥ ವಾದ ಅತೀಂದ್ರಿಯ ಪ್ರೇಮಕ್ಕೆ ಹೋಲಿಸಿದರೆ ಇದು ತೀರ ಹೇಯವಾದುದೆಂದೂ ಸಾರರಹಿತವಾದುದೆಂದೂ ಕಂಡುಬರುತ್ತದೆ.

12. ಭಕ್ತಿಗ್ರಂಥಗಳ ಪ್ರಕಾರ, ಶ್ರೀಮತಿ ರಾಧೆಯೊಬ್ಬಳೇ ಇಂಥ ಯಥಾರ್ಥ ವಾದ ಅತೀಂದ್ರಿಯ ಪ್ರೇಮದ ಸ್ಥಿತಿಯನ್ನು ಮುಟ್ಟಿದ್ದಳು. ಲಜ್ಜೆ ಘೃಣ ಭಯ ಇವನ್ನೆಲ್ಲ ತ್ಯಜಿಸಿ, ಜಾತಿ ಕುಲ ಸ್ಥಾನ ಮಾನ ಇವನ್ನೆಲ್ಲ ಸಂಪೂರ್ಣ ಕಡೆಗಣಿಸಿ, ತನ್ನ ದೇಹ ಮನಸ್ಸುಗಳ ಸುಖಗಳ ಕಡೆ ಸ್ವಲ್ಪವೂ ಗಮನ ಕೊಡದೆ, ಶ್ರೀಕೃಷ್ಣನ ಸುಖದಲ್ಲೇ ತನ್ನ ಸುಖವನ್ನು ಕಾಣುತ್ತ ಆಕೆಯಷ್ಟು ಈ ಮಧುರ ಭಾವದಲ್ಲಿ ಪರಿಪೂರ್ಣತೆಯನ್ನು ಮುಟ್ಟಿದವರು ಯಾರೂ ಇರಲಿಲ್ಲ. ಆದ್ದರಿಂದಲೇ ಶಾಸ್ತ್ರ ಹೇಳುತ್ತದೆ, ರಾಧೆಯ ಕೃಪೆಯಿಲ್ಲದೆ ಈ ಜಗತ್ತಿನಲ್ಲಿ ಶ್ರೀಕೃಷ್ಣನ ದರ್ಶನ ಅಸಾಧ್ಯ ಎಂದು. ಏಕೆಂದರೆ ಸಚ್ಚಿದಾನಂದಘನ ಮೂರ್ತಿಯಾದ ಶ್ರೀಕೃಷ್ಣನು ರಾಧೆಯ ಪ್ರೇಮದಿಂದ ಯಾವಾಗಲೂ ಒದ್ಧನಾಗಿರುವನು, ಆವಳ ಸೂಚನೆಯಂತೆಯೇ ಭಕ್ತರ ಅಭೀಷ್ಟವನ್ನು ಪೂರ್ತಿಗೊಳಿಸು ವನು. ಶ್ರೀಮತಿಯ ಕಾಮನಾಶೂನ್ಯವಾದ ಪ್ರೇಮಕ್ಕೆ ಅನುರೂಪವಾದ ಅಥವಾ ಅದೇ ಬಗೆಯ ಪ್ರೇಮವನ್ನು ಪಡೆಯದೆ ಯಾರೂ ಭಗವಂತನನ್ನು ಮಧುರಭಾವದಲ್ಲಿ ಅರ್ಚಿಸಿ ಅವನ ದರ್ಶನವನ್ನು ಪಡೆಯಲಾಗುವುದಿಲ್ಲ ಎಂಬುದು ಶಾಸ್ತ್ರದ ಅಭಿಪ್ರಾಯ.

13. ಶ್ರೀಮತಿ ರಾಧೆಯ ಪ್ರೇಮದ ದಿವ್ಯ ಮಹಿಮೆಯನ್ನು ಪರಮಹಂಸ ಶುಕದೇವನೇ ಮುಂತಾದ ಮಹಾಮುನಿಗಳು ವರ್ಣಿಸಿರುವರು. ಆದರೂ ಬಹುಕಾಲದ ವರೆಗೆ ಭಾರತದ ಜನಸಾಧಾರಣರಿಗೆ ಅದನ್ನು ಹೇಗೆ ಜೀವನದಲ್ಲಿ ಅಳವಡಿಸಿಕೊಳ್ಳುವುದು ಎಂಬುದು ಅರ್ಥವಾಗಿರಲಿಲ್ಲ. ಇದನ್ನು ತಿಳಿಸಿಕೊಡುವುದಕ್ಕಾಗಿಯೇ ಶ್ರೀಕೃಷ್ಣನು ರಾಧೆಯೊಡನೆ ಒಂದೇ ದೇಹವನ್ನು ಆಶ್ರಯಿಸಿ ಅವತರಿಸಿರುವನು ಎಂದು ವೈಷ್ಣವ ಗೋಸ್ವಾಮಿಗಳು ಅಭಿಪ್ರಾಯಪಡುತ್ತಾರೆ. ಅಂತಃಕೃಷ್ಣ ಬಹಿರ್ಗೌರನಾದ ಶ್ರೀಚೈತನ್ಯನೆ ಶ್ರೀಕೃಷ್ಣನ ಆ ಪುಣ್ಯ ಅವತಾರ. ಶ್ರೀಕೃಷ್ಣ ಪ್ರೇಮದಿಂದ ರಾಧೆಯ ಶರೀರ ಮನಸ್ಸು ಗಳಲ್ಲಿ ಯಾವ ಯಾವ ಲಕ್ಷಣಗಳು ಕಂಡುಬರುತ್ತಿದ್ದವೋ ಅವೆಲ್ಲವೂ ಪುರುಷನಾದ ಶ್ರೀಚೈತನ್ಯನಲ್ಲಿಯೂ ಕಾಣಿಸುತ್ತಿದ್ದುವು. ಆದ್ದರಿಂದ ಶ್ರೀಚೈತನ್ಯನು ಅತೀಂದ್ರಿಯ ಪ್ರೇಮಾದರ್ಶದ ದ್ವಿತೀಯ ದೃಷ್ಟಾಂತ ಎಂದು ಹೇಳಬಹುದು.


14. ಶ್ರೀಮತಿ ರಾಧಾರಾಣಿಯ ಕೃಪೆಯಿಲ್ಲದೆ ಶ್ರೀಕೃಷ್ಣನ ದರ್ಶನ ಸಾಧ್ಯ

ವಿಲ್ಲವೆಂದು ತಿಳಿದು ಶ್ರೀರಾಮಕೃಷ್ಣರು ಈಗ ಅವಳನ್ನು ಪೂರ್ಣ ಮನಸ್ಸಿನಿಂದ ಧ್ಯಾನಿಸತೊಡಗಿದರು. ನಿರಂತರವಾಗಿ ಅವಳನ್ನು ಪ್ರಾರ್ಥಿಸತೊಡಗಿದರು. ತಮ್ಮ ವ್ಯಾಕುಲತೆಯ ತೀವ್ರತೆಯಿಂದಾಗಿ ಬಹುಬೇಗನೆ ಅವಳ ದರ್ಶನವನ್ನು ಪಡೆದರು. ಹಿಂದಿನ ದೇವದೇವಿಯರ ದರ್ಶನದ ಸಂದರ್ಭದಲ್ಲಿಯಂತೆಯೇ ಈಗಲೂ ಶ್ರೀರಾಧೆಯು ಶ್ರೀರಾಮಕೃಷ್ಣರ ದೇಹವನ್ನು ಪ್ರವೇಶಿಸಿದಳು. ಅವರು ಹೇಳುತ್ತಿದ್ದರು: "ಶ್ರೀಕೃಷ್ಣ ಪ್ರೇಮದಲ್ಲಿ ಸರ್ವಸ್ವವನ್ನೂ ಸಮರ್ಪಿಸಿದ ಆ ನಿರುಪಮ ಪವಿತ್ರ ಉಜ್ವಲ ಮೂರ್ತಿಯ ಮಹಿಮೆ ಮತ್ತು ಮಾಧುರ್ಯವನ್ನು ವರ್ಣಿಸಲು ಸಾಧ್ಯವಿಲ್ಲ. ಶ್ರೀಮತಿಯ ಅಂಗ ಕಾಂತಿಯು ನಾಗಸಂಪಿಗೆ ಹೂವಿನ ಕೇಸರದಂತೆ ಗೌರವರ್ಣದಿಂದ ಕೂಡಿತ್ತು."

15. ಈ ದರ್ಶನವಾದ ನಂತರ ಶ್ರೀರಾಮಕೃಷ್ಣರು ತಮ್ಮನ್ನು ಶ್ರೀರಾಧೆಯೆಂದೇ ಯಾವಾಗಲೂ ಭಾವಿಸುತ್ತಿದ್ದರು. ಅವಳೊಡನೆ ಸಂಪೂರ್ಣ ಒಂದಾಗಿ ತಮ್ಮ ಪ್ರತ್ಯೇಕ ಅಸ್ತಿತ್ವವನ್ನೇ ಮರೆತಿದ್ದರು, ಅವರ ಮಧುರಭಾವದಿಂದ ಉಂಟಾದ ಭಗವತ್ ಪ್ರೇಮವು ಈಗ ಶ್ರೀರಾಧಾರಾಣಿಯ ಪ್ರೇಮವಾಗಿ ಪರಿವರ್ತಿತವಾಯಿತು. ಇದರ ಪರಿಣಾಮವಾಗಿ ಶ್ರೀರಾಧೆ ಮತ್ತು ಶ್ರೀಚೈತನ್ಯರಲ್ಲಿಯಂತೆ ಅವರಲ್ಲಿಯೂ ಮಧುರಭಾವದ ಪರಾಕಾಷ್ಠೆಯಾದ ಮಹಾಭಾವದ ಲಕ್ಷಣಗಳು ಕಾಣತೊಡಗಿದವು. ಭೈರವೀ ಬ್ರಾಹ್ಮಣಿ. ವೈಷ್ಣವಚರಣ ಮುಂತಾದ ಶಾಸ್ತ್ರಜ್ಞರು ಅವರಲ್ಲಿ ಮಹಾಭಾವದ ಲಕ್ಷಣಗಳನ್ನು ಕಂಡು ವಿಸ್ಮಿತರಾಗಿ ಅವರಲ್ಲಿ ತಮ್ಮ ಶ್ರದ್ಧಾಭಕ್ತಿಯನ್ನು ವ್ಯಕ್ತಪಡಿಸಿದರು. ಮಹಾಭಾವದ ಬಗ್ಗೆ ಶ್ರೀರಾಮಕೃಷ್ಣರು ನಮಗೆ ಹೀಗೆ ಹೇಳುತ್ತಿದ್ದರು– "ಹತ್ತೊಂಬತ್ತು ಪ್ರಕಾರದ ಭಾವಗಳು ಒಬ್ಬರಲ್ಲಿಯೇ ಪ್ರಕಾಶಗೊಂಡರೆ ಅದನ್ನು ಮಹಾಭಾವ ಎನ್ನುತ್ತಾರೆ– ಈ ವಿಷಯ ಭಕ್ತಿಶಾಸ್ತ್ರದಲ್ಲಿದೆ. ಸಾಧನೆಯ ಮೂಲಕ ಒಂದೇ ಭಾವದಲ್ಲಿ ಸಿದ್ಧಿಯನ್ನು ಪಡೆಯುವುದರಲ್ಲಿಯೇ ಇಡೀ ಜೀವನ ಕಳೆದು ಹೋಗುತ್ತದೆ. (ತಮ್ಮ ಶರೀರವನ್ನು ನಿರ್ದೇಶಿಸಿ) ಇಲ್ಲಿ ಆ ಹತ್ತೊಂಬತ್ತು ಭಾವಗಳೂ ಪೂರ್ಣ ಪ್ರಕಾಶಗೊಂಡಿವೆ."*

---

* ಜೀವಗೋಸ್ವಾಮಿ ಮುಂತಾದ ವೈಷ್ಣವಾಚಾರ್ಯರು ರಾಗಾತ್ಮಿಕಭಕ್ತಿಯನ್ನು ಈ ಕೆಳಗಿನಂತೆ ವಿಭಾಗಿಸುವರು :



16. ಶ್ರೀಕೃಷ್ಣವಿರಹದ ತೀವ್ರ ವೇದನೆಯಿಂದಾಗಿ ಶ್ರೀರಾಮಕೃಷ್ಣರ ಶರೀರದ ರೋಮಕೂಪಗಳಲ್ಲಿ ರಕ್ತ ಒಸರುತ್ತಿದ್ದ ವಿಷಯವನ್ನು ಮೊದಲೇ ಹೇಳಿಯಾಗಿದೆ. ಇದು ಮಹಾಭಾವದ ಪರಾಕಾಷ್ಠೆಯನ್ನು ತಲುಪಿದಾಗ ಸಂಭವಿಸಿದುದು. ಆಗ ಅವರು ಪ್ರಕೃತಿ ಭಾವದಲ್ಲಿ ಎಷ್ಟೊಂದು ತನ್ಮಯರಾಗಿದ್ದರೆಂದರೆ ಅವರಲ್ಲಿ ಪುರುಷ ಪ್ರಜ್ಞೆಯೇ ಹೊರಟು ಹೋಗಿ ಸ್ತ್ರೀಯರಂತೆಯೇ ವ್ಯವಹರಿಸುತ್ತಿದ್ದರು. ಆ ಸಮಯದಲ್ಲಿ ಸ್ವಾಧಿಷ್ಠಾನ ಚಕ್ರವಿರುವ ಪ್ರದೇಶದಲ್ಲಿ ರೋಮಕೂಪದಿಂದ ಪ್ರತಿ ತಿಂಗಳು ನಿಯಮಿತ ವೇಳೆಯಲ್ಲಿ ರಕ್ತವು ಹನಿಹನಿಯಾಗಿ ಹೊರಬರುತ್ತಿತ್ತು ಮತ್ತು ಸ್ತ್ರೀಶರೀರದಲ್ಲಿರುವಂತೆ ಪ್ರತಿ ಬಾರಿಯೂ ಮೂರು ದಿನಗಳು ಹೀಗಾಗುತ್ತಿತ್ತು ಎಂದು ಶ್ರೀರಾಮಕೃಷ್ಣರೇ ಹೇಳಿರುವರು. ತಾನೇ ಸ್ವತಃ ಇದನ್ನು ನೋಡಿರುವುದಾಗಿ ಹೃದಯನು ನಮಗೆ ಹೇಳಿರುವನು. ಉಟ್ಟ ವಸ್ತ್ರವು ಕಲೆಯಾಗುವುದೆಂದು ಶ್ರೀರಾಮಕೃಷ್ಣರು ಆಗ ಕೌಪೀನ ಧರಿಸುತ್ತಿದ್ದರಂತೆ.

17. ವೇದಾಂತ ಶಾಸ್ತ್ರದ ಪ್ರಕಾರ, ಮಾನವನ ಮನಸ್ಸೇ ಅವನ ಶರೀರವನ್ನು ಈಗಿರುವಂತೆ ರೂಪುಗೊಳಿಸಿರುವುದು ಮತ್ತು ತೀವ್ರ ಇಚ್ಛಾನುಸಾರವಾಗಿ ಪ್ರತಿಕ್ಷಣವೂ ಹಳೆಯದನ್ನು ನಾಶಗೊಳಿಸಿ ರೂಪಾಂತರಗೊಳಿಸಿ ಹೊಸ ಶರೀರವನ್ನು ಸೃಷ್ಟಿಸುತ್ತಿರುವುದು. ವೇದಾಂತದ ಈ ವಿಚಾರವನ್ನು ಮೊದಲು ನಮಗೆ ನಂಬಲಾಗುತ್ತಿರಲಿಲ್ಲ. ಏಕೆಂದರೆ ದೇಹದ ಮೇಲೆ ಈ ರೀತಿ ಪ್ರಭುತ್ವವನ್ನು ಸಾಧಿಸುವಂತಹ ಪ್ರಬಲವಾದ ಇಚ್ಛೆಯು ಯಾವುದೇ ವಿಷಯದಲ್ಲಿಯೂ ನಮಗೆ ಉಂಟಾಗದೇ ಇದ್ದುದೇ ಇದಕ್ಕೆ ಕಾರಣ. ಒಂದು ವಿಶೇಷ ವಸ್ತುವನ್ನು ಪಡೆಯುವ ಪ್ರಬಲವಾದ ಆಕಾಂಕ್ಷೆ ಶ್ರೀರಾಮಕೃಷ್ಣರ ಶರೀರವನ್ನು ಸ್ವಲ್ಪಕಾಲದಲ್ಲಿಯೇ ಪರಿವರ್ತಿಸುತ್ತಿದ್ದುದು ವೇದಾಂತದ ವಾಕ್ಯವನ್ನು ಪುಷ್ಟೀಕರಿಸುತ್ತದೆ. ಪದ್ಮಲೋಚನ ಮುಂತಾದ ಪ್ರಸಿದ್ಧ ಪಂಡಿತರುಗಳು ಶ್ರೀರಾಮಕೃಷ್ಣರ ಸಾಧನೆಯ ವೃತ್ತಾಂತವನ್ನು ಕೇಳಿ, ಅದು ವೇದಪುರಾಣಗಳಲ್ಲಿ ಕಂಡು ಬರುವ ಅನುಭವಗಳಿಗೆ ಹೋಲುವುದನ್ನು ಪರಿಶೀಲಿಸಿ ಈ ರೀತಿ ಹೇಳಿರುವರು: "ನಿಮ್ಮ ಅನುಭವ ವೇದಪುರಾಣಗಳನ್ನೂ ಮೀರಿ ಬಹುದೂರ ಹೋಗಿರುವುವು :" ಮಾನಸಿಕ ಭಾವಗಳ ಪ್ರಭಾವದಿಂದ ಶ್ರೀರಾಮಕೃಷ್ಣರಲ್ಲಿ ಕಂಡುಬರುತ್ತಿದ್ದ ಶಾರೀರಿಕ ಪರಿವರ್ತನೆ ಶರೀರ ಶಾಸ್ತ್ರದ ಮಿತಿಯನ್ನೂ ಮೀರಿ ಹೋಗಿರುವುದು ಮತ್ತು ಈ ದಿಕ್ಕಿನಲ್ಲಿ ಹೊಸ ಆಯಾಮವು ತೆರೆದಂತಾಯಿತು ಎಂದು ಆಶ್ಚರ್ಯದಿಂದ ಹೇಳಬೇಕಾಗುವುದು.

18. ಅದು ಏನೇ ಇರಲಿ, ಶ್ರೀರಾಮಕೃಷ್ಣರ ಮಧುರಭಾವವು ಪರಿಪೂರ್ಣತೆಯನ್ನು ಮುಟ್ಟಿದಾಗ ಅವರು ಸಚ್ಚಿದಾನಂದಘನ ಮೂರ್ತಿಯಾದ ಶ್ರೀಕೃಷ್ಣನದರ್ಶನ

ಮಹಾಭಾವದಲ್ಲಿ ಕಾಮಾತ್ಮಿಕ ಮತ್ತು ಸಂಬಂಧಾತ್ಮಿಕ—ಈ ಎರಡು ಪ್ರಕಾರದ ಭಕ್ತಿಯ ಮೇಲೆ ಹೇಳಿದ ಹತ್ತೊಂಬತ್ತು ವಿಧದ ಅಂತರ್ಭಾವಗಳು ಸಮಾವೇಶಗೊಂಡಿವೆ. ಶ್ರೀರಾಮ ಕೃಷ್ಣರು ಇಲ್ಲಿ ಇದನ್ನೆ ಸೂಚಿಸಿರುವುದು.

ವನ್ನು ಪಡೆದರು. ಹಿಂದಿನಂತೆಯೇ ಆ ಮೂರ್ತಿಯು ಅವರ ಶರೀರವನ್ನು ಪ್ರವೇಶಿಸಿತು. ಈ ದರ್ಶನವಾಗಿ ಎರಡು ಮೂರು ತಿಂಗಳ ನಂತರ ಪರಮಹಂಸ ತೋತಾಪುರಿಯು ದಕ್ಷಿಣೇಶ್ವರಕ್ಕೆ ಬಂದು ಅವರಿಗೆ ಅದ್ವೈತ ಸಾಧನೆಯನ್ನು ಬೋಧಿಸಿದನು. ಶ್ರೀರಾಮಕೃಷ್ಣರು ಮಧುರಭಾವ ಸಾಧನೆಯಲ್ಲಿ ಸಿದ್ಧಿಯನ್ನು ಪಡೆದು ಆ ಭಾವದಲ್ಲಿಯೇ ಸ್ವಲ್ಪ ಕಾಲ ಇದ್ದರು ಎನ್ನಬಹುದು. ಈ ಸಂದರ್ಭದಲ್ಲಿ ಶ್ರೀಕೃಷ್ಣನ ಚಿಂತೆಯಲ್ಲಿಯೇ ತನ್ಮಯರಾಗಿ ಕೆಲವೊಮ್ಮೆ ತಮ್ಮನ್ನೇ ಶ್ರೀಕೃಷ್ಣ ಎಂದು ತಿಳಿಯುತ್ತಿದ್ದರು. ಮತ್ತೆ ಕೆಲವೊಮ್ಮೆ ಪ್ರತಿಯೊಂದು ವಸ್ತುವೂ ಕೃಷ್ಣನ ಮೂರ್ತಿಯಾಗಿ ಕಾಣುತ್ತಿತ್ತು. ನಾವು ದಕ್ಷಿಣೇಶ್ವರಕ್ಕೆ ಹೋಗಿದ್ದಾಗ ಒಮ್ಮೆ ತೋಟದಿಂದ ಒಂದು ಹುಲ್ಲಿನ ಹೂವನ್ನು ತಂದು ನಮಗೆ ತೋರಿಸುತ್ತ ಹೇಳಿದರು: "ಆಗ ಮಧುರಭಾವದ ಸಮಯದಲ್ಲಿ ನಾನು ನೋಡಿದ ಕೃಷ್ಣನ ಮೂರ್ತಿಯ ಅಂಗ ಇದೇ ಬಣ್ಣದಿಂದ ಕೂಡಿತ್ತು.'

19. ತಮ್ಮೊಳಗಿದ್ದ ಪ್ರಕೃತಿಭಾವದ ಪ್ರೇರಣೆಯಿಂದ ಯೌವನದ ಪ್ರಾರಂಭಾವಸ್ಥೆಯಲ್ಲಿ ಶ್ರೀರಾಮಕೃಷ್ಣರಿಗೆ ಒಂದು ಆಸೆ ಉಂಟಾಗಿತ್ತು. ತಾವು ಸ್ತ್ರೀದೇಹವನ್ನು ಪಡೆದು ಹುಟ್ಟಿದ್ದರೆ ಗೋಪಿಕಾಸ್ತ್ರೀಯರಂತೆ ಶ್ರೀಕೃಷ್ಣನನ್ನು ಭಜಿಸಿ ಅವನ ಸಂಗಸುಖವನ್ನು ಪಡೆಯಬಹುದಿತ್ತು ಎಂದು ಅವರಿಗೆ ಅನಿಸಿತ್ತು. ತಮ್ಮ ಪುರುಷ ಶರೀರವು ಈ ರೀತಿ ಕೃಷ್ಣನನ್ನು ಪಡೆಯುವುದಕ್ಕೆ ಬಾಧಕವಾಗಿದೆಯೆಂದು ಭಾವಿಸಿದ ಅವರು ಮುಂದೆ ಇನ್ನೊಂದು ಜನ್ಮ ಪಡೆಯುವುದಿದ್ದರೆ ಬ್ರಾಹ್ಮಣ ಕುಟುಂಬದಲ್ಲಿ ಪರಮಸುಂದರ ಸ್ತ್ರೀಯಾಗಿ ಜನಿಸಿ, ಬಾಲವಿಧವೆ ಆಗಬೇಕು ಮತ್ತು ಶ್ರೀಕೃಷ್ಣನನ್ನು ಹೊರತು ಬೇರಾರನ್ನೂ ಪತಿಯೆಂದು ಭಾವಿಸಬಾರದು ಎಂದು ಆಶಿಸಿದ್ದರು. ಊಟ ಬಟ್ಟೆಗೆ ಎಷ್ಟು ಬೇಕೋ ಅಷ್ಟು ವರಮಾನವಿರಬೇಕು, ತಮ್ಮ ಗುಡಿಸಲು ಪಕ್ಕದಲ್ಲಿ ಸ್ವಲ್ಪ ಜಾಗವಿರಬೇಕು, ಮತ್ತು ಅದರಲ್ಲಿ ತಾವೇ ಸ್ವತಃ ಸೊಪ್ಪು ತರಕಾರಿ ಬೆಳೆಸಬೇಕು. ತಮ್ಮ ಜತೆಗೆ ಒಬ್ಬಳು ಮುದುಕಿ ಇರಬೇಕು. ಮನೆಯಲ್ಲಿ ಒಂದು ಹಸು ಹಾಗೂ ಚರಕ ಇರಬೇಕು, ಅವರ ಕಲ್ಪನೆ ಇನ್ನೂ ಮುಂದುವರಿದಿತ್ತು. ದಿನದ ವೇಳೆಯಲ್ಲಿ ಮನೆ ಕೆಲಸವನ್ನು ಮುಗಿಸಿ ಆ ಚರಕವನ್ನು ಹಿಡಿದು ನೂಲು ತೆಗೆಯುತ್ತ ಶ್ರೀಕೃಷ್ಣನಿಗೆ ಸಂಬಂಧಿಸಿದ ಹಾಡುಗಳನ್ನು ಹಾಡಬೇಕು. ಸಂಜೆಯ ನಂತರ ಹಸುವಿನ ಹಾಲನ್ನು ಕರೆದು ಅದರಿಂದ ಸಿಹಿತಿಂಡಿಯನ್ನು ತಯಾರಿಸಿ ಅದನ್ನು ತಮ್ಮ ಕೈಯಿಂದ ಶ್ರೀಕೃಷ್ಣನಿಗೆ ಉಣಿಸುವ ವ್ಯಾಕುಲತೆಯಿಂದ ರಹಸ್ಯವಾಗಿ ಅಳಬೇಕು. ಶ್ರೀಕೃಷ್ಣನು ಗೋಪಾಲಕನಾಗಿ ಬಂದು ಅದನ್ನು ಸ್ವೀಕರಿಸಬೇಕು. ಹೀಗೆ ಇತರರಿಗೆ ತಿಳಿಯದಂತೆ ಅವನು ಪ್ರತಿನಿತ್ಯ ಬಂದು ಹೋಗಬೇಕು, ಶ್ರೀರಾಮಕೃಷ್ಣರ ಈ ಆಸೆ ಅದೇ ರೀತಿ ಪೂರ್ಣವಾಗದಿದ್ದರೂ ಮಧುರಭಾವದ ಸಂದರ್ಭದಲ್ಲಿ ಹಿಂದೆ ವಿವರಿಸಿದಂತೆ ಅದು ಸಿದ್ಧವಾಗಿತ್ತು.

20. ಮಧುರಭಾವದ ಸಮಯದಲ್ಲಿ ಶ್ರೀರಾಮಕೃಷ್ಣರಿಗಾದ ಇನ್ನೊಂದು ಅನುಭವದ ವಿಚಾರವನ್ನು ಹೇಳಿ ಈ ವಿಷಯವನ್ನು ಇಲ್ಲಿಗೆ ಸಮಾಪ್ತಿಗೊಳಿಸುತ್ತೇವೆ. ಶ್ರೀರಾಮಕೃಷ್ಣರು ಒಂದು ದಿನ ವಿಷ್ಣುಮಂದಿರದ ಮುಂದಿದ್ದ ವರಾಂಡದಲ್ಲಿ ಕುಳಿತು ಭಾಗವತ

ಕೇಳುತ್ತಿದ್ದರು. ಕೇಳುತ್ತಿದ್ದಂತೆಯೇ ಭಾವಾವಿಷ್ಟರಾಗಿ ಶ್ರೀಕೃಷ್ಣನ ಜ್ಯೋತಿರ್ಮಯ ಮೂರ್ತಿಯನ್ನು ಕಂಡರು. ಆ ಮೂರ್ತಿಯ ಪಾದಪದ್ಮದಿಂದ ಒಂದು ಜ್ಯೋತಿಯ ಕಿರಣ ಹೊರ ಒಂದು ಮೊದಲು ಭಾಗವತ ಗ್ರಂಥವನ್ನು ಸ್ಪರ್ಶಿಸಿತು. ಅನಂತರ ಅವರ ಎದೆಯನ್ನು ಸ್ಪರ್ಶಿಸಿ ಈ ಮೂರನ್ನೂ ಒಟ್ಟುಗೂಡಿಸಿತು. ಈ ದರ್ಶನದ ನಂತರ ಭಾಗವತ, ಭಕ್ತ ಮತ್ತು ಭಗವಂತ ಈ ಮೂರು ಬೇರೆ ಬೇರೆಯಾಗಿ ಕಂಡರೂ ಒಂದೇ ವಸ್ತುವಿನ ವಿವಿಧ ರೂಪಗಳು ಎಂಬ ದೃಢ ವಿಶ್ವಾಸ ಅವರಿಗುಂಟಾಯಿತು. "ಭಾಗವತ (ಶಾಸ್ತ್ರ), ಭಕ್ತ ಮತ್ತು ಭಗವಂತ ಈ ಮೂರೂ ಒಂದೇ" ಎಂದು ಹೇಳುತ್ತಿದ್ದರು ಅವರು.

ಹದಿನೈದನೆಯ ಅಧ್ಯಾಯ

ಶ್ರೀರಾಮಕೃಷ್ಣರ ವೇದಾಂತ ಸಾಧನೆ

1. ಶ್ರೀರಾಮಕೃಷ್ಣರ ಆಗಿನ ಮಾನಸಿಕ ಸ್ಥಿತಿ 2. ಕಾಮಕಾಂಚನ ತ್ಯಾಗದಲ್ಲಿ ದೃಢ ಪ್ರತಿಷ್ಠೆ 3. ವಿವೇಕ ಮತ್ತು ವೈರಾಗ್ಯ 4. ಈಶ್ವರ ನಿರ್ಭರತೆ ಮತ್ತು ಭಯರಾಹಿತ್ಯ 5. ಭಗವದ್ದರ್ಶನದ ನಂತರವೂ ಸಾಧನೆ ಮಾಡಿದುದರ ಬಗ್ಗೆ ಶ್ರೀರಾಮಕೃಷ್ಣರ ಹೇಳಿಕೆ 6. ಅವರ ತಾಯಿಯ ದಕ್ಷಿಣೇಶ್ವರಾಗಮನ 7. ಅವರ ತಾಯಿ ಲೋಭಮುಕ್ತರಾಗಿದ್ದರು 8. ಹಲಧಾರಿಯು ಕೆಲಸವನ್ನು ಬಿಟ್ಟು ಅಕ್ಷಯನು ಬಂದುದು 9. ಅದ್ವೈತ ಸಾಧನೆಗೆ ಕಾರಣ 10. ಭಕ್ತಿಸಾಧನೆಯ ನಂತರ ಅದ್ವೈತ ಸಾಧನೆಯನ್ನು ಸ್ವೀಕರಿಸುವುದರ ಯುಕ್ತಿಯುಕ್ತತೆ 11. ತೋತಾಪುರಿಯ ಆಗಮನ 12. ಶ್ರೀರಾಮಕೃಷ್ಣರು ಮತ್ತು ತೋತಾಪುರಿಯರ ಪ್ರಥಮ ಸಂಭಾಷಣೆ 13. ದೇವಿಯ ವಿಷಯದಲ್ಲಿ ತೋತಾಪುರಿಯ ಅಭಿಪ್ರಾಯ 14. ರಹಸ್ಯವಾಗಿ ಸಂನ್ಯಾಸ ಸ್ವೀಕರಿಸುವ ಶ್ರೀರಾಮಕೃಷ್ಣರ ಸಂಕಲ್ಪ 15. ಸಂನ್ಯಾಸ ಗ್ರಹಣದ ಪೂರ್ವವಿಧಿ 16. ಸಂನ್ಯಾಸ ಪೂರ್ವ ಪ್ರಾರ್ಥನಾ ಮಂತ್ರ 17. ವಿರಜಾ ಹೋಮದ ಸಂಕ್ಷೇಪಾರ್ಥ 18. ಸಂನ್ಯಾಸ ಸ್ವೀಕಾರ 19. ಬ್ರಹ್ಮದಲ್ಲಿ ಪ್ರತಿಷ್ಠಿತರಾಗಲು ಶ್ರೀರಾಮಕೃಷ್ಣರನ್ನು ತೋತಾಪುರಿ ಪ್ರಚೋದಿಸಿದುದು 20. ಮನಸ್ಸನ್ನು ನಿರ್ವಿಕಲ್ಪ ಮಾಡುವ ಪ್ರಯತ್ನ ಮತ್ತು ನಿರ್ವಿಕಲ್ಪ ಸಮಾಧಿಯ ಸಿದ್ಧಿ 21. ಶ್ರೀರಾಮಕೃಷ್ಣರ ನಿರ್ವಿಕಲ್ಪ ಸಮಾಧಿ ಯಥಾರ್ಥವೇ ಎಂಬುದನ್ನು ತೋತಾಪುರಿ ಪರೀಕ್ಷಿಸುವುದು 22. ಅವರನ್ನು ಸಮಾಧಿಯಿಂದ ಇಳಿಸಲು ಅವನ ಪ್ರಯತ್ನ 23. ಜಗದಂಬಾ ದಾಸಿಯ ಕಠಿನ ವ್ಯಾಧಿಯನ್ನು ಶ್ರೀರಾಮಕೃಷ್ಣರು ಗುಣಪಡಿಸಿದರು

1. ಮಧುರಭಾವ ಸಾಧನೆಯಲ್ಲಿ ಸಿದ್ಧಿಯನ್ನು ಪಡೆದು ಶ್ರೀರಾಮಕೃಷ್ಣರು ಭಕ್ತಿಸಾಧನೆಯ ಅಂತಿಮ ಘಟ್ಟವನ್ನು ಮುಟ್ಟಿದರು. ಅವರ ಸಾಧನೆಯ ಮುಂದಿನ ಕಥೆಯನ್ನು ಹೇಳುವುದರ ಮೊದಲು ಅವರ ಆಗಿನ ಮನಸ್ಥಿತಿಯನ್ನು ಕುರಿತು ಸ್ವಲ್ಪ ಆಲೋಚಿಸುವುದು ಒಳ್ಳೆಯದು.

2. ಯಾವುವೇ ಭಾವಸಾಧನೆಯಲ್ಲಿ ಸಿದ್ಧಿಯನ್ನು ಪಡೆಯಬೇಕಾದರೂ ವಿಷಯ ಸುಖವನ್ನು ಮೊದಲೇ ದೂರವಿರಿಸಬೇಕು ಎಂಬುದನ್ನು ನೋಡಿರುವೆವು. ತುಳಸೀದಾಸನ ಮಾತು 'ಎಲ್ಲಿ ರಾಮನಿರುವನೊ ಅಲ್ಲಿ ಕಾಮವಿಲ್ಲ, ಎಲ್ಲಿ ಕಾಮವಿರುವುದೊ ಅಲ್ಲಿ ರಾಮನಿಲ್ಲ' ಎಂಬುದು ಅಕ್ಷರಶಃ ಸತ್ಯ. ಶ್ರೀರಾಮಕೃಷ್ಣರ ಸಾಧನೆಯ ಇತಿಹಾಸವು

ಇದರ ಕಡೆಗೆ ಸಂಪೂರ್ಣ ಲಕ್ಷ್ಯವಿರಿಸಿದೆ. ಕಾಮ ಕಾಂಚನ ತ್ಯಾಗದಲ್ಲಿ ದೃಢವಾಗಿ ನೆಲೆನಿಂತು ಅವರು ಭಾವಸಾಧನೆಯಲ್ಲಿ ತೊಡಗಿದ್ದರು. ಈ ವಿಷಯದಲ್ಲಿ ಅವರು ರಿಯಾಯಿತಿ ತೋರಿಸದಿದ್ದುದರಿಂದಲೇ ಅವರು ಬಹುಬೇಗನೆ ಆ ಸಾಧನೆಗಳಲ್ಲಿ ಸಿದ್ಧಿಯನ್ನು ಪಡೆಯುತ್ತಿದ್ದರು, ಆದ್ದರಿಂದ ಈಗ ಅವರ ಮನಸ್ಸು ಕಾಮಕಾಂಚನ ಪ್ರಲೋಭನೆಯ ಭೂಮಿಯಿಂದ ಬಹುದೂರ ನೆಲೆಸಿತ್ತು ಎಂಬುದನ್ನು ಮರೆಯಬಾರದು.

3. ಎಲ್ಲ ಆಸೆಗಳನ್ನು ತೊರೆದು ಈಶ್ವರನನ್ನು ಪಡೆಯಲು ಒಂಬತ್ತು ವರ್ಷ ನಿರಂತರ ಸಾಧನೆ ಮಾಡಿದುದರ ಫಲವಾಗಿ ಅವರಿಗೀಗ ಭಗವದ್ವಿಷಯ ಒಂದನ್ನು ಬಿಟ್ಟು ವಿಷಯಗಳನ್ನು ಸ್ಮರಿಸುವುದು ನೆನೆಯುವುದು ಎಂದರೆ ವಿಷವನ್ನು ಸೇವಿಸಿದಂತಾಗುತ್ತಿತ್ತು. ಈಶ್ವರನನ್ನೇ ಸಾರವಸ್ತುವೆಂದು ಅವರು ಪರಿಗಣಿಸಿದುದರಿಂದ ಇಹಪರದ ಯಾವುದೇ ವಸ್ತುವನ್ನು ಪಡೆಯುವುದರಲ್ಲಿ ಅವರು ಸಂಪೂರ್ಣ ಉದಾಸೀನರಾಗಿದ್ದರು.

ಧ್ಯೇಯ ವಸ್ತುವಿನಲ್ಲಿ ಮನಸ್ಸನ್ನು ಏಕಾಗ್ರಗೊಳಿಸುವುದು ಅವರಿಗೆ ಎಷ್ಟು ಅಭ್ಯಾಸವಾಗಿ ಹೋಗಿತ್ತೆಂದರೆ ಮನಸ್ಸು ನಿರಾಯಾಸವಾಗಿ ಧ್ಯೇಯ ವಸ್ತುವಿನಲ್ಲಿ ಸಂಪೂರ್ಣ ತನ್ಮಯತೆಯನ್ನು ಹೊಂದಿ ಆನಂದವನ್ನು ಅನುಭವಿಸುತ್ತಿತ್ತು. ಎಷ್ಟೋ ದಿನಗಳು ತಿಂಗಳುಗಳು ವರ್ಷಗಳು ಕಳೆದರೂ ಅವರ ಆ ಆನಂದಕ್ಕೆ ಕೊನೆಯಿರುತ್ತಿರಲಿಲ್ಲ. ಭಗವಂತನನ್ನು ಬಿಟ್ಟು ಈ ಪ್ರಪಂಚದಲ್ಲಿ ಇನ್ನೇನಾದರೂ ಪಡೆಯುವ ವಸ್ತುವಿದೆ ಅಥವಾ ಇರಲು ಸಾಧ್ಯ ಎಂದು ಅವರಿಗೆ ಅನಿಸಿದ್ದೇ ಇಲ್ಲ.

4. ಶ್ರೀರಾಮಕೃಷ್ಣರಿಗೆ ಭಗವಂತನೇ 'ಗತಿರ್ಭರ್ತಾ ಪ್ರಭುಃ ಸಾಕ್ಷೀ ನಿವಾಸಃ ಶರಣಂ ಸುಹೃತ್' ಆಗಿದ್ದನು. ಅವರ ಭಗವತ್ ಪ್ರೀತಿ ವಿಶ್ವಾಸ ನಿರ್ಭರತೆಗಳಿಗೆ ಪಾರವೇ ಇರಲಿಲ್ಲ. ಇವುಗಳ ಸಹಾಯದಿಂದ ಅವರು ಯಾವಾಗಲೂ ಭಗವಂತನೊಡನೆ ಪ್ರೇಮಸಂಬಂಧವನ್ನು ಇಟ್ಟುಕೊಂಡಿದ್ದರು. ಅಷ್ಟೇ ಅಲ್ಲದೆ ತಾಯಿಯ ವಿಷಯದಲ್ಲಿ ಬಾಲಕನು ಹೇಗೊ ಹಾಗೆ ಅವರು ಭಗವಂತನು ಸದಾ ತನ್ನೊಡನಿರಬೇಕೆಂದು ಬಯಸುತ್ತಿದ್ದರು. ಅವನ ಮಧುರ ವಾಣಿಯನ್ನು ಸದಾ ಕೇಳಲು ಹಾತೊರೆಯುತ್ತಿದ್ದರು. ಜೀವನದಲ್ಲಿ ಅವನೇ ತಮ್ಮನ್ನು ಕೈಹಿಡಿದು ನಡೆಸಿಕೊಂಡು ಹೋಗಬೇಕೆಂದು ತವಕಿಸುತ್ತಿದ್ದರು. ಅವರಿಗೆ ಭಗವಂತನಲ್ಲಿ ಎಂಥ ನಿರ್ಭರತೆ ಇತ್ತೆಂದರೆ ಪ್ರತಿಯೊಂದು ಸಣ್ಣ ಪುಟ್ಟ ವಿಷಯದಲ್ಲಿಯೂ ಶ್ರೀಜಗನ್ಮಾತೆಯ ಆದೇಶವನ್ನು ಪಡೆದು. ಅವಳ ಸೂಚನೆಯಂತೆ, ಸ್ವಲ್ಪವೂ ಅಳುಕದೆ ಆಚರಿಸುತ್ತಿದ್ದರು. ಈಗ ಇದು ಅವರಿಗೆ ಪೂರ್ಣ ಅಭ್ಯಾಸವಾಗಿ ಹೋಗಿತ್ತು.

5. ಜಗನ್ಮಾತೆಯೇ ವಾತ್ಸಲ್ಯಮಯಿ ತಾಯಿಯಾಗಿ ಸದಾ ಅವರೊಡನಿರುವಾಗ ಶ್ರೀರಾಮಕೃಷ್ಣರಿಗೆ ಇನ್ನು ಸಾಧನೆಯ ಆವಶ್ಯಕತೆ ಏನು ? ಎಂಬ ಪ್ರಶ್ನೆ ಏಳುವುದು. ಯಾರನ್ನು ಪಡೆಯುವುದಕ್ಕಾಗಿ ಸಾಧಕರು ಏನೇನೊ ಸಾಧನೆಗಳನ್ನು ಮಾಡುತ್ತಾರೊ ಅವರೇ ಪರಮ ಆತ್ಮೀಯರಾಗಿ ಲಭಿಸಿರುವಾಗ ಇನ್ನು ಯಾವುದಕ್ಕಾಗಿ


ಸಾಧನೆ ? ಇದಕ್ಕೆ ಒಂದು ರೀತಿಯ ಉತ್ತರವನ್ನು ಹಿಂದೆಯೇ ನೀಡಿರುವೆವು. ಈಗ ಇನ್ನೊಂದು ರೀತಿಯಲ್ಲಿ ಉತ್ತರಿಸುವೆವು. ನಾವು ಶ್ರೀರಾಮಕೃಷ್ಣರ ಮುಂದೆ ಕುಳಿತು ಅವರ ಅದ್ಭುತ ಸಾಧನೆಯ ವೃತ್ತಾಂತವನ್ನು ಕೇಳುತ್ತಿರುವಾಗ ನಮಗೂ ಇಂಥದೇ ಪ್ರಶ್ನೆ ಮನಸ್ಸಿಗೆ ಬಂದಿತ್ತು. ಇದನ್ನು ಅವರ ಮುಂದೆ ವ್ಯಕ್ತಪಡಿಸಿದಾಗ ಅವರು ಹೇಳಿದರು : "ಸಮುದ್ರ ತೀರದಲ್ಲಿ ವಾಸಿಸುವ ವ್ಯಕ್ತಿಗೆ ಕೆಲವೊಮ್ಮೆ ರತ್ನಾಕರ ಗರ್ಭ ದಲ್ಲಿ ಎಷ್ಟು ಬಗೆಯ ರತ್ನಗಳಿವೆ ಎಂಬುದನ್ನು ನೋಡಬೇಕೆಂದು ಆಸೆಯಾಗುತ್ತದೆ. ಹಾಗೆಯೇ ತಾಯಿಯನ್ನು ಪಡೆದು ತಾಯಿಯ ಹತ್ತಿರ ಸದಾ ಇದ್ದರೂ ಅನಂತಭಾವ ಮಯಿಯಾದ, ಅನಂತರೂಪಿಣಿಯಾದ ಅವಳ ಬೇರೆ ಬೇರೆ ಭಾವಗಳನ್ನು, ಬೇರೆ ಬೇರೆ ರೂಪಗಳನ್ನು ನೋಡಬೇಕೆಂದು ನನಗೆ ಅನಿಸಿತು. ಯಾವುದೋ ಒಂದು ವಿಶೇಷ ಭಾವದಲ್ಲಿ ಅವಳನ್ನು ನೋಡಬೇಕೆಂದು ಅನಿಸಿದಾಗ ಅದಕ್ಕಾಗಿ ಅವಳನ್ನು ವ್ಯಾಕುಲತೆ ಯಿಂದ ಪ್ರಾರ್ಥಿಸುತ್ತಿದ್ದೆ. ಅವಳು ಅದಕ್ಕೆ ಬೇಕಾದ ಎಲ್ಲ ಅನುಕೂಲತೆಗಳನ್ನು ಒದಗಿಸಿ, ನಾನೇನು ಮಾಡಬೇಕೊ ಅದನ್ನು ನನ್ನಿಂದ ಮಾಡಿಸಿ ಆ ಭಾವವನ್ನು ನನಗೆ ತೋರಿಸಿಕೊಡುತ್ತಿದ್ದಳು. ಇದೇ ರೀತಿಯೇ ವಿವಿಧ ಮತಗಳ ಸಾಧನೆಗಳನ್ನು ನಾನು ಮಾಡಿದೆ."

ಮಧುರಭಾವದ ಸಾಧನೆಯ ನಂತರ ಸರ್ವಭಾವಾತೀತವಾದ ಅದ್ವೈತ ಅನುಭವ ವನ್ನು ಪಡೆಯಬೇಕೆನಿಸಿತು, ಶ್ರೀರಾಮಕೃಷ್ಣರಿಗೆ. ಶ್ರೀಜಗನ್ಮಾತೆಯ ಪ್ರೇರಣೆಯಿಂದ ಹೇಗೆ ಅವರು ಅದ್ವೈತ ಸಾಧನೆಯನ್ನು ಕೈಗೊಂಡರು ಮತ್ತು ಜಗದಂಬೆಯ ನಿರ್ಗುಣ ನಿರಾಕಾರ ಸ್ವರೂಪವನ್ನು ಸಾಕ್ಷಾತ್ಕರಿಸಿಕೊಂಡರು ಎಂಬುದನ್ನು ಈಗ ವಿವರಿಸುತ್ತೇವೆ.


6. ಶ್ರೀರಾಮಕೃಷ್ಣರು ಅದ್ವೈತ ಸಾಧನೆಯನ್ನು ಕೈಗೊಂಡಾಗ ಅವರ ವೃದ್ಧ ತಾಯಿ ದಕ್ಷಿಣೇಶ್ವರದಲ್ಲಿಯೇ ವಾಸಿಸುತ್ತಿದ್ದಳು. ಹಿರಿಯ ಪುತ್ರ ರಾಮಕುಮಾರನ ಮೃತ್ಯುವಿನನಂತರ ಉಳಿದ ಇಬ್ಬರು ಪುತ್ರರ ಕಡೆಗೆ ತನ್ನ ಮನಸ್ಸನ್ನು ಹರಿಸಿ ಹೇಗೊ ತನ್ನ ದುಃಖವನ್ನು ಸಹಿಸಿಕೊಂಡಿದ್ದಳು. ಕಿರಿಯ ಪುತ್ರ ಗದಾಧರನು ಹುಚ್ಚನಾಗಿರುವ ನೆಂದು ಕೇಳಿ ಆಕೆಯ ದುಃಖ ಮಿತಿ ಮೀರಿತ್ತು. ಪುತ್ರನನ್ನು ಊರಿಗೆ ಕರೆಸಿ ಏನೇನೊ ಚಿಕಿತ್ಸೆ ಮಾಡಿಸಿದಳು, ಶಾಂತಿ ಸ್ವಸ್ತ್ಯಯನಗಳನ್ನು ಮಾಡಿಸಿದಳು. ಆಗ ಪುತ್ರನ ಭಾವಾ ವಸ್ಥೆಯು ಸ್ವಲ್ಪ ಇಳಿಮುಖಹೊಂದಲು ಅವನಿಗೆ ವಿವಾಹ ಮಾಡಿಸಿದಳು. ಆದರೆ ಶ್ರೀರಾಮಕೃಷ್ಣರು ದಕ್ಷಿಣೇಶ್ವರಕ್ಕೆ ಮರಳಿದಮೇಲೆ ಹಿಂದಿನ ಭಾವಾವಸ್ಥೆಯೇ ಮತ್ತೆ ಮರುಕಳಿಸಲು ವೃದ್ಧೆಗೆ ಸಮಾಧಾನದಿಂದಿರಲು ಆಗಲಿಲ್ಲ. ಶಿವನ ಮುಂದೆ ಪ್ರಾಯೋಪ ವೇಶನ ಮಾಡಿ ಪುತ್ರನು ದಿವ್ಯೋನ್ಮಾದದಲ್ಲಿರುವನು ಎಂದು ಶಿವನಿಂದ ಆಶ್ವಾಸನೆಯನ್ನು ಪಡೆದಳು. ಆದರೂ ಆಕೆಗೆ ಈಗ ಸಂಸಾರ ಸಾಕಾಗಿತ್ತು. ಕಿರಿಯ ಪುತ್ರನೊಡನೆಯೇ ಇರೋಣವೆಂದು ದಕ್ಷಿಣೇಶ್ವರಕ್ಕೆ ಬಂದಳು. ಜೀವನದ ಕೊನೆಯವರೆಗೂ ಭಾಗೀರಥೀ ತೀರದಲ್ಲಿಯೇ ಇರುವುದೆಂದು ಸಂಕಲ್ಪಮಾಡಿದಳು. ಯಾರಿಗಾಗಿ ಅವಳು ಸಂಸಾರ ಮಾಡ ಬೇಕಿತ್ತೊ, ಅವರೆಲ್ಲ ಒಬ್ಬೊಬ್ಬರಾಗಿ ಸಂಸಾರವನ್ನು ತ್ಯಜಿಸಿ ಹೋಗುತ್ತಿರುವಾಗ ಇನ್ನು

ತಾನು ಸಂಸಾರಕ್ಕೆ ಅಂಟಿಕೊಂಡಿರುವುದರಲ್ಲಿ ಅರ್ಥವಿಲ್ಲ ಎಂದು ಅವಳು ಭಾವಿಸಿರಬೇಕು. ಮಥುರನು ಆಚರಿಸಿದ ಅನ್ನಮೇರು ಉತ್ಸವದ ಬಗ್ಗೆ ಮೊದಲೇ ಉಲ್ಲೇಖಿಸಿರುವೆವು. ಚಂದ್ರಾದೇವಿಯು ಆ ಸಮಯದಲ್ಲಿ ದಕ್ಷಿಣೇಶ್ವರಕ್ಕೆ ಬಂದಳು. ಅಂದಿನಿಂದ ತನ್ನ ದೇಹಾಂತ್ಯದವರೆಗೆ ಹನ್ನೆರಡು ವರ್ಷಗಳು ಒಮ್ಮೆಯೂ ಕಾಮಾರಪುಕುರಕ್ಕೆ ಹೋಗದೆ ದಕ್ಷಿಣೇಶ್ವರದಲ್ಲಿಯೇ ಉಳಿದಳು. ಶ್ರೀರಾಮಕೃಷ್ಣರು ಜಟಾಧಾರಿಯಿಂದ ರಾಮಮಂತ್ರ ಸ್ವೀಕರಿಸಿದುದು, ಅವರ ಮಧುರಭಾವ ಸಾಧನೆ ಮತ್ತು ಅದ್ವೈತ ಸಾಧನೆ ಇವುಗಳೆಲ್ಲ ಅವಳು ದಕ್ಷಿಣೇಶ್ವರದಲ್ಲಿರುವಾಗಲೇ ನಡೆದುವು.

7. ಶ್ರೀರಾಮಕೃಷ್ಣರ ತಾಯಿಯ ಉದಾರ ಹೃದಯವನ್ನು ಪ್ರತಿಬಿಂಬಿಸುವ ಒಂದು ಘಟನೆಯನ್ನು ಇಲ್ಲಿ ಹೇಳುತ್ತೇವೆ. ಇದು ನಡೆದದ್ದು ಆಕೆ ದಕ್ಷಿಣೇಶ್ವರಕ್ಕೆ ಬಂದ ಪ್ರಾರಂಭದಲ್ಲಿ. ಮುಂದೆ ಶ್ರೀರಾಮಕೃಷ್ಣರ ಜೀವನಕ್ಕೆ ಯಾವ ಕುಂದೂ ಉಂಟಾಗದಂತೆ ಒಂದು ವ್ಯವಸ್ಥೆ ಮಾಡಬೇಕೆಂದು ಮಥುರನಾಥನಿಗೆ ತುಂಬ ಆಸೆಯಿತ್ತು. ಆದರೆ ಅವರ ತೀವ್ರ ವೈರಾಗ್ಯವನ್ನು ನೋಡಿ ಅವರ ಮುಂದೆ ಈ ವಿಷಯವನ್ನು ಎತ್ತಲು ಅವನಿಗೆ ಧೈರ್ಯವಿರಲಿಲ್ಲ. ಒಂದು ದಿನ ಅವನು ಈ ವಿಷಯದಲ್ಲಿ ತೊಂದರೆಗೀಡಾಗಿದ್ದ. ಒಮ್ಮೆ ಅವನು ಶ್ರೀರಾಮಕೃಷ್ಣರ ಮನಸ್ಸನ್ನು ಅರಿಯಬೇಕೆಂಬ ದೃಷ್ಟಿಯಿಂದ ದೂರದಲ್ಲಿ ಅವರಿಗೆ ಕೇಳುವಂತೆ ಹೃದಯನೊಡನೆ ಒಂದು ಹೊಲವನ್ನು ಶ್ರೀರಾಮಕೃಷ್ಣರ ಹೆಸರಿನಲ್ಲಿ ಬರೆಸುವ ವಿಷಯವಾಗಿ ಮಾತನಾಡುತ್ತಿದ್ದನು. ಇದನ್ನು ಕೇಳಿದಾಕ್ಷಣ ಅವರು ಹುಚ್ಚನಂತೆ ಓಡಿಬಂದು "ಎಂಥ ಮನುಷ್ಯ ನೀನು ! ನಾನು ಪ್ರಾಪಂಚಿಕನಾಗಬೇಕೆಂದು ನಿನ್ನ ಬಯಕೆಯೆ ?" ಎಂದು ಹೇಳುತ್ತ ಅವನಿಗೆ ಹೊಡೆಯುವುದರಲ್ಲಿದ್ದರು. ಆದರೂ ಮಥುರನ ಮನಸ್ಸಿನಲ್ಲಿ ಈ ಆಸೆ ಜಾಗ್ರತವಾಗಿಯೇ ಇತ್ತು. ಚಂದ್ರಮಣಿಯು ದಕ್ಷಿಣೇಶ್ವರಕ್ಕೆ ಬಂದ ಮೇಲೆ ಅವಳನ್ನು ಹಿರಿಯಮ್ಮನಂತೆ ಅವನು ಗೌರವಿಸುತ್ತಿದ್ದ. ಪ್ರತಿದಿನ ಹೋಗಿ ಅವಳನ್ನು ಮಾತನಾಡಿಸುತ್ತಿದ್ದ, ಅವಳ ಯೋಗಕ್ಷೇಮ ವಿಚಾರಿಸುತ್ತಿದ್ದ. ಹೀಗೆ ಕ್ರಮೇಣ ಅವಳ ಪ್ರೀತಿಯನ್ನು ಸಂಪಾದಿಸಿ ಒಂದುದಿನ ಅವಳನ್ನು ವಿನಯಪೂರ್ವಕವಾಗಿ ಕೇಳಿದ. "ಪೂಜ್ಯ ಮಾತೆಯವರೇ, ನೀವು ನನ್ನಿಂದ ಏನೂ ಸೇವೆಯನ್ನು ಸ್ವೀಕರಿಸುವುದಿಲ್ಲವೆ ? ನನ್ನನ್ನು ನಿಮ್ಮವನೆಂದೇ ನೀವು ಭಾವಿಸುವುದಾದರೆ ನನ್ನಿಂದ ನಿಮಗೆ ಏನಾದರೂ ಬೇಕಿದ್ದರೆ ಕೇಳಿ." ಸರಳಹೃದಯಳಾದ ಅವಳಿಗೆ ಏನು ಹೇಳಬೇಕೊ ತೋಚಲಿಲ್ಲ. ಎಷ್ಟೇ ಯೋಚಿಸಿದರೂ ತನಗೆ ಏನು ಬೇಕೆಂಬುದೇ ತಲೆಗೆ ಹೊಳೆಯಲಿಲ್ಲ. ಅವಳು ಹೇಳಿದಳು, "ನೋಡು ಮಗು, ನಮಗೆ ಬೇಕಾದುದನ್ನೆಲ್ಲ ನೀನು ಒದಗಿಸಿದ್ದೀಯ, ಯಾವುದಕ್ಕೂ ಕೊರತೆಯಿಲ್ಲ. ಏನಾದರೂ ಬೇಕಾದರೆ ನಿನ್ನನ್ನುಕೇಳುತ್ತೇನೆ." ಹೀಗೆ ಹೇಳಿ ಅವಳು ಬಟ್ಟೆಯ ಪೆಟ್ಟಿಗೆಯನ್ನು ತೋರಿಸಿ ಮುಂದುವರಿಸಿದಳು, "ನೋಡು, ಎಷ್ಟೊಂದು ಬಟ್ಟೆಗಳಿವೆ ! ನಿನ್ನ ದಯೆಯಿಂದ ನಮಗೆ ಊಟ ಬಟ್ಟೆಗೆ ಯಾವ ಕೊರತೆಯೂ ಇಲ್ಲ. ನೀನು ಎಲ್ಲ ವ್ಯವಸ್ಥೆ ಮಾಡಿದ್ದೀಯ ಮತ್ತು ಮಾಡುತ್ತಿದ್ದೀಯ. ಇನ್ನು ಏನನ್ನು ಕೇಳಲಿ ?" ಮಥುರನು ಅಷ್ಟಕ್ಕೇ ಬಿಡಲಿಲ್ಲ, "ಏನಾದರೂ



ಪಂಚವಟಿ



ಶ್ರೀರಾಮಕೃಷ್ಣರ ಕೊಠಡಿ

ಕೇಳಿ'' ಎಂದು ಮತ್ತೆ ಮತ್ತೆ ಒತ್ತಾಯಿಸಿದನು. ಆಗ ಚಂದ್ರಮಣಿಗೆ ತನಗಿರುವ ಒಂದು ಕೊರತೆ ನೆನಪಿಗೆ ಬಂತು. ಅವಳು ನಗುತ್ತ ನುಡಿದಳು, ''ನೀನು ಏನಾದರೂ ಕೊಡಲೇ ಬೇಕೆಂದಿದ್ದರೆ ಒಂದು ಆಣೆಯ ಹೊಗೆಸೊಪ್ಪನ್ನು ತೆಗೆದುಕೊಂಡು ಬಾ, ನನಗೆ ಹಲ್ಲು ಉಜ್ಜಲು ಹೊಗೆಸೊಪ್ಪಿನ ಬೂದಿಬೇಕು.'' ಇದನ್ನು ಕೇಳಿ ಮಥುರನು ಕಂಬನಿಸುರಿಸಿದ; ಅವನು ಅವಳಿಗೆ ವಂದಿಸಿ ಹೇಳಿದ : ''ಇಂಥ ತಾಯಿಯಿಲ್ಲದಿದ್ದರೆ ಅಂಥ ತ್ಯಾಗಶೀಲ ಪುತ್ರನು ಜನಿಸಲು ಸಾಧ್ಯವೆ ?'' ಅನಂತರ ಅವಳಿಗೆ ಹೊಗೆಸೊಪ್ಪನ್ನು ತರಿಸಿಕೊಟ್ಟನು.

8. ಶ್ರೀರಾಮಕೃಷ್ಣರು ವೇದಾಂತ ಸಾಧನೆ ಮಾಡುವಾಗ ಅವರ ಚಿಕ್ಕಪ್ಪನ ಮಗ ಹಲಧಾರಿಯು ದಕ್ಷಿಣೇಶ್ವರದಲ್ಲಿ ಶ್ರೀರಾಧಾಗೋವಿಂದನ ಪೂಜೆ ಮಾಡುತ್ತಿದ್ದನು. ಹಲಧಾರಿಯ ಬಗ್ಗೆ ಮತ್ತು ಅವನು ಶ್ರೀರಾಮಕೃಷ್ಣರನ್ನು ಯಾವ ದೃಷ್ಟಿಯಿಂದ ಕಾಣುತ್ತಿದ್ದ ಎಂಬುದರ ಬಗ್ಗೆ ಆಗಲೇ ಹೇಳಿಯಾಗಿದೆ. ಒಮ್ಮೆ ಹಲಧಾರಿಯ ತೀವ್ರ ಕಟುವಾಕ್ಯವನ್ನು ಕೇಳಿ ಅವರು ತುಂಬ ನೊಂದಿದ್ದಾಗ ಭಾವಾವೇಶದಲ್ಲಿ ಒಂದು ಸೌಮ್ಯ ಮೂರ್ತಿಯ ದರ್ಶನವನ್ನು ಪಡೆದಿದ್ದರು. ಆ ಮೂರ್ತಿಯು ಅವರಿಗೆ ಭಾವಮುಖದಲ್ಲಿ ಇರಬೇಕೆಂದು ನಿರ್ದೇಶಿಸಿತು. ಈ ದರ್ಶನವು ಅವರ ವೇದಾಂತ ಸಾಧನೆಗೆ ಸ್ವಲ್ಪ ಮುಂಚೆ ಆಗಿತ್ತೆಂದು ತೋರುತ್ತದೆ. ಅವರು ಮಧುರಭಾವದ ಸಾಧನೆ ಮಾಡುವಾಗ ಸ್ತ್ರೀವೇಷ ಧರಿಸುತ್ತಿದ್ದುದನ್ನು ನೋಡಿ ಹಲಧಾರಿಯು ಅವರನ್ನು ಆತ್ಮಜ್ಞಾನವಿಹೀನ ಎಂದು ಬೈದಿದ್ದನು. ಪರಮಹಂಸ ತೋತಾಪುರಿಯು ದಕ್ಷಿಣೇಶ್ವರಕ್ಕೆ ಬಂದಮೇಲೆ ಹಲಧಾರಿಯು ಆಗಾಗ ಅವನೊಡನೆ ವೇದಾಂತ ಚರ್ಚೆ ನಡೆಸುತ್ತಿದ್ದನು. ಒಂದು ದಿನ ಅವರಿಬ್ಬರು ಆಧ್ಯಾತ್ಮ ರಾಮಾಯಣವನ್ನು ಕುರಿತು ಚರ್ಚಿಸುತ್ತಿರುವಾಗ ಶ್ರೀರಾಮಕೃಷ್ಣ ರಿಗೆ ಸೀತೆ ಲಕ್ಷ್ಮಣರಿಂದ ಕೂಡಿದ ಶ್ರೀರಾಮಚಂದ್ರನ ದರ್ಶನವಾಗಿತ್ತು. ತೋತಾಪುರಿಯು ಬಹುಶಃ ೧೮೬೪ರ ಕೊನೆಯಭಾಗದಲ್ಲಿ ದಕ್ಷಿಣೇಶ್ವರಕ್ಕೆ ಬಂದಿರಬಹುದು. ಈ ಘಟನೆಯಾದ ಕೆಲವು ತಿಂಗಳಲ್ಲಿ ಹಲಧಾರಿಯು ಅನಾರೋಗ್ಯದ ನಿಮಿತ್ತ ಕೆಲಸದಿಂದ ನಿವೃತ್ತನಾದನು. ರಾಮಕುಮಾರನ ಮಗ ಅಕ್ಷಯನು ಅವನ ಕೆಲಸದಲ್ಲಿ ನಿಯುಕ್ತ ನಾದನು.

9. ಭಕ್ತರ ಸ್ವಭಾವವೇನೆಂದರೆ ಸಾಯುಜ್ಯ ಅಥವಾ ನಿರ್ವಾಣವನ್ನು ಅವರು ಬಯಸುವುದಿಲ್ಲ. ಅವರು ಯಾವಾಗಲೂ ಭಗವದಾನಂದವನ್ನು ಸವಿಯಲು ಬಯಸ ತ್ತಾರೆ. 'ಸಕ್ಕರೆಯಾಗಲು ಇಷ್ಟವಿಲ್ಲ, ಸಕ್ಕರೆ ಸವಿಯಲು ಬಯಸುತ್ತೇನೆ'–ಎಂಬ ರಾಮ ಪ್ರಸಾದನ ಭಾವವು ಭಕ್ತನ ಸ್ವಾಭಾವಿಕ ಮನೋಭಾವ. ಆದ್ದರಿಂದ ಮಧುರಭಾವದಲ್ಲಿ ಪರಮ ಸಿದ್ಧಿಯನ್ನು ಹೊಂದಿ ಶ್ರೀರಾಮಕೃಷ್ಣರು ಈಗ ಭಾವಾತೀತ ಅದ್ವೈತಾನು ಭವವನ್ನು ಪಡೆಯಬೇಕೆಂದು ಬಯಸುತ್ತಿರುವುದು ತುಂಬ ವಿಚಿತ್ರವಾಗಿ ಕಾಣುವುದು. ಆದರೆ ಹೀಗೆ ಭಾವಿಸುವುದಕ್ಕೆ ಮುಂಚೆ ನಾವು ಒಂದು ವಿಷಯವನ್ನು ಸ್ಮರಿಸಿಕೊಳ್ಳ ಬೇಕು. ಶ್ರೀರಾಮಕೃಷ್ಣರು ತಮ್ಮ ಸ್ವಂತ ಪ್ರೇರಣೆಯಿಂದ ಏನನ್ನೂ ಮಾಡುತ್ತಿರಲಿಲ್ಲ. ಶ್ರೀ ಜಗನ್ಮಾತೆಯ ಶಿಶುವಾದ ಅವರು ಅವಳನ್ನೇ ಸಂಪೂರ್ಣ ಅವಲಂಬಿಸಿದ್ದರು.

ಪ್ರತಿಯೊಂದಕ್ಕೂ ಅವಳ ಕಡೆ ತಿರುಗುತ್ತಿದ್ದರು ಮತ್ತು ಅವಳ ನಿರ್ದೇಶನದಂತೆ ವರ್ತಿಸುತ್ತಿದ್ದರು. ಶ್ರೀ ಜಗನ್ಮಾತೆಯೂ ಅವರ ಸಂಪೂರ್ಣ ಭಾರವನ್ನು ತಾನು ವಹಿಸಿ ಕೊಂಡು ತನ್ನ ಇಚ್ಛೆಯಂತೆ ಅವರನ್ನು ಯಾವ ಆದರ್ಶಕ್ಕೆ ಅನುಸಾರವಾಗಿ ನಡೆಸಿ ಕೊಂಡು ಹೋಗಬೇಕೊ ಹಾಗೆ ಮಾಡುತ್ತಿದ್ದಳು. ಎಲ್ಲ ವಿಧದ ಸಾಧನೆಗಳ ಕೊನೆಯಲ್ಲಿ ಜಗನ್ಮಾತೆಯ ಈ ಉದ್ದೇಶ ಶ್ರೀರಾಮಕೃಷ್ಣರಿಗೆ ಅರ್ಥವಾಗಿತ್ತು. ಜೀವನದ ಕೊನೆಯ ವರೆಗೂ ಪ್ರೇಮದಲ್ಲಿ ಅವಳೊಂದಿಗೆ ಒಂದಾಗಿ ಅವಳ ಲೋಕಕಲ್ಯಾಣದ ಮಹತ್ ಕಾರ್ಯವನ್ನು ತಮ್ಮದೆಂದೇ ಭಾವಿಸಿ ಅದನ್ನು ಆನಂದದಿಂದ ವಹಿಸಿಕೊಂಡರು.

10. ಮಧುರಭಾವದ ಸಾಧನೆಯ ನಂತರ ಅದ್ವೈತ ಸಾಧನೆಯನ್ನು ಅವರು ಏಕೆ ಮಾಡಿದರು ಎಂಬುದನ್ನು ಇನ್ನೊಂದು ದೃಷ್ಟಿಯಲ್ಲಿಯೂ ನೋಡಬಹುದು. ಭಾವ ಮತ್ತು ಭಾವಾತೀತ ಅವಸ್ಥೆಗಳಿಗೆ ಪರಸ್ಪರ ಕಾರ್ಯ-ಕಾರಣ ಸಂಬಂಧವಿದೆ. ಭಾವಾತೀತ ಅದ್ವೈತ ವಸ್ತುವಿನ ಭೂಮಾನಂದವೇ ಸೀಮಾ ಬದ್ಧವಾಗಿ ಭಾವಾವಸ್ಥೆಯ ದರ್ಶನ ಸ್ಪರ್ಶನವೇ ಮುಂತಾದ ಆನಂದ ರೂಪಗಳಲ್ಲಿ ಪ್ರಕಾಶಿಸುತ್ತಿರುವುದು. ಮಧುರಭಾವವು ಭಾವರಾಜ್ಯದ ಅಂತಿಮ ಸೀಮಾರೇಖೆ. ಈಗ ಅದನ್ನು ಮುಟ್ಟಿದಮೇಲೆ ಭಾವಾತೀತ ಅದ್ವೈತ ಸ್ಥಿತಿಯನ್ನು ಬಿಟ್ಟು ಮತ್ತಾವುದರ ಕಡೆ ಅವರ ಮನಸ್ಸು ಹರಿಯಲು ಸಾಧ್ಯ?

ಶ್ರೀ ಜಗನ್ಮಾತೆಯ ಸೂಚನೆಯಂತೆಯೇ ಅವರು ಅದ್ವೈತ ಸಾಧನೆಯನ್ನು ಕೈಗೊಂಡರು ಎಂಬುದು ಈ ಕೆಳಗಿನ ಘಟನೆಯಿಂದ ಸ್ಪಷ್ಟವಾಗುತ್ತದೆ.

11. ತೋತಾಪುರಿಯು ಮಧ್ಯಭಾರತದವನು. ಸಾಗರಸಂಗಮದಲ್ಲಿ ಸ್ನಾನ ಮಾಡುವುದಕ್ಕಾಗಿ ಮತ್ತು ಪುರಿ ಜಗನ್ನಾಥನ ದರ್ಶನಕ್ಕಾಗಿ ಅವನು ತನ್ನಿಷ್ಟಬಂದಂತೆ ತಿರುಗಾಡುತ್ತ ಈಗ ವಂಗದೇಶಕ್ಕೆ ಬಂದಿದ್ದನು. ನರ್ಮದಾತೀರದಲ್ಲಿ ಅವನು ಏಕಾಂತ ವಾಗಿ ಬಹಳ ತಪಸ್ಸು ಮಾಡಿದ್ದನು ಮತ್ತು ನಿರ್ವಿಕಲ್ಪ ಸಮಾಧಿಯ ಮೂಲಕ ಅದ್ವೈತ ಬ್ರಹ್ಮಸಾಕ್ಷಾತ್ಕಾರವನ್ನು ಪಡೆದಿದ್ದನು-ಎಂಬುದನ್ನು ಆ ಕಾಲದ ಸಾಧುಗಳು ಈಗಲೂ ಹೇಳುತ್ತಾರೆ. ಬ್ರಹ್ಮಾನುಭವವನ್ನು ಪಡೆದಮೇಲೆ ಅವನು ತನ್ನಿಚ್ಛೆಯಂತೆ ಪರಿವ್ರಾಜಕ ನಾಗಿ ಅಲೆಯಬೇಕೆಂದು ಪೂರ್ವಭಾರತದ ಕಡೆ ಹೊರಟಿದ್ದನು. ಬ್ರಹ್ಮಜ್ಞ ಪುರುಷರು ಸಮಾಧಿ ಅವಸ್ಥೆಯಲ್ಲಿ ಇಲ್ಲದಿದ್ದಾಗ ಬಾಹ್ಯ ಜಗತ್ತನ್ನು ಕಂಡರೂ ಅದೂ ಬ್ರಹ್ಮನೆಂದೇ ಅನುಭವಿಸುತ್ತಾರೆ. ಎಲ್ಲ ವಸ್ತುಗಳಲ್ಲಿಯೂ ಬ್ರಹ್ಮನನ್ನೇ ಕಾಣುತ್ತ ತೀರ್ಥಯಾತ್ರೆ, ಸಾಧುಸಂದರ್ಶನ ಇತ್ಯಾದಿಗಳಲ್ಲಿ ಕಾಲಕಳೆಯುತ್ತಾರೆ. ತೋತಾಪುರಿಯು ಮೇಲೆ ಹೇಳಿದ ಎರಡು ತೀರ್ಥಗಳ ಸಂದರ್ಶನದ ನಂತರ ಪಶ್ಚಿಮದ ಕಡೆ ಹೋಗುವಾಗ ದಕ್ಷಿಣೇಶ್ವರಕ್ಕೆ ಬಂದನು. ಮೂರು ದಿನಗಳಿಗಿಂತ ಜಾಸ್ತಿ ಒಂದು ಜಾಗದಲ್ಲಿ ಉಳಿಯುವು ದಿಲ್ಲವೆಂಬ ನಿಯಮ ಹಾಕಿಕೊಂಡಿದ್ದನು. ಆದ್ದರಿಂದ ದಕ್ಷಿಣೇಶ್ವರದಲ್ಲಿಯೂ ಮೂರೇ ದಿನ ಇರುವುದೆಂದು ನಿಶ್ಚಯಿಸಿದ್ದನು. ಅವನ ಜ್ಞಾನವನ್ನು ಪೂರ್ಣಗೊಳಿಸುವುದಕ್ಕೆ ಮತ್ತು ತನ್ನ ಬಾಲಕನಿಗೆ ವೇದಾಂತ ಕಲಿಸುವುದಕ್ಕೆ ಶ್ರೀ ಜಗನ್ಮಾತೆಯು ಅವನನ್ನು ಅಲ್ಲಿಗೆ ಕರೆತಂದಿರುವಳೆಂದು ಅವನಿಗೆ ಆಗ ವೇದ್ಯವಾಗಿರಲಿಲ್ಲ.

12. ತೋತಾಪುರಿಯು ದೇವಸ್ಥಾನಕ್ಕೆ ಬಂದು ಮೊದಲು ಮುಖಮಂಟಪದಲ್ಲಿ ಕುಳಿತಿದ್ದನು. ಶ್ರೀರಾಮಕೃಷ್ಣರೂ ಅಲ್ಲಿಯೇ ಇನ್ನೊಂದು ಭಾಗದಲ್ಲಿ ಅನ್ಯಮನಸ್ಕರಾಗಿ ಕುಳಿತಿದ್ದರು. ತೋತಾಪುರಿಯ ದೃಷ್ಟಿ ಅವರ ಮೇಲೆ ಬಿತ್ತು. ತಪಸ್ಸಿನಿಂದ ತೇಜಸ್ವಿಯಾದ ಅವರ ಭಾವೋಜ್ವಲ ಮುಖವನ್ನು ಕಂಡು ಅವನು ಆಕರ್ಷಿತನಾದನು. ಅವನಿಗನಿಸಿತು, ಇವರು ಸಾಮಾನ್ಯ ವ್ಯಕ್ತಿಯಲ್ಲ, ವೇದಾಂತ ಸಾಧನೆಗೆ ಇಂಥ ಅಧಿಕಾರಿಗಳು ಅತಿ ವಿರಳ, ಎಂದು. ತಂತ್ರಪ್ರಧಾನವಾದ ವಂಗದೇಶದಲ್ಲಿ ಇಂಥ ವೇದಾಂತಾಧಿಕಾರಿಯೂ ಇರುವರಲ್ಲ ಎಂದು ಅವನಿಗೆ ಆಶ್ಚರ್ಯವಾಯಿತು. ಅಂತಃಪ್ರೇರಣೆಯಿಂದ ಪ್ರೇರಿತನಾಗಿ ಶ್ರೀರಾಮ ಕೃಷ್ಣರನ್ನು ವಿಚಾರಿಸಿದ: "ನೀನು ಉತ್ತಮ ಅಧಿಕಾರಿ ಎಂದು ಅನಿಸುತ್ತಿದೆ, ನೀನು ವೇದಾಂತ ಸಾಧನೆ ಮಾಡುವೆಯಾ ?"

ಜಟಾಜೂಟಧಾರಿಯೂ, ದೀರ್ಘಕಾಯನೂ, ದಿಗಂಬರನೂ ಆಗಿದ್ದ ತೋತಾ ಪುರಿಯನ್ನೊಮ್ಮೆ ದಿಟ್ಟಿಸಿ ನೋಡಿ ಶ್ರೀರಾಮಕೃಷ್ಣರೆಂದರು. "ನಾನು ಏನುಮಾಡಬೇಕು ಏನು ಮಾಡಬಾರದು ಇದೊಂದೂ ನನಗೆ ತಿಳಿಯದು. ನನ್ನ ತಾಯಿಗೆ ಎಲ್ಲ ಗೊತ್ತು, ಅವಳು ಅಪ್ಪಣೆಯಿತ್ತರೆ ಮಾಡುತ್ತೇನೆ."

ತೋತಾಪುರಿ ಹೇಳಿದ : "ಹಾಗಾದರೆ ಹೋಗು, ನಿನ್ನ ತಾಯಿಯನ್ನು ವಿಚಾರಿಸಿ ಕೊಂಡು ಬಾ. ನಾನು ಇಲ್ಲಿ ಬಹಳಕಾಲ ನಿಲ್ಲುವುದಿಲ್ಲ."

ಶ್ರೀರಾಮಕೃಷ್ಣರು ಮರುಮಾತನಾಡದೆ ನಿಧಾನವಾಗಿ ಕಾಳೀ ಮಂದಿರಕ್ಕೆ ಹೋದರು. ಭಾವಾವಸ್ಥೆಯಲ್ಲಿ ಶ್ರೀಜಗನ್ಮಾತೆಯ ವಾಣಿಯನ್ನು ಕೇಳಿದರು. "ಹೋಗು, ಅವನಿಂದ ಕಲಿತುಕೊ. ನಿನಗೆ ಕಲಿಸುವುದಕ್ಕಾಗಿಯೇ ಆ ಸಂನ್ಯಾಸೀ ಇಲ್ಲಿಗೆ ಬಂದಿರುವನು.'

13, ಶ್ರೀರಾಮಕೃಷ್ಣರು ಹರ್ಷಚಿತ್ತರಾಗಿ ತೋತಾಪುರಿಯೆಡೆಗೆ ಬಂದು ಜಗನ್ಮಾತೆಯ ಆದೇಶವನ್ನು ಅವನಿಗೆ ತಿಳಿಸಿದರು. ಈಗ ತೋತಾಪುರಿಗೆ ತಿಳಿಯಿತು ಮಂದಿರದಲ್ಲಿ ಪ್ರತಿಷ್ಠಿತವಾಗಿರುವ ದೇವಿಯನ್ನೇ ಇವರು ತಾಯಿ ಎಂದು ಸಂಬೋಧಿಸು ತ್ತಿರುವುದು ಎಂದು. ಅವರ ಮುಗ್ಧ ಬಾಲಕ ಸ್ವಭಾವವನ್ನು ಮೆಚ್ಚಿದರೂ ಶ್ರೀರಾಮ ಕೃಷ್ಣರ ಈ ರೀತಿಯ ವರ್ತನೆ ಅಜ್ಞಾನದ ದೆಸೆಯಿಂದ ಆದದ್ದು ಎಂದು ಅವನು ಭಾವಿಸಿ ದನು. ಆಗ ಕರುಣೆ ಮತ್ತು ವ್ಯಂಗ್ಯ ದೃಷ್ಟಿಯಿಂದ ಅವನು ಶ್ರೀರಾಮಕೃಷ್ಣರನ್ನು ನೋಡಿರಬಹುದು. ತೀಕ್ಷ್ಣಬುದ್ಧಿಯವನಾದ ತೋತಾಪುರಿಯು ಕರ್ಮಫಲದಾತನಾದ ಈಶ್ವರನನ್ನು ಬಿಟ್ಟು ಬೇರೆ ಯಾವ ದೇವದೇವಿಯರಿಗೂ ತಲೆ ಬಾಗುತ್ತಿರಲಿಲ್ಲ; ಈಶ್ವರನ ಅಸ್ತಿತ್ವದಲ್ಲಿ ಶ್ರದ್ಧೆಯನ್ನು ಬಿಟ್ಟರೆ ಕೃಪೆಗಾಗಿ ಅವನನ್ನು ಪ್ರಾರ್ಥಿಸುವುದು, ಪೂಜಿಸುವುದು ಇತ್ಯಾದಿಗಳ ಪ್ರಯೋಜನವನ್ನು ಮನ್ನಿಸುತ್ತಿರಲಿಲ್ಲ. ಇನ್ನು ಬ್ರಹ್ಮಶಕ್ತಿ ಯಾದ ಮಾಯೆಯ ಬಗ್ಗೆ ಹೇಳಬೇಕಾಗಿಯೇ ಇಲ್ಲ ! ತೋತಾಪುರಿಯ ದೃಷ್ಟಿಯಲ್ಲಿ ಅದು ಭ್ರಮೆ. ಆ ಮಾಯಾಶಕ್ತಿಯನ್ನು [ಶ್ರೀ ಜಗನ್ಮಾತೆಯನ್ನು] ಪ್ರಾರ್ಥಿಸುವುದು ಪೂಜಿಸುವುದು ಇವೆಲ್ಲ ಅವನ ಪಾಲಿಗೆ ಹಾಸ್ಯಾಸ್ಪದ. ಅವನ ಪ್ರಕಾರ, ಮುಕ್ತಿಯನ್ನು

ಪಡೆಯುವುದಕ್ಕೆ ಸಾಧಕನು ಸ್ವಪ್ರಯತ್ನವನ್ನೇ ಅವಲಂಬಿಸಬೇಕೇ ಹೊರತು ಈಶ್ವರನ ಅಥವಾ ಶಕ್ತಿಯ ಕೃಪೆಗಾಗಿ ಪ್ರಾರ್ಥಿಸಿದರೆ ಯಾವ ಪ್ರಯೋಜನವೂ ಆಗುವುದಿಲ್ಲ. ಆ ರೀತಿ ಮಾಡುವವರು ಭ್ರಾಂತಿವಶರು ಅಷ್ಟೆ.

14. ತನ್ನಿಂದ ದೀಕ್ಷೆಯನ್ನು ಪಡೆದು ಜ್ಞಾನಮಾರ್ಗದಲ್ಲಿ ಸಾಧನೆ ಮಾಡಿದರೆ ಈ ಭ್ರಾಂತಿ ಹೊರಟುಹೋಗುವುದೆಂದು ಭಾವಿಸಿ ತೋತಾಪುರಿಯು ಆಗ ಆ ವಿಷಯ ವಾಗಿ ಏನೂ ಮಾತನಾಡಲಿಲ್ಲ. ವೇದಾಂತ ಸಾಧನೆ ಮಾಡಬೇಕಾದರೆ ಶಿಖಾಸೂತ್ರ ಗಳನ್ನು ತ್ಯಜಿಸಿ ಸಂನ್ಯಾಸ ಸ್ವೀಕರಿಸಬೇಕಾಗುತ್ತದೆ ಎಂದು ಶ್ರೀರಾಮಕೃಷ್ಣರಿಗೆ ಹೇಳಿದ್ದ, ಇದಕ್ಕೆ ಅವರು ಸ್ವಲ್ಪ ಹಿಂಜರಿಯಬೇಕಾಯಿತು. ಏಕೆಂದರೆ ಇದರಿಂದ ತಮ್ಮ ವೃದ್ಧ ತಾಯಿಗೆ ದೊಡ್ಡ ಆಘಾತವಾಗುವುದು. ಆಕೆಯ ಮನಸ್ಸನ್ನು ನೋಯಿಸುವುದು ಅವರಿಗೆ ಇಷ್ಟವಿರಲಿಲ್ಲ. ಆದ್ದರಿಂದ ಅವರೆಂದರು, ಗುಪ್ತವಾಗಿ, ತಮ್ಮ ತಾಯಿಗೆ ತಿಳಿಯದಂತೆ ಇದು ನಡೆಯುವುದಾದರೆ ತಮ್ಮ ಆಕ್ಷೇಪಣೆ ಇಲ್ಲ ಎಂದು. ತೋತಾಪುರಿಯೂ ಇದಕ್ಕೆ ಒಪ್ಪಿಗೆಯಿತ್ತನು.

15. ಅನಂತರ ಒಂದು ಶುಭದಿನದಂದು ತೋತಾಪುರಿಯು ಶ್ರೀರಾಮಕೃಷ್ಣರಿಗೆ ಪಿತೃಶ್ರಾದ್ಧವನ್ನು ಮುಗಿಸಬೇಕೆಂದು ಹೇಳಿದನು. ಅನಂತರ ತಮಗಾಗಿ ಪಿಂಡಪ್ರದಾನ ಮಾಡಲು ಹೇಳಿದನು. ಏಕೆಂದರೆ ಸಂನ್ಯಾಸ ದೀಕ್ಷೆಯಾದ ಮೇಲೆ ಸಾಧಕನು ಭೂರಾದಿ ಎಲ್ಲ ಲೋಕಪ್ರಾಪ್ತಿಯ ಆಸೆಯನ್ನೂ ಪರಿತ್ಯಜಿಸುವುದರಿಂದ ತನ್ನ ಪ್ರೇತಕ್ಕೆ ತಾನು ಪಿಂಡಪ್ರದಾನ ಮಾಡಬೇಕೆಂದು ಶಾಸ್ತ್ರ ಹೇಳುತ್ತದೆ.

ಶ್ರೀರಾಮಕೃಷ್ಣರು ಯಾರನ್ನು ಗುರುವೆಂದು ಸ್ವೀಕರಿಸುತ್ತಾರೊ ಅವರು ಹೇಳಿ ದಂತೆ ಪೂರ್ಣ ವಿಶ್ವಾಸದಿಂದ ಚಾಚೂ ತಪ್ಪದೆ ಮಾಡುವವರು. ಆದ್ದರಿಂದ ತೋತಾ ಪುರಿಯು ಹೇಳಿದಂತೆಯೇ ಅಕ್ಷರಶಃ ಪಾಲಿಸಿದರು. ಶ್ರಾದ್ಧಾದಿಗಳೆಲ್ಲ ಮುಗಿದವು. ಪಂಚವಟಿಯ ತಮ್ಮ ಸಾಧನ ಕುಟೀರದಲ್ಲಿ ಗುರು ಹೇಳಿದಂತೆ ಬೇಕಾದ ವಸ್ತುಗಳನ್ನೆಲ್ಲ ತಂದು ಅಣಿಮಾಡಿದರು. ಈಗ ಶುಭ ಮುಹೂರ್ತಕ್ಕಾಗಿ ಇಬ್ಬರೂ ಕಾಯುತ್ತಿದ್ದಾರೆ.

ರಾತ್ರಿಯ ಕೊನೆಯ ಭಾಗ, ಶುಭ ಬ್ರಹ್ಮಮುಹೂರ್ತ ಬಂದಿದೆ. ಗುರು ಮತ್ತು ಶಿಷ್ಯ ಇಬ್ಬರೂ ಕುಟೀರವನ್ನು ಪ್ರವೇಶಿಸಿದರು. ಪೂರ್ವಕ್ರಿಯೆಗಳೆಲ್ಲ ಮುಗಿದು ಹೋಮಾಗ್ನಿಯನ್ನು ಹೊತ್ತಿಸಲಾಯಿತು. ಅತಿ ಪ್ರಾಚೀನಕಾಲದಿಂದಲೂ ನಡೆದುಬಂದ ಭಾರತದ ಭವ್ಯ ಪರಂಪರೆಯನ್ನು ಪ್ರತಿಬಿಂಬಿಸುವ ಸರ್ವಸಂಗ ಪರಿತ್ಯಾಗದ ಆ ದೀಕ್ಷಾ ವ್ರತ ಪ್ರಾರಂಭವಾಯಿತು. ಗುರುವು ಸಂನ್ಯಾಸಮಂತ್ರವನ್ನು ಪಠಿಸತೊಡಗಿದ. ಶ್ರೀರಾಮ ಕೃಷ್ಣರು ಏಕಾಗ್ರ ಮನಸ್ಸಿನಿಂದ ಆ ಮಂತ್ರಗಳನ್ನು ಉಚ್ಚರಿಸುತ್ತ ಅಗ್ನಿಗೆ ಆಹುತಿ ಯನ್ನು ನೀಡಿದರು. ಮೊದಲು ಪ್ರಾರ್ಥನಾ ಮಂತ್ರವನ್ನು ಹೇಳಿದರು :

16. "ಪರಬ್ರಹ್ಮತತ್ತ್ವವು ನನಗೆ ಲಭಿಸಲಿ. ಪರಮಾನಂದ ಲಕ್ಷಣದಿಂದ ಕೂಡಿದ ವಸ್ತುವು ನನಗೆ ಲಭಿಸಲಿ. ಅಖಂಡೈಕರಸವಾದ ಮಧುಮಯ ಬ್ರಹ್ಮವಸ್ತುವು ನನ್ನಲ್ಲಿ ಪ್ರಕಾಶಗೊಳ್ಳಲಿ. ಹೇ ನಿತ್ಯ ಬ್ರಹ್ಮವಿದ್ಯೆಯಿಂದ ಕೂಡಿದ ಪರಮಾತ್ಮನೆ, ದೇವ

ಮನುಷ್ಯರೇ ಮುಂತಾದ ನಿನ್ನ ಸಮಸ್ತ ಸಂತತಿಗಳಲ್ಲಿ ನಾನು ವಿಶೇಷ ಕರುಣೆಗೆ ಯೋಗ್ಯನಾದ ಎಳೆ ಹಸುಳೆ. ಸಂಸಾರವೆಂಬ ದುಃಸ್ವಪ್ನವನ್ನು ನಾಶಮಾಡುವವನೆ, ಪರಮೇಶ್ವರನೇ ದ್ವೈತರೂಪದಲ್ಲಿ ತೋರುತ್ತಿರುವ ನನ್ನ ದುಃಸ್ವಪ್ನವನ್ನು ನಾಶಮಾಡು. ಹೇ ಪರಮಾತ್ಮನೆ, ನನ್ನ ಎಲ್ಲ ಪ್ರಾಣವೃತ್ತಿಗಳನ್ನು ನಿನ್ನಲ್ಲಿ ಸಂಪೂರ್ಣ ಆಹುತಿಯಿತ್ತು ಇಂದ್ರಿಯಗಳೆಲ್ಲವನ್ನು ನಿಗ್ರಹಿಸಿ ನಿನ್ನಲ್ಲೇ ಮನಸ್ಸುಳ್ಳವನಾಗುತ್ತಿದ್ದೇನೆ, ಸರ್ವವನ್ನೂ ಪ್ರೇರೇಪಿಸುವ ದೇವನೆ, ಜ್ಞಾನಪ್ರತಿಬಂಧಕವಾದ ಎಲ್ಲ ಮಲಿನತೆಗಳನ್ನು ತೊಳೆದುಹಾಕಿ ತತ್ತ್ವಜ್ಞಾನವು ನನ್ನಲ್ಲಿ ನೆಲೆನಿಲ್ಲುವಂತೆ ಮಾಡು. ಸೂರ್ಯ, ವಾಯು, ನದಿಗಳೆಲ್ಲದರ ಸ್ನಿಗ್ಧ ನಿರ್ಮಲ ಜಲ, ಅಕ್ಕಿಗೋಧಿ ಮುಂತಾದ ಧಾನ್ಯಗಳು, ಸಸ್ಯಸಮೂಹಗಳು, ಜಗತ್ತಿನ ಎಲ್ಲ ಪದಾರ್ಥಗಳು ನಿನ್ನ ಆಜ್ಞಾನುಸಾರವಾಗಿ ನಾನು ತತ್ತ್ವಜ್ಞಾನವನ್ನು ಪಡೆಯಲು ಅನುಕೂಲವುಂಟುಮಾಡಲಿ. ಹೇ ಬ್ರಹ್ಮ, ನೀನೇ ಜಗತ್ತಿನಲ್ಲಿ ನಿನ್ನ ವಿಶೇಷ ಶಕ್ತಿಯಿಂದ ನಾನಾ ರೂಪದಲ್ಲಿ ಪ್ರಕಾಶಿಸುತ್ತಿರುವೆ. ಶರೀರ ಮನಸ್ಸುಗಳ ಶುದ್ಧಿಯ ಮೂಲಕ ತತ್ತ್ವಜ್ಞಾನಸಾಧನೆಗೆ ಯೋಗ್ಯತೆಯನ್ನು ಪಡೆಯಲು ನಾನು ಅಗ್ನಿರೂಪನಾದ ನಿನ್ನಲ್ಲಿ ಆಹುತಿ ನೀಡುತ್ತಿದ್ದೇನೆ—ಪ್ರಸನ್ನನಾಗು !''*

17. ಅನಂತರ ವಿರಜಾಹೋಮವು ಪ್ರಾರಂಭವಾಯಿತು—''ಪೃಥ್ವಿ, ಅಪ್, ತೇಜಸ್, ವಾಯು ಮತ್ತು ಆಕಾಶರೂಪದಲ್ಲಿ ನನ್ನಲ್ಲಿರುವ ಪಂಚಭೂತಗಳು ಶುದ್ಧವಾಗಲಿ; ಆಹುತಿಯ ಪ್ರಭಾವದಿಂದ ರಜೋಗುಣದಿಂದ ಉಂಟಾದ ಮಲಿನತೆಯಿಂದ ನಾನು ಮುಕ್ತನಾಗಿ ಜ್ಯೋತಿಸ್ವರೂಪನಾಗಲಿ—ಸ್ವಾಹಾ.

''ಪ್ರಾಣ, ಅಪಾನ, ಸಮಾನ, ಉದಾನ ಮತ್ತು ವ್ಯಾನ—ನನ್ನಲ್ಲಿರುವ ಈ ಪಂಚಪ್ರಾಣಗಳು ಶುದ್ಧವಾಗಲಿ; ಆಹುತಿಯ ಪ್ರಭಾವದಿಂದ ರಜೋಗುಣದಿಂದ ಉಂಟಾದ ಮಲಿನತೆಯು ನನ್ನಿಂದ ದೂರವಾಗಿ ನಾನು ಜ್ಯೋತಿಸ್ವರೂಪನಾಗಲಿ—ಸ್ವಾಹಾ.

''ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯ— ನನ್ನ ಈ ಐದು ಕೋಶಗಳು ಶುದ್ಧವಾಗಲಿ; ಆಹುತಿಯ ಪ್ರಭಾವದಿಂದ ರಜೋಗುಣ ಪ್ರಸೂತವಾದ ಮಲಿನತೆಯಿಂದ ನಾನು ಮುಕ್ತನಾಗಿ ಜ್ಯೋತಿಸ್ವರೂಪನಾಗಲಿ—ಸ್ವಾಹಾ.

''ಶಬ್ದ, ಸ್ಪರ್ಶ, ರೂಪ, ರಸ, ಗಂಧ—ಇವುಗಳಿಂದ ಉಂಟಾದ ವಿಷಯ ಸಂಸ್ಕಾರಗಳು ಶುದ್ಧವಾಗಲಿ; ಆಹುತಿಯ ಪ್ರಭಾವದಿಂದ ಉಂಟಾದ ಮಲಿನತೆಯು ನನ್ನನ್ನು ಬಿಟ್ಟು ನಾನು ಜ್ಯೋತಿಃಸ್ವರೂಪನಾಗಲಿ—ಸ್ವಾಹಾ.

''ನನ್ನ ವಾಕ್, ಮನಸ್ಸು, ಕಾಯ. ಕರ್ಮ ಮುಂತಾದುವುಗಳು ಶುದ್ಧವಾಗಲಿ; ಆಹುತಿಯ ಪ್ರಭಾವದಿಂದ ರಜೋಗುಣ ಪ್ರಸೂತವಾದ ಮಲಿನತೆಯು ನನ್ನಿಂದ ದೂರವಾಗಿ ನಾನು ಜ್ಯೋತಿಃಸ್ವರೂಪನಾಗಲಿ—ಸ್ವಾಹಾ.

---

* ತ್ರಿಸುಪರ್ಣ ಮಂತ್ರದ ಭಾವಾರ್ಥ

"ಹೇ ಅಗ್ನಿಶರೀರದಲ್ಲಿರುವವನೆ, ಜ್ಞಾನಪ್ರತಿಬಂಧಕಗಳನ್ನು ಹೋಗಲಾಡಿಸುವುದರಲ್ಲಿ ಸಮರ್ಥನೆ, ಲೋಹಿತಾಕ್ಷ ಪುರುಷನೆ, ಜಾಗ್ರತನಾಗು. ಹೇ ಅಭೀಷ್ಟಗಳನ್ನು ಪೂರೈಸುವವನೆ, ತತ್ತ್ವಜ್ಞಾನವನ್ನು ಪಡೆಯುವ ಹಾದಿಯಲ್ಲಿ ಇರುವ ಎಲ್ಲ ಅಡಚಣೆಗಳನ್ನು ನಾಶಮಾಡು. ನನ್ನ ಮನಸ್ಸಿನ ಎಲ್ಲ ಸಂಸ್ಕಾರಗಳೂ ಶುದ್ಧವಾಗಿ ಗುರುಮುಖದಿಂದ ಕೇಳಿದ ಜ್ಞಾನವು ನನ್ನ ಅಂತರ್ಯದಲ್ಲಿ ಉದಯವಾಗುವಂತೆ ಮಾಡು. ಆಹುತಿಯ ಪ್ರಭಾವದಿಂದ ರಜೋಗುಣಪ್ರಸೂತ ಮಲಿನತೆಯು ನಾಶವಾಗಿ ನಾನು ಜ್ಯೋತಿಸ್ವರೂಪನಾಗಲಿ—ಸ್ವಾಹಾ.

"ಚಿದಾಭಾಸ ಬ್ರಹ್ಮಸ್ವರೂಪನಾದ ನಾನು ಪತ್ನಿ ಪುತ್ರ ಸಂಪತ್ ಲೋಕಮಾನ್ಯತೆ ಸುಂದರಶರೀರ ಇವೇ ಮುಂತಾದವುಗಳ ವಾಸನೆಯನ್ನು ಅಗ್ನಿಯಲ್ಲಿ ಆಹುತಿಮಾಡಿ ಅವುಗಳನ್ನು ಸಂಪೂರ್ಣ ತ್ಯಜಿಸುತ್ತಿದ್ದೇನೆ—ಸ್ವಾಹಾ."

18. ಹೀಗೆ ಅನೇಕ ಆಹುತಿಗಳನ್ನು ನೀಡಿದ್ದಾಯಿತು. ಅನಂತರ "ಭೂಮುಂತಾದ ಎಲ್ಲ ಲೋಕಗಳನ್ನು ಪಡೆಯುವ ಆಸೆಯನ್ನು ಈಗಲೇ ನಾನು ತ್ಯಾಗ ಮಾಡಿದೆ" ಮತ್ತು "ಜಗತ್ತಿನ ಸರ್ವಭೂತಗಳಿಗೆ ಅಭಯದಾನ ನೀಡುತ್ತಿದ್ದೇನೆ"—ಈ ಮಂತ್ರಗಳ ಉಚ್ಚಾರಣೆಯೊಂದಿಗೆ ಹೋಮವು ಸಮಾಪ್ತಿಗೊಂಡಿತು. ಇದಾದ ನಂತರ ಶಿಖೆ ಸೂತ್ರ ಯಜ್ಞೋಪವೀತಗಳನ್ನು ಯಥಾವಿಧಿಯಂತೆ ಆಹುತಿಮಾಡಿದರು, ಈಗ ಗುರುವಿತ್ತ ಕೌಪೀನವನ್ನೂ ಕಾಷಾಯ ವಸ್ತ್ರವನ್ನೂ ಉಟ್ಟು ಉಪದೇಶಕ್ಕಾಗಿ ತೋತಾಪುರಿಯ ಮುಂದೆ ಕುಳಿತರು ಶ್ರೀರಾಮಕೃಷ್ಣರು.

19. ತೋತಾಪುರಿಯು 'ನೇತಿ ನೇತಿ' ವಿಧಾನದಿಂದ ಬ್ರಹ್ಮಸ್ವರೂಪವನ್ನು ಅರಿಯಲು ಶ್ರೀರಾಮಕೃಷ್ಣರನ್ನು ಪ್ರೇರೇಪಿಸಿದನು. ಅವನು ಹೇಳಿದ :

"ದೇಶಕಾಲಾದಿಗಳಿಂದ ಯಾವಾಗಲೂ ಆವೃತನಾಗಿರುವ ನಿತ್ಯಶುದ್ಧಬುದ್ಧಮುಕ್ತ ಬ್ರಹ್ಮವಸ್ತುವೇ ಏಕಮಾತ್ರ ಸತ್ಯ. ಅಸಾಧ್ಯವನ್ನೂ ಸಾಧಿಸಬಲ್ಲ ಮಾಯಾಶಕ್ತಿಯಿಂದ ಅವನು ಸಾಂತವಾಗಿ ಕಂಡರೂ ಅವನು ನಿಜವಾಗಿಯೂ ಹಾಗಿಲ್ಲ. ಏಕೆಂದರೆ ಸಮಾಧಿ ಕಾಲದಲ್ಲಿ ಮಾಯೆಯಿಂದ ಉಂಟಾದ ದೇಶಕಾಲಗಳು, ನಾಮರೂಪಗಳು ಯಾವುವೂ ಇರುವುದಿಲ್ಲ. ಆದ್ದರಿಂದ ನಾಮರೂಪಗಳ ಪರಿಧಿಯ ಒಳಗೆ ಬರುವ ವಸ್ತುಗಳಾವುವೂ ಸತ್ಯವಾಗಲು ಸಾಧ್ಯವಿಲ್ಲ. ಅವುಗಳನ್ನು ದೂರ ತ್ಯಜಿಸಿಬಿಡು. ನಾಮರೂಪದ ಪಂಜರವನ್ನು ಭೇದಿಸಿಕೊಂಡು ಸಿಂಹದಂತೆ ಹೊರಬಾ. ನಿನ್ನೊಳಗೇ ಇರುವ ಆತ್ಮತತ್ತ್ವದ ಅನ್ವೇಷಣೆಯಲ್ಲಿ ಮುಳುಗು. ಆದರಲ್ಲಿಯೇ ಸ್ಥಿರವಾಗಿ ನೆಲೆನಿಲ್ಲು. ಆಗ ನಾಮರೂಪಾತ್ಮಕವಾದ ಜಗತ್ತು ಎಲ್ಲೋ ಮಾಯವಾಗಿಹೋಗುವುದು! ಸಾಮಾನ್ಯ ಅಹಂಕಾರವೂ ವಿಶ್ವಪ್ರಜ್ಞೆಯೊಡನೆ ಒಂದಾಗುವುದು. ಅಖಂಡ ಸಚ್ಚಿದಾನಂದವೇ ನಿನ್ನ ನೈಜ ಸ್ವರೂಪ ಎಂದು ಪ್ರತ್ಯಕ್ಷವಾಗುವುದು. 'ಯಾವ ಜ್ಞಾನವನ್ನು ಅವಲಂಬಿಸಿ ಒಬ್ಬನು ಇನ್ನೊಬ್ಬನನ್ನು ನೋಡುವನೊ, ತಿಳಿಯುವನೊ ಅಥವಾ ಅವನೊಡನೆ ಮಾತನಾಡುವನೊ ಅದು ಅಲ್ಪವಾದುದು, ಕ್ಷುದ್ರವಾದುದು. ಯಾವುದು ಅಲ್ಪವೊ ಅದು ತುಚ್ಛ—

ಅದರಲ್ಲಿ ಪರಮಾನಂದವಿಲ್ಲ. ಆದರೆ ಯಾವ ಜ್ಞಾನವನ್ನು ಪಡೆದು ವ್ಯಕ್ತಿಯು ಇನ್ನೊಬ್ಬನನ್ನು ನೋಡುವುದಿಲ್ಲವೊ, ತಿಳಿಯುವುದಿಲ್ಲವೊ ಅಥವಾ ಇನ್ನೊಬ್ಬರ ಧ್ವನಿಯನ್ನು ಕೇಳುವುದಿಲ್ಲವೊ ಅದೇ ಭೂಮ. ಅದರಿಂದಲೇ ಪರಮಾನಂದ ಉಂಟಾಗುವುದು. ಯಾರು ಎಲ್ಲರಲ್ಲಿಯೂ ತಿಳಿಯುವವನಾಗಿ ಇರುವನೊ ಅವನನ್ನು ತಿಳಿಯುವವರಾರು ?''.

20. ತೋತಾಪುರಿಯು ಶಾಸ್ತ್ರಗಳ ಸಹಾಯದಿಂದ, ಯುಕ್ತಿಯ ಮೂಲಕ ಶ್ರೀರಾಮಕೃಷ್ಣರ ಮನಸ್ಸನ್ನು ಸಮಾಧಿಮಗ್ನವಾಗಿಸಲು ಅಂದು ಪ್ರಯತ್ನಿಸಿದನು. ತಾನು ಆಜೀವನ ಸಾಧನೆಯಿಂದ ಪಡೆದಿದ್ದ ಎಲ್ಲವನ್ನೂ ಅವರೊಳಗೆ ತುಂಬಿಸಲು ಪ್ರಯತ್ನಿಸಿದ. ಶ್ರೀರಾಮಕೃಷ್ಣರು ಹೇಳುತ್ತಿದ್ದರು : ''ದೀಕ್ಷೆಯನಂತರ ತೋತಾಪುರಿಯು ಅನೇಕ ಸಿದ್ಧಾಂತ ವಾಕ್ಯಗಳ ಮೂಲಕ ನನಗೆ ಉಪದೇಶ ಮಾಡಿದನು. ಮನಸ್ಸನ್ನು ಸಂಪೂರ್ಣ ನಿರ್ವಿಕಲ್ಪಗೊಳಿಸಿ ಆತ್ಮಧ್ಯಾನದಲ್ಲಿ ಮುಳುಗಲು ಹೇಳಿದ. ಆದರೆ ನನಗೆ ಮಾತ್ರ ಅದು ಸಾಧ್ಯವಾಗಲಿಲ್ಲ. ಧ್ಯಾನಮಾಡಲು ಶುರುಮಾಡಿದ ಕೂಡಲೆ ಎಷ್ಟೇ ಪ್ರಯತ್ನಿಸಿದರೂ ನಾಮರೂಪಗಳನ್ನು ಮೀರಿಹೋಗಲು ಆಗಲೇ ಇಲ್ಲ. ಬೇರೆ ಎಲ್ಲ ವಿಷಯಗಳನ್ನೂ ಮನಸ್ಸಿನಿಂದ ಸರಿಸಿದಕೂಡಲೆ ಶ್ರೀ ಜಗನ್ಮಾತೆಯ ಚಿರಪರಿಚಿತ ಚಿನ್ಮಯಮೂರ್ತಿ ಜೀವಂತವಾಗಿ ಕಾಣಿಸುತ್ತಿತ್ತು. ಆಗ ಎಲ್ಲ ನಾಮರೂಪಗಳನ್ನು ತ್ಯಜಿಸುವ ವಿಚಾರ ಎಲ್ಲೊ ಮೂಲೆಗೆ ಸೇರುತ್ತಿತ್ತು. ಹೀಗೆ ಎಷ್ಟೆ ಬಾರಿ ಧ್ಯಾನಕ್ಕೆ ಕುಳಿತರೂ ಹೀಗೆಯೇ ಆಗುತ್ತಿತ್ತು. ಕೊನೆಗೆ ತೋತಾಪುರಿಗೆ ಹೇಳಿದೆ, 'ಆಗೋದಿಲ್ಲ, ಮನಸ್ಸನ್ನು ಸಂಪೂರ್ಣ ನಿರ್ವಿಕಲ್ಪಗೊಳಿಸಿ ಆತ್ಮಧ್ಯಾನದಲ್ಲಿ ಮುಳುಗಲು ಸಾಧ್ಯವಾಗುತ್ತಿಲ್ಲ.' ತೋತಾಪುರಿಗೆ ಆಗ ರೇಗಿತು. ಅವನು ತಿರಸ್ಕಾರದ ಧ್ವನಿಯಲ್ಲಿ 'ಯಾಕೆ ಆಗುವುದಿಲ್ಲ!' ಎಂದು ಹೇಳಿ ಅತ್ತ ಇತ್ತ ಕಣ್ಣು ಹೊರಳಿಸಿ ಅಲ್ಲಿ ಬಿದ್ದಿದ್ದ ಒಂದು ಗಾಜಿನ ಚೂರನ್ನು ತೆಗೆದುಕೊಂಡು ಅದರಿಂದ ನನ್ನ ಭ್ರೂಮಧ್ಯದಲ್ಲಿ ಜೋರಾಗಿ ಚುಚ್ಚಿ 'ಈ ಬಿಂದುವಿನಲ್ಲಿ ಮನಸ್ಸನ್ನು ನಿಲ್ಲಿಸು' ಎಂದು ಹೇಳಿದನು. ಆಗ ದೃಢ ಸಂಕಲ್ಪಮಾಡಿ ಮತ್ತೆ ಧ್ಯಾನಕ್ಕೆ ಕುಳಿತೆ. ಶ್ರೀಜಗದಂಬೆಯ ದಿವ್ಯಮೂರ್ತಿ ಪುನಃ ಕಾಣಿಸಿಕೊಂಡಿತು. ಕೂಡಲೇ ಮನಸ್ಸಿನಲ್ಲಿಯೇ ಜ್ಞಾನಖಡ್ಗದಿಂದ ಆ ಮೂರ್ತಿಯನ್ನು ಎರಡು ಭಾಗವಾಗಿ ಕತ್ತರಿಸಿದೆ. ಆಗ ಮನಸ್ಸಿನಲ್ಲಿ ಯಾವ ವಿಕಲ್ಪವೂ ಉಳಿಯಲಿಲ್ಲ. ಅದು ಕೂಡಲೆ ನಾಮ-ರೂಪದ ಸ್ತರವನ್ನು ದಾಟಿ ಮೇಲೆ ಹೋಯಿತು, ನಾನು ಸಮಾಧಿಮಗ್ನನಾದೆ,''

ಶ್ರೀರಾಮಕೃಷ್ಣರು ಹೀಗೆ ಸಮಾಧಿಮಗ್ನರಾಗಲು ತೋತಾಪುರಿಯು ಬಹಳ ಹೊತ್ತು ಅವರ ಪಕ್ಕದಲ್ಲಿ ಕುಳಿತಿದ್ದನು. ಅನಂತರ ಸದ್ದಿಲ್ಲದೆ ಕುಟೀರದಿಂದ ಹೊರ ಬಂದನು. ಬೇರೆ ಯಾರಾದರೂ ಕುಟೀರದೊಳಗೆ ಹೋಗಿ ಶ್ರೀರಾಮಕೃಷ್ಣರಿಗೆ ತೊಂದರೆಯಾಗಬಹುದೆಂದು ಅದಕ್ಕೆ ಒಂದು ಬೀಗ ಹಾಕಿದನು. ಅನಂತರ ಪಂಚವಟಿಯಲ್ಲಿ ತನ್ನ ಆಸನದಮೇಲೆ ಕುಳಿತನು. ಶ್ರೀರಾಮಕೃಷ್ಣರು ಒಳಗಿನಿಂದ ಬಾಗಿಲು ತೆರೆಯಲು ಯಾವಾಗ ಕರೆಯುತ್ತಾರೆ ಎಂದು ನಿರೀಕ್ಷಿಸುತ್ತಿದ್ದನು.

ದಿನ ಕಳೆಯಿತು, ರಾತ್ರಿ ಆಗಮಿಸಿತು. ಹೀಗೆ ಮೂರು ದಿನಗಳು ಕಳೆದರೂ ಶ್ರೀರಾಮಕೃಷ್ಣರ ಕಡೆಯಿಂದ ಯಾವ ಪ್ರತಿಕ್ರಿಯೆಯೂ ಇಲ್ಲ. ತೋತಾಪುರಿಗೆ ಆಶ್ಚರ್ಯವಾಯಿತು. ಅವನು ಮೇಲೆದ್ದು ಬಾಗಿಲನ್ನು ತೆಗೆದು ಕುಟೀರವನ್ನು ಪ್ರವೇಶಿಸಿದ. ಎಂಥ ವಿಚಿತ್ರ! ಹೇಗೆ ಕುಳಿತಿದ್ದರೊ ಹಾಗೆಯೇ ಕುಳಿತಿದ್ದಾರೆ ಶ್ರೀರಾಮಕೃಷ್ಣರು. ದೇಹದಲ್ಲಿ ಪ್ರಾಣದ ಪ್ರಕಾಶವೇ ಇಲ್ಲ. ಆದರೆ ಮುಖ ಪ್ರಶಾಂತ, ಗಂಭೀರ ಮತ್ತು ಜ್ಯೋತಿಃಪೂರ್ಣವಾಗಿತ್ತು. ಬಾಹ್ಯ ಜಗತ್ತಿನ ವಿಷಯದಲ್ಲಿ ಶಿಷ್ಯನು ಈಗ ಮೃತಪ್ರಾಯನಾಗಿದ್ದಾನೆ ಎಂದು ತಿಳಿಯಿತು ಅವನಿಗೆ. ಗಾಳಿಯಿಲ್ಲದಾಗ ದೀಪವು ನಿಶ್ಚಲವಾಗಿರುವಂತೆ ರಾಮಕೃಷ್ಣರ ಮನಸ್ಸು ಬ್ರಹ್ಮನಲ್ಲಿ ಸ್ಥಿರವಾಗಿ ಮಗ್ನವಾಗಿತ್ತು.

21. ತೋತಾಪುರಿ ತನ್ನ ಕಣ್ಣನ್ನೇ ತಾನು ನಂಬದಾದ. ಯಾವುದನ್ನು ಸಾಧಿಸಲು ತಾನು ನಲವತ್ತು ವರ್ಷಗಳ ನಿರಂತರ ಪ್ರಯತ್ನ ಮಾಡಿದೆನೊ ಅದನ್ನು ಈ ಮಹಾಪುರುಷನು ಒಂದೇ ದಿನದಲ್ಲಿ ಸಾಧಿಸಿದನಲ್ಲ! ಇದು ಸಾಧ್ಯವೆ? ತೋತಾಪುರಿಗೆ ಸಂದೇಹವುಂಟಾಯಿತು. ಸಮಾಧಿಸ್ಥರಾಗಿದ್ದ ಶ್ರೀರಾಮಕೃಷ್ಣರನ್ನು ಅವನು ಸೂಕ್ಷ್ಮವಾಗಿ ಪರೀಕ್ಷಿಸತೊಡಗಿದ. ದೇಹದಲ್ಲಿ ಕಂಡುಬರುತ್ತಿದ್ದ ಎಲ್ಲ ಲಕ್ಷಣಗಳನ್ನೂ ಕಣ್ಣಿನ ಮೇಲೆ ಕಣ್ಣಿಟ್ಟು ಪರೀಕ್ಷಿಸಿದ. ಹೃದಯ ಬಡಿಯುತ್ತಿದೆಯೇ ಇಲ್ಲವೆ, ಉಸಿರಾಟ ಸ್ವಲ್ಪವಾದರೂ ನಡೆಯುತ್ತಿದೆಯೇ ಇಲ್ಲವೆ—ಎಂಬುದನ್ನೆಲ್ಲ ಪರೀಕ್ಷಿಸಿದ ಮರದ ದಿಮ್ಮಿಯಂತೆ ಸ್ಥಿರವಾಗಿ ಕುಳಿತಿದ್ದ ಶಿಷ್ಯನ ದೇಹವನ್ನು ಮತ್ತೆ ಮತ್ತೆ ಸ್ಪರ್ಶಿಸಿ ನೋಡಿದ. ಯಾವ ವಿಕಾರವೂ ಕಂಡುಬರಲಿಲ್ಲ. ಆಗ ವಿಸ್ಮಯ ಆನಂದಗಳಿಂದ ಕೂಡಿದವನಾಗಿ ಚೀತ್ಕರಿಸಿದನು: "ಇದೇನು ದೈವೀ ಮಾಯೆಯೆ? ಇದು ನಿಜವಾದ ಸಮಾಧಿಯೆ? ವೇದಾಂತದ ಚರಮ ಸ್ಥಿತಿ ನಿರ್ವಿಕಲ್ಪ ಸಮಾಧಿಯೆ? ಒಂದೇ ದಿನದಲ್ಲಿ ಆಗಿಹೋಯಿತಲ್ಲ! ಭಗವಂತನ ಮಾಯೆ ಎಂಥ ವಿಚಿತ್ರವಾದುದು!"

22. ಈಗ ಶಿಷ್ಯನನ್ನು ಸಮಾಧಿಯಿಂದ ಎಬ್ಬಿಸಲು ಪ್ರಯತ್ನವನ್ನು ಪ್ರಾರಂಭಿಸಿದ. "ಹರಿ ಓಂ" ಎಂದು ಗಂಭೀರ ಧ್ವನಿಯಲ್ಲಿ ಉಚ್ಚ ಸ್ವರದಲ್ಲಿ ಪಠಿಸತೊಡಗಿದ. ಆ ಧ್ವನಿ ಇಡೀ ಪಂಚವಟಿಯನ್ನು ಆವರಿಸಿ ಸುತ್ತಲೂ ಪ್ರತಿಧ್ವನಿಸತೊಡಗಿತು.

ಶಿಷ್ಯನ ಮೇಲಿನ ಪ್ರೇಮದಿಂದ ಬದ್ಧನಾಗಿ ಮತ್ತು ಅವನನ್ನು ನಿರ್ವಿಕಲ್ಪ ಸಮಾಧಿಯಲ್ಲಿ ದೃಢವಾಗಿ ನೆಲೆನಿಲ್ಲುವಂತೆ ಮಾಡಲು ತೋತಾಪುರಿಯು ಅನೇಕ ತಿಂಗಳುಗಳು ದಕ್ಷಿಣೇಶ್ವರದಲ್ಲಿ ನೆಲೆಸಿದ ವಿಚಾರವನ್ನೂ ಮತ್ತು ಶ್ರೀರಾಮಕೃಷ್ಣರ ಸಹಾಯದಿಂದ ತನ್ನ ಆಧ್ಯಾತ್ಮಿಕ ಜೀವನವು ಪರಿಪೂರ್ಣವಾದ ವಿಚಾರವನ್ನೂ ಬೇರೆಕಡೆ ವಿಸ್ತಾರವಾಗಿ ವಿವರಿಸಿರುವೆವು.*

ತೋತಾಪುರಿಯು ಹನ್ನೊಂದು ತಿಂಗಳು ದಕ್ಷಿಣೇಶ್ವರದಲ್ಲಿದ್ದು ಅನಂತರ ಪಶ್ಚಿಮ ಭಾರತದ ಕಡೆ ಹೊರಟನು. ಅವನು ಹೊರಟುಹೋದ ಕೂಡಲೆ ನಿರಂತರವಾಗಿ

---

* ಗುರುಭಾವ—ಪೂರ್ವಾರ್ಧ ಅಧ್ಯಾಯ 8.

ನಿರ್ವಿಕಲ್ಪ ಸಮಾಧಿಯಲ್ಲಿ ಉಳಿಯಬೇಕೆಂದು ಶ್ರೀರಾಮಕೃಷ್ಣರು ದೃಢಸಂಕಲ್ಪ ಮಾಡಿದರು. ಅನಂತರ ಅವರು ಆರು ತಿಂಗಳುಗಳ ನಿರ್ವಿಕಲ್ಪ ಅದ್ವೈತ ಸಮಾಧಿಯ ಸ್ಥಿತಿಯಲ್ಲಿ ಕಳೆದ ವಿಚಾರ, ಆ ಸಂದರ್ಭದಲ್ಲಿ ಒಬ್ಬ ಸಾಧುವು ಬಂದು ಅವರ ದೇಹವನ್ನು ರಕ್ಷಿಸಿದುದು—ಮುಂತಾದ ವಿಷಯಗಳೆಲ್ಲ ಬೇರೆಕಡೆ ವಿವರಿಸಲ್ಪಟ್ಟಿವೆ.† ಆದ್ದರಿಂದ ಮಥುರನಾಥನ ಜೀವನದಲ್ಲಿ ಶ್ರೀರಾಮಕೃಷ್ಣರ ಅನುಗ್ರಹದಿಂದ ನಡೆದ ಒಂದು ವಿಶೇಷ ಘಟನೆಯನ್ನು ಇಲ್ಲಿ ವಿವರಿಸಿ ಈ ಅಧ್ಯಾಯವನ್ನು ಮುಕ್ತಾಯಗೊಳಿಸುತ್ತೇವೆ.

23. ಶ್ರೀರಾಮಕೃಷ್ಣರಲ್ಲಿ ಅನೇಕ ರೀತಿಯ ದೈವೀಶಕ್ತಿಯು ಪ್ರಕಾಶಿಸುತ್ತಿರುವುದನ್ನು ಮಥುರನು ಗಮನಿಸಿದ್ದ. ಇದರಿಂದಾಗಿ ಅವನಿಗೆ ಅವರ ಮೇಲೆ ಅಪಾರ ಭಕ್ತಿವಿಶ್ವಾಸವಿತ್ತು. ಈ ಕಾಲದ ಒಂದು ಘಟನೆಯಿಂದ ಆ ಭಕ್ತಿಯು ಇನ್ನೂ ದೃಢವಾಗಿ ಚಿರಕಾಲವೂ ಅವನು ಅವರಲ್ಲಿ ಶರಣಾಗುವಂತೆ ಮಾಡಿತು.

ಮಥುರನ ಪತ್ನಿ ಜಗದಂಬಾದಾಸಿಯು ಆಮಶಂಕೆ ರೋಗದಿಂದ ನರಳುತ್ತಿದ್ದಳು. ಕ್ರಮೇಣ ರೋಗವು ಎಷ್ಟು ಉಲ್ಬಣವಾಯಿತೆಂದರೆ ಕಲಕತ್ತೆಯ ಪ್ರಸಿದ್ಧ ವೈದ್ಯರುಗಳೆಲ್ಲ ಹತಾಶರಾಗಿ ಕೈಬಿಡುವಂತಾಯಿತು.

ಮಥುರನು ಬಡಕುಟುಂಬದಲ್ಲಿ ಜನಿಸಿದವನು. ಅವನು ನೋಡಲು ಲಕ್ಷಣವಾಗಿದ್ದುದರಿಂದಲೇ ರಾಣಿ ರಾಸಮಣಿಯು ಮೊದಲು ತನ್ನ ಮೂರನೆಯ ಮಗಳು ಕರುಣಾಮಯಿಯನ್ನು ಅವನಿಗೆ ಕೊಟ್ಟು ವಿವಾಹ ಮಾಡಿಸಿದಳು. ಅವಳು ತೀರಿಹೋದ ಮೇಲೆ ತನ್ನ ಕೊನೆಯ ಮಗಳನ್ನೂ, ಅಂದರೆ ಜಗದಂಬಾದಾಸಿಯನ್ನು ಅವನಿಗೆ ಧಾರೆಯಿತ್ತಳು. ಆದ್ದರಿಂದ ವಿವಾಹದ ನಂತರವೇ ಮಥುರನಲ್ಲಿ ಬದಲಾವಣೆಯುಂಟಾದುದು. ತನ್ನ ಕಾರ್ಯದಕ್ಷತೆಯಿಂದ ಅವನು ರಾಸಮಣಿಗೆ ಬಲಗೈಯಂತಿದ್ದನು ಅನಂತರ ರಾಣಿಯ ಮೃತ್ಯುವಿನ ನಂತರ ಅವಳ ಸಂಪತ್ತಿಗೆ ಒಡೆಯನಾದನು. ಈ ವಿಷಯ ಮೊದಲೇ ಹೇಳಿಯಾಗಿದೆ.

ಈಗ ಜಗದಂಬಾದಾಸಿಯು ತೀರಿಹೋದರೆ ತನ್ನ ಪ್ರಿಯ ಪತ್ನಿಯನ್ನು ಕಳೆದುಕೊಳ್ಳುವುದು ಮಾತ್ರವಲ್ಲದೆ ಮಥುರನು ಆ ಅಪಾರ ಸಂಪತ್ತಿನ ಒಡೆತನವನ್ನೂ ಕಳೆದುಕೊಳ್ಳುವ ಸಂಭವವಿತ್ತು. ಆದ್ದರಿಂದ ಈಗಿನ ಅವನ ಮನಃಸ್ಥಿತಿಯ ಬಗ್ಗೆ ಹೆಚ್ಚಿಗೆ ಹೇಳಬೇಕಾಗಿಲ್ಲ.

ಮಥುರನು ಪತ್ನಿಯ ಅವಸ್ಥೆಯಿಂದ ಕಾತರನಾಗಿ ದಕ್ಷಿಣೇಶ್ವರಕ್ಕೆ ಓಡಿಬಂದನು. ಮೊದಲು ಶ್ರೀಜಗನ್ಮಾತೆಗೆ ನಮಸ್ಕರಿಸಿ ನೇರವಾಗಿ ಶ್ರೀರಾಮಕೃಷ್ಣರನ್ನು ಹುಡುಕುತ್ತ ಪಂಚವಟಿಗೆ ಬಂದನು. ಅವನ ಕಳೆಗುಂದಿದ ಮುಖವನ್ನು ಕಂಡು ಶ್ರೀರಾಮಕೃಷ್ಣರು ಸ್ನೇಹದಿಂದ ತಮ್ಮ ಪಕ್ಕದಲ್ಲೆ ಅವನನ್ನು ಕೂರಿಸಿಕೊಂಡು ಏನಾಯಿತು ಎಂದು ವಿಚಾರಿಸಿದರು. ಮಥುರನು ಅವರ ಕಾಲಿಗೆರಗಿ ಗದ್ಗದ ಕಂಠದಿಂದ ಎಲ್ಲ ವೃತ್ತಾಂತ

† ಗುರುಭಾವ–ಪೂರ್ವಾರ್ಧ ಅಧ್ಯಾಯ-2.

ವನ್ನೂ ಅವರಿಗೆ ನಿವೇದಿಸಿದನು. ದೀನಭಾವದಿಂದ ಮತ್ತೆ ಮತ್ತೆ ಹೇಳಿದ: "ತಂದೆ, ಆಗಬಾರದ್ದು ಆಗುವುದರಲ್ಲಿದೆ. ನನಗೆ ಅತ್ಯಂತ ದುಃಖವಾಗುವುದೇನೆಂದರೆ ನಿಮ್ಮ ಸೇವೆ ಮಾಡುವ ಅವಕಾಶವನ್ನು ನಾನು ಕಳೆದುಕೊಳ್ಳುತ್ತಿದ್ದೇನೆ. ಇನ್ನು ಮುಂದೆ ನಿಮ್ಮ ಸೇವೆ ಮಾಡಲಾರೆ."

ಮಥುರನ ದುಃಸ್ಥಿತಿಯನ್ನು ನೋಡಿ ಶ್ರೀರಾಮಕೃಷ್ಣರ ಹೃದಯ ಕರುಣೆಯಿಂದ ತುಂಬಿಹೋಯಿತು. ಅವರು ಭಾವಾವಿಷ್ಟರಾಗಿ ಮಥುರನಿಗೆ ಹೇಳಿದರು: "ಭಯವಿಲ್ಲ. ನಿನ್ನ ಪತ್ನಿ ಆರೋಗ್ಯವನ್ನು ಹೊಂದುವಳು." ಮಥುರನಿಗೆ ಶ್ರೀರಾಮಕೃಷ್ಣರ ಮಾತಿನಲ್ಲಿ ತುಂಬ ವಿಶ್ವಾಸ. ಅವರ ಆಶ್ವಾಸನೆಯಿಂದ ಅವನಿಗೆ ಹೋದ ಪ್ರಾಣ ಬಂದಂತಾಗಿ ಅವರಿಂದ ಬೀಳ್ಕೊಂಡನು. ಮನೆಗೆ ಬಂದು ನೋಡುತ್ತಾನೆ ಪ್ರಾಣಾಂತಿಕ ಸ್ಥಿತಿಯಲ್ಲಿದ್ದ ಜಗದಂಬೆಯ ಸ್ಥಿತಿ ಈಗ ಸುಧಾರಿಸಿತ್ತು. ಶ್ರೀರಾಮಕೃಷ್ಣರು ಹೇಳುತ್ತಿದ್ದರು: "ಅಂದಿನಿಂದ ಜಗದಂಬೆಯು ಗುಣಮುಖವಾಗತೊಡಗಿದಳು. ಕ್ರಮೇಣ ಅವಳು ಆರೋಗ್ಯವಂತಳಾದಳು. ಅವಳ ಆ ರೋಗವನ್ನು (ತಮ್ಮ ಶರೀರವನ್ನು ನಿರ್ದೇಶಿಸಿ) ಈ ಶರೀರವು ಭೋಗಿಸಬೇಕಾಯಿತು. ಜಗದಂಬಾದಾಸಿಯು ಕಾಯಿಲೆ ಗುಣವಾದ ಮೇಲೆ ಆರು ತಿಂಗಳು ಹೊಟ್ಟೆನೋವು ಮತ್ತು ಇತರ ರೋಗಗಳನ್ನು ನಾನು ಅನುಭವಿಸಬೇಕಾಯಿತು."

ಶ್ರೀರಾಮಕೃಷ್ಣರು ಮಥುರನು ತಮಗೆ ಸೇವೆಮಾಡಿದ ವಿಷಯವನ್ನು ವಿವರಿಸುತ್ತ ಮೇಲಿನ ಘಟನೆಯನ್ನು ಉಲ್ಲೇಖಿಸಿ ಒಂದುದಿನ ಅವರು ನಮಗೆ ಹೇಳಿದ್ದರು: "ಮಥುರನು ಹದಿನಾಲ್ಕು ವರ್ಷ ಸುಮ್ಮನೆ ಸೇವೆಮಾಡಿದನೇನು !? ತಾಯಿಯು (ತಮ್ಮ ದೇಹವನ್ನು ತೋರಿಸಿ) ಇದರ ಮೂಲಕ ಅವನಿಗೆ ಅನೇಕ ಅದ್ಭುತಗಳನ್ನು ತೋರಿಸಿರುವಳು. ಆದರಿಂದಾಗಿಯೆ ಅವನು ಅಷ್ಟೊಂದು ಸೇವೆ ಮಾಡಿದ."

ಹದಿನಾರನೆಯ ಅಧ್ಯಾಯ

ವೇದಾಂತ ಸಾಧನೆಯ ಕೊನೆಯ ಹಂತ ಮತ್ತು ಇಸ್ಲಾಂ ಸಾಧನೆ

1. ಶ್ರೀರಾಮಕೃಷ್ಣರ ತೀವ್ರವ್ಯಾಧಿ 2. ಅದ್ವೈತ ಸಿದ್ಧಿಯ ನಂತರ ಶ್ರೀರಾಮಕೃಷ್ಣರ ದರ್ಶನಗಳು 3. ಪೂರ್ವಜನ್ಮ ವೃತ್ತಾಂತದ ಬಗ್ಗೆ ಶಾಸ್ತ್ರ ಪ್ರಮಾಣ 4. ಯೌಗಿಕಶಕ್ತಿ ಮತ್ತು ಸಿದ್ಧಸಂಕಲ್ಪಗಳ ಬಗ್ಗೆ ಶಾಸ್ತ್ರೋಕ್ತಿ 5. ಇದಕ್ಕೆ ಅನುಸಾರವಾಗಿ ಶ್ರೀರಾಮಕೃಷ್ಣರ ಜೀವನವಿಮರ್ಶೆ 6. ಮೇಲಿನ ಅನುಭವಗಳು ಒಮ್ಮೆಯೇ ಆಗಲಿಲ್ಲ 7. ಅದ್ವೈತಸಿದ್ಧಿಯೇ ಎಲ್ಲ ಸಾಧನೆಗಳ ಲಕ್ಷ್ಯ—ಶ್ರೀರಾಮಕೃಷ್ಣರ ಅನುಭವ 8. ಇದಕ್ಕೆ ಮುಂಚೆ ಈ ಅನುಭವ ಯಾರಿಗೂ ಆಗಿರಲಿಲ್ಲ 9. ಅದ್ವೈತಸಿದ್ಧಿಯ ಪರಿಣಾಮವಾಗಿ ಶ್ರೀರಾಮಕೃಷ್ಣರ ಉದಾರ ಮನೋಭಾವ 10. ಸೂಫಿ ಗೋವಿಂದರಾಯನ ಆಗಮನ 11. ಅವನಿಂದ ದೀಕ್ಷೆಪಡೆದು ಇಸ್ಲಾಂ ಸಾಧನೆ 12. ಇಸ್ಲಾಂ ಸಾಧನೆಯ ಸಂದರ್ಭದಲ್ಲಿ ಶ್ರೀರಾಮಕೃಷ್ಣರ ಆಚರಣೆ 13. ಮುಂದೆ ಭಾರತದಲ್ಲಿ ಹಿಂದೂ ಮುಸ್ಲಿಮರು ಸಹೋದರಭಾವದಿಂದ ಬಾಳುತ್ತಾರೆ 14. ಶ್ರೀರಾಮಕೃಷ್ಣರ ಮನಸ್ಸಿನಲ್ಲಿ ಅದ್ವೈತಸ್ಮೃತಿ ಎಷ್ಟು ಪ್ರಬಲವಾಗಿತ್ತು 15. ಇದಕ್ಕೆ ಸಂಬಂಧಿಸಿದ ಕೆಲವು ದೃಷ್ಟಾಂತಗಳು.

1. ಜಗದಾಂಬದಾಸಿಯ ರೋಗವನ್ನು ತಾವು ಸ್ವೀಕರಿಸಿದುದರಿಂದಲಾಗಲಿ ಅಥವಾ ಆರು ತಿಂಗಳು ನಿರಂತರ ಅದ್ವೈತಸ್ಥಿತಿಯಲ್ಲಿ ಇದ್ದುದರ ಫಲವಾಗಿಯಾಗಲಿ ಶ್ರೀರಾಮಕೃಷ್ಣರ ಆರೋಗ್ಯ ಕೆಟ್ಟು ಕೆಲವು ತಿಂಗಳುಗಳವರೆಗೆ ಕಾಯಿಲೆಯಿಂದ ನರಳ ಬೇಕಾಯಿತು. ಆಗ ಅವರಿಗೆ ತೀವ್ರ ಆಮಶಂಕೆಯ ರೋಗ ಉಂಟಾಯಿತು. ಹೃದಯನು ನಿರಂತರ ಅವರ ಸೇವೆ ಮಾಡಿದ. ಮಥುರನು ಅವರ ಚಿಕಿತ್ಸೆಗಾಗಿ ಪ್ರಸಿದ್ಧ ವೈದ್ಯ ಗಂಗಾಪ್ರಸಾದ ಸೇನನನ್ನು ನಿಯೋಜಿಸಿದನು. ಅವರ ದೇಹ ಅಷ್ಟೊಂದು ನರಳು ತ್ತಿದ್ದರೂ ಮನಸ್ಸು ಶಾಂತವಾಗಿ ಅವಿಚ್ಛಿನ್ನ ಆನಂದವನ್ನು ಅನುಭವಿಸುತ್ತಿತ್ತು. ಸ್ವಲ್ಪ ಉದ್ದೀಪನವಾದರೆ ಸಾಕು ಅದು ಶರೀರವ್ಯಾಧಿ ಸಂಸಾರ ಇವುಗಳೆಲ್ಲದರಿಂದ ದೂರವಾಗಿ ನಿರ್ವಿಕಲ್ಪ ಸ್ಥಿತಿಯನ್ನು ತಲುಪುತ್ತಿತ್ತು. ಬ್ರಹ್ಮ ಆತ್ಮ ಈಶ್ವರ ಇವರ ಸ್ಮರಣಮಾತ್ರ ದಿಂದಲೇ ಎಲ್ಲವನ್ನೂ ಮರೆತು ಅವರು ಅದರಲ್ಲಿಯೇ ತನ್ಮಯರಾಗಿ ಹೋಗುತ್ತಿದ್ದರು. ಆದ್ದರಿಂದ ರೋಗದ ನಿಮಿತ್ತ ಅಸಾಧ್ಯ ವೇದನೆಯಿದ್ದರೂ ಅವರಿಗದು ಅಷ್ಟೊಂದು ವೇದ್ಯವಾಗುತ್ತಿರಲಿಲ್ಲ. ಈ ರೋಗವು ಅವರ ಮನಸ್ಸನ್ನು ಉಚ್ಚಭೂಮಿಯಿಂದ

ಕೆಳಗೆಳೆದು ತಂದು ಶರೀರದಲ್ಲಿ ಇರಿಸಿತು ಎಂಬುದನ್ನು ಶ್ರೀರಾಮಕೃಷ್ಣರೇ ಹೇಳುತ್ತಿದ್ದರು. ಆ ಸಂದರ್ಭದಲ್ಲಿ ವೇದಾಂತ ಮಾರ್ಗವನ್ನು ಅನುಸರಿಸುತ್ತಿದ್ದ ಅನೇಕ ಸಾಧಕಶ್ರೇಷ್ಠರು ಅವರೆಡೆಗೆ ಬರುತ್ತಿದ್ದರು. 'ನೇತಿ, ನೇತಿ', 'ಅಸ್ತಿ-ಭಾತಿ-ಪ್ರಿಯ', 'ಅಯಮಾತ್ಮಾಬ್ರಹ್ಮ' ಇವೇ ಮುಂತಾದ ಪ್ರಸಿದ್ಧ ವೇದಾಂತ ತತ್ತ್ವಗಳ ವಿಚಾರಧ್ವನಿಯಿಂದ ಅವರ ಕೋಣೆಯು ತುಂಬಿಹೋಗಿತ್ತು. ಈ ವಿಚಾರದಲ್ಲಿ ಏನಾದರೂ ಸಮಸ್ಯೆ ಬಂದರೆ ಶ್ರೀರಾಮಕೃಷ್ಣರೇ ಮಧ್ಯೆ ಪ್ರವೇಶಿಸಿ ಅದಕ್ಕೆ ಪರಿಹಾರ ನೀಡಬೇಕಿತ್ತು. ಇತರ ಸಾಧಾರಣ ವ್ಯಕ್ತಿಗಳಿಗಾಗುವಂತೆ ರೋಗದಿಂದ ಅವರ ಮನಸ್ಸು ಖಿನ್ನವಾಗಿದ್ದಿದ್ದರೆ ಈ ರೀತಿ ವೇದಾಂತ ಚರ್ಚೆಯಲ್ಲಿ ಭಾಗವಹಿಸಲಾಗುತ್ತಿರಲಿಲ್ಲ.

2. ಆರು ತಿಂಗಳ ನಿರಂತರ ನಿರ್ವಿಕಲ್ಪ ಸಮಾಧಿಯ ನಂತರ ಅವರಿಗೊಂದು ದರ್ಶನವಾಗಿತ್ತು ಎಂಬ ವಿಷಯ ಬೇರೆಕಡೆ ಹೇಳಿರುವೆವು. ಆಗ ಅವರು ಮೂರನೆಯ ಬಾರಿ ಭಾವಮುಖದಲ್ಲಿರು ಎಂಬ ಆದೇಶವನ್ನು ಪಡೆದಿದ್ದರು.* ಅದನ್ನು ದರ್ಶನವೆಂದು ಕರೆದರೂ ಅದು ಅವರ ಹೃದಯಾಂತರಾಳದಲ್ಲಿ ಅರಿವಿಗೆ ತೋಚಿದ ವಿಷಯ. ಏಕೆಂದರೆ ಹಿಂದಿನ ಎರಡು ಸಂದರ್ಭದಲ್ಲಿಯಂತೆ ಅವರು ಯಾವ ದಿವ್ಯ ಮೂರ್ತಿಯನ್ನು ಕಂಡಿರಲಿಲ್ಲ. ಆದರೆ ವಿಶ್ವಮನಸ್ಸಿನಲ್ಲಿದ್ದ ಆ ದಿವ್ಯ ಇಚ್ಛೆಯ ನೇರ ಸಂಪರ್ಕವನ್ನು ಅವರು ಪಡೆದಿದ್ದರು. ಅವರ ಮನಸ್ಸು ಆಗ ಹೆಚ್ಚಿನ ವೇಳೆ ಅದ್ವೈತ ಬ್ರಹ್ಮದಲ್ಲಿ ಲೀನವಾಗಿತ್ತು ಮತ್ತು ಆಗಾಗ ಅದರಿಂದ ಸ್ವಲ್ಪ ಬೇರೆಯಾಗಿ ಸಗುಣ ಬ್ರಹ್ಮ (ಈಶ್ವರ) ಅಥವಾ ಶ್ರೀ ಜಗನ್ಮಾತೆಯ ಅಂಶ ತಾನು ಎಂಬ ಜ್ಞಾನವನ್ನು ಅದು ಪಡೆಯುತ್ತಿತ್ತು. ಇದರಿಂದಾಗಿ ಅವರಿಗೆ ಆ ವಿಶ್ವೇಚ್ಛೆಯ ನೇರ ಸಂಪರ್ಕ ಸಾಧ್ಯವಾಯಿತು. ಈಗ ಅವರಿಗೆ ತಮ್ಮ ಜೀವನೋದ್ದೇಶದ ಸ್ಪಷ್ಟ ಅರಿವಾಯಿತು. ಅವರಿಗೆ ತಮ್ಮ ಶರೀರವನ್ನು ಉಳಿಸಿಕೊಳ್ಳುವ ಆಸೆಯೇ ಇರಲಿಲ್ಲ. ಆದರೂ ಶ್ರೀ ಜಗನ್ಮಾತೆಯು 'ಭಾವಮುಖದಲ್ಲಿರು' ಎಂದು ಮತ್ತೆ ಮತ್ತೆ ಆದೇಶ ನೀಡಲು ತಮಗಾಗಿ ಅಲ್ಲದಿದ್ದರೂ ಜಗತ್ತಿನ ಹಿತಸಾಧನೆಗಾಗಿ ತಮ್ಮ ದೇಹ ಉಳಿಯುವುದು ಅವಶ್ಯಕವೆಂದು ಅವರಿಗೆ ತೋರಿತು. ನಿತ್ಯವೂ ಬ್ರಹ್ಮಾವಸ್ಥೆಯಲ್ಲಿದ್ದರೆ ಶರೀರವು ಉಳಿಯುವುದು ಅಸಾಧ್ಯವೆಂದೂ ಅವರಿಗೆ ಈ ರೀತಿಯ ಆದೇಶವುಂಟಾಗಿತ್ತು. ಪೂರ್ವಜನ್ಮ ವೃತ್ತಾಂತವನ್ನು ತಿಳಿಯುವ ಸಾಮರ್ಥ್ಯವಿದ್ದ ಶ್ರೀರಾಮಕೃಷ್ಣರು ತಾವು ಈ ಯುಗದ ಧರ್ಮಗ್ಲಾನಿಯನ್ನು ಹೋಗಲಾಡಿಸಲಾಗಿಯೇ ಅವತರಿಸಿರುವುದಾಗಿ ಅರಿತುಕೊಂಡರು, ಶ್ರೀ ಜಗನ್ಮಾತೆಯು ಉದ್ದೇಶಪೂರ್ವಕವಾಗಿಯೇ ಬಾಹ್ಯ ವೈಭವಗಳಿಲ್ಲದೆ, ಅನಕ್ಷರಸ್ಥರಾಗಿ ಬಡಬ್ರಾಹ್ಮಣ ಕುಟುಂಬದಲ್ಲಿ ತಾವು ಜನಿಸುವಂತೆ ಮಾಡಿರುವಳು ಎಂಬುದೂ ಅವರಿಗೆ ವೇದ್ಯವಾಯಿತು. ತಮ್ಮ ಲೀಲಾರಹಸ್ಯವು ಜೀವಿತಕಾಲದಲ್ಲಿ ಕೇವಲ ಕೆಲವರಿಗೆ ಮಾತ್ರ ಅರಿವಾದರೂ ಅನಂತರ ದೊಡ್ಡ ಆಧ್ಯಾತ್ಮಿಕ ತರಂಗವು ಎದ್ದು ಅದು ಬಹುಕಾಲವಿದ್ದು ಜಗತ್ತಿನಾದ್ಯಂತ

* ಇದೇ ಭಾಗದ ಎಂಟನೆಯ ಅಧ್ಯಾಯ ನೋಡಿ.

ಅದ್ಭುತ ಧಾರ್ಮಿಕ ಕ್ರಾಂತಿಯನ್ನುಂಟುಮಾಡುವುದು ಎಂಬ ಭವಿಷ್ಯತ್ ಜ್ಞಾನವೂ ಅವರಿಗೆ ಲಭಿಸಿತು.

3. ಈ ರೀತಿಯ ಅಸಾಧಾರಣ ಅನುಭವಗಳು ಶ್ರೀರಾಮಕೃಷ್ಣರಿಗೆ ಹೇಗೆ ಉಂಟಾದುವು ಎಂಬುದನ್ನು ತಿಳಿಯಲು ನಾವು ಕೆಲವು ಶಾಸ್ತ್ರವಾಕ್ಯಗಳನ್ನು ಸ್ಮರಣೆಗೆ ತಂದುಕೊಳ್ಳಬೇಕು. ಅದ್ವೈತಜ್ಞಾನದಲ್ಲಿ ಪೂರ್ಣವಾಗಿ ನೆಲೆನಿಲ್ಲುವುದಕ್ಕೆ ಮುಂಚೆ ಸಾಧಕನಿಗೆ ಪೂರ್ವಜನ್ಮಜ್ಞಾನವು (ಜಾತಿಸ್ಮರತ್ವ) ಲಭಿಸುತ್ತದೆ ಎಂದು ಶಾಸ್ತ್ರ ಹೇಳುತ್ತದೆ* ಅಥವಾ ಅದ್ವೈತಭಾವದ ಪರಿಪಾಕವಾದಾಗ ಸಾಧಕನ ಸ್ಮೃತಿಯು ಎಂಥ ಪರಿಣತಿಯನ್ನು ಮುಟ್ಟುವುದೆಂದರೆ ಹಿಂದೆ-ತಾನು ಯಾವ ಯಾವ ಜನ್ಮ ಪಡೆದಿದ್ದೆ. ಏನೇನು ಮಾಡಿದೆ ಅವೆಲ್ಲವೂ ಸ್ಮೃತಿಪಟಲಕ್ಕೆ ಬರುವುವು. ಆಗ ಈ ಸಂಸಾರದ ನಶ್ವರತೆ ಮತ್ತು ಇದಕ್ಕೆ ಬದ್ಧನಾಗಿ ಮತ್ತೆ ಮತ್ತೆ ಅದೇ ಜನ್ಮವನ್ನು ಪಡೆಯುವುದರ ನಿಃಸಾರ್ಥಕತೆ ಅವನ ಮನಸ್ಸಿನಲ್ಲಿ ತೀವ್ರ ವೈರಾಗ್ಯವನ್ನು ಉಂಟುಮಾಡುವುವು. ಇದರಿಂದ ಅವನ ಮನಸ್ಸು ಎಲ್ಲ ವಾಸನೆಗಳಿಂದ ಒಮ್ಮೆಯೇ ಬೇರೆಯಾಗುತ್ತದೆ.

4. ಇಂಥ ಪುರುಷನು ಸಿದ್ಧಸಂಕಲ್ಪನಾಗುವನೆಂದು ಉಪನಿಷತ್ತು ಹೇಳುತ್ತದೆ.† ಅವನು ದೇವ ಪಿತೃ ಮುಂತಾದ ಯಾವ ಲೋಕವನ್ನು ನೋಡಬಯಸುವನೊ ಸಮಾಧಿ ಬಲದಿಂದ ಅದು ಅವನಿಗೆ ಸಿದ್ಧಿಸುವುದು. ಅಂಥ ಪುರುಷನಿಗೆ ಎಲ್ಲ ಯೋಗಸಿದ್ಧಿಗಳು ಸ್ವತಃ ದಕ್ಕುವುವು ಎಂದು ಪತಂಜಲಿ ಯೋಗಸೂತ್ರ ಹೇಳುತ್ತದೆ. ಆದರೆ ಅವನಲ್ಲಿ ಯೋಗಸಿದ್ಧಿಗಳು ಇದ್ದರೂ ಅವನಲ್ಲಿ ಸ್ವಲ್ಪವೂ ವಾಸನೆ ಇಲ್ಲದಿರುವುದರಿಂದ ಅವನು ಆ ಶಕ್ತಿಗಳನ್ನು ಎಂದೂ ಪ್ರಯೋಗಿಸುವುದಿಲ್ಲ. ಅವನು ಯಾವ ಅವಸ್ಥೆಯಲ್ಲಿದ್ದು ಬ್ರಹ್ಮಜ್ಞಾನವನ್ನು ಪಡೆಯುವನೊ ಜ್ಞಾನ ಪಡೆದ ಮೇಲೆಯೂ ಅದೇ ಅವಸ್ಥೆಯಲ್ಲಿಯೇ ಮುಂದುವರಿಯುವನು. ಏಕೆಂದರೆ ಅವನ ಮನಸ್ಸು ಸಂಪೂರ್ಣ ವಾಸನಾ ಶೂನ್ಯವಾಗಿರುವುದರಿಂದ ಸಾಮರ್ಥ್ಯವಿದ್ದರೂ ಆ ಅವಸ್ಥೆಯನ್ನು ಬದಲಾಯಿಸುವ ಆವಶ್ಯಕತೆಯನ್ನು ಅವನು ಕಾಣುವುದಿಲ್ಲ. ಕೇವಲ ಅಧಿಕಾರಿಕ ಪುರುಷರು ಮಾತ್ರ ಭಗವದಿಚ್ಛೆಗನುಸಾರವಾಗಿ ಜನಹಿತವನ್ನು ಮನಸ್ಸಿನಲ್ಲಿಟ್ಟುಕೊಂಡು ಆ ಶಕ್ತಿಗಳನ್ನು ಆಗಾಗ ಪ್ರಯೋಗಿಸುತ್ತಾರೆ.

5. ಮೇಲಿನ ಶಾಸ್ತ್ರವಿಚಾರಗಳಿಂದ ಶ್ರೀರಾಮಕೃಷ್ಣರ ಎಲ್ಲ ಅನುಭವಗಳ ಸರಿಯಾದ ಪರಿಚಯವಾಗದಿದ್ದರೂ ಸ್ವಲ್ಪಮಟ್ಟಿಗೆ ಅರ್ಥಮಾಡಿಕೊಳ್ಳಬಹುದು. ಅವರು ಭಗವಂತನಲ್ಲಿ ಸಂಪೂರ್ಣ ಶರಣಾಗಿದ್ದುದರಿಂದ ಮತ್ತು ವಾಸನಾಲೇಶವೂ ಅವರಲ್ಲಿಲ್ಲದಿದ್ದುದರಿಂದ ಅಷ್ಟೊಂದು ಬೇಗನೆ ಅದ್ವೈತಾನುಭವವನ್ನು ಪಡೆದು ಅದರಲ್ಲಿ

---

* ಸಂಸ್ಕಾರಸಾಕ್ಷಾತ್ಕರಣಾತ್ ಪೂರ್ವಜಾತಿಜ್ಞಾನಂ 11—ಪಾತಂಜಲಯೋಗಸೂತ್ರ, ವಿಭೂತಿಪಾದ, 18.

† ಛಾಂದೋಗ್ಯ, 8,2.

ಪ್ರತಿಷ್ಠಿತರಾಗಲು ಸಾಧ್ಯವಾಯಿತು ಎಂಬುದು ತಿಳಿದು ಬರುತ್ತದೆ. ಜಾತಿಸ್ಮರತ್ವ ಅವರಿಗಿದ್ದುದರಿಂದಲೇ ಹಿಂದಿನಯುಗಗಳಲ್ಲಿ ತಾವು ರಾಮ, ಕೃಷ್ಣ–ಇವರುಗಳ ರೂಪದಲ್ಲಿ ಅವತರಿಸಿದ್ದುದು ಅವರಿಗೆ ತಿಳಿಯಿತೆಂಬುದು ನಮಗೆ ಗೊತ್ತಾಗುತ್ತದೆ. ಅವರಲ್ಲಿ ಯೋಗಸಿದ್ಧಿಗಳಿದ್ದರೂ ತಮ್ಮ ಶರೀರಿಕ ರೋಗಗಳನ್ನು ಗುಣಪಡಿಸಿಕೊಳ್ಳುವುದಕ್ಕಾಗಿ ಅವನ್ನು ಎಂದೂ ಏಕೆ ಉಪಯೋಗಿಸಲಿಲ್ಲ ಎಂಬುದೂ ಅರ್ಥವಾಗುತ್ತದೆ. ಸಂಕಲ್ಪ ಮಾತ್ರದಿಂದಲೇ ಇತರರಲ್ಲಿ ಆಧ್ಯಾತ್ಮಿಕ ಶಕ್ತಿಯನ್ನು ಜಾಗ್ರತಗೊಳಿಸುವ ಸಾಮರ್ಥ್ಯ ಅವರಲ್ಲಿ ಏಕೆ ಇತ್ತು ಮತ್ತು ದಿನದಿನವೂ ಈಗ ಅವರ ಶಕ್ತಿಯ ಪ್ರಭಾವ ಪ್ರಪಂಚದಲ್ಲಿ ಏಕೆ ವಿಸ್ತಾರಹೊಂದುತ್ತಿದೆ ಎಂಬುದೂ ಸ್ಪಷ್ಟವಾಗುವುದು.

6. ತಮ್ಮ ಜೀವನದ ಭೂತಭವಿಷ್ಯತ್ ವಿಚಾರಗಳಿಗೆ ಸಂಬಂಧಿಸಿದ ಅನುಭವಗಳು ಅವರಿಗೆ ಒಮ್ಮೆಯೇ ಉಂಟಾದವೆಂದು ಹೇಳುವಂತಿಲ್ಲ. ಅದ್ವೈತಾವಸ್ಥೆಯಿಂದ ಕೆಳಗಿಳಿದುಬಂದಮೇಲೆ ಒಂದು ವರ್ಷದ ಅವಧಿಯಲ್ಲಿ ಈ ಎಲ್ಲ ಅನುಭವಗಳು ಅವರಿಗಾದವು ಎಂದು ಅನುಮಾನಿಸಬಹುದು. ಶ್ರೀ ಜಗನ್ಮಾತೆಯು ಆ ಅವಧಿಯಲ್ಲಿ ಅವರ ಕಣ್ಮುಂದೆ ಒಂದಾದ ಮೇಲೆ ಒಂದು ಆವರಣವನ್ನು ತೆಗೆದು ದಿನದಿನವೂ ಹೊಸ ಹೊಸ ಅನುಭವಗಳನ್ನು ನೀಡುತ್ತಿದ್ದಳು. ಈ ಅನುಭವಗಳೆಲ್ಲ ಒಮ್ಮೆಯೇ ಏಕೆ ಆಗಲಿಲ್ಲ ಎಂಬ ಪ್ರಶ್ನೆಗೆ ನಾವು ಉತ್ತರಿಸಬೇಕಾಗುತ್ತದೆ. ಆಗ ಅವರು ಅದ್ವೈತಾನುಭವದಿಂದ ಉಂಟಾದ ಪರಮಾನಂದದಲ್ಲಿ ತಲ್ಲೀನರಾಗಿದ್ದರು. ಎಲ್ಲಿಯವರೆಗೆ ಅವರ ಮನಸ್ಸು ಬಹಿರ್ಮುಖವಾಗುವುದಿಲ್ಲವೊ ಅಲ್ಲಿಯವರೆಗೆ ಈ ಎಲ್ಲ ಅನುಭವವನ್ನು ಪಡೆಯುವ ಅವಕಾಶವೂ ಮತ್ತು ಪ್ರವೃತ್ತಿಯೂ ಇರಲಿಲ್ಲ. ಸಾಧನೆಯ ಪ್ರಾರಂಭದಲ್ಲಿ ಅವರು ಜಗನ್ಮಾತೆಯನ್ನು ಪ್ರಾರ್ಥಿಸಿದ್ದರು, "ತಾಯಿ, ನಾನೇನು ಮಾಡಲಿ ? ನನಗೇನೂ ತಿಳಿಯದಾಗಿದೆ. ನೀನು ಸ್ವತಃ ಏನು ಕಲಿಸುತ್ತೀಯೊ ಅದನ್ನೇ ಕಲಿಯುತ್ತೇನೆ". ಈ ಪ್ರಾರ್ಥನೆ ಈ ವೇಳೆಯಲ್ಲಿ ಪೂರ್ಣವಾಗಿತ್ತು.

7. ಅದ್ವೈತಾವಸ್ಥೆಯನ್ನು ಮುಟ್ಟಿದ ಮೇಲೆ ಅವರಿಗೆ ಈಗ ಇನ್ನೊಂದು ವಿಷಯ ತಿಳಿದುಬಂತು. ಅದ್ವೈತಾವಸ್ಥೆಯನ್ನು ತಲುಪುವುದೇ ಎಲ್ಲ ಸಾಧನೆಗಳ ಅಂತಿಮ ಗುರಿ. ಭಾರತದಲ್ಲಿ ಪ್ರಚಲಿತವಿದ್ದ ಧರ್ಮಸಂಪ್ರದಾಯಗಳ ಸಾಧನೆಗಳನ್ನೆಲ್ಲ ಮಾಡಿ ಅವರು ತಿಳಿದುಕೊಂಡರು ಇವೆಲ್ಲವೂ ಸಾಧಕನನ್ನು ಅದ್ವೈತಾನುಭವದ ಕಡೆಗೇ ಕೊಂಡೊಯ್ಯುವುವು ಎಂದು. ಇದಕ್ಕಾಗಿಯೇ ಅದ್ವೈತದ ಬಗ್ಗೆ ಪ್ರಶ್ನಿಸಿದರೆ ಅವರು ಹೇಳುತ್ತಿದ್ದರು: "ಅದು ಕೊನೆಯ ಮಾತು. ಭಗವತ್ ಪ್ರೇಮದ ಪರಿಪೂರ್ಣಾವಸ್ಥೆಯಲ್ಲಿ ಆ ಅನುಭವ ಸಾಧಕನಿಗೆ ಸ್ವತಃ ಆಗುವುದು. ಸಕಲ ಮತಗಳಲ್ಲಿಯೂ ಇದೇ ಕೊನೆಯ ಮಾತು. ಎಷ್ಟು ಮತವೊ ಅಷ್ಟು ಪಥ."

8. ಹೀಗೆ ಅದ್ವೈತಾನುಭವವನ್ನು ಪಡೆದಮೇಲೆ ಶ್ರೀರಾಮಕೃಷ್ಣರಲ್ಲಿ ಒಂದು ಉದಾರ ಮನೋಭಾವ ಉಂಟಾಯಿತು. ಭಗವತ್ ಪ್ರಾಪ್ತಿಯೇ ಮಾನವ ಜೀವನದ ಪರಮೋದ್ದೇಶವೆಂದು ಸಾರುವ ಎಲ್ಲ ಸಂಪ್ರದಾಯಗಳ ಬಗ್ಗೆ ಅವರಿಗೆ ಅಪಾರ ಸಹಾನು

ಭೂತಿಯಿತ್ತು. ಈ ರೀತಿಯ ಉದಾರತೆ ಮತ್ತು ಸಹಾನುಭೂತಿ ತಮ್ಮದೇ ಆದ ಸಂಪತ್ತು, ಹಿಂದಿನ ಸಾಧಕ ಶ್ರೇಷ್ಠರಲ್ಲಿ ಇವು ಇಷ್ಟು ಪೂರ್ಣರೂಪದಲ್ಲಿ ವ್ಯಕ್ತವಾಗಿರಲಿಲ್ಲ—ಎಂಬ ವಿಷಯ ಮೊದಲು ಅವರ ತಿಳಿವಳಿಕೆಗೆ ಬಂದಿರಲಿಲ್ಲ. ದಕ್ಷಿಣೇಶ್ವರದಲ್ಲಿ ಮತ್ತು ಬೇರೆ ಬೇರೆ ತೀರ್ಥ ಸ್ಥಳಗಳಲ್ಲಿ ಅನೇಕ ಸಾಧುಸಂತರನ್ನು ಸಂದರ್ಶಿಸಿದಮೇಲೆ ಅವರಿಗೆ ಈ ವಿಷಯ ವೇದ್ಯವಾಗಿತ್ತು. ಆದರೆ ಅವರಿಗೆ ಈಗಿನಿಂದಲೇ ಧರ್ಮದ ಸಂಕುಚಿತ ಕಲ್ಪನೆಯನ್ನು ಗಮನಿಸಿದರೆ ತುಂಬ ವೇದನೆಯಾಗುತ್ತಿತ್ತು ಮತ್ತು ಅದನ್ನು ಸರಿಪಡಿಸಲು ಅವರು ಪ್ರಯತ್ನಿಸುತ್ತಿದ್ದರು.

9. ಶ್ರೀರಾಮಕೃಷ್ಣರು ಅದ್ವೈತಭಾವದಲ್ಲಿ ಪ್ರತಿಷ್ಠಿತರಾಗಿದ್ದುದರಿಂದ ಅವರಲ್ಲಿ ಉದಾರ ಮನೋಭಾವ ಉಂಟಾಗಿತ್ತು ಎಂಬುದಕ್ಕೆ ಈ ಸಂದರ್ಭದ ಒಂದು ಘಟನೆಯನ್ನು ಉದಾಹರಿಸಬಹುದು. ಅದ್ವೈತಸಾಧನೆಯ ನಂತರ ಅವರು ಕೆಲವು ತಿಂಗಳು ರೋಗದಿಂದ ನರಳಬೇಕಾಯಿತು. ಈ ರೋಗದಿಂದ ಅವರು ಮುಕ್ತರಾದ ಮೇಲೆ ಈ ಘಟನೆ ಸಂಭವಿಸಿತು.

10. ಗೋವಿಂದರಾಯ್ ಎಂಬ ವ್ಯಕ್ತಿಯು ಈ ಸಮಯಕ್ಕೆ ಸ್ವಲ್ಪ ಮುಂಚಿಯೇ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿದ್ದ. ಅವನು ನಿಜವಾಗಿಯೂ ಕ್ಷತ್ರಿಯ ಜಾತಿಯವನು, ಪಾರಸೀ ಮತ್ತು ಅರಬ್ಬೀ ಭಾಷೆಗಳನ್ನು ಅವನು ಚೆನ್ನಾಗಿ ಬಲ್ಲವನಾಗಿದ್ದ. ಧರ್ಮದ ವಿಷಯದಲ್ಲಿ ಅನೇಕ ಮತಗಳನ್ನು ವಿಮರ್ಶಿಸಿ ನೋಡಿ, ಅನೇಕ ಸಂಪ್ರದಾಯಗಳ ಪರಿಚಯವನ್ನು ಪಡೆದು ಕೊನೆಗೆ ಇಸ್ಲಾಂ ಧರ್ಮದಿಂದ ಆಕರ್ಷಿತನಾಗಿ ಅದರಲ್ಲಿ ದೀಕ್ಷೆಯನ್ನು ಪಡೆದಿದ್ದ. ಅವನು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದರೂ ಅವರ ಸಮಾಜ ಪದ್ಧತಿಯನ್ನು ಎಷ್ಟರಮಟ್ಟಿಗೆ ಅನುಸರಿಸುತ್ತಿದ್ದನೆಂಬುದನ್ನು ಹೇಳಲಾಗುವುದಿಲ್ಲ. ಆದರೆ ದೀಕ್ಷೆಯನ್ನು ಸ್ವೀಕರಿಸಿದಂದಿನಿಂದ ಕೊರಾನನ್ನು ಪಠಿಸುತ್ತಿದ್ದ ಮತ್ತು ಅದನ್ನನುಸರಿಸಿ ಸಾಧನೆ ಮಾಡುತ್ತಿದ್ದ—ಎಂಬುದನ್ನು ನಾವು ಕೇಳಿದ್ದೇವೆ. ಗೋವಿಂದನು ಭಾವುಕ ವ್ಯಕ್ತಿ. ಸೂಫಿ ಸಂಪ್ರದಾಯದ ಭಾವಸಾಧನೆಗಳು ಅವನಿಗೆ ತುಂಬ ಮೆಚ್ಚಿಗೆಯಾಗಿದ್ದಿರಬೇಕು.

ಗೋವಿಂದನು ಈಗ ದಕ್ಷಿಣೇಶ್ವರಕ್ಕೆ ಬಂದನು. ಪಂಚವಟಿಯ ಪ್ರಶಾಂತ ವಾತಾವರಣ ಅವನಿಗೆ ಹಿಡಿಸಿತು. ಅಲ್ಲಿ ಇದ್ದು ಕೆಲಕಾಲ ಸಾಧನೆ ಮಾಡಬೇಕೆನಿಸಿತು ಅವನಿಗೆ. ಆಗ ಕಾಳೀ ದೇವಸ್ಥಾನದಲ್ಲಿ ಹಿಂದೂಗಳಂತೆಯೆ ಮುಸಲ್ಮಾನ್ ಫಕೀರರೂ ಆತಿಥ್ಯವನ್ನು ಸ್ವೀಕರಿಸುತ್ತಿದ್ದರು. ಅಲ್ಲಿ ಜಾತಿ ಧರ್ಮಬೇಧವಿಲ್ಲದೆ ಎಲ್ಲ ಸಂಪ್ರದಾಯದವರಿಗೂ ಆದರಾತಿಥ್ಯವಿತ್ತು. ಗೋವಿಂದನು ಇಲ್ಲಿ ತಂಗಿದರೆ ಭಿಕ್ಷಾಟನೆಗಾಗಿ ಬೇರೆಕಡೆ ಹೋಗಬೇಕಾಗಿಲ್ಲ, ನಿಶ್ಚಿಂತೆಯಿಂದ ಸಾಧನೆ ಮಾಡಬಹುದೆಂದು ಅವನು ಅಲ್ಲಿಯೇ ಕೆಲವು ದಿನಗಳು ತಂಗಿದನು.

11. ಭಾವುಕ ಗೋವಿಂದನನ್ನು ನೋಡಿ ಶ್ರೀರಾಮಕೃಷ್ಣರು ಆಕರ್ಷಿತರಾದರು. ಅವನನ್ನು ಮಾತನಾಡಿಸಿದರು, ಅವನ ಸರಳ ವಿಶ್ವಾಸವನ್ನೂ ಪ್ರೀತಿಯನ್ನೂ ಕಂಡು

ಮುಗ್ಧರಾದರು. ಹೀಗೆ ಕ್ರಮೇಣ ಅವರ ಮನಸ್ಸು ಇಸ್ಲಾಂಧರ್ಮದ ಕಡೆ ಆಕರ್ಷಿತವಾಯಿತು. ಅವರಿಗೆ ಅನಿಸಿತು : ''ಇದೂ ಒಂದು ಭಗವಂತನನ್ನು ಪಡೆಯುವ ಮಾರ್ಗ. ಅನಂತಲೀಲಾಮಯಿಯಾದ ಜಗನ್ಮಾತೆಯು ಈ ಮಾರ್ಗದ ಮೂಲಕವೂ ಅನೇಕರನ್ನು ತನ್ನ ಪಾದಪದ್ಮದೆಡೆಗೆ ಸೆಳೆದುಕೊಂಡಿರುವಳು. ಈ ಮಾರ್ಗದ ಮೂಲಕ ಹೇಗೆ ಕೃತಾರ್ಥರಾಗುವರು ಎಂಬುದನ್ನು ನೋಡಬೇಕು. ಗೋವಿಂದನಿಂದ ದೀಕ್ಷೆಯನ್ನು ಪಡೆದು ಈ ಭಾವದಲ್ಲಿ ಸಾಧನೆ ಮಾಡುತ್ತೇನೆ.''

ಚಿಂತಿಸಿದಂತೆ ಕಾರ್ಯ! ಶ್ರೀರಾಮಕೃಷ್ಣರು ತಮ್ಮ ಅಭಿಪ್ರಾಯವನ್ನು ಗೋವಿಂದನ ಮುಂದೆ ವ್ಯಕ್ತಪಡಿಸಿದರು. ಅವನಿಂದ ದೀಕ್ಷೆಯನ್ನು ಪಡೆದು ಇಸ್ಲಾಂ ಧರ್ಮದ ಸಾಧನೆಯನ್ನು ಪ್ರಾರಂಭಿಸಿದರು. ಶ್ರೀರಾಮಕೃಷ್ಣರು ಹೇಳುತ್ತಿದ್ದರು. ''ಆಗ ನಾನು 'ಅಲ್ಲ' ಮಂತ್ರವನ್ನು ಜಪಿಸುತ್ತಿದ್ದೆ. ಮುಸಲ್ಮಾನರಂತೆಯೇ ಉಡುಪು ಧರಿಸುತ್ತಿದೆ. ದಿನದ ಮೂರು ಸಂಧಿಗಳಲ್ಲಿ ನಮಾಜ್ ಮಾಡುತ್ತಿದ್ದೆ. ಆಗ ಹಿಂದೂ ಭಾವವು ಮನಸ್ಸಿನಿಂದ ಹೊರಟುಹೋಯಿತು. ಹಿಂದೂ ದೇವದೇವಿಯರ ಮೂರ್ತಿಗಳನ್ನು ನೋಡುತ್ತಲೂ ಇರಲಿಲ್ಲ, ನಮಸ್ಕರಿಸುತ್ತಲೂ ಇರಲಿಲ್ಲ—ಆ ಪ್ರವೃತ್ತಿಯೇ ಹೊರಟುಹೋಗಿತ್ತು. ಈ ರೀತಿ ಮೂರು ದಿನಗಳು ಸಾಧನೆ ಮಾಡಲು ಆ ಮತದ ಸಾಧನೆಯ ಫಲ ನನ್ನ ಹಸ್ತಗತವಾಯಿತು.'' ಇಸ್ಲಾಂ ಸಾಧನೆಯ ಕಾಲದಲ್ಲಿ ಅವರು ಮೊದಲು ನೀಳಗಡ್ಡದಿಂದ ಕೂಡಿದ ಗಂಭೀರಭಾವದ ಜ್ಯೋತಿರ್ಮಯ ಪುರುಷನೊಬ್ಬನ ದಿವ್ಯದರ್ಶನವನ್ನು ಪಡೆದಿದ್ದರು. ಅನಂತರ ಸಗುಣ ಬ್ರಹ್ಮನ ಸಾಕ್ಷಾತ್ಕಾರದ ಮೂಲಕ ನಿರ್ಗುಣ ಬ್ರಹ್ಮನಲ್ಲಿ ಮನಸ್ಸು ಲೀನವಾಗಿಹೋಯಿತು.

12, ಮುಸಲ್ಮಾನ್ ಧರ್ಮಸಾಧನೆಯ ಸಮಯದಲ್ಲಿ ಶ್ರೀರಾಮಕೃಷ್ಣರು ಮುಸಲ್ಮಾನರಿಗೆ ಪ್ರಿಯವಾದ ಆಹಾರವನ್ನು, ಗೋಮಾಂಸವನ್ನು ಕೂಡ, ಸೇವಿಸುವ ಇಚ್ಛೆಯುಳ್ಳವರಾಗಿದ್ದರು—ಎಂದು ಹೃದಯ ಹೇಳುತ್ತಾನೆ. ಮಥುರನ ಅನುನಯ ಒತ್ತಾಯದಿಂದ ಅವರು ಹಾಗೆ ಮಾಡಲಿಲ್ಲ. ಬಾಲಕ ಸ್ವಭಾವದ ಶ್ರೀರಾಮಕೃಷ್ಣರ ಇಚ್ಛೆಯು ಆಂಶಿಕವಾಗಿಯಾದರೂ ಪೂರ್ತಿಯಾಗದಿದ್ದರೆ ಬಿಡುವುದಿಲ್ಲ ಎಂದು ತಿಳಿದಿದ್ದ ಮಥುರನು ಒಬ್ಬ ಮುಸಲ್ಮಾನ್ ಅಡಿಗೆಯವನನ್ನು ಕರೆಸಿದ. ಆ ಅಡಿಗೆಯವನ ನಿರ್ದೇಶದಂತೆ ಒಬ್ಬ ಬ್ರಾಹ್ಮಣ ಅಡಿಗೆಯವನು ಮುಸಲ್ಮಾನ್ ರೀತಿಯ ಆಹಾರವನ್ನು ಸಿದ್ಧಪಡಿಸಿ ಶ್ರೀರಾಮಕೃಷ್ಣರಿಗೆ ಉಣ್ಣಲು ನೀಡುತ್ತಿದ್ದ. ಮುಸಲ್ಮಾನ್ ಧರ್ಮಸಾಧನೆಯ ಸಮಯದಲ್ಲಿ ಶ್ರೀರಾಮಕೃಷ್ಣರು ಒಮ್ಮೆಯೂ ಕಾಳೀಮಂದಿರಕ್ಕೆ ಹೋಗಿರಲಿಲ್ಲ. ಆದರ ಆವರಣದಿಂದ ಹೊರಗೆ ಇದ್ದ ಮಥುರನು ಇಳಿದುಕೊಳ್ಳುತ್ತಿದ್ದ ಭವನದಲ್ಲಿ ಅವರು ವಾಸಿಸುತ್ತಿದ್ದರು.

13. ವೇದಾಂತ ಸಾಧನೆಯಲ್ಲಿ ಸಿದ್ಧಿಯನ್ನು ಪಡೆದಮೇಲೆ ಇತರ ಧರ್ಮ ಸಂಪ್ರದಾಯಗಳ ವಿಷಯದಲ್ಲಿ ಹೇಗೆ ಸಹಾನುಭೂತಿ ಉಂಟಾಗಿತ್ತು ಎಂಬುದನ್ನು ಈ ಘಟನೆ ತೋರಿಸುತ್ತದೆ. ವೇದಾಂತತತ್ತ್ವದಲ್ಲಿ ವಿಶ್ವಾಸವುಂಟಾದರೆ ಭಾರತದಲ್ಲಿರುವ

ಹಿಂದೂ ಮತ್ತು ಮುಸ್ಲಿಮರು ಪರಸ್ಪರ ಸೌಹಾರ್ದದಿಂದ ಮತ್ತು ಸಹಾನುಭೂತಿಯಿಂದ ಇರಲು ಸಾಧ್ಯ ಎಂಬುದು ಇದರಿಂದ ಸೂಚಿತವಾಗುತ್ತದೆ. ಇಲ್ಲದಿದ್ದರೆ ಶ್ರೀರಾಮಕೃಷ್ಣರು ಹೇಳಿದಂತೆ: ''ಹಿಂದೂ ಮತ್ತು ಮುಸಲ್ಮಾನರ ಮಧ್ಯೆ ಒಂದು ಪರ್ವತವೇ ಇರುವಂತಿದೆ. ಇಷ್ಟು ಕಾಲ ಒಟ್ಟಿಗೆ ವಾಸಿಸಿದರೂ ಪರಸ್ಪರರ ಆಲೋಚನಾ ಪ್ರಣಾಳೀ, ಧರ್ಮವಿಶ್ವಾಸ ಮತ್ತು ಕಾರ್ಯಕಲಾಪ ಇವು ಪರಸ್ಪರರಿಗೆ ದುರ್ಭೇದ್ಯವಾಗಿಯೇ ಉಳಿದಿವೆ.'' ಮುಂದೆ ಈ ಪರ್ವತ ಮಾಯವಾಗುವುದು ಮತ್ತು ಇವರಿಬ್ಬರು ಪ್ರೇಮದಿಂದ ಆಲಂಗಿಸುವರು ಎಂಬುದನ್ನು ಶ್ರೀರಾಮಕೃಷ್ಣರ ಇಸ್ಲಾಂ ಧರ್ಮ ಸಾಧನೆಯು ಸೂಚಿಸುವುದೆ ?

14. ಅದ್ವೈತಭಾವದಲ್ಲಿ ಪ್ರತಿಷ್ಠಿತರಾಗಿದ್ದ ಶ್ರೀರಾಮಕೃಷ್ಣರಿಗೆ ದ್ವೈತ ಜಗತ್ತಿನ ವಿಷಯಗಳನ್ನು ಮತ್ತು ವ್ಯಕ್ತಿಗಳನ್ನು ನೋಡಿದಾಗ ಅನೇಕ ವೇಳೆ ಅದ್ವೈತ ಸ್ಮೃತಿ ಉಂಟಾಗಿ ತುರೀಯದಲ್ಲಿ ಮನಸ್ಸು ಲೀನವಾಗುತ್ತಿತ್ತು. ಸಂಕಲ್ಪ ಮಾಡದೆಯೇ ಕೆಲವೊಮ್ಮೆ ಸಾಮಾನ್ಯ ಉದ್ದೀಪನೆಯಿಂದಲೇ ಅವರಿಗೆ ಆ ಸ್ಥಿತಿ ಉಂಟಾಗುತ್ತಿದ್ದುದನ್ನು ನಾವು ನೋಡಿರುವೆವು. ಆದ್ದರಿಂದ ಸಂಕಲ್ಪ ಮಾತ್ರದಿಂದಲೇ ಅವರಿಗೆ ಆ ಸ್ಥಿತಿ ಉಂಟಾಗುತ್ತಿತ್ತು ಎಂಬುದನ್ನು ಹೇಳಬೇಕಾಗಿಯೇ ಇಲ್ಲ. ಅದ್ವೈತಭಾವವು ಅವರಿಗೆ ಎಷ್ಟೊಂದು ಸ್ವಾಭಾವಿಕವಾಗಿತ್ತು ಎಂಬುದು ಇದರಿಂದ ತಿಳಿಯುವುದು. ಇದಕ್ಕೆ ಸಂಬಂಧಿಸಿದ ಕೆಲವು ಘಟನೆಗಳನ್ನು ಇಲ್ಲಿ ಪ್ರಸ್ತುತಪಡಿಸುವೆವು.

15. ಮಳೆಗಾಲದಲ್ಲಿ ದಕ್ಷಿಣೇಶ್ವರದ ತೋಟವು ಹುಲ್ಲಿನಿಂದ ತುಂಬಿಹೋಗಿರುತ್ತಿದ್ದುದರಿಂದ ತೋಟಗಾರರು ತರಕಾರಿ ಮುಂತಾದುವುಗಳನ್ನು ಬೆಳೆಸುತ್ತಿರಲಿಲ್ಲ. ಆದ್ದರಿಂದ ಹುಲ್ಲಿನವರು ಬಂದು ಅದನ್ನು ಕಿತ್ತುಕೊಂಡು ಹೋಗುತ್ತಿದ್ದರು. ಒಂದು ದಿನ ಒಬ್ಬಳು ಮುದುಕಿ ಬಂದು ಅನುಮತಿಯನ್ನು ಪಡೆದು ಹುಲ್ಲನ್ನು ಕೀಳತೊಡಗಿದಳು. ಲೋಭಿಯಾದ ಅವಳು ಎಷ್ಟು ಸಾಧ್ಯವೊ ಅಷ್ಟು ಹುಲ್ಲನ್ನು ಕೀಳಬೇಕೆಂದು ಆತುರದಿಂದ ಕೀಳುತ್ತಿದ್ದಳು. ಶ್ರೀರಾಮಕೃಷ್ಣರು ಅದನ್ನು ನೋಡುತ್ತಿದ್ದರು. ಆಕೆ ಎಷ್ಟೊಂದು ಹುಲ್ಲನ್ನು ಕಿತ್ತಳೆಂದರೆ ಅದನ್ನು ಅವಳಿಗೆ ಹೊತ್ತುಕೊಂಡು ಹೋಗುವಷ್ಟು ಶಕ್ತಿಯಿರಲಿಲ್ಲ. ಆ ದೊಡ್ಡ ಹೊರೆಯನ್ನು ಹೊರಲು ಎಷ್ಟೋ ಪ್ರಯತ್ನಿಸಿ ನೋಡಿದಳು. ಆದರೆ ಸಾಧ್ಯವಾಗಲಿಲ್ಲ. ಆ ದೃಶ್ಯವನ್ನು ನೋಡುತ್ತಿದ್ದಂತೆಯೇ ಶ್ರೀರಾಮಕೃಷ್ಣರಿಗೆ ಭಾವಾವೇಶವುಂಟಾಯಿತು. ಅವರಿಗನಿಸಿತು: ''ಅಂತರ್ಯದಲ್ಲಿ ಪೂರ್ಣ ಜ್ಞಾನಸ್ವರೂಪನಾದ ಆತ್ಮನು ಪ್ರಕಾಶಿಸುತ್ತಿರುವನು. ಆದರೆ ಹೊರಗಡೆ ಎಂಥ ಮೂರ್ಖತೆ ! ಎಂಥ ಅಜ್ಞಾನ !'' ಹೀಗೆ ಹೇಳುತ್ತ ಅವರು ಸಮಾಧಿಮಗ್ನರಾದರು.

ಒಂದು ದಿನ ದಕ್ಷಿಣೇಶ್ವರದಲ್ಲಿ ಒಂದು ಕೀಟವು ಹಾರುತ್ತಿರುವುದನ್ನು ಅವರು ನೋಡಿದರು. ಅದರ ಬಾಲಕ್ಕೆ ಒಂದು ಕಡ್ಡಿ ಸಿಕ್ಕಿಕೊಂಡಿತ್ತು. ತುಂಟ ಹುಡುಗರಾರೋ ಈ ರೀತಿ ಮಾಡಿರಬೇಕೆಂದು ಮೊದಲು ಅವರು ವ್ಯಥೆಗೊಂಡರು. ಆದರೆ ಮರುಕ್ಷಣವೇ

ಭಾವಾವಿಷ್ಟರಾಗಿ ''ಹೇ ರಾಮ, ನಿನ್ನ ಈ ದುರವಸ್ಥೆಯನ್ನು ನೀನೇ ತಂದುಕೊಂಡಿರುವೆ'' ಎಂದು ಹೇಳುತ್ತ ಜೋರಾಗಿ ನಕ್ಕರು.

ದಕ್ಷಿಣೇಶ್ವರದ ತೋಟದ ಒಂದು ಪ್ರದೇಶದಲ್ಲಿ ದೂರ್ವೆಯ ಹುಲ್ಲು ಬಹಳ ಸುಂದರವಾಗಿ ಬೆಳೆದಿತ್ತು. ಅದನ್ನು ನೋಡಿ ಶ್ರೀರಾಮಕೃಷ್ಣರು ಎಷ್ಟೊಂದು ಭಾವಾವೇಶದಿಂದ ತನ್ಮಯರಾಗುತ್ತಿದ್ದರೆಂದರೆ ಅದು ತಮ್ಮ ದೇಹದ ಅಂಗವಾಗಿಯೇ ಭಾಸವಾಗುತ್ತಿತ್ತು. ಒಮ್ಮೆ ಅವರು ಆ ಸ್ಥಿತಿಯಲ್ಲಿರುವಾಗ ಒಬ್ಬ ವ್ಯಕ್ತಿಯು ಆ ಹುಲ್ಲಿನ ಮೇಲೆ ನಡೆದುಕೊಂಡು ಹೋದ. ಶ್ರೀರಾಮಕೃಷ್ಣರಿಗೆ ಅದನ್ನು ನೋಡಿ ಅಸಾಧ್ಯ ವೇದನೆಯುಂಟಾಯಿತು. ಈ ಘಟನೆಯನ್ನು ಉಲ್ಲೇಖಿಸಿ ಅವರು ನಮಗೆ ಹೇಳುತ್ತಿದ್ದರು: ''ನಮ್ಮ ಎದೆಯ ಮೇಲೆ ಯಾರಾದರು ನಡೆದರೆ ಯಾವರೀತಿ ನೋವು ಆಗುವುದೊ ಆಗ ನನಗೆ ಅಂಥ ಅನುಭವವಾಯಿತು. ಆ ರೀತಿಯ ಭಾವಾವಸ್ಥೆ ತುಂಬ ವೇದನಾಪ್ರದವಾದುದು. ಅದು ನನಗೆ ಆರು ಗಂಟೆಗಳ ಕಾಲವಿತ್ತು. ಆದರಿಂದಲೇ ನಾನು ಅಸ್ಥಿರನಾಗಿ ಹೋದೆ.''

ಒಂದು ದಿನ ಶ್ರೀರಾಮಕೃಷ್ಣರು ದೇವಾಲಯದ ಮುಖಮಂಟಪದಲ್ಲಿ ನಿಂತು ಭಾವಮಗ್ನರಾಗಿ ಗಂಗೆಯನ್ನು ನೋಡುತ್ತಿದ್ದರು. ಘಟ್ಟದಲ್ಲಿ ಎರಡು ದೋಣಿಗಳು ನಿಂತಿದ್ದುವು. ಅಂಬಿಗರು ಯಾವುದೊ ವಿಷಯಕ್ಕಾಗಿ ಜಗಳ ಪ್ರಾರಂಭಿಸಿದರು. ಬರಬರುತ್ತ ಅದು ಜೋರಾಗಿ ಒಬ್ಬನು ಇನ್ನೊಬ್ಬನ ಬೆನ್ನಿನ ಮೇಲೆ ಬಲವಾಗಿ ಹೊಡೆದನು. ಶ್ರೀರಾಮಕೃಷ್ಣರು ನೋಡಿ ಚೀರಿಕೊಂಡರು. ಮತ್ತೆ ಅಳತೊಡಗಿದರು. ಅವರ ಕ್ರಂದನವನ್ನು ಕೇಳಿ ಹೃದಯ ಓಡಿಬಂದನು. ಶ್ರೀರಾಮಕೃಷ್ಣರ ಬೆನ್ನಿನ ಮೇಲೆ ಒಂದು ಭಾಗ ಊದಿಕೊಂಡಿತ್ತು ಮತ್ತು ಕೆಂಪಾಗಿತ್ತು. ಹೃದಯನಿಗೆ ಕೋಪ ನೆತ್ತಿಗೇರಿತು. ಆವೇಶದಿಂದ ಹೇಳಿದ: ''ಮಾವ,ಯಾರು ನಿನ್ನನ್ನು ಹೊಡೆದರು, ತೋರಿಸು. ಅವನ ತಲೆ ಒಡೆದು ಹಾಕುತ್ತೇನೆ.'' ಅನಂತರ ಶ್ರೀರಾಮಕೃಷ್ಣರು ಸ್ವಲ್ಪ ಸುಧಾರಿಸಿಕೊಂಡು ಅಂಬಿಗರು ಜಗಳವಾಡಿಕೊಂಡು ಒಬ್ಬನು ಇನ್ನೊಬ್ಬನಿಗೆ ಹೊಡೆದದ್ದರಿಂದ ತಮ್ಮ ಬೆನ್ನಿನ ಮೇಲೆ ಅದರ ಗುರುತು ಕಾಣಿಸಿಕೊಂಡಿತು ಮತ್ತು ನೋವುಂಟಾಯಿತು ಎಂದು ವಿವರಿಸಿ ಹೇಳಿದರು. ಹೃದಯನು ಇದನ್ನು ಕೇಳಿ ಹೀಗೂ ಆಗಲು ಸಾಧ್ಯವೇ ! ಎಂದು ಸ್ತಂಭೀಭೂತನಾದನು. ಈ ಘಟನೆಯನ್ನು ಶ್ರೀರಾಮಕೃಷ್ಣರೇ ಗಿರೀಶಚಂದ್ರ ಘೋಷನಿಗೆ ಹೇಳಿದರು. ಅವರ ಜೀವನದಲ್ಲಿ ಇಂಥ ಅನೇಕ ಘಟನೆಗಳಿವೆ.

ಹದಿನೇಳನೆಯ ಅಧ್ಯಾಯ

ಹುಟ್ಟೂರಿಗೆ ಭೇಟಿ

1. ಹೃದಯ ಮತ್ತು ಭೈರವಿಯರೊಡನೆ ಕಾಮಾರಪುಕುರ ಭೇಟಿ 2. ಶ್ರೀರಾಮಕೃಷ್ಣರ ಸಂಬಂಧಿಕರು ಅವರನ್ನು ಹೇಗೆ ಕಾಣುತ್ತಿದ್ದರು 3. ಶ್ರೀಮಾತೆಯವರು ಕಾಮಾರಪುಕುರಕ್ಕೆ ಆಗಮಿಸಿದರು 4. ನೆಂಟರು ಮತ್ತು ಬಾಲ್ಯ ಸ್ನೇಹಿತರೊಡನೆ ಶ್ರೀರಾಮಕೃಷ್ಣರ ವರ್ತನೆ 5. ಅವರಲ್ಲಿ ಕೆಲವರ ಆಧ್ಯಾತ್ಮಿಕ ಪ್ರಗತಿಯ ಬಗ್ಗೆ ಶ್ರೀರಾಮಕೃಷ್ಣರ ಹೇಳಿಕೆ 6. ಕಾಮಾರಪುಕುರವಾಸಿಗಳು ಶ್ರೀರಾಮಕೃಷ್ಣರಿಗೆ ಸಂಪೂರ್ಣ ಹೊಸಬರಾಗಿ ಕಂಡರು 7. ಹುಟ್ಟೂರಿನ ಜನರೊಡನೆ ಅವರ ಪ್ರೀತಿಯ ಸಂಬಂಧ 8. ತಮ್ಮ ಪತ್ನಿಯ ವಿಷಯದಲ್ಲಿ ಕರ್ತವ್ಯಪಾಲನೆ 9. ಇದರಲ್ಲಿ ಅವರು ಪಡೆದ ಯಶಸ್ಸು 10. ಭೈರವೀಬ್ರಾಹ್ಮಣಿಯ ಆಶಂಕೆ ಮತ್ತು ಭಾವಾಂತರ 11. ಭೈರವೀ ಅಹಂಕಾರದಿಂದ ವಿವೇಕಹೀನತೆ 12. ಇದಕ್ಕೆ ಸಂಬಂಧಿಸಿದ ಘಟನೆ 13. ಬ್ರಾಹ್ಮಣೀ ಹೃದಯರ ಜಗಳ 14. ಬ್ರಾಹ್ಮಣಿಯು ತಪ್ಪನ್ನರಿತು ಪಶ್ಚಾತ್ತಾಪದಿಂದ ಕಾಶಿಗೆ ಹೊರಟುಹೋದಳು 15. ಶ್ರೀರಾಮಕೃಷ್ಣರು ಕಲಕತ್ತೆಗೆ ಹಿಂದಿರುಗಿದರು.

1. ಸುಮಾರು ಆರು ತಿಂಗಳು ಕಾಯಿಲೆಯನ್ನು ಅನುಭವಿಸಿದನಂತರ ಅವರ ಶರೀರ ರೋಗಮುಕ್ತವಾಯಿತು ಮತ್ತು ಮನಸ್ಸಿಗೆ ದ್ವೈತಾದ್ವೈತಭೂಮಿಗಳ ಮಧ್ಯದಲ್ಲಿ ನೆಲೆಸುವ ಅಭ್ಯಾಸವುಂಟಾಯಿತು. ಆದರೆ ಅವರ ಶರೀರ ಈಗಲೂ ಮೊದಲಿನಂತೆ ಆರೋಗ್ಯವಂತವಾಗಿರಲಿಲ್ಲ. ಮಳೆಗಾಲ ಬಂದಮೇಲೆ ಗಂಗಾಜಲವು ಉಪ್ಪುಮಿಶ್ರವಾಗುತ್ತಿತ್ತು. ಬೇರೆ ಶುದ್ಧ ನೀರು ಇಲ್ಲದಿದ್ದುದರಿಂದ ಅದನ್ನು ಕುಡಿದರೆ ಮತ್ತೆ ಅವರ ಹೊಟ್ಟೆ ಕೆಟ್ಟುಹೋಗುವ ಭಯವಿತ್ತು. ಆದ್ದರಿಂದ ಕೆಲವು ತಿಂಗಳ ಮಟ್ಟಿಗೆ ಅವರು ಕಾಮಾರಪುಕುರಕ್ಕೆ ಹೋಗುವುದು ಒಳ್ಳೆಯದೆಂದು ಮಥುರ ಮತ್ತಿತರರು ನಿರ್ಧರಿಸಿದರು. ಆಗ ಕ್ರಿ.ಶ. ೧೮೬೭ರ ಜ್ಯೇಷ್ಠ ಮಾಸ. ಮಥುರನಾಥ ಮತ್ತು ಜಗದಂಬಾದಾಸಿ ಇವರು ಶ್ರೀರಾಮಕೃಷ್ಣರ ಕಾಮಾರಪುಕುರದ ಸಂಸಾರವನ್ನು ಶಿವನ ಸಂಸಾರದಂತೆ ಬಡಕುಟುಂಬವೆಂದು ಭಾವಿಸಿದ್ದರು. ಅವರು ಅಲ್ಲಿರುವಾಗ ಅವರಿಗೆ ಯಾವ ರೀತಿಯ ಕೊರತೆಯಾಗಬಾರದೆಂದು ಎಲ್ಲ ಅವಶ್ಯಕ ವಸ್ತುಗಳನ್ನೂ ಸಂಗ್ರಹಿಸಿ ಅಣಿಗೊಳಿಸತೊಡಗಿದರು. ಅನಂತರ ಶುಭದಿನದಂದು ಶ್ರೀರಾಮಕೃಷ್ಣರು ಯಾತ್ರೆ ಪ್ರಾರಂಭಿಸಿದರು. ಹೃದಯ ಮತ್ತು ಭೈರವೀ ಬ್ರಾಹ್ಮಣಿ ಅವರೊಟ್ಟಿಗೆ ಹೊರಟರು. ವೃದ್ಧ

ತಾಯಿ ಚಂದ್ರಮಣಿಯು, ಮೊದಲೇ ಗಂಗಾತೀರದಲ್ಲಿ ಕೊನೆಯವರೆಗೂ ಇರಬೇಕೆಂದು ನಿಶ್ಚಯಿಸಿದ್ದರಿಂದ, ಅವರೊಡನೆ ಹೋಗಲಿಲ್ಲ.

2. ಸುಮಾರು ಎಂಟು ವರ್ಷಗಳಿಂದ ಶ್ರೀರಾಮಕೃಷ್ಣರು ಕಾಮಾರಪುಕುರಕ್ಕೆ ಹೋಗಿರಲಿಲ್ಲ; ಅವರ ಆತ್ಮೀಯರೆಲ್ಲ ಅವರನ್ನು ನೋಡಲು ತವಕಿಸುತ್ತಿದ್ದರು ಎಂಬುದನ್ನು ಮತ್ತೆ ಹೇಳಬೇಕಾಗಿಲ್ಲ. ಒಮ್ಮೊಮ್ಮೆ ಸ್ತ್ರೀವೇಶವನ್ನು ಧರಿಸಿ 'ಹರಿ ಹರಿ' ಎನ್ನುತ್ತಾರೆ, ಕೆಲವೊಮ್ಮೆ ಸಂನ್ಯಾಸಿಯಾಗುತ್ತಾರೆ, ಕೆಲವೊಮ್ಮೆ 'ಅಲ್ಲ ಅಲ್ಲ' ಎಂದು ಜಪಿಸುತ್ತಾರೆ ಎಂದು ಏನೇನೊ ಎಲ್ಲ ಸುಳ್ಳು-ಸಟೆ ಮಿಶ್ರಿತ ಸುದ್ದಿ ಕಾಮಾರಪುಕುರದಲ್ಲಿ ಹರಡಿತ್ತು. ಇದರಿಂದಾಗಿ ಅವರನ್ನು ನೋಡುವ ಕುತೂಹಲ ಮತ್ತಷ್ಟು ಕೆರಳಿತ್ತು ಅವರ ಬಂಧುವರ್ಗದಲ್ಲಿ. ಆದರೆ ಶ್ರೀರಾಮಕೃಷ್ಣರನ್ನು ನೋಡಿದಮೇಲೆ ಅವರ ಸಂದೇಹಗಳೆಲ್ಲ ದೂರವಾದುವು-ಶ್ರೀರಾಮಕೃಷ್ಣರು ಮೊದಲು ಹೇಗಿದ್ದರೊ ಹಾಗೆಯೇ ಇದ್ದಾರೆ. ಅದೇ ಸರಳತೆ, ಅದೇ ಹಾಸ್ಯಪ್ರವೃತ್ತಿ, ಅದೇ ಸತ್ಯನಿಷ್ಠೆ, ಅದೇ ಧರ್ಮಶಕ್ತಿ—ಎಲ್ಲ ಹಿಂದಿನಂತೆಯೆ ಪೂರ್ಣರೂಪದಲ್ಲಿ ಇದ್ದುವು. ಆದರೆ ಒಂದು ವ್ಯತ್ಯಾಸವಿತ್ತು. ಒಂದು ಅಪೂರ್ವವಾದ ದಿವ್ಯ ತೇಜಸ್ಸು ಅವರನ್ನು ಆವರಿಸಿತ್ತು. ಅದು ಎಷ್ಟು ಪ್ರಭಾವಪೂರ್ಣವಾಗಿತ್ತೆಂದರೆ ಯಾರಿಗೂ ಅವರ ಮುಂದೆ ಕ್ಷುದ್ರ ಸಾಂಸಾರಿಕ ವಿಷಯವನ್ನು ಎತ್ತುವುದಕ್ಕೂ ಧೈರ್ಯ ಬರುತ್ತಿರಲಿಲ್ಲ. ಅದಲ್ಲದೆ ಇನ್ನೊಂದು ವೈಶಿಷ್ಟ್ಯವನ್ನು ಅವರಲ್ಲಿ ಗಮನಿಸಿದರು. ಅದೇನೆಂದರೆ ಅವರೊಡನಿರುವಾಗ ಎಲ್ಲ ಸಂಸಾರಿಕ ಕೀಳು ಭಾವನೆಗಳೂ ದೂರಸರಿದು ಒಂದು ಅವರ್ಣನೀಯವಾದ ಆನಂದ ಮತ್ತು ಶಾಂತಿ ಮನಸ್ಸನ್ನು ತುಂಬುತ್ತಿತ್ತು ಮತ್ತು ಅವರಿಂದ ದೂರವಾದಾಗ ಮತ್ತೆ ಅವರೆಡೆಗೆ ಹೋಗಬೇಕೆಂಬ ತೀವ್ರ ಆಕರ್ಷಣೆಯುಂಟಾಗುತ್ತಿತ್ತು. ಅದು ಏನೇ ಇರಲಿ, ಬಹು ಕಾಲದನಂತರ ಅವರು ಬಂದುದರಿಂದ ಆ ಬಡ ಕುಟುಂಬದಲ್ಲಿ ಒಂದು ಆನಂದೋತ್ಸವವುಂಟಾಯಿತು. ಇದಕ್ಕೆ ಇನ್ನೂ ಕಳೆಕಟ್ಟುವಂತೆ ಮಾಡಲು ಜಯರಾಮಬಾಟಿಯಿಂದ ನವವಧುವನ್ನು ಕರೆತರಲು ಜನರನ್ನು ಕಳಿಸಿದರು. ಈ ವಿಷಯ ತಿಳಿದಾಗ ಶ್ರೀರಾಮಕೃಷ್ಣರು ಆಕ್ಷೇಪಿಸಲೂ ಇಲ್ಲ, ಸಮ್ಮತಿಸಲೂ ಇಲ್ಲ.

3. ವಿವಾಹದನಂತರ ಒಮ್ಮೆ ಮಾತ್ರ ನವವಧುವಿಗೆ ಪತಿಯ ದರ್ಶನವಾಗಿತ್ತು. ಅವರಿಗೆ ಏಳು ವರ್ಷವಾಗಿದ್ದಾಗ ಕುಲಪದ್ಧತಿಯಂತೆ ಶ್ರೀರಾಮಕೃಷ್ಣರನ್ನು ಒಮ್ಮೆ ಜಯರಾಂಬಾಟಿಗೆ ಕರೆದುಕೊಂಡು ಹೋಗಿದ್ದರು. ಅವರಾಗ ಇನ್ನೂ ಚಿಕ್ಕವರು, ವಿವಾಹದ ಅರ್ಥ ಇನ್ನೂ ಅವರ ಮನಸ್ಸಿಗೆ ಹೋಗಿರಲಿಲ್ಲ. ಆಗ ನಡೆದ ಒಂದು ಘಟನೆ ಅವರಿಗೆ ಅಸ್ಪಷ್ಟವಾಗಿ ನೆನಪಿತ್ತು. ಶ್ರೀರಾಮಕೃಷ್ಣರೊಡನೆ ಬಂದಿದ್ದ ಹೃದಯನು ಎಲ್ಲಿಂದಲೊ ಕೆಲವು ತಾವರೆ ಹೂವುಗಳನ್ನು ತಂದಿದ್ದನು. ನಾಚಿಕೆಯಿಂದ ಎಲ್ಲೊ ಅಡಗಿಕೊಂಡಿದ್ದ ಅವರನ್ನು ಪತ್ತೆಹಚ್ಚಿ ಬಲಾತ್ಕಾರವಾಗಿ ಅವರ ಪಾದಪದ್ಮವನ್ನು ಆ ಹೂವುಗಳಿಂದ ಪೂಜಿಸಿದ್ದನು. ಈ ಘಟನೆಯಾದ ಸುಮಾರು ಆರು ವರ್ಷಗಳನಂತರ ಅವರ ಹದಿಮೂರನೇ ವಯಸ್ಸಿನಲ್ಲಿ ಅವರನ್ನು ಕಾಮಾರಪುಕುರಕ್ಕೆ ಕರೆದುಕೊಂಡು

ಬರಲಾಯಿತು. ಆಗ ಅವರು ಒಂದು ತಿಂಗಳು ಕಾಮಾರಪುಕುರದಲ್ಲಿದ್ದರು. ಆದರೆ ಶ್ರೀರಾಮಕೃಷ್ಣರು ಮತ್ತು ಅವರ ತಾಯಿ ದಕ್ಷಿಣೇಶ್ವರದಲ್ಲಿದ್ದುದರಿಂದ ಅವರನ್ನು ನೋಡುವ ಮತ್ತು ಸೇವಿಸುವ ಭಾಗ್ಯ ಅವರಿಗೆ ಆಗ ದೊರೆಯಲಿಲ್ಲ. ಇದಾದನಂತರ ಆರು ತಿಂಗಳ ಮೇಲೆ ಮತ್ತೊಮ್ಮೆ ಕಾಮಾರಪುಕುರಕ್ಕೆ ಬಂದಿದ್ದರು. ಆಗಲೂ ಶ್ರೀರಾಮಕೃಷ್ಣರು ಅವರಿಗೆ ಸಿಗಲಿಲ್ಲ. ಆಗ ಅವರು ಒಂದುವರೆ ತಿಂಗಳು ಅಲ್ಲಿದ್ದರು. ತಂದೆಯ ಮನೆಗೆ ಹಿಂದಿರುಗಿ ನಾಲ್ಕು ತಿಂಗಳಲ್ಲಿಯೇ ವರ್ತಮಾನ ಬಂತು ಶ್ರೀರಾಮಕೃಷ್ಣರು ಕಾಮಾರಪುಕುರಕ್ಕೆ ಬಂದಿರುವರು, ತಾವು ಅಲ್ಲಿಗೆ ಹೋಗಬೇಕು ಎಂದು. ಈಗವರಿಗೆ ಹದಿನಾಲ್ಕು ವರ್ಷಗಳು ತುಂಬಿ ಆರೇಳು ತಿಂಗಳುಗಳಾಗಿದ್ದುವು. ವಾಸ್ತವ ದೃಷ್ಟಿಯಿಂದ ನೋಡಿದರೆ ಪತಿ-ಪತ್ನಿಯರ ಇದೇ ಪ್ರಥಮ ಭೇಟಿ ಎನ್ನಬಹುದು.

4. ಈ ಸಂದರ್ಭದಲ್ಲಿ ಶ್ರೀರಾಮಕೃಷ್ಣರು ಆರು ಅಥವಾ ಏಳು ತಿಂಗಳು ಕಾಮಾರಪುಕುರದಲ್ಲಿ ತಂಗಿದ್ದರು. ಅವರ ಹಳೆಯ ಸ್ನೇಹಿತರು ಮತ್ತು ಪರಿಚಿತ ಗ್ರಾಮವಾಸಿಗಳೆಲ್ಲರೂ ಅವರೊಡನೆ ಮೊದಲಿನಂತೆಯೆ ಮುಕ್ತವಾಗಿ ವ್ಯವಹರಿಸುತ್ತಿದ್ದರು. ಬಹುಕಾಲದ ನಂತರ ಅವರುಗಳನ್ನು ನೋಡಿದ್ದರಿಂದ ಶ್ರೀರಾಮಕೃಷ್ಣರಿಗೂ ಸಂತೋಷವಾಯಿತು. ದೀರ್ಘಕಾಲದ ತೀವ್ರ ಪರಿಶ್ರಮದನಂತರ ಸ್ವಲ್ಪ ಬಿಡುವು ಮಾಡಿಕೊಂಡು ವಿಚಾರಶೀಲ ವ್ಯಕ್ತಿಗಳು ಎಳೆಮಕ್ಕಳ ಅರ್ಥಹೀನವಾದ ಉದ್ದೇಶ ರಹಿತವಾದ ಆಟಪಾಠಗಳಲ್ಲಿ ಭಾಗವಹಿಸುವಂತೆ ಶ್ರೀರಾಮಕೃಷ್ಣರೂ ಕಾಮಾರಪುಕುರದ ಸ್ತ್ರೀಪುರುಷರ ಕ್ಷುದ್ರ, ಸಾಂಸಾರಿಕ ಜೀವನದ ಚಟುವಟಿಕೆಗಳಲ್ಲಿ ತಾವೂ ಪಾಲುಗೊಂಡು ಆನಂದವನ್ನು ಅನುಭವಿಸುತ್ತಿದ್ದರು. ಆದರೆ ಅವರುಗಳು ಸಂಸಾರದ ನಶ್ವರತೆಯನ್ನು ಮನಗಂಡು ನಿಧಾನವಾಗಿ ಭಗವಂತನೆಡೆಗೆ ಮನಸ್ಸು ಹರಿಸುವಂತೆ ಮಾಡುವುದರಲ್ಲಿಯೂ ಶ್ರೀರಾಮಕೃಷ್ಣರು ಉದ್ಯುಕ್ತರಾಗಿದ್ದರು. ಕ್ರೀಡೆ, ಹಾಸ್ಯ, ಪರಿಹಾಸ್ಯ ಇವೇ ಮುಂತಾದುವುಗಳ ಮೂಲಕ ನಮಗೆ ಹೇಗೆ ಶಿಕ್ಷಣ ನೀಡುತ್ತಿದ್ದರು ಎಂಬುದನ್ನು ನೋಡಿದಾಗ ಇದನ್ನು ನಾವು ಊಹಿಸಬಹುದು.

5. ಈ ಕುಗ್ರಾಮದ ಒಂದು ಸಾಮಾನ್ಯ ಕುಟುಂಬದಲ್ಲಿದ್ದೂ ಕೆಲವರು ಧರ್ಮ ಜೀವನದಲ್ಲಿ ತುಂಬ ಮುಂದುವರಿದಿರುವುದನ್ನು ನೋಡಿ ಶ್ರೀರಾಮಕೃಷ್ಣರು ಭಗವಂತನ ಅಚಿಂತ್ಯ ಮಹಿಮೆಯನ್ನು ಕೊಂಡಾಡಿದ್ದರು. ಇದಕ್ಕೆ ಸಂಬಂಧಪಟ್ಟ ಒಂದು ಘಟನೆಯನ್ನು ಅವರು ನಮಗೆ ಅನೇಕ ವೇಳೆ ಹೇಳಿರುವರು. ಒಂದುದಿನ ಅವರು ಊಟದ ನಂತರ ಕೋಣೆಯಲ್ಲಿ ವಿಶ್ರಮಿಸುತ್ತಿದ್ದರು. ನೆರೆಹೊರೆಯ ಕೆಲವರು ಸ್ತ್ರೀಯರು ಬಂದು ಅವರೊಡನೆ ಧಾರ್ಮಿಕ ವಿಷಯವನ್ನು ಚರ್ಚಿಸುತ್ತಿದ್ದರು. ಆಗ ಅವರಿಗೆ ಇದ್ದಕ್ಕಿದ್ದಂತೆ ಭಾವಾವೇಶವಾಯಿತು. ತಾವು ಮೀನಿನ ರೂಪದಲ್ಲಿ ಸಚ್ಚಿದಾನಂದಸಾಗರದಲ್ಲಿ ಪರಮಾನಂದದಿಂದ ತೇಲುತ್ತಿರುವುದಾಗಿ ಅವರಿಗೆ ಅನುಭವವಾಯಿತು. ಇವರು ಈ ರೀತಿ ಭಾವಾವೇಶದಲ್ಲಿರುವಾಗ ಸ್ತ್ರೀಯರು ಇದನ್ನು ಲೆಕ್ಕಿಸದೆ ತಮ್ಮ ಪಾಡಿಗೆ ತಾವು ಮಾತನಾಡುವುದನ್ನು ಮುಂದುವರಿಸಿದರು. ಅವರಲ್ಲಿ ಒಬ್ಬಳು ಮಾತ್ರ ಮಾತನಾಡುವುದನ್ನು

ನಿಲ್ಲಿಸಿ ಶ್ರೀರಾಮಕೃಷ್ಣರು ಭಾವಾವೇಶದಿಂದ ಹೊರಬರುವವರೆಗೂ ಸುಮ್ಮನೆ ಕುಳಿತಿರ ಬೇಕೆಂದು ಎಲ್ಲರಿಗೂ ಹೇಳಿದಳು. ಅವಳೆಂದಳು, "ಅವರು (ಶ್ರೀರಾಮಕೃಷ್ಣರು) ಸಚ್ಚಿದಾನಂದಸಾಗರದಲ್ಲಿ ಮೀನಿನಂತೆ ವಿಹರಿಸುತ್ತಿದ್ದಾರೆ. ನೀವು ಗಲಾಟೆಮಾಡಿದರೆ ಅವರ ಆನಂದಕ್ಕೆ ಭಂಗವುಂಟಾಗುವುದು." ಆ ಮಹಿಳೆಯ ಮಾತಿನಲ್ಲಿ ಎಲ್ಲರಿಗೂ ವಿಶ್ವಾಸವುಂಟಾಗದಿದ್ದರೂ ಎಲ್ಲರೂ ನಿಸ್ತಬ್ಧರಾಗಿ ಕುಳಿತರು. ಶ್ರೀರಾಮಕೃಷ್ಣರು ಭಾವಸಮಾಧಿಯಿಂದ ಹೊರಬಂದಮೇಲೆ ಈ ವಿಚಾರವಾಗಿ ಅವರನ್ನು ಪ್ರಶ್ನಿಸಲು ಅದರೆಂದರು, 'ಆ ಮಹಿಳೆ ಸತ್ಯವನ್ನೇ ಹೇಳಿದಳು ! ಆಶ್ಚರ್ಯ ! ಅವಳಿಗೆ ಹೇಗೆ ಇದು ತಿಳಿಯಿತು?"

6. ಕಾಮಾರಪುಕುರದ ಹಳ್ಳಿಗರ ದೈನಂದಿನ ಜೀವನವು ಈಗ ಶ್ರೀರಾಮಕೃಷ್ಣ ರಿಗೆ ಹೊಸತಾಗಿ ಕಂಡಿರಬಹುದು. ಬಹುಕಾಲದನಂತರ ವಿದೇಶದಿಂದ ಹಿಂತಿರುಗಿದ ವ್ಯಕ್ತಿಗೆ ಸ್ವದೇಶದ ಜನಜೀವನ ತೀರ ಹೊಸತಾಗಿ ಕಾಣುವಂತೆಯೆ ಅವರಿಗೂ ಆಗಿರ ಬಹುದು. ಏಕೆಂದರೆ ಅವರು ಕೇವಲ ಎಂಟು ವರ್ಷಗಳು ಮಾತ್ರ ದೂರವಿದ್ದರೂ ಈ ಅವಧಿಯಲ್ಲಿ ಅವರ ಆಂತರಿಕ ಜೀವನದಲ್ಲಿ ಮಹತ್ ಪರಿವರ್ತನೆ ಉಂಟಾಗಿತ್ತು; ಆಧ್ಯಾತ್ಮಿಕ ಮಹಾಪೂರದಲ್ಲಿ ಸಿಕ್ಕಿಕೊಂಡು ತಮ್ಮನ್ನೂ ಇಡೀ ಜಗತ್ತನ್ನೂ ಮರೆತಿದ್ದರು; ದೂರಾತ್ ಸುದೂರವಾದ ದೇಶಕಾಲದ ಆಚೆ ಹೋಗಿದ್ದರು; ಮತ್ತು ಬ್ರಹ್ಮಭಾವ ದೊಡನೆ ಹಿಂದಿರುಗಿ ಈಗ ಎಲ್ಲ ವ್ಯಕ್ತಿಗಳನ್ನೂ ಮತ್ತು ವಸ್ತುಗಳನ್ನೂ ಒಂದು ಹೊಸ ದೃಷ್ಟಿಯಿಂದ ನೋಡುತ್ತಿದ್ದಾರೆ. ನಮ್ಮ ಚಿಂತಾಸಮೂಹಗಳ ಪರಂಪರೆಯಿಂದಲೇ ಕಾಲದ ಮತ್ತು ಅದರ ಪರಿಮಾಣದ ಅರಿವು ನಮಗೆ ಉಂಟಾಗುವುದು. ಆದ್ದರಿಂದ ಅತ್ಯಲ್ಪ ಕಾಲದಲ್ಲಿ ಅನೇಕ ಚಿಂತಾರಾಶಿಗಳು ಬಂದು ಹೋದರೆ ಅದು ದೀರ್ಘಕಾಲವಾಗಿ ನಮಗೆ ತೋರಿಬರುವುದು. ಹಿಂದೆ ಹೇಳಿದ ಎಂಟು ವರ್ಷದ ಅವಧಿಯಲ್ಲಿ ಶ್ರೀರಾಮ ಕೃಷ್ಣರ ಮನಸ್ಸಿನಲ್ಲಿ ಎಷ್ಟೆಲ್ಲ ಚಿಂತಾರಾಶಿಗಳು ಪ್ರಕಟವಾಗಿದ್ದವು ಎಂಬುದನ್ನು ನೆನೆಸಿ ಕೊಂಡರೆ ನಮಗೆ ಅಚ್ಚರಿಯಾಗುವುದು. ಆ ಅವಧಿಯು ಒಂದು ಯುಗಕ್ಕೆ ಸಮಾನವಾಗಿ ಅವರಿಗೆ ಕಂಡುಬಂದಿದ್ದರೆ ಆಶ್ಚರ್ಯವೇನಿಲ್ಲ.

7. ಶ್ರೀರಾಮಕೃಷ್ಣರು ಕಾಮಾರಪುಕುರದ ಸ್ತ್ರೀ–ಪುರುಷರನ್ನೆಲ್ಲ ಒಂದು ಅದ್ಭುತ ಪ್ರೇಮಬಂಧನದಿಂದ ಬಂಧಿಸಿದ್ದರು ಎಂಬುದನ್ನು ಭಾವಿಸಿದರೆ ವಿಸ್ಮಯ ವುಂಟಾಗುವುದು. ಶ್ರೀಮಂತರಿಂದ ಹಿಡಿದು ಅತ್ಯಂತ ಬಡವರವರೆಗೆ ಎಲ್ಲ ಜಾತಿ ಯವರೂ ಅವರನ್ನು ಶ್ರದ್ಧಾಭಕ್ತಿಯಿಂದ ಕಾಣುತ್ತಿದ್ದರು. ಧರ್ಮದಾಸ ಲಾಹಾನ ಮಗಳಾದ ಪ್ರಸನ್ನಮಯಿ (ಆಕೆ ವಿಧವೆ), ಬಾಲ್ಯ ಸ್ನೇಹಿತ ಗಯಾವಿಷ್ಣು, ಸರಳ ವಿಶ್ವಾಸಿಯಾದ ಶ್ರೀನಿವಾಸ ಶಾಂಖಾರಿ, ಪಾಯಿನ್ ಕುಟುಂಬದ ಮಹಿಳೆಯರು, ಅವರ ಭಿಕ್ಷಾಮಾತೆ ಧನಿ ಕಾಮಾರಿಣಿ—ಇವರೇ ಮುಂತಾದವರ ಭಕ್ತಿ ಪ್ರೀತಿಯ ವಿಷಯವನ್ನು ಶ್ರೀರಾಮಕೃಷ್ಣರ ಬಾಯಿಂದ ಕೇಳಿ ನಾವು ಮುಗ್ಧರಾಗುತ್ತಿದ್ದೆವು. ಅವರೆಲ್ಲರೂ ಯಾವಾಗಲೂ ಅವರೊಡನೆ ಇರುತ್ತಿದ್ದರು. ಯಾರಿಗೆ ಮನೆಗೆಲಸದಿಂದಾಗಿ

ಯಾವಾಗಲೂ ಬಿಡುವಾಗುತ್ತಿರಲಿಲ್ಲವೊ ಅವರು ಬೆಳಿಗ್ಗೆ ಮತ್ತು ಸಂಜೆ ಅಥವಾ ಮಧ್ಯಾಹ್ನ ಸಮಯ ಮಾಡಿಕೊಂಡು ಬರುತ್ತಿದ್ದರು. ಸ್ತ್ರೀಯರು ಅವರಿಗೆ ಊಟ ಮಾಡಿಸುವುದರಿಂದ ಮಹದಾನಂದವನ್ನು ಪಡೆಯುತ್ತಿದ್ದರು. ಆದ್ದರಿಂದ ಅನೇಕ ವಿಧದ ತಿಂಡಿತಿನಸುಗಳನ್ನು ಬರುವಾಗ ತಮ್ಮೊಡನೆ ತರುತ್ತಿದ್ದರು. ಗ್ರಾಮವಾಸಿಗಳ ಈ ಪ್ರೀತಿಯ ಮಾಧುರ್ಯ ಮತ್ತು ತಮ್ಮ ಸಂಬಂಧಿಕರ ಆದರಾತಿಥ್ಯ—ಇವುಗಳ ನಡುವೆ ಇದ್ದರೂ ಶ್ರೀರಾಮಕೃಷ್ಣರು ಯಾವಾಗಲೂ ದಿವ್ಯ ಭಾವದಲ್ಲಿಯೇ ಇರುತ್ತಿದ್ದರು.

8. ಈ ಬಾರಿ ಕಾಮಾರಪುಕುರಕ್ಕೆ ಬಂದಾಗ ಶ್ರೀರಾಮಕೃಷ್ಣರು ಒಂದು ಮಹತ್ಕಾರ್ಯವನ್ನು ಸಾಧಿಸಿದರು. ತಮ್ಮ ಪತ್ನಿಯು ಕಾಮಾರಪುಕುರಕ್ಕೆ ಬರುವುದು ಮತ್ತು ಬರದೆ ಇರುವುದು—ಇವೆರಡರ ಬಗ್ಗೆಯೂ ಅವರು ಉದಾಸೀನರಾಗಿದ್ದರು ನಿಜ. ಆದರೆ ಶಾರದಾದೇವಿಯವರು ಈಗ ಅವರ ಸೇವೆಗಾಗಿ ಬಂದಮೇಲೆ ಅವರನ್ನು ಕಡೆಗಣಿಸಲಿಲ್ಲ. ಅವರಿಗೆ ಎಲ್ಲ ವಿಷಯದಲ್ಲಿಯೂ ತರಬೇತಿಯಿತ್ತು ಅವರ ಹಿತಸಾಧನೆಗೆ ಪ್ರಯತ್ನಿಸಿದರು. ಶ್ರೀರಾಮಕೃಷ್ಣರಿಗೆ ವಿವಾಹವಾಗಿದೆಯೆಂದು ತಿಳಿದಾಗ ತೋತಾಪುರಿ ಅವರಿಗೆ ಹೇಳಿದ್ದ : "ಅದರಿಂದೇನಂತೆ? ಪತ್ನಿಯೊಡನಿದ್ದೂ ಯಾರ ತ್ಯಾಗ, ವೈರಾಗ್ಯ, ವಿವೇಕ ಸ್ವಲ್ಪವೂ ಕುಂಠಿತವಾಗದೆ ಇರುವುದೊ ಅವನು ಮಾತ್ರ ಬ್ರಹ್ಮದಲ್ಲಿ ಸುಪ್ರತಿಷ್ಠಿತ ನಾಗಿರುತ್ತಾನೆ. ಸ್ತ್ರೀ ಮತ್ತು ಪುರುಷ—ಇವರಿಬ್ಬರನ್ನೂ ಆತ್ಮಬುದ್ಧಿಯಿಂದ ಸಮಭಾವ ದಲ್ಲಿ ಯಾರು ಕಾಣುವರೊ ಮತ್ತು ಅವರೊಡನೆ ಅದೇ ಭಾವದಿಂದ ವ್ಯವಹರಿಸುವರೊ ಅವರಿಗೆ ಮಾತ್ರ ಯಥಾರ್ಥ ಬ್ರಹ್ಮಜ್ಞಾನವುಂಟಾಗಿರುತ್ತದೆ. ಸ್ತ್ರೀಪುರುಷರಲ್ಲಿ ಭೇದ ವನ್ನು ಕಾಣುವವರು ಅವನು ಎಂಥ ಸಾಧಕನಾಗಿದ್ದರೂ ಬ್ರಹ್ಮವಿದ್ಯೆಯಿಂದ ಬಹು ದೂರ ಉಳಿಯುತ್ತಾನೆ." ತೋತಾಪುರಿಯ ಈ ಮಾತನ್ನು ಸ್ಮರಿಸಿಕೊಂಡು ಈಗ ತಮ್ಮನ್ನು ತಾವು ಎಷ್ಟರಮಟ್ಟಿಗೆ ಬ್ರಹ್ಮದಲ್ಲಿ ಪ್ರತಿಷ್ಠಿತರಾಗಿದ್ದೇವೆ ಎಂಬುದನ್ನು ಪರೀಕ್ಷಿಸಿಕೊಳ್ಳಲು ಮತ್ತು ಪತ್ನಿಗೆ ಒಳಿತನ್ನುಂಟುಮಾಡಲು ಅವರು ಉದ್ಯುಕ್ತರಾದರು.

9. ಇದು ಕರ್ತವ್ಯವೆಂದು ಅವರಿಗೆ ಅನಿಸಿದರೆ ಶ್ರೀರಾಮಕೃಷ್ಣರು ಎಂದೂ ಯಾವ ಕಾರ್ಯವನ್ನೂ ಕಡೆಗಣಿಸುವುದಾಗಲಿ ಅರ್ಧಮಾಡಿ ಮುಗಿಸುವುದಾಗಲಿ ಮಾಡು ತ್ತಿರಲಿಲ್ಲ. ಈ ವಿಷಯದಲ್ಲಿಯೂ ಹಾಗೆಯೆ ಆಯಿತು. ಇಹಪರಗಳೆಲ್ಲ ವಿಷಯದಲ್ಲಿ ತಮ್ಮನ್ನೇ ಆಶ್ರಯಿಸಿರುವ ಚಿಕ್ಕ ವಯಸ್ಸಿನ ಪತ್ನಿಗೆ ಶಿಕ್ಷಣ ನೀಡುವುದು ತಮ್ಮ ಕರ್ತವ್ಯ ವೆಂದು ಪರಿಗಣಿಸಿದರು ಮತ್ತು ಪೂರ್ಣ ಮನಸ್ಸಿನಿಂದ ಅದನ್ನು ನೆರವೇರಿಸಿದರು. ಗುರುಹಿರಿಯರನ್ನು ಹೇಗೆ ಸೇವಿಸುವುದು, ಗೃಹಕೃತ್ಯಗಳನ್ನು ಯಾವ ರೀತಿ ಕುಶಲತೆ ಯಿಂದ ನೆರವೇರಿಸಬೇಕು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಭಗವಂತನಲ್ಲಿ ಹೇಗೆ ಶರಣಾಗ ಬೇಕು—ಇತ್ಯಾದಿ ಅನೇಕ ವ್ಯಾವಹಾರಿಕ ಆಧ್ಯಾತ್ಮಿಕ ವಿಷಯಗಳನ್ನು ಅವರಿಗೆ ಕಲಿಸಿ ದರು. ಈ ವಿಷಯವನ್ನು ಬೇರೆಕಡೆ* ವಿಸ್ತಾರವಾಗಿ ವಿವರಿಸಿರುವುದರಿಂದ ಇಲ್ಲಿ ಅದನ್ನು

*ಗುರುಭಾವ-ಪೂರ್ವಾರ್ಧ-ಅಧ್ಯಾಯ 2 ಮತ್ತು 4

ಪುನರುಚ್ಚರಿಸುವುದಿಲ್ಲ. ಇಲ್ಲಿ ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಶ್ರೀಮಾತೆ ಶಾರದಾದೇವಿ ಯವರು ಶ್ರೀರಾಮಕೃಷ್ಣರ ಪರಿಶುದ್ಧ ಪ್ರೇಮದಿಂದ ಸುತೃಪ್ತರಾಗಿ ಅವರನ್ನೇ ತಮ್ಮ ಆರಾಧ್ಯದೇವತೆಯಾಗಿ ಸ್ವೀಕರಿಸಿ ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಮುಂದಾದರು.

10, ಪತ್ನೀಸಂಬಂಧವಾದ ಕರ್ತವ್ಯ ಪಾಲನೆಯಲ್ಲಿ ಶ್ರೀ ರಾಮಕೃಷ್ಣರು ನಿರತ ರಾಗಿರುವುದನ್ನು ಭೈರವೀಬ್ರಾಹ್ಮಣಿಯು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ಅವರು ತೋತಾಪುರಿಯೊಡನೆ ಬೆರೆತು ವೇದಾಂತ ಸಾಧನೆ ಮಾಡುವುನ್ನು ಆಕ್ಷೇಪಿಸಿದ್ದಳು. ಮತ್ತು ಅದನ್ನು ನಿಲ್ಲಿಸಲು ಪ್ರಯತ್ನಿಸಿದ್ದಳು. ಅವರು ಸನ್ಯಾಸಿಯಾಗಿ ಅದ್ವೈತ ಸಾಧನೆ ಮಾಡಿದರೆ ಅವರ ಹೃದಯದಲ್ಲಿ ಭಗವತ್‌ಪ್ರೇಮ ಬತ್ತಿಹೋಗುವುದು ಎಂದು ಅವಳು ಶಂಕಿಸಿದ್ದಳು. ಈಗಲೂ ಅವಳ ಮನಸ್ಸಿನಲ್ಲಿ ಒಂದು ಶಂಕೆಯಿತ್ತು. ಶ್ರೀ ರಾಮಕೃಷ್ಣರು ಪತ್ನಿಯೊಡನೆ ಅಷ್ಟು ಸಲಿಗೆಯಿಂದ ವರ್ತಿಸಿದರೆ ಅವರ ಬ್ರಹ್ಮಚರ್ಯ ನಷ್ಟವಾಗಬಹುದೆಂದು ಅವಳು ಭಾವಿಸಿರಬೇಕು. ಆದರೆ ಶ್ರೀರಾಮಕೃಷ್ಣರಿಗೆ ಹಿಂದಿನಂತೆ ಬ್ರಾಹ್ಮಣಿಯ ಉಪದೇಶದಂತೆ ನಡೆಯಲಾಗಲಿಲ್ಲ. ಇದರಿಂದ ಭೈರವಿಗೆ ಮನಸ್ತಾಪವುಂಟಾಯಿತು. ಆದರೆ ಈಗ ಇದು ಇಷ್ಟರಿಂದಲೇ ಮುಕ್ತಾಯಗೊಳ್ಳಲಿಲ್ಲ. ಇದರಿಂದ ಅವಳ ಅಭಿಮಾನಕ್ಕೆ ಪೆಟ್ಟು ಬಿದ್ದು ಕೆಲಕಾಲದ ಮಟ್ಟಿಗೆ ಶ್ರೀ ರಾಮಕೃಷ್ಣರ ಮೇಲಿನ ಶ್ರದ್ಧೆಯೇ ಹೊರಟುಹೋಗುವಂತಾಯಿತು. ಇದನ್ನು ಎಷ್ಟೋ ಬಾರಿ ವ್ಯಕ್ತಪಡಿಸಿದ್ದಳೂ ಕೂಡ. ಅವಳು ಸಮೀಪವಿರುವಾಗ ಯಾರಾದರೂ ಆಧ್ಯಾತ್ಮಿಕ ವಿಷಯಕ ಪ್ರಶ್ನೆಯನ್ನು ಎತ್ತಿ ಶ್ರೀರಾಮಕೃಷ್ಣರಿಂದ ಪರಿಹಾರವನ್ನು ಕೇಳಿದಾಗ ಅವಳು ಕ್ರುದ್ಧಳಾಗಿ, 'ಅವನಿಗೇನು ಗೊತ್ತು ? ಅವನ ಕಣ್ಣು ತೆರೆದವಳು ನಾನು !' ಎಂದು ಹೇಳುತ್ತಿದ್ದಳು. ಸಣ್ಣ ಕಾರಣಕ್ಕಾಗಿ ಅಥವಾ ಯಾವ ಕಾರಣವೂ ಇಲ್ಲದೆ ಮನೆಯ ಮಹಿಳೆಯರ ಮೇಲೆ ರೇಗುತ್ತಿದ್ದಳು. ಶ್ರೀರಾಮಕೃಷ್ಣರು ಇದನ್ನೆಲ್ಲ ಗಮನಿಸಿದರೂ ಮೊದಲಿನಂತೆಯೇ ಅವಳನ್ನು ಗೌರವಿಸುತ್ತಿದ್ದರು. ಅವರ ನಿರ್ದೇಶ ದಂತೆ ಶ್ರೀಮಾತೆಯವರೂ ಭೈರವಿಯನ್ನು ಅತ್ತೆಯಂತೆ ಗೌರವಿಸಿ ಅವಳ ಸೇವೆ ಮಾಡುತ್ತಿದ್ದಳು ಮತ್ತು ಯಾವುದೇ ವಿಷಯದಲ್ಲಿಯೂ ಅವಳಿಗೆ ವಿರುದ್ಧ ಹೇಳು ತ್ತಿರಲಿಲ್ಲ.

11) ಅಹಂಕಾರ. ಅಭಿಮಾನ ವೃದ್ಧಿಯಾದರೆ ಎಂಥ ವಿಚಾರವಂತನೂ ಭ್ರಾಂತನಾಗುತ್ತಾನೆ. ಈ ಅಹಂಕಾರಕ್ಕೆ ಮತ್ತೆ ಮತ್ತೆ ಆಘಾತವುಂಟಾಗುವುದರಿಂದ ನಿರಂತರ ದುಃಖವನ್ನು ಅನುಭವಿಸಬೇಕಾಗುತ್ತದೆ. ಆದ್ದರಿಂದಲೇ ಮಾನವನು ಅಹಂ ಕಾರವನ್ನು ಮರ್ದಿಸಲು ಪ್ರಯತ್ನಿಸುತ್ತಾನೆ. ಬ್ರಾಹ್ಮಣಿಗೂ ಈಗ ಇದೇ ಅವಸ್ಥೆ ಯುಂಟಾಯಿತು. ಅವಳು ಅಹಂಕಾರದಲ್ಲಿ ಮೈಮರೆತು ಔಚಿತ್ಯವನ್ನು ಮೀರಿ ವರ್ತಿಸಿ ಮನೆಯಲ್ಲಿ ಒಮ್ಮೆ ಒಂದು ದೊಡ್ಡ ರಾದ್ಧಾಂತವನ್ನು ಮಾಡಿದಳು.

12) ಶ್ರೀನಿವಾಸ ಶಾಂಖಾರಿಯ ವಿಷಯವನ್ನು ಮೊದಲೇ ಪ್ರಸ್ತಾಪಿಸಿರುವೆವು. ಉಚ್ಚ ಜಾತಿಯವನಲ್ಲದಿದ್ದರೂ ಅವನು ಭಗವತ್‌ಭಕ್ತಿಯಲ್ಲಿ ಅನೇಕ ಬ್ರಾಹ್ಮಣರಿಗಿಂತ ತುಂಬ ಮುಂದಿದ್ದನು. ಶ್ರೀರಘುವೀರನ ಪ್ರಸಾದವನ್ನು ತೆಗೆದುಕೊಳ್ಳಲು ಅವನು ಒಂದುದಿನ ಶ್ರೀರಾಮಕೃಷ್ಣರ ಹತ್ತಿರ ಬಂದ. ಭಕ್ತನಾದ ಶ್ರೀನಿವಾಸನು ಬಂದದ್ದರಿಂದ ಅವರಿಗೆ ಮತ್ತು ಮನೆಯವರಿಗೆ ತುಂಬ ಆನಂದವಾಯಿತು. ಭೈರವಿ ಬ್ರಾಹ್ಮಣಿಯೂ ಕೂಡ ಶ್ರೀನಿವಾಸನ ಭಕ್ತಿಯನ್ನು ಕಂಡು ಮೆಚ್ಚಿದ್ದಳು. ಮಧ್ಯಾಹ್ನದ ವರೆಗೆ ಅನೇಕ ಭಗವದ್ವಿಷಯದಲ್ಲಿ ಕಾಲ ಕಳೆದ ಮೇಲೆ ಅವನು ಶ್ರೀರಘುವೀರನ ಪ್ರಸಾದವನ್ನು ಸ್ವೀಕರಿಸಲು ಕುಳಿತನು. ಭೋಜನದ ನಂತರ ಅವನು ಸಂಪ್ರದಾಯ ದಂತೆ ತನ್ನ ಎಂಜಲೆಲೆಯನ್ನು ಎತ್ತಿ ಉಂಡ ಪ್ರದೇಶವನ್ನು ಶುದ್ಧಗೊಳಿಸಲು ಪ್ರಾರಂಭಿಸಿದಾಗ ಭೈರವಿಯು ಅವನನ್ನು ತಡೆದಳು. ''ನಾವೇ ಅದನ್ನು ಮಾಡುತ್ತೇವೆ'' ಎಂದಳು. ಅವಳು ಮತ್ತೆ ಮತ್ತೆ ಆ ರೀತಿ ಹೇಳಲು ಶ್ರೀನಿವಾಸನು ಅದನ್ನು ಹಾಗೆಯೇ ಬಿಟ್ಟು ಮನೆಗೆ ಹೋದನು.

13) ಹಳ್ಳಿಗಳಲ್ಲಿ ಸಾಮಾನ್ಯ ಸಾಮಾಜಿಕ ನಿಯಮಗಳನ್ನು ಉಲ್ಲಂಘಿಸಿದರೆ ತುಂಬ ಗೊಂದಲವುಂಟಾಗುತ್ತದೆ ಮತ್ತು ಸಾಮೂಹಿಕ ಭಾವನೆ ಕೆರಳುತ್ತದೆ. ಬ್ರಾಹ್ಮಣ ಹೆಂಗಸಾದ ಭೈರವಿಯು ಶ್ರೀನಿವಾಸನ ಎಂಜಲನ್ನು ತೊಳೆಯುವುದನ್ನು ತಿಳಿದು ಅಲ್ಲಿ ನೆರೆದಿದ್ದ ಬ್ರಾಹ್ಮಣ ಮಹಿಳೆಯರೆಲ್ಲ ಅದಕ್ಕೆ ಆಕ್ಷೇಪವೆತ್ತಿದ್ದರು. ಭೈರವಿಯು ಅವರ ಆಕ್ಷೇಪಣೆಗೆ ಕಿವಿಗೊಡುವವಳಲ್ಲ. ಇದರಿಂದ ಗಲಾಟೆ ಶುರುವಾಯಿತು. ಈಗ ಹೃದಯನು ಮಧ್ಯಸ್ಥಿಕೆ ವಹಿಸಲು ಬಂದನು. ಇಷ್ಟು ಸಣ್ಣ ವಿಷಯಕ್ಕೆ ಜಗಳಕಾಯುವುದು ಬೇಡವೆಂದು ಶ್ರೀನಿವಾಸನ ಎಂಜಲನ್ನು ತೊಳೆಯ ಬೇಡಿರೆಂದು ಭೈರವಿಗೆ ಬಹಳವಾಗಿ ಹೇಳಿದನು. ಭೈರವೀ ಕೇಳಲಿಲ್ಲ. ಈಗ ಅವರಿಬ್ಬರ ನಡುವೆ ಮಾತಿನ ಹೋರಾಟ ಶುರುವಾಯಿತು. ಹೃದಯನು ಕಿಡಿಕಿಡಿಯಾಗಿ ''ನೀನು ಈ ರೀತಿ ಮಾಡಿದರೆ ನಿನ್ನನ್ನು ಮನೆಯಲ್ಲಿ ಇರಗೊಡುವುದಿಲ್ಲ.'' ಎಂದು ಆರ್ಭಟಿಸಿದ. ಭೈರವಿಯು ಈಗ ನಿಜವಾಗಿಯೂ ಭೈರವಿಯೇ ಆಗಿ ಭೈರವನಾದ ಮಾಡಿದಳು: ''ಇರಗೊಡದಿದ್ದರೆ ಏನಂತೆ ? ಈಗ ಶೀತಲೆಯ ಮನೆಯಲ್ಲಿ (ಶೀತಲಾದೇವಿಯ ಗುಡಿಯಲ್ಲಿ) ಮನಸಾ ಮಲಗುವಳು ಅಷ್ಟೆ.''* ಈಗ ಮನೆಯವರೆಲ್ಲ ಸೇರಿ ಅವರ ಜಗಳ ನಿಲ್ಲಿಸಿದರು, ತುಂಬ ಅನುನಯ ವಿನಯದಿಂದ ಭೈರವಿಯನ್ನು ಸಮಾಧಾನ ಪಡಿಸಿ ಅವಳು ಎಂಜಲನ್ನು ತೊಳೆಯದಂತೆ ಮಾಡಿದರು.

14) ತುಂಬ ಸ್ವಾಭಿಮಾನಿಯಾದ ಬ್ರಾಹ್ಮಣಿಗೆ ಅಂದು ತೀವ್ರ ಆಘಾತ ಉಂಟಾಯಿತು. ಕೋಪ ತಣ್ಣಗಾದ ಮೇಲೆ ಅವಳು ಶಾಂತವಾಗಿ ಆತ್ಮ-ವಿಮರ್ಶೆ ಮಾಡಿಕೊಂಡಳು, ಆಗ ಅವಳಿಗೆ ತನ್ನ ತಪ್ಪು ಅರಿವಾಯಿತು. ಇಷ್ಟೆಲ್ಲ ಆದಮೇಲೆ

---

* ಭೈರವಿಯು ತನ್ನನ್ನು ಕ್ರುದ್ಧಸರ್ಪಕ್ಕೆ ಹೋಲಿಸಿಕೊಳ್ಳುತ್ತಾಳೆ.

ಇನ್ನು ಇಲ್ಲಿ ಇರಬಾರದೆನಿಸಿತು ಅವಳಿಗೆ, ಹಾಗೆ ಇರುವುದೂ ತನಗೆ ಶ್ರೇಯಸ್ಸಲ್ಲ ಎಂದು ಭಾವಿಸಿದಳು. ಸದಸತ್ ವಿಚಾರಸಂಪನ್ನನಾದ ಸಾಧಕನು ತನ್ನ ಅಂತರ್ಯವನ್ನು ವೀಕ್ಷಿಸತೊಡಗಿದರೆ ಯಾವ ಮಲಿನತೆಯೂ ಅವನಿಗೆ ಕಾಣದಂತೆ ಅಡಗಿಕೊಳ್ಳಲಾರದು. ಬ್ರಾಹ್ಮಣಿಗೂ ಇದೇ ರೀತಿಯಾಯಿತು. ತನ್ನ ದೋಷವನ್ನರಿತು ಅವಳು ಪಶ್ಚಾತ್ತಾಪಪಟ್ಟಳು. ಕೆಲವು ದಿನಗಳನಂತರ ಹೂವನ್ನು ತಂದು ತಾನೇ ಮಾಲೆ ಮಾಡಿದಳು. ಅದಕ್ಕೆ ಚಂದನವನ್ನು ಬೆರಸಿ ಗೌರಾಂಗಜ್ಞಾನದಲ್ಲಿ ಶ್ರೀ ರಾಮಕೃಷ್ಣರನ್ನು ಆದರಿಂದ ಅಲಂಕರಿಸಿ ಅವರಿಂದ ಕ್ಷಮೆ ಯಾಚಿಸಿದಳು. ಅನಂತರ ಕಾಮಾರಪುಕುರವನ್ನು ಬಿಟ್ಟು ಕಾಶೀಧಾಮದ ಕಡೆ ಹೊರಟಳು. ಆಕೆ ಆರು ವರ್ಷಗಳು ಶ್ರೀ ರಾಮಕೃಷ್ಣರೊಡನಿದ್ದಳು.

15) ಸುಮಾರು ಏಳು ತಿಂಗಳು ಕಾಮಾರಪುರದಲ್ಲಿದ್ದು ಶ್ರೀ ರಾಮಕೃಷ್ಣರು ೧೮೬೭ರ ಕೊನೆಯಲ್ಲಿ ದಕ್ಷಿಣೇಶ್ವರಕ್ಕೆ ಹಿಂದಿರುಗಿದರು. ಈ ವೇಳೆಗೆ ಅವರು ತಮ್ಮ ಮೊದಲಿನ ಆರೋಗ್ಯವನ್ನು ಪಡೆದಿದ್ದರು.

ಹದಿನೆಂಟನೆಯ ಅಧ್ಯಾಯ

ತೀರ್ಥಯಾತ್ರೆ ಮತ್ತು ಹೃದಯರಾಮನ ವೃತ್ತಾಂತ

1. ಶ್ರೀರಾಮಕೃಷ್ಣರ ತೀರ್ಥಯಾತ್ರೆಯ ನಿರ್ಧಾರ 2. ಆ ಯಾತ್ರೆಯ ಕಾಲ ನಿರ್ಣಯ 3. ಯಾತ್ರೆಯ ವ್ಯವಸ್ಥೆ 4. ವೈದ್ಯನಾಥ ಮತ್ತು ದರಿದ್ರನಾರಾಯಣ ಸೇವೆ 5. ದಾರಿಯಲ್ಲಿ ವಿಘ್ನ 6. ಕೇದಾರ ಘಾಟ್‌ನಲ್ಲಿ ವಾಸ 7. ವಿಶ್ವನಾಥ ದರ್ಶನ ಮತ್ತು ತ್ರೈಲಿಂಗಸ್ವಾಮಿಗಳ ಭೇಟಿ 8. ಪ್ರಯಾಗದಲ್ಲಿ ಶ್ರೀರಾಮ ಕೃಷ್ಣರು 9. ಬೃಂದಾವನದಲ್ಲಿ ನಿಧುವನ ಮುಂತಾದ ತೀರ್ಥದರ್ಶನ 10. ಮತ್ತೆ ಕಾಶಿಗೆ ಭೇಟಿ 11. ಕಾಶಿಯಲ್ಲಿ ಬ್ರಾಹ್ಮಣಿಯ ದರ್ಶನ 12. ವೈಣಿಕ ಮಹೇಶನನ್ನು ಭೇಟಿಯಾದುದು 13. ದಕ್ಷಿಣೇಶ್ವರಕ್ಕೆ ಹಿಂದಿರುಗಿದುದು 14. ಹೃದಯನ ಪತ್ನಿಯ ಸಾವು ಮತ್ತು ಅವನ ಆಧ್ಯಾತ್ಮಿಕ ವ್ಯಾಕುಲತೆ 15. ಹೃದಯನ ಅದ್ಭುತ ದರ್ಶನ 16. ಹೃದಯನ ಮನಸ್ಸಿಗೆ ಮಂಕು ಕವಿದುದು 17. ಹೃದಯನ ಸಾಧನೆಗೆ ವಿಘ್ನ 18. ಹೃದಯನ ಮನೆಯಲ್ಲಿ ದುರ್ಗಾ ಪೂಜೆ 19. ಪೂಜೆಯ ಸಮಯದಲ್ಲಿ ಅವನು ಶ್ರೀರಾಮಕೃಷ್ಣರನ್ನು ನೋಡಿದುದು 20. ದುರ್ಗಾಪೂಜೆಯ ಕೊನೆಯ ಸಮಾರಂಭ.

1) ಈಗ ಮಥುರನಿಗೆ ತೀರ್ಥಯಾತ್ರೆ ಮಾಡುವ ಅಭಿಲಾಷೆ ಉಂಟಾಯಿತು. ತನ್ನ ಪರಿವಾರದವರನ್ನೆಲ್ಲ ಕರೆದುಕೊಂಡು ಹೋಗಬೇಕೆಂದು ಅವನು ಮನಸ್ಸು ಮಾಡಿದನು. ಶ್ರೀರಾಮಕೃಷ್ಣರನ್ನೂ ಒತ್ತಾಯಿಸಿ ಅವರನ್ನು ಯಾತ್ರೆಗೆ ಬರಲು ಒಪ್ಪಿಸಿದನು, ವೃದ್ಧ ತಾಯಿ ಚಂದ್ರಮಣಿ ಮತ್ತು ಹೃದಯ ಇವರೂ ಅವರೊಡನೆ ಹೋಗುವುದೆಂದು ನಿರ್ಧಾರವಾಯಿತು.*

2) ಶುಭದಿನದಂದು ಶ್ರೀರಾಮಕೃಷ್ಣರೊಡಗೂಡಿ ಮಥುರನು ಯಾತ್ರೆ ಪ್ರಾರಂಭಿಸಿದನು. ಅಂದು ಕ್ರಿ.ಶ. ೧೮೬೮, ಜಾನುವರಿ ೨೭, ಶ್ರೀರಾಮಕೃಷ್ಣರ ತೀರ್ಥ ಯಾತ್ರೆಯ ವಿಷಯವನ್ನು ಬೇರೆಕಡೆ† ವಿಸ್ತಾರವಾಗಿ ಹೇಳಿರುವೆವು. ಆದ್ದರಿಂದ ಇದರ ವಿಷಯದಲ್ಲಿ ಹೃದಯನು ಏನು ಹೇಳಿರುವನೊ ಅದನ್ನು ಮಾತ್ರ ಇಲ್ಲಿ ಪ್ರಸ್ತುತ ಪಡಿಸುತ್ತೇವೆ.

3) ಹೃದಯನು ಹೇಳುತ್ತಾನೆ, ಮಥುರನ ಯಾತ್ರಿಕರ ಗುಂಪಿನಲ್ಲಿ ನೂರ

---

*ಚಂದ್ರಮಣಿಯು ಹೋಗಲಿಲ್ಲವೆಂದು ಕೆಲವರು ಹೇಳುತ್ತಾರೆ.

†ಗುರುಭಾವ, ಉತ್ತರಾರ್ಧ, 3ನೇ ಅಧ್ಯಾಯ.

ಕ್ಕಿಂತಲೂ ಹೆಚ್ಚು ಜನರಿದ್ದರಂತೆ, ದ್ವಿತೀಯ ಶ್ರೇಣಿಯ ಒಂದು ಭೋಗಿಯನ್ನೂ ಮತ್ತು ತೃತೀಯ ಶ್ರೇಣಿಗಳ ಮೂರು ಬೋಗಿಗಳನ್ನೂ ಅವನ ಯಾತ್ರಿಕರಿಗಾಗಿ ರಿಸರ್ವ್ ಮಾಡಿಸಲಾಗಿತ್ತು. ಆ ನಾಲ್ಕು ಭೋಗಿಗಳು ಕಾಶಿಯವರೆಗೆ ಮಧ್ಯದಲ್ಲಿ ಎಲ್ಲಿಬೇಕಾದರೂ ಉಳಿಯಬಹುದಾಗಿದ್ದವು.

4) ದೇವಘರದಲ್ಲಿ ವೈದ್ಯನಾಥನ ದರ್ಶನಕ್ಕಾಗಿ ಮಥುರನು ಕೆಲವು ದಿನ ಉಳಿದಿದ್ದನು. ಇಲ್ಲಿ ಒಂದು ವಿಶೇಷ ಘಟನೆ ಸಂಭವಿಸಿತು. ಅಲ್ಲಿ ಹಳ್ಳಿಯೊಂದರಲ್ಲಿ ಜನರ ದುರ್ದಶೆಯನ್ನು ನೋಡಿ ಶ್ರೀರಾಮಕೃಷ್ಣರ ಹೃದಯ ಕರಗಿತು. ಮಥುರನಿಗೆ ಹೇಳಿ ಅವರಿಗೆಲ್ಲ ಊಟ ಹಾಕಿಸಿದರು ಮತ್ತು ಪ್ರತಿಯೊಬ್ಬರಿಗೂ ಒಂದೊಂದು ಬಟ್ಟೆ ಕೊಡಿಸಿದರು.

5) ವೈದ್ಯನಾಥದಿಂದ ನೇರವಾಗಿ ಮಥುರನು ಕಾಶಿಗೆ ಹೋದನು. ಮಾರ್ಗದಲ್ಲಿ ಉಲ್ಲೇಖಾರ್ಹ ಯಾವ ಘಟನೆಗಳೂ ಸಂಭವಿಸಲಿಲ್ಲ. ಕಾಶಿಯ ಹತ್ತಿರದ ಒಂದು ಸ್ಟೇಷನ್ನಿನಲ್ಲಿ ಶ್ರೀರಾಮಕೃಷ್ಣ ಮತ್ತು ಹೃದಯ ಕೆಳಗಿಳಿದಿದ್ದರು. ಅವರು ಮತ್ತೆ ಹತ್ತುತ್ತಿದ್ದಂತೆಯೇ ಗಾಡಿ ಹೊರಟುಹೋಯಿತು. ಮಥುರನಿಗೆ ಗಾಬರಿಯಾಯಿತು. ಕಾಶಿಗೆ ಹೋದಕೂಡಲೆ ಶ್ರೀರಾಮಕೃಷ್ಣರನ್ನು ಮುಂದಿನ ಗಾಡಿಯಲ್ಲಿ ಕಳಿಸಬೇಕೆಂದು ಆ ಸ್ಟೇಷನ್ನಿಗೆ ತಂತಿ ಕಳಿಸಿದ. ಆದರೆ ಬೇರೊಂದು ಗಾಡಿ ಬರುವವರೆಗೆ ಕಾಯಬೇಕಾಗಲಿಲ್ಲ. ರೈಲ್ವೇ ವಿಶೇಷ ಅಧಿಕಾರಿಯಾದ ರಾಜೇಂದ್ರಲಾಲ್ ಬಂದ್ಯೋಪಾಧ್ಯಾಯನು ಒಂದು ವಿಶೇಷ ಗಾಡಿಯಲ್ಲಿ ಹೋಗುತ್ತಿದ್ದನು. ಶ್ರೀರಾಮಕೃಷ್ಣರ ಪರಿಸ್ಥಿತಿಯನ್ನು ಕಂಡು ಅವರನ್ನು ತನ್ನ ಗಾಡಿಯಲ್ಲಿ ಕಾಶಿಗೆ ಕರೆದುಕೊಂಡು ಹೋದನು. ರಾಜೇಂದ್ರಲಾಲನ ವಾಸ ಕಲಕತ್ತೆಯ ಬಾಗಬಜಾರಿನಲ್ಲಿ.

6) ಕಾಶಿಯಲ್ಲಿ ಮಥುರನು ಕೇದಾರಘಾಟ್‌ನ ಹತ್ತಿರ ಎರಡು ಮನೆಗಳನ್ನು ಬಾಡಿಗೆ ತೆಗೆದುಕೊಂಡನು. ಪೂಜೆ ದಾನ ಇತ್ಯಾದಿಗಳಿಗೆ ಅವನು ಮುಕ್ತಹಸ್ತದಿಂದ ಖರ್ಚುಮಾಡಿದನು. ಅವನು ಮನೆಯಿಂದ ಹೊರಗೆ ಹೋಗುವಾಗ ಬೆಳ್ಳಿಯ ಛತ್ರಿಯನ್ನು ಅವನ ತಲೆಯಮೇಲೆ ಹಿಡಿಯುತ್ತಿದ್ದರು, ಆಳುಗಳು ಬೆಳ್ಳಿಯ ದಂಡ ಹಿಡಿದು ಅವನ ಹಿಂದೆ, ಮುಂದೆ ಹೋಗುತ್ತಿದ್ದರು, ಜನ ಅದನ್ನು ನೋಡಿ ಮಥುರನು ಒಬ್ಬ ರಾಜನಿರಬೇಕೆಂದೇ ಭಾವಿಸಿದ್ದರು.

7) ಶ್ರೀರಾಮಕೃಷ್ಣರು ಕಾಶಿಯಲ್ಲಿದ್ದಾಗ ಹೆಚ್ಚುಕಡಮೆ ಪ್ರತಿದಿನವೂ ಪಲ್ಲಕ್ಕಿಯಲ್ಲಿ ಹೋಗಿ ಶ್ರೀ ವಿಶ್ವನಾಥನ ದರ್ಶನ ಮಾಡಿಕೊಂಡುಬರುತ್ತಿದ್ದರು. ಹೃದಯನೂ ಅವರೊಡನಿರುತ್ತಿದ್ದ. ಹೋಗುತ್ತಿರುವಾಗಲೇ ಅವರು ಭಾವಾವಿಷ್ಟರಾಗುತ್ತಿದ್ದರು: ದೇವರದರ್ಶನವಾದಮೇಲಂತು ಹೇಳಬೇಕಾಗಿಯೇ ಇಲ್ಲ! ಎಲ್ಲ ದೇವಸ್ಥಾನಗಳಲ್ಲಿಯೂ

---

*ಗುರುಭಾವ, ಪೂರ್ವಾರ್ಧ, 7ನೇ ಅಧ್ಯಾಯ.

ಅವರಿಗೆ ಭಾವಾವೇಶವುಂಟಾದರೂ ಕೇದಾರನಾಥ ಮಂದಿರದಲ್ಲಿ ಅವರಿಗೆ ವಿಶೇಷ ಭಾವಾವೇಶ ಉಂಟಾಗಿತ್ತು. ದೇವಸ್ಥಾನಕ್ಕೆ ಹೋಗುವುದು ಮಾತ್ರವಲ್ಲದೆ ಕಾಶಿಯಲ್ಲಿದ್ದ ಪ್ರಸಿದ್ಧ ಸಾಧುಗಳನ್ನು ನೋಡಲು ಹೋಗುತ್ತಿದ್ದರು. ಅವರು ತ್ರೈಲಿಂಗ ಸ್ವಾಮಿಯನ್ನು ನೋಡಲು ಅನೇಕಬಾರಿ ಹೋಗಿದ್ದರು. ತ್ರೈಲಿಂಗ ಸ್ವಾಮಿಗಳು ಆಗ ಮೌನ ವ್ರತದಲ್ಲಿದ್ದರು. ಮಣಿಕರ್ಣಿಕಾ ಘಾಟಿನಲ್ಲಿ ವಾಸಿಸುತ್ತಿದ್ದರು. ಮೊದಲನೆಯ ಬಾರಿ ಹೋದಾಗ ಸ್ವಾಮೀಜಿಯು ನಶ್ಯದ ಡಬ್ಬಿಯನ್ನು ಅವರ ಮುಂದೆ ಹಿಡಿದು ಆದರದಿಂದ ಬರಮಾಡಿಕೊಂಡರು. ಶ್ರೀರಾಮಕೃಷ್ಣರು ಅವರ ಅಂಗಾಂಗಗಳನ್ನೆಲ್ಲ ಪರೀಕ್ಷಿಸಿ ಹೃದಯನಿಗೆ ಹೇಳಿದರು: ''ಇವರಲ್ಲಿ ನಿಜವಾದ ಪರಮಹಂಸರ ಲಕ್ಷಣಗಳೆಲ್ಲ ಇವೆ. ಇವರು ಸಾಕ್ಷಾತ್ ವಿಶ್ವೇಶ್ವರ.'' ಸ್ವಾಮೀಜೀ ಮಣಿಕರ್ಣಿಕದ ಪಕ್ಕದಲ್ಲಿಯೇ ಒಂದು ಘಾಟನ್ನು ಕಟ್ಟಿಸಲು ನಿಶ್ಚಯಿಸಿದರು. ಶ್ರೀರಾಮಕೃಷ್ಣರ ಕೇಳಿಕೆಯಂತೆ ಹೃದಯನು ಕೆಲವು ಗುದ್ದಲಿ ಮಣ್ಣನ್ನು ಎತ್ತಿಹಾಕಿ ಆ ಕೆಲಸದಲ್ಲಿ ಸಹಾಯ ಮಾಡಿದನು. ಅನಂತರ ಒಂದು ದಿನ ಸ್ವಾಮಿಗಳನ್ನು ಮಥುರನ ನಿವಾಸಕ್ಕೆ ಆಮಂತ್ರಿಸಿ ಶ್ರೀರಾಮಕೃಷ್ಣರು ತಮ್ಮ ಕೈಯಿಂದಲೇ ಪಾಯಸವನ್ನು ಅವರಿಗೆ ಉಣಿಸಿದರು.

8) ಆರೇಳುದಿನ ಕಾಶಿಯಲ್ಲಿ ತಂಗಿದ್ದು ಅನಂತರ ಎಲ್ಲರೂ ಪ್ರಯಾಗಕ್ಕೆ ಹೋದರು. ತ್ರಿವೇಣೀ ಸಂಗಮದಲ್ಲಿ ಸ್ನಾನಮಾಡಿ ಮೂರು ರಾತ್ರಿ ಅಲ್ಲಿ ಕಳೆದರು. ಮಥುರನೇ ಮೊದಲಾಗಿ ಎಲ್ಲರೂ ಶಾಸ್ತ್ರಾನುಸಾರವಾಗಿ ತಲೆಯ ಮುಂಡನ ಮಾಡಿಕೊಂಡರು. ಆದರೆ ಶ್ರೀರಾಮಕೃಷ್ಣರು ಹಾಗೆ ಮಾಡಲಿಲ್ಲ. 'ನಾನು ಮಾಡಬೇಕಾದ ಅವಶ್ಯಕತೆಯಿಲ್ಲ' ಎಂದರು. ಪ್ರಯಾಗದಿಂದ ಪುನಃ ಕಾಶಿಗೆ ಹಿಂದಿರುಗಿ, ಅಲ್ಲಿ ಮತ್ತೆ ಹದಿನೈದು ದಿನಗಳಿದ್ದರು. ಅಲ್ಲಿಂದ ಎಲ್ಲರೂ ಬೃಂದಾವನಕ್ಕೆ ಹೋದರು.

9) ಬೃಂದಾವನದಲ್ಲಿ ನಿಧುವನದ ಹತ್ತಿರದಲ್ಲಿ ಒಂದು ಮನೆಯಲ್ಲಿ ಮಥುರನು ತಂಗಿದನು. ಕಾಶಿಯಲ್ಲಿಯಂತೆ ಇಲ್ಲಿಯೂ ಅವನು ತನ್ನ ವೈಭವವನ್ನು ಮೆರೆದನು ಮತ್ತು ಯಥೇಷ್ಟ ದಾನಮಾಡಿದನು. ಅವನು ಪತ್ನಿಯೊಡನೆ ಹೋಗಿ ಎಲ್ಲ ದೇವಸ್ಥಾನಗಳನ್ನು ಸಂದರ್ಶಿಸುತ್ತಿದ್ದನು. ಪ್ರತಿಯೊಂದು ದೇವತೆಗೆ ಪ್ರಣಾಮ ಮಾಡುವಾಗಲೂ ಚಿನ್ನದ ನಾಣ್ಯಗಳನ್ನು ಗೌರವಾರ್ಥವಾಗಿ ಕೊಡುತ್ತಿದ್ದನು. ಶ್ರೀರಾಮಕೃಷ್ಣರು ಅಲ್ಲಿ ನಿಧುವನವನ್ನಲ್ಲದೆ ರಾಧಾಕುಂಡ, ಶ್ಯಾಮಕುಂಡ ಮತ್ತು ಗಿರಿಗೋವರ್ಧನ ಇವುಗಳ ದರ್ಶನ ಮಾಡಿದರು. ಗೋವರ್ಧನದಲ್ಲಿ ಅವರು ಭಾವಾವೇಶದಿಂದ ಗಿರಿಯ ತುದಿಗೆ ಹೋಗಿದ್ದರು. ಇಲ್ಲಿಯೂ ಅವರು ಅನೇಕ ಸಾಧುಸಂತರನ್ನು ಸಂದರ್ಶಿಸಿದರು. ನಿಧುವನದಲ್ಲಿ ಗಂಗಾಮಾತೆಯನ್ನು ನೋಡಿ ಬಹಳ ಸಂತೋಷವಾಯಿತು, ಅವರಿಗೆ. ಆಕೆಯ ಅಂಗಲಕ್ಷಣಗಳನ್ನೆಲ್ಲ ಹೃದಯನಿಗೆ ತೋರಿಸಿ ಹೇಳಿದರು. ''ಇವಳು ತುಂಬ ಉನ್ನತಾವಸ್ಥೆಯಲ್ಲಿ ಇರುವಳು.''

10) ಬೃಂದಾವನದಲ್ಲಿ ಸುಮಾರು ಹದಿನೈದು ದಿನಗಳಿದ್ದು ಎಲ್ಲರೂ ಮತ್ತೆ ಕಾಶಿಗೆ ಬಂದರು. ವಿಶ್ವನಾಥನ ವಿಶೇಷ ವೇಷಭೂಷಣವನ್ನು ನೋಡುವ ಸಲುವಾಗಿ

೧೮೬೮ರ ಮಧ್ಯಭಾಗದವರೆಗೂ ಅಲ್ಲಿಯೇ ಇದ್ದರು. ಈ ಅವಧಿಯಲ್ಲಿ ಶ್ರೀ ರಾಮ ಕೃಷ್ಣರು ಶ್ರೀ ಅನ್ನಪೂರ್ಣೆಯ ಸುವರ್ಣಮಯ ಮೂರ್ತಿಯನ್ನು ನೋಡಿದ್ದರು.

11) ಶ್ರೀರಾಮಕೃಷ್ಣರು ಕಾಶಿಯಲ್ಲಿ ಭೈರವಿ ಬ್ರಾಹ್ಮಣಿಯನ್ನು ಸಂಧಿಸಿದ್ದರು. ಅವಳು ತಂಗಿದ್ದ 'ಅರವತ್ತನಾಲ್ಕು ಯೋಗಿನಿಯರು' ಎಂಬ ಸ್ಥಳಕ್ಕೆ ಅವರು ಅನೇಕ ಬಾರಿ ಹೋಗಿದ್ದರು. ಬ್ರಾಹ್ಮಣಿಯು ಅಲ್ಲಿ ಮೋಕ್ಷದಾ ಎಂಬ ಮಹಿಳೆಯೊಡನೆ ವಾಸಿಸುತ್ತಿದ್ದಳು. ಆ ಮಹಿಳೆಯ ಭಕ್ತಿ ವಿಶ್ವಾಸವನ್ನು ಕಂಡು ಶ್ರೀರಾಮಕೃಷ್ಣರು ಮುಗ್ಧರಾದರು. ಬೃಂದಾವನಕ್ಕೆ ಹೋಗುವಾಗ ಬ್ರಾಹ್ಮಣಿಯೂ ಶ್ರೀರಾಮಕೃಷ್ಣರೊಡನೆ ಹೋಗಿದ್ದಳು. ಶ್ರೀ ರಾಮಕೃಷ್ಣರು ಅವಳಿಗೆ ಬೃಂದಾವನದಲ್ಲಿಯೇ ಇರಲು ಸಲಹೆಯಿತ್ತರು. ಶ್ರೀರಾಮಕೃಷ್ಣರು ಅಲ್ಲಿಂದ ಹೊರಟುಬಂದು ಸ್ವಲ್ಪಕಾಲದನಂತರ ಬ್ರಾಹ್ಮಣಿಯು ಬೃಂದಾವನದಲ್ಲಿ ದೇಹಬಿಟ್ಟಳು, ಎಂದು ಹೃದಯನು ಹೇಳುತ್ತಾನೆ.

12) ಬೃಂದಾವನದಲ್ಲಿದ್ದಾಗ ಶ್ರೀರಾಮಕೃಷ್ಣರಿಗೆ ವೀಣೆ ಕೇಳಬೇಕೆಂದು ಅನಿಸಿತು, ಆದರೆ ಆಗ ಬೃಂದಾವನದಲ್ಲಿ ಯಾರೂ ವೀಣಾವಾದಕರಿಲ್ಲದಿದ್ದುದರಿಂದ ಅದು ಸಾಧ್ಯವಾಗಲಿಲ್ಲ. ಕಾಶಿಗೆ ಬಂದಮೇಲೆ ಅವರಿಗೆ ಮತ್ತೆ ಅದೇ ಇಚ್ಛೆಯಾಯಿತು. ಕಾಶಿಯಲ್ಲಿ ಮಹೇಶಚಂದ್ರ ಸರ್ಕಾರ್ ಎಂಬ ಪ್ರಸಿದ್ಧ ವೈಣಿಕ ವಿದ್ವಾಂಸನಿದ್ದ. ಶ್ರೀರಾಮಕೃಷ್ಣರು ಹೃದಯನೊಡನೆ ಅವನ ಮನೆಗೆ ಹೋಗಿ ತಮಗಾಗಿ ವೀಣೆ ಬಾರಿಸಬೇಕೆಂದು ಕೇಳಿಕೊಂಡರು. ಅವನು ತುಂಬ ಆನಂದದಿಂದ ಬಹಳ ಹೊತ್ತು ವೀಣೆಯನ್ನು ನುಡಿಸಿದನು. ಅದರ ಮಧುರ ಝೇಂಕಾರವನ್ನು ಕೇಳುತ್ತ ಶ್ರೀರಾಮಕೃಷ್ಣರು ಭಾವಾವಿಷ್ಟರಾದರು. ಅನಂತರ ಅರ್ಧಬಾಹ್ಯದಶೆಗೆ ಬಂದು ಶ್ರೀ ಜಗನ್ಮಾತೆಯನ್ನು ಪ್ರಾರ್ಥಿಸಿದರು : "ತಾಯಿ, ನನಗೆ ಪ್ರಜ್ಞೆಯನ್ನು ನೀಡು. ನಾನು ಸರಿಯಾಗಿ ವೀಣೆ ಕೇಳಬೇಕು." ಅನಂತರ ಬಹಿಃಪ್ರಜ್ಞೆಯುಳ್ಳವರಾಗಿ ಆನಂದದಿಂದ ವೀಣೆಯನ್ನು ಕೇಳಿದರು. ಮಧ್ಯೆ ಮಧ್ಯೆ ಅದರ ಧ್ವನಿಯೊಡನೆ ತಮ್ಮ ಧ್ವನಿಯನ್ನು ಸೇರಿಸುತ್ತಿದ್ದರು. ಸಂಜೆ ಐದುಗಂಟೆಯಿಂದ ರಾತ್ರಿ ಎಂಟುಗಂಟೆಯವರೆಗೆ ವೀಣಾಗಾನವನ್ನು ಕೇಳಿದರು. ಅನಂತರ ಮಹೇಶನ ಒತ್ತಾಯದಂತೆ ಅಲ್ಲಿ ಸ್ವಲ್ಪ ತಿಂಡಿ ತಿಂದು ಮಥುರನ ಮನೆಗೆ ಹಿಂದಿರುಗಿದರು. ಅಲ್ಲಿಂದ ಮುಂದೆ ಮಹೇಶನು ಪ್ರತಿನಿತ್ಯ ಶ್ರೀರಾಮಕೃಷ್ಣರನ್ನು ನೋಡಲು ಬರುತ್ತಿದ್ದ. ವೀಣೆಯನ್ನು ನುಡಿಸುತ್ತ ಅವನು ಮತ್ತನಾಗಿಬಿಡುತ್ತಿದ್ದ ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು.

13) ಮಥುರನಿಗೆ ಕಾಶಿಯಿಂದ ಗಯೆಗೆ ಹೋಗುವ ಆಸೆಯಿತ್ತು. ಆದರೆ ಶ್ರೀರಾಮಕೃಷ್ಣರು ಅದಕ್ಕೆ ಒಪ್ಪದಿರಲು ಅಲ್ಲಿಂದ ನೇರವಾಗಿ ಕಲಕತ್ತೆಗೆ ಹಿಂದಿರುಗಿದನು. ನಾಲ್ಕು ತಿಂಗಳ ತೀರ್ಥಯಾತ್ರೆಯನಂತರ ಶ್ರೀರಾಮಕೃಷ್ಣರು ಕ್ರಿ.ಶ. ೧೮೬೮ ಮಧ್ಯಭಾಗದಲ್ಲಿ ದಕ್ಷಿಣೇಶ್ವರಕ್ಕೆ ಹಿಂದಿರುಗಿದರು. ಶ್ರೀರಾಮಕೃಷ್ಣರು ಬೃಂದಾವನದಿಂದ ರಾಧಾಕುಂಡ ಮತ್ತು ಶ್ಯಾಮಕುಂಡ–ಈ ಎರಡು ಪ್ರದೇಶಗಳ ಮೃತ್ತಿಕೆಯನ್ನು ತಂದಿದ್ದರು. ದಕ್ಷಿಣೇಶ್ವರಕ್ಕೆ ಬಂದಮೇಲೆ ಅದರ ಸ್ವಲ್ಪ ಭಾಗವನ್ನು ಪಂಚವಟಿಯ ಪ್ರದೇಶ

ದಲ್ಲಿ ಎರಚಿದರು. ಉಳಿದ ಭಾಗವನ್ನು ತಮ್ಮ ಸಾಧನ ಕುಟೀರದಲ್ಲಿ ತಮ್ಮ ಕೈಯಿಂದಲೇ ಹೂತು ಹೇಳಿದರು, ''ಇಂದಿನಿಂದ ಇದು ಬೃಂದಾವನದಂತೆ ದೇವಭೂಮಿಯಾಯಿತು'' ಎಂದು. ಸ್ವಲ್ಪಕಾಲದನಂತರ ಶ್ರೀರಾಮಕೃಷ್ಣರು ಮಥುರನಿಗೆ ಹೇಳಿ ಅನೇಕ ಭಾಗ ಗಳಿಂದ ವೈಷ್ಣವ ಗೋಸ್ವಾಮಿಗಳನ್ನೂ ಭಕ್ತರನ್ನೂ ಕರೆಸಿ ಪಂಚವಟಿಯಲ್ಲಿ ಒಂದು ಮಹೋತ್ಸವವನ್ನು ಏರ್ಪಡಿಸಿದರು. ಆ ಸಂದರ್ಭದಲ್ಲಿ ಮಥುರನು ಪ್ರತಿ ಗೋ- ಸ್ವಾಮಿಗೂ ೧೬ ರೂಪಾಯಿಗಳನ್ನೂ ಮತ್ತು ಉಳಿದ ಭಕ್ತರಿಗೆಲ್ಲ ಒಂದೊಂದು ರೂಪಾಯಿಗಳನ್ನೂ ದಕ್ಷಿಣೆಯಾಗಿ ನೀಡಿದನು.

14) ತೀರ್ಥಯಾತ್ರೆಯಿಂದ ಹಿಂದಿರುಗಿದ ಸ್ವಲ್ಪಕಾಲದಲ್ಲಿಯೇ ಹೃದಯನ ಪತ್ನಿ ತೀರಿಕೊಂಡಳು. ಈ ಘಟನೆಯಿಂದ ಸ್ವಲ್ಪಕಾಲ ಅವನಿಗೆ ಸಂಸಾರದಲ್ಲಿ ವಿರಕ್ತಿ ಯುಂಟಾಯಿತು. ನಾವು ಮೊದಲೇ ಹೇಳಿರುವಂತೆ ಹೃದಯನು ಭಾವುಕ ವ್ಯಕ್ತಿಯಲ್ಲ. ಹಣಸಂಪಾದನೆ ಮಾಡಿ ಆದಷ್ಟು ಸಂಸಾರಸುಖವನ್ನು ಅನುಭವಿಸುವುದೇ ಅವನ ಉದ್ದೇಶ ವಾಗಿತ್ತು. ಶ್ರೀರಾಮಕೃಷ್ಣರ ಸಂಗದಿಂದ ಆಗಾಗ ಆಧ್ಯಾತ್ಮಿಕತೆಯ ಕಡೆ ಮನಸ್ಸು ವಾಲುತ್ತಿದ್ದರೂ ಅದು ಬಹುಕಾಲ ಉಳಿಯುತ್ತಿರಲಿಲ್ಲ. ಸಾಂಸಾರಿಕ ಸುಖ ಅವನ ಮನಸ್ಸನ್ನು ಸೆಳೆದುಬಿಡುತ್ತಿತ್ತು. ಆದ್ದರಿಂದ ಶ್ರೀ ರಾಮಕೃಷ್ಣರ ಸಾಧನೆಯ ಸಮಯ ದಲ್ಲಿ ಅಷ್ಟುಕಾಲ ಅವರೊಡನಿದ್ದರೂ ಅವರ ಸಾಧನೆಗಳನ್ನು ಅರಿಯುವ ಗೋಜಿಗೆ ಅವನು ಹೋಗಲಿಲ್ಲ. ಆದರೂ ಅವನು ಮಾವನನ್ನು ತುಂಬ ಪ್ರೀತಿಸುತ್ತಿದ್ದ. ತನ್ನ ಶಕ್ತಿಮೀರಿ ಅವರ ಸೇವೆ ಮಾಡಿದ. ಇದರಿಂದ ಅವನ ಸಾಹಸ, ಜಾಣ್ಮೆ, ಮತ್ತು ಶೌರ್ಯಕುಶಲತೆ ಸ್ಪಷ್ಟವಾಗಿ ಎದ್ದುಕಾಣುತ್ತಿದ್ದುವು. ಇತರ ಸಾಧಕರಿಂದ ಪಂಡಿತರಿಂದ ಶ್ರೀರಾಮಕೃಷ್ಣರ ದೈವಿಕತೆಯ ವಿಚಾರವನ್ನು ಕೇಳಿ ಮತ್ತು ತಾನೂ ಅವರಲ್ಲಿ ವಿಶೇಷಶಕ್ತಿಯ ಪ್ರಕಾಶವನ್ನು ಕಂಡು ಅವನ ಮನಸ್ಸಿಗೆ ಒಂದು ಬಲ ಬಂದಿತ್ತು. ಶ್ರೀರಾಮಕೃಷ್ಣರು ತನ್ನವರೇ ಆಗಿರುವರು ಮತ್ತು ಅವರ ಸೇವೆ ಅಷ್ಟೊಂದು ಮಾಡಿರುವುದರಿಂದ ಅವರ ಕೃಪೆ ತನ್ನ ಮೇಲೆ ಇದೆ, ಆದ್ದರಿಂದ ತನ್ನ ಆಧ್ಯಾತ್ಮಿಕ ಉನ್ನತಿಯ ವಿಚಾರವಾಗಿ ತಾನೇನೂ ಚಿಂತಿಸಬೇಕಾಗಿಲ್ಲ—ಎಂದು ಅವನು ಭಾವಿಸುತ್ತಿದ್ದ. ತನಗೆ ಆಧ್ಯಾತ್ಮಿಕ ಅನುಭವವನ್ನು ಪಡೆಯಬೇಕೆಂದು ಅನಿಸಿದರೆ ಸಾಕು ಶ್ರೀರಾಮಕೃಷ್ಣರು ತಮ್ಮ ಶಕ್ತಿಯ ಮೂಲಕ ಅದನ್ನು ನನಗೆ ನೀಡುವರು—ಎಂದು ಅವನ ವಿಶ್ವಾಸವಾಗಿತ್ತು. ಆದ್ದರಿಂದ ಪರಕಾಲದ ವಿಷಯದಲ್ಲಿ ತಾನೇನೂ ಚಿಂತಿಸ ಬೇಕಾಗಿಲ್ಲ, ಸ್ವಲ್ಪ ಸಂಸಾರಸುಖವನ್ನು ಅನುಭವಿಸಿದಮೇಲೆ ಅದರ ಕಡೆಗೆ ಮನಸ್ಸು ಹರಿಸಿದರಾಯಿತು ಎಂದುಕೊಂಡಿದ್ದ. ಈಗ ಪತ್ನಿ ತೀರಿಹೋಗಿರುವುದರಿಂದ ಆ ಸಮಯ ಸನ್ನಿಹಿತವಾಗಿದೆ. ಅವನು ಮೊದಲಿಗಿಂತಲೂ ನಿಷ್ಠೆಯಿಂದ ಶ್ರೀ ಜಗನ್ಮಾತೆಯ ಪೂಜೆ ಮಾಡತೊಡಗಿದ. ಉಟ್ಟ ಬಟ್ಟೆ ಜನಿವಾರಗಳನ್ನು ತೆಗೆದುಹಾಕಿ ಆಗಾಗ ಧ್ಯಾನ ಮಾಡುತ್ತಿದ್ದ. ತಮಗಾದ ಆಧ್ಯಾತ್ಮಿಕ ಅನುಭವಗಳು ತನಗೂ ಆಗುವಂತೆ ಮಾಡ ಬೇಕೆಂದು ಶ್ರೀರಾಮಕೃಷ್ಣರನ್ನು ಪೀಡಿಸತೊಡಗಿದ. ಶ್ರೀರಾಮಕೃಷ್ಣರು ಅವನಿಗೆ

ಎಷ್ಟೋ ಬುದ್ಧಿ ಹೇಳಿದರು: ಅವನು ಆ ರೀತಿ ಮಾಡಬೇಕಾದ ಆವಶ್ಯಕತೆಯಿಲ್ಲ, ತಮ್ಮ ಸೇವೆ ಮಾಡಿದ್ದಾನೆ, ಅದರಿಂದಲೇ ಎಲ್ಲ ಆಗುವುದು ಮತ್ತು ಅವನೂ ತಮ್ಮಂತೆಯೇ ಸಾಧನೆಯಲ್ಲಿ ಮುಳುಗಿದರೆ ಯಾರನ್ನು ಯಾರು ನೋಡಿಕೊಳ್ಳುವುದು? ಹೀಗೆಲ್ಲ ಅವನಿಗೆ ಬಹು ವಿಧವಾಗಿ ಹೇಳಿದರು: ಅದಾವುದಕ್ಕೂ ಅವನು ಕಿವಿಗೊಡಲಿಲ್ಲ. ಕೊನೆಗೆ ಶ್ರೀರಾಮಕೃಷ್ಣರು ಹೇಳಿದರು : "ತಾಯಿಯ ಇಚ್ಛೆಯಂತಾಗಲಿ, ನನ್ನ ಇಚ್ಛೆಯಂತೆ ಯಾವುದೂ ನಡೆಯುವುದಿಲ್ಲ, ತಾಯಿಯೇ ನನಗೀರೀತಿಯ ಬುದ್ಧಿಕೊಟ್ಟು ಈ ಎಲ್ಲ ಅದ್ಭುತ ಅನುಭವಗಳನ್ನು ನೀಡಿರುವಳು, ಅವಳಿಚ್ಛೆಯಾದರೆ ನಿನಗೂ ಹಾಗೆಯೇ ಆಗುವುದು."

15) ಈ ಮಾತುಕತೆಯಾಗಿ ಕೆಲವು ದಿನಗಳನಂತರ ಹೃದಯನು ಪೂಜೆಗೆ ಕುಳಿತುಕೊಂಡಿರುವಾಗ ಏನೇನೊ ದಿವ್ಯದರ್ಶನಗಳಾಗತೊಡಗಿದವು. ಅವನು ಬಾಹ್ಯ ಪ್ರಜ್ಞೆಯನ್ನು ಕಳೆದುಕೊಳ್ಳತೊಡಗಿದ. ಮಥುರನು ಒಂದುದಿನ ಹೃದಯನ ಭಾವಾವಸ್ಥೆಯನ್ನು ಕಂಡು ಶ್ರೀರಾಮಕೃಷ್ಣರಿಗೆ ಕೇಳಿದ, "ತಂದೆ, ಹೃದಯನಿಗೆ ಇದೇನು ಅವಸ್ಥೆಯುಂಟಾಗಿದೆಯಲ್ಲ" ಎಂದು. ಶ್ರೀರಾಮಕೃಷ್ಣರು ಉತ್ತರಿಸಿದರು: "ಹೃದಯನು ಸುಮ್ಮನೆ ಆ ರೀತಿ ಸೋಗುಹಾಕಿಕೊಂಡಿಲ್ಲ. ಸ್ವಲ್ಪ ದರ್ಶನ ಆಗಬೇಕೆಂದು ಅವನು ತಾಯಿಯನ್ನು ಬಹಳ ಪ್ರಾರ್ಥಿಸಿದ್ದ. ಅದಕ್ಕಾಗಿಯೇ ಹಾಗಾಗಿದೆ. ಅವನಿಗೆ ಸ್ವಲ್ಪ ತೋರಿಸಿಕೊಟ್ಟನಂತರ ಅವನು ತಣ್ಣಗಾಗುವನು." ಮಥುರನು ಹೇಳಿದ: "ತಂದೆ ಇದೆಲ್ಲ ನಿಮ್ಮದೇ ಆಟ. ನೀವೇ ಅವನಿಗೆ ಈ ಸ್ಥಿತಿಯನ್ನು ನೀಡಿದ್ದೀರಿ, ನೀವೇ ಈಗ ಅವನನ್ನು ಶಾಂತಗೊಳಿಸಿ, ನಾವಿಬ್ಬರೂ ನಂದೀ ಭೃಂಗಿಗಳಂತೆ ನಿಮ್ಮೊಡನೆ ಇರುತ್ತೇವೆ. ನಿಮ್ಮ ಸೇವೆ ಮಾಡುತ್ತೇವೆ. ನಮಗೆ ಇವೆಲ್ಲ ಯಾಕೆ ?"

ಒಂದುದಿನ ಶ್ರೀರಾಮಕೃಷ್ಣರು ಪಂಚವಟಿಯ ಕಡೆ ಹೋಗುತ್ತಿದ್ದರು. ಅವರಿಗೆ ತನ್ನ ಸಹಾಯ ಬೇಕಾಗಬಹುದೆಂದು ಭಾವಿಸಿ ಹೃದಯನು ತಂಬಿಗೆ ಮತ್ತು ಟವಲನ್ನು ಹಿಡಿದು ಅವರ ಹಿಂದೆ ಹೊರಟನು. ಹೃದಯನಿಗೆ ಆಗ ಒಂದು ಅಪೂರ್ವ ಅನುಭವ ವಾಯಿತು. ಶ್ರೀರಾಮಕೃಷ್ಣರು ರಕ್ತಮಾಂಸದಿಂದ ಕೂಡಿದ ದೇಹಧಾರಿ ಮನುಷ್ಯರಂತೆ ಕಾಣದೆ ಜ್ಯೋತಿರ್ಮಯ ವ್ಯಕ್ತಿಯಾಗಿ ಕಂಡರು ಅವನಿಗೆ. ಅವರ ದಿವ್ಯಜ್ಯೋತಿಯು ಇಡೀ ಪಂಚವಟಿಯನ್ನು ವ್ಯಾಪಿಸಿತ್ತು. ಅವರು ನಡೆಯುವಾಗ ಅವರ ಜ್ಯೋತಿರ್ಮಯ ಪಾದವು ಭೂಮಿಗೆ ತಾಕುತ್ತಿರಲಿಲ್ಲ. ತನ್ನ ಕಣ್ಣು ಸರಿಯಾಗಿ ಕಾಣುತ್ತಿಲ್ಲವೇನೊ ಎಂದು ಅವನು ಕಣ್ಣುಗಳನ್ನು ಸರಿಯಾಗಿ ಒರಸಿಕೊಂಡು ನೋಡಿದನು. ಸುತ್ತಲೂ ಒಮ್ಮೆ ಕಣ್ಣು ಹಾಯಿಸಿ ಮತ್ತೊಮ್ಮೆ ಶ್ರೀರಾಮಕೃಷ್ಣರನ್ನು ನೋಡಿದನು. ಆದರೂ ಮೊದಲಿನಂತೆಯೇ; ಉಳಿದೆಲ್ಲವೂ ಹಿಂದಿನಂತೆಯೇ ಕಾಣುತ್ತಿವೆ, ಆದರೆ ಶ್ರೀರಾಮಕೃಷ್ಣರು ಮಾತ್ರ ಜ್ಯೋತಿರ್ಮಯರಾಗಿ ಕಾಣುತ್ತಿದ್ದಾರೆ. ತನ್ನಲ್ಲಿ ಏನಾದರೂ ಪರಿವರ್ತನೆಯುಂಟಾಗಿರುವುದರಿಂದ ತಾನು ಈರೀತಿ ನೋಡುತ್ತಿರಬಹುದೆ ಎಂದು ಭಾವಿಸಿದ. ತನ್ನ ಕಡೆಗೆ ಗಮನ ಹರಿಸಿದಾಗ ಅವನಿಗೆ ತಿಳಿಯಿತು, ತಾನೂ ಕೂಡಾ ಜ್ಯೋತಿರ್ಮಯ ಪುರುಷ;

ಯಾವಾಗಲೂ ದೇವತೆಗಳೊಡನೆ ಇದ್ದು ಅವರ ಸೇವೆ ಮಾಡುತ್ತಿರುವವ ಎಂದು. ತಾನು ಶ್ರೀರಾಮಕೃಷ್ಣರ ಜ್ಯೋತಿರ್ಮಯ ಅಂಗದ ಒಂದು ಅಂಶ ಮತ್ತು ಅವರ ಸೇವೆ ಮಾಡುವುದಕ್ಕಾಗಿ ಅವರಿಂದ ಪ್ರತ್ಯೇಕವಾಗಿರುವೆನು ಎಂದು ಅವನಿಗೆ ತಿಳಿಯಿತು. ತನ್ನ ನಿಜ ರಹಸ್ಯವನ್ನು ಅರಿತು ಅವನಿಗೆ ಪರಮಾನಂದವಾಯಿತು. ಅವನು ತನ್ನನ್ನು ಮರೆತ, ಸಂಸಾರವನ್ನು ಮರೆತ, ಜನ ತನ್ನನ್ನು ಹುಚ್ಚನೆನ್ನುವರೆಂಬುದನ್ನೂ ಮರೆತ. ಭಾವಾವೇಶದಲ್ಲಿ ಉನ್ಮತ್ತನಾಗಿ ಚೀತ್ಕಾರ ಮಾಡುತ್ತ ಶ್ರೀರಾಮಕೃಷ್ಣರನ್ನು ಉದ್ದೇಶಿಸಿ ಹೇಳಿದ : "ಓ ರಾಮಕೃಷ್ಣ ! ಓ ರಾಮಕೃಷ್ಣ ! ನಾವು ಮನುಷ್ಯರಲ್ಲ. ನಾವು ಇಲ್ಲೇಕೆ ಇದ್ದೇವೆ ? ದೇಶ ದೇಶಗಳಿಗೂ ಹೋಗಿ ಜೀವೋದ್ಧಾರ ಮಾಡೋಣ. ನೀನು ಯಾರೊ ಅವನೇ ನಾನು."

ಶ್ರೀರಾಮಕೃಷ್ಣರು ಹೇಳುತ್ತಿದ್ದರು : "ಅವನು ಆ ರೀತಿ ಕೂಗುತ್ತಿರುವುದನ್ನು ಕೇಳಿ ನಾನು ಹೇಳಿದೆ, 'ಏಯ್ ಸ್ವಲ್ಪ ಸುಮ್ಮನಿರು ! ಹೀಗೇಕೆ ಅರಚುತ್ತಿರುವೆ ? ಏನು ಮಹಾ ನಿನಗೆ ಆಗಿರುವುದು !? ಜನ ನಿನ್ನೆಡೆಗೆ ಓಡಿ ಬಂದುಬಿಡುತ್ತಾರಲ್ಲವೆ ? ಅವರು ನಿನ್ನ ಮಾತು ಕೇಳುತ್ತಾರೇನು ?' ಅನಂತರ ಕೂಡಲೆ ಅವನ ಹತ್ತಿರ ಹೋಗಿ ಅವನ ಎದೆಯನ್ನು ಸ್ಪರ್ಶಿಸಿ ಹೇಳಿದೆ, 'ತಾಯಿ, ಈ ಮೂರ್ಖನನ್ನು ಮೊದಲಿನಂತೆಯೇ ಮಾಡು.' "

16. ಅವರು ಹಾಗೆ ಹೇಳುತ್ತಿದ್ದಂತೆಯೇ ಆ ದರ್ಶನ, ಆ ಆನಂದ ಎಲ್ಲೋ ಮಾಯವಾಗಿ ಹೋದವು ಮತ್ತು ಅವನು ಮೊದಲಿನಂತೆಯೇ ಆದ. ಆ ಅಪೂರ್ವ ಆನಂದ ಹೋಯಿತಲ್ಲ ಎಂದು ಅವನು ಮರುಗಿದನು. ಅವನು ಅಳುತ್ತ ಶ್ರೀರಾಮಕೃಷ್ಣರಿಗೆ ಹೇಳಿದ : "ಮಾವ, ನೀನೇಕೆ ಹೀಗೆ ಮಾಡಿದೆ ? ಆ ರೀತಿಯ ದರ್ಶನಾನಂದ ಮತ್ತೆ ನನಗೆ ದೊರೆಯುವುದಿಲ್ಲ." ಶ್ರೀರಾಮಕೃಷ್ಣರು ಹೇಳಿದರು : "ನಾನೇನು ಇದ್ದಕ್ಕಿದ್ದಂತೆಯೇ ನೀನು ಜಡವಾಗು ಎಂದು ಹೇಳಿದೆನೆ ? ಈಗ ನೀನು ಸ್ಥಿರವಾಗಿರು ಎಂದು ಹೇಳಿದೆನಷ್ಟೆ. ಒಂದು ಸಾಮಾನ್ಯ ದರ್ಶನವನ್ನು ಪಡೆದೇ ನೀನು ಇಷ್ಟೊಂದು ಗಲಾಟೆ ಮಾಡಿದೆ, ಅದಕ್ಕಾಗಿಯೇ ನಾನು ಆ ರೀತಿ ಹೇಳಬೇಕಾಯಿತು. ನಾನು ಇಪ್ಪತ್ತನಾಲ್ಕು ಘಂಟೆ ಏನೆಲ್ಲ ನೋಡುತ್ತೇನೆ, ಆದರೆ ಈ ರೀತಿ ಗಲಾಟೆ ಮಾಡುವೆನೆ ? ನಿನಗೆ ಅಂತಹ ದರ್ಶನ ಪಡೆಯುವ ಸಮಯ ಬರಲಿಲ್ಲ. ಈಗ ಸುಮ್ಮನಿರು. ಸಮಯ ಬಂದಾಗ ಮತ್ತೆ ಏನೆಲ್ಲ ನೋಡಬಹುದು !"

17. ಹೃದಯನು ಏನೂ ಮಾತನಾಡಲಿಲ್ಲ. ಆದರೆ ಅವನು ಖಿನ್ನನಾಗಿದ್ದ. ಆನಂತರ ಅವನನ್ನು ಅಹಂಕಾರ ಕಾಡಿಸತೊಡಗಿತು. ಹೇಗಾದರೂ ಮಾಡಿ ಮತ್ತೆ ಆ ದರ್ಶನವನ್ನು ಪಡೆಯಬೇಕು ಎಂದು ನಿರ್ಧರಿಸಿದ. ಅವನು ಹೆಚ್ಚು ಹೆಚ್ಚು ಧ್ಯಾನ ಜಪ ಮಾಡತೊಡಗಿದ. ರಾತ್ರಿ ಶ್ರೀರಾಮಕೃಷ್ಣರು ಎಲ್ಲಿ ಕುಳಿತು ಧ್ಯಾನ ಮಾಡುತ್ತಿದ್ದರೊ ಅಲ್ಲಿ ಕುಳಿತು ಧ್ಯಾನ ಜಪ ಮಾಡಬೇಕೆಂದು ಯೋಚಿಸಿ ಒಂದು ದಿನ ನಡುರಾತ್ರಿ ಪಂಚವಟಿಯ ಕಡೆ ಹೊರಟನು, ಶ್ರೀರಾಮಕೃಷ್ಣರ ಆಸನದಲ್ಲಿ ಧ್ಯಾನಕ್ಕೆ

ಕುಳಿತನು. ಸ್ವಲ್ಪಹೊತ್ತಿನ ನಂತರ ಶ್ರೀರಾಮಕೃಷ್ಣರಿಗೂ ಪಂಚವಟಿಗೆ ಹೋಗುವ ಮನಸ್ಸಾಯಿತು. ಅವರು ಪಂಚವಟಿಯ ಕಡೆ ಬರುತ್ತಿದ್ದಂತೆಯೇ ಹೃದಯನ ಚೀತ್ಕಾರ ಕೇಳಿಸಿತು : "ಮಾವ, ನಾನು ಸತ್ತೆ, ಸತ್ತೆ !" ಶ್ರೀರಾಮಕೃಷ್ಣರು ಓಡಿಬಂದು ವಿಚಾರಿಸಿದರು, "ಏನಪ್ಪ, ಏನಾಯಿತು ?" ಹೃದಯನು ವೇದನೆಯಿಂದ ಚಡಪಡಿಸುತ್ತ ಹೇಳಿದ : "ಮಾವ, ನಾನು ಇಲ್ಲಿ ಧ್ಯಾನಕ್ಕೆ ಕುಳಿತದ್ದೆ ತಡ, ಯಾರೊ ನನ್ನ ಮೇಲೆ ಉರಿಯುವ ಕೆಂಡವನ್ನು ಎಸೆದಂತಾಯಿತು. ಈಗ ಉರಿಯನ್ನು ತಾಳಲಾರೆ." ಶ್ರೀರಾಮಕೃಷ್ಣರು ಅವನ ದೇಹದ ಮೇಲೆ ಕೈ ಆಡಿಸಿ ಹೇಳಿದರು : "ಹೋಗು, ಈಗ ಎಲ್ಲ ತಣ್ಣಗಾಗುವುದು. ನೀನು ಹೀಗೇಕೆ ಮಾಡುತ್ತೀರುವೆ ? ನನ್ನ ಸೇವೆಯಿಂದಲೇ ನಿನಗೆ ಎಲ್ಲ ದೊರೆಯುವುದು ಎಂದು ನಿನಗೆ ಹೇಳಿದ್ದೇನೆ." ಅವರ ಹಸ್ತಸ್ಪರ್ಶದಿಂದ ಕೂಡಲೆ ವೇದನೆಯೆಲ್ಲ ಹೊರಟುಹೋಯಿತು ಎಂದು ಹೃದಯ ಹೇಳುತ್ತಿದ್ದ. ಮುಂದೆ ಅವನು ಎಂದೂ ಪಂಚವಟಿಗೆ ಧ್ಯಾನ ಮಾಡಲು ಹೋಗಲಿಲ್ಲ. ಶ್ರೀರಾಮಕೃಷ್ಣರ ಮಾತನ್ನು ಉಲ್ಲಂಘಿಸಿದರೆ ತನಗೆ ಒಳ್ಳೆಯದಾಗುವುದಿಲ್ಲ ಎಂದು ಅವನಿಗೆ ದೃಢವಾಯಿತು.

18. ಶ್ರೀರಾಮಕೃಷ್ಣರ ಮಾತಿನ ಮೇಲಿನ ವಿಶ್ವಾಸದಿಂದ ಆತನಿಗೆ ಎಷ್ಟೊ ಸಮಾಧಾನವುಂಟಾದರೂ ಮಂದಿರದ ಕೆಲಸವನ್ನು ಮೊದಲಿನ ಉತ್ಸಾಹದಿಂದ ಮಾಡಲಾಗುತ್ತಿರಲಿಲ್ಲ. ಯಾವುದಾದರೂ ಒಂದು ಹೊಸ ಕೆಲಸ ಹಿಡಿಯಬೇಕು ಎನಿಸಿತು ಅವನಿಗೆ. ೧೮೬೮ರಲ್ಲಿ ದುರ್ಗಾಪೂಜೆ ತನ್ನ ಮನೆಯಲ್ಲಿ ನಡೆಸಬೇಕೆಂದು ಅವನು ನಿರ್ಧರಿಸಿದ. ಅವನ ಮಲತಾಯಿಯ ಮಗ ಗಂಗಾನಾರಾಯಣನು ಆಗ ಮೃತಪಟ್ಟಿದ್ದ. ರಾಘವನು ಮಥುರನ ಎಸ್ಟೇಟಿನಲ್ಲಿ ಕೆಲಸದಲ್ಲಿದ್ದು ಒಳ್ಳೆಯ ಸಂಬಳ ಬರುತ್ತಿತ್ತು. ಸಮಯ ಬದಲಾಗಲು. ಈಗ ಕೈಯಲ್ಲಿ ಹೆಚ್ಚು ಹಣವಿರುವುದರಿಂದ ಒಂದು ಹೊಸ ಪೂಜಾಗೃಹವನ್ನು ನಿರ್ಮಿಸಲಾಯಿತು. ಅಲ್ಲಿ ದುರ್ಗಾಪೂಜೆ ನಡೆಸಬೇಕೆಂದು ಗಂಗಾನಾರಾಯಣನ ಆಸೆಯಾಗಿತ್ತು. ಆದರೆ ಅವನ ಆಸೆ ಪೂರ್ತಿಯಾಗಿರಲಿಲ್ಲ. ಈಗ ಹೃದಯನಿಗೆ ಈ ವಿಷಯ ನೆನಪಿಗೆ ಬಂತು. ಅವನ ಇಚ್ಛೆಯನ್ನು ಪೂರ್ಣಗೊಳಿಸಬೇಕೆಂದು ಮನಸ್ಸು ಮಾಡಿದನು. ಶ್ರೀರಾಮಕೃಷ್ಣರೂ ಇದಕ್ಕೆ ಸಮ್ಮತಿಯಿತ್ತರು ಮತ್ತು ಮಥುರನು ಧನಸಹಾಯ ಮಾಡಿದನು. ಆದರೆ ಮಥುರನು ದುರ್ಗಾಪೂಜೆಗೆ ಶ್ರೀರಾಮಕೃಷ್ಣರು ತನ್ನ ಮನೆಯಲ್ಲೇ ಇರಬೇಕೆಂದು ಹಟಮಾಡಿದನು. ಗತ್ಯಂತರವಿಲ್ಲದೆ ನೊಂದ ಮನಸ್ಸಿನಿಂದ ಹೃದಯನು ಪೂಜೆಗೆ ವ್ಯವಸ್ಥೆ ಮಾಡಲು ಊರಿಗೆ ಹೋದನು. ಹೊರಡುವುದಕ್ಕೆ ಮುಂಚೆ ಅವನು ಖಿನ್ನನಾಗಿರುವುದನ್ನು ಕಂಡು ಶ್ರೀರಾಮಕೃಷ್ಣರು ಅವನಿಗೆ ಆಶ್ವಾಸನೆಯಿತ್ತರು : "ನೀನು ದುಃಖಿಸಬೇಡ. ನಾನು ಸೂಕ್ಷ್ಮ ಶರೀರದಲ್ಲಿ ಪ್ರತಿನಿತ್ಯ ನಿನ್ನ ಪೂಜೆಯನ್ನು ನೋಡಲು ಬರುತ್ತೇನೆ. ಬೇರೆ ಯಾರೂ ನನ್ನನ್ನು ನೋಡಲಾರರು, ಆದರೆ ನೀನು ನೋಡಬಲ್ಲೆ. ಒಬ್ಬ ತಂತ್ರಧಾರಕನನ್ನು ಇಟ್ಟುಕೊಂಡು ನಿನ್ನ ಭಕ್ತಿಗೆ ತಕ್ಕಂತೆ ಪೂಜೆ ಮಾಡು. ಸಂಪೂರ್ಣ ಉಪವಾಸ

ಮಾಡದೆ ಮಧ್ಯಾಹ್ನ ಹಾಲು, ಗಂಗಾಜಲ ಮತ್ತು ಸಕ್ಕರೆಪಾನಕ ಕುಡಿ. ಈ ರೀತಿ ಪೂಜೆಮಾಡಿದರೆ, ಜಗನ್ಮಾತೆಯು ಖಂಡಿತ ಪೂಜೆ ಸ್ವೀಕರಿಸುವಳು." ಯಾರಿಂದ ಪ್ರತಿಮೆ ಮಾಡಿಸಬೇಕು, ಯಾರನ್ನು ತಂತ್ರಧಾರಕನನ್ನಾಗಿ ಮಾಡಬೇಕು ಇತ್ಯಾದಿ ಎಲ್ಲ ವಿಷಯಗಳಲ್ಲಿಯೂ ಶ್ರೀರಾಮಕೃಷ್ಣರು ಅವನಿಗೆ ಸೂಕ್ತ ಸಲಹೆಯಿತ್ತರು.

19. ಹೃದಯನು ಊರಿಗೆ ಹೋಗಿ ಎಲ್ಲ ವ್ಯವಸ್ಥೆ ಮಾಡಿದನು. ಷಷ್ಠಿಯ ದಿನ ಬೋಧನ—ಹೃದಯನು ಪೂಜೆಯ ವ್ರತವನ್ನು ಸ್ವೀಕರಿಸಿದನು. ಸಪ್ತಮಿಯಿಂದು ಪೂಜೆ ಸಾಂಗವಾಗಿ ನೆರವೇರಿತು. ರಾತ್ರಿ ನಿರಾಜನ ಮಾಡುವ ಸಮಯದಲ್ಲಿ ಶ್ರೀರಾಮ ಕೃಷ್ಣರು ಜ್ಯೋತಿರ್ಮಯ ಶರೀರಿಯಾಗಿ ಪ್ರತಿಮೆಯ ಪಕ್ಕದಲ್ಲಿ ನಿಂತಿರುವುದನ್ನು ಹೃದಯನು ಕಂಡನು. ಹೀಗೆ ಪ್ರತಿದಿನವೂ ಅವನು ಅದೇ ಸಮಯದಲ್ಲಿ ಮತ್ತು ಸಂಧಿಪೂಜೆಯ ಸಮಯದಲ್ಲಿ ಶ್ರೀರಾಮಕೃಷ್ಣರನ್ನು ಕಂಡನು. ಅವನ ಮನಸ್ಸು ಆನಂದೋತ್ಸಾಹದಿಂದ ತುಂಬಿಹೋಯಿತು. ಪೂಜೆ ಮುಗಿದಮೇಲೆ ಹೃದಯನು ದಕ್ಷಿಣೇಶ್ವರಕ್ಕೆ ಬಂದು ಶ್ರೀರಾಮಕೃಷ್ಣರಿಗೆ ಎಲ್ಲ ವಿಷಯವನ್ನು ತಿಳಿಸಿದ. ಅದನ್ನು ಕೇಳಿ ಶ್ರೀರಾಮಕೃಷ್ಣರು ಹೇಳಿದರು : "ಆರತಿ ಮತ್ತು ಸಂಧಿಪೂಜೆಯ ಸಮಯದಲ್ಲಿ ನಿನ್ನ ಪೂಜೆಯನ್ನು ನೋಡಬೇಕೆಂದು ನನಗೆ ತುಂಬ ಆಸೆಯಾಯಿತು. ಆಗ ನನಗೆ ಭಾವಾವಸ್ಥೆಯುಂಟಾಯಿತು. ಜ್ಯೋತಿರ್ಮಯ ಶರೀರವು ಜ್ಯೋತಿರ್ಮಯ ಮಾರ್ಗ ದಲ್ಲಿ ಹೋಗಿ ನಿನ್ನ ಪೂಜಾಮಂಟಪದಲ್ಲಿ ಇರುವಂತೆ ಅನುಭವವಾಯಿತು."

20. ಒಮ್ಮೆ ಶ್ರೀರಾಮಕೃಷ್ಣರು ಭಾವಾವಿಷ್ಟರಾಗಿ ಹೃದಯನಿಗೆ ಹೇಳಿದ್ದರು, "ನೀನು ಮೂರು ವರ್ಷ ಪೂಜೆಮಾಡಬೇಕು" ಎಂದು. ಅದು ಹಾಗೆಯೇ ಆಯಿತು. ನಾಲ್ಕನೆಯ ವರ್ಷ ಪೂಜೆಯ ವ್ಯವಸ್ಥೆ ಮಾಡಲು ಹೋದಾಗ ಒಂದರ ಮೇಲೆ ಒಂದು ವಿಘ್ನಗಳು ಬಂದು ಅನಿವಾರ್ಯವಾಗಿ ಪೂಜೆ ನಿಲ್ಲಿಸಬೇಕಾಯಿತು. ಅದು ಏನೇ ಆಗಲಿ, ಮೊದಲನೆಯ ವರ್ಷದ ಪೂಜೆಯಾಗಿ ಸ್ವಲ್ಪಕಾಲದ ನಂತರ ಹೃದಯನು ಎರಡನೆಯ ಬಾರಿ ವಿವಾಹ ಮಾಡಿಕೊಂಡು ಎಂದಿನಂತೆಯೆ ದಕ್ಷಿಣೇಶ್ವರದ ಪೂಜಾ ಕಾರ್ಯದಲ್ಲಿ ಮತ್ತು ಶ್ರೀರಾಮಕೃಷ್ಣರ ಸೇವೆಯಲ್ಲಿ ನಿರತನಾದ.

ಹನ್ನೊಂಬತ್ತನೆಯ ಅಧ್ಯಾಯ

ಬಂಧುಗಳ ಮರಣ

1, ರಾಮಕುಮಾರನ ಪುತ್ರ ಅಕ್ಷಯನ ಕಥೆ 2. ಅವನ ರೂಪ 3, ಶ್ರೀರಾಮಚಂದ್ರನ ಮೇಲೆ ಅವನಿಗಿದ್ದ ಭಕ್ತಿ 4. ಅವನ ವಿವಾಹ 5, ವಿವಾಹವಾದನಂತರ ಅವನು ರೋಗಗ್ರಸ್ತನಾದುದು ಮತ್ತು ದಕ್ಷಿಣೇಶ್ವರಕ್ಕೆ ಹಿಂದಿರುಗಿದುದು 6, ಮತ್ತೆ ಅವನಿಗೆ ಕಾಯಿಲೆಯಾಯಿತು–ಅವನ ಮೃತ್ಯುವಿನ ಬಗ್ಗೆ ಶ್ರೀರಾಮಕೃಷ್ಣರಿಗೆ ತಿಳಿದಿತ್ತು 7, ಅಕ್ಷಯನು ಬದುಕುವುದಿಲ್ಲವೆಂದು ಕೇಳಿ ಹೃದಯನ ಕಾತರತೆ 8, ಅಕ್ಷಯನ ಮೃತ್ಯು ಮತ್ತು ಶ್ರೀರಾಮಕೃಷ್ಣರ ವರ್ತನೆ 9, ಅವನ ಮೃತ್ಯುವಿನಿಂದ ಅವರಿಗಾದ ದುಃಖ 10, ರಾಮೇಶ್ವರನು ಅರ್ಚಕನಾದುದು 11, ರಾಣಾಘಾಟ್‌ನಲ್ಲಿ ದರಿದ್ರನಾರಾಯಣ ಸೇವೆ 12, ಮಥುರನ ಸ್ವಂತ ಮತ್ತು ಗುರು ಗೃಹ ದರ್ಶನ 13, ಶ್ರೀರಾಮಕೃಷ್ಣರು ಹರಿಸಭೆಯಲ್ಲಿ ಚೈತನ್ಯಾಸನವನ್ನು ಅಲಂಕರಿಸಿದ ಘಟನೆ 14, ಮಥುರನ ನಿಷ್ಕಾಮಭಕ್ತಿ, ಇದಕ್ಕೆ ದೃಷ್ಟಾಂತ 15. ಶ್ರೀರಾಮಕೃಷ್ಣ ಮತ್ತು ಮಥುರರ ಘನಿಷ್ಠ ಸಂಬಂಧ ಮತ್ತು ಅದಕ್ಕೆ ದೃಷ್ಟಾಂತಗಳು 16, ಮಥುರನ ದೇಹತ್ಯಾಗ 17, ಶ್ರೀರಾಮಕೃಷ್ಣರು ಭಾವಾವೇಶದಲ್ಲಿ ಆ ಘಟನೆಯನ್ನು ಕಂಡರು

1. ರಾಮಕುಮಾರನ ಪುತ್ರ ಅಕ್ಷಯನ ಬಗ್ಗೆ ನಾವಾಗಲೇ ಸ್ವಲ್ಪ ಹೇಳಿರುವೆವು, ತೋತಾಪುರಿಯು ದಕ್ಷಿಣೇಶ್ವರಕ್ಕೆ ಬಂದು ಸ್ವಲ್ಪ ಸಮಯ ಕಳೆದಮೇಲೆ, ೧೮೬೫ರಲ್ಲಿ ಅಕ್ಷಯನು ದಕ್ಷಿಣೇಶ್ವರಕ್ಕೆ ಬಂದನು. ಅವನು ವಿಷ್ಣುಮಂದಿರದ ಅರ್ಚಕನಾಗಿ ಸೇರಿಕೊಂಡನು, ಆಗ ಅವನಿಗೆ ಕೇವಲ ಹದಿನೇಳು ವರ್ಷ. ಅವನ ವಿಷಯವಾಗಿ ಕೆಲವು ವಿಚಾರಗಳನ್ನು ಇಲ್ಲಿ ಹೇಳುವುದು ಉಚಿತ.

2. ಹುಟ್ಟುವಾಗಲೇ ತಾಯಿಯು ಮರಣ ಹೊಂದಿದ್ದರಿಂದ ಅಕ್ಷಯನು ಇತರ ಬಂಧುವರ್ಗದವರಿಗೆ ಅತ್ಯಂತ ಪ್ರಿಯನಾದನು. ೧೮೫೨ರಲ್ಲಿ ಶ್ರೀರಾಮಕೃಷ್ಣರು ಮೊದಲನೆಯ ಬಾರಿಗೆ ಕಲಕತ್ತೆಗೆ ಬಂದಾಗ ಅಕ್ಷಯನಿಗೆ ಕೇವಲ ಮೂರು ನಾಲ್ಕು ವರ್ಷ ವಯಸ್ಸು. ಆದುದರಿಂದ ಅವರು ಇದಕ್ಕೆ ಮುಂಚೆ ಆ ಬಾಲಕನನ್ನು ಎತ್ತಿ ಆಡಿಸಿದ್ದರು, ಅವನ ಬಾಲಚೇಷ್ಟೆಯಲ್ಲಿ ಭಾಗವಹಿಸಿದ್ದರು. ತಂದೆಯಾದ ರಾಮಕುಮಾರನು ಅಕ್ಷಯನನ್ನು ಎಂದೂ ತೊಡೆಯಮೇಲೆ ಕೂರಿಸಿಕೊಂಡು ಮುದ್ದಿಸಿರಲಿಲ್ಲ. ಕಾರಣ ಕೇಳಿದಾಗ ಹೇಳುತ್ತಿದ್ದನು ; "ಮೋಹ ಹೆಚ್ಚಿಸಿಕೊಳ್ಳುವುದು ಬೇಡ, ಮಗು ಬದುಕುವುದಿಲ್ಲ." ಅನಂತರ ಶ್ರೀರಾಮಕೃಷ್ಣರು ಸಾಧನೆಯಲ್ಲಿ ಮುಳುಗಿದರು. ಆಗ ಎಲ್ಲವನ್ನೂ, ಅಕ್ಷಯನನ್ನೂ, ಮರೆತುಬಿಟ್ಟರು. ಈ ವೇಳೆಯಲ್ಲಿ ಅಕ್ಷಯನು ಬೆಳೆದು ಸುಂದರ ಯುವಕನಾದಿ

ದ್ದನು. ಅಕ್ಷಯನು ನಿಜವಾಗಿಯೂ ಅತ್ಯಂತ ರೂಪವಂತನಾಗಿದ್ದನಂತೆ. ಅವನ ಮೈಬಣ್ಣ ತುಂಬಾ ಉಜ್ವಲವಾಗಿತ್ತು, ಹಾಗೆಯೇ ಅವನ ಮೈಕಟ್ಟು ಅತ್ಯಂತ ಸುಂದರ, ಜೀವಂತ ಶಿವನ ಮೂರ್ತಿಯಂತೆ ಕಾಣುತ್ತಿದ್ದನಂತೆ.

3. ಬಾಲ್ಯದಿಂದಲೂ ಅವನಿಗೆ ಶ್ರೀರಾಮಚಂದ್ರನ ಮೇಲೆ ಭಕ್ತಿ. ಕುಲದೇವತೆಯಾದ ರಘುವೀರನ ಸೇವೆಯಲ್ಲಿ ದಿನದ ಹೆಚ್ಚಿನ ಸಮಯವನ್ನು ಕಳೆಯುತ್ತಿದ್ದ; ದಕ್ಷಿಣೇಶ್ವರದಲ್ಲಿ ಅವನಿಗೆ ತನಗಿಷ್ಟವಾದ ಕೆಲಸವೇ ಸಿಕ್ಕಿದಂತಾಯಿತು. ಶ್ರೀರಾಮಕೃಷ್ಣರು ಹೇಳುತ್ತಿದ್ದರು : ''ರಾಧಾಗೋವಿಂದನ ಪೂಜೆಗೆ ಕುಳಿತರೆ ಅಕ್ಷಯನು ಅದರಲ್ಲಿ ಎಷ್ಟು ತನ್ಮಯನಾಗಿರುತ್ತಿದ್ದನೆಂದರೆ ಆ ಸಮಯದಲ್ಲಿ ಅನೇಕ ಜನರು ವಿಷ್ಣುಮಂದಿರಕ್ಕೆ ಬಂದರೂ ಅವನಿಗೆ ಅದರ ಅರಿವೇ ಇರುತ್ತಿರಲಿಲ್ಲ. ಹೀಗೆ ಎರಡು ಗಂಟೆ ಕಳೆದಮೇಲೆ ಅವನಿಗೆ ಪ್ರಜ್ಞೆ ಬರುತ್ತಿತ್ತು.'' ಮಂದಿರದಲ್ಲಿ ನಿತ್ಯ ಪೂಜೆಯ ನಂತರ ಅಕ್ಷಯನು ಪಂಚವಟಿಗೆ ಹೋಗಿ ಅಲ್ಲಿ ಶಿವಪೂಜೆ ಮಾಡುತ್ತಿದ್ದನೆಂದು ಹೃದಯನು ಹೇಳುತ್ತಾನೆ. ಇದಾದ ನಂತರ ಅವನು ತಾನೇ ಅಡಿಗೆ ಊಟ ಮುಗಿಸಿ ಅನಂತರ ಭಾಗವತಪಠನ ಮಾಡುತ್ತಿದ್ದ. ವ್ಯಾಕುಲತೆಯ ತೀವ್ರತೆಯಿಂದಾಗಿ ಅವನು ನ್ಯಾಸ ಪ್ರಾಣಯಾಮಾದಿಗಳನ್ನು ಸ್ವಲ್ಪ ಅತಿಯಾಗಿಯೇ ಮಾಡುತ್ತಿದ್ದ. ಇದರಿಂದ ಅವನ ಕಂಠ ಮತ್ತು ನಾಲಗೆ ಊದಿಕೊಂಡು ಕೆಲವೊಮ್ಮೆ ರಕ್ತ ಬರುತ್ತಿತ್ತು. ಅವನ ಭಕ್ತಿ, ವ್ಯಾಕುಲತೆಯನ್ನು ನೋಡಿ ಶ್ರೀರಾಮಕೃಷ್ಣರಿಗೆ ಅವನ ಮೇಲೆ ತುಂಬ ಪ್ರೀತಿ.

4. ಹೀಗೆ ಕೆಲವು ವರ್ಷಗಳು ಕಳೆದವು. ೧೮೬೫ರ ಕೊನೆಯ ಭಾಗ. ಅಕ್ಷಯನ ಮನೋಭಾವವನ್ನರಿತು ಅವನ ಚಿಕ್ಕಪ್ಪ ರಾಮೇಶ್ವರನು ಅವನಿಗೆ ವಿವಾಹ ಮಾಡಿಸಲು ನಿರ್ಧರಿಸಿದ. ಕಾಮಾರಪುಕುರದ ಹತ್ತಿರ ಕುಚೇಕೋಲ ಎಂಬ ಗ್ರಾಮದಲ್ಲಿ ಒಬ್ಬಳು ವಧುವನ್ನು ನಿಶ್ಚಯ ಮಾಡಿದನು. ಈಗ ರಾಮೇಶ್ವರನು ಅಕ್ಷಯನನ್ನು ಕರೆದುಕೊಂಡು ಹೋಗಲು ದಕ್ಷಿಣೇಶ್ವರಕ್ಕೆ ಬಂದನು. ಆಗ ಚೈತ್ರಮಾಸ. ಚೈತ್ರಮಾಸದಲ್ಲಿ ಪ್ರಯಾಣ ಹೊರಡುವುದು ನಿಷಿದ್ಧವೆಂದು ಇತರರು ಆಕ್ಷೇಪಿಸಿದರೂ ಅವನು ಕೇಳಲಿಲ್ಲ. ಬೇರೆಕಡೆಯಿಂದ ಮನೆಗೆ ಹಿಂದಿರುಗುವಾಗ ಈ ನಿಷೇಧವನ್ನು ಮಾನ್ಯಮಾಡಬೇಕಾಗಿಲ್ಲ ಎಂದನು. ಅಕ್ಷಯನನ್ನು ಮನೆಗೆ ಕರೆದುಕೊಂಡುಹೋಗಿ ಕೆಲವೇ ದಿನಗಳಲ್ಲಿ ಅವನ ವಿವಾಹ ಮಾಡಿಸಿತು (ವೈಶಾಖಮಾಸ, ಕ್ರಿ.ಶ. ೧೮೬೬).

5. ವಿವಾಹದ ನಂತರ ಅಕ್ಷಯನು ಮಾವನಮನೆಯಲ್ಲಿದ್ದಾಗ ಅವನಿಗೆ ಕಾಯಿಲೆ ಶುರುವಾಯಿತು. ರಾಮೇಶ್ವರನು ಸುದ್ದಿಯನ್ನು ಕೇಳಿ ಕೂಡಲೆ ಅವನನ್ನು ಕಾಮಾರಪುಕುರಕ್ಕೆ ಕರೆದುಕೊಂಡು ಬಂದನು. ಔಷಧೋಪಚಾರದಿಂದ ಅವನ ಆರೋಗ್ಯ ಸುಧಾರಿಸಲು ಅವನನ್ನು ಮತ್ತೆ ದಕ್ಷಿಣೇಶ್ವರಕ್ಕೆ ಕಳಿಸಿಕೊಟ್ಟನು. ದಕ್ಷಿಣೇಶ್ವರಕ್ಕೆ ಬಂದ ಮೇಲೆ ಅವನು ಹೆಚ್ಚು ಹೆಚ್ಚು ಆರೋಗ್ಯವಂತನಾದ. ಆದರೆ ಇದ್ದಕ್ಕಿದ್ದಂತೆ ಒಂದು ದಿನ ಜ್ವರ ಬಂತು. ಇದು ಸಾಧಾರಣ ಜ್ವರ, ಬೇಗನೆ ವಾಸಿಯಾಗುವುದು ಎಂದು ವೈದ್ಯರುಗಳು ಭಾವಿಸಿದರು.

6. ಅಕ್ಷಯನು ಮಾವನ ಮನೆಯಲ್ಲಿ ಕಾಯಿಲೆ ಬಿದ್ದ ಸುದ್ದಿ ತಿಳಿದು ಶ್ರೀರಾಮಕೃಷ್ಣರು ಹೃದಯನಿಗೆ ಹೀಗೆ ಹೇಳಿದ್ದರಂತೆ : "ಹೃದು, ಶಕುನ ಒಳ್ಳೆಯದಿಲ್ಲ, ಯಾವುದೊ ರಾಕ್ಷಸಗಣದ ಕನ್ಯೆಗೆ ವಿವಾಹ ಮಾಡಿಕೊಟ್ಟಿರಬೇಕು, ಹುಡುಗ ಸತ್ತು ಹೋಗುತ್ತಾನೊ ಏನೊ ?" ಅದು ಏನೇ ಇರಲಿ, ಈಗ ಮೂರು ನಾಲ್ಕು ದಿನಗಳಾದರೂ ಜ್ವರ ನಿಲ್ಲಲಿಲ್ಲ. ಶ್ರೀರಾಮಕೃಷ್ಣರು ಹೃದಯನನ್ನು ಕರೆದು ಹೇಳಿದರು: "ಡಾಕ್ಟರುಗಳಿಗೆ ತಿಳಿಯುತ್ತಿಲ್ಲ; ಅಕ್ಷಯ ಈಗ ಗಂಭೀರ ಸ್ಥಿತಿಯಲ್ಲಿರುವನು, ಬೇರೆ ಒಳ್ಳೆಯ ಡಾಕ್ಟರನ್ನು ಕರೆಸಿ ಒಳ್ಳೆಯ ಚಿಕಿತ್ಸೆ ಮಾಡಿಸು. ಆದರೆ ಹುಡುಗ ಬದುಕುವುದಿಲ್ಲ."

7. ಹೃದಯನು ಹೇಳುತ್ತಾನೆ : "ಅವರ ಮಾತನ್ನು ಕೇಳಿ ನಾನು ಹೇಳಿದೆ, 'ಛಿ, ಛಿ, ಮಾವ, ನಿನ್ನ ಬಾಯಿಂದ ಏಕೆ ಇಂಥ ಮಾತು ಬರುತ್ತಿದೆಯೊ ಏನೋ ! ಅದಕ್ಕೆ ಅವರೆಂದರು 'ನನ್ನಿಚ್ಛೆಯಿಂದ ನಾನು ಹಾಗೆ ಹೇಳಿದೆನೆ ? ತಾಯಿ ತಿಳಿಸಿದಂತೆ ಮತ್ತು ಹೇಳಿಸಿದಂತೆ ನನ್ನಿಚ್ಛೆಯಿಲ್ಲದಿದ್ದರೂ ನಾನು ಹೇಳಲೇಬೇಕು. ಅಕ್ಷಯನು ಸಾಯಬೇಕೆಂಬುದು ನನ್ನ ಇಚ್ಛೆಯೇನು ?"

8. ಅವರ ಮಾತು ಕೇಳಿ ಹೃದಯನಿಗೆ ತುಂಬ ವ್ಯಥೆಯಾಯಿತು. ಉತ್ತಮ ವೈದ್ಯರನ್ನು ಕರೆಸಿ ಸಾಕಷ್ಟು ಔಷಧೋಪಚಾರ ಮಾಡಿಸಿದನು. ಆದರೆ ರೋಗವು ಉಲ್ಬಣವಾಗುತ್ತಲೇ ಹೋಯಿತು. ಹೀಗೆ ಒಂದು ತಿಂಗಳು ಕಳೆಯಿತು. ಅಕ್ಷಯನ ಮೃತ್ಯು ಸನ್ನಿಹಿತವಾಯಿತು. ಶ್ರೀರಾಮಕೃಷ್ಣರು ಅವನ ಹಾಸಿಗೆಯ ಪಕ್ಕದಲ್ಲಿ ಕುಳಿತು ಹೇಳಿದರು : "ಅಕ್ಷಯ, ಗಂಗಾ ನಾರಾಯಣ ಓಂ ರಾಮ ! ಎಂದು ಹೇಳು." ಅಕ್ಷಯನು ಆ ಮಂತ್ರವನ್ನು ಮೂರನೆಯ ಬಾರಿ ಉಚ್ಚರಿಸಿ ಮುಗಿಯುವಷ್ಟರಲ್ಲಿ ಅವನ ಪ್ರಾಣ ಪಕ್ಷಿ ಹಾರಿಹೋಯಿತು. ಹೃದಯನು ಹೇಳಿರುವನು–ಅಕ್ಷಯನು ಸಾವನ್ನಪ್ಪಿದ ಮೇಲೆ ತಾನು ದುಃಖದಿಂದ ಎಷ್ಟು ಅತ್ತನೋ ಅಷ್ಟೇ ಶ್ರೀರಾಮಕೃಷ್ಣರು ಭಾವಾವೇಶದಿಂದ ಗಹಗಹಿಸಿ ನಕ್ಕಿದ್ದರು.

9. ಸುಂದರನೂ ಪುತ್ರ ಸಮಾನನೂ ಆಗಿದ್ದ ಅಕ್ಷಯನ ಮೃತ್ಯುವನ್ನು ದಿವ್ಯ ದೃಷ್ಟಿಯಿಂದ ಕಂಡು ಶ್ರೀರಾಮಕೃಷ್ಣರು ಎಷ್ಟೇ ನಕ್ಕಿದ್ದರೂ ಅವರ ಮನಸ್ಸಿಗೆ ತುಂಬ ಆಘಾತವುಂಟಾಗಿತ್ತು ಎಂಬುದು ನಿಜ. ಅವರು ಆ ಸಮಯದಲ್ಲಿ ಭಾವಾವಸ್ಥೆಯಿಂದ ಮೃತ್ಯುವೆಂಬುದು ಒಂದು ಅವಸ್ಥಾಂತರ ಎಂದು ನೋಡಿದರು. ಆದರೆ ಸಾಮಾನ್ಯ ಸ್ಥಿತಿಗೆ ಬಂದ ಮೇಲೆ ಅವರಿಗೆ ಅತ್ಯಂತ ಪ್ರಿಯವಸ್ತುವನ್ನು ಕಳೆದುಕೊಂಡುದರ ವೇದನೆಯಾಯಿತು. ಮಥುರನು ಬಂದು ಇಳಿದುಕೊಳ್ಳುತ್ತಿದ್ದ ಮನೆಯಲ್ಲಿ ಅಕ್ಷಯನು ದೇಹಬಿಟ್ಟಿದ್ದು. ಶ್ರೀರಾಮಕೃಷ್ಣರು ಅನಂತರ ಎಂದೂ ಅಲ್ಲಿ ಇರುತ್ತಿರಲಿಲ್ಲ.

10. ಅಕ್ಷಯನ ಸಾವಿನ ನಂತರ ಶ್ರೀರಾಮಕೃಷ್ಣರ ಅಣ್ಣ ರಾಮೇಶ್ವರನು ರಾಧಾಗೋವಿಂದನ ಪೂಜೆಗೆ ನಿಯುಕ್ತನಾದ. ಆದರೆ ಸಂಸಾರದ ಹೊರೆ ಅವನ ಮೇಲೆ ಇತ್ತು. ಆದ್ದರಿಂದ ಅವನು ಆಗಾಗ ಕಾಮಾರಪುಕುರಕ್ಕೆ ಹೋಗಿಬರಬೇಕಾಗುತ್ತಿತ್ತು.

ಅವನಿಲ್ಲದಾಗ ರಾಮಚಂದ್ರ ಚಟ್ಟೋಪಾಧ್ಯಾಯ ಮತ್ತು ದೀನನಾಥ ಎಂಬುವವರು ಅವನ ಕೆಲಸ ಮಾಡುತ್ತಿದ್ದರು

11. ಅಕ್ಷಯನ ಮೃತ್ಯುವಿನ ಸ್ವಲ್ಪ ಕಾಲದ ನಂತರ ಮಥುರನು ಶ್ರೀರಾಮಕೃಷ್ಣರನ್ನು ತನ್ನ ಹೊಲದ ಮನೆಗೆ ಮತ್ತು ತನ್ನ ಗುರುವಿನ ಮನೆಗೆ ಕರೆದುಕೊಂಡು ಹೋಗಿದ್ದನು. ಅಕ್ಷಯನ ಅಗಲುವಿಕೆಯಿಂದಾದ ದುಃಖವನ್ನು ಅವರು ಮರೆಯುವಂತೆ ಮಾಡಲು ಅವರನ್ನು ಹೀಗೆ ದೂರ ಕರೆದುಕೊಂಡು ಹೋಗಿದ್ದನು ಎನಿಸುತ್ತದೆ, ಒಂದು ಕಡೆ ಅವನು ಶ್ರೀರಾಮಕೃಷ್ಣರನ್ನು ದೇವತೆಯಂತೆ ಆರಾಧಿಸುತ್ತಿದ್ದರೂ, ಇನ್ನೊಂದು ದೃಷ್ಟಿಯಿಂದ ಅವರನ್ನು ಎಳೆಯ ಬಾಲಕನಂತೆ ಎಲ್ಲ ರೀತಿಯಿಂದಲೂ ಅವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದ. ಶ್ರೀರಾಮಕೃಷ್ಣರು ಅವನ ಹೊಲದ ಮನೆಗೆ ಹೋಗಿದ್ದಾಗ ಒಂದು ಹಳ್ಳಿಯಲ್ಲಿ ಜನರ ಶೋಚನೀಯ ಸ್ಥಿತಿಯನ್ನು ಕಂಡು ಅವರು ತುಂಬ ನೊಂದರು. ಅವರನ್ನೆಲ್ಲ ಕರೆಸಿ ಮಥುರನಿಂದ ಪ್ರತಿಯೊಬ್ಬರಿಗೂ ತಲೆಗೆ ಹಾಕಿಕೊಳ್ಳಲು ಎಣ್ಣೆ, ಬಟ್ಟೆ ಮತ್ತು ಊಟ ಕೊಡಿಸಿದರು. ಈ ಘಟನೆ ನಡೆದದ್ದು ರಾಣಾಘಾಟಿನ ಹತ್ತಿರವಿರುವ ತಲಾಯ್‌ಘಾಟಿನಲ್ಲಿ. ಆಗ ಶ್ರೀರಾಮಕೃಷ್ಣರು ಮಥುರನೊಡನೆ ದೋಣಿಯಲ್ಲಿ ಓಡಾಡುತ್ತಿದ್ದರು.

12. ಮಥುರನ ಹಳೆಯ ಮನೆಯೂ ಆ ಹೊಲದ ಪ್ರದೇಶದಲ್ಲಿಯೇ ಇತ್ತು. ಅವನ ಗುರುವಿನ ಮನೆ ಅದಕ್ಕೆ ಸಮೀಪದಲ್ಲಿತ್ತು. ಗುರುವಿನ ಮನೆಯಲ್ಲಿ ಆಸ್ತಿ ಪಾಲು ಮಾಡಿಕೊಳ್ಳುವ ವಿಷಯದಲ್ಲಿ ಜಗಳ ನಡೆಯಿತು. ಮಥುರನು ಮಧ್ಯಸ್ಥಿಕೆ ವಹಿಸಲು ಆಹ್ವಾನದ ಮೇರೆಗೆ ಅಲ್ಲಿಗೆ ಹೋಗಿದ್ದನು. ಮಥುರನು ಅಲ್ಲಿಗೆ ಹೋಗುವಾಗ ಶ್ರೀರಾಮಕೃಷ್ಣರು ಮತ್ತು ಹೃದಯ ಇವರನ್ನು ಆನೆಯ ಮೇಲೆ ಕರೆದುಕೊಂಡು ಹೋದನು, ತಾನು ಪಲ್ಲಕ್ಕಿಯಲ್ಲಿ ಹೋದನು. ಗುರುವಿನ ಮನೆಯವರ ಆದರಾತಿಥ್ಯದಿಂದ ಶ್ರೀರಾಮಕೃಷ್ಣರು ಸಂತೃಪ್ತರಾದರು. ಅಲ್ಲಿ ಕೆಲವು ವಾರಗಳಿದ್ದು ಅವರು ದಕ್ಷಿಣೇಶ್ವರಕ್ಕೆ ಹಿಂದಿರುಗಿದರು.

13. ಇದಾದ ಸ್ವಲ್ಪಕಾಲದ ನಂತರ ಇನ್ನೊಂದು ವಿಶೇಷ ಘಟನೆ ಸಂಭವಿಸಿತು. ಕಲಕತ್ತೆಯ ಕಲುಟೊಲ ಎಂಬ ಪ್ರದೇಶ. ಅಲ್ಲಿಯ ಕಾಳೀನಾಥ ದತ್ತನ ಮನೆಯಲ್ಲಿ ಹರಿಸಭೆ ಏರ್ಪಟ್ಟಿತ್ತು ಮತ್ತು ಶ್ರೀರಾಮಕೃಷ್ಣರನ್ನು ಅದಕ್ಕೆ ಅವನು ಆಹ್ವಾನಿಸಿದ್ದನು. ಅವರು ಅಲ್ಲಿಗೆ ಹೋದಾಗ ಶ್ರೀಚೈತನ್ಯ ಮಹಾಪ್ರಭುವಿಗೆ ನಿರ್ದಿಷ್ಟವಾದ ಆಸನದಲ್ಲಿ ಕುಳಿತರು—ಅವರು ಆಗ ದಿವ್ಯಭಾವದಲ್ಲಿದ್ದರು. ಈ ಘಟನೆಯ ವಿಸ್ತಾರ ವರ್ಣನೆ ಬೇರೆ ಕಡೆ ಬರುವುದು.* ಇದರ ನಂತರ ಅವರು ಕಾಲ್ನ ಮತ್ತು ನವದ್ವೀಪ—ಈ ಸ್ಥಳಗಳಿಗೆ ಮಥುರನೊಡನೆ ಭೇಟಿಯಿತ್ತರು. ಅಲ್ಲಿ ನಡೆದ ಘಟನೆಗಳ ವಿವರವೂ ಬೇರೆಕಡೆ ಬರುವುದು.* ಅವರು ಈ ಸ್ಥಳಗಳಿಗೆ ಭೇಟಿ ನೀಡಿದುದು ಬಹುಶಃ ೧೮೭೦ರಲ್ಲಿ.

---

* ಗುರುಭಾವ, ಉತ್ತರಾರ್ಧ, 3ನೆಯ ಅಧ್ಯಾಯ

ನವದ್ವೀಪದ ಹತ್ತಿರ ಗಂಗಾ ನದಿಯಲ್ಲಿ ಹೋಗುವಾಗ ಯಾವ ರೀತಿ ದಿವ್ಯ ಭಾವ ಅವರಿಗೆ ಉಂಟಾಗಿತ್ತೊ, ಅದೇ ರೀತಿಯ ಅನುಭವ ನವದ್ವಿಪದಲ್ಲಿ ಆಗಲಿಲ್ಲ. ಮಥುರ ಬಾಬು ಮತ್ತಿತರರು ಇದರ ಕಾರಣವನ್ನು ಕೇಳಿದಾಗ ಶ್ರೀರಾಮಕೃಷ್ಣರು ಹೇಳಿದರು : "ಶ್ರೀಚೈತನ್ಯನ ಲೀಲಾಸ್ಥಾನವಾದ ಪುರಾತನ ನವದ್ವೀಪವು ಗಂಗಾ ನದಿಯಲ್ಲಿ ಮುಳುಗಿ ಹೋಗಿದೆ. ನದಿಯೊಳಗಿನ ಮರಳು ದಿಬ್ಬವಿರುವ ಜಾಗದಲ್ಲಿಯೇ ಅವನ ಲೀಲೆ ನಡೆದದ್ದು." ಆದ್ದರಿಂದಲೇ ಅವರಿಗೆ ಅಲ್ಲಿ ದಿವ್ಯಭಾವವುಂಟಾಯಿತು.

14. ಮಥುರನು ನಿರಂತರವಾಗಿ ಹದಿನಾಲ್ಕು ವರ್ಷ ಶ್ರೀರಾಮಕೃಷ್ಣರ ಸೇವೆ ಮಾಡಿದ್ದ. ಇದರ ಪರಿಣಾಮವಾಗಿ ಅವನ ಮನಸ್ಸು ನಿಷ್ಕಾಮವಾಗಿತ್ತು. ಇದನ್ನು ಸಮರ್ಥಿಸುವ ಒಂದು ಘಟನೆಯನ್ನು ಹೃದಯನು ಹೇಳುತ್ತಾನೆ :

ಒಮ್ಮೆ ಮಥುರನಿಗೆ ದೇಹದ ಒಂದು ಸಂಧಿಯಲ್ಲಿ ಕುರು ಎದ್ದು ಓಡಾಡುವುದಕ್ಕಾಗದೆ ಹಾಸಿಗೆ ಹಿಡಿದನು. ಅವನಿಗೆ ಆಗ ಶ್ರೀರಾಮಕೃಷ್ಣರನ್ನು ನೋಡಬೇಕೆನಿಸಿತು. ಹೃದಯನು ಅವನ ಇಂಗಿತವನ್ನು ಅವರಿಗೆ ತಿಳಿಸಿದಾಗ ಅವರಂದರು, "ನಾನು ಹೋದರೆ ಏನಾಗುವುದು ? ಅವನ ಕುರುವನ್ನು ನಾನು ಗುಣಪಡಿಸಬಲ್ಲೆನೆ ?" ಮಥುರನು ಮತ್ತೆ ಮತ್ತೆ ಹೇಳಿಕಳಿಸಲು ಶ್ರೀರಾಮಕೃಷ್ಣರು ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿ ಅವನ ಮನೆಗೆ ಹೋದರು. ಮಥುರನಿಗೆ ಪರಮಾನಂದವಾಯಿತು. ಅವನು ಬಹಳ ಕಷ್ಟದಿಂದ ಮೇಲೆದ್ದು ದಿಂಬಿಗೆ ಒರಗಿ ಕುಳಿತ. "ತಂದೆ, ನಿಮ್ಮ ಪಾದಧೂಳಿಯನ್ನು ಸ್ವಲ್ಪ ಕೊಡಿ" ಎಂದು ಶ್ರೀರಾಮಕೃಷ್ಣರನ್ನು ಪ್ರಾರ್ಥಿಸಿದ.

ಅವರೆಂದರು, "ನನ್ನ ಪಾದಧೂಳಿಯಿಂದ ಏನಾಗುವುದು ? ನಿನ್ನ ಕುರು ಅದರಿಂದ ಗುಣವಾಗುವುದೆ ?"

ಮಥುರ : "ನಾನು ಅಷ್ಟು ಸಣ್ಣ ಮನಸ್ಸಿನವನೆ ? ನನ್ನ ಕುರು ಗುಣವಾಗುವುದಕ್ಕಾಗಿ ನಾನು ನಿಮ್ಮ ಪಾದಧೂಳಿಯನ್ನು ಕೇಳುವೆನೆ ? ಅದನ್ನು ಗುಣಪಡಿಸಲು ಡಾಕ್ಟರುಗಳಿದ್ದಾರೆ. ನಾನು ಭವಸಾಗರವನ್ನು ದಾಟುವುದಕ್ಕಾಗಿ ನಿಮ್ಮ ಶ್ರೀಚರಣ ರಜವನ್ನು ಬೇಡುತ್ತಿದ್ದೇನೆ."

ಈ ಮಾತನ್ನು ಕೇಳಿ ಶ್ರೀರಾಮಕೃಷ್ಣರು ಭಾವಾವಿಷ್ಟರಾದರು, ಮಥುರನು ಅವರ ಪಾದದ ಮೇಲೆ ಬಿದ್ದು ತನ್ನ ಮಸ್ತಕವನ್ನಿರಿಸಿದ. ಅವನ ಕಣ್ಣುಗಳೆರಡೂ ಕಂಬನಿದುಂಬಿದವು. ಅವನ ಕಾಯಿಲೆಯು ಆ ಸಂದರ್ಭದಲ್ಲಿ ಬೇಗ ವಾಸಿಯಾಯಿತು.

15. ಮಥುರನಿಗೆ ಶ್ರೀರಾಮಕೃಷ್ಣರ ಮೇಲೆ ಎಷ್ಟೊಂದು ಭಕ್ತಿವಿಶ್ವಾಸವಿತ್ತು ಎಂಬುದನ್ನು ಶ್ರೀರಾಮಕೃಷ್ಣರ ಮತ್ತು ಹೃದಯನ ಬಾಯಿಂದ ಕೇಳಿರುವೆವು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಅವನು ಇಹಪರಗಳೆರಡಕ್ಕೂ ಅವರನ್ನೇ ಸಂಪೂರ್ಣ ನೆಚ್ಚಿಕೊಂಡಿದ್ದನು. ಶ್ರೀರಾಮಕೃಷ್ಣರಿಗೂ ಅವನ ಮೇಲೆ ಅಪಾರ ಕೃಪೆ. ಶ್ರೀರಾಮಕೃಷ್ಣರು ಸ್ವತಂತ್ರ ಮನೋಭಾವದವರು. ಕೆಲವು ವಿಷಯಗಳಲ್ಲಿ ಅವನನ್ನು ಪ್ರತಿಭಟಿಸುತ್ತಿದ್ದರು. ಆದರೂ ಅದೆಲ್ಲವನ್ನೂ ಮರೆತು ಅವನ ಪ್ರಾರ್ಥನೆಯಂತೆ ಅವನ ಐಹಿಕ

ಪಾರಮಾರ್ಥಿಕ ಹಿತಾಸಕ್ತಿಗಾಗಿ ಪ್ರಯತ್ನಿಸುತ್ತಿದ್ದರು. ಅವರಿಬ್ಬರ ಸಂಬಂಧ ಎಂಥ ಘನಿಷ್ಠವಾದುದು ಎಂಬುದನ್ನು ಈ ಕೆಳಗಿನ ಘಟನೆ ಸೂಚಿಸುತ್ತದೆ.

ಶ್ರೀರಾಮಕೃಷ್ಣರು ಒಂದುದಿನ ಭಾವಾವಿಷ್ಟರಾಗಿ ಮಥುರನಿಗೆ ಹೇಳಿದರು, "ಮಥುರ್, ನೀನು ಎಲ್ಲಿಯವರೆಗೆ ಬದುಕಿರುವೆಯೊ ಅಲ್ಲಿಯವರೆಗೆ ನಾನು ಇಲ್ಲಿರುತ್ತೇನೆ." ಮಥುರನಿಗೆ ಗಾಬರಿಯಾಯಿತು. ಶ್ರೀ ಜಗನ್ಮಾತೆಯೇ ಶ್ರೀರಾಮಕೃಷ್ಣರ ರೂಪದಲ್ಲಿ ತನ್ನನ್ನೂ ತನ್ನ ಪರಿವಾರದವರನ್ನೂ ರಕ್ಷಿಸುತ್ತಿರುವಳು, ಅವರೇ ಹೊರಟುಹೋದರೆ ಗತಿಯೇನು—ಎಂದು ಅವನು ಭಾವಿಸಿದ. ಅವನು ದೀನಭಾವದಿಂದ ಅವರಿಗೆ ಹೇಳಿದ: "ಹೀಗೇಕೆ ಹೇಳುತ್ತಿರುವಿರಿ, ತಂದೆ ? ನನ್ನ ಪತ್ನಿ ಮತ್ತು ಪುತ್ರ ದ್ವಾರಕನಾಥ ಇವರೆಲ್ಲ ನಿಮ್ಮನ್ನು ತುಂಬ ಪ್ರೀತಿಸುತ್ತಾರೆ." ಮಥುರನ ಕಾತರತೆಯನ್ನು ನೋಡಿ ಶ್ರೀರಾಮ ಕೃಷ್ಣರು ಹೇಳಿದರು : "ಆಗಲಿ, ನಿನ್ನ ಪತ್ನಿ ಮತ್ತು ದ್ವಾರಕಾನಾಥನು ಇರುವವರೆಗೆ ಇರುತ್ತೇನೆ." ನಿಜವಾಗಿಯೂ ಹಾಗೆಯೇ ಆಯಿತು. ಜಗದಂಬಾದಾಸಿ ಮತ್ತು ದಾರಕ ನಾಥರ ದೇಹಾವಸಾನದ ಸ್ವಲ್ಪಕಾಲದಲ್ಲಿಯೇ ಶ್ರೀರಾಮಕೃಷ್ಣರು ದಕ್ಷಿಣೇಶ್ವರವನ್ನು ಬಿಟ್ಟರು. ಜಗದಂಬಾದಾಸಿಯು ೧೮೮೧ರಲ್ಲಿ ಮೃತಪಟ್ಟಳು. ಅನಂತರ ಕೇವಲ ಮೂರು ವರ್ಷ ಶ್ರೀರಾಮಕೃಷ್ಣರು ದಕ್ಷಿಣೇಶ್ವರದಲ್ಲಿದ್ದರು.

ಇನ್ನೊಂದು ದಿನ ಮಥುರನು ಶ್ರೀರಾಮಕೃಷ್ಣರಿಗೆ ಹೇಳಿದ : "ತಂದೆ, ನೀವು ಹೇಳುತ್ತಿದ್ದೀರಿ, ನಿಮ್ಮ ಭಕ್ತರುಗಳು ಬರುತ್ತಾರೆ ಎಂದು. ಆದರೆ ಎಲ್ಲಿ ? ಯಾರೂ ಬರುತ್ತಲೇ ಇಲ್ಲ ?" ಶ್ರೀರಾಮಕೃಷ್ಣರು ಉತ್ತರಿಸಿದರು : "ನನಗೇನು ಗೊತ್ತಪ್ಪ ? ತಾಯಿ ಯಾವಾಗ ಕರೆದುಕೊಂಡು ಬರುತ್ತಾಳೊ ? ಅಂತು ಅವರು ಬರುತ್ತಾರೆಂದು ಅವಳೇ ತಿಳಿಸಿರುವುದು. ಆಕೆ ಏನೇನು ತೋರಿಸಿದ್ದಳೋ ಅದೆಲ್ಲ ಸತ್ಯವಾಗಿವೆ. ಇದು ಏಕೆ ಸತ್ಯವಾಗುತ್ತಿಲ್ಲವೊ ಯಾರಿಗೆ ಗೊತ್ತು." ಶ್ರೀರಾಮಕೃಷ್ಣರು ಖಿನ್ನ ಮನಸ್ಕ ರಾದರು, ತಮ್ಮ ದರ್ಶನ ಸುಳ್ಳೆ ಎಂದು ಭಾವಿಸತೊಡಗಿದರು. ಮಥುರನು ಕೂಡಲೇ ಅವರನ್ನು ಸಮಾಧಾನ ಮಾಡಿದನು: "ಅವರು ಬರಲಿ, ಬರದೆ ಇರಲಿ, ಆದರಲ್ಲೇನಂತೆ? ನಾನಿದ್ದೇನೆ ನಿಮ್ಮ ನಿತ್ಯ ಭಕ್ತನಾಗಿ. ನಿಮ್ಮ ದರ್ಶನ ಸತ್ಯವಾಗಲಿಲ್ಲವೇನು ? ನಾನು ಒಬ್ಬನೇ ಒಂದು ನೂರು ಭಕ್ತರಿಗೆ ಸಮಾನ. ಆದ್ದರಿಂದಲೇ ತಾಯಿ ಅನೇಕ ಭಕ್ತರು ಬರುತ್ತಾರೆ ಎಂದು ಹೇಳಿದ್ದು." ಮಥುರನು ಆ ವಿಷಯವನ್ನು ಮುಂದುವರಿಸದೆ ಶ್ರೀ ರಾಮಕೃಷ್ಣರ ಮನಸ್ಸನ್ನು ಬೇರೆ ಕಡೆ ಹರಿಸಿದನು.

16. ಸುಖ ದುಃಖ, ಯೋಗವಿಯೋಗ, ಜನ್ಮ ಮೃತ್ಯು, ಸಂಪತ್ತು ವಿಪತ್ತು ಗಳ ತರಂಗದೊಂದಿಗೆ ಕಾಲವು ಓಡುತ್ತಾ ಕ್ರಿ.ಶ. ೧೮೭೧ನೆಯ ಇಸವಿಯನ್ನು ತಲುಪಿತು. ಆಷಾಢ ಮಾಸವು ಅರ್ಧ ಕಳೆದಿತ್ತು. ಆಗ ಮಥುರನಾಥನಿಗೆ ಜ್ವರ ಶುರುವಾಯಿತು. ಅದು ಕ್ರಮೇಣ ಉಲ್ಬಣವಾಯಿತು. ಹಾಸಿಗೆಯಿಂದ ಮೇಲೇಳದಾದ, ಮಾತು ನಿಂತು ಹೋಯಿತು. ಶ್ರೀರಾಮಕೃಷ್ಣರಿಗೆ ಮೊದಲೇ ತಿಳಿದಿತ್ತು–ಜಗನ್ಮಾತೆಯು ತಮ್ಮ ಭಕ್ತ ನನ್ನು ತನ್ನ ಮಂಡಲಿಗೆ ಕರೆದುಕೊಳ್ಳುತ್ತಿರುವಳು, ಮಥುರನ ಭಕ್ತಿಯ ವ್ರತ ಮುಗಿ

ಯಿತು ಎಂದು. ಆದ್ದರಿಂದ ಪ್ರತಿದಿನ ಅವನನ್ನು ನೋಡಿಕೊಂಡು ಬರಲು ಹೃದಯು ನನ್ನು ಕಳಿಸುತ್ತಿದ್ದರೇ ಹೊರತು ತಾವು ಒಂದು ದಿನವೂ ಹೋಗಲಿಲ್ಲ. ಅಂದು ಕೊನೆಯ ದಿನ ಅಂತಿಮ ಕ್ಷಣ ಬಂದಿತೆಂದು ಮಥುರನನ್ನು ಕಾಲೀಘಾಟಿಗೆ ಕರೆದುಕೊಂಡು ಹೋದರು. ಅಂದು ಶ್ರೀರಾಮಕೃಷ್ಣರು ಹೃದಯುನನ್ನೂ ಕಳಿಸಲಿಲ್ಲ. ಮಧ್ಯಾಹ್ನ ಅವರು ಎರಡು-ಮೂರು ಘಂಟೆ ಗಂಭೀರ ಧ್ಯಾನದಲ್ಲಿ ಮುಳುಗಿದ್ದರು. ಆಗ ಅವರು ತಮ್ಮ ಜ್ಯೋತಿರ್ಮಯ ದೇಹದಲ್ಲಿ ಭಕ್ತನ ಹತ್ತಿರ ಹೋಗಿ ಅವನನ್ನು ಕೃತಾರ್ಥನನ್ನಾಗಿಸಿದರು.

17. ಧ್ಯಾನದನಂತರ ಹೃದಯುನನ್ನು ಹತ್ತಿರ ಕರೆದರು. ಆಗ ಸಂಜೆ ಐದುಗಂಟೆಯಾಗಿತ್ತು ಅವರಂದರು : "ಶ್ರೀಜಗನ್ಮಾತೆಯ ಸಖಿಯರು ಮಥುರನನ್ನು ಆದರದಿಂದ ದಿವ್ಯ ಮಾರ್ಗದಲ್ಲಿ ಕರೆದುಕೊಂಡು ಹೋದರು; ಅವನ ಆತ್ಮವೂ ದೇವೀಲೋಕವನ್ನು ಸೇರಿತು." ಅನಂತರ ನಡುರಾತ್ರಿಯಲ್ಲಿ ಹಿಂದಿರುಗಿ ಬಂದ ಮಂದಿರದ ಕೆಲಸಗಾರರು ಹೃದಯುನಿಗೆ ಹೇಳಿದರು, ಮಥುರನು ಐದು ಗಂಟೆಗೆ ದೇಹಬಿಟ್ಟನು ಎಂದು. ಹೀಗೆ ಅವನು ಪುಣ್ಯಲೋಕವನ್ನು ಸೇರಿದರೂ ಅವನಲ್ಲಿ ಭೋಗವಾಸನೆಯು ಸಂಪೂರ್ಣ ಕ್ಷಯವಾಗಿರಲಿಲ್ಲ. ಆದ್ದರಿಂದ ಅವನು ಮತ್ತೆ ಭೂಮಿಗೆ ಬರಬೇಕಾಗುವುದೆಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು

ಇಪ್ಪತ್ತನೆಯ ಅಧ್ಯಾಯ

ಷೋಡಶೀ ಪೂಜೆ

1. ವಿವಾಹದನಂತರ ಶ್ರೀಮಾತೆ ಮತ್ತು ಶ್ರೀರಾಮಕೃಷ್ಣರ ಪ್ರಥಮ ಭೇಟಿ 2. ಹಳ್ಳಿಯ ಬಾಲಕಿಯರ ದೇಹ ಮನಸ್ಸುಗಳ ಬೆಳವಣಿಗೆ ನಿದಾನ 3. ಶ್ರೀರಾಮ ಕೃಷ್ಣರನ್ನು ಮೊದಲಬಾರಿಗೆ ನೋಡಿದಾಗ ಶ್ರೀಮಾತೆಯವರ ಮನಸ್ಥಿತಿ 4. ಶ್ರೀ ಮಾತೆಯವರು ಆನಂದಭಾವದಲ್ಲಿಯೇ ಜಯರಾಂಬಾಟಿಯಲ್ಲಿದ್ದರು 5. ಅವರ ಮನೋವ್ಯಥೆಗೆ ಕಾರಣ ಮತ್ತು ದಕ್ಷಿಣೇಶ್ವರಕ್ಕೆ ಬರುವ ಸಂಕಲ್ಪ 6. ಪ್ರಯಾಣದ ವ್ಯವಸ್ಥೆ 7. ಹಾದಿಯ ಮಧ್ಯೆ ಜ್ವರದಿಂದ ತ್ರಸ್ತರಾದುದು, ಆ ಸಂದರ್ಭದಲ್ಲಿ ಶ್ರೀ ಮಾತೆಯವರಿಗಾದ ಅದ್ಭುತ ದರ್ಶನ 8. ಶ್ರೀಮಾತೆಯವರು ದಕ್ಷಿಣೇಶ್ವರವನ್ನು ತಲುಪಿದರು 9. ಶ್ರೀರಾಮಕೃಷ್ಣರ ವರ್ತನೆಯಿಂದಾಗಿ ಅವರಿಗೆ ಆನಂದ ಉಂಟಾಯಿತು 10. ಶ್ರೀರಾಮಕೃಷ್ಣರು ತಮ್ಮ ಬ್ರಹ್ಮಜ್ಞಾನವನ್ನು ಪರೀಕ್ಷಿಸಿದುದು ಮತ್ತು ಪತ್ನಿಯ ಶಿಕ್ಷಣ 11. ಇದಕ್ಕೆ ಮುಂಚೆಯೇ ಅವರು ಇದನ್ನು ಮಾಡ ದಿದ್ದುದಕ್ಕೆ ಕಾರಣ 12. ಅವರು ಶಿಕ್ಷಣ ನೀಡುವ ವೈಖರಿ ಮತ್ತು ಶ್ರೀಮಾತೆ ಯವರೊಡನೆ ಅವರು ವರ್ತಿಸಿದ ರೀತಿ 13. ಅವರನ್ನು ಶ್ರೀರಾಮಕೃಷ್ಣರು ಹೇಗೆ ನೋಡುತ್ತಿದ್ದರು ? ಶ್ರೀರಾಮಕೃಷ್ಣರು ತಮ್ಮ ಸಂಯಮವನ್ನು ಪರೀಕ್ಷಿಸಿದರು. 14. ಯಾವ ಅವತಾರ ಪುರುಷರೂ ಪತ್ನಿಯೊಡನೆ ಶ್ರೀರಾಮಕೃಷ್ಣರಂತೆ ವರ್ತಿಸ ಲಿಲ್ಲ. 15. ಶ್ರೀಮಾತೆಯವರ ಅಲೌಕಿಕತೆಯ ಬಗ್ಗೆ ಶ್ರೀರಾಮಕೃಷ್ಣರ ಉಕ್ತಿ 16. ಪರೀಕ್ಷೆಯಲ್ಲಿ ಯಶಸ್ವಿಯಾಗಲು ಶ್ರೀರಾಮಕೃಷ್ಣರ ಸಂಕಲ್ಪ 17. ಷೋಡಶೀ ಪೂಜೆಯ ವ್ಯವಸ್ಥೆ 18. ಶ್ರೀಮಾತೆಯವರ ವಿಧಿಪೂರ್ವಕ ಪೂಜೆ. 19. ಪೂಜಾಂತ್ಯ ದಲ್ಲಿ ಸಮಾಧಿ, ಸಾಧನೆಯ ಫಲ ಸಮರ್ಪಣೆ 20. ಶ್ರೀರಾಮಕೃಷ್ಣರ ನಿರಂತರ ಸಮಾಧಿಯಿಂದಾಗಿ ಶ್ರೀಮಾತೆಯವರ ನಿದ್ರಾಭಂಗ ಮತ್ತು ಅವರು ಕಾಮಾರಪುಕುರಕ್ಕೆ ಹಿಂದಿರುಗಿದುದು.

1. ಮಥುರನು ಹೊರಟುಹೋದ. ದಕ್ಷಿಣೇಶ್ವರದ ಕಾಳೀಮಂದಿರದಲ್ಲಿ ಜನ ಜೀವನ ಪ್ರವಾಹವು ಎಂದಿನಂತೆಯೇ ಮುಂದುವರಿಯಿತು. ದಿನ ತಿಂಗಳುಗಳು ಉರುಳಿ ೧೮೭೨ನೇ ಇಸವಿಯ ಫಾಲ್ಗುಣ ಮಾಸವೂ ಬಂದಿತು. ಈ ಸಮಯದಲ್ಲಿ ಶ್ರೀರಾಮ ಕೃಷ್ಣರ ಜೀವನಕ್ಕೆ ಸಂಬಂಧಿಸಿದ ಒಂದು ವಿಶೇಷ ಘಟನೆ ಸಂಭವಿಸಿತು. ಇದನ್ನು ತಿಳಿಯ ಬೇಕಾದರೆ ಜಯರಾಂಬಾಟಿಯ ಶ್ರೀರಾಮಕೃಷ್ಣರ ಮಾವನ ಮನೆಯಲ್ಲಿಯ ವಿಧ್ಯ ಮಾನದ ಕಡೆ ನಾವು ಗಮನ ಹರಿಸಬೇಕು.

೧೮೬೭ರಲ್ಲಿ ಶ್ರೀರಾಮಕೃಷ್ಣರು ಹೃದಯ ಮತ್ತು ಭೈರವಿ ಬ್ರಾಹ್ಮಣಿ ಇವರೊಡನೆ ಕಾಮಾರಪುಕುರಕ್ಕೆ ಭೇಟಿಯಿತ್ತ ವಿಚಾರವನ್ನು ಆಗಲೇ ಹೇಳಿರುವೆವು. ಆ ಸಂದರ್ಭದಲ್ಲಿ ಅವರ ಪತ್ನಿಯವರು ಅಲ್ಲಿಗೆ ಜಯರಾಂಬಾಟಿಯಿಂದ ಬಂದಿದ್ದರು; ಯಥಾರ್ಥ ದೃಷ್ಟಿಯಲ್ಲಿ ಅದೇ ಪತಿ-ಪತ್ನಿಯರ ಪ್ರಥಮ ಭೇಟಿ.

2. ತುಲನಾತ್ಮಕವಾಗಿ ನೋಡಿದರೆ ಕಲಕತ್ತೆಯಂತಹ ನಗರದಲ್ಲಿರುವ ಹೆಣ್ಣು ಮಕ್ಕಳ ದೇಹ ಮನಸ್ಸುಗಳು ಹಳ್ಳಿಯ ಹೆಣ್ಣುಮಕ್ಕಳಿಗಿಂತ ಬೇಗ ಬೆಳೆಯುವುವು. ಹಳ್ಳಿಗಳಲ್ಲಿ ಹದಿನೈದು ಹದಿನಾರು ವರ್ಷದ ಹುಡುಗಿಯರಲ್ಲಿಯೂ ಯೌವನದ ಲಕ್ಷಣಗಳು ಕಂಡುಬರುವುದಿಲ್ಲ. ಹಾಗೆಯೇ ಅವರ ಮನಸ್ಸಿನ ಬೆಳವಣಿಗೆಯೂ ನಿಧಾನವಾಗಿರುತ್ತದೆ; ಬಹುಶಃ ಇದಕ್ಕೆ ಕಾರಣ ಹಕ್ಕಿಯು ಪಂಜರದಲ್ಲಿರುವಂತೆ ಅವರು ಸಣ್ಣಜಾಗದಲ್ಲಿ ಮುದುರಿಕೊಂಡು ಇರಬೇಕಾಗಿಲ್ಲ ಮತ್ತು ಸ್ವಾಭಾವಿಕ ವಾತಾವರಣದಲ್ಲಿ ಶುದ್ಧ ಗಾಳಿಯನ್ನು ಸೇವಿಸುತ್ತ ಮುಕ್ತವಾಗಿ ಓಡಾಡಿಕೊಂಡು ಇರಬಹುದು.

3. ಶ್ರೀಮಾತೆಯವರು ತಮ್ಮ ಪತಿಯನ್ನು ಮೊದಲಬಾರಿಗೆ ಸಂಧಿಸಿದಾಗ ಅವರಿಗೆ ಕೇವಲ ಹದಿನಾಲ್ಕು ವರ್ಷ. ದಾಂಪತ್ಯ ಜೀವನದ ಆದರ್ಶದ ಮತ್ತು ಅದರ ಜವಾಬ್ದಾರಿಯ ಅರಿವು ಆಗತಾನೆ ಅವರಲ್ಲಿ ಚಿಗುರೊಡೆಯುತ್ತಿತ್ತು. ಪತಿಯ ಪವಿತ್ರ ಸಹವಾಸದಿಂದ, ಅವರ ನಿಃಸ್ವಾರ್ಥ ಪ್ರೀತಿಯಿಂದ ಶ್ರೀಮಾತೆಯವರಿಗೆ ಆಗ ಅತ್ಯಂತ ಆನಂದವುಂಟಾಗಿತ್ತು. ತಮ್ಮ ಆ ಆನಂದವನ್ನು ಕುರಿತು ಅವರು ಮುಂದೆ ಹೀಗೆ ಹೇಳುತ್ತಿದ್ದರು : "ಹೃದಯಮಧ್ಯದಲ್ಲಿ ಆನಂದದಿಂದ ತುಂಬಿದ ಒಂದು ಬಿಂದಿಗೆಯಿಟ್ಟಿರುವಂತೆ ಅಂದಿನಿಂದ ನನಗೆ ಅನುಭವವಾಗತೊಡಗಿತು. ಆ ಸ್ಥಿರ ದಿವ್ಯ ಆನಂದದಿಂದ ನನ್ನ ಅಂತರ್ಯವು ಹೇಗೆ ತುಂಬಿತುಳುಕುತ್ತಿತ್ತು, ಎಂಬುದನ್ನು ಮಾತಿನ ಮೂಲಕ ಹೇಳಲಾಗುವುದಿಲ್ಲ."

4. ಶ್ರೀರಾಮಕೃಷ್ಣರು ದಕ್ಷಿಣೇಶ್ವರಕ್ಕೆ ಹಿಂದಿರುಗಿದಮೇಲೆ ಶ್ರೀಮಾತೆಯವರು ಆ ಆನಂದವನ್ನು ಅನುಭವಿಸುತ್ತಲೇ ತಂದೆಯ ಮನೆಗೆ ಹೋದರು. ಈ ಆನಂದದ ಪರಿಣಾಮವಾಗಿ ಅವರ ಚಲನವಲನಗಳಲ್ಲಿ ಮತ್ತು ಮಾತಿನಲ್ಲಿ ಗಮನಾರ್ಹ ಬದಲಾವಣೆಯುಂಟಾಗಿತ್ತು ಎಂಬುದನ್ನು ನಾವು ಊಹಿಸಬಹುದು. ಆದರೆ ಸಾಧಾರಣ ಜನರ ಗಮನಕ್ಕೆ ಬರುತ್ತಿತ್ತೊ ಇಲ್ಲವೊ ಸಂದೇಹ. ಏಕೆಂದರೆ ಅದರಿಂದ ಅವರು ವಿಚಲಿತರಾಗದೆ ಶಾಂತಸ್ವಭಾವದವರಾದರು, ಅದು ಅವರನ್ನು ಚಿಂತಾಶೀಲರನ್ನಾಗಿ ಮಾಡಿತ್ತು, ಸ್ವಾರ್ಥತೆಯನ್ನು ನಿರ್ಮೂಲಗೊಳಿಸಿ ನಿಃಸ್ವಾರ್ಥಪ್ರೇಮಿಯನ್ನಾಗಿಸಿತ್ತು ಮತ್ತು ಆಂತರಿಕ ಕೊರತೆಯ ಅರಿವನ್ನು ಸಂಪೂರ್ಣ ಹೋಗಲಾಡಿಸಿ ಎಲ್ಲರ ಸುಖದುಃಖಗಳಲ್ಲಿ ಭಾಗಿಯಾಗಿ ಅವರು ಕರುಣೆಯ ಪ್ರತಿಕೃತಿಯಾಗುವಂತೆ ಮಾಡಿತ್ತು. ಈ ಆಂತರಿಕ ಆನಂದದಿಂದಾಗಿ ಎಂಥ ಶಾರೀರಿಕ ಕಷ್ಟವೂ ಅವರಿಗೆ ಅಂದಿನಿಂದ ಕಷ್ಟವೆನಿಸುತ್ತಿರಲಿಲ್ಲ. ಬಂಧು ಬಳಗದವರು ಅವರಿಗೆ ಪ್ರೀತಿ ಆದರಗಳನ್ನು ತೋರಿಸದಿದ್ದರೆ ಅವರ ಮನಸ್ಸಿಗೆ ಕಷ್ಟವಾಗುತ್ತಿರಲಿಲ್ಲ. ಹೀಗೆ ಎಲ್ಲ ವಿಷಯದಲ್ಲಿಯೂ ಸಂತುಷ್ಟರಾಗಿ ತಮ್ಮಲ್ಲೇ

ತಾವಿದ್ದುಕೊಂಡು ಈಗ ತಂದೆಯ ಮನೆಯಲ್ಲಿ ಕಾಲಕಳೆಯುತ್ತಿದ್ದರು. ಆದರೆ ಶರೀರ ಅಲ್ಲಿದ್ದರೂ ಅವರ ಮನಸ್ಸು ಶ್ರೀರಾಮಕೃಷ್ಣರನ್ನೇ ಅನುಸರಿಸಿ ಹೋಗಿ ದಕ್ಷಿಣೇಶ್ವರ ದಲ್ಲೇ ಇತ್ತು. ಶ್ರೀರಾಮಕೃಷ್ಣರನ್ನು ನೋಡಬೇಕು, ಅವರೊಡನೆ ಇರಬೇಕು ಎಂಬ ಪ್ರಬಲ ಆಕಾಂಕ್ಷೆಯಿದ್ದರೂ ಅದನ್ನು ಮನಸ್ಸಿನಲ್ಲಿಯೇ ಹಿಡಿದಿರಿಸಿಕೊಂಡಿದ್ದರು. ಮೊದಲನೆಯಬಾರಿ ಸಂಧಿಸಿದಾಗ ತಮ್ಮನ್ನು ಅಷ್ಟೊಂದು ಪ್ರೀತಿಯಿಂದ ನೋಡಿ ಕೊಂಡವರು ತಮ್ಮನ್ನು ಮರೆಯಲಿಕ್ಕಿಲ್ಲ—ಸಮಯ ಬಂದಮೇಲೆ ತಮ್ಮನ್ನು ಕರೆಸಿ ಕೊಳ್ಳುತ್ತಾರೆ—ಎಂದು ಶ್ರೀಮಾತೆಯವರು ಭಾವಿಸುತ್ತಿದ್ದರು. ಹೀಗೆಯೇ ಬಹುಕಾಲ ಕಳೆಯಿತು—ತಮ್ಮ ವಿಶ್ವಾಸವನ್ನೇ ಭದ್ರವಾಗಿ ಹಿಡಿದುಕೊಂಡು ಶುಭದಿನವನ್ನು ನಿರೀಕ್ಷಿಸುತ್ತ ಇದ್ದರು.

5. ನಾಲ್ಕು ದೀರ್ಘ ವರ್ಷಗಳು ಕಳೆದವು. ಆದರೆ ಅವರ ಭರವಸೆ ಮಾತ್ರ ಇನ್ನೂ ಕುಂಠಿತವಾಗಲಿಲ್ಲ—ಅವರ ನಿರೀಕ್ಷಣೆ ಒಂದೇ ಸಮನೆ ಮುಂದುವರಿಯಿತು. ಆದರೆ ಅವರ ದೇಹ ಮಾತ್ರ ಒಂದೇ ಸಮನೆ ಉಳಿಯಲಿಲ್ಲ—ಅದು ಸ್ವಾಭಾವಿಕ ವಾಗಿಯೇ ಬದಲಾವಣೆಗೊಳ್ಳುತ್ತ ೧೮೭೨ರಲ್ಲಿ ಅವರನ್ನು ಹದಿನೆಂಟು ವರ್ಷದ ಯುವತಿಯನ್ನಾಗಿಸಿತು. ದೇವಸದೃಶ ಪತಿಯ ಪ್ರಥಮ ದರ್ಶನದಿಂದ ಪಡೆದ ಆನಂದ ದಿಂದ ಅವರು ದೈನಂದಿನ ಸುಖದುಃಖಗಳನ್ನು ಮೀರಿಹೋಗಿದ್ದರೂ ಸಂಸಾರದಲ್ಲಿ ಶುದ್ಧ ಆನಂದವೆಂಬುದೆಲ್ಲಿ ? ಹಳ್ಳಿಯಲ್ಲಿ ಜನರು ಏನೇನೊ ಆಡಿಕೊಳ್ಳುತ್ತಿದ್ದರು. ಗಂಡಸರು ಹರಟೆ ಹೊಡೆಯುವಾಗ ಅವರ ಪತಿಗೆ ಹುಚ್ಚು ಹಿಡಿದಿದೆ ಎನ್ನುತ್ತಿದ್ದರು. "ಬಟ್ಟೆಯನ್ನೆಲ್ಲ ತೆಗೆದುಹಾಕಿ ಹರಿ ಹರಿ ಎಂದು ತಿರುಗಾಡುತ್ತಾರಂತೆ" ಇತ್ಯಾದಿಯಾಗಿ ಮಾತನಾಡಿಕೊಳ್ಳುತ್ತಿದ್ದರು ಜನ. ಹಾಗೆಯೆ ಮಹಿಳೆಯರೂ ಕೂಡ 'ಹುಚ್ಚನ ಹೆಂಡತಿ' ಎಂದು ಅವರನ್ನು ಹಂಗಿಸುತ್ತಿದ್ದರು. ಇದನ್ನೆಲ್ಲ ಕೇಳಿ, ಬಾಯಲ್ಲಿ ಏನೂ ಹೇಳದಿದ್ದರೂ, ಒಳಗೆ ಅತ್ಯಂತ ವೇದನೆಯಾಗುತ್ತಿತ್ತು ಅವರಿಗೆ. ಹಿಂದೆ ನಾನು ಅವರನ್ನು ನೋಡಿದಂತೆಯೇ ಅವರಿಲ್ಲವೆ ? ಜನ ಮಾತನಾಡಿಕೊಳ್ಳುವಂತೆ ಅವರಿಗೆ ನಿಜವಾಗಿಯೂ ಹುಚ್ಚು ಹಿಡಿದಿದೆಯೆ ? ವಿಧಿನಿಯಮದಂತೆ ಅವರಿಗೆ ಹಾಗೆ ಆಗಿರು ವುದು ನಿಜವಾದರೆ ನನ್ನ ಕರ್ತವ್ಯ ಅವರೊಡನಿದ್ದು ಅವರ ಸೇವೆ ಮಾಡುವುದು— ಎಂದು ಅವರು ಭಾವಿಸತೊಡಗಿದರು. ಬಹಳ ಯೋಚಿಸಿ, ಅನಂತರ ತಾವೇ ದಕ್ಷಿಣೇಶ್ವರಕ್ಕೆ ಹೋಗಿ ನಿಜವಾದ ಸ್ಥಿತಿಯನ್ನು ಅರಿತು ಏನು ಮಾಡಬೇಕೊ ಅದನ್ನು ಮಾಡುವುದು ಎಂದು ನಿರ್ಧರಿಸಿದರು.

6. ಫಾಲ್ಗುಣ ಮಾಸದ ಪೌರ್ಣಮೆ-ಶ್ರೀಚೈತನ್ಯನು ಹುಟ್ಟಿದ ದಿನ; ಗಂಗಾ ನದಿಯ ಪುಣ್ಯಸ್ನಾನಕ್ಕಾಗಿ ಬಹುದೂರದ ಜನರು ಕಲಕತ್ತೆಗೆ ಬರುತ್ತಾರೆ. ಶ್ರೀಮಾತೆ ಯವರ ಸಂಬಂಧಿಕರಾದ ಕೆಲವು ಮಹಿಳೆಯರು ಸ್ನಾನಕ್ಕೆ ಹೋಗಬೇಕೆಂದು ಮೊದಲೇ ನಿರ್ಧರಿಸಿದ್ದರು. ಅವರ ಜತೆ ತಾವೂ ಹೋಗುವುದೆಂದು ಶ್ರೀಮಾತೆಯವರು ತೀರ್ಮಾನಿ ಸಿದರು. ಅವರ ತಂದೆಯ ಒಪ್ಪಿಗೆಯಿಲ್ಲದೆ ಅವರನ್ನು ಕರೆದುಕೊಂಡು ಹೋಗುವುದು

ಸರಿಯಲ್ಲವೆಂದು ಆ ಮಹಿಳೆಯರು ಅವರ ತಂದೆ ರಾಮಚಂದ್ರ ಮುಖ್ಯೋಪಾಧ್ಯಾಯನನ್ನು ಈ ಕುರಿತು ವಿಚಾರಿಸಿದರು. ಅವನಿಗೆ ಕೂಡಲೇ ತಿಳಿಯಿತು ಮಗಳು ಏಕೆ ಈಗ ಕಲಕತ್ತೆಗೆ ಹೋಗಬೇಕೆಂದು ಬಯಸುತ್ತಿದ್ದಾಳೆ ಎಂದು. ತಾನೇ ಮಗಳನ್ನು ಕರೆದುಕೊಂಡು ಹೋಗುವುದಾಗಿ ನಿರ್ಧರಿಸಿ ಎಲ್ಲ ವ್ಯವಸ್ಥೆ ಮಾಡಿದನು.

7. ರೈಲಿನ ವ್ಯವಸ್ಥೆ ಇದ್ದುದರಿಂದ ಕಾಶಿ ಬೃಂದಾವನ ಇತ್ಯಾದಿ ಸ್ಥಳಗಳು ಕಲಕತ್ತೆಗೆ ತುಂಬ ಸಮೀಪವಾಗಿದ್ದುವು. ಆದರೆ ಕಾಮಾರ್‌ಪುಕುರ, ಜಯರಾಂಬಾಟಿ ಮುಂತಾದ ಹಳ್ಳಿಗಳಿಗೆ ಆ ವ್ಯವಸ್ಥೆ ಇಲ್ಲದಿದ್ದುದರಿಂದ ಅವು ಮೊದಲಿನಂತೆಯೇ ದೂರದಲ್ಲಿಯೇ ಉಳಿದಿದ್ದುವು. ಆ ಹಳ್ಳಿಗರು ಕಲಕತ್ತೆಗೆ ಹೋಗಬೇಕೆಂದರೆ ನಡೆದುಕೊಂಡೇ ಹೋಗಬೇಕಿತ್ತು. ಶ್ರೀಮಂತರಾದರೆ ಶಿಬಿಕೆಯ ಮೇಲೆ ಪ್ರಯಾಣಿಸುತ್ತಿದ್ದರು. ಶ್ರೀಮಾತೆ, ಅವರ ತಂದೆ ರಾಮಚಂದ್ರ, ಮತ್ತಿತರರು ಕಾಲುನಡಿಗೆಯಲ್ಲಿಯೇ ಪ್ರಯಾಣ ಮುಂದುವರಿಸಿದರು, ಒಂದಾದ ಮೇಲೊಂದು ಧಾನ್ಯದ ಹೊಲವನ್ನು ದಾಟುತ್ತ, ಮಧ್ಯ ಮಧ್ಯ ತಾವರೆ ಹೂವಿನಿಂದ ಶೋಭಿತವಾದ ಕೊಳಗಳನ್ನು ನೋಡುತ್ತ, ಅಶ್ವತ್ಥ ವಟ ವೃಕ್ಷಗಳ ತಂಪು ನೆರಳನ್ನು ಸವಿಯುತ್ತ ಅವರು ಮೊದಲ ಎರಡು ಮೂರ ದಿನಗಳು ಆನಂದದಿಂದ ಪಯಣಿಸಿದರು. ಆದರೆ ಇದು ಕೊನೆಯವರೆಗೆ ಉಳಿಯಲಿಲ್ಲ. ಹೆಚ್ಚು ನಡೆದು ಅಭ್ಯಾಸವಿಲ್ಲದ ಶ್ರೀಮಾತೆಯರಿಗೆ ಒಂದುದಿನ ಜ್ವರ ಶುರುವಾಯಿತು. ರಾಮಚಂದ್ರ ಈಗ ಚಿಂತೆಗೊಳಗಾದ. ಈ ಸ್ಥಿಯಲ್ಲಿ ಮಗಳು ಪ್ರಯಾಣ ಮುಂದುವರಿಸಲಾರಳೆಂದು ಒಂದು ಛತ್ರದಲ್ಲಿ ಆಶ್ರಯ ಪಡೆದನು.

ಹೀಗೆ ದಾರಿಯಲ್ಲಿ ಕಾಯಿಲೆ ಬಿದ್ದದ್ದರಿಂದ ಶ್ರೀಮಾತೆಯವರ ಮನಸ್ಸಿಗೆ ತುಂಬ ನೋವಾಯಿತು. ತಮ್ಮ ಆಸೆ ಈಡೇರುವುದೊ ಇಲ್ಲವೊ ಎಂದು ಮರುಗಿದರು. ಆದರೆ ಅವರಿಗೆ ಆಗ ಒಂದು ದರ್ಶನವಾಯಿತು. ಈ ದರ್ಶನವನ್ನು ಅವರು ಮುಂದೆ ಹೀಗೆ ವಿವರಿಸುತ್ತಿದ್ದರು :

"ತೀವ್ರ ಜ್ವರದಿಂದ ಪ್ರಜ್ಞೆಯಿಲ್ಲದೆ ಬಿದ್ದುಕೊಂಡಿದ್ದೆ. ಆಗ ನನ್ನ ಪಕ್ಕದಲ್ಲಿ ಓರ್ವ ಸ್ತ್ರೀ ಕುಳಿತಿರುವುದನ್ನು ಕಂಡೆ. ಅವಳ ಮೈ ಬಣ್ಣ ಕಪ್ಪು, ಆದರೆ ಅಂಥ ಸೌಂದರ್ಯವನ್ನು ನಾನು ಎಂದೂ ನೋಡಿರಲಿಲ್ಲ. ಆಕೆ ನನ್ನ ಮೈದಡವಿದಳು, ತಲೆ ಸವರಿದಳು. ಅವಳ ಹಸ್ತ ಎಷ್ಟು ಮೃದು ! ಎಷ್ಟು ಶೀತಲವಾಗಿತ್ತು ! ನನ್ನ ದೇಹದ ಬಿಸಿ ಕಡಮೆಯಾಗತೊಡಗಿತು. ನಾನು ಅವಳನ್ನು ವಿಚಾರಿಸಿದೆ : 'ನೀನು ಎಲ್ಲಿಂದ ಬರುತ್ತಿದ್ದೀಯಮ್ಮ ?' ಅವಳಂದಳು : 'ನಾನು ದಕ್ಷಿಣೇಶ್ವರದಿಂದ ಬರುತ್ತಿದ್ದೇನೆ.' ನನಗೆ ಕೇಳಿ ಆಶ್ಚರ್ಯವಾಯಿತು : 'ದಕ್ಷಿಣೇಶ್ವರದಿಂದಲೆ ? ನಾನು ದಕ್ಷಿಣೇಶ್ವರಕ್ಕೆ ಹೋಗಬೇಕೆಂದುಕೊಂಡಿದ್ದೆ. ಅವರನ್ನು (ಶ್ರೀರಾಮಕೃಷ್ಣರನ್ನು) ನೋಡಬೇಕು, ಅವರ ಸೇವೆ ಮಾಡಬೇಕು ಎಂದೆಲ್ಲ ಆಸೆಯಿಟ್ಟುಕೊಂಡಿದ್ದೆ. ಆದರೆ ಈಗ ಹಾದಿಯಲ್ಲಿ ಜ್ವರ ಬಂದಿದ್ದರಿಂದ ನನಗೆ ಆ ಭಾಗ್ಯವಿಲ್ಲ.' ಆಕೆ ಹೇಳಿದಳು: 'ಹಾಗೇನಿಲ್ಲ, ನೀನು ಖಂಡಿತ ದಕ್ಷಿಣೇಶ್ವರಕ್ಕೆ ಹೋಗುವೆ. ಎಲ್ಲ ಸರಿಯಾಗುವುದು. ನೀನು ಅವರನ್ನು

ನೋಡುವೆ. ನಿನಗಾಗಿಯೇ ನಾನು ಅವರನ್ನು ಅಲ್ಲಿ ಇರಿಸಿರುವೆ.' 'ಹೌದೆ! ? ನೀನು ನನಗೆ ಏನಾಗಬೇಕು ?'—ನಾನು ಆಶ್ಚರ್ಯದಿಂದ ಕೇಳಿದೆ. 'ನಾನು ನಿನ್ನ ಅಕ್ಕ' ಎಂದಳು ಆಕೆ. 'ಹೌದೆ ? ಆದ್ದರಿಂದಲೇ ನೀನು ಬಂದಿದ್ದೀಯೆ !' ಹೀಗೆ ಮಾತುಕತೆ ನಡೆಯುತ್ತಿದ್ದಂತೆಯೆ ನನಗೆ ನಿದ್ರೆ ಬಂದಿತು.''

8. ಬೆಳಗ್ಗೆ ಎದ್ದು ರಾಮಚಂದ್ರ ನೋಡುತ್ತಾನೆ—ಮಗಳ ಮೈಮೇಲೆ ಜ್ವರವೇ ಇಲ್ಲ. ದಾರಿಯ ಮಧ್ಯದಲ್ಲಿ ಸುಮ್ಮನೆ ಕಾಲಹರಣ ಮಾಡುವುದಕ್ಕಿಂತ ಪ್ರಯಾಣ ಮುಂದುವರಿಸುವುದು ಒಳ್ಳೆಯದೆಂದು ಭಾವಿಸಿದ. ಹಿಂದಿನ ರಾತ್ರಿಯ ದರ್ಶನದಿಂದ ಉತ್ತೇಜನಗೊಂಡು ಶ್ರೀಮಾತೆಯವರೂ ಅದಕ್ಕೆ ಒಪ್ಪಿದರು, ಸ್ವಲ್ಪ ದೂರ ಹೋಗುತ್ತಿದ್ದಂತೆಯೆ ಒಂದು ಶಿಬಿಕೆಯೂ ದೊರೆಯಿತು. ಮುಂದೆಯೂ ಅವರಿಗೆ ಜ್ವರ ಬಂದಿತ್ತು. ಆದರೆ ಅಷ್ಟೊಂದು ತೀವ್ರವಾಗಿರದಿದ್ದುದರಿಂದ ಅವರು ಆ ವಿಷಯ ವನ್ನು ಯಾರಿಗೂ ತಿಳಿಸಲೇ ಇಲ್ಲ. ಅಂತೂ ಶ್ರೀಮಾತೆಯವರು ರಾತ್ರಿ ಒಂಬತ್ತು ಗಂಟೆಯ ಹೊತ್ತಿಗೆ ದಕ್ಷಿಣೇಶ್ವರವನ್ನು ತಲುಪಿದರು.

9. ಶ್ರೀಮಾತೆಯವರ ಅನಾರೋಗ್ಯವನ್ನು ಕಂಡು ಶ್ರೀರಾಮಕೃಷ್ಣರು ತುಂಬ ನೊಂದರು. ತಂಡಿಯಾಗಿ ಜ್ವರ ಜಾಸ್ತಿಯಾಗಬಹುದೆಂದು ತಮ್ಮ ಕೋಣೆಯಲ್ಲಿಯೇ ಅವರಿಗೆ ಒಂದು ಪ್ರತ್ಯೇಕ ಹಾಸಿಗೆ ಹಾಕಿಸಿ ಅಲ್ಲಿಯೆ ಅವರಿಗೆ ಮಲಗುವ ವ್ಯವಸ್ಥೆ ಮಾಡಿದರು. ದುಃಖದಿಂದ ಮತ್ತೆ ಮತ್ತೆ ಹೇಳಿದರು, ''ನೀನು ಎಷ್ಟೋ ದಿನಗಳ ಮೇಲೆ ಬಂದೆಯಲ್ಲ ? ಛೆ ! ನನ್ನ ಮಥುರನು ಇಲ್ಲ. ಈಗ ಯಾರು ನಿನ್ನನ್ನು ನೋಡಿ ಕೊಳ್ಳುತ್ತಾರೆ ?'' ಯೋಗ್ಯ ಔಷಧೋಪಚಾರದಿಂದ ಅವರು ಮೂರು ನಾಲ್ಕು ದಿನ ದಲ್ಲಿಯೇ ಆರೋಗ್ಯವಂತರಾದರು. ಆ ಮೂರು ನಾಲ್ಕು ದಿನವೂ ಶ್ರೀರಾಮಕೃಷ್ಣರು ಅವರನ್ನು ತಮ್ಮ ಕೋಣೆಯಲ್ಲಿಯೇ ಇರಿಸಿಕೊಂಡು ತಾವೇ ಸ್ವತಃ ಅವರ ಔಷಧೋಪ ಚಾರದ ಜವಾಬ್ದಾರಿಯನ್ನು ವಹಿಸಿಕೊಂಡರು. ಅನಂತರ ನಹಬತ್‌ನಲ್ಲಿ ತಮ್ಮ ತಾಯಿ ಯೊಡನಿರಲು ಅವರನ್ನು ಕಳಿಸಿದರು.

ಕಣ್ಣು-ಕಿವಿಗಳ ವಿವಾದ ಕೊನೆಗೊಂಡಿತು. ಇತರರ ಮಾತಿನಿಂದ ಉಂಟಾದ ಸಂದೇಹ ಮೇಘದಂತೆ ವಿಶ್ವಾಸ ಸೂರ್ಯನನ್ನು ಆವರಿಸುವುದರಲ್ಲಿತ್ತು. ಆದರೆ ಶ್ರೀರಾಮಕೃಷ್ಣರ ಆದರ-ಪ್ರೀತಿಯ ಗಾಳಿಯಿಂದ ಅದು ಎಲ್ಲಿಯೋ ಚದುರಿ ಹೋಯಿತು. ಅವರಿಗೆ ಅನಿಸಿತು ಶ್ರೀರಾಮಕೃಷ್ಣರು ಈಗಲೂ ಮೊದಲಿನಂತೆಯೇ ಇದ್ದಾರೆ, ಸಂಸಾರಿಗಳು ತಿಳಿಯದೆ ಏನೇನೊ ಮಾತನಾಡಿಕೊಳ್ಳುತ್ತಾರೆ—ಎಂದು; ಹಿಂದಿನಂತೆಯೇ ಕೃಪಾಪೂರ್ಣರಾಗಿದ್ದರು ಅವರು. ಈಗ ತಮ್ಮ ಕರ್ತವ್ಯವೇನು ಎಂಬುದು ತಿಳಿಯಿತು ಶ್ರೀಮಾತೆಯವರಿಗೆ. ತಮ್ಮ ಪತಿಯ ಮತ್ತು ಅತ್ತೆಯ ಸೇವೆಯಲ್ಲಿ ನಿರತರಾಗಿ ಆನಂದದಿಂದ ನಹಬತ್‌ನಲ್ಲಿ ಇರತೊಡಗಿದರು. ಮಗಳ ಆನಂದ ವನ್ನು ಕಂಡು ಸಂತೃಪ್ತನಾಗಿ ರಾಮಚಂದ್ರನು ಕೆಲವು ದಿನಗಳು ಅಲ್ಲಿದ್ದು ಊರಿಗೆ ಹಿಂದಿರುಗಿದನು.

10. ಶ್ರೀರಾಮಕೃಷ್ಣರು ಹಿಂದೆ ಕಾಮಾರಪುಕುರದಲ್ಲಿ ತಮ್ಮ ಪತ್ನಿಯನ್ನು ಸಂಧಿಸಿದ್ದಾಗ ತಮ್ಮ ಮನಸ್ಸು ಎಷ್ಟರಮಟ್ಟಿಗೆ ಬ್ರಹ್ಮದಲ್ಲಿ ಪ್ರತಿಷ್ಠಿತವಾಗಿದೆ ಎಂಬುದನ್ನು ಪರೀಕ್ಷಿಸುವ ಅವಕಾಶ ಪಡೆದಿದ್ದರು, ಹಾಗೂ ಪತಿಯಾಗಿ ಪತ್ನಿಯ ಶ್ರೇಯೋಭಿವೃದ್ಧಿಯ ಕರ್ತವ್ಯವನ್ನೂ ಪ್ರಾರಂಭಿಸಿದ್ದರು. ಈಗ ಅವರಿಗೆ ಈ ವಿಚಾರದಲ್ಲಿ ಇನ್ನೂ ಹೆಚ್ಚಿನ ಅವಕಾಶ ದೊರಕಿದಂತಾಯಿತು. ಅವರು ಇದನ್ನು ಉಪಯೋಗಿಸಿಕೊಳ್ಳ ತೊಡಗಿದರು.

11. ಪತ್ನಿಯನ್ನು ತಮ್ಮೊಡನೆ ದಕ್ಷಿಣೇಶ್ವರಕ್ಕೆ ಕರೆದುಕೊಂಡು ಬಂದು ಮೊದಲೇ ಇದನ್ನು ಮಾಡಬಹುದಿತ್ತು—ಏಕೆ ಹಾಗೆ ಮಾಡಲಿಲ್ಲ ?—ಎಂಬ ಪ್ರಶ್ನೆ ಏಳುವುದು. ಅದಕ್ಕೆ ಉತ್ತರವಾಗಿ ಹೀಗೆ ಹೇಳಬಹುದು : ಸಾಧಾರಣ ಮನುಷ್ಯನಾಗಿದ್ದರೆ ಹಾಗೆಯೇ ಮಾಡುತ್ತಿದ್ದನು. ಆದರೆ ಶ್ರೀರಾಮಕೃಷ್ಣರು ಒಂದು ಪ್ರತ್ಯೇಕ ವರ್ಗಕ್ಕೆ ಸೇರಿದವರಾದ್ದರಿಂದ ಹಾಗೆ ಮಾಡಲಿಲ್ಲ. ಯಾರು ಭಗವಂತನನ್ನೇ ಸಂಪೂರ್ಣ ಆಶ್ರಯಿಸಿ ಅವನಿಚ್ಛೆಯಂತೆ ನಡೆಯುವರೊ ಅವರು ಎಂದೂ ತಮ್ಮ ಯೋಜನೆಗೆ ಅನುಸಾರವಾಗಿ ಏನನ್ನೂ ಮಾಡುವುದಿಲ್ಲ. ಅವರು ಪ್ರತಿಯೊಂದಕ್ಕೂ ಭಗವಂತನ ಸೂಚನೆಯನ್ನೇ ನಿರೀಕ್ಷಿಸುತ್ತಾರೆ. ಆದ್ದರಿಂದ ಸ್ವೇಚ್ಛೆಯಿಂದ ತಮ್ಮನ್ನು ಪರೀಕ್ಷೆಗೆ ಒಳಪಡಿಸಿಕೊಳ್ಳಲು ಅವರು ಮುಂದಾಗುವುದಿಲ್ಲ. ಭಗವಂತನ ಇಚ್ಛೆಗೆ ಅನುಸಾರವಾಗಿ ನಡೆಯುತ್ತಿರುವಾಗ ಪರೀಕ್ಷೆಗೆ ಒಳಪಡುವ ಸಂದರ್ಭ ಬಂದರೆ ಆಗ ಅವರು ಅದಕ್ಕೆ ಒಳಗಾಗುವರು. ಶ್ರೀರಾಮಕೃಷ್ಣರು ತಮ್ಮ ಇಚ್ಛಾನುಸಾರವಾಗಿ ತಮ್ಮ ಬ್ರಹ್ಮಜ್ಞಾನದ ದೃಢತೆಯನ್ನು ಪರೀಕ್ಷಿಸಲು ಹೋಗಲಿಲ್ಲ. ಕಾಮಾರಪುಕುರದಲ್ಲಿ ಪತ್ನಿಯೊಡನಿರುವ ಅವಕಾಶ ತಾನಾಗಿಯೇ ಒದಗಿಬಂದಿತ್ತು. ಪತಿಯಾಗಿ ತಮ್ಮ ಕರ್ತವ್ಯಪಾಲನೆ ಮಾಡುವಾಗ ಸ್ವಾಭಾವಿಕವಾಗಿಯೆ ಅವರು ಆ ಪರೀಕ್ಷೆಗೆ ಒಳಗಾಗುವಂತಿದ್ದರು. ಆದ್ದರಿಂದ ಆ ಕಾರ್ಯದಲ್ಲಿ ತೊಡಗಿದ್ದರು. ಮತ್ತೆ ಆ ಅವಕಾಶ ತಪ್ಪಿ ಅವರು ದಕ್ಷಿಣೇಶ್ವರಕ್ಕೆ ಬಂದಮೇಲೆ ಅದರ ಬಗ್ಗೆ ಚಿಂತಿಸಲೇ ಇಲ್ಲ. ಶ್ರೀಮಾತೆಯವರು ಸ್ವತಃ ದಕ್ಷಿಣೇಶ್ವರಕ್ಕೆ ಬರುವವರೆಗೂ ಅವರನ್ನು ಕರೆಸಿಕೊಳ್ಳುವ ವಿಚಾರವನ್ನೇ ಮಾಡಲಿಲ್ಲ. ಸಾಮಾನ್ಯ ದೃಷ್ಟಿಯಿಂದ ನಾವು ಶ್ರೀರಾಮಕೃಷ್ಣರ ವರ್ತನೆಯನ್ನು ಈ ರೀತಿ ವಿವರಿಸಬಹುದು. ಈಶ್ವರೇಚ್ಛೆಯೇ ಹೀಗಿತ್ತೆಂಬುದನ್ನು ಅವರು ಯೋಗದೃಷ್ಟಿಯ ಸಹಾಯದಿಂದ ತಿಳಿದಿದ್ದರು ಎಂದೂ ಹೇಳಬಹುದು.

12. ಏನೇ ಆಗಲಿ, ಶ್ರೀರಾಮಕೃಷ್ಣರು ಈ ಅವಕಾಶವನ್ನು ಸರಿಯಾಗಿ ಬಳಸಿಕೊಂಡರು. ಮಾನವಜೀವನದ ಉದ್ದೇಶ ಮತ್ತು ಅದರ ಕರ್ತವ್ಯ ಇವುಗಳ ಬಗ್ಗೆ ಶ್ರೀಮಾತೆಯವರಿಗೆ ಶಿಕ್ಷಣನೀಡತೊಡಗಿದರು. ಒಮ್ಮೆ ಅವರು ಶ್ರೀಮಾತೆಯವರಿಗೆ ಹೇಳಿದರು : "ಚಂದಮಾಮಾ ಎಲ್ಲ ಮಕ್ಕಳಿಗೂ ಮಾವನಾಗಿರುವಂತೆ ಭಗವಂತನು ಎಲ್ಲರಿಗೂ ತನ್ನವನು. ಅವನನ್ನು ಕರೆಯಲು ಎಲ್ಲರಿಗೂ ಅಧಿಕಾರವಿದೆ. ಯಾರು ಕರೆಯುತ್ತಾರೊ ಅವರು ಅವನ ದರ್ಶನದಿಂದ ಕೃತಾರ್ಥರಾಗುತ್ತಾರೆ, ನೀನು ಕರೆದರೆ

ನೀನೂ ಅವನನ್ನು ಕಾಣಬಹುದು.'' ಕೇವಲ ಉಪದೇಶ ಮಾಡುವುದರಲ್ಲೆ ಅವರ ಶಿಕ್ಷಣ ಪರ್ಯವಸಾನಗೊಳ್ಳುತ್ತಿರಲಿಲ್ಲ. ಅವರು ತಮ್ಮ ಶಿಷ್ಯನನ್ನು ಪ್ರೀತಿಯ ಮೂಲಕ ತಮ್ಮ ವನನ್ನಾಗಿ ಮಾಡಿಕೊಂಡು ಉಪದೇಶ ನೀಡುತ್ತಿದ್ದರು, ಅನಂತರ ಆವನು ಅದರಂತೆ ನಡೆಯುತ್ತಾನೊ ಇಲ್ಲವೊ ಎಂದು ತೀಕ್ಷ್ಣ ದೃಷ್ಟಿಯಿಂದ ಪರಿಶೀಲಿಸುತ್ತಿದ್ದರು. ಅವನು ಭ್ರಮೆಯಿಂದ ಎಲ್ಲಾದರೂ ಅನುಷ್ಠಾನದಲ್ಲಿ ತಪ್ಪಿದರೆ ಅವನನ್ನು ಸರಿಪಡಿಸುತ್ತಿದ್ದರು. ಶ್ರೀಮಾತೆಯವರ ವಿಷಯದಲ್ಲಿಯೂ ಅವರು ಹೀಗೆಯೇ ಮಾಡಿದರು ಎಂದು ಪ್ರತ್ಯೇಕ ಹೇಳಬೇಕಾಗಿಯೇ ಇಲ್ಲ. ಶ್ರೀಮಾತೆಯವರು ಬಂದ ಕೂಡಲೇ ಅವರನ್ನು ಅತ್ಯಾದರ ದಿಂದ ಬರಮಾಡಿಕೊಂಡು ತಮ್ಮ ಕೋಣೆಯಲ್ಲಿಯೇ ಅವರಿಗೆ ಇರಲು ಅವಕಾಶ ಕೊಟ್ಟು ಔಷಧೋಪಚಾರ ಮಾಡಿದರು. ಅನಂತರ ಅವರು ನಹಬತಿನಲ್ಲಿ ಇರತೊಡಗಲು ಪ್ರತಿ ದಿನ ರಾತ್ರಿ ತಮ್ಮ ಕೋಣೆಯಲ್ಲಿಯೇ ಮಲಗಲು ಅವಕಾಶ ಕೊಟ್ಟರು. ಹೀಗೆ ಅವರು ತಮ್ಮ ಪ್ರೀತಿಯಿಂದ ಶ್ರೀಮಾತೆಯರನ್ನು ತಮ್ಮವರನ್ನಾಗಿ ಮಾಡಿಕೊಂಡರು.

13. ಈ ಸಂದರ್ಭದಲ್ಲಿ ಶ್ರೀಮಾತೆಯವರು ಒಂದು ದಿನ ಶ್ರೀರಾಮಕೃಷ್ಣರ ಕಾಲು ಒತ್ತುತ್ತ ಒಂದು ಪ್ರಶ್ನೆ ಕೇಳಿದರು : ''ನನ್ನನ್ನು ನೀವು ಯಾವ ದೃಷ್ಟಿಯಿಂದ ಕಾಣುತ್ತೀರಿ ?'' ಶ್ರೀರಾಮಕೃಷ್ಣರು ಉತ್ತರಿಸಿದರು : ''ಮಂದಿರದಲ್ಲಿ ಯಾವ ತಾಯಿ ಯಿರುವಳೊ ಅವಳೆ ಈ ಶರೀರಕ್ಕೆ ಜನ್ಮವಿತ್ತವಳು, ಮತ್ತು ಈಗ ನಹಬತ್‌ನಲ್ಲಿ ವಾಸಿಸುತ್ತಿರುವವಳು, ಮತ್ತು ಅವಳೇ ಈಗ ನನ್ನ ಪಾದವನ್ನು ಒತ್ತುತ್ತಿರುವವಳು. ನಾನು ನಿಜವಾಗಿಯೂ ಸದಾ ನಿನ್ನನ್ನು ಆನಂದಮಯಿಯ ರೂಪದಂತೆಯೇ ಕಾಣುತ್ತಿರುವೇನು.''

ಒಂದು ದಿನ ರಾತ್ರಿ ಶ್ರೀಮಾತೆಯವರು ತಮ್ಮ ಪಕ್ಕದಲ್ಲೇ ಮಲಗಿ ನಿದ್ರಿಸು ತ್ತಿದ್ದರು. ಶ್ರೀರಾಮಕೃಷ್ಣರು ಮನಸ್ಸಿನಲ್ಲಿಯೇ ವಿಚಾರಮಾಡತೊಡಗಿದರು : "ಮನಸ್ಸೆ, ಇದೇ ಸ್ತ್ರೀಶರೀರ, ಜನರು ಈ ಭೋಗವಸ್ತುವಿಗಾಗಿ ತಹತಹಿಸುತ್ತಾರೆ; ಆದರೆ ಇದನ್ನು ಸ್ವೀಕರಿಸಿದರೆ ದೇಹದಲ್ಲಿಯೇ ಬದ್ಧರಾಗಿ ಇರಬೇಕಾಗುವುದು. ಸಚ್ಚಿ ದಾನಂದ ಭಗವಂತನನ್ನು ಪಡೆಯಲಾಗುವುದಿಲ್ಲ, ಭಾವಗೃಹದಲ್ಲಿ ಕಳ್ಳತನ ಮಾಡಬೇಡ; ಒಳಗೊಂದು. ಹೊರಗೊಂದು ಮಾಡಬೇಡ. ನಿಜಹೇಳು, ನಿನಗೆ ಇದು ಬೇಕೊ, ಭಗವಂತ ಬೇಕೊ ? ನಿನಗೆ ಇದು ಬೇಕಾದರೆ, ಇಲ್ಲಿಯೇ ನಿನ್ನ ಮುಂದೆಯೇ ಇದೆ, ಸ್ವೀಕರಿಸು.'' ಹೀಗೆ ವಿಚಾರ ಮಾಡುತ್ತ ಶ್ರೀರಾಮಕೃಷ್ಣರು ಶ್ರೀಮಾತೆಯವರನ್ನು ಸ್ಪರ್ಶಿಸಲು ಕೈಯನ್ನು ಎತ್ತಿದರು. ಅಷ್ಟರಲ್ಲಿಯೇ ಮನಸ್ಸು ವಿಮುಖವಾಗಿ ಆಳ ಸಮಾಧಿಯಲ್ಲಿ ಮುಳುಗಿತು. ಅಂದು ಇಡೀ ರಾತ್ರಿ ಅವರು ಸಮಾಧಿಯಿಂದ ಹೊರ ಬರಲಿಲ್ಲ. ಬೆಳಿಗ್ಗೆ ಬಹಳ ಪ್ರಯತ್ನದಿಂದ ಅವರ ಮನಸ್ಸನ್ನು ಕೆಳಗಿಳಿಸಬೇಕಾಯಿತು.

14. ಯೌವನದ ಪರಮಾವಸ್ಥೆಯಲ್ಲಿದ್ದ ಶ್ರೀರಾಮಕೃಷ್ಣ ಮತ್ತು ನವ ಯೌವನದಿಂದ ತುಂಬಿದ್ದ ಶ್ರೀಮಾತೆ—ಇವರಿಬ್ಬರ ಈ ಸಂದರ್ಭದ ದಿವ್ಯ ಲೀಲಾವಿಲಾಸದ ಬಗ್ಗೆ ಶ್ರೀರಾಮಕೃಷ್ಣರ ಬಾಯಿಂದ ಏನೇನು ಕೇಳಿರುವೆವೊ ಜಗತ್ತಿನ ಇತಿಹಾಸದ

ಯಾವ ಮಹಾಪುರುಷರ ಜೀವನದಲ್ಲಿಯೂ ನಾವು ಕೇಳಿಲ್ಲ. ಇದನ್ನು ಕೇಳಿ ಯಾರೇ ಆದರೂ ಮುಗ್ಧರಾಗಿ ಅವರಿಬ್ಬರಿಗೆ ತಮ್ಮ ಶ್ರದ್ಧಾಭಕ್ತಿಯನ್ನು ತೋರಿಸದಿರಲಾರರು. ಆ ಸಮಯದಲ್ಲಿ ಹೆಚ್ಚು ಕಡಮೆ ಇಡೀ ರಾತ್ರಿ ಶ್ರೀರಾಮಕೃಷ್ಣರ ಮನಸ್ಸು ಸಮಾಧಿಯಲ್ಲಿರುತ್ತಿತ್ತು. ಸಾಮಾನ್ಯ ಪ್ರಜ್ಞಾವಸ್ಥೆಯಲ್ಲಿದ್ದಾಗಲೂ ಮನಸ್ಸು ಉನ್ನತ ಸ್ಥಿತಿಯಲ್ಲಿರುತ್ತಿತ್ತೇ ಹೊರತು ದೇಹಬುದ್ಧಿಯಂತೂ ಇರುತ್ತಿರಲಿಲ್ಲ.

15. ಹೀಗೆ ಅನೇಕ ದಿನಗಳು ಕಳೆದವು, ತಿಂಗಳುಗಳು ಕಳೆದವು, ಒಂದು ವರ್ಷವೂ ಮೀರಿತು. ಆದರೆ ಅವರಿಬ್ಬರ ಸಂಯಮ ಮಾತ್ರ ಕಿಂಚಿತ್ತೂ ಅಲುಗಾಡಲಿಲ್ಲ. ಆ ಕಾಲದ ವಿಷಯವನ್ನು ಸ್ಮರಿಸಿಕೊಂಡು ಶ್ರೀ ರಾಮಕೃಷ್ಣರು ನಮಗೆ ಹೇಳುತ್ತಿದ್ದರು : "ಅವಳು (ಶ್ರೀಮಾತೆಯವರು) ಅಷ್ಟೊಂದು ಪರಿಶುದ್ಧಳಲ್ಲದಿದ್ದಿದ್ದರೆ ನನ್ನ ಸಂಯಮದ ಕಟ್ಟು ಒಡೆದು ದೇಹಬುದ್ಧಿ ಬಂದುಬಿಡುತ್ತಿತ್ತೊ ಏನೊ—ಹೇಗೆ ಹೇಳುವುದು ? ವಿವಾಹದ ನಂತರ ನಾನು ವ್ಯಾಕುಲತೆಯಿಂದ ಪ್ರಾರ್ಥಿಸಿದ್ದೆ, ನನ್ನ ಪತ್ನಿಯ ಮನಸ್ಸಿನಿಂದ ಕಾಮ ಭಾವವನ್ನು ಸಂಪೂರ್ಣ ತೆಗೆದುಹಾಕು ಎಂದು. ಅವಳೊಡನೆ (ಶ್ರೀಮಾತೆಯವರೊಡನೆ) ಒಟ್ಟಿಗೆ ಇರುವಾಗ ತಾಯಿ ನನ್ನ ಪ್ರಾರ್ಥನೆಯನ್ನು ಈಡೇರಿಸಿರುವಳು ಎಂದು ತಿಳಿಯಿತು."

16. ಒಂದು ವರ್ಷ ಕಳೆದರೂ ಕಾಮಭಾವನೆ ಮನಸ್ಸಿನಲ್ಲಿ ಕಿಂಚಿತ್ತೂ ಉಂಟಾಗಲಿಲ್ಲ ಮತ್ತು ಶ್ರೀಮಾತೆಯವರನ್ನು ಶ್ರೀಜಗನ್ಮಾತೆಯ ಅಂಶವೆಂದಲ್ಲದೆ ಮತ್ತಾವ ದೃಷ್ಟಿಯಿಂದಲೂ ಅವರಿಗೆ ನೋಡಲಾಗಲಿಲ್ಲ. ಈಗ ಶ್ರೀರಾಕೃಷ್ಣರಿಗೆ ಅನಿಸಿತು ಶ್ರೀಜಗನ್ಮಾತೆಯ ಕೃಪೆಯಿಂದ ತಾವು ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವುದಾಗಿ. ತಾವು ನಿಜವಾಗಿಯೂ ಬ್ರಹ್ಮಭಾವದಲ್ಲಿ ಸಂಪ್ರತಿಷ್ಠಿತರಾಗಿರುವುದಾಗಿ ಅವರಿಗೆ ದೃಢವಾಯಿತು. ತಮ್ಮ ಸಾಧನೆಯು ಪೂರ್ಣಾವಸ್ಥೆಯನ್ನು ಮುಟ್ಟಿತೆಂದೂ ಅವರಿಗೆ ಅರಿವಾಯಿತು. ಅವರು ಶ್ರೀಜಗನ್ಮಾತೆಯ ಪಾದಪದ್ಮದಲ್ಲಿ ಎಷ್ಟೊಂದು ತನ್ಮಯರಾಗಿದ್ದರೆಂದರೆ ತಿಳಿದೊ ತಿಳಿಯದೆಯೊ ಅವರು ದೇವಿಯ ಇಚ್ಛೆಗೆ ವಿರುದ್ಧವಾಗಿ ವರ್ತಿಸುವುದು ಅಸಂಭವವಾಗಿತ್ತು. ಈಗ ದೈವೇಚ್ಛೆಯಂತೆ ಅವರ ಮನಸ್ಸಿನಲ್ಲಿ ಒಂದು ಅದ್ಭುತ ಆಸೆ ಉದಯವಾಯಿತು. ಅವರು ಸ್ವಲ್ಪವೂ ಅಳುಕದೆ ಅದನ್ನು ಕಾರ್ಯರೂಪಕ್ಕೆ ತರಲು ಉದ್ಯುಕ್ತರಾದರು. ಶ್ರೀರಾಮಕೃಷ್ಣ ಮತ್ತು ಶ್ರೀಮಾತೆಯವರಿಂದ ಈ ವಿಷಯದ ಬಗ್ಗೆ ಏನು ಕೇಳಿರುವೆವೊ ಅದನ್ನು ಇಲ್ಲಿ ಪ್ರಸ್ತುತಪಡಿಸುತ್ತೇವೆ.

17. ಅಂದು ೧೮೭೩ರ ಮೇ ೨೫ನೆ ತಾರೀಖು— ಅಮಾವಾಸ್ಯೆ ಫಲಹಾರಿಣೀ ಕಾಲೀಪೂಜೆಯ ಪುಣ್ಯದಿನ. ದಕ್ಷಿಣೇಶ್ವರದ ಮಂದಿರದಲ್ಲಿ ಅಂದು ವಿಶೇಷ ಪೂಜೆ. ಶ್ರೀ ರಾಮಕೃಷ್ಣರು ಅಂದು ಜಗನ್ಮಾತೆಯ ಪೂಜೆ ಮಾಡಬೇಕೆಂದು ಎಲ್ಲ ವ್ಯವಸ್ಥೆ ಮಾಡಿದ್ದರು. ಆದರೆ ಆ ವ್ಯವಸ್ಥೆ ಮಂದಿರದಲ್ಲಲ್ಲ, ತಮ್ಮ ಕೋಣೆಯಲ್ಲಿಯೇ ಗುಪ್ತವಾಗಿ ನಡೆದಿತ್ತು. ಪೂಜೆಯ ವೇಳೆಯಲ್ಲಿ ದೇವಿಗಾಗಿ ಒಂದು ಪೀಠವನ್ನು ಅರ್ಚಕನ ಆಸನದ ಬಲಭಾಗದಲ್ಲಿ ಇರಿಸಲಾಯಿತು. ಸೂರ್ಯಾಸ್ತವಾಯಿತು. ಕ್ರಮೇಣ ಅಮಾವಾಸ್ಯೆಯ

ಗಾಢಾಂಧಕಾರ ಎಲ್ಲೆಲ್ಲಿಯೂ ಕವಿಯಿತು. ಹೃದಯನು ಅಂದು ಮಂದಿರದಲ್ಲಿ ವಿಶೇಷ ಪೂಜೆ ಮಾಡಬೇಕಿತ್ತು. ಶ್ರೀರಾಮಕೃಷ್ಣರಿಗೆ ಪೂಜೆಗೆ ಬೇಕಾದ ವ್ಯವಸ್ಥೆಯನ್ನು ಸಾಧ್ಯವಾದಷ್ಟು ಮಾಡಿ ಅವನು ಹೊರಟುಹೋದ. ಅನಂತರ ರಾಧಾಗೋವಿಂದನ ರಾತ್ರಿಕಾಲದ ಪೂಜೆ ಮಾಡುವವನು ಬಂದು ಶ್ರೀರಾಮಕೃಷ್ಣರಿಗೆ ಸಹಾಯ ಮಾಡ ತೊಡಗಿದ. ಶ್ರೀದೇವಿಯ ಈ ರಹಸ್ಯ ಪೂಜೆಯ ಎಲ್ಲ ವ್ಯವಸ್ಥೆಯಾಗುವಷ್ಟರ ಹೊತ್ತಿಗೆ ರಾತ್ರಿ ಒಂಬತ್ತು ಗಂಟೆಯಾಯಿತು. ಪೂಜೆಯ ಸಮಯದಲ್ಲಿ ಬಂದಿರಬೇಕೆಂದು ಮೊದಲೇ ಶ್ರೀಮಾತೆಯವರಿಗೆ ಹೇಳಿದ್ದರು. ಅವರೂ ಈಗ ಕೋಣೆಗೆ ಬಂದರು; ಶ್ರೀರಾಮಕೃಷ್ಣರು ಪೂಜೆ ಪ್ರಾರಂಭಿಸಿದರು.

18. ಪೂಜಾದ್ರವ್ಯಗಳನ್ನೆಲ್ಲ ಶುದ್ಧಿಗೊಳಿಸಿದ್ದಾಯಿತು. ಪೂಜೆಯ ಪೂರ್ವ ವಿಧಿಗಳೆಲ್ಲ ಮುಗಿದವು. ಶ್ರೀರಾಮಕೃಷ್ಣರು ಈಗ ದೇವಿಪೀಠದಮೇಲೆ ಕುಳಿತುಕೊಳ್ಳಲು ಶ್ರೀಮಾತೆಯವರಿಗೆ ಸೂಚಿಸಿದರು. ಪೂಜೆಯನ್ನು ನೋಡುತ್ತಿದ್ದಂತೆಯೇ ಶ್ರೀಮಾತೆ ಯವರು ಆಗಲೇ ಅರ್ಧ ಪ್ರಜ್ಞಾವಸ್ಥೆಯಲ್ಲಿದ್ದರು. ತಾವೇನು ಮಾಡುತ್ತಿರುವೆ ನೆಂಬುದರ ಅರಿವಿಲ್ಲದೆಯೇ ಮಂತ್ರಮುಗ್ಧರಾಗಿ ಅವರು ದೇವಿಯ ಪೀಠದ ಮೇಲೆ ಉತ್ತರಾಭಿಮುಖವಾಗಿ ಕುಳಿತರು. ಮುಂದಿದ್ದ ಕಲಶದ ಮಂತ್ರಪೂತ ಜಲದಿಂದ ಯಥಾವಿಧಿಯಂತೆ ಶ್ರೀಮಾತೆಯವರಿಗೆ ಪ್ರೋಕ್ಷಣೆ ಮಾಡಿದರು ಅನಂತರ ಗಟ್ಟಿಯಾಗಿ ಮಂತ್ರವನ್ನು ಉಚ್ಚರಿಸುತ್ತ ಪ್ರಾರ್ಥಿಸಿದರು :

"ಹೇ ಬಾಲೆ, ಹೇ ಸರ್ವಶಕ್ತಿಯ ಒಡೆಯಳಾದ ತ್ರಿಪುರಸುಂದರಿ, ಸಿದ್ಧಿಯ ಬಾಗಿಲನ್ನು ತೆರೆ. ಇವಳ (ಶ್ರೀಮಾತೆಯ) ಶರೀರ ಮನಸ್ಸುಗಳನ್ನು ಪವಿತ್ರಗೊಳಿಸಿ ಅವಳ ಮೂಲಕ ಆವಿರ್ಭೂತಳಾಗಿ ಎಲ್ಲರಿಗೂ ಕಲ್ಯಾಣವುಂಟುಮಾಡು."

19. ಅನಂತರ ಪೂಜಾವಿಧಾನದಂತೆ ಶ್ರೀಮಾತೆಯವರನ್ನು ದೇವಿಯಂತೆ ಷೋಡಶೋಪಚಾರದಿಂದ ಪೂಜಿಸಿದರು. ಭೋಗನಿವೇದನೆಯಾದಮೇಲೆ ಸ್ವಲ್ಪ ನೈವೇದ್ಯವನ್ನು ಅವರ ಬಾಯೊಳಗೆ ಹಾಕಿದರು. ಬಾಹ್ಯಜ್ಞಾನವನ್ನು ಕಳೆದುಕೊಂಡಿದ್ದ ಶ್ರೀಮಾತೆಯವರು ಸಮಾಧಿಸ್ಥರಾದರು. ಶ್ರೀರಾಮಕೃಷ್ಣರು ಮಂತ್ರವನ್ನು ಉಚ್ಚರಿ ಸುತ್ತ ಉಚ್ಚರಿಸುತ್ತ ಸಮಾಧಿಸ್ಥರಾದರು. ಪೂಜಕ ಮತ್ತು ಪೂಜ್ಯ-ಇಬ್ಬರೂ ಆತ್ಮ ಭಾವದಲ್ಲಿ ಒಂದಾದರು.

ಹೀಗೆಯೇ ಎಷ್ಟು ಹೊತ್ತು ಕಳೆಯಿತೊ ! ರಾತ್ರಿಯ ಎರಡನೆಯ ಪ್ರಹರ ಕಳೆದು ಬಹಳ ಸಮಯವಾಗಿತ್ತು. ಆಗ ಶ್ರೀರಾಮಕೃಷ್ಣರಲ್ಲಿ ಬಾಹ್ಯಜ್ಞಾನದ ಲಕ್ಷಣ ಸ್ವಲ್ಪ ಕಂಡುಬಂದಿತು. ಅರ್ಧಬಾಹ್ಯದಶೆಯಲ್ಲಿ ಅವರು ಈಗ ಶ್ರೀದೇವಿಗೆ ಆತ್ಮನಿವೇದನೆ ಮಾಡಿದರು. ತಮ್ಮ ಸಾಧನೆಯ ಫಲವನ್ನೂ ಜಪಮಾಲೆಯಲ್ಲಿ ಅರ್ಪಿಸಿ ಅನಂತರ ಈ ಕೆಳಗಿನ ಪ್ರಣಾಮಮಂತ್ರವನ್ನು ಉಚ್ಚರಿಸಿದರು :

"ಸರ್ವ ಮಂಗಳಗಳ ಮಂಗಳಸ್ವರೂಪಿಯೆ, ಸರ್ವಕರ್ಮವನ್ನೂ ಸಾಧಿಸುವವಳೇ,

ಆಶ್ರಯದಾತಳೆ, ತ್ರಿನಯನೆಯಾದ ಗೌರಿಯೆ, ನಾರಾಯಣಿಯೆ, ನಿನಗೆ ನಮಸ್ಕಾರ, ನಿನಗೆ ನಮಸ್ಕಾರ.''

ಪೂಜೆಯ ಸಮಾಪ್ತಿಯೊಂದಿಗೆ ಶ್ರೀರಾಮಕೃಷ್ಣರ ಸಾಧನೆಯೂ ಪರಿಸಮಾಪ್ತವಾಯಿತು—ಅವರ ದೇವ-ಮಾನವತ್ವವು ಪೂರ್ಣತೆಯನ್ನು ಮುಟ್ಟಿತು.

20. ಷೋಡಶೀ ಪೂಜೆಯ ನಂತರ ಶ್ರೀಮಾತೆಯವರು ಸುಮಾರು ಐದು ತಿಂಗಳು ದಕ್ಷಿಣೇಶ್ವರದಲ್ಲಿದ್ದರು. ಹಿಂದಿನಂತೆಯೇ ಅವರು ಶ್ರೀರಾಮಕೃಷ್ಣರ ಮತ್ತು ಅವರ ತಾಯಿಯ ಸೇವೆ ಮಾಡಿಕೊಂಡಿದ್ದರು. ಹಗಲು ನಹಬತಿನಲ್ಲಿಯೂ ರಾತ್ರಿ ಶ್ರೀರಾಮಕೃಷ್ಣರ ಕೋಣೆಯಲ್ಲಿಯೂ ಕಳೆಯುತ್ತಿದ್ದರು. ಹಗಲು ರಾತ್ರಿ ಶ್ರೀರಾಮಕೃಷ್ಣರ ಭಾವಸಮಾಧಿಗೆ ಕೊನೆಯೇ ಇರಲಿಲ್ಲ. ಕೆಲವೊಮ್ಮೆ ನಿರ್ವಿಕಲ್ಪ ಸಮಾಧಿಯಲ್ಲಿ ಮಗ್ನರಾಗಿದ್ದಾಗ ದೇಹದಲ್ಲಿ ಮೃತ್ಯುವಿನ ಲಕ್ಷಣಗಳು ಕಂಡುಬರುತ್ತಿದ್ದುವು. ಯಾವಾಗ ಅವರಿಗೆ ಸಮಾಧಿಯಾಗುವುದೊ ಎಂಬ ಶಂಕೆಯಿಂದ ಶ್ರೀಮಾತೆಯವರಿಗೆ ರಾತ್ರಿ ನಿದ್ರೆ ಬರುತ್ತಿರಲಿಲ್ಲ. ಬಹಳ ಹೊತ್ತಾದರೂ ಶ್ರೀರಾಮಕೃಷ್ಣರಿಗೆ ಬಾಹ್ಯಪ್ರಜ್ಞೆ ಬರದಿರಲು ಒಂದು ರಾತ್ರಿ ಶ್ರೀಮಾತೆಯವರು ಭೀತರಾಗಿ ಏನು ಮಾಡಬೇಕೊ ತೋಚದೆ ಹೃದಯ ಮತ್ತಿತರರ ನಿದ್ರೆ ಕೆಡಿಸಿದ್ದರು. ಕೊನೆಗೆ ಹೃದಯನು ಬಂದು ಬಹಳಹೊತ್ತು ಭಗವನ್ನಾಮವನ್ನು ಉಚ್ಚರಿಸಿದಮೇಲೆ ಸಮಾಧಿಭಂಗವಾಯಿತು. ಆಗ ಶ್ರೀರಾಮಕೃಷ್ಣರಿಗೆ ತಿಳಿಯಿತು, ತಮ್ಮ ಸಮಾಧಿಯಿಂದಾಗಿ ಶ್ರೀಮಾತೆಯವರಿಗೆ ರಾತ್ರಿ ನಿದ್ರೆ ಸರಿಯಾಗಿ ಆಗುತ್ತಿಲ್ಲ ಎಂದು. ಮರುದಿನದಿಂದ ತಮ್ಮ ತಾಯಿಯೊಟ್ಟಿಗೆ ನಹಬತ್ತಿನಲ್ಲಿಯೇ ರಾತ್ರಿ ಮಲಗಬೇಕೆಂದು ಹೇಳಿದರು. ಹೀಗೆ ಶ್ರೀಮಾತೆಯವರು ಒಂದು ವರ್ಷ ನಾಲ್ಕುತಿಂಗಳು ಶ್ರೀರಾಮಕೃಷ್ಣರೊಡನೆ ಇದ್ದರು, ೧೮೭೩ರ ಅಕ್ಟೋಬರ್‌ನಲ್ಲಿ ಅವರು ಕಾಮಾರಪುಕುರಕ್ಕೆ ಹಿಂದಿರುಗಿದರು.

ಇಪ್ಪತ್ತೊಂದನೆಯ ಅಧ್ಯಾಯ

ಸಾಧಕಭಾವದ ಅಂತ್ಯೋಕ್ತಿ

1. ಷೋಡಶೀ ಪೂಜೆಯನಂತರ ಶ್ರೀರಾಮಕೃಷ್ಣರ ಸಾಧನೆಯು ಆಸೆ ಕೊನೆಗೊಂಡಿತು 2. ಎಲ್ಲ ಮತಗಳ ಸಾಧನೆಯನ್ನು ಮಾಡಿಯಾದ ಮೇಲೆ ಉಳಿದಿರುವುದಿನ್ನೇನು ? 3. ಕ್ರೈಸ್ತಧರ್ಮದಲ್ಲಿ ಅವರು ಸಿದ್ಧಿಯನ್ನು ಪಡೆದರು 4. ಅವರ ಕ್ರಿಸ್ತನ ದರ್ಶನ ಹೇಗೆ ಪ್ರಮಾಣಿತವಾಯಿತು ? 5. ಬುದ್ಧ ಮತ್ತು ಬೌದ್ಧ ಧರ್ಮದ ಬಗ್ಗೆ ಶ್ರೀರಾಮಕೃಷ್ಣರ ಅಭಿಪ್ರಾಯ 6. ಜೈನ ಮತ್ತು ಸಿಖ್ ಮತಗಳಲ್ಲಿ ಅವರಿಗಿದ್ದ ಭಕ್ತಿವಿಶ್ವಾಸ 7. ಸರ್ವಧರ್ಮ ಸಾಧನೆಯನಂತರ ಶ್ರೀರಾಮಕೃಷ್ಣರ ಕೆಲವು ಸಿದ್ಧಾಂತಗಳು : 8. ತಾವು ಭಗವದವತಾರ 9. ತಮಗೆ ಮುಕ್ತಿಯಿಲ್ಲ 10. ತಮ್ಮ ದೇಹತ್ಯಾಗದ ಕಾಲ ಅವರಿಗೆ ತಿಳಿದಿತ್ತು 11. ಎಲ್ಲ ಧರ್ಮಗಳೂ ಸತ್ಯ 12. ದ್ವೈತ, ವಿಶಿಷ್ಟಾದ್ವೈತ, ಅದ್ವೈತ—ಇವು ಅವಸ್ಥಾಭೇದಗಳು 13. ಕರ್ಮಯೋಗದಿಂದ ಸಾಧಾರಣ ಮಾನವರ ಪ್ರಗತಿ 14. ಉದಾರಮತವನ್ನವಲಂಬಿಸಿದ ಸಂಪ್ರದಾಯವನ್ನು ಪ್ರಾರಂಭಿಸಬೇಕು 15. ಯಾರದು ಕೊನೆಯ ಜನ್ಮವೊ ಅವರು ತಮ್ಮ ಮತವನ್ನು ಅವಲಂಬಿಸುತ್ತಾರೆ 16. ಶ್ರೀರಾಮಕೃಷ್ಣರ ಬಗ್ಗೆ ಮೂವರು ಶಾಸ್ತ್ರಜ್ಞ ಸಾಧಕರ ಅಭಿಪ್ರಾಯ 17. ಆ ಪಂಡಿತರು ಆಗಮಿಸಿದ ಕಾಲ ನಿರ್ಣಯ 18. ತಮ್ಮ ಅಂತರಂಗ ಭಕ್ತರನ್ನು ನೋಡುವ ಆಸೆ.

1. ಷೋಡಶೀ ಪೂಜೆಯ ಸಮಾಪ್ತಿಯೊಂದಿಗೆ ಶ್ರೀರಾಮಕೃಷ್ಣರ ಸಾಧನ ಯಜ್ಞವು ಕೊನೆಗೊಂಡಂತಾಯಿತು. ಈಶ್ವರಾನುರಾಗವೆಂಬ ಅಗ್ನಿಯು ಅವರ ಹೃದಯ ಕುಂಡದಲ್ಲಿ ಪ್ರಜ್ವಲಿಸುತ್ತಿದ್ದು ಹನ್ನೆರಡು ಸುದೀರ್ಘ ವರ್ಷಗಳು ಅವರು ನಾನಾ ಭಾವದಲ್ಲಿ ನಾನಾ ಸಾಧನೆಗಳನ್ನು ಮಾಡುವಂತೆ ಪ್ರೇರೇಪಿಸಿತು. ಈ ಪೂರ್ಣಾಹುತಿಯನಂತರ ಅದು ಶಾಂತವಾಯಿತು. ಹಾಗಾಗದೆ ಇನ್ನೇನಾದೀತು ? ಈಗ ಶ್ರೀರಾಮಕೃಷ್ಣರಲ್ಲಿ ತಮ್ಮದು ಎಂಬುದು ಏನಾದರೂ ಇದೆಯೆ ? ಇದುವರೆಗೆ ಆಹುತಿ ನೀಡದೆ ಉಳಿದಿರುವುದು ಯಾವುದಾದರೂ ಇದೆಯೆ ? ಧನ ಮಾನ ಹೆಸರು ಕೀರ್ತಿ ಸಮಸ್ತ ಸುಖ ಭೋಗಾಕಾಂಕ್ಷೆ ಎಲ್ಲವನ್ನೂ ಬಹಳ ಹಿಂದೆಯೇ ಅವರು ಅದರಲ್ಲಿ ವಿಸರ್ಜಿಸಿದ್ದರು. ಹೃದಯ, ಪ್ರಾಣ, ಮನಸ್ಸು, ಬುದ್ಧಿ, ಚಿತ್ತ, ಅಹಂಕಾರಾದಿಗಳನ್ನು ಅದರ ಚಾಚಿದ ನಾಲಿಗೆಗೆ ಆಹುತಿ ನೀಡಿದ್ದರು. ವಿವಿಧ ಸಾಧನ ಮಾರ್ಗವನ್ನು ಅನುಸರಿಸಿ ನಾನಾ ರೀತಿಯಲ್ಲಿ ಶ್ರೀಜಗನ್ಮಾತೆಯನ್ನು ನೋಡುವ ಬಯಕೆ ಮಾತ್ರ ಅವರಲ್ಲಿತ್ತು. ಈಗ

ಅದನ್ನೂ ಅದರಲ್ಲಿ ಅರ್ಪಿಸಿದರು. ಆದ್ದರಿಂದ ಅದು ಈಗ ಪ್ರಶಾಂತವಾಗದೆ ಮತ್ತೇನು ಮಾಡೀತು ?

2. ಶ್ರೀಜಗನ್ಮಾತೆಯು ಅವರ ತೀವ್ರ ವ್ಯಾಕುಲತೆಯನ್ನು ಕಂಡು ಮೊಟ್ಟ ಮೊದಲಿಗೆ ಅವರಿಗೆ ದರ್ಶನವಿತ್ತಳು. ಅನಂತರ ಅನೇಕ ಮಹಾಪುರುಷರನ್ನು ಅವರಿಗೆ ಪರಿಚಯಿಸಿ ಶಾಸ್ತ್ರೀಯ ಮಾರ್ಗದಲ್ಲಿ ಸಾಧನೆ ಮಾಡಿ ಹಿಂದಿನ ದರ್ಶನವನ್ನು ಅದರೊಂದಿಗೆ ಹೊಂದಿಸಿನೋಡುವಂತೆ ಮಾಡಿದಳು. ಆದ್ದರಿಂದ ಈಗ ಅವರು ಅವಳಿಂದ ಬಯಸುವುದೇನಿದೆ ? ಅರವತ್ತನಾಲ್ಕು ತಂತ್ರಗಳ ಸಾಧನೆಯಲ್ಲಿಯೂ ಸಿದ್ಧಿಯನ್ನು ಪಡೆದದ್ದಾಗಿದೆ ; ವೈಷ್ಣವ ಸಂಪ್ರದಾಯದ ಪಂಚಭಾವ ಸಾಧನೆಗಳನ್ನೆಲ್ಲ ಮಾಡಿ ಅವುಗಳ ಫಲವನ್ನು ಪಡೆದದ್ದಾಗಿದೆ ; ಸನಾತನ ವೈದಿಕಮಾರ್ಗವನ್ನು ಅನುಸರಿಸಿ ಸಂನ್ಯಾಸಗ್ರಹಣದ ಮೂಲಕ ನಿರ್ಗುಣ-ನಿರಾಕಾರ ಸತ್ಯವನ್ನು ಅನುಭವಿಸಿದ್ದಾಗಿದೆ ; ಹಿಂದೂಧರ್ಮದ ಹೊರಗಿರುವ ಇಸ್ಲಾಂ ಧರ್ಮದ ಸಾಧನೆಯನ್ನೂ ಮಾಡಿ ಅದರ ಸತ್ಯವನ್ನೂ ಅರಿತದ್ದಾಗಿದೆ. ಹಾಗಿರುವಾಗ ಅವಳಿಂದ ಇನ್ನೇನು ಪಡೆಯುವುದಿದೆ, ಇನ್ನೇನು ಕೇಳುವುದಿದೆ ?

3. ಒಂದು ವರ್ಷದನಂತರ ಶ್ರೀರಾಮಕೃಷ್ಣರ ಮನಸ್ಸಿನಲ್ಲಿ ಇನ್ನೊಂದು ಸಾಧನ ಮಾರ್ಗವನ್ನು ಅನುಸರಿಸಿ ಜಗನ್ಮಾತೆಯನ್ನು ಕಾಣುವ ಬಯಕೆಯಾಯಿತು. ಆಗ ಅವರಿಗೆ ಶಂಭುಮಲ್ಲಿಕನ ಪರಿಚಯವಾಗಿತ್ತು. ಅವನು ಬೈಬಲ್ ಓದುವುದನ್ನು ಕೇಳಿ ಕ್ರಿಸ್ತನ ಪವಿತ್ರ ಜೀವನ ಮತ್ತು ಅವನು ಸ್ಥಾಪಿಸಿದ ಧರ್ಮ—ಇವುಗಳ ಮಾಹಿತಿ ಯನ್ನು ಪಡೆದರು. ಈಗ ಕ್ರೈಸ್ತಧರ್ಮದ ಸಾಧನೆಯನ್ನು ಮಾಡಬೇಕೆನಿಸಿತು ಅವರಿಗೆ. ಕೂಡಲೆ ಜಗನ್ಮಾತೆ ಅದಕ್ಕೆ ಎಲ್ಲ ವ್ಯವಸ್ಥೆ ಮಾಡಿದಳು. ದಕ್ಷಿಣೇಶ್ವರದ ಕಾಳೀಮಂದಿರದ ದಕ್ಷಿಣ ಭಾಗಕ್ಕೆ ಯದುನಾಥ ಮಲ್ಲಿಕನ ತೋಟದ ಮನೆಯಿದೆ. ಶ್ರೀರಾಮಕೃಷ್ಣರು ಆಗಾಗ ಅಲ್ಲಿಗೆ ಓಡಾಡುತ್ತ ಹೋಗಿಬರುತ್ತಿದ್ದರು. ಯದುನಾಥ ಮತ್ತು ಆತನ ತಾಯಿಗೆ ಶ್ರೀರಾಮಕೃಷ್ಣರನ್ನು ನೋಡಿದಂದಿನಿಂದಲೂ ಅವರ ಮೇಲೆ ತುಂಬ ಶ್ರದ್ಧಾ ಭಕ್ತಿಯಿತ್ತು. ಅವರಿಬ್ಬರು ಮನೆಯಲ್ಲಿ ಇಲ್ಲದಿದ್ದರೂ ಅಲ್ಲಿಯ ಕೆಲಸಗಾರರು ಶ್ರೀರಾಮ ಕೃಷ್ಣರು ಅಲ್ಲಿ ಓಡಾಡಲು ಮತ್ತು ಅಲ್ಲಿಯ ಬೈಠಕ್‌ಖಾನೆಯಲ್ಲಿ ಕುಳಿತು ವಿಶ್ರಮಿಸಿ ಕೊಳ್ಳಲು ಶ್ರೀರಾಮಕೃಷ್ಣರನ್ನು ಒತ್ತಾಯಿಸುತ್ತಿದ್ದರು. ಅಲ್ಲಿಯ ಬೈಠಕ್‌ಖಾನೆಯಲ್ಲಿ ಅನೇಕ ಒಳ್ಳೆಯ ಚಿತ್ರಗಳಿದ್ದುವು. ತಾಯಿಯ ಮಡಿಲಿನಲ್ಲಿ ಇರುವ ಬಾಲಕ್ರಿಸ್ತನ ಚಿತ್ರವೂ ಅವುಗಳಲ್ಲಿ ಒಂದು. ಒಂದುದಿನ ಶ್ರೀರಾಮಕೃಷ್ಣರು ಆ ಚಿತ್ರವನ್ನು ತನ್ಮಯ ರಾಗಿ ನೋಡುತ್ತಿದ್ದರು ಮತ್ತು ಕ್ರಿಸ್ತನ ಅದ್ಭುತ ಜೀವನ ಕಥೆಯನ್ನು ಸ್ಮರಿಸಿಕೊಳ್ಳು ತ್ತಿದ್ದರು. ನೋಡುತ್ತಿದ್ದಂತೆಯೇ ಆ ಚಿತ್ರವು ಜೀವಂತವಾಗಿ ಜ್ಯೋತಿರ್ಮಯವಾಗಿ ಕಾಣತೊಡಗಿತು. ದೇವಮಾತೆ ಮತ್ತು ದೇವಶಿಶುವಿನ ಅಂಗದಿಂದ ಜ್ಯೋತಿಕಿರಣಗಳು ಇವರ ದೇಹವನ್ನು ಪ್ರವೇಶಿಸಿ ಇವರ ಅಂತರ್ಯದಲ್ಲಿ ಆಮೂಲಾಗ್ರ ಪರಿವರ್ತನೆಯ ನ್ನುಂಟುಮಾಡತೊಡಗಿದವು. ಜನ್ಮಗತ ಹಿಂದೂ ಸಂಸ್ಕಾರಗಳೆಲ್ಲ ಯಾವುದೊ ಮೂಲೆ

ಯಲ್ಲಿ ಅಡಗಿದವು ಮತ್ತು ಹೊಸ ಸಂಸ್ಕಾರಗಳು ಉದಯವಾಗತೊಡಗಿದವು. ಅವರು ಕಾತರತೆಯಿಂದ ಜಗನ್ಮಾತೆಯನ್ನು ಕೇಳಿದರು, ''ತಾಯಿ, ನನಗೆ ಇದೇನು ಮಾಡುತ್ತಿರುವೆ ?'' ಎಂದು. ಆದರೆ ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಆ ಸಂಸ್ಕಾರ ತರಂಗಗಳು ಪ್ರಬಲವಾದ ವೇಗದಿಂದ ಬಂದು ಅವರ ಹಿಂದೂ ಸಂಸ್ಕಾರಗಳನ್ನೆಲ್ಲ ಮೂಲೆಗೆ ತಳ್ಳಿದುವು. ಆಗ ದೇವದೇವಿಯರ ಮೇಲಿನ ಪ್ರೀತಿಯೆಲ್ಲ ಹೊರಟು ಹೋಯಿತು. ಕ್ರಿಸ್ತ ಮತ್ತು ಕ್ರೈಸ್ತಧರ್ಮದಲ್ಲಿ ಪೂರ್ಣ ಶ್ರದ್ಧೆ ಮತ್ತು ವಿಶ್ವಾಸ ಅವರ ಮನೋರಾಜ್ಯವನ್ನು ಆಕ್ರಮಿಸಿಕೊಂಡವು. ಕ್ರೈಸ್ತ ಪಾದ್ರಿಗಳು ಚರ್ಚಿನಲ್ಲಿ ಕ್ರಿಸ್ತವಿಗ್ರಹದ ಮುಂದೆ ಧೂಪ ದೀಪಗಳನ್ನು ಬೆಳಗುವುದು, ಅವರು ಕ್ರಿಸ್ತನನ್ನು ಪ್ರಾರ್ಥಿಸುವುದು–ಇವೇ ಮುಂತಾದ ದೃಶ್ಯಗಳು ಅವರಿಗೆ ಕಾಣತೊಡಗಿದುವು. ಶ್ರೀರಾಮಕೃಷ್ಣರು ದಕ್ಷಿಣೇಶ್ವರಕ್ಕೆ ಬಂದು ಇದೇ ವಿಷಯಗಳನ್ನೇ ಧ್ಯಾನಿಸತೊಡಗಿದರು. ಕಾಳೀಮಂದಿರಕ್ಕೆ ಹೋಗುವ ವಿಷಯವೇ ಅವರಿಗೆ ಮರೆತುಹೋಯಿತು. ಮೂರು ದಿನಗಳವರೆಗೆ ಈ ಭಾವತರಂಗವು ಅವರ ಮನಸ್ಸಿನ ಮೇಲೆ ಪ್ರಭುತ್ವ ಹೊಂದಿತ್ತು. ಮೂರನೆಯದಿನದ ಕೊನೆಯಲ್ಲಿ ಶ್ರೀರಾಮಕೃಷ್ಣರು ಪಂಚವಟಿಯಲ್ಲಿ ಓಡಾಡುತ್ತಿರುವಾಗ ಒಂದು ಅದ್ಭುತ ದೃಶ್ಯವನ್ನು ಕಂಡರು. ಒಬ್ಬ ಸುಂದರ ದಿವ್ಯಪುರುಷನೊಬ್ಬನು ನೆಟ್ಟ ದೃಷ್ಟಿಯಿಂದ ಅವರನ್ನೇ ನೋಡುತ್ತ ಅವರ ಕಡೆ ಗಂಭೀರವಾಗಿ ನಡೆದುಬರುತ್ತಿದ್ದಾನೆ. ಅವರಿಗೆ ಕೂಡಲೇ ತಿಳಿಯಿತು ಅವನು ವಿದೇಶೀಯವನು ಎಂದು. ಕಣ್ಣುಗಳು ವಿಶಾಲವಾಗಿದ್ದುವು. ಮೈಬಣ್ಣ ಬಿಳಿಪು. ಮುಖದಲ್ಲಿ ಅಪೂರ್ವ ಶೋಭೆಯಿತ್ತು. ಮೂಗು ಸ್ವಲ್ಪ ಚಪ್ಪಟೆಯಾದರೂ ಅದರಿಂದ ಅವನ ಸೌಂದರ್ಯಕ್ಕೆ ಸ್ವಲ್ಪವೂ ಹಾನಿಯಾಗಿರಲಿಲ್ಲ. ಅವನ ಅತ್ಯಂತ ಸೌಮ್ಯ ಮುಖಮಂಡಲವನ್ನು ನೋಡಿ ಶ್ರೀರಾಮಕೃಷ್ಣರು ಮುಗ್ಧರಾದರು. ಆಶ್ಚರ್ಯದಿಂದ ಇವರಾರು ? ಎಂದು ಭಾವಿಸುತ್ತಿದ್ದಂತೆಯೇ ಆ ದಿವ್ಯಮೂರ್ತಿ ಹತ್ತಿರಬಂದಿತು. ಆಗ ಅವರ ಹೃದಯದಿಂದ ಧ್ವನಿ ಬಂತು : ''ಇವನೇ ಯೇಸುಕ್ರಿಸ್ತ–ಜೀವಿಗಳನ್ನು ದುಃಖಯಾತನೆಯಿಂದ ಮುಕ್ತಗೊಳಿಸಲು ಹೃದಯದ ನೆತ್ತರನ್ನು ಸುರಿಸಿದವನು, ಮಾನವನ ಕೈಯಿಂದ ಅಸಾಧ್ಯ ಯಾತನೆಯನ್ನು ಅನುಭವಿಸಿದವನು. ಇವನೇ ಆ ಯೋಗಿವರ, ಭಕ್ತ ಯೇಸುಕ್ರಿಸ್ತ.'' ಅನಂತರ ಕ್ರಿಸ್ತನು ಶ್ರೀರಾಮಕೃಷ್ಣರನ್ನು ಆಲಿಂಗಿಸಿ ಅವರಲ್ಲಿ ಲೀನನಾದನು. ಶ್ರೀರಾಮಕೃಷ್ಣರು ಭಾವಸಮಾಧಿಯನ್ನು ಪಡೆದರು. ಹೀಗೆ ಕ್ರಿಸ್ತನ ದರ್ಶನವನ್ನು ಪಡೆದು ಅವನು ಅವತಾರಪುರುಷನೆಂಬುದನ್ನು ಸಾಜೀತುಪಡಿಸಿದರು.

4. ಬಹುಕಾಲದನಂತರ ನಾವು ಅವರೆಡೆಗೆ ಹೋಗುತ್ತಿದ್ದಾಗ ಒಂದು ದಿನ ಅವರು ಕ್ರಿಸ್ತನ ವಿಚಾರವಾಗಿ ಮಾತನಾಡುತ್ತಾ ಹೀಗೆ ಹೇಳಿದರು : ''ನೋಡಿಯಪ್ಪ, ನೀವು ಬೈಬಲ್ ಓದಿದ್ದೀರಿ, ಅದರಲ್ಲಿ ಕ್ರಿಸ್ತನ ಶಾರೀರಿಕ ಲಕ್ಷಣಗಳ ಬಗ್ಗೆ ಏನು ಹೇಳಿದೆ ಹೇಳಿ ನೋಡೋಣ. ಅವನು ನೋಡುವುದಕ್ಕೆ ಹೇಗಿದ್ದ ?'' ನಾವು ಹೇಳಿದೆವು : ''ಮಹಾಶಯರೆ, ಆ ವಿಷಯವನ್ನು ಬೈಬಲ್ಲಿನಲ್ಲೆಲ್ಲೂ ಹೇಳಿದ ಹಾಗಿಲ್ಲ ಆದರೆ ಕ್ರಿಸ್ತನು

ಯಹೂದಿ ಜನಾಂಗಕ್ಕೆ ಸೇರಿದವನು, ಆದ್ದರಿಂದ ಅವನು ಸುಂದರ ಬಿಳಿಯ ವರ್ಣದವನಾಗಿದ್ದಿರಬೇಕು, ಅವನ ಕಣ್ಣುಗಳು ಉದ್ದವಾಗಿದ್ದಿರಬೇಕು, ಮತ್ತು ಉದ್ದ ಮೂಗು.'' ಶ್ರೀರಾಮಕೃಷ್ಣರೆಂದರು : ''ಆದರೆ ಅವನ ಮೂಗು ಚಪ್ಪಟೆಯಾಗಿರುವಂತೆ ಕಂಡಿತು ನನಗೆ. ನನಗೇಕೆ ಹಾಗೆ ಕಂಡಿತೊ ಯಾರಿಗೆ ಗೊತ್ತು ?'' ಈ ವಿಷಯ ಅಲ್ಲಿಗೆ ನಿಂತಿತು. ಶ್ರೀರಾಮಕೃಷ್ಣರು ಭಾವಾವಸ್ಥೆಯಲ್ಲಿ ಕಂಡ ಕ್ರಿಸ್ತನ ಮೂರ್ತಿ ಅವನ ನಿಜವಾದ ರೂಪದೊಂದಿಗೆ ಹೇಗೆ ಸರಿಹೊಂದುವುದು ಎಂದು ನಾವು ಚಿಂತಿಸುತ್ತಿದ್ದೆವು. ಎಲ್ಲ ಯಹೂದಿಗಳಂತೆಯೇ ಕ್ರಿಸ್ತನ ನಾಸಿಕವೂ ಚೂಪಾಗಿದ್ದಿರಬೇಕು. ಶ್ರೀರಾಮಕೃಷ್ಣರ ದೇಹತ್ಯಾಗದ ನಂತರ ನಮಗೆ ತಿಳಿದುಬಂದಿತು ಕ್ರಿಸ್ತನ ಶಾರೀರಿಕ ಲಕ್ಷಣಗಳ ಬಗ್ಗೆ ಮೂರು ಬಗೆಯ ವಿವರಣೆಗಳಿವೆ ಎಂದು. ಅವುಗಳಲ್ಲಿ ಒಂದರಲ್ಲಿ ಅವನ ಮೂಗು ಚಪ್ಪಟೆಯಾಗಿತ್ತೆಂದು ಹೇಳಿದೆ.

5. ಶ್ರೀರಾಮಕೃಷ್ಣರು ಅನೇಕ ಧರ್ಮಸಾಧನೆಗಳನ್ನು ಮಾಡಿರುವರು. ಈಗ ಬುದ್ಧನ ಬಗ್ಗೆ ಅವರ ಅಭಿಪ್ರಾಯವೇನು ಎಂಬ ಪ್ರಶ್ನೆ ಏಳುವುದು ? ಈ ವಿಷಯದಲ್ಲಿ ನಮಗೆ ತಿಳಿದಿರುವುದನ್ನು ಇಲ್ಲಿ ಹೇಳುತ್ತೇವೆ. ಸಾಮಾನ್ಯವಾಗಿ ಹಿಂದುಗಳೆಲ್ಲ ಬುದ್ಧನನ್ನು ಯಾವ ದೃಷ್ಟಿಯಿಂದ ಕಾಣುತ್ತಾರೊ ಅದೇ ವಿಶ್ವಾಸ ಅವರಿಗೂ ಇತ್ತು. ಅವನು ಅವತಾರಪುರುಷನೆಂದು ತಮ್ಮ ಶ್ರದ್ಧಾಭಕ್ತಿಯನ್ನು ತೋರಿಸುತ್ತಿದ್ದರು. ಪುರಿಕ್ಷೇತ್ರದ ಶ್ರೀಜಗನ್ನಾಥ–ಸುಭದ್ರೆ–ಬಲರಾಮ–ಈ ಮೂರ್ತಿಗಳಲ್ಲಿ ಭಗವಾನ್ ಬುದ್ಧನು ಇಂದೂ ಪ್ರಕಾಶಿಸುತ್ತಿರುವನು ಎಂಬ ವಿಶ್ವಾಸ ಅವರಿಗಿತ್ತು. ಪುರೀಕ್ಷೇತ್ರದಲ್ಲಿ ಶ್ರೀಜಗನ್ನಾಥನ ಅನುಗ್ರಹದಿಂದ ಎಲ್ಲ ಭೇದಭಾವವೂ ಹೊರಟುಹೋಗಿ ಮಾನವ ಸಾಧಾರಣ ಜಾತಿ ಬುದ್ಧಿಯೂ ನಾಶವಾಗುವುದು—ಎಂಬ ಆ ಕ್ಷೇತ್ರದ ಮಹಾತ್ಮೆಯನ್ನು ಕೇಳಿ ಅಲ್ಲಿಗೆ ಹೋಗಬೇಕೆಂದು ಅವರಿಗೆ ತುಂಬ ಆಸೆಯಾಗಿತ್ತು. ಆದರೆ ಅಲ್ಲಿಗೆ ಹೋದರೆ ತಮ್ಮ ದೇಹ ಉಳಿಯುವುದಿಲ್ಲ ಎಂದು ತಿಳಿದು ಅವರು ಅಲ್ಲಿಗೆ ಹೋಗಲಿಲ್ಲ. ಗಂಗಾಜಲವನ್ನು ಶ್ರೀರಾಮಕೃಷ್ಣರು ಬ್ರಹ್ಮವಾರಿಯೆಂದು ಪರಿಗಣಿಸುತ್ತಿದ್ದರು. ಹಾಗೆಯೇ ಜಗನ್ನಾಥ ಪ್ರಸಾದದಲ್ಲಿಯೂ ಅವರಿಗೆ ತುಂಬ ವಿಶ್ವಾಸವಿತ್ತು. ಅದನ್ನು ತಿಂದರೆ ವಿಷಯಾಸಕ್ತ ಮನಸ್ಸು ಪವಿತ್ರವಾಗಿ ಆಧ್ಯಾತ್ಮಿಕ ಪ್ರವೃತ್ತಿ ಅದರಲ್ಲಿ ಉಂಟಾಗುವುದು ಎಂದು ಅವರು ನಂಬಿದ್ದರು. ವಿಷಯಾಸಕ್ತರೊಡನೆ ಮಾತನಾಡಲೇಬೇಕಾದ ಸಂದರ್ಭ ಬಂದರೆ ಅನಂತರ ಅವರು ಸ್ವಲ್ಪ ಗಂಗಾಜಲ ಮತ್ತು ಒಂದು ಕಾಳು ಮಹಾಪ್ರಸಾದ ಬಾಯಿಗೆ ಹಾಕಿಕೊಳ್ಳುತ್ತಿದ್ದರು. ತಮ್ಮ ಶಿಷ್ಯರಿಗೂ ಹಾಗೆ ಮಾಡಲು ಹೇಳುತ್ತಿದ್ದರು. ಬುದ್ಧನ ಅವತಾರದಲ್ಲಿ ಶ್ರೀರಾಮಕೃಷ್ಣರಿಗೆ ಇದ್ದ ವಿಶ್ವಾಸದ ಬಗ್ಗೆ ಇನ್ನೂ ಒಂದು ವಿಷಯ ತಿಳಿದುಬಂದಿದೆ. ಅವರ ಪರಮಭಕ್ತ ಗಿರೀಶಚಂದ್ರ ಘೋಷನು ಬುದ್ಧನ ಬಗ್ಗೆ ಒಂದು ಸುಂದರ ನಾಟಕವನ್ನು ಬರೆದಿದ್ದನು. ಅದನ್ನು ಕೇಳಿ ಶ್ರೀರಾಮಕೃಷ್ಣರು, ಬುದ್ಧನು ನಿಜವಾಗಿಯೂ ಅವತಾರಪುರುಷನೇ, ಅವನ ಧರ್ಮಕ್ಕೂ ವೈದಿಕ ಜ್ಞಾನ ಮಾರ್ಗಕ್ಕೂ ಯಾವ ಭೇದವೂ ಇಲ್ಲ ಎಂದು ಹೇಳಿದರು. ತಮ್ಮ ಯೋಗದೃಷ್ಟಿಯಿಂದ ಇದನ್ನು

ಅರಿತುಕೊಂಡು ಅವರು ಹೀಗೆ ಹೇಳಿದ್ದರು ಎಂಬುದು ನಮ್ಮ ಅಭಿಮತ.

6. ಜೈನಧರ್ಮದ ಪ್ರವರ್ತಕರಾದ ತೀರ್ಥಂಕರರು ಮತ್ತು ಸಿಖ್‌ಧರ್ಮದ ಗುರು ನಾನಕ್ ಮತ್ತು ಹತ್ತು ಗುರುಗಳು—ಇವರುಗಳ ಬಗ್ಗೆ ಜೈನ ಮತ್ತು ಸಿಖ್ ಧರ್ಮಾನು ಯಾಯಿಗಳಿಂದ ಶ್ರೀರಾಮಕೃಷ್ಣರು ಸಾಕಷ್ಟು ಕೇಳಿದ್ದರು. ಇದರಿಂದ ಆ ಧರ್ಮ ಸುಸ್ಥಾಪಕರ ಮೇಲೆ ಅವರಿಗೆ ಅಪಾರ ಶ್ರದ್ಧೆಯುಂಟಾಗಿತ್ತು. ಅವರ ಕೋಣೆಯಲ್ಲಿ ಅನೇಕ ದೇವದೇವಿಯರ ಚಿತ್ರಗಳ ಜೊತೆ ಒಂದು ಮಹಾವೀರ ತೀರ್ಥಂಕರನ ಶಿಲಾ ಪ್ರತಿಮೆಯಿತ್ತು ಮತ್ತು ಕ್ರಿಸ್ತನ ಒಂದು ಚಿತ್ರವೂ ಇತ್ತು. ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಶ್ರೀರಾಮಕೃಷ್ಣರು ಈ ಚಿತ್ರಗಳ ಮತ್ತು ವಿಗ್ರಹದ ಮುಂದೆ ಧೂಪ ಹಾಕುತ್ತಿದ್ದರು. ಎಷ್ಟೆ ಶ್ರದ್ಧಾಭಕ್ತಿಯಿದ್ದರೂ ಅವರು ತೀರ್ಥಂಕರರಲ್ಲಿ ಯಾರನ್ನೇ ಆಗಲಿ, ಅಥವಾ ಹತ್ತು ಸಿಖ್ ಗುರುಗಳಲ್ಲಿ ಯಾರನ್ನೇ ಆಗಲಿ ಅವತಾರಪುರುಷರೆಂದು ಪರಿಗಣಿಸು ತ್ತಿದ್ದುದು ನಮಗೆ ತಿಳಿದು ಬಂದಿಲ್ಲ. ಹತ್ತು ಸಿಖ್ ಗುರುಗಳ ಬಗ್ಗೆ ಅವರು ಹೇಳು ತ್ತಿದ್ದರು : "ಅವರೆಲ್ಲರೂ ಜನಕಋಷಿಯ ಅವತಾರ. ಸಿಖರು ನನಗೆ ಹೇಳಿರುವರು ರಾಜರ್ಷಿ ಜನಕನಿಗೆ ಮುಕ್ತಿ ಪಡೆಯುವುದಕ್ಕೆ ಮುಂಚೆ ಲೋಕಸಂಗ್ರಹ ಮಾಡಬೇಕೆಂಬ ಇಚ್ಛೆಯಾಯಿತು, ಆದ್ದರಿಂದ ಅವನು ನಾನಕನಿಂದ ಹಿಡಿದು ಗೋವಿಂದನವರೆಗೆ ಹತ್ತು ಬಾರಿ ಜನ್ಮವೆತ್ತಿ ಸಿಖ್ ಜನಾಂಗದಲ್ಲಿ ಧರ್ಮ ಸಂಸ್ಥಾಪನೆ ಮಾಡಿ ಪರಬ್ರಹ್ಮನಲ್ಲಿ ಐಕ್ಯವಾದನು ಎಂದು. ಸಿಖರ ಈ ಮಾತನ್ನು ಸುಳ್ಳು ಎಂದು ಹೇಳಲಾಗುವುದಿಲ್ಲ."

7. ಎಲ್ಲ ಸಾಧನೆಗಳಲ್ಲಿಯೂ ಸಿದ್ಧಿಯನ್ನು ಪಡೆದ ಮೇಲೆ ಶ್ರೀರಾಮಕೃಷ್ಣರಲ್ಲಿ ಕೆಲವು ನಂಬಿಕೆಗಳು ಉಂಟಾಗಿದ್ದುವು. ಇವುಗಳಲ್ಲಿ ಕೆಲವು ತಮ್ಮ ಜೀವನಕ್ಕೆ ಸಂಬಂಧಿಸಿ ದುವು ಮತ್ತು ಕೆಲವು ಸಾಮಾನ್ಯ ಆಧ್ಯಾತ್ಮಿಕ ವಿಷಯಗಳಿಗೆ ಸಂಬಂಧಿಸಿದವು. ಇವು ಗಳಲ್ಲಿ ಕೆಲವನ್ನು ಆಗಲೇ ಹೇಳಿಯಾಗಿದೆ. ಪ್ರಧಾನವಾದ ಕೆಲವನ್ನು ಇಲ್ಲಿ ಉಲ್ಲೇಖಿಸು ತ್ತೇವೆ. ಸಾಧನೆಯ ಕೊನೆಯಲ್ಲಿ ಶ್ರೀಜಗನ್ಮಾತೆಯಲ್ಲಿ ಒಂದಾಗಿ ಭಾವಮುಖ ಸ್ಥಿತಿ ಯನ್ನು ಪಡೆದಾಗ ಈ ನಂಬಿಕೆಗಳು ಅವರಲ್ಲಿ ದೃಢಪ್ರತಿಷ್ಠಿತವಾದವೆಂದು ನಮ್ಮ ಅಭಿ ಪ್ರಾಯ. ಅವರು ಇವನ್ನು ಯೋಗದೃಷ್ಟಿಯಿಂದ ಪಡೆದುದಾದರೂ ಸಾಧಾರಣ ಮಾನ ವರು ಇವನ್ನು ಎಷ್ಟರ ಮಟ್ಟಿಗೆ ಅರ್ಥಮಾಡಿಕೊಳ್ಳಬಹುದು ಎಂಬುದನ್ನು ತಿಳಿಸಲು ಇಲ್ಲಿ ಪ್ರಯತ್ನಿಸುತ್ತೇವೆ.

8. ಮೊದಲನೆಯದು : ಶ್ರೀರಾಮಕೃಷ್ಣರಿಗೆ ತಾವು ಅವತಾರವೆಂದು ನಂಬಿಕೆ ಯುಂಟಾಗಿತ್ತು. ತಮ್ಮ ಸಾಧನೆಗಳೆಲ್ಲ ಇತರರಿಗಾಗಿ ಎಂದು ಅವರು ತಿಳಿದಿದ್ದರು. ಇತರರ ಸಾಧಕ ಜೀವನವನ್ನು ತಮ್ಮೊಡನೆ ಹೋಲಿಸಿ ಅವೆರಡರಲ್ಲಿ ವಿಶೇಷವಾದ ಭೇದ ವಿರುವುದನ್ನು ಅವರು ಕಂಡಿದ್ದರು. ಸಾಧಾರಣ ಸಾಧಕನು ಯಾವುದೋ ಒಂದು ಬಗೆಯ ಸಾಧನೆಯನ್ನು ಜೀವನದುದ್ದಕ್ಕೂ ಮಾಡುತ್ತ ಭಗವಂತನ ದರ್ಶನ ಪಡೆದು ಅಷ್ಟರಿಂದಲೇ ತೃಪ್ತನಾಗಿಬಿಡುತ್ತಾನೆ. ಆದರೆ ಅವರಿಗಾದರೊ ಎಲ್ಲ ಬಗೆಯ ಸಾಧನೆಗಳನ್ನು ಮಾಡಿ ಗುರಿ ಸಾಧಿಸುವವರೆಗೆ ಸುಮ್ಮನಿರಲಾಗಲಿಲ್ಲ. ಬೇರೆ ಬೇರೆ ಮತಗಳ ಸಾಧನೆಯಲ್ಲಿ ಸಿದ್ಧಿ

ಯನ್ನು ಪಡೆಯಲು ಅವರಿಗೆ ಬಹಳ ಸ್ವಲ್ಪವೇ ಸಮಯ ಹಿಡಿಯಿತು. ಕಾರಣವಿಲ್ಲದೆ ಕಾರ್ಯವಿರಲಾರದು. ಮೇಲೆ ಹೇಳಿದ ವಿಷಯಕ್ಕೆ ಕಾರಣವನ್ನು ಅವರು ಹುಡುಕು ತ್ತಿರುವಾಗ ಆಳ ಧ್ಯಾನದಲ್ಲಿ ಮುಳುಗಿದರು ಮತ್ತು ಮೇಲೆ ಹೇಳಿದ ಕಾರಣವನ್ನು ಕಂಡು ಕೊಂಡರು. ತಾವು ಅವತಾರಪುರುಷರಾದುದರಿಂದಲೇ ಈ ರೀತಿಯಾಯಿತೆಂಬುದನ್ನು ಕಂಡುಕೊಂಡರು. ತಮ್ಮ ಅಪೂರ್ವ ಸಾಧನೆಗಳು ಆಧ್ಯಾತ್ಮಿಕ ರಾಜ್ಯಕ್ಕೆ ಒಂದು ಹೊಸ ಬೆಳಕನ್ನು ನೀಡುವುವು, ಇದು ಕೇವಲ ತಮ್ಮ ಒಳಿತಿಗಾಗಿಯಲ್ಲ, ಜಗತ್ತಿನ ಹಿತಕ್ಕಾಗಿ ಎಂದು ಅವರು ಕಂಡುಕೊಂಡರು.

9. ಎರಡನೆಯದು : ಎಲ್ಲ ಜೀವಿಗಳಿಗಿರುವಂತೆ ತಮಗೆ ಮುಕ್ತಿ ಇಲ್ಲ ಎಂದು ಅವರು ಕಂಡುಕೊಂಡರು. ಸಾಮಾನ್ಯ ಯುಕ್ತಿಯಿಂದ ಇದನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದು. ಅವರು ಈಶ್ವರನಿಂದ ಯಾವಾಗಲೂ ಅಭಿನ್ನರಾಗಿದ್ದರು, ಅವನ ವಿಶೇಷ ಅಂಶವಾಗಿದ್ದರು. ಅವರು-ನಿತ್ಯ-ಶುದ್ಧ-ಬುದ್ಧ-ಮುಕ್ತ ಸ್ವಭಾವದವ ರಾಗಿದ್ದರು. ಅವರಿಗೆ ನ್ಯೂನತೆ ಎಂಬುದೆ ಇಲ್ಲ. ಹಾಗಿರುವಾಗ ಅವರ ವಿಷಯದಲ್ಲಿ ಮುಕ್ತಿಯ ಪ್ರಶ್ನೆಯೇ ಬರುವುದಿಲ್ಲ. ಭಗವಂತನ ಜೀವೋದ್ಧಾರ ಕಾರ್ಯ ಎಲ್ಲಿಯ ವರೆಗೆ ಇರುವುದೊ ಅಲ್ಲಿಯವರೆಗೆ ಅವರು ಯುಗ ಯುಗದಲ್ಲಿಯೂ ಮತ್ತೆ ಮತ್ತೆ ಅವತರಿಸಿ ಬರಬೇಕಾಗುವುದು. ಆದ್ದರಿಂದ ಅವರಿಗೆ ಮುಕ್ತಿ ಹೇಗೆ ಸಾಧ್ಯ ? ಶ್ರೀರಾಮ ಕೃಷ್ಣರು ಹೇಳುವಂತೆ, ''ಸರಕಾರಿ ಅಧಿಕಾರಿಯು ಎಲ್ಲಿ ಏನು ತೊಂದರೆಯುಂಟಾದರೂ ಅಲ್ಲಿಗೆ ಓಡಿಹೋಗಬೇಕಾಗುವುದು.'' ಅಷ್ಟೇ ಅಲ್ಲದೆ ಅವರಿಗೆ ತಮ್ಮ ಮುಂದಿನ ಅವ ತಾರದ ಅರಿವೂ ಇತ್ತು. ವಾಯುವ್ಯ ದಿಕ್ಕಿನ ಕಡೆ ಕೈ ತೋರಿಸಿ ಅವರು ನಮಗೆ ಅನೇಕ ಬಾರಿ ಹೇಳಿದ್ದರು, ತಾವು ಮುಂದೆ ಆ ದಿಕ್ಕಿನಲ್ಲಿ ಬರಬೇಕಾಗುವುದು ಎಂದು. ನಮ್ಮಲ್ಲಿ ಕೆಲವರಿಗೆ ಅದರ ಬಗ್ಗೆ ಹೀಗೆ ಹೇಳಿದ್ದರು : ''ಇನ್ನೂರು ವರ್ಷಗಳನಂತರ ಆ ದಿಕ್ಕಿನಲ್ಲಿ ಬರಬೇಕು. ಆಗ ಅನೇಕರು ಮುಕ್ತಿಯನ್ನು ಪಡೆಯುತ್ತಾರೆ. ಆಗ ಮುಕ್ತಿಯನ್ನು ಪಡೆಯು ದವರು ಅದಕ್ಕಾಗಿ ಬಹಳ ಕಾಲ ಕಾಯಬೇಕಾಗುವುದು.''

10. ಮೂರನೆಯದು : ತಮ್ಮ ದೇಹತ್ಯಾಗದ ಕಾಲವನ್ನು ಅವರು ಬಹಳ ಹಿಂದೆಯೇ ಅರಿತಿದ್ದರು. ದಕ್ಷಿಣೇಶ್ವರದಲ್ಲಿ ಶ್ರೀಮಾತೆಯವರಿಗೆ ಅದರ ಬಗ್ಗೆ ಹೀಗೆ ಹೇಳಿದ್ದರು : ''ನಾನು ಯಾರು ಕೊಟ್ಟಿದ್ದನ್ನಾದರೂ ಉಣ್ಣಲು ಎಂದು ಶುರುಮಾಡು ವೆನೊ, ಕಲಕತ್ತೆಯಲ್ಲಿ ರಾತ್ರಿ ತಂಗುವೆನೊ ಮತ್ತು ನಾನು ಉಣ್ಣುವುದಕ್ಕೆ ಮೊದಲು ಬೇರೆಯವರಿಗೆ ಸ್ವಲ್ಪ ಉಣಿಸಿ ಅನಂತರ ನಾನು ಉಳಿದುದನ್ನು ತಿನ್ನುವೆನೊ, ಆಗ ತಿಳಿದುಕೊ ನನ್ನ ದೇಹಾವಸಾನ ಸಮೀಪಿಸಿದೆ ಎಂದು.'' ಈ ಮಾತು ಅಕ್ಷರಶಃ ಸತ್ಯ ವಾಯಿತು. ಇನ್ನೊಂದು ವಿಷಯವನ್ನು ಅವರು ಶ್ರೀಮಾತೆಯವರಿಗೆ ಹೇಳಿದ್ದರು : ''ಅಂತ್ಯಕಾಲದಲ್ಲಿ ನಾನು ಏನನ್ನೂ ತಿನ್ನುವುದಿಲ್ಲ, ಕೇವಲ ಪಾಯಸವನ್ನು ಉಣುತ್ತೇನೆ'' ಇದೂ ಕೂಡ ಸತ್ಯವಾಯಿತು. ಆಧ್ಯಾತ್ಮಿಕ ವಿಚಾರಕ್ಕೆ ಸಂಬಂಧವಾಗಿ ಅವರು ಕಂಡು ಕೊಂಡ ವಿಷಯಗಳನ್ನು ಈಗ ಹೇಳುತ್ತೇವೆ.

11. ಮೊದಲನೆಯದು : ಎಲ್ಲ ಮತಗಳ ಸಾಧನೆಗಳಲ್ಲಿ ಸಿದ್ಧಿಯನ್ನು ಪಡೆದ ಮೇಲೆ ಅವರಿಗೆ ದೃಢವಾಯಿತು, "ಎಲ್ಲ ಧರ್ಮಗಳೂ ಸತ್ಯ—ಎಷ್ಟು ಮತವೊ ಅಷ್ಟು ಪಥ" ಎಂದು. ಅವರು ಯೋಗ ಬುದ್ಧಿಯಿಂದಲೂ ಮತ್ತು ಸಾಮಾನ್ಯ ಬುದ್ಧಿಯಿಂದಲೂ ಇದನ್ನು ಅರ್ಥಮಾಡಿಕೊಂಡಿದ್ದರು. ಅವರು ವಿವಿಧ ಧರ್ಮಗಳ ಸಾಧನೆಗಳನ್ನು ಮಾಡಿ ಪ್ರತಿಯೊಂದರ ಯಥಾರ್ಥಫಲವನ್ನು ಪಡೆದಿದ್ದರು. ವಿವಿಧ ಧರ್ಮಗಳ ಕಚ್ಚಾಟವನ್ನು ನಿಲ್ಲಿಸುವುದಕ್ಕಾಗಿಯೇ ಅವರು ಅವತರಿಸಿದುದು ಎಂಬುದನ್ನು ಇದರಿಂದ ತಿಳಿಯಬಹುದು. ಹಿಂದಿನ ಯಾವ ಅವತಾರಪುರುಷರೂ ಈ ರೀತಿ ಸಾಧನೆಯ ಮೂಲಕ ಜಗತ್ತಿಗೆ ಈ ವಿಷಯವನ್ನು ಬೋಧಿಸಿರಲಿಲ್ಲ. ಆಧ್ಯಾತ್ಮಿಕ ಮತದ ಉದಾರತೆಯನ್ನು ಅವಲಂಬಿಸಿ ಎಲ್ಲ ಅವತಾರ ಪುರುಷರ ಸ್ಥಾನವನ್ನು ನಿರ್ಧರಿಸ ಹೊರಟರೆ ಈ ವಿಷಯದಲ್ಲಿ ಶ್ರೀರಾಮಕೃಷ್ಣರಿಗೆ ಸರ್ವೋಚ್ಚ ಸ್ಥಾನ ನೀಡಬೇಕಾಗುತ್ತದೆ

12. ಎರಡನೆಯದು : ದ್ವೈತ, ವಿಶಿಷ್ಟಾದ್ವೈತ ಮತ್ತು ಅದ್ವೈತ—ಈ ಅನುಭವಗಳು ಪ್ರತಿಯೊಬ್ಬ ಆಧ್ಯಾತ್ಮಿಕ ಸಾಧಕನಿಗೂ, ಅವನ ಉನ್ನತಿಯನ್ನು ಅನುಸರಿಸಿ, ಉಂಟಾಗುವುವು. ಆದ್ದರಿಂದ ಇವು ಪರಸ್ಪರ ವಿರೋಧಿಗಳಲ್ಲ—ಮಾನವ-ಮನಸ್ಸಿನ ವಿವಿಧ ಆಧ್ಯಾತ್ಮಿಕ ಅವಸ್ಥೆಗಳು. ಶ್ರೀರಾಮಕೃಷ್ಣರ ಈ ವಿಚಾರ ವಿವಿಧ ಶಾಸ್ತ್ರಗಳನ್ನು ಅರಿಯುವುದರಲ್ಲಿ ಎಷ್ಟೊಂದು ಸಹಾಯಕವಾಗುವುದು ಎಂಬುದು ಸ್ವಲ್ಪ ಯೋಚಿಸಿದರೆ ಅರ್ಥವಾಗುವಂತಹುದು. ವೇದೋಪನಿಷತ್ತುಗಳಲ್ಲಿ ಈ ಮೂರು ಮತಗಳು ಕಂಡುಬರುವುದರಿಂದ ಶಾಸ್ತ್ರೋಕ್ತ ಧರ್ಮಮಾರ್ಗವು ಎಷ್ಟೊಂದು ಜಟಿಲವಾಗಿದೆ, ಎಂಥ ಗೊಂದಲಮಯವಾಗಿದೆ ಎಂದು ಹೇಳಿ ಪ್ರಯೋಜನವಿಲ್ಲ. ಈ ಮತಗಳ ಸಮನ್ವಯವನ್ನು ಕಾಣಲಾಗದೆ ವ್ಯಾಖ್ಯಾನಕಾರರು ಯಾವುದೊ ಒಂದು ಮತಕ್ಕೆ ಅನುಸಾರವಾಗಿ ಶಾಸ್ತ್ರವನ್ನು ವಿವರಿಸಲು ಪ್ರಯತ್ನಿಸಿರುವರು. ಈ ರೀತಿ ಮಾಡುವಾಗ ಅವರು ಎಷ್ಟೊ ಕಡೆಗಳಲ್ಲಿ ನಿಜವಾದ ಶಾಸ್ತ್ರಾರ್ಥವನ್ನೇ ಕೆಡಿಸಿರುವರು. ಇದರಿಂದಾಗಿ ಶಾಸ್ತ್ರವಿಚಾರವನ್ನು ಕೇಳಿದರೇ ಸಾಮಾನ್ಯ ಜನರಿಗೆ ಭಯವುಂಟಾಗುವಂತಾಗಿದೆ. ಈ ಶಾಸ್ತ್ರದಲ್ಲಿ ಅವಿಶ್ವಾಸ ಮತ್ತು ಅದಕ್ಕನುಗುಣವಾಗಿಯೇ ಆಧ್ಯಾತ್ಮಿಕ ಅವನತಿ ಈ ದೇಶದಲ್ಲಿ ಉಂಟಾಗಿದೆ. ಆದ್ದರಿಂದ ಶ್ರೀರಾಮಕೃಷ್ಣರು ಅವತರಿಸಿ ಬಂದು ಈ ಮೂರು ಮತಗಳು ಆಧ್ಯಾತ್ಮಿಕ ಜೀವನದ ವಿವಿಧ ಅವಸ್ಥೆಗಳು ಎಂಬುದನ್ನು ಅನುಭವದ ಮೂಲಕ ಕಂಡುಕೊಂಡು ಜನರಿಗೆ ತಿಳಿಸಿಕೊಟ್ಟಿರುವರು. ಅವರ ಈ ಸಮನ್ವಯ ದೃಷ್ಟಿಯನ್ನು ಇಟ್ಟುಕೊಂಡು ನಾವು ಶಾಸ್ತ್ರಾಧ್ಯಯನವನ್ನು ಪ್ರಾರಂಭಿಸಬೇಕು. ಈ ವಿಷಯಕ್ಕೆ ಸಂಬಂಧಿಸಿದ ಅವರ ಕೆಲವು ಉಕ್ತಿಗಳನ್ನು ಇಲ್ಲಿ ಕೊಟ್ಟಿರುವೆವು :

"ಅದ್ವೈತಭಾವವೇ ಸಾಧನೆಯ ಕೊನೆಯ ಮಾತು. ಅದು ಮನೋವಾಕ್ಕಿಗೆ ಅತೀತವಾದ ಅನುಭವ.

"ಮನಸ್ಸು ಬುದ್ಧಿಗಳ ಸಹಾಯದಿಂದ ವಿಶಿಷ್ಟಾದ್ವೈತದವರೆಗೆ ಹೇಳಬಹುದು ಮತ್ತು ಅರಿಯಬಹುದು; ಆ ಅವಸ್ಥೆಯಲ್ಲಿ ನಿತ್ಯವು ಹೇಗೆ ಸತ್ಯವೊ ಲೀಲೆಯೂ

ಹಾಗೆಯೇ ಸತ್ಯ—ಚಿನ್ಮಯ ನಾಮ, ಚಿನ್ಮಯ ಧಾಮ, ಚಿನ್ಮಯ ಶ್ಯಾಮ!

"ವಿಷಯ ಬುದ್ಧಿ ಪ್ರಬಲವಾಗಿರುವ ಸಾಧಾರಣ ಮಾನವರಿಗೆ ದ್ವೈತಮತವೇ ಪ್ರಶಸ್ತವಾದುದು. ನಾರದಪಂಚರಾತ್ರದಲ್ಲಿ ಹೇಳಿರುವ ಉಚ್ಚ ನಾಮಸಂಕೀರ್ತನಾದಿ ಸಾಧನೆಗಳೇ ಅವರಿಗೆ ಯೋಗ್ಯವಾದುವುಗಳು."

13. ಮೂರನೆಯದು : ಕರ್ಮದ ವಿಷಯದಲ್ಲಿಯೂ ಶ್ರೀರಾಮಕೃಷ್ಣರು ಈ ರೀತಿ ವಿವಿಧ ಹಂತಗಳನ್ನು ಹೇಳುತ್ತಿದ್ದರು : "ಸತ್ತ್ವಗುಣದ ವ್ಯಕ್ತಿಯಲ್ಲಿ ಕರ್ಮವು ಸ್ವಾಭಾವಿಕವಾಗಿಯೇ ಕಳಚಿ ಬೀಳುವುದು. ಅವನು ಪ್ರಯತ್ನಿಸಿದರೂ ಅವನಿಗೆ ಮತ್ತೆ ಕರ್ಮ ಮಾಡಲಾಗುವುದಿಲ್ಲ, ಅಥವಾ ಭಗವಂತನು ಆ ರೀತಿ ಮಾಡಲು ಬಿಡುವುದಿಲ್ಲ. ಇದು ಹೇಗೆಂದರೆ, ಮನೆಯಲ್ಲಿ ಸೊಸೆಯು ಗರ್ಭಿಣಿಯಾಗಿ ದಿನಗಳು ಕಳೆದಂತೆಲ್ಲ ಅವಳ ಕೆಲಸವು ಕಡಿಮೆಯಾಗುತ್ತ ಹೋಗುವುದು. ಮಗು ಹುಟ್ಟಿದಮೇಲೆ ಎಲ್ಲ ಕರ್ಮವನ್ನು ಬಿಟ್ಟು ಆ ಮಗುವನ್ನು ಆಡಿಸುವುದು ಮುದ್ದಿಸುವುದರಲ್ಲಿಯೇ ಕಾಲ ಕಳೆಯುವಳು. ಆದರೆ ಉಳಿದವರೆಲ್ಲರೂ ಭಗವಂತನನ್ನು ಆಶ್ರಯಿಸಿ ಸಂಸಾರದ ಕೆಲಸಗಳನ್ನೆಲ್ಲಾ ಮಾಡಬೇಕಾಗುವುದು. ಅವರು ಶ್ರೀಮಂತನ ಮನೆಯ ಆಳುಗಳಂತೆ ತಮ್ಮ ಕರ್ತವ್ಯ ಗಳನ್ನು ನೆರವೇರಿಸಬೇಕು. ಇದೇ ಕರ್ಮಯೋಗ. ಎಷ್ಟು ಸಾಧ್ಯವೊ ಅಷ್ಟು ಭಗವಂತನ ನಾಮವನ್ನು ಜಪಿಸುವುದು, ಧ್ಯಾನಮಾಡುವುದು, ಮತ್ತು ಮೇಲೆ ಹೇಳಿದಂತೆ ಎಲ್ಲ ಕರ್ಮಗಳನ್ನೂ ನೆರವೇರಿಸುವುದು—ಇದೇ ಅವರ ಮಾರ್ಗ."

14. ನಾಲ್ಕನೆಯದು : ಶ್ರೀಜಗನ್ಮಾತೆಯ ಇಚ್ಛೆಯಂತೆ, ತಮ್ಮ ಜೀವನದಲ್ಲಿ ಪ್ರಕಾಶಿತವಾದ ಉದಾರ ಮನೋಭಾವವನ್ನು ಅವಲಂಬಿಸಿದ ಒಂದು ಹೊಸ ಸಂಪ್ರದಾಯವನ್ನು ತಾವು ಪ್ರವರ್ತಿಸಬೇಕಾಗಿದೆ ಎಂಬುದನ್ನು ಅವರು ಅರಿತರು. ಈ ವಿಷಯದಲ್ಲಿ ಮೊದಲು ಅವರಿಗೆ ಅರಿವು ಉಂಟಾದದ್ದು ಮಥುರನ ಜೀವಿತಕಾಲದಲ್ಲಿ. ಆಗ ಅವರು ಅವನಿಗೆ ಹೇಳಿದ್ದರು : ಧರ್ಮಲಾಭಕ್ಕಾಗಿ ಅನೇಕ ಭಕ್ತರು ತಮ್ಮೆಡೆಗೆ ಬರುತ್ತಾರೆಂದು ಶ್ರೀಜಗನ್ಮಾತೆ ತೋರಿಸಿರುವಳು ಎಂದು. ಮುಂದೆ ಅದು ಸತ್ಯವಾಯಿತೆಂಬುದನ್ನು ಹೇಳಬೇಕಾಗಿಯೇ ಇಲ್ಲ. ಕಾಶೀಪುರದಲ್ಲಿದ್ದಾಗ ಅವರು ತಮ್ಮ ಛಾಯಾಚಿತ್ರವನ್ನು ತೋರಿಸಿ ನಮ್ಮೆಲ್ಲರಿಗೆ ಹೇಳಿದ್ದರು, "ಇದು ಅತಿ ಉಚ್ಚ ಯೋಗಾವಸ್ಥೆಯ ಸ್ಥಿತಿ (ಶ್ರೀರಾಮಕೃಷ್ಣರು ಕುಳಿತು ಸಮಾಧಿಸ್ಥರಾಗಿರುವ ಚಿತ್ರ). ಇದು ಮುಂದೆ ಮನೆ ಮನೆಯಲ್ಲಿ ಪೂಜಿಸಲ್ಪಡುತ್ತದೆ."

15. ಐದನೆಯದು : ಯೋಗದೃಷ್ಟಿಯ ಸಹಾಯದಿಂದ ಅವರು ಸ್ಪಷ್ಟವಾಗಿ ಅರಿತಿದ್ದರು, "ಯಾರದು ಕೊನೆಯ ಜನ್ಮವೊ ಅವರು ತಮ್ಮೆಡೆಗೆ ಬರುತ್ತಾರೆ" ಎಂದು. ಈ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ನಾವು ಬೇರೆಕಡೆ ನೀಡಿರುವೆವು. ಆದ್ದರಿಂದ ಇಲ್ಲಿ ಇದನ್ನು ಮತ್ತೆ ಹೇಳುವ ಅವಶ್ಯಕತೆಯಿಲ್ಲ.*

---

* ಗುರುಭಾವ, ಉತ್ತರಾರ್ಧ, ೪ನೆ ಅಧ್ಯಾಯ.

16 ಶ್ರೀರಾಮಕೃಷ್ಣರ ಸಾಧನೆಯ ಸಮಯದಲ್ಲಿ ಮೂವರು ಪ್ರಮುಖ ಶಾಸ್ತ್ರಜ್ಞ ಸಾಧಕರು ಬಂದಿದ್ದರು. ಅವರು ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಅವಸ್ಥೆಯನ್ನು ಕಣ್ಣಿನಿಂದ ನೋಡಿ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಪಂಡಿತ ಪದ್ಮಲೋಚನನು ಶ್ರೀರಾಮಕೃಷ್ಣರ ತಂತ್ರಸಾಧನೆಯ ನಂತರ ಬಂದನು. ವೈಷ್ಣವಚಾರಣನು ಅವರು ವೈಷ್ಣವ ಸಾಧನೆ ಮುಗಿಸಿದನಂತರ ಬಂದನು. ಗೌರೀ ಪಂಡಿತನು ಅವರ ಸಾಧನೆಯ ಕೊನೆಯ ಭಾಗದಲ್ಲಿ ಬಂದನು. ಪದ್ಮಲೋಚನನು ಶ್ರೀರಾಮಕೃಷ್ಣರನ್ನು ನೋಡಿ ಹೇಳಿದ : "ನಿಮ್ಮೊಳಗೆ ನಾನು ಭಗವಂತನ ವಿಶೇಷ ಆವಿರ್ಭಾವವನ್ನು, ಅವನ ಶಕ್ತಿಯನ್ನು ನೋಡುತ್ತಿದ್ದೇನೆ." ವೈಷ್ಣವಚರಣನು ಶ್ರೀರಾಮಕೃಷ್ಣರ ಅವತಾರತ್ವವನ್ನು ಕುರಿತು ಸಂಸ್ಕೃತದಲ್ಲಿ ಒಂದು ಸ್ತೋತ್ರವನ್ನು ರಚಿಸಿ ಅದನ್ನು ಅವರ ಮುಂದೆ ಪಠಿಸಿದನು. ಪಂಡಿತ ಗೌರೀಕಾಂತನು ಶ್ರೀರಾಮಕೃಷ್ಣರನ್ನು ನೋಡಿ, "ಶಾಸ್ತ್ರದಲ್ಲಿ ಯಾವ ಆಧ್ಯಾತ್ಮಿಕ ಅವಸ್ಥೆಗಳನ್ನು ನಾನು ಓದಿರುವೆನೊ ಅವೆಲ್ಲವನ್ನು ನಿಮ್ಮಲ್ಲಿ ನಾನು ಕಾಣುತ್ತಿದ್ದೇನೆ. ಅಷ್ಟೇ ಅಲ್ಲದೆ ಶಾಸ್ತ್ರದಲ್ಲಿ ಹೇಳಿರದ ಉಚ್ಚ ಅವಸ್ಥೆಗಳೂ ನಿಮ್ಮಲ್ಲಿ ಕಂಡುಬರುವುವು, ನಿಮ್ಮ ಸ್ಥಿತಿಯು ಎಲ್ಲ ಶಾಸ್ತ್ರಗಳನ್ನು ಮೀರಿಹೋಗಿದೆ. ನೀವು ಮನುಷ್ಯರಲ್ಲ. ಎಲ್ಲ ಅವತಾರಗಳೂ ಯಾವುದರಿಂದ ಉತ್ಪತ್ತಿಯಾಗುವುವೊ ಅದೇ ವಸ್ತು ನಿಮ್ಮೊಳಗೆ ಇದೆ." ಶ್ರೀರಾಮಕೃಷ್ಣರ ಅದ್ಭುತ ಜೀವನವನ್ನೂ ಮತ್ತು ಅವರ ಅನುಭವಗಳನ್ನೂ ನೋಡಿದಾಗ ಮೇಲಿನ ಪಂಡಿತರುಗಳ ಮಾತು ಕೇವಲ ಪ್ರಶಂಸೋಕ್ತಿಯಲ್ಲ ಎಂಬುದು ತಿಳಿದುಬರುತ್ತದೆ. ಈ ಪಂಡಿತರುಗಳು ನಿರ್ದಿಷ್ಟವಾಗಿ ಯಾವ ಕಾಲದಲ್ಲಿ ಬಂದಿದ್ದರು ಎಂಬುದನ್ನು ನೋಡೋಣ.

17. ಶ್ರೀಮಾತೆಯವರು ಪ್ರಥಮ ಬಾರಿಗೆ ದಕ್ಷಿಣೇಶ್ವರಕ್ಕೆ ಬಂದಾಗ ಅವರು ಗೌರೀಪಂಡಿತನನ್ನು ನೋಡಿದ್ದರು. ಅವನು ಬಂದಾಗ ಮಥುರನು ಜೀವಿಸಿದ್ದನು ಎಂಬುದನ್ನು ನಾವು ಶ್ರೀರಾಮಕೃಷ್ಣರಿಂದ ಕೇಳಿದ್ದೇವೆ. ಆದ್ದರಿಂದ ಗೌರೀಪಂಡಿತನು ೧೮೭೦ರ ಅವಧಿಯಲ್ಲಿ ದಕ್ಷಿಣೇಶ್ವರಕ್ಕೆ ಬಂದು ೧೮೭೩ರ ವರೆಗೂ ಶ್ರೀರಾಮಕೃಷ್ಣರೊಡನೆ ಇದ್ದಿರಬಹುದು ಎಂದೆನಿಸುತ್ತದೆ. ಯಾರು ಶಾಸ್ತ್ರವನ್ನು ಓದಿ ಅದನ್ನು ಅನುಸರಿಸಲು ಪ್ರಯತ್ನಿಸುತ್ತಾರೊ ಅಂಥವರನ್ನು ನೋಡಲು ಶ್ರೀರಾಮಕೃಷ್ಣರು ತುಂಬ ಉತ್ಸುಕರಾಗಿರುತ್ತಿದ್ದರು. ಗೌರೀಕಾಂತ ತರ್ಕಭೂಷಣನು ಅಂಥವರಲ್ಲಿ ಒಬ್ಬನು. ಆದ್ದರಿಂದ ಶ್ರೀರಾಮಕೃಷ್ಣರು ಮಥುರನಿಗೆ ಹೇಳಿ ಅವನನ್ನು ದಕ್ಷಿಣೇಶ್ವರಕ್ಕೆ ಕರಸಿಕೊಂಡಿದ್ದರು. ಅವನ ಊರು ಕಾಮಾರಪುಕುರದ ಸಮೀಪವಿರುವ ಇಂದೇಶ್ ಎಂಬ ಹಳ್ಳಿ. ಹೃದಯನ ಸಹೋದರನಾದ ರಾಮರತನನು ಮಥುರನ ಆಮಂತ್ರಣ ಪತ್ರವನ್ನು ತೆಗೆದುಕೊಂಡು ಹೋಗಿ ಅವನನ್ನು ದಕ್ಷಿಣೇಶ್ವರಕ್ಕೆ ಕರೆದುಕೊಂಡು ಬಂದಿದ್ದನು. ಮುಂದೆ ಏನಾಯಿತೆಂಬುದಕ್ಕೆ ಗುರುಭಾವ, ಪೂರ್ವಾರ್ಧ–೧ನೆಯ ಅಧ್ಯಾಯವನ್ನು ನೋಡಿ.

"ರಾಣಿ ರಾಸಮಣಿಯ ಜೀವನ ವೃತ್ತಾಂತ" ಎಂಬ ಪುಸ್ತಕದ ಪ್ರಕಾರ, ಮಥುರನು 'ಅನ್ನಮೇರು' ಉತ್ಸವವನ್ನು ಆಚರಿಸಿದುದು ೧೮೬೪ರಲ್ಲಿ ಎಂದು ನಿರ್ಧರಿಸ

ಬಹುದು. ಪಂಡಿತ ಪದ್ಮಲೋಚನನನ್ನು ಉತ್ಸವಕ್ಕೆ ಆಹ್ವಾನಿಸಿ ಅವನಿಗೆ ದಕ್ಷಿಣೆ ನೀಡಬೇಕೆಂದು ಮಥುರನಿಗೆ ತುಂಬ ಆಸೆಯಿತ್ತು, ಆದ್ದರಿಂದ ೧೮೬೪ರಲ್ಲಿ ಪದ್ಮಲೋಚನನು ಆ ಸಂದರ್ಭದಲ್ಲಿ ದಕ್ಷಿಣೇಶ್ವರಕ್ಕೆ ಬಂದು ಶ್ರೀರಾಮಕೃಷ್ಣರನ್ನು ಸಂಧಿಸಿದ್ದನೆಂದು ಹೇಳಬಹುದು.

ಉತ್ಸವಾನಂದ ಗೋಸ್ವಾಮಿಯ ಮಗನಾದ ವೈಷ್ಣವಚರಣನು ದಕ್ಷಿಣೇಶ್ವರಕ್ಕೆ ಬಂದ ಸಮಯವನ್ನು ಸುಲಭವಾಗಿ ನಿರ್ಧರಿಸಬಹುದು. ಭೈರವಿ ಬ್ರಾಹ್ಮಣಿ ಮತ್ತು ಗೌರೀಪಂಡಿತ—ಇವರೊಡನೆ ವೈಷ್ಣವಚರಣನು ಶ್ರೀರಾಮಕೃಷ್ಣರ ಅಲೌಕಿಕತ್ವದ ಬಗ್ಗೆ ಚರ್ಚಿಸುತ್ತಿದ್ದ ವಿಚಾರವನ್ನು ನಾವು ಅವರ ಬಾಯಿಂದಲೇ ಕೇಳಿರುವೆವು. ಭೈರವಿಯಂತೆ ವೈಷ್ಣವಚರಣನೂ ಶ್ರೀರಾಮಕೃಷ್ಣರಲ್ಲಿ ಮಹಾಭಾವದ ಲಕ್ಷಣಗಳನ್ನು ಕಂಡಿದ್ದನು. ಶ್ರೀರಾಮಕೃಷ್ಣರು ಗೌರಾಂಗನ ಪುನರಾವತಾರವೆಂದು ಅವನು ನಿರ್ಧರಿಸಿದ್ದನು. ಆದ್ದರಿಂದ ಅವನು ೧೮೬೫ರಲ್ಲಿ ಶ್ರೀರಾಮಕೃಷ್ಣರ ಮಧುರ ಭಾವಸಾಧನೆಯ ಸಂದರ್ಭದಲ್ಲಿ ದಕ್ಷಿಣೇಶ್ವರಕ್ಕೆ ಬಂದು ೧೮೭೫ರವರೆಗೂ ಆಗಾಗ ಬಂದುಹೋಗುತ್ತಿದ್ದನೆಂದು ತೋರುತ್ತದೆ.

18. ತಮ್ಮ ಬಗ್ಗೆ ಮತ್ತು ತಮ್ಮ ಜೀವನೋದ್ದೇಶದ ಬಗ್ಗೆ ಯಥಾರ್ಥ ಅರಿವನ್ನು ಪಡೆದ ಮೇಲೆ ಶ್ರೀರಾಮಕೃಷ್ಣರ ಮನಸ್ಸಿನಲ್ಲಿ ಒಂದು ಬಯಕೆ ಉಂಟಾಯಿತು. ಹಿಂದೆ ಸೂಚಿಸಲ್ಪಟ್ಟ ಭಕ್ತರನ್ನು ಸಂಧಿಸಿ ಅವರಲ್ಲಿ ಆಧ್ಯಾತ್ಮಿಕ ಜಾಗ್ರತಿಯನ್ನು ಉಂಟುಮಾಡುವ ಪ್ರಬಲ ವ್ಯಾಕುಲತೆ ಅವರಲ್ಲಿ ಉದ್ಭವಿಸಿತು. ಅವರೇ ಹೇಳುತ್ತಿದರು : "ಆ ವ್ಯಾಕುಲತೆಗೆ ಮಿತಿಯೇ ಇರಲಿಲ್ಲ. ಹಗಲು ಹೊತ್ತು ಆ ವ್ಯಾಕುಲತೆಯನ್ನು ಹೇಗೊ ಹಿಡಿದಿರಿಸಿಕೊಳ್ಳುತ್ತಿದ್ದೆ. ಸಾಂಸಾರಿಕ ವ್ಯಕ್ತಿಗಳ ಸಾಂಸಾರಿಕ ವಿಷಯವನ್ನು ಕೇಳಿದಾಗಲೆಲ್ಲ ಅದು ವಿಷಪಾನ ಮಾಡಿದಂತಾಗುತ್ತಿತ್ತು. ಆಗ ಆ ಭಕ್ತರು ಯಾವಾಗ ಬರುತ್ತಾರೆ, ಯಾವಾಗ ಅವರೊಡನೆ ಭಗವದ್ವಿಚಾರ ಮಾತನಾಡಿ ಹೃದಯವನ್ನು ತಣಿಸಿಕೊಂಡೇನು, ಯಾವಾಗ ನನ್ನ ಅನುಭವಗಳನ್ನೆಲ್ಲ ಅವರಿಗೆ ಮನಬಿಚ್ಚಿ ಹೇಳಿ ನನ್ನ ಆಂತರಿಕ ಭಾರವನ್ನು ಇಳಿಸಿಕೊಂಡೇನು ಎಂದೆನಿಸುತ್ತಿತ್ತು. ಯಾವಾಗಲೂ ಅವರ ಬಗ್ಗೆಯೇ ಚಿಂತೆ. ಯಾರಿಗೆ ಏನು ಹೇಳುವುದು, ಯಾರಿಗೆ ಏನು ನೀಡುವುದು—ಇವೇ ವಿಚಾರಗಳನ್ನು ಚಿಂತಿಸುವುದರಲ್ಲಿಯೇ ಕಾಲ ತಳ್ಳುತ್ತಿದ್ದೆ. ಆದರೆ ಹಗಲು ಕಳೆದು ರಾತ್ರಿ ಪ್ರಾರಂಭವಾಗಲು ಆ ವ್ಯಾಕುಲತೆಯ ಕಟ್ಟೆ ಒಡೆಯುತ್ತಿತ್ತು, ಆಗ ಅದನ್ನು ತಡೆಹಿಡಿಯಲಾಗುತ್ತಿರಲಿಲ್ಲ. ಇನ್ನೊಂದು ದಿನ ಕಳೆದುಹೋಯಿತು, ಅವರಾರೂ ಬರುತ್ತಲೇ ಇಲ್ಲವಲ್ಲ ಎಂದು ಮರುಗುತ್ತಿದ್ದೆ. ದೇವಾಲಯದ ಆರತಿಯ ಘಂಟೆ ಕೇಳಿಸುತ್ತಿರುವಾಗ ಮಥುರಬಾಬು ಮೊದಲಾದವರು ಬಂದಿಳಿದುಕೊಳ್ಳುವ ಕುಟೀರದ ಮಹಡಿಯ ಮೇಲೆ ಹೋಗಿ ಹೃದಯದ ವೇದನೆಯನ್ನು ತಾಳಲಾರದೆ ರೋದಿಸುತ್ತ 'ನೀವುಗಳೆಲ್ಲ ಎಲ್ಲಿದ್ದೀರಿ, ಬನ್ನಿ, ಬೇಗ ಬನ್ನಿ. ನಿಮ್ಮನ್ನು ನೋಡದೆ ನಾನಿರಲಾರೆ' ಎಂದು ಗಟ್ಟಿಯಾಗಿ ಕರೆಯುತ್ತಿದ್ದೆ, ತಾಯಿಯೂ ಕೂಡ ತನ್ನ ಮಗವನ್ನು ನೋಡಲು ಅಷ್ಟೊಂದು ವ್ಯಾಕುಲ

ಪಡುತ್ತಾಳೊ ಇಲ್ಲವೊ-ಸಂದೇಹ! ಸ್ನೇಹಿತನು ತನ್ನ ಸ್ನೇಹಿತನನ್ನು ನೋಡಲು, ಪ್ರಣಯಿಗಳು ಪರಸ್ಪರ ಮಿಲನವಾಗಲು ಇಷ್ಟೊಂದು ಹಾತೊರೆಯುತ್ತಿದ್ದುದನ್ನು ನಾನು ಕೇಳಿರಲಿಲ್ಲ. ಅಷ್ಟೊಂದು ವ್ಯಾಕುಲತೆಯಿಂದ ಮನಸ್ಸು ಅಸ್ಥಿರವಾಗಿ ಹೋಗಿತ್ತು. ಈ ರೀತಿ ಆಗತೊಡಗಿ ಕೆಲವು ದಿನಗಳ ನಂತರ ಭಕ್ತರು ಒಬ್ಬೊಬ್ಬರಾಗಿ ಬರತೊಡಗಿದರು.''

ಈ ರೀತಿ ವ್ಯಾಕುಲತೆಯ ಆಹ್ವಾನದಿಂದ ಭಕ್ತರು ದಕ್ಷಿಣೇಶ್ವರಕ್ಕೆ ಬರತೊಡಗುವುದಕ್ಕೆ ಮುಂಚೆ ಕೆಲವು ವಿಶೇಷ ಘಟನೆಗಳು ಸಂಭವಿಸಿದವು. ಅವು ಪ್ರಸ್ತುತ ಗ್ರಂಥ ವಿಷಯಕ್ಕೆ ನೇರವಾಗಿ ಸಂಬಂಧಿಸದೇ ಇರುವುದರಿಂದ ಅವುಗಳನ್ನು ಪರಿಶಿಷ್ಟದಲ್ಲಿ ಸೇರಿಸಿದ್ದೇವೆ.

ಪರಿಶಿಷ್ಟ

ಕೆಲವು ಘಟನೆಗಳು

1. ರಾಮೇಶ್ವರನ ಮೃತ್ಯು 2. ರಾಮೇಶ್ವರನ ಉದಾರ ಸ್ವಭಾವ 3. ಅವನ ಮೃತ್ಯುವಿನ ಬಗ್ಗೆ ಶ್ರೀರಾಮಕೃಷ್ಣರಿಗೆ ತಿಳಿದಿತ್ತು 4. ಅವನ ಸಾವಿನಿಂದ ತಾಯಿ ಪ್ರಾಣಬಿಡಬಹುದೆಂಬ ಭಯದಿಂದ ಶ್ರೀರಾಮಕೃಷ್ಣರ ಪ್ರಾರ್ಥನೆ 5. ಮೃತ್ಯು ಸಂನಿಹಿತವಾದಾಗ ರಾಮೇಶ್ವರನ ಆಚರಣೆ 6, ಮರಣಾನಂತರ ಅವನು ಸ್ನೇಹಿತ ಗೋಪಾಲನೊಡನೆ ಮಾತನಾಡಿದುದು 7. ರಾಮಲಾಲನು ಬಂದು ಅರ್ಚಕನಾದುದು 8. ಶಂಭುಚರಣ ಮಲ್ಲಿಕ 9 ಶ್ರೀಮಾತೆಯವರಿಗಾಗಿ ಅವನು ಮನೆ ಕಟ್ಟಿಸಿದುದು 10. ಆ ಮನೆಯಲ್ಲಿದ್ದಾಗ ಶ್ರೀಮಾತೆಯವರಿಗೆ ತೀವ್ರ ಕಾಯಿಲೆಯುಂಟಾಯಿತು 11. ಸಿಂಹವಾಹಿನಿಯ ಮುಂದೆ ಪ್ರಾಯೋಪವೇಶನ 12. ಮರಣಾವಸ್ಥೆಯಲ್ಲಿ ಶಂಭುವಿನ ನಿರ್ಭಯ ವರ್ತನೆ 13. ಚಂದ್ರಮಣಿ ದೇವಿಯ ಕೊನೆಯ ದಿನಗಳು ಮತ್ತು ಮೃತ್ಯು 14. ತಾಯಿಗಾಗಿ ಶ್ರೀರಾಮಕೃಷ್ಣರು ತರ್ಪಣ ನೀಡುವ ಪ್ರಯತ್ನ—ಗಲಿತಕರ್ಮಾವಸ್ಥೆ 15. ಶ್ರೀರಾಮಕೃಷ್ಣರು ಕೇಶವ ಸೇನನನ್ನು ನೋಡಲು ಹೋದರು 16. ಬೇಲಘೊರಿಯಾ ಉದ್ಯಾನದಲ್ಲಿ ಕೇಶವ 17. ಕೇಶವ ನೊಡನೆ ಪ್ರಥಮ ಸಂಭಾಷಣೆ 18, ಅವರಿಬ್ಬರ ನಿಕಟ ಸಂಬಂಧ 19. ಕೇಶವನು ದಕ್ಷಿಣೇಶ್ವರದಲ್ಲಿ 20. ಕೇಶವನಿಗೆ ಶ್ರೀರಾಮಕೃಷ್ಣರ ಉಪದೇಶ 21. ಕೂಚ ಬಿಹಾರಿ ವಿವಾಹ ಮತ್ತು ಅದರ ಪರಿಣಾಮ 22. ಶ್ರೀರಾಮಕೃಷ್ಣರ ಉಪದೇಶ ಗಳನ್ನು ಕೇಶವನಿಗೆ ಸಂಪೂರ್ಣ ಒಪ್ಪಿಕೊಳ್ಳಲಾಗಲಿಲ್ಲ 23. ನವವಿಧಾನ ಮತ್ತು ಶ್ರೀರಾಮಕೃಷ್ಣರ ಮತ 24. ಭಾರತದ ರಾಷ್ಟ್ರೀಯ ಸಮಸ್ಯೆಗೆ ಶ್ರೀರಾಮಕೃಷ್ಣರ ಪರಿಹಾರ 25. ಕೇಶವನ ದೇಹತ್ಯಾಗ 26. ಸಂಕೀರ್ತನೆಯಲ್ಲಿ ಗೌರಾಂಗನ ದರ್ಶನ 27. ಶ್ರೀರಾಮಕೃಷ್ಣರು ಫುಲ್‌ಇ-ಶ್ಯಾಮಬಜಾರಿಗೆ ಹೋದುದು ಮತ್ತು ಅಲ್ಲಿ ಅಪೂರ್ವ ಕೀರ್ತನಾನಂದ

1. ಷೋಡಶೀ ಪೂಜೆಯ ನಂತರ ಶ್ರೀಮಾತೆ ಶಾರದಾದೇವಿಯವರು ೧೮೭೩, ಅಕ್ಟೋಬರ್ ತಿಂಗಳಲ್ಲಿ ಕಾಮಾರಪುಕುರಕ್ಕೆ ಹೋದರು. ಇದಾದ ಸ್ವಲ್ಪಕಾಲದಲ್ಲಿಯೇ ಶ್ರೀರಾಮಕೃಷ್ಣರ ಅಣ್ಣ ರಾಮೇಶ್ವರನು ವಿಷಮಶೀತ ಜ್ವರದಿದ ಮೃತನಾದನು. ಶ್ರೀರಾಮಕೃಷ್ಣರ ಕುಟುಂಬಕ್ಕೆ ಸೇರಿದ ಪ್ರತಿಯೊಬ್ಬರಲ್ಲಿಯೂ ಆಧ್ಯಾತ್ಮಿಕತೆಯನ್ನು ಒಂದಲ್ಲ ಒಂದು ರೀತಿಯಲ್ಲಿ ಕಾಣಬಹುದಿತ್ತು. ರಾಮೇಶ್ವರನ ಆಧ್ಯಾತ್ಮಿಕತೆಯ ಬಗ್ಗೆ ನಾವು ಕೇಳಿರುವುದನ್ನು ಇಲ್ಲಿ ಪ್ರಸ್ತುತಪಡಿಸುತ್ತೇವೆ.

2. ರಾಮೇಶ್ವರನು ಉದಾರ ಸ್ವಭಾವದವನು. ಸನ್ಯಾಸಿಗಳು ಭಿಕ್ಷುಕರು ಮನೆ ಬಾಗಿಲಿಗೆ ಬಂದು ಏನು ಕೇಳಿದರೂ ಅದು ಮನೆಯಲ್ಲಿದ್ದರೆ ಕೂಡಲೇ ಕೊಟ್ಟು ಬಿಡುತ್ತಿದ್ದ. ಭಿಕ್ಷುಕರು ಬಂದು ಬೇರೆ ಬೇರೆ ವಸ್ತುಗಳನ್ನು ಕೇಳುತ್ತಿದ್ದರು. ಕೆಲವರಿಗೆ ಅಡಿಗೆ ಮಾಡಲು ಪಾತ್ರೆ ಬೇಕು, ಮತ್ತೆ ಕೆಲವರಿಗೆ ನೀರಿನ ಪಾತ್ರೆ ಬೇಕು, ಕೆಲವರಿಗೆ ಕಂಬಳಿ ಬೇಕು ಇತ್ಯಾದಿ — ರಾಮೇಶ್ವರನು ಮನೆಯೊಳಗಿನಿಂದ ಬೇಕಾದುದನ್ನು ಕೂಡಲೇ ತಂದು ಕೊಟ್ಟುಬಿಡುತ್ತಿದ್ದ. ಮನೆಯಲ್ಲಿ ಇತರರು ಆಕ್ಷೇಪಿಸಿದರೆ ಅವನು ಹೇಳುತ್ತಿದ್ದ: 'ತೆಗೆದುಕೊಂಡು ಹೋಗಲಿ ಬಿಡು. ಏನೂ ಹೇಳಬೇಡ. ಹೀಗೇ ಎಷ್ಟೊ ವಸ್ತುಗಳು ಬರುತ್ತವೆ, ಏಕೆ ಯೋಚನೆ ಮಾಡುತ್ತೀಯೆ?' ರಾಮೇಶ್ವರನಿಗೆ ಜ್ಯೋತಿಶ್ಶಾಸ್ತ್ರ ಸ್ವಲ್ಪ ತಿಳಿದಿತ್ತು.

3. ರಾಮೇಶ್ವರನು ಕೊನೆಯಬಾರಿ ದಕ್ಷಿಣೇಶ್ವರದಿಂದ ಮನೆಗೆ ಹಿಂದಿರುಗುವಾಗ ಅವನು ಮತ್ತೆ ದಕ್ಷಿಣೇಶ್ವರಕ್ಕೆ ಬರುವುದಿಲ್ಲವೆಂದು ಶ್ರೀರಾಮಕೃಷ್ಣರಿಗೆ ತಿಳಿದಿತ್ತು. "ನೀನು ಮನೆಗೆ ಹೋಗುತ್ತಿರುವೆ. ಹೋಗು, ಆದರೆ ಪತ್ನಿಯೊಡನೆ ಮಲಗಬೇಡ. ಹಾಗೆ ಮಾಡಿದರೆ ನಿನ್ನ ದೇಹ ಉಳಿಯುವುದು ಸಂಶಯ"—ಎಂದು ಶ್ರೀರಾಮಕೃಷ್ಣರು ಹೇಳಿದ್ದರು.

4. ರಾಮೇಶ್ವರನು ಮನೆ ತಲುಪಿದ ಕೂಡಲೇ ಸುದ್ದಿ ಬಂತು, ಅವನಿಗೆ ಕಾಯಿಲೆ ಎಂದು. ಶ್ರೀರಾಮಕೃಷ್ಣರು ಇದನ್ನು ಕೇಳಿದಕೂಡಲೆ ಹೃದಯನಿಗೆ ಹೇಳಿದರು: "ಅವನು ನನ್ನ ನಿಷೇಧವನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಅವನು ಬದುಕುವುದು ಸಂದೇಹ." ಇದಾದ ಐದಾರು ದಿನಗಳಲ್ಲಿಯೇ ರಾಮೇಶ್ವರನು ಮೃತನಾದನೆಂದು ಸುದ್ದಿ ಬಂತು. ಇದನ್ನು ಕೇಳಿ ತಾಯಿ ಚಂದ್ರಮಣಿ ದೇವಿಗೆ ತುಂಬ ಆಘಾತವಾಗುವುದೆಂದು ಶ್ರೀರಾಮಕೃಷ್ಣರು ಭಾವಿಸಿದರು. ಮಂದಿರಕ್ಕೆ ಹೋಗಿ ಅವಳನ್ನು ಈ ಶೋಕದಿಂದ ಪಾರುಮಾಡೆಂದು ಜಗನ್ಮಾತೆಯನ್ನು ಕಳಕಳಿಯಿಂದ ಪ್ರಾರ್ಥಿಸಿದರು. ಅನಂತರ ನಹಬತಿಗೆ ಹೋಗಿ ಈ ದುಃಖ ವಾರ್ತೆಯನ್ನು ಕಣ್ಣೀರು ಸುರಿಸುತ್ತ ತಾಯಿಗೆ ಅರುಹಿದರು. ಶ್ರೀರಾಮಕೃಷ್ಣರು ಹೇಳುತ್ತಿದ್ದರು: "ನಾನು ಭಾವಿಸಿದ್ದೆ, ಸುದ್ದಿಯನ್ನು ಕೇಳಿ ಅವರು ಮೂರ್ಛೆಹೋಗಬಹುದು ಎಂದು, ಪ್ರಾಣಬಿಟ್ಟುಬಿಡುತ್ತಾರೊ ಎಂದು ಹೆದರಿದ್ದೆ. ಆದರೆ ಆದದ್ದೆ ಬೇರೆ. ತಾಯಿಯವರು ಸುದ್ದಿಯನ್ನು ಕೇಳಿ ಸ್ವಲ್ಪ ದುಃಖವನ್ನು ಪ್ರಕಾಶಿಸಿ ಹೇಳಿದರು, 'ಸಂಸಾರ ಅನಿತ್ಯ, ಎಲ್ಲರೂ ಒಮ್ಮೆ ಸಾಯಲೇಬೇಕು. ಆದ್ದರಿಂದ ಶೋಕಿಸಿ ಏನು ಪ್ರಯೋಜನ?' ಹೀಗೆ ಹೇಳುತ್ತ ನನಗೇ ಸಮಾಧಾನ ನೀಡತೊಡಗಿದರು. ತಂಬೂರಿಯನ್ನು ಅತ್ಯಂತ ಮೇಲಿನ ಶ್ರುತಿಗೆ ಹೊಂದಿಸಿಟ್ಟಂತೆ ಜಗನ್ಮಾತೆಯು ತಾಯಿಯವರ ಮನಸ್ಸನ್ನು ಉನ್ನತಸ್ತರಕ್ಕೆ ಏರಿಸಿದ್ದಳು, ಆದ್ದರಿಂದಲೇ ಪ್ರಾಪಂಚಿಕ ದುಃಖಶೋಕಗಳು ಅವರನ್ನು ಮುಟ್ಟಲಾರವು ಎಂಬುದನ್ನು ನಾನು ಕಂಡುಕೊಂಡೆ. ಆಗ ಜಗನ್ಮಾತೆಗೆ ಮತ್ತೆ ಮತ್ತೆ ನಮಿಸಿದೆ, ನನ್ನ ಮನಸ್ಸು ಹಗುರವಾಯಿತು."

5. ರಾಮೇಶ್ವರನಿಗೆ ಐದಾರು ದಿನಗಳ ಮುಂಚೆಯೇ ತನ್ನ ಮೃತ್ಯುವಿನ ವಿಷಯ ತಿಳಿದಿತ್ತು. ತನ್ನ ಸಂಬಂಧಿಕರಿಗೆ ಇದನ್ನು ತಿಳಿಸಿ ತನ್ನ ಅಂತ್ಯಸಂಸ್ಕಾರ ಶ್ರಾದ್ಧ ಇತ್ಯಾದಿಗಳಿಗೆ ಎಲ್ಲ ವ್ಯವಸ್ಥೆ ಮಾಡಿದ್ದನು. ಮನೆಯ ಮುಂದಿದ್ದ ಒಂದು ಮಾವಿನ ಮರವನ್ನು ಯಾವುದೊ ಕಾರಣಕ್ಕೆ ಕಡಿಯುತ್ತಿರುವುದನ್ನು ನೋಡಿ ಹೇಳಿದ್ದನು: "ಒಳ್ಳೆಯದೇ ಆಯಿತು, ಆ ಮರವನ್ನು ಶವಸಂಸ್ಕಾರಕ್ಕೆ ಉಪಯೋಗಿಸಬಹುದು." ಮೃತ್ಯುವಿಗೆ ಸ್ವಲ್ಪ ಮುಂಚಿನವರೆಗೂ ಅವನು ಶ್ರೀರಾಮಚಂದ್ರನ ನಾಮೋಚ್ಚಾರಣೆ ಮಾಡುತ್ತಿದ್ದ. ಅನಂತರ ಅವನ ಪ್ರಜ್ಞೆ ತಪ್ಪಿದ ಕೆಲವೇ ಕ್ಷಣಗಳಲ್ಲಿ ಅವನ ಪ್ರಾಣ ವಾಯು ಹೊರಟುಹೋಯಿತು. ಮೃತ್ಯುವಿನ ನಂತರ ತನ್ನ ದೇಹವನ್ನು ಶ್ಮಶಾನದಲ್ಲಿ ಸುಡದೆ ಹತ್ತಿರದ ರಸ್ತೆಯಮೇಲೆ ಸುಡಬೇಕೆಂದು ಅವನು ಪ್ರಾರ್ಥಿಸಿಕೊಂಡಿದ್ದ. ಕಾರಣ ಕೇಳಿದಾಗ ಅವನು ಹೇಳಿದ, "ರಸ್ತೆಯಲ್ಲಿ ಹೋಗುವ ಸಾಧುಗಳ ಪಾದ ಧೂಳಿಯ ಸ್ಪರ್ಶದಿಂದ ನನಗೆ ಸದ್ಗತಿಯುಂಟಾಗುವುದು" ಎಂದು. ಅವನು ನಡುರಾತ್ರಿ ಯಲ್ಲಿ ಪ್ರಾಣಬಿಟ್ಟನು.

6. ರಾಮೇಶ್ವರನಿಗೆ ಗೋಪಾಲ ಎಂಬುವವನೊಡನೆ ತುಂಬ ಸ್ನೇಹವಿತ್ತು. ಅವನು ಹೇಳಿರುವನು : ರಾಮೇಶ್ವರನು ಮೃತ್ಯುವನ್ನು ಅಪ್ಪಿದ ದಿನ, ಅದೇ ಸಮಯ ದಲ್ಲಿ ಗೋಪಾಲನು ತನ್ನ ಮನೆಯ ಬಾಗಿಲಿನಲ್ಲಿ ಯಾರದೋ ಶಬ್ದವನ್ನು ಕೇಳಿದನು. ಯಾರದು ಎಂದು ವಿಚಾರಿಸಿದಾಗ ಉತ್ತರ ಬಂತು, "ನಾನು ರಾಮೇಶ್ವರ, ಗಂಗಾ ಸ್ನಾನಕ್ಕಾಗಿ ಹೋಗುತ್ತಿದ್ದೇನೆ. ಮನೆಯಲ್ಲಿ ಶ್ರೀರಘುವೀರನು ಇರುವನು. ಅವನ ಸೇವೆ ಯಲ್ಲಿ ಲೋಪವಾಗದಂತೆ ನೀನು ಸ್ವಲ್ಪ ನೋಡಿಕೊಂಡಿರು." ಗೋಪಾಲನು ಬಾಗಿಲನ್ನು ತೆರೆಯಲು ಹೋದನು. ಮತ್ತೆ ಧ್ವನಿ ಕೇಳಿಸಿತು, "ನನಗೆ ಶರೀರವಿಲ್ಲ. ಆದ್ದರಿಂದ ನೀನು ಬಾಗಿಲು ತೆರೆದರೂ ನಾನು ಕಾಣಿಸುವುದಿಲ್ಲ." ಆದರೂ ಗೋಪಾಲನು ಬಾಗಿಲನ್ನು ತೆರೆದು ನೋಡುತ್ತಾನೆ, ಯಾರೂ ಇಲ್ಲ. ಆಗ ಅವನು ಕೂಡಲೇ ರಾಮೇಶ್ವರನ ಮನೆಗೆ ಓಡಿದನು. ನಿಜವಾಗಿಯೂ ರಾಮೇಶ್ವರನು ದೇಹತ್ಯಾಗ ಮಾಡಿರುವುದನ್ನು ತಿಳಿದು ಅವನಿಗೆ ಅತ್ಯಾಶ್ಚರ್ಯವೂ ತಡೆಯಲಾಗದ ದುಃಖವೂ ಆಯಿತು.

7. ರಾಮೇಶ್ವರನು ೧೮೭೩ರಲ್ಲಿ ನಲವತ್ತೆಂಟನೆಯ ವಯಸ್ಸಿನಲ್ಲಿ ತೀರಿಹೋದ ನೆಂದು ಅವನ ಜ್ಯೇಷ್ಠ ಪುತ್ರ ರಾಮಲಾಲನು ಹೇಳುತ್ತಾನೆ. ಅವನು ತನ್ನ ತಂದೆಯ ಚಿತಾಭಸ್ಮವನ್ನು ಕಲಕತ್ತೆಯ ಹತ್ತಿರದ ವೈದ್ಯಾವತಿಯಲ್ಲಿ ಗಂಗೆಗೆ ಹಾಕಿದನು. ಅನಂತರ ಅವನು ನದಿಯನ್ನು ದಾಟಿ ದಕ್ಷಿಣೇಶ್ವರಕ್ಕೆ ಬಂದನು. ರಾಮೇಶ್ವರನ ಮೃತ್ಯುವಿನ ನಂತರ ರಾಮಲಾಲನು ದಕ್ಷಿಣೇಶ್ವರದ ಅರ್ಚಕ ಹುದ್ದೆಯನ್ನು ಸ್ವೀಕರಿಸಿದನು.

8. ಮಥುರನ ಸಾವಿನನಂತರ ಶ್ರೀರಾಮಕೃಷ್ಣರಿಗೆ ಶಂಭುಚರಣ ಮಲ್ಲಿಕನ ಪರಿಚಯವಾಯಿತು. ಅವನಿಗೆ ಅವರ ಮೇಲೆ ತುಂಬ ಶ್ರದ್ಧಾಭಕ್ತಿಯುಂಟಾಯಿತು.

ಕಲಿಕತ್ತೆಯ ಸಿಂಧೂರಿಯಾಪಾಟಿಯಲ್ಲಿ ಅವನ ವಾಸ.* ಶಂಭುಮಲ್ಲಿಕನಿಗೆ ಆಗಲೇ ಬ್ರಹ್ಮಸಮಾಜದ ಕಡೆ ವಿಶೇಷ ಒಲವಿತ್ತು. ಅವನು ತುಂಬ ದಾನಿಯಾದುದರಿಂದ ಕಲಕತ್ತೆಯಲ್ಲಿ ಅವನು ಸಾಕಷ್ಟು ಪ್ರಸಿದ್ಧನಾಗಿದ್ದ. ಶ್ರೀರಾಮಕೃಷ್ಣರ ಮೇಲೆ ಅವನ ಭಕ್ತಿ ಪ್ರೀತಿ ದಿನದಿನವೂ ಅಧಿಕವಾಗುತ್ತ ಹೋಯಿತು. ಕೆಲವು ವರ್ಷಗಳು ಅವರ ಸೇವೆ ಮಾಡುವ ಭಾಗ್ಯ ಅವನಿಗೆ ಲಭಿಸಿತು. ಶ್ರೀರಾಮಕೃಷ್ಣರಿಗೆ ಮತ್ತು ಶ್ರೀಮಾತೆಯವರಿಗೆ ಏನೇ ಕೊರತೆಯುಂಟಾದರೂ ಕೂಡಲೆ ಅವನು ಆನಂದದಿಂದ ಅದನ್ನು ಒದಗಿಸುತ್ತಿದ್ದ. ಅವನು ಶ್ರೀರಾಮಕೃಷ್ಣರನ್ನು 'ಗುರೂಜೀ' ಎಂದು ಸಂಬೋಧಿಸುತ್ತಿದ್ದ. ಆಗಾಗ ಅವರು ಇದನ್ನು ಆಕ್ಷೇಪಿಸಿ "ಯಾರಿಗೆ ಯಾರು ಗುರು ? ನೀನೇ ನನ್ನ ಗುರು" ಎನ್ನುತ್ತಿದ್ದರು. ಆದರೆ ಶಂಭುಮಲ್ಲಿಕನು ಬಿಡದೆ ಕೊನೆಯವರೆಗೂ ಅವರನ್ನು ಹಾಗೆಯೇ ಕರೆಯುತ್ತಿದ್ದ. ಶ್ರೀರಾಮಕೃಷ್ಣರ ಅನುಗ್ರಹದಿಂದ ಶಂಭುವು ಆಧ್ಯಾತ್ಮಿಕ ಜೀವನದಲ್ಲಿ ಸಫಲತೆಯನ್ನು ಪಡೆದುದರಿಂದಲೇ ಅವರನ್ನು ಹಾಗೆ ಕರೆಯುತ್ತಿದ್ದನೆಂದು ತಿಳಿದು ಬರುವುದು. ಅವನ ಪತ್ನಿಯೂ ಶ್ರೀರಾಮಕೃಷ್ಣರನ್ನು ದೇವರೆಂದೇ ಪೂಜಿಸುತ್ತಿದ್ದಳು. ಶ್ರೀಮಾತೆಯವರು ದಕ್ಷಿಣೇಶ್ವರದಲ್ಲಿದ್ದಾಗ ಪ್ರತಿ ಮಂಗಳವಾರ ಅವರನ್ನು ಮನೆಗೆ ಕರೆದುಕೊಂಡುಹೋಗಿ ಷೋಡಶೋಪಚಾರದಿಂದ ಅವರ ಪಾದಪೂಜೆ ಮಾಡುತ್ತಿದ್ದಳು.

9. ಶ್ರೀಮಾತೆಯವರು ಬಹುಶಃ ೧೮೭೪ರ ಮಧ್ಯಭಾಗದಲ್ಲಿ ಎರಡನೆಯ ಬಾರಿ ದಕ್ಷಿಣೇಶ್ವರಕ್ಕೆ ಬಂದರು. ಹಿಂದಿನಂತೆ ಈಗಲೂ ಶ್ರೀರಾಮಕೃಷ್ಣರ ತಾಯಿಯೊಡನೆ ನಹಬತಿನಲ್ಲಿ ವಾಸಿಸಿದರು. ಆ ಸಣ್ಣ ಕೊಠಡಿಯಲ್ಲಿ ಅವರಿಗೆ ವಾಸಿಸಲು ಕಷ್ಟವಾಗುವುದೆಂದು ಭಾವಿಸಿ ಶಂಭುಮಲ್ಲಿಕನು ದಕ್ಷಿಣೇಶ್ವರದ ಹತ್ತಿರ ಇನ್ನೂರ ಐವತ್ತು ರೂಪಾಯಿಗಳಿಗೆ ಒಂದು ಜಾಗವನ್ನು ಖರೀದಿಸಿದನು. ಅಲ್ಲಿ ಅವರಿಗಾಗಿ ಒಂದು ದೊಡ್ಡ ಕೊಠಡಿಯನ್ನು ಕಟ್ಟಿಸಬೇಕೆಂದುಕೊಂಡಿದ್ದನು. ನೇಪಾಲ ಸರ್ಕಾರದ ಅಧಿಕಾರಿಯಾದ ವಿಶ್ವನಾಥ ಉಪಾಧ್ಯಾಯನು ಆಗ ಶ್ರೀರಾಮಕೃಷ್ಣರ ಭಕ್ತನಾಗಿದ್ದನು. ಶಂಭುವಿನ ಯೋಜನೆಯನ್ನು ತಿಳಿದು ಅದಕ್ಕೆ ಬೇಕಾಗುವ ಮರವನ್ನೆಲ್ಲ ತಾನು ಒದಗಿಸುವುದಾಗಿ ಮಾತುಕೊಟ್ಟನು. ನೇಪಾಲ ಸರ್ಕಾರದ ಸಾಲವೃಕ್ಷದ ವ್ಯವಹಾರ ವಿಶ್ವನಾಥನ ಕೈಯಲ್ಲಿದ್ದುದರಿಂದ ಅದನ್ನು ಒದಗಿಸಲು ಅವನಿಗೆ ಹೆಚ್ಚು ಖರ್ಚು ತಗಲುತ್ತಿರಲಿಲ್ಲ.

---

*ಕೆಲವರ ಪ್ರಕಾರ, ಮಥುರನನಂತರ ಪಾನಿಹಾಟಿಯ ಮಣಿಮೋಹನ ಸೇನನು ಶ್ರೀರಾಮಕೃಷ್ಣರಿಗೆ ಬೇಕಾದ ವಸ್ತುಗಳನ್ನು ಒದಗಿಸುವ ಭಾರವನ್ನು ಹೊತ್ತನು. ಅವನಿಗೆ ಶ್ರೀರಾಮಕೃಷ್ಣರ ಮೇಲೆ ತುಂಬ ಭಕ್ತಿ, ಮತ್ತೆ ಮತ್ತೆ ಬಂದು ಅವರನ್ನು ಸಂದರ್ಶಿಸುತ್ತಿದ್ದ. ಅವನನಂತರ ಶಂಭುಮಲ್ಲಿಕನು ಆ ಭಾರವನ್ನು ವಹಿಸಿಕೊಂಡನು. ಆದರೆ ಶ್ರೀರಾಮಕೃಷ್ಣರೇ ಶಂಭುಮಲ್ಲಿಕನನ್ನು ಎರಡನೆಯ ರಸದ್ದಾರನೆಂದು ಕರೆದಿರುವುದರಿಂದ ಮಣಿಮೋಹನನು ಅವರ ಸೇವಾಭಾರವನ್ನು ಹೊತ್ತಿದ್ದರೂ ಬಹಳಕಾಲ ಅವನಿಗೆ ಅದು ಸಾಧ್ಯವಾಗಲಿಲ್ಲವೆಂದು ಕಂಡುಬರುತ್ತದೆ.

ಕೊಠಡಿಯ ನಿರ್ಮಾಣ ಪ್ರಾರಂಭವಾದಮೇಲೆ ವಿಶ್ವನಾಥನು ಮೂರು ದೊಡ್ಡ ಸಾಲ ವೃಕ್ಷದ ದಿಮ್ಮಿಗಳನ್ನು ಗಂಗಾನದಿಯ ಮೂಲಕ ಕಳಿಸಿಕೊಟ್ಟನು. ಆದರೆ ಅವುಗಳಲ್ಲಿ ಒಂದು ತುಂಡು ನದಿಯ ಪ್ರವಾಹದಲ್ಲಿ ಕೊಚ್ಚಿಕೊಂಡುಹೋಯಿತು. ಹೃದಯನು ಇದರಿಂದ ಜಿಗುಪ್ಸೆಗೊಂಡು ಶ್ರೀಮಾತೆಯವರು ಭಾಗ್ಯಹೀನರೆಂದು ಹೇಳಿದನು. ಆದರೆ ವಿಶ್ವನಾಥನು ಸುದ್ದಿಯನ್ನು ತಿಳಿದು ಇನ್ನೊಂದು ಮರದ ದಿಮ್ಮಿಯನ್ನು ಕಳಿಸಿಕೊಟ್ಟನು. ಕೊಠಡಿಯ ನಿರ್ಮಾಣ ಕಾರ್ಯ ಮುಗಿಯಿತು. ಶ್ರೀಮಾತೆಯವರು ಸುಮಾರು ಒಂದು ವರ್ಷ ಅಲ್ಲಿ ವಾಸಿಸಿದ್ದರು. ಶ್ರೀಮಾತೆಯವರೊಡನಿದ್ದು ಅವರಿಗೆ ಗೃಹಕೃತ್ಯಗಳಲ್ಲಿ ಸಹಾಯಮಾಡುವುದಕ್ಕಾಗಿ ಓರ್ವ ಮಹಿಳೆಯನ್ನು ಗೊತ್ತುಪಡಿಸಿದರು. ಶ್ರೀಮಾತೆಯವರು ಪ್ರತಿನಿತ್ಯ ಅಲ್ಲಿ ನಾನಾವಿಧ ಭಕ್ಷ್ಯಭೋಜ್ಯಗಳನ್ನು ತಯಾರಿಸಿ ತೆಗೆದುಕೊಂಡು ಬಂದು ಶ್ರೀರಾಮಕೃಷ್ಣರಿಗೆ ನೀಡುತ್ತಿದ್ದರು. ಅವರ ಊಟದನಂತರ ಮತ್ತೆ ಆ ಕೊಠಡಿಗೆ ಮರಳಿ ಹೋಗುತ್ತಿದ್ದರು. ಶ್ರೀಮಾತೆಯವರಿಗೆ ಸಂತೋಷವನ್ನುಂಟು ಮಾಡಲು ಶ್ರೀರಾಮಕೃಷ್ಣರು ಹಗಲುಹೊತ್ತು ಅಲ್ಲಿಗೆ ಹೋಗಿ ಸ್ವಲ್ಪಕಾಲ ಅವರೊಡನೆ ಕಳೆಯುತ್ತಿದ್ದರು. ಒಂದು ಅಪರಾಹ್ನ ಅವರು ಅಲ್ಲಿಗೆ ಹೋಗಿದ್ದಾಗ ಜೋರಾಗಿ ಮಳೆ ಶುರುವಾಯಿತು, ಮಧ್ಯ ರಾತ್ರಿಯವರೆಗೂ ಬಿಡಲೇ ಇಲ್ಲ. ಅಂದು ರಾತ್ರಿ ಶ್ರೀರಾಮ ಕೃಷ್ಣರು ಅಲ್ಲಿಯೇ ಉಳಿಯಬೇಕಾಯಿತು.

10. ಹೀಗೆ ಒಂದು ವರ್ಷ ಕಳೆಯಿತು. ಈಗ ಶ್ರೀಮಾತೆಯವರು ತೀವ್ರ ಆಮಶಂಕೆ ರೋಗಕ್ಕೆ ತುತ್ತಾದರು. ಶಂಭುಮಲ್ಲಿಕನು ಅವರ ಆರೋಗ್ಯ ಸುಧಾರಣೆಗೆ ಬಹಳವಾಗಿ ಪ್ರಯತ್ನಿಸಿದ. ಅವರ ಚಿಕಿತ್ಸೆಗಾಗಿ ಡಾ. ಪ್ರಸಾದರನ್ನು ನಿಯಮಿಸಿದ. ರೋಗ ವಾಸಿಯಾದಮೇಲೆ ೧೮೭೪ರಲ್ಲಿ ಅವರು ಜಯರಾಮಬಾಟಿಗೆ ತೆರಳಿದರು. ಅವರು ಹಳ್ಳಿಗೆ ಹೋದ ಕೂಡಲೆ ಮತ್ತೆ ರೋಗ ಮರುಕಳಿಸಿತು. ರೋಗ ಎಷ್ಟು ಉಲ್ಬಣವಾಯಿತೆಂದರೆ ಅವರು ಬದುಕುತ್ತಾರೊ ಇಲ್ಲವೊ ಎಂದು ಎಲ್ಲರೂ ಸಂದೇಹಿಸು ವಂತಾಯಿತು. ಶ್ರೀಮಾತೆಯವರ ತಂದೆ ರಾಮಚಂದ್ರನು ಆಗಲೇ ತೀರಿಕೊಂಡಿದ್ದನು. ಅವರ ತೀವ್ರ ಕಾಯಿಲೆಯ ವಾರ್ತೆಯನ್ನು ಕೇಳಿ ಶ್ರೀರಾಮಕೃಷ್ಣರು ಹೃದಯನಿಗೆ ಹೇಳಿದರು, "ಹೃದು, ಅವಳು ಕೇವಲ ಬಂದು ಹೋಗುವುದೇ ಆಯಿತೆ, ಮನುಷ್ಯ ಜನ್ಮದ ಉದ್ದೇಶ ಸಫಲವಾಗುವುದಿಲ್ಲವೆ ?"

11. ಏನು ಮಾಡಿದರೂ ಕಾಯಿಲೆ ಗುಣವಾಗದಿರಲು ಶ್ರೀಮಾತೆಯವರು ದೇವಿಯ ಮುಂದೆ ಪ್ರಾಯೋಪವೇಶನ ಮಾಡುವುದೆಂದು ನಿರ್ಧರಿಸಿದರು. ಮನೆಯವ ರಿಗೆ ತಿಳಿದರೆ ಬಿಡುವುದಿಲ್ಲವೆಂದು ಯಾರಿಗೂ ಹೇಳದೆ ಗ್ರಾಮದ ಸಿಂಹವಾಹಿನೀ ಗುಡಿಯ ಮುಂದೆ ಪ್ರಾಯೋಪವೇಶನ ಮಾಡುತ್ತ ಮಲಗಿದರು. ಕೆಲವು ಗಂಟೆಗಳ ನಂತರ ದೇವಿಯು ಪ್ರಸನ್ನಳಾಗಿ ರೋಗಕ್ಕೆ ಒಂದು ಔಷಧಿಯನ್ನು ಸೂಚಿಸಿದಳು. ಆ ಔಷಧಿಯನ್ನು ಸೇವಿಸಿದ ಕೂಡಲೇ ರೋಗವು ಗುಣಮುಖವಾಯಿತು ಮತ್ತು ಕ್ರಮೇಣ ಅವರು ಹಿಂದಿನಂತೆ ಆರೋಗ್ಯವಂತರಾದರು. ಈ ಘಟನೆಯ ನಂತರ ಶ್ರೀ ಸಿಂಹವಾಹಿ

ನಿಯಂ ಅತ್ಯಂತ ಜಾಗ್ರತಳೆಂದು ಪ್ರಸಿದ್ಧಳಾಗಿ ಗ್ರಾಮವಾಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆ ಗುಡಿಗೆ ಬರತೊಡಗಿದರು.

12. ಸುಮಾರು ನಾಲ್ಕು ವರ್ಷಗಳು ಶಂಭುಮಲ್ಲಿಕನು ಶ್ರೀರಾಮಕೃಷ್ಣರ ಮತ್ತು ಶ್ರೀಮಾತೆಯವರ ಸೇವೆ ಮಾಡಿದನು. ಅನಂತರ ಅವನು ಕಾಯಿಲೆ ಮಲಗಿದ. ಶ್ರೀರಾಮಕೃಷ್ಣರು ಅವನನ್ನು ನೋಡಿಕೊಂಡುಬರಲು ಒಂದು ದಿನ ಹೋಗಿದ್ದರು. ಹಿಂದಿರುಗಿದನಂತರ ಹೇಳಿದರು, "ಶಂಭುವಿನ ದ್ವೀಪದಲ್ಲಿ ಎಣ್ಣೆ ಮುಗಿದುಹೋಗಿದೆ!" ಎಂದು. ಅವರ ಮಾತು ಸತ್ಯವಾಯಿತು. ಅವನು ಬಹುಮೂತ್ರರೋಗದಿಂದ ನರಳುತ್ತ ಶರೀರತ್ಯಾಗ ಮಾಡಿದನು. ಶಂಭುವಿನದು ಉದಾರಬುದ್ಧಿ ಮತ್ತು ಅವನು ಪರಮ ಭಕ್ತ. ಅವನು ಕಾಯಿಲೆಯಲ್ಲಿ ನರಳುತ್ತಿದ್ದಾಗ ಒಂದು ದಿನವೂ ತನ್ನ ಮನಸ್ಸಿನ ಪ್ರಸನ್ನತೆಯನ್ನು ಕಳೆದುಕೊಳ್ಳಲಿಲ್ಲ. ಮೃತ್ಯುವಿಗೆ ಕೆಲವು ದಿನಗಳ ಹಿಂದೆ ಅವನು ಆನಂದದಿಂದ ಹೃದಯನಿಗೆ ಹೀಗೆ ಹೇಳಿದನು, "ಸಾವಿನ ವಿಚಾರದಲ್ಲಿ ನನಗೆ ಸ್ವಲ್ಪವೂ ಚಿಂತೆಯಿಲ್ಲ. ನಾನು ಎಲ್ಲ ಗಂಟುಮೂಟೆ ಕಟ್ಟಿಕೊಂಡು ಸಿದ್ಧನಾಗಿದ್ದೇನೆ," ಎಂದು. ಶಂಭುಮಲ್ಲಿಕನನ್ನು ಭೇಟಿಯಾಗುವುದಕ್ಕೆ ಬಹಳ ಹಿಂದೆಯೇ ಶ್ರೀರಾಮಕೃಷ್ಣರು ಒಮ್ಮೆ ಯೋಗಾರೂಢ ಅವಸ್ಥೆಯಲ್ಲಿ ಅವನನ್ನು ಕಂಡಿದ್ದರು—ಶ್ರೀ ಜಗನ್ಮಾತೆಯು ಅವನೇ ಎರಡನೆಯ ರಸದ್ದಾರನೆಂದು ನಿರ್ದೇಶಿಸಿದಳು. ಶ್ರೀರಾಮಕೃಷ್ಣರು ಅವನನ್ನು ನೋಡಿದಕೂಡಲೇ ತಾವು ಸಮಾಧಿಯಲ್ಲಿ ಕಂಡ ವ್ಯಕ್ತಿ ಇವನೇ ಎಂದು ಗುರುತಿಸಿದರು.

13. ೧೮೭೭ರಲ್ಲಿ ಇನ್ನೊಂದು ಮುಖ್ಯ ಘಟನೆ ಸಂಭವಿಸಿತು. ಶ್ರೀರಾಮಕೃಷ್ಣರ ತಾಯಿ ಚಂದ್ರಮಣಿದೇವಿಯು ತನ್ನ ಎಂಬತ್ತೈದನೆಯ ವಯಸ್ಸಿನಲ್ಲಿ ಕಾಲವಾದಳು. ಅಂದು ಶ್ರೀರಾಮಕೃಷ್ಣರ ಜನ್ಮದಿನ. ಮುದಿತನದ ಪರಿಣಾಮವಾಗಿ ಅವಳ ಇಂದ್ರಿಯ ಮನಸ್ಸುಗಳು ದುರ್ಬಲಗೊಂಡಿದ್ದುವು. ಅವಳ ಸಾವಿನ ವೃತ್ತಾಂತವನ್ನು ಹೃದಯನ ಮೂಲಕ ನಾವು ಕೇಳಿರುವಂತೆ ವಿವರಿಸುತ್ತೇವೆ.

ಈ ಘಟನೆ ನಡೆಯುವುದಕ್ಕೆ ನಾಲ್ಕು ದಿನಗಳ ಮುಂಚೆ ಹೃದಯನು ಸ್ವಲ್ಪ ದಿನಗಳ ಮಟ್ಟಿಗೆ ಊರಿಗೆ ಹೋಗಿಬರುವುದೆಂದು ನಿಶ್ಚಯಿಸಿದ್ದನು. ಹೊರಡುವುದಕ್ಕೆ ಮುಂಚೆ ಮನಸ್ಸಿನಲ್ಲಿ ಏನೊ ಅಳುಕು ಉಂಟಾಯಿತು—ಶ್ರೀರಾಮಕೃಷ್ಣರನ್ನು ಬಿಟ್ಟು ಹೋಗಲು ಅವನಿಗೆ ಮನಸ್ಸಾಗಲೇ ಇಲ್ಲ. ಅವರಿಗೆ ಇದನ್ನು ತಿಳಿಸಿದಾಗ ಹಾಗಾದರೆ ಹೋಗಬೇಕಾಗಿಲ್ಲ ಎಂದರು. ಇದಾದನಂತರ ಮೂರು ದಿನಗಳು ನಿರ್ವಿಘ್ನವಾಗಿ ಕಳೆದವು.

ಶ್ರೀರಾಮಕೃಷ್ಣರು ಪ್ರತಿನಿತ್ಯ ತಮ್ಮ ತಾಯಿಯೆಡೆಗೆ ಹೋಗಿ ಏನಾದರು ಅವಳ ಸೇವೆ ಮಾಡಿಬರುತ್ತಿದ್ದರು. ಹೃದಯನೂ ಹಾಗೆಯೇ ಮಾಡುತ್ತಿದ್ದ. 'ಕಾಲಿಯತಾಯಿ' ಎಂಬ ಹೆಸರಿನ ಸೇವಕಿಯೊಬ್ಬಳು ದಿನದ ಹೆಚ್ಚು ವೇಳೆಯನ್ನು ವೃದ್ಧೆಯೊಡನೆ ಕಳೆಯುತ್ತಿದ್ದಳು. ವೃದ್ಧೆ ಇತ್ತೀಚಿನ ದಿನಗಳಲ್ಲಿ ಹೃದಯನ ಮುಖ ನೋಡುತ್ತಿರಲಿಲ್ಲ. ಅಕ್ಷಯನ ಮೃತ್ಯುವಿನ ನಂತರ ಹೃದಯನೇ ಅವನ ಮೃತ್ಯುವಿಗೆ ಕಾರಣನೆಂದು ಹೇಗೊ ಅವಳ ಮನಸ್ಸಿಗೆ ಹೋಗಿಬಿಟ್ಟಿತ್ತು. ಹಾಗೆಯೇ ಶ್ರೀರಾಮಕೃಷ್ಣರು ಮತ್ತು ಅವರ

ಪತ್ನಿ-ಇವರನ್ನೂ ಕೊಲ್ಲಲು ಪ್ರಯತ್ನಿಸುತ್ತಿರುವನು ಎಂದು ಅವಳು ಶಂಕಿಸುತ್ತಿದ್ದಳು. ಆಗಾಗ ಅವಳು ಶ್ರೀರಾಮಕೃಷ್ಣರಿಗೆ ಎಚ್ಚರಿಕೆ ನೀಡುತ್ತಿದ್ದಳು: ''ಹೃದಯನ ಮಾತನ್ನು ಎಂದೂ ಕೇಳಬೇಡ, ತಿಳಿಯಿತೆ ?'' ವೃದ್ಧಾಪ್ಯದ ಅರಳುಮರಳು ಇನ್ನೂ ಅನೇಕ ರೂಪ ಗಳಲ್ಲಿ ವ್ಯಕ್ತವಾಯಿತು.

ದಕ್ಷಿಣೇಶ್ವರದ ತೋಟದ ಹತ್ತಿರವೇ ಆಲಂಬಜಾರ್ ಸೆಣಬಿನ ಗಿರಣಿ ಇತ್ತು. ಮಧ್ಯಾಹ್ನದಲ್ಲಿ ಅಲ್ಲಿಯ ಕೆಲಸಗಾರರಿಗೆ ಸ್ವಲ್ಪ ಬಿಡುವಿರುತ್ತದೆ. ಅರ್ಧಗಂಟೆಯನಂತರ ಅವರು ಪುನಃ ಕೆಲಸಕ್ಕೆ ಬರುವುದಕ್ಕಾಗಿ ಒಂದು ಸೈರನ್ ಬಾರಿಸುತ್ತಿದ್ದರು. ಇದನ್ನೇ ವೈಕುಂಠದ ಶಂಖನಾದವೆಂದು ಆ ವೃದ್ಧೆ ಭಾವಿಸಿದ್ದಳು. ಆ ಸೈರನ್ ಧ್ವನಿ ಕೇಳಿಸದ ಹೊರತು ಊಟಕ್ಕೆ ಕುಳಿತುಕೊಳ್ಳುತ್ತಿರಲಿಲ್ಲ. ಕೇಳಿದರೆ ಹೇಳುತ್ತಿದ್ದಳು : ''ಈಗ ಹೇಗೆ ಊಟಮಾಡುವುದು ? ಲಕ್ಷ್ಮೀನಾರಾಯಣನಿಗೆ ಇನ್ನೂ ನೈವೇದ್ಯವಾಗಿಲ್ಲ; ವೈಕುಂಠದಲ್ಲಿ ಇನ್ನೂ ಶಂಖ ಊದಿಯಾಗಿಲ್ಲ. ಅದಕ್ಕೆ ಮುಂಚೆ ಊಟಮಾಡಬಹುದೇ?'' ಗಿರಣಿಗೆ ರಜವಿರುವ ದಿನ ಸೈರನ್ ಕೇಳಿಸದೇ ಇರುವುದರಿಂದ ಅವಳಿಗೆ ಊಟಮಾಡಿಸು ವುದು ಅತ್ಯಂತ ಕಠಿನವಾಗುತ್ತಿತ್ತು. ಹೃದಯ ಮತ್ತು ಶ್ರೀರಾಮಕೃಷ್ಣರು ಅದಕ್ಕಾಗಿ ಏನೇನೋ ಉಪಾಯ ಮಾಡಬೇಕಾಗುತ್ತಿತ್ತು.

ಅದು ಏನೇ ಇರಲಿ, ನಾಲ್ಕನೆಯ ದಿನ ಬಂತು. ಚಂದ್ರಮಣಿಯಲ್ಲಿ ಯಾವ ಅನಾರೋಗ್ಯದ ಚಿಹ್ನೆಯೂ ಕಂಡುಬರಲಿಲ್ಲ. ಸಂಜೆಯನಂತರ ಶ್ರೀರಾಮಕೃಷ್ಣರು ಅವಳೆಡೆಗೆ ಹೋಗಿ ತಮ್ಮ ಹಿಂದಿನ ಜೀವನದ ಘಟನೆಗಳನ್ನೆಲ್ಲ ಹೇಳಿ ಅವಳ ಮನಸ್ಸನ್ನು ಸಂತೋಷಗೊಳಿಸಿದರು. ಅವಳು ಮಲಗಿದ ಮೇಲೆ ಅವರು ತಮ್ಮ ಕೊಠಡಿಗೆ ಹಿಂದಿರುಗಿ ದರು. ಬೆಳಗಾಯಿತು. ಎಂಟು ಗಂಟೆ ಕಳೆದರೂ ಚಂದ್ರಮಣಿ ಕೋಣೆಯ ಬಾಗಿಲು ತೆರೆಯಲಿಲ್ಲ. 'ಕಾಲಿಯ ತಾಯಿ' ಕೋಣೆಯ ಬಾಗಿಲಿಗೆ ಹೋಗಿ ಜೋರಾಗಿ ಕರೆದಳು, ಬಾಗಿಲು ತಟ್ಟಿದಳು. ಆದರೆ ಒಳಗಡೆಯಿಂದ ಸದ್ದೇ ಇಲ್ಲ. ಅವಳು ತನ್ನ ಕಿವಿಯನ್ನು ಬಾಗಿಲಿಗಿಟ್ಟು ಕೇಳಿದಳು, ಒಳಗಿನಿಂದ ಒಂದು ಅಸ್ವಾಭಾವಿಕವಾದ ಧ್ವನಿ ಕೇಳಿಬರುತ್ತಿತ್ತು. ಅವಳಿಗೆ ಗಾಬರಿಯಾಯಿತು. ಕೂಡಲೇ ಓಡಿಹೋಗಿ ಹೃದಯ ಮತ್ತು ಶ್ರೀರಾಮಕೃಷ್ಣ ರಿಗೆ ತಿಳಿಸಿದಳು. ಹೃದಯನು ಜಾಣ್ಮೆಯಿಂದ ಹೊರಗಿನಿಂದ ಬಾಗಿಲಿನ ಅಗಳಿಯನ್ನು ತೆಗೆದನು. ವೃದ್ಧೆ ಪ್ರಜ್ಞಾಶೂನ್ಯಳಾಗಿ ಮಲಗಿದ್ದಳು. ಅವನು ಆಯುರ್ವೇದದ ಔಷಧಿ ಯನ್ನು ತಂದು ಅವಳ ನಾಲಗೆಯ ಮೇಲೆ ಇರಿಸಿದನು. ಹಾಲು ಮತ್ತು ಗಂಗಾಜಲವನ್ನು ತೊಟ್ಟುತೊಟ್ಟಾಗಿ ಬಾಯಿಗೆ ಬಿಟ್ಟನು. ಅದೇ ಸ್ಥಿತಿಯಲ್ಲಿ ಅವಳು ಮೂರುದಿನ ಇದ್ದಳು. ಈಗ ಕೊನೆಯ ಘಳಿಗೆ ಸನ್ನಿಹಿತವಾಯಿತು. ಅವಳ ದೇಹವನ್ನು ಗಂಗಾತೀರಕ್ಕೆ ತೆಗೆದು ಕೊಂಡು ಹೋದರು. ಶ್ರೀರಾಮಕೃಷ್ಣರು ಅವಳ ಪಾದಪದ್ಮಕ್ಕೆ ಹೂವು ಗಂಧ ತುಳಸಿ ಯನ್ನು ಅರ್ಪಿಸಿದರು. ಅವರು ಸನ್ಯಾಸಿಯಾದುದರಿಂದ ರಾಮಲಾಲನು ವೃದ್ಧೆಯ ಅಂತಿಮ ಸಂಸ್ಕಾರಗಳನ್ನು ನಡೆಸಿದನು. ಸೂತಕ ಮುಗಿದಮೇಲೆ ರಾಮಲಾಲನು ಶ್ರೀ ರಾಮಕೃಷ್ಣರ ನಿರ್ದೇಶನದಂತೆ ಶ್ರಾದ್ಧಕರ್ಮಗಳನ್ನು ನೆರವೇರಿಸಿದನು.

14. ತಮ್ಮ ತಾಯಿಯ ಮೃತ್ಯುವಿನ ನಂತರ ಸಂನ್ಯಾಸಧರ್ಮಕ್ಕೆ ಉಚಿತವಾಗಿ ಸೂತಕ ಆಚರಿಸುವುದೇ ಮುಂತಾದ ಯಾವ ಕಾರ್ಯವನ್ನೂ ನೆರವೇರಿಸಲಿಲ್ಲ ಮಗನಾಗಿ ಯಾವ ಕರ್ಮವನ್ನೂ ಮಾಡಲಿಲ್ಲವಲ್ಲ ಎಂದು ಭಾವಿಸಿ ಒಂದು ದಿನ ತಾಯಿಗಾಗಿ ತರ್ಪಣ ನೀಡಲು ನಿರ್ಧರಿಸಿದರು. ಆದರೆ ಅಂಗೈಯಲ್ಲಿ ನೀರು ಎತ್ತಿದಾಗ ಬೆರಳುಗಳು ಒಟ್ಟುಗೂಡದೆ ನೀರೆಲ್ಲ ಕೆಳಗೆ ಬಿದ್ದುಹೋಗತೊಡಗಿತು ಮತ್ತು ಭಾವಾವೇಶ ಉಂಟಾಗಿತ್ತು. ಎಷ್ಟೋ ಪ್ರಯತ್ನಿಸಿದರೂ ಅವರಿಗೆ ತರ್ಪಣ ನೀಡಲು ಆಗಲಿಲ್ಲ. ತುಂಬ ದುಃಖದಿಂದ ತಮ್ಮ ಅಸಮರ್ಥತೆಯನ್ನು ತಾಯಿಗೆ ನಿವೇದಿಸಿಕೊಂಡರು. ಆಧ್ಯಾತ್ಮಿಕ ಉನ್ನತಿಯನ್ನು ಮುಟ್ಟಿದ ಮೇಲೆ ತಾನಾಗಿಯೇ ಕರ್ಮಗಳೆಲ್ಲ ಬಿಟ್ಟುಹೋಗುವುದರಿಂದ ಈ ರೀತಿ ಆಗುವುದೆಂದು ಮುಂದೆ ಒಬ್ಬ ಪಂಡಿತನಿಂದ ತಿಳಿದರು. ಅಂಥ ವ್ಯಕ್ತಿ ಶಾಸ್ತ್ರವಿಹಿತ ಕರ್ಮಗಳನ್ನು ಮಾಡದಿದ್ದರೆ ಯಾವ ದೋಷವೂ ಇಲ್ಲ.

15. ತಾಯಿಯ ಮೃತ್ಯುವಿಗೆ ಒಂದು ವರ್ಷಕ್ಕೆ ಮುಂಚೆ ಶ್ರೀರಾಮಕೃಷ್ಣರ ಜೀವನದಲ್ಲಿ ಒಂದು ವಿಶೇಷ ಘಟನೆ ಸಂಭವಿಸಿತು. ೧೮೭೫ರ ಮಾರ್ಚ್ ತಿಂಗಳಲ್ಲಿ ಅವರ ಮನಸ್ಸಿನಲ್ಲಿ ಒಂದು ಆಶೆ ಅಂಕುರಿಸಿತು—ಬ್ರಹ್ಮಸಮಾಜದ ನೇತಾರನಾದ ಕೇಶವಚಂದ್ರ ಸೇನನನ್ನು ಭೇಟಿಯಾಗಬೇಕು ಎಂದು. ಅವರು ಈ ವಿಷಯದಲ್ಲಿ ಶ್ರೀಜಗನ್ಮಾತೆಯ ಸೂಚನೆಯನ್ನು ಪಡೆದಿದ್ದರು. ಆಗ ಕೇಶವಚಂದ್ರನು ಕಲಕತ್ತೆಯ ಉತ್ತರಕ್ಕೆ ಕೆಲವು ಮೈಲಿ ದೂರದಲ್ಲಿರುವ ಬೇಲಘೊರಿಯ ಎಂಬ ಸ್ಥಾನದಲ್ಲಿದ್ದ ಜಯಗೋಪಾಲಸೇನನ ತೋಟದ ಮನೆಯಲ್ಲಿ ಶಿಷ್ಯ ಸಮೇತನಾಗಿ ತಂಗಿದ್ದನು. ಅಲ್ಲಿ ಅವನು ಸಾಧನೆ ಭಜನೆಗಳಲ್ಲಿ ನಿರತನಾಗಿದ್ದನು. ಶ್ರೀರಾಮಕೃಷ್ಣರು ಹೃದಯನನ್ನು ಜತೆ ಕರೆದುಕೊಂಡು ಅಲ್ಲಿಗೆ ಹೋದರು. ಕ್ಯಾಪ್ಟನ್ ವಿಶ್ವನಾಥನ ಗಾಡಿಯಲ್ಲಿ ಅವರು ಅಲ್ಲಿಗೆ ಹೋಗಿದ್ದರು. ಮಧ್ಯಾಹ್ನ ಒಂದು ಗಂಟೆಯ ಹೊತ್ತಿಗೆ ಅವರು ಅಲ್ಲಿಗೆ ತಲುಪಿದ್ದರು. ಅವರು ಅಂದು ಕೆಂಪು ಅಂಚಿನ ಪಂಚೆಯನ್ನು ಉಟ್ಟಿದ್ದರು. ಪಂಚೆಯ ತುದಿ ಭಾಗವನ್ನು ಹೆಗಲಮೇಲೆ ಹಾಕಿಕೊಂಡಿದ್ದರು.

16. ಹೃದಯನು ಗಾಡಿಯಿಂದ ಕೆಳಗಿಳಿದನು. ಕೇಶವಚಂದ್ರನು ತೋಟದಲ್ಲಿದ್ದ ಕೊಳದ ದಂಡೆಯ ಮೇಲೆ ತನ್ನ ಸಹಚರರೊಡನೆ ಕುಳಿತಿದ್ದನು. ಹೃದಯನು ಬಂದು "ನನ್ನ ಮಾವನವರು ದೊಡ್ಡ ಭಕ್ತರು. ಹರಿನಾಮವನ್ನು ಕೇಳುವುದೆಂದರೆ ತುಂಬ ಇಷ್ಟ. ಕೇಳುತ್ತ ಕೇಳುತ್ತ ಭಾವಸಮಾಧಿಯನ್ನು ಪಡೆಯುತ್ತಾರೆ. ನೀವು ಶ್ರೇಷ್ಠ ಭಗವದ್ಭಕ್ತರೆಂದು ಅವರು ಕೇಳಿರುವರು. ನಿಮ್ಮ ಬಾಯಿಂದ ಭಗವದಾಲಾಪವನ್ನು ಕೇಳಲು ಬಂದಿರುವರು. ನೀವು ಒಪ್ಪಿದರೆ ಅವರನ್ನು ಇಲ್ಲಿಗೆ ಕರೆದುಕೊಂಡು ಬರುತ್ತೇನೆ." ಕೇಶವನು ಒಪ್ಪಿಗೆಯಿತ್ತ. ಹೃದಯನು ಶ್ರೀರಾಮಕೃಷ್ಣನನ್ನು ಗಾಡಿಯಿಂದ ಕೆಳಗಿಳಿಸಿ ಕರೆದುಕೊಂಡುಹೋದನು. ಕೇಶವ ಮಿತ್ರರು ಅಷ್ಟರವರೆಗೂ ಅವರನ್ನು ನೋಡಲು ತುಂಬ ಉತ್ಸುಕರಾಗಿದ್ದರು. ಆದರೆ ನೋಡಿದ ಮೇಲೆ ಅವರ ಉತ್ಸಾಹ ಕುಂದಿತು. ಏಕೆಂದರೆ ಅವರು ತುಂಬ ಸಾಮಾನ್ಯ ವ್ಯಕ್ತಿಯಂತೆ ಕಂಡರು.

17. ಶ್ರೀರಾಮಕೃಷ್ಣರು ಕೇಶವನ ಹತ್ತಿರ ಬಂದು ಕೇಳಿದರು : ''ಮಹನೀಯರೆ, ನೀವೆಲ್ಲ ಭಗವದ್ದರ್ಶನವನ್ನು ಪಡೆದವರೆಂದು ಕೇಳಿದ್ದೇನೆ. ಆ ದರ್ಶನ ಎಂಥಾದ್ದು ಎಂದು ತಿಳಿಯುವ ಉತ್ಸುಕತೆ ನನಗೆ. ಆದ್ದರಿಂದಲೇ ನಾನು ನಿಮ್ಮೆಡೆಗೆ ಬಂದಿದ್ದೇನೆ.'' ಹೀಗೆ ಸಂಭಾಷಣೆ ಪ್ರಾರಂಭವಾಯಿತು. ಶ್ರೀರಾಮಕೃಷ್ಣರ ಪ್ರಶ್ನೆಗೆ ಕೇಶವನು ಏನು ಉತ್ತರ ಕೊಟ್ಟನೊ ತಿಳಿಯದು. ಆದರೆ ಸ್ವಲ್ಪಹೊತ್ತಿನ ನಂತರ ಶ್ರೀರಾಮಕೃಷ್ಣರು ರಾಮಪ್ರಸಾದನ ಹಾಡನ್ನು ಹಾಡಿದರು : ''ಕಾಳಿ ಹೇಗಿರುವಳೆಂದು ಯಾರಿಗೆ ಗೊತ್ತು, ಓ ಮನಸ್ಸೆ ! ಷಡ್ದರ್ಶನಗಳನ್ನು ಓದಿದರೂ ತಿಳಿಯದು.'' ಈ ಹಾಡನ್ನು ಹೇಳುತ್ತಾ ಅವರು ಸಮಾಧಿಸ್ಥರಾಗಿದ್ದರೆಂದು ಹೃದಯನು ಹೇಳುತ್ತಾನೆ. ಕೇಶವಾದಿಗಳು ಅವರ ಭಾವಾವೇಶವನ್ನು ನೋಡಿ ಅದು ಆಧ್ಯಾತ್ಮಿಕ ಉಚ್ಚಾವಸ್ಥೆಯೆಂದು ಭಾವಿಸಲಿಲ್ಲ, ಸೋಗು ಹಾಕುತ್ತಿರುವರು ಅಥವಾ ಬುದ್ಧಿಭ್ರಮಣೆಯ ಪರಿಣಾಮವಿರಬಹುದು ಎಂದು ಊಹಿಸಿದರು. ಅವರನ್ನು ಸಮಾಧಿಯಿಂದ ಕೆಳಗಿಳಿಸಲು ಅಂದು ಹೃದಯನು ಪ್ರಣವ ಮಂತ್ರವನ್ನು ಪಠಿಸಿದನು. ಅದನ್ನು ಕೇಳುತ್ತ ಶ್ರೀರಾಮಕೃಷ್ಣರ ಮುಖಮಂಡಲವು ಮಧುರ ಹಾಸ್ಯದಿಂದ ಶೋಭಿಸತೊಡಗಿತು. ಈಗ ಶ್ರೀರಾಮಕೃಷ್ಣರು ಗಂಭೀರ ಆಧ್ಯಾತ್ಮಿಕ ವಿಚಾರವನ್ನು ಹೇಳತೊಡಗಿದರು. ಸಾಮಾನ್ಯ ಉದಾಹರಣೆಗಳ ಮೂಲಕ ಅತ್ಯಂತ ಸರಳ ರೀತಿಯಲ್ಲಿ ಗಹನ ವಿಚಾರಗಳನ್ನು ಎಂಥ ಅಧಿಕಾರವಾಣಿಯಿಂದ ಹೇಳುದ್ದತ್ತಿರೇದರೆ ಎಲ್ಲರೂ ಮಂತ್ರಮುಗ್ಧರಾಗಿ ಕೇಳತೊಡಗಿದರು. ಸ್ನಾನ ಊಟದ ಸಮಯವೆಲ್ಲ ಕಳೆದುಹೋಯಿತು, ಸಂಜೆ ಉಪಾಸನೆಯ ವೇಳೆ ಸಂನಿಹಿತವಾಯಿತು. ಯಾರಿಗೂ ಕಾಲದ ಅರಿವೇ ಇಲ್ಲ. ಅವರ ಸ್ಥಿತಿಯನ್ನು ನೋಡಿ ರಾಮಕೃಷ್ಣರು ಹೇಳಿದರು : ''ಗೋವುಗಳ ಹಿಂಡಿನ ಮಧ್ಯೆ ಬೇರೆಯಾವುದಾದರೂ ಪ್ರಾಣಿ ಬಂದರೆ ಅವು ಅದನ್ನು ಕೊಂಬಿನಿಂದ ತಳ್ಳಿ ಓಡಿಸುವುವು. ಆದರೆ ಮತ್ತೊಂದು ಹಸುವು ಬಂದರೆ ಅದರ ದೇಹವನ್ನು ನೆಕ್ಕತೊಡಗುವುವು. ಅದು ಅವುಗಳೊಡನೆ ಒಂದಾಗಿಬಿಡುವುದು. ಇಂದು ನಮಗೂ ಹಾಗೆಯೇ ಆಗಿದೆ.'' ಅನಂತರ ಕೇಶವನನ್ನು ಸಂಬೋಧಿಸಿ ಶ್ರೀರಾಮಕೃಷ್ಣರು ಹೇಳಿದರು : ''ನಿನ್ನ ಬಾಲ ಬಿದ್ದುಹೋಗಿದೆ.'' ಅವರ ಅರ್ಥ ತಿಳಿಯದೆ ಕೇಶವನ ಅನುಯಾಯಿಗಳು ಕುಪಿತರಾದರು. ಆಗ ಶ್ರೀರಾಮಕೃಷ್ಣರು ಅದರ ಅರ್ಥವನ್ನು ವಿವರಿಸಿದರು : ''ನೋಡು, ಕಪ್ಪೆಯ ಮರಿಗೆ ಬಾಲ ಇರುವವರೆಗೂ ಅದು ನೀರಿನಲ್ಲಿ ಮಾತ್ರ ಇರುವುದು, ಭೂಮಿಯ ಮೇಲೆ ಬರಲಾಗುವುದಿಲ್ಲ. ಆದರೆ ಬಾಲ ಬಿದ್ದುಹೋದಮೇಲೆ ಅದು ನೀರಿನಲ್ಲಿಯೂ ಇರಬಹುದು, ನೆಲದಮೇಲೂ ಇರಬಹುದು. ಹಾಗೆಯೇ ಮನುಷ್ಯನಿಗೆ ಅಜ್ಞಾನದ ಬಾಲ ಇರುವವರೆಗೂ ಅವನು ಪ್ರಪಂಚದ ನೀರಿನಲ್ಲಿಯೇ ಇರುತ್ತಾನೆ. ಅದು ಬಿದ್ದುಹೋದಮೇಲೆ ಅವನು ಮುಕ್ತವಾಗಿ ಪ್ರಪಂಚದಲ್ಲಿಯೂ ವಿಹರಿಸಬಹುದು, ಸಚ್ಚಿದಾನಂದದಲ್ಲಿಯೂ ನೆಲೆಸಬಹುದು. ಕೇಶವ, ನಿನ್ನ ಮನಸ್ಸು ಈಗ ಯಾವ ಸ್ಥಿತಿಯನ್ನು ಮುಟ್ಟಿದೆಯೆಂದರೆ ನೀನೀಗ ಪ್ರಪಂಚದಲ್ಲಿಯೂ ಇರಬಹುದು, ಸಚ್ಚಿದಾನಂದದಲ್ಲಿಯೂ ಇರಬಹುದು.'' ಈ ವಿವರಣೆಯನ್ನು ಕೇಳಿ ಎಲ್ಲರೂ ಸಂತುಷ್ಟರಾದರು.

18. ಶ್ರೀರಾಮಕೃಷ್ಣರ ದರ್ಶನದಿಂದ ಕೇಶವನು ತುಂಬ ಆಕರ್ಷಿತನಾದನು. ಮುಂದೆ ಅವನು ಆಗಾಗ ದಕ್ಷಿಣೇಶ್ವರಕ್ಕೆ ಅವರ ಪುಣ್ಯದರ್ಶನಕ್ಕಾಗಿ ಹೋಗುತ್ತಿದ್ದನು. ಕೆಲವೊಮ್ಮೆ ಕಲಕತ್ತೆಯ ತನ್ನ ಕಮಲ ಕುಟೀರಕ್ಕೆ ಅವರನ್ನು ಕರೆದುಕೊಂಡು ಹೋಗುತ್ತಿದ್ದನು. ಬರಬರುತ್ತ ಅವರಿಬ್ಬರ ಸಂಬಂಧ ಎಷ್ಟೊಂದು ನಿಕಟವಾಯಿತೆಂದರೆ ಅನೇಕ ದಿನಗಳು ಪರಸ್ಪರರು ಭೇಟಿಯಾಗದಿದ್ದರೆ ಇಬ್ಬರಿಗೂ ತುಂಬ ಬೇಸರವಾಗುತ್ತಿತ್ತು. ಆಗ ಶ್ರೀ ರಾಮಕೃಷ್ಣರೇ ಕಲಕತ್ತೆಗೆ ಹೋಗಿ ಕೇಶವನನ್ನು ಕಾಣುತ್ತಿದ್ದರು, ಇಲ್ಲವೇ ಅವನೇ ದಕ್ಷಿಣೇಶ್ವರಕ್ಕೆ ಬರುತ್ತಿದ್ದ. ಇಷ್ಟೇ ಅಲ್ಲದೆ ಬ್ರಹ್ಮಸಮಾಜದ ಉತ್ಸವಕ್ಕೆ ಪ್ರತಿ ವರ್ಷವೂ ಶ್ರೀರಾಮಕೃಷ್ಣರನ್ನು ಕರೆದುಕೊಂಡು ಹೋಗುತ್ತಿದ್ದ. ಅವರ ಭಗವದ್ವಿಷಯು ವನ್ನು ಕೇಳುವುದು ಉತ್ಸವದ ಒಂದು ಅಂಗವಾಗಿ ಹೋಗಿತ್ತು. ಅನೇಕ ಸಂದರ್ಭಗಳಲ್ಲಿ ಕೇಶವನು ತನ್ನ ಅನುಯಾಯಿಗಳೊಡನೆ ಸ್ಟೀಮರಿನಲ್ಲಿ ದಕ್ಷಿಣೇಶ್ವರಕ್ಕೆ ಬಂದು ಅವರನ್ನು ಅದರಲ್ಲಿ ಕರೆದುಕೊಂಡು ಹೋಗುತ್ತಿದ್ದ.

19. ಶಾಸ್ತ್ರವಾಕ್ಯಕ್ಕೆ ಮನ್ನಣೆಯಿತ್ತು ಕೇಶವನು ದಕ್ಷಿಣೇಶ್ವರಕ್ಕೆ ಬರುವಾಗ ಎಂದೂ ಬರಿಗೈಯಲ್ಲಿ ಬರುತ್ತಿರಲಿಲ್ಲ. ಏನಾದರೂ ಹಣ್ಣು-ಹಂಪಲುಗಳನ್ನು ತರುತ್ತಿದ್ದ. ಭಕ್ತಿಪೂರ್ವಕವಾಗಿ ಅವನ್ನು ಅವರ ಪಾದದಲ್ಲಿರಿಸಿ ಶಿಷ್ಯನಂತೆ ಕೆಳಗೆ ಕುಳಿತು ಅವರ ಮಾತನ್ನು ಕೇಳುತ್ತಿದ್ದ. ಒಮ್ಮೆ ಶ್ರೀರಾಮಕೃಷ್ಣರು ಹಾಸ್ಯಕ್ಕಾಗಿ ಅವನನ್ನು ಕೇಳಿದರು : "ಕೇಶವ, ನಿನ್ನ ಉಪನ್ಯಾಸದಿಂದ ಅನೇಕರನ್ನು ಮುಗ್ಧಗೊಳಿಸುತ್ತೀಯೆ. ನನಗೆ ಏನಾದರೂ ಹೇಳು !" ಕೇಶವನು ನಮ್ರತೆಯಿಂದ ಹೇಳಿದ : "ಸ್ವಾಮೀ, ನಾನು ಕಬ್ಬಿಣದ ಅಂಗಡಿಗೆ ಸೂಜಿ ಮಾರಲು ಹೋಗಬೇಕೆ ? ನೀವೇ ಹೇಳಿ, ನಾನು ಕೇಳುತ್ತೇನೆ. ನಿಮ್ಮ ಕೆಲವು ಮಾತನ್ನು ಜನರಿಗೆ ಹೇಳಿದರೆ ಅವರು ಮುಗ್ಧರಾಗಿ ಕೇಳುತ್ತಾರೆ."

20. ದಕ್ಷಿಣೇಶ್ವರದಲ್ಲಿ ಒಮ್ಮೆ ಶ್ರೀ ರಾಮಕೃಷ್ಣರು ಕೇಶವಚಂದ್ರನಿಗೆ ಹೇಳಿದರು: "ಬ್ರಹ್ಮನನ್ನು ಒಪ್ಪಿಕೊಂಡರೆ ಅದರೊಡನೆ ಬ್ರಹ್ಮಶಕ್ತಿಯನ್ನು ಒಪ್ಪಿಕೊಳ್ಳಬೇಕಾಗುವುದು. ಬ್ರಹ್ಮ ಹಾಗೂ ಬ್ರಹ್ಮಶಕ್ತಿ ಇವೆರಡರಲ್ಲಿ ಭೇದವಿಲ್ಲ." ಕೇಶವನು ಈ ಅಭಿಪ್ರಾಯವನ್ನು ಸ್ವೀಕರಿಸಿದನು. ಶ್ರೀರಾಮಕೃಷ್ಣರು ಮುಂದುವರಿಸಿದರು : "ಬ್ರಹ್ಮ ಮತ್ತು ಬ್ರಹ್ಮಶಕ್ತಿ ಅಭಿನ್ನವಾಗಿರುವಂತೆ ಭಾಗವತ ಭಕ್ತ ಭಗವಾನ್ ಈ ಮೂರರಲ್ಲಿಯೂ ಭೇದವಿಲ್ಲ-ಒಂದೇ ವಸ್ತುವಿನ ವಿವಿಧರೂಪಗಳು" ಕೇಶವನು ಅವರ ಈ ಮಾತಿಗೂ ಒಪ್ಪಿಗೆಯಿತ್ತನು. ಅನಂತರ ಶ್ರೀರಾಮಕೃಷ್ಣರು ಹೇಳಿದರು : "ಗುರು, ಬ್ರಹ್ಮ ಮತ್ತು ವೈಷ್ಣವ-ಈ ಮೂರೂ ಒಂದೇ. ಈಗ ಈ ವಿಷಯವನ್ನು ತಿಳಿಸಿಕೊಡುತ್ತಿದ್ದೇನೆ." ಇದಕ್ಕೆ ಕೇಶವನು ಅತ್ಯಂತ ನಮ್ರತೆಯಿಂದ ಹೇಳಿದನು : "ಮಹಾಶಯರೆ, ನೀವು ಮೊದಲು ಏನು ಹೇಳಿದಿರೊ ಅದಕ್ಕಿಂತ ಮುಂದೆ ಹೋಗಲು ನನಗೆ ಸಾಧ್ಯವಾಗದ ಮಾತು. ಆದ್ದರಿಂದ ಈ ಮಾತನ್ನು ಮುಂದುವರಿಸಿ ಪ್ರಯೋಜನವಿಲ್ಲ." ಶ್ರೀರಾಮಕೃಷ್ಣರು ಸ್ವಲ್ಪ ನಕ್ಕು ನುಡಿದರು : "ಒಳ್ಳೆಯದು, ಈಗ ಇಷ್ಟೇ ಸಾಕು." ಪಾಶ್ಚಾತ್ಯ ಭಾವನೆಗಳಿಂದ ಪ್ರಭಾವಿತವಾಗಿದ್ದ ಕೇಶವನ ಮನಸ್ಸು ಕ್ರಮೇಣ ಶ್ರೀರಾಮಕೃಷ್ಣರ

ಪ್ರಭಾವಕ್ಕೆ ಒಳಗಾಯಿತು ಇದರಿಂದಾಗಿ ಅವನ ಜೀವನದಲ್ಲಿ ಗಮನಾರ್ಹ ಪರಿವರ್ತನೆ ಯುಂಟಾಯಿತು. ಮತ್ತು ಅವನಿಗೆ ವೈದಿಕ ಧರ್ಮದಲ್ಲಿ ಹೆಚ್ಚು ಆಸಕ್ತಿ ಉಂಟಾಯಿತು. ಶ್ರೀರಾಮಕೃಷ್ಣರ ಸಂಗಲಾಭವನ್ನು ಪಡೆದ ಮೇಲೆ ಅವನ ಮತಸಿದ್ಧಾಂತಗಳಲ್ಲಿಯೂ ಸಾಕಷ್ಟು ಬದಲಾವಣೆಗಳು ಉಂಟಾದವು.

21. ವಿಪತ್ತಿಗೀಡಾಗದೆ ಮನುಷ್ಯನು ಸಂಸಾರದಿಂದ ವಿಮುಖನಾಗಿ ಭಗವಂತನೆ ಸರ್ವಸ್ವವೆಂದು ಅವನನ್ನು ಸಂಪೂರ್ಣ ಆಶ್ರಯಿಸಲಾರ. ಕೇಶವನೂ ದೊಡ್ಡ ವಿಪತ್ತಿ ಗೀಡಾಗಬೇಕಾಯಿತು. ಕೂಚ ಬಿಹಾರದ ರಾಜನಿಗೆ ತನ್ನ ಪುತ್ರಿಯನ್ನು ಕೊಟ್ಟು ವಿವಾಹ ಮಾಡಿಸಿದುದೇ ಈ ವಿಪತ್ತಿಗೆ ಮೂಲಕಾರಣವಾಯಿತು. ಈ ವಿವಾಹವನ್ನೇ ನೆವ ವಾಗಿಟ್ಟುಕೊಂಡು ಬ್ರಹ್ಮಸಮಾಜದಲ್ಲಿ ಒಂದು ದೊಡ್ಡ ಆಂದೋಲನವುಂಟಾಗಿ ಅದು ಎರಡು ಭಾಗವಾಗಿ ಒಡೆಯಿತು. ಅವನ ವಿರೋಧಿಗಳು 'ಸಾಧಾರಣ ಸಮಾಜ' ವೆಂಬ ತಮ್ಮದೇ ಪ್ರತ್ಯೇಕವಾದ ಸಂಘವನ್ನು ಸ್ಥಾಪಿಸಿದರು. ಒಂದು ಸಾಮಾನ್ಯ ವಿಷಯವನ್ನು ತೆಗೆದುಕೊಂಡು ಎರಡು ಪಕ್ಷದವರೂ ಇಷ್ಟೊಂದು ಕಚ್ಚಾಡುವುದನ್ನು ಕೇಳಿ ಶ್ರೀರಾಮ ಕೃಷ್ಣರು ಬಹಳವಾಗಿ ನೊಂದರು. ವಧುವಿಗೆ ವಿವಾಹ ಮಾಡುವುದಕ್ಕೆ ಬ್ರಹ್ಮಸಮಾಜ ದವರು ಒಂದು ವಯಸ್ಸನ್ನು ನಿಗದಿಮಾಡಿದ್ದರು. (ಆ ನಿಯಮವನ್ನು ಮೀರಿದುದೇ ಕೇಶವನು ಮಾಡಿದ ತಪ್ಪು). ಇದರ ಸಂಬಂಧವಾಗಿ ಶ್ರೀರಾಮಕೃಷ್ಣರು ಹೇಳಿದರು : "ಜನ್ಮ, ಮೃತ್ಯು, ವಿವಾಹ ಇವು ಈಶ್ವರೇಚ್ಛೆಯಂತೆ ನಡೆಯುವಂತಹುದು. ಇವುಗಳನ್ನು ಕಠಿಣ ನಿಯಮಗಳಿಗೆ ಒಳಪಡಿಸುವುದು ಸರಿಯಿಲ್ಲ. ಕೇಶವನು ಏಕೆ ಅಂಥ ನಿಯಮ ಮಾಡಬೇಕಿತ್ತು ?" ಈ ವಿವಾಹದ ಸಂಬಂಧವಾಗಿ ಯಾರಾದರೂ ಕೇಶವನನ್ನು ನಿಂದಿ ಸಿದರೆ ಶ್ರೀರಾಮಕೃಷ್ಣರು ಹೇಳುತ್ತಿದ್ದರು : "ಕೇಶವನು ಅದರಲ್ಲಿ ಅಂಥ ನಿಂದಾಸ್ಪದ ವಾದುದನ್ನು ಏನು ಮಾಡಿರುವನು ? ಕೇಶವನು ಸಂಸಾರಿ. ತನ್ನ ಪುತ್ರ-ಪುತ್ರಿಯರಿಗೆ ಒಳ್ಳೆಯದಾಗುವಂತೆ ಅವನು ಮಾಡಬೇಡವೆ ? ಸಂಸಾರೀ ವ್ಯಕ್ತಿಯು ಧರ್ಮಬದ್ಧವಾಗಿ ಇದನ್ನು ಮಾಡಿದರೆ ಅದರಲ್ಲಿ ನಿಂದಿಸುವುದೇನಿದೆ ? ಅವನು ಧರ್ಮ ವಿರುದ್ಧವಾದುದನ್ನು ಏನೂ ಮಾಡಲಿಲ್ಲ-ತಂದೆಯಾಗಿ ತನ್ನ ಕರ್ತವ್ಯ ನಿರ್ವಹಿಸಿದ ಅಷ್ಟೇ." ಹೀಗೆ ಶ್ರೀರಾಮ ಕೃಷ್ಣರು ಧರ್ಮದ ದೃಷ್ಟಿಯಿಂದ ಕೇಶವನನ್ನು ಯಾವಾಗಲೂ ಸಮರ್ಥಿಸುತ್ತಿದ್ದರು. ಏನೇ ಆದರೂ ಈ ಒಂದು ದೊಡ್ಡ ಆಘಾತದಿಂದ ಕೇಶವನು ಅಂತರ್ಮುಖಿಯಾಗಿ ತನ್ನ ಆಧ್ಯಾತ್ಮಿಕ ಉನ್ನತಿಗಾಗಿ ಹೆಚ್ಚು ಶ್ರಮಿಸತೊಡಗಿದನು.

22 ಕೇಶವನು ಎಷ್ಟಾದರೂ ಪಾಶ್ಚಾತ್ಯ ಭಾವನೆಗಳ ಪ್ರಭಾವಕ್ಕೆ ಒಳಪಟ್ಟವನು, ಶ್ರೀರಾಮಕೃಷ್ಣರ ಮೇಲೆ ಅಷ್ಟೊಂದು ಪ್ರೀತಿಯಿದ್ದರೂ ಅವರನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದನೇ ಎಂಬುದು ಸಂದೇಹ. ಒಂದು ಕಡೆ ಶ್ರೀರಾಮಕೃಷ್ಣರನ್ನು ಧರ್ಮಮೂರ್ತಿಯೆಂದು ಪರಿಗಣಿಸುತ್ತಿದ್ದನು. ಅವರನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಮನೆಯ ಎಲ್ಲ ಭಾಗವನ್ನೂ ತೋರಿಸಿ ಅವರು ಅವನ್ನೆಲ್ಲ ಆಶೀರ್ವದಿಸ ಬೇಕೆಂದು ಪ್ರಾರ್ಥಿಸುತ್ತಿದ್ದನು. ಅವರ ಪಾದ ಸ್ಪರ್ಶದಿಂದ ಆ ಸ್ಥಳಗಳೆಲ್ಲ ಪವಿತ್ರ

ವಾಗುವುದೆಂದು ಅವನು ನಂಬಿದ್ದನು. ತಾನು ಉಪಾಸನೆ ಮಾಡುವ ಸ್ಥಳಕ್ಕೆ ಅವರನ್ನು ಕರೆದುಕೊಂಡು ಹೋಗಿ ಅವರ ಪಾದಕ್ಕೆ ಪುಷ್ಪಾಂಜಲಿ ಅರ್ಪಿಸಿದ್ದನು. ದಕ್ಷಿಣೇಶ್ವರಕ್ಕೆ ಬಂದು "ನವವಿಧಾನಕ್ಕೆ ಜಯವಾಗಲಿ" ಎಂದು ಹೇಳುತ್ತ ಶ್ರೀರಾಮಕೃಷ್ಣರಿಗೆ ನಮಸ್ಕರಿಸುತ್ತಿದ್ದನು.

23. ಇನ್ನೊಂದು ಕಡೆ ಶ್ರೀರಾಮಕೃಷ್ಣರ ಭಾವನೆಯಾದ 'ಎಲ್ಲ ಧರ್ಮಗಳೂ ಸತ್ಯ–ಎಷ್ಟು ಮತಗಳೊ, ಅಷ್ಟು ಪಥಗಳು' ಎಂಬುದನ್ನು ಸರಿಯಾಗಿ ಗ್ರಹಿಸದೆ ಕೇಶವನು ಎಲ್ಲ ಧರ್ಮಗಳ ಸಾರಭಾಗವನ್ನು ತೆಗೆದುಕೊಂಡು 'ನವ ವಿಧಾನ'ವೆಂಬ ಹೆಸರಿನಲ್ಲಿ ತನ್ನದೇ ಒಂದು ಮತವನ್ನು ಪ್ರಾರಂಭಿಸಿದನು. ಶ್ರೀರಾಮಕೃಷ್ಣರ ಪರಿಚಯವಾಗಿ ಸ್ವಲ್ಪ ಕಾಲದನಂತರ ಇದನ್ನು ಅವನು ಪ್ರಾರಂಭಿಸಿದುದರಿಂದ ಶ್ರೀರಾಮಕೃಷ್ಣರ ಅಭಿಪ್ರಾಯ ವನ್ನು ಆಂಶಿಕವಾಗಿ ಸ್ವೀಕರಿಸಿದುದರ ಪರಿಣಾಮ ಎಂಬುದು ತಿಳಿದು ಬರುವುದು.

24. ಪಾಶ್ಚಾತ್ಯ ಭಾವನೆಗಳು ಮತ್ತು ನಾಗರೀಕತೆಯು ಪ್ರಬಲ ತರಂಗ ಭಾರತ ವನ್ನು ಆವರಿಸಿದಾಗ ಅನೇಕ ವಿಚಾರವಂತರು ಪ್ರಾಚ್ಯ ಮತ್ತು ಪಾಶ್ಚಾತ್ಯಗಳಲ್ಲಿ ಒಂದು ಸಾಮಂಜಸ್ಯವನ್ನು ಉಂಟುಮಾಡುವ ಪ್ರಯತ್ನದಲ್ಲಿ ತೊಡಗಿದರು. ಬಂಗಾಳದಲ್ಲಿ ರಾಮ ಮೋಹನರಾಯ್, ಮಹರ್ಷಿ ದೇವೇಂದ್ರನಾಥ ಮತ್ತು ಬ್ರಹ್ಮಾನಂದ, ಕೇಶವಚಂದ್ರ ಇವರುಗಳು ಇಂಥ ಪ್ರಯತ್ನ ಮಾಡಿದವರಲ್ಲಿ ಅಗ್ರಗಣ್ಯರು. ಭಾರತದ ಬೇರೆ ಭಾಗ ಗಳಲ್ಲಿಯೂ ಅನೇಕ ಮಹನೀಯರು ಇಂಥ ಪ್ರಯತ್ನ ಮಾಡಿದರು. ಆದರೆ ಶ್ರೀರಾಮ ಕೃಷ್ಣರು ಬರುವುದಕ್ಕೆ ಮುಂಚೆ ಯಾರಿಗೂ ಈ ಕಾರ್ಯವನ್ನು ಸಂಪೂರ್ಣ ತೃಪ್ತಿಕರ ವಾಗಿ ನೆರವೇರಿಸಲು ಸಾಧ್ಯವಾಗಲಿಲ್ಲ. ಶ್ರೀರಾಮಕೃಷ್ಣರು ಸಾಧನೆ ಮತ್ತು ಸಿದ್ಧಿಯ ಮೂಲಕ ಭಾರತದ ಎಲ್ಲ ಧಾರ್ಮಿಕ ಮತಗಳ ಪರಿಚಯವನ್ನು ಪಡೆದು ಭಾರತದ ಅವನತಿಗೆ ಧರ್ಮವು ಕಾರಣವಲ್ಲ ಎಂಬುದನ್ನು ಕಂಡುಕೊಂಡರು. ಭಾರತದ ಸಮಾಜ, ರೀತಿ ನೀತಿ ನಾಗರೀಕತೆ ಎಲ್ಲವೂ ಧರ್ಮವನ್ನೇ ಆಧರಿಸಿದ್ದು. ಇದರ ಮೂಲಕವೇ ಭಾರತ ಪ್ರಾಚೀನ ಕಾಲದಲ್ಲಿ ಗೌರವಾನ್ವಿತ ರಾಷ್ಟ್ರವಾಗಿತ್ತು–ಎಂಬುದನ್ನು ಅವರು ತೋರಿಸಿಕೊಟ್ಟರು. ಈಗಲೂ ಆ ಧರ್ಮವು ಜೀವಂತ ಶಕ್ತಿಯಾಗಿ ಉಳಿದಿದೆ, ಮತ್ತು ಅದನ್ನೇ ಆಲಂಬನವಾಗಿ ಇಟ್ಟುಕೊಂಡು ನಾವು ಪ್ರಯತ್ನಿಸಿದರೆ ಎಲ್ಲ ಕ್ಷೇತಗಳಲ್ಲಿಯೂ ಮುಂದುವರಿಯಬಹುದು, ಇಲ್ಲದಿದ್ದರೆ ಇಲ್ಲ. ಈ ಧರ್ಮವು ಮಾನವ ಮನಸ್ಸನ್ನು ಎಷ್ಟು ಉದಾರಗೊಳಿಸಬಲ್ಲದು ಎಂಬುದನ್ನು ಶ್ರೀರಾಮಕೃಷ್ಣರು ತಮ್ಮ ಜೀವನದಲ್ಲಿ ತೋರಿಸಿರುವರು. ಮುಂದೆ ಪಾಶ್ಚಾತ್ಯ ಭಾವನೆಗಳ ಪ್ರಭಾವಕ್ಕೆ ಒಳಪಟ್ಟಿದ್ದ ತಮ್ಮ ಶಿಷ್ಯರಿಗೆ, ವಿಶೇಷವಾಗಿ ಸ್ವಾಮಿ ವಿವೇಕಾನಂದರಿಗೆ, ಈ ಧರ್ಮದ ಉದಾರ ಭಾವನೆ ಗಳನ್ನು ನೀಡಿದರು. ಎಲ್ಲ ಕಾರ್ಯಗಳನ್ನೂ ಧರ್ಮದ ಮೂಲಕ ಮಾಡುವುದನ್ನು ಅವರಿಗೆ ಕಲಿಸಿಕೊಟ್ಟು ಭಾರತದ ರಾಷ್ಟ್ರೀಯ ಸಮಸ್ಯೆಗೆ ಒಂದು ಹೊಸ ಸಮಾಧಾನ ವನ್ನು ನೀಡಿದರು. ಎಲ್ಲ ಧರ್ಮಸಾಧನೆಗಳನ್ನು ಮಾಡುವುದರ ಮೂಲಕ ಪ್ರಪಂಚದ ಧರ್ಮವಿರೋಧವನ್ನು ಹೇಗೆ ನಿವಾರಿಸಬೇಕೆಂದು ತೋರಿಸಿಕೊಟ್ಟರು. ಭಾರತದ

ರಾಷ್ಟ್ರೀಯತೆಯು ಹಿಂದಿನ ಕಾಲದಿಂದಲೂ ಯಾವುದನ್ನು ಅವಲಂಬಿಸಿತ್ತು ಮತ್ತು ಮುಂದೆ ಯಾವುದನ್ನು ಅವಲಂಬಿಸಿರಬೇಕು ಎಂಬುದನ್ನು ತೋರಿಸಿಕೊಟ್ಟರು.

25. ಶ್ರೀರಾಮಕೃಷ್ಣರಿಗೆ ಕೇಶವನ ಮೇಲೆ ಎಂಥ ಆಳವಾದ ಪ್ರೀತಿಯಿತ್ತು ಎಂಬುದು ಅವನ ಸಾವು ಅವರ ಮೇಲೆ ಎಂಥ ಆಘಾತವನ್ನುಂಟುಮಾಡಿತ್ತು ಎಂಬುದರಿಂದ ತಿಳಿದುಬರುವುದು. ಕ್ರಿ. ಶ. ೧೮೮೪ರಲ್ಲಿ ಕೇಶವನು ದೇಹತ್ಯಾಗ ಮಾಡಿದನು. ಶ್ರೀರಾಮಕೃಷ್ಣರು ಹೇಳುತ್ತಿದ್ದರು : ''ಈ ವಾರ್ತೆಯನ್ನು ಕೇಳಿ ನನಗೆ ಮೂರು ದಿನ ಹಾಸಿಗೆಯಿಂದ ಮೇಲೇಳಲಾಗಿರಲಿಲ್ಲ. ನನ್ನ ಒಂದು ಅಂಗವೇ ಕಿತ್ತುಹೋದಂತೆ ನನಗನಿಸಿತ್ತು.''

26. ಕೇಶವನ ಪರಿಚಯುವಾದನಂತರ ಶ್ರೀರಾಮಕೃಷ್ಣರ ಜೀವನದಲ್ಲಿ ಇನ್ನೊಂದು ಘಟನೆ ಸಂಭವಿಸಿತು. ಶ್ರೀರಾಮಕೃಷ್ಣರಿಗೆ ಶ್ರೀಚೇತನ್ಯದೇವನ ನಗರ ಕೀರ್ತನೆಯ ದರ್ಶನ ಪಡೆಯಬೇಕೆಂಬ ಆಸೆಯುಂಟಾಯಿತು. ಶ್ರೀಜಗನ್ಮಾತೆಯು ಅವರ ಆಸೆಯನ್ನು ಈ ಕೆಳಗಿನಂತೆ ಪೂರ್ಣಗೊಳಿಸಿದರು. ಶ್ರೀರಾಮಕೃಷ್ಣರು ತಮ್ಮ ಕೋಣೆಯ ಮುಂದೆ ನಿಂತಿದ್ದರು. ಆಗ ಪಂಚವಟಿ ಕಡೆಯಿಂದ ಆ ಸಂಕೀರ್ತನೆಯ ತರಂಗ ಮುಂದಿನಿಂದ ಹಾದುಹೋಗಿ ದಕ್ಷಿಣೇಶ್ವರದ ತೋಟದ ವೃಕ್ಷಗಳ ಮಧ್ಯೆ ಲೀನವಾಗಿಹೋಯಿತು. ಶ್ರೀ ಗೌರಾಂಗನು ನಿತ್ಯಾನಂದ ಅದ್ವೈತಗೋಸ್ವಾಮಿ ಮುಂತಾದ ತನ್ನ ಅನುಯಾಯಿಗಳಿಂದ ಸುತ್ತುವರಿದು ಭಗವತ್ ಪ್ರೇಮದಲ್ಲಿ ಮತ್ತನಾಗಿ ಗಂಭೀರ ನಡೆಯಿಂದ ಮುಂದುವರಿಯುತ್ತಿರುವುದನ್ನು ಕಂಡರು. ಉಳಿದವರೆಲ್ಲ ಅವನ ಪ್ರೇಮದಲ್ಲಿಯೇ ತನ್ಮಯರಾಗಿ ಭಾವಾವೇಶದಿಂದ ನರ್ತಿಸುತ್ತ ತಮ್ಮ ಉಲ್ಲಾಸವನ್ನು ವ್ಯಕ್ತಪಡಿಸುತ್ತಿದ್ದರು. ಆ ಸಂಕೀರ್ತನೆಯಲ್ಲಿ ಎಷ್ಟೊಂದು ಜನರಿದ್ದರೆಂದರೆ ಆ ಜನಸಮೂಹಕ್ಕೆ ಕೊನೆಯೇ ಇಲ್ಲ ಎನಿಸುವಂತಿತ್ತು. ಆ ಸಂಕೀರ್ತನ ಗುಂಪಿನಲ್ಲಿದ್ದ ಕೆಲವು ವ್ಯಕ್ತಿಗಳ ಮುಖ ಪರಿಚಯ ಶ್ರೀರಾಮಕೃಷ್ಣರ ಸ್ಮೃತಿಪಟಲದಲ್ಲಿ ಉಳಿಯಿತು. ಮುಂದೆ ಅವರು ತಮ್ಮ ಭಕ್ತರಾಗಿ ಬಂದಮೇಲೆ ಶ್ರೀರಾಮಕೃಷ್ಣರು ಅವರುಗಳು ಪೂರ್ವಜನ್ಮದಲ್ಲಿ ಶ್ರೀಚೈತನ್ಯನ ಅನುಯಾಯಿಗಳಾಗಿದ್ದರೆಂದು ನಿಶ್ಚಯಿಸಿದರು.

27. ಈ ದರ್ಶನವಾದ ಸ್ವಲ್ಪ ಸಮಯದಲ್ಲಿ ಶ್ರೀರಾಮಕೃಷ್ಣರು ಕಾಮಾರಪುಕುರಕ್ಕೆ ಮತ್ತು ಹೃದಯನ ಊರಾದ ಶಿಹೋರಿಗೆ ಹೋಗಿದ್ದರು. ಶಿಹೋರಿನ ಹತ್ತಿರವೇ ಫುಲುಇ-ಶ್ಯಾಮಬಜಾರ್ ಎಂಬ ಊರಿದೆ. ಅಲ್ಲಿ ಅನೇಕ ವೈಷ್ಣವ ಭಕ್ತರು ನೆಲೆಸಿದ್ದರು ಅಲ್ಲಿ ಪ್ರತಿನಿತ್ಯ ಸಂಕೀರ್ತನೆ ನಡೆಯುತ್ತಿತ್ತು. ಅಲ್ಲಿಗೆ ಹೋಗಿ ಸಂಕೀರ್ತನೆ ಕೇಳಬೇಕೆಂದು ಶ್ರೀರಾಮಕೃಷ್ಣರಿಗೆ ಮನಸ್ಸಾಯಿತು. ಶ್ಯಾಮಬಜಾರ್ ಗ್ರಾಮದ ಪಕ್ಕದಲ್ಲೇ ಬೇಲ್‌ಟೇ ಎಂಬ ಗ್ರಾಮವಿದೆ. ಆ ಗ್ರಾಮದ ನಟವರ ಗೋಸ್ವಾಮಿಗೆ ಹಿಂದೆಯೇ ಶ್ರೀರಾಮಕೃಷ್ಣರ ಪರಿಚಯವಿತ್ತು. ತನ್ನ ಮನೆಗೆ ಬಂದು ಪಾದಧೂಳಿಯಿಂದ ಅದನ್ನು ಪವಿತ್ರಗೊಳಿಸಬೇಕೆಂದು ಅವರನ್ನು ಆಮಂತ್ರಿಸಿದ್ದನು. ಶ್ರೀರಾಮಕೃಷ್ಣರು ಈಗ ಹೃದಯನೊಡನೆ ಅಲ್ಲಿಗೆ ಹೋಗಿ ಏಳು ದಿನಗಳು ತಂಗಿದರು.

ಆ ಸಂದರ್ಭದಲ್ಲಿ ಶ್ಯಾಮಬಜಾರದ ಸಂಕೀರ್ತನೆಯನ್ನು ಕೇಳಿದರು. ಅಲ್ಲಿಯ ಈಶಾನ ಚಂದ್ರ ಮಲ್ಲಿಕನು ತನ್ನ ಮನೆಗೆ ಬಂದು ಸಂಕೀರ್ತನೆಯಲ್ಲಿ ಭಾಗವಹಿಸಬೇಕೆಂದು ಆದರ ದಿಂದ ಅವರನ್ನು ಆಹ್ವಾನಿಸಿದನು. ಸಂಕೀರ್ತನೆಯ ಸಂದರ್ಭದಲ್ಲಿ ಅವರ ಭಾವಾವೇಶ ವನ್ನು ನೋಡಿ ವೈಷ್ಣವ ಭಕ್ತರೆಲ್ಲ ಅವರೆಡೆಗೆ ಆಕರ್ಷಿತರಾದರು. ಊರಲ್ಲೆಲ್ಲ ಶ್ರೀ ರಾಮಕೃಷ್ಣರ ವಿಷಯ ಹರಡಿತ್ತು. ಅಷ್ಟೇ ಅಲ್ಲದೆ ರಾಮಜೀವನಪುರ,. ಕೃಷ್ಣಗಂಜ್ ಮುಂತಾದ ದೂರ ಹಳ್ಳಿಗಳಿಗೂ ಸುದ್ದಿ ಹರಡಿತು. ಕ್ರಮೇಣ ಆ ಎಲ್ಲ ಹಳ್ಳಿಗಳಿಂದ ಭಕ್ತರು ಗುಂಪು ಗುಂಪಾಗಿ ಬರತೊಡಗಿದರು. ಶ್ಯಾಮಬಜಾರ್ ಗ್ರಾಮವು ಜನ ಸಂದಣಿಯಿಂದ ತುಂಬಿಹೋಯಿತು ಮತ್ತು ಅಲ್ಲಿ ಹಗಲು ರಾತ್ರಿ ಸಂಕೀರ್ತನೆ ನಡೆ ಯಿತು. ಕ್ರಮೇಣ ಒಂದು ವದಂತಿ ಹಬ್ಬಿತು—ಒಬ್ಬ ಭಕ್ತನು ಈಗ ಮೃತಪಡು ತ್ತಾನೆ, ಮತ್ತೆ ಮರುಕ್ಷಣವೆ ಜೀವಂತಗೊಂಡು ಮೇಲೇಳುತ್ತಾನೆ ಎಂದು. ಆಗ ಶ್ರೀರಾಮಕೃಷ್ಣರನ್ನು ನೋಡಲು ಅತ್ಯಾತುರದಿಂದ ಕೆಲವರು ಮರವನ್ನು ಏರಿದರು, ಕೆಲವರು ಮನೆಯ ಮಾಡನ್ನು ಹತ್ತಿದರು. ಜನ ಆಹಾರ ನಿದ್ರೆಯನ್ನು ಮರೆತರು; ಹೀಗೆ ಮೂರುದಿನ ಆನಂದೋತ್ಸವ ನಡೆಯಿತು. ಜನರು ಶ್ರೀರಾಮಕೃಷ್ಣರನ್ನು ನೋಡಲು, ಅವರ ಪಾದಸ್ಪರ್ಶಮಾಡಲು ಉನ್ಮತ್ತರಾಗಿ ನಾ ಮುಂದು ತಾ ಮುಂದು ಎಂದು ನುಗ್ಗುತ್ತಿದ್ದರು. ಶ್ರೀರಾಮಕೃಷ್ಣರಿಗೆ ಸ್ನಾನ ಇತ್ಯಾದಿ ನಿತ್ಯಕರ್ಮಗಳಿಗೆ ಸಮಯವೇ ಸಿಗುತ್ತಿರಲಿಲ್ಲ. ಕೊನೆಗೆ ಹೃದಯನು ಗುಪ್ತವಾಗಿ ಶ್ರೀರಾಮಕೃಷ್ಣರನ್ನು ಕರೆದುಕೊಂಡು ಶಿಹೋರಿಗೆ ಹೋದನು. ಆಗ ಉತ್ಸವ ಕೊನೆಗೊಂಡಿತು. ಶ್ಯಾಮ ಬಜಾರ್ ಗ್ರಾಮದ ಈಶಾನ ಚೌಧರಿ, ನಟವರ ಗೋಸ್ವಾಮಿ, ಈಶಾನ ಮಲ್ಲಿಕ, ಶ್ರೀನಾಥ ಮಲ್ಲಿಕ ಮುಂತಾದವರು ಇಂದಿಗೂ ಈ ಘಟನೆಯನ್ನು ಕುರಿತು ಹೇಳುತ್ತಿರು ತ್ತಾರೆ. ಕೃಷ್ಣಗಂಜಿನ ಪ್ರಸಿದ್ಧ ಖೋಲ್‌ವಾದಕನಾದ ರಾಯಚರಣ ದಾಸನ ಪರಿಚಯ ವಾಯಿತು ಶ್ರೀರಾಮಕೃಷ್ಣರಿಗೆ. ಅವನ ಖೋಲ್‌ವಾದನವನ್ನು ಕೇಳಿದರೆ ಸಾಕು ಅವರಿಗೆ ಭಾವಾವೇಶವಾಗುತ್ತಿತ್ತು.

ಈ ಘಟನೆ ನಡೆದ ಸಮಯವನ್ನು ಈ ಕೆಳಗಿನಂತೆ ನಿರ್ಣಯಿಸಬಹುದು :

ಆಲಂಬಜಾರಿನ ಪ್ರಸಿದ್ಧ ವೈದ್ಯ ಮತ್ತು ಶ್ರೀರಾಮಕೃಷ್ಣರ ಪರಮ ಭಕ್ತ ಮಹೇಂದ್ರನಾಥ ಪಾಲನು ಕೇಶವನ ನಂತರ ಶ್ರೀರಾಮಕೃಷ್ಣರ ಪ್ರಥಮದರ್ಶನವನ್ನು ಪಡೆದನು. ಅವನು ಅವರನ್ನು ಪ್ರಥಮಬಾರಿಗೆ ಭೇಟಿಯಾಗಲು ಹೋದಾಗ ಅವರು ಈ ಘಟನೆಯಾಗಿ ಕೆಲವೇ ದಿನಗಳಿಗೆ ಮುಂಚೆ ಶಿಹೋರಿನಿಂದ ದಕ್ಷಿಣೇಶ್ವರಕ್ಕೆ ಹಿಂದಿರುಗಿ ದ್ದರು ಎಂದು ಅವನು ನಮಗೆ ಹೇಳಿರುವನು. ಶ್ರೀರಾಮಕೃಷ್ಣರು ಅಂದು ಅವನಿಗೆ ಫುಲುಇ-ಶ್ಯಾಮಬಜಾರ್‌ನಲ್ಲಿ ನಡೆದ ಘಟನೆಯನ್ನು ವಿವರಿಸಿ ಹೇಳಿದ್ದರು.

ಸ್ವಾಮಿ ಯೋಗಾನಂದರ ಮನೆ ದಕ್ಷಿಣೇಶ್ವರದ ಹತ್ತಿರವೇ ಇತ್ತು. ಆದ್ದರಿಂದ ಅವರೊಬ್ಬರನ್ನು ಬಿಟ್ಟರೆ, ಶ್ರೀರಾಮಕೃಷ್ಣರ ಅಂತರಂಗ ಭಕ್ತರು ೧೮೭೯ ರಿಂದ ಬರತೊಡಗಿದರು ಎನ್ನಬಹುದು. ಸ್ವಾಮಿ ವಿವೇಕಾನಂದರು ೧೮೮೧ರಲ್ಲಿ ಬಂದರು

ಅದೇ ವರ್ಷ ಜಗದಂಬಾ ದಾಸಿಯು ತೀರಿಕೊಂಡಳು. ಇದಾದ ಆರು ತಿಂಗಳಲ್ಲಿ ಹೃದಯನು ಮೂರ್ಖತನದಿಂದ ಮಥುರಬಾಬುವಿನ ಅಲ್ಪ ವಯಸ್ಸಿನ ಮೊಮ್ಮಗಳ ಪಾದಪೂಜೆ (ಕುಮಾರಿ ಪೂಜೆ) ಮಾಡಿದ. ಹುಡುಗಿಯ ತಂದೆ ಇದರಿಂದ ತನಗೆ ದೋಷವುಂಟಾಗಬಹುದೆಂಬ ಶಂಕೆಯಿಂದ ಕೋಪಗೊಂಡು ಹೃದಯನನ್ನು ಮಂದಿರದಿಂದ ಕಳುಹಿಸಿಬಿಟ್ಟನು.

ಭಾಗ ಮೂರು

ಗುರುಭಾವ ಪೂರ್ವಾರ್ಧ

ಮುನ್ನುಡಿ

ಶ್ರೀರಾಮಕೃಷ್ಣರ ಜೀವನದಲ್ಲಿ ಈಗ ಗುರುಭಾವ ಪ್ರಕಾಶಗೊಂಡಿತು. ಅವರ ಸಾಧನೆಯ ಸಮಯದಿಂದ ಹಿಡಿದು ಅವರು ಸಾರ್ವಜನಿಕವಾಗಿ ಪ್ರಸಿದ್ಧಿಯನ್ನು ಪಡೆಯುವವರೆಗಿನ ಘಟನೆಗಳನ್ನು ಈ ಭಾಗದಲ್ಲಿ ನಿರೂಪಿಸಲಾಗಿದೆ. ಕೇವಲ ಘಟನೆಗಳು ಮತ್ತು ಅವರು ಈ ಸಮಯದಲ್ಲಿ ಎಸಗಿದ ಕಾರ್ಯಗಳು—ಇವಷ್ಟನ್ನೇ ನಿರೂಪಿಸಿ ನಾವು ಸುಮ್ಮನಾಗುವುದಿಲ್ಲ. ಯಾವ ಮಾನಸಿಕ ಭಾವದ ಮೂಲಕ, ಯಾವ ಉದ್ದೇಶವನ್ನು ಇಟ್ಟುಕೊಂಡು ಅವರು ಆ ಕಾರ್ಯಗಳನ್ನು ಸಾಧಿಸಿದರು ಎಂಬುದನ್ನೂ ಇಲ್ಲಿ ವಿವರಿಸುವೆವು. ಏಕೆಂದರೆ, ದೇಹ ಮನಸ್ಸುಗಳ ಸಂಕೀರ್ಣವಾದ ಮಾನವನ ಜೀವನೇತಿಹಾಸವು ಅವನ ಕೇವಲ ಬಾಹ್ಯ ಕ್ರಿಯಾಕಲಾಪಗಳನ್ನು ಮಾತ್ರ ನೋಡಿದರೆ ತಿಳಿಯಲಾರದು. ಜಡವಾದಿಗಳಾದ ಪಾಶ್ಚಾತ್ಯರು ಜೀವನವನ್ನು ಮತ್ತು ಇತಿಹಾಸವನ್ನು ಬರೆಯುವಾಗ ಕೇವಲ ಬಾಹ್ಯ ಘಟನೆಗಳನ್ನು ಮಾತ್ರ ಹೇಳುತ್ತ ಹೋಗುತ್ತಾರೆ. ಆತ್ಮವಾದಿಗಳಾದ ಹಿಂದೂಗಳು ಬಾಹ್ಯ ಘಟನೆಗಳ ಹಿಂದಿರುವ ಮನೋಭಾವವನ್ನು ವಿವರಿಸುವುದರಲ್ಲಿ ತಮ್ಮ ನೈಪುಣ್ಯವನ್ನು ತೋರಿಸುವರು. ಇವೆರಡರ ಸಮ್ಮಿಲನದಿಂದ ಉತ್ತಮ ಇತಿಹಾಸ ಅಥವಾ ಜೀವನಕಥೆ ಹೊರಬರುವುದು ಎಂದು ನಾವು ಭಾವಿಸುತ್ತೇವೆ. ಮನಸ್ಸಿನ ಇತಿಹಾಸವನ್ನು ಹಿನ್ನೆಲೆಯಾಗಿ ಇಟ್ಟುಕೊಂಡು ಬಾಹ್ಯ ಕಾರ್ಯಕಲಾಪಗಳನ್ನು ವಿವರಿಸಬೇಕು.

ಶ್ರೀರಾಮಕೃಷ್ಣರ ಅಲೌಕಿಕ ಜೀವನವನ್ನು ಶಾಸ್ತ್ರದ ಬೆಳಕಿನಿಂದಲೂ ನೋಡಲು ಅಲ್ಲಲ್ಲಿ ಪ್ರಯತ್ನಿಸಿರುವೆವು. ಅವರ ಅಸಾಧಾರಣ ಮನೋಭಾವ ಅನುಭವ ಕಾರ್ಯಕಲಾಪಗಳನ್ನು ಶ್ರೀಕೃಷ್ಣ, ಶಂಕರ, ಬುದ್ಧ, ಕ್ರಿಸ್ತ ಮುಂತಾದ ಪ್ರಪಂಚದ ಮಹಾಪುರುಷರ ಅನುಭವ, ಕಾರ್ಯಕಲಾಪಗಳೊಡನೆ ತುಲನೆ ಮಾಡಿ ವಿವರಿಸಿರುವೆವು. ಏಕೆಂದರೆ ಶ್ರೀರಾಮಕೃಷ್ಣರು ನಮಗೆ ಅನೇಕ ಬಾರಿ ಸ್ಪಷ್ಟಾಕ್ಷರಗಳಲ್ಲಿ ಹೇಳಿರುವರು : "ಹಿಂದೆ ಯಾರು ರಾಮನೂ ಮತ್ತು ಕೃಷ್ಣನೂ ಅವನೆ ಈಗ ಈ ಶರೀರದಲ್ಲಿ ನೆಲಸಿರುವನು" ; ಹಾಗೂ "ಇಲ್ಲಿಯ (ನನ್ನ) ಅನುಭವ ವೇದವೇದಾಂತಗಳನ್ನು ಮೀರಿ ಹೋಗಿದೆ." 'ಭಾವಮುಖ' ಅವಸ್ಥೆಯಲ್ಲಿ ಜೀವಿಸಿದ ಶ್ರೀರಾಮಕೃಷ್ಣರ ಅದ್ಭುತ ಜೀವನವನ್ನು ನಿರಪೇಕ್ಷದೃಷ್ಟಿಯಿಂದ ಪರಿಶೀಲಿಸಿದಾಗ ಈ ರೀತಿಯ ಅಲೌಕಿಕ ಜೀವನ ಆಧ್ಯಾತ್ಮಿಕ ಇತಿಹಾಸದಲ್ಲಿ ಇನ್ನೊಂದು ಕಂಡುಬರುವುದಿಲ್ಲ ಎಂಬ ತೀರ್ಮಾನಕ್ಕೆ ನಾವು ಬರಲೇ ಬೇಕಾಗುತ್ತದೆ.

ಶ್ರೀರಾಮಕೃಷ್ಣರು ಹಿಂದಿನ ಅವತಾರಪುರುಷರುಗಳೆಲ್ಲರ ಮತಗಳನ್ನು ಅನುಸರಿಸಿ, ಎಲ್ಲ ರೀತಿಯ ಸಾಧನೆಗಳನ್ನು ಮಾಡಿ ಅವುಗಳಲ್ಲಿ ಸಿದ್ಧಿಯನ್ನು ಪಡೆದರು. ಅನಂತರ

'ಎಷ್ಟು ಮತಗಳೊ ಅಷ್ಟು ಪಥಗಳು' ಎಂದು ಲೋಕಹಿತಕಾರಿಯಾದ ಘೋಷಣೆಯನ್ನು ಮಾಡಿದರು. ಇದರಿಂದ ಹಿಂದಿನ ಎಲ್ಲ ಅವತಾರಪುರುಷರೂ ಘನೀಭೂತರಾಗಿ ಶ್ರೀರಾಮಕೃಷ್ಣರೆಂಬ ಅಭಿನವರೂಪದಲ್ಲಿ ಅವತರಿಸಿರುವರು ಎಂದು ಹೇಳಬಹುದು. ಶ್ರೀರಾಮಕೃಷ್ಣರ ಅಪೂರ್ವ ಪವಿತ್ರ ಜೀವನವನ್ನು ಅಧ್ಯಯನ ಮಾಡಿದಾಗ ಅವರು ವೇದದ ಸಾರ್ವತ್ರಿಕ ಮತ್ತು ಸನಾತನ ಭಾವವೃಕ್ಷದ ಸಾರಭೂತವಾದ ಪ್ರಪ್ರಥಮ ಫಲವೆಂದು ನಮಗೆ ಅನಿಸುತ್ತದೆ.

ಶ್ರೀರಾಮಕೃಷ್ಣರ ಮೆಚ್ಚಿನ ಶಿಷ್ಯರಾದ ಸ್ವಾಮಿ ವಿವೇಕಾನಂದರು ದೇಶವಿದೇಶಗಳಲ್ಲಿ ಧರ್ಮಪ್ರಚಾರ ಮಾಡಿದಮೇಲೆ ಜನಸಾಮಾನ್ಯರಲ್ಲಿ ಶ್ರೀರಾಮಕೃಷ್ಣರ ಜೀವನವನ್ನು ತಿಳಿಯುವ ಆಸಕ್ತಿ ಜಾಸ್ತಿಯಾಯಿತು. ಅನೇಕರು ಅವರ ಬಗ್ಗೆ ಅನೇಕ ವಿಷಯಗಳನ್ನು ಬರೆದಿರುವರು. ಆದರೂ ಯಾರೂ ಅವರನ್ನು ಸರಿಯಾಗಿ ನಿರೂಪಿಸಿಲ್ಲವೆಂದೇ ಹೇಳಬಹುದು. ಅವರ ಅಲೌಕಿಕ ಜೀವನವು ಹಿಂದೂ ಅಥವಾ ವೈದಿಕ ಧರ್ಮದೊಡನೆ ಆಳ ಸಂಬಂಧವನ್ನು ಪಡೆದಿದೆ ಎಂಬುದನ್ನು ಯಾರೂ ಸ್ಪಷ್ಟವಾಗಿ ನಿರೂಪಿಸಿದಂತೆ ಕಂಡುಬರುವುದಿಲ್ಲ. ಇದರ ಪರಿಣಾಮವಾಗಿ ಆ ಬರಹಗಳನ್ನು ಓದಿದಾಗ ಶ್ರೀರಾಮಕೃಷ್ಣರು ಹಿಂದೂಧರ್ಮಕ್ಕೆ ಸಂಬಂಧಿಸದ ಬೇರೆ ವ್ಯಕ್ತಿ ಮತ್ತು ಸಂಪ್ರದಾಯಕ್ಕಿಂತ ಬೇರೆಯಾದ ಒಂದು ಹೊಸ ಮತವನ್ನು ಸೃಷ್ಟಿಸಿರುವರು ಎಂದು ಓದುಗರಿಗೆ ಅನಿಸುತ್ತದೆ. ಅವುಗಳಲ್ಲಿ ಬರುವ ಎಷ್ಟೋ ಕತೆಗಳು ಶ್ರೀರಾಮಕೃಷ್ಣರ ಜೀವನದ ಬಗ್ಗೆ ತಪ್ಪು ಕಲ್ಪನೆಯನ್ನುಂಟುಮಾಡುತ್ತವೆ. ಅವುಗಳನ್ನು ಓದಿದಾಗ ಅವರ ಜೀವನದ ವಿವಿಧ ಘಟನೆಗಳಲ್ಲಿ ಒಂದು ಸಾಮರಸ್ಯ ಕಂಡುಬರುವುದಿಲ್ಲ. ಈ ನ್ಯೂನತೆಯನ್ನು ಸ್ವಲ್ಪಮಟ್ಟಿಗಾದರೂ ಪರಿಹರಿಸಲು ಅವರ ಜೀವನವನ್ನು ಯಥಾರ್ಥರೀತಿಯಲ್ಲಿ ಮುಂದಿಡಲು ಈ ಪುಸ್ತಕವನ್ನು ಬರೆಯುತ್ತಿದ್ದೇವೆ. ಸ್ವಾಮಿ ವಿವೇಕಾನಂದರು ಮತ್ತು ನಾವುಗಳು ಅವರನ್ನು ಯಾವರೀತಿ ಅರ್ಥಮಾಡಿಕೊಂಡಿರುವೆವೊ ಅದನ್ನು ಸ್ವಾಮಿ ವಿವೇಕಾನಂದರ ಮಾರ್ಗಾನುಸಾರವಾಗಿ ವಿವರಿಸಲು ಪ್ರಯತ್ನಿಸಿದ್ದೇವೆ. ಇದರಲ್ಲಿ ಶ್ರೀರಾಮಕೃಷ್ಣರ ಅಲೌಕಿಕ ಜೀವನವು ಸ್ವಲ್ಪಮಟ್ಟಿಗಾದರೂ ಯಥಾರ್ಥರೀತಿಯಲ್ಲಿ ನಿರೂಪಿಸಲ್ಪಟ್ಟಿದ್ದರೆ ಅದು ಅವರ ಶ್ರೇಷ್ಠತೆಯ ಫಲ. ಇದರಲ್ಲಿ ಏನಾದರು ಅಲ್ಪತೆ ನ್ಯೂನತೆಗಳುಂಟಾಗಿದ್ದರೆ ಅದು ನಮ್ಮ ಅಸಮರ್ಥತೆಯ ಫಲ ಎಂದು ತಿಳಿಯಬೇಕು. ಶ್ರೀರಾಮಕೃಷ್ಣರ ಅಮೂಲ್ಯ ಜೀವನದ ಮೊದಲ ಮತ್ತು ಕೊನೆಯ ಭಾಗವನ್ನು ಮುಂದೆ ಓದುಗರ ಮುಂದಿಡಬೇಕೆಂಬುದು ನಮ್ಮ ಇಚ್ಛೆಯಾಗಿದೆ.†

---

† ಗ್ರಂಥಕರ್ತರು ಈ ಜೀವನ ಚರಿತ್ರೆಯನ್ನು ಬರೆಯುವಾಗ ಮೊದಲು 'ಗುರುಭಾವ'ದಿಂದ ಪ್ರಾರಂಭಿಸಿದರು. ಅನಂತರ ಅನುಕ್ರಮವಾಗಿ ಎರಡು, ಒಂದು ಮತ್ತು ಐದನೆಯ ಭಾಗಗಳನ್ನು ಬರೆದರು.

ವಿಷಯವನ್ನು ಪ್ರಾರಂಭಿಸುವುದಕ್ಕೆ ಮೊದಲು ಶ್ರೀರಾಮಕೃಷ್ಣರ ಜೀವನವು ಸನಾತನ ವೈದಿಕ ಧರ್ಮದೊಡನೆ ಹೇಗೆ ನಿಕಟ ಸಂಬಂಧವನ್ನು ಹೊಂದಿದೆ ಎಂಬುದನ್ನು ತೋರಿಸುವ ಸ್ವಾಮಿ ವಿವೇಕಾನಂದರ ಲೇಖನವನ್ನು ಪ್ರಸ್ತುತಪಡಿಸುತ್ತೇವೆ.

ಗ್ರಂಥಕರ್ತರು

ಹಿಂದೂಧರ್ಮ ಮತ್ತು ಶ್ರೀರಾಮಕೃಷ್ಣ

"ಯಾರ ಪ್ರೇಮಪ್ರವಾಹ ಚಂಡಾಲನವರೆಗೂ ತಡೆಯಿಲ್ಲದೆ ಹರಿಯುತ್ತಿತ್ತೊ, ಯಾರು ಲೋಕವನ್ನು ಮೀರಿದವನಾಗಿದ್ದರೂ ಲೋಕಕಲ್ಯಾಣಕ್ಕಾಗಿ ಶ್ರಮಿಸಿದನೊ, ಯಾರ ಮಹಿಮೆಗೆ ಮೂರು ಲೋಕಗಳಲ್ಲಿಯೂ ಸಾಟಿಯಿಲ್ಲವೋ, ಯಾರು ಜಾನಕಿಯ ಪ್ರಾಣಾಧಾರನೊ, ಯಾರ ಜ್ಞಾನರೂಪ ಶರೀರವು ಭಕ್ತಿರೂಪಳಾದ ಸೀತೆಯಿಂದ ಆವೃತವಾಗಿತ್ತೊ, ಅಂತಹ ಶ್ರೀರಾಮನು ; ಯಾರು ಪ್ರಲಯಕಾಲದ ಶಬ್ದದಂತಿದ್ದ ಕುರುಕ್ಷೇತ್ರ ಯುದ್ಧದ ಮಹಾಶಬ್ದವನ್ನು ಅಡಗಿಸಿಬಿಟ್ಟನೊ, (ಅರ್ಜುನನ) ಪ್ರಕೃತಿ ಸಹಜವಾದ ಅಜ್ಞಾನಾಂಧಕಾರ ರೂಪದ ರಾತ್ರಿಯನ್ನು ಹೋಗಲಾಡಿಸಿದನೊ, ಶಾಂತವೂ ಮಧುರವೂ ಆಗಿದ್ದರೂ ಸಿಂಹನಾದದಂತೆ ಇದ್ದ ಭಗವದ್ಗೀತೆಯನ್ನು ಬೋಧಿಸಿದನೊ ಅಂತಹ ಪ್ರಸಿದ್ಧ ಪುರುಷನಾದ ಶ್ರೀಕೃಷ್ಣನು—ಈಗ ಶ್ರೀರಾಮಕೃಷ್ಣನಾಗಿ ಅವತರಿಸಿದ್ದಾನೆ."*

ಶಾಸ್ತ್ರವೆಂದರೆ ಅನಾದಿ ಅನಂತವಾದ 'ವೇದ' ಎಂದು ತಿಳಿಯಬಹುದು. ಧರ್ಮವನ್ನು ಬೋಧಿಸಲು ಈ ವೇದವೊಂದೇ ಸಮರ್ಥವಾದುದು.

ಪುರಾಣಾದಿ ಬೇರೆ ಪುಸ್ತಕಗಳನ್ನು ಸ್ಮೃತಿ ಎಂದು ಕರೆಯುತ್ತಾರೆ. ಎಲ್ಲಿಯವರೆಗೆ ಅವು ಶ್ರುತಿಯನ್ನು, ಅಂದರೆ ವೇದವನ್ನು, ಅನುಸರಿಸುತ್ತವೊ ಅಲ್ಲಿಯವರೆಗೆ ಅವಕ್ಕೆ ಪ್ರಾಮಾಣ್ಯ.

ಎರಡು ಪ್ರಕಾರದ ಸತ್ಯಗಳಿವೆ—1) ಮಾನವ ಸಾಧಾರಣವಾದ ಪಂಚೇಂದ್ರಿಯಗಳಿಗೆ ಗೋಚರವಾದದ್ದು ಮತ್ತು 2) ಅತೀಂದ್ರಿಯವಾದ ಸೂಕ್ಷ್ಮ ಯೋಗಶಕ್ತಿಯಿಂದ ತಿಳಿಯುವಂತಹುದು.

---

* ಆಚಂಡಾಲಪ್ರತಿಹತರಯೋಃ ಯಸ್ಯಪ್ರೇಮಪ್ರವಾಹಃ
ಲೋಕಾತೀತೋಽಪ್ಯಹಹ ನ ಜಹೌ ಲೋಕಕಲ್ಯಾಣಮಾರ್ಗಮ್ ।
ತ್ರೈಲೋಕ್ಯೇಽಪ್ಯಪ್ರತಿಮಮಹಿಮಾ ಜಾನಕೀಪ್ರಾಣಬಂಧಃ
ಭಕ್ತ್ಯಾ ಜ್ಞಾನಂ ವೃತವರವಪುಃ ಸೀತಯಾ ಯೋ ಹಿ ರಾಮಃ ॥
ಸ್ತಬ್ಧೀಕೃತ್ಯಾ ಪ್ರಲಯಕಲಿತಂ ವಾಹವೋತ್ಥಂ ಮಹಾಂತಂ
ಹಿತ್ವಾ ದೂರಂ ಪ್ರಕೃತಿಸಹಜಮಂಧತಾಮಿಶ್ರಮಿಶ್ರಮ್ ।
ಗೀತಂ ಶಾಂತಂ ಮಧುರಮಪಿ ಯಃ ಸಿಂಹನಾದಂ ಜಗರ್ಜ
ಸೋಽಯಂ ಜಾತಃ ಪ್ರಥಿತ ಪುರುಷಃ ರಾಮಕೃಷ್ಣಸ್ತ್ವಿದಾನೀಮ್ ॥

ಮೊದಲನೆಯ ಸಾಧನದಿಂದ ಪಡೆದ ಜ್ಞಾನವನ್ನು 'ವಿಜ್ಞಾನ' ಎಂದು ಕರೆಯ ಬಹುದು. ಎರಡನೆಯ ಸಾಧನದಿಂದ ಪಡೆದ ಜ್ಞಾನವನ್ನು 'ವೇದ' ಎಂದು ಕರೆಯ ಬಹುದು.

'ವೇದ' ಎಂದು ಕರೆಯಲ್ಪಡುವ ಅನಾದಿ ಅನಂತ ಅಲೌಕಿಕ ಜ್ಞಾನ ರಾಶಿಯು ಯಾವಾಗಲೂ ಇದ್ದೇ ಇರುವುದು. ಸ್ವಯಂ ಸೃಷ್ಟಿಕರ್ತನು ಇದರ ಸಹಾಯದಿಂದಲೇ ಈ ಜಗತ್ತಿನ ಸೃಷ್ಟಿ-ಸ್ಥಿತಿ-ಪ್ರಲಯ ಕಾರ್ಯವನ್ನು ಮಾಡುತ್ತಿರುವನು.

ಆ ಅತೀಂದ್ರಿಯ ಶಕ್ತಿಯು ಯಾವ ವ್ಯಕ್ತಿಯಲ್ಲಿ ಆವಿರ್ಭವಿಸುವುದೊ ಅವನೇ ಋಷಿ, ಮತ್ತು ಆ ಶಕ್ತಿಯ ಮೂಲಕ ಅವನು ಪಡೆಯುವ ಅಲೌಕಿಕ ಸತ್ಯವನ್ನೇ 'ವೇದ'ವೆಂದು ಕರೆಯುವುದು.

ಈ ಋಷಿತ್ವವನ್ನು ಮತ್ತು ವೇದದ್ರಷ್ಟೃತ್ವವನ್ನು ಪಡೆಯುವುದೇ ನಿಜವಾದ ಧರ್ಮ. ಸಾಧಕನ ಜೀವನದಲ್ಲಿ ಎಲ್ಲಿಯವರೆಗೆ ಈ ಅನುಭವವುಂಟಾಗುವುದಿಲ್ಲವೊ ಅಲ್ಲಿಯವರೆಗೆ ಧರ್ಮ ಅವನ ಪಾಲಿಗೆ ಕೇವಲ ಮಾತಿನ ಪ್ರಸಂಗ ಅಷ್ಟೆ ಮತ್ತು ಅವನಿನ್ನೂ ಧರ್ಮರಾಜ್ಯದ ಮೊದಲನೆಯ ಮೆಟ್ಟಿಲನ್ನೂ ಹತ್ತಿಲ್ಲ ಎಂದು ಹೇಳ ಬೇಕಾಗುತ್ತದೆ.

ವೇದದ ನಿಯಮಗಳು ಸಮಸ್ತ ದೇಶ-ಕಾಲ-ಪಾತ್ರಗಳನ್ನು ವ್ಯಾಪಿಸುವುವು, ಅಂದರೆ ವೇದದ ಪ್ರಭಾವವು ಯಾವುದೇ ದೇಶ, ಕಾಲ, ಪಾತ್ರ ವಿಶೇಷಗಳಿಗೆ ಬದ್ಧ ವಾಗಿಲ್ಲ.

'ವೇದ'ವೊಂದೇ ಸಾರ್ವತ್ರಿಕ ಧರ್ಮವನ್ನು ಪ್ರತಿಪಾದಿಸುತ್ತದೆ.

ಆ ಅನಂತ ಜ್ಞಾನದ ಸ್ವಲ್ಪಾಂಶವು ನಮ್ಮ ಮತ್ತು ಇತರ ದೇಶಗಳ ಇತಿಹಾಸ ಪುರಾಣಾದಿ ಧಾರ್ಮಿಕ ಪುಸ್ತಕಗಳಲ್ಲಿ ಕಂಡುಬರುವುದಾದರೂ ನಾಲ್ಕು ಭಾಗಗಳಾಗಿ ವಿಂಗಡಿಸಲ್ಪಟ್ಟಿರುವ ವೇದವೆಂಬ ಅಕ್ಷರರಾಶಿಯೇ ಎಲ್ಲ ರೀತಿಯಲ್ಲಿಯೂ ಅತ್ಯುನ್ನತ ಸ್ಥಾನವನ್ನು ಪಡೆಯಲು ಯೋಗ್ಯವಾಗಿದೆ. ಅದು ಅಲೌಕಿಕ ಜ್ಞಾನರಾಶಿಯ ಸಂಪೂರ್ಣ ವಾದ ಪ್ರಪ್ರಥಮ ಸಂಗ್ರಹವಾಗಿದೆ. ಆದ್ದರಿಂದ ಅದು ದೇಶವಿದೇಶಗಳ ಸಮಸ್ತ ಧರ್ಮಗ್ರಂಥಗಳಿಗೆ ಪ್ರಮಾಣಭೂತವಾಗಿದೆ.

ಆರ್ಯರಿಂದ ಆವಿಷ್ಕೃತವಾದ ವೇದವೆಂಬ ಶಬ್ದರಾಶಿಯ ವಿಷಯದಲ್ಲಿ ಈ ಒಂದು ಮಾತನ್ನೂ ಹೇಳಬೇಕು : ಯಾವುದು ಲೌಕಿಕ ಅರ್ಥವಾದ ಅಥವಾ ಐತಿಹ್ಯ ವಲ್ಲವೊ ಅದನ್ನೇ ''ವೇದ''ವೆಂದು ತಿಳಿಯಬೇಕು.

ಈ ವೇದರಾಶಿಯಲ್ಲಿ ಜ್ಞಾನಕಾಂಡ ಮತ್ತು ಕರ್ಮಕಾಂಡ ಎಂಬ ಎರಡು ಭಾಗ ಗಳಿವೆ. ಕರ್ಮಕಾಂಡದ ಕ್ರಿಯೆ ಮತ್ತು ಫಲಗಳು ಈ ಮಾಯಾ ಜಗತ್ತಿಗೆ ಸಂಬಂಧಿಸಿರು ವುದರಿಂದ ಅವು ದೇಶ ಕಾಲ ಪಾತ್ರಗಳಿಗೆ ಅನುಸಾರವಾಗಿ ಪರಿವರ್ತಿಸುತ್ತ ಹೋಗುವುವು. ಸಾಮಾಜಿಕ ರೀತಿನೀತಿಗಳು ಈ ಕರ್ಮಕಾಂಡವನ್ನು ಅವಲಂಬಿಸಿರುವುದರಿಂದ ಅವೂ ಬದಲಾಗುತ್ತ ಹೋಗುವುವು. ಶಾಸ್ತ್ರ ಮತ್ತು ಸದಾಚಾರ ಇವುಗಳಿಗೆ ವಿರುದ್ಧವಲ್ಲದ

ಲೋಕಾಚಾರಗಳೆಲ್ಲವೂ ಸ್ವೀಕರಿಸಲ್ಪಡುವುವು. ಇವುಗಳಿಗೆ ವಿರುದ್ಧವಾದ ಲೋಕಾಚಾರಗಳಿಗೆ ಬಲಿಯಾದುದೇ ಆರ್ಯ ಜನಾಂಗದ ಅಧಃಪತನಕ್ಕೆ ಒಂದು ಪ್ರಧಾನ ಕಾರಣ.

ಜ್ಞಾನಕಾಂಡ ಅಥವಾ ವೇದಾಂತವು ನಿಷ್ಕಾಮಕರ್ಮಯೋಗ ಭಕ್ತಿ ಜ್ಞಾನ ಇವುಗಳ ಮೂಲಕ ಮನುಷ್ಯನನ್ನು ಮಾಯೆಯಿಂದಾಚೆಗೆ ಕರೆದುಕೊಂಡುಹೋಗಿ ಅವನಿಗೆ ಮುಕ್ತಿಯನ್ನು ನೀಡುತ್ತಿರುವುದು. ಇದು ದೇಶ ಕಾಲ ಪಾತ್ರಗಳಿಗೆ ಬದ್ಧವಾಗಿಲ್ಲ. ಇದರ ಧರ್ಮ ಸಾರ್ವತ್ರಿಕವಾದುದು, ಸಾರ್ವಕಾಲಿಕವಾದುದು.

ಮನು ಮುಂತಾದವರು ಬರೆದ ಶಾಸ್ತ್ರಗಳು ಕರ್ಮಕಾಂಡವನ್ನು ಆಧರಿಸಿವೆ. ಅವು ದೇಶ-ಕಾಲ ಪಾತ್ರಭೇದಕ್ಕೆ ಅನುಸಾರವಾಗಿ, ಸಮಾಜ ಕಲ್ಯಾಣಕ್ಕಾಗಿ ಕರ್ಮದ ಶಿಕ್ಷಣವನ್ನು ನೀಡುವುವು. ಪುರಾಣಾದಿ ಶಾಸ್ತ್ರಗಳು ವೇದಾಂತ ತತ್ತ್ವಗಳನ್ನು ಅವಲಂಬಿಸಿ ಅವತಾರ ಪುರುಷರ ಚರಿತ್ರೆಯನ್ನು ವರ್ಣಿಸುವುದರ ಮೂಲಕ ಆ ತತ್ತ್ವಗಳ ವಿಸ್ತೃತ ವ್ಯಾಖ್ಯಾನ ಮಾಡುವುವು. ಅವು ಅನಂತರ ಭಾವಮಯನಾದ ಭಗವಂತನ ವಿವಿಧ ಭಾವಗಳನ್ನು ಚಿತ್ರಿಸಲು ಪ್ರಯತ್ನಿಸುವುವು.

ಆದರೆ ಕಾಲಕ್ರಮೇಣ ಆರ್ಯ ಜನಾಂಗದವರು ಸದಾಚಾರದಿಂದ ವಿಮುಖರಾದರು ವೈರಾಗ್ಯವನ್ನು ಕಳೆದುಕೊಂಡರು, ಲೋಕಾಚಾರಗಳಿಗೆ ಬದ್ಧರಾಗಿ ಬುದ್ಧಿ ಸೂಕ್ಷ್ಮತೆಯನ್ನು ಕಳೆದುಕೊಂಡರು. ಅವರಿಗೆ ಪುರಾಣಗಳ ಅಂತರಾರ್ಥವನ್ನು ತಿಳಿಯಲಾಗಲಿಲ್ಲ. ಅವು ವಿವಿಧ ಭಗವದ್ ಭಾವಗಳನ್ನು ಬೋಧಿಸುವುದರಿಂದ ಮತ್ತು ಜನಸಾಮಾನ್ಯರಿಗೆ ಅರ್ಥವಾಗುವಂತೆ ಸೂಕ್ಷ್ಮತತ್ವಗಳನ್ನು ಸ್ಥೂಲ ರೂಪಗಳಲ್ಲಿ ವಿವರಿಸುವುದರಿಂದ ಅವು ಪರಸ್ಪರ ವಿರುದ್ಧವಾಗಿ ಕಾಣತೊಡಗಿದವು. ಆದ್ದರಿಂದ ಅವರು ಅಸಂಖ್ಯ ಧಾರ್ಮಿಕ ಭಾವಗಳಿಂದ ಕೂಡಿದ ಸಮಗ್ರವಾದ ಸನಾತನ ಧರ್ಮವನ್ನು ಅಸಂಖ್ಯ ಮತಗಳಾಗಿ ವಿಚ್ಛಿದ್ರಗೊಳಿಸಿದರು. ಮತೀಯ ದ್ವೇಷ ಅಸೂಯೆಯ ಬೆಂಕಿಯನ್ನು ಹೊತ್ತಿಸಿ ಪರಸ್ಪರರನ್ನು ಆ ಬೆಂಕಿಗೆ ತಳ್ಳಲು ಪ್ರಯತ್ನಿಸಿದರು ಹೀಗೆ ಅವರು ಧರ್ಮಭೂಮಿಯಾದ ಭಾರತವನ್ನು ನರಕ ಸದೃಶವಾಗಿ ಮಾಡಿದಾಗ ಶ್ರೀರಾಮಕೃಷ್ಣರು ಆವಿರ್ಭವಿಸಿ ನಿಜವಾದ ಆರ್ಯ ಧರ್ಮ ವಾವುದು, ವಿವಿಧ ಮತಗಳ ಏಕತೆಯ ಗುಟ್ಟು ಎಲ್ಲಿದೆ ಎಂಬುದನ್ನು ತೋರಿಸಿಕೊಟ್ಟರು. ವಿವಿಧ ಮತಪಂಥಗಳಾಗಿ ಚೂರುಚೂರಾಗಿದ್ದ ಧರ್ಮವನ್ನು ಒಂದುಗೂಡಿಸಿದರು, ಲೋಕಾಚಾರ ಕಂದಾಚಾರಗಳಿಗೆ ಬದ್ಧರಾಗಿದ್ದ ದೇಶೀಯರಿಗೆ ಭ್ರಾಂತಿಸ್ಥಾನವಾಗಿದ್ದ ಮತ್ತು ಮತೀಯ ಕಲಹದಿಂದಾಗಿ ವಿದೇಶೀಯರ ಜಿಗುಪ್ಸೆಗೆ ಕಾರಣವಾಗಿದ್ದ ಹಿಂದೂ ಧರ್ಮದ ಕಳಂಕವನ್ನು ಹೋಗಲಾಡಿಸಿದರು. ತಮ್ಮ ಜೀವನದ ಮೂಲಕವೇ ಆ ಸನಾತನ ಧರ್ಮದ ಉದಾತ್ತ ಸಾರ್ವತ್ರಿಕ ಭಾವನೆಗಳನ್ನು ಪ್ರತಿಬಿಂಬಿಸುತ್ತ ಅವರು ಈ ಕಾರ್ಯವನ್ನು ಸಾಧಿಸಿದರು.

ಸಂಸ್ಕಾರಗಳಿಂದ ಸಂಪೂರ್ಣ ಮುಕ್ತವಾದ ಶುಚಿಹೃದಯದಲ್ಲಿ ಹೇಗೆ ಶಾಸ್ತ್ರ ಜ್ಞಾನವು ಸ್ವತಃ ಪ್ರಕಾಶಗೊಳ್ಳುವುದು ಮತ್ತು ಹಾಗಾದಾಗಲೇ ಶಾಸ್ತ್ರವು ಪ್ರಮಾಣಿತವಾಗುವುದು ಎಂಬುದನ್ನು ತೋರಿಸಲು ವೇದಮೂರ್ತಿ ಭಗವಂತನು ಈ ಅವತಾರದಲ್ಲಿ

ಬಾಹ್ಯ ಶಿಕ್ಷಣವನ್ನು ಸಂಪೂರ್ಣ ಕಡೆಗಣಿಸಿದನು.

ವೇದವನ್ನು, ಅಂದರೆ ನೈಜ ಧರ್ಮವನ್ನು ಮತ್ತು ಬ್ರಾಹ್ಮಣರನ್ನು, ಅಂದರೆ ಧರ್ಮಶಿಕ್ಷಕರನ್ನು ರಕ್ಷಿಸುವುದಕ್ಕಾಗಿಯೇ ಭಗವಂತನು ಮತ್ತೆ ಮತ್ತೆ ಅವತರಿಸಿ ಬರುವನು ಎಂದು ಸ್ಮೃತಿಗಳಲ್ಲಿ ಹೇಳಿದ ಮಾತು ಪ್ರಸಿದ್ಧವಾಗಿದೆ.

ನದಿಯು ಒಂದು ಪ್ರಪಾತದಲ್ಲಿ ಧುಮುಕಿದ ಮೇಲೆ ಹೆಚ್ಚು ವೇಗದಿಂದ ಹರಿಯುವಂತೆ, ತರಂಗವು ಬಿದ್ದ ಮೇಲೆ ಮೊದಲಿಗಿಂತಲೂ ಎತ್ತರಕ್ಕೆ ಏರುವಂತೆ ಆರ್ಯ ಸಮಾಜವೂ ಪ್ರತಿಬಾರಿ ಅವನತಿ ಹೊಂದಿದಾಗಲೂ, ಭಗವಂತನ ಕರುಣಾಪೂರ್ಣ ಸಹಾಯಹಸ್ತದಿಂದ, ಮೊದಲಿಗಿಂತಲೂ ಹೆಚ್ಚಿನ ಉನ್ನತಿಯನ್ನು ಹೊಂದಿ ವೈಭವದಿಂದ ಮೆರೆಯುವುದು. ಇದನ್ನು ಇತಿಹಾಸವು ಅನೇಕ ಬಾರಿ ತೋರಿಸಿರುವುದು.

ಪ್ರತಿಯೊಂದು ಪತನದ ನಂತರವೂ ನಮ್ಮ ಸಮಾಜವು ಮೇಲೆದ್ದಾಗ ಹುದುಗಿರುವ ಸನಾತನ ಪೂರ್ಣತ್ವವನ್ನು ಹೆಚ್ಚು ಪ್ರಕಾಶಪಡಿಸುವುದು. ಹಾಗೂ ಭಗವಂತನೂ ಪ್ರತಿ ಅವತಾರದಲ್ಲಿಯೂ ತನ್ನ ಹೆಚ್ಚಿನ ವೈಭವವನ್ನು ವ್ಯಕ್ತಪಡಿಸುತ್ತಿರುವನು.

ನಮ್ಮ ಭಾರತ ಭೂಮಿಯು ಮತ್ತೆ ಮತ್ತೆ ಮೂರ್ಛಿತವಾಗಿತ್ತು, ಭಗವಂತನೂ ಮತ್ತೆ ಮತ್ತೆ ಅವತರಿಸಿ ಬಂದು ಅದನ್ನು ಎಚ್ಚರಗೊಳಿಸಿರುವನು.

ಆದರೆ ಹಿಂದೆಂದೂ ಅವನತಿಯ ಅಮಾವಾಸ್ಯೆಯು ಭಾರತವನ್ನು ಈಗಿನಷ್ಟು ಗಾಢಾಂಧಕಾರದಲ್ಲಿ ಮುಳುಗಿಸಿರಲಿಲ್ಲ. ಆದರೂ ಈಗ ಆ ಸುದೀರ್ಘರಾತ್ರಿ ಕಳೆಯುತ್ತಿದೆ. ದೇಶದ ಹಿಂದಿನ ಪತನವೆಲ್ಲ ಗೋಷ್ಪದದಂತಿದ್ದರೆ ಈಗಿನ ಪತನವು ಸಮುದ್ರದ ತಳದಂತಿದೆ.

ಆದ್ದರಿಂದ ವರ್ತಮಾನ ಜಾಗ್ರತಿಯ ಉಜ್ಜ್ವಲತೆಗೆ ಹೋಲಿಸಿದರೆ ಹಿಂದಿನ ಜಾಗ್ರತಿಗಳು ಸೂರ್ಯನ ಮುಂದೆ ನಕ್ಷತ್ರಗಳಂತೆ ಮಬ್ಬಾಗುವುವು. ಈಗಿನ ಪುನರುತ್ಥಾನದ ವೈಭವಕ್ಕೆ ಹೋಲಿಸಿದರೆ ಹಿಂದಿನ ಪುನರುತ್ಥಾನಗಳೆಲ್ಲ ಮಕ್ಕಳಾಟದಂತೆ ಕಾಣುವುವು.

ಅನಾಹುತವನ್ನು ತಡೆಯಲು ಯೋಗ್ಯ ವ್ಯಕ್ತಿಯು ಇಲ್ಲದಿದ್ದುದರಿಂದ ಸನಾತನ ಧರ್ಮವು ಈಗ ಸಣ್ಣ ಸಣ್ಣ ಮತ ಪಂಥಗಳಾಗಿ ಹರಿದು ಹಂಚಿಹೋಗಿದೆ. ಕೆಲವು ಭಾಗಗಳಲ್ಲಿ ಅದು ಆಂಶಿಕವಾಗಿ ರಕ್ಷಿಸಲ್ಪಟ್ಟಿದ್ದರೆ ಮತ್ತೆ ಕೆಲವು ಭಾಗಗಳಲ್ಲಿ ಸಂಪೂರ್ಣ ಲುಪ್ತವಾಗಿ ಹೋಗಿದೆ.

ಕರುಣಾಮಯ ಭಗವಂತನು ಹಿಂದಿನ ಎಲ್ಲ ಯುಗಗಳಿಗಿಂತಲೂ ಹೆಚ್ಚು ಪೂರ್ಣ ರೂಪದಲ್ಲಿ ಈಗ ಅವತರಿಸಿರುವನು. ಎಲ್ಲ ಆಧ್ಯಾತ್ಮಿಕ ಭಾವಗಳನ್ನು ಪ್ರಕಾಶಪಡಿಸುತ್ತ, ಸರ್ವ ವಿದ್ಯೆಗಳಿಗೆ ಸಹಾಯ ಮಾಡುತ್ತ ಸಮಾಜದ ಸರ್ವಾಂಗೀಣ ಪ್ರಗತಿಗೆ ಆಸ್ಪದ ಮಾಡಿರುವನು.

ಆದ್ದರಿಂದ ಈ ಮಹಾಯುಗದ ಅರುಣೋದಯದಲ್ಲಿ ಸರ್ವಭಾವಗಳ ಸಮನ್ವಯ ಪ್ರಚಾರವಾಗುತ್ತಿದೆ. ಸನಾತನ ಶಾಸ್ತ್ರದಲ್ಲಿ ಮತ್ತು ಧರ್ಮದಲ್ಲಿ ಈ ಅಸೀಮ

ಅನಂತ ಭಾವಗಳು ಇದ್ದರೂ ಇಷ್ಟು ಕಾಲವೂ ಆವರಣದಿಂದ ಮುಚ್ಚಲ್ಪಟ್ಟಿದ್ದವು. ಈಗ ಮತ್ತೆ ಕಂಡುಹಿಡಿಯಲ್ಪಟ್ಟು ಅವು ಉಚ್ಚ ಸ್ವರದಲ್ಲಿ ಸಮಾಜದ ಮುಂದೆ ಘೋಷಿಸಲ್ಪಡುತ್ತಿವೆ.

ಈ ನವಯುಗಧರ್ಮವು ಇಡೀ ಜಗತ್ತಿನ ವಿಶೇಷವಾಗಿ ಭಾರತದ ಕಲ್ಯಾಣಕ್ಕೆ ತಳಹದಿಯಾಗಿರುವುದು. ಈ ನವಯುಗ ಧರ್ಮಪ್ರವರ್ತಕರಾದ ಶ್ರೀರಾಮಕೃಷ್ಣರು ಹಿಂದಿನ ಎಲ್ಲ ಧರ್ಮ ಪ್ರವರ್ತಕರ ಸುಸಂಸ್ಕೃತ ಆವಿರ್ಭಾವ. ಎಲೈ, ಮಾನವನೆ, ಇದರಲ್ಲಿ ವಿಶ್ವಾಸವಿರಿಸು, ಇದನ್ನು ಗ್ರಹಿಸು !

ಎಲೈ ಮಾನವನೆ ! ಮೃತ ವ್ಯಕ್ತಿ ಮತ್ತೆ ಹುಟ್ಟಿ ಬರುವುದಿಲ್ಲ, ಕಳೆದು ಹೋದ ರಾತ್ರಿ ಪುನಃ ಬರುವುದಿಲ್ಲ, ಒಂದು ಭಾವನೆಯು (emotion)ಅದು ಎಷ್ಟೇ ತೀವ್ರ ವಾಗಿದ್ದರೂ, ಮತ್ತೆ ಅದೇ ರೂಪದಲ್ಲಿ ಕಾಣಿಸಿಕೊಳ್ಳುವುದಿಲ್ಲ, ಜೀವನೂ ಎರಡು ಬಾರಿ ಒಂದೇ ದೇಹವನ್ನು ಧರಿಸಿಬರುವುದಿಲ್ಲ. ಆದ್ದರಿಂದ ಅತೀತದ ಪೂಜೆ ಯನ್ನು ಬಿಟ್ಟು ಪ್ರತ್ಯಕ್ಷದ ಪೂಜೆಗೆ ನಿನ್ನನ್ನು ಆಹ್ವಾನಿಸುತ್ತಿದ್ದೇವೆ. ಕಳೆದುಹೋದುದಕ್ಕೆ ಶೋಕಿಸದೆ ವರ್ತಮಾನದಲ್ಲಿ ಪ್ರಯತ್ನಶೀಲನಾಗಲು ಆಹ್ವಾನಿಸುತ್ತಿದ್ದೇವೆ. ಲುಪ್ತವಾದ ಮತಪಂಥಗಳನ್ನು ಪುನರುದ್ಧಾರ ಮಾಡುವುದರಲ್ಲಿ ಶಕ್ತಿವ್ಯಯ ಮಾಡುವುದನ್ನು ಬಿಟ್ಟು ವರ್ತಮಾನದ ವಿಶಾಲ ಧರ್ಮಮಾರ್ಗದಲ್ಲಿ ಮುಂದುವರಿಯಲು ನಿನ್ನನ್ನು ಆಹ್ವಾನಿಸು ತ್ತಿದ್ದೇವೆ. ಬುದ್ಧಿವಂತನೆ, ಇದನ್ನು ಸರಿಯಾಗಿ ಅರಿತುಕೊ.

ಯಾವ ಶಕ್ತಿಯು ಉಗಮಾವಸ್ಥೆಯಲ್ಲಿಯೇ ಅದರ ಧ್ವನಿ ದಿಗ್ಗಂತಗಳಲ್ಲಿಯೂ ಹರಡಿ ಎಲ್ಲೆಲ್ಲಿಯೂ ಪ್ರತಿಧ್ವನಿಗೊಳ್ಳುತ್ತಿರುವುದೊ ಅದು ಪೂರ್ಣಾವಸ್ಥೆಯನ್ನು ತಲುಪಿ ದಾಗ ಹೇಗಿರುವುದೆಂಬುದನ್ನು ನೀನೇ ಊಹಿಸಿನೋಡು. ವ್ಯರ್ಥ ಸಂದೇಹ, ದುರ್ಬಲತೆ, ದಾಸ್ಯ ಪ್ರವೃತ್ತಿಯು ದ್ವೇಷಾಸೂಯೆಗಳನ್ನು ತ್ಯಜಿಸಿ ಈ ಮಹಾಚಕ್ರ ಪರಿವರ್ತನೆಯಲ್ಲಿ ಸಹಾಯಕನಾಗು. ನಾವು ಪ್ರಭುವಿನ ದಾಸರು, ಅವನ ಪುತ್ರರು, ಅವನ ಲೀಲಾಸಹಾಯ ಕರು ಎಂದು ಭಾವಿಸಿ ಕಾರ್ಯಕ್ಷೇತ್ರಕ್ಕೆ ಇಳಿ.

ವಿವೇಕಾನಂದ

ಮೊದಲನೆಯ ಅಧ್ಯಾಯ

ಶ್ರೀರಾಮಕೃಷ್ಣರು ಭಾವಮುಖದಲ್ಲಿ

1. ಶ್ರೀರಾಮಕೃಷ್ಣರ ಮಾತಿನ ಆಳ ಅರ್ಥ 2. ಎಲ್ಲ ಅವತಾರಪುರುಷರ ನುಡಿಗಳೂ ಹೀಗೆಯೇ 3. ಗಿರೀಶನ ವಕಾಲತ್ತನ್ನು ಸ್ವೀಕರಿಸುವುದು 4. ವಕಾಲತ್ತನ್ನು ಕೊಟ್ಟಮೇಲೆ ಗಿರೀಶನ ಮನಃಸ್ಥಿತಿ 5. ಅನಂತರ ಗಿರೀಶನಿಗೆ ಬೋಧನೆ 6. ವಕಾಲತ್ತಿನ ಗೂಢಾರ್ಥ ಗಿರೀಶನಿಗೆ ತಿಳಿಯಿತು 7. ಅವತಾರಪುರುಷರು ಮಾತ್ರ ವಕಾಲತ್ತು ವಹಿಸಿಕೊಳ್ಳಬಲ್ಲರು 8. ಇದಕ್ಕೆ ಉದಾಹರಣೆ 9. ವಕಾಲತ್ತಿನ ಸಂಬಂಧವಾಗಿ ಶ್ರೀರಾಮಕೃಷ್ಣರ ದರ್ಶನ 10. ಶ್ರೀರಾಮಕೃಷ್ಣರು ಕುಷ್ಠರೋಗವನ್ನು ಗುಣಪಡಿಸಿದುದು 11. ವಕಾಲತ್ತು ಕೊಡುವುದು ಸುಲಭವಲ್ಲ 12. ಯಾವ ಸ್ಥಿತಿಯಲ್ಲಿ ವಕಾಲತ್ತನ್ನು ಕೊಡಬಹುದು 13. ವಕಾಲತ್ತಿನ ಸಂಬಂಧವಾಗಿ ಕೊನೆಯ ಮಾತು 14. ಬ್ರಾಹ್ಮಣ ಮತ್ತು ಗೋಹತ್ಯೆಯ ಕಥೆ 15. ಸಾಧಕನ ಮನಸ್ಸು ವಿಕಾಸಹೊಂದಿದಂತೆ ಶ್ರೀರಾಮಕೃಷ್ಣರ ಮಾತಿನ ಆಳ ಅರ್ಥ ತಿಳಿಯುತ್ತದೆ 16. ಸಾಧನೆಯನ್ನು ಮಾಡುತ್ತ ಇರುವುದು ಆವಶ್ಯಕ 17. ಮಂದಭಕ್ತಿಯನ್ನು ತ್ಯಜಿಸಬೇಕು 18. ಭಾವಕ್ಕನುಗುಣವಾಗಿ ದೈಹಿಕ ಪರಿವರ್ತನೆ 19. ಎಲ್ಲರ ಎಲ್ಲ ಭಾವವನ್ನು ಅರಿಯುವ ಸಾಮರ್ಥ್ಯ ಶ್ರೀರಾಮಕೃಷ್ಣರಿಗಿತ್ತು 20. ೧ನೆ ಉದಾ : ಮಣಿಮೋಹನನ ಪುತ್ರಶೋಕದ ಕಥೆ 21. ೨ನೆ ಉದಾ : ಕಾಮತ್ಯಾಗದ ಸಂಬಂಧವಾಗಿ ಶ್ರೀರಾಮಕೃಷ್ಣರ ಹೇಳಿಕೆ 22. ೩ನೆ ಉದಾ : ಈ ಸಂಬಂಧವಾಗಿ ಯೋಗಾನಂದರಿಗೆ ಉಪದೇಶ 23. ೪ನೆ ಉದಾ : ಮಣಿಮೋಹನನ ಸಂಬಂಧಿಕನ ಕಥೆ 24. ಸ್ತ್ರೀಯರ ಎಲ್ಲ ಮನಃಸ್ಥಿತಿಯನ್ನು ಅರಿಯುವ ಸಾಮರ್ಥ್ಯ ಅವರಿಗಿತ್ತು 25. ಇದಕ್ಕೆ ಕಾರಣ-ಶುಕದೇವನ ಕತೆ 26. ಸ್ತ್ರೀಯರು ಅವರೊಡನೆ ನಿಃಸಂಕೋಚವಾಗಿ ವ್ಯವಹರಿಸುತ್ತಿದ್ದರು 27. ಇವರ ದೃಷ್ಟಾಂತಗಳು 28. ಸ್ತ್ರೀಯರ ಹಾವಭಾವಗಳನ್ನು ಅವರು ಅನುಕರಿಸುತ್ತಿದ್ದುದು 29. ಅವರಲ್ಲಿ ಸ್ತ್ರೀಪುರುಷ ಭಾವಗಳೆರಡೂ ಸಮಾವೇಶಗೊಂಡಿದ್ದುವು 30. ಅವರು ಭಾವಮುಖದಲ್ಲಿದ್ದುದರಿಂದ ಎಲ್ಲರ ಭಾವವನ್ನು ಅರಿಯುವ ಸಾಮರ್ಥ್ಯ ಅವರಿಗಿತ್ತು.

1. ಹನ್ನೆರಡು ವರ್ಷಗಳ ಸುದೀರ್ಘ ಅಲೌಕಿಕ ತಪಸ್ಸಿನನಂತರ ಶ್ರೀ ಜಗನ್ಮಾತೆಯು ಶ್ರೀರಾಮಕೃಷ್ಣರಿಗೆ ಹೇಳಿದಳು, "ನೀನು 'ಭಾವಮುಖ'ದಲ್ಲಿ ಇರು"— ಎಂದು. ಶ್ರೀರಾಮಕೃಷ್ಣರೂ ಅಂತೆಯೇ ಮಾಡಿದರು. ಇದು ಈಗ ಎಲ್ಲರಿಗೂ ತಿಳಿದ ವಿಷಯ. ಆದರೆ ಭಾವಮುಖದಲ್ಲಿರುವುದೆಂದರೆ ಏನು ಮತ್ತು ಅದರ ಅರ್ಥವೇನು

ಎಂಬುದನ್ನು ತಿಳಿಯುವುದು ಬಹಳ ಕಷ್ಟ. ಇಪ್ಪತ್ತೆಂಟು ವರ್ಷಗಳ ಹಿಂದೆ ಸ್ವಾಮಿ ವಿವೇಕಾನಂದರು ನಮ್ಮ ಒಬ್ಬ ಮಿತ್ರನಿಗೆ ಹೀಗೆ ಹೇಳಿದರು: "ಶ್ರೀರಾಮಕೃಷ್ಣರ ಒಂದೊಂದು ವಾಕ್ಯವನ್ನೂ ತೆಗೆದುಕೊಂಡು ದೊಡ್ಡ ದೊಡ್ಡ ದರ್ಶನ ಗ್ರಂಥಗಳನ್ನು ಬರೆಯಬಹುದು." ಮಿತ್ರನು ಅಚ್ಚರಿಯಿಂದ ಹೇಳಿದನು, "ನಿಜವೆ? ನನಗೆ ಶ್ರೀರಾಮಕೃಷ್ಣರ ಮಾತಿನಲ್ಲಿ ಅಷ್ಟೊಂದು ಆಳ ಅರ್ಥವೇನೂ ಕಂಡುಬರುವುದಿಲ್ಲ. ಅವರ ಯಾವುದಾದರೂ ಒಂದು ವಾಕ್ಯವನ್ನು ತೆಗೆದುಕೊಂಡು ಆ ರೀತಿ ವ್ಯಾಖ್ಯಾನಿಸಿ ತೋರಿಸುತ್ತೀಯಾ?"

ಸ್ವಾಮೀಜೀ: ನಿನಗೆ ತಿಳಿಯುವ ಶಕ್ತಿಯಿದ್ದಿದ್ದರೆ ತಿಳಿಯುತ್ತಿದ್ದೆ. ಆಗಲಿ, ಶ್ರೀರಾಮಕೃಷ್ಣರ ಯಾವುದಾದರೂ ಒಂದು ವಾಕ್ಯವನ್ನು ಹೇಳು, ನಾನು ವ್ಯಾಖ್ಯಾನಿಸುತ್ತೇನೆ.

ಮಿತ್ರ: ಒಳ್ಳೆಯದು, ಸರ್ವಭೂತಗಳಲ್ಲಿಯೂ ನಾರಾಯಣನನ್ನು ನೋಡುವ ಸಂಬಂಧವಾಗಿ ಶ್ರೀರಾಮಕೃಷ್ಣರು 'ಆನೆಯೂ ನಾರಾಯಣ, ಮಾಹುತನೂ ನಾರಾಯಣ' ಎಂಬ ಕತೆಯನ್ನು ಹೇಳಿರುವರು. ಅದರ ಬಗ್ಗೆ ವಿವರಿಸಿ ಹೇಳು.

ಸ್ವಾಮೀಜೀ ತತ್‌ಕ್ಷಣ ತಮ್ಮ ವ್ಯಾಖ್ಯಾನವನ್ನು ಪ್ರಾರಂಭಿಸಿದರು. ಪ್ರಾಚ್ಯ ಮತ್ತು ಪಾಶ್ಚಾತ್ಯ ದೇಶಗಳ ಪಂಡಿತರುಗಳ ಮಧ್ಯೆ ನಡೆಯುತ್ತಿರುವ ಸ್ವಾಧೀನ ಇಚ್ಛೆ—ಅದೃಷ್ಟವಾದ ಅಥವಾ ಪುರುಷಕಾರ-ದೇವೇಚ್ಛೆ-ಇದರ ಕುರಿತಾದ ವಾದವಿವಾದಗಳನ್ನು ವಿವರಿಸಿದರು, ಮತ್ತು ಇದುವರೆಗೂ ಈ ವಿಷಯದಲ್ಲಿ ಒಂದು ಸೂಕ್ತ ನಿರ್ಣಯಕ್ಕೆ ಬಂದಿಲ್ಲವೆಂಬುದನ್ನು ವಿವರಿಸಿ ಶ್ರೀರಾಮಕೃಷ್ಣರ ಈ ಕತೆಯು ಈ ಸಮಸ್ಯೆಗೆ ಅತ್ಯುತ್ತಮವಾದ ಪರಿಹಾರ ಎಂಬುದನ್ನು ಮೂರುದಿನಗಳವರೆಗೆ ವಿವರಿಸಿ ಹೇಳಿದರು.

2. ವಾಸ್ತವಿಕವಾಗಿಯೂ ಶ್ರೀರಾಮಕೃಷ್ಣರ ಅತ್ಯಂತ ಸಾಮಾನ್ಯ ದೈನಿಕ ವ್ಯವಹಾರಗಳಲ್ಲಿಯೂ ಮತ್ತು ಉಪದೇಶಗಳಲ್ಲಿಯೂ ಅಡಗಿರುವ ಆಳವಾದ ಅರ್ಥವನ್ನು ಗಮನಿಸಿದಾಗ ಆಶ್ಚರ್ಯವಾಗುತ್ತದೆ. ಎಲ್ಲ ಅವತಾರಪುರುಷರ ವಿಷಯದಲ್ಲಿಯೂ ಈ ಮಾತು ಸತ್ಯ. ಅವರ ಜೀವನವನ್ನು ಪರಿಶೀಲಿಸಿದಾಗ ನಮಗಿದು ಸ್ಪಷ್ಟವಾಗಿ ಕಂಡುಬರುತ್ತದೆ. ಆಚಾರ್ಯ ಶಂಕರರೇ ಮುಂತಾದ ಕೆಲವೇ ಮಂದಿ ಮಹಾಪುರುಷರು ವಿರೋಧಪಕ್ಷದವರ ಕುತರ್ಕವನ್ನು ತಮ್ಮ ವಿದ್ವತ್ತಿನ ಸಹಾಯದಿಂದ ತುಂಡು ತುಂಡಾಗಿ ಕತ್ತರಿಸಿ ಧರ್ಮಸಂಸ್ಥಾಪನೆ ಮಾಡಬೇಕಾಯಿತು. ಇವರನ್ನು ಬಿಟ್ಟರೆ ಉಳಿದ ಮಹಾಪುರುಷರುಗಳೆಲ್ಲ ಸರಳಭಾಷೆಯಲ್ಲಿ ಹೃದಯಸ್ಪರ್ಶಿಯಾದ ಸಣ್ಣ ಸಣ್ಣ ಕತೆಗಳ, ಉಪಮೆಗಳ ಮೂಲಕ ತಾವು ಹೇಳಬೇಕಾದುದನ್ನು ಹೇಳಿಹೋಗಿರುವರು. ಜಟಿಲ ವಾಕ್ಯಗಳನ್ನಾಗಲಿ ದೀರ್ಘ ಸಮಾಸಗಳನ್ನಾಗಲಿ ಅವರು ಬಳಸಲಿಲ್ಲ. ಆದರೆ ಆ ಸರಳವಾಕ್ಯಗಳಲ್ಲಿ, ಆ ಸುಂದರ ಉಪಮೆ ರೂಪಕಗಳಲ್ಲಿ ಗೂಢ ಭಾವಾರ್ಥಗಳಿವೆ. ಮನುಷ್ಯನನ್ನು ಉಚ್ಚ ಆದರ್ಶದೆಡೆಗೆ ಪ್ರೇರೇಪಿಸುವ ಅಪಾರ ಶಕ್ತಿ ಅಡಗಿದೆ. ನಾವು ಸಾವಿರಾರು ವರ್ಷಗಳು ಪ್ರಯತ್ನಿಸಿದರೂ ಈಗಲೂ ಕೂಡ ಆ ಭಾವಾರ್ಥವನ್ನು

ಸಂಪೂರ್ಣ ಅರಿತಿಲ್ಲ ಅಥವಾ ಆ ಶಕ್ತಿಯ ಸೀಮೆಯನ್ನು ಇನ್ನೂ ಕಂಡಿಲ್ಲ. ನಾವು ನೋಡುತ್ತ ಹೋದಂತೆ ಹೆಚ್ಚು ಹೆಚ್ಚು ಉದಾತ್ತವಾದ ಅರ್ಥಗಳು ನಮ್ಮ ಅರಿವಿಗೆ ಬರತೊಡಗುವುವು. ಅದರ ಬಗ್ಗೆ ನಾವು ಚಿಂತಿಸುತ್ತ ಹೋದಂತೆಲ್ಲ ನಮ್ಮಲ್ಲಿ ಹೆಚ್ಚು ಹೆಚ್ಚು ವೈರಾಗ್ಯ ಜಾಗ್ರತವಾಗುವುದು, ನಮ್ಮ ಮನಸ್ಸು ಹೆಚ್ಚು ಹೆಚ್ಚು ಉನ್ನತ ಸ್ತರಕ್ಕೆ ಏರುವುದು. ನಾವು ಸತ್ಯಸಾಕ್ಷಾತ್ಕಾರದ ಮಾರ್ಗದಲ್ಲಿ ಮುಂದುವರಿದಂತೆಲ್ಲ ಆ ಸರಳವಾಕ್ಯಗಳ ಅಂತರಾರ್ಥ ನಮ್ಮ ಹೃದಯಾಂತರಾಳದಲ್ಲಿ ಸ್ಫುರಿಸುವುದು.

3. ಇದೇ ನಿಯಮ, ಶ್ರೀರಾಮಕೃಷ್ಣರ ಮಾತು ಮತ್ತು ವ್ಯವಹಾರಗಳ ಸಂಬಂಧದಲ್ಲಿಯೂ ಈ ನಿಯಮದ ವ್ಯತಿಕ್ರಮವಾಗಿರುವುದು ಕಂಡುಬರುವುದಿಲ್ಲ. ಮೊದಲು ಅವರ ಮಾತುಗಳನ್ನು ಯಾವರೀತಿ ಅರ್ಥಮಾಡಿಕೊಂಡಿದ್ದೆವೊ ಈಗ ಅದೇ ಮಾತುಗಳಲ್ಲಿ ಇನ್ನೂ ಹೆಚ್ಚಿನ ಗೂಢಾರ್ಥಗಳು ಕಂಡುಬರುತ್ತಿವೆ. ಅದಕ್ಕೆ ಇಲ್ಲಿ ಒಂದು ಉದಾಹರಣೆಯನ್ನು ಕೊಡುತ್ತೇವೆ. ಗಿರೀಶಚಂದ್ರ ಘೋಷನು ಶ್ರೀರಾಮಕೃಷ್ಣರನ್ನು ಕೆಲವುಬಾರಿ ಸಂಧಿಸಿದಮೇಲೆ ಶರಣಾಗತಿಭಾವದಿಂದ ಅವರನ್ನು ಒಮ್ಮೆ ಕೇಳಿದ: "ಇಂದಿನಿಂದ ನಾನೇನು ಮಾಡಲಿ ಹೇಳಿ ?"

ಶ್ರೀರಾಮಕೃಷ್ಣರು : "ಏನು ಮಾಡುತ್ತಿರುವೆಯೊ ಅದನ್ನೇ ಮುಂದುವರಿಸು. ಈಗ ಇದ (ಸಂಸಾರ) ಅದು(ಈಶ್ವರ) ಎರಡನ್ನೂ ಆಶ್ರಯಿಸಿಕೊಂಡಿರು. ಆಮೇಲೆ ಯಾವಾಗ ಇದು ಹೋಗುವುದೊ ಆಗ ಏನು ಆಗಬೇಕೊ ಆಗುವುದು. ಆದರೆ ಬೆಳಿಗ್ಗೆ ಮತ್ತು ಸಂಜೆ ಅವನ ಸ್ಮರಣ–ಮನನ ಮಾಡುತ್ತಿರು." ಹೀಗೆ ಹೇಳಿ ಗಿರೀಶನ ಪ್ರತಿಕ್ರಿಯೆಯನ್ನು ನಿರೀಕ್ಷಿಸುತ್ತಿರುವಂತೆ ಅವನನ್ನೇ ನಿಟ್ಟಿಸಿ ನೋಡಿದರು.

ಗಿರೀಶನು ಕೇಳಿ ಖಿನ್ನ ಮನಸ್ಕನಾಗಿ ಯೋಚಿಸತೊಡಗಿದ: "ನನಗೆ ಯಾವ ಕಾರ್ಯವನ್ನೇ ಆಗಲಿ, ಸ್ನಾನ–ಆಹಾರ–ನಿದ್ರೆಗಳನ್ನೇ ಆಗಲಿ ಒಂದು ನಿಯಮಿತರೀತಿಯಲ್ಲಿ ಮಾಡಲಾಗುವುದಿಲ್ಲ—ಯಾವುದಕ್ಕೂ ಒಂದು ನಿರ್ದಿಷ್ಟವಾದ ವೇಳೆಯಿಲ್ಲ. ಬೆಳಿಗ್ಗೆ ಮತ್ತು ಸಂಜೆ ತಪ್ಪದೆ ಸ್ಮರಣ–ಮನನ ಮಾಡಬೇಕೆಂದರೆ ಖಂಡಿತ ನೆನಪಾಗುವುದಿಲ್ಲ. ಗುರುವಿನ ಆಜ್ಞೆಯನ್ನು ಉಲ್ಲಂಘಿಸುವುದೂ ಮಹಾಪಾಪ. ಆದ್ದರಿಂದ ಈ ಮಾತನ್ನು ಹೇಗೆ ಒಪ್ಪಿಕೊಳ್ಳಲಿ ? ಸಾಮಾನ್ಯ ಜನರಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳದಿರುವುದೇ ದೊಡ್ಡ ತಪ್ಪು ಹಾಗಿರುವಾಗ ಯಾರನ್ನು ಪರಮ ಗುರುವೆಂದು ಸ್ವೀಕರಿಸಿರುವೆನೊ ಅವರ ವಿಷಯದಲ್ಲಿ ಹೇಳುವುದೇನಿದೆ !" ತನ್ನ ಮನಸ್ಸಿನ ವಿಚಾರವನ್ನು ವ್ಯಕ್ತಪಡಿಸಲೂ ಅವನಿಗೆ ಕಷ್ಟವಾಯಿತು. ಮತ್ತೆ ಅವನು ಭಾವಿಸತೊಡಗಿದ, "ಶ್ರೀರಾಮಕೃಷ್ಣರು ನನಗೆ ಒಂದು ಕಠಿಣ ಕಾರ್ಯವನ್ನೂ ಮಾಡಲು ಹೇಳಲಿಲ್ಲ. ಬೇರೆಯವರಿಗಾದರು ಈ ವಿಷಯವನ್ನು ಹೇಳಿದ್ದರೆ ಸಂತೋಷದಿಂದ ಸ್ವೀಕರಿಸುತ್ತಿದ್ದರು." ಆದರೆ ತಾನು ಮಾಡುವುದೇನು ?—ಈಗಿನ ತನ್ನ ಪರಿಸ್ಥಿತಿಯಲ್ಲಿ ಅಷ್ಟು ಮಾತ್ರ ಧರ್ಮಕರ್ಮವನ್ನು ಮಾಡುವುದು ಕೂಡ ತನ್ನ ಸಾಮರ್ಥ್ಯಕ್ಕೆ ಮೀರಿದುದು. ತನ್ನ ಸ್ವಭಾವವೆಂತಹುದೆಂದರೆ ಯಾವುದಾದರೂ ವ್ರತ ಅಥವಾ ನಿಯಮಕ್ಕೆ ಒಳಪಟ್ಟು

ಯಾವಾಗಲೂ ಅದಕ್ಕೆ ಬದ್ಧನಾಗಿರಬೇಕೆಂದರೆ ಮೈ ನಡುಗುವುದು. ಆ ವ್ರತ ಅಥವಾ ನಿಯಮವನ್ನು ಮುರಿಯುವವರೆವಿಗೂ ತನಗೆ ಮನಶ್ಶಾಂತಿಯಿರುವುದಿಲ್ಲ. ಇಡೀ ಜೀವನ ಹೀಗೆಯೇ ನಡೆದುಕೊಂಡು ಬಂದಿದೆ. ತನ್ನ ಇಚ್ಛೆಯಿಂದ ಒಳ್ಳೆಯದೊ ಕೆಟ್ಟದ್ದೊ ಏನು ಮಾಡುವುದಕ್ಕೂ ತೊಂದರೆಯಿಲ್ಲ. ಆದರೆ ನಿರ್ಬಂಧದಿಂದ ಏನಾದರೂ ಮಾಡಬೇಕೆಂದರೆ ತನ್ನಿಂದಾಗದ ಮಾತು. ಹೀಗೆ ತನ್ನ ಅಸಹಾಯಕ ಪರಿಸ್ಥಿತಿಯನ್ನು ಚಿಂತಿಸುತ್ತ ಗಿರೀಶನು ಏನೂ ಹೇಳದೆ ಸುಮ್ಮನೆ ಕುಳಿತುಬಿಟ್ಟನು. ಇಷ್ಟು ಸಣ್ಣ ಕಾರ್ಯವನ್ನು ಮಾಡಲಾಗುವುದಿಲ್ಲ ಎಂದು ಹೇಳುವುದಾದರೂ ಹೇಗೆ ? ಹೇಳಿದರೂ ಶ್ರೀರಾಮಕೃಷ್ಣರು ಮತ್ತಿತರರು ಏನು ಭಾವಿಸಿಯಾರು ? ತನ್ನ ಅಸಹಾಯಕ ಸ್ಥಿತಿ ಯನ್ನು ಅರ್ಥಮಾಡಿಕೊಳ್ಳದೆ ಇವನು ಬರಿ ಸೋಗು ಮಾತು ಆಡುತ್ತಿರುವನು ಎಂದು ಅವರು ಭಾವಿಸಬಹುದು.

ಗಿರೀಶನು ಮೌನವಾಗಿ ಕುಳಿತಿರುವುದನ್ನು ಕಂಡ ಶ್ರೀರಾಮಕೃಷ್ಣರು ಅವನ ಮನಸ್ಸಿನಲ್ಲಿರುವುದನ್ನು ಅರ್ಥಮಾಡಿಕೊಂಡು ಹೇಳಿದರು : "ಒಳ್ಳೆಯದು, ನಿನಗೆ ಅಷ್ಟೂ ಮಾಡಲಾಗದಿದ್ದರೆ ಊಟ ಮಾಡುವ ಮತ್ತು ಮಲಗುವ ಮುಂಚೆ ಒಮ್ಮೆ ಭಗವಂತನನ್ನು ಸ್ಮರಿಸು, ಸಾಕು."

ಮತ್ತೆ ಮೌನವೇ ಅವನ ಉತ್ತರ. ಇಷ್ಟಾದರೂ ತನಗೆ ಮಾಡಲು ಸಾಧ್ಯವೇ ? ಊಟಕ್ಕೆ ನಿರ್ದಿಷ್ಟವಾದ ಸಮಯವಿಲ್ಲ-ಕೆಲವು ದಿನ ಬೆಳಿಗ್ಗೆ ಹತ್ತು ಗಂಟೆಗೆ ಊಟ, ಮತ್ತೆ ಕೆಲವುದಿನ ಸಂಜೆ ಐದುಗಂಟೆಗೆ. ರಾತ್ರಿಯೂ ಹೀಗೆಯೇ ಕೆಲವು ದಿನ ಊಟ ಮಾಡಿದರಾಯಿತು ಇಲ್ಲದಿದ್ದರೆ ಇಲ್ಲ. ಕೋರ್ಟು ಕಛೇರಿ ಇತ್ಯಾದಿ ವಿಷಯಗಳು ಯಾವಾಗಲೂ ತಲೆ ತಿನ್ನುತ್ತಿರುತ್ತವೆ. ಎಷ್ಟೊ ಬಾರಿ ಊಟ ಮಾಡುತ್ತಿರುವೆನೆಂಬ ಅರಿವೆ ಇರುವುದಿಲ್ಲ–ಮನಸ್ಸು ಎಲ್ಲೊ ಇರುತ್ತದೆ. ಬ್ಯಾರಿಸ್ಟರ್‌ಗೆ ತಾನು ಕಳಿಸಿದ ಫೀಸು ಸರಿಯಾಗಿ ತಲುಪಿದೆಯೊ ಇಲ್ಲವೊ, ಮೊಕದ್ದಮೆಯ ಸಮಯದಲ್ಲಿ ಅವನು ಬರದಿದ್ದರೆ ಏನುಗತಿ ? ಹೀಗೆ ಏನೇನೊ ಚಿಂತೆಗಳು ಕಾಡುತ್ತಿರುತ್ತವೆ. ಇಂಥ ಪರಿಸ್ಥಿತಿಯಲ್ಲಿ ಭಗವಂತನನ್ನು ಸ್ಮರಿಸುವುದೆಂತು ? ಶ್ರೀರಾಮಕೃಷ್ಣರು ಇಷ್ಟು ಸುಲಭವಾದ ಕಾರ್ಯ ವನ್ನು ಹೇಳಿದರೂ 'ಆಗಲಿ ಮಾಡುತ್ತೇನೆ' ಎಂದು ತನಗೆ ಹೇಳಲಾಗುತ್ತಿಲ್ಲವಲ್ಲ ! ಗಿರೀಶನಿಗೆ ತುಂಬ ಸಂಕಟವಾಯಿತು. ಮನಸ್ಸಿನಲ್ಲಿ ಭಯ ನಿರಾಶೆಯ ತರಂಗಗಳು ಎದ್ದುವು. ಶ್ರೀರಾಮಕೃಷ್ಣರು ಗಿರೀಶನ ಕಡೆ ತಿರುಗಿ ನಗುನಗುತ್ತ ಹೇಳಿದರು: "ಅದೂ ನಿನಗೆ ಆಗುವುದಿಲ್ಲ ಎಂದಾದರೆ, ಒಳ್ಳೆಯದು, ಹಾಗಾದರೆ ನಿನ್ನ ವಕಾಲತ್ತನ್ನು ನನಗೆ ಕೊಡು."

4. ಗಿರೀಶನು ಇಷ್ಟಪಟ್ಟಂತೆಯೇ ಆಯಿತು. ಈಗ ಅವನ ಹೃದಯ ಶಾಂತ ವಾಯಿತು. ಅಷ್ಟೆ ಅಲ್ಲದೇ ಶ್ರೀರಾಮಕೃಷ್ಣರ ಅಪಾರ ದಯೆಯನ್ನು ನೋಡಿ ಅವರ ಮೇಲಿನ ಪ್ರೀತಿ ವಿಶ್ವಾಸ ನೂರ್ಮಡಿಸಿತು. ಗಿರೀಶನು ಭಾವಿಸಿದ : "ಅಬ್ಬ, ಒಂದು ಹೊರೆ ತಪ್ಪಿತಲ್ಲ. ನಿಯಮಗಳೆಂದರೆ ಹುಲಿಯಂತೆ ಕಾಣುವುದು, ಇನ್ನು ಅವುಗಳ

ಬಾಯಿಗೆ ಬೀಳಬೇಕಾಗಿಲ್ಲ. ನಾನು ಏನೇ ಮಾಡಬಹುದು, ಶ್ರೀರಾಮಕೃಷ್ಣರು ತಮ್ಮ ದಿವ್ಯಶಕ್ತಿಯ ಬಲದಿಂದ ನನ್ನನ್ನು ಉದ್ಧಾರ ಮಾಡುತ್ತಾರೆ.'' ಗಿರೀಶಚಂದ್ರನ ದೃಷ್ಟಿಯಲ್ಲಿ ವಕಾಲತ್ತು ಅವರಿಗೆ ಕೊಡುವುದು ಅಥವಾ ಸಮಸ್ತ ಭಾರವನ್ನು ಅವರಮೇಲೆ ಹೊರಿಸುವುದು ಎಂದರೆ ತಾನೇ ಪ್ರಯತ್ನ ಪೂರ್ವಕವಾಗಿ ಏನನ್ನೂ ಬಿಡಬೇಕಾಗಿಲ್ಲ, ಯಾವ ಸಾಧನೆಯನ್ನೂ ಮಾಡಬೇಕಾಗಿಲ್ಲ ಮತ್ತು ಶ್ರೀರಾಮಕೃಷ್ಣರೇ ತಮ್ಮ ಶಕ್ತಿಯಿಂದ ತನ್ನಲ್ಲಿರುವ ಪ್ರಾಪಂಚಿಕತೆಯನ್ನೆಲ್ಲ ನಾಶಗೊಳಿಸುವರು ಎಂದು ಭಾವಿಸಿದ್ದನು. ನಿಯಮದ ಉರುಳು ಕೊರಳಿನಿಂದ ಜಾರಿತು ನಿಜ, ಆದರೆ ಅದಕ್ಕಿಂತಲೂ ನೂರುಪಟ್ಟು ಅಧಿಕವಾದ ಪ್ರೀತಿಯ ಉರುಳನ್ನು ತಾನು ಕೊರಳಿಗೆ ಹಾಕಿಕೊಂಡನು ಎಂಬುದನ್ನು ಆಗ ಗಿರೀಶನು ಅರ್ಥಮಾಡಿಕೊಳ್ಳಲಿಲ್ಲ. ಒಳ್ಳೆಯದಾಗಲಿ ಕೆಟ್ಟದ್ದಾಗಲಿ, ಯಶಸ್ಸಾಗಲಿ ಅಪಯಶಸ್ಸಾಗಲಿ, ಎಷ್ಟೇ ದುಃಖಕಷ್ಟಗಳು ಬರಲಿ ಅವುಗಳೆಲ್ಲವನ್ನೂ ಮೌನವಾಗಿ ಸಹಿಸುವುದಲ್ಲದೆ ಅವುಗಳ ವಿರುದ್ಧವಾಗಿ ತಾನು ಏನೂ ಮಾತೆತ್ತುವಂತಿಲ್ಲ ಎಂಬ ವಿಷಯ ಆಗ ಗಿರೀಶನ ಬುದ್ಧಿಗೆ ಹೊಳೆಯಲಿಲ್ಲ, ಹೊಳೆಯುವುದು ಸಾಧ್ಯವೂ ಇರಲಿಲ್ಲ. ಬೇರೆ ಎಲ್ಲ ಚಿಂತೆಯೂ ಅವನ ಮನಸ್ಸಿನಿಂದ ದೂರವಾಗಿ ಶ್ರೀರಾಮಕೃಷ್ಣರ ಅಪಾರ ಕರುಣೆಯೊಂದೇ ಅವನಿಗಾಗ ಎದ್ದು ಕಾಣುತ್ತಿತ್ತು. ಶ್ರೀರಾಮಕೃಷ್ಣರನ್ನು ಅವಲಂಬಿಸಿದ ಒಂದು ಹೊಸ ಅಹಂಕಾರ ಅವನಲ್ಲಿ ಉಗಮವಾಗಿ ವೃದ್ಧಿಯಾಗತೊಡಗಿತು. ಜನ ತನ್ನ ಬಗ್ಗೆ ಏನೇ ಭಾವಿಸಲಿ, ಎಷ್ಟೇ ತಿರಸ್ಕರಿಸಲಿ, ಶ್ರೀರಾಮಕೃಷ್ಣರು ಎಲ್ಲ ಸ್ಥಿತಿಯಲ್ಲಿಯೂ ಎಲ್ಲ ಸಮಯದಲ್ಲಿಯೂ ತನ್ನವರಾಗಿರುವರು, ಇನ್ನೇನು ಬೇಕು—ಎಂಬ ಭಾವ ಅವನಿಗುಂಟಾಯಿತು. ಈ ರೀತಿಯ ಅಹಂಭಾವವು ಭಕ್ತಿಶಾಸ್ತ್ರದಲ್ಲಿ ಉನ್ನತಮಟ್ಟದ ಸಾಧನೆಯೆಂದು ಪರಿಗಣಿಸಲ್ಪಟ್ಟಿದೆ. ಇದು ಅಪಾರ ಪುಣ್ಯಫಲದಿಂದ ಲಭಿಸುವಂತಹದು ಎಂಬುದನ್ನು ಅವನು ಹೇಗೆ ಅರಿಯಲು ಸಾಧ್ಯ ? ಏನೇ ಆಗಲಿ, ಗಿರೀಶನು ಈಗ ನಿಶ್ಚಿಂತನಾದ. ಅವನು ಉಣ್ಣುವಾಗ ಮಲಗುವಾಗ ಕುಳಿತುಕೊಳ್ಳುವಾಗ ಒಂದೇ ಆಲೋಚನೆ—''ಶ್ರೀರಾಮಕೃಷ್ಣರು ನನ್ನ ಸಂಪೂರ್ಣ ಭಾರವನ್ನು ವಹಿಸಿಕೊಂಡಿರುವರು'' ಎಂದು. ಇದು ಸದಾ ಮನಸ್ಸಿನಲ್ಲಿ ಉದಯಿಸುತ್ತಿದ್ದುದರಿಂದ ಶ್ರೀರಾಮಕೃಷ್ಣರ ಧ್ಯಾನವಾದಂತಾಯಿತು. ಈ ಆಲೋಚನೆ ಅವನ ಎಲ್ಲ ಕರ್ಮ ಮನೋಭಾವಗಳ ಮೇಲೆ ಪ್ರಭಾವವನ್ನು ಉಂಟುಮಾಡಿ ತನ್ನ ಆಧಿಪತ್ಯವನ್ನು ವಿಸ್ತರಿಸತೊಡಗಿತು. ಇದೊಂದೂ ಅವನಿಗೆ ಅರ್ಥವಾಗದಿದ್ದರೂ ಅವನು ಸುಖವಾಗಿದ್ದ. ಏಕೆಂದರೆ ಅವನು ಶ್ರೀರಾಮಕೃಷ್ಣರ ಪ್ರೀತಿಗೆ ಒಳಗಾಗಿದ್ದ, ಅವರವನಾಗಿದ್ದ.

5. ಶ್ರೀರಾಮಕೃಷ್ಣರು ಯಾವಾಗಲೂ ಹೇಳುತ್ತಿದ್ದರು, ''ಎಂದೂ ಯಾರಭಾವವನ್ನೂ ಕೆಡಿಸಬಾರದು''ಎಂದು. ಅವರೂ ಯಾವಾಗಲೂ ಹಾಗೆಯೇ ವರ್ತಿಸುತ್ತಿದ್ದರು. ಮೇಲೆ ಹೇಳಿದಂತೆ ಗಿರೀಶನ ಭಾವವು ಎಂತಹುದೆಂದು ಅರಿತುಕೊಂಡು ಅದಕ್ಕನುಗುಣವಾಗಿಯೇ ಅವನಿಗೆ ಉಪದೇಶ ನೀಡತೊಡಗಿದರು. ಒಂದುದಿನ ಗಿರೀಶನು ಯಾವುದೊ ವಿಷಯದಲ್ಲಿ ಶ್ರೀರಾಮಕೃಷ್ಣರ ಮುಂದೆ ''ನಾನು ಮಾಡುತ್ತೇನೆ'' ಎಂದಾಗ ಅವರು

ಹೇಳಿದರು: "ಏನು ಹೇಳುತ್ತಿರುವೆ? 'ನಾನು ಮಾಡುತ್ತೇನೆ' ಎಂದು ಹೇಳುವೆಯೇಕೆ? ಒಂದು ವೇಳೆ ಮಾಡಲಾಗದಿದ್ದರೆ ? ಈಶ್ವರನ ಇಚ್ಛೆಯಾದರೆ ಮಾಡುತ್ತೇನೆ—ಎಂದು ಹೇಳಬೇಕು." ಗಿರೀಶನೂ ಆಲೋಚಿಸಿದ : "ಅದು ನಿಜ. ನಾನು ಭಗವಂತನ ಮೇಲೆ ಎಲ್ಲ ಭಾರವನ್ನು ಹೊರಿಸಿದ್ದೇನೆ, ಅವನೇ ನನ್ನ ಎಲ್ಲ ಭಾರವನ್ನು ವಹಿಸಿಕೊಂಡಿರುವನು. ಹಾಗಿರುವಾಗ ಹಾಗೆ ಮಾಡುವುದು ಉಚಿತವೆಂದು ಅವನಿಗೆ ಅನಿಸಿದರೆ ಆಗ ಮಾತ್ರ ನಾನು ಮಾಡಬಹುದು. ಇಲ್ಲದಿದ್ದರೆ ನನ್ನ ಸಾಮರ್ಥ್ಯದಿಂದ ನಾನು ಹೇಗೆ ಮಾಡಲು ಸಾಧ್ಯ ?" ಅನಂತರ ಅವನು ಯಾವುದೇ ವಿಷಯದಲ್ಲಾಗಲಿ ನಾನು ಮಾಡುತ್ತೇನೆ, ಎಂಬ ಭಾವವನ್ನು ತ್ಯಜಿಸಲು ಪ್ರಾರಂಭಿಸಿದ.

6. ಹೀಗೆಯೇ ದಿನಗಳು ಕಳೆದವು. ಶ್ರೀರಾಮಕೃಷ್ಣರೂ ಕಣ್ಮರೆಯಾದರು. ಪತ್ನೀ ಪುತ್ರರ ವಿಯೋಗವೇ ಮುಂತಾದ ಅನೇಕ ದುಃಖಗಳನ್ನು ಅವನು ಅನುಭವಿಸಬೇಕಾಯಿತು. ಪ್ರತಿ ಬಾರಿಯೂ ಅವನ ಮನಸ್ಸು ಅವನಿಗೆ ಹೇಳುತ್ತಿತ್ತು, "ಈ ರೀತಿ ಆಗುವುದು ನಿನಗೆ ಒಳ್ಳೆಯದಾದುದರಿಂದಲೇ ಶ್ರೀರಾಮಕೃಷ್ಣರು ಈ ರೀತಿ ಆಗುವಂತೆಮಾಡಿರುವರು. ನೀನೇ ಅವರ ಮೇಲೆ ಎಲ್ಲ ಭಾರ ಹೊರಿಸಿದ್ದೆ, ಅವರೂ ಸ್ವೀಕರಿಸಿದ್ದರು. ಯಾವ ಮಾರ್ಗದಲ್ಲಿ ನಿನ್ನನ್ನು ನಡೆಸಿಕೊಂಡು ಹೋಗುತ್ತೇನೆ ಎಂಬುದರ ಬಗ್ಗೆ ಯಾವ ಸೂಚನೆಯನ್ನೂ ಅವರು ನೀಡಿಲ್ಲ. ನಿನಗೆ ಈ ಮಾರ್ಗ ಸುಲಭವಾಗಿರುವುದರಿಂದ ಈ ಮಾರ್ಗದಲ್ಲಿ ನಡೆಸಿಕೊಂಡುಹೋಗುತ್ತಿರುವರು. ನೀನು ಈಗ ಬೇಡ ಎಂದು ಹೇಳಲಾಗುವುದಿಲ್ಲ. ವಕಾಲತ್ತು ನೀಡುವುದು ಅಥವಾ ಜವಾಬ್ದಾರಿ ವಹಿಸಿಕೊಡುವುದು ಎಂದರೆ ಕೇವಲ ಬಾಯಿ ಮಾತು ಆಯಿತೇನು ?' ಹೀಗೆ ದಿನಗಳೆದಂತೆ ಗಿರೀಶನಿಗೆ ವಕಾಲತ್ತು ನೀಡುವುದೆಂದರೆ ಏನು ಎಂಬುದು ಹೆಚ್ಚು ಹೆಚ್ಚು ಅರಿವಾಗತೊಡಗಿತು. ಈಗಲಾದರೂ ಅದರ ಸಂಪೂರ್ಣ ಅರ್ಥ ತಿಳಿದಿದೆಯೇ ? ಗಿರೀಶನನ್ನು ಪ್ರಶ್ನಿಸಿದರೆ ಅವನು ಹೇಳುತ್ತಾನೆ, "ಈಗಲೂ ಅರ್ಥಮಾಡಿಕೊಳ್ಳುವುದು ಬಹಳವಿದೆ. ವಕಾಲತ್ತು ನೀಡುವುದರ ಹಿಂದೆ ಎಂಥ ಅರ್ಥವಿದೆ ಎಂಬುದು ಆಗ ನನಗೆ ತಿಳಿದಿತ್ತೇನು ? ಸಾಧನೆ ಭಜನೆ ಜಪ ತಪ ಈ ಎಲ್ಲ ಕಾರ್ಯಗಳಿಗೆ ಒಂದು ಸಮಯದ ಅಂತ್ಯವಿದೆ. ಆದರೆ ಯಾರು ವಕಾಲತ್ತನ್ನು ವಹಿಸಿಕೊಟ್ಟಿರುವರೊ ಅವನ ಕಾರ್ಯಕ್ಕೆ ಅಂತ್ಯವೇ ಇಲ್ಲ. ಏಕೆಂದರೆ ಅವನು ಪ್ರತಿ ಹೆಜ್ಜೆ ಇಡುವಾಗ, ಪ್ರತಿ ಉಸಿರಿನಲ್ಲಿಯೂ ತಾನದನ್ನು ಭಗವಂತನನ್ನು ಆಶ್ರಯಿಸಿ ಅವನ ಶಕ್ತಿಯಿಂದ ಮಾಡುತ್ತಿರುವೆನೊ, ಅಥವಾ ತನ್ನ ಕ್ಷುದ್ರ ಅಹಂ ಅನ್ನು ಆಶ್ರಯಿಸಿ ಮಾಡುತ್ತಿರುವೆನೊ ಎಂಬುದನ್ನು ಪರಿಶೀಲಿಸಿ ತಿಳಿಯಬೇಕಾಗುತ್ತದೆ."

7. ಈ ವಿಚಾರದ ಬಗ್ಗೆ ಚಿಂತಿಸುವಾಗ ಅನೇಕ ವಿಷಯಗಳು ಮನಸ್ಸಿಗೆ ಬರುತ್ತಿವೆ. ಜಗತ್ತಿನ ಇತಿಹಾಸದಲ್ಲಿ ಯೇಸುಕ್ರಿಸ್ತ, ಚೈತನ್ಯ ಮುಂತಾದ ಅವತಾರ ಪುರುಷರೂ ಇದೇ ರೀತಿ ಅಭಯದಾನ ನೀಡಿರುವುದು ಕಂಡುಬರುತ್ತದೆ. ಸಾಧಾರಣ ಗುರುಗಳಿಗೆ ಈ ರೀತಿ ಮಾಡಲು ಸಾಮರ್ಥ್ಯವಿರುವುದಿಲ್ಲ. ಸಾಧಾರಣ ಗುರುಗಳು ಅಥವಾ ಸಾಧುಗಳು ತಾವು ಸಾಧನೆಯ ಮೂಲಕ ಏನನ್ನು ಸಾಧಿಸಿರುವರೊ ಅದನ್ನೆ ಇತರರಿಗೆ ಒತ್ತಿ ಹೇಳ

ಬಹುದು ಅಷ್ಟೆ. ತಾವೇ ಪವಿತ್ರ ಜೀವನವನ್ನು ನಡೆಸುತ್ತ ಇತರರನ್ನೂ ಪವಿತ್ರತೆಯ ಕಡೆಗೆ ಆಕರ್ಷಿಸಬಹುದು ಅಷ್ಟೆ. ಆದರೆ ನಾನಾ ರೀತಿಯ ಬಂಧನಗಳಿಗೆ ಸಿಕ್ಕಿಕೊಂಡು ಅಸಹಾಯಕನಾಗಿ ತಾನೇನೂ ಮಾಡಲಾರೆ ಎಂಬ ಹತಾಶ ಸ್ಥಿತಿಯಲ್ಲಿರುವವರಿಗೆ ಸಾಧಾರಣ ಗುರುಗಳು ಏನೂ ಮಾಡಲಾರರು. 'ನಿನ್ನ ದುಷ್ಕೃತಿಗಳ ಭಾರವನ್ನೆಲ್ಲ ನಾನೇ ವಹಿಸಿಕೊಂಡಿರುವೆನು, ಅವುಗಳ ಫಲವನ್ನೆಲ್ಲ ನಾನೇ ಭೋಗಿಸುತ್ತೇನೆ'—ಈ ರೀತಿ ಭರವಸೆ ನೀಡುವುದು ಮಾನವನಿಗೆ ಅಸಾಧ್ಯವಾದ ಮಾತು. ಮಾನವ ಹೃದಯದಲ್ಲಿ ಈ ರೀತಿ ಧರ್ಮಗ್ಲಾನಿ ಉಂಟಾದಾಗಲೇ ಭಗವಂತನು ಕೃಪೆಯಿಂದ ಅವತರಿಸಿ ಅವನ ಫಲವನ್ನೆಲ್ಲ ತಾನೇ ಭೋಗಿಸಿ ಅವನನ್ನು ಆ ಬಂಧನದ ಸುಳಿಯಿಂದ ಪಾರುಮಾಡುವನು. ಆದರೂ ಅವನನ್ನು ಸಂಪೂರ್ಣ ಮುಕ್ತಗೊಳಿಸುವುದಿಲ್ಲ, ಅವನ ಶಿಕ್ಷಣಕ್ಕಾಗಿ ಅವನು ಸ್ವಲ್ಪ ಪ್ರಯತ್ನ ಮಾಡುವಂತೆ ಮಾಡುತ್ತಾನೆ. ಶ್ರೀರಾಮಕೃಷ್ಣರು ಹೇಳುವಂತೆ, "ಅವತಾರ ಪುರುಷರ ಕೃಪೆಯಿಂದ ಮಾನವನ ಹತ್ತು ಜನ್ಮಗಳ ಭೋಗವು ಒಂದೇ ಜನ್ಮದಲ್ಲಿ ತೀರಿ ಹೋಗುವುದು."

8. ಇದು ರಾಷ್ಟ್ರಕ್ಕೆ ಅನ್ವಯಿಸುವಂತೆ ವ್ಯಕ್ತಿಗೂ ಅನ್ವಯಿಸುವುದು. ಇದನ್ನೆ ಗೀತೆಯಲ್ಲಿ ವಿಶ್ವರೂಪ ದರ್ಶನಕ್ಕಾಗಿ ಅರ್ಜುನನು ದಿವ್ಯಚಕ್ಷುವನ್ನು ಪಡೆದುದಾಗಿಯೂ ಪುರಾಣಗಳಲ್ಲಿ ಭಗವಂತನ ಕೃಪಾಲಾಭವೆಂದೂ, ವೈಷ್ಣವಶಾಸ್ತ್ರದಲ್ಲಿ ಜಗಾಯ್ ಮಧಾಯರ ಉದ್ಧಾರಸಾಧನವೆಂದೂ, ಕ್ರೈಸ್ತಧರ್ಮದಲ್ಲಿ ಕ್ರಿಸ್ತನು ಇತರರ ಪಾಪವನ್ನು ಸ್ವೀಕರಿಸುವುದಾಗಿಯೂ ಹೇಳಿದೆ. ಶ್ರೀರಾಮಕೃಷ್ಣರ ಜೀವನದಲ್ಲಿ ಇದನ್ನು ನಾವು ಕಾಣದಿದ್ದಿದ್ದರೆ ಈ ಮಾತಿನ ಅರ್ಥ ನಮ್ಮ ಬುದ್ಧಿ ಗ್ರಾಹ್ಯವಾಗುತ್ತಿರಲಿಲ್ಲ.

9. ಕಲಕತ್ತೆಯ ಶ್ಯಾಮಪುಕುರದಲ್ಲಿ ಶ್ರೀರಾಮಕೃಷ್ಣರು ಚಿಕಿತ್ಸೆಗಾಗಿ ವಾಸಿಸುತ್ತಿದ್ದಾಗ ಅವರಿಗೊಂದು ದೃಶ್ಯ ಕಂಡಿತು–ಅವರ ಸೂಕ್ಷ್ಮಶರೀರವು ಸ್ಥೂಲಶರೀರದಿಂದ ಹೊರಬಂದು ಹಿಂದೆ ಮುಂದೆ ಓಡಾಡುತ್ತಿದೆ. ಅವರು ಹೇಳುತ್ತಾರೆ : "ಅದರ ಬೆನ್ನಿನ ಮೇಲೆಲ್ಲ ಗುಳ್ಳೆಗಳಿದ್ದವು. ಇದೇಕೆ ಹೀಗೆ ಎಂದು ಚಿಂತಿಸತೊಡಗಿದೆ. ತಾಯಿ ತೋರಿಸಿ ಕೊಟ್ಟಳು–ಎಲ್ಲ ಬಗೆಯ ಪಾಪವನ್ನು ಮಾಡಿದ ಜನರು ಬಂದು ಮುಟ್ಟಿದಾಗ, ಅವರ ದುರ್ದಶೆಯನ್ನು ನೋಡಿ ಮನಸ್ಸಿನಲ್ಲಿ ದಯೆಯುಂಟಾದರೆ ಅವರ ದುಷ್ಕರ್ಮದ ಫಲವನ್ನು ಸ್ವೀಕರಿಸಬೇಕಾಗುವುದು. ಅವನ್ನೆಲ್ಲ ಸ್ವೀಕರಿಸಿಯೇ ಈ ರೀತಿ ಆಗಿದೆ, ಅದಕ್ಕಾಗಿಯೇ ಈ ಗಂಟಲುಬೇನೆ ಉಂಟಾಗಿದೆ. ಇಲ್ಲದಿದ್ದರೆ ಈ ದೇಹದಲ್ಲಿ ಯಾವ ಕೆಟ್ಟದ್ದನ್ನೂ ಮಾಡಲಿಲ್ಲ-ಇಷ್ಟೊಂದು ಕಾಯಿಲೆ ಏಕೆ?" ನಾವು ಇದನ್ನು ಕೇಳಿ ಅವಾಕ್ಕಾದೆವು. ನಿಜವಾಗಿಯೂ ಒಬ್ಬ ವ್ಯಕ್ತಿ ಇನ್ನೊಬ್ಬನ ಪಾಪವನ್ನು ಸ್ವೀಕರಿಸಿ ಅವನನ್ನು ಧರ್ಮಮಾರ್ಗದಲ್ಲಿ ಮುಂದುವರಿಯುವಂತೆ ಮಾಡಲು ಸಾಧ್ಯವೆ-ಎಂದು ಯೋಚಿಸತೊಡಗಿದೆವು. ಶ್ರೀರಾಮಕೃಷ್ಣರ ಈ ಮಾತನ್ನು ಕೇಳಿ ನಮ್ಮಲ್ಲಿ ಅನೇಕರು ಅವರ ಮೇಲಿನ ಪ್ರೀತಿಯಿಂದ ಏನೇನೋ ಮಾಡಬಾರದುದನ್ನೆಲ್ಲ ಮಾಡಿ ನಾವೇಕಪ್ಪ ಅವರ ದೇಹವನ್ನು ಸ್ಪರ್ಶಿಸಿದೆವು ? ನಮ್ಮಿಂದಾಗಿ ಅವರಿಗೆ ಇಷ್ಟೊಂದು ಕಷ್ಟ ! ಮುಂದೆ ಎಂದೂ

ಅವರ ಪವಿತ್ರ ದೇಹವನ್ನು ಸ್ಪರ್ಶಿಸುವುದಿಲ್ಲ—ಎಂದು ಚಿಂತಿಸತೊಡಗಿದರು.

10. ಈ ವಿಷಯದಲ್ಲಿ ಶ್ರೀರಾಮಕೃಷ್ಣರ ಇನ್ನೊಂದು ಮಾತು ನೆನಪಿಗೆ ಬರುತ್ತದೆ: ಒಮ್ಮೆ ಕುಷ್ಟರೋಗಿಯೊಬ್ಬನು ಅವರೆಡೆಗೆ ಬಂದು, ಒಮ್ಮೆ ಅವರು ಕೈ ಆಡಿಸಿದರೆ ತನ್ನ ರೋಗ ವಾಸಿಯಾಗುವುದೆಂದು ಹೇಳಿ ಅವರನ್ನು ಹಾಗೆ ಮಾಡುವಂತೆ ಅಂಗಲಾಚಿ ಬೇಡಿಕೊಂಡ. ಶ್ರೀರಾಮಕೃಷ್ಣರು ಅವನ ಮೊರೆಯನ್ನು ಕೇಳಿ ಕೃಪಾಪರವಶರಾಗಿ ಹೇಳಿದರು : "ನನಗೇನೂ ತಿಳಿಯದಪ್ಪ. ಕೈ ಆಡಿಸಬೇಕೆಂದು ನೀನು ಹೇಳುತ್ತಿರುವೆ, ಹಾಗೆಯೇ ಮಾಡುತ್ತೇನೆ. ತಾಯಿಯ ಇಚ್ಛೆಯಿದ್ದರೆ ವಾಸಿಯಾಗುವುದು." ಹೀಗೆ ಹೇಳಿ ಅವನ ದೇಹದ ಮೇಲೆ ಕೈ ಆಡಿಸಿದರು. ಅಂದು ಇಡೀ ದಿನವೂ ಅವರ ಕೈಯಲ್ಲಿ ತೀವ್ರ ವೇದನೆಯುಂಟಾಯಿತು. ತಡೆಯಲಾಗದೆ ಶ್ರೀಜಗನ್ಮಾತೆಗೆ ಹೇಳಿದರು: "ತಾಯಿ, ಇನ್ನೆಂದಿಗೂ ಹೀಗೆ ಮಾಡುವುದಿಲ್ಲ" ಎಂದು. ಶ್ರೀರಾಮಕೃಷ್ಣರು ಹೇಳುತ್ತಿದ್ದರು : "ಅವನ ರೋಗ ಗುಣವಾಯಿತು. ಆದರೆ ಅವನ ಕಷ್ಟಭೋಗವನ್ನು ಇದು (ತಮ್ಮ ದೇಹವನ್ನು ತೋರಿಸಿ) ಅನುಭವಿಸಬೇಕಾಯಿತು." ಶ್ರೀರಾಮಕೃಷ್ಣರ ಈ ಎಲ್ಲ ಘಟನೆಗಳನ್ನು ಕುರಿತು ಚಿಂತಿಸುವಾಗ ವೇದ ಬೈಬಲ್ ಮುಂತಾದ ಶಾಸ್ತ್ರಗಳು ಈ ಯುಗದಲ್ಲಿ ಶ್ರೀರಾಮಕೃಷ್ಣರ ಜೀವನದ ಬೆಳಕಿನಿಂದ ಓದಿದಾಗ ಸುಲಭವಾಗಿ ಅರ್ಥವಾಗುವುವು ಎಂದೆನಿಸುತ್ತದೆ. ಅವರೇ ಹೇಳುತ್ತಿದ್ದರು, "ನವಾಬನ ಕಾಲದಲ್ಲಿ ಚಲಾವಣೆಯಲ್ಲಿರುವ ನಾಣ್ಯ ಬಾದಶಹನ ಕಾಲದಲ್ಲಿ ನಡೆಯುವುದಿಲ್ಲ" ಎಂದು.

11. ಸ್ಥೂಲ ದೃಷ್ಟಿಯಿಂದ ನೋಡಿದರೆ ವಕಾಲತ್ತು ನೀಡುವುದೆಂದರೆ ಅತ್ಯಂತ ಸುಲಭ—ನೀಡಿದರೆ ಆಯಿತು ಅಷ್ಟೆ—ಎಂದು. ಮನುಷ್ಯನು ಪ್ರವೃತ್ತಿಗಳ ದಾಸ. ಧರ್ಮಕಾರ್ಯವನ್ನು ಮಾಡಲು ಹೊರಟಾಗಲೂ ತನಗೆ ಯಾವುದು ಅನುಕೂಲವೊ ಅದನ್ನೇ ಮಾಡುತ್ತಾನೆ. ಇದು ಅದು ಎರಡೂ ಆಗಬೇಕು—ಸಂಸಾರಸುಖವೂ ಬೇಕು ಭಗವದಾನಂದವೂ ಬೇಕು—ಇದನ್ನೇ ಅವನು ಯಾವಾಗಲೂ ನೋಡುವುದು. ಅವನಿಗೆ ಸಂಸಾರದ ಭೋಗಸುಖಗಳು ಎಷ್ಟೊಂದು ಮಧುರವೆನಿಸುವವೆಂದರೆ ಅವನ್ನು ತ್ಯಜಿಸಬೇಕೆಂದರೆ ಎಲ್ಲವೂ ಶೂನ್ಯವೆನಿಸುವುವು, ಅವನ್ನು ಬಿಟ್ಟು ಹೇಗಿರುವುದು ಎಂದು ದಿಗಿಲಾಗುವುದು. ಆದ್ದರಿಂದ ಆಧ್ಯಾತ್ಮಿಕ ಜಗತ್ತಿನಲ್ಲಿಯೂ ವಕಾಲತ್ತು ನೀಡುವುದೆಂಬುದು ಇದೆ ಎಂದು ಕೇಳಿದಾಗ ಅವನು ನಗೆದುಬಿಡುವನು, ಇನ್ನೇನು ಯಾವ ಯೋಚನೆಯೂ ಇಲ್ಲ—ಎಂದು ಭಾವಿಸುವನು. ನಾನು ಹೇಗೆ ಬೇಕಾದರೂ ಇರಬಹುದು, ಸಂಸಾರ ಸುಖವನ್ನು ಎಷ್ಟು ಬೇಕಾದರೂ ಅನುಭವಿಸಬಹುದು, ನಾನು ಸತ್ತಮೇಲೆ (ಸಾಯುವುದಂತೂ ಇದ್ದೇ ಇದೆ) ಪರಲೋಕದಲ್ಲಿ ನಾನು ಸುಖವಾಗಿರುವಂತೆ ನೋಡಿಕೊಳ್ಳಲು ಶ್ರೀಚೈತನ್ಯ, ಕ್ರಿಸ್ತ ಅಥವಾ ಶ್ರೀರಾಮಕೃಷ್ಣ—ಇವರಿರುವರು—ಎಂದು ಅವನು ನಲಿಯುವನು. ಇದೆಲ್ಲ ವಿಕೃತ ಮನಸ್ಸಿನ ಕುಚೇಷ್ಟೆ, ಇದರಿಂದ ತನ್ನ ಅವನತಿಗೆ ತಾನೇ ಹಾದಿಮಾಡಿಕೊಂಡಂತಾಗುವುದು—ಎಂದು ಆಗ ಅವನಿಗೆ ತೋಚುವುದಿಲ್ಲ. ಇದರಿಂದ ತನ್ನ ದುಷ್ಕರ್ಮದ ಭೀಕರ ಚಿತ್ರವನ್ನು ನೋಡಲಾಗದೆ ಕಣ್ಣು

ಮುಚ್ಚಿಕೊಂಡಂತಾಗುವುದು. ಆದರೆ ಒಂದು ದಿನ ಅವನು ಕಣ್ಣು ತೆರೆದು ನೋಡಲೇ ಬೇಕು. ಆಗ ತನ್ನ ಮುಂದಿರುವ ಅಪಾರ ಸಮುದ್ರವನ್ನು ನೋಡಿ ತನ್ನ ವಕಾಲತ್ತನ್ನು ಯಾರೂ ವಹಿಸಿಕೊಂಡಿಲ್ಲ ಎಂಬುದು ಅರಿವಾಗುವುದು. ಕಪಟಿಯ ವಕಾಲತ್ತನ್ನು ಯಾರೂ ವಹಿಸಿಕೊಳ್ಳುವುದಿಲ್ಲ ! ಹಲವು ರೀತಿಯಲ್ಲಿ ಮನುಷ್ಯ ತನ್ನನ್ನು ತಾನೇ ಮೋಸಪಡಿಸುವನು. ಈ ಮಹಾಮಾಯೆಯ ಮೋಹಪಾಶ ಎಷ್ಟು ಬಲವಾದುದು ! ರಾಮಪ್ರಸಾದನು ಹೀಗೆ ಹಾಡುತ್ತಾನೆ :

ಭಲೇ ತಾಯಿ ಮಹಾಕಾಳಿ
ನಿನ್ನ ಇಂದ್ರಜಾಲದಲ್ಲಿ
ಮರುಳಾಗಿದೆ ಲೋಕವೇ ;
ಮೋಹವನ್ನು ಪರಿಹರಿಸುವ
ಮಂತ್ರದಂಡದಂತಿರುವುದು
ನಿನ್ನ ದಿವ್ಯ ಚರಣವೇ !

ಗುಣಮಯಿ ಹೇ ಮಹಾಮಾತೆ
ನೀನೇ ಪುರುಷ ನೀನೇ ಪ್ರಕೃತಿ
ಯಾವ ನಿನ್ನ ಚರಣಗಳನು
ತ್ರಿಪುರಾರಿಯೂ ಕಾಣನೋ
ಅವುಗಳ ನಾ ಪಡೆದೆನೆಂಬ
ಪ್ರಸಾದನೊಬ್ಬ ಮರುಳನೋ !

12. ವಕಾಲತ್ತು ನೀಡುವುದೆಂದರೆ ಸುಮ್ಮನೆ ಅಲ್ಲ. ಅನೇಕ ಕರ್ಮ ಸಾಧನೆಗಳ ಫಲವಾಗಿ ಮನಸ್ಸಿಗೆ ವಕಾಲತ್ತು ನೀಡುವ ಸ್ಥಿತಿ ಉಂಟಾಗುವುದು ಮತ್ತು ಆಗಲೇ ಇದು ನಿಜವಾದ ಅರ್ಥದಲ್ಲಿ ಸಾಧ್ಯವಾಗುವಂತಹುದು. ಆಗಲೇ ಭಗವಂತನು ಪೂರ್ಣ ಜವಾಬ್ದಾರಿಯನ್ನು ವಹಿಸಿಕೊಳ್ಳುವುದು; ಸುಖಕ್ಕಾಗಿ ಪ್ರಪಂಚದ ಹಲವು ವಸ್ತುಗಳ ಬೆನ್ನತ್ತಿಹೋಗಿ ಕೊನೆಗೊಂದು ದಿನ ಅವನಿಗೆ ಅರಿವಾಗುವುದು ತಾನು ಅರಸುತ್ತಿರುವುದು ನಿರ್ಜೀವ ನೆರಳನ್ನು ಎಂದು. ಜಪ ತಪಾದಿ ಅನೇಕ ಸಾಧನೆಗಳನ್ನು ಮಾಡಿ ಕೊನೆಗೆ ಅವುಗಳಿಂದಲೂ ಅನಂತ ಸತ್ಯವನ್ನು ಪಡೆಯಲಾಗುವುದಿಲ್ಲ ಎಂದು ತಿಳಿಯುತ್ತದೆ, ಎಲ್ಲ ಸ್ವಪ್ರಯತ್ನಗಳೂ ಪರ್ವತವನ್ನು ಎತ್ತಲು ಪ್ರಯತ್ನ ಪಟ್ಟಂತೆ ಎಂದೆನಿಸುತ್ತದೆ. ಆಗಲೇ ಅವನು ಕಾತರ ಹೃದಯನಾಗಿ ಕೂಗಿ ಕರೆಯುತ್ತಾನೆ. "ಓ ಭಗವಂತನೆ, ನೀನು ಎಲ್ಲಿರುವೆ ? ನನ್ನನ್ನು ರಕ್ಷಿಸು" ಎಂದು. ಆಗ ಮಾತ್ರ ಭಗವಂತನು ಅವನ ವಕಾಲತ್ತನ್ನು ವಹಿಸಿಕೊಳ್ಳುತ್ತಾನೆ. ಅದು ಬಿಟ್ಟು ಸಾಧನೆ ಭಜನೆಗಳಲ್ಲಿ ನನಗೆ ಆಸಕ್ತಿಯೇ ಇಲ್ಲದಿದ್ದು, ಭಗವನ್ನಾಮದಲ್ಲಿ ನನಗೆ ರುಚಿಯೇ ಇಲ್ಲದಿದ್ದು, ನನಗಿಷ್ಟ ಬಂದಂತೆ ನಾನು ಮಾಡುತ್ತಿದ್ದೇನೆಂದು ಇಟ್ಟುಕೊಳ್ಳೋಣ. ಯಾರಾದರೂ ಇದಕ್ಕೆ

ಆಕ್ಷೇಪಿಸಿದರೆ, 'ನಾನು ಭಗವಂತನಿಗೇ ಎಲ್ಲ ವಹಿಸಿಬಿಟ್ಟಿದ್ದೇನೆ. ಅವನು ನನ್ನಿಂದ ಹೀಗೆ ಮಾಡಿಸುತ್ತಿದ್ದಾನೆ, ನಾನೇನು ಮಾಡಲಿ ? ಅವನೇ ಏಕೆ ನನ್ನ ಮನಸ್ಸನ್ನು ತಿರುಗಿಸುವುದಿಲ್ಲ?'—ಎಂದು ಹೇಳಿದರೆ ಇದರಿಂದ ಇತರರನ್ನು ವಂಚಿಸಿ ನನ್ನನ್ನೂ ನಾನು ವಂಚಿಸಿಕೊಂಡಂತಾಗುವುದು. ಇದರಿಂದ ಇಹ-ಪರಗಳೆರಡನ್ನೂ ಕಳೆದುಕೊಳ್ಳುತ್ತೇನೆ.

13. ಇನ್ನೊಂದು ದೃಷ್ಟಿಯಿಂದ ಇದನ್ನು ನೋಡಿದಾಗ ಇನ್ನೂ ಸ್ಪಷ್ಟವಾಗುತ್ತದೆ. ನೀನು ಭಗವಂತನಿಗೆ ವಕಾಲತ್ತನ್ನು ವಹಿಸಿಕೊಟ್ಟಿರುವೆಯೆಂದು ಇಟ್ಟುಕೊಳ್ಳೋಣ ಮತ್ತು ನೀನು ಭಗವಂತನನ್ನು ಕರೆಯುವ ಹಾಗೂ ಯಾವುದೇ ರೀತಿಯ ಸಾಧನೆ ಮಾಡುವ ಆವಶ್ಯಕತೆ ಇಲ್ಲ ಎಂದಾಗಲಿ. ಸರಿಯಾದ ರೀತಿಯಲ್ಲಿ ವಕಾಲತ್ತನ್ನು ನೀಡಿದ್ದೇ ಆದರೆ ನೀನು ನಿರಂತರವಾಗಿ ಅವನ ದಯೆಯನ್ನು ಕುರಿತು ಚಿಂತಿಸಲೇಬೇಕಾಗುತ್ತದೆ. ಭವ ಸಾಗರದಲ್ಲಿ ಬಿದ್ದು ತೊಳಲಾಡುತ್ತಿದ್ದ ನನ್ನನ್ನು ಅವನು ಎತ್ತಿ ರಕ್ಷಿಸಿರುವನು ಎಂದು ಅವನ ಅನುಗ್ರಹವನ್ನು ಕುರಿತು ಚಿಂತಿಸುವೆ. ಆಗ ಎಂಥ ಕೃತಜ್ಞತೆಯ ಭಾವ ನಿನ್ನಲ್ಲಿ ಉಂಟಾಗಬೇಕು ಎಂಬುದನ್ನು ಯೋಚಿಸಿ ನೋಡು ! ಆಗ ನಿನ್ನ ಹೃದಯದಲ್ಲಿ ಅವನ ಮೇಲಿನ ಭಕ್ತಿ ಉಕ್ಕಿ ಹರಿಯುವುದು. ಆಗ ಅವನನ್ನು ಚಿಂತಿಸಲು ಸ್ಮರಿಸಲು ನಿನಗೆ ಯಾರೂ ಹೇಳಬೇಕಾಗಿಲ್ಲ. ಆಗ ಸ್ವಾಭಾವಿಕವಾಗಿಯೇ ನಿನ್ನ ಮನಸ್ಸು ಅವನೆಡೆಗೆ ಹರಿಯುವುದು. ವಿಷಪೂರಿತ ಸರ್ಪವೂ ಕೂಡ ಆಶ್ರಯ ನೀಡುವವನಿಗೆ ಕೃತಜ್ಞವಾಗಿರುತ್ತದೆ, ಅವನನ್ನೆಂದೂ ಅದು ಕಚ್ಚುವುದಿಲ್ಲ. ನಿನ್ನ ಹೃದಯ ಅದಕ್ಕಿಂತಲೂ ಕ್ಷುಲ್ಲಕವೆ ? ನಿನ್ನ ಇಹ-ಪರದ ಭಾರವನ್ನೆಲ್ಲ ಹೊತ್ತಿರುವವನ ಬಗ್ಗೆ ಕೃತಜ್ಞತೆಯಿಂದ ಮತ್ತು ಪ್ರೀತಿಯಿಂದ ಅದು ತುಂಬುವುದಿಲ್ಲವೆ ? ಆದ್ದರಿಂದ ವಕಾಲತ್ತನ್ನು ಭಗವಂತನಿಗೆ ನೀಡಿದ ಮೇಲೂ ಅವನನ್ನು ಕರೆಯುವುದರಲ್ಲಿ ನಿನಗೆ ಸ್ವಲ್ಪವೂ ಆನಂದವುಂಟಾಗದಿದ್ದರೆ ನೀನು ಸರಿಯಾದ ಅರ್ಥದಲ್ಲಿ ವಕಾಲತ್ತನ್ನು ನೀಡಿಲ್ಲ ಮತ್ತು ಭಗವಂತನೂ ನಿನ್ನ ಜವಾಬ್ದಾರಿಯನ್ನು ವಹಿಸಿಕೊಂಡಿಲ್ಲ ಎಂದು ನಿಶ್ಚಯವಾಗಿ ತಿಳಿ. ಈ ವಿಷಯದಲ್ಲಿ ನಿನ್ನನ್ನು ವಂಚಿಸಿಕೊಳ್ಳಬೇಡ, ನಿನ್ನ ತಪ್ಪನ್ನು ಭಗವಂತನಮೇಲೆ ಹೊರಿಸಬೇಡ. ಶ್ರೀರಾಮಕೃಷ್ಣರ 'ಬ್ರಾಹ್ಮಣನ ಗೋಹತ್ಯೆ' ಎಂಬ ಈ ಕೆಳಗಿನ ಕತೆಯನ್ನು ನೆನೆಸಿಕೊ.

14. ಒಬ್ಬ ಬ್ರಾಹ್ಮಣನಿದ್ದ, ಬಹಳ ಕಷ್ಟಪಟ್ಟು ಒಂದು ಸುಂದರ ತೋಟವನ್ನು ಬೆಳೆಸಿದ್ದ. ಅನೇಕ ಬಗೆಯ ಹಣ್ಣಿನ ಮತ್ತು ಹೂವಿನ ಗಿಡ ಮರಗಳು ಅಲ್ಲಿ ಹುಲುಸಾಗಿ ಬೆಳೆದಿದ್ದವು. ಒಂದು ದಿನ ಬಾಗಿಲು ತೆರೆದಿರುವುದನ್ನು ಕಂಡು ಒಂದು ಹಸು ತೋಟದೊಳಗೆ ನುಗ್ಗಿ ಬಾಯಿಗೆ ಸಿಕ್ಕಿದುದನ್ನೆಲ್ಲ ಕಬಳಿಸತೊಡಗಿತು. ಬ್ರಾಹ್ಮಣನು ಮನೆಯಲ್ಲಿರಲಿಲ್ಲ, ಹಿಂದಿರುಗಿ ಬಂದು ನೋಡುತ್ತಾನೆ ಹಸು ಇನ್ನೂ ಹೊಟ್ಟೆ ತುಂಬಿಸಿಕೊಳ್ಳುತ್ತಿದೆ. ಬ್ರಾಹ್ಮಣನು ಕೋಪದಿಂದ ಕುದಿಯುತ್ತ ಕೂಡಲೆ ಹಸುವಿನಮೇಲೆ ಆಕ್ರಮಣ ಮಾಡಿದ. ಅವನ ದೊಣ್ಣೆಯ ಹೊಡೆತ ತಾಳಲಾರದೆ ಹಸು ಸತ್ತುಬಿತ್ತು. ಈಗ ಬ್ರಾಹ್ಮಣನಿಗೆ ಗೋಹತ್ಯೆಯ ಭೀತಿಯುಂಟಾಯಿತು. ತಾನು ಬ್ರಾಹ್ಮಣನಾಗಿ ಇಂಥ ಪಾಪ ಮಾಡಿದೆನಲ್ಲ ಎಂದು ಮರುಗಿದ. ಬ್ರಾಹ್ಮಣನು ಸ್ವಲ್ಪ ಶಾಸ್ತ್ರ ಓದಿದ್ದ;

ಮನುಷ್ಯನ ವಿವಿಧ ಇಂದ್ರಿಯಗಳು ವಿವಿಧ ದೇವತೆಗಳಿಂದ ಶಕ್ತಿಯನ್ನು ಪಡೆಯುತ್ತವೆ ಎಂಬುದು ಅವನಿಗೆ ಗೊತ್ತಿತ್ತು. ಉದಾಹರಣೆಗೆ ಕಣ್ಣಿಗೆ ಸೂರ್ಯದೇವತೆಯಿಂದ, ಕಿವಿಗೆ ವಾಯುದೇವತೆಯಿಂದ ಶಕ್ತಿ ಬರುವುದು. ಹಾಗೆಯೇ ಕೈ ಕೆಲಸಮಾಡುವುದು ಇಂದ್ರನ ಶಕ್ತಿಯಿಂದ. ಬ್ರಾಹ್ಮಣನು ಇದನ್ನು ನೆನೆಸಿಕೊಂಡು ಚಿಂತಿಸತೊಡಗಿದ, "ನಾನಲ್ಲ ಹಸುವನ್ನು ಕೊಂದದ್ದು. ಕೈ ಕೆಲಸಮಾಡುವುದು ಇಂದ್ರನ ಶಕ್ತಿಯಿಂದ. ಆದ್ದರಿಂದ ಇಂದ್ರನೇ ಹಸುವನ್ನು ಕೊಂದದ್ದು." ಈ ರೀತಿ ವಿಚಾರಮಾಡಿ ಮನಸ್ಸಿಗೆ ಸಮಾಧಾನ ಮಾಡಿಕೊಂಡ.

ಈಗ ಗೋಹತ್ಯೆಯ ಪಾಪ ಬ್ರಾಹ್ಮಣನ ದೇಹವನ್ನು ಪ್ರವೇಶಿಸಲು ಬಂತು. ಬ್ರಾಹ್ಮಣನ ಮನಸ್ಸು ಅದನ್ನು ತಡೆದು, "ನೀನು ಹೊರಟುಹೋಗು, ನನಗಿಲ್ಲಿ ಸ್ಥಾನ ವಿಲ್ಲ. ಹಸುವನ್ನು ಕೊಂದವನು ಇಂದ್ರ, ಅವನ ಹತ್ತಿರ ಹೋಗು" ಎಂದು ಅದನ್ನು ಓಡಿಸಿದ. ಪಾಪವು ಇಂದ್ರನನ್ನು ಹಿಡಿದುಕೊಳ್ಳಲು ಹೋಯಿತು. ಅವನು ಹೇಳಿದ : "ಸ್ವಲ್ಪ ಇರು. ನಾನು ಬ್ರಾಹ್ಮಣನ ಹತ್ತಿರಹೋಗಿ ಮಾತನಾಡಿಕೊಂಡು ಬರುತ್ತೇನೆ. ಅನಂತರ ಬೇಕಾದರೆ ನೀನು ನನ್ನನ್ನು ಹಿಡಿಯಬಹುದು." ಇಂದ್ರನು ವೇಷ ಮರೆಸಿ ಕೊಂಡು ಬ್ರಾಹ್ಮಣನ ತೋಟಕ್ಕೆ ಹೋದನು. ಬ್ರಾಹ್ಮಣನು ಗಿಡಗಳನ್ನೆಲ್ಲ ನೋಡುತ್ತ ಓಡಾಡುತ್ತಿದ್ದನು. ಇಂದ್ರನು ಬ್ರಾಹ್ಮಣನನ್ನು ಸಂಧಿಸಿ ಹೇಳಿದ : "ಹಾ! ಎಂಥ ಸುಂದರವಾದ ತೋಟ ಇದು ! ಎಷ್ಟು ಆಸಕ್ತಿಯಿಂದ ಗಿಡ ಮರಗಳನ್ನು ಬೆಳಸಿರುವರು ! ಸ್ವಾಮಿ, ಈ ತೋಟ ನಿಮ್ಮದೇ ಏನು ? ಯಾರು ಇವನ್ನೆಲ್ಲ ನೆಟ್ಟು ಬೆಳಸಿರುವರು ?" ಅವನ ಹೊಗಳಿಕೆಯ ಮಾತನ್ನು ಕೇಳಿ ಬ್ರಾಹ್ಮಣನಿಗೆ ಎಲ್ಲಿಲ್ಲದ ಸಂತೋಷವಾಯಿತು. ಅತ್ಯಂತ ಹೆಮ್ಮೆಯಿಂದ ಹೇಳಿದ : "ಹೌದು ಸ್ವಾಮಿ, ಈ ತೋಟ ನನ್ನದೆ. ಇದನ್ನೆಲ್ಲ ಬೆಳಸಿದವನು ನಾನೇ. ಬನ್ನಿ, ನಿಮಗೆಲ್ಲ ತೋರಿಸುತ್ತೇನೆ." ಹೀಗೆ ಮಾತನಾಡುತ್ತ ಇಬ್ಬರೂ ಹಸು ಸತ್ತುಬಿದ್ದಿದ್ದ ಜಾಗಕ್ಕೆ ಬಂದರು. ಇಂದ್ರನು ಆಶ್ಚರ್ಯದಿಂದ ಕೇಳಿದ "ಅಬ್ಬಬ್ಬ, ಇಲ್ಲಿ ಹಸುವನ್ನು ಕೊಂದವರಾರಪ್ಪ!?" ಎಂದು. ಬ್ರಾಹ್ಮಣನು ಇದುವರೆಗೂ ಎಲ್ಲವನ್ನೂ ನಾನೇ ಮಾಡಿರುವುದು ಎಂದು ಹೇಳುತ್ತಿದ್ದ. ಈಗ ಹಸುವನ್ನು ಕೊಂದವ ರಾರು ಎಂದು ಕೇಳಿದಾಗ ಅವನಿಗೆ ಏನೂ ಉತ್ತರ ನೀಡಲಾಗಲಿಲ್ಲ. ಆಗ ಇಂದ್ರನು ನಿಜರೂಪವನ್ನು ತೋರಿಸಿಕೊಂಡು ಹೇಳಿದ : "ಎಲೈ, ಢಾಂಬಿಗನೆ, ಈ ತೋಟದಲ್ಲಿ ಆಗಿರುವ ಒಳ್ಳೆಯ ಕೆಲಸವೆಲ್ಲ ನೀನು ಮಾಡಿರುವುದು, ಹಸುವನ್ನು ಕೊಂದವನು ಮಾತ್ರ ನಾನು, ಅಲ್ಲವೆ ? ಗೋಹತ್ಯೆಯ ಪಾಪ ಇಲ್ಲಿದೆ, ತೆಗೆದುಕೊ." ಹೀಗೆ ಹೇಳಿ ಇಂದ್ರನು ಅಂತರ್ಧಾನನಾದ, ಪಾಪವು ಬ್ರಾಹ್ಮಣನ ದೇಹದಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿತು.

15. ಇನ್ನು ವಕಾಲತ್ತಿನ ವಿಷಯ ಸಾಕು. ಈಗ ಪ್ರಸ್ತುತ ವಿಷಯಕ್ಕೆ ಬರೋಣ. ಶ್ರೀರಾಮಕೃಷ್ಣರ ಭಕ್ತರಲ್ಲಿ ಯಾರನ್ನಾದರೂ ಕೇಳಿ ಅವರೆಲ್ಲರೂ ಹೇಳುವು ದಿದನ್ನೇ : ಮೊದಲು ಶ್ರೀರಾಮಕೃಷ್ಣರ ಮಾತುಗಳ ಅರ್ಥವನ್ನು ಒಂದು ರೀತಿ ಗ್ರಹಿಸಿದ್ದೆವು. ಈಗ ದಿನಗಳು ಕಳೆದಂತೆ ಅವುಗಳು ಹೆಚ್ಚು ಹೆಚ್ಚು ಅರ್ಥಪೂರ್ಣವಾಗು

ತ್ತಿವೆ, ಹೆಚ್ಚು ಹೆಚ್ಚು ಆಳವಾದ ಅರ್ಥ ಮನಸ್ಸಿಗೆ ಹೊಳೆಯುತ್ತಿದೆ—ಎಂದು. ಮತ್ತೆ ಶ್ರೀರಾಮಕೃಷ್ಣರ ಅನೇಕ ಮಾತು ಮತ್ತು ವರ್ತನೆಗಳಿಗೆ ಆಗ ನಮಗೆ ಯಾವ ಅರ್ಥವೂ ಹೊಳೆದಿರಲಿಲ್ಲ. ಈಗ ಅವುಗಳ ಆಳ ಅರ್ಥವನ್ನು ಗಮನಿಸಿದಾಗ ಆಶ್ಚರ್ಯವಾಗುವುದು. ಶ್ರೀರಾಮಕೃಷ್ಣರೇ ಹೇಳುತ್ತಿದ್ದರು : "ಎಲ್ಲ ಸಮಯ ಬಂದಾಗ ಅರ್ಥವಾಗುವುದು. ಬೀಜ ಬಿತ್ತಿದಕೂಡಲೆ ಹಣ್ಣು ಸಿಗುವುದೆ ? ಮೊದಲು ಮೊಳಕೆ ಬರುವುದು, ಅನಂತರ ಸಸಿಯಾಗುವುದು, ಅನಂತರ ಗಿಡ ಬೆಳೆದು ಹೂ ಬಿಡುವುದು, ಕೊನೆಯಲ್ಲಿ ಫಲ ಬಿಡುವುದು. ಇದೂ ಹಾಗೆಯೇ. ಆದರೆ ತಾಳ್ಮೆಯಿಂದ ಪ್ರಯತ್ನ ಮುಂದುವರಿಸಬೇಕು, ಮಧ್ಯದಲ್ಲಿ ಬಿಟ್ಟರೆ ನಡೆಯುವುದಿಲ್ಲ. ಹಾಡನ್ನು ಕೇಳಿ," ಶ್ರೀರಾಮಕೃಷ್ಣರು ತಮ್ಮ ಮಧುರ ಕಂಠದಿಂದ ಈ ಕೆಳಗಿನ ಹಾಡನ್ನು ಹಾಡಿದರು :

ನಡೆ ಮುಂದಕೆ ಸೋದರನೆ
ಆನಂದವ ತುಂಬಿಕೊಂಡು.
ಸಾಧನೆಗಳ ಹಾದಿಯಲ್ಲಿ ತುಡಿವ ನಿನ್ನ ಹೃದಯಕ್ಕೆ,
ದೋಷವೆಲ್ಲ ತೊಳೆದುಹೋಗಿ
ತುದಿಗೆ ಗೆಲವು ನಿನ್ನದೇ.

ಅಂಕನೂ, ಬಂಕನೂ, ಕಟುಕನೂ, ಸುಜನನೂ
ಉದ್ಧಾರವಾದರೆಲ್ಲರೂ;
ಗಿಳಿಗೆ ಬೋಧಿಸುತ್ತ ಗಣಿಕೆ, ಶ್ಯಾಮಧ್ಯಾನದಲ್ಲಿ ಮೀರ
ಬಿಡುಗಡೆಯನು ಪಡೆದರು.

ಬಂಡಿತುಂಬ ಧನಕನಕವ
ಹೇರಿಕೊಂಡ ವರ್ತಕನೂ
ಹೆಸರಿಲ್ಲದೆ ಹೋದನು
ಯುಕ್ತಿಯಿರದ ದೃಢಭಕ್ತಿಗೆ
ಸೇವೆಶ್ರದ್ಧೆ ಅಧೀನತೆಗೆ
ಒಲಿವನು ರಘುನಾಥನು.

16. ಹಾಡು ಮುಗಿದನಂತರ ಮತ್ತೆ ಹೇಳುತ್ತಿದ್ದರು : "ಅವನ ಸೇವೆ, ವಂದನೆ ಮತ್ತು ಅಧೀನತೆ—ಅಂದರೆ ದೀನಭಾವ—ಇದನ್ನು ಆಶ್ರಯಿಸಿ ಅವನಲ್ಲಿ ಶ್ರದ್ಧೆಯಿಂದಿದ್ದರೆ ಎಲ್ಲವೂ ಫಲಿಸುವುವು, ಅವನ ದರ್ಶನ ಖಂಡಿತ ಆಗುವುದು. ಆದರೆ ಇದನ್ನು ಬಿಟ್ಟರೆ ಪ್ರಗತಿ ಅಲ್ಲಿಗೇ ನಿಲ್ಲುವುದು. ಒಬ್ಬ ವ್ಯಕ್ತಿ ಅಲ್ಲಿ ಇಲ್ಲಿ ಅಲೆದಾಡಿ ಹೇಗೊ ಕಷ್ಟಪಟ್ಟು ಒಂದು ಚಾಕರಿ ಹಿಡಿದು ಹಣ ಸಂಪಾದಿಸತೊಡಗಿದ. ಒಂದು ದಿನ ಅವನು ಹಣ ಎಣಿಸಿ ನೋಡಿದ, ಒಂದು ಸಾವಿರ ರೂಪಾಯಿ ಆಗಿದೆ, ಬಹಳ ಸಂತೋಷವಾಯಿತು. 'ಇನ್ನೇಕೆ

ನಾನು ಚಾಕರಿ ಮಾಡಬೇಕು, ಆಗಲೇ ಒಂದು ಸಾವಿರ ರೂಪಾಯಿ ಆಗಿದೆ. ಇನ್ನೇನಂತೆ?' ಹೀಗೆಂದು ಚಾಕರಿ ಬಿಟ್ಟುಬಿಟ್ಟ. ಸಣ್ಣ ಮನಸ್ಸು, ಸಣ್ಣ ಆಕಾಂಕ್ಷೆ! ಈ ಅಲ್ಪ ಹಣದಿಂದಲೇ ಅವನು ಉಬ್ಬಿಹೋದ. ಇತರರನ್ನೆಲ್ಲ ಕೀಳು ದೃಷ್ಟಿಯಿಂದ ಕಾಣತೊಡಗಿದ. ಆದರೆ ಒಂದು ಸಾವಿರ ರೂಪಾಯಿ ಎಷ್ಟು ಕಾಲ ಬರುತ್ತದೆ ? ಅದು ಬೇಗನೆ ಖಾಲಿಯಾಯಿತು. ಮತ್ತೆ ಅವನು ಕೆಲಸಕ್ಕಾಗಿ ಆಫೀಸಿನಿಂದ ಆಫೀಸಿಗೆ ಅಲೆಯತೊಡಗಿದ. ಈ ರೀತಿ ಆಗಬಾರದು. ತಾಳ್ಮೆಯಿಂದ ಭಗವಂತನ ಬಾಗಿಲಿನಲ್ಲಿ ಕಾಯುತ್ತಿರಬೇಕು. ಅದಕ್ಕೆ ಸಿದ್ಧನಿರುವವನು ಯಶಸ್ವಿಯಾಗುತ್ತಾನೆ''.

17. ಮತ್ತೆ ಶ್ರೀರಾಮಕೃಷ್ಣರು ''ತುದಿಗೆ ಗೆಲವು ನಿನ್ನದೆ'' ಎಂಬ ಸಾಲನ್ನು ಹಾಡುವಾಗ ಹೇಳುತ್ತಿದ್ದರು ''ತುದಿಗೆ ಏಕೆ ? ಅಂಥ ಮಂದ ಭಕ್ತಿ ಇರಬಾರದು. ಹೃದಯದಲ್ಲಿ ಜ್ವಲಂತ ವಿಶ್ವಾಸವಿರಬೇಕು. ಈಗಲೇ ಸಾಕ್ಷಾತ್ಕಾರವಾಗಬೇಕು, ಅವನನ್ನು ನೋಡಬೇಕು-ಎಂಬ ದೃಢಸಂಕಲ್ಪವಿರಬೇಕು. ಮಂದಭಕ್ತಿಯಿಂದ ಅವನನ್ನು ಪಡೆಯಲು ಸಾಧ್ಯವೇ ?''

18. ಶ್ರೀರಾಮಕೃಷ್ಣರನ್ನು ನೋಡಿದಾಗಲೆಲ್ಲ ಅವರು ಒಂದು ಭಾವಘನಮೂರ್ತಿ ಎಂದೆನಿಸುತ್ತಿತ್ತು. ಆಧ್ಯಾತ್ಮಿಕ ಭಾವಗಳೆಲ್ಲ ಏಕತ್ರಕಲೆತು ಒಂದು ಹೊಸರೂಪವನ್ನು ತಾಳಿರುವಂತೆ ಅವರು ಕಾಣುತ್ತಿದ್ದರು. ಮನಸ್ಸಿನಲ್ಲಿ ಭಾವಪರಿವರ್ತನೆಯುಂಟಾದಂತೆ ಶರೀರದಲ್ಲಿಯೂ ಪರಿವರ್ತನೆಯಾಗುವುದೆಂದು ನಾವು ಹೇಳುತ್ತೇವೆ ಅಷ್ಟೆ. ಅಂತಹ ಸ್ವಲ್ಪಮಟ್ಟಿನ ಪರಿವರ್ತನೆಯನ್ನು ಎಲ್ಲೊ ಅಪರೂಪಕ್ಕೆ ಕಾಣಬಹುದು. ಆದರೆ ಮನಸ್ಸಿನ ಭಾವತರಂಗಗಳು ಶರೀರದಲ್ಲಿ ಅಷ್ಟೊಂದು ಪರಿವರ್ತನೆಯನ್ನುಂಟು ಮಾಡಬಲ್ಲದು ಎಂಬುದನ್ನು ನಾವು ಕನಸಿನಲ್ಲಿಯೂ ಭಾವಿಸಿರಲಿಲ್ಲ. ನಿರ್ವಿಕಲ್ಪ ಸಮಾಧಿಯಲ್ಲಿ 'ನಾನು' ಎಂಬುದು ಸಂಪೂರ್ಣ ಲುಪ್ತವಾಗುವುದು. ಈ ಸ್ಥಿತಿಯಲ್ಲಿರುವಾಗ ಶ್ರೀ ರಾಮಕೃಷ್ಣರ ನಾಡಿಬಡಿತ ಹೃದಯಸ್ಪಂದನ ಎಲ್ಲ ಸ್ತಬ್ಧವಾಗುತ್ತಿತ್ತು. ಮಹೇಂದ್ರ ಲಾಲ್ ಸರ್ಕಾರ್ ಮುಂತಾದ ಪ್ರಸಿದ್ಧ ವೈದ್ಯರು ಯಂತ್ರದ ಸಹಾಯದಿಂದ ಪರೀಕ್ಷಿಸಿದರೂ ಹೃದಯದ ಬಡಿತವನ್ನು ಕಂಡುಹಿಡಿಯಲಾಗಲಿಲ್ಲ. ಅಷ್ಟರಿಂದಲೇ ತೃಪ್ತರಾಗದೆ ಒಬ್ಬರು ಡಾಕ್ಟರರು ಅವರ ಕಣ್ಣುಗುಡ್ಡೆಯನ್ನು ಒತ್ತಿನೋಡಿದರು-ಅದು ಮೃತನ ಕಣ್ಣಿನಂತೆ ಸಂವೇದನಾರಹಿತವಾಗಿತ್ತು. ತಮ್ಮನ್ನು ಶ್ರೀಕೃಷ್ಣನ ದಾಸಿ ಎಂದು ಭಾವಿಸುತ್ತ ಅವರು ಸಖೀಭಾವ ಸಾಧನೆಯಲ್ಲಿ ತೊಡಗಿರುವಾಗ ಅವರ ಶರೀರದಲ್ಲಿಯೂ ಸ್ತ್ರೀಸಹಜವಾದ ಲಕ್ಷಣಗಳು ಕಾಣಿಸಿಕೊಂಡವು. ಏಳುವುದು, ಕುಳಿತುಕೊಳ್ಳುವುದು, ನಡೆಯುವುದು, ಮಾತನಾಡುವುದು ಎಲ್ಲ ಸ್ತ್ರೀಯರದಂತೆಯೇ ಇರುತ್ತಿತ್ತು. ಅದು ಎಷ್ಟರಮಟ್ಟಿಗೆ ಎಂದರೆ ಅವರನ್ನು ಯಾವಾಗಲೂ ನೋಡುತ್ತಿದ್ದ ಮಥುರಾನಾಥ ಮುಂತಾದವರಿಗೇ ಅವರು ಯಾರೊ ಹೊರಗಿನಿಂದ ಬಂದ ಮಹಿಳೆ ಎಂದು ಭ್ರಮೆ ಯುಂಟಾಗುತ್ತಿತ್ತು. ಇಂತಹ ಎಷ್ಟೊ ಘಟನೆಗಳನ್ನು ನಾವು ನೋಡಿರುವೆವು, ಮತ್ತು ಶ್ರೀರಾಮಕೃಷ್ಣರ ಬಾಯಿಂದ ಕೇಳಿರುವೆವು. ಇದರಿಂದ ಮನೋವಿಜ್ಞಾನ ಮತ್ತು

ಶರೀರವಿಜ್ಞಾನಗಳ ನಿಯಮಗಳನ್ನು ಬದಲಾಯಿಸಬೇಕಾಗುವುದು. ಈದಿನ ಇವನ್ನೆಲ್ಲ ಹೇಳಿದರೂ ಜನ ನಂಬುತ್ತಾರೇನು ?

19. ಭಾವರಾಜ್ಯದಲ್ಲಿ ಎಲ್ಲೆಲ್ಲಿಯೂ ಮುಕ್ತವಾಗಿ ಚಲಿಸುವ ಸಾಮರ್ಥ್ಯವಿತ್ತು ಶ್ರೀರಾಮಕೃಷ್ಣರಿಗೆ. ಸಾಮಾನ್ಯವಾದ ಉದಾತ್ತವಾದ—ಯಾವುದೇ ವಿಚಾರವನ್ನೆ ಆಗಲಿ ಮತ್ತು ಅದು ಯಾರದೇ ಆಗಲಿ, ಅವರು ಸುಲಭವಾಗಿ ಗ್ರಹಿಸುತ್ತಿದ್ದರು. ಪ್ರತಿಯೊಬ್ಬ ಆಧ್ಯಾತ್ಮಿಕ ಸಾಧಕನ ಆಂತರಿಕ ಭಾವವನ್ನು, ವಿಚಾರಗಳನ್ನು ಅರ್ಥಮಾಡಿಕೊಂಡು ಅವನು ಆಧ್ಯಾತ್ಮಿಕ ಜೀವನದಲ್ಲಿ ಎಷ್ಟು ಮುಂದುವರಿದಿರುವನು ಎಂಬುದನ್ನು ಕಂಡು ಕೊಂಡು ಅವನ ಪ್ರಗತಿಪಥದಲ್ಲಿಯೇ ಅವನನ್ನು ನಡೆಸಿಕೊಂಡು ಹೋಗುತ್ತಿದ್ದರು. ಇದರ ಬಗ್ಗೆ ಆಳವಾಗಿ ಚಿಂತಿಸಿದಾಗ ನಮಗನಿಸುವುದು, ಮಾನವ ಮನಸ್ಸಿನಲ್ಲಿ ಎಷ್ಟೆಷ್ಟು ಪ್ರಕಾರದ ಭಾವನೆಗಳು ಎದ್ದಿದ್ದವು, ಏಳುತ್ತಿರುವುವು ಮತ್ತು ಮುಂದೆ ಏಳಬಹುದು— ಅವೆಲ್ಲವನ್ನು ತಮ್ಮ ಸ್ವಂತ ಜೀವನದಲ್ಲಿ ಶ್ರೀರಾಮಕೃಷ್ಣರು ಅನುಭವಿಸಿರುವರು, ಮತ್ತು ಪ್ರತಿಯೊಂದು ಭಾವದ ಎಲ್ಲ ರೂಪಾಂತರಗಳೂ ಅವರ ನೆನಪಿನಾಳದಲ್ಲಿ ಶೇಖರಿ ಸಲ್ಪಟ್ಟಿದ್ದವು ಎಂದು. ಆದ್ದರಿಂದ ಯಾರೇ ಬಂದು ತಮ್ಮ ಆಂತರಿಕ ಭಾವವನ್ನು, ತಮ್ಮ ವಿಚಾರಗಳನ್ನು ಅವರ ಮುಂದೆ ವ್ಯಕ್ತಪಡಿಸಿದಾಗ ಅವನ್ನು ತಮ್ಮ ಅನುಭವ ದೊಡನೆ ತುಲನೆಮಾಡಿ ಶ್ರೀರಾಮಕೃಷ್ಣರು ಕೂಡಲೇ ಅರ್ಥಮಾಡಿಕೊಂಡುಬಿಡು ತ್ತಿದ್ದರು ಮತ್ತು ಅದಕ್ಕನುಗುಣವಾದ ಉಪದೇಶವನ್ನು ನೀಡುತ್ತಿದ್ದರು. ಎಲ್ಲ ವಿಷಯದಲ್ಲಿಯೂ ಹೀಗೆಯೆ ! ಯಾರಾದರೂ ಸಂಸಾರದಲ್ಲಿ ನೊಂದು, ಮೋಹಪಾಶಕ್ಕೆ ಒಳಗಾಗಿ, ತ್ಯಾಗ-ವೈರಾಗ್ಯಗಳಿಗೆ ವಿರುದ್ಧವಾದ ಸ್ಥಿತಿಗೆ ಒಳಗಾಗಿ, ಅದರಿಂದ ಹೊರ ಬರಲಾಗದೆ ಹತಾಶಭಾವದಿಂದ ಶ್ರೀರಾಮಕೃಷ್ಣರೆಡೆಗೆ ಬಂದಾಗ ಅವರು ಯೋಗ್ಯ ಮಾರ್ಗದರ್ಶನ ಮಾಡುವುದಷ್ಟೇ ಅಲ್ಲದೆ ಕೆಲವು ಬಾರಿ "ನನಗೂ ಹಾಗೆಯೇ ಆಗಿತ್ತು, ನಾನು ಈ ರೀತಿ ಮಾಡಿದೆ" ಎಂದೂ ಹೇಳುತ್ತಿದ್ದರು. ಹಾಗೆ ಹೇಳಿದಾಗ ಅವರ ಮಾತಿನಲ್ಲಿ ತುಂಬ ಭರವಸೆ ಉಂಟಾಗುತ್ತಿತ್ತು ಎಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ. ಅವರ ಮಾರ್ಗದರ್ಶನದಲ್ಲಿ ಪೂರ್ಣ ವಿಶ್ವಾಸವಿರಿಸಿ ಅದೇ ಮಾರ್ಗದಲ್ಲಿ ಮುಂದುವರಿ ಯಲು ಸಾಧಕನು ಉತ್ಸುಕನಾಗುತ್ತಿದ್ದನು ಹೀಗೆ ಅವರು ತಮ್ಮ ಜೀವನದ ಘಟನೆ ಯನ್ನು ಹೇಳಿದಾಗ ಸಾಧಕನಿಗೆ ಅನಿಸುತ್ತಿತ್ತು ಶ್ರೀರಾಮಕೃಷ್ಣರಿಗೆ ತನ್ನ ಮೇಲೆ ಎಷ್ಟೊಂದು ಪ್ರೀತಿಯಿದೆ ಎಂದು. ಇದಕ್ಕೆ ಒಂದೆರಡು ಘಟನೆಗಳನ್ನು ಉದಾಹರಿಸ ಬಹುದು.

20. ಸಿಂಧೂರಿಯಾಪಾಟಿಯ ಮಣಿಮೋಹನ ಮಲ್ಲಿಕನ ಪುತ್ರನೊಬ್ಬನು ತೀರಿ ಹೋದನು. ತಂದೆಯು ಅವನಮೇಲೆ ತುಂಬ ಭರವಸೆಯಿಟ್ಟುಕೊಂಡಿದ್ದ. ಅಂತ್ಯಸಂಸ್ಕಾರ ಗಳೆಲ್ಲ ಮುಗಿದ ಕೂಡಲೆ ಮಣಿಮಲ್ಲಿಕನು ಶ್ರೀರಾಮಕೃಷ್ಣರ ಹತ್ತಿರ ಬಂದ. ಅವರಿಗೆ ವಂದಿಸಿ ಭಾರಹೃದಯದಿಂದ ಒಂದು ಮೂಲೆಯಲ್ಲಿ ಕುಳಿತನು. ಕೊಠಡಿಯಲ್ಲಿ ಅನೇಕ ಭಕ್ತರಿದ್ದರು, ಅವರು ಅನೇಕ ಬಗೆಯ ಪ್ರಶ್ನೆಗಳನ್ನು ಕೇಳುತ್ತಿದ್ದರು. ಶ್ರೀರಾಮ

ಕೃಷ್ಣರೂ ವಿವಿಧ ಆಧ್ಯಾತ್ಮಿಕ ವಿಷಯಗಳನ್ನು ಕುರಿತು ಮಾತನಾಡುತ್ತಿದ್ದರು. ಸ್ವಲ್ಪ ಹೊತ್ತಿನನಂತರ ಅವರ ಕಣ್ಣು ಮಣಿಮಲ್ಲಿಕನ ಮೇಲೆ ಬಿತ್ತು. ಕೂಡಲೇ ಕೇಳಿದರು "ಏಕಪ್ಪ, ಇಂದು ತುಂಬ ದುಃಖಿತನಾದಂತೆ ಕಾಣುತ್ತಿಯೆ?" ಮಣಿಮೋಹನನು ಗದ್ಗದ ಕಂಠದಿಂದ ಕಂಬನಿ ಸುರಿಸುತ್ತ ಹೇಳಿದ. "(ತನ್ನ ಪುತ್ರನ ಹೆಸರನ್ನು ಹೇಳಿ) __ ಇಂದು ತೀರಿಕೊಂಡನು". ಅವನ ಕಂಗೆಟ್ಟ ರೂಪವನ್ನೂ ಶೋಕಪೂರ್ಣ ಧ್ವನಿಯನ್ನೂ ಕೇಳಿ ಅಲ್ಲಿ ನೆರೆದವರೆಲ್ಲ ಸ್ತಂಭಿತರಾದರು. ಒಮ್ಮೆಲೆ ಕೊಠಡಿ ನೀರವವಾಯಿತು. ಎಂಥ ಸಮಾಧಾನದ ಮಾತೂ ಅವನ ಹೃದ್ವೇದನೆಯನ್ನು ತಣಿಸಲಾರದು ಎಂದು ಎಲ್ಲರಿಗೂ ಅನಿಸಿತು. ಆದರೂ ಕೆಲವರು ಅವನನ್ನು ಸಮಾಧಾನ ಪಡಿಸಲು ಪ್ರಯತ್ನಿಸಿದರು : "ಪ್ರಪಂಚವೇ ಹೀಗೆ, ಎಲ್ಲರೂ ಒಂದಲ್ಲ ಒಂದುದಿನ ಸಾಯಲೇಬೇಕು. ಆಗಿಹೋದುದಕ್ಕೆ ಕಣ್ಣೀರು ಸುರಿಸಿ ಪ್ರಯೋಜನವಿಲ್ಲ, ಆದ್ದರಿಂದ ದುಃಖಿಸಬೇಡಿ, ಸಮಾಧಾನ ತಂದು ಕೊಳ್ಳಿ." ಯಾವಾಗಲೂ ದುಃಖಿತಪ್ತರನ್ನು ಸಮಾಧಾನ ಪಡಿಸುವ ನುಡಿಗಳಿವು. ಆದರೆ ಎಷ್ಟು ಜನ ಇದರಿಂದ ಸಮಾಧಾನಗೊಳ್ಳುವರು ? ಮಾತು ಮನಸ್ಸು, ಕೃತಿ-ಈ ಮೂರೂ ಒಂದಾದಾಗಲೇ ಯಾವುದೇ ವಿಷಯ ಪರಿಣಾಮಕಾರಿಯಾಗುವುದು, ಆಗಲೇ ನಾವು ಆಡಿದ ಮಾತು ಇತರರ ಹೃದಯವನ್ನು ಸ್ಪರ್ಶಿಸಿ ಅದೇ ಭಾವತರಂಗವನ್ನು ಅಲ್ಲಿ ಹುಟ್ಟಿಸುವುದು. ಆದರೆ ನಮ್ಮ ಮಾತಿಗೆ ಈ ಸಾಮರ್ಥ್ಯವಿರುವುದಿಲ್ಲ. ನಾವು ಈ ಪ್ರಪಂಚ ನಶ್ವರ ಎಂದು ಹೇಳುತ್ತೇವೆ. ಆದರೆ ಎಲ್ಲ ಆಲೋಚನೆ ಹಾಗೂ ಕೃತಿಗಳು ಇದಕ್ಕೆ ವಿರುದ್ಧವಾಗಿರುತ್ತವೆ. ಇತರರಿಗೆ ಈ ಪ್ರಪಂಚ ಕನಸಿನಂತೆ ನಶ್ವರ ಎಂದು ಉಪದೇಶಿಸಬಹುದು. ಆದರೆ ನಮ್ಮ ಹೃದಯಾಂತರಾಳದಲ್ಲಿ ಇದು ಶಾಶ್ವತವೆಂದೇ ಭಾವಿಸುತ್ತಿರುತ್ತೇವೆ ಮತ್ತು ಇಲ್ಲಿ ಶಾಶ್ವತವಾಗಿ ನೆಲೆಯೂರಲು ಎಲ್ಲ ವ್ಯವಸ್ಥೆ ಮಾಡು ತ್ತಿರುತ್ತೇವೆ. ಆದ್ದರಿಂದ ನಮ್ಮ ಮಾತಿಗೆ ಅಂಥ ಶಕ್ತಿ ಇರಲು ಹೇಗೆ ಸಾಧ್ಯ ?

ಇತರರೆಲ್ಲ ಅನೇಕ ರೀತಿಯಲ್ಲಿ ವೃದ್ಧ ಮಣಿಮೋಹನನನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಿದ್ದರೂ, ಶ್ರೀರಾಮಕೃಷ್ಣರು ಮಾತ್ರ ಸುಮ್ಮನೆ ಕುಳಿತಿದ್ದರು. ಅವನ ಶೋಕಪೂರ್ಣ ನುಡಿಗಳನ್ನು ಕೇವಲ ಆಲಿಸುತ್ತಿದ್ದರು. ಅವರ ಉದಾಸೀನ ಭಾವವನ್ನು ನೋಡಿ ಕೆಲವರಿಗೆ ಆಶ್ಚರ್ಯವಾಯಿತು ಅವರ ಹೃದಯ ಇಷ್ಟೊಂದು ಕಠೋರವೇ ಎಂದು ಕೆಲವರು ಭಾವಿಸತೊಡಗಿದರು.

ವೃದ್ಧನ ಮಾತನ್ನು ಕೇಳುತ್ತ ಕೇಳುತ್ತ ಸ್ವಲ್ಪ ಹೊತ್ತಿನನಂತರ ಶ್ರೀರಾಮ ಕೃಷ್ಣರು ಭಾವಾವಿಷ್ಟರಾದರು. ಕೂಡಲೆ ಎಡತೋಳನ್ನು ತಟ್ಟಿ ಮೇಲೆದ್ದು ನಿಂತು ಅಪೂರ್ವ ಉತ್ಸಾಹದಿಂದ ಈ ಕೆಳಗಿನ ಹಾಡನ್ನು ಹಾಡತೊಡಗಿದರು :

ತುಡುಕು, ತುಡುಕಾಯುಧವ ; ಮನೆಯ ಸುತ್ತಲು ಮೃತ್ಯು
ನಿಂತು ರಣಭೇರಿಯನು ಹೊಡೆಯುತ್ತಿದೆ.
ಜ್ಞಾನತೂಣೀರವನು ಹೆಗಲಿಗೇರಿಸು ; ಹತ್ತು
ಭಕ್ತಿಯ ರಥವ : ಸಮರ ಕರೆಯುತ್ತಿದೆ !

ಪ್ರೇಮಗುಣವನು ಬಿಗಿದು ನಿನ್ನ ರಸನೆಯು ಧನುವಿ-
ನಿಂದ ಬಿಡು ಶ್ರೀಕಾಳಿನಾಮಾಸ್ತ್ರವ !
ರಥ ರಥಿಕರಲ್ಲಿರಲಿ ; ಭಾಗೀರಥೀ ತೀರ-
ದಲಿ ನಿಂತು ಗೆದ್ದು ಬಾ ಈ ಸಮರವ !

ಹಾಡಿನ ರಾಗದಲ್ಲಿ ವೀರತ್ವವಿತ್ತು, ಅದಕ್ಕನುಗುಣವಾದ ಭಂಗಿಯಲ್ಲಿಯೇ ಶ್ರೀರಾಮಕೃಷ್ಣರು ಹಾಡಿದರು. ಅವರ ಕಣ್ಣುಗಳಲ್ಲಿ ವೈರಾಗ್ಯ ಉತ್ಸಾಹಗಳು ಹೊರ ಚಿಮ್ಮುತ್ತಿದ್ದವು. ಅಲ್ಲಿ ನೆರೆದವರೆಲ್ಲರಲ್ಲಿಯೂ ಒಂದು ಹೊಸ ಹುರುಪು ಮತ್ತು ಭರವಸೆ ಜಾಗ್ರತವಾಯಿತು. ಎಲ್ಲರ ಮನಸ್ಸೂ ಆಗ ಶೋಕಮೋಹಗಳ ರಾಜ್ಯದಿಂದ ದೂರ ವಾಗಿ ಇಂದ್ರಿಯಾತೀತವಾದ, ಸಂಸಾರಾತೀತವಾದ ಭಗವದಾನಂದದಿಂದ ತುಂಬಿ ಹೋಯಿತು. ಮಣಿಮೋಹನನಿಗೂ ಇದೇ ಅನುಭವವಾಯಿತು—ಶೋಕತಾಪವನ್ನು ಮರೆತು ಶಾಂತನಾದನು.

ಹಾಡು ಸಮಾಪ್ತವಾಯಿತು—ಆದರೆ ಅದರಿಂದ ಉಂಟಾದ ದಿವ್ಯ ಭಾವತರಂಗ ಇನ್ನೂ ಕೊಠಡಿಯಲ್ಲಿ ಸ್ಪಂದಿಸುತ್ತಿತ್ತು. ಭಗವಂತನೊಬ್ಬನೇ ನಮ್ಮವನು, ಅವನಿಗೇ ಪ್ರಾಣಮನಸ್ಸುಗಳನ್ನು ಅರ್ಪಿಸಬೇಕು, ಅವನು ಕೃಪೆದೋರಿ ನಮಗೆ ದರ್ಶನ ನೀಡಲಿ— ಈ ಭಾವನೆಗಳಿಂದ ಎಲ್ಲರ ಮನಸ್ಸು ತುಂಬಿಹೋಗಿ ಎಲ್ಲರೂ ಗಂಭೀರವಾಗಿ ಕುಳಿತರು. ಸ್ವಲ್ಪಹೊತ್ತಿನ ನಂತರ ಭಾವಸಮಾಧಿಯಿಂದ ಕೆಳಗಿಳಿದಮೇಲೆ ಶ್ರೀರಾಮಕೃಷ್ಣರು ಮಣಿಮೋಹನನ ಹತ್ತಿರ ಕುಳಿತು ಹೇಳತೊಡಗಿದರು :

"ಪುತ್ರಶೋಕಕ್ಕಿಂತ ತೀವ್ರವಾದ ವೇದನೆ ಬೇರೊಂದಿದೆಯೇ!? ಪುತ್ರ ದೇಹದಿಂದ ಹೊರಬರುವುದು ತಾನೆ ! ಪುತ್ರ ದೇಹದ ಒಂದು ಅಂಗವಿದ್ದಂತೆ. ದೇಹವಿರುವವರೆಗೂ ಆ ಸಂಬಂಧ ಉಳಿಯುವುದು." ಹೀಗೆ ಹೇಳಿ ಶ್ರೀರಾಮಕೃಷ್ಣರು ತಮ್ಮ ಅಣ್ಣನ ಮಗ ಅಕ್ಷಯನ ಮೃತ್ಯುವಿನ ಬಗ್ಗೆ ಹೇಳತೊಡಗಿದರು. ಎಷ್ಟೊಂದು ಗಂಭೀರಭಾವದಲ್ಲಿ ಮತ್ತು ವಾಸ್ತವಿಕವಾಗಿ ಹೇಳಿದರೆಂದರೆ ಆಗ ಅವರು ಅವನ ಮೃತ್ಯುವನ್ನು ತಮ್ಮ ಕಣ್ಮುಂದೆ ಕಾಣುತ್ತಿರುವಂತಿತ್ತು. ಅವರೆಂದರು, "ಅಕ್ಷಯನು ತೀರಿಕೊಂಡ, ಆಗ ಏನೂ ಆಗಲಿಲ್ಲ. ಮನುಷ್ಯ ಹೇಗೆ ಸಾಯುತ್ತಾನೆ ಎಂಬುದನ್ನು ನಿಂತು ನೋಡಿದೆ. ಮೃತ್ಯು ಎಂಬುದು ಕತ್ತಿಯನ್ನು ಒರೆಯಿಂದ ಹೊರತೆಗೆದಂತೆ ಎಂದೆನಿಸಿತು—ಕತ್ತಿ ಸುರಕ್ಷಿತವಾಗಿ ಉಳಿಯುವುದು, ಅದರ ಆವರಣ ಬಿದ್ದುಹೋಗುವುದು. ನೋಡಿ ಆನಂದವಾಯಿತು, ನಕ್ಕು ನಲಿದಾಡಿದೆ. ಅವನ ಶರೀರಕ್ಕೆ ಅಗ್ನಿಸಂಸ್ಕಾರವಾಯಿತು. ಮರುದಿನ ನಾನು (ಪೂರ್ವದಿಕ್ಕಿನ ವರಾಂಡದ ಕಡೆ ಕೈತೋರಿಸಿ) ಅಲ್ಲಿ ನಿಂತುಕೊಂಡಿದ್ದೆ. ನನಗೆ ಹೇಗೆ ಅನಿಸಿತು ಗೊತ್ತೆ ? ಒದ್ದೆಯಾದ ಟವಲನ್ನು ಹಿಂಡುವಹಾಗೆ ನನ್ನ ಹೃದಯವನ್ನು ಹಿಂಡಿದಂತೆ ಆಯಿತು. ನನ್ನ ಹೃದಯ ಅಕ್ಷಯನಿಗಾಗಿ ಅಷ್ಟೊಂದು ಭಾವಿಸುತ್ತಿತ್ತು ! ನಾನು ಭಾವಿಸಿದೆ, 'ತಾಯಿ, ಈ ದೇಹಕ್ಕೆ ಧರಿಸುವ ಬಟ್ಟೆ ಯೊಂದಿಗೆ ಕೂಡ ಯಾವ ಸಂಬಂಧವನ್ನೂ ಹೊಂದಿಲ್ಲ. ಆದರೆ ಅಕ್ಷಯನೊಡನೆ ಎಂಥ

ಒಂದು ಸಂಬಂಧವಿತ್ತು ! ನನಗೇ ಇಷ್ಟೊಂದು ವೇದನೆಯಾಗಬೇಕಾದರೆ ಗೃಹಸ್ಥರ ಪಾಡೇನು ! ನೀನಿದನ್ನು ತೋರಿಸುತ್ತಿರುವೆಯಲ್ಲವೆ ?' ''

ಸ್ವಲ್ಪ ಹೊತ್ತಿನನಂತರ ಶ್ರೀರಾಮಕೃಷ್ಣರು ಮತ್ತೆ ಮುಂದುವರಿಸಿದರು: ''ಆದರೆ ಒಂದು ವಿಷಯ; ಯಾರು ಭಗವಂತನನ್ನು ಗಟ್ಟಿಯಾಗಿ ಹಿಡಿದುಕೊಳ್ಳುವರೊ ಅವರು ಇಂಥ ವಿಷಮ ದುಃಖದಲ್ಲಿಯೂ ಸಂಪೂರ್ಣ ಮುಳುಗಿಹೋಗುವುದಿಲ್ಲ. ಸ್ವಲ್ಪ ಕೈಕಾಲು ಬಡಿದು ಪುನಃ ಸಮತೋಲವನ್ನು ಪಡೆಯುವರು. ಅಲ್ಪ ಸಾಮರ್ಥ್ಯವುಳ್ಳವರು, ಸಣ್ಣ ಪಾತ್ರೆಗಳಂತೆ, ಸಮತೋಲವನ್ನು ಕಳೆದುಕೊಂಡು ಮುಳುಗಿಹೋಗಿ ಬಿಡುತ್ತಾರೆ. ಸಣ್ಣ ಮೀನು ಹಿಡಿಯುವ ದೋಣಿಗಳನ್ನು ನೋಡಿಲ್ಲವೆ ? ಗಂಗಾ ನದಿಯಲ್ಲಿ ದೊಡ್ಡ ಹಡಗುಗಳು ಬಂದಾಗ ತರಂಗದ ಹೊಡೆತದಿಂದ ಅವು ಎಲ್ಲ ಮುಳುಗಿಯೇ ಹೋದವೆಂದು ತೋರುತ್ತದೆ. ಕೆಲವು ಮಗುಚಿಕೊಂಡು ಬಿಡುವುವು. ದೊಡ್ಡ ದೊಡ್ಡ ನೌಕೆಗಳು ಸ್ವಲ್ಪ ತೂರಾಟದನಂತರ ಸಮತೋಲನವನ್ನು ಪಡೆಯುವುವು.

ಸ್ವಲ್ಪಹೊತ್ತು ಗಂಭೀರವಾಗಿ ಕುಳಿತು ಶ್ರೀರಾಮಕೃಷ್ಣರು ಮತ್ತೆ ಹೇಳತೊಡಗಿದರು : ''ಈ ಸಂಸಾರದ ಸಂಬಂಧಗಳಾದರೂ ಎಷ್ಟು ದಿನದವರೆಗೆ ? ಮನುಷ್ಯ ಸುಖದ ಆಸೆಯಿಂದ ಸಂಸಾರವನ್ನು ಕಟ್ಟಿಕೊಳ್ಳುತ್ತಾನೆ. ಮದುವೆಯಾಯಿತು; ಮಕ್ಕಳಾದವು. ಆ ಮಕ್ಕಳೆಲ್ಲ ದೊಡ್ಡವರಾದ ಮೇಲೆ ಅವರಿಗೂ ಮದುವೆಯಾಯಿತು. ಹೀಗೆ ಕೆಲವು ದಿನ ಸಂತೋಷದಿಂದ ಕಳೆಯುವುದು. ಅನಂತರ ಒಬ್ಬನಿಗೆ ಕಾಯಿಲೆ, ಮತ್ತೊಬ್ಬ ಸಾಯುತ್ತಾನೆ, ಇನ್ನೊಬ್ಬ ಕೆಟ್ಟಹಾದಿ ಹಿಡಿಯುತ್ತಾನೆ. ಹೀಗೆ ದುಃಖಗಳ ಪರಂಪರೆ ಪ್ರಾರಂಭವಾಗುತ್ತದೆ. ದುಃಖ ಜಾಸ್ತಿಯಾದಷ್ಟೂ ವೇದನೆಯೂ ಜಾಸ್ತಿ; ಹಸಿ ಸೌದೆ ಹೇಗೆ ಉರಿಯುತ್ತದೆ ಎಂಬುದನ್ನು ನೋಡಿಲ್ಲವೆ ? ಮೊದಲು ಅದು ಜೋರಾಗಿ ಉರಿಯುವುದು. ಅನಂತರ ಅದರ ರಸವೆಲ್ಲ ಸೌದೆಯ ಹಿಂಭಾಗಕ್ಕೆ ಬಂದು ನೊರೆಯ ರೂಪದಲ್ಲಿ ಹೊರಬರುವುದು, ಆಗ ವಿಚಿತ್ರ ಶಬ್ದವನ್ನು ಮಾಡುವುದು. ಸಂಸಾರದಲ್ಲಿಯೂ ಹಾಗೆಯೆ.'' ಶ್ರೀರಾಮಕೃಷ್ಣರು ಹೀಗೆ ಅನೇಕ ರೀತಿಯಲ್ಲಿ ಮಣಿ ಮೋಹನನನ್ನು ಸಾಂತ್ವನಗೊಳಿಸಿದರು. ಮಣಿಮೋಹನನೂ ಸಮಾಧಾನಗೊಂಡು ಹೇಳಿದ : ''ಇದಕ್ಕಾಗಿಯೇ ನಾನು ನಿಮ್ಮೆಡೆಗೆ ಓಡಿ ಬಂದೆ. ಈ ದುಃಖಜ್ವಾಲೆಯನ್ನು ಬೇರೆ ಯಾರೂ ಶಾಂತಗೊಳಿಸಲಾರರು ಎಂದು ಗೊತ್ತಿತ್ತು.''

ಇದನ್ನೆಲ್ಲ ನೋಡಿದಮೇಲೆ ನಮಗನಿಸಿತು—ಇವರನ್ನು ನಾವು ಕಠೋರ ಹೃದಯರು ಎಂದು ಭಾವಿಸಿದೆವಲ್ಲ !–ಎಂದು. ಅವರು ಸಣ್ಣಪುಟ್ಟ ಕಾರ್ಯಗಳಲ್ಲಿಯೂ ಕೂಡ ಸಾಮಾನ್ಯರಂತಲ್ಲ. ಸಣ್ಣ ದೊಡ್ಡ ಪ್ರತಿಯೊಂದು ವಿಷಯದಲ್ಲಿಯೂ ಅವರ ಮಹತ್ವವನ್ನು ಕಾಣಬಹುದು. ಸ್ವಲ್ಪ ಮುಂಚೆ ಸಮಾಧಿ ಮಗ್ನರಾಗಿ ಹೃದಯ ಸ್ಪಂದನವೇ ನಿಂತುಹೋದದ್ದು ಇವರಿಗೇ ಏನು ? ಈಗ ಇವರೇ ಮಣಿಮೋಹನನ ದುಃಖದಲ್ಲಿ ಭಾಗಿಯಾಗಿ ಸಾಧಾರಣ ಮಾನವರಂತೆ ವರ್ತಿಸುತ್ತಿರುವರಲ್ಲ—ಎಂದೆನಿಸಿತು.

'ಇದೆಲ್ಲ ಮಾಯೆ, ಕ್ಷುಲ್ಲಕ ವಿಷಯ' ಎಂದು ಹೇಳಿ ವೃದ್ಧನ ಮಾತನ್ನು ತಳ್ಳಿಹಾಕಿಬಿಡಬಹುದಿತ್ತು. ಅವರು ಆ ರೀತಿ ತಮ್ಮ ಮಹತ್ವವನ್ನು ತೋರಿಸಿದ್ದರೆ, ಅವರು ಶ್ರೇಷ್ಠರಿರಬಹುದು, ಆದರೆ ಲೋಕಗುರು ಅಥವಾ ಜಗದ್ಗುರು ಶ್ರೀರಾಮಕೃಷ್ಣರಲ್ಲ—ಎಂದು ಭಾವಿಸುತ್ತಿದ್ದೆವು. ಸಾಧಾರಣ ಮನುಷ್ಯನ ಭಾವವನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವಿಲ್ಲ ಇವರಿಗೆ ಎಂದು ತೀರ್ಮಾನಕ್ಕೆ ಬರುತ್ತಿದ್ದೆವು. ಪತ್ನಿಪುತ್ರಾದಿಗಳ ಮಮತೆಯಲ್ಲಿ, ಮಾನವ ಸಹಜವಾದ ಅಸಹಾಯಕ ಪರಿಸ್ಥಿತಿಯಲ್ಲಿ ಇವರೂ ಸಿಲುಕಿದ್ದಿದ್ದರೆ ಮಾಯೆಯ ಆಟವನ್ನು ಇಷ್ಟೊಂದು ಉದಾಸೀನತೆಯಿಂದ ಕಾಣುತ್ತಿರಲಿಲ್ಲ ಎಂದು ಆಲೋಚಿಸುತ್ತಿದ್ದೆವು.

21. ಮರುಕ್ಷಣವೇ ಒಬ್ಬ ಯುವಕನು ಬಂದು ಅವರನ್ನು ಈ ರೀತಿ ಕೇಳುತ್ತಾನೆಂದು ಇಟ್ಟುಕೊಳ್ಳಿ : "ಕಾಮವನ್ನು ಜಯಿಸುವುದು ಹೇಗೆ ? ಎಷ್ಟೇ ಪ್ರಯತ್ನಿಸಿದರೂ ಆಗಾಗ ಇಂದ್ರಿಯ ಚಂಚಲಗೊಂಡು ದುರ್ಭಾವನೆಗಳು ಮನಸ್ಸಿಗೆ ಬರುವುವು. ಇದರಿಂದ ಮನಸ್ಸು ಅಶಾಂತಗೊಳ್ಳುವುದು." ಆಗ ಶ್ರೀರಾಮಕೃಷ್ಣರು ಹೇಳುತ್ತಿದ್ದರು : "ನೋಡಪ್ಪ, ಭಗವದ್ದರ್ಶನವಾಗದೆ ಕಾಮವು ಸಂಪೂರ್ಣ ಹೊರಟು ಹೋಗುವುದಿಲ್ಲ. ಭಗವಂತನ ದರ್ಶನವಾದಮೇಲೂ ಶರೀರವಿರುವವರೆಗೂ ಅದು ಸ್ವಲ್ಪ ಸ್ವಲ್ಪ ಉಳಿಯುವುದು, ಆದರೆ ಅದಕ್ಕೆ ತಲೆ ಎತ್ತಲಾಗುವುದಿಲ್ಲ. ನನಗೆ ಒಮ್ಮೆಲೇ ಅದು ಹೊರಟುಹೋಯಿತೆಂದು ನೀನು ಭಾವಿಸಿರುವೆಯೇನು ? ನಾನು ಕಾಮವನ್ನು ಜಯಿಸಿಬಿಟ್ಟಿದ್ದೇನೆ ಎಂದು ಒಮ್ಮೆ ಅನಿಸಿತ್ತು. ಅನಂತರ ಒಂದುದಿನ ಪಂಚವಟಿಯಲ್ಲಿ ಕುಳಿತಿದ್ದಾಗ ಎಂಥ ದೊಡ್ಡ ಕಾಮದ ಅಲೆ ಎದ್ದಿತೆಂದರೆ ಇದು ನನ್ನ ಹಿಡಿತಕ್ಕೆ ಮೀರಿದುದೆಂದು ಅನಿಸಿತು. ಅನಂತರ ಧೂಳಿನಲ್ಲಿ ನನ್ನ ಮುಖವನ್ನು ಉಜ್ಜುತ್ತ, ಅಳುತ್ತ ತಾಯಿಗೆ ಹೇಳಿದೆ, "ತಾಯಿ, ನಾನು ತುಂಬ ಅನ್ಯಾಯ ಮಾಡಿದೆ. ಕಾಮವನ್ನು ಜಯಿಸಿದ್ದೇನೆ ಎಂದು ಇನ್ನೆಂದೂ ನಾನು ಭಾವಿಸುವುದಿಲ್ಲ." ಆಗ ಅದು ಹೊರಟುಹೋಯಿತು. ವಿಷಯವಿಷ್ಟೆ, ಈಗ ನೀವು ಯೌವನದ ಪ್ರವಾಹದಲ್ಲಿದ್ದೀರಿ. ಅದಕ್ಕೇ ಅದನ್ನು ತಡೆಯಲಾಗುತ್ತಿಲ್ಲ. ಪ್ರವಾಹ ಉಕ್ಕಿ ಹರಿಯುವಾಗ ಅದಕ್ಕೆ ಕಟ್ಟೆ ಕಟ್ಟಲಾಗುವುದೆ ? ಎಂಥ ಕಟ್ಟೆಯನ್ನೂ ಒಡೆದುಕೊಂಡು ಹೋಗುತ್ತದೆ ! ಕಲಿಯುಗದಲ್ಲಿ ಮಾನಸಿಕ ಪಾಪವು ಪಾಪವೇ ಅಲ್ಲ ಎನ್ನುತ್ತಾರೆ. ಯಾವಾಗಲೊ ಒಮ್ಮೊಮ್ಮೆ ಮನಸ್ಸಿನಲ್ಲಿ ಕೆಟ್ಟ ಆಲೋಚನೆ ಬಂದರೆ ಅದರ ಬಗ್ಗೆಯೇ ಚಿಂತಿಸುತ್ತ ಏಕೆ ಕುಳಿತುಕೊಳ್ಳಬೇಕು ? ಆಗಾಗ ಶರೀರದ ಸ್ವಭಾವಕ್ಕೆ ಅನುಗುಣವಾಗಿ ಆ ರೀತಿ ಆಗುತ್ತದೆ. ಇದೂ ಕೂಡ ಶೌಚಾದಿ ಇತರ ದೈಹಿಕಕ್ರಿಯೆಗಳಂತೆ ಎಂದು ಭಾವಿಸಬೇಕು. ಮಲಮೂತ್ರ ವಿಸರ್ಜನೆಯಾಯಿತೆಂದು ಜನ ಕೈಮೇಲೆ ತಲೆಯಿಟ್ಟು ಚಿಂತಿಸುವರೆ ? ಇದೂ ಕೂಡ ಸಾಮಾನ್ಯ ತುಚ್ಛ ವಿಷಯವೆಂದು ಭಾವಿಸಿ ಅದರ ಕಡೆ ಹೆಚ್ಚು ಗಮನ ಕೊಡಬೇಡಿ. ಭಗವಂತನನ್ನು ಪ್ರಾರ್ಥಿಸು, ನಿರಂತರ ಅವನ ಹೆಸರನ್ನು ಉಚ್ಚರಿಸು, ಕಾಮಭಾವನೆಗಳು ಬರಲಿ, ಹೋಗಲಿ—ಅದರ ಕಡೆ ಗಮನ ಹರಿಸಬೇಡ, ಕ್ರಮೇಣ ಅದು

ನಿನ್ನ ಹಿಡಿತಕ್ಕೆ ಬರುವುದು.'' ಇಲ್ಲಿ ಯುವಕನ ಮುಂದೆ ಶ್ರೀರಾಮಕೃಷ್ಣರು ಯುವಕನಂತೆಯೇ ಆಗಿರುವರು.

22. ಈ ಸಂದರ್ಭದಲ್ಲಿ ಸ್ವಾಮಿ ಯೋಗಾನಂದರ ವಿಷಯ ಮನಸ್ಸಿಗೆ ಬರುತ್ತದೆ. ಅವರಂತಹ ಇಂದ್ರಿಯ ನಿಗ್ರಹವುಳ್ಳ ವ್ಯಕ್ತಿಗಳು ಅಪರೂಪ. ಅವರು ಒಮ್ಮೆ ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರನ್ನು ಇದೇ ಪ್ರಶ್ನೆ ಕೇಳಿದರು. ಆಗ ಅವರ ವಯಸ್ಸು ಕೇವಲ 14–15 ಇರಬಹುದು. ಆ ಸಂದರ್ಭದಲ್ಲಿ ನಾರಾಯಣ ಎಂಬ ಹೆಸರಿನ ಹಠಯೋಗಿಯೊಬ್ಬನು ಪಂಚವಟಿಯ ಕುಟೀರದಲ್ಲಿ ನೆಲೆಸಿದ್ದನು. ಅವನು ನೇತಿ ಧೌತಿ ಮುಂತಾದ ಪ್ರದರ್ಶನಗಳ ಮೂಲಕ ಕೆಲವರನ್ನು ಆಕರ್ಷಿಸುತ್ತಿದ್ದನು. ಅವರಲ್ಲಿ ಯೋಗಾನಂದರೂ ಒಬ್ಬರಾಗಿದ್ದರು. ಹಠಯೋಗಿಯ ಕ್ರಿಯೆಗಳನ್ನು ನೋಡಿ, ಅವನ್ನೆಲ್ಲ ಮಾಡದಿದ್ದರೆ ಕಾಮವನ್ನು ಜಯಿಸಲಾಗುವುದಿಲ್ಲ, ಭಗವದ್ದರ್ಶನವೂ ಅಸಾಧ್ಯ ಎಂದು ಅವರು ಭಾವಿಸಿದ್ದರು. ಅವರು ಶ್ರೀರಾಮಕೃಷ್ಣರನ್ನು ಕಾಮವನ್ನು ಜಯಿಸುವ ವಿಧಾನದ ಬಗ್ಗೆ ಪ್ರಶ್ನಿಸಿದಾಗ ಅವರಿಗನಿಸಿತ್ತು—ಶ್ರೀರಾಮಕೃಷ್ಣರು ಯಾವುದಾದರೂ ಆಸನ ಮಾಡಲು ಹೇಳಬಹುದು, ಅಥವಾ ಹರಿತಕೀ ಮುಂತಾದವುಗಳನ್ನು ತಿನ್ನಲು ಹೇಳಬಹುದು: ಅಥವಾ ಪ್ರಾಣಾಯಾಮ ಮಾಡಲು ಹೇಳಬಹುದು ಎಂದು. ಸ್ವಾಮಿ ಯೋಗಾನಂದರು ಹೇಳುತ್ತಾರೆ, ''ಶ್ರೀರಾಮಕೃಷ್ಣರು ನನ್ನ ಪ್ರಶ್ನೆಗೆ ಉತ್ತರವಾಗಿ ಹೇಳಿದರು, 'ಚೆನ್ನಾಗಿ ಹರಿನಾಮವನ್ನು ಉಚ್ಚರಿಸು, ಕಾಮವು ದೂರವಾಗುವುದು.'' ಈ ಮಾತು ನನ್ನ ಮನಸ್ಸಿಗೆ ಸ್ವಲ್ಪವೂ ಹಿಡಿಸಲಿಲ್ಲ ಇವರಿಗೆ ಯಾವ ಕ್ರಿಯೆಯೂ ಗೊತ್ತಿಲ್ಲವಲ್ಲ, ಅದಕ್ಕೆ ಏನೋ ಹೇಳಿರುವರು—ಎಂದು ಭಾವಿಸಿದೆ. ಹರಿನಾಮವನ್ನು ಉಚ್ಚರಿಸಿದರೆ ಕಾಮವು ಹೊರಟುಹೋಗುವುದೆ ? ಹಾಗಾದರೆ ಎಷ್ಟೋ ಜನ ಉಚ್ಚರಿಸುತ್ತಿರುವರು, ಅವರೆಲ್ಲ ಕಾಮವನ್ನು ಜಯಿಸಿರುವರೆ ? ಅನಂತರ ಒಂದುದಿನ ದಕ್ಷಿಣೇಶ್ವರಕ್ಕೆ ಹೋಗಿದ್ದಾಗ ಶ್ರೀರಾಮಕೃಷ್ಣರೆಡೆಗೆ ಹೋಗದೆ ನೇರವಾಗಿ ಹಠಯೋಗಿಯ ಹತ್ತಿರ ಹೋದೆ. ನಾನು ಅವನ ಮಾತನ್ನು ಮುಗ್ಧನಾಗಿ ಕೇಳುತ್ತಿರುವಾಗ ಇದ್ದಕ್ಕಿದ್ದಂತೆ ಶ್ರೀರಾಮಕೃಷ್ಣರು ಅಲ್ಲಿಗೆ ಬಂದುಬಿಟ್ಟರು. ಬಂದವರೆ ನನ್ನ ಕೈಯನ್ನು ಹಿಡಿದು ಎಳೆದು ತಮ್ಮ ಕೊಠಡಿಯ ಕಡೆ ಕರೆದುಕೊಂಡು ಹೋಗುತ್ತ ಹೇಳಿದರು: 'ನೀನೇಕೆ ಅಲ್ಲಿಗೆ ಹೋಗಿದ್ದೆ ? ಅಲ್ಲಿಗೆ ಹೊಗಕೂಡದು. ಅದೆಲ್ಲ ಹಠಯೋಗದ ಕಸರತ್ತು. ಅವನ್ನು ಕಲಿತರೆ ಮತ್ತು ಮಾಡಿದರೆ ಶರೀರದ ಕಡೆಗೇ ಮನಸ್ಸು ಹೋಗುವುದು—ಭಗವಂತನ ಕಡೆ ಹೋಗುವುದಿಲ್ಲ.' ಅವರ ಮಾತನ್ನು ಕೇಳಿ ನನಗನಿಸಿತು—ಅವರೆಡೆಗೆ ಮುಂದೆ ನಾನು ಹೋಗುವುದಿಲ್ಲವೇನೊ ಎಂದು ಹೆದರಿ ಹೀಗೆ ಹೇಳುತ್ತಿದ್ದಾರೆ—ಎಂದು. ನಾನು ದೊಡ್ಡ ಬುದ್ಧಿವಂತ ಎಂದುಕೊಂಡಿದ್ದೆ—ಬುದ್ಧಿ ಅತಿಯಾದಾಗಲೇ ಹೀಗೆಲ್ಲ ಭಾವಿಸುವುದು ತಾನೆ ! ನಾನು ಅವರೆಡೆಗೆ ಹೋಗಲಿ ಹೋಗದೆ ಇರಲಿ, ಅವರಿಗೆ ಲಾಭವೂ ಇಲ್ಲ ನಷ್ಟವೂ ಇಲ್ಲ—ಎಂಬುದು ಆಗ ನನಗೆ ಹೊಳೆಯಲಿಲ್ಲ. ನನ್ನದು ಅಷ್ಟೊಂದು ಸಂಶಯ ಮನಸ್ಸು ! ಶ್ರೀರಾಮಕೃಷ್ಣರ ಕೃಪೆಗೆ

ಅಂತ್ಯವಿಲ್ಲ—ಅಂಥ ಒಂದು ದುಷ್ಟ ಭಾವನೆಗಳು ಮನಸ್ಸಿಗೆ ಬಂದಿದ್ದರೂ ಅವರು ನನಗೆ ಸ್ನಾನವಿತ್ತರು. ಆಮೇಲೆ ನನಗನಿಸತೊಡಗಿತು—ಶ್ರೀರಾಮಕೃಷ್ಣರು ಹೇಳಿರುವುದನ್ನು ಮಾಡಿ ನೋಡೋಣ, ಏನಾಗುತ್ತೊ ಆಗಲಿ ಎಂದು. ಹೀಗೆ ಯೋಚಿಸಿ ಒಂದೇ ಮನಸ್ಸಿನಿಂದ ಹರಿನಾಮವನ್ನು ಉಚ್ಚರಿಸಲು ಪ್ರಾರಂಭಿಸಿದೆ. ವಾಸ್ತವಿಕವಾಗಿಯೂ ಕೆಲವೇ ದಿನಗಳಲ್ಲಿ ಶ್ರೀರಾಮಕೃಷ್ಣರು ಹೇಳಿದಂತೆಯೇ ಫಲ ಲಭಿಸತೊಡಗಿತು.''

23. ಹೀಗೆ ಎಲ್ಲರ ಅವಸ್ಥೆಯನ್ನೂ ಭಾವವನ್ನೂ ಸರಿಯಾಗಿ ಅರ್ಥಮಾಡಿಕೊಳ್ಳು ತ್ತಿದ್ದರು ಎಂಬುದಕ್ಕೆ ಎಷ್ಟೊ ಉದಾಹರಣೆಗಳನ್ನು ಕೊಡಬಹುದು. ಸಿಂಧೂರಿಯಾ ಪಾಟಿಯ ಮಣಿಮಲ್ಲಿಕನ ಬಗ್ಗೆ ಆಗಲೇ ಹೇಳಿರುವೆವು. ಅವನ ಸಂಬಂಧಿಕಳಾದ ಮಹಿಳೆ ಯೊಬ್ಬಳು ಶ್ರೀರಾಮಕೃಷ್ಣರೆಡೆಗೆ ಆಗಾಗ ಬರುತ್ತಿದ್ದಳು. ಒಂದುದಿನ ಆಕೆ ಬಂದು ಕಾತರಭಾವದಲ್ಲಿ ಹೇಳಿದಳು : ''ಭಗವಂತನ ಧ್ಯಾನಕ್ಕೆ ಕುಳಿತ ಕೂಡಲೇ ಎಲ್ಲ ಸಂಸಾರದ ಯೋಚನೆಗಳೇ ಮನಸ್ಸಿಗೆ ಬರುತ್ತವೆ. ಅವರಿವರ ಮುಖ ಮನಸ್ಸಿಗೆ ಬಂದು ಅಶಾಂತಿ ಉಂಟಾಗುತ್ತದೆ.'' ಶ್ರೀರಾಮಕೃಷ್ಣರಿಗೆ ಆಕೆಯ ಮಾನಸಿಕ ಸ್ಥಿತಿ ಕೂಡಲೇ ಅರ್ಥ ವಾಯಿತು. ಯಾರ ಮೇಲೊ ಅವಳಿಗೆ ಪ್ರೀತಿಯುಂಟು, ಅವರ ವಿಷಯ ಮತ್ತು ಮುಖ ಮನಸ್ಸಿಗೆ ಬರುತ್ತಿದೆ ಎಂದು ಅರಿತುಕೊಂಡು ಕೇಳಿದರು : ''ಯಾರ ಮುಖ ಮನಸ್ಸಿಗೆ ಬರುತ್ತದೆ ? ಸಂಸಾರದಲ್ಲಿ ಯಾರನ್ನು ನೀನು ಹೆಚ್ಚು ಪ್ರೀತಿಸುತ್ತೀಯೆ, ಹೇಳು ?'' ಆಕೆ ಉತ್ತರಿಸಿದಳು: ''ನನ್ನ ತಮ್ಮನ ಮಗನ ಮೇಲೆ ನನಗೆ ತುಂಬ ಪ್ರೀತಿ, ಅವನನ್ನು ನಾನು ಸಾಕುತ್ತಿದ್ದೇನೆ.'' ಶ್ರೀರಾಮಕೃಷ್ಣರು ಹೇಳಿದರು : ''ಒಳ್ಳೆಯದು, ಅವನಿಗಾಗಿ ನೀನು ಏನೇನು ಮಾಡುತ್ತೀಯೊ—ಉಣಿಸುವಾಗ, ಬಟ್ಟೆ ತೊಡಿಸುವಾಗ-ಆವಾಗಲೆಲ್ಲ ಅವನು ಗೋಪಾಲನೆಂದು ಭಾವಿಸು. ಗೋಪಾಲರೂಪೀ ಭಗವಂತನು ಅವನೊಳಗಿರುವನು ಎಂದು ಭಾವಿಸು. ಗೋಪಾಲನಿಗೆ ಉಣಿಸುತ್ತಿರುವೆನು, ಅವನಿಗೆ ಬಟ್ಟೆ ತೊಡಿಸುತ್ತಿರುವೆನು, ಅವನ ಸೇವೆ ಮಾಡುತ್ತಿರುವೆನು ಎಂದು ಭಾವಿಸು. ಮನುಷ್ಯನ ಸೇವೆ ಮಾಡುತ್ತಿರುವೆ ನೆಂದು ಏಕೆ ಭಾವಿಸುತ್ತೀಯೆ? ಭಾವದಂತೆ ಲಾಭ.'' ಈ ರೀತಿ ಮಾಡಿದುದರ ಪರಿಣಾಮ ವಾಗಿ ಅವಳು ವಿಶೇಷ ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸಿದಳು. ಅಷ್ಟೇ ಅಲ್ಲದೆ ಅವಳಿಗೆ ಭಾವಸಮಾಧಿಯೂ ಉಂಟಾಯಿತೆಂದು ಕೇಳಿದ್ದೇವೆ.

24. ಶ್ರೀರಾಮಕೃಷ್ಣರದು ಪುರುಷ ಶರೀರ. ಆದ್ದರಿಂದ ಪುರುಷರ ಮನಃ ಸ್ಥಿತಿಯನ್ನು ಅವರು ಅರ್ಥಮಾಡಿಕೊಳ್ಳುವುದರಲ್ಲಿ ಅಷ್ಟೇನೂ ವಿಶೇಷತೆಯಿಲ್ಲ. ಆದರೆ ಸ್ತ್ರೀಯರ ವಿಷಯವೇ ಬೇರೆ, ಅವರಲ್ಲಿ ಕೋಮಲತೆ, ಸಂತಾನವಾತ್ಸಲ್ಯ ಮುಂತಾದ ವಿಶೇಷಗುಣಗಳು ಇರುತ್ತವೆ. ಅವರ ಎಲ್ಲ ಭಾವಗಳನ್ನೂ ಶ್ರೀರಾಮ ಕೃಷ್ಣರು ಅರ್ಥಮಾಡಿಕೊಳ್ಳುತ್ತಿದ್ದುದನ್ನು ನೋಡಿದಾಗ ನಮಗೆ ಅತ್ಯಾಶ್ಚರ್ಯವಾಗು ವುದು. ಅವರ ಸ್ತ್ರೀಭಕ್ತರು ಹೇಳುತ್ತಾರೆ : ''ಶ್ರೀರಾಮಕೃಷ್ಣರು ಪುರುಷರೆಂದು ನಮಗೆಷ್ಟೊ ಬಾರಿ ಅನಿಸುತ್ತಲೆ ಇರಲಿಲ್ಲ. ನಮ್ಮವರಲ್ಲೇ ಒಬ್ಬರು ಎಂದೆನಿಸುತ್ತಿತ್ತು.

ಆದ್ದರಿಂದ ಪುರುಷರ ಮುಂದೆ ನಮಗೆ ಸಂಕೋಚ ಲಜ್ಜೆ ಉಂಟಾಗುವಂತೆ ಶ್ರೀರಾಮ ಕೃಷ್ಣರಮುಂದೆ ಅದಾವುದೂ ಆಗುತ್ತಿರಲಿಲ್ಲ. ಯಾವಾಗಲಾದರೂ ಒಮ್ಮೊಮ್ಮೆ ಆ ರೀತಿಆದರೂ ಕೂಡಲೇ ಮರೆತುಹೋಗಿ ನಿಃಸಂಕೋಚವಾಗಿ ಮನಸ್ಸಿನ ಎಲ್ಲ ವಿಷಯವನ್ನೂ ಹೇಳಿಬಿಡುತ್ತಿದ್ದೆವು.''

25. 'ನಾನು ಶ್ರೀಕೃಷ್ಣನ ಸಖಿ ಅಥವಾ ದಾಸೀ' ಎಂಬ ಭಾವದಿಂದ ಅವರು ಬಹಳ ಕಾಲ ಸಾಧನೆ ಮಾಡಿದುದರ ಫಲವಾಗಿ 'ನಾನು ಪುರುಷ' ಎಂಬ ಭಾವ ಹೊರಟು ಹೋಗಿರುವುದರಿಂದ ಈ ರೀತಿ ಆಗಿರುವುದೆ? ಮನುಷ್ಯನ ಮನಸ್ಸಿನಿಂದ ಹಿಂಸೆಯ ಭಾವವು ಸಂಪೂರ್ಣ ಹೊರಟುಹೋದಾಗ ಇತರ ಮನುಷ್ಯರಿರಲಿ, ಕ್ರೂರ ಮೃಗಗಳೂ ಕೂಡ ಅವನನ್ನು ಹಿಂಸಿಸುವುದಿಲ್ಲ–ಎಂದು ಪತಂಜಲಿ ಹೇಳುತ್ತಾನೆ. ಅವನನ್ನು ನೋಡಿ ದಾಗ ಅವುಗಳಲ್ಲಿ ಹಿಂಸಾಪ್ರವೃತ್ತಿಯೇ ಉದಯಿಸುವುದಿಲ್ಲ. ಇದು ಕಾಮ–ಕ್ರೋಧಾದಿ ಗಳಿಗೂ ಅನ್ವಯಿಸುತ್ತದೆ. ಪುರಾಣದಲ್ಲಿ ಇದಕ್ಕೆ ಅನೇಕ ಉದಾಹರಣೆಗಳು ಸಿಗುತ್ತವೆ. ಅವುಗಳಲ್ಲಿ ಒಂದನ್ನು ಇಲ್ಲಿ ಪ್ರಸ್ತಾಪಿಸಬಹುದು.

ಮಾಯಾರಹಿತನೂ ನಿಷ್ಕಲಂಕನೂ ಆದ ಯುವಕ ಶುಕದೇವನು ಭಗವದ್ ಭಾವದಲ್ಲಿಯೇ ಮಗ್ನನಾಗಿ ಸಂಸಾರವನ್ನು ತ್ಯಜಿಸಿ ಹೋಗುತ್ತಿದ್ದನು. ಅವನ ಹಿಂದೆ ವೃದ್ಧ ತಂದೆ ವ್ಯಾಸನು ಪುತ್ರವ್ಯಾಮೋಹದಿಂದ ''ಎಲ್ಲಿ ಹೋಗುತ್ತಿರುವೆ, ಎಲ್ಲಿ ಹೋಗುತ್ತಿರುವೆ'' ಎಂದು ಕರೆಯುತ್ತ ಓಡುತ್ತಿದ್ದನು. ದಾರಿಯ ಮಧ್ಯದ ಒಂದು ಸರೋವರದಲ್ಲಿ ಅಪ್ಸರಸ್ತ್ರೀಯರು ಸ್ನಾನ ಮಾಡುತ್ತಿದ್ದರು. ಶುಕನನ್ನು ನೋಡಿದಾಗ ಅವರಿಗೆ ಸ್ವಲ್ಪವೂ ಸಂಕೋಚವಾಗಲಿ ಲಜ್ಜೆಯಾಗಲಿ ಉಂಟಾಗಲಿಲ್ಲ–ಮೊದಲಿನಂತೆಯೇ ಸ್ನಾನ ಮಾಡುತ್ತಿದ್ದರು. ಆದರೆ ವ್ಯಾಸನು ಅಲ್ಲಿಗೆ ಬಂದಾಕ್ಷಣ ಅವರೆಲ್ಲರೂ ಗಡಿಬಿಡಿ ಯಿಂದ ಬಟ್ಟೆ ಉಟ್ಟುಕೊಳ್ಳತೊಡಗಿದರು. ವ್ಯಾಸನಿಗೆ ಅಚ್ಚರಿಯಾಯಿತು: ''ಇದು ಚೆನ್ನಾಗಿದೆ! ಯುವಕನಾದ ನನ್ನ ಮಗ ಮುಂದೆ ಹೋದಾಗ ಇವರು ಸ್ವಲ್ಪವೂ ಸಂಕೋಚ ಪಡಲಿಲ್ಲ. ವೃದ್ಧನಾದ ನನ್ನನ್ನು ನೋಡಿದರೆ ಇಷ್ಟೊಂದು ನಾಚಿಕೆಯೆ!'' ಆ ಅಪ್ಸರ ಸ್ತ್ರೀಯರನ್ನು ಕೇಳಿದಾಗ ಅವರಂದರು ''ಶುಕನು ಅತ್ಯಂತ ಪವಿತ್ರ. ಆತ್ಮ ಚಿಂತನೆಯಲ್ಲಿಯೇ ಸದಾ ಇರುತ್ತಾನೆ. ತನ್ನದು ಸ್ತ್ರೀಶರೀರವೊ ಪುರುಷಶರೀರವೊ ಆದರ ಪರಿವೆಯೇ ಇಲ್ಲ ಅವನಿಗೆ. ಆದ್ದರಿಂದ ಅವನನ್ನು ನೋಡಿದಾಗ ನಮಗೆ ಲಜ್ಜೆ ಯುಂಟಾಗಲಿಲ್ಲ. ಆದರೆ ನೀನು ವೃದ್ಧ. ಸ್ತ್ರೀಯರ ಹಾವಭಾವ ಕಟಾಕ್ಷಗಳ ಸಾಕಷ್ಟು ಪರಿಚಯವಿದೆ ನಿನಗೆ. ಬಹಳಷ್ಟು ಸ್ತ್ರೀವರ್ಣನೆಯನ್ನೂ ಮಾಡಿರುವೆ. ಶುಕನಿಗಿರು ವಂತೆ ಸ್ತ್ರೀ ಪುರುಷರನ್ನು ಆತ್ಮದೃಷ್ಟಿಯಿಂದ ಕಾಣುವ ಸಾಮರ್ಥ್ಯ ನಿನಗಿಲ್ಲ. ಆದ್ದರಿಂದ ನಿನ್ನನ್ನು ನೋಡಿದಾಗ ನಮ್ಮಲ್ಲಿ ಪುರುಷಜ್ಞಾನವುಂಟಾಗಿ ಲಜ್ಜಿತರಾದೆವು.''

26. ಶ್ರೀರಾಮಕೃಷ್ಣರ ವಿಷಯದಲ್ಲಿಯೂ ಹೀಗೆಯೇ ಎಂದೆನಿಸುತ್ತದೆ. ಅವ ರಲ್ಲಿ ಜ್ವಲಂತ ಆತ್ಮಜ್ಞಾನವಿತ್ತು, ಸ್ತ್ರೀ–ಪುರುಷರೆಲ್ಲರನ್ನೂ ಆತ್ಮದೃಷ್ಟಿಯಿಂದ ಕಾಣು ತ್ತಿದ್ದರು. ಆದ್ದರಿಂದ ಅವರೊಡನಿರುವಾಗ ಮನಸ್ಸು ಎಂಥ ಉಚ್ಚಮಟ್ಟಕ್ಕೆ ಏರು

ತ್ತಿತ್ತೆಂದರೆ 'ನಾನು ಪುರುಷ' 'ಅವರು ಸ್ತ್ರೀ'—ಇಂಥ ಭಾವನೆಗಳು ಮನಸ್ಸಿನಲ್ಲಿ ಉದಯಿಸುತ್ತಲೇ ಇರಲಿಲ್ಲ. ಇದರಿಂದಾಗಿಯೇ ಪುರುಷರಂತೆ ಸ್ತ್ರೀಯರಿಗೂ ಅವರ ಮುಂದಿರುವಾಗ ಲಜ್ಜೆಯಾಗುತ್ತಿರಲಿಲ್ಲ. ಇಷ್ಟೇ ಅಲ್ಲ, ಶ್ರೀರಾಮಕೃಷ್ಣರ ಸಂಸರ್ಗ ದಿಂದ ಅವರಲ್ಲಿ ಆ ಸಮಯದ ಮಟ್ಟಿಗೆ ಆತ್ಮದೃಷ್ಟಿ ಎಷ್ಟೊಂದು ಪ್ರಬಲವಾಗು ತ್ತಿತ್ತೆಂದರೆ, ಸಾಮಾನ್ಯವಾಗಿ ಸ್ತ್ರೀಯರು ಯಾವುದನ್ನು ಅತ್ಯಂತ ಸಾಹಸಕಾರ್ಯವೆಂದು ತಿಳಿಯುತ್ತಿದ್ದರೊ ಹಾಗೂ ಬೇರೆ ಯಾರು ಹೇಳಿದರೂ ಅಂಥ ಕಾರ್ಯದಲ್ಲಿ ಕೈಹಾಕು ತ್ತಿರಲಿಲ್ಲವೊ, ಅಂಥ ಕಾರ್ಯವನ್ನೂ ಶ್ರೀರಾಮಕೃಷ್ಣರ ಅಪ್ಪಣೆಯಾದರೆ ನಿಃಸಂಕೋಚ ವಾಗಿ ಮಾಡಿಬಿಡುತ್ತಿದ್ದರು. ಸದ್ಗೃಹಸ್ಥ ಮಹಿಳೆಯರು ಕೆಲವರು ಬಂಡಿ ಅಥವಾ ಪಲ್ಲಕ್ಕಿ ಇಲ್ಲದೆ ಹೊರಗಡೆ ಹೋಗುವುದೇ ಇಲ್ಲ. ಅಂಥವರೂ ಕೂಡ ಶ್ರೀರಾಮ ಕೃಷ್ಣರ ಆದೇಶದಂತೆ ಕೆಲವೊಮ್ಮೆ ಅವರೊಡನೆ ಹಗಲಿನಲ್ಲಿ ರಸ್ತೆಯಲ್ಲಿ ನಡೆದುಕೊಂಡು ಗಂಗಾನದಿಯವರೆಗೆ ಬಂದು ಅನಂತರ ದೋಣಿಯಲ್ಲಿ ದಕ್ಷಿಣೇಶ್ವರಕ್ಕೆ ಬಂದದ್ದುಂಟು. ಕೆಲವೊಮ್ಮೆ ದಕ್ಷಿಣೇಶ್ವರಕ್ಕೆ ಹೋದಾಗ ಶ್ರೀರಾಮಕೃಷ್ಣರ ಆಜ್ಞೆಯಂತೆ ಪೇಟೆಗೆ ಹೋಗಿ ಸಾಮಾನು ಕೊಂಡುತಂದದ್ದೂ ಉಂಟು. ಮತ್ತೆ ಸಂಜೆಯ ವೇಳೆ ನಡೆದು ಕೊಂಡು ಮನೆಗೆ ಹೋಗುತ್ತಿದ್ದರು. ಇದಕ್ಕೆ ನಿದರ್ಶನವಾಗಿ ಒಂದೆರಡು ಘಟನೆಗಳನ್ನು ಉದಾಹರಿಸಬಹುದು.

27. ಕ್ರಿ.ಶ. ೧೮೮೪ರ ಭಾದ್ರ ಅಥವಾ ಆಶ್ವಿನೀ ತಿಂಗಳು. ಶ್ರೀಮಾತೆಯವರು ಜಯರಾಮಬಾಟಿಯಲ್ಲಿದ್ದರು. ಬಲರಾಮ ಬಸು ತನ್ನ ತಂದೆಯೊಡನೆ ಬೃಂದಾವನಕ್ಕೆ ಹೋಗಿದ್ದನು. ಅವನೊಡನೆ ರಾಖಾಲ(ಸ್ವಾಮಿ ಬ್ರಹ್ಮಾನಂದ) ಮತ್ತು ಗೋಪಾಲ (ಸ್ವಾಮಿ ಅದ್ವೈತಾನಂದ) ಇವರೂ ಹೋಗಿದ್ದರು. ಬಾಗಬಜಾರಿನ ಸದ್ಗೃಹಸ್ಥ ಮಹಿಳೆ ಯೊಬ್ಬಳು ಶ್ರೀರಾಮಕೃಷ್ಣರನ್ನು ಒಮ್ಮೆಯೂ ನೋಡಿರಲಿಲ್ಲ, ಆದರೆ ಅವರ ಬಗ್ಗೆ ಕೇಳಿದ್ದಳು. ಆಕೆಗೆ ಶ್ರೀರಾಮಕೃಷ್ಣರನ್ನು ನೋಡಬೇಕೆಂಬ ತೀವ್ರ ಆಸಕ್ತಿ ಉಂಟಾ ಯಿತು. ತನ್ನ ಪರಿಚಿತಳಾದ ಇನ್ನೋರ್ವ ಮಹಿಳೆಗೆ ಈ ವಿಷಯವನ್ನು ತಿಳಿಸಿದಳು. ಅವಳು ಶ್ರೀರಾಮಕೃಷ್ಣರ ಭಕ್ತೆ—ಸುಮಾರು ಎರಡು ವರ್ಷಗಳಿಂದಲೂ ಅವರೆಡೆಗೆ ಹೋಗಿಬರುತ್ತಿದ್ದಳು. ಇಬ್ಬರೂ ಒಂದು ತೀರ್ಮಾನಕ್ಕೆ ಬಂದು ಮರುದಿನ ಮಧ್ಯಾಹ್ನ ಇಬ್ಬರೂ ದೋಣಿಯ ಮೂಲಕ ದಕ್ಷಿಣೇಶ್ವರಕ್ಕೆ ಬಂದಿಳಿದರು. ಶ್ರೀರಾಮಕೃಷ್ಣರ ಕೋಣೆಯ ಬಾಗಿಲು ಮುಚ್ಚಿತ್ತು. ಗೋಡೆಯ ಕಿಂಡಿಯ ಮೂಲಕ ಇಣಿಕಿ ನೋಡಿ ದರು—ಶ್ರೀರಾಮಕೃಷ್ಣರು ವಿಶ್ರಾಂತಿ ಪಡೆಯುತ್ತಿದ್ದರು. ನಹಬತಿಗೆ ಹೋಗಿ ಕಾಯುತ್ತ ಕುಳಿತರು. ಸ್ವಲ್ಪಹೊತ್ತಿನ ನಂತರ ಶ್ರೀರಾಮಕೃಷ್ಣರು ಕೊಠಡಿಯಿಂದ ಹೊರಬಂದರು. ನಹಬತಿನ ಮಹಡಿಯ ವರಾಂಡದಲ್ಲಿ ಈ ಇಬ್ಬರು ಸ್ತ್ರೀಯರು ಕುಳಿತಿರುವುದನ್ನು ನೋಡಿ "ಬನ್ನಿ ಈ ಕಡೆ" ಎಂದು ಅವರನ್ನು ಕೂಗಿ ಕರೆದರು. ಸ್ತ್ರೀಭಕ್ತರು ಬಂದು ಕುಳಿತುಕೊಂಡರು. ಶ್ರೀರಾಮಕೃಷ್ಣರು ಮಂಚದಿಂದ ಕೆಳಗಿಳಿದು ಬಂದು ಪರಿಚಿತ ಸ್ತ್ರೀಭಕ್ತಳ ಹತ್ತಿರ ಕುಳಿತರು; ಆಕೆಗೆ ಸ್ವಲ್ಪ ನಾಚಿಕೆಯಾಯಿತು, ಸ್ವಲ್ಪ

ದೂರ ಸರಿದು ಕುಳಿತಳು. ಆಗ ಶ್ರೀರಾಮಕೃಷ್ಣರೆಂದರು : ''ಇಂಥ ನಾಚಿಕೆ ಏಕೆ ? ಲಜ್ಜಾ, ಘೃಣಾ, ಭಯ--ಈ ಮೂರು ಇರಬಾರದು. (ಕೈತೋರಿಸಿ) ನೀವು ಯಾರೂ ಅದೇ ನಾನು. (ಗಡ್ಡವನ್ನು ತೋರಿಸಿ) ಇದು ಇರುವುದರಿಂದ ಲಜ್ಜೆ ತಾನೆ ?''

ಹೀಗೆ ಹೇಳಿ ಭಗವದ್ವಿಷಯವನ್ನು ತೆಗೆದುಕೊಂಡು ಅವರಿಬ್ಬರಿಗೆ ಅನೇಕ ಉಪ ದೇಶಗಳನ್ನು ನೀಡಿದರು. ಆ ಸ್ತ್ರೀಭಕ್ತರೂ ಕೂಡ ಸ್ತ್ರೀ-ಪುರುಷ ಭೇದವನ್ನು ಮರೆತು ನಿಃಸಂಕೋಚವಾಗಿ ಪ್ರಶ್ನೆ ಮಾಡುತ್ತ ಅವರ ಮಾತನ್ನು ಕೇಳತೊಡಗಿದರು. ಬಹಳ ಹೊತ್ತಿನ ಸಂಭಾಷಣೆಯ ನಂತರ ಬೀಳ್ಕೊಳ್ಳುವ ವೇಳೆಯಲ್ಲಿ ಶ್ರೀರಾಮಕೃಷ್ಣರು ಹೇಳಿದರು : ''ವಾರಕೊಮ್ಮೆ ಇಲ್ಲಿಗೆ ಬರಬೇಕು. ಪ್ರಾರಂಭದಲ್ಲಿ ಆಗಾಗ ಬರುತ್ತಿರ ಬೇಕು.'' ಅವರು ಸದ್ಗೃಹಸ್ಥ ಕುಟುಂಬದವರಾದರೂ ಬಡವರಾದುದರಿಂದ ಗಾಡಿ ಬಾಡಿಗೆ ಕೊಡುವ ಸ್ಥಿತಿಯಲ್ಲಿರಲಿಲ್ಲ ಆದ್ದರಿಂದ ಶ್ರೀರಾಮಕೃಷ್ಣರು ಹೇಳಿದರು : ''ಇಲ್ಲಿಗೆ ಬರುವಾಗ ನೀವು ಮೂರು ನಾಲ್ಕು ಜನ ಒಟ್ಟಿಗೆ ಕೂಡಿ ದೋಣಿಯಲ್ಲಿ ಬನ್ನಿ. ಮತ್ತೆ ಹಿಂದಿರುಗುವಾಗ ಇಲ್ಲಿಂದ ಬಾರಾನಗರದವರೆಗೆ ನಡೆದುಕೊಂಡು ಹೋಗಿ, ಅಲ್ಲಿ ಎಲ್ಲ ಸೇರಿ ಗಾಡಿಮಾಡಿಕೊಂಡು ಮನೆಗೆ ಹೋಗಬೇಕು.'' ಸ್ತ್ರೀಭಕ್ತರು ಮುಂದೆ ಹಾಗೆಯೇ ಮಾಡುತ್ತಿದ್ದರು ಎಂಬುದನ್ನು ಮತ್ತೆ ಹೇಳಬೇಕಾಗಿಲ್ಲ.

ಇನ್ನೋರ್ವ ಸ್ತ್ರೀಭಕ್ತೆ ನಮಗೆ ಹೇಳಿದಳು : ''ಭೋಲಾನ ಅಂಗಡಿಯಲ್ಲಿ ಒಳ್ಳೆಯ ಸರ್ (ಒಂದು ಬಗೆಯ ಸಿಹಿ ತಿಂಡಿ)ಸಿಗುತ್ತಿತ್ತು. ಶ್ರೀರಾಮಕೃಷ್ಣರಿಗೆ ಸರ್ ಎಂದರೆ ತುಂಬ ಇಷ್ಟ. ಒಂದು ದೊಡ್ಡ ಸರ್‌ಅನ್ನು ಖರೀದಿಸಿ ನಾವು ಐದು ಜನ ಮಹಿಳೆಯರು ದೋಣಿಯಲ್ಲಿ ದಕ್ಷಿಣೇಶ್ವರಕ್ಕೆ ಹೋದೆವು. ಆದರೆ ಶ್ರೀರಾಮಕೃಷ್ಣರು ಕಲಕತ್ತೆಗೆ ಹೋಗಿದ್ದರು. ನಮಗೆಲ್ಲ ನಿರಾಸೆಯುಂಟಾಯಿತು. ರಾಮಲಾಲರನ್ನು ವಿಚಾರಿಸಿದಾಗ ಅವರೆಂದರು 'ಶ್ರೀರಾಮಕೃಷ್ಣರು ಮಾಸ್ಟರ್ ಮಹಾಶಯರ(ಮಹೇಂದ್ರ ನಾಥ ಗುಪ್ತ) ಮನೆಗೆ ಹೋಗಿರುವರು' ಎಂದು. ಇದನ್ನು ಕೇಳಿ ಅ--ನ ತಾಯಿ ಹೇಳಿ ದಳು: 'ನನಗೆ ಆ ಮನೆ ಗೊತ್ತು, ನನ್ನ ತಂದೆಯ ಮನೆಯ ಹತ್ತಿರವೆ. ನಡೀರಿ, ಹೋಗೋಣ. ಇಲ್ಲಿ ಕುಳಿತು ಏನು ಮಾಡುವುದು,' ಎಲ್ಲರೂ ಹೊರಡುವುದೆಂದು ನಿರ್ಧರಿಸಿದೆವು. ಸರ್‌ಅನ್ನು 'ಶ್ರೀರಾಮಕೃಷ್ಣರು ಬಂದಮೇಲೆ ಕೊಡಿ' ಎಂದು ಹೇಳಿ ರಾಮಲಾಲರಿಗೆ ಕೊಟ್ಟೆವು. ದೋಣಿಯನ್ನು ಮೊದಲೇ ಬಿಟ್ಟುಬಿಟ್ಟಿದ್ದೆವು, ಈಗ ನಡೆದುಕೊಂಡೆ ಹೊರಟೆವು. ಶ್ರೀರಾಮಕೃಷ್ಣರ ಇಚ್ಛೆಯಿಂದ ನಾವು ಆಲಂಬಾಜಾರ್ ಹತ್ತಿರ ಹೋಗುವಷ್ಟರಲ್ಲಿ ಒಂದು ಗಾಡಿ ಸಿಕ್ಕಿತು, ಅದನ್ನು ಬಾಡಿಗೆಗೆ ತೆಗೆದುಕೊಂಡು ಅದರಲ್ಲಿ ಶ್ಯಾಮಪುಕುರಕ್ಕೆ ಹೋದೆವು. ಇಲ್ಲಿ ಮತ್ತೆ ನಮಗೆ ನಿರಾಶೆ ಕಾದಿತ್ತು, ಅ--ನ ತಾಯಿಗೆ ಮನೆಯನ್ನು ಪತ್ತೆಹಚ್ಚಲಾಗಲಿಲ್ಲ. ಅಲ್ಲಿ ಇಲ್ಲಿ ಅಲೆದಾಡಿ ಕೊನೆಗೆ ಗಾಡಿ ಯನ್ನು ಅವಳ ತಂದೆಯ ಮನೆಯ ಮುಂದೆ ನಿಲ್ಲಿಸಿದೆವು. ಅಲ್ಲಿಂದ ಒಬ್ಬ ಸೇವಕನನ್ನು ಕರೆದುಕೊಂಡುಹೋದೆವು. ಆತ ಮನೆಯನ್ನು ತೋರಿಸಿದ, ಇದಕ್ಕೆ ಅ--ನ ತಾಯಿಯನ್ನು ಬೈದು ಪ್ರಯೋಜನವಿಲ್ಲ, ಅವಳಾದರೂ ಏನು ಮಾಡಿಯಾಳು, ಅವಳದಿನ್ನೂ ಚಿಕ್ಕ

ವಯಸ್ಸು—ಇಪ್ಪತ್ತಾರು, ಇಪ್ಪತ್ತೇಳು ಇರಬಹುದು, ಚಿಕ್ಕ ಸೊಸೆ—ಎಂದೂ ರಸ್ತೆಗಿಳಿದವಳಲ್ಲ. ಮತ್ತೆ ಮಾಸ್ಟರ್ ಮಹಾಶಯರ ಮನೆಯಾದರೊ ಒಂದು ಗಲ್ಲಿಯಲ್ಲಿತ್ತು, ಅವಳು ಹೇಗೆ ಗುರುತಿಸಿಯಾಳು, ಪಾಪ.

"ಹೇಗೊ ಕಷ್ಟಪಟ್ಟು ಮನೆ ತಲುಪಿದೆವು. ಆಗ ನಮಗೆ ಮಾಸ್ಟರರ ಪರಿಚಯ ಅಷ್ಟೊಂದು ಇರಲಿಲ್ಲ. ಮನೆಯ ಒಳಹೊಕ್ಕು ನೋಡಿದೆವು—ಶ್ರೀರಾಮಕೃಷ್ಣರು ಒಂದು ಸಣ್ಣ ಕೋಣೆಯಲ್ಲಿ ಮಂಚದಮೇಲೆ ಕುಳಿತಿದ್ದರು, ಅವರೊಡನೆ ಯಾರೂ ಇರಲಿಲ್ಲ. ನಮ್ಮನ್ನು ನೋಡಿದಕೂಡಲೇ ನಕ್ಕು ನುಡಿದರು, 'ನೀವು ಹೇಗೆ ಇಲ್ಲಿಗೆ ಬಂದಿರಿ ?' ಎಂದು. ನಾವು ಅವರಿಗೆ ನಮಸ್ಕರಿಸಿ ನಡೆದ ಕತೆಯನ್ನು ವಿವರಿಸಿದೆವು. ಅವರು ಸಂತೋಷಗೊಂಡು, ನಮ್ಮೊಡನೆ ಬಹಳ ಹೊತ್ತು ಮಾತನಾಡಿದರು. ಈಗ ಎಲ್ಲ ಹೇಳುತ್ತಾರೆ-ಶ್ರೀರಾಮಕೃಷ್ಣರು ಸ್ತ್ರೀಯರನ್ನು ಮುಟ್ಟುವುದಕ್ಕೆ ಬಿಡುತ್ತಿರಲಿಲ್ಲ, ಹತ್ತಿರ ಹೋಗಲು ಬಿಡುತ್ತಿರಲಿಲ್ಲ—ಎಂದು. ನಮಗೆ ಅದನ್ನು ಕೇಳಿ ನಗು ಬರುತ್ತದೆ—ನಾವಿನ್ನೂ ಬದುಕಿಯೇ ಇದ್ದೇವೆ. ಅವರ ದಯೆ ಎಂತಹುದು—ಅದನ್ನು ಯಾರು ಹೇಳಬಲ್ಲರು ? ಸ್ತ್ರೀ-ಪುರುಷರನ್ನು ಸಮಾನಭಾವದಿಂದ ನೋಡುತ್ತಿದ್ದರು. ಆದರೆ ಸ್ತ್ರೀಯರು ಬಹಳಹೊತ್ತು ತಮ್ಮೊಡನೆ ಇರಲು ಬಿಡುತ್ತಿರಲಿಲ್ಲ. ಬಹಳ ಹೊತ್ತು ಇದ್ದರೆ ಹೇಳುತ್ತಿದ್ದರು, 'ಹೋಗಿ, ಒಮ್ಮೆ ಮಂದಿರವನ್ನು ನೋಡಿಕೊಂಡು ಬನ್ನಿ' ಎಂದು. ಗಂಡಸರಿಗೂ ಅವರು ಈ ರೀತಿ ಹೇಳಿರುವುದನ್ನು ನಾವು ಕೇಳಿದ್ದೇವೆ.

"ಅದಿರಲಿ. ನಾವು ಕುಳಿತು ಮಾತನಾಡುತ್ತಿದ್ದೆವು. ನಮ್ಮಲ್ಲಿ ಹಿರಿಯ ವಯಸ್ಸಿನವರು ಇಬ್ಬರು ಬಾಗಿಲ ಪಕ್ಕದಲ್ಲೇ ಕುಳಿತಿದ್ದರು, ಹಾಗೂ ನಾವು ಮೂರು ಜನ ಕೋಣೆಯ ಒಂದು ಮೂಲೆಯಲ್ಲಿ ಕುಳಿತಿದ್ದೇವು. ಆ ಸಮಯದಲ್ಲಿ ಪ್ರಾಣಕೃಷ್ಣ ಮುಖ್ಯೋಪಾಧ್ಯಾಯನು (ಶ್ರೀರಾಮಕೃಷ್ಣರು ಅವನನ್ನು 'ದಪ್ಪ ಬ್ರಾಹ್ಮಣ' ಎಂದು ಕರೆಯುತ್ತಿದ್ದರು) ಬಂದುಬಿಟ್ಟನು. ಹೊರಗಡೆ ಹೋಗೋಣವೆಂದರೆ ಎಲ್ಲಿಗೆ ಹೋಗುವುದು ? ಬಾಗಿಲ ಪಕ್ಕದಲ್ಲಿ ಒಂದು ಕಿಟಿಕಿ ಇತ್ತು. ಹಿರಿಯರಿಬ್ಬರು ಅದರ ಮೇಲೆ ಕುಳಿತರು. ನಾವು ಮೂವರು ಶ್ರೀರಾಮಕೃಷ್ಣರು ಕುಳಿತಿದ್ದ ಮಂಚದ ಕೆಳಗೆ ಅವಿತುಕೊಂಡೆವು. ಸೊಳ್ಳೆಯ ಕಡಿತದಿಂದ ನಮ್ಮ ದೇಹವೆಲ್ಲ ಊದಿಕೊಂಡಿತು. ಏನು ಮಾಡುವುದು ? ಅಲ್ಲಾಡುವಂತಿಲ್ಲ. ಆ ಬ್ರಾಹ್ಮಣ ಸುಮಾರು ಒಂದು ಗಂಟೆ ಮಾತನಾಡಿ ಹೊರಟುಹೋದ. ಅನಂತರ ನಾವು ನಗುತ್ತ ಹೊರಬಂದೆವು.

"ಅನಂತರ ಶ್ರೀರಾಮಕೃಷ್ಣರನ್ನು ತಿಂಡಿತಿನ್ನಲು ಒಳಗೆ ಕರೆದುಕೊಂಡು ಹೋದರು. ಅವರೊಡನೆ ನಾವೂ ಹೋದೆವು. ಅದಾದನಂತರ ಶ್ರೀರಾಮಕೃಷ್ಣರು ಗಾಡಿ ಮಾಡಿಕೊಂಡು ದಕ್ಷಿಣೇಶ್ವರಕ್ಕೆ ಹೊರಟರು. ನಾವೂ ಮನೆಗೆ ನಡೆದುಕೊಂಡು ಹೋದೆವು. ಆಗ ಸಮಯ ರಾತ್ರಿ ಒಂಬತ್ತು ಗಂಟೆ.

"ಮರುದಿನ ನಾವು ಮತ್ತೆ ದಕ್ಷಿಣೇಶ್ವರಕ್ಕೆ ಹೋದೆವು. ಹೋದಕೂಡಲೆ ಶ್ರೀರಾಮಕೃಷ್ಣರು ಹತ್ತಿರಬಂದು ಹೇಳಿದರು, "ನೋಡಿ, ನೀವು ತಂದಿದ್ದ ಸರ್‌ಅನ್ನು ಎಲ್ಲ ತಿಂದು

ಹಾಕಿಬಿಟ್ಟೆ, ಎಲ್ಲೋ ಸ್ವಲ್ಪ ಉಳಿದಿದೆ. ಏನೂ ಕಾಯಿಲೆಯಾಗಲಿಲ್ಲ, ಸ್ವಲ್ಪ ಹೊಟ್ಟೆ ಭಾರ ಅಷ್ಟೇ. ನನಗೆ ಕೇಳಿ ಆಶ್ಚರ್ಯವಾಯಿತು. ಅವರ ಹೊಟ್ಟೆಗೆ ಯಾವುದೂ ಸರಿ ಹೋಗುವುದಿಲ್ಲ. ಹಾಗಿರುವಾಗ ಇಡೀ ಒಂದು ಸೇರ್‌ಅನ್ನು ತಿಂದುಬಿಟ್ಟರಲ್ಲ! ಅನಂತರ ತಿಳಿದುಬಂತು ಭಾವಾವಸ್ಥೆಯಲ್ಲಿ ಅವರು ಹಾಗೆ ತಿಂದರೆಂದು. ಮಾಸ್ಟರ್ ಮಹಾಶಯರ್ ಮನೆಯಲ್ಲಿ ರಾತ್ರಿ ಊಟ–ತಿಂಡಿ ಮುಗಿಸಿ ದಕ್ಷಿಣೇಶ್ವರಕ್ಕೆ 10-30ಕ್ಕೆ ಬಂದರಂತೆ. ಬಂದವರೇ ಭಾವಾವಸ್ಥೆಯಲ್ಲಿ ರಾಮಲಾಲರನ್ನು ಕೇಳಿದರು : ತುಂಬ ಹಸಿವಾಗುತ್ತಿದೆ. ಏನಾದರೂ ತಿನ್ನಲು ಇದ್ದರೆ ಕೊಡು. ರಾಮಲಾಲರು ನಾವು ಕೊಟ್ಟಿದ್ದ ಸೇರ್‌ಅನ್ನು ಅವರ ಮುಂದೆ ತಂದಿಟ್ಟರು. ಶ್ರೀರಾಮಕೃಷ್ಣರು ಸ್ವಲ್ಪ ಮಾತ್ರ ಉಳಿಸಿ ಎಲ್ಲವನ್ನೂ ತಿಂದುಬಿಟ್ಟರು. ಭಾವಾವಸ್ಥೆಯಲ್ಲಿ ಅವರು ಆ ರೀತಿ ಅಸಾಮಾನ್ಯರೀತಿಯಲ್ಲಿ ತಿನ್ನುವುದನ್ನು ನಾವು ಕೇಳಿದ್ದೆವು. ನಮ್ಮ ಮೇಲೆ ಅವರ ಕೃಪೆ ಎಂತಹುದು! ಅವರ ದಯೆಯ ವಿಷಯವನ್ನು ಹೇಳಿ ತಿಳಿಸಿಕೊಡಲಾಗುವುದಿಲ್ಲ. ಎಂಥ ಆಕರ್ಷಣೆ! ಹೇಗೆ ನಾವು ಅವರೆಡೆಗೆ ಹೋಗುತ್ತಿದ್ದೆವು, ಏನೆಲ್ಲ ಮಾಡುತ್ತಿದ್ದೆವು ಇದಾವುದೂ ನಮಗೆ ಈಗ ಅರ್ಥವಾಗುತ್ತಿಲ್ಲ, ಈಗ ಹಾಗೆ ಯಾರದೊ ಅಪರಿಚಿತರ ಮನೆಗೆ ಯಾರಿಗೂ ಹೇಳದೆ ನಡೆದುಕೊಂಡು ಹೋಗುವುದನ್ನು ಕಲ್ಪಿಸಿಕೊಳ್ಳಲಾಗುವುದಿಲ್ಲ. ಅವರಿಂದಾಗಿ ಅಂದು ಸಾಧ್ಯವಾಯಿತು. ಅವರು ಹೊರಟುಹೋದಮೇಲೂ ನಾವು ಬದುಕಿದ್ದೇವಲ್ಲ–ಇದೇ ನಮಗೆ ಅರ್ಥವಾಗುತ್ತಿಲ್ಲ.''

ಹೀಗೆ ಎಷ್ಟೊ ಉದಾಹರಣೆಗಳನ್ನು ನೀಡಬಹುದು. ಮನೆಯ ಹೊರಗೇ ಕಾಲಿಡದವರಿಂದ ಶ್ರೀರಾಮಕೃಷ್ಣರು ಪೇಟೆಗೆ ಕಳಿಸಿ ಸಾಮಾನು ತರಿಸಿರುವರು; ಅಭಿಮಾನ ಅಹಂಕಾರ ದೂರವಾಗಲೆಂದು ಮನೆ-ಮನೆಗೆ ಹೋಗಿ ಭಿಕ್ಷೆ ಬೇಡುವಂತೆ ಮಾಡಿರುವರು; ತಮ್ಮೊಡನೆ ಪಾಣಿಹಾಟಿ ಉತ್ಸವಾದಿಗಳಿಗೆ ಕರೆದುಕೊಂಡು ಹೋಗಿರುವರು. ಅವರೂ ಕೂಡ ನಿಃಸಂಕೋಚದಿಂದ ಮತ್ತು ಆನಂದದಿಂದ ಇದನ್ನೆಲ್ಲ ಮಾಡಿರುವರು. ಇದರ ಬಗ್ಗೆ ಆಳವಾಗಿ ಚಿಂತಿಸಿದಾಗ ಇದು ಸಾಮಾನ್ಯ ವಿಷಯವೆಂದು ಅನಿಸುವುದಿಲ್ಲ. ಪ್ರಬಲವಾದ ಜ್ಞಾನತರಂಗದ ಮುಂದೆ ಲಿಂಗಜಾತಿಭೇದಗಳೆಲ್ಲ ಆ ಸಮಯದ ಮಟ್ಟಿಗೆ ಅಳಿಸಿಹೋಗಿದ್ದವು. ವಿವಿಧ ದಿವ್ಯಭಾವಗಳ ಮೂರ್ತರೂಪವಾಗಿದ್ದ ಶ್ರೀರಾಮಕೃಷ್ಣರಲ್ಲಿ ಎಲ್ಲರೂ ತಮ್ಮ ತಮ್ಮ ಭಾವದ ಪೂರ್ಣಾದರ್ಶವನ್ನು ಕಂಡುಕೊಂಡು ತಮ್ಮನ್ನು ತಾವು ಕೃತಾರ್ಥರೆಂದು ಭಾವಿಸಿದರು. ಪುರುಷರು ಅವರಲ್ಲಿ ಪೂರ್ಣ ಪುರುಷತ್ವವನ್ನು ಕಂಡು ತಲೆಬಾಗಿದರು. ಸ್ತ್ರೀಯರು ಅವರಲ್ಲಿ ಸ್ತ್ರೀಸಹಜ ಭಾವಗಳನ್ನು ಕಂಡು ತಮ್ಮವರೆಂದೆ ಭಾವಿಸಿ ಅವರೊಡನೆ ನಿಃಸಂಕೋಚದಿಂದ ವ್ಯವಹರಿಸಿದರು.

28. ಸ್ತ್ರೀಸಹಜವಾದ ಹಾವಭಾವಗಳನ್ನು ಶ್ರೀರಾಮಕೃಷ್ಣರು ಕೆಲವೊಮ್ಮೆ ನಮ್ಮ ಮುಂದೆ ಅಭಿನಯಿಸಿ ತೋರಿಸುತ್ತಿದ್ದರು. ಅದು ಎಷ್ಟು ವಾಸ್ತವವಾಗಿರುತ್ತಿತ್ತೆಂದರೆ ನಮಗೆ ನೋಡಿ ಆಶ್ಚರ್ಯವಾಗುತ್ತಿತ್ತು. ಓರ್ವ ಸ್ತ್ರೀಭಕ್ತೆ ಇದರ ಸಂಬಂಧವಾಗಿ ನಮಗೆ ಹೀಗೆ ಹೇಳಿರುವಳು : ''ಒಂದುದಿನ ಸ್ತ್ರೀಯರ ಮುಂದೆ ಶ್ರೀರಾಮಕೃಷ್ಣರು ಸ್ತ್ರೀಯರು

ಪುರುಷರನ್ನು ಕಂಡಾಗ ಯಾವರೀತಿ ಹಾವಭಾವಗಳನ್ನು ಮಾಡುತ್ತಾರೆ ಎಂಬುದನ್ನು ತೋರಿಸತೊಡಗಿದರು. ಮುಸುಕನ್ನು ಎಳೆಯುವುದು. ಕಿವಿಯ ಹತ್ತಿರ ಕೂದಲನ್ನು ಸರಿ ಸುವುದು. ಎದೆಯ ಮೇಲೆ ಸೆರಗನ್ನು ಎಳೆಯುವುದು—ಎಲ್ಲ ಯಥಾವತ್ತಾಗಿ ಅಭಿನಯಿಸಿ ತೋರಿಸಿದರು. ನಮಗೆ ನೋಡಿ ನಗು ಬಂತು. ಆದರೆ ಮನಸ್ಸಿನೊಳಗೆ ನಾಚಿಕೆ ಯುಂಟಾಯಿತು. ಶ್ರೀರಾಮಕೃಷ್ಣರು ಸ್ತ್ರೀಯರನ್ನು ನಿಂದಿಸುತ್ತಿರುವರೆಂದು ಮನಸ್ಸಿಗೆ ವೇದನೆಯೂ ಆಯಿತು. ಸ್ತ್ರೀಯರೆಲ್ಲ ಹೀಗೆಯೇ ಏನು ? ಎಷ್ಟಾದರು ನಾವು ಸ್ತ್ರೀ ಯರು, ಯಾರಾದರೂ ಸ್ತ್ರೀಯರನ್ನು ಟೀಕಿಸಿದರೆ ನೋವಾಗುವುದು ಸಹಜ. ಕೂಡಲೆ ಶ್ರೀರಾಮಕೃಷ್ಣರಿಗೆ ನಮ್ಮ ಮನಸ್ಸಿನ ಆಲೋಚನೆ ತಿಳಿದುಹೋಯಿತು. ಅವರಂದರು : "ನಿಮ್ಮ ಬಗ್ಗೆ ನಾನು ಹೇಳುತ್ತಿಲ್ಲ. ನೀವು ಅವಿಧ್ಯಾಶಕ್ತಿಯವರಲ್ಲ. ಅವಿದ್ಯಾಶಕ್ತಿ ಯವರೇ ಆ ರೀತಿ ಮಾಡುವುದು."

29. ಶ್ರೀರಾಮಕೃಷ್ಣರಲ್ಲಿ ಈ ರೀತಿ ಸ್ತ್ರೀ—ಪುರುಷ ಭಾವಗಳೆರಡೂ ಸಮಾವೇಶ ಗೊಂಡಿರುವುದನ್ನು ಅವರ ಭಕ್ತರೆಲ್ಲರೂ ಸ್ವಲ್ಪಮಟ್ಟಿಗಾದರೂ ಅನುಭವಿಸಿರುವರು. ಗಿರೀಶಚಂದ್ರನಿಗೆ ಈ ಅನುಭವವಾಗಿತ್ತು. ಅವನು ಒಂದುದಿನ ಅವರನ್ನು ಈ ರೀತಿ ಕೇಳಿಯೇಬಿಟ್ಟ, "ಸ್ವಾಮಿ, ನೀವು ಪುರುಷರೇ, ಪ್ರಕೃತಿಯೆ ?" ಎಂದು. ಶ್ರೀರಾಮ ಕೃಷ್ಣರು ನಕ್ಕು, "ನನಗೆ ತಿಳಿಯದು" ಎಂದರು. ಶ್ರೀರಾಮಕೃಷ್ಣರು ಈ ಮಾತನ್ನು ಯಾವ ಅರ್ಥದಲ್ಲಿ ಹೇಳಿರಬಹುದು ? ಆತ್ಮಜ್ಞರಂತೆ ನಾನು ಪುರುಷನೂ ಅಲ್ಲ, ಸ್ತ್ರೀಯೂ ಅಲ್ಲ—ಎಂಬ ಅರ್ಥದಲ್ಲಿ ಹೇಳಿರುವರೆ ? ಅಥವಾ ತಮ್ಮಲ್ಲಿ ಆ ಎರಡು ಭಾವಗಳು ಸಮಾನವಾಗಿ ಇರುವುದರಿಂದ ಹಾಗೆ ಹೇಳಿರುವರೆ ? ಇದನ್ನು ಈಗ ನಿರ್ಧರಿಸುವವರಾರು ?

30. ಹೀಗೆ ಭಾವಮಯರಾದ ಶ್ರೀರಾಮಕೃಷ್ಣರು ಭಾವಮುಖ ಸ್ಥಿತಿಯಲ್ಲಿ ಇದ್ದು ಸ್ತ್ರೀಯರಿಗೆ ಸ್ತ್ರೀಯಾಗಿಯೂ, ಪುರುಷರಿಗೆ ಪುರುಷರಾಗಿಯೂ ಇರುತ್ತಿದ್ದರು. ಅವರವರ ಭಾವಕ್ಕೆ ಅನುಗುಣವಾಗಿ ವರ್ತಿಸುತ್ತಿದ್ದರು. ನಮ್ಮಲ್ಲಿ ಕೆಲವರಿಗೆ ಅವರು ತಾವೇ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಒಂದುದಿನ ಓರ್ವ ಸ್ತ್ರೀಭಕ್ತೆ ಯೊಬ್ಬಳಿಗೆ (ಸ್ವಾಮಿ ಪ್ರೇಮಾನಂದರ ತಾಯಿ) ಅವರು ಹೇಳಿದರು : "ಜನರ ಮುಖ ನೋಡಿಯೇ ಯಾರು ಎಂಥವರು ಎಂದು ನನಗೆ ಗೊತ್ತಾಗಿಬಿಡುತ್ತದೆ. ಯಾರು ಒಳ್ಳೆಯವರು ಯಾರು ಕೆಟ್ಟವರು, ಯಾರದು ಒಳ್ಳೆಯ ಜನ್ಮ ಯಾರದು ಕೆಟ್ಟ ಜನ್ಮ; ಯಾರು ಜ್ಞಾನಿ, ಯಾರು ಭಕ್ತ, ಯಾರಿಗೆ ಸಿದ್ಧಿಯಾಗುವುದು ಯಾರಿಗೆ ಆಗುವುದಿಲ್ಲ— ಎಲ್ಲ ನನಗೆ ತಿಳಿಯುವುದು. ಆದರೆ ಹೇಳುವುದಿಲ್ಲ—ಅವರ ಮನಸ್ಸಿಗೆ ಕಷ್ಟವಾಗ ಬಾರದು ಎಂದು." ಅವರು ಭಾವಮುಖದಲ್ಲಿದ್ದುದರಿಂದ ಅವರಿಗೆ ಸಮಸ್ತ ಜಗತ್ತು ಭಾವಮಯವಾಗಿ ಕಾಣುತ್ತಿತ್ತು. ಜಗತ್ತಿನ ಎಲ್ಲ ವಸ್ತುಗಳು, ವ್ಯಕ್ತಿಗಳು ವಿಶ್ವಮನಸ್ಸಿ ನಲ್ಲಿ ಎದ್ದು ಲಯವಾಗುವ ಭಾವನೆಗಳ ಸಂಘಾತದಂತೆ ಅವರಿಗೆ ಕಾಣುತ್ತಿದ್ದವು. ಈ ಭಾವನೆಗಳ ಆವರಣವನ್ನು ಹಾಕಿಕೊಂಡು ಅನಂತ ಸಚ್ಚಿದಾನಂದ ಬ್ರಹ್ಮನು ಬೇರೆ

ಬೇರೆ ರೀತಿಯಲ್ಲಿ ಅಭಿವ್ಯಕ್ತವಾಗುತ್ತಿರುವನು. ಮತ್ತೆ ಕೆಲವೊಮ್ಮೆ ಶ್ರೀರಾಮಕೃಷ್ಣರು ಜಗನ್ಮಾತೆಯಲ್ಲಿ ಒಂದಾಗಿ ಸಮಾಧಿಯ ಆನಂದವನ್ನು ಸವಿಯುತ್ತಿದ್ದರು. ಆದರೆ ಆ ಸ್ಥಿತಿಯನ್ನು ಮುಟ್ಟಿದಾಗ ಜಗನ್ಮಾತೆಯ ಇಚ್ಛೆಯೇ ಬೇರೆ ಎಂದು ತಿಳಿಯುತ್ತಿತ್ತು; ಆಕೆಯ ಆದೇಶಕ್ಕೆ ಮಣಿದು ತಮ್ಮ ಮನಸ್ಸನ್ನು ವಿದ್ಯಾಮಾಯೆಯಿಂದ ಆವರಿಸು ತ್ತಿದ್ದರು. ಇದರ ಮೂಲಕ ತಾಯಿಯ ಕಾರ್ಯದಲ್ಲಿ ನಿರತರಾಗುತ್ತಿದ್ದರು. ಜಗನ್ಮಾತೆಯು ಇದರಿಂದ ಸಂತುಷ್ಟಳಾಗಿ, ಅವರನ್ನು ದೇಹದೊಳಗೆ ಇಟ್ಟಿದ್ದರೂ, ಅವರ ಮನಸ್ಸನ್ನು ಎಂಥ ಒಂದು ಉನ್ನತ ಸ್ಥಿತಿಯಲ್ಲಿರಿಸಿದ್ದಳೆಂದರೆ ಅನಂತ ವಿಶ್ವ-ಮನಸ್ಸಿನಲ್ಲಿ ಏಳುವ ಭಾವನೆಗಳೆಲ್ಲ ಅವರವೇ ಆಗುತ್ತಿದ್ದವು ಮತ್ತು ಅವುಗಳ ಮೇಲೆ ಅವರಿಗೆ ಪೂರ್ಣ ಹತೋಟಿಯಿತ್ತು. ಈ ರೀತಿಯ ಏಕತೆಯಿಂದಾಗಿ ಅವರನ್ನು ನೋಡಿ ದವರಿಗೆಲ್ಲ ಜಗನ್ಮಾತೆಯೆ ಅವರು, ಅವರೇ ಜಗನ್ಮಾತೆ ಅನಿಸುತ್ತಿತ್ತು. 'ಚಿನ್ಮಯ ಧಾಮ, ಚಿನ್ಮಯ ನಾಮ, ಚಿನ್ಮಯ ಶ್ಯಾಮ !'

ಎರಡನೆಯ ಅಧ್ಯಾಯ

ಭಾವ, ಸಮಾಧಿ ಮತ್ತು ದರ್ಶನ

1. ಸಮಾಧಿಯು ಬುದ್ಧಿವಿಕಾರವಲ್ಲ 2. ಸಮಾಧಿಯ ಮೂಲಕವೇ ಆಧ್ಯಾತ್ಮಿಕತೆ ಮತ್ತು ಶಾಂತಿ 3. ದೇವತಾಮೂರ್ತಿಗಳ ದರ್ಶನವಾಗದೆ ಆಧ್ಯಾತ್ಮಿಕ ಪ್ರಗತಿ ಸಾಧ್ಯವಿಲ್ಲವೆನ್ನುವಂತಿಲ್ಲ 4. ತ್ಯಾಗ, ವಿಶ್ವಾಸ ಮತ್ತು ಚಾರಿತ್ರ್ಯ—ಇವೇ ಆಧ್ಯಾತ್ಮಿಕ ಪ್ರಗತಿಯ ಚಿಹ್ನೆಗಳು 5. 'ಪಕ್ವಅಹಂ' ಮತ್ತು ಶುದ್ಧ ಆಶೆ—ಜೀವನ್ಮುಕ್ತ, ಅಧಿಕಾರಿಕ ಪುರುಷರು, ಈಶ್ವರಕೋಟಿಗಳು ಮತ್ತು ಜೀವಕೋಟಿಗಳು 6. ಅದ್ವೈತಾನುಭವದ ವಿವಿಧ ಹಂತಗಳು 7. ಶಾಂತದಾಸ್ಯಾದಿ ಭಾವಗಳಿಂದ ಸವಿಕಲ್ಪಸಮಾಧಿ 8. ಮಾನಸಿಕ ಮತ್ತು ಆಧ್ಯಾತ್ಮಿಕ ಭಾವಗಳಿಂದ ಶರೀರ ವಿಕಾರಗಳು ಅನಿವಾರ್ಯ 9. ಭಾವಸಮಾಧಿಗಳ ತಾರತಮ್ಯವನ್ನು ನಿರ್ಧರಿಸುವುದು ಹೇಗೆ 10. ಎಲ್ಲ ಪ್ರಕಾರದ ಭಾವಗಳನ್ನು ಸಂಪೂರ್ಣ ಅನುಭವಿಸುವುದು ಅವತಾರ ಪುರುಷರಿಗೆ ಮಾತ್ರ ಸಾಧ್ಯ 11. ಬ್ರಾಹ್ಮಣಿಯು ವೇದಾಂತ ಚರ್ಚೆಯನ್ನು ನಿಷೇಧಿಸಿದುದು 12. ನಿರ್ವಿಕಲ್ಪ ಸ್ಥಿತಿಯಲ್ಲಿ ಯಾವಾಗಲೂ ಇರಬೇಕೆಂಬ ಶ್ರೀರಾಮಕೃಷ್ಣರ ಸಂಕಲ್ಪ ಮತ್ತು ಆ ಸ್ಥಿತಿಯ ಸ್ವರೂಪ 13. ಶ್ರೀರಾಮಕೃಷ್ಣರ ಮನಸ್ಸಿನ ವಿಶಿಷ್ಟ ರಚನೆ 14. ಅವರ ಸತ್ಯನಿಷ್ಠೆ 15. ಅದಕ್ಕೆ ಉದಾಹರಣೆಗಳು 16. ಜಗನ್ಮಾತೆ ತಪ್ಪು ಹೆಜ್ಜೆ ಇಡಲು ಅವರಿಗೆ ಬಿಡಲಿಲ್ಲ 17. ಅವರು ನಿರ್ವಿಕಲ್ಪ ಸ್ಥಿತಿಯನ್ನು ಏರಲು ಇದ್ದ ತಡೆ 18. ಅವರು ಅದ್ವೈತ ಭಾವದಲ್ಲಿ ಆರು ತಿಂಗಳಿದ್ದರು 19. ಶ್ರೀರಾಮಕೃಷ್ಣರ ಸಮಾಧಿಯನ್ನು ಕುರಿತು ಕ್ಯಾಪ್ಟನ್ 20. ಇದರ ಬಗ್ಗೆ ಶ್ರೀರಾಮಕೃಷ್ಣರ ಸ್ವಂತ ಹೇಳಿಕೆ 21. ಮನೋಭಾವದಿಂದುಂಟಾಗುವ ಶಾರೀರಿಕ ಪರಿವರ್ತನೆಯ ಬಗ್ಗೆ ಪ್ರಾಚ್ಯ ಪಾಶ್ಚಾತ್ಯರ ಅಭಿಪ್ರಾಯ 22. ಪೂರ್ವ ಸಂಸ್ಕಾರಗಳ ಆಶಯವೇ ಮೂಲಾಧಾರ 23. ದೇಹ ಮನಸ್ಸುಗಳ ಸಂಬಂಧ 24. ಭಾವನೆಗಳು ಸಂಕ್ರಾಮಿಕವಾಗಿರುವುದರಿಂದ ಸತ್ಸಂಗ ಮಾಡಬೇಕು 25. ಭಾವ ತೀವ್ರತೆಯಿಂದ ದೈಹಿಕ ಬದಲಾವಣೆ 26. ಕುಂಡಲಿನೀ ಯಾವುದು ? ಅದರ ಸುಪ್ತ ಮತ್ತು ಜಾಗ್ರತ ಅವಸ್ಥೆ 27. ಕುಂಡಲಿನಿಯ ಗತಿ—ಷಟ್ಚಕ್ರಭೇದ ಮತ್ತು ಸಮಾಧಿ 28. ಇದಕ್ಕೆ ಸಂಬಂಧಿಸಿದ ಶ್ರೀರಾಮಕೃಷ್ಣರ ಅನುಭವ 29. ನಿರ್ವಿಕಲ್ಪ ಸಮಾಧಿಯ ಅನುಭವವನ್ನು ಹೇಳುವ ಅವರ ಪ್ರಯತ್ನ 30. ಕುಂಡಲಿನಿಯ ಐದು ಬಗೆಯ ಗತಿ 31. ವೇದಾಂತದ ಸಪ್ತಭೂಮಿ ಮತ್ತು ಅವುಗಳ ಅನುಭವಗಳ ಬಗ್ಗೆ ಶ್ರೀರಾಮಕೃಷ್ಣರು 32. ಶ್ರೀರಾಮಕೃಷ್ಣರ ಸ್ಮೃತಿ ಶಕ್ತಿ 33. ಅವರು ಅದ್ವೈತಭಾವವನ್ನು ಸರಳಭಾಷೆಯಲ್ಲಿ ವಿವರಿಸಿದರು

34. ಅದರ ದೃಷ್ಟಾಂತ—ಸ್ವಾಮಿ ತುರೀಯಾನಂದ 35. ಬ್ರಹ್ಮ ಸತ್ಯ ಜಗನ್ಮಿಥ್ಯಾ 36. ಭಗವಂತನ ಕೃಪೆಯಿಲ್ಲದೆ ಭಗವಂತನನ್ನು ಪಡೆಯಲಾಗುವುದಿಲ್ಲ 37. ಯೋಗ ಶಕ್ತಿಯ ಮೂಲಕ ರೋಗ ಗುಣಪಡಿಸಿಕೊಳ್ಳಲು ಶಶಧರ ಪಂಡಿತನ ಸಲಹೆ 38. ವಿವೇಕಾನಂದರೇ ಮುಂತಾದವರು ಈ ವಿಷಯದಲ್ಲಿ ಶ್ರೀರಾಮಕೃಷ್ಣರನ್ನು ಒತ್ತಾಯಿಸಿದುದು 39. ಶ್ರೀರಾಮಕೃಷ್ಣರ ಅದ್ವೈತ ಭಾವದ ಆಳ 40. ಶ್ರೀರಾಮಕೃಷ್ಣರು ಎಲ್ಲ ರೀತಿಯ ಪರೀಕ್ಷೆಯಲ್ಲಿ ಉತ್ತೀರ್ಣರಾದುದು 41. ಅವರು ಸಮಾಧಿಯಲ್ಲಿ ಕಂಡ ವಿಷಯಗಳು ಹೊರ ಜಗತ್ತಿನಲ್ಲಿ ಸತ್ಯವಾದುದು 42. ಅವರು ಬೇರೆ ಬೇರೆ ಭಕ್ತರೊಡನೆ ಬೇರೆ ಬೇರೆ ಸಂಬಂಧವನ್ನಿಟ್ಟುಕೊಂಡಿದ್ದರು 43. ಎರಡು ಶ್ರೇಣಿಯ ಭಕ್ತರು 44. ಭಕ್ತರ ಆಂತರಿಕ ಸ್ವಭಾವಕ್ಕನುಗುಣವಾಗಿ ಅವರೊಡನೆ ಸಂಬಂಧ 45. ಯಾವ ಯಾವ ರೀತಿಯಲ್ಲಿ ಭಕ್ತರು ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯುವಂತೆ ಮಾಡಿದರು ? 46. ಭಕ್ತರಿಗೆ ದೇವದೇವಿಯರ ಮೂರ್ತಿದರ್ಶನ 47. ಭಕ್ತನೊಬ್ಬನಿಗೆ ವೈಕುಂಠ ದರ್ಶನ 48. ಸಾಕಾರವಾದಿಗಳಿಗೆ ಶ್ರೀರಾಮಕೃಷ್ಣರ ಉಪದೇಶ 49. ಧ್ಯಾನ ಮಾಡುವುದಕ್ಕೆ ಮುಂಚೆ ಮನಸ್ಸನ್ನು ತೊಳೆಯಬೇಕು 50. ಸಾಕಾರ ಶ್ರೇಷ್ಠವೇ, ನಿರಾಕಾರ ಶ್ರೇಷ್ಠವೇ ? 51. ಸಾಕಾರ ನಿರಾಕಾರಗಳ ಸಮನ್ವಯ 52. ಸ್ವಾಮಿ ವಿವೇಕಾನಂದರು ಮತ್ತು ಅಂಧವಿಶ್ವಾಸ 53. ನಿರಾಕಾರೋಪಾಸಕರಿಗೆ ಉಪದೇಶ 54. ಶ್ರೀರಾಮಕೃಷ್ಣರು ತಮ್ಮ ಮೂರ್ತಿಯನ್ನು ಧ್ಯಾನಿಸಲು ಉಪದೇಶಿಸಿದುದು 55. ಅಪಕ್ವ ಮತ್ತು ಪಕ್ವ ಅಹಂಕಾರ, ಸಂಬಂಧ ಘನಿಷ್ಠವಾದಾಗ ಒತ್ತಾಯಿಸಬಹುದು : ಭ್ರಷ್ಟನಾರಿಯ ದೃಷ್ಟಾಂತ 56. ಈ ಜನ್ಮದಲ್ಲಿಯೇ ಭಗವಂತನನ್ನು ಪಡೆಯುತ್ತೇನೆಂಬ ತೀವ್ರತೆಬೇಕು, ಒಂದೊಂದೇ ಆಸೆಯನ್ನು ಬಿಡುತ್ತಾ ಹೋಗಬೇಕು 57. ಗಾಳದಿಂದ ಮೀನು ಹಿಡಿಯುವಂತೆ ಪಟ್ಟುಹಿಡಿದು ಪ್ರಯತ್ನಿಸಬೇಕು 58. ಭಗವಂತನ ಕಿವಿ ಸೂಕ್ಷ್ಮ—ಎಲ್ಲವನ್ನೂ ಕೇಳುತ್ತಾನೆ 59. ಶ್ರೀರಾಮಕೃಷ್ಣರು ಅಷ್ಟೊಂದು ಭಾವಪ್ರವಣರಾದರೂ ಎಲ್ಲದರ ಕಡೆಗೂ ಅವರ ಗಮನವಿತ್ತು 60. ಇದಕ್ಕೆ ಉದಾಹರಣೆಗಳು 61. ಶ್ರೀರಾಮಕೃಷ್ಣರು ಭಾವರಾಜ್ಯದ ಚಕ್ರವರ್ತಿ, ಅವರ ಅದ್ಭುತ ಶಕ್ತಿ.

1. ಶ್ರೀರಾಮಕೃಷ್ಣರ ಆಗಮನಕ್ಕೆ ಮುಂಚೆ ಕಲಕತ್ತೆಯ ಶಿಕ್ಷಿತ ಮತ್ತು ಅಶಿಕ್ಷಿತರೆಲ್ಲರಿಗೂ ಆಧ್ಯಾತ್ಮಿಕ ಜಗತ್ತಿಗೆ ಸಂಬಂಧಪಟ್ಟಂತಹ ಭಾವ, ಸಮಾಧಿ ಮತ್ತು ದಿವ್ಯದರ್ಶನ—ಇವುಗಳ ಬಗ್ಗೆ ಯಾವ ತಿಳುವಳಿಕೆಯೂ ಇರಲಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಅಶಿಕ್ಷಿತ ಜನಸಾಮಾನ್ಯರು ಅವುಗಳ ವಿಷಯದಲ್ಲಿ, ಏನೋ ಅದ್ಭುತ ಪವಾಡವೊ ಎಂಬಂತೆ, ಭಯವಿಸ್ಮಯದಿಂದ ಕೂಡಿದ್ದರು. ಮತ್ತೆ ಯಾವ ಧಾರ್ಮಿಕ ಹಿನ್ನೆಲೆಯೂ ಇಲ್ಲದ ಪಾಶ್ಚಾತ್ಯ ಮಾದರಿಯ ಶಿಕ್ಷಣವನ್ನು ಪಡೆದವರು ಇಂಥ ದರ್ಶನ

ಗಳು ಅಸಾಧ್ಯ, ಅಥವಾ ಬುದ್ಧಿವಿಕಾರದ ಪರಿಣಾಮ ಎಂದು ಭಾವಿಸಿದ್ದರು. ಆಧ್ಯಾತ್ಮಿಕ ಭಾವಸಮಾಧಿಯಿಂದ ಉಂಟಾಗುತ್ತಿದ್ದ ಶಾರೀರಿಕ ವಿಕಾರಗಳನ್ನು ಅನಾರೋಗ್ಯದ ಪರಿಣಾಮವೆಂದೇ ಅವರು ಪರಿಗಣಿಸುತ್ತಿದ್ದರು. ಈಗಿನ ಪರಿಸ್ಥಿತಿ ಎಷ್ಟೋ ಬದಲಾಗಿದ್ದರೂ ಭಾವ ಮತ್ತು ಸಮಾಧಿಗಳ ರಹಸ್ಯವನ್ನು ಅರ್ಥಮಾಡಿ ಕೊಂಡಿರುವವರು ಅತ್ಯಲ್ಪಮಂದಿ. ಮತ್ತೆ ಶ್ರೀರಾಮಕೃಷ್ಣರ ಭಾವಮುಖಾವಸ್ಥೆಯನ್ನು ಸ್ವಲ್ಪಮಟ್ಟಿಗಾದರೂ ಅರ್ಥಮಾಡಿಕೊಳ್ಳಬೇಕಾದರೆ ಸಮಾಧಿ ತತ್ತ್ವದ ಸ್ಥೂಲ ಪರಿಚಯವಾದರೂ ನಮಗೆ ಬೇಕೇಬೇಕಾಗುತ್ತದೆ. ಆದಕ್ಕಾಗಿಯೇ ಇದರ ಬಗ್ಗೆ ಪಾಠಕರಿಗೆ ಸ್ವಲ್ಪ ತಿಳಿಸಿಕೊಡುವ ಪ್ರಯತ್ನ ಮಾಡುತ್ತೇವೆ.

ಸಾಧಾರಣ ವ್ಯಕ್ತಿಯ ಅನುಭವಕ್ಕೆ ಬರದಿರುವುದನ್ನು ನಾವು ಸಾಮಾನ್ಯವಾಗಿ 'ವಿಕಾರ' ಎಂದು ಕರೆಯುತ್ತೇವೆ. ಧರ್ಮಜಗತ್ತಿನ ಸೂಕ್ಷ್ಮ ಅನುಭವಗಳೂ ಸಾಧಾರಣ ವ್ಯಕ್ತಿಗೆ ನಿಲುಕುವಂತಹುವಲ್ಲ, ಅವನ್ನು ಪಡೆಯಲು ತುಂಬ ತರಬೇತಿ ಸಾಧನೆಗಳು ಅವಶ್ಯಕ. ಈ ಅಸಾಧಾರಣ ದರ್ಶನಗಳು, ಅನುಭವಗಳು ಸಾಧಕನ ಮನಸ್ಸನ್ನು ಹೆಚ್ಚು ಪವಿತ್ರಗೊಳಿಸುವುವು. ಅವನಿಗೆ ಹೊಸ ಶಕ್ತಿಯನ್ನೂ ಮನಶ್ಶಾಂತಿಯನ್ನೂ ನೀಡುವುವು. ಆದ್ದರಿಂದ ಈ ಎಲ್ಲ ದರ್ಶನಗಳನ್ನೂ, ಅನುಭವಗಳನ್ನೂ 'ವಿಕಾರ' ವೆಂದು ಕರೆಯುವುದು ಉಚಿತವೆನಿಸುವುದೆ ? 'ವಿಕಾರ'ವು ಮನಸ್ಸನ್ನು ದುರ್ಬಲಗೊಳಿ ಸುವುದು, ಬುದ್ಧಿಶಕ್ತಿಯನ್ನು ಕುಂದಿಸುವುದು ಎಂಬುದು ಎಲ್ಲರೂ ಒಪ್ಪುವ ವಿಷಯ. ಆದರೆ ಆಧ್ಯಾತ್ಮಿಕ ದರ್ಶನ ಅನುಭವಾದಿಗಳ ಫಲ ಇದಕ್ಕೆ ವಿರುದ್ಧವಾದುದು. ಆದ್ದರಿಂದ ಅವುಗಳ ಕಾರಣ ಸಂಪೂರ್ಣ ಬೇರೆಯಾಗಿರಲೇಬೇಕು, ಬುದ್ಧಿವಿಕಾರ ಅಥವಾ ವ್ಯಾಧಿಯ ಪರಿಣಾಮ ಎಂದು ಹೇಳಿದರೆ ನಡೆಯುವುದಿಲ್ಲ.

2. ದರ್ಶನಾದಿಗಳ ಮೂಲಕವೇ ವಿಶೇಷ ಆಧ್ಯಾತ್ಮಿಕ ಅನುಭವಗಳನ್ನು ಪಡೆ ಯುವುದು. ಆದರೆ ಮನುಷ್ಯನು ಚಿರಶಾಂತಿಯನ್ನು ಪಡೆಯುವುದು ಮನೋವೃತ್ತಿ ಗಳೆಲ್ಲ ನಿರುದ್ಧವಾಗಿ ಅದ್ವೈತಾನುಭವದ ನಿರ್ವಿಕಲ್ಪಾವಸ್ಥೆಯನ್ನು ಮುಟ್ಟಿದಾಗಲೇ. ಶ್ರೀರಾಮಕೃಷ್ಣರು ಹೇಳುವಂತೆ 'ಒಂದು ಮುಳ್ಳು ಚುಚ್ಚಿದರೆ ಇನ್ನೊಂದು ಮುಳ್ಳಿನಿಂದ ಅದನ್ನು ತೆಗೆಯಬೇಕು,' ಭಗವಂತನನ್ನು ಮರೆತು ಈ ಜಗದ್ರೂಪ ವಿಕಾರಕ್ಕೆ ಒಳಗಾಗಿ ದ್ದೇವೆ. ಆಧ್ಯಾತ್ಮಿಕ ದರ್ಶನಗಳು ಈ ವಿಕಾರವನ್ನು ಹೋಗಲಾಡಿಸಿ ಕ್ರಮೇಣ ನಮ್ಮನ್ನು ಅದ್ವೈತಾನುಭವಕ್ಕೆ ಒಯ್ಯುವುವು. ಆಗ 'ರಸೋ ವೈ ಸಃ' ಎಂಬ ಋಷಿ ವಾಕ್ಯವು ಸಾರ್ಥಕವಾಗಿ ಮಾನವನು ಧನ್ಯನಾಗುವನು. ಇದು ನಿಜವಾದ ಮಾರ್ಗ. ಧಾರ್ಮಿಕ ಕ್ಷೇತ್ರ ದಲ್ಲಿ ಏನೇನು ಮತಗಳಿವೆಯೊ, ಅನುಭವಗಳಿವೆಯೊ, ಹಾಗು ದರ್ಶನಾದಿಗಳಿವೆಯೊ ಅವೆಲ್ಲದರ ಏಕಮಾತ್ರ ಗುರಿ ಇದೊಂದೇ. ಸ್ವಾಮಿ ವಿವೇಕಾನಂದರ ಪ್ರಕಾರ, ಈ ಎಲ್ಲ ದರ್ಶನಾದಿಗಳು ಆಧ್ಯಾತ್ಮಿಕ ಪ್ರಗತಿಯ ಮೈಲಿಗಲ್ಲುಗಳು; ಆದ್ದರಿಂದ ಒಂದೆರಡು ದಿವ್ಯ ದರ್ಶನಗಳು ಆದರೆ ಅಷ್ಟರಿಂದಲೇ ಧರ್ಮದ ಕೊನೆ ಮುಟ್ಟಿದೆವೆಂದು ಭ್ರಮಿಸಬಾರದು. ಈ ರೀತಿ ಭ್ರಮೆಯಿಂದಲೇ ಜನರು ನಿಜವಾದ ಗುರಿಯಿಂದ ಚ್ಯುತರಾಗಿ ಸಂಕುಚಿತ ಮನೋ

ಭಾವದವರಾಗುವರು. ಇದು ಪರಸ್ಪರ ದ್ವೇಷ ಹಿಂಸಾಚಾರಗಳಿಗೆ ಕಾರಣವಾಗುವುದು. ಭಗವದ್ಭಕ್ತಿ ಮತಾಂಧತೆಗೆ ಕಾರಣವಾಗುವುದು ಇದರಿಂದಲೇ. ಭಕ್ತಿಮಾರ್ಗದಲ್ಲಿ ಇದೊಂದು ಕಂಟಕಪ್ರಾಯವಾಗಿದೆ.

3. ಯಾರಿಗೆ ಇಂಥ ದರ್ಶನಗಳು ಆಗಿಲ್ಲವೊ ಅವರು ಧಾರ್ಮಿಕರೇ ಅಲ್ಲ ಎಂದು ಕೆಲವರು ಭಾವಿಸುತ್ತಾರೆ. ಅವರ ಪಾಲಿಗೆ ಆಧ್ಯಾತ್ಮಿಕತೆ ಮತ್ತು ಗೊತ್ತು ಗುರಿಯಿಲ್ಲದ ಪವಾಡಾಸಕ್ತಿ—ಇವೆರಡೂ ಒಂದೇ. ಆದರೆ ಇಂತಹ ಆಸಕ್ತಿಯಿಂದ ವ್ಯಕ್ತಿಯು ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸದೆ ದಿನದಿನವೂ ಎಲ್ಲ ವಿಷಯಗಳಲ್ಲಿಯೂ ದುರ್ಬಲನೇ ಆಗುತ್ತ ಹೋಗುತ್ತಾನೆ. ಯಾವುದು ವ್ಯಕ್ತಿಯನ್ನು ನಿಷ್ಠಾವಂತನೂ, ಚಾರಿತ್ರ್ಯವಂತನೂ, ಅತ್ಯಂತ ಪವಿತ್ರನೂ, ಸಮಗ್ರ ಜಗತ್ತನ್ನು ತುಚ್ಛವಾಗಿ ಕಾಣುವಂತಹ ವೈರಾಗ್ಯವಂತನೂ ಆಗುವಂತೆ ಮಾಡುವುದಿಲ್ಲವೊ ಅದು ಆಧ್ಯಾತ್ಮಿಕ ರಾಜ್ಯಕ್ಕೆ ಸೇರಿದುದಲ್ಲ. ಅಪೂರ್ವ ದರ್ಶನಾದಿಗಳು ನಿನ್ನ ಜೀವನದಲ್ಲಿ ಈ ಮೇಲಿನ ಫಲಗಳನ್ನು ನೀಡದಿದ್ದರೆ, ಹಾಗೂ ದರ್ಶನಾದಿಗಳು ನಿನಗೆ ಆಗುತ್ತಲೇ ಇದ್ದರೆ ಆಗ ನೀನು ಇನ್ನೂ ಆಧ್ಯಾತ್ಮಿಕ ರಾಜ್ಯದಿಂದ ಹೊರಗಿರುವೆ ಮತ್ತು ಈ ದರ್ಶನಾದಿಗಳೆಲ್ಲ ಕೇವಲ ಬುದ್ಧಿವಿಕಾರಗಳು ಎಂದು ನೀನು ಭಾವಿಸಬೇಕು. ಮತ್ತೆ ಇಂಥ ದರ್ಶನಗಳಿಲ್ಲದೆಯೇ ಮೇಲಿನ ಲಕ್ಷಣಗಳು ಕಂಡುಬಂದರೆ ನೀನು ಸರಿಯಾದ ಮಾರ್ಗದಲ್ಲಿ ಮುಂದುವರಿಯುತ್ತಿರುವೆ, ಮುಂದೆ ಸಮಯಬಂದಾಗ ಯಥಾರ್ಥದರ್ಶನಗಳು ಆಗುತ್ತವೆ ಎಂದು ತಿಳಿಯಬೇಕು.

4. ಶ್ರೀರಾಮಕೃಷ್ಣರ ಭಕ್ತರುಗಳನೇಕರಿಗೆ ಭಾವಸಮಾಧಿಯಾಗುತ್ತಿತ್ತು. ಇದನ್ನು ಗಮನಿಸಿದ ಭಕ್ತನೊಬ್ಬನು ತಾನು ಅನೇಕ ದಿನಗಳಿಂದ ಬರುತ್ತಿದ್ದರೂ ತನಗೇನೂ ದರ್ಶನಗಳಾಗುತ್ತಿಲ್ಲವಲ್ಲ ಎಂದು ತುಂಬ ವ್ಯಥೆಪಟ್ಟು ಒಂದುದಿನ ಶ್ರೀರಾಮಕೃಷ್ಣರನ್ನು ಈ ಕುರಿತು ಪ್ರಶ್ನಿಸಿದ. ಅವರು ಅವನಿಗೆ ತಿಳಿಸಿ ಹೇಳಿದರು : "ನಿನಗಿನ್ನೂ ತಿಳಿವಳಿಕೆ ಸಾಲದು. ದರ್ಶನಗಳಾದರೆ ಎಲ್ಲ ಆಗಿಹೋಯಿತೆಂದು ಭಾವಿಸುತ್ತೀಯೆ. ಅದೇನು ಮಹಾ ! ಅದಕ್ಕಿಂತಲು ದೊಡ್ಡದು ತ್ಯಾಗ, ವಿಶ್ವಾಸ-ತಿಳಿಯಿತೆ ! ನರೇಂದ್ರನಿಗೂ (ಸ್ವಾಮಿ ವಿವೇಕಾನಂದ) ಅಂಥ ದರ್ಶನಗಳೇನೂ ಆಗುವುದಿಲ್ಲ. ಆದರೆ ನೋಡು, ಅವನದು ಎಂಥ ತ್ಯಾಗ, ವಿಶ್ವಾಸ, ನಿಷ್ಠೆ ! ಎಂಥ ತೇಜಸ್ವೀ ! "

5. ಏಕನಿಷ್ಠೆ, ಧೃಢ ವಿಶ್ವಾಸ, ಮತ್ತು ಅಹೇತುಕ ಭಕ್ತಿ—ಇವುಗಳ ಸಹಾಯ ದಿಂದ ಸಾಧಕನ ಮನಸ್ಸಿನ ವಾಸನೆಗಳೆಲ್ಲ ಕ್ಷೀಣವಾಗುವುವು ಮತ್ತು ಭಗವಂತನಿಂದ ತಾನು ಬೇರೆಯಲ್ಲ ಎಂಬ ಅದ್ವೈತ ಭಾವ ಅವನಿಗುಂಟಾಗುವುದು. ಆಗ ಪೂರ್ವ ಸಂಸ್ಕಾರದ ಪ್ರಭಾವದಿಂದ ಕೆಲವರ ಮನಸ್ಸಿನಲ್ಲಿ 'ನಾನು ಲೋಕಕಲ್ಯಾಣ ಕಾರ್ಯ ಮಾಡಬೇಕು, ಬಹುಜನರಿಗೆ ಹಿತವುಂಟಾಗುವುದನ್ನು ಸಾಧಿಸಬೇಕು ಎಂಬ ಪರಿಶುದ್ಧ ವಾದ ಆಸೆ ಉದಯಿಸುವುದು. ಈ ಆಸೆಯ ಪರಿಣಾಮವಾಗಿ ಪೂರ್ಣ ಅದ್ವೈತಾ ವಸ್ಥೆಯನ್ನು ಅವರು ಪಡೆಯಲಾಗುವುದಿಲ್ಲ. ಆ ಉಚ್ಚ ಅವಸ್ಥೆಯಿಂದ ಸ್ವಲ್ಪ ಕೆಳಗಿಳಿದು ಬಂದು 'ನಾನು ನನ್ನದು' ಎಂಬ ಅಹಂ ರಾಜ್ಯವನ್ನು ಮತ್ತೆ ಪ್ರವೇಶಿಸುವರು.

ಆದರೆ ಈ 'ಅಹಂ' ಭಗವಂತನ ದಾಸ, ಮಗು ಅಥವಾ ಅಂಶ ಎಂದು ನಿಕಟವಾದ ಭಗವತ್ ಸಂಬಂಧವನ್ನಿಟ್ಟುಕೊಂಡಿರುತ್ತದೆ. ಈ ಅಹಂನಿಂದ ಕಾಮ–ಕಾಂಚನದ ಸೇವೆ ನಡೆಯುವುದಿಲ್ಲ. ಅದು ಭಗವಂತನನ್ನೇ ಸರ್ವಸ್ವವೆಂದು ಭಾವಿಸುವುದು, ಸಂಸಾರದ ರೂಪರಸಾದಿ ಭೋಗಗಳಿಗೆ ವಶವಾಗುವುದೇ ಇಲ್ಲ. ತನ್ನ ಉದ್ದೇಶ ಸಾಧನೆಗೆ ಎಷ್ಟು ಬೇಕೋ ಅಷ್ಟು ಮಾತ್ರ ವಿಷಯಗ್ರಹಣ ಮಾಡುವುದು. ಹಿಂದೆ ಬದ್ಧರಾಗಿದ್ದು ಮುಂದೆ ಸಾಧನೆಯ ಮೂಲಕ ಸಿದ್ಧಿಯನ್ನು ಪಡೆದು, ಅನಂತರ ಜೀವನದ ಉಳಿದ ಕಾಲ ವನ್ನು ಯಾವುದಾದರೂ ಭಗವದ್ ಭಾವದಲ್ಲಿ ಯಾರು ಕಳೆಯುವರೊ ಅವರನ್ನೇ 'ಜೀವನ್ಮುಕ್ತ'ರೆಂದು ಕರೆಯುವುದು. ಯಾರು ಭಗವಂತನೊಡನೆ ಈ ರೀತಿಯ ವಿಶಿಷ್ಟ ಸಂಬಂಧವನ್ನು ಇಟ್ಟುಕೊಂಡೇ ಹುಟ್ಟುವರೊ ಮತ್ತು ಯಾವ ಸಮಯದಲ್ಲಿಯೂ ಸಾಧಾರಣ ಜನರಂತೆ ಬಂಧನಕ್ಕೊಳಗಾಗುವುದಿಲ್ಲವೋ ಅವರನ್ನೆ ಶಾಸ್ತ್ರವು 'ಅಧಿಕಾರಿಕ ಪುರುಷ', 'ಈಶ್ವರಕೋಟಿ' ಅಥವಾ 'ನಿತ್ಯಮುಕ್ತ' ಇತ್ಯಾದಿಯಾಗಿ ಕರೆಯುತ್ತದೆ. ಇನ್ನೊಂದು ಬಗೆಯ ಸಾಧಕರಿರುವರು. ಅವರು ಅದ್ವೈತಾವಸ್ಥೆಯನ್ನು ಮುಟ್ಟಿದ ಮೇಲೆ ಈ ಜನ್ಮದಲ್ಲಾಗಲಿ ಮುಂದಿನ ಜನ್ಮದಲ್ಲಾಗಲಿ ಲೋಕಕಲ್ಯಾಣ ಕಾರ್ಯಕ್ಕಾಗಿ ಈ ಪ್ರಪಂಚಕ್ಕೆ ಹಿಂದಿರುಗುವುದೇ ಇಲ್ಲ. ಇವರನ್ನು 'ಜೀವಕೋಟಿ'ಗಳೆಂದು ಕರೆಯು ವುದು. ಇವರ ಸಂಖ್ಯೆಯೇ ಅಧಿಕವೆಂದು ಗುರುಗಳ ಬಾಯಿಂದ ಕೇಳಿರುವೆವು.

6. ಹಿಂದೆ ಹೇಳಿದ ರೀತಿಯಲ್ಲಿ ಅದ್ವೈತಭಾವವನ್ನು ಪಡೆದು ಲೋಕಕಲ್ಯಾಣ ಕ್ಕಾಗಿ ಹಿಂದಿರುಗಿ ಬರುವವರಲ್ಲಿಯೂ ಅವರ ಅದ್ವೈತಾನುಭವದಲ್ಲಿ ತಾರತಮ್ಯ ವುಂಟು. ಕೆಲವರು ಆ ಭಾವ ಸಮುದ್ರವನ್ನು ದೂರದಿಂದ ನೋಡಿರುತ್ತಾರೆ. ಕೆಲವರು ಹತ್ತಿರ ಹೋಗಿ ಅದನ್ನು ಸ್ಪರ್ಶಿಸಿರುತ್ತಾರೆ. ಮತ್ತೆ ಕೆಲವರು ಆ ಸಮುದ್ರದ ನೀರನ್ನು ಅಲ್ಪ ಸ್ವಲ್ಪ ಕುಡಿದಿರುತ್ತಾರೆ. ಶ್ರೀರಾಮಕೃಷ್ಣರು ಹೇಳುತ್ತಿದ್ದರು : "ದೇವರ್ಷಿ ನಾರ ದರು ದೂರದಿಂದಲೇ ಆ ಸಮುದ್ರವನ್ನು ನೋಡಿ ಹಿಂದಿರುಗಿದರು, ಶುಕದೇವರು ಮೂರು ಬಾರಿ ಅದನ್ನು ಸ್ಪರ್ಶಿಸಿರುವರು ಅಷ್ಟೆ. ಶಿವನು ಮೂರು ಬೊಗಸೆ ನೀರು ಕುಡಿದು ಶವವಾಗಿ ಬಿದ್ದುಬಿಟ್ಟನು." ಸ್ವಲ್ಪ ಕಾಲವಾದರೂ ಈ ಅದ್ವೈತಭಾವದಲ್ಲಿ ಮುಳುಗಿ ಅದರಲ್ಲಿ ತನ್ಮಯವಾಗುವುದನ್ನು 'ನಿರ್ವಿಕಲ್ಪ ಸಮಾಧಿ' ಎಂದು ಕರೆಯುವುದು.

7. ಅದ್ವೈತಾವಸ್ಥೆಯಲ್ಲಿ ತಾರತಮ್ಯವಿರುವಂತೆ ಕೆಳಮಟ್ಟದ ಶಾಂತ, ದಾಸ್ಯ, ಸಖ್ಯ, ವಾತ್ಸಲ್ಯ ಮುಂತಾದ ಭಾವಗಳ ಅನುಭವದಲ್ಲಿಯೂ ತಾರತಮ್ಯವುಂಟು. ಈ ಭಾವಗಳು ಅದ್ವೈತಭಾವಕ್ಕೆ ಮೆಟ್ಟಿಲುಗಳಂತಿವೆ. ಇವುಗಳಲ್ಲಿ ಕೆಲವರು ಪೂರ್ಣ ಅನು ಭವವನ್ನು ಪಡೆದು ಕೃತಾರ್ಥರಾಗಿರುವರು. ಮತ್ತೆ ಕೆಲವರು ಅದರ ಆಭಾಸವನ್ನು ಮಾತ್ರ ಪಡೆದಿರುವರು. ಈ ಮೇಲಿನ ಭಾವಗಳಲ್ಲಿ ಯಾವುದಾದರೊಂದರ ಪೂರ್ಣ ಅನುಭವವನ್ನು ಪಡೆದರೆ ಅದನ್ನು 'ಸವಿಕಲ್ಪ ಸಮಾಧಿ' ಎಂದು ಕರೆಯುತ್ತಾರೆ.

8. ಉನ್ನತ ಮಟ್ಟದ ಅದ್ವೈತಭಾವವಾಗಲಿ ಅಥವಾ ಸವಿಕಲ್ಪಭಾವವಾಗಲಿ, ಎಲ್ಲ ಪ್ರಕಾರದ ಭಾವಗಳಲ್ಲಿಯೂ ಸಾಧಕನಲ್ಲಿ ಅಪೂರ್ವ ಶಾರೀರಿಕ ಪರಿವರ್ತನೆಗಳು

ಉಂಟಾಗುತ್ತವೆ ಮತ್ತು ಅದ್ವೈತ ದರ್ಶನಗಳಾಗುತ್ತವೆ. ಈ ಶಾರೀರಿಕ ವಿಕಾರಗಳು ಮತ್ತು ದರ್ಶನಗಳು ಬೇರೆ ಬೇರೆ ವ್ಯಕ್ತಿಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಆಗುವುವು: ಕೆಲವರಲ್ಲಿ ಅವರು ಸ್ವಲ್ಪ ಮುಂದುವರಿದ ಕೂಡಲೇ ಶಾರೀರಿಕ ವಿಕಾರಗಳು ಮತ್ತು ದರ್ಶನಗಳು ಕಾಣಿಸುವುವು. ಕೆಲವರಲ್ಲಿ ಆಳ ಅನುಭವವಾಗಿದ್ದರೂ ಶಾರೀರಿಕ ವಿಕಾರ ಗಳು ಮತ್ತು ದರ್ಶನಗಳು ಅಷ್ಟೊಂದು ಕಾಣಿಸಿಕೊಳ್ಳುವುದಿಲ್ಲ. ಶ್ರೀರಾಮಕೃಷ್ಣರು ಹೇಳುವಂತೆ : ''ಸಣ್ಣ ಕೊಳದಲ್ಲಿ ಆನೆ ಇಳಿದರೆ ಅದರಲ್ಲಿ ನೀರು ಅಲ್ಲೋಲ ಕಲ್ಲೋಲ ವಾಗುವುದು. ಆದರೆ ದೊಡ್ಡ ಸರೋವರದಲ್ಲಿ ಎಂಥ ದೊಡ್ಡ ಆನೆ ಇಳಿದರೂ ನೀರು ಮೊದಲಿನಂತೆಯೇ ಸ್ಥಿರವಾಗಿ ಉಳಿಯುವುದು.' ಆದ್ದರಿಂದ ದೈಹಿಕ ವಿಕಾರಗಳು ಮತ್ತು ದರ್ಶನಗಳೇ ಭಾವದ ಗಂಭೀರತೆಯ ಸ್ಪಷ್ಟ ಲಕ್ಷಣಗಳು ಎಂದು ಹೇಳುವಂತಿಲ್ಲ.

9. ಭಾವದ ಗಂಭೀರತೆಯ ಪ್ರಮಾಣಗಳು ಯಾವುವೆಂದರೆ ನಿಷ್ಠೆ, ತ್ಯಾಗ, ಚಾರಿತ್ರ್ಯಬಲ, ವಿಷಯಾಸಕ್ತಿಯ ಇಳಿತ ಮುಂತಾದವುಗಳು. ಭಾವಸಮಾಧಿಯು ಎಷ್ಟು ದೃಢವಾಗಿದೆ ಎಂಬುದನ್ನು ಈ ಅಡಿಗಲ್ಲಿನಿಂದಲೇ ಪರೀಕ್ಷಿಸಬೇಕೇ ಹೊರತು ಬೇರೆ ಉಪಾಯಗಳಿಲ್ಲ. ಆದ್ದರಿಂದ ಯಾರು ಸಂಪೂರ್ಣ ವಿಷಯ ವಾಸನೆಯಿಂದ ಮುಕ್ತರಾಗಿರುವರೊ ಅವರಲ್ಲಿ ಮಾತ್ರ ಶಾಂತಾದಿ ಭಾವಗಳ ನೈಜ ಚಿತ್ರವನ್ನು ಕಾಣು ಬಹುದು. ಯಾರು ಕಾಮ-ಕಾಂಚನಾಸಕ್ತರೊ ಅವರಲ್ಲಿ ಇದನ್ನು ಕಾಣಲು ಸಾಧ್ಯವಿಲ್ಲ. ಕಾಮಾಂಧನು ಕಾಮದ ಸೆಳೆತವನ್ನು ಮಾತ್ರ ಅರ್ಥಮಾಡಿಕೊಳ್ಳಬಲ್ಲನು, ಕಾಮದ ಗಂಧವೂ ಇಲ್ಲದ ಮನಸ್ಸಿನ ವ್ಯಾಕುಲತೆಯನ್ನು ಅವನು ಹೇಗೆ ಅರ್ಥ ಮಾಡಿ ಕೊಳ್ಳಬಲ್ಲ.

10. ಭಾವಸಮಾಧಿಯ ಹಿಂದಿರುವ ಮುಖ್ಯ ತತ್ತ್ವದ ವಿಚಾರವಾಗಿ ಗುರುವಿನ ಬಾಯಿಯಿಂದ ಏನು ಕೇಳಿರುವೆವೊ ಅದನ್ನು ಇಲ್ಲಿ ವಿವರಿಸುತ್ತಿದ್ದೇನೆ.

ಈ ವಿಷಯದ ಸಂಬಂಧದಲ್ಲಿ ಇನ್ನೂ ಸ್ವಲ್ಪ ಹೇಳುವುದಿದೆ. ಆಗಲೇ ಓದುಗರಿಗೆ ಇದು ಸ್ಪಷ್ಟವಾಗುವುದು. ಅದ್ವೈತ ಮತ್ತು ಶಾಂತದಾಸ್ಯಾದಿ ಭಾವಗಳ ಅನುಭವದಲ್ಲಿ ತಾರತಮ್ಯವಿದೆಯೆಂದು ನಾವು ಹೇಳಿದೆವು. ಇದರಿಂದ ಅವತಾರಪುರುಷರುಗಳು ಇವುಗಳ ಯಾವುದೋ ಹಂತದಲ್ಲಿ ಉಳಿದುಬಿಡುತ್ತಾರೆಂದು ಭಾವಿಸಬಾರದು. ಅವರು ತಮಗೆ ಇಚ್ಛೆಬಂದಂತೆ ಶಾಂತ ದಾಸ್ಯ ಮುಂತಾದ ಯಾವುದೇ ಭಾವವನ್ನೂ ತಮ್ಮ ಜೀವನದಲ್ಲಿ ಪ್ರದರ್ಶಿಸಲು ಸಾಧ್ಯ. ಮತ್ತೆ ಅದ್ವೈತಭಾವವನ್ನು ಅವಲಂಬಿಸಿ ಭಗವಂತ ನೊಡನೆ ಏಕತ್ವದ ಅನುಭವವನ್ನು ಎಷ್ಟರಮಟ್ಟಿಗೆ ಅವರು ಪಡೆಯಬಲ್ಲರೆಂದರೆ ಅದು ಜೀವನ್ಮುಕ್ತರಿಗಾಗಲಿ, ನಿತ್ಯಮುಕ್ತರಿಗಾಗಲಿ, ಅಥವಾ ಈಶ್ವರಕೋಟಿಗಳಿಗಾಗಲಿ ಸಾಧ್ಯ ವಾಗದ ವಿಷಯ. ರಸಸ್ವರೂಪವೂ ಆನಂದಸ್ವರೂಪವೂ ಆದ ಬ್ರಹ್ಮವಸ್ತುವಿನಲ್ಲಿ ಪೂರ್ಣ ಏಕತೆಯನ್ನು ಪಡೆದು ಮತ್ತೆ ಅದರಿಂದ ಬೇರೆಯಾಗಿ 'ನಾನು ನನ್ನದು' ಎಂಬ ಅಹಂ ರಾಜ್ಯಕ್ಕೆ ಇಳಿದು ಬರುವುದು ಜೀವಗಳಿಗೆ ಸಾಧ್ಯವಾಗದ ಮಾತು. ಇದು ಕೇವಲ ಅವತಾರಪುರುಷರಿಗೆ ಮಾತ್ರ ಸಾಧ್ಯ. ಅವರ ಅಪೂರ್ವ ಅನುಭವಗಳೇ

ನಮಗೀಗ ಶಾಸ್ತ್ರರೂಪದಲ್ಲಿ ದೊರೆತಿರುವುದು. ಅವರ ಆಧ್ಯಾತ್ಮಿಕ ಅನುಭವಗಳು ವೇದಾದಿ ಶಾಸ್ತ್ರಗಳನ್ನೂ ಮೀರಿದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಶ್ರೀರಾಮಕೃಷ್ಣರು ಹೇಳುತ್ತಿದ್ದರು : "ಇಲ್ಲಿಯ (ನನ್ನ) ಅನುಭವಗಳು ವೇದವೇದಾಂತಗಳಲ್ಲಿ ಏನು ಬರೆದಿದೆಯೊ ಅದನ್ನೆಲ್ಲ ಮೀರಿರುವುವು." ಅವರು ಅವತಾರ ಶ್ರೇಷ್ಠರಾದುದರಿಂದಲೇ ಆರು ತಿಂಗಳು ನಿರಂತರ ಅದ್ವೈತ ಸ್ಥಿತಿಯಲ್ಲಿದ್ದು ಪುನಃ ಲೋಕಕಲ್ಯಾಣಕ್ಕಾಗಿ 'ಅಹಂ' ರಾಜ್ಯಕ್ಕೆ ಇಳಿದುಬರಲು ಸಾಧ್ಯವಾಯಿತು. ಇದೊಂದು ಅದ್ಭುತ ವಿಷಯ ! ಈ ವಿಷಯದಲ್ಲಿ ಕೆಲವು ಮಾತನ್ನು ಇಲ್ಲಿ ಹೇಳುವುದು ಅಸಂಗತವಾಗಲಾರದು.

11. ಶ್ರೀತೋತಾಪುರಿಯಿಂದ ಸಂನ್ಯಾಸವನ್ನು ಸ್ವೀಕರಿಸಿದ ಮೂರನೇ ದಿನದಲ್ಲಿ ಶ್ರೀರಾಮಕೃಷ್ಣರು ನಿರ್ವಿಕಲ್ಪ ಸಮಾಧಿಯನ್ನು, ಅಂದರೆ ಭಗವಂತನೊಡನೆ ಏಕತ್ವದ ಅನುಭವವನ್ನು ಪಡೆದರು. ಆ ಸಮಯದಲ್ಲಾಗಲೇ ಅವರು ತಂತ್ರಸಾಧನೆಗಳನ್ನು ಮುಗಿಸಿದ್ದರು. ಅವರ ತಾಂತ್ರಿಕ ಸಾಧನೆಗಳಲ್ಲಿ ಮಾರ್ಗದರ್ಶನ ಮಾಡಿದ ಭೈರವೀ ಬ್ರಾಹ್ಮಣಿಯೂ ಆಗ ದಕ್ಷಿಣೇಶ್ವರದಲ್ಲಿದ್ದಳು. ಶ್ರೀರಾಮಕೃಷ್ಣರು ತೋತಾಪುರಿಯೊಡನೆ ಅಷ್ಟು ನಿಕಟವಾಗಿ ಬೆರೆಯುವುದನ್ನು ಆಕೆ ನಿಷೇಧಿಸಿದ್ದಳು. "ನೋಡು, "ನೋಡು, ಅವರ ಜತೆ ಬೆರೆಯಬೇಡ, ಅವರದೆಲ್ಲ ಶುಷ್ಕಭಾವ. ಅವರ ಜತೆ ಹೆಚ್ಚು ಬೆರೆತರೆ ನಿನ್ನ ಭಕ್ತಿಭಾವವೆಲ್ಲ ಹೊರಟುಹೋಗುತ್ತದೆ"—ಎಂದು ಅವಳು ಹೇಳುತ್ತಿದ್ದಳು. ಆದರೆ ಶ್ರೀರಾಮಕೃಷ್ಣರು ಅವಳ ಮಾತನ್ನು ಕೇಳದೆ ಹಗಲು ರಾತ್ರಿ ವೇದಾಂತದ ವಿಚಾರದಲ್ಲೇ ಮುಳುಗಿದ್ದರು.

12. ಹನ್ನೊಂದು ತಿಂಗಳು ದಕ್ಷಿಣೇಶ್ವರದಲ್ಲಿದ್ದು ತೋತಾಪುರಿಯು ಹೊರಟು ಹೋದನು. ಈ ಅಹಂ ರಾಜ್ಯವನ್ನು ತೊರೆದು ನಿರಂತರವಾಗಿ ಅದ್ವೈತಾನುಭವದಲ್ಲಿ ನೆಲೆಸಬೇಕೆಂದು ಆಗ ಶ್ರೀರಾಮಕೃಷ್ಣರಿಗೆ ಇಚ್ಛೆಯಾಯಿತು. ಅದರಂತೆಯೇ ಮಾಡಿದರು. ಆಗ ಶ್ರೀರಾಮಕೃಷ್ಣರಿಗೆ ತಮಗೆ ಶರೀರವಿದೆಯೇ ಇಲ್ಲವೇ ಎಂಬ ಪ್ರಜ್ಞೆಯೇ ಇರಲಿಲ್ಲ, ಊಟ ನಿದ್ರೆ ಮುಂತಾದ ಯಾವ ವಿಷಯವೂ ಅವರ ಮನಸ್ಸಿಗೆ ಬರುತ್ತಿರಲಿಲ್ಲ, ಇತರರೊಡನೆ ಮಾತನಾಡುವುದಂತೂ ದೂರದ ವಿಷಯ. ಆ ಅವಸ್ಥೆಯಲ್ಲಿ 'ನಾನು, ನನ್ನದು' ಎಂಬುದೂ ಇಲ್ಲ, 'ನೀನು, ನಿನ್ನದು' ಎಂಬುದು ಕೂಡ ಇಲ್ಲ ; 'ಎರಡೂ' ಇಲ್ಲ, 'ಒಂದೂ' ಇಲ್ಲ. ಏಕೆಂದರೆ 'ಎರಡ'ರ ಪ್ರಜ್ಞೆಯಿದ್ದಾಗಲೇ 'ಒಂದರ'ರ ವಿಷಯ ಬರುವುದು. ಅಲ್ಲಿ ಮನಸ್ಸಿನ ಎಲ್ಲ ವೃತ್ತಿಗಳೂ ಸ್ಥಿರವಾಗಿವೆ, ಶಾಂತವಾಗಿವೆ. ಅಲ್ಲಿ ಕೇವಲ :

ಕಿಮಪಿ ಸತತಬೋಧಂ ಕೇವಲಾನಂದರೂಪಂ
ನಿರುಪಮಮತಿವೇಲಂ ನಿತ್ಯಮುಕ್ತಂ ನಿರೀಹಮ್ ।
ನಿರವಧಿಗಗನಾಭಂ ನಿಷ್ಕಲಂ ನಿರ್ವಿಕಲ್ಪಂ

ಹೃದಿ ಕಲಯತಿ ವಿದ್ವಾನ್ ಬ್ರಹ್ಮಪೂರ್ಣಂ ಸಮಾಧೌ ॥
ಪ್ರಕೃತಿ ವಿಕೃತಿಶೂನ್ಯಂ ಭವನಾತೀತಭಾವಾತ್ ।*

'ಯಾವುದೊ ಅವರ್ಣನೀಯವಾದ ಸತತ ಬೋಧೆ ಮತ್ತು ಆನಂದವಿರುತ್ತದೆ. ಅದು ನಿರುಪಮವೂ, ಅಸೀಮವೂ, ನಿತ್ಯಮುಕ್ತವೂ, ಆಕಾರರಹಿತವೂ ಆದ ಸ್ಥಿತಿ; ಅದು ಆಕಾಶದಂತೆ ಅನಂತವೂ, ನಿಷ್ಕಲಂಕವೂ, ನಿರ್ವಿಕಲ್ಪವೂ ಆಗಿದೆ. ಅದು ಭಾವನಾತೀತ ವಾದುದರಿಂದ ಪ್ರಕೃತಿವಿಕೃತಿಶೂನ್ಯವಾದುದು. ಜ್ಞಾನಿಯು ಸಮಾಧಿಸ್ಥಿತಿಯಲ್ಲಿ ಅದನ್ನು ತನ್ನ ಹೃದಯದಲ್ಲಿ ಅನುಭವಿಸುತ್ತಾನೆ,

ಕೇವಲ ಆನಂದ! ಆನಂದ! ಅದಕ್ಕೆ ದಿಕ್ಕಿಲ್ಲ, ದೇಶವಿಲ್ಲ, ಆಲಂಬನೆ ಇಲ್ಲ, ರೂಪುವಿಲ್ಲ, ನಾಮವಿಲ್ಲ! ಕೇವಲ ಅಶರೀರಿಯಾದ ಆತ್ಮನು ತನ್ನ ಅನಿರ್ವಚನೀಯ ವಾದ ಆನಂದದಲ್ಲಿ ನೆಲೆಸಿರುತ್ತಾನೆ. ಮಾನವ ಬುದ್ಧಿಗೆ ಗೋಚರವಾಗುವ ಎಲ್ಲ ಭಾವನೆ ಗಳನ್ನೂ ಮೀರಿದ ಒಂದು ಭಾವಾತೀತ ಭಾವದಲ್ಲಿ ನೆಲೆಸಿರುತ್ತಾನೆ. ಆತ್ಮವು ಆತ್ಮನಲ್ಲಿ ರಮಿಸುವುದೆಂದು' ಯಾವ ಸ್ಥಿತಿಯನ್ನು ಶಾಸ್ತ್ರವು ಕರೆಯುವುದೊ ಶ್ರೀರಾಮಕೃಷ್ಣರು ಆಗ ನಿರಂತರವಾಗಿ ಆ ಸ್ಥಿತಿಯಲ್ಲಿ ನೆಲೆಸಿದ್ದರು.

13. ವೇದಾಂತದ ನಿರ್ವಿಕಲ್ಪ ಸ್ಥಿತಿಯನ್ನು ತಲುಪುವಾಗ ತಮಗೆ ಯಾವ ಸಾಂಸಾರಿಕ ವಿಷಯವೂ ಅಡ್ಡಿಯಾಗಲಿಲ್ಲವೆಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಏಕೆಂದರೆ ಇದಕ್ಕೆ ಮೊದಲೇ ಶ್ರೀಜಗನ್ಮಾತೆಯನ್ನು ಸಾಕ್ಷಾತ್ಕರಿಸಿಕೊಳ್ಳುವಾಗ ಅವರು ಎಲ್ಲ ಭೋಗವಾಸನೆಗಳನ್ನೂ ಬಿಟ್ಟಿದ್ದರು. "ತಾಯಿ, ಇಗೋ ನಿನ್ನ ಜ್ಞಾನವನ್ನು; ಇಗೊ ನಿನ್ನ ಅಜ್ಞಾನವನ್ನು; ಇಗೋ ನಿನ್ನ ಧರ್ಮವನ್ನು, ಇಗೊ ನಿನ್ನ ಅಧರ್ಮವನ್ನು; ಇಗೊ ನಿನ್ನ ಒಳಿತನ್ನು, ಇಗೊ ನಿನ್ನ ಕೆಡಕನ್ನು; ಇಗೊ ನಿನ್ನ ಪಾಪವನ್ನು, ಇಗೊ ನಿನ್ನ ಪುಣ್ಯವನ್ನು ; ಇಗೊ ನಿನ್ನ ಯಶಸ್ಸನ್ನು, ಇಗೊ ನಿನ್ನ—ಇವನ್ನೆಲ್ಲ ಅಯಶಸ್ಸನ್ನು ತೆಗೆದುಕೊಂಡು ನನಗೆ ನಿನ್ನ ಪಾದಪದ್ಮದಲ್ಲಿ ಶುದ್ಧವಾದ ಭಕ್ತಿಯನ್ನು ಕೊಡು, ದರ್ಶನ ವನ್ನು ನೀಡು"–ಹೀಗೆ ಹೇಳುತ್ತ ಮನಸ್ಸಿನ ಎಲ್ಲ ಕಾಮನೆಗಳನ್ನೂ ವಾಸನೆಗಳನ್ನೂ ಶ್ರೀಜಗನ್ಮಾತೆಗೆ ಅರ್ಪಿಸಿದ್ದರು. ಈ ಏಕಾಂತಿಕ ಭಕ್ತಿಯನ್ನು ನಾವು ಪಡೆಯುವುದಿರಲಿ ಕಲ್ಪಿಸಿಕೊಳ್ಳುವುದಕ್ಕಾದರೂ ಸಾಧ್ಯವೇ ? ನಾವು ಭಗವಂತನ ಮುಂದೆ 'ದೇವರೆ, ನನ್ನ ದೆಲ್ಲವನ್ನೂ ನೀನೇ ಸ್ವೀಕರಿಸು' ಎಂದು ಹೇಳುತ್ತೇವೆ ಅಷ್ಟೆ. ಮರುಕ್ಷಣವೆ ನಾವು ವ್ಯವಹಾರದಲ್ಲಿ ತೊಡಗಿದಾಗ 'ಎಲ್ಲವೂ ನನ್ನದೆ ಎಂಬ ಭಾವವಿರುತ್ತದೆ, ಲಾಭ ನಷ್ಟ ಗಳನ್ನೇ ಚಿಂತಿಸುತ್ತಿರುತ್ತೇವೆ. ಎಲ್ಲ ವಿಷಯದಲ್ಲಿಯೂ ಜನ ಏನು ಹೇಳುತ್ತಾರೆ ಎಂಬು ದನ್ನೆ ಗಮನಿಸುತ್ತಾ, ಅವರ ತಾಳಕ್ಕೆ ತಕ್ಕಂತೆ ಕುಣಿಯುತ್ತೇವೆ. ಮುಂದೆ ಏನಾಗುವುದೊ

---

* ವಿವೇಕಚೂಡಾಮಣಿ ೪೦೭–೯.

ಎಂಬ ಕಾತರತೆಯಿಂದ ಕೆಲವೊಮ್ಮೆ ತೊಳಲುತ್ತೇವೆ. ಅದನ್ನೆಲ್ಲ ಮರೆತು ಮತ್ತೆ ಆನಂದದಿಂದ ನಲಿಯುತ್ತೇವೆ. ನಮ್ಮಲ್ಲಿ ಎಂತಹ ಬಲಯುತವಾದ ಅಹಂಕಾರವಿದೆಯೆಂದರೆ: ನಮ್ಮ ಸ್ವಾರ್ಥತೆಯ ಪೂರ್ತಿಗಾಗಿ ಇಡೀ ಪ್ರಪಂಚವನ್ನು ತಲೆಕೆಳಕು ಮಾಡಲು ಆಗದಿದ್ದರೂ ಅದರ ಸಾಕಷ್ಟು ದುರುಪಯೋಗಪಡಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಶ್ರೀರಾಮಕೃಷ್ಣರಿಗೆ ನಮ್ಮಂತೆ ಒಳಗೊಂದು ಹೊರಗೊಂದು ಇರಲಿಲ್ಲ. ಅವರು ಒಮ್ಮೆ 'ತಾಯಿ, ನೀನು ಕೊಟ್ಟ ವಸ್ತುವನ್ನು ನೀನೇ ಸ್ವೀಕರಿಸು' ಎಂದು ಹೇಳಿದರೆ ಮತ್ತೆಂದೂ ಅದರ ಕಡೆ ಲಾಲಸೆಯಿಂದ ನೋಡುತ್ತಿರಲಿಲ್ಲ. 'ಅಯ್ಯೋ ಹೇಳಿಬಿಟ್ಟೆನಲ್ಲ! ಹೇಳದೆ ಇದ್ದಿದ್ದರೆ ಚೆನ್ನಾಗಿತ್ತು'—ಈ ರೀತಿಯ ಮನೋಭಾವ ಅವರಲ್ಲಿರಲೇ ಇಲ್ಲ. ಯಾವುದನ್ನಾದರೂ ಶ್ರೀಜಗನ್ಮಾತೆಗೆ ಕೊಡುತ್ತೇನೆಂದು ಹೇಳಿದರೆ ಅವರಿಗೆ ಅದು 'ನನ್ನದು' ಎಂದು ಎಂದಿಗೂ ಹೇಳಲಾಗುತ್ತಿರಲಿಲ್ಲ.

14. ಇಲ್ಲಿ ಇನ್ನೊಂದು ವಿಷಯವನ್ನು ಹೇಳಬೇಕೆನಿಸುತ್ತದೆ. ಶ್ರೀರಾಮಕೃಷ್ಣರು ಧರ್ಮ-ಅಧರ್ಮ, ಪಾಪ-ಪುಣ್ಯ ಇತ್ಯಾದಿಗಳನ್ನು' ಅರ್ಪಿಸಿದರೂ. ತಾಯಿ, ಇಗೋ ನಿನ್ನ ಸತ್ಯವನ್ನು, ಇಗೊ ನಿನ್ನ ಅಸತ್ಯವನ್ನು' ಎಂದು ಅವರಿಗೆ ಹೇಳಲಾಗಲಿಲ್ಲ. ಇದಕ್ಕೆ ಕಾರಣವನ್ನು ಅವರೇ ನಮಗೆ ಹೇಳಿರುವರು : ''ಈ ರೀತಿ ಸತ್ಯವನ್ನೂ ತ್ಯಾಗಮಾಡಿದರೆ ಶ್ರೀಜಗನ್ಮಾತೆಗೆ ಸರ್ವಸ್ವವನ್ನೂ ಅರ್ಪಿಸಿರುವೆನು-ಎಂಬೀ ಸತ್ಯವನ್ನು ಹೇಗೆ ಉಳಿಸಿಕೊಳ್ಳುವುದು ?'' ಅವರು ಜಗನ್ಮಾತೆಗೆ ಎಲ್ಲವನ್ನೂ ಅರ್ಪಿಸಿದ್ದರೂ ಅವರ ಸತ್ಯನಿಷ್ಠೆಯಂತೂ ಅದ್ಭುತವಾದುದು. ಇಂಥ ದಿನ ಇಂಥ ಸಮಯದಲ್ಲಿ ಬರುತ್ತೇನೆಂದು ಹೇಳಿದರೆ ಅವರು ಆ ದಿನ ಅದೇ ಸಮಯಕ್ಕೆ ಸರಿಯಾಗಿ ಅಲ್ಲಿರುತ್ತಿದ್ದರು. ಯಾರಿಂದಲಾದರು ಯಾವುದೊ ಒಂದು ವಸ್ತುವನ್ನು ಪಡೆಯುತ್ತೇನೆಂದು ಹೇಳಿದರೆ ಅವರಿಂದ ಹೊರತು ಬೇರೆಯವರಿಂದ ಅದನ್ನು ಅವರಿಗೆ ಸ್ವೀಕರಿಸಲಾಗುತ್ತಿರಲಿಲ್ಲ. ಇನ್ನು ಈ ವಸ್ತುವನ್ನು ತಿನ್ನುವುದಿಲ್ಲ ಅಥವಾ ಈ ಕಾರ್ಯವನ್ನು ಮಾಡುವುದಿಲ್ಲ ಎಂದು ಹೇಳಿದರೆ ಮತ್ತೆ ಎಂದೂ ಅದನ್ನು ತಿನ್ನುತ್ತಿರಲಿಲ್ಲ, ಅಥವಾ ಆ ಕಾರ್ಯವನ್ನು ಮಾಡುತ್ತಿರಲಿಲ್ಲ. ಶ್ರೀರಾಮಕೃಷ್ಣರು ಹೇಳುತ್ತಿದ್ದರು : ''ಯಾರು ಸತ್ಯನಿಷ್ಠರೊ ಅವರು ಸತ್ಯಸ್ವರೂಪನಾದ ಭಗವಂತನನ್ನು ಪಡೆಯುತ್ತಾರೆ. ಯಾರಲ್ಲಿ ಸತ್ಯನಿಷ್ಠೆ ಇದೆಯೊ ತಾಯಿಯು ಅವರ ಮಾತನ್ನು ಎಂದೂ ಸುಳ್ಳಾಗುವಂತೆ ಮಾಡುವುದಿಲ್ಲ.'' ಇದಕ್ಕೆ ಎಷ್ಟೊ ದೃಷ್ಟಾಂತಗಳನ್ನು ನಾವು ಅವರ ಜೀವನದಲ್ಲಿ ನೋಡಿರುವೆವು. ಇವುಗಳಲ್ಲಿ ಕೆಲವನ್ನು ಓದುಗರ ಗಮನಕ್ಕೆ ತರುವುದು ಉಚಿತವಾಗಿದೆ.

15. ದಕ್ಷಿಣೇಶ್ವರದಲ್ಲಿ ಒಂದು ದಿನ ಪರಮ ಭಕ್ತೆಯಾದ ಗೋಪಾಲನ ತಾಯಿಯು ಶ್ರೀರಾಮಕೃಷ್ಣರಿಗೆ ಅಡಿಗೆಮಾಡಿ ಉಣಿಸುವುದರಲ್ಲಿದ್ದಳು. ಎಲ್ಲ ಅಣಿಯಾಗಿದೆ. ಶ್ರೀರಾಮಕೃಷ್ಣರು ಊಟಕ್ಕೆ ಕುಳಿತರು. ಆದರೆ ಅನ್ನ ಸರಿಯಾಗಿ ಬೆಂದಿರಲಿಲ್ಲ. ಶ್ರೀರಾಮಕೃಷ್ಣರು ಬೇಸರದಿಂದ, ''ಈ ಅನ್ನವನ್ನು ನಾನು ಹೇಗೆ ತಿನ್ನಲಿ ? ಅವಳ ಕೈಯಿಂದ ಇನ್ನು ಎಂದೂ ಅನ್ನ ತಿನ್ನುವುದಿಲ್ಲ'' ಎಂದು ಹೇಳಿ

ಬಿಟ್ಟರು. ಈ ಮಾತನ್ನು ಕೇಳಿ ಉಳಿದವರೆಲ್ಲ ಭಾವಿಸಿದರು : ಗೋಪಾಲನ ತಾಯಿ ಮುಂದೆ ಎಚ್ಚರಿಕೆಯಿಂದಿರಲೆಂದು ಇವರು ಹೇಳಿರುವರು, ಆಕೆಯನ್ನು ಅವರು ಅಷ್ಟೊಂದು ಪ್ರೀತಿಸುವುದರಿಂದ ಅವಳ ಕೈಯಿಂದ ಊಟಮಾಡುವುದಿಲ್ಲ ಎಂದು ಅವರು ಹೇಳಲು ಸಾಧ್ಯವೆ ? ಅನಂತರ ಅವಳನ್ನು ಕ್ಷಮಿಸುವರು, ಆ ಮಾತಿನಂತೆ ನಡೆಯುವುದಿಲ್ಲ ಎಂದು. ಆದರೆ ಹಾಗಾಗಲೇ ಇಲ್ಲ. ಇದಾದ ಕೆಲವೇ ದಿನಗಳಲ್ಲಿ ಶ್ರೀರಾಮಕೃಷ್ಣರ ಗಂಟಲು ಬೇನೆ ಶುರುವಾಯಿತು. ಅದು ಕ್ರಮೇಣ ಉಲ್ಬಣವಾಗಿ ಅವರು ಅನ್ನ ತಿನ್ನುವುದು ನಿಂತುಹೋಯಿತು. ಗೋಪಾಲನ ತಾಯಿಯ ಕೈಯಿಂದ ಮುಂದೆ ಎಂದೂ ಅನ್ನ ತಿನ್ನಲಾಗಲಿಲ್ಲ.

ಒಂದು ದಿನ ಶ್ರೀರಾಮಕೃಷ್ಣರು ಭಾವಾವಸ್ಥೆಯಲ್ಲಿ ಹೇಳಿದರು : "ಇಂದಿನಿಂದ ನಾನು ಇನ್ನೇನೂ ತಿನ್ನುವುದಿಲ್ಲ. ಕೇವಲ ಪಾಯಸ, ಕೇವಲ ಪಾಯಸ." ಶ್ರೀಮಾತೆಯವರು ಆಗ ಅವರಿಗೆ ಊಟ ತಂದುಕೊಡುತ್ತಿದ್ದರು. ಈ ಮಾತನ್ನು ಕೇಳಿ ಅವರು ಚಿಂತಿತರಾದರು. ಶ್ರೀರಾಮಕೃಷ್ಣರ ಬಾಯಿಯಿಂದ ಬಂದ ಮಾತು ಎಂದೂ ನಿರರ್ಥಕವಾಗುವುದಿಲ್ಲ ಎಂದು ಅವರಿಗೆ ಗೊತ್ತಿತ್ತು. ಅವರು ಭಯದಿಂದ ಹೇಳಿದರು : "ನಾನು ಅನ್ನ, ಮೀನಿನ ಸಾರು ಮಾಡಿ ತರುತ್ತೇನೆ. ಪಾಯಸ ಏತಕ್ಕೆ ?" "ಇಲ್ಲ ಪಾಯಸವೇ ಬೇಕು" ಎಂದು ಶ್ರೀರಾಮಕೃಷ್ಣರು ಒತ್ತಾಯಿಸಿದರು. ಇದಾದ ಸ್ವಲ್ಪ ಕಾಲದಲ್ಲಿಯೇ ಅವರ ಗಂಟಲು ಬೇನೆ ಪ್ರಾರಂಭವಾದದ್ದರಿಂದ ಬೇರೆ ಯಾವುದನ್ನೂ ಅವರಿಗೆ ಉಣ್ಣಲಾಗಲಿಲ್ಲ. ಕೇವಲ ಹಾಲನ್ನ, ಹಾಲು-ಬಾರ್ಲಿ ಇತ್ಯಾದಿಗಳನ್ನೇ ಉಂಡು ಕಾಲ ಕಳೆಯಬೇಕಾಯಿತು.

16. ಕಲಕತ್ತೆಯ ಶಂಭುಚಂದ್ರ ಮಲ್ಲಿಕನು ಶ್ರೀರಾಮಕೃಷ್ಣರ ಎರಡನೆಯ ರಸದ್ದಾರನಾಗಿದ್ದನು. ದಕ್ಷಿಣೇಶ್ವರದ ಕಾಳೀಮಂದಿರದ ಸಮೀಪದಲ್ಲಿಯೇ ಅವನ ಒಂದು ತೋಟವಿತ್ತು. ಅಲ್ಲಿ ಅವನು ಶ್ರೀರಾಮಕೃಷ್ಣರೊಡನೆ ಭಗವತ್ ಚರ್ಚೆಯಲ್ಲಿ ಬಹಳ ಸಮಯ ಕಳೆಯುತ್ತಿದ್ದ. ಅದೇ ತೋಟದಲ್ಲಿ ಅವನ ಒಂದು ಉಚಿತ ಔಷಧಾಲಯವೂ ಇತ್ತು. ಶ್ರೀರಾಮಕೃಷ್ಣರಿಗೆ ಹೊಟ್ಟೆ ಕೆಟ್ಟರೆ ಬಹಳ ಕಾಲ ಗುಣವಾಗುತ್ತಿರಲಿಲ್ಲ. ಒಮ್ಮೆ ಹೀಗೆ ಅವರಿಗೆ ಹೊಟ್ಟೆ ಕೆಟ್ಟಿತ್ತು. ಶಂಭುಮಲ್ಲಿಕನು ಅವರಿಗೆ ಸ್ವಲ್ಪ ಅಫೀಮನ್ನು ಸೇವಿಸಲು ಹೇಳಿ ರಾಸಮಣಿಯ ತೋಟಕ್ಕೆ ಹಿಂದಿರುಗುವಾಗ ಅದನ್ನು ಸ್ವಲ್ಪ ತೆಗೆದುಕೊಂಡು ಹೋಗಬೇಕೆಂದು ಸೂಚಿಸಿದನು. ಅದಕ್ಕೆ ಶ್ರೀರಾಮಕೃಷ್ಣರೂ ಒಪ್ಪಿದರು. ಇದಾದನಂತರ ಏನೇನೋ ಮಾತನಾಡುತ್ತ ಇಬ್ಬರೂ ಆ ವಿಷಯವನ್ನು ಮರೆತುಬಿಟ್ಟರು.

ಹಿಂದಿರುಗಿ ಬರುವಾಗ ಶ್ರೀರಾಮಕೃಷ್ಣರಿಗೆ ನೆನಪಾಯಿತು. ಅಫೀಮನ್ನು ತೆಗೆದುಕೊಂಡು ಬರೋಣವೆಂದು ಪುನಃ ಅವರು ಶಂಭುಮಲ್ಲಿಕನ ಔಷಧಾಲಯಕ್ಕೆ ಹೋದರು. ಆದರೆ ಅವನು ಆಗಲೆ ಒಳಗೆ ಹೊರಟುಹೋಗಿದ್ದ. ಮತ್ತೆ ಅವನನ್ನು ಕೇಳುವ ಆವಶ್ಯಕತೆಯಿಲ್ಲವೆಂದು ಆಳುಗಳಿಂದ ಸ್ವಲ್ಪ ಅಫೀಮನ್ನು ಕೇಳಿಸಿ ತೆಗೆದು

ಕೊಂಡು ಶ್ರೀರಾಮಕೃಷ್ಣರು ರಾಸಮಣಿಯ ತೋಟದ ಕಡೆ ಹೊರಟರು. ಆದರೆ ಆಶ್ಚರ್ಯವೇನೆಂದರೆ ಅವರ ಕಣ್ಣು ಮಬ್ಬಾಗಿ ದಾರಿಯೇ ಕಾಣದಾಯಿತು. ರಸ್ತೆಯ ಪಕ್ಕದಲ್ಲಿ ನೀರಿನ ಕಾಲುವೆಯಿತ್ತು. ಅದರಲ್ಲಿ ಅವರು ಜಾರಿ ಬೀಳುವವರಿದ್ದರು. ಅವರು ಚಿಂತಿಸತೊಡಗಿದರು : "ಇದೇನಿದು ? ಇದು ದಾರಿಯಲ್ಲ ! ನನಗೆ ದಾರಿಯೇ ಕಾಣಿಸುತ್ತಿಲ್ಲವಲ್ಲ !" ದಾರಿ ತಪ್ಪಿರಬೇಕೆಂದು ಹಿಂದಕ್ಕೆ ತಿರುಗಿ ಮತ್ತೆ ಶಂಭುಮಲ್ಲಿಕನ ತೋಟದ ಕಡೆ ನೋಡಿದರು. ಆ ಕಡೆಯ ದಾರಿ ಸ್ಪಷ್ಟವಾಗಿ ಕಾಣುತ್ತಿತ್ತು. ಶಂಭು ಮಲ್ಲಿಕನ ತೋಟದ ಗಡಿಗೆ ಬಂದು ಸರಿಯಾಗಿ ಯೋಚಿಸಿ ಪುನಃ ರಾಸಮಣಿಯ ತೋಟದ ಕಡೆ ಹೊರಟರು. ಒಂದೆರಡು ಹೆಜ್ಜೆ ಇಡುವಷ್ಟರಲ್ಲೇ ಮತ್ತೆ ದಾರಿ ಮರೆಯಾಯಿತು. ಅಡ್ಡದಾರಿಯಲ್ಲಿ ಕಾಲು ಎಳೆದುಕೊಂಡುಹೋಗುತ್ತಿತ್ತು. ಹೀಗೆ ಕೆಲವು ಬಾರಿ ಆದಮೇಲೆ ಶ್ರೀರಾಮಕೃಷ್ಣರ ಮನಸ್ಸಿಗೆ ಹೊಳೆಯಿತು : "ಶಂಭು ಹೇಳಿದ್ದ 'ನನ್ನಿಂದ ಅಫೀಮನ್ನು ತೆಗೆದುಕೊಂಡು ಹೋಗಿ' ಎಂದು. ನಾನು ಹಾಗೆ ಮಾಡದೆ ಅವನನ್ನು ಕೇಳದೆ ಕೆಲಸದವರಿಂದ ಅಫೀಮನ್ನು ತೆಗೆದುಕೊಂಡು ಬಂದೆ. ಆದ್ದರಿಂದಲೇ ತಾಯಿಯು ನನ್ನನ್ನು ಮುಂದೆ ಹೋಗಲು ಬಿಡುತ್ತಿಲ್ಲ. ಕೆಲಸದಾಳುಗಳು ಶಂಭುವಿನ ಅಪ್ಪಣೆಯಿಲ್ಲದೆ ಕೊಡಬಾರದಿತ್ತು. ನಾನೂ ಕೂಡ ಶಂಭು ಹೇಳಿದಂತೆ ಮಾಡದೆ ಅವರಿಂದ ತೆಗೆದುಕೊಳ್ಳಬಾರದಿತ್ತು. ನಾನೀಗ ಮಾಡುತ್ತಿರುವುದರಲ್ಲಿ ಸುಳ್ಳು ಕಳ್ಳತನ ಎರಡೂ ಇವೆ. ಇದಕ್ಕಾಗಿಯೇ ತಾಯಿಯು ನನ್ನನ್ನು ಈ ರೀತಿ ತಿರುಗಿಸುತ್ತಿದ್ದಾಳೆ, ಹಿಂದಿರುಗಿ ಹೋಗಲು ಬಿಡುತ್ತಿಲ್ಲ." ಹೀಗೆ ಯೋಚಿಸುತ್ತ ಶ್ರೀರಾಮಕೃಷ್ಣರು ಔಷಧಾಲಯಕ್ಕೆ ಹಿಂದಿರುಗಿ ಬಂದರು. ಆಗ ಅಲ್ಲಿ ಕೆಲಸದವರೂ ಇರಲಿಲ್ಲ, ಊಟಕ್ಕೆ ಹೊರಟುಹೋಗಿದ್ದರು. ಕಿಟಕಿಯ ಮೂಲಕ ಅಫೀಮನ್ನು ಒಳಗೆ ಎಸೆದು "ನೋಡು, ನಿನ್ನ ಅಫೀಮು ಇಲ್ಲಿದೆ," ಎಂದು ಹೇಳಿ ಮತ್ತೆ ರಾಸಮಣಿಯ ತೋಟದಕಡೆ ಮುಂದಡಿ ಇಟ್ಟರು. ಈಗ ಯಾವ ತೊಂದರೆಯೂ ಇಲ್ಲ. ದಾರಿ ಸ್ಪಷ್ಟವಾಗಿ ಕಾಣುತ್ತಿದೆ. ಬೇಗನೆ ನಡೆದುಕೊಂಡು ಹೋದರು. ಶ್ರೀರಾಮಕೃಷ್ಣರು ಹೇಳುತ್ತಿದ್ದರು : "ತಾಯಿಯ ಮೇಲೆ ಸಂಪೂರ್ಣ ಭಾರವನ್ನು ವಹಿಸಿರುವೆನಲ್ಲ ? ಆದ್ದರಿಂದ ಅವಳೇ ಕೈಹಿಡಿದು ನಡೆಸುತ್ತಿರುವಳು. ಸ್ವಲ್ಪವೂ ತಪ್ಪು ಹೆಜ್ಜೆ ಇಡಲು ಬಿಡುವುದಿಲ್ಲ."

ಈ ರೀತಿಯ ಎಷ್ಟೋ ಘಟನೆಗಳನ್ನು ನಾವು ಕೇಳಿರುವೆವು. ಎಂಥ ಆಶ್ಚರ್ಯ ! ಇಂಥ ಸತ್ಯನಿಷ್ಠೆಯನ್ನು, ಪೂರ್ಣ ನಿರ್ಭರತೆಯನ್ನು ನಾವು ಕಲ್ಪನೆಯ ಮೂಲಕ ವಾದರೂ ಅನುಭವಿಸಲು ಸಾಧ್ಯವೆ ? ಶ್ರೀರಾಮಕೃಷ್ಣರು ಈ ನಿರ್ಭರತೆಯನ್ನೇ ಒಂದು ರೂಪಕದ ಮೂಲಕ ವಿವರಿಸುತ್ತಿದ್ದರು : "ಆ ಗ್ರಾಮ (ಕಾಮಾರಪುಕುರ)ದಲ್ಲಿ ಹೊಲದ ಮಧ್ಯೆ ಅಂಚು ಇರುತ್ತದೆ. ಜನರು ಅದರ ಮೇಲೆ ನಡೆದು ಒಂದು ಹಳ್ಳಿ ಯಿಂದ ಮತ್ತೊಂದು ಹಳ್ಳಿಗೆ ಹೋಗುತ್ತಾರೆ. ಅಂಚು ತುಂಬ ಕಿರಿದಾದುದರಿಂದ ತಂದೆ ಚಿಕ್ಕ ಮಗುವನ್ನು ಹೆಗಲಮೇಲೆ ಕೂರಿಸಿಕೊಂಡು ಹೋಗುತ್ತಾನೆ. ಸ್ವಲ್ಪ ದೊಡ್ಡ ಮಗನು ತಾನೆ ತಂದೆಯ ಕೈಯನ್ನು ಹಿಡಿದುಕೊಂಡು ಹೋಗುತ್ತಾನೆ. ದಾರಿ

ಯಲ್ಲಿ ಬಿಳಿಯ ಹದ್ದನ್ನೊ ಅಥವಾ ಇನ್ನೇನಾದರೂ ಒಂದು ವಸ್ತುವನ್ನೊ ದೃಶ್ಯ ವನ್ನೊ ನೋಡಿ ಮಕ್ಕಳು ಆನಂದದಿಂದ ಚಪ್ಪಾಳೆ ತಟ್ಟುವುವು. ಹೆಗಲಮೇಲಿರುವ ಮಗುವಿಗೆ ಬೀಳುವ ಭಯವೇ ಇಲ್ಲ—ತಂದೆಯೇ ಅವನನ್ನು ಹಿಡಿದುಕೊಂಡಿರು ವುದರಿಂದ. ಆದರೆ ತಂದೆಯ ಕೈಯನ್ನು ಹಿಡಿದುಕೊಂಡು ಹೋಗುತ್ತಿರುವ ಮಗನು ದಾರಿಯನ್ನು ಮರೆತು ಚಪ್ಪಾಳೆ ಹೊಡೆಯಲು ತೊಡಗಿದ ಕೂಡಲೇ ಕೆಳಗೆ ಜಾರಿಬಿದ್ದು ಅಳತೊಡಗುತ್ತಾನೆ. ಹಾಗೆಯೇ ತಾಯಿ ಯಾರ ಕೈಯನ್ನು ಹಿಡಿದುಕೊಂಡಿರುವಳೊ ಅವರಿಗೆ ಭಯವಿದೆ—ಕೈಯನ್ನು ಬಿಟ್ಟರೆ ಬೀಳಬೇಕಾಗುತ್ತದೆ."

17. ಭಗವದ್ಭಕ್ತಿಯ ಪ್ರಭಾವದಿಂದ ಪ್ರಪಂಚದ ಯಾವ ವಸ್ತು ಅಥವಾ ವ್ಯಕ್ತಿಯ ಕಡೆಯೂ ಮನಸ್ಸು ಆಕರ್ಷಿತವಾಗದೆ ಇದ್ದುದರಿಂದ ಶ್ರೀರಾಮಕೃಷ್ಣರಿಗೆ ನಿರ್ವಿಕಲ್ಪ ಸ್ಥಿತಿಯನ್ನು ಮುಟ್ಟಲು ಯಾವ ಕಾಮನೆ ವಾಸನೆಗಳೂ ಅಡ್ಡಿಯಾಗಲಿಲ್ಲ. ಆದರೆ ಒಂದು ವಸ್ತು ಮಾತ್ರ ತಡೆಯಾಯಿತು. ಅದೇ 'ಸೌಮ್ಯಾ ಸೌಮ್ಯತರಾಶೇಷ ಸೌಮ್ಯೇಭ್ಯಸ್ತ್ವತಿಸುಂದರೀ'—ಇಂಥ ಶ್ರೀ ಜಗನ್ಮಾತೆಯ ಮೂರ್ತಿ—ಇಷ್ಟು ಕಾಲವೂ ಅತ್ಯಂತ ಭಕ್ತಿಯಿಂದ ಪೂಜಿಸಿದ ತಮ್ಮ ಸರ್ವಸ್ವವೆಂದು ಭಾವಿಸಿದ್ದ ಆ ಮಂಗಳ ಮೂರ್ತಿ. ಶ್ರೀರಾಮಕೃಷ್ಣರು ಹೇಳುತ್ತಿದ್ದರು : "ಮನಸ್ಸನ್ನು ಏಕಾಗ್ರಗೊಳಿಸಿದ ಕೂಡಲೇ ತಾಯಿಯ ಮೂರ್ತಿ ಮುಂದೆ ಬಂದು ನಿಲ್ಲುತ್ತಿತ್ತು. ಅದನ್ನೂ ತ್ಯಜಿಸಿ ಮುಂದೆ ಹೋಗುವ ಇಚ್ಛೆಯೇ ಆಗುತ್ತಿರಲಿಲ್ಲ. ಎಷ್ಟು ಬಾರಿ ಎಲ್ಲ ವಿಷಯಗಳನ್ನೂ ಅತ್ತಸರಿಸಿ ಮನಸ್ಸನ್ನು ನಿರಾಲಂಬಗೊಳಿಸಲು ಪ್ರಯತ್ನಿಸಿದರೂ ಮತ್ತೆ ಮತ್ತೆ ಹೀಗೆಯೇ ಆಗುತ್ತಿತ್ತು. ಕೊನೆಗೆ ಬಹಳ ಯೋಚಿಸಿ ಮನಸ್ಸನ್ನು ಗಟ್ಟಿಮಾಡಿಕೊಂಡು ಜ್ಞಾನವನ್ನೆ ಖಡ್ಗವೆಂದು ಭಾವಿಸಿ ಆ ಖಡ್ಗದಿಂದ ಆ ಮೂರ್ತಿಯನ್ನು ಮನಸ್ಸಿನಲ್ಲಿಯೇ ಕತ್ತರಿಸಿ ಹಾಕಿದೆ. ಆಗ ಮನಸ್ಸಿನಲ್ಲಿ ಏನೂ ಉಳಿಯಲಿಲ್ಲ. ಒಮ್ಮೆಲೇ ನಿರ್ವಿಕಲ್ಪ ಸಮಾಧಿಯಲ್ಲಿ ಮಗ್ನವಾಯಿತು." ನಮ್ಮ ಪಾಲಿಗೆ ಇದು ಅರ್ಥಹೀನವಾದ ಮಾತಿನಂತೆ ತೋರುತ್ತದೆ. ಇದಕ್ಕೆ ಕಾರಣ, ಶ್ರೀ ಜಗನ್ಮಾತೆಯ ಯಾವುದೇ ಮೂರ್ತಿಯನ್ನಾಗಲಿ ಅಥವಾ ಭಾವವನ್ನಾಗಲಿ ನಮ್ಮದನ್ನಾಗಿ ಮಾಡಿಕೊಂಡಿಲ್ಲ. ಯಾರನ್ನೂ ಪೂರ್ಣ ಹೃದಯದಿಂದ ಪ್ರೀತಿಸುವುದನ್ನು ಕಲಿತಿಲ್ಲ. ನಮ್ಮ ಎಲ್ಲ ಪ್ರೀತಿಯೂ ಶರೀರ ಮನಸ್ಸು ಗಳಿಗೇ ಸೀಮಿತವಾದುದು. ಆದ್ದರಿಂದಲೇ ಮೃತ್ಯುವಿಗೆ ಅಥವಾ ಮನಸ್ಸಿನ ಹಠಾತ್ ಪರಿವರ್ತನೆಗೆ ನಾವು ಅಷ್ಟೊಂದು ಹೆದರುವುದು. ಶ್ರೀರಾಮಕೃಷ್ಣರಿಗೆ ಹಾಗಿರಲಿಲ್ಲ. ಸಂಸಾರದಲ್ಲಿ ಶ್ರೀ ಜಗನ್ಮಾತೆಯ ಪಾದಪದ್ಮವೊಂದೇ ಅವರಿಗೆ ಸಾರ ಸರ್ವಸ್ವವಾಗಿತ್ತು; ಅವಳ ಪಾದಪದ್ಮವನ್ನು ಧ್ಯಾನಿಸುವುದು, ಅವಳ ಶ್ರೀಮೂರ್ತಿಯನ್ನು ಸೇವಿಸುವುದು ಇದರಲ್ಲಿಯೇ ಹಗಲಿರುಳು ತಮ್ಮ ಕಾಲವನ್ನು ಕಳೆಯುತ್ತಿದ್ದರು. ಅಂಥ ಮೂರ್ತಿ ಯನ್ನು ಮನಸ್ಸಿನಿಂದ ತೆಗೆದುಹಾಕಿಬಿಟ್ಟರೆ ಮನಸ್ಸು ಇನ್ನೇನನ್ನು ಅವಲಂಬಿಸಿ ಸಂಸಾರ ದಲ್ಲಿ ಉಳಿಯುತ್ತದೆ ? ಆದ್ದರಿಂದ ಆಲಂಬನವಿಲ್ಲದ ಅವರ ಮನಸ್ಸು ವೃತ್ತಿರಹಿತವಾಗಿ ನಿರ್ವಿಕಲ್ಪಾವಸ್ಥೆಯನ್ನು ತಲುಪಿತು. ಓದುಗರಿಗೆ ಇದನ್ನು ಅರ್ಥಮಾಡಿಕೊಳ್ಳಲು

ಕಷ್ಟವಾದರೂ ಕಲ್ಪಿಸಿಕೊಳ್ಳಲು ಪ್ರಯತ್ನಿಸಬಹುದು. ಆಗ ತಿಳಿಯುವುದು ಶ್ರೀರಾಮ ಕೃಷ್ಣರು ಶ್ರೀ ಜಗನ್ಮಾತೆಯನ್ನು ಎಷ್ಟರಮಟ್ಟಿಗೆ ತಮ್ಮವಳನ್ನಾಗಿ ಮಾಡಿಕೊಂಡಿದ್ದರು, ಎಷ್ಟು ಆಳವಾಗಿ ಆಕೆಯನ್ನು ಪ್ರೀತಿಸುತ್ತಿದ್ದರು ಎಂದು !

18. ಶ್ರೀರಾಮಕೃಷ್ಣರು ಈ ನಿರ್ವಿಕಲ್ಪ ಸಮಾಧಿಯಲ್ಲಿ ನಿರಂತರವಾಗಿ ಸುಮಾರು ಆರು ತಿಂಗಳು ಇದ್ದರು. ಶ್ರೀರಾಮಕೃಷ್ಣರು ಹೇಳುತ್ತಿದ್ದರು : "ಸಾಧಾರಣ ಜೀವಗಳು ಈ ಅವಸ್ಥೆಯನ್ನು ತಲುಪಿದರೆ ಮತ್ತೆ ಹಿಂದಿರುಗುವುದಿಲ್ಲ, ಇಪ್ಪತ್ತೊಂದು ದಿನದನಂತರ ಶರೀರವು ಒಣಗಿದ ಎಲೆಯಂತೆ ಬಿದ್ದುಹೋಗುತ್ತದೆ. ನಾನು ಇದರಲ್ಲಿ ಆರು ತಿಂಗಳು ಇದ್ದೆ. ಯಾವಾಗ ಹಗಲು ಆಗುತ್ತದೆ ಯಾವಾಗ ರಾತ್ರಿಯಾಗುತ್ತದೆ ಎಂಬುದರ ಪ್ರಜ್ಞೆಯೇ ಇರಲಿಲ್ಲ. ಸತ್ತವನ ಮೂಗು ಬಾಯಿಗಳನ್ನು ನೊಣಗಳು ಪ್ರವೇಶಿಸುವಂತೆ ಅವು ನನ್ನ ಮೂಗು ಬಾಯೊಳಗೆ ಹೋಗುತ್ತಿದ್ದವು. ಆದರ ಅರಿವೇ ನನಗಿರಲಿಲ್ಲ. ಕೂದಲು ಧೂಳಿನಿಂದ ಕೂಡಿ ಜಡೆ ಕಟ್ಟಿಕೊಂಡಿತ್ತು. ಶೌಚಾದಿಗಳು ನನಗರಿವಿಲ್ಲದೆಯೇ ಆಗುತ್ತಿದ್ದುವು. ಆ ಪರಿಸ್ಥಿತಿಯಲ್ಲಿ ದೇಹ ಬಿದ್ದುಹೋಗ ಬೇಕಾಗಿತ್ತು. ಆದರೆ ಆ ಸಮಯದಲ್ಲಿ ಒಬ್ಬ ಸಾಧು ಬಂದನು. ಅವನ ಕೈಯಲ್ಲಿ ಒಂದು ದೊಣ್ಣೆ ಇತ್ತು. ಅವನಿಗೆ ನನ್ನ ಸ್ಥಿತಿಯು ಅರಿವಾಯಿತು. ಈ ಶರೀರದಿಂದ ತಾಯಿಯ ಅನೇಕ ಕಾರ್ಯಗಳು ಆಗುವುದಿದೆ, ಇದನ್ನು ರಕ್ಷಿಸಿದರೆ ದೊಡ್ಡ ಲೋಕಹಿತ ಕಾರ್ಯ ಮಾಡಿದಂತಾಗುವುದು ಎಂದು ಅವನು ಭಾವಿಸಿದ. ಆದ್ದರಿಂದ ಊಟದ ಸಮಯದಲ್ಲಿ ಆಹಾರವನ್ನು ತಂದು ನನ್ನನ್ನು ಹೊಡೆದು ಪ್ರಜ್ಞೆ ಬರಿಸಲು ಪ್ರಯತ್ನಿಸುತ್ತಿದ್ದ. ಪ್ರಜ್ಞೆಬಂದರೆ ಸಾಕು ಆಹಾರವನ್ನು ಬಾಯಿಗೆ ತುರುಕಿಸುತ್ತಿದ್ದ. ಹೀಗೆ ಒಂದೊಂದು ದಿನ ಹೊಟ್ಟೆಗೆ ಅನ್ನ ಹೋಗುತ್ತಿತ್ತು, ಒಂದೊಂದು ದಿನ ಅದೂ ಇಲ್ಲ. ಇದೇ ರೀತಿ ಆರು ತಿಂಗಳು ಕಳೆಯಿತು. ಅನಂತರ ಒಂದು ದಿನ ತಾಯಿಯ ವಾಣಿ ಕೇಳಿಸಿತು : 'ಭಾವಮುಖದಲ್ಲಿರು. ಲೋಕಶಿಕ್ಷಣಕ್ಕಾಗಿ ಭಾವಮುಖದಲ್ಲಿರು'. ಇದಾದ ನಂತರ ಕಾಯಿಲೆ ಶುರುವಾಯಿತು—ರಕ್ತಬೇಧಿ, ವಿಪರೀತ ಹೊಟ್ಟೆನೋವು. ಸುಮಾರು ಆರು ತಿಂಗಳು ಈ ನೋವಿನಿಂದ ನರಳುತ್ತಿರಲು ಕ್ರಮೇಣ ಮನಸ್ಸು ಶರೀರಕ್ಕೆ ಇಳಿಯಿತು—ಸಾಧಾರಣ ವ್ಯಕ್ತಿಗಳಂತೆ ಪ್ರಜ್ಞೆ ಉಂಟಾಯಿತು. ಇಲ್ಲದಿದ್ದಿದ್ದರೆ ಮನಸ್ಸು ತನ್ನ ಪಾಡಿಗೆ ತಾನು ಓಡಿಹೋಗಿ ಆ ನಿರ್ವಿಕಲ್ಪ ಅವಸ್ಥೆಯಲ್ಲಿ ಮುಳುಗಿ ಬಿಡುತ್ತಿತ್ತು."

19. ಶ್ರೀರಾಮಕೃಷ್ಣರ ಶರೀರತ್ಯಾಗಕ್ಕೆ ಹತ್ತು ವರ್ಷಗಳ ಹಿಂದೆ ಅವರ ದರ್ಶನವನ್ನು ಪಡೆಯುವ ಸುಯೋಗವನ್ನು ಪಡೆದವರು ಹೇಳುತ್ತಾರೆ, ಆಗಲೂ ಶ್ರೀರಾಮಕೃಷ್ಣರ ಮಾತನ್ನು ಕೇಳುವ ಭಾಗ್ಯವೇ ದೊರೆಯುತ್ತಿರಲಿಲ್ಲವೆಂದು. ಇಪ್ಪತ್ತ ನಾಲ್ಕು ಗಂಟೆಯೂ ಭಾವಸಮಾಧಿಯಲ್ಲಿಯೇ ಇರುತ್ತಿದ್ದರೆ ಮಾತನಾಡುವವರು ಯಾರು. ನೇಪಾಲ ರಾಜ್ಯದ ಸರ್ಕಾರೀ ಅಧಿಕಾರಿಯಾದ ವಿಶ್ವನಾಥನ (ಶ್ರೀರಾಮ

ಕೃಷ್ಣರು ಇವನನ್ನು 'ಕ್ಯಾಪ್ಟನ್' ಎಂದು ಕರೆಯುತ್ತಿದ್ದರು) ಬಾಯಿಂದ ನಾವು ಕೇಳಿರುವೆವು, ನಿರಂತರವಾಗಿ ಮೂರು ಹಗಲು, ಮೂರು ರಾತ್ರಿ ಶ್ರೀರಾಮಕೃಷ್ಣರು ಸಮಾಧಿಯಲ್ಲಿ ಇದ್ದುದನ್ನು ಅವನು ನೋಡಿರುವನಂತೆ. ಅವನು ಇನ್ನೂ ಹೇಳುತ್ತಾನೆ : ಈ ರೀತಿ ದೀರ್ಘಕಾಲ ಸಮಾಧಿ ಉಂಟಾದಾಗ ಶ್ರೀರಾಮಕೃಷ್ಣರ ಪುಣ್ಯ ದೇಹಕ್ಕೆ ಕುತ್ತಿಗೆಯಿಂದ ಬೆನ್ನಿನ ಕೆಳತುದಿಯವರೆಗೆ ಮತ್ತು ಮೊಳಕಾಲಿನಿಂದ ಪಾದದವರೆಗೆ ಮೇಲಿನಿಂದ ಕೆಳಗೆ ಹಸುವಿನ ತುಪ್ಪವನ್ನು ಆಗಾಗ ಸವರಲಾಗುತ್ತಿತ್ತು. ಈ ರೀತಿ ಮಾಡಿದಾಗ ಸಮಾಧಿಯ ಉಚ್ಚ ಭೂಮಿಯಿಂದ ಅಹಂ ರಾಜ್ಯಕ್ಕೆ ಮತ್ತೆ ಇಳಿದುಬರಲು ಅವರಿಗೆ ಅನುಕೂಲವಾಗುತ್ತಿತ್ತಂತೆ.

20. ಶ್ರೀರಾಮಕೃಷ್ಣರು ಸ್ವತಃ ನಮಗೆ ಅನೇಕ ಬಾರಿ ಹೇಳಿರುವರು : "ಇಲ್ಲಿಯ (ನನ್ನ) ಮನಸ್ಸಿನ ಸ್ವಾಭಾವಿಕ ಗತಿಯೇ ಊರ್ಧ್ವಮುಖಿ (ನಿರ್ವಿಕಲ್ಪದ ಕಡೆ). ಸಮಾಧಿಯುಂಟಾದರೆ ಮತ್ತೆ ಕೆಳಗಿಳಿಯಲು ಒಪ್ಪುವುದಿಲ್ಲ. ನಿಮ್ಮೆಲ್ಲರಿಗಾಗಿ ಒತ್ತಾಯಪೂರ್ವಕವಾಗಿ ಅದನ್ನು ಕೆಳಗೆಳೆಯುತ್ತೇನೆ. ಯಾವುದಾದರೂ ಕೆಳಮಟ್ಟದ ಆಸೆಯನ್ನು ಇಟ್ಟುಕೊಳ್ಳದಿದ್ದರೆ ಅದನ್ನು ಕೆಳಗಿಳಿಸುವುದು ಕಷ್ಟ. ಅದಕ್ಕಾಗಿಯೇ 'ತಾಂಬೂಲ ತಿನ್ನುತ್ತೇನೆ', 'ತಿಂಡಿ ತಿನ್ನುತ್ತೇನೆ', 'ಆ ವ್ಯಕ್ತಿಯನ್ನು ನೋಡುತ್ತೇನೆ', 'ಮಾತನಾಡುತ್ತೇನೆ'—ಹೀಗೆ ಯಾವುದಾದರೂ ಆಸೆಯನ್ನು ಮನಸ್ಸಿನಲ್ಲಿ ಏಳಿಸಿ ಮತ್ತೆ ಮತ್ತೆ ಅದನ್ನು ಒತ್ತಿ ಹೇಳುವುದರ ಮೂಲಕ ಮನಸ್ಸನ್ನು ಮೆಲ್ಲಗೆ ಕೆಳಗಿಳಿಸಬೇಕು. ಕೆಳಗಿಳಿಯುತ್ತಿದ್ದಂತೆಯೇ ಪುನಃ ಮೇಲೆ ಓಡಿಹೋಗಬಹುದು. ಮತ್ತೆ ಅದನ್ನು ಆಸೆಯ ಮೂಲಕ ಎಳೆದು ತರಬೇಕು." ಎಂಥ ಆಶ್ಚರ್ಯ ! ಇದನ್ನು ಕೇಳಿ ನಾವು ಸ್ತಂಭೀಭೂತರಾಗುತ್ತಿದ್ದೆವು. "ಅದ್ವೈತಜ್ಞಾನವನ್ನು ಅಂಚಿನ ತುದಿ ಕಟ್ಟಿಕೊಂಡು ನಿನಗಿಷ್ಟ ಬಂದಂತೆ ಮಾಡು"—ಈ ಮಾತಿನ ಅರ್ಥ ಅದೇ ಇರಬೇಕು. ಆದರೆ ನಮ್ಮ ಜೀವನದಲ್ಲಿ ಈ ರೀತಿ ಆಗಲು ಸಾಧ್ಯವೆ ? ಅವರಿಗೆ ಶರಣಾಗತರಾಗಿ ಅವರ ಅನುಗ್ರಹಕ್ಕಾಗಿ ಕಾದುಕೊಂಡಿರುವುದೊಂದೇ ನಮಗಿರುವ ಉಪಾಯ ಎಂದೆನಿಸುತ್ತದೆ. ಆ ರೀತಿ ಮಾಡಿದಾಗಲೂ ಕೆಲವುದಿನಗಳನಂತರ ಮತ್ತೆ ಮನಸ್ಸು ಚಂಚಲವಾಗುವುದು. ಈ ಮಾರ್ಗವನ್ನು ಹಿಡಿದು ಹೋಗುವಾಗಲೂ ದುಷ್ಟ ಮನಸ್ಸು ಆಗಾಗ ಹೇಳುತ್ತದೆ : ಶ್ರೀರಾಮಕೃಷ್ಣರು ಎಲ್ಲರಿಗಿಂತ ಹೆಚ್ಚಾಗಿ ನನ್ನನ್ನು ಪ್ರೀತಿಸುವುದಿಲ್ಲವೇಕೆ ? ನರೇಂದ್ರನನ್ನು ಪ್ರೀತಿಸುವಷ್ಟು ಅವರು ನನ್ನನ್ನು ಪ್ರೀತಿಸುತ್ತಿಲ್ಲವಲ್ಲ ? ನಾನು ಅವನಿಗಿಂತ ಕಮ್ಮಿಯೇನು ? ಈ ಮಾತು ಇಲ್ಲಿಗೇ ಸಾಕು, ಹಿಂದಿನ ವಿಷಯವನ್ನು ಅನುಸರಿಸೋಣ.

21. ಉಚ್ಚ ಭಾವ ಮತ್ತು ಸಮಾಧಿಯ ವಿಷಯದಲ್ಲಿ ನಾವು ಶ್ರೀರಾಮಕೃಷ್ಣರಿಂದ ಏನು ಕೇಳಿ ತಿಳಿದುಕೊಂಡಿರುವೆವೊ ಅದರ ಆಧಾರದಮೇಲೆ 'ಭಾವಮುಖ' ಅವಸ್ಥೆ ಎಂಬುದನ್ನು ಇಲ್ಲಿ ವಿವರಿಸಲು ಪ್ರಯತ್ನಿಸುತ್ತೇವೆ. ಮೇಲ್ಮಟ್ಟದ ಅಥವಾ ಕೆಳಮಟ್ಟದ ಯಾವುದೇ ಭಾವ ಮನಸ್ಸನ್ನು ಪ್ರವೇಶಿಸಿದರೂ ಒಂದಲ್ಲ ಒಂದು ರೀತಿಯ

ಶಾರೀರಿಕ ಪರಿವರ್ತನೆ ಉಂಟಾಗುವುದು. ಇದು ಪ್ರತಿನಿತ್ಯ ನಮಗೆ ತಿಳಿದುಬರುವ ವಿಷಯ. ಕ್ರೋಧವುಂಟಾದಾಗ ಒಂದು ಬಗೆ, ಪ್ರೀತಿ ಉಂಟಾದಾಗ ಒಂದು ಬಗೆ ಹೀಗೆ ಒಂದೊಂದು ಭಾವವೂ ಒಂದೊಂದು ಬಗೆಯ ದೈಹಿಕ ಪರಿಣಾಮವನ್ನುಂಟು ಮಾಡುವುದು. ಕೆಟ್ಟ ಅಥವಾ ಒಳ್ಳೆಯ ಭಾವನೆಗಳನ್ನು ತೀವ್ರವಾಗಿ ಚಿಂತಿಸುವುದರಿಂದ ಶರೀರದಲ್ಲಿ ಎಂಥ ಪರಿವರ್ತನೆ ಉಂಟಾಗುವುದೆಂದರೆ ವ್ಯಕ್ತಿಯನ್ನು ನೋಡಿದ ಕೂಡಲೆ ಅವನು ಎಂಥ ಸ್ವಭಾವದವನೆಂದು ಹೇಳಬಹುದು. ಯಾವುದಾದರು ವ್ಯಕ್ತಿಯನ್ನು ನೋಡಿದಾಗ ಅವನು ಕಾಮುಕನೆ ಅಥವಾ ಸಾಧುವೇ ಎಂಬುದನ್ನು ಹೇಳಬಹುದು. ಇದು ದಿನನಿತ್ಯ ನಮಗೆ ಅನುಭವಕ್ಕೆ ಬರುವ ವಿಷಯ. ದಾನವ ಸ್ವಭಾವದ ವಿಕಟಾ ಕೃತಿಯ ವ್ಯಕ್ತಿಯು ಒಂದು ವೇಳೆ ನಿರಂತರ ಆರು ತಿಂಗಳು ಸತ್‌ಚಿಂತನೆಯಲ್ಲಿ ಕಾಲ ಕಳೆದರೆ ಅವನ ರೂಪವೇ ಬದಲಾಗುವುದು, ಅವನು ಕೋಮಲ ಸ್ವಭಾವದವನಾಗುವನು. ಇದನ್ನೂ ನಾವು ಪ್ರತ್ಯಕ್ಷವಾಗಿ ಕಾಣಬಹುದು. ಪಾಶ್ಚಾತ್ಯ ಶರೀರವಿಜ್ಞಾನಿಗಳು ಹೇಳು ತ್ತಾರೆ : ನೀವು ಯಾವುದೇ ರೀತಿಯ ಭಾವನೆಯನ್ನು ಚಿಂತಿಸಿದರೂ ಅದು ಮಿದುಳಿನಲ್ಲಿ ಶಾಶ್ವತವಾದ ಗುರುತನ್ನು ಉಂಟುಮಾಡುವುದು. ಈ ರೀತಿ ಒಳಿತು ಕೆಡುಕುಗಳ ಗುರುತುಗಳಿಂದ ನಿಮ್ಮ ಚಾರಿತ್ರ್ಯ ಉಂಟಾಗುವುದು. ಇದಕ್ಕನುಗುಣವಾಗಿ ನೀವು ಒಳ್ಳೆಯವರಾಗಿರಬಹುದು ಅಥವಾ ಕೆಟ್ಟವರಾಗಿರಬಹುದು.

22. ಭಾರತದ ಯೋಗಿಗಳು ಹೇಳುತ್ತಾರೆ : ಈ ಎರಡು ರೀತಿಯ ಭಾವನೆ ಗಳು ಮಿದುಳಿನಲ್ಲಿ ಎರಡು ರೀತಿಯ ಗುರುತುಗಳನ್ನು ಉಂಟುಮಾಡುವುದು ಮಾತ್ರ ವಲ್ಲದೆ ಮುಂದೆ ನಾವು ಮತ್ತೆ ಒಳ್ಳೆಯ ಅಥವಾ ಕೆಟ್ಟ ಕರ್ಮಗಳನ್ನು ಮಾಡಲು ಪ್ರೇರೇಪಿಸುತ್ತವೆ. ಈ ಪ್ರೇರಣಾಶಕ್ತಿಯು ಮೂಲಾಧಾರದಲ್ಲಿ ನೆಲೆಸಿರುವುದು. ಜನ್ಮ ಜನ್ಮಾಂತರಗಳಿಂದ ಸಂಚಿತವಾದ ಎಲ್ಲ ಪ್ರೇರಣಾಶಕ್ತಿಗಳ ವಾಸಭೂಮಿ ಅದು. ಇದನ್ನೇ ನಾವು ಸಂಸ್ಕಾರ ಅಥವಾ ಪೂರ್ವಸಂಸ್ಕಾರ ಎಂದು ಕರೆಯುತ್ತೇವೆ. ಇವುಗಳೆಲ್ಲ ಸಂಪೂರ್ಣ ನಾಶವಾಗುವುದು ಭಗವತ್ ಸಾಕ್ಷಾತ್ಕಾರದಿಂದ ಅಥವಾ ನಿರ್ವಿಕಲ್ಪ ಸಮಾಧಿ ಯಿಂದ. ಇಲ್ಲದಿದ್ದರೆ ಒಂದು ದೇಹದಿಂದ ಮತ್ತೊಂದು ದೇಹವನ್ನು ಪ್ರವೇಶಿಸುವಾಗ ಜೀವನು ಎಲ್ಲ ಸಂಸ್ಕಾರಗಳನ್ನೂ, ಗಾಳಿಯು ಗಂಧವನ್ನು ಹೊತ್ತುಕೊಂಡು ಹೋಗು ವಂತೆ, ತನ್ನೊಡನೆ ತೆಗೆದುಕೊಂಡು ಹೋಗುವನು.

23. ಅದ್ವೈತಜ್ಞಾನ ಅಥವಾ ಭಗವಂತನ ಪ್ರತ್ಯಕ್ಷ ದರ್ಶನವನ್ನು ಪಡೆಯುವು ದಕ್ಕೆ ಮುಂಚೆ ದೇಹ ಮತ್ತು ಮನಸ್ಸುಗಳ ನಡುವೆ ಒಂದು ಘನಿಷ್ಠವಾದ ಸಂಬಂಧ ವಿರುತ್ತದೆ. ಶರೀರಕ್ಕೆ ಏನಾದರು ಆದರೆ ಅದು ಮನಸ್ಸಿಗೆ ಆಘಾತ ಉಂಟಾಗುವುದು, ಹಾಗೂ ಮನಸ್ಸಿಗೇನಾದರೂ ಆದರೆ ಅದು ಶರೀರದ ಮೇಲೆ ಪರಿಣಾಮವನ್ನುಂಟು ಮಾಡುವುದು. ವ್ಯಕ್ತಿಯ ದೇಹ ಮನಸ್ಸುಗಳಂತೆಯೇ ಸಮಗ್ರ ಮನುಷ್ಯ ಜಾತಿಯ, ಅಂದರೆ ಸಮಷ್ಟಿ ದೇಹ ಮನಸ್ಸುಗಳ ನಡುವೆಯೂ ಇದೇ ಪ್ರಕಾರ ಸಂಬಂಧವಿದೆ. ನಿಮ್ಮ ದೇಹ–ಮನಸ್ಸುಗಳ ಆಘಾತ ಪ್ರತಿಘಾತಗಳು ನನ್ನ ಮತ್ತು ಇತರರ ದೇಹ

ಮನಸ್ಸುಗಳ ಮೇಲೆ ಪರಿಣಾಮವನ್ನುಂಟುಮಾಡುವುವು. ಹೀಗೆ ಒಳಗಿನ ಹೊರಗಿನ, ಸೂಕ್ಷ್ಮ ಸ್ಥೂಲ ಜಗತ್ತುಗಳ ನಡುವೆ ನಿತ್ಯ ಸಂಬಂಧವಿದೆ. ಅವುಗಳಲ್ಲಿ ಪರಸ್ಪರ ಕ್ರಿಯೆ ಪ್ರತಿಕ್ರಿಯೆಗಳಿವೆ. ಆದ್ದರಿಂದಲೇ ಎಲ್ಲಿ ಎಲ್ಲರೂ ಶೋಕಿಸುತ್ತಿರುವರೊ ಅಲ್ಲಿಗೆ ಹೋದರೆ ನಿಮಗೂ ಶೋಕ ಉಂಟಾಗುವುದು. ಎಲ್ಲಿ ಎಲ್ಲರೂ ಭಕ್ತಿವಂತರಾಗಿರುತ್ತಾರೊ ಅಲ್ಲಿದ್ದರೆ ನಿಮ್ಮಲ್ಲಿಯೂ ತಾನೇ ತಾನಾಗಿ ಭಕ್ತಿಭಾವ ಉದಯಿಸುವುದು. ಇದೇ ರೀತಿ ಇತರ ವಿಷಯದಲ್ಲಿಯೂ.

24. ದೈಹಿಕ ವ್ಯಾಧಿ ಮತ್ತು ಸ್ವಾಸ್ಥ್ಯಗಳಂತೆಯೇ ಮಾನಸಿಕ ವಿಕಾರಗಳು ಅಥವಾ ಭಾವಗಳು ಕೂಡ ಸಾಂಕ್ರಾಮಿಕ. ಅವುಗಳೂ ವ್ಯಕ್ತಿಗಳ ಮನೋಧರ್ಮಕ್ಕನುಗುಣವಾಗಿ ಹರಡುತ್ತವೆ. ಆದ್ದರಿಂದಲೇ ಭಗವದ್ಭಕ್ತಿಯನ್ನು ಉದ್ದೀಪನಗೊಳಿಸಲು ಸಾಧುಸಂಗದ ಆವಶ್ಯಕತೆಯನ್ನು ಶಾಸ್ತ್ರಗಳು ಅಷ್ಟೊಂದು ಒತ್ತಿಹೇಳುತ್ತವೆ. ಆದ್ದರಿಂದಲೇ ಶ್ರೀರಾಮಕೃಷ್ಣರು ತಮ್ಮೆಡೆಗೆ ಒಮ್ಮೆ ಬಂದವರಿಗೆ ಹೇಳುತ್ತಿದ್ದರು : "ಇಲ್ಲಿಗೆ ಆಗಾಗ ಬಂದುಹೋಗುತ್ತಿರು, ಮೊದಮೊದಲು ಇಲ್ಲಿಗೆ ಹೆಚ್ಚು ಹೆಚ್ಚು ಬಂದು ಹೋಗುವುದನ್ನು ಇಟ್ಟುಕೊಳ್ಳಬೇಕು."

25. ಸಾಧಾರಣ ಭಾವಗಳಂತೆ ತೀವ್ರ ಭಗವದನುರಾಗದಿಂದಲೂ ಅಪೂರ್ವ ಶಾರೀರಿಕ ಪರಿವರ್ತನೆಗಳುಂಟಾಗುವುವು. ಸಾಧಕನಿಗೆ ರೂಪರಸಾದಿಗಳ ಕಡೆ ಆಕರ್ಷಣೆ ಕಡಮೆಯಾಗುವುದು. ಅವನು ಮಿತಾಹಾರಿಯಾಗುವನು, ಅವನ ನಿದ್ರೆ ಕಡಮೆಯಾಗುವುದು. ಯಾವುದೋ ಒಂದು ಆಹಾರವಸ್ತುವಿನಲ್ಲಿ ರುಚಿಯುಂಟಾಗಿ ಉಳಿದ ಆಹಾರ ವಸ್ತುಗಳು ರುಚಿಸದಾಗುತ್ತವೆ. ಭಗವಂತನಿಂದ ವಿಮುಖಗೊಳಿಸುವ ಎಲ್ಲ ರೀತಿಯ ಪ್ರಾಪಂಚಿಕ ಸಂಬಂಧಗಳನ್ನೂ ಅವನು ವಿಷದಂತೆ ಪರಿತ್ಯಜಿಸಲು ಬಯಸುತ್ತಾನೆ.

ಶ್ರೀರಾಮಕೃಷ್ಣರು ಹೇಳುತ್ತಿದ್ದರು : "ಪ್ರಾಪಂಚಿಕ ವ್ಯಕ್ತಿಗಳ ಗಾಳಿಯನ್ನೂ ನನಗೆ ಸಹಿಸಲಾಗುತ್ತಿರಲಿಲ್ಲ. ನೆಂಟರಿಷ್ಟರ ಸಂಸರ್ಗದಿಂದ ಉಸಿರುಕಟ್ಟಿದಂತಾಗುತ್ತಿತ್ತು. ಯಾರು ಭಗವಂತನನ್ನು ನಿಜವಾದ ವ್ಯಾಕುಲತೆಯಿಂದ ಕರೆಯುವರೊ ಅವರ ಶರೀರದ ಮಹಾವಾಯುವು ದಡದಡನೆ ಮೇಲೇರಿ ಹೋಗಿ ತಲೆಯನ್ನು ತಲುಪಿಯೇ ತಲುಪುವುದು."

ಭಗವದನುರಾಗದಿಂದ ಯಾವ ರೀತಿ ಮಾನಸಿಕ ಭಾವ ಪರಿವರ್ತನೆಗಳು ಉಂಟಾಗುವುವೊ ಅವಕ್ಕನುಗುಣವಾದ ಶಾರೀರಿಕ ಪ್ರತಿಕೃತಿ ಅಥವಾ ರೂಪಗಳೂ ಇವೆ. ಮಾನಸಿಕ ದೃಷ್ಟಿಯಿಂದ ಈ ಎಲ್ಲ ಭಾವಗಳನ್ನು ವೈಷ್ಣವ ಶಾಸ್ತ್ರಗಳು ಶಾಂತ, ದಾಸ್ಯ, ಸಖ್ಯ, ವಾತ್ಸಲ್ಯ ಮತ್ತು ಮಧುರ—ಎಂದು ಐದು ಭಾಗಗಳಾಗಿ ವಿಂಗಡಿಸುತ್ತವೆ. ಇವುಗಳಿಗನುಗುಣವಾದ ಶಾರೀರಿಕ ಪರಿವರ್ತನೆಯ ವಿಚಾರವು ಯೋಗಶಾಸ್ತ್ರದ ಕುಂಡಲಿನೀ ಶಕ್ತಿಗೆ ಸಂಬಂಧಿಸಿದ ಷಟ್ಚಕ್ರವರ್ಣನೆಯಲ್ಲಿ ಬರುವುದು.

26. ಕುಂಡಲೀ ಅಥವಾ ಕುಂಡಲಿನೀ ಶಕ್ತಿಯ ಸಂಕ್ಷಿಪ್ತ ಪರಿಚಯವನ್ನು ಮೊದಲೇ ನೀಡಿದ್ದೇವೆ. ಈ ಜನ್ಮದಲ್ಲಿ ಮತ್ತು ಹಿಂದಿನ ಜನ್ಮದಲ್ಲಿ ಉಂಟಾದ ಎಲ್ಲ

ಮಾನಸಿಕ ಪರಿವರ್ತನೆ ಅಥವಾ ಭಾವಗಳು ಪ್ರಬಲ ಪ್ರೇರಣಾಶಕ್ತಿಯಾಗಿ ಸೂಕ್ಷ್ಮ ಶಾರೀರಿಕ ಪ್ರತಿಕೃತಿಯನ್ನು ಅವಲಂಬಿಸಿಕೊಂಡು ಉಳಿಯುವುವು. ಇದನ್ನೇ ಯೋಗಿಗಳು ಕುಂಡಲಿನೀ ಎಂದು ಕರೆಯುವುದು. ಬದ್ಧಜೀವಿಗಳಲ್ಲಿ ಇದು ಸುಪ್ತಾವಸ್ಥೆಯಲ್ಲಿರುತ್ತವೆ. ಇದರ ಪ್ರಭಾವದಿಂದಲೇ ಸ್ಮೃತಿ ಕಲ್ಪನೆಗಳು ಉಂಟಾಗುತ್ತವೆ. ಇದು ಯಾವುದಾದರೂ ರೀತಿಯಲ್ಲಿ ಸಂಪೂರ್ಣ ಜಾಗ್ರತವಾದರೆ ಜೀವನದಲ್ಲಿ ಭಗವತ್ಸಾಕ್ಷಾತ್ಕಾರವನ್ನು ಪಡೆಯುವ ಪ್ರೇರಣೆ ಉಂಟಾಗುವುದು. ಸುಪ್ತಾವಸ್ಥೆಯಲ್ಲಿರುವ ಕುಂಡಲಿನೀ ಶಕ್ತಿಯಿಂದ ಸ್ಮೃತಿ ಕಲ್ಪನೆಗಳು ಹೇಗೆ ಉಂಟಾಗುತ್ತವೆ ಎಂದು ನೀವು ಕೇಳಬಹುದು. ಅದಕ್ಕೆ ಉತ್ತರ : ಆ ಶಕ್ತಿ ಸುಪ್ತವಾಗಿದ್ದರೂ ಬಾಹ್ಯ ಇಂದ್ರಿಯ ವಿಷಯಗಳು ಮನಸ್ಸನ್ನು ತಾಕಿದಾಗ ಅದು ಅಲ್ಪ ಸ್ವಲ್ಪ ಚೇತನವನ್ನು ಪಡೆಯುವುವು. ಇದು ನಿದ್ರಿಸಿದ ವ್ಯಕ್ತಿಯ ಮೈಮೇಲೆ ಸೊಳ್ಳೆ ಕುಳಿತುಕೊಂಡಾಗ ಅವನ ಕೈ ಅನೈಚ್ಛಿಕವಾಗಿ ಅದನ್ನು ಹೊಡೆಯುವಂತೆ, ಇಲ್ಲವೆ ಆ ಜಾಗವನ್ನು ತುರಿಸುವಂತೆ.

27. ಶಿರೋ ಮಧ್ಯದಲ್ಲಿರುವ ಬ್ರಹ್ಮರಂಧ್ರದ ಆಕಾಶದಲ್ಲಿ ಅಖಂಡ ಸಚ್ಚಿದಾನಂದ ಪರಮಾತ್ಮನು ಜ್ಞಾನರೂಪದಲ್ಲಿ ನೆಲೆಸಿರುವನು ಎಂದು ಯೋಗಿಗಳು ಹೇಳುತ್ತಾರೆ. ಮೇಲೆ ಹೇಳಿದ ಕುಂಡಲಿನೀ ಶಕ್ತಿಯನ್ನು ಪರಮಾತ್ಮನು ಆಕರ್ಷಿಸುತ್ತಿರುವನು. ಆದರೆ ಅದು ಜಾಗ್ರತವಾಗಿರದೆ ಇರುವುದರಿಂದ ಈ ಆಕರ್ಷಣೆಯನ್ನು ಅದು ಅನುಭವಿಸುತ್ತಿಲ್ಲ. ಅದು ಜಾಗ್ರತವಾದ ಕೂಡಲೇ ಆ ಆಕರ್ಷಣೆಯ ಬಲದಿಂದ ಅದು ಭಗವಂತನೆಡೆಗೆ ಸೆಳೆಯಲ್ಪಡುವುದು. ಅದು ಭಗವಂತನೆಡೆಗೆ ಹೋಗುವ ಹಾದಿಯೂ ನಮ್ಮ ಶರೀರದಲ್ಲಿದೆ. ಈ ಮಾರ್ಗವು ಶಿರಸ್ಸಿನಿಂದ ಪ್ರಾರಂಭವಾಗಿ ಬೆನ್ನೆಲುಬಿನ ಮೂಲಕ ಅದರ ಕೆಳತುದಿಯಲ್ಲಿರುವ ಮೂಲಾಧಾರದವರೆಗೆ ಇರುವುದು. ಇದನ್ನೇ ಯೋಗಿಗಳು ಸುಷುಮ್ನಾನಾಳ ಎಂದು ಕರೆಯುತ್ತಾರೆ. ಪಾಶ್ಚಾತ್ಯ ಶರೀರಶಾಸ್ತ್ರಜ್ಞರು ಇದನ್ನು canal centralis (ಮಧ್ಯನಾಲೆ) ಎಂದು ಕರೆಯುತ್ತಾರೆ. ಆದರೆ ಇದರ ಯಾವುದೇ ರೀತಿಯ ಅವಶ್ಯಕತೆಯನ್ನಾಗಲಿ ಅಥವಾ ಕ್ರಿಯೆಯನ್ನಾಗಲಿ ಇದುವರೆಗೆ ಅವರು ಕಂಡು ಹಿಡಿದಿಲ್ಲ. ಈ ಮಾರ್ಗದ ಮೂಲಕವೇ ಕುಂಡಲಿನಿಯು ಹಿಂದೆ ಪರಮಾತ್ಮನಿಂದ ಬೇರೆಯಾಗಿ ಕೆಳಗಿಳಿದು ಬಂದು ಮೂಲಾಧಾರದಲ್ಲಿ ಈಗ ನಿದ್ರಿಸುತ್ತಿರುವುದು. ಮತ್ತೆ ಅದು ಅದೇ ಮಾರ್ಗದಲ್ಲಿ ಬರುವ ಆರು ಚಕ್ರಗಳ* ಮೂಲಕ ಊರ್ಧ್ವಮುಖವಾಗಿ ಹಾದು ಹೋಗಿ ಪುನಃ ಪರಮಾತ್ಮನೊಡನೆ ಒಂದಾಗುವುದು. ಕುಂಡಲಿನಿಯು ಒಂದೊಂದು ಚಕ್ರವನ್ನು ತಲುಪಿದಾಗಲೂ ಜೀವನಿಗೆ ಒಂದೊಂದು ಬಗೆಯ ಅನುಭವಗಳಾಗುವುವು. ಅದು ಶಿರದಲ್ಲಿರುವ ಸಹಸ್ರಾರವನ್ನು ತಲುಪಿದಾಗ ಆಧ್ಯಾತ್ಮಿಕವಿಜ್ಞಾನದ ಚರಮಾವಸ್ಥೆಯಾದ ಅದ್ವೈತಾನುಭವ ಉಂಟಾಗುವುದು. ಆಗ ಸಾಧಕನು ತನ್ನ ವಿಶಿಷ್ಟಭಾವದ ಪರಮಾವಸ್ಥೆಯನ್ನು ಪಡೆಯುತ್ತಾನೆ. ಅಂದರೆ ಯಾವ ಮಹಾಭಾವವನ್ನು ಅವಲಂಬಿಸಿ

---

* ಮೂಲಾಧಾರ, ಸ್ವಾಧಿಷ್ಠಾನ, ಮಣಿಪುರ, ಅನಾಹತ, ವಿಶುದ್ಧ ಮತ್ತು ಆಜ್ಞಾ

ಬೇರೆ ಎಲ್ಲ ಭಾವಗಳೂ ಮನಸ್ಸಿನಲ್ಲಿ ಉದಯಿಸುತ್ತಿದ್ದವೊ ಅಂತಹ 'ಭಾವಾತೀತ ಭಾವ'ದಲ್ಲಿ ಅವನು ಲೀನವಾಗುತ್ತಾನೆ.

28. ಈ ಜಟಿಲ ವಿಷಯವನ್ನು ಶ್ರೀರಾಮಕೃಷ್ಣರು ಎಷ್ಟೊಂದು ಸರಳ ರೀತಿಯಲ್ಲಿ ಹೇಳುತ್ತಿದ್ದರು ! "ನೋಡು, ಅದು ಪಟ ಪಟ ಎಂದು ಕಾಲಿನಿಂದ ತಲೆಗೆ ಏರಿ ಹೋಗುತ್ತದೆ. ಅದು ಎಲ್ಲಿಯವರೆಗೆ ತಲೆಯನ್ನು ತಲುಪುವುದಿಲ್ಲವೊ ಅಲ್ಲಿಯ ವರೆಗೆ ಪ್ರಜ್ಞೆ ಇರುತ್ತದೆ. ಯಾವಾಗ ಅದು ತಲೆಯನ್ನು ಸೇರುವುದೊ ಅನಂತರ ಒಮ್ಮೆಯೇ ಬಾಹ್ಯಜ್ಞಾನ ಹೊರಟುಹೋಗುವುದು, ಆಗ ನೋಡುವುದು ಕೇಳುವುದು ಏನೂ ಇಲ್ಲ. ಮಾತಂತು ಇಲ್ಲವೇ ಇಲ್ಲ. ಮಾತನಾಡುವುದಾದರೂ ಯಾರು ? 'ನಾನು ನೀನು' ಎಂಬ ಅರಿವೇ ಹೊರಟುಹೋಗುತ್ತದೆ. ನಿಮಗೆ ಎಲ್ಲವನ್ನು ಹೇಳಬೇಕು ಎನಿಸುತ್ತದೆ, ಅದು ಮೇಲೇರುವಾಗ ಎಂಥೆಂಥ ದರ್ಶನಗಳಾಗುತ್ತವೆ ಅನುಭವಗಳಾಗು ತ್ತವೆ, ಅವನ್ನೆಲ್ಲ ಹೇಳಬೇಕೆನಿಸುತ್ತದೆ. ಯಾವಾಗ ಅದು ಇಲ್ಲಿಯವರೆಗೆ (ಹೃದಯ ಮತ್ತು ಕಂಠವನ್ನು ತೋರಿಸಿ) ಮಾತ್ರ ಜಾಗ್ರತವಾಗಿರುವುದೊ ಅಷ್ಟರ ತನಕ ಮಾತ ನಾಡುವುದು ಸಾಧ್ಯ, ಮತ್ತು ಮಾತನಾಡುತ್ತೇನೆ. ಯಾವಾಗ ಅದು ಇದನ್ನು (ಕಂಠವನ್ನು) ಮೀರಿ ಹೋಗುವುದೊ ಆಗ ಯಾರೊ ಬಾಯನ್ನು ಮುಚ್ಚಿದಂತೆ ಆಗು ತ್ತದೆ. ಆಗ ಎಲ್ಲವೂ ಮರೆತುಹೋಗುತ್ತದೆ-ಇದನ್ನು ನಿಗ್ರಹಿಸಲಾಗುವುದಿಲ್ಲ. ಇದರಿಂದ (ಕಂಠದಿಂದ) ಮೇಲೆ ಹೋದಾಗ ಉಂಟಾಗುವ ಅನುಭವವನ್ನು ಹೇಳಲು ಹೊರಟರೆ ಮನಸ್ಸು ಅದನ್ನೇ ಭಾವಿಸುತ್ತ ಥಟ್ಟನೆ ಮೇಲೆ ಏರಿಹೋಗುವುದು ಮತ್ತೆ ಮಾತನಾಡ ಲಾಗುವುದಿಲ್ಲ !"

29. ಕಂಠದಲ್ಲಿರುವ ಚಕ್ರಕ್ಕೆ ಮನಸ್ಸು ಏರಿದಾಗ ಯಾವರೀತಿಯ ಅನುಭವ ವಾಗುವುದು ಎಂಬುದನ್ನು ತಮ್ಮ ಮನಸ್ಸನ್ನು ಹಿಡಿದಿರಿಸಿಕೊಂಡು ನಮಗೆ ಹೇಳಲು ಹೋಗಿ ಎಷ್ಟು ಬಾರಿ ಶ್ರೀರಾಮಕೃಷ್ಣರು ಸಮಾಧಿಸ್ಥರಾಗಿದ್ದರು ಎಂದು ಹೇಳಲಾಗು ವುದಿಲ್ಲ ! ನಮ್ಮ ಸ್ನೇಹಿತನೊಬ್ಬನು ಹೇಳುತ್ತಾನೆ : ಒಂದು ದಿನ ಅವರು ದೃಢವಾಗಿ ಹೇಳಿದರು, "ಇಂದು ನಿಮಗೆ ಎಲ್ಲ ಹೇಳಿಬಿಡುತ್ತೇನೆ. ಏನನ್ನೂ ಬಚ್ಚಿಡುವುದಿಲ್ಲ" ಎಂದು. ಹೃದಯ ಮತ್ತು ಕಂಠದವರೆಗೆ ಎಲ್ಲ ಚಕ್ರಗಳ ಬಗ್ಗೆ ಹೇಳಿದನಂತರ ಭ್ರೂಮಧ್ಯ ವನ್ನು ತೋರಿಸಿ ಹೇಳಿದರು : "ಮನಸ್ಸು ಇಲ್ಲಿಗೆ ಏರಿದರೆ ಪರಮಾತ್ಮನ ದರ್ಶನವಾಗು ವುದು, ಜೀವನು ಸಮಾಧಿಯನ್ನು ಪಡೆಯುವನು. ಆಗ ಪರಮಾತ್ಮಾ ಮತ್ತು ಜೀವಾತ್ಮರ ನಡುವೆ ಒಂದು ಪಾರದರ್ಶಕ ತೆರೆ ಉಳಿಯುತ್ತದೆ. ಆಗ ಅವನು ಹೀಗೆ ನೋಡುತ್ತಾನೆ"— ಹೀಗೆ ಹೇಳಿ ಪರಮಾತ್ಮನ ದರ್ಶನದ ಬಗ್ಗೆ ಹೇಳಲು ಪ್ರಾರಂಭಿಸುತ್ತಿದ್ದಂತೆಯೆ ಸಮಾಧಿಸ್ಥರಾಗಿಬಿಟ್ಟರು. ಸಮಾಧಿಭಂಗವಾದಮೇಲೆ ಮತ್ತೆ ಹೇಳಲು ಉಪಕ್ರಮಿಸಿದರು, ಮತ್ತೆ ಸಮಾಧಿಸ್ಥರಾದರು. ಹೀಗೆ ಅನೇಕ ಬಾರಿ ಆಗಲು ಅವರು ಕಣ್ಣೀರು ಸುರಿಸುತ್ತ ಹೇಳಿದರು : "ನೋಡಿ, ಎಲ್ಲ ಹೇಳಿಬಿಡಬೇಕು, ಏನೂ ಇಟ್ಟುಕೊಳ್ಳಬಾರದು ಎಂದು ಮನಸ್ಸು ಮಾಡುತ್ತೇನೆ. ಆದರೆ ತಾಯಿ ಹೇಳಲು ಬಿಡುವುದಿಲ್ಲ, ಬಾಯಿ ಮುಚ್ಚಿಬಿಡು

ತ್ತಾಳೆ.'' ನಾವಿದನ್ನು ಕೇಳಿ ಆಶ್ಚರ್ಯಚಕಿತರಾದೆವು. ಹೇಳಬೇಕೆಂದು ಇಷ್ಟೊಂದು ಪ್ರಯತ್ನಿಸುತ್ತಿದ್ದಾರೆ, ಹೇಳಲಾಗುತ್ತಿಲ್ಲವೆಂದು ಅವರಿಗೆ ಕಷ್ಟವಾಗುತ್ತಿದೆ. ಆದರೂ ಅವರಿಗೆ ಸಾಧ್ಯವಾಗುತ್ತಿಲ್ಲ. ತಾಯಿ ನಿಜವಾಗಿಯೂ ಕೆಟ್ಟವಳೆ! ಅವರು ಒಳ್ಳೆಯ ಮಾತು ಆಡಬೇಕೆಂದರೂ, ಭಗವದ್ದರ್ಶನದ ಬಗ್ಗೆ ಹೇಳಬೇಕೆಂದರೂ ಆಕೆ ಬಿಡು ತ್ತಿಲ್ಲವಲ್ಲ! ಹಾಗಾದರೆ ಇದರ ಅರ್ಥ ಹೀಗಿರಬಹುದೆ? ಮಾತುಕತೆ ನಡೆಯುವುದು ಮನಸ್ಸು ಬುದ್ಧಿಗಳ ಸಹಾಯದಿಂದ. ಅವು ಬಹುದೂರ ಹೋಗುವುದಿಲ್ಲ. ಅವು ಎಷ್ಟುದೂರ ಹೋಗುವುವೊ ಅದನ್ನೂ ಮೀರಿ ಮುಂದೆ ಹೋಗದೆ ಪರಮಾತ್ಮನ ಪೂರ್ಣದರ್ಶನ ಸಾಧ್ಯವಿಲ್ಲ. ಆದ್ದರಿಂದ ಶ್ರೀರಾಮಕೃಷ್ಣರು ನಮ್ಮ ಮೇಲಿನ ಪ್ರೀತಿಯಿಂದ ಅಸಾಧ್ಯವಾದುದನ್ನು ಸಾಧ್ಯಗೊಳಿಸಲು ಪ್ರಯತ್ನಿಸುತ್ತಿರುವರೆ? ಈ ವಿಷಯ ಆಗ ನಮಗೆ ಅರ್ಥವಾಗುತ್ತಿತ್ತೆ?

30. ಕುಂಡಲಿನೀ ಶಕ್ತಿಯು ಸುಷುಮ್ನಾ ನಾಳದ ಮೂಲಕ ಮೇಲೆ ಹರಿದು ಹೋಗುವಾಗ ಏನೇನು ಅನುಭವವಾಗುವುವು ಎಂಬುದನ್ನು ವಿಶೇಷ ರೀತಿಯಲ್ಲಿ ವಿವರಿಸುತ್ತಿದ್ದರು: ''ನೋಡು. ಅದು ದಡ ದಡ ಎಂದು ಮೇಲೇರುವುದು. ಆದರೆ ಯಾವಾಗಲೂ ಒಂದೇ ರೀತಿಯಲ್ಲಿ ಅದು ಮೇಲೇರುವುದಿಲ್ಲ. ಶಾಸ್ತ್ರದಲ್ಲಿ ಅದಕ್ಕೆ ಐದು ರೀತಿಯ ಚಲನೆ ಉಂಟೆಂದು ಹೇಳಿದೆ. ಇರುವೆಯು ಆಹಾರದ ಕಡೆ ಹರಿದು ಹೋಗು ವಂತೆ ನಿಧಾನವಾಗಿ ಅದು ಕಾಲಿನಿಂದ ಮೇಲೇರುತ್ತ ಹೋಗುವುದು. ಅದು ತಲೆಗೆ ಹೋದಾಗ ಸಮಾಧಿಯುಂಟಾಗುವುದು. ಕೆಲವೊಮ್ಮೆ ಕಪ್ಪೆಯಂತೆ ಟಪ್ ಟಪ್ ಎಂದು ಕುಪ್ಪಳಿಸುತ್ತ ಮಧ್ಯೆ ಮಧ್ಯೆ ನಿಲ್ಲುತ್ತ ಕಾಲಿನಿಂದ ತಲೆಗೆ ಏರಿ ಹೋಗುತ್ತದೆ. ಅನಂತರ ಸಮಾಧಿಯಾಗುತ್ತದೆ. ಇನ್ನೊಂದು ಸರ್ಪಗತಿ: ಜಡವಾಗಿ ಬಿದ್ದುಕೊಂಡಿದ್ದ ಹಾವು ಆಹಾರ ಕಂಡಕೂಡಲೇ ಅಥವಾ ಭಯವುಂಟಾದಾಗ ಸರಸರನೆ ವಕ್ರಗತಿಯಲ್ಲಿ ಓಡಿ ಹೋಗುವಂತೆ ಕುಂಡಲಿನಿಯು ಚಡಪಡಿಸುತ್ತ ಬೇಗನೆ ತಲೆಗೆ ಏರಿಹೋಗುತ್ತದೆ. ಮತ್ತೆ ಸಮಾಧಿ! ಪಕ್ಷಿಗತಿ: ಹಕ್ಕಿಯು ಒಂದು ಕಡೆಯಿಂದ ಮತ್ತೊಂದು ಕಡೆ ಹೋಗಿ ಕುಳಿತು ಕೊಳ್ಳಬೇಕಾದಾಗ ಹುಸ್ ಎಂದು ಹಾರಲು ಪ್ರಾರಂಭಿಸುತ್ತದೆ. ಕೆಲವೊಮ್ಮೆ ಮೇಲೆ ಹಾರುತ್ತದೆ, ಕೆಲವೊಮ್ಮೆ ಕೆಳಗಿಳಿಯುತ್ತದೆ. ಆದರೆ ಮಧ್ಯೆ ಎಲ್ಲೂ ವಿಶ್ರಾಮ ತೆಗೆದು ಕೊಳ್ಳುವುದಿಲ್ಲ. ಎಲ್ಲಿ ಹೋಗಿ ಕುಳಿತುಕೊಳ್ಳಬೇಕೆಂದು ಮನಸ್ಸು ಮಾಡಿತ್ತೊ ಅಲ್ಲಿಗೆ ಹೋಗಿ ಕುಳಿತುಕೊಳ್ಳುವುದು. ಇದೇ ರೀತಿ ಕುಂಡಲಿನಿಯು ತಲೆಯನ್ನು ತಲುಪಿದಾಗ ಸಮಾಧಿಯುಂಟಾಗುತ್ತದೆ. ಮತ್ತೊಂದು ಮರ್ಕಟಗತಿ: ಮಂಗಗಳು ಒಂದು ಮರದಿಂದ ಮತ್ತೊಂದು ಮರಕ್ಕೆ ಹಾರುವಾಗ 'ಊ' ಎಂದು ಒಂದು ಕೊಂಬೆಯನ್ನು ಬಿಟ್ಟು ಮತ್ತೊಂದನ್ನು ಹಿಡಿದುಕೊಂಡು ಮುಂದೆ ಹೋಗುವುವು. ಹೀಗೆ ಎರಡು ಮೂರು ನೆಗೆತದಲ್ಲಿ ತಮ್ಮ ಉದ್ದೇಶಿತ ಸ್ಥಳವನ್ನು ತಲುಪುವುವು. ಹಾಗೆಯೇ ಕುಂಡಲಿನಿಯೂ ಎರಡು ಮೂರು ನೆಗೆತದಲ್ಲಿ ತಲೆಯನ್ನು ತಲಪುತ್ತದೆ. ಅನಂತರ ಸಮಾಧಿಯಾಗುತ್ತದೆ.''

31. ಕುಂಡಲಿನಿಯು ಮೇಲೇರುವಾಗ ಪ್ರತಿ ಚಕ್ರದಲ್ಲಿಯೂ ಆಗುವ ಅನುಭವ

ವನ್ನು ಅವರು ಹೀಗೆ ವಿವರಿಸುತ್ತಿದ್ದರು : "ವೇದಾಂತದಲ್ಲಿ ಸಪ್ತಭೂಮಿಕೆಯ ವಿಚಾರ ಬರುತ್ತದೆ. ಒಂದೊಂದು ಭೂಮಿಕೆಯಲ್ಲಿಯೂ ಒಂದೊಂದು ಬಗೆಯ ದರ್ಶನಗಳಾಗುತ್ತವೆ. ಮನಸ್ಸಿನ ಸ್ವಾಭಾವಿಕ ಗತಿ ಕೆಳಗಿನ ಮೂರು ಭೂಮಿಕೆಯಲ್ಲಿ—ಗುಹ್ಯ, ಲಿಂಗ, ನಾಭಿ—ಉಣ್ಣುವುದು. ಉಡುವುದು, ರಮಿಸುವುದು ಅಷ್ಟೇ. ಈ ಮೂರು ಭೂಮಿಕೆಯನ್ನು ಬಿಟ್ಟು ಮನಸ್ಸು ಹೃದಯಕ್ಕೆ ಏರಿದಾಗ ಜ್ಯೋತಿಯ ದರ್ಶನವಾಗುತ್ತದೆ. ಆದರೆ ಒಮ್ಮೊಮ್ಮೆ ಮನಸ್ಸು ಹೃದಯವನ್ನು ತಲುಪಿದ ಮೇಲೂ ಕೆಳಗಿನ ಭೂಮಿಕೆಗೆ ಇಳಿಯುವುದುಂಟು. ಹೃದಯವನ್ನು ಬಿಟ್ಟು ಮನಸ್ಸು ಕಂಠಕ್ಕೆ ಏರಿದಾಗ ಭಗವದ್ವಿಷಯ ಬಿಟ್ಟು ಬೇರೆ ಯಾವ ವಿಷಯವೂ ರುಚಿಸುವುದಿಲ್ಲ. ಆ ಸಮಯದಲ್ಲಿ ಯಾರಾದರೂ ಪ್ರಾಪಂಚಿಕ ವಿಷಯವನ್ನು ಮಾತನಾಡಿದರೆ ತಲೆಯಮೇಲೆ ಹೊಡೆದಂತೆ ಆಗುತ್ತಿತ್ತು, ದೂರ ಪಂಚವಟಿಯ ಕಡೆ ಓಡುತ್ತಿದ್ದೆ. ಪ್ರಾಪಂಚಿಕರನ್ನು ಕಂಡರೆ ಭಯದಿಂದ ಅಡಗಿಕೊಳ್ಳುತ್ತಿದ್ದೆ. ನೆಂಟರಿಷ್ಟರೆಲ್ಲ ಬಾವಿ ಇದ್ದಹಾಗೆ ಎನಿಸುತ್ತಿತ್ತು; ಅವರು ಮನಸ್ಸನ್ನು ಎಳೆದು ಬಾವಿಗೆ ಎಸೆದುಬಿಟ್ಟರೆ ಮತ್ತೆ ಮೇಲೇಳಲಾಗುವುದಿಲ್ಲ. ಉಸಿರು ಕಟ್ಟಿದಂತೆ ಆಗುತ್ತಿತ್ತು, ಪ್ರಾಣವೇ ಹೊರಬಂದಂತೆ ಆಗುತ್ತಿತ್ತು. ಅಲ್ಲಿಂದ ಓಡಿ ಬಂದಮೇಲೆ ಮನಸ್ಸಿಗೆ ಹಾಯ್ ಎನಿಸುತ್ತಿತ್ತು. ಮನಸ್ಸು ಕಂಠವನ್ನು ಏರಿದ ಮೇಲೂ ಮತ್ತೆ ಗುಹ್ಯ, ಲಿಂಗ, ನಾಭಿಯ ಕೇಂದ್ರಗಳಿಗೆ ಇಳಿಯುವ ಸಂಭವವಿದೆ. ಆಗಲೂ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಯಾವಾಗ ಮನಸ್ಸು ಕಂಠವನ್ನೂ ಮೀರಿ ಭ್ರೂಮಧ್ಯವನ್ನು ತಲುಪುವುದೊ ಆಗ ಆ ವ್ಯಕ್ತಿಗೆ ಮತ್ತೆ ಬೀಳುವ ಭಯವಿಲ್ಲ. ಆಗ ಪರಮಾತ್ಮನ ದರ್ಶನವಾಗಿ ಅವನು ನಿರಂತರ ಸಮಾಧಿಸ್ಥನಾಗುತ್ತಾನೆ. ಇದಕ್ಕೂ ಸಹಸ್ರಾರಕ್ಕೂ ನಡುವೆ ಗಾಜಿನ ಪರದೆಯಂತೆ ಒಂದು ಸ್ವಚ್ಛವಾದ ತೆರೆ ಉಳಿಯುವುದು. ಆಗ ಪರಮಾತ್ಮನು ಎಷ್ಟೊಂದು ನಿಕಟವಾಗಿರುತ್ತಾನೆಂದರೆ ಅವನೊಂದಿಗೆ ಒಂದಾದಂತೆ ಅನಿಸುತ್ತದೆ. ಆದರೆ ಇನ್ನೂ ಪಾರ್ಥಕ್ಯವಿರುತ್ತದೆ. ಇಲ್ಲಿಂದ ಮನಸ್ಸು ಕೆಳಗಿಳಿದರೂ ಕಂಠ ಅಥವಾ ಹೃದಯದವರೆಗೆ ಮಾತ್ರ ಇಳಿಯುತ್ತದೆ, ಅದಕ್ಕಿಂತ ಕೆಳಗೆ ಹೋಗುವುದಿಲ್ಲ. ಜೀವಕೋಟಿಗಳು ಈ ಸ್ಥಿತಿಯಿಂದ ಕೆಳಗೆ ಬರುವುದೇ ಇಲ್ಲ. ಇಪ್ಪತ್ತೊಂದು ದಿನ ನಿರಂತರ ಸಮಾಧಿಯಲ್ಲಿದ್ದ ನಂತರ ಆ ಜವನಿಕೆಯೂ ಕತ್ತರಿಸಲ್ಪಡುತ್ತದೆ. ಆಗ ಅವರು ಪರಮಾತ್ಮನೊಡನೆ ಸಂಪೂರ್ಣ ಒಂದಾಗಿಬಿಡುತ್ತಾರೆ. ಸಹಸ್ರಾರದಲ್ಲಿ ಪರಮಾತ್ಮನೊಡನೆ ಒಂದಾಗುವುದೇ ಸಪ್ತಮ ಭೂಮಿಯನ್ನು ಏರುವುದು."

32. ಶ್ರೀರಾಮಕೃಷ್ಣರು ಈ ರೀತಿ ವೇದ ವೇದಾಂತ ಯೋಗ ತಂತ್ರಗಳ ವಿಷಯವನ್ನು ಅಷ್ಟೊಂದು ಅಧಿಕಾರವಾಣಿಯಿಂದ ಹೇಳುವುದನ್ನು ಕೇಳಿ ನಾವು ಆಶ್ಚರ್ಯದಿಂದ ಅವರನ್ನು ಕೇಳುತ್ತಿದ್ದೆವು : "ಮಹಾಶಯರೇ, ನೀವು ಓದು ಬರಹ ಕಲಿತಿಲ್ಲ. ಆದರೂ ಇದನ್ನೆಲ್ಲ ಹೇಗೆ ಕಲಿತಿರಿ ?" ಅವರು ಸ್ವಲ್ಪವೂ ಬೇಸರವಿಲ್ಲದೆ ನಕ್ಕು ನುಡಿದರು : "ನಾನು ಓದಿಲ್ಲ ನಿಜ, ಆದರೆ ಬೇರೆಯವರಿಂದ ಎಲ್ಲ ಕೇಳಿರುವೆನು. ಅವೆಲ್ಲ ಮನಸ್ಸಿನಲ್ಲಿವೆ. ಇತರರಿಂದ, ದೊಡ್ಡ ದೊಡ್ಡ ಪಂಡಿತರಿಂದ ವೇದ–ವೇದಾಂತ–

ದರ್ಶನ–ಪುರಾಣಗಳನ್ನೆಲ್ಲ ಕೇಳಿರುವೆನು. ಎಲ್ಲವನ್ನೂ ಕೇಳಿ, ಅದರಲ್ಲೆಲ್ಲ ಏನಿದೆ ಎಂಬುದನ್ನು ತಿಳಿದು ಅನಂತರ ಅವುಗಳನ್ನು (ಗ್ರಂಥಗಳನ್ನು) ದಾರದಲ್ಲಿ ಪೋಣಿಸಿ ಮಾಲೆ ಮಾಡಿ 'ಇಗೋ ನಿನ್ನ ಶಾಸ್ತ್ರಪುರಾಣಗಳನ್ನು, ನನಗೆ ಶುದ್ಧ ಭಕ್ತಿಯನ್ನು ಕೊಡು' ಎಂದು ಹೇಳಿ ತಾಯಿಯ ಪಾದಪದ್ಮದಲ್ಲಿ ಅರ್ಪಿಸಿದೆನು.''

33. ವೇದಾಂತದ ಅದ್ವೈತಭಾವ ಅಥವಾ ಭಾವಾತೀತ ಭಾವದ ವಿಚಾರವಾಗಿ ಅವರು ಹೇಳುತ್ತಿದ್ದರು: ''ಅದು ಎಲ್ಲಕ್ಕಿಂತ ಕೊನೆಯ ಮಾತು. ಇದು ಹೇಗೆ ಗೊತ್ತೆ? ಬಹಳ ಹಿಂದಿನಿಂದ ಕೆಲಸಮಾಡಿಕೊಂಡು ಬಂದ ಆಳು ಇರುತ್ತಾನಲ್ಲ ? ಯಜಮಾನನು ಅವನ ನಿಷ್ಠೆಯಿಂದ ಸಂತೃಪ್ತನಾಗಿ ಎಲ್ಲ ವಿಷಯದಲ್ಲಿಯೂ ಅವನ ಮೇಲೆ ವಿಶ್ವಾಸ ವಿರಿಸುವನು, ಎಲ್ಲ ವಿಷಯದಲ್ಲಿಯೂ ಅವನೊಡನೆ ಪರಾಮರ್ಶಿಸುವನು. ಒಂದು ದಿನ ಅವನ ವಿಷಯದಲ್ಲಿ ಸಂಪೂರ್ಣ ತೃಪ್ತನಾಗಿ ಅವನ ಕೈಹಿಡಿದು ಕರೆದುಕೊಂಡು ಬಂದು ತನ್ನ ಪಕ್ಕದಲ್ಲೇ ಕೂರಿಸಿಕೊಳ್ಳುವನು. ಆಳು ಸಂಕೋಚದಿಂದ 'ಇದೇನಿದು, ಇದೇನಿದು' ಎಂದು ಹೇಳಿದರೂ ಕೇಳದೆ ಅವನನ್ನು ಎಳೆದು ಕೂರಿಸಿಕೊಳ್ಳುವನು, ಮತ್ತೆ ಹೇಳುತ್ತಾನೆ, 'ಕುಳಿತುಕೊ ಇಲ್ಲಿ, ನೀನು ಯಾರೊ ನಾನೂ ಅವನೇ' ಎಂದು, ಅದ್ವೈತಾನುಭವವೂ ಇದೇ ರೀತಿ.''

34. ಸ್ವಾಮಿ ತುರೀಯಾನಂದರಿಗೆ(ಹರಿ ಮಹಾರಾಜ್) ವೇದಾಂತ ಚರ್ಚೆಯಲ್ಲಿ ತುಂಬ ಆಸಕ್ತಿ. ಶ್ರೀರಾಮಕೃಷ್ಣರು ಅವರ ಬ್ರಹ್ಮಚರ್ಯ, ಭಕ್ತಿ, ನಿಷ್ಠೆ ಇವುಗಳನ್ನು ನೋಡಿ ಅವರನ್ನು ತುಂಬ ಪ್ರೀತಿಸುತ್ತಿದ್ದರು. ವೇದಾಂತ ಚರ್ಚೆ, ಧ್ಯಾನ ಭಜನೆ ಇತ್ಯಾದಿಗಳಲ್ಲಿ ಮಗ್ನರಾಗಿದ್ದ ತುರೀಯಾನಂದರು ಮೊದಲಿನಂತೆ ಶ್ರೀರಾಮಕೃಷ್ಣರೆಡೆಗೆ ಆಗಾಗ ಬರುತ್ತಿರಲಿಲ್ಲ, ಅಥವಾ ಬರಲಾಗುತ್ತಿರಲಿಲ್ಲ. ಶ್ರೀರಾಮಕೃಷ್ಣರು ಇದನ್ನು ಗಮನಿಸದಿರಲಿಲ್ಲ. ತುರೀಯಾನಂದರೊಡನೆ ಬಂದುಹೋಗುತ್ತಿದ್ದ ವ್ಯಕ್ತಿಯನ್ನು ಶ್ರೀರಾಮಕೃಷ್ಣರು ಒಂದುದಿನ ವಿಚಾರಿಸಿದರು : ''ಏನಯ್ಯ, ಒಬ್ಬನೇ ಇದ್ದೀಯೆ ? ಅವನು ಬರಲಿಲ್ಲವೇ ?'' ಆ ವ್ಯಕ್ತಿ ಉತ್ತರಿಸಿದ : ''ಮಹಾಶಯರೇ, ಅವನು ಈಚೆಗೆ ವೇದಾಂತ ಚರ್ಚೆಯಲ್ಲಿ ಮುಳುಗಿದ್ದಾನೆ. ಹಗಲು ರಾತ್ರಿ ಓದುವುದು ವಿಚಾರಮಾಡುವುದು—ಇದೇ ಆಯಿತು. ಆದ್ದರಿಂದಲೇ ಏಕೆ ಸಮಯ ಹಾಳುಮಾಡುವುದೆಂದು ಬರುತ್ತಿಲ್ಲವೆಂದು ಕಾಣುತ್ತದೆ.'' ಶ್ರೀರಾಮಕೃಷ್ಣರು ಕೇಳಿ ಸುಮ್ಮನಾದರು.

35. ಇದಾದ ಕೆಲವು ದಿನಗಳನಂತರ ತುರೀಯಾನಂದರು ದಕ್ಷಿಣೇಶ್ವರಕ್ಕೆ ಶ್ರೀರಾಮಕೃಷ್ಣರನ್ನು ನೋಡಲು ಹೋದರು. ಅವರನ್ನು ನೋಡಿದ ಕೂಡಲೆ ಶ್ರೀರಾಮಕೃಷ್ಣರು ಹೇಳಿದರು : ''ಏನಪ್ಪ, ನೀನು ಇತ್ತೀಚೆಗೆ ತುಂಬ ವೇದಾಂತ ವಿಚಾರ ಮಾಡುತ್ತೀಯಂತೆ ? ಅದು ತುಂಬ ಒಳ್ಳೆಯದೆ. ಆ ವಿಚಾರದ ಸಾರಾಂಶ ಇಷ್ಟೆ : ಬ್ರಹ್ಮ ಸತ್ಯ ಜಗತ್ ಮಿಥ್ಯಾ. ಇನ್ನೇನಾದರೂ ಇದೆಯೆ ?'' ತುರೀಯಾನಂದರು ''ಅಷ್ಟೇ, ಇನ್ನೇನು ?'' ಎಂದರು. ಅವರು ಹೇಳುತ್ತಾರೆ, ಅಂದು ನಿಜವಾಗಿಯೂ ಶ್ರೀರಾಮಕೃಷ್ಣರು ಕೆಲವು ಮಾತುಗಳ ಮೂಲಕ ವೇದಾಂತದ ವಿಷಯದಲ್ಲಿ ಸಂಪೂರ್ಣ

ತಮ್ಮ ಕಣ್ಣು ತೆರೆಯುವಂತೆ ಮಾಡಿದರು, ಎಂದು. ಶ್ರೀರಾಮಕೃಷ್ಣರ ಮಾತನ್ನು ಕೇಳಿ ಅವರಿಗೆ ಆಶ್ಚರ್ಯವಾಗಿತ್ತು. ಇದು ನಿಜವಾನೆ? ಈ ಒಂದು ಮಾತನ್ನು ಗ್ರಹಿಸಿದರೆ ವೇದಾಂತದ ಎಲ್ಲ ವಿಚಾರವನ್ನೂ ತಿಳಿದಂತಾಗುವುದು ಎಂದು ಅವರು ಭಾವಿಸಿದರು.

ಶ್ರೀರಾಮಕೃಷ್ಣರು : "ಶ್ರವಣ, ಮನನ, ನಿದಿಧ್ಯಾಸನ. ಬ್ರಹ್ಮ ಸತ್ಯ ಜಗತ್ ಮಿಥ್ಯಾ– ಇದನ್ನು ಮೊದಲು ಕೇಳಬೇಕು. ಅನಂತರ ಮನನ—ವಿಚಾರ ಮಾಡುತ್ತ ಮನಸ್ಸಿನಲ್ಲಿ ಇದು ದೃಢವಾಗಬೇಕು. ಅನಂತರ ನಿದಿಧ್ಯಾಸನ—ಮಿಥ್ಯಾ ವಸ್ತುವಾದ ಜಗತ್ತನ್ನು ತ್ಯಾಗ ಮಾಡಿ ಸದ್ವಸ್ತುವಾದ ಬ್ರಹ್ಮನಲ್ಲಿ ಮನಸ್ಸನ್ನು ನಿಲ್ಲಿಸಬೇಕು. ಇದು ಮುಖ್ಯ. ಇದನ್ನು ಬಿಟ್ಟು ಕೇಳಿ ಅರಿತು ಎಲ್ಲ ಮಾಡಿ ಯಾವುದು ಮಿಥ್ಯವೊ ಅದನ್ನು ಬಿಡಲು ಪ್ರಯತ್ನಿಸದಿದ್ದರೆ ಏನು ಪ್ರಯೋಜನ? ಇದು ಸಂಸಾರಿಗಳ ಜ್ಞಾನದಂತೆ. ಆ ರೀತಿಯು ಸದ್ವಸ್ತುವನ್ನು ಪಡೆಯಲಾಗುವುದಿಲ್ಲ. ಧಾರಣೆ ಬೇಕು, ತ್ಯಾಗ ಬೇಕು. ಆಗಲೇ ಸಿದ್ಧಿಸುವುದು. ಮುಳ್ಳೂ ಇಲ್ಲ, ನೋವೂ ಇಲ್ಲ ಎಂದು ಬಾಯಲ್ಲಿ ಹೇಳುವುದು, ಆದರೆ ಮುಳ್ಳನ್ನು ತೆಗೆಯುತ್ತ ಊಃ ಊಃ ಎಂದು ನೋವಿನಿಂದ ನರಳುವುದು. ಹಾಗೆಯೇ ಜಗತ್ತು ಇಲ್ಲ, ಅಸತ್ ಎಂದು ಬಾಯಲ್ಲಿ ಹೇಳುವುದು. ಅನಂತರ ಅದೇ ಜಗತ್ತಿನ ರೂಪರಸಾದಿಗಳು ಮುಂದೆ ಕಾಣಿಸಿಕೊಂಡಾಗ ಅವು ಸತ್ಯವಾಗಿ ತೋರುವುವು. ಪಂಚವಟಿಗೆ ಒಬ್ಬ ಸಾಧು ಬಂದಿದ್ದ. ಅವನು ಜನರೊಡನೆ ದೊಡ್ಡದಾಗಿ ವೇದಾಂತದ ಬಗ್ಗೆ ಚರ್ಚಿಸುತ್ತಿದ್ದ. ಅನಂತರ ನಾನು ಕೇಳಿದೆ ಯಾವುದೊ ಹೆಂಗಸಿನೊಡನೆ ಸಂಬಂಧ ಇಟ್ಟುಕೊಂಡಿದ್ದಾನೆಂದು. ಒಂದು ದಿನ ನಾನು ಆ ಕಡೆ ಹೋದಾಗ ಆತ ಅಲ್ಲಿ ಕುಳಿತಿದ್ದ. ನಾನೆಂದೆ : 'ನೀನು ಅಷ್ಟೊಂದು ವೇದಾಂತವನ್ನು ಕುರಿತು ಮಾತನಾಡುತ್ತೀಯೆ. ಮತ್ತೆ ಇದೆಲ್ಲ ಏನು?" ಅವನು ಹೇಳಿದ : "ಅದರಿಂದೇನಂತೆ? ಅದರಿಂದ ಏನೂ ದೋಷವಿಲ್ಲವೆಂದು ನಾನು ನಿನಗೆ ತಿಳಿಸಿಕೊಡುತ್ತೇನೆ. ಇಡೀ ಜಗತ್ತೇ ತ್ರಿಕಾಲವೂ ಮಿಥ್ಯವಾಗಿರುವಾಗ ಇದು ಸತ್ಯವಾಗುವುದೆ? ಇದೂ ಮಿಥ್ಯಾ.' ನನಗೆ ಅದನ್ನು ಕೇಳಿ ತುಂಬ ಬೇಸರವಾಯಿತು. ತಿರಸ್ಕಾರದಿಂದ 'ನಿನ್ನ ವೇದಾಂತ ಜ್ಞಾನಕ್ಕೆ ಉಗುಳುತ್ತೇನೆ' ಎಂದು ಹೇಳಿದೆ. ಇವೆಲ್ಲ ಪ್ರಾಪಂಚಿಕರ ಜ್ಞಾನ. ಅದು ಜ್ಞಾನವೇ ಅಲ್ಲ." ಅಂದು ಅಷ್ಟೇ ಮಾತುಕತೆ ನಡೆಯಿತು. ಶ್ರೀರಾಮಕೃಷ್ಣರು ತುರೀಯಾನಂದರನ್ನು ತಮ್ಮೊಡನೆ ಕರೆದುಕೊಂಡು ಪಂಚವಟಿಯಲ್ಲಿ ಓಡಾಡುತ್ತ ಈ ಮಾತುಗಳನ್ನು ಆಡಿದ್ದರು. ಉಪನಿಷತ್ತು ಪಂಚದಶಿ ಮುಂತಾದ ಕ್ಲಿಷ್ಟವಾದ ಗ್ರಂಥಗಳ ಅಧ್ಯಯನ ಮಾಡದೆ, ಸಾಂಖ್ಯ ನ್ಯಾಯ ಮುಂತಾದ ದರ್ಶನಗಳ ವ್ಯುತ್ಪತ್ತಿ ಇಲ್ಲದೆ ವೇದಾಂತವನ್ನು ಅರ್ಥಮಾಡಿಕೊಳ್ಳಲು ಸಾಧ್ಯವೇ ಇಲ್ಲ ಮತ್ತು ಮುಕ್ತಿಯನ್ನು ಪಡೆಯುವುದಂತೂ ದೂರದ ಮಾತಾಯಿತು—ಎಂದು ಇದಕ್ಕೂ ಮುಂಚೆ ತುರೀಯಾನಂದರು ಭಾವಿಸಿದ್ದರು, ಅಂದು ಶ್ರೀರಾಮಕೃಷ್ಣರ ಮಾತಿನಿಂದ ಅವರಿಗೆ ಅರ್ಥವಾಯಿತು, ವೇದಾಂತದಲ್ಲಿ ಬರುವ ವಿಚಾರವೆಲ್ಲವೂ ಆ ಒಂದು ಸತ್ಯವನ್ನು ಮನಸ್ಸಿನಲ್ಲಿ ದೃಢಪಡಿಸುವುದಕ್ಕಾಗಿ ಎಂದು; ಅಷ್ಟೆಲ್ಲ

ದೊಡ್ಡ ದೊಡ್ಡ ದಾರ್ಶನಿಕ ಗ್ರಂಥಗಳನ್ನು ಓದಿಯೂ 'ಬ್ರಹ್ಮ ಸತ್ಯ, ಜಗತ್ ಮಿಥ್ಯಾ' ಎಂಬುದರ ದೃಢನಿಶ್ಚಯವಾಗದಿದ್ದರೆ ಅವನ್ನೆಲ್ಲ ಓದಿದರೂ ಒಂದೇ ಓದದಿದ್ದರೂ ಒಂದೇ. ಅವರು ಶ್ರೀರಾಮಕೃಷ್ಣರಿಂದ ಬೀಳ್ಕೊಂಡು ಹೊರಟು ಹೋದರು. ಅಂದಿನಿಂದ ಗ್ರಂಥಗಳ ಅಧ್ಯಯನಕ್ಕಿಂತ ಅಧಿಕವಾಗಿ ಸಾಧನೆಯ ಕಡೆ ಹೆಚ್ಚು ಮನಸ್ಸನ್ನು ನೀಡ ಬೇಕೆಂದು ಭಾವಿಸುತ್ತಾ ಮನೆಗೆ ಹಿಂದಿರುಗಿದರು. ಮುಂದೆ ಅವರು ಭಗವತ್ ಸಾಕ್ಷಾತ್ಕಾರ ವನ್ನು ಪಡೆಯಲು ಸಾಧನೆಯ ಕಡೆಗೆ ಪೂರ್ಣ ಮನಸ್ಸನ್ನು ಹರಿಸಿದರು.

36. ಶ್ರೀರಾಮಕೃಷ್ಣರು ಕಲಕತ್ತೆಯಲ್ಲಿ ಯಾರ ಮನೆಗಾದರೂ ಹೋದರೆ ಕೂಡಲೆ ಭಕ್ತರಿಗೆಲ್ಲ ಅವರು ಬಂದಿರುವ ವಿಷಯ ತಿಳಿದುಹೋಗುತ್ತಿತ್ತು. ಯಾರೋ ಕೆಲವರು ಈ ಹೊಣೆಯನ್ನು ಹೊತ್ತುಕೊಂಡು ಅವರು ಬಂದಿರುವ ಸಂದ್ಧಿಯನ್ನು ಎಲ್ಲರಿಗೂ ಮುಟ್ಟಿಸುತ್ತಿದ್ದರೆಂದಲ್ಲ. ಭಕ್ತರೆಲ್ಲರಿಗೂ ಯಾವಾಗಲೂ ಶ್ರೀರಾಮಕೃಷ್ಣ ರನ್ನು ನೋಡಬೇಕೆಂಬ ಉತ್ಸುಕತೆ. ಕಾರ್ಯನಿಮಿತ್ತ ದಕ್ಷಿಣೇಶ್ವರಕ್ಕೆ ಹೋಗಲಾಗ ದಿದ್ದರೆ ಪರಸ್ಪರರ ಮನೆಗೆ ಹೋಗಿ ಅವರ ವಿಚಾರವಾಗಿ ಮಾತನಾಡುವುದರಲ್ಲಿ ಕಾಲ ಕಳೆಯುತ್ತಿದ್ದರು. ಅದರಲ್ಲೆ ಅವರೆಲ್ಲರಿಗೂ ಎಷ್ಟೊ ಆನಂದ ಸಿಗುತ್ತಿತ್ತು. ಅವರಲ್ಲಿ ಯಾರಾದರೊಬ್ಬರಿಗೆ ಶ್ರೀರಾಮಕೃಷ್ಣರು ಬಂದಿರುವ ವಿಷಯ ತಿಳಿದರೆ ಸಾಕು ಅದು ಬಾಯಿಂದ ಬಾಯಿಗೆ ಹರಡುತ್ತ ಎಲ್ಲರಿಗೂ ತಿಳಿದುಹೋಗುತ್ತಿತ್ತು. ಶ್ರೀರಾಮಕೃಷ್ಣರ ಶಕ್ತಿಯಿಂದ ಭಕ್ತರೆಲ್ಲರೂ ಒಂದು ಅಪೂರ್ವ ಪ್ರೇಮದಿಂದ ಬದ್ಧರಾಗಿದ್ದರು. ಕಲಕತ್ತೆಯ ಬಾಗಬಾಜಾರ್, ಶಿಮುಲಾ, ಅಹಿರಿಟೋಲಾ–ಈ ಭಾಗಗಳಲ್ಲಿ ಹೆಚ್ಚಿನ ಭಕ್ತರು ವಾಸಿ ಸುತ್ತಿದ್ದರು. ಆದ್ದರಿಂದ ಈ ಮೂರು ಕಡೆಗಳಿಗೆ ಶ್ರೀರಾಮಕೃಷ್ಣರು ಹೆಚ್ಚು ಹೋಗು ತ್ತಿದ್ದರು. ಇದರಲ್ಲೂ ಬಾಗಬಜಾರಿಗೆ ಅವರು ಹೋಗುತ್ತಿದ್ದುದು ಅತ್ಯಧಿಕ.

ಮೇಲೆ ಹೇಳಿದ ಘಟನೆಯ ಕೆಲವು ದಿನಗಳ ನಂತರ ಶ್ರೀರಾಮಕೃಷ್ಣರು ಬಾಗಬಜಾರಿನ ಬಲರಾಮ ಬೋಸನ ಮನೆಗೆ ಹೋಗಿದ್ದರು ಸುತ್ತಮುತ್ತಲಿನವರಿಗೆಲ್ಲ ವಿಷಯ ತಿಳಿದು ಅನೇಕ ಜನ ಭಕ್ತರು ಅಲ್ಲಿಗೆ ಬಂದರು. ತುರೀಯಾನಂದರ ಮನೆಯೂ ಅಲ್ಲೇ ಸಮೀಪದಲ್ಲಿತ್ತು. ಶ್ರೀರಾಮಕೃಷ್ಣರು ಅವರ ಬಗ್ಗೆ ವಿಚಾರಿಸಿದ್ದರಿಂದ ನೆರೆ ಮನೆಯವನೊಬ್ಬನು ಹೋಗಿ ಕೂಡಲೇ ಅವರನ್ನು ಕರೆದುಕೊಂಡು ಬಂದನು. ತುರೀಯಾನಂದರು ಬಂದವರೇ ಭಕ್ತಜನರಿಂದ ಆವೃತರಾಗಿದ್ದ ಶ್ರೀರಾಮಕೃಷ್ಣರಿಗೆ ನಮಸ್ಕರಿಸಿ ಅವರ ಪಕ್ಕದಲ್ಲೇ ಕುಳಿತುಕೊಂಡರು. ಶ್ರೀರಾಮಕೃಷ್ಣರು ಮುಗುಳ್ನಗುತ್ತ ಕುಶಲ ಪ್ರಶ್ನೆಯನ್ನು ಕೇಳಿ ಪ್ರಸ್ತುತ ಸಂಭಾಷಣೆಯನ್ನು ಮುಂದುವರಿಸಿದರು. ಶ್ರೀರಾಮಕೃಷ್ಣರು ಹೇಳುತ್ತಿದ್ದ ಮುಖ್ಯ ವಿಷಯ : ಜ್ಞಾನಬಲ, ಭಕ್ತಿಬಲ ಮತ್ತು ದರ್ಶನಬಲ—ಇವು ಭಗವಂತನ ಕೃಪೆಯಿಲ್ಲದೆ ದೊರೆಯುವುದು ಸಾಧ್ಯವಿಲ್ಲ. ಇದನ್ನು ಕೇಳುತ್ತಿದ್ದಂತೆಯೇ ತುರೀಯಾನಂದರು, ತಮ್ಮ ಮನಸ್ಸಿನ ತಪ್ಪುಭಾವನೆಯನ್ನು ಹೋಗಲಾಡಿಸುವುದಕ್ಕಾಗಿಯೇ ಶ್ರೀರಾಮಕೃಷ್ಣರು ಈಗ ಈ ವಿಷಯವನ್ನು ಹೇಳು ತ್ತಿರುವರು ಎಂದು ಭಾವಿಸಿದರು. ಅವರು ಹೇಳುತ್ತಿರುವುದೆಲ್ಲ ತಮ್ಮನ್ನು ಉದ್ದೇಶಿಸಿಯೇ ಎಂದೆನಿಸಿತು ಅವರಿಗೆ.

ಶ್ರೀರಾಮಕೃಷ್ಣರು ಹೇಳುತ್ತಿದ್ದರು : "ಗೊತ್ತೇನು ? ಕಾಮ ಕಾಂಚನಗಳೆಲ್ಲ ಮಿಥ್ಯೆ, ಜಗತ್ತು ಅಸತ್ ಎಂಬುದನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು ಸಾಧಾರಣ ವಿಷಯವೇನು ? ಭಗವಂತನ ದಯೆ ಇಲ್ಲದೆ ಅದು ಸಾಧ್ಯವೆ ? ಅವನೇ ಕೃಪೆದೋರಿ ಈ ಗ್ರಹಣಶಕ್ತಿಯನ್ನು ನಮಗಿತ್ತರೆ ಆಗ ಸಾಧ್ಯ. ಅದಿಲ್ಲದಿದ್ದರೆ ಮನುಷ್ಯನು ಸಾಧನೆಯ ಮೂಲಕ ಇದನ್ನು ಅರ್ಥಮಾಡಿಕೊಳ್ಳುವುದು ಸಾಧ್ಯವೆ ? ಅವನ ಶಕ್ತಿ ಅತ್ಯಲ್ಪ. ಆ ಶಕ್ತಿಯಿಂದ ಅವನು ಎಷ್ಟು ಪ್ರಯತ್ನಿಸಬಲ್ಲ ?" ಹೀಗೆ ಭಗವಂತನ ದಯೆಯನ್ನು ಕುರಿತು ಮಾತನಾಡುತ್ತಿದ್ದಂತೆಯೆ ಶ್ರೀರಾಮಕೃಷ್ಣರಿಗೆ ಸಮಾಧಿ ಯುಂಟಾಯಿತು. ಸ್ವಲ್ಪ ಹೊತ್ತಿನನಂತರ ಅರ್ಧಬಾಹ್ಯ ಪ್ರಜ್ಞೆಯನ್ನು ಪಡೆದು ಹೇಳಿದರು : "ಒಂದನ್ನೇ ಸರಿಯಾಗಿ ಮಾಡಲಾಗುವುದಿಲ್ಲ, ಮತ್ತೆ ಬೇರೊಂದನ್ನು ಬಯಸುವುದು !" ಹೀಗೆ ಹೇಳುತ್ತ ಶ್ರೀರಾಮಕೃಷ್ಣರು ಹಾಡತೊಡಗಿದರು :

"ಗರ್ವವಿದೇಕೆ, ಕುಶಲವರೆ ನಿಮಗೆ ?
ನನ್ನಿಚ್ಛೆಯಿಲ್ಲದಿರೆ ಎನ್ನ ಬಂಧಿಪಿರೇನು ?"

ಹಾಡುತ್ತಿದ್ದಂತೆಯೆ ಅವರ ಕಣ್ಣಿನಿಂದ ಎಷ್ಟೊಂದು ಕಂಬನಿ ಸುರಿಯಿತೆಂದರೆ ಮಂಚದ ಹೊದಿಕೆಯೂ ಒದ್ದೆಯಾಗುವಷ್ಟು ! ತುರೀಯಾನಂದರೂ ಭಾವಾವೇಶದಿಂದ ಕಂಬನಿ ಸುರಿಸಿದರು. ಸ್ವಲ್ಪ ಹೊತ್ತಿನನಂತರ ಇಬ್ಬರೂ ಸಾಮಾನ್ಯ ಸ್ಥಿತಿಗೆ ಬಂದರು. ತುರೀಯಾನಂದರು ಹೇಳುತ್ತಾರೆ : "ಅಂದು ನಾನು ಕಲಿತ ಪಾಠ ಶಾಶ್ವತವಾಗಿ ನನ್ನ ಹೃದಯದಲ್ಲಿ ಮುದ್ರಿತವಾಯಿತು. ಅಂದಿನಿಂದ ನನಗೆ ತಿಳಿಯಿತು, ಭಗವತ್ ಕೃಪೆ ಇಲ್ಲದೆ ಏನೂ ನಡೆಯುವುದಿಲ್ಲ ಎಂದು."

37. ಶ್ರೀರಾಮಕೃಷ್ಣರಲ್ಲಿ ಅದ್ವೈತಜ್ಞಾನವು ಎಷ್ಟೊಂದು ಗಂಭೀರವಾಗಿತ್ತು ಎಂಬುದರ ಬಗ್ಗೆ ಇಲ್ಲಿ ಇನ್ನೊಂದು ವಿಷಯವನ್ನು ಹೇಳಬೇಕಾಗಿದೆ. ಶ್ರೀರಾಮಕೃಷ್ಣರು ಕಾಶೀಪುರದಲ್ಲಿದ್ದ ಸಮಯ. ಅವರಿಗೆ ಕಾಯಿಲೆಯಾಗಿತ್ತು. ಶಶಧರ ತರ್ಕ ಚೂಡಾಮಣಿ ಮತ್ತಿತರರು ಅವರನ್ನು ನೋಡಲು ಬಂದರು. ಶಶಧರನು ಮಾತಿನ ಮಧ್ಯೆ ಹೇಳಿದನು : "ಮಹಾಶಯರೆ, ನಿಮ್ಮಂತಹ ವ್ಯಕ್ತಿಗಳು ಇಚ್ಛಾಮಾತ್ರ ದಿಂದಲೇ ಶರೀರದ ರೋಗವನ್ನು ಗುಣಪಡಿಸಬಲ್ಲರು ಎಂದು ಶಾಸ್ತ್ರದಲ್ಲಿ ಓದಿರುವೆನು. ಗುಣವಾಗಲಿ ಎಂದು ರೋಗದ ಸ್ಥಾನದಲ್ಲಿ ಮನಸ್ಸನ್ನು ಏಕಾಗ್ರಗೊಳಿಸಿದರೇ ಸಾಕು ರೋಗವು ವಾಸಿಯಾಗುವುದು. ನೀವು ಏಕೆ ಹಾಗೆ ಮಾಡಬಾರದು ?" ಶ್ರೀರಾಮ ಕೃಷ್ಣರು ನುಡಿದರು : "ನೀನು ಪಂಡಿತನಾಗಿಯೂ ಇಂಥ ಮಾತನ್ನು ಆಡುತ್ತೀಯಲ್ಲ ? ಯಾವ ಮನಸ್ಸನ್ನು ಸಚ್ಚಿದಾನಂದಕ್ಕೆ ನೀಡಿರುವೆನೊ ಅದನ್ನು ಅಲ್ಲಿಂದ ತೆಗೆದು ಈ ಮಾಂಸ ಮೂಳೆಯ ಪಂಜರದಲ್ಲಿ ಇರಿಸುವ ಪ್ರವೃತ್ತಿ ಹೇಗೆ ಬಂದೀತು ?" ಪಂಡಿತನು ನಿರುತ್ತರನಾದನು.

38. ಆದರೆ ಸ್ವಾಮಿ ವಿವೇಕಾನಂದ ಮತ್ತಿತರ ಭಕ್ತರು ಅಷ್ಟಕ್ಕೆ ಸುಮ್ಮನಾಗ

ಲಿಲ್ಲ. ಪಂಡಿತನು ಹೊರಟು ಹೋದಮೇಲೆ ಮತ್ತೆ ಅವರನ್ನು ಈ ವಿಷಯದಲ್ಲಿ ಒತ್ತಾಯಿಸತೊಡಗಿದರು. "ನೀವು ರೋಗವನ್ನು ವಾಸಿಪಡಿಸಲೇಬೇಕು, ನಮಗಾಗಿ ಮಾಡಬೇಕು" ಎಂದು ಅವರು ಹೇಳತೊಡಗಿದರು.

ಶ್ರೀರಾಮಕೃಷ್ಣ : "ನಾನು ರೋಗವನ್ನು ಅನುಭವಿಸಬೇಕೆಂಬುದು ನನ್ನ ಇಚ್ಛೆಯೇ ? ನಾನು ವಾಸಿಯಾಗಲೆಂದು ಭಾವಿಸಬಹುದು, ಅದು ವಾಸಿಯಾಗಬೇಕಲ್ಲ? ಗುಣಪಡಿಸುವುದು, ಪಡಿಸದೇ ಇರುವುದು ಎಲ್ಲ ತಾಯಿಗೆ ಸೇರಿದ್ದು."

ಸ್ವಾಮಿ ವಿವೇಕಾನಂದ : "ಹಾಗಾದರೆ ಗುಣಪಡಿಸುವಂತೆ ತಾಯಿಗೆ ಹೇಳಿ, ಆಕೆ ನಿಮ್ಮ ಮಾತನ್ನು ಕೇಳಿಯೇ ಕೇಳುತ್ತಾಳೆ."

ಶ್ರೀರಾಮಕೃಷ್ಣ : "ನೀವೇನೊ ಹಾಗೆ ಹೇಳುತ್ತೀರಿ. ಆದರೆ ನನ್ನ ಬಾಯಿಂದ ಆ ಮಾತು ಹೇಗೆ ಹೊರಬಂದೀತು ?"

ಸ್ವಾಮೀಜೀ : ಅದು ನಡೆಯುವುದಿಲ್ಲ. ನೀವು ಹೇಳಲೇ ಬೇಕು. ನಮಗಾಗಿ ಹೇಳಲೇ ಬೇಕು."

ಶ್ರೀರಾಮಕೃಷ್ಣ : "ಆಗಲಿ ನೋಡುತ್ತೇನೆ. ಸಾಧ್ಯವಾದರೆ ಹೇಳುತ್ತೇನೆ."

ಕೆಲವು ಗಂಟೆಗಳನಂತರ ಸ್ವಾಮೀಜೀ ಮತ್ತೆ ಬಂದು ಪ್ರಶ್ನಿಸಿದರು : "ಕೇಳಿದಿರಾ ? ತಾಯಿ ಏನು ಹೇಳಿದಳು ?"

ಶ್ರೀರಾಮಕೃಷ್ಣ : "ತಾಯಿಗೆ ಹೇಳಿದೆ : (ಗಂಟಲಿನ ಹುಣ್ಣನ್ನು ತೋರಿಸಿ) 'ತಾಯಿ, ಇದರ ನೋವಿನಿಂದ ಏನೂ ತಿನ್ನಲಾಗುತ್ತಿಲ್ಲ. ಸ್ವಲ್ಪ ತಿನ್ನಲು ಸಾಧ್ಯವಾಗುವಂತೆ ಮಾಡು.' ತಾಯಿ ನಿಮ್ಮೆಲ್ಲರನ್ನು ತೋರಿಸಿ ಹೇಳಿದಳು : 'ಏಕೆ ? ಇಷ್ಟೊಂದು ಬಾಯಿಗಳ ಮೂಲಕ ತಿನ್ನುತ್ತಿರುವೆಯಲ್ಲ ?' ನನಗೆ ಅದನ್ನು ಕೇಳಿ ನಾಚಿಕೆಯಿಂದ ಮಾತೇ ಆಡಲಾಗಲಿಲ್ಲ."

39. ದೇಹಬುದ್ಧಿಯನ್ನು ಇಷ್ಟೊಂದು ಮೀರಿಹೋಗಿರುವುದನ್ನು ನೋಡಿ ಆಶ್ಚರ್ಯವಾಗುವುದು. ಅದ್ವೈತಜ್ಞಾನದಲ್ಲಿ ಅವರು ಎಷ್ಟೊಂದು ದೃಢವಾಗಿ ನೆಲೆ ನಿಂತಿದ್ದರು ! ಆಗ ಶ್ರೀರಾಮಕೃಷ್ಣರು ಆರೇಳು ತಿಂಗಳುಗಳಿಂದ ಸೇವಿಸುತ್ತಿದ್ದ ಆಹಾರ ಕೇವಲ ನಾಲ್ಕೈದು ಛಟಾಕು ಬಾರ್ಲಿ ನೀರು ಅಷ್ಟೇ. ಇಂಥ ಸ್ಥಿತಿಯಲ್ಲಿರುವಾಗ ಜಗನ್ಮಾತೆಯು ಇಷ್ಟೊಂದು ಬಾಯಿಗಳ ಮೂಲಕ ಉಣ್ಣುತ್ತಿರುವೆಯಲ್ಲ !—ಎಂದು ಹೇಳಿದುದು. ಈ ಕ್ಷುದ್ರ ದೇಹವನ್ನು 'ನಾನು' ಎಂದು ಹೇಳುವುದಕ್ಕೆ ಎಂಥ ಕೆಟ್ಟ ಕೆಲಸ ಮಾಡಿರಬೇಕು ? ಎಂದು ಭಾವಿಸುತ್ತ ಶ್ರೀರಾಮಕೃಷ್ಣರು ನಾಚಿಕೆಯಿಂದ ತಲೆ ತಗ್ಗಿಸಿದರು. ಅವರ ಬಾಯಿಂದ ಮಾತೇ ಹೊರಡಲಿಲ್ಲ. ಇಂಥ ಉನ್ನತ ಸ್ಥಿತಿಯನ್ನು ಕಲ್ಪಿಸಿಕೊಳ್ಳಲು ಸಾಧ್ಯವೆ ?

40. ಶ್ರೀರಾಮಕೃಷ್ಣರಲ್ಲಿ ಏನೆಲ್ಲ ಅದ್ಭುತವನ್ನು ಕಾಣುವ ಭಾಗ್ಯ ನಮ್ಮ ಪಾಲಿನದಾಗಿತ್ತು ! ಜ್ಞಾನ ಮತ್ತು ಭಕ್ತಿ ಯೋಗ ಮತ್ತು ಕರ್ಮ, ಸನಾತನ ಮತ್ತು ಆಧುನಿಕತೆ ಹಾಗೂ ಎಲ್ಲ ರೀತಿಯ ಧರ್ಮಭಾವಗಳು—ಇವೆಲ್ಲದರ ಒಂದು ಅಪೂರ್ವ

ಸಾಮರಸ್ಯವನ್ನು ನಾವು ಅವರಲ್ಲಿ ಕಂಡೆವು. ನಿಜವಾದ ಬ್ರಹ್ಮಜ್ಞಾನಿಗಳು ಸರ್ವಜ್ಞರೂ ಸತ್ಯಸಂಕಲ್ಪರೂ ಆಗುತ್ತಾರೆಂದು ಉಪನಿಷತ್ತು ಹೇಳುತ್ತದೆ. ಹೊರಗಿನ ಎಲ್ಲ ವಸ್ತುಗಳು ಮತ್ತು ಶಕ್ತಿಗಳು ಅವರ ಇಚ್ಛೆಯನ್ನು ಮನ್ನಿಸಿ ಅದಕ್ಕನುಗುಣವಾಗಿ ಪರಿವರ್ತನೆಯನ್ನು ಹೊಂದುವುವು. ಆದ್ದರಿಂದ ಅವರ ದೇಹ ಮನಸ್ಸುಗಳು ಅದೇ ರೀತಿ ಮಾಡುವುದರಲ್ಲಿ ಆಶ್ಚರ್ಯವೇ ಇಲ್ಲ. ಉಪನಿಷತ್ತಿನ ಆ ಮಾತಿನಲ್ಲಿ ಸತ್ಯತೆಯನ್ನು ಸಾಧಾರಣ ಮನುಷ್ಯರಿಗೆ ಪರೀಕ್ಷಿಸುವುದು ಸಾಧ್ಯವಿಲ್ಲ. ನಮ್ಮ ಅಲ್ಪ ಶಕ್ತಿಗೆ ಎಷ್ಟು ಸಾಧ್ಯವೊ ಅಷ್ಟರ ಮಟ್ಟಿಗೆ ಶ್ರೀರಾಮಕೃಷ್ಣರನ್ನು ಈ ವಿಷಯದಲ್ಲಿ ಪರೀಕ್ಷಿಸಿರುವೆವು. ಶ್ರೀರಾಮಕೃಷ್ಣರು ಪ್ರತಿಬಾರಿಯೂ ಲೀಲಾಜಾಲವಾಗಿ ನಗುನಗುತ್ತ ಈ ಪರೀಕ್ಷೆಯಲ್ಲಿ ಗೆದ್ದಿದ್ದರು. ಅನಂತರ ವ್ಯಂಗ್ಯವಾಗಿ ಕೇಳುತ್ತಿದ್ದರು, 'ಇನ್ನೂ ವಿಶ್ವಾಸವುಂಟಾಗಲಿಲ್ಲವೆ ?' ಎಂದು. ಅವರು ಒತ್ತಿಹೇಳುತ್ತಿದ್ದರು : "ವಿಶ್ವಾಸವಿರಿಸು, ಅದು ಪಕ್ವವಾಗಲಿ. ಹಿಂದೆ ಯಾರು ರಾಮನೊ ಯಾರು ಕೃಷ್ಣನೊ ಅವನೇ ಈಗ ಈ ಶರೀರದಲ್ಲಿ. ಆದರೆ ಈಗ ಗುಪ್ತರೀತಿಯಲ್ಲಿ ಬಂದಿರುವನು. ಹೇಗೆ ರಾಜನು ತನ್ನ ರಾಜ್ಯದಲ್ಲಿ ಮಾರುವೇಶದಲ್ಲಿ ಸಂಚರಿಸುವನೊ ಹಾಗೆ. ಅವನು ಎಲ್ಲಿ ಗೊತ್ತಾಗಿ ಬಿಡುವ ಸಂಭವವುಂಟೊ ಅಲ್ಲಿಂದ ನುಣಚಿಕೊಂಡು ಹೋಗುವನು."

41. ಶ್ರೀರಾಮಕೃಷ್ಣರ ಜೀವನದಲ್ಲಿ ಬರುವ ಅನೇಕ ಘಟನೆಗಳಿಂದ ಮೇಲಿನ ಉಪನಿಷತ್ ವಾಕ್ಯದ ಯಥಾರ್ಥತೆಯನ್ನು ನಾವು ಸರಿಯಾಗಿ ತಿಳಿಯುವಂತಾಯಿತು. ಸಾಧಾರಣವಾಗಿ ಮನುಷ್ಯನ ಮನಸ್ಸಿನಲ್ಲಿ ಯಾವ ಯಾವ ಭಾವವಿಕಾರಗಳು ಉಂಟಾಗುವುವೊ ಅವುಗಳ ಪರಿಮಾಣ ತೀವ್ರತೆ ಇತ್ಯಾದಿಗಳನ್ನು ಅವನು ಮಾತ್ರ ಸರಿಯಾಗಿ ಅರ್ಥಮಾಡಿಕೊಳ್ಳಬಲ್ಲ, ಅಂದರೆ ಅವು ಸ್ವಯಂವೇದ್ಯ. ಇತರರು ಅವುಗಳ ಬಾಹ್ಯ ಅಭಿವ್ಯಕ್ತಿಯ ಆಧಾರದ ಮೇಲೆ ಅವುಗಳನ್ನು ಊಹಿಸಬಹುದು ಅಷ್ಟೇ. ಭಾವ ಸಮಾಧಿಯ ಈ ರೀತಿಯ ಸ್ವಸಂವೇದ್ಯ ಸ್ವಭಾವವು ಎಲ್ಲರಿಗೂ ತಿಳಿದ ವಿಷಯ. ಬೇರೆ ಬೇರೆ ಎಲ್ಲ ಚಿಂತನೆಗಳಂತೆ ಭಾವಗಳೂ ಮಾನಸಿಕ ವಿಕಾರಗಳು, ಅವು ಮನಸ್ಸಿನಲ್ಲಿ ಉದಯವಾಗಿ ಮನಸ್ಸಿನಲ್ಲಿಯೆ ಲಯಹೊಂದುವುವು–ಎಂಬುದನ್ನು ಎಲ್ಲರೂ ತಿಳಿದಿರುವರು. ಹೊರಗಡೆ ಅವುಗಳ ಚಿತ್ರ ಅಥವಾ ಪ್ರತಿಕೃತಿಯನ್ನು ಕಾಣುವುದು ಸಾಧ್ಯವಿಲ್ಲ. ಶ್ರೀರಾಮಕೃಷ್ಣರ ಅನೇಕ ಭಾವನೆಗಳ ವಿಷಯದಲ್ಲಿ ಇದಕ್ಕೆ ವಿರುದ್ಧವಾದುದನ್ನು ನಾವು ನೋಡಿರುವೆವು. ಉದಾಹರಣೆಗೆ ಈ ಘಟನೆಯನ್ನು ನೋಡಿ. ಸಾಧನೆಯ ಕಾಲದಲ್ಲಿ ಶ್ರೀರಾಮಕೃಷ್ಣರು ಪಂಚವಟಿಯ ಐದು ಸಸಿಗಳನ್ನು ತಾವೇ ನೆಟ್ಟಿದ್ದರು. ಹಸು ಆಡುಗಳು ಅವುಗಳನ್ನು ತಿಂದುಹಾಕಬಹುದೆಂದು ಅವುಗಳ ಸುತ್ತ ಬೇಲಿ ಹಾಕಬೇಕೆಂಬ ಇಚ್ಛೆಯಾಯಿತು ಶ್ರೀರಾಮಕೃಷ್ಣರಿಗೆ. ಕೂಡಲೆ ಅದಕ್ಕೆ ಬೇಕಾದ ವಸ್ತುಗಳು–ಕಂಬ ಹಗ್ಗ ಮುಂತಾದುವುಗಳು ನದಿಯಲ್ಲಿ ತೇಲಿಕೊಂಡು ಬಂದು ಆ ಜಾಗದಲ್ಲಿ ಬಿದ್ದವು. ಅಷ್ಟೇ ಅಲ್ಲದೆ ಕಾಳೀ ಮಂದಿರದ ಒಬ್ಬ ಮಾಲಿಯು ಬೇಲಿಕಟ್ಟಲು ಸಹಾಯ ಮಾಡಿದ. ಇನ್ನೊಂದು ಘಟನೆ. ಶ್ರೀರಾಮಕೃಷ್ಣರು ಒಮ್ಮೆ ಮಥುರನಾಥನೊಡನೆ ತರ್ಕ ಮಾಡುತ್ತಿರುವಾಗ ಈಶ್ವರೇಚ್ಛೆಯಿಂದ ಏನೂ ಆಗಬಹುದು–ಕೆಂಪು ಹೂವಿನ ಗಿಡದಲ್ಲಿ ಬಿಳಿಯ

ಹೂವೂ ಬಿಡಬಹುದು–ಎಂದರು. ಮಥುರನು ಇದನ್ನು ಒಪ್ಪಲಿಲ್ಲ. ಮರುದಿನ ತೋಟದಲ್ಲಿ ಒಂದು ದಾಸವಾಳದ ಗಿಡದ ಒಂದು ಕೊಂಬೆಯಲ್ಲಿ ಎರಡು ಬಣ್ಣದ ಹೂವುಗಳು ಬಿಟ್ಟಿರುವುದನ್ನು ಶ್ರೀರಾಮಕೃಷ್ಣರು ನೋಡಿದರು. ಅವರು ಆ ಕೊಂಬೆಯನ್ನೇ ಮುರಿದು ತೆಗೆದುಕೊಂಡು ಹೋಗಿ ಮಥುರನಿಗೆ ತೋರಿಸಿದರು. ಇನ್ನೊಂದು ಘಟನೆ. ತಂತ್ರ ವೇದಾಂತ ವೈಷ್ಣವ ಇಸ್ಲಾಂ ಮುಂತಾದ ಸಾಧನೆಗಳನ್ನು ಮಾಡಲು ಅವರಿಗೆ ಇಚ್ಛೆಯಾದಾಗ ಅವಕ್ಕೆ ಬೇಕಾದ ಮಾರ್ಗದರ್ಶಕರು ದಕ್ಷಿಣೇಶ್ವರಕ್ಕೆ ಬರುತ್ತಿದ್ದರು. ಮತ್ತೊಂದು ಘಟನೆ, ಶ್ರೀರಾಮಕೃಷ್ಣರು ತಮ್ಮ ಅಂತರಂಗ ಭಕ್ತರನ್ನು ದರ್ಶನದಲ್ಲಿ ಕಂಡಿದ್ದರು ಮತ್ತು ಅವರ ಬರುವಿಕೆಗಾಗಿ ಹಾತೊರೆಯುತ್ತಿದ್ದರು. ಅವರು ಬರತೊಡಗಿದ ಮೇಲೆ ಪ್ರತಿಯೊಬ್ಬರನ್ನೂ ಗುರುತಿಸಿದರು. ಈ ರೀತಿ ಅನೇಕ ಘಟನೆಗಳನ್ನು ಉಲ್ಲೇಖಿಸಬಹುದು. ಇವನ್ನೆಲ್ಲ ಗಮನಿಸಿದಾಗ ನಮಗನಿಸುವುದೇನೆಂದರೆ: ಸಾಧಾರಣ ಮಾನವರಲ್ಲಿ ಮಾನಸಿಕ ಭಾವಗಳು ಕೇವಲ ಮಾನಸಿಕ ವಿಕಾರಗಳಾಗಿಯೇ ಉಳಿಯುವಂತೆ ಶ್ರೀರಾಮಕೃಷ್ಣರಲ್ಲಿ ಆಗಲಿಲ್ಲ. ಬಾಹ್ಯ ಘಟನೆಗಳು, ನಮಗೆ ತಿಳಿಯದ ಯಾವುದೋ ನಿಯಮಾನುಸಾರವಾಗಿ, ಅವರ ಭಾವಕ್ಕೆ ಅಥವಾ ಇಚ್ಛೆಗೆ ಅನುಗುಣವಾಗಿ ಪರಿವರ್ತನೆಗೊಳ್ಳುತ್ತಿದ್ದವು. ಇಲ್ಲಿ ನಾವು ಈ ಸತ್ಯದ ನಿರ್ದೇಶನವನ್ನು ಮಾತ್ರ ಮಾಡಿರುವೆವು. ಓದುಗರು ತಮ್ಮ ಅಭಿರುಚಿಗೆ ಅನುಗುಣವಾಗಿ ಈ ಘಟನೆಗಳ ಬಗ್ಗೆ ಒಂದು ನಿರ್ಧಾರಕ್ಕೆ ಬರಬಹುದು.

42. ಶ್ರೀರಾಮಕೃಷ್ಣರು ನಿರ್ವಿಕಲ್ಪ ಸಮಾಧಿಯಲ್ಲಿ ಇಲ್ಲದಿರುವಾಗ 'ಭಾವಮುಖ' ಸ್ಥಿತಿಯಲ್ಲಿ ಇರುತ್ತಿದ್ದರು ಎಂಬುದನ್ನು ಮೊದಲೇ ಹೇಳಿರುವೆವು. ಇದರಿಂದಾಗಿಯೇ ಅವರು ತಮ್ಮೆಡೆಗೆ ಬರುತ್ತಿದ್ದ ಪ್ರತಿಯೊಬ್ಬ ಭಕ್ತರೊಡನೆಯೂ ಬೇರೆ ಬೇರೆ ಭಾವಸಂಬಂಧವನ್ನು ಇಟ್ಟುಕೊಂಡಿದ್ದರು. ಶ್ರೀಜಗನ್ಮಾತೆಯ ಹ್ಲಾದಿನೀ ಮತ್ತು ಸ್ಪಂದಿನೀ ಶಕ್ತಿಯ ವಿಶೇಷ ರೂಪಗಳಾದ ಸ್ತ್ರೀಯರನ್ನೆಲ್ಲ ಮಾತೃಭಾವದಿಂದ ಕಾಣುತ್ತಿದ್ದರು. ಈ ವಿಷಯ ಸಾಧಾರಣವಾಗಿ ಎಲ್ಲರಿಗೂ ತಿಳಿದ ವಿಷಯ. ಆದರೆ ಪುರುಷ ಭಕ್ತರೊಡನೆಯೂ ಅವರು ಬೇರೆ ಬೇರೆ ಸಂಬಂಧವನ್ನಿಟ್ಟುಕೊಂಡಿದ್ದ ವಿಷಯ ಎಲ್ಲರಿಗೂ ತಿಳಿಯದು. ಆದ್ದರಿಂದ ಈ ಸಂಬಂಧದ ಬಗ್ಗೆ ಇಲ್ಲಿ ಸ್ವಲ್ಪ ಹೇಳುವುದು ಅಪ್ರಾಸಂಗಿಕವಾಗಲಾರದು. ಸಾಧಾರಣವಾಗಿ ಶ್ರೀರಾಮಕೃಷ್ಣರು ತಮ್ಮ ಭಕ್ತರನ್ನು ಎರಡು ವರ್ಗಗಳಾಗಿ ವಿಂಗಡಿಸುತ್ತಿದ್ದರು : ಶಿವಾಂಶಸಂಭೂತರು ಮತ್ತು ವಿಷ್ಣು-ಅಂಶಸಂಭೂತರು. ಈ ಎರಡು ವರ್ಗದ ಭಕ್ತರ ಸ್ವಭಾವದಲ್ಲಿ, ಆಚಾರ ವ್ಯವಹಾರದಲ್ಲಿ ಸಾಧನೆಗಳಲ್ಲಿ—ಹೀಗೆ ಎಲ್ಲ ವಿಷಯಗಳಲ್ಲಿಯೂ ಭೇದವುಂಟು. ಇದನ್ನು ಶ್ರೀರಾಮಕೃಷ್ಣರು ಸರಿಯಾಗಿ ಅರ್ಥಮಾಡಿಕೊಂಡಿದ್ದರು. ಆದರೆ ಈ ಒಂದು ಪ್ರತ್ಯೇಕತೆ ಏನು ಎಂಬುದನ್ನು ವಿಶೇಷರೀತಿಯಲ್ಲಿ ಓದುಗರಿಗೆ ತಿಳಿಸುವುದು ನಮಗೆ ಸಾಧ್ಯವಾಗದ ಕೆಲಸ.

43. ಸಂಕ್ಷೇಪವಾಗಿ ಇಷ್ಟು ಹೇಳಬಹುದು : ಶಿವಪ್ರಕೃತಿ ಮತ್ತು ವಿಷ್ಣುಪ್ರಕೃತಿ ಎಂಬುದು ಎರಡು ಆದರ್ಶ ಅಚ್ಚುಗಳಿದ್ದಂತೆ (model). ಈ ಎರಡು ಅಚ್ಚು

ಗಳು ಭಕ್ತರ ಪ್ರತಿಯೊಂದು ಸ್ವಭಾವವನ್ನೂ ರೂಪಿಸುತ್ತವೆ. ತಮ್ಮ ಎಲ್ಲ ಭಕ್ತರೊಡನೆ ಶ್ರೀರಾಮಕೃಷ್ಣರು ಶಾಂತ ದಾಸ್ಯ ಮುಂತಾದ ವಿವಿಧ ಭಾವಗಳ ಸಂಬಂಧವನ್ನು ಇಟ್ಟು ಕೊಂಡಿದ್ದರು. ಬೇರೆ ಬೇರೆ ವ್ಯಕ್ತಿಗಳೊಡನೆ ಬೇರೆ ಬೇರೆ ಸಂಬಂಧವಿತ್ತು. ಉದಾ: ಸ್ವಾಮಿ ವಿವೇಕಾನಂದರ ಬಗ್ಗೆ ಅವರು ಹೇಳುತ್ತಿದ್ದರು: "ನರೇಂದ್ರನು ನನ್ನ ಪ್ರತಿ ರೂಪವಿದ್ದಂತೆ—(ತಮ್ಮ ದೇಹವನ್ನು ತೋರಿಸಿ) ಇಲ್ಲಿರುವುದು ಸ್ತ್ರೀತತ್ವವಾದರೆ, (ವಿವೇಕಾನಂದರನ್ನು ತೋರಿಸಿ) ಅವನಲ್ಲಿರುವುದು ಪುರುಷತತ್ವ." ಸ್ವಾಮಿ ಬ್ರಹ್ಮಾ ನಂದರನ್ನು (ರಾಖಾಲ ಮಹಾರಾಜ್) ತಮ್ಮ ಮಾನಸಪುತ್ರನೆಂದು ಪರಿಗಣಿಸುತ್ತಿದ್ದರು. ಹೀಗೆ ಬೇರೆ ಬೇರೆ ಗೃಹಸ್ಥ ಮತ್ತು ಸಂನ್ಯಾಸೀ ಭಕ್ತರೊಡನೆ ಅವರು ಬೇರೆ ಬೇರೆ ಸಂಬಂಧವನ್ನು ಇಟ್ಟುಕೊಂಡಿದ್ದರು, ಬೇರೆ ಬೇರೆ ಭಾವದಲ್ಲಿ ಅವರನ್ನು ನೋಡು ತ್ತಿದ್ದರು. ಸಾಧಾರಣ ಭಕ್ತರೆಲ್ಲರನ್ನೂ ಅವರು ನಾರಾಯಣ ದೃಷ್ಟಿಯಿಂದ ನೋಡು ತ್ತಿದ್ದರಿಂದ ಅವರೊಡನೆ ಶಾಂತಭಾವದ ಸಂಬಂಧವನ್ನು ಇಟ್ಟುಕೊಂಡಿದ್ದರೆನ್ನಬಹುದು.

44. ಪ್ರತಿಯೊಬ್ಬ ಭಕ್ತನ ಆಂತರಿಕ ಪ್ರಕೃತಿಯನ್ನು ಅರ್ಥಮಾಡಿಕೊಂಡೆ ಶ್ರೀರಾಮಕೃಷ್ಣರು ಅದಕ್ಕನುಗುಣವಾದ ಸಂಬಂಧವನ್ನು ಬೆಳೆಸುತ್ತಿದ್ದರು. ಏಕೆಂದರೆ ಅವರೇ ಹೇಳುತ್ತಿದ್ದರು: "ಮನುಷ್ಯನೊಳಗೆ ಏನು ಇದೆ ಅದನ್ನೆಲ್ಲ ನಾನು ನೋಡು ತ್ತೇನೆ. ಗಾಜಿನ ಬೀರುವಿನಲ್ಲಿ ಇರುವ ವಸ್ತುಗಳೆಲ್ಲ ಕಾಣುವಂತೆ ಮನುಷ್ಯರ ಒಳಗಿರುವು ದೆಲ್ಲ ನನಗೆ ಕಾಣುತ್ತದೆ." ಯಾರ ಸ್ವಭಾವ ಎಂತಹುದೊ ಅದಕ್ಕೆ ವಿರುದ್ಧವಾಗಿ ವ್ಯವಹರಿಸಲು ಸಾಧ್ಯವಿಲ್ಲ. ಆದ್ದರಿಂದ ಶ್ರೀರಾಮಕೃಷ್ಣರು ಭಕ್ತರೊಡನೆ ಯಾವ ಸಂಬಂಧವನ್ನು ಇಟ್ಟುಕೊಂಡಿದ್ದರೊ ಅದಕ್ಕೆ ವಿಪರೀತವಾಗಿ ವರ್ತಿಸುವುದು ಯಾವ ಭಕ್ತರಿಗೂ ಸಾಧ್ಯವಾಗುತ್ತಿರಲಿಲ್ಲ. ಯಾರಾದರೂ ಇತರರಿಗೆ ಕಾಣುವಂತೆ ತಮ್ಮ ಭಾವಕ್ಕೆ ವಿರುದ್ಧ ರೀತಿಯಲ್ಲಿ ವರ್ತಿಸಿದರೆ ಶ್ರೀರಾಮಕೃಷ್ಣರು ಬೇಸರಗೊಂಡು ಅವರ ತಪ್ಪನ್ನು ಸರಿಪಡಿಸುತ್ತಿದ್ದರು. ಗಿರೀಶಚಂದ್ರನನ್ನು ಶ್ರೀರಾಮಕೃಷ್ಣರು ಭೈರವ ಎಂದು ಹೇಳುತ್ತಿದ್ದರು. ದಕ್ಷಿಣೇಶ್ವರದ ಕಾಳೀಮಂದಿರದಲ್ಲಿ ಭಾವಸಮಾಧಿಯ ವೇಳೆ ಅವನನ್ನು ಆ ರೀತಿ ಕಂಡಿದ್ದರು. ಗಿರೀಶಚಂದ್ರನ ಎಷ್ಟೊ ಕಟು ವಾಕ್ಯಗಳನ್ನು ಶ್ರೀರಾಮಕೃಷ್ಣರು ಸಹಿಸುತ್ತಿದ್ದರು. ಏಕೆಂದರೆ ಅವನ ಒರಟು ಭಾಷೆಯ ಹಿಂದೆ ಪೂರ್ಣ ನಿರ್ಭರತೆಯ ಭಾವ ಅಡಗಿರುವುದು ಅವರಿಗೆ ತಿಳಿದಿತ್ತು. ಗಿರೀಶನಿಗೆ ಕಾಣಿಸುವಂತೆ ಇನ್ನೊಬ್ಬ ಪ್ರಿಯ ಭಕ್ತನು ಒಂದು ದಿನ ಇದೇ ರೀತಿ ಕೆಟ್ಟ ಭಾಷೆಯನ್ನು ಪ್ರಯೋಗಿಸಿದಾಗ ಶ್ರೀರಾಮಕೃಷ್ಣರು ಅವನ ಮೇಲೆ ಕೋಪಗೊಂಡಿದ್ದರು. ಆ ನಂತರ ಅವನ ತಪ್ಪನ್ನು ತೋರಿಸಿಕೊಟ್ಟರು. ಈ ಮಾತನ್ನು ಇಲ್ಲಿಗೆ ನಿಲ್ಲಿಸಿ ಈಗ ಹೇಳಬೇಕಾದುದನ್ನು ಮುಂದುವರಿಸುತ್ತೇವೆ.

45. ಭಾವ ಮುಖದಲ್ಲಿದ್ದ ಶ್ರೀರಾಮಕೃಷ್ಣರು ತಮ್ಮ ಪ್ರತಿಯೊಬ್ಬ ಭಕ್ತ ರೊಡನೆ, ಅವರವರ ಪ್ರಕೃತಿಗನುಗುಣವಾಗಿ ಆಧ್ಯಾತ್ಮಿಕ ಭಾವವನ್ನು ಸರಿಯಾಗಿ ಅರ್ಥ ಮಾಡಿಕೊಂಡು, ಅದಕ್ಕನುಗುಣವಾದ ಸಂಬಂಧವನ್ನು ಹೊಂದಿರುತ್ತಿದ್ದರು. ಹಾಗೆಯೇ

ಅವರವರ ಭಾವಕ್ಕೆ ಅನುಗುಣವಾಗಿ ಆಧ್ಯಾತ್ಮಿಕ ಸಾಧನೆಯಲ್ಲಿ ಮುಂದುವರಿಯಲು ಅವರಿಗೆ ಸಹಾಯ ಮಾಡುತ್ತಿದ್ದರು. ಪ್ರಥಮ ಕಾಳೀ ದರ್ಶನವಾದಾಗಲೇ ಶ್ರೀರಾಮಕೃಷ್ಣರು ಅದ್ವೈತಾನುಭವವನ್ನು ಪಡೆದಿದ್ದರು. ಆ ಅದ್ವೈತ ಭಾವ ಭೂಮಿಯಿಂದ ಕೆಳಗಿಳಿದು ಬಂದು ಅವರು ಸಖ್ಯ, ವಾತ್ಸಲ್ಯ ಮತ್ತು ಮಧುರ ಭಾವ ಗಳ ರಸಾಸ್ವಾದನೆಯನ್ನು ಅನುಭವಿಸುವುದಕ್ಕಾಗಿ ಸಾಧನೆ ಮಾಡಿ ಆಯಾಯ ಭಾವದ ಪರಾಕಾಷ್ಠೆಯನ್ನು ಮುಟ್ಟಿದ್ದರು. ಅನೇಕ ದಿನಗಳ ನಂತರ ಹಲವು ಭಕ್ತರು ಅವರೆಡೆಗೆ ಬಂದಾಗ ಒಂದು ದಿನ ಭಾವಾವಸ್ಥೆಯಲ್ಲಿ, ಭಕ್ತರಿಗೂ ಭಾವ ಸಮಾಧಿ ಉಂಟಾಗಲಿ ಎಂಬ ಇಚ್ಛೆ ಅವರಿಗುಂಟಾಯಿತು. ಹಾಗೆಯೇ ಶ್ರೀ ಜಗನ್ಮಾತೆಯನ್ನು ಪ್ರಾರ್ಥಿಸಿದರು. ಇದಾದ ನಂತರವೇ ಕೆಲವು ಭಕ್ತರು ಭಾವ ಸಮಾಧಿಯನ್ನು ಅನು ಭವಿಸಿದರು. ಈ ಅವಸ್ಥೆಯಲ್ಲಿ ಅವರಿಗೆ ಬಾಹ್ಯ ಜಗತ್ತಿನ ಜ್ಞಾನವೂ ದೇಹ ಬುದ್ಧಿಯೂ ಕಡಿಮೆಯಾಗಿತ್ತು. ಒಂದು ಆಂತರಿಕ ಭಾವಪ್ರವಾಹ ಅವರಲ್ಲಿ ಉಂಟಾಗುತ್ತಿತ್ತು. ಉದಾಹರಣೆಗೆ ಯಾವುದಾದರೂ ದಿವ್ಯ ಮೂರ್ತಿಯ ಚಿಂತನೆ ಎಷ್ಟು ಸ್ಪಷ್ಟವಾಗಿರುತ್ತಿತ್ತೆಂದರೆ ಆ ಮೂರ್ತಿಯು ಜ್ವಲಂತವಾಗಿ ಜೀವಂತವಾಗಿ ತಮ್ಮ ಮುಂದೆ ನಿಂತಿರುವಂತೆ, ನಗುತ್ತಿರುವಂತೆ, ಮಾತನಾಡುತ್ತಿರುವಂತೆ ಅವರಿಗೆ ಅನುಭವ ವಾಗುತ್ತಿತ್ತು. ಭಜನೆ ಸಂಕೀರ್ತನೆಗಳನ್ನು ಕೇಳಿದಾಗ ಅವರಿಗೆ ವಿಶೇಷವಾಗಿ ಈ ರೀತಿ ಆಗುತ್ತಿತ್ತು.

46. ಶ್ರೀರಾಮಕೃಷ್ಣರ ಇನ್ನೊಂದು ಬಗೆಯ ಭಕ್ತರಿದ್ದರು. ಅವರಿಗೆ ಸಂಗೀತಾದಿಗಳನ್ನು ಕೇಳಿದಾಗ ಈ ರೀತಿಯ ಅನುಭವವಾಗುತ್ತಿರಲಿಲ್ಲ, ಆದರೆ ಧ್ಯಾನದ ವೇಳೆಯಲ್ಲಿ ದೇವರಮೂರ್ತಿ ಮುಂತಾದ ದರ್ಶನಗಳಾಗುತ್ತಿದ್ದವು. ಮೊದಮೊದಲು ಕೇವಲ ದರ್ಶನವಾಗುತ್ತಿತ್ತು ಅಷ್ಟೆ. ಅನಂತರ ಧ್ಯಾನವು ತುಂಬ ಗಾಢವಾಗಲು ಮೂರ್ತಿಯು ಹರಿದಾಡುವುದು ಮಾತನಾಡುವುದು ಎಲ್ಲ ಅನುಭವವಾಗುತ್ತಿತ್ತು. ಮತ್ತೆ ಕೆಲವರು ಮೊದಮೊದಲು ನಾನಾ ವಿಧದ ದರ್ಶನಗಳನ್ನು ಪಡೆಯುತ್ತಿದ್ದರು. ಆದರೆ ಧ್ಯಾನ ಆಳವಾದಂತೆಲ್ಲ ಅವರಿಗೆ ಯಾವ ದರ್ಶನಗಳೂ ಆಗುತ್ತಿರಲಿಲ್ಲ. ಆಶ್ಚರ್ಯ ವಿಷಯವೇನೆಂದರೆ ಶ್ರೀರಾಮಕೃಷ್ಣರು ಈ ಎಲ್ಲ ದರ್ಶನ ಮತ್ತು ಅನು ಭವಗಳನ್ನು ಕೇಳಿಯೆ ಯಾರು ಯಾವ ಶ್ರೇಣಿಯವನು, ಯಾರಿಗೆ ಏನು ಪ್ರಯೋಜನ ಮತ್ತು ಮುಂದೆ ಯಾರಿಗೆ ಎಂಥ ಅನುಭವವಾಗುವುದು ಎಂಬುದನ್ನು ಅರ್ಥ ಮಾಡಿ ಕೊಳ್ಳುತ್ತಿದ್ದರು. ಇದಕ್ಕೆ ದೃಷ್ಟಾಂತವಾಗಿ ಒಬ್ಬ ವ್ಯಕ್ತಿಯ ವಿಷಯವನ್ನು ಇಲ್ಲಿ ಉದಾಹರಿಸುತ್ತೇವೆ.

47. ನಮ್ಮ ಒಬ್ಬರು ಸ್ನೇಹಿತರಾದ ಸ್ವಾಮಿ ಅಭೇದಾನಂದರು ಶ್ರೀರಾಮಕೃಷ್ಣರ ಮಾರ್ಗದರ್ಶನದಂತೆ ಸಾಧನೆ ಮಾಡಿಕೊಂಡು ಹೋಗುತ್ತಿದ್ದರು. ಮೊದಮೊದಲು ಧ್ಯಾನದ ಸಮಯದಲ್ಲಿ ಅವರಿಗೆ ಇಷ್ಟಮೂರ್ತಿಯ ನಾನಾ ಭಾವಗಳ ದರ್ಶನ ಆಗುತ್ತಿತ್ತು. ತಮಗಾದ ಎಲ್ಲ ಅನುಭವವನ್ನೂ ದಕ್ಷಿಣೇಶ್ವರಕ್ಕೆ ಬಂದಾಗ

ಶ್ರೀರಾಮಕೃಷ್ಣರಿಗೆ ಹೇಳುತ್ತಿದ್ದರು. ಅವರು ಅದನ್ನು ಕೇಳಿ "ಬಹಳ ಒಳ್ಳೆಯದು ಅಥವಾ "ಹೀಗೆ ಮಾಡು" ಇತ್ಯಾದಿ ಹೇಳುತ್ತಿದ್ದರು. ಕೊನೆಗೆ ಒಂದು ದಿನ ಅಭೇದಾನಂದರು ಧ್ಯಾನ ಮಾಡುತ್ತಿರುವಾಗ ಅನೇಕ ದೇವದೇವಿಯರ ಮೂರ್ತಿಗಳು ಒಂದೇ ಮೂರ್ತಿಯ ಅಂಗದೊಡನೆ ಒಂದಾಗುವುದನ್ನು ನೋಡಿದರು. ಶ್ರೀರಾಮಕೃಷ್ಣರಿಗೆ ಇದನ್ನು ತಿಳಿಸಿದಾಗ ಅವರೆಂದರು : "ಹೋಗು, ನಿನಗೆ ವೈಕುಂಠದ ದರ್ಶನವಾಗಿ ಹೋಯಿತು. ಇನ್ನು ಮುಂದೆ ನಿನಗೆ ದರ್ಶನಗಳಾಗುವುದಿಲ್ಲ." ಅಭೇದಾನಂದರು ಹೇಳುತ್ತಾರೆ : ನಿಜವಾಗಿಯೂ ಹಾಗೆಯೇ ಆಯಿತು. ಧ್ಯಾನಮಾಡುವಾಗ ನನಗೆ ಯಾವ ಮೂರ್ತಿಯೂ ಕಾಣುತ್ತಿರಲಿಲ್ಲ. ಭಗವಂತನ ಸರ್ವವ್ಯಾಪಿತ್ವವೇ ಮುಂತಾದ ಉಚ್ಚ ಅನುಭವಗಳು ನನಗಾಗತೊಡಗಿದವು. ನನಗೆ ದಿವ್ಯಮೂರ್ತಿಗಳನ್ನು ನೋಡಬೇಕೆನಿಸುತ್ತಿತ್ತು—ಅದಕ್ಕಾಗಿ ಪ್ರಯತ್ನಿಸುತ್ತಿದ್ದೆ. ಆದರೆ ಪ್ರಯತ್ನದಿಂದೇನಾಗುವುದು ? ಏನೇ ಮಾಡಿದರೂ ಮೂರ್ತಿ ದರ್ಶನವಾಗುತ್ತಿರಲಿಲ್ಲ."

48. ಭಗವಂತನ ಸಾಕಾರ ಮೂರ್ತಿಯನ್ನು ನೆನೆಯುವ ಭಕ್ತರಿಗೆ ಅವರು ಹೇಳುತ್ತಿದ್ದರು : "ಧ್ಯಾನದ ವೇಳೆ ಚಿಂತಿಸಬೇಕು, ಮನಸ್ಸನ್ನು ರೇಶ್ಮೆಯ ದಾರದಿಂದ ಇಷ್ಟದೇವತೆಯ ಪಾದಪದ್ಮಕ್ಕೆ ಕಟ್ಟಿಹಾಕಿರುವಂತೆ. ಅಲ್ಲಿಂದ ಅದು ಬೇರೆ ಎಲ್ಲಿಗೂ ಹೋಗಬಾರದು. ರೇಶ್ಮೆಯ ದಾರ ಎಂದು ಹೇಳುತ್ತೇನೆ ಏಕೆ ? ಆ ಪಾದಪದ್ಮ ಅಷ್ಟೊಂದು ಮೃದುವಾದುದರಿಂದ. ಬೇರೆ ದಾರ ಉಪಯೋಗಿಸಿದರೆ ಅದಕ್ಕೆ ನೋವುಂಟಾಗುತ್ತದೆ." ಮತ್ತೆ ಹೇಳುತ್ತಿದ್ದರು : "ಧ್ಯಾನದ ಸಮಯದಲ್ಲಿ ಮಾತ್ರ ಇಷ್ಟದೇವತೆಯನ್ನು ಚಿಂತಿಸಿ ಬೇರೆ ಸಮಯದಲ್ಲಿ ಅವನನ್ನು ಮರೆತುಬಿಡುವುದೆ ? ಸ್ವಲ್ಪ ಮನಸ್ಸನ್ನು ಯಾವಾಗಲೂ ಆ ಕಡೆ ಹರಿಸಬೇಕು. ದುರ್ಗಾಪೂಜೆಯ ಸಮಯದಲ್ಲಿ ಒಂದು ಎಣ್ಣೆಯ ದೀಪವನ್ನು ಹಚ್ಚಿಡುತ್ತಾರೆ. ದೇವರ ಮುಂದೆ ಯಾವಾಗಲೂ ಒಂದು ಜ್ಯೋತಿ ಬೆಳಗುತ್ತಿರಬೇಕು. ಅದನ್ನು ಆರಿಹೋಗಲು ಬಿಡುವುದಿಲ್ಲ. ಆರಿಹೋದರೆ ಮನೆಯವರಿಗೆ ಅಶುಭವಾಗುತ್ತದೆ. ಹಾಗೆಯೇ ಹೃದಯಪದ್ಮದಲ್ಲಿ ಇಷ್ಟದೇವತೆಯನ್ನು ಕೂರಿಸಿ ಅವನ ಮುಂದೆ ಅವನ ಚಿಂತಾರೂಪದ ಪ್ರದೀಪವನ್ನು ಹಚ್ಚಿಡಬೇಕು. ಬೇರೆ ಬೇರೆ ಸಾಂಸಾರಿಕ ಕಾರ್ಯಗಳಲ್ಲಿ ಮಗ್ನರಾಗಿರುವಾಗ ಒಳಗೆ ಇಣಕಿ ನೋಡುತ್ತಿರಬೇಕು, ದೀಪ ಉರಿಯುತ್ತಿದೆಯೇ ಇಲ್ಲವೇ ಎಂದು."

49. ಮತ್ತೆ ಕೆಲವೊಮ್ಮೆ ಹೇಳುತ್ತಿದ್ದರು : "ನೋಡು, ಹಿಂದೆ ನಾನು ಇಷ್ಟದೇವತೆಯನ್ನು ಚಿಂತಿಸುವ ಮೊದಲು ಮನಸ್ಸಿನ ಒಳಗನ್ನು ಸರಿಯಾಗಿ ಶುದ್ಧಗೊಳಿಸುತ್ತಿರುವುದಾಗಿ ಭಾವಿಸುತ್ತಿದ್ದೆ. ಮನಸ್ಸಿನೊಳಗೆ ನಾನಾ ಪ್ರಕಾರದ ಕೊಳೆ (ಚಿಂತೆ, ವಾಸನೆ ಇತ್ಯಾದಿ) ಇರುತ್ತದೆ ನೋಡು ! ಅವನ್ನೆಲ್ಲ ತೆಗೆದು ಮನಸ್ಸನ್ನು ಸ್ವಚ್ಛವಾಗಿ ತೊಳೆದು ಅಲ್ಲಿ ಇಷ್ಟದೇವತೆಯನ್ನು ಕರೆದು ಕೂರಿಸುತ್ತಿದ್ದೆ. ನೀವೂ ಹಾಗೆಯೇ ಮಾಡಿ."

50. ಶ್ರೀರಾಮಕೃಷ್ಣರು ಒಮ್ಮೆ ಭಗವಂತನ ಸಾಕಾರ ಮತ್ತು ನಿರಾಕಾರಭಾವ

ಗಳನ್ನು ಚಿಂತಿಸುವ ವಿಷಯವಾಗಿ ಈ ರೀತಿ ಹೇಳಿದರು : '' ಕೆಲವರು ಸಾಕಾರದಿಂದ ನಿರಾಕಾರವನ್ನು ತಲುಪುತ್ತಾರೆ. ಮತ್ತೆ ಕೆಲವರು ನಿರಾಕಾರದಿಂದ ಸಾಕಾರವನ್ನು ತಲಪುತ್ತಾರೆ.'' ಶ್ರೀರಾಮಕೃಷ್ಣರು ಗಿರೀಶಚಂದ್ರನ ಮನೆಯಲ್ಲಿರುವಾಗ ಭಕ್ತನೊಬ್ಬನು (ದೇವೇಂದ್ರನಾಥ ಬಸು) ಸಾಕಾರ ಶ್ರೇಷ್ಠವೊ ನಿರಾಕಾರ ಶ್ರೇಷ್ಠವೊ ಎಂದು ಕೇಳಿದಾಗ ಶ್ರೀರಾಮಕೃಷ್ಣರು ಹೇಳಿದರು : ''ನಿರಾಕಾರದಲ್ಲಿ ಎರಡು ವಿಧ–ಪಕ್ವ ಮತ್ತು ಅಪಕ್ವ. ಪಕ್ವ ನಿರಾಕಾರವು ಉಚ್ಚ ಭಾವ ನಿಜ. ಸಾಕಾರದ ಮೂಲಕ ಆ ನಿರಾಕಾರವನ್ನು ತಲುಪಬೇಕು. ಅಪಕ್ವ ನಿರಾಕಾರವು ಕಣ್ಣು ಮುಚ್ಚಿದಾಗ ಕಾಣುವ ಅಂಧಕಾರ ಅಷ್ಟೆ. ಬ್ರಹ್ಮ ಸಮಾಜದವರದು ಈ ಬಗೆಯದು''.*

51. ಪಾಶ್ಚಾತ್ಯ ಶಿಕ್ಷಣದ ಫಲವಾಗಿ ಈ ರೀತಿಯ ಅಪಕ್ವ ನಿರಾಕಾರವನ್ನು ಆಶ್ರಯಿಸಿ ಸಾಧನೆ ಮಾಡುತ್ತಿದ್ದ ಭಕ್ತರ ಒಂದು ತಂಡವಿತ್ತು. ಅವರು ಕ್ರಿಶ್ಚಿಯನ್ ಪಾದ್ರಿಗಳಂತೆ ಮೂರ್ತಿಪೂಜೆಯನ್ನು ನಿಂದಿಸುವುದು, ಅದನ್ನು ಅಂಧವಿಶ್ವಾಸವೆಂದು ಕರೆಯುವುದು ಇತ್ಯಾದಿಗಳನ್ನು ಶ್ರೀರಾಮಕೃಷ್ಣರು ನಿಷೇಧಿಸುತ್ತಿದ್ದರು. ಅವರು ಹೇಳುತ್ತಿದ್ದರು: ''ನೋಡಿ, ಅವನು ಸಾಕಾರನೂ ಹೌದು, ನಿರಾಕಾರನೂ ಹೌದು. ಮತ್ತೆ ಅಷ್ಟೇ ಅಲ್ಲದೆ ಇನ್ನೂ ಏನೇನು ಆಗಿರುವನೊ ಅದನ್ನೆಲ್ಲ ಬಲ್ಲವರಾರು ? ಸಾಕಾರ ಹೇಗೆ ಗೊತ್ತೇ ? ನೀರು ಮತ್ತು ಮಂಜುಗೆಡ್ಡೆ ಇದ್ದಹಾಗೆ. ನೀರು ತೀರಾ ತಣ್ಣಗಾದರೆ ಮಂಜಾಗುವುದು. ಮಂಜುಗೆಡ್ಡೆಯ ಒಳಹೊರಗೆಲ್ಲ ಬರೀ ನೀರೆ. ನೀರನ್ನು ಬಿಟ್ಟು ಮಂಜುಗೆಡ್ಡೆಯಿಲ್ಲ. ಆದರೆ ನೋಡು, ನೀರಿಗೆ ನಿರ್ದಿಷ್ಟವಾದ ರೂಪವಿಲ್ಲ, ಮಂಜುಗೆಡ್ಡೆಗೆ ಆಕಾರವಿದೆ. ಹಾಗೆಯೇ ಭಕ್ತಿಯ ಶೈತ್ಯದಿಂದ ಅಖಂಡ ಸಚ್ಚಿದಾನಂದ ಸಾಗರದ ನೀರು ಗೆಡ್ಡೆಕಟ್ಟಿ ನಾನಾ ಆಕಾರವನ್ನು ಪಡೆಯುವುದು.'' ಶ್ರೀರಾಮಕೃಷ್ಣರ ಈ ದೃಷ್ಟಾಂತವು ಸಾಕಾರ ನಿರಾಕಾರಗಳ ಬಗ್ಗೆ ಎಷ್ಟೋ ಜನರ ಮನಸ್ಸಿನಲ್ಲಿನ ಸಂದಿಗ್ಧತೆಯನ್ನು ನಿವಾರಿಸಿ ಶಾಂತಿಯನ್ನು ಇತ್ತಿದೆ.

52. ಇಲ್ಲಿ ಇನ್ನೊಂದು ವಿಚಾರವನ್ನು ಹೇಳಲೇಬೇಕಾಗಿದೆ. ಶ್ರೀರಾಮಕೃಷ್ಣರ ಅಪಕ್ವ ನಿರಾಕಾರವಾದಿ ಭಕ್ತರ ಪೈಕಿ ಅತ್ಯಂತ ಪ್ರಧಾನವಾದ ವ್ಯಕ್ತಿ ಯಾರೆಂದರೆ ನರೇಂದ್ರನಾಥ ಅಥವಾ ಸ್ವಾಮಿ ವಿವೇಕಾನಂದರು, ಆಗ ಅವರು ಪಾಶ್ಚಾತ್ಯ ಶಿಕ್ಷಣ ಮತ್ತು

---

* ಪ್ರಾಸಂಗಿಕವಾಗಿ ನಾವು ಇಲ್ಲಿ ಈ ವಿಷಯವನ್ನು ತಿಳಿಸಿದ್ದರೂ ಶ್ರೀರಾಮಕೃಷ್ಣರು ಬ್ರಹ್ಮಸಮಾಜದವರನ್ನು ನಿಂದಿಸುವರೆಂದು ಭಾವಿಸಬಾರದು. ಕೀರ್ತನೆಯ ನಂತರ ಎಲ್ಲ ಸಂಪ್ರದಾಯದ ಭಕ್ತರುಗಳಿಗೆ ಪ್ರಣಾಮ ಸಲ್ಲಿಸುವಾಗ 'ಆಧುನಿಕ ಬ್ರಹ್ಮ ಜ್ಞಾನಿಗಳಿಗೆ ಪ್ರಣಾಮ' ಎಂದೂ ಅವರು ಮತ್ತೆ ಮತ್ತೆ ಹೇಳುತ್ತಿದ್ದುದನ್ನು ನಾವು ಕೇಳಿರುವೆವು. ಪ್ರಖ್ಯಾತ ಬ್ರಹ್ಮ ಸಮಾಜದ ನೇತಾರನಾದ ಕೇಶವಚಂದ್ರನೇ ಪ್ರಪ್ರಥಮವಾಗಿ ಶ್ರೀರಾಮಕೃಷ್ಣರ ವಿಷಯವನ್ನು ಕಲ್ಕತ್ತೆಯ ಜನತೆಗೆ ತಿಳಿಸಿದವನು. ವಿವೇಕಾನಂದರ ಮುಂತಾದ ಅನೇಕ ಸನ್ಯಾಸಿ ಭಕ್ತರು ಮೊದ್ಲಲು ಬ್ರಹ್ಮ ಸಮಾಜದ ಸದಸ್ಯರಾಗಿದ್ದರು. ಅವರದಕ್ಕೆ ಚಿರಋಣಿಗಳಾಗಿರುವೆವು.

ಬ್ರಹ್ಮಸಮಾಜದ ಪ್ರಭಾವಕ್ಕೆ ಒಳಗಾಗಿದ್ದರು. ಸಾಕಾರವಾದಿಗಳ ಕಡೆ ಅವರ ನಿಕೃಷ್ಟ ದೃಷ್ಟಿಯಿತ್ತು. ತರ್ಕ ಮಾಡುವಾಗ ಅವರು ತಮ್ಮ ಈ ಅಭಿಪ್ರಾಯವನ್ನು ವ್ಯಕ್ತಪಡಿಸು ತ್ತಿದರು. ಶ್ರೀರಾಮಕೃಷ್ಣರು ಅವರ ಮತ್ತು ಸಾಕಾರವಾದಿಗಳ ನಡುವೆ ಭಯಂಕರ ಚರ್ಚೆ ನಡೆಯುವಂತೆ ಮಾಡಿ ಮೋಜು ನೋಡುತ್ತಿದ್ದರು. ಇಂಥ ತರ್ಕದಲ್ಲಿ ಸ್ವಾಮೀಜಿ ಯವರ ಮುಂದೆ ಯಾರೂ ನಿಲ್ಲಲಾಗುತ್ತಿರಲಿಲ್ಲ. ಅವರ ತೀಕ್ಷ್ಣ ವಿಚಾರ ಶಕ್ತಿಯನ್ನು ಎದುರಿಸಲಾಗದೆ ಕೆಲವರು ಖಿನ್ನಮನಸ್ಕರಾಗುತ್ತಿದ್ದರು. ಶ್ರೀರಾಮಕೃಷ್ಣರು ಈ ವಿಷಯವನ್ನು ಇತರರ ಮುಂದೆ ಆತ್ಮಾನಂದದಿಂದ ಹೇಳುತ್ತಿದ್ದರು : "ನರೇಂದ್ರನು ಅಂದು ಇತರರ ವಿಚಾರವನ್ನೆಲ್ಲ ಕಚ ಕಚ ಎಂದು ಕತ್ತರಿಸಿ ಹಾಕಿದ. ಎಂಥ ಬುದ್ಧಿ ಅವನದು !" ಆದರೆ ಸಾಕಾರವಾದಿಯಾದ ಗಿರೀಶನ ಮುಂದೆ ಒಂದು ದಿನ ಸ್ವಾಮೀಜೀ ಯವರು ನಿರುತ್ತರರಾಗಬೇಕಾಯಿತು. ಗಿರೀಶನ ವಿಶ್ವಾಸವನ್ನು ದೃಢಪಡಿಸುವುದ ಕ್ಕಾಗಿಯೇ ಶ್ರೀರಾಮಕೃಷ್ಣರು ಅಂದು ಅವನ ಪಕ್ಷ ವಹಿಸಿದ್ದರೆಂದು ನಮಗನಿಸುತ್ತದೆ. ಶ್ರೀರಾಮಕೃಷ್ಣರೊಡನೆ ಭಗವದ್ವಿಚಾರವಾಗಿ ಮಾತನಾಡುತ್ತಿರುವಾಗ ಒಮ್ಮೆ ಸ್ವಾಮಿ ವಿವೇಕಾನಂದರು ಸಾಕಾರವಾದಿಗಳ ವಿಶ್ವಾಸ 'ಅಂಧವಿಶ್ವಾಸ' ಎಂದು ನಿರ್ದೇಶಿಸಿದರು. ಅದಕ್ಕುತ್ತರವಾಗಿ ಶ್ರೀರಾಮಕೃಷ್ಣರು ಹೇಳಿದರು; "ಒಳ್ಳೆಯದು, ಅಂಧವಿಶ್ವಾಸವೆಂದು ಯಾವುದನ್ನು ಕರೆಯುತ್ತೀಯೆ ಹೇಳು ನೋಡೋಣ ? ಎಲ್ಲ ವಿಶ್ವಾಸವೂ ಅಂಧವೇ. ವಿಶ್ವಾಸಕ್ಕೆ ಕಣ್ಣಿರುತ್ತದೆಯೆ ? 'ವಿಶ್ವಾಸ' ಎಂದು ಹೇಳು, ಇಲ್ಲವೇ 'ಜ್ಞಾನ' ಎಂದು ಹೇಳು. ಅದು ಬಿಟ್ಟು ವಿಶ್ವಾಸಗಳಲ್ಲಿ ಕೆಲವು ಅಂಧ ಕೆಲವು ಕಣ್ಣಿರುವವು ಎಂದು ಹೇಳಿ ದರೆ ಹೇಗೆ?" ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು : "ನಿಜವಾಗಿಯೂ ಅಂದು ಅವರಿಗೆ ಅಂಧ ವಿಶ್ವಾಸದ ಅರ್ಥವನ್ನು ಹೇಳಲು ಹೋಗಿ ತುಂಬ ಗೊಂದಲಕ್ಕೀಡಾದೆ. ಏನೇ ಮಾಡಿದರೂ ಆ ಮಾತಿನ ಅರ್ಥವನ್ನು ಹುಡುಕಲಾಗಲಿಲ್ಲ. ಶ್ರೀರಾಮಕೃಷ್ಣರು ಹೇಳುವುದೇ ಸರಿಯೆಂದು ಭಾವಿಸಿ ಅಂದಿನಿಂದ ಆ ಮಾತು ಆಡುವುದನ್ನು ನಿಲ್ಲಿಸಿಬಿಟ್ಟೆ."

53. ಅಪಕ್ವ ನಿರಾಕಾರವಾದಿಗಳನ್ನು ಶ್ರೀರಾಮಕೃಷ್ಣರು ಸಾಕಾರವಾದಿಗಳಂತೆಯೇ ಸಮಾನ ದೃಷ್ಟಿಯಿಂದ ನೋಡುತ್ತಿದ್ದರು. ಅವರಿಗೂ ಯಾವರೀತಿ ಧ್ಯಾನ ಮಾಡು ವುದು ಒಳ್ಳೆಯದು ಎಂಬುದನ್ನು ತಿಳಿಸಿಕೊಡುತ್ತಿದ್ದರು. ಅವರು ಹೇಳುತ್ತಿದ್ದರು : "ನೋಡು, ಹಿಂದೆ ನಾನು ಭಗವಂತನು ಎಲ್ಲೆಲ್ಲಿಯೂ ನೀರಿನಿಂದ ಆವೃತವಾದ ಸಮುದ್ರ ದಂತೆ ಮತ್ತು ನಾನು ಒಂದು ಮೀನಿನಂತೆ ಆ ಸಚ್ಚಿದಾನಂದ ಸಾಗರದಲ್ಲಿ ಮುಳುಗುತ್ತಿ ದ್ದೇನೆ, ತೇಲುತ್ತಿದ್ದೇನೆ ಈಜುತ್ತಿದ್ದೇನೆ—ಎಂದು ಭಾವಿಸುತ್ತಿದ್ದೆ. ಕೆಲವೊಮ್ಮೆ ನನಗೆ ಅನಿಸುತ್ತಿತ್ತು, ನಾನು ಒಂದು ಮಡಕೆ, ಅದು ನೀರಿನಲ್ಲಿ ಮುಳುಗಿಕೊಂಡಿದೆ ಮತ್ತು ಅದರ ಒಳ-ಹೊರಗೆಲ್ಲ ಅಖಂಡ ಸಚ್ಚಿದಾನಂದವು ಪೂರ್ಣ ವ್ಯಾಪಿಸಿಕೊಂಡಿದೆ."

54. ಮತ್ತೆ ಹೇಳುತ್ತಿದ್ದರು : "ನೋಡು ಧ್ಯಾನ ಮಾಡಲು ಪ್ರಾರಂಭಿಸುವು ದಕ್ಕೆ ಮುಂಚೆ ಒಮ್ಮೆ (ತಮ್ಮ ದೇಹವನ್ನು ತೋರಿಸಿ) ಇದನ್ನು ನೆನೆ. ಏಕೆ ಹೇಳುತ್ತಿದ್ದೇ ನೆಂದರೆ ಇದರ ಮೇಲೆ ನಿನಗೆ ತುಂಬ ವಿಶ್ವಾಸವಿದೆಯಲ್ಲ ಅದಕ್ಕಾಗಿ. ಇದನ್ನು ನೆನೆಸಿ

ಕೊಂಡರೇನೇ ಭಗವಂತನ ನೆನಪಾಗುವುದು. ಅದು ಹೇಗೆಂದರೆ, ದನಗಳ ಹಿಂಡನ್ನು ಕಂಡಾಕ್ಷಣ ದನಕಾಯುವವನ ನೆನಪಾಗುವಂತೆ, ಅಥವಾ ಮಗುವನ್ನು ನೋಡಿದ ಕೂಡಲೆ ಅದರ ತಂದೆಯ ವಿಷಯ ನೆನಪಿಗೆ ಬರುವಂತೆ, ಅಥವಾ ವಕೀಲನನ್ನು ನೋಡಿದರೆ ಸಾಕು ಕೋರ್ಟಿನ ನೆನಪಾಗುವಂತೆ—ತಿಳಿಯಿತೆ ? ಮನಸ್ಸು ಎಲ್ಲೆಲ್ಲೊ ಹೋಗಿರುತ್ತದೆ ಇದನ್ನು ನೆನಸಿದ ಕೂಡಲೇ ಒಂದೇ ಕಡೆ ಬಂದು ಸೇರುತ್ತದೆ, ಆಗ ಆ ಮನಸ್ಸಿನಲ್ಲಿ ಭಗವಂತನನ್ನು ಚಿಂತಿಸಿದರೆ ಸರಿಯಾದ ಧ್ಯಾನವಾಗುವುದು. ಅದಕ್ಕಾಗಿಯೇ ಹೇಳುತ್ತಿದ್ದೇನೆ.''

55. ಇನ್ನೂ ಹೇಳುತ್ತಿದ್ದರು, ''ಯಾರು ಮೆಚ್ಚಿಗೆಯಾಗುವರೊ, ಯಾವ ಭಾವ ಮೆಚ್ಚಿಗೆಯಾಗುವುದೊ ಆ ವ್ಯಕ್ತಿಯನ್ನು ಅಥವಾ ಆ ಭಾವವನ್ನು ಸರಿಯಾಗಿ ಹಿಡಿದುಕೊ. ಆಗಲೇ ನಿಷ್ಠೆಯುಂಟಾಗುವುದು. 'ಅವನು ಭಾವದ ವಿಷಯ, ಭಾವವನ್ನು ಬಿಟ್ಟು ಅಭಾವದ ಮೂಲಕ ಅವನನ್ನು ಪಡೆಯಬಹುದೆ ?' ಭಾವ ಬೇಕು. ಒಂದು ಭಾವವನ್ನು ಇಟ್ಟುಕೊಂಡು ಅವನನ್ನು ಕರೆಯಬೇಕು. 'ಭಾವವಿರುವಂತೆ ಲಾಭ, ಶ್ರದ್ಧೆಯೇ ಮೂಲ, ಭಾವದ ಮೂಲಕ ಪ್ರೀತಿಯು ಚಿಗುರುತ್ತದೆ.' ಭಾವ ಬೇಕು. ವಿಶ್ವಾಸ ಬೇಕು, ಸರಿಯಾಗಿ ಅವನನ್ನು ಹಿಡಿದುಕೊಳ್ಳಬೇಕು. ಆಗಲೇ ಸಿದ್ಧಿಸುತ್ತದೆ, ಭಾವವೆಂದರೆ ಭಗವಂತನೊಡನೆ ಒಂದು ನಿರ್ದಿಷ್ಟವಾದ ಸಂಬಂಧವನ್ನು ಇಟ್ಟುಕೊಳ್ಳು ವುದು. ಯಾವಾಗಲೂ ಅದನ್ನು ಮನಸ್ಸಿನಲ್ಲಿ ಇಟ್ಟುಕೊಂಡಿರಬೇಕು, ಉಣ್ಣುವಾಗ, ಮಲಗುವಾಗ ಕುಳಿತುಕೊಳ್ಳುವಾಗ ಯಾವಾಗಲೂ ಅವನನ್ನು ಸ್ಮರಿಸುತ್ತಿರಬೇಕು. 'ನಾನು ಅವನ ದಾಸ,' 'ನಾನು ಅವನ ಮಗ,' ನಾನು ಅವನ ಅಂಶ'–ಈ ರೀತಿಯ ಸಂಬಂಧವನ್ನು ಇಟ್ಟುಕೊಳ್ಳಬೇಕು. ಇದೇ ಪಕ್ವ ಅಹಂ, ವಿದ್ಯೆಯ ಅಹಂ. ಮತ್ತೆ 'ನಾನು ಬ್ರಾಹ್ಮಣ', ನಾನು ಕ್ಷತ್ರಿಯ,' ನಾನು ಇಂಥವನ ಮಗ,' 'ನಾನು ಇಂಥವನ ತಂದೆ'–ಇವೆಲ್ಲ ಅವಿದ್ಯೆಯ ಅಹಂ. ಈ ಅಹಂ ಅನ್ನು ಬಿಡಬೇಕು, ತ್ಯಾಗಮಾಡಬೇಕು. ಇದೇ ಅಭಿಮಾನ ವನ್ನು ಅಹಂಕಾರವನ್ನು ವೃದ್ಧಿಸಿ ಬಂಧನವನ್ನುಂಟುಮಾಡುತ್ತದೆ. ಯಾವಾಗಲೂ ಸ್ಮರಣ–ಮನನ ಮಾಡುತ್ತಿರಬೇಕು. ಯಾವಾಗಲೂ ಮನಸ್ಸಿನ ಸ್ವಲ್ಪ ಭಾಗ ಅವನೆಡೆಗೆ ತಿರುಗಿರಬೇಕು. ಆಗಲೇ ಸಿದ್ಧಿಸುವುದು. ಒಂದು ಭಾವವನ್ನು ಪಕ್ವಗೊಳಿಸಿ ಭಗವಂತ ನನ್ನು ನಮ್ಮವನನ್ನಾಗಿ ಮಾಡಿಕೊಳ್ಳಬೇ:ಕು. ಆಗಲೇ ಅವನನ್ನು ಬಲವಂತಪಡಿಸ ಬಹುದು. ಇಲ್ಲಿ ನೋಡು, ಮೊದಮೊದಲು ಸ್ವಲ್ಪ ಸಂಬಂಧವುಂಟಾದಾಗ 'ತಾವು, ಮಹಾಸ್ವಾಮಿ' ಇತ್ಯಾದಿಯಾಗಿ ಜನ ಸಂಬೋಧಿಸುತ್ತಾರೆ. ಸಂಬಂಧ ಘನಿಷ್ಠವಾದ ಮೇಲೆ 'ನೀವು, ನೀವು' ಎನ್ನುತ್ತಾರೆ. ಆಗ 'ತಾವು ಗೀವು' ನಡೆಯುವುದಿಲ್ಲ. ಸಂಬಂಧ ಇನ್ನೂ ನಿಕಟವಾದಾಗ 'ನೀವು' ಕೂಡ ಹೊರಟುಹೋಗಿ 'ನೀನು' ಎಂದು ಸಂಬೋಧಿ ಸುತ್ತಾರೆ. ಭಗವಂತನನ್ನು ನಮ್ಮವರಿಗಿಂತಲೂ ಹೆಚ್ಚು ನಮ್ಮವನೆಂದು ತಿಳಿಯಬೇಕು. ಭ್ರಷ್ಟ ಮಹಿಳೆಯು ಮೊದಲು ಪರಪುರುಷನನ್ನು ಪ್ರೀತಿಸಲು ಕಲಿಯುವಾಗ ಎಲ್ಲ ಗುಟ್ಟಾಗಿ ನಡೆಯುತ್ತದೆ, ತುಂಬ ಭಯ ಲಜ್ಜೆ ಇರುತ್ತದೆ. ಅನಂತರ ಆ ಭಾವ ವೃದ್ಧಿ ಯಾದಂತೆಲ್ಲ ಅವೆಲ್ಲ ಹೊರಟುಹೋಗುತ್ತವೆ. ಅವನ ಕೈ ಹಿಡಿದುಕೊಂಡು ಎಲ್ಲರ

ಮುಂದೆ ತಿರುಗಾಡತೊಡಗುತ್ತಾಳೆ. ಆ ಪುರುಷನು ಅವಳನ್ನು ಪ್ರೀತಿಸದೆ ಬಿಟ್ಟುಬಿಡಬೇಕೆಂದು ಬಯಸಿದರೆ, ಆಕೆ ಅವನ ಕುತ್ತಿಗೆಗೆ ಬಟ್ಟೆಯನ್ನು ಬಿಗಿದು ಎಳೆಯುತ್ತ, 'ನಿನಗಾಗಿ ನಾನು ಬೀದಿಗಿಳಿದೆ, ಈಗ ನೀನು ಊಟಹಾಕುವುದಿಲ್ಲವೇನು ?' ಎಂದು ಗದರಿಸುವಳು. ಹಾಗೆಯೇ ಯಾರು ಭಗವಂತನಿಗಾಗಿ ಎಲ್ಲವನ್ನೂ ತ್ಯಜಿಸಿರುವನೊ, ಅವನನ್ನೇ ತನ್ನವನನ್ನಾಗಿ ಮಾಡಿಕೊಂಡಿರುವನೊ ಅವನು ಭಗವಂತನನ್ನು, 'ನಿನಗಾಗಿ ಎಲ್ಲವನ್ನೂ ಬಿಟ್ಟೆ, ಈಗ ದರ್ಶನ ನೀಡುವುದಿಲ್ಲವೇನು ? ಹೇಳು !' ಎಂದು ದಬಾಯಿಸಬಹುದು."

56. ಕೆಲವರಲ್ಲಿ ಭಗವದನುರಾಗದ ತೀವ್ರತೆ ಕಡಿಮೆಯಾಗಿರುವುದನ್ನು ಗಮನಿಸಿ ಅವರು ಹೇಳುತ್ತಿದ್ದರು : "ಈ ಜನ್ಮದಲ್ಲಿ ಆಗದಿದ್ದರೆ, ಮುಂದಿನ ಜನ್ಮದಲ್ಲಿ ಆಗುತ್ತದೆ–ಇದೆಂಥ ಮಾತು ! ಇಂಥ ಮಂದ ಭಕ್ತಿಯಿಂದ ಏನೂ ಪ್ರಯೋಜನವಿಲ್ಲ; ಅವನ ಕೃಪೆಯಿಂದ ಇದೇ ಜನ್ಮದಲ್ಲಿಯೇ ಅವನನ್ನು ಪಡೆಯಬೇಕು. ಈಗಲೇ ಪಡೆಯಬೇಕು ಎಂಬ ತೀವ್ರ ವ್ಯಾಕುಲತೆ ಇರಬೇಕು, ಶ್ರದ್ಧೆ ಇರಬೇಕು. ಅದಿಲ್ಲದಿದ್ದರೆ ಏನಾಗುವುದು ? ರೈತರು ಎತ್ತನ್ನು ಕೊಂಡುಕೊಳ್ಳಲು ಹೋದಾಗ ಎತ್ತಿನ ಬಾಲಕ್ಕೆ ಕೈ ಹಾಕಿ ಪರೀಕ್ಷಿಸುತ್ತಾರೆ. ಕೆಲವು ಎತ್ತುಗಳು ಬಾಲ ಮುಟ್ಟಿದಾಗ ಏನೂ ಮಾಡದೆ ಹಾಗೆಯೆ ಕಾಲು ಮಡಿಸಿಕೊಂಡು ಮಲಗಿಬಿಡುವುವು. ಅವು ಉತ್ತಮ ಜಾತಿಯ ಎತ್ತುಗಳಲ್ಲ. ಯಾವ ಎತ್ತುಗಳು ಬಾಲ ಮುಟ್ಟಿದಾಕ್ಷಣ ಛಂಗನೆ ನೆಗೆದಾಡುವುವೊ ಅವು ಚೆನ್ನಾಗಿ ಕೆಲಸ ಮಾಡಬಲ್ಲವೆಂದು ರೈತರಿಗೆ ಗೊತ್ತು. ಅವುಗಳಲ್ಲೇ ಒಂದನ್ನು ಆರಿಸಿ ಖರೀದಿಸುತ್ತಾರೆ. ಮೃದು ಭಾವ ಒಳ್ಳೆಯದಲ್ಲ, ದೃಢವಿಶ್ವಾಸದಿಂದ ಜೋರಿನಿಂದ ಹೇಳಬೇಕು, 'ಅವನನ್ನು ಪಡೆದೇ ಪಡೆಯುತ್ತೇನೆ. ಈಗಲೇ ಪಡೆಯುತ್ತೇನೆ'— ಎಂದು. ಆಗಲೇ ಕೆಲಸ ನಡೆಯುವುದು." ಮತ್ತೆ ಹೇಳುತ್ತಿದ್ದರು : "ಎಲ್ಲ ಪ್ರಾಪಂಚಿಕ ಆಸೆಗಳನ್ನೂ ಒಂದೊಂದಾಗಿ ಬಿಟ್ಟುಬಿಡು. ಹಾಗೆ ಮಾಡುವುದು ಬಿಟ್ಟು ಅವುಗಳನ್ನು ಮತ್ತೂ ವೃದ್ಧಿಸುವುದೆ ? ಹಾಗೆ ಮಾಡಿದರೆ ಹೇಗೆ ಯಶಸ್ವಿಯಾಗುವೆ ?"

57. ಧ್ಯಾನ, ಭಜನೆ, ಪ್ರಾರ್ಥನೆ ಮುಂತಾದವುಗಳನ್ನು ಮಾಡಿಯೂ ಭಗವಂತನ ಸುಳಿವು ಸಿಕ್ಕದೆ ಮನಸ್ಸು ನಿರಾಸೆಯ ಸಾಗರದಲ್ಲಿ ತೇಲುತ್ತಿರುವಾಗ ಶ್ರೀರಾಮಕೃಷ್ಣರು ಸಾಕಾರ ನಿರಾಕಾರವಾದಿಗಳಿಬ್ಬರಿಗೂ ಹೇಳುತ್ತಿದ್ದರು : "ಮೀನು ಹಿಡಿಯಬೇಕಾದರೆ ಮೊದಲು ಗಾಳ ಹಾಕಬೇಕು. ಗಾಳ ಹಾಕಿ ಕುಳಿತುಕೊಂಡಿದ್ದರೆ ಮೀನಿನ ಸುಳಿವೇ ಸಿಕ್ಕುವುದಿಲ್ಲ. ಕೊಳದಲ್ಲಿ ಮೀನೇ ಇಲ್ಲವೇನೊ ಎನಿಸುತ್ತದೆ; ಅನಂತರ ಒಂದು ದಿನ ದೊಡ್ಡ ಮೀನೊಂದು ಹಾರುವುದು ಕಾಣಿಸುತ್ತದೆ. ಆಗ ವಿಶ್ವಾಸವುಂಟಾಗುತ್ತದೆ ಕೊಳದಲ್ಲಿ ಮೀನು ಇದೆ ಎಂದು. ಅನಂತರ ಇನ್ನೊಂದು ದಿನ ಗಾಳ ಹರಿದಾಡುವುದು—ಆಗ ಮೀನು ಎರೆಯನ್ನು ಹಿಡಿದುಕೊಂಡಿದೆ ಎಂದೆನಿಸುತ್ತದೆ. ಆದರೆ ಗಾಳವನ್ನು ಎತ್ತಿದ್ದಾಗ ತಿಳಿಯುತ್ತದೆ ಮೀನು ಎರೆಯನ್ನು

ತಿಂದು ಓಡಿಹೋಗಿದೆಯೆಂದು. ಮತ್ತೆ ಎರೆಯನ್ನು ಇಟ್ಟು ಗಾಳವನ್ನು ಹಾಕಬೇಕು. ಮೀನು ಎರೆಗೆ ಬಾಯಿ ಹಾಕುವುದೇ ತಡ ಗಾಳವನ್ನು ಮೇಲೆತ್ತಬೇಕು. ಆಗ ಮೀನು ಸಿಕ್ಕುವುದು."

58. ಕೆಲವೊಮ್ಮೆ ಹೇಳುತ್ತಿದ್ದರು : "ದೇವರ ಕಿವಿ ತುಂಬ ಸೂಕ್ಷ್ಮ, ಎಲ್ಲ ಕೇಳುತ್ತಾನೆ. ನೀನು ಎಷ್ಟು ಕರೆಯುತ್ತೀಯೊ ಎಲ್ಲ ಕೇಳುತ್ತಾನೆ. ಒಂದಲ್ಲ ಒಂದುದಿನ ದರ್ಶನ ನೀಡಿಯೇ ನೀಡುತ್ತಾನೆ. ಕೊನೆಗೆ ಮೃತ್ಯುವಿನ ಸಮಯದಲ್ಲಾದರೂ ಕಾಣಿಸಿಕೊಳ್ಳುತ್ತಾನೆ". ಕೆಲವರಿಗೆ ಹೇಳುತ್ತಿದ್ದರು : "ಭಗವಂತನು ಸಕಾರನೊ ನಿರಾಕಾರನೊ ಎಂಬುದರ ನಿಶ್ಚಯ ಭಾವನೆ ಇರದಿದ್ದರೆ ಈ ರೀತಿ ಪ್ರಾರ್ಥಿಸು : ಹೇ ಭಗವಂತನೆ, ನೀನು ಸಾಕಾರನೊ ನಿರಾಕಾರನೊ ನನಗೆ ಅರ್ಥವಾಗುತ್ತಿಲ್ಲ. ನೀನು ಏನೇ ಆಗಿರಲಿ, ನನ್ನ ಮೇಲೆ ಕೃಪೆ ತೋರಿ ದರ್ಶನ ನೀಡು". ಇನ್ನು ಕೆಲವರಿಗೆ ಹೇಳುತ್ತಿದ್ದರು : "ನಿಜವಾಗಿಯೂ ಭಗವಂತನನ್ನು ಕಾಣಬಹುದು. ನಿಮ್ಮ ಮುಂದೆ ಕುಳಿತು ಹೇಗೆ ಮಾತನಾಡುತ್ತಿರುವೆನೊ ಅದೇ ರೀತಿ ಅವನನ್ನು ನೋಡಬಹುದು, ಅವನೊಡನೆ ಮಾತನಾಡಬಹುದು. ನಾನು ಸತ್ಯವಾಗಿ ಹೇಳುತ್ತಿದ್ದೇನೆ, ನಿಶ್ಚಯವಾಗಿ ಹೇಳುತ್ತಿದ್ದೇನೆ".

59. ಇನ್ನೊಂದು ವಿಷಯ. ಇಪ್ಪತ್ತನಾಲ್ಕು ಗಂಟೆಯೂ 'ಭಾವಮುಖ' ಸ್ಥಿತಿಯಲ್ಲಿದ್ದರೆ ಭಾವುಕತೆ ಎಷ್ಟೊಂದು ವೃದ್ಧಿಯಾಗುತ್ತದೆಂದರೆ ಅಂಥ ವ್ಯಕ್ತಿ ಸಂಸಾರದಲ್ಲಿ ಬೇರೆ ಯಾವ ಕಾರ್ಯವನ್ನೂ ನೆರವೇರಿಸಲಾರ, ಅಥವಾ ಸಂಸಾರದ ಸಣ್ಣಪುಟ್ಟ ವಿಷಯದ ಕಡೆ ಮನಸ್ಸನ್ನು ಹರಿಸಲಾರ. ಇದು ಸಾಮಾನ್ಯವಾಗಿ ನಮ್ಮ ಅನುಭವಕ್ಕೆ ಬಂದಿರುವ ವಿಷಯ. ಇದು ಧಾರ್ಮಿಕ ಕ್ಷೇತ್ರಕ್ಕೆ ಮಾತ್ರ ಅನ್ವಯಿಸುವುದಲ್ಲ, ವಿಜ್ಞಾನ, ರಾಜನೀತಿ ಮತ್ತಿತರ ಕ್ಷೇತ್ರಗಳ ಪ್ರತಿಭಾವಂತರಿಗೂ ಅನ್ವಯಿಸುತ್ತದೆ. ತಮ್ಮ ದೇಹ ಬಟ್ಟೆಗಳನ್ನು ಶುದ್ಧವಾಗಿಟ್ಟುಕೊಳ್ಳುವುದಾಗಲಿ, ನಿತ್ಯ ವ್ಯವಹಾರದ ವಸ್ತುಗಳನ್ನು ವ್ಯವಸ್ಥಿತ ರೀತಿಯಲ್ಲಿ ಇಟ್ಟುಕೊಳ್ಳುವುದಾಗಲಿ ಅವರಿಗೆ ಆಗುವುದಿಲ್ಲ. ಅವರು ತಮ್ಮ ಆಸಕ್ತಿಯ ವಿಷಯದಲ್ಲಿ ಎಷ್ಟೊಂದು ಮಗ್ನರಾಗಿರುತ್ತಾರೆಂದರೆ ಅನ್ಯ ವಿಷಯಗಳಿಗೆ ಅವರು ಮನಸ್ಸನ್ನು ಕೊಡಲಾರರು. ಆದರೆ ಶ್ರೀರಾಮಕೃಷ್ಣರ ವಿಷಯವೇ ಬೇರೆ. ಅಷ್ಟೊಂದು ಭಾವಪರವಶತೆಯ ನಡುವೆಯೂ ಜೀವನದ ಸಾಮಾನ್ಯ ವಿಷಯಗಳ ಕಡೆಗೂ ಅವರ ಗಮನ ಹರಿಯುತ್ತಿತ್ತು. ಸಮಾಧಿಯಲ್ಲಿರುವಾಗ ದೇಹ, ಜಗತ್ತು, ಸಂಸಾರ ಯಾವುದರ ಪ್ರಜ್ಞೆಯೂ ಅವರಿಗೆ ಇರುತ್ತಿರಲಿಲ್ಲ. ಆದರೆ ಅದರಿಂದ ಹೊರಗೆ ಬಂದರೆ ಎಲ್ಲದರ ಪ್ರಜ್ಞೆಯೂ ಅವರಿಗೆ ಇರುತ್ತಿತ್ತು. ಇದು ಕಡಿಮೆ ಆಶ್ಚರ್ಯದ ವಿಷಯವಲ್ಲ. ಇದಕ್ಕೆ ಒಂದೆರಡು ದೃಷ್ಟಾಂತಗಳನ್ನೂ ಇಲ್ಲಿ ಕೊಡುತ್ತೇವೆ.

60. ಒಂದು ದಿನ ಶ್ರೀರಾಮಕೃಷ್ಣರು ದಕ್ಷಿಣೇಶ್ವರದಿಂದ ಬಲರಾಮ ಬಸುವಿನ ಮನೆಗೆ ಹೋಗುತ್ತಿದ್ದರು. ಅವರೊಡನೆ ರಾಮಲಾಲ ಮತ್ತು ಸ್ವಾಮಿ

ಯೋಗಾನಂದರು ಇದ್ದರು. ಎಲ್ಲರೂ ಗಾಡಿಯನ್ನು ಹತ್ತಿದರು. ಗಾಡಿಯು ಹೊರಟು ತೋಟದ ಗೇಟಿನ ಹತ್ತಿರ ಬಂದಾಗ ಶ್ರೀರಾಮಕೃಷ್ಣರು ಯೋಗಾನಂದರನ್ನು ವಿಚಾರಿಸಿದರು : ''ಏನಪ್ಪ, ಇಳಿಯುವಾಗ ಬಟ್ಟೆ ಟವಲ್ಲು ಎಲ್ಲ ತಂದಿದ್ದೀಯ ?'' ಆಗ ಪ್ರಾತಃಕಾಲ.

ಯೋಗಾನಂದರು : ''ಇಲ್ಲ ಮಹಾಶಯರೆ, ಟವಲ್ಲನ್ನು ತಂದಿದ್ದೇನೆ. ಆದರೆ ಬಟ್ಟೆ ಮರೆತುಹೋಯಿತು. ಅವರು (ಬಲರಾಮ) ಒಂದು ಹೊಸ ಬಟ್ಟೆಯನ್ನು ಕೊಡುತ್ತಾರೆ, ಪರವಾಗಿಲ್ಲ''.

ಶ್ರೀರಾಮಕೃಷ್ಣ : ''ಏನಯ್ಯ, ನೀನು ಹೇಳೋದು ? ಈ ಆಸಾಮಿ ಎಲ್ಲಿಂದ ಬಂದನಪ್ಪ ಎಂದು ಜನ ಹೇಳಿಕೊಳ್ಳುವರು. ಅವರಿಗೆ ತೊಂದರೆಯಾಗುವುದಿಲ್ಲವೇ ? ಹೋಗು ಗಾಡಿಯನ್ನು ನಿಲ್ಲಿಸಿ ತೆಗೆದುಕೊಂಡು ಬಾ''. ಯೋಗಾನಂದರು ಹಾಗೆಯೇ ಮಾಡಬೇಕಾಯಿತು.

ಶ್ರೀರಾಮಕೃಷ್ಣರು ಹೇಳುತ್ತಿದ್ದರು : ''ಉತ್ತಮ ವ್ಯಕ್ತಿಗಳು, ಸೌಭಾಗ್ಯವಂತರು ಮನೆಗೆ ಬಂದರೆ ಎಲ್ಲವೂ ಸುಸೂತ್ರವಾಗಿ ನಡೆಯುತ್ತದೆ. ಯಾರಿಗೂ ಯಾವ ರೀತಿಯ ತೊಂದರೆ ಆಗುವುದಿಲ್ಲ. ಆದರೆ ದುಷ್ಟನು, ದುರ್ಭಾಗ್ಯನು ಮನೆಗೆ ಬಂದರೆ ಎಲ್ಲ ರೀತಿಯ ತೊಂದರೆಯುಂಟಾಗುವುದು. ಮನೆಯಲ್ಲಿ ತೊಂದರೆಯಿರುವಾಗಲೇ ಅವನು ಬಂದು ಬಿಡುತ್ತಾನೆ. ಅವನನ್ನು ನೋಡಿಕೊಳ್ಳಲು ಮನೆಯವರು ತುಂಬ ಕಷ್ಟಪಡಬೇಕಾಗುತ್ತದೆ.''

ಶ್ರೀರಾಮಕೃಷ್ಣರು ಬದುಕಿರುವಾಗ ಪ್ರತಾಪ ಹಜ್ರಾ ಎಂಬುವವನು ದಕ್ಷಿಣೇಶ್ವರಕ್ಕೆ ಬಂದು ಬಹಳಕಾಲ ಇರುತ್ತಿದ್ದ. ನಾವೆಲ್ಲರೂ ಅವನನ್ನು ಹಜ್ರಾ ಮಹಾಶಯ ಎಂದು ಕರೆಯುತ್ತಿದ್ದೆವು. ಶ್ರೀರಾಮಕೃಷ್ಣರು ಕಲಕತ್ತೆಯಲ್ಲಿ ಭಕ್ತರನ್ನು ನೋಡಲು ಹೋಗುವಾಗ ಅವನು ಅವರ ಜೊತೆ ಹೋಗುತ್ತಿದ್ದ. ಅಂಥ ಒಂದು ಸಂದರ್ಭದಲ್ಲಿ ಕಲಕತ್ತೆಯಿಂದ ಹಿಂದಿರುಗುವಾಗ ಅವನು ತನ್ನ ಟವಲನ್ನು ಮರೆತು ಬಿಟ್ಟ. ದಕ್ಷಿಣೇಶ್ವರಕ್ಕೆ ಬಂದಮೇಲೆ ಶ್ರೀರಾಮಕೃಷ್ಣರಿಗೆ ಅದು ತಿಳಿದು ಅವನನ್ನು ಕುರಿತು ಹೇಳಿದರು : ''ನೋಡು, ದೇವರ ನಾಮಸ್ಮರಣೆ ಮಾಡುತ್ತ, ನನಗೆ ನನ್ನ ಮೈ ಮೇಲಿರುವ ಬಟ್ಟೆಯ ಪರಿವೆಯೇ ಇರುವುದಿಲ್ಲ. ಆದರೂ ಎಂದೂ ನನ್ನ ಚೀಲವನ್ನಾಗಲಿ, ಟವಲನ್ನಾಗಲಿ ಕಲಕತ್ತೆಯಲ್ಲಿ ಬಿಟ್ಟು ಬಂದದ್ದಿಲ್ಲ. ನೀನು ಎಲ್ಲೋ ಸ್ವಲ್ಪ ಜಪ ಮಾಡುತ್ತೀಯೆ, ಆದರೂ ಅಷ್ಟೊಂದು ಮರೆವು !''

ಶ್ರೀಮಾತೆಯವರಿಗೆ ಶ್ರೀರಾಮಕೃಷ್ಣರು ಬೋಧಿಸುತ್ತಿದ್ದರು ; ''ಗಾಡಿ ಅಥವಾ ನೌಕೆಯಲ್ಲಿ ಹೋಗಬೇಕಾದಾಗ ಮೊದಲು ಹತ್ತಬೇಕು. ಇಳಿಯುವಾಗ ಎಲ್ಲ ವಸ್ತುಗಳನ್ನು ಇಳಿಸಿ ಯಾವುದೂ ಮರೆತಿಲ್ಲ ಎಂದು ಖಚಿತವಾದ ಮೇಲೆ ಇಳಿಯಬೇಕು.'' ಒಂದು ಸಾಮಾನ್ಯ ವಿಷಯದಲ್ಲೂ ಅವರು ಅಷ್ಟೊಂದು ಎಚ್ಚರಿಕೆ ವಹಿಸುತ್ತಿದ್ದರು !

ಅವರು ನಿರಂತರ 'ಭಾವಮುಖ'ದಲ್ಲಿದ್ದರೂ ಆವಶ್ಯಕ ವಸ್ತುಗಳೆಲ್ಲದರ ಕಡೆ

ಅವರ ಗಮನ ಇರುತ್ತಿತ್ತು. ಯಾವ ವಸ್ತುವನ್ನು ಎಲ್ಲಿ ಇಡಬೇಕೊ ಯಾವಾಗಲೂ ಅಲ್ಲಿಯೇ ಇಡುತ್ತಿದ್ದರು. ತಮ್ಮ ಬಟ್ಟೆ ಬರೆ ಇತ್ಯಾದಿ ನಿತ್ಯೋಪಯೋಗಿ ವಸ್ತು ಗಳನ್ನು ತಾವೇ ನೋಡಿಕೊಳ್ಳುತ್ತಿದ್ದರು. ಎಲ್ಲಿಗಾದರೂ ಹೋಗುವಾಗ ಆವಶ್ಯಕ ವಸ್ತುಗಳನ್ನು ತೆಗೆದುಕೊಂಡು ಹೋಗಲು ಮರೆಯುತ್ತಿರಲಿಲ್ಲ. ಭಕ್ತರ ಸಾಧನೆಗೆ ಸಂಬಂಧಿಸಿದ ಪ್ರತಿಯೊಂದು ವಿಷಯವನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸುತ್ತಿದ್ದಂತೆಯೇ ಅವರ ಸಾಂಸಾರಿಕ ವಿಷಯದ ಕಡೆಗೂ ಗಮನ ಹರಿಸಿ ಅವರ ಬಾಹ್ಯ ವಿಷಯಗಳೂ ಸಾಧನೆಗೆ ಅನುಕೂಲವಾಗುವಂತೆ ಮಾಡಲು ಶ್ರೀರಾಮಕೃಷ್ಣರು ಸದಾ ಪ್ರಯತ್ನಿಸುತ್ತಿದ್ದರು.

61. ಶ್ರೀರಾಮಕೃಷ್ಣರ ಜೀವನವನ್ನು ಕುರಿತು ಚಿಂತಿಸುತ್ತಿದ್ದರೆ ಅವರು ಎಲ್ಲ ರೀತಿಯ ಭಾವಗಳ ಒಂದು ಮೂರ್ತರೂಪ ಎಂದೆನಿಸುತ್ತದೆ. ಭಾವರಾಜ್ಯದಲ್ಲಿ ಇವರಿಗಿಂತಲೂ ಶ್ರೇಷ್ಠ ರಾಜರು ನಮಗೆ ಕಾಣಸಿಗುವುದಿಲ್ಲ. ಭಾವಮಯರಾದ ಶ್ರೀರಾಮಕೃಷ್ಣರು ನಿರ್ವಿಕಲ್ಪ ಅದ್ವೈತಭಾವದಿಂದ ಹಿಡಿದು ಸವಿಕಲ್ಪದ ಎಲ್ಲ ರೀತಿಯ ಭಾವಗಳನ್ನು ತಮ್ಮ ಜೀವನದಲ್ಲಿ ಪ್ರಕಾಶಪಡಿಸಿದರು. ಆದ್ದರಿಂದ ಎಲ್ಲ ಬಗೆಯ ಭಕ್ತರಿಗೆ ಅವರವರ ಗುರಿಯನ್ನೂ, ಮಾರ್ಗವನ್ನೂ ತೋರಿಸಿಕೊಟ್ಟರು. ಅಂಧಕಾರದಲ್ಲಿರುವವರಿಗೆ ಬೆಳಕನ್ನೂ, ನಿರಾಶೆಯಿಂದ ತೊಳಲುವವರಿಗೆ ಆಶಾಕಿರಣ ವನ್ನೂ ಸಂಸಾರದ ದುಃಖದಿಂದ ಬೆಂದು ಬಳಲುತ್ತಿರುವವರಿಗೆ ಪರಮಶಾಂತಿಯನ್ನೂ ನೀಡಿದರು. ಅವರು ಎಂಥ ಒಂದು ಅದ್ಭುತ ಭರವಸೆಯ ತಾಣವಾಗಿದ್ದರೆಂಬುದನ್ನು ಹೇಳಿ ತಿಳಿಸಿಕೊಡಲು ಸಾಧ್ಯವಿಲ್ಲ. ಮನೋರಾಜ್ಯದಲ್ಲಿ ಅವರ ಶಕ್ತಿ ಎಂಥಾದ್ದು ಎಂಬು ದನ್ನು ನೋಡಿಯೇ ತಿಳಿಯಬೇಕಷ್ಟೆ ! ಸ್ವಾಮಿ ವಿವೇಕಾನಂದರು ಹೇಳುತ್ತಾರೆ : "ಬಾಹ್ಯ ವಸ್ತುಗಳನ್ನು ಪತರೋಟಿಗೊಳಿಸಿ ಅದ್ಭುತ ಪವಾಡಗಳನ್ನು ಮಾಡಿತೋರಿಸು ವುದು ದೊಡ್ಡ ವಿಷಯವಲ್ಲ. ಆದರೆ ಈ ಹುಚ್ಚು ಬ್ರಾಹ್ಮಣನು (ಶ್ರೀರಾಮಕೃಷ್ಣರು) ಮನುಷ್ಯರ ಮನಸ್ಸನ್ನು, ಜೇಡಿಮಣ್ಣಿನ ಉಂಡೆಯನ್ನು ಕೈಯಲ್ಲಿ ಆಡಿಸುವಂತೆ, ಒಡೆಯುತ್ತಿದ್ದರು, ಮತ್ತೆ ಅದನ್ನು ಸೇರಿಸಿ ಹೊಸ ರೂಪವನ್ನು ಕೊಡುತ್ತಿದ್ದರು. ಇದಕ್ಕಿಂತ ದೊಡ್ಡ ಪವಾಡವನ್ನು ನಾನು ಎಲ್ಲೂ ಕಂಡಿಲ್ಲ."

ಮೂರನೆಯ ಅಧ್ಯಾಯ

ಶ್ರೀರಾಮಕೃಷ್ಣರ ಗುರುಭಾವ

1. ಶ್ರೀರಾಮಕೃಷ್ಣರಿಗೆ ತಮ್ಮನ್ನು 'ಗುರು' 'ತಂದೆ' 'ಒಡೆಯ' ಎಂದು ಸಂಬೋಧಿಸಿದರೆ ಸಹಿಸುತ್ತಿರಲಿಲ್ಲ. ಹಾಗಿರುವಾಗ ಅವರಲ್ಲಿ ಗುರುಭಾವ ಹೇಗೆ ಸಾಧ್ಯ ? 2. ಸರ್ವಭೂತಗಳಲ್ಲೂ ನಾರಾಯಣನನ್ನು ನೋಡುತ್ತಿದ್ದುದರಿಂದ ದಾಸ ಭಾವ ಅವರಿಗೆ ಸಾಮಾನ್ಯವಾಗಿತ್ತು 3. ಗುರುಭಾವದ ದಿವ್ಯಲೀಲೆ ಅವರಲ್ಲಿ ಯಾವಾಗಲೂ ಕಂಡುಬರುತ್ತಿತ್ತು 4. ಭಾವಮಯ ಶ್ರೀರಾಮಕೃಷ್ಣರ ಭಾವಗಳಿಗೆ ಇತಿ ಇರಲಿಲ್ಲ 5. ಶ್ರೀರಾಮಕೃಷ್ಣರು ಭಕ್ತರು, ಜ್ಞಾನಿಯಲ್ಲ ಎಂಬ ಸಾಧಾರಣ ಅಭಿಪ್ರಾಯ ಸರಿಯಲ್ಲ 6. ಅಹಂಕಾರವನ್ನು ಆಶ್ರಯಿಸಿಯೇ ಮಾನಸಿಕ ವೃತ್ತಿ ಗಳು ಏಳುತ್ತವೆ. ಸವಿಕಲ್ಪ-ನಿರ್ವಿಕಲ್ಪ ಸಮಾಧಿ. ಸಮಾಧಿ, ಮೂರ್ಛೆ ಮತ್ತು ಸುಷುಪ್ತಿ—ಇವುಗಳ ಭೇದ 7. ಸಮಾಧಿಯ ಫಲ—ಜ್ಞಾನಾನಂದಗಳ ವೃದ್ಧಿ 8. ಆರು ತಿಂಗಳು ನಿರ್ವಿಕಲ್ಪ ಸಮಾಧಿಯಲ್ಲಿದ್ದಾಗ ಶ್ರೀರಾಮಕೃಷ್ಣರ ಅನುಭವ ಗಳು 9. 'ಅಹಂ' ಬೋಧೆ ಇಲ್ಲದಿದ್ದುದರಿಂದ ಆಗ ಅವರ ಶರೀರ ಉಳಿದದ್ದು ಹೇಗೆ? 10. ಸಾಧುವೊಬ್ಬನು ಬಂದು ಅವರ ದೇಹವನ್ನು ರಕ್ಷಿಸಿದುದು 11. 'ಭಾವ ಮುಖದಲ್ಲಿರು' ಎಂಬ ಜಗನ್ಮಾತೆಯ ಆದೇಶ 12. ಅದ್ವಯ ಸತ್ಯದಲ್ಲಿ ನಿರ್ಗುಣ- ಸಗುಣವೆಂಬ ಸ್ವಗತಭೇದ ಹಾಗೂ ವಿಶ್ವ-ಅಹಂ ಇರುತ್ತದೆ. ಈ ವಿಶ್ವ-ಅಹಂ ಅಥವಾ ಈಶ್ವರನಿಂದಲೇ ಜಗತ್ಕಾರ್ಯ 13. ಈ ವಿಶ್ವ-ಅಹಂಕಾರವನ್ನೇ 'ಭಾವ ಮುಖ'ವೆನ್ನುವುದು 14. ನಿರ್ವಿಕಲ್ಪ ಮತ್ತು ಸವಿಕಲ್ಪ ಅಥವಾ ಭಾವಮುಖ ಅವಸ್ಥೆಗಳಲ್ಲಿ ಶ್ರೀರಾಮಕೃಷ್ಣರ ಅನುಭವ 15. 'ಭಾವಮುಖದಲ್ಲಿರು' ಎಂಬುದರ ಅರ್ಥ 16. ದ್ವೈತ, ವಿಶಿಷ್ಟಾದ್ವೈತ ಮತ್ತು ಅದ್ವೈತ ಸಾಧಕನ ವಿಕಾಸದ ವಿವಿಧ ಹಂತಗಳು 17. ಇದಕ್ಕೆ ಸಂಬಂಧಿಸಿದ ಹನುಮಂತನ ಹೇಳಿಕೆ 18. ಅದ್ವೈತವು ಮಾತು ಆಲೋಚನೆಗಳಿಗೆ ಮೀರಿದುದು, ಸಾಮಾನ್ಯ ಸ್ಥಿತಿಯಲ್ಲಿ ನಿತ್ಯ ಮತ್ತು ಲೀಲೆ ಗಳೆರಡನ್ನೂ ಸ್ವೀಕರಿಸಬೇಕು 19. ಈ ವಿಷಯದ ಬಗ್ಗೆ ಶ್ರೀರಾಮಕೃಷ್ಣರ ದೃಷ್ಟಾಂತಗಳು 20. ಶ್ರೀರಾಮಕೃಷ್ಣರ ಭಾವಮುಖ ಸ್ಥಿತಿಯ ವಿವಿಧ ಹಂತಗಳು ಮತ್ತು ಗುರುಭಾವದ ಆವಿರ್ಭಾವ 21. ೧೮೮೬, ಜನವರಿ ಒಂದರಂದು ಶ್ರೀರಾಮ ಕೃಷ್ಣರು ಕಲ್ಪತರುವಾದ ಘಟನೆ 22. ಶ್ರೀರಾಮಕೃಷ್ಣರ ಸ್ಪರ್ಶದಿಂದ ಭಕ್ತರಿಗಾದ ಅನುಭವ 23. ಅಪಕ್ವ ಅಹಂ ನಾಶವಾದಮೇಲೇ ಗುರುಭಾವ ಪ್ರಕಾಶಗೊಳ್ಳು ವುದು 24. ಗುರುಭಾವ ಮಾನವೀಯ ಭಾವವಲ್ಲ—ಜಗನ್ಮಾತೆಯ ಭಾವವೇ

ಮಾನವ ಶರೀರವನ್ನು ಆಶ್ರಯಿಸಿಕೊಂಡು ಪ್ರಕಾಶಗೊಳ್ಳುವುದು 25. ಗುರು ಭಕ್ತಿಯ ಆವಶ್ಯಕತೆ 26. ಗುರುಭಕ್ತಿಯ ವಿಷಯದಲ್ಲಿ ಶ್ರೀರಾಮಕೃಷ್ಣರ ಹೇಳಿಕೆ—ವಿಭೀಷಣನ ಕಥೆ 27. ನಿಜವಾದ ಭಕ್ತಿ ಉಂಟಾದಾಗ ಸಾಮಾನ್ಯ ವಿಷಯವೂ ಭಗವದ್ಭಾವವನ್ನು ಕೆರಳಿಸುವುದು 28. ಅರ್ಜುನನ ಗುರುಭಕ್ತಿ 29. ಎಲ್ಲ ಗುರುವೂ ಒಂದೇ ಆದರೂ ಅವವರವರ ಗುರುವಿನ ಮೇಲೆ ಭಕ್ತಿ ವಿಶ್ವಾಸ ನಿಷ್ಠೆ ಆವಶ್ಯಕ, ಹನುಮಂತನ ಉದಾಹರಣೆ 30. ಎಲ್ಲರಲ್ಲೂ ಗುರುಭಾವ ಸುಪ್ತವಾಗಿರುತ್ತದೆ 31. 'ಕೊನೆಯಲ್ಲಿ ಮನಸ್ಸೇ ಗುರುವಾಗುತ್ತದೆ' 32. 'ಗುರು ಸಖಿಯಂತೆ' 33. ಕೊನೆಯಲ್ಲಿ ಗುರು ಇಷ್ಟದಲ್ಲಿ ಒಂದಾಗುವನು ; ಗುರು ಕೃಷ್ಣ ವೈಷ್ಣವ—ಈ ಮೂರೂ ಒಂದೇ.

ಆಶ್ಚರ್ಯವತ್ ಪಶ್ಯತಿ ಕಶ್ಚಿದೇನಮಾಶ್ಚರ್ಯವತ್ ವದತಿ ತಥೈವ ಚಾನ್ಯಃ ।
ಆಶ್ಚರ್ಯವಚ್ಚೈನಮನ್ಯಃ ಶೃಣೋತಿ ಶ್ರುತ್ವಾಪ್ಯೇನಂ ವೇದ ನ ಚೈವ ಕಶ್ಚಿತ್ ॥
ಗೀತೆ 2,29

(ಕೆಲವರು ಆಶ್ಚರ್ಯದಿಂದ ಆತ್ಮನನ್ನು ನೋಡುತ್ತಾರೆ. ಮತ್ತೆ ಕೆಲವರು ಆಶ್ಚರ್ಯದಿಂದ ಅವನ ಬಗ್ಗೆ ಹೇಳುತ್ತಾರೆ, ಇನ್ನು ಕೆಲವರು ಆಶ್ಚರ್ಯದಿಂದ ಅದನ್ನು ಕೇಳುತ್ತಾರೆ. ಕೇಳಿಯೂ ಅವನನ್ನು ಅರ್ಥಮಾಡಿಕೊಳ್ಳದವರು ಕೆಲವರು.)

1. ಯಾರು ಶ್ರೀರಾಮಕೃಷ್ಣರನ್ನು ಒಂದೆರಡು ಬಾರಿ ಮಾತ್ರ ನೋಡಿರುವರೊ ಯಾರಿಗೆ ಅವರೊಡನೆ ನಿಕಟವಾದ ಸಂಬಂಧವಿಲ್ಲವೊ, ಕೇವಲ ಮೇಲುಮೇಲಕ್ಕೆ ಅವರನ್ನು ಅರ್ಥ ಮಾಡಿಕೊಂಡಿರುವರೊ ಅವರು ಶ್ರೀರಾಮಕೃಷ್ಣರ ಗುರುಲೀಲೆಯ ವಿಷಯವನ್ನು ಯಾರ ಮೂಲಕವಾದರೂ ಕೇಳಿದರೆ ಆಶ್ಚರ್ಯಪಡಬಹುದು. 'ಇವರು ಹೇಳುವುದೆಲ್ಲ ಸುಳ್ಳು' ಎಂದೂ ಭಾವಿಸಬಹುದು. ಮತ್ತೆ ಅನೇಕರು ಆ ವಿಷಯವಾಗಿ ಮಾತನಾಡುವುದನ್ನು ಕಂಡು ಅವರಿಗೆ ಈ ರೀತಿ ಅನಿಸಬಹುದು : 'ಇವರೆಲ್ಲ ಸೇರಿ ಶ್ರೀರಾಮಕೃಷ್ಣರನ್ನು ದೇವರ ಸ್ಥಾನಕ್ಕೆ ಏರಿಸಿ ಒಂದು ಹೊಸ ಪಂಗಡವನ್ನೇ ನಿರ್ಮಿಸಹೊರಟಿದ್ದಾರೆ, ಆಗಲೇ ಇರುವ ಮೂವತ್ತು ಮೂರು ಕೋಟಿ ದೇವರುಗಳ ಪಟ್ಟಿಯಲ್ಲಿ ಇನ್ನೊಂದು ದೇವರನ್ನು ಸೇರಿಸ ಹೊರಟ್ಟಿದ್ದಾರೆ. ಇಷ್ಟೊಂದು ದೇವರಿದ್ದಾರಲ್ಲ, ಅವರು ನಿಮ್ಮ ಪ್ರಾರ್ಥನೆಯನ್ನು ಕೇಳುವುದಿಲ್ಲವೆ ? ಅವರ ಪೈಕಿ ಯಾರು ಬೇಕೊ ಅವರನ್ನು ಆರಿಸಿಕೊಳ್ಳಿ. ಆ ಪಟ್ಟಿಯನ್ನು ಬೆಳೆಸುವುದು ಏಕೆ ? ಈ ರೀತಿ ಸುಳ್ಳು ಸುಳ್ಳು ಕತೆಯನ್ನು ಕಟ್ಟಿ ಹೇಳುತ್ತಾ ಹೋದರೆ ಅಂಥ ಪವಿತ್ರ ವ್ಯಕ್ತಿಯ ಮೇಲಿರುವ ಜನರ ಭಕ್ತಿಯು ಹೊರಟು ಹೋಗುವುದೆಂದು ಇಷ್ಟೂ ಇವರಿಗೆ ಯೋಚನೆ ಬೇಡವೆ ? ನಾವೂ ಶ್ರೀರಾಮಕೃಷ್ಣರನ್ನು ನೋಡಿರುವೆವು. ಎಷ್ಟೊಂದು ದೀನಭಾವ, ನಮ್ರತೆ ಅವರದು !

ತಾಳ್ಮೆಯ ಮೂರ್ತಿಯಂತಿರುವರು. ಸ್ವಲ್ಪವೂ ಅಹಂಕಾರವಿಲ್ಲ ! ಮತ್ತೆ ಅವರನ್ನು ಯಾರಾದರೂ 'ಗುರು', 'ಒಡೆಯ' 'ತಂದೆ' ಎಂದು ಕರೆದರೆ ಅವರಿಗೆ ಸಹಿಸಲಾಗುತ್ತಿರಲಿಲ್ಲ. ಈ ವಿಷಯ ನಿಮಗೆಲ್ಲರಿಗೂ ತಿಳಿದ ವಿಷಯ. ಯಾರಾದರೂ ಅವರನ್ನು ಆ ರೀತಿ ಕರೆದರೆ ಬೇಸರದಿಂದ ಹೇಳುತ್ತಿದ್ದರು ; "ಭಗವಂತನೇ ಏಕಮಾತ್ರ ಗುರು, ತಂದೆ ಮತ್ತು ಒಡೆಯ. ನಾನು ದೀನರಲ್ಲೆಲ್ಲ ದೀನನು, ದಾಸರ ದಾಸ. ನಿಮ್ಮ ದೇಹದ ಒಂದು ಸಣ್ಣ ರೋಮಕ್ಕೆ ಸಮಾನ ನಾನು." ಹೀಗೆ ಹೇಳುತ್ತ ಅವರ ಪಾದ ಧೂಳಿಯನ್ನು ತೆಗೆದುಕೊಳ್ಳುತ್ತಿದ್ದರು. ಇಂಥ ದೀನ ಭಾವವನ್ನು ಯಾರಾದರೂ ಎಲ್ಲಾದರೂ ನೋಡಿರುವರೆ ? ಅಂತಹ ವ್ಯಕ್ತಿಯನ್ನು 'ಗುರು', 'ದೇವರು' ಎಂದೆಲ್ಲ ಹೇಳುತ್ತಿದ್ದಾರಲ್ಲ ಇವರು! ಎಂಥ ಆಶ್ಚರ್ಯ !'

2. ಈ ರೀತಿ ವಿವಾದದ ಸಾಧ್ಯತೆಯನ್ನು ಊಹಿಸಿಯೇ ಶ್ರೀರಾಮಕೃಷ್ಣರ ಗುರುಭಾವದ ವಿಚಾರವಾಗಿ ನಾವು ಏನು ನೋಡಿರುವೆವೊ ಮತ್ತು ಕೇಳಿರುವೆವೊ ಅದನ್ನು ಇಲ್ಲಿ ಸ್ವಲ್ಪ ವಿವರಿಸಲು ಹೊರಟಿರುವೆವು. ಶ್ರೀರಾಮಕೃಷ್ಣರು ಸಾಧಾರಣ ಭಾವದಲ್ಲಿರುವಾಗ ಎಲ್ಲೆಲ್ಲಿಯೂ ಎಲ್ಲದರಲ್ಲಿಯೂ ನಾರಾಯಣನನ್ನೇ ನೋಡುತ್ತಿದ್ದರು. ಆಗ, ಮನುಷ್ಯರ ವಿಷಯ ಹಾಗಿರಲಿ, ಸಕಲ ಪ್ರಾಣಿಗಳ 'ದಾಸ ನಾನು' ಎಂಬ ಭಾವವನ್ನು ಅವರು ಇಟ್ಟುಕೊಂಡಿರುತ್ತಿದ್ದರು. ಆಗ ಅವರು ನಿಜವಾಗಿಯೂ ದೀನ ಹೀನ ಭಾವದಲ್ಲಿ ಎಲ್ಲರ ಪಾದಧೂಳಿಯನ್ನು ಸ್ವೀಕರಿಸುತ್ತಿದ್ದರು. ಆಗ ಅವರನ್ನು 'ಗುರು', 'ಒಡೆಯ , ತಂದೆ' ಎಂದು ಕರೆದರೆ ಅವರಿಗೆ ಸಹಿಸಲಾಗುತ್ತಿರಲಿಲ್ಲ,

3. ಅವರು ಸಾಧಾರಣ ಭಾವದಲ್ಲಿರುವಾಗ ಈ ರೀತಿ ವರ್ತಿಸುತ್ತಿದ್ದರೂ ಅವರ ಗುರುಭಾವದ ಅಪೂರ್ವ ಲೀಲೆಯ ವಿಷಯವನ್ನು ಒಪ್ಪಿಕೊಳ್ಳದೆ ಇರಲಾಗುವುದೆ ? ಅವರು ದಿವ್ಯ ಭಾವಾವೇಶದಲ್ಲಿ ಯಾರನ್ನಾದರೂ ಕೇವಲ ಸ್ಪರ್ಶಿಸಿ ಅವರಿಗೆ ಸಮಾಧಿಯುಂಟಾಗುವಂತೆ ಮಾಡುತ್ತಿದ್ದರು, ಇಲ್ಲವೇ ಗಂಭೀರ ಧ್ಯಾನ ಅಥವಾ ಭಗವದಾನಂದದಲ್ಲಿ ಮುಳುಗುವಂತೆ ಮಾಡುತ್ತಿದ್ದರು. ತಮ್ಮ ಆಧ್ಯಾತ್ಮಿಕ ಶಕ್ತಿಯ ಸಹಾಯದಿಂದ ಇತರರ ಮನಸ್ಸಿನ ಮಲಿನತೆಯನ್ನೆಲ್ಲ ಸೆಳೆದುಕೊಂಡು ಅವರು ಅಪೂರ್ವ ಏಕಾಗ್ರತೆಯನ್ನೂ, ಪವಿತ್ರತೆಯನ್ನೂ, ಆನಂದವನ್ನೂ ಅನುಭವಿಸುವಂತೆ ಮಾಡುತ್ತಿದ್ದರು. ಈ ರೀತಿ ಕೃತಾರ್ಥರಾದ ಜನರು ಶ್ರೀರಾಮಕೃಷ್ಣರ ಪದತಲದಲ್ಲಿ ತಮ್ಮನ್ನು ತಾವು ಸಂಪೂರ್ಣ ಅರ್ಪಿಸಿಕೊಳ್ಳುತ್ತಿದ್ದರು. ಇದನ್ನೆಲ್ಲ ನೋಡಿದಾಗ ಶ್ರೀರಾಮಕೃಷ್ಣರು ಹಿಂದಿನ ದೀನ ವ್ಯಕ್ತಿಯಲ್ಲ, ಯಾವುದೊ ಒಂದು ಭಗವತ್ ಶಕ್ತಿ ಇವರ ಮೂಲಕ ಕೆಲಸ ಮಾಡುತ್ತಿದೆ ಎಂದೆನಿಸುತ್ತದೆ. ಇವರು ನಿಜವಾಗಿಯೂ ಅಜ್ಞಾನದಿಂದ ಅಂಧರಾದ, ತ್ರಿತಾಪಗಳಿಂದ ಬೆಂದ, ಭವರೋಗದಿಂದ ನರಳುತ್ತಿರುವ ಅಸಹಾಯ ಮಾನವರ ಗುರು, ಅವರ ರಕ್ಷಕ ಮತ್ತು ಅವರಿಗೆ ಭಗವಂತನ ಪರಮ ಪದವನ್ನು ತೋರಿಸುವವರು—ಎಂದು ಸ್ಪಷ್ಟವಾಗುತ್ತದೆ. ಶ್ರೀರಾಮಕೃಷ್ಣರ ಈ ಸ್ಥಿತಿಯನ್ನು ಗಮನಿಸಿಯೆ ಅವರ ಭಕ್ತರು ಅವರನ್ನು ಗುರು , ಕೃಪಾಮಯ,

ಭಗವಾನ್ ಇತ್ಯಾದಿ ಶಬ್ದಗಳಿಂದ ಸಂಬೋಧಿಸುತ್ತಾರೆ. ಇದು ಪರಸ್ಪರ ವಿರುದ್ಧವಾಗಿ ಕಂಡುಬಂದರೂ ದೀನಭಾವ ಮತ್ತು ದಿವ್ಯಶಕ್ತಿಯಿಂದ ಕೂಡಿದ ಗುರುಭಾವ ಇವೆರಡು ಒಂದೇ ವ್ಯಕ್ತಿಯಲ್ಲಿ ಕೂಡಿರುವುದನ್ನು ನಾವು ಶ್ರೀರಾಮಕೃಷ್ಣರಲ್ಲಿ ಕಂಡಿರುವೆವು. ಇದನ್ನೇ ನಾವು ಓದುಗರ ಮುಂದಿಡಲು ಇಲ್ಲಿ ಪ್ರಯತ್ನಿಸುತ್ತೇವೆ.

4. ಆದರೆ ನಾವು ಎಷ್ಟು ಅರ್ಥ ಮಾಡಿಕೊಂಡಿರುವೆವೊ ಅಷ್ಟನ್ನೂ ತಿಳಿಸಿಕೊಡಲು ಸಾಧ್ಯವಾಗದೆ ಇರಬಹುದು. ಏಕೆಂದರೆ ಇದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದು ಅಥವಾ ತಿಳಿಸಿಕೊಡುವುದು-ಎರಡೂ ಕಷ್ಟ. ಭಾವಮುಖಿ ಶ್ರೀರಾಮಕೃಷ್ಣರ ಭಾವಗಳಿಗೆ ಅಂತ್ಯವೆಂಬುದಿಲ್ಲ. ಅವರೇ ಹೇಳಿದಂತೆ ''ಭಗವಂತನಿಗೆ ಇತಿ ಎಂಬುದಿಲ್ಲ.'' ನಮ್ಮ ಕಣ್ಮುಂದೆ ಇದ್ದ ಈ ಲೋಕೋತ್ತರ ಪುರುಷನ ಭಾವಗಳಿಗೆ 'ಇತಿ' ಎಂಬುದಿಲ್ಲ.

5. ಶ್ರೀರಾಮಕೃಷ್ಣರು 'ಭಾವಮುಖಿ' ಸ್ಥಿತಿಯಲ್ಲಿದ್ದರು ಎಂಬುದನ್ನು ಕೇಳಿ ಸಾಮಾನ್ಯ ವ್ಯಕ್ತಿಯು ಅವರು ಜ್ಞಾನಿ ಆಗಿರಲಿಲ್ಲ ಎಂದು ತಿಳಿಯಬಹುದು. ಭಗವದನುರಾಗ ಅಥವಾ ವಿರಹಕ್ಕೆ ಸಂಬಂಧಿಸಿದ ಸುಖದುಃಖಾದಿ ಮಾನಸಿಕ ಭಾವಗಳಿಂದ ಅವರು ಕೂಡಿದ್ದರು ಎಂದು ಭಾವಿಸಬಹುದು. ಆದರೆ 'ಭಾವಮುಖಿ' ಅವಸ್ಥೆ ಎಂದರೇನು, ಯಾವ ಸ್ಥಿತಿಯಲ್ಲಿ ಅದು ಉಂಟಾಗುತ್ತದೆ ಎಂಬುದನ್ನು ತಿಳಿದಾಗಲೇ ಪ್ರಸ್ತುತ ವಿಷಯು ನಮಗೆ ಅರ್ಥವಾಗುವುದು. ಆದ್ದರಿಂದ ಭಾವಮುಖಿ ಅವಸ್ಥೆ ಏನೆಂಬುದನ್ನು ಇಲ್ಲಿ ಸಂಕ್ಷೇಪವಾಗಿ ಚರ್ಚಿಸುತ್ತೇವೆ. ಶ್ರೀರಾಮಕೃಷ್ಣರಿಗೆ ಮೂರು ದಿನದ ಸಾಧನೆಯನಂತರ ನಿರ್ವಿಕಲ್ಪ ಸಮಾಧಿಯುಂಟಾಯಿತು ಎಂಬುದನ್ನು ಓದುಗರು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

6. ಪ್ರಶ್ನೆ : ನಿರ್ವಿಕಲ್ಪ ಸಮಾಧಿ ಎಂದರೇನು ?

ಉತ್ತರ : ಮನಸ್ಸನ್ನು ಸಂಪೂರ್ಣವಾಗಿ ಸಂಕಲ್ಪ ವಿಕಲ್ಪಗಳಿಂದ ಮುಕ್ತಗೊಳಿಸುವುದು.

ಪ್ರ : ಯಾವುದನ್ನು ಸಂಕಲ್ಪ ವಿಕಲ್ಪ ಎಂದು ಕರೆಯುವುದು ?

ಉ : ಬಾಹ್ಯ ಜಗತ್ತಿನ ರೂಪರಸಾದಿ ವಿಷಯಗಳ ಜ್ಞಾನ ಅಥವಾ ಅನುಭವ, ಸುಖದುಃಖಾದಿ ಭಾವಗಳು, ಕಲ್ಪನೆ ವಿಚಾರ ಅನುಮಾನ ಇತ್ಯಾದಿ ಮಾನಸಿಕ ಕ್ರಿಯೆಗಳು, 'ಇದನ್ನು ಮಾಡುತ್ತೇನೆ' 'ಅದನ್ನು ತಿಳಿಯುತ್ತೇನೆ' 'ಇದನ್ನು ಭೋಗಿಸುತ್ತೇನೆ' 'ಅದನ್ನು ಬಿಡುತ್ತೇನೆ' ಇತ್ಯಾದಿ ಇಚ್ಛೆಗಳು—ಈ ಮಾನಸಿಕ ವೃತ್ತಿಗಳನ್ನೇ ಸಂಕಲ್ಪ ವಿಕಲ್ಪಗಳೆಂದು ಕರೆಯುವುದು.

ಪ್ರ : ಈ ವೃತ್ತಿಗಳು ಯಾವುದನ್ನು ಅವಲಂಬಿಸಿರುತ್ತವೆ ?

ಉ : 'ನಾನು' 'ನಾನು' ಎಂಬ ಅರಿವನ್ನು. 'ನಾನು' ಎಂಬ ಬೋಧೆ ಹೊರಟು ಹೋದರೆ, ಅಥವಾ ಸ್ವಲ್ಪ ಸಮಯದ ಮಟ್ಟಿಗೆ ನಿರುದ್ಧವಾದರೆ ಆ ಸಮಯದ ಮಟ್ಟಿಗೆ ಯಾವ ವೃತ್ತಿಯೂ ಮನಸ್ಸಿನಲ್ಲಿ ಏಳಲು ಸಾಧ್ಯವಿಲ್ಲ.

ಪ್ರ : ಮೂರ್ಛೆ ಅಥವಾ ಗಾಢ ನಿದ್ರೆಯ ಕಾಲದಲ್ಲಿಯೂ 'ನಾನು' ಎಂಬ ಬೋಧೆ ಇರುವುದಿಲ್ಲ. ಹಾಗಾದರೆ ನಿರ್ವಿಕಲ್ಪ ಸಮಾಧಿಯೂ ಅಂಥ ಸ್ಥಿತಿಯೇನು ?

ಉ : ಅಲ್ಲ. ಮೂರ್ಛೆ ಅಥವಾ ಸುಷುಪ್ತಿಯ ಸ್ಥಿತಿಯಲ್ಲಿ 'ನಾನು' ಎಂಬ ಬೋಧೆಯು ಒಳಗಿಂದೊಳಗೇ ಇರುತ್ತದೆ. ಮೆದುಳಿನ ಮೂಲಕ ಯಾವುದು 'ನಾನು' 'ನಾನು' ಎಂದು ಹೇಳುವುದೋ ಅದು ಜಡವಾಗಿ ಅಥವಾ ಸದ್ದಿಲ್ಲದೆ ಉಳಿಯುವುದು ಅಷ್ಟೆ. ಒಳಗೆ ವೃತ್ತಿಸಮೂಹಗಳು ಕುದಿಯುತ್ತಿರುತ್ತವೆ. ಶ್ರೀರಾಮಕೃಷ್ಣರು ಇದಕ್ಕೆ ಒಂದು ಉದಾಹರಣೆ ಕೊಡುತ್ತಿದ್ದರು : "ಪಾರಿವಾಳಗಳು ಕಾಳನ್ನು ತಿಂದು ಕುತ್ತಿಗೆಯ ಒಳಗೆ ಇಟ್ಟುಕೊಂಡಿರುತ್ತವೆ. ಒಳಗೆ ಏನೂ ಇಲ್ಲ ಎಂದು ನೀವು ಭಾವಿಸಬಹುದು. ಆದರೆ ಉಬ್ಬಿದ ಕುತ್ತಿಗೆಯನ್ನು ಒತ್ತಿದರೆ ತಿಳಿಯುತ್ತದೆ ಅಲ್ಲಿ ಕಾಳು ತುಂಬಿ ಹೋಗಿರುವುದು."

7. ಪ್ರ : ಮೂರ್ಛೆ ಅಥವಾ ಸುಷುಪ್ತಿಯಲ್ಲಿ 'ನಾನು' ಎಂಬ ಬೋಧೆಯು ಇದೆ ಎಂಬುದು ತಿಳಿಯುವುದು ಹೇಗೆ ?

ಉ : ಫಲದ ಮೂಲಕ. ಆ ಸಮಯದಲ್ಲಿ ಹೃದಯಸ್ಪಂದನ ನಾಡಿ ಬಡಿತ ರಕ್ತ ಸಂಚಾರ ಇತ್ಯಾದಿಗಳು ನಡೆದೇ ಇರುತ್ತವೆ. ಈ ಶಾರೀರಿಕ ಕ್ರಿಯೆಗಳು ಕೂಡ 'ನಾನು' ಎಂಬ ಬೋಧೆಯನ್ನು ಆಶ್ರಯಿಸಿಯೇ ನಡೆಯುತ್ತವೆ. ಇನ್ನೊಂದು ವಿಷಯ; ಮೂರ್ಛೆ ಮತ್ತು ಸುಷುಪ್ತಿಯ ಬಾಹ್ಯ ಲಕ್ಷಣಗಳು ಸಮಾಧಿಯ ಲಕ್ಷಣಗಳಂತೆಯೇ ಕಂಡರೂ ಮನುಷ್ಯನು ಈ ಸ್ಥಿತಿಗಳಿಂದ ಹಿಂತಿರುಗಿ ಬಂದ ಮೇಲೆ ಅವನ ಜ್ಞಾನ ಮತ್ತು ಆನಂದಗಳು ಮೊದಲಿನಂತೆಯೇ ಇರುತ್ತವೆ, ಸ್ವಲ್ಪವೂ ವೃದ್ಧಿಯಾಗುವುದಿಲ್ಲ. ಕಾಮುಕನ ಕಾಮವು ಹಾಗೆಯೇ ಉಳಿಯುತ್ತದೆ, ಕೋಪಿಷ್ಠನು ಮೊದಲಿನಂತೆಯೇ ಕೋಪಿಷ್ಠನಾಗಿ ಉಳಿಯುತ್ತಾನೆ, ಲೋಭಿಯ ಲೋಭ ಮೊದಲಿನಂತೆಯೇ ಇರುತ್ತದೆ. ಆದರೆ ನಿರ್ವಿಕಲ್ಪ ಸಮಾಧಿಯನ್ನು ಪಡೆದಮೇಲೆ ಈ ಎಲ್ಲ ವೃತ್ತಿಗಳು ಮನಸ್ಸಿನಲ್ಲಿ ಏಳಲು ಸಾಧ್ಯವಿಲ್ಲ. ಆಗ ಅಪಾರ ಜ್ಞಾನ ಮತ್ತು ಆನಂದಗಳು ಉಂಟಾಗುವುವು. ಭಗವಂತನ ಪ್ರತ್ಯಕ್ಷ ದರ್ಶನವಾಗಿರುವುದರಿಂದ ಪರಕಾಲದ ವಿಷಯದಲ್ಲಿಯೂ ಭಗವಂತನ ಅಸ್ತಿತ್ವದ ವಿಷಯದಲ್ಲಿಯೂ ಯಾವ ಸಂಶಯವೂ ಉಳಿಯುವುದಿಲ್ಲ.

ಪ್ರ : ಆಯಿತು, ಸರಿ ಶ್ರೀರಾಮಕೃಷ್ಣರು ನಿರ್ವಿಕಲ್ಪ ಸಮಾಧಿಯಲ್ಲಿರುವಾಗ ಸ್ವಲ್ಪ ಕಾಲದ ಮಟ್ಟಿಗೆ 'ನಾನು' ಎಂಬ ಬೋಧೆ ಲಯವಾಗಿತ್ತು ಎಂದಿಟ್ಟುಕೊಳ್ಳೋಣ. ಮುಂದೆ ಏನು ?

ಉ : ಹೀಗೆ 'ನಾನು' ಎಂಬ ಬೋಧೆಯು ಲುಪ್ತವಾಗಿ ಕಾರಣರೂಪೀ ಜಗನ್ಮಾತೆಯ ದರ್ಶನವಾಯಿತು. ಆ ಸ್ವಲ್ಪ ಹೊತ್ತಿನ ದರ್ಶನದಿಂದ ಅವರು ತೃಪ್ತರಾಗದೆ ಯಾವಾಗಲೂ ಅದೇ ಅವಸ್ಥೆಯಲ್ಲಿ ಇರಬೇಕೆಂದು ಪ್ರಯತ್ನಿಸಿದರು.

8. ಪ್ರ : ಈ ಪ್ರಯತ್ನದ ಫಲವಾಗಿ ಶ್ರೀರಾಮಕೃಷ್ಣರ ಮನಸ್ಸು ಯಾವ ಅವಸ್ಥೆಯನ್ನು ಪಡೆಯಿತು ಮತ್ತು ದೇಹದಲ್ಲಿ ಯಾವ ಲಕ್ಷಣಗಳು ಕಾಣಿಸಿಕೊಂಡವು ?

ಉ : ಕೆಲವೊಮ್ಮೆ ಅಹಂಬೋಧೆಯು ಸಂಪೂರ್ಣ ಲಯವಾಗಿ ದೇಹವು ನಿರ್ಜೀವದಂತಾಗುತ್ತದೆ. ಒಳಗಡೆ ಜಗದಂಬೆಯ ಯಾವ ಅಡೆತಡೆಯೂ ಇಲ್ಲದ ಪೂರ್ಣ ಪ್ರತ್ಯಕ್ಷ ದರ್ಶನವಾಗುತ್ತದೆ. ಇನ್ನು ಕೆಲವೊಮ್ಮೆ ಸ್ವಲ್ಪ ಮಾತ್ರ ಅಹಂ ಬೋಧೆಯು ಉಂಟಾಗಿ ಶರೀರವು ಜೀವಿಸಿರುವ ಅಲ್ಪಸ್ವಲ್ಪ ಲಕ್ಷಣಗಳು ಕಾಣಿಸುತ್ತವೆ. ಹಾಗೂ ಸತ್ತ್ವಗುಣದ ಆಧಿಕ್ಯದಿಂದ ಕೂಡಿದ ಪವಿತ್ರವೂ ಸ್ವಚ್ಛವೂ ಆದ ಮನಸ್ಸು ಒಂದು ತೆರೆಯಂತೆ ಉಳಿಯುತ್ತದೆ. ಆಗ ಅದರ ಮೂಲಕ ಶ್ರೀಜಗನ್ಮಾತೆಯ ದರ್ಶನ ವಾಗುತ್ತದೆ. ಇಲ್ಲಿ ಶುದ್ಧ ಮನಸ್ಸಿನ ತಡೆ ಇರುವುದರಿಂದ ಈ ದರ್ಶನ ಪೂರ್ಣ ಪ್ರತ್ಯಕ್ಷವಲ್ಲ. ಹೀಗೆ ಕೆಲವೊಮ್ಮೆ ಅಹಂಬೋಧೆ ಪೂರ್ಣ ಲಯವಾಗಿ, ಮನೋವೃತ್ತಿ ಗಳೆಲ್ಲ ನಿರುದ್ಧವಾಗಿ ಶ್ರೀಜಗನ್ಮಾತೆಯ ಪೂರ್ಣದರ್ಶನ, ಮತ್ತೆ ಕೆಲವೊಮ್ಮೆ ಸ್ವಲ್ಪ ಅಹಂಬೋಧೆ ಇದ್ದು ಮನೋವೃತ್ತಿಗಳು ಸ್ವಲ್ಪ ಪ್ರಕಾಶಗೊಳ್ಳುತ್ತಿದ್ದು ಶ್ರೀ ಜಗನ್ಮಾತೆಯ ಪೂರ್ಣ ದರ್ಶನಕ್ಕೆ ಸ್ವಲ್ಪ ತಡೆಯುಂಟಾಗುವುದು—ಹೀಗೆ ಮತ್ತೆ ಮತ್ತೆ ಆಗುತ್ತಿತ್ತು.

ಪ್ರ : ಎಷ್ಟು ಕಾಲ ಹೀಗೆ ನಡೆಯಿತು.

ಉ : ನಿರಂತರವಾಗಿ ಆರು ತಿಂಗಳ ಪರ್ಯಂತ.

9. ಪ್ರ : ಹಾಗಾದರೆ ಅವರ ಶರೀರ ಉಳಿದದ್ದು ಹೇಗೆ ? ಆರು ತಿಂಗಳು ಆಹಾರವಿಲ್ಲದೆ ಶರೀರ ಉಳಿಯಲಾರದು. ನೀವೇ ಹೇಳುತ್ತೀರಿ, ದೇಹ ಪ್ರಜ್ಞೆ ಇದ್ದರೆ ಆಹಾರಾದಿಕ್ರಿಯೆಗಳು ನಡೆಯುತ್ತವೆ ಎಂದು. ಶ್ರೀರಾಮಕೃಷ್ಣರಿಗೆ ಆ ಸಂದರ್ಭದಲ್ಲಿ ಆಗಾಗ ಅಹಂಬೋಧೆ ಬಂದರೂ ಬಾಹ್ಯ ಕ್ರಿಯೆಗಳಿಗೆ ಸಾಕಾಗುವಷ್ಟು ಯಾವಾಗಲೂ ಬಂದಿರಲಿಲ್ಲ.

ಉ : ನಿಜವಾಗಿಯೂ ಶ್ರೀರಾಮಕೃಷ್ಣರ ದೇಹ ಉಳಿಯುತ್ತಿರಲಿಲ್ಲ. ದೇಹ ಸ್ವಲ್ಪ ಕಾಲ ಉಳಿಯಲಿ ಎಂಬ ಇಚ್ಛೆ ಸ್ವಲ್ಪವೂ ಅವರಿಗೆ ಇರಲಿಲ್ಲ. ಅವರ ದೇಹ ಉಳಿದದ್ದು ಶ್ರೀ ಜಗನ್ಮಾತೆಯ ಇಚ್ಛೆಯಿಂದ. ಅವರ ದೇಹದ ಮೂಲಕ ತನ್ನ ಅದ್ಭುತ ಶಕ್ತಿಯನ್ನು ಪ್ರಕಾಶಗೊಳಿಸಿ ಜಗತ್ತಿನ ಹಿತ ಸಾಧನೆ ಆಗಬೇಕಿತ್ತು.

10. ಪ್ರ : ಅದು ಸರಿ. ಆದರೆ ಆರು ತಿಂಗಳವರೆಗೆ ಶ್ರೀ ಜಗನ್ಮಾತೆಯೇ ಮೂರ್ತಿ ರೂಪದಲ್ಲಿ ಬಂದು ಅವರಿಗೆ ಬಲವಂತವಾಗಿ ಆಹಾರ ನೀಡುತ್ತಿದ್ದಳೇ ?

ಉ : ಹಾಗೆಂದೂ ಹೇಳಬಹುದು. ಏಕೆಂದರೆ ಆ ಸಮಯದಲ್ಲಿ ಸಾಧುವೊಬ್ಬನು ಎಲ್ಲಿಂದಲೋ ಬಂದು ಬಿಟ್ಟನು. ಅವನು ಶ್ರೀರಾಮಕೃಷ್ಣರ ಮೃತಪ್ರಾಯ ಸ್ಥಿತಿಯನ್ನು ಕಂಡು ಇದು ಅದ್ಭುತ ಯೋಗಸಾಧನೆಯ ಅಥವಾ ಭಗವಂತನೊಡನೆ ಏಕತ್ವಾನುಭವದ ಫಲ ಎಂದು ಅರಿತನು. ಅವನು ಆರು ತಿಂಗಳು ದಕ್ಷಿಣೇಶ್ವರ ದಲ್ಲಿದ್ದು ಆಗಾಗ ಶ್ರೀರಾಮಕೃಷ್ಣರಿಗೆ ಅಲ್ಪಸ್ವಲ್ಪ ಪ್ರಜ್ಞೆ ಬರುವಂತೆ ಮಾಡುತ್ತಿದ್ದ. ಇದಕ್ಕಾಗಿ ಅವನು ಅವರ ಪುಣ್ಯ ದೇಹವನ್ನು ಹೊಡೆಯುವುದಕ್ಕೂ ಹಿಂಜರಿಯುತ್ತಿ ರಲಿಲ್ಲ. ಆ ರೀತಿ ಸ್ವಲ್ಪ ಪ್ರಜ್ಞೆ ಬಂದ ಕೂಡಲೆ ಆಹಾರದ ತುತ್ತನ್ನು

ಬಾಯೊಳಗೆ ತುರುಕುತ್ತಿದ್ದ. ಹೀಗೆ ಯಾರೊ ಮೃತಪ್ರಾಯವಾಗಿ ಬಿದ್ದಿದ್ದ ಅಪರಿಚಿತ ವ್ಯಕ್ತಿಯನ್ನು ಹೇಗಾದರೂ ಮಾಡಿ ಬದುಕಿಸಬೇಕೆಂಬ ಇಷ್ಟೊಂದು ಆಗ್ರಹ ಆ ಸಾಧುವಿನಲ್ಲಿ ಏಕೆ ಉಂಟಾಯಿತೊ ತಿಳಿಯದು. ಆದರೆ ಈ ರೀತಿಯ ಘಟನೆಗಳನ್ನೇ ನಾವು ಭಗವಂತನ ಇಚ್ಛೆಯ ಪರಿಣಾಮ ಎಂದು ಕರೆಯುವುದು; ಆದ್ದರಿಂದ ಶ್ರೀಜಗನ್ಮಾತೆಯ ಇಚ್ಛೆಯಿಂದಲೇ ಶ್ರೀರಾಮಕೃಷ್ಣರ ದೇಹ ಉಳಿಯಿತು ಎಂದು ಹೇಳದೆ ಬೇರೆ ಉಪಾಯವಿಲ್ಲ.

11. ಪ್ರ : ಆಯಿತು, ಆನಂತರ ?

ಉ ; ಆನಂತರ, ಜಗದ್ರೂಪದಲ್ಲಿ ಪ್ರಕಾಶಿಸುತ್ತಿರುವ, ಎಲ್ಲ ಚೇತನ ಅಚೇತನ ವಸ್ತುಗಳನ್ನು ವ್ಯಾಪಿಸಿರುವ ಭಗವಂತ ಅಥವಾ ಜಗನ್ಮಾತೆ ಎಂದು ಕರೆಯಲ್ಪಡುವ ಆ ವಿಶ್ವ ಚೈತನ್ಯವೆ ಅಥವಾ ವಿರಾಟ್ ಶಕ್ತಿಯೇ ಶ್ರೀರಾಮಕೃಷ್ಣರಿಗೆ ಆದೇಶವಿತ್ತಿತು, "ಭಾವಮುಖದಲ್ಲಿರು" ಎಂದು.

12. ಪ್ರ : ಹಾಗೆಂದರೇನು ?

ಉ : ಅದನ್ನೇ ಹೇಳುತ್ತಿದ್ದೇವೆ. ಆದರೆ ಇದನ್ನು ಅರ್ಥ ಮಾಡಿಕೊಳ್ಳಬೇಕಾದರೆ ಆ ಸಮಯದಲ್ಲಿ ಶ್ರೀರಾಮಕೃಷ್ಣರ ಸ್ಥಿತಿಯನ್ನು ನಮ್ಮ ಕಲ್ಪನೆಯ ಸಹಾಯದಿಂದ ಎಷ್ಟು ಸಾಧ್ಯವೊ ಅಷ್ಟು ಅರ್ಥಮಾಡಿಕೊಳ್ಳುವುದು ಆವಶ್ಯಕ. ಆ ಸಮಯದಲ್ಲಿ ಶ್ರೀರಾಮಕೃಷ್ಣರಲ್ಲಿ ಅಹಂಬೋಧೆ ಒಮ್ಮೊಮ್ಮೆ ಸಂಪೂರ್ಣ ಲುಪ್ತವಾಗುತ್ತಿತ್ತು, ಮತ್ತೆ ಕೆಲವೊಮ್ಮೆ ಅದು ಸ್ವಲ್ಪ ಮಾತ್ರ ಉಳಿಯುತ್ತಿತ್ತು ಎಂದು ಮೊದಲೇ ಹೇಳಿರುವೆವು. ಆ ರೀತಿ ಸ್ವಲ್ಪ ಅಹಂಬೋಧೆ ಇದ್ದಾಗಲೂ ಜಗತ್ತು ನಮಗೆ ಕಾಣಿಸಿಕೊಳ್ಳುವಂತೆ ಅವರಿಗೆ ಕಾಣಿಸಿಕೊಳ್ಳುತ್ತಿರಲಿಲ್ಲ. ಒಂದು ವಿಶ್ವ ಮನಸ್ಸಿನಲ್ಲಿ ಅನೇಕ ಭಾವತರಂಗಗಳು ಉದ್ಭವಿಸಿ ಕ್ರೀಡಿಸಿ ಮತ್ತೆ ಅದರಲ್ಲೇ ಲಯವಾಗುವಂತೆ ಈ ಜಗತ್ತು ಅವರಿಗೆ ಕಾಣಿಸುತ್ತಿತ್ತು. ತಮ್ಮ ಶರೀರ ಮನಸ್ಸು ಅಹಂಬೋಧೆಯೂ ಕೂಡ ಈ ವಿಶ್ವ ಮನಸ್ಸಿನೊಳಗಿರುವ ತರಂಗಗಳೆಂದು ಅವರಿಗೆ ಅನ್ನಿಸುತ್ತಿತ್ತು. ಪಾಶ್ಚಾತ್ಯ ಜಡವಾದಿಗಳು ತಮ್ಮ ಎಲ್ಲ ಚಿಂತನೆ ಪ್ರಯೋಗಗಳ ಮೂಲಕ ಈ ವಿಶ್ವಚೈತನ್ಯ ಮತ್ತು ಶಕ್ತಿಯನ್ನು ಅಳೆಯಲು ಹೋಗಿ ಅದು ಒಂದೇ ಆದರೂ ಜಡ ಎಂದು ಹೇಳುತ್ತಾರೆ. ಶ್ರೀರಾಮಕೃಷ್ಣರು ಈ ಅವಸ್ಥೆಯಲ್ಲಿ ಆ ಶಕ್ತಿಯ ಸ್ವರೂಪದ ಪ್ರತ್ಯಕ್ಷ ಅನುಭವವನ್ನು ಪಡೆದರು. ಅದು ಜೀವಂತ ಜಾಗ್ರತ, ಏಕಮೇವಾದ್ವಿತೀಯ, ಎಲ್ಲ ಇಚ್ಛಾಕ್ರಿಯೆಗಳ ಮೂಲ ಎಂದು ಅವರು ಕಂಡುಕೊಂಡರು. ಆ ವಿಶ್ವಶಕ್ತಿಯನ್ನೇ ಅವರು ಕೃಪಾಮಯಿ ಜಗಜ್ಜನನಿ ಎಂದು ಕರೆದರು. ಈ ಏಕಮೇವಾದ್ವಿತೀಯ ಸತ್ಯವೇ ಸಗುಣ ಮತ್ತು ನಿರ್ಗುಣ ಎಂದು ವಿಭಾಗಗೊಂಡಿದೆ ಎಂದು ಅವರು ಕಂಡುಕೊಂಡರು. ಇದನ್ನೇ ಶಾಸ್ತ್ರದಲ್ಲಿ ಸ್ವಗತಭೇದ ಎಂದು ಕರೆದಿರುವುದು. ಈ ಸತ್ಯವೇ ಆಬ್ರಹ್ಮಸ್ತಂಬ ಪರ್ಯಂತವಾದ ಇಡೀ ವಿಶ್ವವನ್ನು ವ್ಯಾಪಿಸಿ ವಿಶ್ವ ಅಹಂ ಆಗಿ ಪ್ರಕಾಶಿಸುತ್ತಿರುವುದು. ಅಷ್ಟೇ ಅಲ್ಲ ಈ ಅಹಂತತ್ತ್ವ ಇರುವುದರಿಂದಲೇ ವಿಶ್ವಮನಸ್ಸಿನಲ್ಲಿ

ಅನಂತ ಭಾವತರಂಗಗಳು ಏಳುತ್ತಿವೆ. ಭಾವತರಂಗವನ್ನೇ ಅಲ್ಲಲ್ಲಿ ಅಲ್ಪಸ್ವಲ್ಪ ನೋಡುತ್ತ ಮಾನವನ ಕ್ಷುದ್ರ ಅಹಂಕಾರವು ಅದನ್ನೇ ಹೊರಗಿನ ಜಗತ್ತು ಮತ್ತು ಅದರ ವಿಭಿನ್ನ ವಸ್ತುಗಳು ಎಂದು ಕರೆಯುವುದು ಮತ್ತು ಅದಕ್ಕನುಗುಣವಾಗಿ ಎಲ್ಲ ವ್ಯವಹಾರ ನಡೆಯುತ್ತಿದೆ. ವಿಶ್ವ ಅಹಂನ ಶಕ್ತಿಯಿಂದಲೆ ಮಾನವರ ಅಲ್ಪ ಅಹಂಕಾರಗಳು ಉಳಿದಿವೆ ಮತ್ತು ತಮ್ಮ ತಮ್ಮ ಕಾರ್ಯಗಳನ್ನು ನೆರವೇರಿಸುತ್ತಿವೆ. ಈ ವಿಶ್ವ ಅಹಂಕಾರದ ಅರಿವು ಇಲ್ಲದಿರುವುದರಿಂದಲೇ ಅಲ್ಪ ಅಹಂಕಾರಗಳು ಭ್ರಮೆಯಿಂದ ತಮ್ಮ ಸ್ವತಂತ್ರ ಇಚ್ಛೆಯಿಂದ ಕೆಲಸ ಮಾಡುತ್ತಿರುವುದಾಗಿ ಭಾವಿಸುತ್ತವೆ. ಈ ಭ್ರಮೆಯನ್ನೇ ಶಾಸ್ತ್ರವು ಅವಿದ್ಯೆ ಅಥವಾ ಅಜ್ಞಾನ ಎಂದು ಕರೆಯುತ್ತದೆ.

13. ನಿರ್ಗುಣ ಮತ್ತು ಸಗುಣಗಳ ಮಧ್ಯದಲ್ಲಿ ಯಾವ ಈ ವಿಶ್ವ ಅಹಂ ತತ್ತ್ವವಿದೆಯೊ ಅದೇ 'ಭಾವಮುಖ'. ಏಕೆಂದರೆ ಇದು ಇರುವುದರಿಂದಲೇ ವಿಶ್ವ ಮನಸ್ಸಿನಲ್ಲಿ ಅನಂತ ಭಾವಗಳು ಸ್ಫುರಿಸುತ್ತಿರುವುದು. ಈ ವಿಶ್ವ ಅಹಂತತ್ತ್ವವೇ ಜಗನ್ಮಾತೆಯ ಅಥವಾ ಈಶ್ವರನ ಅಹಂಭಾವ. ಈ ವಿಶ್ವ ಅಹಂತತ್ತ್ವದ ಸ್ವರೂಪವನ್ನೇ ಗೌಡೀಯ ವೈಷ್ಣವರು, ಅಚಿಂತ್ಯಭೇದಾಭೇದ ಸ್ವರೂಪಿಯಾದ ಜ್ಯೋತಿರ್ಘನಮೂರ್ತಿಯಾದ ಭಗವಾನ್ ಶ್ರೀಕೃಷ್ಣ ಎಂದು ವರ್ಣಿಸಿರುತ್ತಾರೆ.

14. ಶ್ರೀರಾಮಕೃಷ್ಣರ ಅಹಂಬೋಧೆಯು ಯಾವಾಗ ಹೊರಟುಹೋಗುತ್ತಿತ್ತೊ, ಆಗ ಅವರು ವಿಶ್ವ ಅಹಂತತ್ತ್ವದ ಆಚೆ ಇರುವ ನಿರ್ಗುಣ ಬ್ರಹ್ಮ ಭಾವದಲ್ಲಿ ಇರುತ್ತಿದ್ದರು. ಆಗ ಅವರಿಗೆ ನಾವು ಯಾವುದನ್ನು ಜಗತ್ತು ಎಂದು ಕರೆಯುತ್ತೇವೆಯೊ ಆ ವಿಶ್ವ ಅಹಂತತ್ತ್ವದ ಭಾವತರಂಗಗಳ ಅರಿವು ಸ್ವಲ್ಪವೂ ಇರುತ್ತಿರಲಿಲ್ಲ. ಯಾವಾಗ ಅವರಿಗೆ ಸ್ವಲ್ಪ ಅಹಂ ಬೋಧೆ ಇರುತ್ತಿತ್ತೊ, ಆಗ ಸಗುಣ ವಿರಾಟ್ ಮತ್ತು ಅವರ ಒಳಗಿರುವ ಅನಂತ ಭಾವತರಂಗಗಳು ಶ್ರೀ ಜಗನ್ಮಾತೆಯ ನಿರ್ಗುಣ ಭಾವದೊಡನೆಯೇ ಒಂದಾಗಿವೆ ಎಂದು ಅನುಭವಿಸುತ್ತಿದ್ದರು. ಅಥವಾ ಅವರು ನಿರ್ಗುಣಭಾವವನ್ನು ತಲುಪುತ್ತಿದ್ದಂತೆಯೇ ಏಕಮೇವಾದ್ವಿತೀಯ ಸತ್ಯದಲ್ಲಿದ್ದ ಈ ಸ್ವಗತ ಭೇದದ ಅಸ್ತಿತ್ವವೂ ಅವರ ಅನುಭವದಿಂದ ಲುಪ್ತವಾಗಿಹೋಗುತ್ತಿತ್ತು. ಮತ್ತೆ ಸಗುಣ ವಿರಾಟ್ ಅಹಂ ತತ್ತ್ವವನ್ನು ಅನುಭವಿಸುತ್ತಿರುವಾಗ, ಯಾರು ಬ್ರಹ್ಮನೊ ಅದೇ ಶಕ್ತಿ, ಯಾವುದು ನಿರ್ಗುಣವೊ ಅದೇ ಸಗುಣ, ಯಾರು ಪುರುಷನೊ ಅದೇ ಪ್ರಕೃತಿ, ಯಾವ ಸರ್ಪವು ಸ್ಥಿರವಾಗಿತ್ತೊ, ಅದೇ ಈಗ ಚಲಿಸುತ್ತಿದೆ–ಎಂಬ ಬೋಧೆ ಅವರಿಗೆ ಉಂಟಾಗುತ್ತಿತ್ತು.

15. ಶ್ರೀ ಜಗನ್ಮಾತೆಯ ನಿರ್ಗುಣ–ಸಗುಣಗಳಿಂದ ಕೂಡಿದ ಸ್ವರೂಪವನ್ನು ಪೂರ್ಣ ಅನುಭವಿಸಿದ ಮೇಲೆ ಶ್ರೀರಾಮಕೃಷ್ಣರು 'ಭಾವಮುಖ'ದಲ್ಲಿರು ಎಂಬ ಆದೇಶವನ್ನು ಪಡೆದರು. ಅಂದರೆ : 'ಅಹಂಭಾವವನ್ನು ಸಂಪೂರ್ಣ ಲಯಗೊಳಿಸಿ ನಿರ್ಗುಣ ಭಾವದಲ್ಲಿ ಇರಬೇಡ, ಯಾವುದರಿಂದ ಅನಂತ ವಿಶ್ವಭಾವಗಳು ಉಂಟಾಗುತ್ತಿವೆಯೊ ಆ ವಿಶ್ವ-ಅಹಂ ನೀನಾಗಿರುವೆ, ಅದರ ಇಚ್ಛೆಯೇ ನಿನ್ನ ಇಚ್ಛೆ, ಅದರ ಕಾರ್ಯವೇ ನಿನ್ನ ಕಾರ್ಯ–ಈ ಭಾವವನ್ನು ಯಾವಾಗಲೂ ಸರಿಯಾದ ರೀತಿಯಲ್ಲಿ ಅನುಭವಿಸುತ್ತ

ಜೀವನಯಾಪನೆ ಮಾಡು ಮತ್ತು ಲೋಕಕಲ್ಯಾಣವನ್ನು ಸಾಧಿಸು.' ಆದ್ದರಿಂದ ಭಾವ ಮುಖದಲ್ಲಿರುವುದೆಂದರೆ ಎಲ್ಲ ರೀತಿಯಲ್ಲಿಯೂ, ಎಲ್ಲ ಸಮಯದಲ್ಲಿಯೂ, ಎಲ್ಲ ಅವಸ್ಥೆಗಳಲ್ಲಿಯೂ ನಾನು ಅದೇ ವಿಶ್ವಅಹಂ, ಅದೇ ಪಕ್ವ ಅಹಂ ಎಂಬ ಅರಿವನ್ನು, ವಿಶ್ವಾಸವನ್ನು ಮನಸ್ಸಿನಲ್ಲಿ ಇಟ್ಟುಕೊಂಡಿರುವುದು. 'ಭಾವಮುಖ' ಅವಸ್ಥೆಯನ್ನು ತಲುಪಿದರೆ ನಾನು ಇಂಥವನ ಮಗ, ಇಂಥವನ ತಂದೆ, ನಾನು ಬ್ರಾಹ್ಮಣ ಅಥವಾ ಶೂದ್ರ ಇತ್ಯಾದಿ ಎಲ್ಲ ಭಾವನೆಗಳೂ ಮನಸ್ಸಿನಿಂದ ದೂರವಾಗುವುವು. 'ನಾನು ಆ ವಿಶ್ವವ್ಯಾಪಿ ಅಹಂ' ಎಂಬ ಬೋಧೆಯೇ ಸದಾ ಮನಸ್ಸಿನಲ್ಲಿ ಉಳಿಯುತ್ತದೆ. ಆದ್ದರಿಂದಲೇ ಶ್ರೀರಾಮಕೃಷ್ಣರು ಮತ್ತೆ ಮತ್ತೆ ನಮಗೆ ಬೋಧಿಸುತ್ತಿದ್ದರು : "ನಾನು ಅವನ ಮಗ, ನಾನು ಅವನ ತಂದೆ, ನಾನು ಬ್ರಾಹ್ಮಣ, ನಾನು ಶೂದ್ರ, ನಾನು ಪಂಡಿತ. ನಾನು ಧನಿಕ-ಇವೆಲ್ಲ ಅಪಕ್ವ ಅಹಂಕಾರ, ಇದರಿಂದ ಬಂಧನವುಂಟಾಗುತ್ತದೆ. ಇದನ್ನೆಲ್ಲ ಬಿಟ್ಟು, ನಾನು ಭಗವಂತನ ದಾಸ, ನಾನು ಅವನ ಭಕ್ತ, ನಾನು ಅವನ ಮಗು, ನಾನು ಅವನ ಅಂಶ ಎಂದು ಭಾವಿಸಬೇಕು. ಇದು ಮನಸ್ಸನ್ನು ಪಕ್ವಗೊಳಿಸುತ್ತದೆ". ಅಥವಾ ಅವರು ಹೇಳುತ್ತಿದ್ದರು : "ನೋಡಪ್ಪ, ಅದ್ವೈತಜ್ಞಾನವನ್ನು ಬಟ್ಟೆಯ ತುದಿಯಲ್ಲಿ ಕಟ್ಟಿಕೊಂಡು ನಿನಗೆ ಇಚ್ಛೆ ಬಂದಂತೆ ಮಾಡು."

16. ಓದುಗರು ಕೇಳಬಹುದು, ಶ್ರೀರಾಮಕೃಷ್ಣರು ನಿಜವಾಗಿಯೂ ಅದ್ವೈತವಾದಿಗಳಾಗಿರಲಿಲ್ಲವೆ ? ಶ್ರೀಜಗನ್ಮಾತೆಯಲ್ಲಿ ಅವರು ಸ್ವಗತಭೇದವನ್ನು ಒಪ್ಪಿದರು. ಅವಳಲ್ಲಿ ನಿರ್ಗುಣ ಮತ್ತು ಸಗುಣ ಎರಡೂ ಭಾವಗಳಿವೆ ಎಂದರು. ಆದರೆ ಶಂಕರಾಚಾರ್ಯರು ಪ್ರತಿಷ್ಠಾಪಿಸಿದ ಅದ್ವೈತಮತದಲ್ಲಿ ಜಗತ್ತಿಗೆ ಅಸ್ತಿತ್ವವೇ ಇಲ್ಲ. ಹಾಗಾದರೆ ಶ್ರೀರಾಮಕೃಷ್ಣರು ಅವರ ಮತವನ್ನು ಒಪ್ಪಲಿಲ್ಲವೆನ್ನಬಹುದೆ ? ಹಾಗೇನೂ ಇಲ್ಲ. ಶ್ರೀರಾಮಕೃಷ್ಣರು ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತ ಈ ಎಲ್ಲ ಮತಗಳನ್ನೂ ಒಪ್ಪುತ್ತಿದ್ದರು. ಇವು ಮಾನವ ಮನಸ್ಸು ಉನ್ನತಿಗೇರುವ ವಿವಿಧ ಹಂತಗಳು ಎಂದು ಅವರು ಹೇಳುತ್ತಿದ್ದರು. ಒಂದು ಹಂತದಲ್ಲಿ ದ್ವೈತ ಭಾವ ಬರುವುದು. ಆಗ ಉಳಿದ ಎರಡು ಮತಗಳು ಸುಳ್ಳು ಎಂದೆನಿಸುತ್ತದೆ. ವಿಶಿಷ್ಟಾದ್ವೈತ ಸ್ಥಿತಿಯನ್ನು ಮುಟ್ಟಿದಾಗ ನಿತ್ಯ ನಿರ್ಗುಣ ವಸ್ತುವೇ ಲೀಲೆಯಲ್ಲಿ ಸದಾ ಸಗುಣವಾಗಿ ಉಳಿದಿದೆ ಎಂಬ ಅನುಭವವಾಗುತ್ತದೆ. ಆಗ ದ್ವೈತಮತವಂತೂ ಸುಳ್ಳಾಗಿಯೇ ಆಗುತ್ತದೆ. ಮತ್ತೆ ಅದ್ವೈತ ಸತ್ಯವೂ ಆಗ ಮನಸ್ಸಿಗೆ ಬರುವುದಿಲ್ಲ. ಮನುಷ್ಯನು ಯಾವಾಗ ಸಾಧನೆಯ ಮೂಲಕ ಆಧ್ಯಾತ್ಮಿಕತೆಯ ಅತ್ಯುನ್ನತ ಸ್ಥಿತಿಗೆ ಏರುವನೊ ಆಗ ಶ್ರೀಜಗನ್ಮಾತೆಯ ಕೇವಲ ನಿರ್ಗುಣ ರೂಪವನ್ನೇ ಅನುಭವಿಸುತ್ತಾನೆ. ಇದು ಅದ್ವೈತ ಸ್ಥಿತಿ. ಆಗ ನಾನು ನೀನು, ಜೀವ ಜಗತ್ತು, ಭಕ್ತಿ ಮುಕ್ತಿ, ಪಾಪ ಪುಣ್ಯ ಧರ್ಮಾಧರ್ಮ—ಇವೆಲ್ಲ ಒಂದೇ ಆಗುತ್ತವೆ. ಇದಕ್ಕೆ ಅವರು ಮಹಾಜ್ಞಾನಿ ಹನುಮಂತನ ಅನುಭವಪೂರ್ಣ ಹೇಳಿಕೆಯೊಂದನ್ನು ಉದಾಹರಿಸುತ್ತಿದ್ದರು.

17. ಹನುಮಂತನು ದಾಸ್ಯಭಾವದ ಉಜ್ವಲ ಪ್ರತೀಕ. ಶ್ರೀರಾಮಚಂದ್ರನು

ಒಮ್ಮೆ ಹನುಮಂತನನ್ನು ಪ್ರಶ್ನಿಸಿದ : ''ನನ್ನನ್ನು ನೀನು ಯಾವ ದೃಷ್ಟಿಯಿಂದ ನೋಡುತ್ತೀಯೆ ? ಯಾವ ಭಾವದಿಂದ ಪೂಜಿಸುತ್ತೀಯೆ ?'' ಹನುಮಂತನು ಉತ್ತರಿಸಿದನು : ''ಹೇ ಪ್ರಭು, ನಾನು ದೇಹಬುದ್ಧಿಯಲ್ಲಿರುವಾಗ ದೇಹವೇ ನಾನೆಂಬ ಭಾವವಿರುವಾಗ, ನೀನು ಪ್ರಭು ನಾನು ದಾಸ, ನೀನು ಸೇವ್ಯ, ನಾನು ಸೇವಕ, ನೀನು ಪೂಜ್ಯ ನಾನು ಪೂಜಕ. ನಾನು ಮನಸ್ಸು ಬುದ್ಧಿಗಳಿಂದ ಕೂಡಿದ ಜೀವಾತ್ಮ ಎಂದು ಯಾವಾಗ ಭಾವಿಸುತ್ತೇನೆಯೊ ಆಗ ನೀನು ಪೂರ್ಣ ನಾನು ಅಂಶ. ಮತ್ತೆ ನಾನು ಸಮಾಧಿಯಲ್ಲಿ ಉಪಾಧಿಗಳಾವುವೂ ಇಲ್ಲದ ಶುದ್ಧ ಆತ್ಮ ಎಂದು ಅನುಭವಿಸುತ್ತಿರುವಾಗ ನಾನೇ ನೀನು, ನೀನೇ ನಾನು, ನಮ್ಮಿಬ್ಬರಲ್ಲಿ ಯಾವ ಭೇದವೂ ಇಲ್ಲ ಎಂದು ಭಾವಿಸುತ್ತೇನೆ.''

18. ಶ್ರೀರಾಮಕೃಷ್ಣರು ಹೇಳುತ್ತಿದ್ದರು : ''ಯಾರು ಅದ್ವೈತವಾದಿಯೊ ಅವನು ಮಾತೇ ಆಡುವುದಿಲ್ಲ. ಅದ್ವೈತವು ಹೇಳುವ ವಿಷಯವಲ್ಲ. ಹೇಳಲು ಮಾಡಲು ಹೋದರೆ ಸಾಕ್ಷಾತ್ ದ್ವೈತಭಾವ ಬಂದುಬಿಡುವುದು. ಭಾವನೆ ಕಲ್ಪನೆಗಳು ಎಲ್ಲಿಯವರೆಗೆ ಇರುತ್ತವೆಯೊ ಅಲ್ಲಿಯವರೆಗೆ ದ್ವೈತವು ಇದ್ದೇ ಇರುತ್ತದೆ, ಅಲ್ಲಿಯ ವರೆಗೆ ಪೂರ್ಣ ಅದ್ವೈತ ಜ್ಞಾನ ಉಂಟಾಗುವುದಿಲ್ಲ. ಜಗತ್ತಿನಲ್ಲಿ ಬ್ರಹ್ಮವಸ್ತು ಒಂದು ಮಾತ್ರ ಉಚ್ಛಿಷ್ಟವಾಗಿಲ್ಲ '', ಅಂದರೆ ಮಾನವನ ಬಾಯಿಯ ಮೂಲಕ ವ್ಯಕ್ತ ವಾಗಿಲ್ಲ, ಅಥವಾ ಮಾನವ ಭಾಷೆಯ ಮೂಲಕ ಅದು ಪ್ರಕಾಶಗೊಂಡಿಲ್ಲ, ಏಕೆಂದರೆ ಅದ್ವೈತ ಬ್ರಹ್ಮ ವಸ್ತುವು ಮಾನವನ ಮನಸ್ಸು ಬುದ್ಧಿಗಳಿಗೆ ಅತೀತ. ಮಾತಿನ ಮೂಲಕ ಅದನ್ನು ಹೇಗೆ ಹೇಳಲು ಸಾಧ್ಯ ಅಥವಾ ಅರಿಯಲು ಸಾಧ್ಯ ? ಅದ್ವೈತಭಾವದ ಸಂಬಂಧವಾಗಿ ಶ್ರೀರಾಮಕೃಷ್ಣರು ಮತ್ತೆ ಮತ್ತೆ ನಮಗೆ ಹೇಳುತ್ತಿ ದ್ದರು, ''ನೋಡಪ್ಪ, ಅದು ಸಾಧನೆಯ ಕೊನೆಯ ಮಾತು,'' ಎಂದು. ಆದ್ದರಿಂದ ಅವರು ಹೇಳುತ್ತಿದ್ದಂತೆ, ಎಲ್ಲಿಯವರೆವಿಗೆ 'ನಾನು ನೀನು' 'ಹೇಳುವುದು ಕೇಳುವುದು' ಇತ್ಯಾದಿಗಳು ಇರುತ್ತವೆಯೊ ಅಲ್ಲಿಯವರೆಗೆ ನಿರ್ಗುಣ ಮತ್ತು ಸಗುಣ, ನಿತ್ಯ ಮತ್ತು ಲೀಲೆ ಇವೆರಡನ್ನೂ ನಾವು ಸ್ವೀಕರಿಸಬೇಕಾಗುತ್ತದೆ. ಅಲ್ಲಿಯವರೆಗೆ ಬಾಯಲ್ಲಿ ಅದ್ವೈತವನ್ನು ಮಾತನಾಡಿದರೂ ಅನುಷ್ಠಾನದಲ್ಲಿ ಮತ್ತು ವ್ಯವಹಾರದಲ್ಲಿ ನಾವು ವಿಶಿಷ್ಟಾದ್ವೈತಿಗಳಾಗಿಯೇ ಇರಬೇಕಾಗುತ್ತದೆ. ಈ ವಿಷಯದಲ್ಲಿ ಶ್ರೀರಾಮಕೃಷ್ಣರು ಎಷ್ಟೊಂದು ದೃಷ್ಟಾಂತಗಳನ್ನು ನೀಡುತ್ತಿದ್ದರು !

19. ''ಸಂಗೀತದಲ್ಲಿ ಆರೋಹಣ, ಅವರೋಹಣ ಇರುವಂತೆ : ಸ ರಿ ಗ ಮ ಪ ಧ ನಿ ಸ ಎಂದು ಮೇಲೆ ಹೋಗಿ ಆನಂತರ ಸ ನಿ ಧ ಪ ಮ ಗ ರಿ ಸ ಎಂದು ಕೆಳಗೆ ಬರುತ್ತಾರೆ. ಸಮಾಧಿಯಲ್ಲಿ ಅದ್ವೈತಾನುಭವವನ್ನು ಪಡೆದು, ಅನಂತರ ಕೆಳಗಿಳಿದು ಬಂದು 'ನಾನು' ಎಂಬ ಅರಿವನ್ನು ಇಟ್ಟುಕೊಂಡು ಇರುತ್ತಾರೆ.''

''ಒಂದು ಬೇಲದ ಹಣ್ಣನ್ನು ತೆಗೆದುಕೊಂಡು, ಸಿಪ್ಪೆ, ಬೀಜ, ತಿರುಳು ಇವುಗಳಲ್ಲಿ ಯಾವುದು ಬೇಲದ ಹಣ್ಣು ಎಂದು ವಿಚಾರ ಮಾಡಿದಂತೆ. ಮೊದಲು ಸಿಪ್ಪೆಯನ್ನು

ತೆಗೆದು ಇದು ಅಸಾರ ಎಂದು ತೆಗೆದು ಹಾಕುತ್ತೇನೆ, ಅನಂತರ ಬೀಜವನ್ನು ಅದೇ ರೀತಿ ಬಿಸಾಕುತ್ತೇನೆ. ತಿರುಳನ್ನು ಪ್ರತ್ಯೇಕಿಸಿ ಇದೇ ಬೇಲದ ಸಾರ, ಇದೇ ನಿಜವಾದ ಬೇಲದ ಹಣ್ಣು ಎಂದು ಹೇಳುತ್ತೇನೆ. ಅನಂತರ ಆಲೋಚನೆ ಬರುತ್ತದೆ ತಿರುಳು ಯಾವುದರಿಂದ ಆಗಿರುವುದೊ ಅದರಿಂದಲೇ ಸಿಪ್ಪೆ ಮತ್ತು ಬೀಜಗಳು ಆಗಿವೆ. ಸಿಪ್ಪೆ, ಬೀಜ ಮತ್ತು ತಿರುಳು—ಈ ಮೂರನ್ನೂ ಸೇರಿಸಿದಾಗ ಬೇಲದ ಹಣ್ಣು ಆಗುವುದು. ಇದೇ ರೀತಿ ನಿತ್ಯ ಈಶ್ವರನನ್ನು ಪ್ರತ್ಯಕ್ಷೀಕರಿಸಿಕೊಂಡು ಯಾವುದು ನಿತ್ಯವೊ ಅದೇ ಲೀಲಾರೂಪದಲ್ಲಿ ಜಗತ್ತು ಎಂದು ವಿಚಾರ ಮಾಡಬೇಕು.''

''ಬಾಳೆ ದಿಂಡಿನ ಹೊರಪದರವನ್ನು ತೆಗೆಯುತ್ತ ಹೋದರೆ ಒಳಗೆ ಅದರ ತಿರುಳು ಸಿಕ್ಕುತ್ತದೆ. ಅದೇ ಬಾಳೆದಿಂಡಿನ ಸಾರ, ಅದೇ ನಿಜವಾದ ಬಾಳೆ ದಿಂಡು ಎನಿಸುತ್ತದೆ. ಅನಂತರ ವಿಚಾರ ಮಾಡಿ ನೋಡಿದಾಗ ಪದರವೂ ತಿರುಳಿನದೆ ಮತ್ತು ತಿರುಳೂ ಪದರಕ್ಕೆ ಸೇರಿದುದು ಎಂದು ತಿಳಿಯುತ್ತದೆ. ಎರಡೂ ಸೇರಿ ಬಾಳೆ ದಿಂಡು ಆಗಿದೆ.''

''ಈರುಳ್ಳಿಯ ಸಿಪ್ಪೆ ಸುಲಿಯುತ್ತಾ ಹೋದರೆ ಕೊನೆಯಲ್ಲಿ ಏನೂ ಉಳಿಯುವುದೇ ಇಲ್ಲ. 'ನಾನು ಎಂದರೆ ಏನು' ಎಂದು ವಿಚಾರಮಾಡುತ್ತ ಶರೀರವಲ್ಲ, ಮನಸ್ಸಲ್ಲ, ಬುದ್ಧಿಯಲ್ಲ ಎಂದು ಒಂದೊಂದನ್ನೇ ಬಿಡುತ್ತ ಹೋದರೆ 'ನಾನು' ಎಂಬುದು ಪ್ರತ್ಯೇಕವಾಗಿ ಯಾವುದೂ ಇಲ್ಲ ಎಂದು ತಿಳಿಯುತ್ತದೆ. ಎಲ್ಲವೂ ಅವನೇ ಭಗವಂತನೇ. ಇದು ಗಂಗಾನದಿಗೆ ಸ್ವಲ್ಪ ಬೇಲಿ ಹಾಕಿ 'ಇದು ನನ್ನ ಗಂಗೆ' ಎಂದು ಹೇಳಿದ ಹಾಗೆ.''

20. ಈಗ ಪ್ರಸ್ತುತ ವಿಷಯಕ್ಕೆ ಬರೋಣ. ಶ್ರೀರಾಮಕೃಷ್ಣರು ಭಾವಮುಖದಲ್ಲಿರುವಾಗ ವಿಶ್ವವ್ಯಾಪಿ ಅಹಂತತ್ತ್ವದೊಡನೆ ಒಂದಾಗಿದ್ದರು, ಏಕದಿಂದ ಬಹುವಾಗುವುದನ್ನು ನೋಡುತ್ತಿದ್ದರು. ಶ್ರೀ ಜಗನ್ಮಾತೆಯ ನಿರ್ಗುಣಭಾವದಿಂದ ಕೆಲವು ಮೆಟ್ಟಿಲು ಕೆಳಗಿಳಿದು ಬಂದು ವಿದ್ಯಾಮಾಯೆಯಲ್ಲಿ ಅವರು ಇರುತ್ತಿದ್ದರು. ಆದರೆ ಈ ಸ್ಥಿತಿಯಲ್ಲಿಯೂ ಏಕತ್ವದ ಅನುಭವ ಎಷ್ಟು ತೀವ್ರವಾಗಿರುತ್ತಿತ್ತೆಂದರೆ ಈ ಬ್ರಹ್ಮಾಂಡದಲ್ಲಿ ಯಾರು ಏನು ಮಾಡುತ್ತಿರುವರೊ, ಚಿಂತಿಸುತ್ತಿರುವರೊ, ಮಾತನಾಡುತ್ತಿರುವರೊ, ಅವೆಲ್ಲವನ್ನೂ ನಾನೇ ಮಾಡುತ್ತಿರುವೆನು. ನಾನೇ ಚಿಂತಿಸುತ್ತಿರುವೆನು, ನಾನೇ ಮಾತನಾಡುತ್ತಿರುವೆನು ಎಂದು ಶ್ರೀರಾಮಕೃಷ್ಣರಿಗೆ ಅನಿಸುತ್ತಿತ್ತು. ಈ ಅವಸ್ಥೆಯ ಅಲ್ಪ ಹೊಳಹು ಕೂಡ ಅತ್ಯದ್ಭುತ ! ಒಂದು ದಿನ ಹುಲ್ಲಿನ ಮೇಲೆ ಯಾರೊ ನಡೆದುಕೊಂಡು ಹೋಗುತ್ತಿರುವುದನ್ನು ನೋಡಿದಾಗ ಶ್ರೀರಾಮಕೃಷ್ಣರಿಗೆ ತಮ್ಮ ಎದೆಯ ಮೇಲೆ ನಡೆದಂತೆ ವೇದನೆಯುಂಟಾಯಿತೆಂದು ಅವರು ಹೇಳುತ್ತಾರೆ. ನಿಜವಾಗಿಯೂ ಆಗ ಅವರ ಎದೆಯಲ್ಲಿ ಹೆಚ್ಚು ರಕ್ತ ಪ್ರವಹಿಸಿ ಅಲ್ಲಿ ಕಪ್ಪು ಕಲೆ ಉಂಟಾಗಿತ್ತು ಮತ್ತು ಅವರು ವೇದನೆಯಿಂದ ಚಡಪಡಿಸುತ್ತಿದ್ದರು.

ಈ ಅವಸ್ಥೆಯಿಂದಲೂ ಕೆಳಗಿಳಿದು ಮಾಯಾ ರಾಜ್ಯದ ಇನ್ನೂ ಕೆಳಗಿನ ಹಂತದಲ್ಲಿ ಅವರಿರುವಾಗ ಶ್ರೀಜಗನ್ಮಾತೆಯ ದಾಸ ನಾನು, ಭಕ್ತ ನಾನು, ಮಗು ನಾನು,

ಅಥವಾ ಅಂಶ ನಾನು—ಎಂಬ ಭಾವ ಅವರಲ್ಲಿರುತ್ತಿತ್ತು. ಇದಕ್ಕಿಂತ ಕೆಳಗಿನದು ಅವಿದ್ಯಾ ಮಾಯೆ ಅಥವಾ ಕಾಮ ಕ್ರೋಧ ಲೋಭ ಇತ್ಯಾದಿಗಳ ರಾಜ್ಯ. ಶ್ರೀರಾಮಕೃಷ್ಣರು ಯತ್ನಪೂರ್ವಕವಾಗಿ ಅವನ್ನು ಮೊದಲೆ ತ್ಯಜಿಸಿದ್ದರಿಂದ ಅವರ ಮನಸ್ಸು ಆ ಹಂತಕ್ಕೆ ಇಳಿಯುತ್ತಲೆ ಇರಲಿಲ್ಲ. ಅಥವಾ ಶ್ರೀಜಗನ್ಮಾತೆಯು ಇಳಿಯಲು ಬಿಡುತ್ತಿರಲಿಲ್ಲ. ಶ್ರೀ ರಾಮಕೃಷ್ಣರು ಹೇಳುತ್ತಿದ್ದಂತೆ ''ಯಾರು ಸಂಪೂರ್ಣ ತಾಯಿಯನ್ನು ಆಶ್ರಯಿಸಿರು ವನೊ ಅವನು ಎಂದೂ ತಪ್ಪು ಹೆಜ್ಜೆ ಹಾಕಲು ತಾಯಿಯು ಬಿಡುವುದಿಲ್ಲ.''

ಆದ್ದರಿಂದ ಶ್ರೀರಾಮಕೃಷ್ಣರು ನಿರ್ವಿಕಲ್ಪ ಸಮಾಧಿಯನ್ನು ಪಡೆದನಂತರ ಅವರ ಕ್ಷುದ್ರ ಅಥವಾ ಅಪಕ್ವ ಅಹಂಕಾರವು ಸಂಪೂರ್ಣ ನಾಶವಾಯಿತು, ಮತ್ತೆ ಯಾವ ಅಹಂಕಾರ ಅವರಲ್ಲಿತ್ತೊ, ಅದು ಮಹಾ ಅಥವಾ ಪಕ್ವ ಅಹಂಕಾರದೊಡನೆ ಒಂದಾಗಿತ್ತು. ಒಮ್ಮೊಮ್ಮೆ ಅವರು ಭಾವಿಸುತ್ತಿದ್ದರು ತಾನು ವಿಶ್ವ ಅಹಂಕಾರದ ಒಂದು ಅಂಗ ಅಥವಾ ಅಂಶ ಎಂದು, ಮತ್ತೆ ಕೆಲವೊಮ್ಮೆ ಆ ವಿಶ್ವ ಅಹಂತತ್ತ್ವದೊಡನೆ ಸಂಪೂರ್ಣ ಒಂದಾಗಿಬಿಡುತ್ತಿದ್ದರು. ಈ ಸ್ಥಿತಿಯಲ್ಲಿಯೇ ಅವರಿಗೆ ಎಲ್ಲ ಮನಸ್ಸಿನ ಎಲ್ಲ ಭಾವಗಳ ಪರಿಚಯವಾಗುತ್ತಿತ್ತು. ಏಕೆಂದರೆ ಈ ಮಹತ್ ಅಹಂಕಾರವನ್ನು ಆಶ್ರಯಿಸಿಯೇ ಜಗತ್ತಿನ ಎಲ್ಲ ಮಾನಸಿಕ ಭಾವನೆಗಳೂ ಉದಯಿಸುತ್ತಿರುವುದು. ಶ್ರೀರಾಮಕೃಷ್ಣರು ಈ ವಿಶ್ವ ಅಹಂತತ್ತ್ವವನ್ನು ಆಶ್ರಯಿಸಿಕೊಂಡಿದ್ದರಿಂದಲೇ ವಿಶ್ವಮನಸ್ಸಿನಲ್ಲಿ ಏನೇನು ಭಾವತರಂಗಗಳು ಏಳುತ್ತಿದ್ದವೊ ಅವೆಲ್ಲವನ್ನೂ ಗ್ರಹಿಸಲು ಮತ್ತು ಅರ್ಥಮಾಡಿ ಕೊಳ್ಳಲು ಅವರಿಗೆ ಸಾಧ್ಯವಾಗುತ್ತಿತ್ತು. ಈ ಉಚ್ಚ ಅವಸ್ಥೆಯಲ್ಲಿ 'ನಾನು ಭಗವಂತನ ಅಂಶ' ಎಂಬ ಭಾವವೂ ಲೀನವಾಗಿ ವಿಶ್ವ ಅಹಂಕಾರ ಅಥವಾ ಶ್ರೀಜಗನ್ಮಾತೆಯ ಅಹಂಕಾರ ಅವರ ಮೂಲಕ ಪ್ರಕಾಶಗೊಳ್ಳುತ್ತಿತ್ತು. ಅದೇ ನಿಗ್ರಹ ಅನುಗ್ರಹ ಸಾಮರ್ಥ್ಯವುಳ್ಳ ಗುರುರೂಪದಲ್ಲಿ ಕಾಣಿಸಿಕೊಳ್ಳುತ್ತಿತ್ತು. ಆಗ ಶ್ರೀರಾಮಕೃಷ್ಣ ರನ್ನು ನೋಡಿದರೆ ಇವರು 'ದೀನರ ದೀನ' ಎಂದೆನಿಸುತ್ತಿರಲಿಲ್ಲ. ಆಗ ಅವರ ನಡೆ ನುಡಿ ಇತರರೊಡನೆ ವ್ಯವಹಾರ ಇವೆಲ್ಲ ಸಂಪೂರ್ಣ ಭಿನ್ನವಾಗಿರುತ್ತಿದ್ದವು. ಆಗ ಅವರು ಕಲ್ಪತರುವಿನಂತಾಗಿಬಿಡುತ್ತಿದ್ದರು. ಭಕ್ತರು ಏನು ಕೇಳಿದರೂ ಕೊಟ್ಟುಬಿಡುವ ದಿವ್ಯ ಶಕ್ತಿಯುಳ್ಳವರಂತೆ ಆಗಿಬಿಡುತ್ತಿದ್ದರು. ದಕ್ಷಿಣೇಶ್ವರದಲ್ಲಿ ಅವರು ವಿಶೇಷ ಭಕ್ತರ ಮೇಲೆ ಕೃಪೆದೋರುವಾಗ ಈ ರೀತಿಯ ಭಾವದಲ್ಲಿರುತ್ತಿದ್ದುದನ್ನು ನಾವು ಪ್ರತಿನಿತ್ಯ ನೋಡಿರು ವೆವು. ಇದರ ವಿಶೇಷ ಪ್ರಕಾಶವನ್ನು ೧೮೮೬ರ ಜನವರಿ ಒಂದರಂದು ನೋಡಿರುವೆವು. ಅಂದು ಅವರು ಆ ಸಮಯದಲ್ಲಿ ಉಪಸ್ಥಿತರಿದ್ದ ಎಲ್ಲ ಭಕ್ತರನ್ನು ಸ್ಪರ್ಶಿಸಿ ಅವರಲ್ಲಿ ಆಧ್ಯಾತ್ಮಿಕ ಶಕ್ತಿ ಸಂಚಾರವಾಗುವಂತೆ ಮಾಡಿದರು. ಅಥವಾ ಅವರಲ್ಲಿ ಸುಪ್ತ ವಾಗಿದ್ದ ಆಧ್ಯಾತ್ಮಿಕ ಭಾವವನ್ನು ಜಾಗ್ರತಗೊಳಿಸಿದರು. ಅದೊಂದು ಅಪೂರ್ವ ಘಟನೆ, ಅದನ್ನಿಲ್ಲಿ ಹೇಳಿದರೆ ತಪ್ಪಾಗಲಾರದು.

21. ಅಂದು ೧೮೮೬ರ ಜನವರಿ ಒಂದನೆಯ ದಿನಾಂಕ. ಶ್ರೀರಾಮಕೃಷ್ಣರು ಆಗ ಕಲಕತ್ತೆಯ ಉತ್ತರ ಭಾಗದಲ್ಲಿದ್ದ ಕಾಶೀಪುರದ ತೋಟದ ಮನೆಯಲ್ಲಿದ್ದರು. ಡಾ॥

ಮಹೇಂದ್ರಲಾಲ ಸರ್ಕಾರನ ನಿರ್ದೇಶದಂತೆ ಭಕ್ತರು ಅವರನ್ನು ಅಲ್ಲಿಗೆ ಕರೆದುಕೊಂಡು ಬಂದು ಸುಮಾರು ಎರಡು ವಾರಗಳಾಗಿದ್ದವು. ಕಲಕತ್ತೆಯ ಹವೆಗಿಂತ ತೋಟದ ಹವೆ ಹೆಚ್ಚು ಶುದ್ಧವಾಗಿರುತ್ತದೆ. ಎಷ್ಟು ಸಾಧ್ಯವೊ ಅಷ್ಟು ಹವೆ ಶುದ್ಧವಾಗಿದ್ದರೆ ಗಂಟಲು ಬೇನೆ ಗುಣವಾಗುವುದಕ್ಕೆ ಒಳ್ಳೆಯದು ಎಂದು ಡಾಕ್ಟರ್ ಹೇಳಿದ್ದರು. ಇಲ್ಲಿಗೆ ಬಂದು ಕೆಲವು ದಿನಗಳನಂತರ ಡಾ॥ ರಾಜೇಂದ್ರಲಾಲ್‌ದತ್ತನು ಶ್ರೀರಾಮಕೃಷ್ಣರನ್ನು ನೋಡಲು ಬಂದು ಲೈಕೋಪೊಡಿಯಂ ಔಷಧಿಯನ್ನು ಕೊಟ್ಟು ಹೋದನು. ಈ ಔಷಧಿಯಿಂದ ಗಂಟಲು ಹುಣ್ಣು ಸ್ವಲ್ಪ ಗುಣಮುಖವಾಯಿತು. ಈ ಮನೆಗೆ ಬಂದಮೇಲೆ ಶ್ರೀರಾಮಕೃಷ್ಣರು ಯಾವಾಗಲೂ ಮಹಡಿಯ ಮೇಲೆ ಇರುತ್ತಿದ್ದರು, ಒಮ್ಮೆಯೂ ಕೆಳಗಿಳಿದು ಬಂದು ತೋಟದಲ್ಲಿ ಓಡಾಡಿರಲಿಲ್ಲ. ಇಂದು ದೇಹ ಸ್ವಲ್ಪ ಉತ್ತಮ ಸ್ಥಿತಿಯಲ್ಲಿದ್ದುದರಿಂದ ಮಧ್ಯಾಹ್ನದ ವೇಳೆಯಲ್ಲಿ ತೋಟದಲ್ಲಿ ಓಡಾಡಬೇಕೆಂಬ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದರು. ಅಂದು ನಿಜವಾಗಿಯೂ ಭಕ್ತರಿಗೆಲ್ಲ ತುಂಬ ಆನಂದ.

ಸ್ವಾಮಿ ವಿವೇಕಾನಂದರು ಆಗ ತೀವ್ರ ವೈರಾಗ್ಯದಿಂದ ಸಾಂಸಾರಿಕ ಉನ್ನತಿಯ ಎಲ್ಲ ಕಾಮನೆಗಳನ್ನೂ ತ್ಯಜಿಸಿ ಶ್ರೀರಾಮಕೃಷ್ಣರೊಡನೆ ವಾಸಿಸುತ್ತ ಅವರ ಉಪದೇಶದಂತೆ ಸಾಧನೆ ಮಾಡುತ್ತಿದ್ದರು. ಮರದ ಕೆಳಗೆ ಧುನಿ ಹೊತ್ತಿಸಿ ಇಡೀ ರಾತ್ರಿ ಧ್ಯಾನ, ಜಪ, ಭಜನೆ ಇತ್ಯಾದಿಗಳಲ್ಲಿ ಕಳೆಯುತ್ತಿದ್ದರು. ಚಿಕ್ಕ ಗೋಪಾಲ, ಕಾಳೀ (ಅಭೇದಾನಂದ) ಮುಂತಾದ ಇನ್ನೂ ಕೆಲವು ಭಕ್ತರು ಅವರಿಗೆ ಆವಶ್ಯಕ ವಸ್ತುಗಳನ್ನು ಒದಗಿಸುತ್ತಿದ್ದರು ಮತ್ತು ಅವರೊಡನೆ ಎಷ್ಟು ಸಾಧ್ಯವೊ ಅಷ್ಟು ಧ್ಯಾನ, ಜಪ ಮಾಡುತ್ತಿದ್ದರು. ಗೃಹಸ್ಥ ಭಕ್ತರಿಗೆ ಯಾವಾಗಲೂ ಶ್ರೀರಾಮಕೃಷ್ಣರೊಡನೆ ಇರಲು ಆಗುತ್ತಿರಲಿಲ್ಲ. ಅವಕಾಶ ಸಿಕ್ಕಿದಾಗಲೆಲ್ಲ ಬಂದು ಹೋಗುತ್ತಿದ್ದರು. ಯಾರು ಅಲ್ಲಿಯೇ ಇದ್ದು ನಿರಂತರವಾಗಿ ಶ್ರೀರಾಮಕೃಷ್ಣರ ಸೇವೆ ಮಾಡುತ್ತಿದ್ದರೊ ಅವರಿಗೆ ಆಹಾರಾದಿ ಎಲ್ಲ ವ್ಯವಸ್ಥೆಗಳನ್ನು ಈ ಗೃಹಸ್ಥ ಭಕ್ತರು ಮಾಡುತ್ತಿದ್ದರು. ಅಷ್ಟೇ ಅಲ್ಲದೆ ಆಗಾಗ ಒಂದು ದಿನ ಅಥವಾ ಅರ್ಧ ದಿನ ಇದ್ದು ಹೋಗುತ್ತಿದ್ದರು. ಇಂದು ವರ್ಷದ ಮೊದಲನೆಯ ದಿನವಾದ್ದರಿಂದ ರಜ ಇತ್ತು. ಆದ್ದರಿಂದ ಅನೇಕ ಭಕ್ತರು ಕಾಶೀಪುರಕ್ಕೆ ಬಂದಿದ್ದರು.

ಆಗ ಮಧ್ಯಾಹ್ನ ಮೂರು ಗಂಟೆಯ ಸಮಯ. ಶ್ರೀರಾಮಕೃಷ್ಣರು ಕೆಂಪು ಅಂಚಿನ ಪಂಚೆ ಉಟ್ಟಿದ್ದರು. ಒಂದು ಲುಂಗಿ ಮತ್ತು ದಪ್ಪನೆಯ ಕೆಂಪು ಅಂಚಿನ ಮೇಲ್ವಸ್ತ್ರ ಧರಿಸಿದ್ದರು. ಕಿವಿಯನ್ನು ಮುಚ್ಚುವಂತಹ ಟೋಪಿ, ಕಾಲಿಗೆ ಚಪ್ಪಲಿ. ಅವರು ಸ್ವಾಮಿ ಅದ್ಭುತಾನಂದರೊಡನೆ ಮೆಲ್ಲಗೆ ಕೆಳಗಿಳಿದು ಬಂದು ಮನೆಯ ಪಶ್ಚಿಮ ಬಾಗಿಲಿನಿಂದ ಹೊರಗೆ ಹೊರಟು ತೋಟದಲ್ಲಿ ಓಡಾಡತೊಡಗಿದರು. ಕೆಲವರು ಗೃಹಸ್ಥ ಭಕ್ತರು ಅವರು ಬರುತ್ತಿರುವುದನ್ನು ಕಂಡು ಆನಂದದಿಂದ ಅವರ ಹಿಂದೆ ಹೊರಟರು. ನರೇಂದ್ರ, ಮುಂತಾದ ಬಾಲಕ ಭಕ್ತರು ಕೆಲವರು ಇಡೀ ರಾತ್ರಿ ಜಾಗರಣೆ ಮಾಡಿದ್ದರಿಂದ ಒಂದುಕೋಣೆಯಲ್ಲಿ ನಿದ್ರಿಸುತ್ತಿದ್ದರು. ಉಳಿದ ಭಕ್ತರೆಲ್ಲ

ಶ್ರೀರಾಮಕೃಷ್ಣರ ಹಿಂದೆ ಹೋಟದ್ದರಿಂದ ತಮ್ಮ ಆವಶ್ಯಕತೆ ಇನ್ನು ಇಲ್ಲವೆಂದು ಸ್ವಾಮಿ ಅದ್ಭುತಾನಂದರು ಮನೆಗೆ ಹಿಂತಿರುಗಿದರು. ಇನ್ನೊರ್ವ ಬಾಲಕನನ್ನು ಕರೆದು ಇಬ್ಬರೂ ಕೂಡಿ ಶ್ರೀರಾಮಕೃಷ್ಣರ ಕೊಠಡಿಯನ್ನು ಶುದ್ಧಗೊಳಿಸುವುದು ಅವರ ಹಾಸಿಗೆ ದಿಂಬು ಇತ್ಯಾದಿಗಳನ್ನು ಬಿಸಲಿಗೆ ಹಾಕುವುದು ಇತ್ಯಾದಿ ಕೆಲಸಗಳಲ್ಲಿ ನಿರತರಾದರು.

ಗೃಹಸ್ಥ ಭಕ್ತರ ಪೈಕಿ ಗಿರೀಶ್‌ಚಂದ್ರನ ಭಕ್ತಿ ಅತ್ಯಂತ ತೀವ್ರವಾಗಿತ್ತು. ಶ್ರೀರಾಮಕೃಷ್ಣರು ಒಮ್ಮೆ ಅವನ ಪ್ರಚಂಡ ವಿಶ್ವಾಸವನ್ನು ಪ್ರಶಂಸಿಸುತ್ತ ಹೇಳಿದ್ದರು : ''ಗಿರೀಶನ ವಿಶ್ವಾಸ ಶೇಕಡ ನೂರಕ್ಕಿಂತಲೂ ಅಧಿಕ. ಮುಂದೆ ಅವನ ಸ್ಥಿತಿಯನ್ನು ಕಂಡು ಜನ ಬೆರಗಾಗುತ್ತಾರೆ.'' ಶ್ರೀರಾಮಕೃಷ್ಣರು ಸಾಕ್ಷಾತ್ ಭಗವಂತನೇ, ಜೀವಿಗಳ ಉದ್ಧಾರಕ್ಕಾಗಿ ಅವತರಿಸಿರುವರು ಎಂದು ಗಿರೀಶನು ದೃಢವಾಗಿ ನಂಬಿದ್ದ. ಶ್ರೀರಾಮಕೃಷ್ಣರು ಬೇಡವೆಂದರೂ ಅವನು ತನ್ನ ಈ ವಿಶ್ವಾಸವನ್ನು ಎಲ್ಲರ ಮುಂದೆ ವ್ಯಕ್ತಪಡಿಸುತ್ತಿದ್ದ. ಗಿರೀಶನು ಅಂದು ತೋಟದಲ್ಲಿ ಇತರ ಕೆಲವು ಭಕ್ತರೊಡನೆ ಒಂದು ಮಾವಿನ ಮರದ ಕೆಳಗೆ ಕುಳಿತು ಮಾತುಕತೆ ನಡೆಸುತ್ತಿದ್ದ.

ಶ್ರೀರಾಮಕೃಷ್ಣರು ಭಕ್ತರ ಸಮೇತ ತೋಟದ ಮಧ್ಯದ ರಸ್ತೆಯ ಮೂಲಕ ಗೇಟಿನ ಕಡೆ ಹೋಗುತ್ತಿದ್ದರು. ದಾರಿಯಲ್ಲಿ ಅದೇ ಮಾವಿನ ಮರ ಸಿಕ್ಕಿತು. ಶ್ರೀರಾಮಕೃಷ್ಣರು ಗಿರೀಶನನ್ನು ನೋಡಿ ಅವನನ್ನು ವಿಚಾರಿಸಿದರು : ''ಗಿರೀಶ್ ನೀನು ನನ್ನ ಬಗ್ಗೆ ಏನೇನೊ ಹೇಳಿಕೊಂಡು ತಿರುಗುತ್ತೀಯಲ್ಲ, ನನ್ನಲ್ಲಿ ಏನು ನೋಡುತ್ತೀಯೆ ?''

ಈ ಅನಿರೀಕ್ಷಿತ ಪ್ರಶ್ನೆಯಿಂದ ಗಿರೀಶನ ನಂಬಿಕೆ ವಿಚಲಿತವಾಗಲಿಲ್ಲ. ಅವನು ಮೇಲೆದ್ದು ರಸ್ತೆಯ ಮಧ್ಯೆ ಒಂದು ಮೊಳಕಾಲೂರಿ ಕೈಜೋಡಿಸಿ ಶ್ರೀರಾಮಕೃಷ್ಣರ ಪದತಲದಲ್ಲಿ ಕುಳಿತನು. ಅನಂತರ ಗದ್ಗದ ಕಂಠದಿಂದ ಹೇಳಿದನು : ''ವ್ಯಾಸ ವಾಲ್ಮೀಕಿಗಳಿಗೆ ಯಾರ ವಿಷಯವನ್ನು ಹೇಳಿ ಮುಗಿಸಲಾಗಲಿಲ್ಲವೊ ಅವರ ಬಗ್ಗೆ ನಾನು ಇನ್ನೇನು ಹೇಳಲಿ!''

ಗಿರೀಶನ ಈ ಅದ್ಭುತ ವಿಶ್ವಾಸಪೂರ್ಣ ಮಾತನ್ನು ಕೇಳಿ ಶ್ರೀರಾಮಕೃಷ್ಣರ ದೇಹ ರೋಮಾಂಚನಗೊಂಡಿತು, ಮನಸ್ಸು ಉಚ್ಚ ಭೂಮಿಗೆ ಏರಿ ಅವರು ಸಮಾಧಿಸ್ಥರಾದರು. ದಿವ್ಯ ಭಾವದಿಂದ ಬೆಳಗುತ್ತಿದ್ದ ಶ್ರೀರಾಮಕೃಷ್ಣರ ಮುಖಮಂಡಲವನ್ನು ಕಂಡು ಗಿರೀಶನು ಉಲ್ಲಾಸದಿಂದ ''ಜೈ ರಾಮಕೃಷ್ಣ, ಜೈರಾಮಕೃಷ್ಣ'' ಎಂದು ಚೀತ್ಕರಿಸುತ್ತ ಮತ್ತೆ ಮತ್ತೆ ಅವರ ಪಾದಕ್ಕೆ ವಂದಿಸಿದನು.

ಇಷ್ಟರಲ್ಲಿ ಶ್ರೀರಾಮಕೃಷ್ಣರು ಅರ್ಧ ಬಾಹ್ಯಾವಸ್ಥೆಯನ್ನು ಪಡೆದು ತಮ್ಮ ಸುತ್ತ ನೆರೆದಿದ್ದ ಭಕ್ತರನ್ನುದ್ದೇಶಿಸಿ ಹೇಳಿದರು : ''ನಿಮಗೆ ನಾನಿನ್ನೇನು ಹೇಳಲಿ ? ನಿಮ್ಮೆಲ್ಲರಿಗೂ ಚೈತನ್ಯವುಂಟಾಗಲಿ !''ಈ ಅಭಯವಾಣಿಯನ್ನು ಕೇಳಿದ ಭಕ್ತರೆಲ್ಲರೂ ಆನಂದಾತಿರೇಕದಿಂದ ಜಯ ಜಯಕಾರ ಮಾಡತೊಡಗಿದರು. ಕೆಲವರು ಪುಷ್ಪವೃಷ್ಟಿ

ಸುರಿಸಿದರು. ಕೆಲವರು ಬಂದು ಪಾದಸ್ಪರ್ಶ ಮಾಡಿದರು. ಪಾದಸ್ಪರ್ಶ ಮಾಡಿದ ಮೊದಲ ವ್ಯಕ್ತಿಯ ವಕ್ಷಃಸ್ಥಲವನ್ನು ಸ್ಪರ್ಶಿಸಿ ಕೆಳಗಿನಿಂದ ಮೇಲೆ ಕೈಯನ್ನು ಆಡಿಸುತ್ತ ಶ್ರೀರಾಮಕೃಷ್ಣರು "ಚೈತನ್ಯವುಂಟಾಗಲಿ" ಎಂದು ಹೇಳಿದರು. ಎರಡನೇ ವ್ಯಕ್ತಿ ಬಂದು ಪ್ರಣಾಮ ಮಾಡಿದಾಗಲೂ ಅದೇ ರೀತಿ ಮಾಡಿದರು. ಹೀಗೆ ಬಂದವರಿಗೆಲ್ಲ ಅದೇ ರೀತಿ ಮಾಡಿದರು. ಈ ಅದ್ಭುತ ಸ್ಪರ್ಶದಿಂದ ಪ್ರತಿಯೊಬ್ಬ ಭಕ್ತನಲ್ಲಿಯೂ ಅಪೂರ್ವ ಭಾವಾಂತರವುಂಟಾಯಿತು. ಕೆಲವರು ನಗತೊಡಗಿದರು. ಕೆಲವರು ಅಳ ತೊಡಗಿದರು, ಮತ್ತೆ ಕೆಲವರು ಧ್ಯಾನದಲ್ಲಿ ಮುಳುಗಿದರು, ಇನ್ನು ಕೆಲವರು ಆನಂದದಿಂದ ಪರಿಪೂರ್ಣರಾಗಿ ಇತರರೂ ಶ್ರೀರಾಮಕೃಷ್ಣರ ಕೃಪೆಯಿಂದ ಧನ್ಯ ರಾಗಲೆಂದು ಎಲ್ಲರನ್ನೂ ಕೂಗಿ ಕರೆಯತೊಡಗಿದರು. ಈ ಕೂಗು ಜಯಕಾರಗಳ ಶಬ್ದದಿಂದ ನಿದ್ರಿಸುತ್ತಿದ್ದ ಸಂನ್ಯಾಸೀ ಭಕ್ತರು (ನರೇಂದ್ರಾದಿಗಳು) ಮೇಲೆದ್ದರು. ಕೆಲಸ ಮಾಡುತ್ತಿದ್ದವರು ಅದನ್ನು ಅಲ್ಲಿಯೇ ಬಿಟ್ಟರು. ಎಲ್ಲ ಹೊರಗಡೆ ಬಂದು ನೋಡುತ್ತಾರೆ ಭಕ್ತರೆಲ್ಲರೂ ಶ್ರೀರಾಮಕೃಷ್ಣರನ್ನು ಮುತ್ತಿಕೊಂಡು ಹುಚ್ಚರಂತೆ ವರ್ತಿಸುತ್ತಿದ್ದಾರೆ. ಆ ದೃಶ್ಯವನ್ನು ನೋಡಿದ ಕೂಡಲೇ ಅವರಿಗೆ ತಿಳಿಯಿತು, ಶ್ರೀರಾಮಕೃಷ್ಣರು ದಕ್ಷಿಣೇಶ್ವರದಲ್ಲಿ ವಿಶೇಷ ವ್ಯಕ್ತಿಯ ಮೇಲೆ ದಿವ್ಯಭಾವದಿಂದ ತಮ್ಮ ಅನುಗ್ರಹ ಶಕ್ತಿಯನ್ನು ಪ್ರಕಾಶಪಡಿಸುತ್ತಿದ್ದಂತೆಯೇ ಇಲ್ಲಿ ಎಲ್ಲರ ಮೇಲೆ ಪ್ರಕಾಶಪಡಿಸುತ್ತಿದ್ದಾರೆ ಎಂದು. ಸಂನ್ಯಾಸೀ ಭಕ್ತರು ಹತ್ತಿರ ಬರುವಷ್ಟರಲ್ಲಿಯೇ ಶ್ರೀರಾಮಕೃಷ್ಣರ ಸ್ಥಿತಿ ಪರಿವರ್ತನೆಗೊಂಡು ಸಾಧಾರಣ ಭಾವವನ್ನು ಪಡೆದರು.

22. ಆ ಸಂದರ್ಭದಲ್ಲಿ ಎಂಥ ಅನುಭವವಾಯಿತು ಎಂದು ಕೆಲವು ಗೃಹಸ್ಥ ಭಕ್ತರನ್ನು ಕೇಳಿದಾಗ ಅವರು ಹೇಳಿದರು: ಕೆಲವರಿಗೆ ಸಿದ್ಧಿಯನ್ನು ಸೇವಿಸಿದಾಗ ಯಾವ ರೀತಿ ಅಮಲು ಉಂಟಾಗುವುದೊ ಹಾಗಾಯಿತಂತೆ. ಕೆಲವರಿಗೆ ಧ್ಯಾನದ ಸಮಯ ದಲ್ಲಿ ಯಾವ ಮೂರ್ತಿಯನ್ನು ಚಿಂತಿಸಲು ಪ್ರಯತ್ನಿಸುತ್ತಿದ್ದರೂ ಅದು ಉಜ್ವಲ ವಾಗಿಯೂ ಜೀವಂತವಾಗಿಯೂ ಕಾಣಿಸಿಕೊಂಡಿತಂತೆ. ಇನ್ನೂ ಕೆಲವರಿಗೆ ದೇಹದೊಳಗೆ ಹಿಂದೆಂದೂ ಅನುಭವಿಸದ ಶಕ್ತಿಸಂಚಾರವಾದಂತಾಗಿ ಅದ್ಭುತ ಆನಂದದ ಬೋಧೆ ಆಯಿತಂತೆ. ಮತ್ತೆ ಕೆಲವರಿಗೆ ಹಿಂದೆದೂ ಕಾಣದ ದಿವ್ಯ ಜ್ಯೋತಿಯ ದರ್ಶನವಾಗಿ ಆನಂದಾನುಭವವುಂಟಾಯಿತಂತೆ. ಪ್ರತಿಯೊಬ್ಬರ ದರ್ಶನಗಳು ಭಿನ್ನಭಿನ್ನವಾದರೂ ದಿವ್ಯ ಆನಂದಾನುಭವ ಎಲ್ಲರಿಗೂ ಸಮಾನ. ಶ್ರೀರಾಮಕೃಷ್ಣರ ವಿಶೇಷ ಶಕ್ತಿ ಆ ಅದ್ಭುತ ಸ್ಪರ್ಶದ ಮೂಲಕ ಭಕ್ತರಲ್ಲಿ ಪ್ರವಹಿಸಿ ಅವರಲ್ಲಿ ಭಾವಪರಿವರ್ತನೆಯನ್ನು ಉಂಟುಮಾಡಿತ್ತು. ಅಲ್ಲಿ ನೆರೆದಿದ್ದ ಭಕ್ತರ ಪೈಕಿ ಕೇವಲ ಇಬ್ಬರನ್ನು ಮಾತ್ರ ಶ್ರೀರಾಮಕೃಷ್ಣರು "ಈಗ ಅಲ್ಲ" ಎಂದು ಹೇಳಿ ಆ ರೀತಿ ಸ್ಪರ್ಶಿಸಿರಲಿಲ್ಲ. ಅವರು ತಾವು ದುರ್ಭಾಗ್ಯರೆಂದು ಅತ್ಯಂತ ನಿರಾಶೆಗೊಂಡಿದ್ದರು.* ಇದರಿಂದ ಇನ್ನೊಂದು

*ಮುಂದೆ ಒಂದು ದಿನ ಶ್ರೀರಾಮಕೃಷ್ಣರು ಇವರಿಬ್ಬರನ್ನು ಇದೇ ರೀತಿ ಸ್ಪರ್ಶಿಸಿದರು.

ವಿಷಯು ಸ್ಪಷ್ಟವಾಗುತ್ತದೆ. ಯಾವಾಗ ಯಾರ ಮೇಲೆ ಕೃಪೆಯಾಗಿ ಶ್ರೀರಾಮಕೃಷ್ಣರ ಮೂಲಕ ಈ ದಿವ್ಯಶಕ್ತಿಯು ಪ್ರಕಾಶಗೊಳ್ಳುತ್ತದೆ ಎಂಬುದನ್ನು ಸ್ಪಷ್ಟವಾಗಿ ಹೇಳ ಲಾಗುವುದಿಲ್ಲ. ಸಾಧಾರಣ ಅವಸ್ಥೆಯಲ್ಲಿರುವಾಗ ಅವರಿಗೇ ಇದು ತಿಳಿಯುತ್ತಿತ್ತೆ ಇಲ್ಲವೆ ಎಂಬುದು ಸಂದೇಹ.

23. ಆದ್ದರಿಂದ ಶ್ರೀರಾಮಕೃಷ್ಣರು ತಮ್ಮ ಅಪಕ್ವ ಅಹಂಕಾರವನ್ನು ಸಂಪೂರ್ಣ ತ್ಯಜಿಸಿದ್ದರಿಂದ ವಿಶ್ವ ಅಹಂಕಾರ ಅಥವಾ ಶ್ರೀಜಗನ್ಮಾತೆಯ ಶಕ್ತಿ ಅವರ ಮೂಲಕ ಕೆಲಸ ಮಾಡಲು ಸಾಧ್ಯವಾಯಿತು. ಅವರು ಅಪಕ್ವ ಅಹಂಕಾರವನ್ನು ತ್ಯಜಿಸಿ ಅತ್ಯಂತ ದೀನ ಭಾವದಲ್ಲಿ ಇದ್ದದ್ದರಿಂದಲೇ ಶ್ರೀಜಗನ್ಮಾತೆಯ ಗುರುಶಕ್ತಿಯು ಅವರ ಮೂಲಕ ಪ್ರಕಾಶಗೊಳ್ಳಲು ಸಾಧ್ಯವಾಯಿತು. ಈ ರೀತಿ ಅಹಂಕಾರದ ತ್ಯಾಗದನಂತರವೇ ಗುರು ಭಾವ ಅಥವಾ ಗುರುಶಕ್ತಿಯು ಪ್ರಕಾಶಗೊಳ್ಳುತ್ತದೆ ಎಂಬುದು ಜಗತ್ತಿನ ಎಲ್ಲ ಅವತಾರ ಪುರುಷರ ಜೀವನದಲ್ಲಿಯೂ ಕಂಡುಬರುವ ವಿಷಯ.

24. ಗುರುವನ್ನು ಮನುಷ್ಯದೃಷ್ಟಿಯಿಂದ ನೋಡಿದರೆ ಆಧ್ಯಾತ್ಮಿಕ ಸಿದ್ಧಿ ಲಭಿಸುವುದಿಲ್ಲ ಎಂಬುದನ್ನು ನಾವು ಹಿಂದಿನಿಂದಲೂ ಕೇಳುತ್ತ ಬಂದಿದ್ದೇವೆ. 'ಗುರು ರ್ಬ್ರಹ್ಮ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ।' ಎಂದು ನಾವು ಪುರಾತನ ಕಾಲ ದಿಂದಲೂ ನಮಗೆ ಮಂತ್ರದೀಕ್ಷೆಯಿತ್ತ ಗುರುವನ್ನು ಸ್ತುತಿಸುತ್ತ ಬಂದಿದ್ದೇವೆ. ವಿದೇಶೀ ಶಿಕ್ಷಣದ ಪ್ರಭಾವದಿಂದ ಅನೇಕರು ತಮ್ಮ ಸಂಸ್ಕೃತಿಯನ್ನು ಕಡೆಗಣಿಸಿ ಓರ್ವ ವಿಶೇಷ ವ್ಯಕ್ತಿಯನ್ನು ಈ ರೀತಿ ಪರಿಗಣಿಸುವುದು ದೊಡ್ಡ ಅಪರಾಧ ಎಂದು ವಾದಿಸುವವರಿದ್ದಾರೆ. ಗುರುಭಾವವು ವಿಶೇಷ ವ್ಯಕ್ತಿಗಳ ಮೂಲಕ ಪ್ರಕಾಶಗೊಂಡರೂ ಅದು ಮಾನವ ಭಾವ ಗಳಲ್ಲಿ ಒಂದಲ್ಲ ಎಂಬುದು ಅವರಿಗೆ ಹೇಗೆ ತಿಳಿಯಬೇಕು? ಶ್ರೀಜಗನ್ಮಾತೆಯು ನೀರು ಗಾಳಿ ಆಹಾರ ಮುಂತಾದ ಅವಶ್ಯಕ ವಸ್ತುಗಳ ರೂಪದಲ್ಲಿ ಪ್ರಕಾಶಗೊಳ್ಳುತ್ತಿರು ವಂತೆಯೇ ತ್ರಿತಾಪಗಳಿಂದ ನರಳುತ್ತಿರುವ ಮನುಷ್ಯನನ್ನು ಮಾಯಾಪಾಶದಿಂದ ಬಿಡಿಸಲು ಅಹಂಶೂನ್ಯ ವ್ಯಕ್ತಿಯ ಮೂಲಕ ಗುರುರೂಪದಲ್ಲಿಯೂ ಪ್ರಕಾಶಿಸುತ್ತಿರುವಳು ಎಂಬುದು ಅವರಿಗೆ ಹೇಗೆ ತಿಳಿಯಬೇಕು? ಎಷ್ಟರ ಮಟ್ಟಿಗೆ ಅಪಕ್ವ ಅಹಂಕಾರವು, ಕಡಿಮೆಯಾಗುತ್ತದೊ ಅಷ್ಟರ ಮಟ್ಟಿಗೆ ಆ ವ್ಯಕ್ತಿಯು ಗುರುಶಕ್ತಿಯ ಪ್ರಕಾಶಕ್ಕೆ ಸಾಧ್ಯನಾಗುತ್ತಾನೆ. ಸಾಧಾರಣ ವ್ಯಕ್ತಿಗಳಲ್ಲಿ ಅದು ಅತ್ಯಲ್ಪ ಪ್ರಕಾಶಗೊಳ್ಳುವುದ ರಿಂದ ಅದನ್ನು ಗ್ರಹಿಸಲು ನಮಗೆ ಸಾಧ್ಯವಾಗುವುದಿಲ್ಲ. ಆದರೆ ಶ್ರೀಕೃಷ್ಣ, ಬುದ್ಧ, ಚೈತನ್ಯ, ಕ್ರಿಸ್ತ ಮತ್ತು ಈ ಯುಗದಲ್ಲಿ ಶ್ರೀರಾಮಕೃಷ್ಣ—ಇಂತಹ ಅವತಾರ ಪುರುಷ ರಲ್ಲಿ ಈ ಗುರುಭಾವ ಪೂರ್ಣ ರೀತಿಯಲ್ಲಿ ಪ್ರಕಾಶಗೊಂಡಿತು. ಆ ಶಕ್ತಿಯ ಅಲೆ ಯನ್ನು ಕಂಡು ಅನುಭವಿಸಿದ ಪುಣ್ಯವಂತರು ಈ ಶಕ್ತಿಯು ಖಂಡಿತ ಮಾನುಷವಲ್ಲ ಸಾಕ್ಷಾತ್ ಭಗವಂತನದೇ ಎಂದು ಹೃತ್ಪೂರ್ವಕವಾಗಿ ತಿಳಿದುಕೊಂಡರು. ಆಗಲೇ ಸಾಧಕನ ಮೋಹಪಾಶ ದೂರವಾಗಿ 'ಹೇ ಗುರು, ನೀನು ಖಂಡಿತ ಮನುಷ್ಯನಲ್ಲ, ಸಾಕ್ಷಾತ್ ಭಗವಂತನೇ' ಎಂದು ಉದ್ಗರಿಸುತ್ತಾನೆ.

25. ಆದ್ದರಿಂದ ಶ್ರೀಜಗನ್ಮಾತೆಯು ಯಾವ ರೂಪದಲ್ಲಿ ಮಾನವ ಮನಸ್ಸಿನ ಅಜ್ಞಾನದ ಎಲ್ಲ ಮಲಿನತೆಯನ್ನು ದೂರಮಾಡುವಳೊ ಆ ಉಚ್ಚ ಭಾವವನ್ನೇ ಗುರು ಭಾವ ಅಥವಾ ಗುರುಶಕ್ತಿ ಎಂದು ಕರೆಯುವುದು. ಈ ಭಾವವನ್ನೇ ಶಾಸ್ತ್ರವು ಗುರು ಎಂದು ಕರೆಯುವುದು. ಈ ಗುರುವಿನಲ್ಲಿ ಮಾನವನಿಗೆ ಪೂರ್ಣ ಶ್ರದ್ಧೆ, ವಿಶ್ವಾಸ, ಭಕ್ತಿ ಇರಬೇಕೆಂದು ಶಾಸ್ತ್ರ ಉಪದೇಶಿಸುತ್ತದೆ. ಆದರೆ ಭಕ್ತಿ ಶ್ರದ್ಧಾದಿಗಳನ್ನು ಕಲಿಯಲು ಈಗತಾನೆ ಆರಂಭಿಸಿರುವ ಸ್ಥೂಲ ಬುದ್ಧಿಯು ಇಂತಹ ಅಶರೀರಿಯಾದ ಭಾವವನ್ನು ಗ್ರಹಿಸುವುದು ಪ್ರೀತಿಸುವುದು ಅಸಾಧ್ಯವಾದುದರಿಂದ ದೀಕ್ಷೆ ನೀಡುವ ಮಾನವನನ್ನೇ ಗುರುವೆಂದು ಪೂಜಿಸಲು ಶಾಸ್ತ್ರ ಹೇಳುತ್ತದೆ. ಗುರುಭಾವವನ್ನು ನಾವು ಒಪ್ಪಿಕೊಳ್ಳು ತ್ತೇವೆ, ಅದಕ್ಕೆ ಶ್ರದ್ಧಾ ಭಕ್ತಿಯನ್ನೂ ತೋರಿಸುತ್ತೇವೆ, ಆದರೆ ಈ ಭಾವವು ಯಾವ ದೇಹವನ್ನು ಆಶ್ರಯಿಸಿಕೊಂಡು ನಮ್ಮ ಮುಂದೆ ಪ್ರಕಾಶಿಸುತ್ತಿರುವುದೊ ಅದಕ್ಕೆ ನಾವೇಕೆ ಭಕ್ತಿಯನ್ನು ತೋರಿಸಬೇಕು?—ಎಂದು ಕೇಳುವವರಿಗೆ ನಮ್ಮ ಉತ್ತರ : ನಿಮಗೆ ಆ ರೀತಿ ಭಕ್ತಿಯನ್ನು ತೋರಿಸಲು ಸಾಧ್ಯವಾದರೆ ತೋರಿಸಿ; ಆದರೆ ಮನಸ್ಸಿನ ಮೋಸಕ್ಕೆ ಒಳಗಾಗಬೇಡಿ. ಶಕ್ತಿ ಅಥವಾ ಭಾವ ಮತ್ತು ಅದು ಯಾವುದನ್ನು ಅವಲಂಬಿಸಿ ಪ್ರಕಾಶಗೊಳ್ಳುವುದೊ ಇವೆರಡೂ ಬೇರೆ ಬೇರೆಯಾಗಿರುವುದನ್ನು ಯಾವಾ ಗಲಾದರೂ ನೋಡಿರುವಿರಾ? ಹಾಗಿರುವಾಗ ಅಗ್ನಿ ಮತ್ತು ಅದರ ದಾಹಕ ಶಕ್ತಿಯನ್ನು ಪ್ರತ್ಯೇಕಿಸಿ ಒಂದನ್ನು ಬಿಟ್ಟು ಮತ್ತೊಂದನ್ನು ಹಿಡಿಯುವುದು ಹೇಗೆ ಸಾಧ್ಯ? ನಾವು ಯಾರನ್ನು ಪ್ರೀತಿಸುತ್ತೇವೆಯೊ ಅಥವಾ ಯಾರಿಗೆ ಭಕ್ತಿಯನ್ನು ತೋರಿಸುತ್ತೇವೆಯೊ ಆ ವ್ಯಕ್ತಿಗೆ ಸಂಬಂಧಿಸಿದ ಒಂದು ಸಾಮಾನ್ಯ ವಸ್ತುವೂ ನಮಗೆ ಪ್ರಿಯವಾಗುತ್ತದೆ. ಅವನು ಸ್ಪರ್ಶಿಸಿದ ಒಂದು ಹೂ, ಅವನು ಧರಿಸಿದ ಬಟ್ಟೆ ಚಪ್ಪಲಿ ಕೂಡ ನಮಗೆ ಪವಿತ್ರವೆನಿಸುವುವು. ಅವನು ಯಾವ ಮಾರ್ಗದಲ್ಲಿ ನಡೆದು ಹೋಗುವನೊ ಅಲ್ಲಿಯ ಮಣ್ಣೂ ಕೂಡ ನಮ್ಮ ಪಾಲಿಗೆ ಅಮೂಲ್ಯವಾಗುತ್ತದೆ, ಆದರದ ವಸ್ತುವಾಗುತ್ತದೆ. ಹಾಗಿರುವಾಗ ಅವನು ಯಾವ ಶರೀರವನ್ನು ಆಶ್ರಯಿಸಿಕೊಂಡು ನಮ್ಮ ಪೂಜೆಯನ್ನು ಸ್ವೀಕರಿಸುವನೊ ಮತ್ತು ನಮ್ಮನ್ನು ಅನುಗ್ರಹಿಸುವನೊ ಅದಕ್ಕೆ ಶ್ರದ್ಧಾ ಭಕ್ತಿಯನ್ನು ತೋರಿಸುವುದು ಅತ್ಯಂತ ಸ್ವಾಭಾವಿಕವಲ್ಲವೆ? ಯಾರಿಗೆ ಗುರುಭಾವವೆಂದರೇನೆಂಬುದೇ ತಿಳಿಯದೊ ಅವರು ಮಾತ್ರ ಈ ರೀತಿ ಮಾತನಾಡಬಲ್ಲರು. ಯಾರಿಗೆ ಗುರುಭಾವದ ಮೇಲೆ ನಿಜವಾದ ಭಕ್ತಿ ಇದೆಯೊ ಅವರು ಆ ಭಾವದ ಆಧಾರವಾದ ಗುರುವಿನ ಶರೀರದ ಮೇಲೆಯೂ ಶ್ರದ್ಧಾ ಭಕ್ತಿಯನ್ನು ತೋರಿಸಿಯೇ ತೋರಿಸುತ್ತಾರೆ. ಶ್ರೀರಾಮ ಕೃಷ್ಣರು ಈ ವಿಷಯವನ್ನು ವಿಭೀಷಣನ ಭಕ್ತಿಯ ದೃಷ್ಟಾಂತದ ಮೂಲಕ ನಮಗೆ ತಿಳಿಸಿಕೊಡುತ್ತಾರೆ :

26. ಶ್ರೀರಾಮನ ಅವತಾರ ಲೀಲೆಯು ಮುಗಿದು ಬಹಳ ಸಮಯದನಂತರ ಒಮ್ಮೆ ಒಂದು ನೌಕೆಯು ಸಮುದ್ರದಲ್ಲಿ ಮುಳುಗಿ ಅದರಲ್ಲಿದ್ದ ಒಬ್ಬ ವ್ಯಕ್ತಿಯು ತರಂಗ ಹೊಡೆತಕ್ಕೆ ಸಿಕ್ಕಿ ಲಂಕೆಯ ತೀರಕ್ಕೆ ಬಂದು ಬಿದ್ದನು. ವಿಭೀಷಣನು ಚಿರಂಜೀವಿ,

ಅವನು ಲಂಕೆಯಲ್ಲಿ ಶಾಶ್ವತವಾಗಿ ರಾಜನಾಗಿದ್ದನು. ಅವನಿಗೆ ಒಬ್ಬ ವ್ಯಕ್ತಿ ಬಂದು ಬಿದ್ದಿರುವ ಸುದ್ದಿ ಮುಟ್ಟಿತು. ಸಭೆಯಲ್ಲಿದ್ದ ರಾಕ್ಷಸರಿಗೆಲ್ಲ ಬಾಯಲ್ಲಿ ನೀರೂರಿತು–ಊಟಕ್ಕೆ ಒಂದು ಒಳ್ಳೆಯ ಮಾನವ ದೇಹ ಸಿಕ್ಕಿತೆಂದು. ಆದರೆ ಆ ಸುದ್ದಿಯನ್ನು ಕೇಳಿ ವಿಭೀಷಣನಲ್ಲಿ ಒಂದು ವಿಶೇಷ ಭಾವಾಂತರವುಂಟಾಯಿತು. ಅವನು ಭಕ್ತಿಪರವಶದಿಂದ ಕಣ್ಣೀರು ಸುರಿಸುತ್ತ 'ಎಂಥ ಭಾಗ್ಯ' ಎಂದು ಹೇಳತೊಡಗಿದನು. ರಾಕ್ಷಸರಿಗೆಲ್ಲ ಅವನ ಮನೋಭಾವ ಅರ್ಥವಾಗದೆ ಮೂಕವಿಸ್ಮಿತರಾದರು. ಅನಂತರ ವಿಭೀಷಣನು ಅವರಿಗೆಲ್ಲ ತಿಳಿಸಿಕೊಟ್ಟನು: "ಯಾವ ಮಾನವ ಶರೀರವನ್ನು ಧರಿಸಿ ನನ್ನ ಶ್ರೀರಾಮನು ಈ ಲಂಕೆಗೆ ಬಂದು ನನ್ನನ್ನು ಕೃತಾರ್ಥಗೊಳಿಸಿದನೊ ಆ ಮಾನವ ಶರೀರವನ್ನು ಮತ್ತೆ ನೋಡುವ ಸುಯೋಗ ಸಿಕ್ಕಿದೆಯಲ್ಲ, ಅದೇನು ಕಡಿಮೆಯೇ? ಸಾಕ್ಷಾತ್ ರಾಮಚಂದ್ರನೆ ಮತ್ತೆ ಈ ರೀತಿ ಬಂದಿರುವನು ಎಂದು ನನಗನಿಸುತ್ತಿದೆ." ಹೀಗೆ ಹೇಳಿ ರಾಜನು ಸಭಾಸದರನ್ನೆಲ್ಲ ಕರೆದುಕೊಂಡು ಸಮುದ್ರ ತೀರಕ್ಕೆ ಹೋದನು. ಬಹಳ ಆದರ ಸನ್ಮಾನದಿಂದ ಆ ವ್ಯಕ್ತಿಯನ್ನು ಅರಮನೆಗೆ ಕರೆದುಕೊಂಡು ಬಂದನು. ಅನಂತರ ಅವನನ್ನೇ ತನ್ನ ಸಿಂಹಾಸನದಮೇಲೆ ಕೂರಿಸಿ ಸಭಾಸದರನ್ನೊಡಗೂಡಿ ಅವನ ದಾಸನಂತೆ ಅವನಿಗೆ ಎಲ್ಲ ಸೇವೆ ಮಾಡತೊಡಗಿದನು. ಹೀಗೆ ಸ್ವಲ್ಪಕಾಲ ಅವನನ್ನು ಲಂಕೆಯಲ್ಲಿ ಇರಿಸಿಕೊಂಡು ಧನಕನಕಾದಿಗಳನ್ನು ಕೊಟ್ಟು ಸುರಕ್ಷಿತವಾಗಿ ಅವನ ಮನೆಗೆ ಕಳಿಸಿ ಕೊಟ್ಟನು.

27. ಈ ಕತೆಯನ್ನು ಹೇಳಿ ಶ್ರೀರಾಮಕೃಷ್ಣರು ಉಪದೇಶಿಸುತ್ತಿದ್ದರು: "ನಿಜವಾದ ಭಕ್ತಿಯುಂಟಾದರೆ ಹೀಗಾಗುತ್ತದೆ. ಸಾಮಾನ್ಯ ವಸ್ತುವಿನಿಂದಲೂ ಭಗವದ್ಭಾವನೆಯು ಜಾಗ್ರತವಾಗಿ ಭಕ್ತ ಭಾವ ಪರವಶನಾಗುತ್ತಾನೆ. ಈ ಮಣ್ಣಿನಿಂದ ಖೋಲ್ ತಯಾರಾಗುತ್ತದೆ ಎಂದು ಕೇಳಿಯೇ ಚೈತನ್ಯನಿಗೆ ಭಾವೋದ್ದೀಪನವಾಯಿತು. ಅವನು ಒಮ್ಮೆ ಎಲ್ಲಿಗೊ ಹೋಗುತ್ತಿರುವಾಗ ದಾರಿಯಲ್ಲಿ ಒಂದು ಗ್ರಾಮ ಸಿಕ್ಕಿತು. ಹರಿಸಂಕೀರ್ತನೆಯ ಸಮಯದಲ್ಲಿ ಬಾರಿಸುವ ಖೋಲ್ ಆ ಗ್ರಾಮದಲ್ಲಿ ತಯಾರಾಗುತ್ತಿತ್ತಂತೆ. ಇದನ್ನು ಕೇಳಿ ಶ್ರೀಚೈತನ್ಯನು 'ಈ ಮಣ್ಣಿನಿಂದ ಖೋಲ್ ತಯಾರಾಗುವುದೇ' ಎಂದು ಉದ್ಗರಿಸಿ ಭಾವೋನ್ಮತ್ತನಾಗಿ ಪ್ರಜ್ಞಾಶೂನ್ಯನಾದ. ಈ ಮಣ್ಣಿನಿಂದ ಖೋಲ್ ಆಗುತ್ತದೆ, ಈ ಖೋಲನ್ನು ಬಾರಿಸುತ್ತಲೇ ಹರಿನಾಮ ಸಂಕೀರ್ತನೆ ನಡೆಯುತ್ತದೆ. ಮತ್ತೆ ಆ ಹರಿ ಎಲ್ಲರ ಪ್ರಾಣ, ಎಲ್ಲ ಸೌಂದರ್ಯವನ್ನು ಮೀರಿದ ಸುಂದರ ವಸ್ತು—ಈ ರೀತಿ ಭಾವಿಸುತ್ತ ಅವನಿಗೆ ಭಾವೋದ್ದೀಪನವುಂಟಾಯಿತು. ಹಾಗೆಯೇ ಯಾರಿಗೆ ಗುರುಭಕ್ತಿಯುಂಟೊ ಅವರು ಗುರುಗಳ ಹತ್ತಿರದ ಸಂಬಂಧಿಕರನ್ನು ಕಂಡರೂ ಗುರುಭಕ್ತಿ ಜಾಗ್ರತವಾಗುತ್ತದೆ. ಗುರು ಹುಟ್ಟಿದ ಗ್ರಾಮವನ್ನು ಅಥವಾ ಆ ಗ್ರಾಮದ ಜನರನ್ನು ಕಂಡಾಗಲೂ ಅವನಲ್ಲಿ ಗುರು ಭಕ್ತಿಯು ಉದ್ದೀಪನವಾಗುತ್ತದೆ. ಅವರಿಗೆ ವಂದಿಸುತ್ತಾನೆ. ಅವರ ಪಾದಧೂಳಿಯನ್ನು ತೆಗೆದುಕೊಳ್ಳುತ್ತಾನೆ, ಊಟ ಉಪಚಾರಗಳ ಮೂಲಕ ಅವರ ಸೇವೆ

ಮಾಡುತ್ತಾನೆ. ಈ ಸ್ಥಿತಿ ಉಂಟಾದರೆ ಗುರುವಿನ ದೋಷವನ್ನು ನೋಡಲಾಗುವುದಿಲ್ಲ. ಆಗ ಈ ಮಾತನ್ನು ಆಡಬಹುದು: 'ನನ್ನ ಗುರು ಆಕ್ಷೇಪಣೀಯ ಕೃತ್ಯದಲ್ಲಿ ತೊಡಗಿದರೂ ಅವನು ನಿತ್ಯಾನಂದನೇ.' ಇಲ್ಲದಿದ್ದರೆ ಮನುಷ್ಯನಿಗೆ ಗುಣ ದೋಷಗಳು ಇದ್ದೇ ಇರುತ್ತವೆ. ಆದರೆ ತೀವ್ರ ಭಕ್ತಿಯ ಪ್ರಭಾವದಿಂದ ಅವನು ಮನುಷ್ಯನನ್ನು ಮನುಷ್ಯನಂತೆ ಕಾಣುವುದಿಲ್ಲ, ಭಗವಂತನೆಂದೇ ತಿಳಿಯುತ್ತಾನೆ—ಅರಶಿನಮಂಡಿಗೆ ರೋಗಿಗೆ ಎಲ್ಲವೂ ಹಳದಿಯಾಗಿ ಕಾಣುವಂತೆ, ಆಗ ಅವನ ಭಕ್ತಿಯು ಎಲ್ಲವೂ ಭಗವಂತನೇ—ಅವನೇ ಗುರು, ತಂದೆ, ತಾಯಿ, ಮನುಷ್ಯ, ಪಶು,ಜಡ, ಚೇತನ ಎಲ್ಲವೂ ಅವನೇ—ಎಂದು ಅವನಿಗೆ ತೋರಿಸಿಕೊಡುತ್ತದೆ.''

28. ದಕ್ಷಿಣೇಶ್ವರದಲ್ಲಿ ಒಂದು ದಿನ ಶ್ರೀರಾಮಕೃಷ್ಣರು ಭಕ್ತರೊಡನೆ ಮಾತ ನಾಡುತ್ತಿದ್ದರು. ಉದ್ಧತತನದ ಯುವಕ ಭಕ್ತನೊಬ್ಬನು ಅವರು ಹೇಳುತ್ತಿದ್ದ ವಿಷಯವನ್ನು ಖಂಡಿಸಿ ತುಂಬ ಚರ್ಚೆ ಮಾಡುತ್ತಿದ್ದ. ಶ್ರೀರಾಮಕೃಷ್ಣರು ಮೂರು ನಾಲ್ಕು ಬಾರಿ ಅದೇ ವಿಷಯವನ್ನು ಹೇಳಿದರೂ ಅವನು ವಾದಿಸುವುದನ್ನು ನಿಲ್ಲಿಸ ದಿರಲು ಅವನನ್ನು ಮೃದುವಾಗಿ ಬೈದು ಹೇಳಿದರು, ''ನೀನೆಂಥವನಯ್ಯ! ನಾನು ಹೇಳುತ್ತಿದ್ದೇನೆ, ನೀನು ನನ್ನ ಮಾತು ಕೇಳುವುದೇ ಇಲ್ಲವಲ್ಲ!'' ಇದು ಅವನ ಹೃದಯವನ್ನು ತೆರೆಯಿತು. ಅವನು ಹೇಳಿದ : ''ನೀವು ಏನು ಹೇಳುತ್ತೀರೊ ಅದನ್ನು ಖಂಡಿತ ಸ್ವೀಕರಿಸುತ್ತೇನೆ. ಸುಮ್ಮನೆ ವಾದ ಮಾಡುವುದಕ್ಕಾಗಿ ಆ ರೀತಿ ಮಾತನಾಡಿದೆ ಅಷ್ಟೆ.'' ಶ್ರೀರಾಮಕೃಷ್ಣರು ಕೇಳಿ ನಗುನಗುತ್ತ ಹೇಳಿದರು : ''ಗುರು ಭಕ್ತಿ ಎಂದರೆ ಹೇಗೆ ಗೊತ್ತೆ ? ಗುರು ಏನು ಹೇಳುತ್ತಾನೊ ಅದನ್ನು ಕೂಡಲೆ ಅರ್ಥ ಮಾಡಿಕೊಳ್ಳಬೇಕು. ಅರ್ಜುನನಿಗೆ ಅಂಥ ಭಕ್ತಿಯಿತ್ತು. ಒಂದು ದಿನ ಶ್ರೀಕೃಷ್ಣನು ಅರ್ಜುನನೊಡನೆ ರಥದಲ್ಲಿ ಹೋಗುತ್ತಿದ್ದನು. ಆಗ ಶ್ರೀಕೃಷ್ಣನು ಆಕಾಶದ ಕಡೆ ತೋರಿಸಿ, ನೋಡು ಮಿತ್ರ, ಹೇಗೆ ಪಾರಿವಾಳಗಳು ಹಾರುತ್ತಿರುವುವು !, ಎಂದನು. ಅರ್ಜುನನು ನೋಡಿ, ಹೌದು ಕೃಷ್ಣ, ತುಂಬ ಸುಂದರವಾದ ಪಾರಿವಾಳಗಳು, ಎಂದು ತಲೆದೂಗಿದನು. ಮರುಕ್ಷಣವೇ ಶ್ರೀಕೃಷ್ಣನು ಮತ್ತೆ ನೋಡಿ ಹೇಳಿದನು, 'ಮಿತ್ರನೆ, ಆಶ್ಚರ್ಯ. ಅವು ಪಾರಿವಾಳಗಳಲ್ಲ !' ಎಂದನು. ಅರ್ಜುನನೂ ನೋಡಿ, ಹೌದು. ಅವು ಪಾರಿವಾಳಗಳಲ್ಲ, ಎಂದನು. ಈಗ ನಿನಗೆ ಅರ್ಥವಾಯಿತೆ ? ಅರ್ಜುನನು ತುಂಬ ಸತ್ಯನಿಷ್ಠ. ಕೃಷ್ಣನ ಮುಖಸ್ತುತಿಗಾಗಿ ಆ ರೀತಿ ಹೇಳಲಿಲ್ಲ. ಆದರೆ ಅವನಿಗೆ ಶ್ರೀಕೃಷ್ಣನಲ್ಲಿ ಎಂಥ ವಿಶ್ವಾಸವಿತ್ತೆಂದರೆ ಶ್ರೀಕೃಷ್ಣನು ಹೇಗೆ ಹೇಳಿದನೊ ಅವನು ಹಾಗೆಯೇ ನೋಡುತ್ತಿದ್ದ.''

29. ಯಾರನ್ನು ಶಾಸ್ತ್ರ ಅಜ್ಞಾನಾಂಧಕಾರವನ್ನು ದೂರಗೊಳಿಸುವ ಸಾಮರ್ಥ್ಯವುಳ್ಳ ಗುರು ಎಂದು ಕರೆಯುವುದೊ ಅವನು ಭಗವತ್ ಶಕ್ತಿಯ ಒಂದು ವಿಶೇಷ ರೂಪ ಎಂದು ಈಗ ಹೇಳಿದ್ದಾಯಿತು. ಇದಕ್ಕೆ ಸಂಬಂಧಿಸಿದಂತೆ ಈಗ ಇನ್ನೊಂದು ಅಂಶವನ್ನು ನಾವು ಗ್ರಹಿಸಬೇಕಾಗಿದೆ. ಅದೇನೆಂದರೆ, ಗುರು ಅನೇಕರಲ್ಲ,

ಒಬ್ಬನೇ, ಎಂಬುದು. ಯಾವ ಶರೀರದ ಮೂಲಕ ಭಗವಂತನ ಈ ಶಕ್ತಿ ಪ್ರಕಾಶ ಗೊಳ್ಳುವುದೊ ಅದು ಬೇರೆ ಬೇರೆಯಾದರೂ ನಮ್ಮ ಗುರು ನಿಮ್ಮ ಗುರು ಬೇರೆ ಬೇರೆ ಅಲ್ಲ. ಭಾವರೂಪದಲ್ಲಿ ಎಲ್ಲ ಒಂದೇ. ದ್ರೋಣನ ಮಣ್ಣಿನ ಮೂರ್ತಿಯನ್ನೇ ಗುರು ವಾಗಿ ಸ್ವೀಕರಿಸಿ ಬಿಲ್ಲು ವಿದ್ಯೆಯಲ್ಲಿ ಪಾರಂಗತನಾದ ಏಕಲವ್ಯನನ್ನು ಇದಕ್ಕೆ ದೃಷ್ಟಾಂತ ವಾಗಿ ನೀಡಬಹುದು. ಇದು ಯುಕ್ತಿಯುಕ್ತವಾಗಿ ಕಂಡರೂ ಇದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ಬಹಳ ಸಮಯ ಮತ್ತು ಸಾಧನೆ ಬೇಕು. ಅರ್ಥವಾದರೂ ಕೂಡ ಎಲ್ಲಿಯವರೆಗೆ ದೇಹಬುದ್ಧಿ ಇರುವುದೊ ಅಲ್ಲಿಯವರೆಗೆ ಗುರುಶಕ್ತಿಯು ಯಾವ ಶರೀರದ ಮೂಲಕ ವ್ಯಕ್ತವಾಗುತ್ತದೊ ಅದರ ಮೂಲಕವೇ ಗುರುವನ್ನು ಪೂಜಿಸು ವುದು ಅನಿವಾರ್ಯ. ಇದಕ್ಕೆ ದೃಷ್ಟಾಂತವಾಗಿ ಶ್ರೀರಾಮಕೃಷ್ಣರು ನಿಷ್ಠಾಭಕ್ತಿಯ ಜ್ವಲಂತ ನಿದರ್ಶನವಾದ ಹನುಮಂತನ ಕತೆಯನ್ನು ಹೇಳುತ್ತಿದ್ದರು :

ಲಂಕೆಯ ಯುದ್ಧದ ಸಮಯದಲ್ಲಿ ಶ್ರೀರಾಮ ಮತ್ತು ಲಕ್ಷ್ಮಣರು ಒಮ್ಮೆ ಇಂದ್ರಜಿತುವಿನ ಸರ್ಪಾಸ್ತ್ರದಿಂದ ನಾಗಪಾಶಕ್ಕೆ ಬದ್ಧರಾದರು. ಅದರಿಂದ ಬಿಡಿಸಿ ಕೊಳ್ಳಲು ಅವರು ಗರುಡನನ್ನು ಸ್ಮರಿಸಿದರು. ಗರುಡನು ಬಂದಕೂಡಲೆ ಸರ್ಪಗಳೆಲ್ಲ ದಿಕ್ಕಾಪಾಲು ಓಡಿಹೋದವು. ನಾಗಪಾಶದಿಂದ ಮುಕ್ತನಾದ ರಾಮಚಂದ್ರನು ಭಕ್ತ ನಾದ ಗರುಡನಿಗೆ ಅನುಗ್ರಹಿಸಲು ಅವನ ಇಷ್ಟಮೂರ್ತಿಯಾದ ವಿಷ್ಣುವಿನ ರೂಪ ವನ್ನು ತಾಳಿದನು. ಅನಂತರ ವಿಷ್ಣುವೇ ಈಗ ರಾಮನಾಗಿರುವುದಾಗಿ ಗರುಡ ನಿಗೆ ತಿಳಿಸಿಕೊಟ್ಟನು. ಆದರೆ ಹನುಮಂತನಿಗೆ ವಿಷ್ಣುವಿನ ರೂಪ ಹಿಡಿಸಲಿಲ್ಲ. ಅವನು ಮತ್ತೆ ವಿಷ್ಣುವು ಯಾವಾಗ ರಾಮನಾಗುತ್ತಾನೋ ಎಂದು ಕಾಯುತ್ತ ನಿಂತಿ ದ್ದನು. ಶ್ರೀರಾಮನಿಗೆ ಹನುಮಂತನ ಮನೋಭಾವ ಅರ್ಥವಾಯಿತು. ಅವನು ಗರುಡನನ್ನು ಕಳಿಸಿಕೊಟ್ಟು ಪುನಃ ರಾಮನಾಗಿ ಹನುಮಂತನನ್ನು ವಿಚಾರಿಸಿದನು : "ವತ್ಸ, ನನ್ನ ವಿಷ್ಣುರೂಪವನ್ನು ನೋಡಿ ನೀನು ಏಕೆ ಅಷ್ಟೊಂದು ಉದಾಸೀನನಾದೆ ? ನೀನು ಮಹಾಜ್ಞಾನಿ, ಯಾರು ರಾಮನೊ ಅವನೇ ವಿಷ್ಣು ಎಂದು ತಿಳಿಯುವುದು ನಿನಗೆ ಏನೂ ಕಷ್ಟವಲ್ಲ ?" ಹನುಮಂತನು ನಮ್ರತೆಯಿಂದ ಉತ್ತರಿಸಿದನು ; "ಒಬ್ಬನೇ ಪರಮಾತ್ಮನೇ ಎರಡು ರೂಪದಲ್ಲಿ ಕಾಣಿಸುತ್ತಿರುವನು ಎಂಬುದು ಸತ್ಯ. ಶ್ರೀನಾಥ ಮತ್ತು ಜಾನಕೀನಾಥ ಇವರಲ್ಲಿ ಯಾವ ಭೇದವೂ ಇಲ್ಲ. ಆದರೆ ಹಾಗಿದ್ದರೂ ಕೂಡ, ನನ್ನ ಹೃದಯವು ಸದಾ ಜಾನಕೀನಾಥನ ದರ್ಶನವನ್ನೇ ಇಷ್ಟ ಪಡುತ್ತದೆ, ಏಕೆಂದರೆ ಅವನೇ ನನ್ನ ಸರ್ವಸ್ವ !* ಈ ಮೂರ್ತಿಯ ಮೂಲಕವೇ ನಾನು ಭಗವಂತನನ್ನು ನೋಡಿ ಕೃತಾರ್ಥನಾಗಿರುವುದು."

---

* ಶ್ರೀನಾಥೇ ಜಾನಕೀನಾಥೇ ಅಭೇದಃ ಪರಮಾತ್ಮನಿ ।
ತಥಾಪಿ ಮಮ ಸರ್ವಸ್ವಃ ರಾಮಃ ಕಮಲಲೋಚನಃ ॥

30. ಆದ್ದರಿಂದ ಗುರುಭಾವವೆನ್ನುವುದು ಶ್ರೀಜಗನ್ಮಾತೆಯ ಶಕ್ತಿವಿಶೇಷ. ಈ ಶಕ್ತಿಯು ಎಲ್ಲ ಮಾನವರ ಮನಸ್ಸಿನಲ್ಲಿ ಸುಪ್ತ ಅಥವಾ ವ್ಯಕ್ತರೂಪದಲ್ಲಿ ಇರುವುದು. ಆದ್ದರಿಂದಲೇ ಗುರುಭಕ್ತಿಪರಾಯಣನಾದ ಸಾಧಕನು ಒಂದು ಸ್ಥಿತಿಯನ್ನು ಏರಿದಾಗ ಅವನೊಳಗೇ ಆ ಶಕ್ತಿ ಪ್ರಕಾಶಗೊಂಡು ಧರ್ಮದ ನಿಗೂಢ ತತ್ತ್ವಗಳನ್ನು ಅವನಿಗೆ ತಿಳಿಸಿಕೊಡುತ್ತದೆ. ಆಗ ಅವನು ಧರ್ಮದ ವಿಷಯದಲ್ಲಿ ಸಂದೇಹವನ್ನು ಪರಿಹರಿಸಲು ಹೊರಗಿನ ಯಾರನ್ನೂ ಆಶ್ರಯಿಸಬೇಕಾಗಿಲ್ಲ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಹೇಳುತ್ತಾನೆ :

> ಯದಾ ತೇ ಮೋಹಕಲಿಲಂ ಬುದ್ಧಿರ್ವ್ಯತಿತರಿಷ್ಯತಿ ॥
> ತದಾ ಗಂತಾಸಿ ನಿರ್ವೇದಂ ಶ್ರೋತವ್ಯಸ್ಯ ಶ್ರುತಸ್ಯ ಚ ॥ (2.52)

"ಯಾವಾಗ ನಿನ್ನ ಬುದ್ಧಿಯು ಅಜ್ಞಾನಮೋಹದಿಂದ ಮುಕ್ತವಾಗುವುದೊ ಆಗ ಇತರರಿಂದ ಕೇಳಬೇಕಾದ್ದೂ ಇರುವುದಿಲ್ಲ, ಶಾಸ್ತ್ರದ ಪ್ರಯೋಜನವೂ ಇರುವುದಿಲ್ಲ. ನೀನು ಇದೆಲ್ಲವನ್ನೂ ದಾಟಿಹೋಗಿ ನೀನೇ ಸ್ವತಃ ಎಲ್ಲವನ್ನೂ ಅರ್ಥ ಮಾಡಿಕೊಳ್ಳುವ ಸ್ಥಿತಿಯನ್ನು ಮುಟ್ಟಿರುತ್ತೀಯೆ." ಸಾಧಕನಿಗೆ ಆಗ ಈ ಸ್ಥಿತಿ ಉಂಟಾಗುತ್ತದೆ.

31. ಶ್ರೀರಾಮಕೃಷ್ಣರು ಈ ಸ್ಥಿತಿಯನ್ನು ಕುರಿತೆ ಹೀಗೆ ಹೇಳಿರುವುದು : "ಕೊನೆಯಲ್ಲಿ ಮನಸ್ಸೇ ಗುರುವಾಗುತ್ತದೆ, ಅಥವಾ ಗುರುವಿನ ಕೆಲಸ ಮಾಡುತ್ತದೆ. ಮಾನವ ಗುರುವು ಶಿಷ್ಯನ ಕಿವಿಯಲ್ಲಿ ಮಂತ್ರ ಉಚ್ಚರಿಸುತ್ತಾನೆ, ಜಗದ್ಗುರುವು ಹೃದಯದಲ್ಲಿ ಮಂತ್ರವನ್ನು ಬಿತ್ತುತ್ತಾನೆ." ಆದರೆ ಆ ಮನಸ್ಸಿಗೂ ಈ ಮನಸ್ಸಿಗೂ ಬಹಳ ವ್ಯತ್ಯಾಸವಿದೆ. ಆ ಮನಸ್ಸು ಶುದ್ಧಸತ್ತ್ವಪ್ರಧಾನವೂ ಪವಿತ್ರವೂ ಆಗಿರುವುದರಿಂದ ಭಗವಂತನ ಉಚ್ಚಶಕ್ತಿಯನ್ನು ಅದು ಪ್ರತಿಫಲಿಸಬಲ್ಲದು. ಆದರೆ ಈ ಮನಸ್ಸು ಭಗವದ್ವಿಮುಖವಾಗಿರುವುದರಿಂದ ಭೋಗಸುಖ ಮತ್ತು ಕಾಮಕ್ರೋಧಾದಿಗಳಲ್ಲಿಯೇ ಮತ್ತವಾಗಿದೆ.

32. ಶ್ರೀ ರಾಮಕೃಷ್ಣರು ಹೇಳುತ್ತಿದ್ದರು : "ಗುರು ಸಖಿ ಇದ್ದ ಹಾಗೆ. ಎಲ್ಲಿಯವರೆಗೆ ಶ್ರೀಕೃಷ್ಣನ ಸಹಿತ ಶ್ರೀರಾಧೆಯ ಮಿಲನವಾಗುವುದಿಲ್ಲವೋ ಅಲ್ಲಿಯವರೆಗೆ ಸಖಿಗೆ ವಿಶ್ರಾಂತಿಯೇ ಇಲ್ಲ. ಹಾಗೆಯೇ ಇಷ್ಟದೇವರೊಡನೆ ಸಾಧಕನ ಮಿಲನ ಎಲ್ಲಿಯವರೆಗೆ ಆಗುವುದಿಲ್ಲವೊ ಅಲ್ಲಿಯವರೆಗೆ ಗುರುವಿನ ಕೆಲಸಕ್ಕೆ ಕೊನೆಯಿಲ್ಲ." ಹೀಗೆ ಮಹಾಮಹಿಮಾನ್ವಿತನಾದ ಗುರುವು ಸಾಧಕನ ಕೈಹಿಡಿದು ಆಧ್ಯಾತ್ಮಿಕ ರಾಜ್ಯದಲ್ಲಿ ಹಂತ ಹಂತವಾಗಿ ಉನ್ನತ ಸ್ಥಿತಿಗೆ ಕರೆದುಕೊಂಡು ಹೋಗುತ್ತಾನೆ. ಕೊನೆಯಲ್ಲಿ ಇಷ್ಟದೇವನ ಮುಂದೆ ಅವನನ್ನು ನಿಲ್ಲಿಸಿ 'ಶಿಷ್ಯನೇ, ನೋಡಿಲ್ಲಿ !' ಎಂದು ಹೇಳಿ ಅಂತರ್ಧಾನನಾಗುತ್ತಾನೆ.

33. ಶ್ರೀರಾಮಕೃಷ್ಣರು ಈ ಮಾತನ್ನು ಹೇಳುತ್ತಿರುವಾಗ ಒಂದು ದಿನ ಭಕ್ತನೊಬ್ಬನು, ಒಂದುದಿನ ಗುರುವಿನ ವಿಯೋಗವಾಗುತ್ತದಲ್ಲ ಎಂಬ ವ್ಯಥೆಯಿಂದ

"ಆಗ ಗುರು ಎಲ್ಲಿಗೆ ಹೋಗುತ್ತಾನೆ ?" ಎಂದು ಅವರನ್ನು ಪ್ರಶ್ನಿಸಿದನು. ಶ್ರೀರಾಮ ಕೃಷ್ಣರು ಉತ್ತರಿಸಿದರು : "ಗುರು ಇಷ್ಟದೇವನಲ್ಲಿ ಲಯವಾಗುತ್ತಾನೆ. ಗುರು, ಕೃಷ್ಣ ಮತ್ತು ವೈಷ್ಣವ –ಈ ಮೂವರು ಒಂದೇ, ಒಂದೇ ಸತ್ಯದ ವಿವಿಧ ಮುಖಗಳು."

ನಾಲ್ಕನೆಯ ಅಧ್ಯಾಯ

ಗುರುಭಾವದ ಮೊದಲ ವಿಕಾಸ

1. ಬಾಲ್ಯಾವಸ್ಥೆಯಿಂದಲೂ ಶ್ರೀರಾಮಕೃಷ್ಣರಲ್ಲಿ ಗುರುಭಾವವು ಕಂಡು ಬರುತ್ತದೆ. 2 'ಮೊದಲು ಫಲ, ಅನಂತರ ಹೂ'–ಇದು ಎಲ್ಲ ಅವತಾರ ಪುರುಷರಿಗೂ ಅನ್ವಯಿಸುತ್ತದೆ 3. ಕಾಮಾರಪುಕುರದಲ್ಲಿ ಗುರುಭಾವದ ಪ್ರಥಮ ವಿಕಾಸ–ಪಂಡಿತ ಸಭೆಯಲ್ಲಿ ಶಾಸ್ತ್ರವಿಚಾರ 4. ಕ್ರಿಸ್ತನ ಜೀವನದಲ್ಲಿ ಇಂತಹ ಘಟನೆ 5. ಆಗಿನ ಕಾಲದಲ್ಲಿ ಯಹೂದಿಗಳ ತೀರ್ಥಯಾತ್ರೆ 6. ಜಿಹೋವಾ ಮಂದಿರದಲ್ಲಿ ಕ್ರಿಸ್ತನ ಶಾಸ್ತ್ರವ್ಯಾಖ್ಯಾನ 7. ಮ್ಯಾಕ್ಸ್‌ಮುಲ್ಲರ್' ಅಭಿಪ್ರಾಯದ ಖಂಡನೆ 8. ಶ್ರೀರಾಮಕೃಷ್ಣರು ವಿವಾಹವಾದುದೇಕೆ ? ಸಂಬಂಧಿಕರ ಬಲವಂತ ಕ್ಕಾಗಿ ಅಲ್ಲ 9. ಅಥವಾ ಭೋಗವಾಸನೆಯೂ ಇದಕ್ಕೆ ಕಾರಣವಲ್ಲ–ತಮ್ಮ ವಧುವನ್ನು ತಾವೇ ಆರಿಸಿಕೊಂಡುದು. 10. ಪ್ರಾರಬ್ಧಕರ್ಮವನ್ನು ಭೋಗಿ ಸುವುದಕ್ಕಾಗಿ ಅವರು ವಿವಾಹವಾದರೆ 11, ಶ್ರೀರಾಮಕೃಷ್ಣರು ಅವತಾರವಾದು ದರಿಂದ ಪ್ರಾರಬ್ಧದ ಪ್ರಶ್ನೆಯೇ ಬರುವುದಿಲ್ಲ 12. ತಮ್ಮ ವಿವಾಹದ ಬಗ್ಗೆ ಶ್ರೀರಾಮಕೃಷ್ಣರ ಹಾಸ್ಯ ನುಡಿ 13. ಹತ್ತು ಬಗೆಯ ಸಂಸ್ಕಾರಗಳನ್ನು ಪೂರ್ತಿ ಗೊಳಿಸುವುದಕ್ಕಾಗಿ ಅವರು ವಿವಾಹವಾದರೆ ? 14. ವಿವಾಹ ಭೋಗಕ್ಕಾಗಿ ಅಲ್ಲ, ಸೃಷ್ಟಿ ಕಾರ್ಯದ ಮುಂದುವರಿಕೆಗಾಗಿ 15. ವಿಚಾರಪೂರ್ವಕ ಭೋಗಿಸುತ್ತಾ ಹೋದರೆ ಕ್ರಮೇಣ ವೈರಾಗ್ಯವುಂಟಾಗುತ್ತದೆ 16. ಭೋಗಸುಖವನ್ನು ತ್ಯಜಿಸು ವುದರ ಬಗ್ಗೆ ಶ್ರೀರಾಮಕೃಷ್ಣರ ಉಪದೇಶ 17. ವಿವಾಹಿತ ಜೀವನದಲ್ಲಿ ಬ್ರಹ್ಮ ಚರ್ಯಪಾಲನೆ ನಷ್ಟವಾದುದೇ ಇಂದಿನ ಹಿಂದೂ ಜನಾಂಗದ ಅವನತಿಗೆ ಕಾರಣ 18. ಈ ಆದರ್ಶವನ್ನು ಮತ್ತೆ ಪ್ರಚಲಿತಗೊಳಿಸುವುದಕ್ಕಾಗಿಯೇ ಶ್ರೀರಾಮ ಕೃಷ್ಣರ ವಿವಾಹ 19. ಪತ್ನಿಯೊಡನೆ ; ಶರೀರ ಸಂಪರ್ಕವಿಲ್ಲದ ಶ್ರೀರಾಮಕೃಷ್ಣರ ಪ್ರೇಮಸಂಬಂಧ 20. ಗೃಹಸ್ಥರ ಶಿಕ್ಷಣಕ್ಕಾಗಿಯೇ ಅವರ ಈ ಬಗೆಯ ಪ್ರೇಮ ಲೀಲಾಭಿನಯ 21. ಅವರ ಆದರ್ಶವನ್ನಿಟ್ಟುಕೊಂಡು ವೈವಾಹಿಕ ಜೀವನವನ್ನು ರೂಪಿಸಬೇಕು 22. ಶರೀರ ಸಂಪರ್ಕವಿಲ್ಲದ ಅವರ ವೈವಾಹಿಕ ಜೀವನದ ಬಗ್ಗೆ ಆಕ್ಷೇಪಣೆ ಮತ್ತು ಪರಿಹಾರ 23. ಗುರುಭಾವದ ಪ್ರೇರಣೆಯಿಂದಲೇ ಶ್ರೀರಾಮ ಕೃಷ್ಣರು ವಿವಾಹವಾದುದು–ಇದಕ್ಕೆ ಪ್ರಮಾಣ

ಅವಜಾನಂತಿ ಮಾಂ ಮೂಢಾ ಮಾನುಷೀಂ ತನುಮಾಶ್ರಿತಮ್ ।
ಪರಂ ಭಾವಮಜಾನಂತೋ ಮಮ ಭೂತಮಹೇಶ್ವರಮ್ ॥ ಭಗವದ್ಗೀತೆ 9. 11

ಸರ್ವಭೂತಗಳಿಗೂ ಒಡೆಯನಾದ ನನ್ನ ಅತೀತ ಸ್ವರೂಪವನ್ನು ಅರ್ಥಮಾಡಿಕೊಳ್ಳದೆ ಮೂಢರು ಮಾನವಶರೀರಧಾರಿಯಾದ ನನ್ನನ್ನು ಸಾಮಾನ್ಯ ವ್ಯಕ್ತಿಯೆಂದು ಪರಿಗಣಿಸುತ್ತಾರೆ.''

1. ಬಾಲ್ಯಕಾಲದಲ್ಲಿಯೇ ಶ್ರೀರಾಮಕೃಷ್ಣರಲ್ಲಿ ಗುರುಭಾವ ಪ್ರಕಾಶವಾದುದನ್ನು ನಾವು ಕಾಣುತ್ತೇವೆ. ಮತ್ತೆ ಯೌವನದಲ್ಲಿ ನಿರ್ವಿಕಲ್ಪ ಸಮಾಧಿಯ ನಂತರ ಈ ಭಾವವು ಪೂರ್ಣ ಪ್ರಕಾಶಗೊಂಡುದನ್ನು ನೋಡುತ್ತೇವೆ. ಬಾಲ್ಯ ಕಾಲದಲ್ಲಿಯೇ ಈ ಭಾವವು ಪ್ರಕಾಶಗೊಂಡಿತು ಎಂದು ನಾವು ಹೇಳಿದಾಗ ಶ್ರೀರಾಮಕೃಷ್ಣರ ಶ್ರೇಷ್ಠತೆಯನ್ನು ದೊಡ್ಡದು ಮಾಡುವುದಕ್ಕಾಗಿ ಹೀಗೆ ಹೇಳುತ್ತಿರುವುದಾಗಿ ಯಾರೂ ತಪ್ಪು ಭಾವಿಸಬಾರದು. ನಿರಪೇಕ್ಷ ದೃಷ್ಟಿಯಿಂದ ಶ್ರೀರಾಮಕೃಷ್ಣರ ಜೀವನವನ್ನು ಅಧ್ಯಯನ ಮಾಡುವವರಾರೂ ಈ ತಪ್ಪನ್ನು ಮಾಡುವುದಿಲ್ಲ. ಈ ಅದ್ಭುತ ಅಲೌಕಿಕ ಜೀವನದ ಘಟನೆಗಳನ್ನು ಕುರಿತು ವಿಚಾರ ಮಾಡುತ್ತ ಹೋದರೆ ಕೊನೆಗೆ ವಿಚಾರವೇ ಸೋಲನ್ನು ಒಪ್ಪಿಕೊಳ್ಳುವಂತಾಗುತ್ತದೆ. ನಮ್ಮ ಮನಸ್ಸಿನಲ್ಲೂ ಏನು ಕಡಮೆ ಸಂದಿಗ್ಧತೆ ಇರಲಿಲ್ಲ ! ನಮ್ಮಲ್ಲಿ ಅನೇಕರು ಶ್ರೀರಾಮಕೃಷ್ಣರನ್ನು ಎಷ್ಟೋ ರೀತಿಯಲ್ಲಿ ಪರೀಕ್ಷಿಸಿರುವರು, ಎಷ್ಟೊಂದು ವಿಮರ್ಶೆಗೆ ಅವರನ್ನು ಒಳಪಡಿಸಿರುವೆವೆಂದರೆ ಈಗಿನ ಕಾಲದವರು ಬಹುಶಃ ಅದನ್ನು ಊಹಿಸಲಾರರು ! ಈ ರೀತಿ ಶ್ರೀರಾಮಕೃಷ್ಣರನ್ನು ಸಂದೇಹಿಸಿ ಅವರನ್ನು ಪರೀಕ್ಷಿಸಲು ಹೋಗಿ ಅದರಲ್ಲಿ ಸೋತು ಲಜ್ಜೆಯಿಂದ ತಲೆ ತಗ್ಗಿಸಬೇಕಾದ ಪ್ರಸಂಗಗಳು ಎಷ್ಟೋ ಇವೆ. ಎರಡನೆಯ ಅಧ್ಯಾಯದಲ್ಲಿ ಈ ವಿಷಯವನ್ನು ಸೂಕ್ಷ್ಮವಾಗಿ ತಿಳಿಸಿರುವೆವು. ಮುಂದೆ ಇದರ ವಿವರಣೆ ಬರುತ್ತದೆ. ಆದ್ದರಿಂದ ಇಲ್ಲಿ ಅದರ ವಿವರಣೆಗೆ ಹೋಗುವುದಿಲ್ಲ.

2. ನಿತ್ಯಮುಕ್ತರಾದ ಈಶ್ವರಕೋಟಿಗಳ ಜೀವನದ ಸಂಬಂಧವಾಗಿ ಶ್ರೀರಾಮಕೃಷ್ಣರು ಯಾವಾಗಲೂ 'ಕುಂಬಳಕಾಯಿ ಬಳ್ಳಿಯಂತೆ ಮೊದಲು ಫಲ, ಅನಂತರ ಹೂವು' ಎಂಬ ಮಾತನ್ನು ಹೇಳುತ್ತಿದ್ದರು. ಅಂದರೆ ಇಂತಹ ಮಹಾಪುರುಷರು ಜಗತ್ತಿಗೆ ಬಂದು ಸಿದ್ಧಿಯನ್ನು ಪಡೆಯಲು ಏನೇನು ಸಾಧನೆ ಮಾಡುತ್ತಾರೊ ಅದೆಲ್ಲ ಸಾಧಾರಣ ಜನರಿಗೆ ತಿಳಿಸಿಕೊಡಲಾಗಿಯೆ—ಈ ರೀತಿಯ ಫಲವನ್ನು ಪಡೆಯಬೇಕಾದರೆ ನೀವು ಇಂಥ ಸಾಧನೆ ಮಾಡಬೇಕು ಎಂಬುದನ್ನು ತಿಳಿಸಿಕೊಡಲು. ಏಕೆಂದರೆ, ಅವರ ಜೀವನದ ಅಧ್ಯಯನವನ್ನು ಮಾಡಿದಾಗ ನಮಗೆ ಕಂಡುಬರುವುದೇನೆಂದರೆ ಅವರು ಯಾವ ಜ್ಞಾನಲಾಭಕ್ಕಾಗಿ ಪ್ರಯತ್ನಿಸಿದರೊ ಅದು ಅವರಲ್ಲಿ ಮೊದಲೇ ಇತ್ತು ಎಂಬುದು. ಜೀವನದುದ್ದಕ್ಕೂ ಆ ಜ್ಞಾನವಿದ್ದರೆ ಬಾಲ್ಯ ಕಾಲದಿಂದಲೂ ಎಲ್ಲ ಕಾರ್ಯಗಳು ಯಾವ ಭಾವದಲ್ಲಿ ನೆರವೇರಿಸಲ್ಪಡುವುವೊ ಅದೇ ರೀತಿ ಅವರು ಎಲ್ಲ ಕಾರ್ಯಗಳನ್ನು ಆಚರಿಸುತ್ತಿದ್ದುದನ್ನು ನಾವು ನೋಡುತ್ತೇವೆ. ಸಾಧನೆಯ ಫಲವನ್ನು ಅವರು ಮೊದಲೇ ತಮ್ಮದಾಗಿಸಿಕೊಂಡಿದ್ದಂತೆ ನಮಗೆ ಕಂಡುಬರುತ್ತದೆ. ನಿತ್ಯಮುಕ್ತರ ವಿಷಯ

ದಲ್ಲಿಯೇ ಈ ಮಾತು ಸತ್ಯವಾಗಿರುವಾಗ ಇನ್ನು ಅವತಾರ ಪುರುಷರ ಬಗ್ಗೆ ಹೇಳ ಬೇಕಾಗಿಯೇ ಇಲ್ಲ. ಅವರ ಜೀವನದುದ್ದಕ್ಕೂ ಆ ಜ್ಞಾನಪ್ರಕಾಶವನ್ನು ಕಾಣುತ್ತೇವೆ. ಎಲ್ಲ ದೇಶಗಳ ಎಲ್ಲ ಯುಗಗಳ ಅವತಾರಪುರುಷರಿಗೂ ಈ ಮಾತು ಅನ್ವಯಿಸುತ್ತದೆ ಎಂದು ಶಾಸ್ತ್ರ ಹೇಳುತ್ತದೆ. ಬೇರೆ ಬೇರೆ ಯುಗಗಳ ಅವತಾರಪುರುಷರ ರೀತಿನೀತಿ ಗಳಲ್ಲಿ ಒಂದು ಸಾದೃಶ್ಯವಿರುವುದನ್ನು ನಾವು ಕಾಣುತ್ತೇವೆ. ಉದಾಹರಣೆಗೆ ಕೇವಲ ಸ್ಪರ್ಶದ ಮೂಲಕ ಧರ್ಮ ಜಾಗೃತಿಯನ್ನು ಉಂಟುಮಾಡುವುದು. ಇದನ್ನು ಕ್ರಿಸ್ತ, ಚೈತನ್ಯ, ಶ್ರೀರಾಮಕೃಷ್ಣ ಇವರೆಲ್ಲರ ಜೀವನದಲ್ಲಿ ಕಾಣುತ್ತೇವೆ. ಇದೇ ರೀತಿ, ಜನ್ಮ ಗ್ರಹವಾದ ಕಾಲದಲ್ಲಿಯೇ ಅಲೌಕಿಕ ರೀತಿಯಲ್ಲಿ ಅವರ ಧರ್ಮಪರಾಯಣತೆ ವ್ಯಕ್ತ ವಾಗುವುದು ಅವರೆಲ್ಲರಲ್ಲೂ ಕಂಡುಬರುವ ಇನ್ನೊಂದು ವೈಶಿಷ್ಟ್ಯ. ಬಾಲ್ಯದಿಂದಲೂ ಅವರೆಲ್ಲರಲ್ಲೂ ಗುರುಭಾವ ಪ್ರಕಾಶಗೊಂಡುದನ್ನು ಕಾಣುತ್ತೇವೆ. ಜೀವಿಗಳ ಉದ್ಧಾರ ಕ್ಕಾಗಿ ಯಾವ ಮಾರ್ಗವನ್ನು ತೋರಿಸಲು ಅವರು ಅವತರಿಸಿರುವರೊ ಆ ಉದ್ದೇಶದ ಅರಿವು ಅವರಿಗೆ ಬಾಲ್ಯಕಾಲದಲ್ಲಿಯೇ ಇರುತ್ತದೆ. ಇದು ಅವರೆಲ್ಲರಲ್ಲೂ ಕಂಡುಬರುವ ಇನ್ನೊಂದು ಸಾಮಾನ್ಯ ಲಕ್ಷಣ. ಆದ್ದರಿಂದಲೇ ಶ್ರೀರಾಮಕೃಷ್ಣರಲ್ಲಿ ಬಾಲ್ಯದಿಂದಲೇ ಗುರುಭಾವ ಮುಂತಾದುವುಗಳು ಪ್ರಕಟವಾಗಿರುವುದು ಆಶ್ಚರ್ಯದ ವಿಷಯವೇನಲ್ಲ, ಏಕೆಂದರೆ ಅವತಾರಪುರುಷರ ಶ್ರೇಣಿಯೇ ಬೇರೆ. ಸಾಧಾರಣ ವ್ಯಕ್ತಿಗಳ ಜೀವನದಲ್ಲಿ ಇದು ಅಸಂಭವವೆಂದು ಅವತಾರಪುರುಷರಲ್ಲಿಯೂ ಇದು ಸಂಭವನೀಯವಲ್ಲ ಎಂದು ಹೇಳಿದರೆ ಅದು ದೊಡ್ಡ ತಪ್ಪಾಗುತ್ತದೆ.

3. ಶ್ರೀರಾಮಕೃಷ್ಣರ ಜೀವನದಲ್ಲಿ ಗುರುಭಾವದ ಒಂದು ಜ್ವಲಂತ ನಿದರ್ಶನ ನಮಗೆ ಕಂಡುಬರುವುದು ಅವರು ಕಾಮಾರಪುಕುರದಲ್ಲಿರುವಾಗ. ಆಗ ಅವರಿಗೆ ಉಪ ನಯನವಾಗಿತ್ತು. ಒಂಭತ್ತು ಅಥವಾ ಹತ್ತು ವಯಸ್ಸಾಗಿದ್ದಿರಬಹುದು. ಗ್ರಾಮದ ಜಮೀನ್ದಾರನಾದ ಲಾಹಾಬಾಬುವಿನ ಮನೆಯಲ್ಲಿ ಶ್ರಾದ್ಧ ಸಮಾರಂಭ ನಡೆಯುತ್ತಿದೆ, ಅದಕ್ಕಾಗಿ ಆ ಭಾಗದ ಪ್ರಸಿದ್ಧ ಪಂಡಿತರುಗಳನ್ನು ಅವನು ಆಹ್ವಾನಿಸಿದ್ದನು. ಅನೇಕ ಪಂಡಿತರು ಸಮಾವೇಶಗೊಂಡಿದ್ದರಿಂದ ಸ್ವಾಭಾವಿಕವಾಗಿಯೇ ಅವರವರಲ್ಲಿ ಶಾಸ್ತ್ರಚರ್ಚೆ ಪ್ರಾರಂಭವಾಯಿತು. ಯಾವುದೊ ಒಂದು ಜಟಿಲವಾದ ಪ್ರಶ್ನೆಯನ್ನು ತೆಗೆದುಕೊಂಡು ಅವರೆಲ್ಲರು ವಾದವಿವಾದದಲ್ಲಿ ನಿರತರಾದರು. ಎಷ್ಟೇ ಚರ್ಚಿಸಿದರೂ ಒಂದು ನಿರ್ದಿಷ್ಟ ವಾದ ನಿರ್ಣಯಕ್ಕೆ ಬರಲು ಅವರಿಗೆ ಸಾಧ್ಯವಾಗಲೇ ಇಲ್ಲ. ಆ ಸಂದರ್ಭದಲ್ಲಿ ಬಾಲಕ ಶ್ರೀರಾಮಕೃಷ್ಣರು ತಮಗೆ ಪರಿಚಿತವಾದ ಒಬ್ಬ ಪಂಡಿತನಿಗೆ, 'ಈ ಸಮಸ್ಯೆಗೆ ಈ ರೀತಿಯ ಪರಿಹಾರ ಸರಿಹೋಗುವುದಿಲ್ಲವೆ' ಎಂದು ಆ ಜಟಿಲ ಪ್ರಶ್ನೆಯ ಪರಿಹಾರ ವನ್ನು ಸೂಚಿಸಿದರು. ಆ ಸಭೆಯಲ್ಲಿ ಅನೇಕ ಹಳ್ಳಿಯ ಹುಡುಗರಿದ್ದರು. ಪಂಡಿತರುಗಳು ವಿವಿಧ ಭಾವಭಂಗಿಗಳಲ್ಲಿ ವಾಗ್ಯುದ್ಧ ನಡೆಸುವುದನ್ನು ನೋಡಿ ಅವರಲ್ಲಿ ಕೆಲವರು ಕುತೂಹಲದಿಂದ ಕುಣಿಯುತ್ತಿದ್ದರು. ಮತ್ತೆ ಕೆಲವರು ತಮ್ಮ ಪಾಡಿಗೆ ತಾವು ಆಟ ವಾಡುತ್ತಿದ್ದರು. ಆದರೆ ಈ ಅಪೂರ್ವ ಬಾಲಕನು ಮಾತ್ರ ಅವರ ಚರ್ಚೆಯನ್ನು

ಸಂಪೂರ್ಣಕೇಳಿ ಅರ್ಥಮಾಡಿಕೊಂಡು ಸಮಸ್ಯೆಗೆ ತಕ್ಕ ಪರಿಹಾರವನ್ನು ಒದಗಿಸಿದ್ದನು ! ಆ ಪಂಡಿತನಿಗೆ ಅತ್ಯಾಶ್ಚರ್ಯವಾಯಿತು. ಅವನು ಇತರ ಪಂಡಿತರಿಗೆ ಗದಾಧರನಿತ್ತ ಪರಿಹಾರವನ್ನು ಹೇಳಿದನು. ಅವರೆಲ್ಲರೂ ಇದೇ ಯೋಗ್ಯವಾದ ಪರಿಹಾರವೆಂದು ಒಪ್ಪಿಕೊಂಡರು. ಪ್ರಶ್ನೆಗೆ ಸಮಾಧಾನವನ್ನು ನೀಡಿದವನು ಚಿಕ್ಕ ಬಾಲಕ ಗದಾಧರ ನೆಂದು ತಿಳಿದು ಅವರೆಲ್ಲ ಅತ್ಯಾಶ್ಚರ್ಯದಿಂದ ಆವನಕಡೆ ತಿರುಗಿದರು. ಅವನಲ್ಲಿ ಯಾವುದೋ ದಿವ್ಯಶಕ್ತಿ ಕೆಲಸ ಮಾಡುತ್ತಿದೆ ಎಂದು ಅವರಿಗನಿಸಿತು. ಕೆಲವರು ಆನಂದ ದಿಂದ ಅವನನ್ನು ತೊಡೆಯ ಮೇಲೆ ಕೂರಿಸಿಕೊಂಡು ಮುದ್ದಿಸಿ ಆಶೀರ್ವದಿಸಿದರು.

4. ಇದಕ್ಕೆ ಸಂಬಂಧಿಸಿದಂತೆ ಇನ್ನೊಂದು ವಿಷಯವನ್ನು ಇಲ್ಲಿ ತಿಳಿಸಬೇಕಾಗಿದೆ. ಯೇಸುಕ್ರಿಸ್ತನ ಜೀವನದಲ್ಲಿಯೂ ಇಂಥದೇ ಒಂದು ಘಟನೆ ಬರುತ್ತದೆ. ಅವನಿಗೆ ಆಗ ಹನ್ನೆರಡು ವರ್ಷ ವಯಸ್ಸು. ತಂದೆ ಜೋಸೆಫ್ ಮತ್ತು ತಾಯಿ ಮೇರಿ ಮಗನನ್ನು ಕರೆದುಕೊಂಡು ನಜರತ್‌ನಿಂದ ಜೆರೂಸಲೇಮಿಗೆ ಯಾತ್ರೆ ಹೊರಟಿದ್ದರು. ಯಹೂದಿ ಗಳಿಗೆ ಅದೊಂದು ಪ್ರಸಿದ್ಧ ತೀರ್ಥಸ್ಥಾನ. ಇಲ್ಲಿ ಜಿಹೋವನು (ಭಗವಂತನು) ಒಂದು ಚಿನ್ನದ ಕರಡಿಗೆಯಲ್ಲಿ ಆವಿರ್ಭವಿಸುವುದನ್ನು ನಿಷ್ಠಾವಂತ ಭಕ್ತರು ಅನುಭವಿಸುತ್ತಾರೆ ಧೂಪದೀಪಗಳನ್ನು ಹಚ್ಚುವುದು, ಫಲಪುಷ್ಪಗಳನ್ನು ಸಮರ್ಪಿಸುವುದು, ಪಶುಬಲಿ ಇತ್ಯಾದಿಗಳ ಮೂಲಕ ಅಲ್ಲಿ ದೇವರನ್ನು ಪೂಜಿಸುತ್ತಾರೆ. ಭಗವದ್ದರ್ಶನ, ಪೂಜೆ, ಬಲಿ, ಹೋಮಾದಿಗಳೆಲ್ಲ ಮುಗಿದ ಮೇಲೆ ಜೋಸೆಫ್ ಮತ್ತು ಮೇರಿತಮ್ಮ ಊರಿನ ಕಡೆ ಹಿಂದಿರುಗಿ ಹೊರಟರು.

5. ರೈಲು ಬರುವುದಕ್ಕೆ ಮುಂಚೆ ಪುರಿ ಮುಂತಾದ ತೀರ್ಥಸ್ಥಳಗಳಿಗೆ ಹೋಗುವ ಯಾತ್ರಿಕರ ಪರಿಸ್ಥಿತಿ ಹೇಗಿತ್ತೊ ಅದೇ ರೀತಿ ಆಗ ಜೆರೂಸಲೇಮಿಗೆ ಹೋಗುವ ಯಾತ್ರಿ ಕರದೂ ಆಗಿತ್ತು. ಮಧ್ಯೆ ಮಧ್ಯೆ ಮರ, ಬಾವಿ, ತೊರೆಗಳಿಂದ ಶೋಭಿಸುತ್ತಿದ್ದ ಉದ್ದನೆಯ ರಸ್ತೆ. ಅಲ್ಲಿ ಮಧ್ಯೆ ಮಧ್ಯೆ ವಿಶ್ರಾಂತಿಗೃಹ ಊಟದ ಗೃಹಗಳು ಇರುತ್ತಿ ದ್ದವು. ಯಾತ್ರಿಕರಿಗೆ ಬೇಕಾಗುವ ಅಕ್ಕಿ ಬೇಳೆ ಹಿಟ್ಟು ಮುಂತಾದ ಆವಶ್ಯಕ ವಸ್ತುಗಳೂ ಹಾದಿಯಲ್ಲಿ ಸಿಗುತ್ತಿದ್ದವು. ಭಗವಂತನ ಸ್ಮರಣೆಯನ್ನು ಮರೆತು ಯಾತ್ರಿಕರು ಸುದೀರ್ಘ ನಿದ್ದೆ ಮಾಡದಿರಲೆಂದು ತಮ್ಮ ಗಾನ, ಕಡಿತಗಳಿಂದ ಅವರನ್ನು ಎಚ್ಚರಿಸು ತ್ತಿದ್ದ ಸೊಳ್ಳೆಗಳೂ ಈ ಭಗವದ್‌ಕಾರ್ಯದಲ್ಲಿ ಭಾಗಿಗಳಾಗಿದ್ದವು. ಕಳ್ಳಕಾಕರ ಭಯ ದಿಂದ ಯಾತ್ರಿಕರು ಯಾವಾಗಲೂ ಗುಂಪುಗುಂಪಾಗಿಯೇ ಹೋಗುತ್ತಿದ್ದರು. ಅವರಲ್ಲಿ ಪರಸ್ಪರ ಸಹಕಾರ ಹೊಂದಾಣಿಕೆ ಇತ್ತು. ಭಗವಂತನಲ್ಲಿ ಸರಳ ಶ್ರದ್ಧೆ ಮತ್ತು ನಿರ್ಭರತೆ ಇತ್ತು. ಇವೆಲ್ಲ ಭಾರತೀಯ ಯಾತ್ರಿಕರ ಚಿತ್ರವನ್ನು ಮನಸ್ಸಿಗೆ ತರುವಂತಿತ್ತು.

6. ಯೇಸುವಿನ ತಂದೆ ತಾಯಿಗಳು ತಮ್ಮ ಯಾತ್ರಿಕರ ತಂಡದೊಡನೆ ಹೋಗು ತ್ತಿದ್ದರು. ಒಂದು ಸಂದರ್ಭದಲ್ಲಿ ಯೇಸುವು ಕಣ್ಣಿಗೆ ಕಾಣಿಸಲಿಲ್ಲ. ಬೇರೆ ಬಾಲಕರೊಡನೆ ಅವನು ಹಿಂದೆ ಬರುತ್ತಿರಬಹುದೆಂದು ಅವರು ಭಾವಿಸಿದರು. ತುಂಬ ದೂರ ಹೋದ ಮೇಲೂ ಅವನು ಕಾಣಿಸದಿರಲು ಅವರು ಗಾಬರಿಯಿಂದ ಆ ತಂಡದ ಮಧ್ಯೆ

ಎಲ್ಲೆಲ್ಲಿಯೂ ಹುಡುಕಾಡಿದರು. ಆದರೆ ಎಲ್ಲಿಯೂ ಅವನು ಕಾಣಿಸಲಿಲ್ಲ. ಅವರು ಕಾತರರಾಗಿ ಮತ್ತೆ ಜರೂಸಲೇಮಿಗೆ ಬಂದು ಎಲ್ಲ ಕಡೆ ಹುಡುಕಿದರು. ಕೊನೆಗೆ ದೇವಸ್ಥಾನದ ಒಳಗೆ ಯೇಸುವು ಕಾಣಿಸಿದ – ಅವನು ಅಲ್ಲಿ ಅನೇಕ ಪಂಡಿತರೊಡನೆ ಶಾಸ್ತ್ರ ಚರ್ಚೆ ನಡೆಸುತ್ತಿದ್ದ. ಶಾಸ್ತ್ರದ ಜಟಿಲ ಪ್ರಶ್ನೆಗಳಿಗೆ ಸಮಾಧಾನವನ್ನು ನೀಡುತ್ತ ಪಂಡಿತರುಗಳನ್ನು ಅಚ್ಚರಿಗೊಳಿಸುತ್ತಿದ್ದ.

7. ಈ ಎರಡು ಘಟನೆಗಳ ನಿಕಟ ಸಾದೃಶ್ಯವನ್ನು ಕಂಡು ಮಾಕ್ಸ್ ಮುಲ್ಲರನು ಶ್ರೀರಾಮಕೃಷ್ಣರ ಜೀವನದಲ್ಲಿ ಬರುವ ಈ ಘಟನೆಯ ಸತ್ಯತೆಯ ಬಗ್ಗೆ ಸಂದೇಹ ವ್ಯಕ್ತಪಡಿಸುತ್ತಾನೆ. ಶ್ರೀರಾಮಕೃಷ್ಣರ ಇಂಗ್ಲಿಷ್ ಕಲಿತ ಶಿಷ್ಯರು ಅವರ ಕೀರ್ತಿಯನ್ನು ಹೆಚ್ಚಿಸಲು ಯೇಸುವಿನ ಜೀವನದಲ್ಲಿ ಬರುವ ಈ ಘಟನೆಯನ್ನು ತೆಗೆದು ಅವರ ಜೀವನದೊಡನೆ ಸೇರಿಸಿರುವುದಾಗಿಯೂ ಅವನು ಹೇಳುತ್ತಾನೆ. ಮಾಕ್ಸ್ ಮುಲ್ಲರನು ತನ್ನ ಬುದ್ಧಿ ತೀಕ್ಷ್ಣತೆಯನ್ನು ಈ ಮೂಲಕ ವ್ಯಕ್ತಪಡಿಸಿದ್ದರೂ ನಾವು ಅವನ ಮಾತನ್ನು ಒಪ್ಪುವುದಿಲ್ಲ. ಏಕೆಂದರೆ ನಾವು ಕಾಮಾರಪುಕುರದಲ್ಲಿ ಅನೇಕ ವೃದ್ಧರ ಬಾಯಿಂದ ಈ ಘಟನೆಯ ಬಗ್ಗೆ ಕೇಳಿರುವೆವು ಹಾಗೂ ಶ್ರೀರಾಮಕೃಷ್ಣರೂ ಕೂಡ ತಾವೇ ನಮ್ಮಲ್ಲಿ ಕೆಲವರಿಗೆ ಈ ಘಟನೆಯ ಸಂಬಂಧವಾಗಿ ಹೇಳಿರುವರು. ಈ ವಿಷಯವನ್ನು ಇನ್ನು ಮುಂದುವರಿಸಬೇಕಾದ ಆವಶ್ಯಕತೆಯಿಲ್ಲ.

8. ಶ್ರೀರಾಮಕೃಷ್ಣರ ಜೀವನವನ್ನು ಕುರಿತು ಆಲೋಚಿಸುವಾಗ ಎಲ್ಲರ ಮನಸ್ಸಿನಲ್ಲಿಯೂ ಒಂದು ಪ್ರಶ್ನೆ ಏಳುವುದು, ಶ್ರೀರಾಮಕೃಷ್ಣರು ಏಕೆ ಮದುವೆ ಮಾಡಿಕೊಂಡರು, ಎಂದು. ಸ್ತ್ರೀಯರೊಡನೆ ಯಾವಾಗಲೂ ಶಾರೀರಿಕ ಸಂಬಂಧವನ್ನು ಇಟ್ಟುಕೊಳ್ಳುವ ಇಚ್ಛೆಯೇ ಇಲ್ಲದ ಅವರು ಏಕೆ ವಿವಾಹ ಮಾಡಿಕೊಂಡರು ? ಇದು ವಿಚಾರ ಮಾಡತಕ್ಕ ವಿಷಯ. ಅವರು ಯೌವನಕ್ಕೆ ಕಾಲಿಡುತ್ತಿದ್ದಂತೆಯೇ ಅವರಿಗೆ ದೇವರ ಹುಚ್ಚು ಹಿಡಿದಿದ್ದರಿಂದ ಮನೆಯವರು ಬಲವಂತವಾಗಿ ಅವರಿಗೆ ವಿವಾಹ ಮಾಡಿಸಿದರು ಎಂದು ನೀವು ಹೇಳಬಹುದು. ಆದರೆ ಈ ಉತ್ತರ ಸಮರ್ಪಕವಾದುದಲ್ಲ. ಬಾಲ್ಯದಿಂದಲೂ ಬಲವಂತವಾಗಿ ಅವರಿಂದ ಯಾವ ಕೆಲಸವನ್ನೂ ಮಾಡಿಸಲಾಗುತ್ತಿರಲಿಲ್ಲ. ತಮಗೆ ಏನು ಮಾಡಬೇಕೆನಿಸುತ್ತಿತ್ತೊ, ಅದನ್ನು ಹೇಗಾದರಾಗಲಿ ಮಾಡಿಯೇ ತೀರುತ್ತಿದ್ದರು. ಉಪನಯನದ ಸಮಯದಲ್ಲಿ ಧನೀ ಎಂಬ ಹೆಸರಿನ ಕಮ್ಮಾರ ಜಾತಿಯ ಹೆಂಗಸನ್ನು ಎಲ್ಲರ ಇಚ್ಛೆಗೆ ವಿರುದ್ಧವಾಗಿ ಭಿಕ್ಷಾಮಾತೆಯಾಗಿ ಅವರು ಸ್ವೀಕರಿಸಿದುದನ್ನು ನೀವು ನೋಡಿಲ್ಲವೆ ? ಆಗ ಕಾಮಾರಪುಕುರದಲ್ಲಿ ಕಲಕತ್ತೆಯಲ್ಲಿಯಂತೆ ಸಾಮಾಜಿಕ ಕಟ್ಟುನಿಟ್ಟುಗಳು ಸಡಿಲವಾಗಿರಲಿಲ್ಲ. ಯಾರು ಬೇಕಾದರೂ ತಮಗಿಷ್ಟಬಂದಂತೆ ಮಾಡುವಂತಿರಲಿಲ್ಲ. ಮತ್ತೆ ಶ್ರೀರಾಮಕೃಷ್ಣರ ತುದೆತಾಯಿಗಳ ಧರ್ಮನಿಷ್ಠೆಯೂ ಏನೂ ಕಡಿಮೆಯಿರಲಿಲ್ಲ. ಯಾರಾದರೂ ಬ್ರಾಹ್ಮಣ ಕನ್ಯೆಯೇ ಭಿಕ್ಷಾಮಾತೆಯಾಗಬೇಕೆಂಬುದು ವಂಶಪಾರಂಪರ್ಯವಾಗಿ ಬಂದ ಪದ್ಧತಿ. ಸಂಬಂಧಿಕರೆಲ್ಲರೂ ಶೂದ್ರ ಮಹಿಳೆಯಿಂದ ಭಿಕ್ಷೆ ತೆಗೆದುಕೊಳ್ಳುವುದನ್ನು ವಿರೋಧಿಸಿ

ದ್ದರು, ಆದರೂ ಕೂಡ ಬಾಲಕ ಗದಾಧರನು ಧನಿಯಿಂದಲೇ ಭಿಕ್ಷೆ ತೆಗೆದುಕೊಳ್ಳಬೇಕೆಂದು ಹಠಹಿಡಿದನು. ಅಂದಿನ ಪರಿಸ್ಥಿತಿಯ ದೃಷ್ಟಿಯಿಂದ ನೋಡಿದಾಗ ಇದನ್ನು ಸಾಮಾನ್ಯ ಘಟನೆಯೆಂದು ಪರಿಗಣಿಸುವಂತಿಲ್ಲ. ಹೀಗೆ ಎಲ್ಲ ವಿಷಯದಲ್ಲಿಯೂ ಶ್ರೀರಾಮಕೃಷ್ಣರು ತಮ್ಮ ಇಚ್ಛಾನುವರ್ತಿಗಳಾಗಿದ್ದರೇ ಹೊರತು ಇತರರ ಇಚ್ಛೆ, ಆಸೆಗಳ ಬಲವಂತಕ್ಕೆ ಕಟ್ಟುಬೀಳುತ್ತಲೇ ಇರಲಿಲ್ಲ. ಹಾಗಿರುವಾಗ ಜೀವನದ ಅತ್ಯಂತ ಪ್ರಮುಖ ವಿಷಯವಾದ ವಿವಾಹದ ಸಂಬಂಧದಲ್ಲಿ ಅವರು ಇತರರ ಬಲವಂತಕ್ಕೆ ಬಲಿಯಾದರು ಎಂದರೆ ಒಪ್ಪುವ ಮಾತಲ್ಲ.

9. ನೀವು ಹೀಗೆ ಹೇಳಬಹುದು : 'ಭಗವಂತನಿಗಾಗಿ ಎಲ್ಲವನ್ನೂ ತ್ಯಾಗ ಮಾಡುವ ಭಾವನೆ ಶ್ರೀರಾಮಕೃಷ್ಣರಲ್ಲಿ ಬಾಲ್ಯದಿಂದಲೂ ಇತ್ತು ಎಂದು ಹೇಳುವ ಆವಶ್ಯಕತೆ ಏನಿದೆ ? ಶ್ರೀರಾಮಕೃಷ್ಣರಿಗೂ ಮೊದಲು ಮದುವೆಯಾಗಿ ಸಾಮಾನ್ಯರಂತೆ ಪ್ರಾಪಂಚಿಕ ಸುಖವನ್ನು ಅನುಭವಿಸುವ ಆಸೆಯಿತ್ತು. ಆದರೆ ಅವರಿಗೆ ಯೌವನ ಪ್ರಾಪ್ತಿಯಾದ ಮೇಲೆ ಅವರ ಮನಸ್ಸಿನಲ್ಲಿ ಕ್ರಾಂತಿಕಾರಿ ಪರಿವರ್ತನೆಯುಂಟಾಗಿ ವೈರಾಗ್ಯ ಮತ್ತು ಭಗವದನುರಾಗದ ಬಿರುಗಾಳಿ ಎದ್ದಿತು. ಇದು ಹಿಂದಿನ ಅವರ ಆಶೋತ್ತರಗಳನ್ನೂ ತಲೆಕೆಳಗೆ ಮಾಡಿತು. ಈ ಬಿರುಗಾಳಿ ಏಳುವುದಕ್ಕೆ ಮುಂಚೆಯೇ ಶ್ರೀರಾಮಕೃಷ್ಣರಿಗೆ ಮದುವೆಯಾಗಿತ್ತು. ಹೀಗೆ ಹೇಳಿದರೆ ಯಾವ ತೊಂದರೆಯೂ ಇಲ್ಲ.'

ಇದಕ್ಕೆ ನಮ್ಮ ಉತ್ತರ : ನೀವು ಹೇಳುವುದು ಮೇಲುನೋಟಕ್ಕೆ ಬಹಳ ಯುಕ್ತಿಯುಕ್ತವಾಗಿ ಕಂಡುಬಂದರೂ ಇದಕ್ಕೆ ವಿರೋಧಿಸಲಾಗದ ಕೆಲವು ಆಕ್ಷೇಪಗಳಿವೆ: 1. ಶ್ರೀರಾಮಕೃಷ್ಣರು ತಮ್ಮ ಇಪ್ಪತ್ತನಾಲ್ಕನೆಯ ವಯಸ್ಸಿನಲ್ಲಿ ಮದುವೆಯಾದರು. ಆಗ ಅವರ ಹೃದಯದಲ್ಲಿ ವೈರಾಗ್ಯದ ಬಿರುಗಾಳಿ ಪ್ರಬಲವಾಗಿ ಬೀಸುತ್ತಿತ್ತು. ಮತ್ತೆ ಅವರು ತಮಗಾಗಿ ಇತರರಿಗೆ ಸ್ವಲ್ಪವೂ ಕಷ್ಟವನ್ನುಂಟುಮಾಡುವವರೇ ಅಲ್ಲ. ಹಾಗಿರುವಾಗ ಸ್ವಲ್ಪವೂ ಯೋಚಿಸದೆ ಒಬ್ಬಳು ಹೆಂಗಸು ಜೀವನವಿಡೀ ಕಷ್ಟಕ್ಕೆ ಗುರಿಯಾಗುವುದನ್ನು ತಿಳಿದೂ ಅವರು ಹಾಗೆ ಮಾಡಿದರು ಎಂದರೆ ನಂಬಲಾರದ ವಿಷಯ. 2. ಶ್ರೀರಾಮಕೃಷ್ಣರ ಜೀವನದಲ್ಲಿ ಯಾವ ಘಟನೆಯೂ ನಿರರ್ಥಕವಾದುದುದನ್ನು ನಾವು ಕಾಣುವುದಿಲ್ಲ. ಅವರ ಜೀವನದ ಘಟನಾವಳಿಗಳನ್ನು ಕುರಿತು ವಿಚಾರ ಮಾಡಿದಷ್ಟೂ ನಮಗಿದು ಸ್ಪಷ್ಟವಾಗುತ್ತದೆ. 3. ಅವರು ತಮ್ಮ ಇಚ್ಛಾಪೂರ್ವಕವಾಗಿಯೇ ವಿವಾಹವಾಗಿದ್ದರು ಎಂಬುದು ನಿಶ್ಚಿತ. ಏಕೆಂದರೆ, ವಿವಾಹಕ್ಕೆ ವಧುವನ್ನು ಹುಡುಕುತ್ತಿರುವಾಗ ಹೃದಯನಿಗೆ ಮತ್ತು ಮನೆಯ ಮತ್ತಿತರರಿಗೆ ಅವರು ಹೇಳಿದ್ದರು, ಜಯರಾಂಬಾಟಿಯ ರಾಮಚಂದ್ರ ಮುಖ್ಯೋಪಾಧ್ಯಾಯನ ಮಗಳೊಡನೆ ತಮ್ಮ ವಿವಾಹವಾಗುತ್ತದೆ, ಇದು ಮೊದಲೇ ನಿಶ್ಚಯವಾಗಿದೆ, ಎಂದು. ಈ ಮಾತನ್ನು ಕೇಳಿ ಓದುಗರಿಗೆ ಆಶ್ಚರ್ಯವಾಗಬಹುದು. ಇಲ್ಲವೇ 'ಎಲ್ಲ ಅದ್ಭುತ ವಿಷಯಗಳನ್ನೇ ಸೃಷ್ಟಿಸುತ್ತೀರಿ !

ಈ ಇಪ್ಪತ್ತನೆಯ ಶತಮಾನದಲ್ಲಿ ಇವುಗಳನ್ನೆಲ್ಲ ಕೇಳುವವರಾರು ?' ಎಂದು ತಮ್ಮ ಅಪನಂಬಿಕೆಯನ್ನು ವ್ಯಕ್ತಪಡಿಸಬಹುದು. ನಾವು ಅವರಿಗೆ ಹೇಳುವುದಿಷ್ಟೇ : 'ನೀವು ನಂಬಿದರೆ ನಂಬಿ, ಬಿಟ್ಟರೆ ಬಿಡಿ. ಘಟನೆ ಇದೇ ರೀತಿ ನಡೆದದ್ದಂತೂ ನಿಜ. ಇಂದಿಗೂ ಅನೇಕರು ಬದುಕಿ ಉಳಿದಿದ್ದಾರೆ, ಅವರು ಈ ವಿಷಯವನ್ನು ಸಮರ್ಥಿಸುತ್ತಾರೆ. ನೀವೇ ವಿಚಾರಿಸಿ ನೋಡಬಹುದು.' ಆದ್ದರಿಂದ ತಮಗೆ ವಿವಾಹವಾಗುವುದೆಂಬುದೂ, ಯಾರೊಡನೆ ವಿವಾಹವಾಗುವುದೆಂಬುದೂ ಶ್ರೀರಾಮಕೃಷ್ಣರಿಗೆ ಮೊದಲೇ ತಿಳಿದಿತ್ತು. ಅವರು ಅದಕ್ಕೆ ಯಾವ ಆಕ್ಷೇಪಣೆಯನ್ನೂ ಎತ್ತಲಿಲ್ಲ. ಈ ವಿಷಯ ಭಾವಸಮಾಧಿಯಲ್ಲಿ ಅವರಿಗೆ ತಿಳಿದಿದ್ದಿರಬೇಕು.

10. ಹಾಗಾದರೆ ಶ್ರೀರಾಮಕೃಷ್ಣರ ವಿವಾಹದ ಹಿಂದಿರುವ ಅರ್ಥವೇನು ? ಶಾಸ್ತ್ರವೇತ್ತರು ಕೆಲವರು ಬೇಸರದಿಂದ ಹೇಳಬಹುದು : ಯಾಕಪ್ಪ ಇಷ್ಟು ಸಣ್ಣ ವಿಷಯಕ್ಕೆ ಇಷ್ಟೊಂದು ಗಲಾಟೆ ? ಮೊದಲು ಶಾಸ್ತ್ರಾಧ್ಯಯನ ಮಾಡಿ ಅನಂತರ ಸಾಧು ಸಂತರ ಜೀವನ ಚರಿತ್ರೆ ಬರೆಯಲು ಪ್ರಾರಂಭಿಸಬೇಕು. ಪೂರ್ಣಜ್ಞಾನ ಉಂಟಾದರೆ ಸಂಚಿತ ಮತ್ತು ಆಗಾಮೀ ಕರ್ಮ ನಾಶವಾಗುವುವು. ಆದರೆ ಪ್ರಾರಬ್ಧ ಕರ್ಮದ ಫಲವನ್ನು ಈ ದೇಹದಲ್ಲಿ ಭೋಗಿಸಲೇಬೇಕು ಎಂದು ಶಾಸ್ತ್ರ ಹೇಳುತ್ತದೆ. ವ್ಯಾಧನ ಬತ್ತಳಿಕೆಯಲ್ಲಿ ಕೆಲವು ಬಾಣಗಳಿವೆ ಎಂದಿಟ್ಟುಕೊಳ್ಳಿ. ಒಂದು ಬಾಣವನ್ನು ತೆಗೆದು ಮರದ ಮೇಲಿದ್ದ ಪಕ್ಷಿಗೆ ಹೊಡೆದಿದ್ದಾನೆ. ಈಗ ಇನ್ನೊಂದು ಬಾಣವನ್ನು ಹೊಡೆಯಲು ತೆಗೆದಿದ್ದಾನೆ. ಅಷ್ಟು ಹೊತ್ತಿಗೆ ಅವನ ಹೃದಯದಲ್ಲಿ ಕರುಣೆ ಉಕ್ಕಿಬಂದು ಇನ್ನೆಂದೂ ಪಕ್ಷಿಗಳನ್ನು ಕೊಲ್ಲುವುದಿಲ್ಲ ಎಂದು ಪ್ರತಿಜ್ಞೆ ಮಾಡುತ್ತಾನೆ; ಅವನು ಕೈಯಲ್ಲಿದ್ದ ಬಾಣವನ್ನೂ ಬತ್ತಳಿಕೆಯಲ್ಲಿದ್ದ ಬಾಣಗಳನ್ನೂ ಬಿಸಾಕುತ್ತಾನೆ. ಆದರೆ ತಾನಾಗಲೇ ಪಕ್ಷಿಯ ಕಡೆ ಬಿಟ್ಟಿರುವ ಬಾಣವನ್ನು ಹಿಂತೆಗೆದುಕೊಳ್ಳಲು ಸಾಧ್ಯವೆ ? ಬತ್ತಳಿಕೆಯಲ್ಲಿರುವ ಬಾಣಗಳು ವ್ಯಕ್ತಿಯ ಜನ್ಮಜನ್ಮಾಂತರದ ಸಂಚಿತ ಕರ್ಮಗಳಿದ್ದ ಹಾಗೆ. ಕೈಯಲ್ಲಿರುವ ಬಾಣವು ಅವನು ಮಾಡುವ ಕರ್ಮವನ್ನು ಪ್ರತಿನಿಧಿಸುತ್ತದೆ. ಇವೆರಡೂ ಜ್ಞಾನಲಾಭದಿಂದ ನಾಶವಾಗುವುವು. ಬಿಟ್ಟ ಬಾಣವು ಪ್ರಾರಬ್ಧ ಕರ್ಮವನ್ನು ಪ್ರತಿನಿಧಿಸುತ್ತದೆ. ಇದನ್ನು ಮಾತ್ರ ಜ್ಞಾನವುಂಟಾದಮೇಲೂ ಅನುಭವಿಸಲೇಬೇಕು. ಶ್ರೀರಾಮಕೃಷ್ಣರಂತಹ ಮಹಾಪುರುಷರು ತಮ್ಮ ಶರೀರದ ಮೂಲಕ ಪ್ರಾರಬ್ಧ ಕರ್ಮವನ್ನು ಮಾತ್ರ ಅನುಭವಿಸುತ್ತಿರುತ್ತಾರೆ. ಇದು ಅನಿವಾರ್ಯ. ಇದಕ್ಕೆ ಅನುಸಾರವಾಗಿ ತಮ್ಮ ಜೀವನದಲ್ಲಿ ಏನೇನು ಘಟನೆಗಳು ನಡೆಯಬೇಕೊ ಅವೆಲ್ಲವೂ ಅವರಿಗೆ ತಿಳಿದಿರುತ್ತವೆ. ಆದ್ದರಿಂದ ಶ್ರೀರಾಮಕೃಷ್ಣರು ತಮ್ಮ ವಿವಾಹವು ಎಲ್ಲಿ ಯಾರೊಡನೆ ಆಗುವುದು ಎಂದು ಹೇಳಿದುದರಲ್ಲಿ ಯಾವ ಆಶ್ಚರ್ಯವೂ ಇಲ್ಲ.

11. ಇದಕ್ಕೆ ಉತ್ತರವಾಗಿ ನಾವು ಹೇಳುತ್ತೇವೆ : ನಿಜ, ನಮಗೆ ಶಾಸ್ತ್ರಜ್ಞಾನ ಅಷ್ಟಾಗಿ ಇಲ್ಲ. ಆದರೆ ನಮಗೆ ತಿಳಿದಿರುವಮಟ್ಟಿಗೆ ಹೇಳುವುದಾದರೆ ಯಥಾರ್ಥ ಜ್ಞಾನಿಯು ಎಲ್ಲ ಪ್ರಾರಬ್ಧ ಕರ್ಮಗಳ ಫಲವನ್ನೂ ಅನುಭವಿಸಬೇಕಾಗಿಲ್ಲ. ಏಕೆಂದರೆ,

ಯಾವ ಮನಸ್ಸಿನಲ್ಲಿ ಅವನು ಸುಖ ದುಃಖ ಮುಂತಾದವುಗಳನ್ನು ಅನುಭವಿಸಬೇಕೊ ಅದನ್ನು ಅವನು ಶಾಶ್ವತವಾಗಿ ಭಗವಂತನಿಗೆ ಅರ್ಪಿಸಿರುತ್ತಾನೆ. ಅಂಥ ಮನಸ್ಸಿನಲ್ಲಿ ಮತ್ತೆ ಸುಖದುಃಖಾದಿಗಳಿಗೆ ಸ್ಥಾನವೆಲ್ಲಿ? ಪ್ರಾರಬ್ಧ ಕರ್ಮದ ಫಲವು ದೇಹದ ಮೂಲಕ ಅನುಭವಿಸಲ್ಪಡುವುದು ಎಂದು ಹೇಳಿದರೆ ಅದೂ ಸಾಧ್ಯವಿಲ್ಲ. ಅವನು ತಾನೇ ಇಚ್ಛಿಸಿ ಸ್ವಲ್ಪ ಅಹಂಕಾರವನ್ನು ಯಾವುದೊ ಕಾರಣಕ್ಕಾಗಿ, ಉದಾಹರಣೆಗೆ ಪರೋಪಕಾರಕ್ಕಾಗಿ, ಉಳಿಸಿಕೊಂಡರೆ ಆಗ ಅವನು ಮತ್ತೆ ಶರೀರ ಮನಸ್ಸುಗಳನ್ನು ಪಡೆಯುತ್ತಾನೆ. ಅದರೊಟ್ಟಿಗೆ ಪ್ರಾರಬ್ಧ ಕರ್ಮಗಳ ಫಲಭೋಗವೂ ನಡೆಯುತ್ತದೆ. ಆದ್ದರಿಂದ ಯಥಾರ್ಥ ಜ್ಞಾನಿಯು ತನಗಿಷ್ಟಬಂದಂತೆ ಪ್ರಾರಬ್ಧವನ್ನು ಭೋಗಿಸಲೂಬಹುದು, ತ್ಯಜಿಸಲೂಬಹುದು. ಅವನಿಗೆ ಆ ಸಾಮರ್ಥ್ಯವಿರುತ್ತದೆ. ಈ ಕಾರಣದಿಂದಲೆ ಅವನನ್ನು 'ಲೋಕಜಿತ್' 'ಮೃತ್ಯುಂಜಯ' 'ಸರ್ವಜ್ಞ' ಇತ್ಯಾದಿಯಾಗಿ ಕರೆಯುವುದು

ಇನ್ನೊಂದು ವಿಷಯ : ಶ್ರೀರಾಮಕೃಷ್ಣರ ಅನುಭವಗಳನ್ನು ನಾವು ನಂಬುವುದಾದರೆ ಅವರನ್ನು ಜ್ಞಾನಿ ಎಂದಷ್ಟೇ ಹೇಳಿದರೆ ನಡೆಯುವುದಿಲ್ಲ. ಏಕೆಂದರೆ 'ಹಿಂದೆ ಯಾರು ರಾಮನಾಗಿದ್ದನೊ, ಮತ್ತು ಕೃಷ್ಣನಾಗಿದ್ದನೊ ಅವನೇ ಈಗ ರಾಮಕೃಷ್ಣನಾಗಿ ಅವತರಿಸಿರುವವನು' ಎಂದು ಅವರು ಮತ್ತೆ ಮತ್ತೆ ಹೇಳುತ್ತಿದ್ದುದನ್ನು ನಾವು ಕೇಳಿರುವೆವು. ಆದ್ದರಿಂದ ಅವರನ್ನು ಭಗವಂತನ ಅವತಾರವೆಂದೇ ಪರಿಗಣಿಸಬೇಕಾಗುತ್ತದೆ. ಹೀಗೆ ಮಾಡಿದಾಗ ಅವರು ಪ್ರಾರಬ್ಧ ಕರ್ಮಕ್ಕೆ ವಶರಾಗಿದ್ದರು ಎಂದು ಹೇಳಿದರೆ ನಡೆಯುವುದಿಲ್ಲ. ಆದ್ದರಿಂದ ಶ್ರೀರಾಮಕೃಷ್ಣರ ವಿವಾಹದ ಸಂಬಂಧವಾಗಿ ನಾವು ಬೇರೆ ರೀತಿಯ ವಿವರಣೆಯನ್ನೇ ನೀಡಬೇಕಾಗುತ್ತದೆ.

12. ವಿವಾಹದ ವಿಷಯವನ್ನು ಪ್ರಸ್ತಾಪಿಸುತ್ತ ಶ್ರೀರಾಮಕೃಷ್ಣರು ಅನೇಕ ಬಾರಿ ಹಾಸ್ಯ ಚಟಾಕಿಯನ್ನು ಹಾರಿಸುತ್ತಿದ್ದುದೂ ಉಂಟು. ಅದನ್ನು ಕೇಳುವುದಕ್ಕೆ ಮೋಜೆನಿಸುತ್ತಿತ್ತು. ದಕ್ಷಿಣೇಶ್ವರದಲ್ಲಿ ಒಂದು ದಿನ ಶ್ರೀರಾಮಕೃಷ್ಣರು ಊಟಕ್ಕೆ ಕುಳಿತಿದ್ದರು. ಬಲರಾಮ ಬಸು ಮುಂತಾದವರು ಮುಂದೆ ಕುಳಿತು ಅವರೊಡನೆ ಮಾತನಾಡುತ್ತಿದ್ದರು. ಅದೇ ದಿನ ಶ್ರೀಮಾತೆಯವರು ರಾಮಲಾಲನ ವಿವಾಹದ ನಿಮಿತ್ತವಾಗಿ ಕೆಲವು ತಿಂಗಳ ಮಟ್ಟಿಗೆ ಕಾಮಾರಪುಕುರಕ್ಕೆ ಹೋಗಿದ್ದರು.

ಶ್ರೀರಾಮಕೃಷ್ಣ : (ಬಲರಾಮನನ್ನು ಉದ್ದೇಶಿಸಿ) ''ನೋಡು, ನಾನೇಕೆ ಮದುವೆ ಮಾಡಿಕೊಂಡೆ, ಹೇಳು ? ನನ್ನ ಮೈಮೇಲಿನ ಬಟ್ಟೆಯನ್ನೇ ಇಟ್ಟುಕೊಳ್ಳಲಾಗುವುದಿಲ್ಲ. ಹಾಗಿರುವಾಗ ಈ ಪತ್ನಿ ಏಕೆ ?''

ಬಲರಾಮನು ಸ್ವಲ್ಪ ನಕ್ಕು ಸುಮ್ಮನೆ ಕುಳಿತು ಬಿಟ್ಟನು.

ಶ್ರೀರಾಮಕೃಷ್ಣ : ಹೇಳುತ್ತೇನೆ ಕೇಳು. (ತಟ್ಟೆಯಿಂದ ಸ್ವಲ್ಪ ಆಹಾರ ಪದಾರ್ಥವನ್ನು ಬಲರಾಮನಿಗೆ ತೋರಿಸುತ್ತ) ನೋಡು, ಇದಕ್ಕಾಗಿ ! ಇಲ್ಲದಿದ್ದರೆ ಯಾರು ಈ ರೀತಿ ಅಡಿಗೆ ಮಾಡಿ ಹಾಕುತ್ತಿದ್ದರು, ಹೇಳು ! (ಬಲರಾಮ ಮತ್ತಿತರರು ನಕ್ಕರು) ಹೌದಪ್ಪ, ಯಾರು ಇಷ್ಟು ಮುತುವರ್ಜಿಯಿಂದ ಊಟ ತಯಾರಿಸುತ್ತಿದ್ದರು?

ಅವರೆಲ್ಲ ಇಂದು ಹೊರಟುಹೋದರು—(ಭಕ್ತರು ಪ್ರಶ್ನಾರ್ಥಕವಾಗಿ ನೋಡಿದರು) ರಾಮಲಾಲನ ಅತ್ತೆ, ತಿಳಿಯಿತೆ. ರಾಮಲಾಲನಿಗೆ ಮದುವೆ ಅದಕ್ಕಾಗಿ ಎಲ್ಲ ಕಾಮಾರಪುಕುರಕ್ಕೆ ಹೊರಟುಹೋದರು ನಿಂತುಕೊಂಡು ನೋಡುತ್ತಿದ್ದೆ. ಮನಸ್ಸಿಗೆ ಏನೂ ಅನಿಸಲಿಲ್ಲ. ನಿಜವಾಗಿ ಹೇಳುತ್ತೇನೆ, ಯಾರು ಹೋದರೆ ಏನಂತೆ, ಎಂದು ಭಾವಿಸಿದೆ. ಆದರೆ ಅನಂತರ ಅಡಿಗೆ ಯಾರು ಮಾಡಿಹಾಕುತ್ತಾರೆ ಎಂಬ ಯೋಚನೆ ಬಂತು. ಏಕೆ ಗೊತ್ತೆ ? ಎಲ್ಲ ರೀತಿಯ ಆಹಾರ ಹೊಟ್ಟೆಗೆ ಸರಿಹೋಗುವುದಿಲ್ಲ. ಮತ್ತೆ ಕೆಲವೊಮ್ಮೆ ಊಟ ಮಾಡುವಷ್ಟು ಪ್ರಜ್ಞೆಯೂ ಇರುವುದಿಲ್ಲ. ಅವಳು ನನಗೆ ಯಾವುದು ಸರಿ ಹೊಂದುವುದೋ ಅದನ್ನೇ ಮಾಡಿ ಹಾಕುತ್ತಿದ್ದಳು. ಆದ್ದರಿಂದಲೇ ಇನ್ನು ಯಾರು ಮಾಡುತ್ತಾರೆ ಎಂದೆನಿಸಿತು.''

13. ಇನ್ನೊಂದು ದಿನ ದಕ್ಷಿಣೇಶ್ವರದಲ್ಲಿ ಅವರು ವಿವಾಹದ ವಿಷಯವನ್ನು ಪ್ರಸ್ತಾಪಿಸಿ ಹೇಳಿದರು : ''ಮದುವೆ ಏಕೆ ಮಾಡಿಕೊಳ್ಳಬೇಕಾಯಿತು ಗೊತ್ತೆ ? ಬ್ರಾಹ್ಮಣ ಶರೀರಕ್ಕೆ ಹತ್ತು ಬಗೆಯ ಸಂಸ್ಕಾರಗಳಿವೆ, ಅವುಗಳಲ್ಲಿ ವಿವಾಹ ಒಂದು. ಈ ಹತ್ತು ಬಗೆಯ ಸಂಸ್ಕಾರಗಳೂ ಆದರೆ ಆಗ ಆಚಾರ್ಯನಾಗಬಹುದು.'' ಮತ್ತೆ ಕೆಲವೊಮ್ಮೆ ಹೇಳುತ್ತಿದ್ದರು : ''ಯಾರು ಪರಮಹಂಸಾವಸ್ಥೆಯನ್ನು ಮುಟ್ಟಿರುವರೊ ಅವರು ಎಲ್ಲ ಬಗೆಯ ಅನುಭವವನ್ನೂ – ಜಾಡಮಾಲಿಯಿಂದ ಹಿಡಿದು ರಾಜಮಹಾ ರಾಜನವರೆಗಿನ – ಎಲ್ಲ ರೀತಿಯ ಅನುಭವವನ್ನೂ ಪಡೆದಿರುತ್ತಾನೆ. ಅದಿಲ್ಲದಿದ್ದರೆ ನೈಜ ವೈರಾಗ್ಯ ಹೇಗೆ ಉಂಟಾಗುತ್ತದೆ ಹೇಳು ? ಯಾವುದನ್ನು ಭೋಗಿಸಿಲ್ಲವೊ ಆದರ ಕಡೆಗೆ ಮನಸ್ಸು ಸೆಳೆಯಲ್ಪಡುತ್ತದೆ, ತಿಳಿಯಿತೆ ? ಪಗಡೆ ಆಟದಲ್ಲಿ ಕಾಯಿಯು ಎಲ್ಲ ಮನೆಯನ್ನು ಸುತ್ತಿದ ಮೇಲೆಯೇ ಹಣ್ಣಾಗುವುದು. ಇದೂ ಹಾಗೆಯೆ.''

14. ಇದು ಸಾಧಾರಣ ಭಕ್ತರ ವಿವಾಹಕ್ಕೆ ಕಾರಣವಿರಬಹುದು. ಆದರೆ ಶ್ರೀರಾಮಕೃಷ್ಣರ ವಿವಾಹಕ್ಕೆ ವಿಶೇಷ ಕಾರಣವಿರಬೇಕು. ಅದನ್ನು ಇಲ್ಲಿ ನಮಗೆ ತಿಳಿದಿರುವಂತೆ ತಿಳಿಸಿಕೊಡಲು ಪ್ರಯತ್ನಿಸುತ್ತೇವೆ. ವಿವಾಹವು ಭೋಗಕ್ಕಾಗಿ ಅಲ್ಲ ಎಂಬುದನ್ನು ಶಾಸ್ತ್ರ ಮತ್ತೆ ಮತ್ತೆ ನಮಗೆ ತಿಳಿಸಿಕೊಡುತ್ತದೆ. ಭಗವಂತನ ಸೃಷ್ಟಿ ಕಾರ್ಯವನ್ನು ಮುಂದುವರಿಸಿಕೊಂಡು ಹೋಗುವುದು ಮತ್ತು ಉತ್ತಮ ಮಕ್ಕಳನ್ನು ಪಡೆದು ಸಮಾಜದ ಒಳಿತನ್ನು ಸಾಧಿಸುವುದು – ಇದು ವಿವಾಹದ ಹಿಂದಿರುವ ನಿಜವಾದ ಉದ್ದೇಶ. ಶಾಸ್ತ್ರವೂ ಇದನ್ನೇ ಹೇಳುತ್ತದೆ. ಹಾಗಾದರೆ ಇದರಲ್ಲಿ ವ್ಯಕ್ತಿಯ ಸ್ವಾರ್ಥ ಏನೂ ಇಲ್ಲವೇ ? ಶಾಸ್ತ್ರವು ಈ ರೀತಿ ಅಸಾಧ್ಯವಾದುದನ್ನು ಹೇಳುತ್ತದೆಯೇ ? ಹಾಗೇನಿಲ್ಲ. ಮಾನವನ ದುರ್ಬಲತೆ ಶಾಸ್ತ್ರಕಾರರಿಗೆ ತಿಳಿದಿತ್ತು. ದುರ್ಬಲ ಮಾನವನು ಸ್ವಾರ್ಥವಿಲ್ಲದೆ ಏನನ್ನೂ ಅರ್ಥಮಾಡಿಕೊಳ್ಳುವುದಿಲ್ಲ, ಲಾಭ ನಷ್ಟವನ್ನು ಪರಿಗಣಿಸದೆ ಯಾವ ಕಾರ್ಯದಲ್ಲಿಯೂ ಪ್ರವೃತ್ತನಾಗುವುದಿಲ್ಲ. ಈ ವಿಷಯವನ್ನು ತಿಳಿದ ಶಾಸ್ತ್ರಕಾರರು, ಈ ಸ್ವಾರ್ಥತೆಯನ್ನು ಒಂದು ಮಹಾನ್ ಉದ್ದೇಶದೊಡನೆ ಹೊಂದಿಸಿ

ಕೊಂಡರೆ ಅದರಿಂದ ಮಂಗಳವುಂಟಾಗುತ್ತದೆ, ಇಲ್ಲದಿದ್ದರೆ ಮಾನವನು ಪುನಃ ಪುನಃ ಜನ್ಮ-ಮೃತ್ಯುವಿನ ಬಂಧನದಲ್ಲಿ ಸಿಕ್ಕಿಕೊಂಡು ದುಃಖಪಡಬೇಕಾಗುತ್ತದೆ, ಎಂದು ಹೇಳಿರುವುದು.

15. ತನ್ನ ನೈಜ ಮುಕ್ತಸ್ವರೂಪವನ್ನು ಮರೆತು ಮಾನವನು ಇಂದ್ರಿಯಗಳ ಮೂಲಕ ಬಾಹ್ಯ ಜಗತ್ತಿನ ಸುಖವನ್ನು ಅನುಭವಿಸುತ್ತಿರುವನು, ಅದೇ ಅತ್ಯಂತ ಮಧುರವೆಂದು ಭಾವಿಸಿರುವನು. ಆದರೆ ಪ್ರತಿಯೊಂದು ಸುಖವೂ ದುಃಖದೊಡನೆ ಸಂಯುಕ್ತವಾಗಿದೆ, ಸುಖ ಅನುಭವಿಸಬೇಕಾದರೆ ಅದರೊನೆ ದುಃಖವನ್ನೂ ಅನುಭವಿಸಬೇಕಾಗುತ್ತದೆ – ಈ ವಿಷಯವನ್ನು ಎಷ್ಟು ಜನ ಅರ್ಥಮಾಡಿಕೊಳ್ಳಬಲ್ಲರು ? ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು, ''ದುಃಖದ ಕಿರೀಟವನ್ನು ಹಾಕಿಕೊಂಡು ಸುಖವು ಮನುಷ್ಯನ ಮುಂದೆ ಬಂದು ನಿಲ್ಲುತ್ತದೆ'' ಎಂದು. ಆಗ ಮನುಷ್ಯನು ಸುಖದ ಬೆನ್ನು ಹತ್ತುತ್ತಾನೆ. ಅದರ ತಲೆಯ ಮೇಲಿರುವ ದುಃಖದ ಮುಕುಟವನ್ನೂ ಸ್ವೀಕರಿಸಬೇಕಾಗುತ್ತದೆ ಎಂಬುದನ್ನು ಅವನು ಆಗ ತಿಳಿಯುವುದಿಲ್ಲ. ಇದನ್ನು ತಿಳಿಸಿಕೊಡುವುದಕ್ಕಾಗಿಯೇ ಶಾಸ್ತ್ರ ಹೀಗೆ ಹೇಳುತ್ತದೆ : ''ಸುಖವನ್ನು ಪಡೆಯುವುದೇ ಜೀವನದ ಗುರಿಯೆಂದು ಏಕೆ ತಿಳಿಯುತ್ತೀಯೆ ? ಸುಖ ಅಥವಾ ದುಃಖ ಇವೆರಡರಲ್ಲಿ ಒಂದನ್ನು ಸ್ವೀಕರಿಸಿದರೆ ಎರಡನ್ನೂ ಹೊಂದಬೇಕಾಗುತ್ತದೆ, ಜೀವನದಲ್ಲಿ ಒಂದು ಉನ್ನತ ಉದ್ದೇಶವನ್ನಿಟ್ಟುಕೊಂಡು ಸುಖ ದುಃಖಗಳೆರಡನ್ನೂ ನಿನ್ನ ಶಿಕ್ಷಕಗಳೆಂದು ಏಕೆ ಸ್ವೀಕರಿಸಬಾರದು ? ಇವೆರಡನ್ನೂ ಮೀರಿ ಹೋಗುವುದೇ ಜೀವನದ ಉದ್ದೇಶ.'

ವಿವಾಹಿತ ಜೀವನದಲ್ಲಿ ವಿವೇಕ ಪೂರ್ಣವಾಗಿ ಭೋಗವನ್ನು ಅನುಭವಿಸಬೇಕು ; ಸುಖ ದುಃಖಗಳಿಂದ ಕೂಡಿದ ನಾನಾ ಬಗೆಯ ಅನುಭವಗಳನ್ನು ಪಡೆದ ಮೇಲೆ ಕೊನೆಗೆ ಸಂಸಾರದ ಕ್ಷಣಭಂಗುರ ಸುಖದಲ್ಲಿ ವೈರಾಗ್ಯವುಂಟಾಗಿ, ಭಗವಂತನ ಕಡೆ ಮನಸ್ಸು ಹರಿಯತೊಡಗುತ್ತದೆ. ಈ ರೀತಿ ಆಗುವಂತೆ ಮಾಡುವುದೇ ಶಾಸ್ತ್ರದ ಉದ್ದೇಶ. ವಿಚಾರ ಮಾಡುತ್ತ ಸಂಸಾರದ ಯಾವುದೇ ವಿಷಯವನ್ನು ಭೋಗಿಸಲು ತೊಡಗಿದಾಗ ಮನಸ್ಸು ಆ ವಿಷಯವನ್ನು ತ್ಯಜಿಸುವುದು ನಿಶ್ಚಯ.

16. ಇದಕ್ಕಾಗಿಯೇ ಶ್ರೀರಾಮಕೃಷ್ಣರು ಹೇಳುತ್ತಿದ್ದರು : ''ನೋಡಪ್ಪ, ಸದಸದ್ ವಿಚಾರ ಮಾಡಬೇಕು. ಯಾವಾಗಲೂ ವಿಚಾರ ಮಾಡುತ್ತ ಮನಸ್ಸಿಗೆ ಹೇಳಬೇಕು – ಎಲೈ ಮನಸ್ಸೆ, ನೀನು ಈ ವಸ್ತುವನ್ನು ಭೋಗಿಸಬೇಕು, ಇವನ್ನು ತಿನ್ನಬೇಕು, ಅದನ್ನು ಉಡಬೇಕು– ಹೀಗೆ ಕುಣಿದಾಡುತ್ತಿದ್ದೀಯೆ. ಆದರೆ ಯಾವ ಪಂಚಭೂತಗಳಿಂದ ಆಲೂಗಡ್ಡೆ, ಅಕ್ಕಿ, ಬೇಳೆ ಇತ್ಯಾದಿಗಳೆಲ್ಲ ತಯಾರಾಗಿವೆಯೊ ಅದೇ ಪಂಚಭೂತಗಳಿಂದ ಜಿಲೇಬಿ, ಜಹಂಗೀರ್ ಮುಂತಾದವುಗಳು ತಯಾರಾಗಿವೆ. ಅದೇ ಪಂಚಭೂತಗಳಿಂದ ಎಲುಬು, ರಕ್ತ, ಮಾಂಸಗಳಿಂದ ಕೂಡಿದ ಸುಂದರವಾದ ನಾರಿಯ ದೇಹವೂ ಉತ್ಪತ್ತಿಯಾಗಿದೆ. ಆದ್ದರಿಂದಲೇ ಎಲ್ಲ ಮನುಷ್ಯರ ಪ್ರಾಣಿಗಳ ದೇಹವೂ ಉಂಟಾಗಿದೆ. ಹಾಗಿರುವಾಗ ಅವುಗಳಿಗಾಗಿ ಏಕೆ ಅಷ್ಟೊಂದು ಪರದಾಡುವೆ ? ಅವುಗಳಿಂದ ನೀನು ಸಚ್ಚಿದಾನಂದವನ್ನು ಪಡೆಯಲಾರೆ. ಇದರಿಂದಲೂ ಮನಸ್ಸು ಸಮಾ

ಧಾನಗೊಳ್ಳದಿದ್ದರೆ ವಿಚಾರ ಮಾಡುತ್ತ ಮಾಡುತ್ತ ಒಂದೆರಡು ಬಾರಿ ಭೋಗಿಸಿ ಅನಂತರ ಅದನ್ನು ತ್ಯಜಿಸಿಬಿಡಬೇಕು. ಉದಾಹರಣೆಗೆ ರಸಗುಲ್ಲ (ಸಿಹಿ ತಿಂಡಿ) ತಿನ್ನ ಬೇಕೆಂದು ಬಹಳ ಆಸೆಯಾಗುತ್ತದೆ ಎಂದಿಟ್ಟುಕೊ. ಮನಸ್ಸು ಎಷ್ಟು ಹೇಳಿದರೂ ಕೇಳುವುದಿಲ್ಲ. ಎಷ್ಟು ವಿಚಾರ ಮಾಡಿದರೂ ಎಲ್ಲ ಹಾರಿಹೋಗುವುದು. ಆಗ ಕೆಲವು ರಸಗುಲ್ಲಗಳನ್ನು ತಂದು, ಬಾಯಿಗೆ ಹಾಕಿ ಅಗಿಯುತ್ತ ಮನಸ್ಸಿಗೆ ಹೇಳಬೇಕು—ಮನಸ್ಸೆ ರಸಗುಲ್ಲ ಎಂದರೆ ಇದೆ ; ಇದೂ ಕೂಡ ಆಲೂಗೆಡ್ಡೆ ಮುಂತಾದ ವಸ್ತುಗಳಂತೆ ಪಂಚ ಭೂತಗಳಿಂದ ಉತ್ಪತ್ತಿಯಾಗಿದೆ. ಇದನ್ನು ತಿಂದಾಗಲೂ ಇದು ದೇಹದಲ್ಲಿ ಹೋಗಿ ರಕ್ತ ಮಾಂಸ ಮಲ ಮೂತ್ರಗಳಾಗಿ ಮಾರ್ಪಡುತ್ತದೆ. ಎಷ್ಟು ಹೊತ್ತು ನಾಲಗೆಯ ಮೇಲಿರುತ್ತದೊ ಅಷ್ಟು ಹೊತ್ತು ಇದು ಸಿಹಿಯಾಗಿರುತ್ತದೆ, ನಾಲಗೆಯ ಕೆಳಗೆ ಹೋದರೆ ಅದರ ರುಚಿಯ ಅರಿವಾಗುವುದೇ ಇಲ್ಲ. ಮತ್ತೆ ಸ್ವಲ್ಪ ಜಾಸ್ತಿ ತಿಂದರೆ ಕಾಯಿಲೆಯಾಗುತ್ತದೆ. ಇದಕ್ಕಾಗಿ ಇಷ್ಟೊಂದು ಆಸೆಪಡುವುದೆ ! ಛೀ ! ಛೀ! ಈಗ ತಿಂದದ್ದಾಯಿತು, ಇನ್ನು ತಿನ್ನಲು ಬಯಸಬೇಡ. (ಸಂನ್ಯಾಸೀ ಭಕ್ತರನ್ನು ಉದ್ದೇಶಿಸಿ) ಸಾಮಾನ್ಯ ವಿಷಯಗಳನ್ನು ಈ ರೀತಿ ವಿಚಾರ ಮಾಡುತ್ತ ಭೋಗಿಸಿ ಅನಂತರ ತ್ಯಜಿಸಲು ಸಾಧ್ಯ. ಆದರೆ ದೊಡ್ಡ ದೊಡ್ಡ ವಿಷಯದಲ್ಲಿ ಹೀಗೆ ಮಾಡಿದರೆ ನಡೆಯು ವುದಿಲ್ಲ, ಭೋಗಿಸಲು ಹೋದರೇನೇ ಅದರ ಬಂಧನಕ್ಕೆ ಬಲಿಯಾಗಬೇಕಾಗುತ್ತದೆ. ಆದ್ದರಿಂದ ದೊಡ್ಡ ದೊಡ್ಡ ವಾಸನೆಗಳನ್ನು ವಿಚಾರ ಮಾಡಿ ಮನಸ್ಸಿನಿಂದಲೇ ಹೊಡೆ ದೋಡಿಸಬೇಕು.''

17. ವಿಚಾರದ ಉಚ್ಚ ಆದರ್ಶವನ್ನು ಶಾಸ್ತ್ರವು ಉಪದೇಶಿಸುತ್ತಿದ್ದರೂ ಈಗಿನ ಕಾಲದಲ್ಲಿ ಎಷ್ಟು ಜನರು ಇದನ್ನು ಸ್ವೀಕರಿಸಬಲ್ಲರು ? ಎಷ್ಟು ಜನ ವಿವಾಹಿತರು ಸಾಧ್ಯವಾದಷ್ಟು ಬ್ರಹ್ಮಚರ್ಯವನ್ನು ಪಾಲಿಸುತ್ತ ತಮ್ಮ ಮತ್ತು ಸಮಾಜದ ಹಿತವನ್ನು ಸಾಧಿಸಲು ಸಿದ್ಧರಿರುವರು ? ಎಷ್ಟು ಜನ ಸ್ತ್ರೀಯರು ತಮ್ಮ ಪತಿಯ ಮುಂದೆ ನಿಂತು, ಸಮಾಜದ ಹಿತದ ದೃಷ್ಟಿಯಿಂದಾದರೂ, ಈ ಉಚ್ಚ ಆದರ್ಶವನ್ನು ಪಾಲಿಸಲು ಪ್ರೇರಣೆ ನೀಡಬಲ್ಲರು ? ಎಷ್ಟು ಜನ ಪುರುಷರು 'ತ್ಯಾಗವೇ ಜೀವನದ ಉದ್ದೇಶ' ಎಂದು ತಮ್ಮ ಪತ್ನಿಗೆ ತಿಳಿಸಿಕೊಡುತ್ತಾರೆ ? ಭೋಗವನ್ನೇ ಸರ್ವಸ್ವವೆಂದು ಸಾರುವ ಪಾಶ್ಚಾತ್ಯ ಜಡವಾದವು ಭಾರತದ ಜನಜೀವನದ ಅಸ್ಥಿಮಾಂಸವನ್ನೂ ಆವರಿಸಿ ಅವರನ್ನು ಪಶುಸಮಾನರನ್ನಾಗಿ ಮಾಡುತ್ತಿದೆಯಲ್ಲ ! ಇದನ್ನು ಯಾಕೆ ಜನ ವಿಚಾರ ಮಾಡಿ ನೋಡುತ್ತಿಲ್ಲ ? ಶ್ರೀರಾಮಕೃಷ್ಣರು ಸಂನ್ಯಾಸೀ ಭಕ್ತರಿಗೆ ವರ್ತಮಾನ ವೈವಾಹಿಕ ಜೀವನದ ದೋಷವನ್ನು ಎತ್ತಿತೋರಿಸಿ ಹೇಳುತ್ತಿದ್ದರು : ''ಭೋಗವನ್ನೇ ಜೀವನದ ಪರಮೋದ್ದೇಶವಾಗಿ ಮಾಡಿಕೊಳ್ಳುವುದು ದೋಷವೆಂದಾದರೆ ಮದುವೆಯ ಸಂದರ್ಭದಲ್ಲಿ ಎರಡು ಹೂವು ಎಸೆದು ಬಿಟ್ಟರೆ ಆ ದೋಷ ನಿವಾರಣೆಯಾಗುವು ದೇನು ?'' ಹಿಂದೆಂದೂ ವೈವಾಹಿಕ ಜೀವನದಲ್ಲಿ ಇಂದ್ರಿಯ ತೃಪ್ತಿಯೇ ಇಷ್ಟೊಂದು ಪ್ರಧಾನವಾಗಿತ್ತೆಂದು ಅನಿಸುವುದಿಲ್ಲ. ವಿವಾಹದ ಹಿಂದೆ ಇಂದ್ರಿಯ ತೃಪ್ತಿಗಿಂತಲೂ

ಭಿನ್ನವಾದ ಬೇರೊಂದು ಮಹೋದ್ದೇಶವಿದೆ ಎಂಬುದನ್ನು ನಾವು ಮರೆತಿದ್ದೇವೆ. ದಿನ ದಿನವೂ ನಾವು ಪಶು ಸಮಾನರಾಗುತ್ತಿದ್ದೇವೆ. ಆಧುನಿಕ ನರನಾರಿಯರ ಈ ಪಶು ಪ್ರವೃತ್ತಿಯನ್ನು ನಿವಾರಿಸುವುದಕ್ಕಾಗಿಯೇ ಲೋಕಗುರುವಾದ ಶ್ರೀರಾಮಕೃಷ್ಣರು ವಿವಾಹವಾದುದು. ಅವರ ಜೀವನದ ಎಲ್ಲ ಕಾರ್ಯಗಳಂತೆಯೇ ವಿವಾಹವೂ ಕೂಡ ಲೋಕಕಲ್ಯಾಣಾರ್ಥವಾಗಿಯೇ.

18. ಶ್ರೀರಾಮಕೃಷ್ಣರು ಹೇಳುತ್ತಿದ್ದರು : "ಇಲ್ಲಿ (ನಾನು) ಮಾಡುವುದೆಲ್ಲ ನಿಮಗಾಗಿಯೆ. ನಾನು ಹದಿನಾರಾಣೆ ಮಾಡಿದರೆ ನೀವು ಒಂದಾಣೆಯಷ್ಟಾದರೂ ಮಾಡ ಬಹುದು. ನಾನು ನಿಂತುಕೊಂಡು ಮೂತ್ರ ಮಾಡಿದರೆ (ನಿಂತುಕೊಂಡು ಮೂತ್ರ ಮಾಡುವುದು ಹಿಂದೂಗಳಲ್ಲಿ ತುಂಬ ನಾಚಿಕೆಗೇಡಿನ ಕೆಲಸ) ನೀವೆಲ್ಲ ಮೂರ್ಖರು ಸುತ್ತಾಡಿಕೊಂಡು ಮಾಡುತ್ತೀರಿ." ಈ ಕಾರಣದಿಂದಾಗಿಯೇ ಶ್ರೀರಾಮಕೃಷ್ಣರು ವೈವಾಹಿಕ ಜೀವನದ ಜವಾಬ್ದಾರಿಗಳನ್ನು ಹೊತ್ತುಕೊಂಡು ಅದನ್ನು ಅತ್ಯುತ್ತಮ ರೀತಿ ಯಲ್ಲಿ ಪೂರ್ತಿಗೊಳಿಸಿ ಜನರ ಮುಂದೆ ಒಂದು ಉಜ್ವಲ ಆದರ್ಶವನ್ನು ಇಟ್ಟರು. ಶ್ರೀರಾಮಕೃಷ್ಣರು ವಿವಾಹ ಮಾಡಿಕೊಳ್ಳದೆ ಇದ್ದಿದ್ದರೆ ಗೃಹಸ್ಥರು ಹೇಳುತ್ತಿದ್ದರು ; 'ಮದುವೆಯಾಗಿಲ್ಲ, ಅದಕ್ಕಾಗಿಯೇ ಬ್ರಹ್ಮಚರ್ಯದ ಬಗ್ಗೆ ಇಷ್ಟೊಂದು ಮಾತನಾಡು ವುದು. ಪತ್ನಿಯೊಡನೆ ಎಂದೂ ವಾಸಿಸಿಯೇ ಇಲ್ಲ, ಆದ್ದರಿಂದಲೇ ನಮಗೆ ಉದ್ದುದ್ದ ಉಪದೇಶ ನೀಡುತ್ತಾರೆ.'

19. ಶ್ರೀರಾಮಕೃಷ್ಣರು ವಿವಾಹ ಮಾಡಿಕೊಂಡುದು ಮಾತ್ರವಲ್ಲ. ಶ್ರೀಜಗ ನ್ಮಾತೆಯ ದರ್ಶನದ ನಂತರ ದಿವ್ಯೋನ್ಮಾದಾವಸ್ಥೆಯು ಅವರಿಗೆ ಸಹಜವಾದ ಮೇಲೆ ನವಯೌವನದಿಂದ ತುಂಬಿದ್ದ ತಮ್ಮ ಪತ್ನಿಯನ್ನು ದಕ್ಷಿಣೇಶ್ವರದಲ್ಲಿ ತಮ್ಮ ಸಮೀಪ ದಲ್ಲಿಯೇ ಇರಿಸಿಕೊಂಡಿದ್ದರು. ಪತ್ನಿಯಾದ ಶ್ರೀಮಾತೆಯವರಲ್ಲಿ ಸಾಕ್ಷಾತ್ ಜಗನ್ಮಾತೆ ಯನ್ನೇ ಕಾಣುತ್ತ, ಅವರಿಗೆ ಷೋಡಶೀ ಪೂಜೆಯನ್ನು ಮಾಡಿ ತಮ್ಮ ಎಲ್ಲ ಸಾಧನೆಯ ಫಲವನ್ನೂ ಅವರಿಗೆ ಅರ್ಪಿಸಿದ್ದರು. ನಿರಂತರವಾಗಿ ಎಂಟು ತಿಂಗಳು ಒಂದೇ ಕಡೆ ಒಂದು ಕೋಣೆಯಲ್ಲಿ ಅವರೊಡನೆ ವಾಸಿಸಿದರು. ಅವರಿಗೆ ಯೋಗ್ಯವಾದ ತರಬೇತಿಯನ್ನು ಇತ್ತರು. ಅವರ ಮನಸ್ಸಿಗೆ ಸಮಾಧಾನವನ್ನುಂಟುಮಾಡಲು, ಅವರು ದಕ್ಷಿಣೇಶ್ವರದಲ್ಲಿ ಇಲ್ಲದಿದ್ದಾಗ, ಕಾಮಾರಪುಕುರಕ್ಕೂ ಜಯರಾಮಬಾಟಿಗೂ ಹೋಗಿ ಕೆಲವು ತಿಂಗಳು ಅವರೊಡನೆ ಇದ್ದು ಬರುತ್ತಿದ್ದರು. ದಕ್ಷಿಣೇಶ್ವರದಲ್ಲಿ ಶ್ರೀರಾಮ ಕೃಷ್ಣರು ಪತ್ನಿಯೊಡನೆ ವಾಸಿಸುತ್ತಿದ್ದಾಗ ಅವರು ಯಾವ ಸ್ಥಿತಿಯಲ್ಲಿ ಇದ್ದರು ಎಂಬು ದನ್ನು ಶ್ರೀಮಾತೆಯವರು ಹೇಳುತ್ತಾರೆ : "ಅವರು ಎಂಥ ದಿವ್ಯಭಾವದಲ್ಲಿ ಇರುತ್ತಿ ದ್ದರು ಎಂಬುದನ್ನು ಹೇಳಿ ತಿಳಿಸಿಕೊಡಲಾಗುವುದಿಲ್ಲ. ಕೆಲವೊಮ್ಮೆ ಭಾವಾವಸ್ಥೆಯಲ್ಲಿ ಎಷ್ಟೊಂದು ಮಾತನಾಡುತ್ತಿದ್ದರು. ಕೆಲವೊಮ್ಮೆ ನಗುತ್ತಿದ್ದರು, ಕೆಲವೊಮ್ಮೆ ಅಳುತ್ತಿ ದ್ದರು, ಕೆಲವೊಮ್ಮೆ ಸಮಾಧಿಮಗ್ನರಾಗಿ ನಿಶ್ಚಲವಾಗಿಬಿಡುತ್ತಿದ್ದರು. ಇದೇ ರೀತಿ ಇಡೀ ರಾತ್ರಿ ಕಳೆಯುತ್ತಿತ್ತು ! ಆ ಭಾವಾವೇಶವನ್ನು ಕಂಡು ನಾನು ಭಯದಿಂದ ನಡು ಗುತ್ತಿದ್ದೆ, ಯಾವಾಗ ರಾತ್ರಿ ಕಳೆಯುತ್ತಪ್ಪ ಎಂದು ಕಾಯುತ್ತಿದ್ದೆ. ನನಗಾಗ ಭಾವ

ಸಮಾಧಿಯ ವಿಷಯವೇ ಗೊತ್ತಿರಲಿಲ್ಲ. ಒಂದುದಿನ ಅವರು ಎಷ್ಟು ಹೊತ್ತಾದರೂ ಸಮಾಧಿಯಿಂದ ಕೆಳಗಿಳಿಯದಿರಲು ನಾನು ಭಯದಿಂದ ಅಳುತ್ತ ಹೃದಯನಿಗೆ ಹೇಳಿ ಕಳಿಸಿದೆ. ಅವನು ಬಂದು ಕಿವಿಯಲ್ಲಿ ದೇವರನಾಮವನ್ನು ಉಚ್ಚರಿಸಲು ಅವರಿಗೆ ಮತ್ತೆ ಪ್ರಜ್ಞೆ ಬಂತು. ಅನಂತರ ನನಗೆ ಕಷ್ಟವಾಗುವುದೆಂದು ತಿಳಿದು ಅವರೇ ಯಾವ ರೀತಿಯ ಭಾವಸಮಾಧಿಯುಂಟಾದಾಗ ಯಾವ ಮಂತ್ರವನ್ನು ಉಚ್ಚರಿಸಬೇಕೆಂಬುದನ್ನು ನನಗೆ ಕಲಿಸಿಕೊಟ್ಟರು. ಇದಾದನಂತರ ನನಗೆ ಅಷ್ಟೊಂದು ಭಯವಾಗುತ್ತಿರಲಿಲ್ಲ—ಆಯಾಯ ಮಂತ್ರವನ್ನು ಕಿವಿಯಲ್ಲಿ ಉಚ್ಚರಿಸಿದಾಗ ಅವರಿಗೆ ಪ್ರಜ್ಞೆಯುಂಟಾಗುತ್ತಿತ್ತು. ಹೀಗೆ ಅನೇಕ ದಿನಗಳು ಕಳೆದವು. ಯಾವಾಗ ಅವರಿಗೆ ಭಾವಸಮಾಧಿಯಾಗುತ್ತಿತ್ತೊ ಇದರ ನಿರೀಕ್ಷೆಯಲ್ಲಿಯೇ ನಾನು ನಿದ್ದೆಯಿಲ್ಲದೆ ರಾತ್ರಿ ಕಳೆಯಬೇಕಾಯಿತು. ಇದು ಅವರಿಗೆ ಗೊತ್ತಾದ ಮೇಲೆ ನಹಬತ್ತಿನಲ್ಲಿ ನಾನು ಮಲಗುವಂತೆ ಹೇಳಿದರು.''

20. ದೀಪಕ್ಕೆ ಬತ್ತಿಹಾಕುವುದು, ಮನೆಮಂದಿಯ ಸ್ವಭಾವವನ್ನು ಹೇಗೆ ಅರ್ಥಮಾಡಿಕೊಳ್ಳುವುದು, ಯಾರೊಡನೆ ಹೇಗೆ ವ್ಯವಹರಿಸಬೇಕು ಇತ್ಯಾದಿ ಸಾಮಾನ್ಯ ಸಾಂಸಾರಿಕ ವಿಷಯಗಳಿಂದ ಹಿಡಿದು ಭಜನೆ, ಸಂಕೀರ್ತನೆ, ಧ್ಯಾನ, ಸಮಾಧಿ, ಬ್ರಹ್ಮಜ್ಞಾನ ಮುಂತಾದ ಆಧ್ಯಾತ್ಮಿಕ ವಿಷಯಗಳವರೆಗೆ ಎಲ್ಲವನ್ನೂ ಆಗ ಶ್ರೀರಾಮಕೃಷ್ಣರು ಶ್ರೀಮಾತೆಯವರಿಗೆ ಕಲಿಸಿಕೊಟ್ಟರು. ಗೃಹಸ್ಥರಲ್ಲಿ, ಎಷ್ಟು ಜನ ಈ ರೀತಿ ತಮ್ಮ ಪತ್ನಿಯರಿಗೆ ಶಿಕ್ಷಣ ನೀಡುತ್ತಾರೆ ? ಯಾವುದೊ ಕಾರಣದಿಂದಾಗಿ ತುಚ್ಛ ಶಾರೀರಿಕ ಸಂಬಂಧವು ಹೊರಟು ಹೋದರೆ ಎಷ್ಟು ಜನರು ತಮ್ಮ ಪತ್ನಿಯನ್ನು ಈ ರೀತಿ ಗೌರವಿಸಿ ನಿಃಸ್ವಾರ್ಥ ಪ್ರೀತಿಯಿಂದ ನೋಡಿಕೊಳ್ಳಬಲ್ಲರು? ಆದ್ದರಿಂದ ಯುಗಾವತಾರರಾದ ಶ್ರೀರಾಮಕೃಷ್ಣರು ವಿವಾಹ ಮಾಡಿಕೊಂಡದ್ದು ಗೃಹಸ್ಥರಿಗಾಗಿಯೇ. ಸ್ವಲ್ಪವೂ ಶರೀರ ಸಂಬಂಧವಿಲ್ಲದೆ ಪತ್ನಿಯನ್ನು ಪ್ರೀತಿಸಿ ಒಂದು ಉಜ್ವಲ ಆದರ್ಶವನ್ನು ನಮ್ಮ ಮುಂದೆ ಇಟ್ಟಿರುವರು. ವಿವಾಹದಿಂದ ಇಂದ್ರಿಯ ತೃಪ್ತಿಗಿಂತಲೂ ಭಿನ್ನವಾದ ಉಚ್ಚ ಉದ್ದೇಶವಿದೆ ಎಂಬುದನ್ನು ತೋರಿಸುವುದಕ್ಕಾಗಿ ಅವರು ವಿವಾಹವಾದುದು. ಉಚ್ಚ ಆದರ್ಶವನ್ನು ಇಟ್ಟುಕೊಂಡು ಪತಿ-ಪತ್ನಿಯರು ಸಾಧ್ಯವಾದಷ್ಟು ಬ್ರಹ್ಮಚರ್ಯವನ್ನು ಪಾಲಿಸುತ್ತ ಜೀವನ ನಡೆಸಿದರೆ ಅವರೂ ಧನ್ಯರಾಗಬಹುದು, ಮೇಧಾವಿಗಳೂ ತೇಜಸ್ವಿಗಳೂ ಆದ ಮಕ್ಕಳನ್ನು ಪಡೆದು ವರ್ತಮಾನ ಭಾರತವನ್ನು ಈ ಹೀನಸ್ಥಿತಿಯಿಂದ ಮುಕ್ತಗೊಳಿಸಬಹುದು—ಇದೇ ಅವರ ವಿವಾಹದ ಹಿಂದೆ ಇದ್ದ ಉದ್ದೇಶ. ಹಿಂದಿನ ಯುಗಗಳಲ್ಲಿ ಈ ಆದರ್ಶವನ್ನು ತೋರಿಸುವ ಅವಶ್ಯಕತೆ ಇರಲಿಲ್ಲ—ಏಕೆಂದರೆ ಜನರು ಆಗ ಸಾಮಾನ್ಯವಾಗಿ ಈ ಆದರ್ಶವನ್ನು ಅನುಸರಿಸುತ್ತಿದ್ದರು. ಆದ್ದರಿಂದ ರಾಮ, ಕೃಷ್ಣ, ಬುದ್ಧ, ಕ್ರಿಸ್ತ, ಚೈತನ್ಯ ಮುಂತಾದವರಂತಲ್ಲದೆ ಶ್ರೀರಾಮಕೃಷ್ಣರು ಈ ವಿಷಯದಲ್ಲಿ ಒಂದು ದೃಷ್ಟಾಂತಪ್ರಾಯವಾಗಿ ನಮ್ಮ ಮುಂದೆ ನಿಂತಿರುವರು. ಆ ಜೀವನ ಕಠೋರ ತಪಸ್ಸನ್ನು ಮಾಡಿ ಹಿಂದೆಂದೂ ಇರದಿದ್ದ ಒಂದು ಪವಿತ್ರ ಅಚ್ಚನ್ನು ತಯಾರಿಸಿಟ್ಟಿರುವರು. ಶ್ರೀರಾಮಕೃಷ್ಣರು ಹೇಳುವಂತೆ, "ಈಗ ನಿಮ್ಮ ಜೀವನವನ್ನು

ಈ ಆದರ್ಶ ಅಚ್ಚಿನಲ್ಲಿ ಹಾಕಿ ಅದರಂತೆ ರೂಪಿಸಿಕೊಳ್ಳಿ.''

21. ಆದರೆ ಗೃಹಸ್ಥರು 'ಆದರೆ__' ಎಂದು ರಾಗ ಎಳೆಯಬಹುದು. ನಿಮ್ಮ ತೊಂದರೆ ಏನೆಂಬುದು ನಮಗೆ ಗೊತ್ತು. ಸ್ವಾಮಿ ವಿವೇಕಾನಂದರು ನಮ್ಮ ಸಾಧನೆ-ಭಜನೆಯ ಸಂಬಂಧವಾಗಿ ಏನು ಹೇಳುತ್ತಿದ್ದರೋ ಅದನ್ನೇ ಇಲ್ಲಿ ಉತ್ತರವಾಗಿ ಹೇಳುತ್ತೇವೆ : ''ನೀವು ಪ್ರತಿಯೊಬ್ಬರೂ ರಾಮಕೃಷ್ಣರಾಗಬೇಕೆಂದು ಬಯಸು ವಿರಲ್ಲವೆ ? ಅದು ಸಾಧ್ಯವಿಲ್ಲ – 'ಒಂಬತ್ತು ಮಣ ಎಣ್ಣೆಯೂ ಉರಿಯುವುದಿಲ್ಲ, ರಾಧೆಯೂ ನರ್ತಿಸುವುದಿಲ್ಲ.'* ಜಗತ್ತಿನಲ್ಲಿ ರಾಮಕೃಷ್ಣ ಪರಮಹಂಸರು ಒಬ್ಬರೇ – ಒಂದು ಕಾಡಿನಲ್ಲಿ ಒಂದೇ ಸಿಂಹ ಇರುತ್ತದೆ.'' ಗೃಹಸ್ಥರ 'ಆದರೆ__' ಎಂಬ ಪ್ರಶ್ನೆಗೆ ನಮ್ಮ ಉತ್ತರವೂ ಇದೆ–ಶ್ರೀರಾಮಕೃಷ್ಣರು ಪತ್ನಿಯೊಡನೆ ವಾಸಿಸಿಯೂ ಅಖಂಡ ಬ್ರಹ್ಮಚರ್ಯವನ್ನು ಪಾಲಿಸಿದರು. ಅದು ಎಲ್ಲರಿಗೂ ಸಾಧ್ಯವಾಗದೆಂದು ಎಂಬುದು ಅವರಿಗೆ ಗೊತ್ತಿತ್ತು. ಆದರೂ ಅವರು ಆ ರೀತಿ ಮಾಡಿದುದು ಇತರರು ಅದರಲ್ಲಿ ಒಂದಂಶವನ್ನಾದರೂ ಅನುಷ್ಠಾನ ಮಾಡಲಿ ಎಂದು. ಆದರೆ ಸಾಧ್ಯವಾದಷ್ಟು ಪ್ರಯತ್ನ ಪೂರ್ವಕವಾಗಿ ಪತ್ನಿಯನ್ನು ಜಗನ್ಮಾತೆಯ ಸ್ವರೂಪವೆಂದು ತಿಳಿಯದಿದ್ದರೆ, ಆಕೆಯನ್ನು ನಿಃಸ್ವಾರ್ಥ ರೀತಿಯಿಂದ ಪ್ರೀತಿಸದಿದ್ದರೆ ಮತ್ತು ಎಲ್ಲ ಸ್ತ್ರೀಯರನ್ನೂ ಭೋಗವಸ್ತುವೆಂದು ಕಾಣದೆ ಜಗನ್ಮಾತೆಯ ಆವಿರ್ಭಾವವೆಂದು ತಿಳಿಯದಿದ್ದರೆ ತುಚ್ಛ ಇಂದ್ರಿಯಲೋಲುಪತೆಯಿಂದ ಮುಕ್ತರಾಗಲು ಸಾಧ್ಯವಿಲ್ಲ ಎಂಬುದನ್ನು ಎಲ್ಲ ಗೃಹಸ್ಥರೂ ಗಮನದಲ್ಲಿಡಬೇಕು.

22. ಇಲ್ಲಿ ಇನ್ನೊಂದು ಪ್ರಶ್ನೆಗೆ ಉತ್ತರಿಸಿ ಶ್ರೀರಾಮಕೃಷ್ಣರ ಗುರುಭಾವದ ಅಭೂತಪೂರ್ವ ಅಭಿವ್ಯಕ್ತಿಯ ವಿಷಯವನ್ನು ಸಮಾಪ್ತಿಗೊಳಿಸುತ್ತೇವೆ. ಕೆಲವರು ಹೇಳಬಹುದು : ಶ್ರೀರಾಮಕೃಷ್ಣರು ಒಂದು ಮಗು ಆದನಂತರ ಪತ್ನಿಯ ಶಾರೀರಿಕ ಸಂಬಂಧವನ್ನು ತ್ಯಜಿಸಿದ್ದರೆ ಒಳ್ಳೆಯದಿತ್ತು ; ಅದರಿಂದ ಭಗವಂತನ ಸೃಷ್ಟಿಕಾರ್ಯ ದಲ್ಲಿಯೂ ಭಾಗವಹಿಸಿದಂತಾಗುತ್ತಿತ್ತು, ಹಾಗೂ ಶಾಸ್ತ್ರವಾಕ್ಯಕ್ಕೂ ಮಾನ್ಯತೆ ನೀಡಿ ದಂತಾಗುತ್ತಿತ್ತು. ಏಕೆಂದರೆ ಪತ್ನಿಯ ಮೂಲಕ ಕೊನೆಯ ಪಕ್ಷ ಒಂದು ಮಗುವನ್ನಾ ದರೂ ಪಡೆಯಬೇಕೆಂದು ಶಾಸ್ತ್ರ ಹೇಳುತ್ತದೆ. ಇದರಿಂದ ಮನುಷ್ಯನು ಪಿತೃಋಣ ದಿಂದ ಮುಕ್ತನಾಗುತ್ತಾನೆ.

ಇದಕ್ಕೆ ನಮ್ಮ ಉತ್ತರ : ಮೊದಲನೆಯದಾಗಿ, ಸೃಷ್ಟಿಯು ನಾವು ಭಾವಿಸು ವಷ್ಟು ಸಾಮಾನ್ಯವೆ ? ಸೃಷ್ಟಿಯ ನಿಯಮವೇ ವಿಚಿತ್ರ ಬಗೆಯದು. ಇಂದು ಈ ಕ್ಷಣದಿಂದ ನಾವೆಲ್ಲರೂ ಎಲ್ಲ ವಿಷಯದಲ್ಲಿಯೂ ಒಂದೇ ರೀತಿ ಚಿಂತಿಸಲು ಮತ್ತು ಕಾರ್ಯಾನುಷ್ಠಾನ ಮಾಡಲು ಪ್ರಾರಂಭಿಸಿದರೆ ಆಗ ಸೃಷ್ಟಿಕಾರ್ಯ ನಿಂತುಹೋಗಲು

---

* ಆ ಹೆಸರಿನ ಯುವತಿಯೊಬ್ಬಳು, ಒಂಬತ್ತು ಮಣ ಎಣ್ಣೆಯ ದೀಪದಿಂದ ವೇದಿಕೆ ಯನ್ನು ಬೆಳಗಿಸಿದರೆ ಮಾತ್ರ ನರ್ತಿಸುತ್ತೇನೆ ಎಂದು ಶಪಥ ಮಾಡಿದಳಂತೆ. ಅಂದರೆ ಅದು ಸಾಧ್ಯವಾಗದ ಮಾತು ಎಂದು.

ಹೆಚ್ಚು ಸಮಯ ಹಿಡಿಯುವುದಿಲ್ಲ. ಭಗವಂತನ ಸೃಷ್ಟಿಕಾರ್ಯದಲ್ಲಿ ಭಾಗವಹಿಸಲು ನಿಮಗೆ ಸೃಷ್ಟಿಯ ನಿಯಮ ತಿಳಿದಿದೆಯೆ ? ಸೃಷ್ಟಿಯನ್ನು ಉಳಿಸಿಕೊಳ್ಳುವುದ ಕ್ಕಾಗಿಯೇ ನೀವು ಬ್ರಹ್ಮಚರ್ಯವನ್ನು ಬಿಡಲು ಹೊರಟಿರುವಿರೇನು ? ಎದೆಯ ಮೇಲೆ ಕೈ ಇಟ್ಟು ಹೇಳಿ ! ಶ್ರೀರಾಮಕೃಷ್ಣರು ಹೇಳಿದಂತೆ 'ಭಾವದ ಮನೆಯಲ್ಲಿ ಕಳ್ಳತನವಾಗದಿರಲಿ !' ಆಗಲಿ, ನೀವು ಸೃಷ್ಟಿಯನ್ನು ಉಳಿಸುವ ನಿಯಮವನ್ನು ಪಾಲಿಸುತ್ತಿದ್ದೀರಿ ಎಂದು ಇಟ್ಟುಕೊಳ್ಳೋಣ. ಆದರೆ ಬೇರೆಯವರು ಈ ರೀತಿ ಮಾಡಬೇಕೆಂದು ಹೇಳುವ ಅಧಿಕಾರ ನಿಮಗಿದೆಯೆ ? ಬ್ರಹ್ಮಚರ್ಯ ಅಥವಾ ಸಾಮಾನ್ಯ ವಿಷಯದಲ್ಲಿ ಶಕ್ತಿಕ್ಷಯವಾಗುವುದನ್ನು ನಿಲ್ಲಿಸಿ ಅದನ್ನು ಉನ್ನತ ಆದರ್ಶ ದೆಡೆಗೆ ಹರಿಸುವುದೂ ಸೃಷ್ಟಿಯ ನಿಯಮಗಳಲ್ಲಿ ಒಂದು. ಎಲ್ಲರೂ ತಮ್ಮ ಶಕ್ತಿ ಯನ್ನು ಕೆಳಮಟ್ಟದಲ್ಲಿಯೇ ಹರಿಸಿದರೆ ಆಧ್ಯಾತ್ಮಿಕ ಶಕ್ತಿವಿಕಾಸವನ್ನು ತೋರಿಸುವವ ರಾರು ? ಆಗ ಆಧ್ಯಾತ್ಮಿಕ ವಿಕಾಸವೇ ಇಲ್ಲದಂತಾಗುತ್ತದೆ.

ಎರಡನೆಯದಾಗಿ : ಶಾಸ್ತ್ರದಲ್ಲಿ ನಮ್ಮ ಮನಸ್ಸಿಗೆ ಮೆಚ್ಚಿಕೆಯಾಗುವ ಮಾತು ಗಳನ್ನೇ ಆರಿಸಿಕೊಳ್ಳುವುದು ನಮ್ಮ ಸ್ವಭಾವ. ಸಂತಾನೋತ್ಪಾದನೆಯ ವಿಷಯವೂ ಅದೇ ರೀತಿ ಮೆಚ್ಚಿಕೆಯಾದುದು. ಶಾಸ್ತ್ರದಲ್ಲಿ ಈ ಮಾತೂ ಇದೆ : "ಯದಹರೇವ ವಿರಜೇತ್ ತದಹರೇವ ಪ್ರವ್ರಜೇತ್"– ಯಾವಾಗ ಭಗವಂತನಲ್ಲಿ ಅನುರಾಗವುಂಟಾಗಿ ಸಂಸಾರದಲ್ಲಿ ವೈರಾಗ್ಯ ಉದಿಸುವುದೊ ಆ ಕೂಡಲೇ ಸಂಸಾರವನ್ನು ತ್ಯಜಿಸಬೇಕು. ಆದ್ದರಿಂದ ಶ್ರೀರಾಮಕೃಷ್ಣರು ನೀವು ಹೇಳಿದಂತೆ ಆಚರಿಸಿದ್ದರೆ ಅವರು ಈ ಮೇಲಿನ ಶಾಸ್ತ್ರವಾಕ್ಯವನ್ನು ಮೀರಿದಂತೆ ಆಗುತ್ತಿರಲಿಲ್ಲವೆ ? ಪಿತೃಋಣವನ್ನು ತೀರಿಸುವ ವಿಷಯದಲ್ಲಿಯೂ ಇದೇ ಮಾತನ್ನು ಹೇಳಬಹುದು. ಶಾಸ್ತ್ರ ಹೇಳುತ್ತದೆ : ಯಥಾರ್ಥ ಸಂನ್ಯಾಸಿಯು ತನ್ನ ವಂಶದ ಹಿಂದಿನ ಏಳು ತಲೆ ಮಾರಿನವರನ್ನೂ ಮತ್ತು ಮುಂದಿನ ಏಳು ತಲೆಮಾರಿನವರನ್ನೂ ತನ್ನ ಪುಣ್ಯಬಲದಿಂದ ಉದ್ಧಾರಮಾಡುತ್ತಾನೆ. ಆದ್ದರಿಂದ ಶ್ರೀರಾಮಕೃಷ್ಣರು ಪಿತೃಋಣವನ್ನು ತೀರಿಸಲಿಲ್ಲವೆಂದು ನಾವು ಚಿಂತಿಸಬೇಕಾಗಿಲ್ಲ.

23. ಆದ್ದರಿಂದ ಶ್ರೀರಾಮಕೃಷ್ಣರು ಮದುವೆಯಾದುದು ನಮಗೆ ಬೋಧಿಸ ಲಾಗಿಯೇ ಎಂದು ಇದೆಲ್ಲದರಿಂದ ತಿಳಿದುಬರುತ್ತದೆ. ವಿವಾಹಿತ ಜೀವನದ ಒಂದು ಉಚ್ಚ ಮತ್ತು ಪವಿತ್ರ ಆದರ್ಶವನ್ನು ಅವರು ನಮ್ಮ ಮುಂದೆ ಇಟ್ಟಿರುವರು, ಶ್ರೀಮಾತೆಯವರ ಜೀವನವಿಡೀ ಶ್ರೀರಾಮಕೃಷ್ಣರನ್ನು ಜಗನ್ಮಾತೆಯೆಂದು ಪೂಜಿಸಿದು ದನ್ನು ನೋಡಿದಾಗ ನಮಗೆ ಈ ಆದರ್ಶದ ಕಿಂಚಿತ್ ಪರಿಚಯವಾಗುತ್ತದೆ. ಮನುಷ್ಯನು ತನ್ನ ದುರ್ಬಲತೆಯನ್ನು ಇತರರಿಗೆ ತೋರಿಸದಿರಬಹುದು, ಆದರೆ ತನ್ನ ಪತ್ನಿಯ ಮುಂದೆ ಅದನ್ನು ಬಚ್ಚಿಡಲಾಗುವುದಿಲ್ಲ. ಇದೇ ಸಂಸಾರದ ನಿಯಮ. ಶ್ರೀರಾಮ ಕೃಷ್ಣರು ಈ ಸಂಬಂಧವಾಗಿ ನಮಗೆ ಹೇಳುತ್ತಿದ್ದರು : "ಎಲ್ಲ ದೊಡ್ಡ ದೊಡ್ಡ ಮನುಷ್ಯರೂ - ದೊಡ್ಡ ಶ್ರೀಮಂತರು, ನ್ಯಾಯಾಧೀಶರು, ಎಷ್ಟೇ ಅವರು ದೊಡ್ಡ ದೊಡ್ಡ ಮಾತನಾಡಬಹುದು, ಎಲ್ಲರೂ ಎರೆಹುಳದಂತೆ, ಹೆಂಡತಿಯ ದಾಸರು.

ಒಳಗಿಂದ ಆಜ್ಞೆ ಬಂದರೆ ಸಾಕು, ಅದು ಎಷ್ಟೇ ನ್ಯಾಯಬಾಹಿರವಾಗಿರಬಹುದು, ಅವರು ಅದನ್ನು ಮೀರಿ ಹೋಗಲಾರರು.'' ಆದ್ದರಿಂದ ಯಾರ ಪತ್ನಿಯಾದರೂ ತನ್ನ ಪತಿಯ ಉಚ್ಚ ಜೀವನವನ್ನು ನೋಡಿ ಅವರನ್ನು ಭಕ್ತಿಯಿಂದ ಭಗವದ್‌ಭಾವದಲ್ಲಿ ಜೀವನವಿಡೀ ಪೂಜಿಸಿದರೆ ಅದರಿಂದ ನಾವು ನಿಶ್ಚಯವಾಗಿ ತಿಳಿಯಬಹುದು, ಆ ವ್ಯಕ್ತಿಯು ಹೊರಗೆ ಯಾವ ಆದರ್ಶವನ್ನು ತೋರಿಸಿದನೊ ಅದರಲ್ಲಿ ಸ್ವಲ್ಪವೂ ಕಳಂಕ ವಿಲ್ಲ ಎಂದು. ಇದನ್ನು ಶ್ರೀರಾಮಕೃಷ್ಣರ ವಿಷಯದಲ್ಲಿ ಎಷ್ಟು ದೃಢವಾಗಿ ಹೇಳ ಬಹುದೋ ಅಷ್ಟು ದೃಢವಾಗಿ ಇತರರಾರ ಬಗ್ಗೆಯೂ ಹೇಳಲಾಗುವುದಿಲ್ಲ. ತಮ್ಮ ಪತ್ನಿ ಯೊಡನೆ ಶ್ರೀರಾಮಕೃಷ್ಣರ ಪವಿತ್ರ ಪ್ರೇಮಲೀಲೆಯ ವಿಷಯವಾಗಿ ಬಹಳಷ್ಟು ಹೇಳುವುದಿದ್ದರೂ ಇಲ್ಲಿ ಅದಕ್ಕೆ ಸ್ಥಾನವಿಲ್ಲ. ಆದ್ದರಿಂದ ಇಲ್ಲಿ ಇದರ ಮೂಲಕ ಶ್ರೀರಾಮಕೃಷ್ಣರ ಗುರುಭಾವ ಹೇಗೆ ವ್ಯಕ್ತವಾಯಿತು ಎಂಬುದಷ್ಟನ್ನೇ ಹೇಳಿ ವಿಶ್ರಮಿಸುತ್ತೇವೆ.

ಐದನೆಯ ಅಧ್ಯಾಯ

ಯೌವನದಲ್ಲಿ ಗುರುಭಾವ

1. ಗುರು ಮತ್ತು ನೇತಾರನಾಗುವುದು ಮಾನವ ಇಚ್ಛೆಯಿಂದಲ್ಲ 2. ಜಗನ್ಮೂಲವಾದ ವಿಶ್ವಅಹಂ ಗುರುವಿನಲ್ಲಿ ಸುಲಭವಾಗಿ ಆವಿರ್ಭವಿಸುತ್ತದೆ 3. ಯಾವಾಗ ಅದು ಶ್ರೀರಾಮಕೃಷ್ಣರಲ್ಲಿ ಸಂಪೂರ್ಣ ಅಭಿವ್ಯಕ್ತಿಗೊಂಡು ಸ್ವಾಭಾವಿಕವಾಯಿತು ? 4. ಸಾಧನಕಾಲದಲ್ಲಿ ಗುರುಭಾವ-ರಾಸಮಣಿ ಮತ್ತು ಮಥುರನೊಡನೆ ಅವರ ಸಂಬಂಧ 5. ಶ್ರೀರಾಮಕೃಷ್ಣರ ಅಪೂರ್ವ ಸ್ವಭಾವ 6. ಶ್ರೀಮಂತರಾದ ರಾಸಮಣಿ ಮತ್ತು ಮಥುರರು ಶ್ರೀರಾಮಕೃಷ್ಣರನ್ನು ಅಷ್ಟೊಂದು ಗೌರವಿಸಿದುದು ತುಂಬ ಆಶ್ಚರ್ಯದ ವಿಷಯ 7. ವಿವಾಹದ ನಂತರ ಶ್ರೀರಾಮಕೃಷ್ಣರ ಸ್ಥಿತಿ 8. ಅವರ ಬಗ್ಗೆ ದೇವಸ್ಥಾನದ ಅಧಿಕಾರಿಗಳ ಅಭಿಪ್ರಾಯ, ಅವರ ಬಗ್ಗೆ ಇತರರ ಅಭಿಪ್ರಾಯ 9. ಗುರುಭಾವದಲ್ಲಿ ರಾಸಮಣಿಗೆ ಹೊಡೆದುದು 10. ಅದರ ಪರಿಣಾಮ 11. ಶ್ರೀಚೈತನ್ಯ, ಕ್ರಿಸ್ತ ಮತ್ತು ಕೃಷ್ಣ-ಇವರ ಜೀವನದಲ್ಲಿಯೂ ಇಂಥದೇ ಘಟನೆಗಳು 12. ಗುರು-ಭಾವದ ಪ್ರೇರಣೆಯಿಂದ ಶ್ರೀರಾಮಕೃಷ್ಣರ ಅದ್ಭುತ ಶಿಕ್ಷಣಕ್ರಮ, ರಾಸಮಣಿಯ ಶ್ರೇಷ್ಠತೆ 13. ಭಗವಂತನಲ್ಲಿ ತನ್ಮಯವಾದ ಮನಸ್ಸಿನ ಲಕ್ಷಣಗಳೇನು ? 14. ಲೋಕಗುರುಗಳ, ವಿಶೇಷವಾಗಿ ಶ್ರೀರಾಮಕೃಷ್ಣರ ಆಚರಣೆಗಳನ್ನು ಅರಿಯುವುದು ಅತ್ಯಂತ ಕಠಿನ

ನಾಹಂ ಪ್ರಕಾಶಃ ಸರ್ವಸ್ಯ ಯೋಗಮಾಯಾಸಮಾವೃತಃ ।
ಮೂಢೋಽಯಂ ನಾಭಿಜಾನಾತಿ ಲೋಕೋ ಮಾಮಜಮವ್ಯಯಮ್ ॥

ಭಗವದ್ಗೀತೆ 7. 25

''ಯೋಗಮಾಯೆಯಿಂದ ಆವರಿಸಿಕೊಂಡಿರುವ ನಾನು ಎಲ್ಲರಿಗೂ ಕಾಣುವುದಿಲ್ಲ; ಮೂಢರಾದ ಜನರು ಹುಟ್ಟಿಲ್ಲದೆ ಅವ್ಯಯವಾದ ನನ್ನನ್ನು ತಿಳಿಯಲಾರರು.''

1. ಶ್ರೀರಾಮಕೃಷ್ಣರು ದಕ್ಷಿಣೇಶ್ವರಕ್ಕೆ ಬಂದು ಜಗನ್ಮಾತೆಯ ಪೂಜೆಯನ್ನು ಸ್ವೀಕರಿಸಿದನಂತರ ಅವರಲ್ಲಿ ಗುರುಭಾವವು ವಿಶೇಷ ರೀತಿಯಲ್ಲಿ ಅಭಿವ್ಯಕ್ತವಾಗ ತೊಡಗಿತು. ಅವರ ಜೀವನದಲ್ಲಿ ಅದು ಸಾಧನೆಯ ಕಾಲ–ಭಗವತ್ ಪ್ರೇಮದಿಂದ ಉನ್ಮತ್ತರಾಗಿದ್ದರು. ಆದರೇನಂತೆ ? ಯಾರು ಗುರುವೊ ಅವರು ಯಾವಾಗಲೂ

ಗುರುವೆ, ಯಾರೂ ಮುಂದಾಳುವೊ ಅವನು ಬಾಲ್ಯದಿಂದಲೂ ಮುಂದಾಳುವೇ. ಜನರು ಒಂದು ಕಮಿಟಿ ಮಾಡಿ ತಮ್ಮ ತಮ್ಮಲ್ಲೇ ಚರ್ಚಿಸಿ ಒಬ್ಬ ಗುರುವನ್ನೊ ಅಥವಾ ನೇತಾರನನ್ನೊ ಆರಿಸಿ ಗದ್ದಿಗೆಯ ಮೇಲೆ ಕೂರಿಸುವುದಿಲ್ಲ. ಅವನು ಹಾಗೇ ಬಂದು ಜನರ ಮುಂದೆ ನಿಂತರೆ ಸಾಕು ಜನರ ಮನಸ್ಸು ಇದ್ದಕ್ಕಿದ್ದಂತೆಯೇ ಅವನ ಕಡೆ ಸೆಳೆಯಲ್ಪಡುತ್ತದೆ, ಇದ್ದಕ್ಕಿದ್ದಂತೆಯೇ ತಲೆಬಾಗಿ ಅವನ ಉಪದೇಶವನ್ನು ಕೇಳುತ್ತಾರೆ ಅಥವಾ ಅವನ ಆಜ್ಞೆಯನ್ನು ಪಾಲಿಸುತ್ತಾರೆ. ಇದೇ ನಿಯಮ, ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು : ‘‘ಮನುಷ್ಯ ಇನ್ನೊಬ್ಬ ಮನುಷ್ಯನನ್ನು ಮುಂದಾಳುವನ್ನಾಗಿಯೊ ಗುರುವನ್ನಾಗಿಯೊ ಮಾಡುವುದಲ್ಲ, ಗುರು ಅಥವಾ ನೇತಾರನು ಹುಟ್ಟುವಾಗಲೇ ಆ ಅಧಿಕಾರವನ್ನು ಪಡೆದು ಹುಟ್ಟಿರುತ್ತಾರೆ. (A leader is always born and never created).’’ ಆದ್ದರಿಂದಲೇ ಇತರ ಸಾಧಾರಣ ವ್ಯಕ್ತಿಗಳು ಯಾವ ಕೆಲಸವನ್ನು ಮಾಡಿದರೆ ಸಮಾಜವು ಪ್ರತಿಭಟಿಸುವುದೊ ಲೋಕಗುರು ಅದನ್ನು ಮಾಡಿದರೆ ಜನರು ತಲೆಬಾಗಿ ಅದನ್ನು ಸ್ವೀಕರಿಸುತ್ತಾರೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನೂ ಇದನ್ನೇ ಹೇಳುತ್ತಾನೆ ಸ ಯತ್ ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ !–‘‘ಅವನು ತನ್ನ ಕೃತಿಯ ಮೂಲಕ ಯಾವುದನ್ನು ಪ್ರಮಾಣೀಕರಿಸುವನೊ ಜನರು ಅದನ್ನು ಅನುಸರಿಸುತ್ತಾರೆ.’’ ಇದು ಆಶ್ಚರ್ಯವೆನಿಸಬಹುದು. ಆದರೆ ಯಾವಾಗಲೂ ಹೀಗೆಯೇ ನಡೆಯಿತು ಮತ್ತು ಮುಂದೆಯೂ ಹೀಗೆಯೇ ನಡೆಯುತ್ತದೆ. ಶ್ರೀಕೃಷ್ಣನು ಹೇಳಿದ : ‘ಇಂದಿನಿಂದ ಇಂದ್ರನ ಪೂಜೆಯನ್ನು ನಿಲ್ಲಿಸಿ, ಇನ್ನು ಮುಂದೆ ಗೋವರ್ಧನನ ಪೂಜೆ ನಡೆಯಲಿ.’ ಜನರು ಹಾಗೆಯೇ ಮಾಡಿದರು. ‘ಇಂದಿನಿಂದ ಪಶುಹಿಂಸೆ ನಡೆಯದಿರಲಿ’–ಎಂದು ಬುದ್ಧ ಹೇಳಿದನು, ಕೂಡಲೇ, ಯಜ್ಞಾರ್ಥೇ ಪಶವಃ ಸೃಷ್ಟಾಃ!–ಪ್ರಾಣಿಗಳು ಯಜ್ಞಕ್ಕಾಗಿಯೇ ಸೃಷ್ಟಿಸಲ್ಪಟ್ಟಿವೆ–ಎಂಬ ನಿಯಮವನ್ನು ಸಮಾಜವು ತಿರಸ್ಕರಿಸಿತು. ಯೇಸುವು ಮಹಾಪವಿತ್ರವಾದ ಉಪವಾಸದ ದಿನದಂದು ತನ್ನ ಶಿಷ್ಯರಿಗೆ ಊಟ ಮಾಡಲು ಅನುಮತಿಯಿತ್ತನು. ಅದೇ ನಿಯಮವಾಗಿ ಹೋಯಿತು. ಮಹಮ್ಮದನು ಅನೇಕ ಪತ್ನಿಯರನ್ನು ವಿವಾಹವಾದನು–ಆದರೂ ಜನರು ಆತನನ್ನು ಶ್ರೇಷ್ಠ ಧಾರ್ಮಿಕ ಮುಂದಾಳುವೆಂದು ಗೌರವಿಸಿ ಅನುಸರಿಸಿದರು, ಎಲ್ಲ ವಿಚಾರದಲ್ಲಿಯೂ ಹೀಗೆಯೇ. ಅವರು ಏನು ಹೇಳುತ್ತಾರೊ, ಮಾಡುತ್ತಾರೊ ಅದೇ ಆದರ್ಶವಾಗುತ್ತದೆ.

2. ಹೀಗೇಕೆ ಆಗುತ್ತದೆ ಎಂಬುದನ್ನು ನಾವು ಹಿಂದೆ ಹೇಳಿರುವೆವು. ಲೋಕ–ಗುರುಗಳಲ್ಲಿ ಕ್ಷುದ್ರ ಅಹಂತತ್ತ್ವವು ಸಂಪೂರ್ಣ ನಾಶವಾಗಿದ್ದು ಅದರ ಸ್ಥಾನದಲ್ಲಿ ವಿಶ್ವ ಅಹಂತತ್ವವು ಮನೆಮಾಡಿಕೊಂಡಿರುತ್ತದೆ. ಬಹುಜನರ ಹಿತವನ್ನು ಎಣಿಸುವುದೇ ಈ ಅಹಂತತ್ತ್ವದ ಸ್ವಭಾವ. ಹೂವು ಅರಳಿದಾಗ ಭ್ರಮರಗಳು ತಾವಾಗಿಯೇ ಮಧುವನ್ನು ಅರಸಿಕೊಂಡು ಬರುವಂತೆ ಈ ವಿಶ್ವ ಅಹಂ ಯಾರಲ್ಲಿ ವಿಕಾಸಗೊಂಡಿದೆಯೊ ಅವರನ್ನು ಜನರು ತಾವಾಗಿಯೇ ಶಾಂತಿಗಾಗಿ ಅರಸಿಕೊಂಡು ಬರುತ್ತಾರೆ. ಸಾಧಾರಣ ವ್ಯಕ್ತಿಗಳಲ್ಲಿ ಈ ವಿಶ್ವ ಅಹಂ ಬಹಳ ಕಷ್ಟದಿಂದ ಎಲ್ಲೊ ಅಲ್ಪ ಸ್ವಲ್ಪ



ರಾಣಿ ರಾಸಮಣಿ



ಮಥುರನಾಥ ವಿಶ್ವಾಸ್

ಪ್ರಕಾಶಿಸುತ್ತದೆ. ಆದರೆ ಲೋಕಗುರುಗಳಲ್ಲಿ ಇದು ಬಾಲ್ಯಕಾಲದಲ್ಲಿಯೇ ಸ್ವಲ್ಪ ಪ್ರಕಾಶ ಗೊಳ್ಳಲು ಪ್ರಾರಂಭಿಸುತ್ತದೆ. ಕಾಲಕಳೆದಂತೆ ಹೆಚ್ಚು ಹೆಚ್ಚು ಪ್ರಕಾಶಗೊಳ್ಳುತ್ತ ಕೊನೆಗೆ ಪೂರ್ಣಪ್ರಕಾಶಗೊಂಡು ತನ್ನ ಅದ್ಭುತ ಲೀಲೆಯನ್ನು ತೋರಿಸತೊಡಗುತ್ತದೆ. ಜನರು ಅದನ್ನು ನೋಡಿ ಬೆರಗಾಗಿ ಅವರು ಭಗವಂತನಿಂದ ಬೇರೆಯಲ್ಲ ಎಂದು ಭಾವಿ ಸುತ್ತಾರೆ. ಏಕೆಂದರೆ, ಅವರಲ್ಲಿ ಆ ಅದ್ಭುತ ಭಾವಪ್ರಕಾಶವು ಎಷ್ಟು ಸಹಜವಾಗಿರುತ್ತ ದೆಂದರೆ ಉಣ್ಣುವುದು, ನಡೆಯುವುದು, ಉಸಿರಾಡುವುದು ಮುಂತಾದ ನಿತ್ಯಕರ್ಮ ಗಳಂತೆಯೇ ಆಗಿಬಿಟ್ಟಿರುತ್ತದೆ. ಸಾಧಾರಣ ಮನುಷ್ಯನು ಇನ್ನೇನು ಮಾಡಲು ಸಾಧ್ಯ ? ತನ್ನ ಕ್ಷುದ್ರ ಸ್ವಾರ್ಥದ ಮಾಪಕದಿಂದ ಅವರ ದಿವ್ಯಕೃತಿಗಳನ್ನು ಅಳೆಯಲಾಗುವುದಿಲ್ಲ. ಆದ್ದರಿಂದ ಏನೂ ಮಾಡಲಾಗದೆ ಅವರನ್ನು ದೇವರೆಂದೇ ಭಾವಿಸಿ ಭಕ್ತಿವಿಶ್ವಾಸದಿಂದ ಅವರನ್ನು ಆಶ್ರಯಿಸುತ್ತಾನೆ.

3. ಶ್ರೀರಾಮಕೃಷ್ಣರ ಜೀವನದಲ್ಲಿಯೂ ನಾವು ಇದನ್ನೇ ಕಾಣುತ್ತೇವೆ. ಯೌವನದ ಸಾಧಕಾವಸ್ಥೆಯಲ್ಲಿ ಈ ಭಾವವು ದಿನದಿನವೂ ಹೆಚ್ಚು ಪ್ರಕಾಶಗೊಳ್ಳುತ್ತ ಒಂದು, ಹನ್ನೆರಡು ವರ್ಷದ ಕಠೋರ ಸಾಧನೆಯನಂತರ ಅದು ಪೂರ್ಣ ರೂಪದಲ್ಲಿ ಪ್ರಕಾಶಗೊಂಡು ಅವರಿಗೆ ಅದು ಸಹಜವಾಗಿಹೋಯಿತು. ಅವರು ಸಾಧಾರಣ ಸ್ಥಿತಿ ಯಲ್ಲಿರುವಾಗ ಮತ್ತು ವಿಶ್ವಅಹಂದೊಡನೆ ಒಂದಾಗಿ ಗುರುಭಾವದಲ್ಲಿರುವಾಗ ಅವರಿಗೆ ಯಾವ ಅಹಂ ಪ್ರಜ್ಞೆಯು ಇರುತ್ತಿತ್ತು ಎಂಬುದನ್ನು ಹೇಳುವುದು ಸಾಧಾರಣ ವ್ಯಕ್ತಿ ಗಳಿಗೆ ಸಾಧ್ಯವಾಗುತ್ತಿರಲಿಲ್ಲ. ಆದರೆ ಅದು ಆ ಭಾವದ ಪೂರ್ಣ ಅಭಿವ್ಯಕ್ತಿಗೆ ಸಂಬಂಧಿಸಿದ ವಿಷಯ. ಅದನ್ನು ಎಲ್ಲಿ ಹೇಳಬೇಕೊ ಅಲ್ಲಿ ವಿವರಿಸುತ್ತೇವೆ. ಈಗ ಯೌವನದ ಸಾಧಕಾವಸ್ಥೆಯಲ್ಲಿ ಆ ಭಾವ ವ್ಯಕ್ತವಾದಾಗ ಅವರು ಹೇಗೆ ವರ್ತಿಸುತ್ತಿ ದ್ದರು ಎಂಬುದನ್ನು ನೋಡೋಣ.

4. ಶ್ರೀರಾಮಕೃಷ್ಣರ ಯೌವನಾವಸ್ಥೆಯಲ್ಲಿ ಉಂಟಾದ ಗುರುಭಾವದ ಪ್ರಥಮ ಪ್ರಕಾಶವು ರಾಣಿ ರಾಸಮಣಿ ಮತ್ತು ಅವಳ ಅಳಿಯ ಮಥುರನಾಥ ಇವರಿಗೆ ಸಂಬಂಧಿಸಿದುದಾಗಿದೆ. ನಮಗಾರಿಗೂ ಇವರಿಬ್ಬರನ್ನು ನೋಡುವ ಭಾಗ್ಯ ವಿರಲಿಲ್ಲ. ಆದರೆ ಶ್ರೀರಾಮಕೃಷ್ಣರು ಇವರ ಬಗ್ಗೆ ಏನು ಹೇಳಿರುವರೊ ಅದರಿಂದ ನಮಗೆ ತಿಳಿಯುವುದೇನೆಂದರೆ ಮೊದಲ ಭೇಟಿಯಿಂದಲೇ ಇವರಿಬ್ಬರೂ ಶ್ರೀರಾಮಕೃಷ್ಣ ರೆಡೆಗೆ ಆಕರ್ಷಿತರಾದರು ಮತ್ತು ಈ ಆಕರ್ಷಣೆ ಬರಬರುತ್ತ ಎಷ್ಟು ವೃದ್ಧಿಯಾಯಿ ತೆಂದರೆ ಈ ರೀತಿಯ ಒಂದು ಸಂಬಂಧವನ್ನು ನಾವು ಎಲ್ಲಿಯೂ ಕಾಣುವುದಿಲ್ಲ. ಒಬ್ಬ ವ್ಯಕ್ತಿಗೆ ಇನ್ನೊಬ್ಬ ವ್ಯಕ್ತಿಯ ಮೇಲೆ ಇಷ್ಟೊಂದು ಭಕ್ತಿ ವಿಶ್ವಾಸ ಇರಲು ಸಾಧ್ಯವೆ ಎಂಬುದನ್ನು ಯೋಚಿಸಿದಾಗ ನಮಗೆ ಅವೆಲ್ಲ ದಂತಕತೆಯಂತೆ ಅನಿಸುತ್ತಿತ್ತು. ಮತ್ತೆ ಮೇಲು ನೋಟಕ್ಕೆ ಶ್ರೀರಾಮಕೃಷ್ಣರು ಆಗ ಒಬ್ಬ ಸಾಮಾನ್ಯ ಬಡ ಅರ್ಚಕ ಅಷ್ಟೇ. ರಾಸಮಣಿ ಮತ್ತು ಮಥುರರು ಬ್ರಾಹ್ಮಣರಲ್ಲದಿದ್ದರೂ, ಆಗರ್ಭ ಶ್ರೀಮಂತರು, ಸ್ಥಾನ ಮಾನ ವಿದ್ಯೆಗಳನ್ನು ಪಡೆದು ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಗಳಾಗಿದ್ದರು.

5. ಮತ್ತೆ ಬಾಲ್ಯಕಾಲದಿಂದಲೂ ಶ್ರೀರಾಮಕೃಷ್ಣರ ವರ್ತನೆ ತುಂಬ ವಿಚಿತ್ರ ವಾದುದು. ಹೆಸರು ಕೀರ್ತಿ, ಸ್ಥಾನ, ಮಾನ, ಧನ ಇತ್ಯಾದಿಗಳ ಆಧಾರದಿಂದಲೇ ಜನರು ವ್ಯಕ್ತಿಯನ್ನು ದೊಡ್ಡವನೆಂದು ಪರಿಗಣಿಸುವುದು. ಆದರೆ ಶ್ರೀರಾಮಕೃಷ್ಣರ ಪಾಲಿಗೆ ಇವೆಲ್ಲ ತುಚ್ಛವಾದುವುಗಳು. ಅವರು ಹೇಳುತ್ತಿದ್ದರು : ''ಮಾನ್ಯುಮೆಂಟಿನ(Ochter-loney monument) ಮೇಲೆ ನಿಂತುಕೊಂಡು ನೋಡಿದರೆ ಮೂರು ನಾಲ್ಕು ಮಹಡಿಯ ಕಟ್ಟಡಗಳು, ದೊಡ್ಡ ದೊಡ್ಡ ಮರಗಳು ಮತ್ತು ನೆಲದ ಮೇಲಿನ ಹುಲ್ಲು-ಎಲ್ಲ ಒಂದೇ ಸಮನಾಗಿ ಕಾಣುವುವು.'' ಹಾಗೆಯೇ ಶ್ರೀರಾಮಕೃಷ್ಣರು ಬಾಲ್ಯ ಕಾಲದಿಂದಲೂ ಎಂಥ ಉಚ್ಚ ಸ್ಥಿತಿಯಲ್ಲಿದ್ದರೆಂದರೆ ಧನ, ಮಾನ ವಿದ್ಯೆ ಇತ್ಯಾದಿಗಳ ತಾರತಮ್ಯವನ್ನು ಕಾಣದೆ, ಎಲ್ಲವನ್ನೂ ಸಮಾನವಾಗಿ ಕಾಣುತ್ತಿದ್ದರು. ಕೇವಲ ನಾವು ಮಾತ್ರ ಇವುಗಳಿಂದ ಉಬ್ಬಿಹೋಗುತ್ತೇವೆ. ಅವರಿಗೆ ಅವೆಲ್ಲ ತೀರಾ ಸಾಮಾನ್ಯ ವಾದುವುಗಳಾಗಿದ್ದವು, ಅವರ ಗಮನಕ್ಕೆ ಅವು ಬರುತ್ತಿರಲಿಲ್ಲ. ಅದನ್ನು ಏಕೆ ಮಾಡ ಬೇಕು, ಆದರ ಪರಿಣಾಮವೇನು, ಇತರರು ಅದನ್ನು ಮಾಡಿದುದರಿಂದ ಅವರಿಗೇನಾ ಯಿತು-ಇದನ್ನೆಲ್ಲ ಆಳವಾಗಿ, ತೀಕ್ಷ್ಣವಾಗಿ ವಿಚಾರಮಾಡಿ ನೋಡುತ್ತಿದ್ದರು. ಆದ್ದರಿಂದ ಅಸತ್ಯವಾದ ತೋರಿಕೆಗಳು ಅವರನ್ನು ಎಂದೂ ಮೋಸಪಡಿಸಲು ಸಾಧ್ಯವಿರಲಿಲ್ಲ ತಮ್ಮ ಥಳುಕಿನಿಂದ ಅವರನ್ನು ಗುರಿತಪ್ಪಿಸುವಂತೆಯೇ ಇರಲಿಲ್ಲ. ಓದುಗರು ಹೇಳ ಬಹುದು : 'ಆದರೆ ಆ ರೀತಿ ತೀಕ್ಷ್ಣ ಬುದ್ಧಿಯಿದ್ದರೆ ಅದು ಎಲ್ಲ ವಿಷಯದಲ್ಲಿಯೂ ದೋಷವನ್ನೇ ಕಾಣುತ್ತದೆ. ಇದರಿಂದಾಗಿ ಎಲ್ಲ ಕಾರ್ಯೋತ್ಸಾಹವೂ ಬತ್ತಿಹೋಗು ತ್ತದೆ.' ಅದು ನಿಜ. ಮೊದಲಿನಿಂದಲೇ ಮನಸ್ಸು ಪವಿತ್ರವಾಗಿರದಿದ್ದರೆ ಮತ್ತು ಭಗವದ್ವ್ಯಾಕುಲತೆ ಇಲ್ಲದಿದ್ದರೆ, ಆ ರೀತಿಯ ತೀಕ್ಷ್ಣ ವಿವೇಕ ಬುದ್ಧಿ ನಿಜವಾಗಿಯೂ ಮನುಷ್ಯನನ್ನು ಕಿಂಕರ್ತವ್ಯವಿಮೂಢನನ್ನಾಗಿ ಮಾಡುತ್ತದೆ, ಅವನ ಕ್ರಿಯಾಶೀಲತೆಯೇ ಹೊರಟುಹೋಗುತ್ತದೆ. ಇನ್ನು ಕೆಲವು ಸಂದರ್ಭಗಳಲ್ಲಿ ಅವನು ಸ್ವೇಚ್ಛಾಚಾರಿಯೂ ಆಗಬಹುದು, ಆದರೆ ಪವಿತ್ರತೆ ಮತ್ತು ಉನ್ನತ ಗುರಿಯ ಕಡೆ ಲಕ್ಷ್ಯ ಇವುಗಳಿದ್ದರೆ ಎಲ್ಲದರ ಅಂತರಾಳವನ್ನು ಹೊಕ್ಕು ಪರೀಕ್ಷಿಸಬಲ್ಲ ಇಂಥ ತೀಕ್ಷ್ಣ ವಿಚಾರಬುದ್ಧಿಯು ಮನುಷ್ಯ ಆಧ್ಯಾತ್ಮಿಕ ಮಾರ್ಗದಲ್ಲಿ ಮುಂದುವರಿಯಲು ಪ್ರೇರಕವಾಗುತ್ತದೆ. ಇದ ರಿಂದಲೇ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಶ್ರದ್ಧಾಭಕ್ತಿ ಸಂಪನ್ನನಾದ ವ್ಯಕ್ತಿಯನ್ನು ಸಂಸಾರದಲ್ಲಿ ಜನ್ಮ ಮೃತ್ಯು, ಜರಾ, ವ್ಯಾಧಿ ಮತ್ತು ದುಃಖ ಮುಂತಾದ ದೋಷ ಗಳನ್ನು ನೋಡುವವನು (ಜನ್ಮ-ಮೃತ್ಯು-ಜರಾ-ವ್ಯಾಧಿ-ದುಃಖದೋಷಾನುದರ್ಶನಂ) ಎಂದು ಕರೆದಿರುವುದು. ಶ್ರೀರಾಮಕೃಷ್ಣರಲ್ಲಿ ಬಾಲ್ಯದಿಂದಲೂ ಈ ದೋಷದೃಷ್ಟಿ ಅತ್ಯಂತ ಸ್ಪಷ್ಟವಾಗಿತ್ತು. ಅವರನ್ನು ಶಾಲೆಗೆ ಕಳಿಸಿದಾಗ ಶಿಕ್ಷಣದ ನಿಃಸಾರ್ಥಕತೆಯನ್ನು ಬಹುಬೇಗನೆ ಅರ್ಥಮಾಡಿಕೊಂಡರು. 'ತರ್ಕಾಲಂಕಾರ', 'ವಿದ್ಯಾವಾಗೀಶ' ಮುಂತಾದ ಬಿರುದುಗಳ ಕಡೆ ಅವರಿಗೆ ಯಾವ ಆಕರ್ಷಣೆಯೂ ಇರಲಿಲ್ಲ. ಈ ದೊಡ್ಡ ದೊಡ್ಡ ಬಿರುದಾಂಕಿತರೆಲ್ಲ ಕೇವಲ ಹೊಟ್ಟೆ ಬಟ್ಟೆಗಾಗಿ ತಮ್ಮ ವಿದ್ವತ್ತನ್ನು ಪ್ರದರ್ಶಿಸುತ್ತ

ಶ್ರೀಮಂತರ ಮುಂದೆ ನರ್ತಿಸುತ್ತಾರೆ. ಇಷ್ಟೆ ಶಿಕ್ಷಣದಿಂದಾಗುವುದು ಎಂದು ಅವರು ತಿಳಿದಿದ್ದರು. ಮದುವೆಯಾಗಿದ್ದರೂ ಪ್ರಾಪಂಚಿಕ ಸುಖ, ಮನರಂಜನೆಗಳ ಕಡೆ ಅವರು ಆಕರ್ಷಿತರಾಗಲೇ ಇಲ್ಲ. ಎರಡುದಿನ ಸುಖಕ್ಕಾಗಿ ಸಂಸಾರಕ್ಕೆ ಅಂಟಿಕೊಂಡು ಅವರು ಯಾವತ್ತೂ ಜವಾಬ್ದಾರಿಯನ್ನು ಹೊತ್ತುಕೊಂಡು ಹಣಕ್ಕಾಗಿ ಪರದಾಡುವುದರ ಹಿಂದಿರುವ ದೋಷವನ್ನು ಅವರು ಸರಿಯಾಗಿ ಮನಗಂಡರು. ಹಣದಿಂದ ಈ ಪ್ರಪಂಚದಲ್ಲಿ ನಮಗೆ ಬೇಕಾದುದನ್ನೆಲ್ಲ ಪಡೆಯಬಹುದಾದರೂ ಅದರ ಸಂಪಾದನೆಯ ಕಡೆ ಅವರ ಮನಸ್ಸು ವಾಲಲೇ ಇಲ್ಲ. ಅವರು ಅದರ ಮಿತಿಯನ್ನು ಸರಿಯಾಗಿ ಅರ್ಥಮಾಡಿಕೊಂಡರು. ಹಣದಿಂದ ಆಹಾರ, ಬಟ್ಟೆ, ಮನೆ, ನೆಲ ಎಲ್ಲ ದೊರೆಯುವುದಾದರೂ ಭಗವಂತನ ಸಾಕ್ಷಾತ್ಕಾರ ಅದರಿಂದ ಆಗುವುದಿಲ್ಲ ಎಂದು ಅವರು ಭಾವಿಸಿದರು. ದುಃಖಿಗಳಿಗೆ ದರಿದ್ರರಿಗೆ ದಾನಧರ್ಮ ಮಾಡಿ 'ಕೊಡುಗೈ ದಾನಿ' 'ಪರೋಪಕಾರಿ' ಮುಂತಾದ ಹೆಸರನ್ನು ಪಡೆಯುವುದರಲ್ಲಿಯೂ ಅವರಿಗೆ ಆಸೆಯಿರಲಿಲ್ಲ. ಏಕೆಂದರೆ ನಾವು ಎಷ್ಟೋ ಸ್ಕೂಲು ಕಾಲೇಜುಗಳನ್ನು ಕಟ್ಟಿಸಬಹುದು, ಆಸ್ಪತ್ರೆಗಳನ್ನು ನಡೆಸಬಹುದು. ಆದರೆ ಒಂದುದಿನ ಎಲ್ಲರೂ ಸಾಯಲೇಬೇಕು—ಸಮಾಜಸೇವಕನೂ ಕೂಡ. ದುಃಖದಾರಿದ್ರ್ಯ ಮಾತ್ರ ಹಾಗೆಯೇ ಉಳಿಯುತ್ತದೆ. ಹೀಗೆ ಎಲ್ಲ ವಿಷಯದಲ್ಲಿಯೂ ಅವರು ಅತ್ಯಂತ ಸೂಕ್ಷ್ಮವಾಗಿ ವಿಚಾರ ಮಾಡುತ್ತಿದ್ದರು.

6. ಇಂತಹ ಸ್ವಭಾವದ ಶ್ರೀರಾಮಕೃಷ್ಣರನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದು ಕಠಿಣ – ವಿಶೇಷವಾಗಿ ಧನ ಮತ್ತು ಪಾಂಡಿತ್ಯದ ಅಭಿಮಾನವುಳ್ಳವರಿಗೆ. ಏಕೆಂದರೆ ಅವರಿಗೆ ಯಾರ ಮಾತನ್ನೂ ಕೇಳುವಷ್ಟು ನಮ್ರತೆಯಿರುವುದಿಲ್ಲ. ಆದ್ದರಿಂದ ಅವರು ವಾಸ್ತವಿಕತೆಯಿಂದ ದೂರವಿರುತ್ತಾರೆ. ಅವರು ಶ್ರೀರಾಮಕೃಷ್ಣರನ್ನು ಅಸಭ್ಯರು ಹುಚ್ಚರು ಅಥವಾ ಅಹಂಕಾರಿಗಳು ಎಂದು ಕರೆದರೆ ಆಶ್ಚರ್ಯವಿಲ್ಲ. ಆದ್ದರಿಂದಲೇ ರಾಸಮಣಿ ಮತ್ತು ಮಥುರನಾಥರಿಗೆ ಅವರ ಮೇಲೆ ಇದ್ದ ಭಕ್ತಿ ಪ್ರೀತಿಯನ್ನು ನೋಡಿದಾಗ ಅತ್ಯಾಶ್ಚರ್ಯವಾಗುತ್ತದೆ. ನಿಜವಾಗಿಯೂ ವಿಶೇಷ ಭಗವತ್ ಕೃಪೆಯಿಂದಾಗಿಯೇ ಅವರಿಬ್ಬರಿಗೆ ಶ್ರೀರಾಮಕೃಷ್ಣರನ್ನು ಅಷ್ಟೊಂದು ಪ್ರೀತಿಸಲು ಸಾಧ್ಯವಾದುದು ಮಾತ್ರವಲ್ಲದೆ ಅವರ ದಿವ್ಯ ಗುರುಭಾವವನ್ನು ಗುರುತಿಸಿ ತಮ್ಮ ಸರ್ವಸ್ವವನ್ನೂ ಅವರ ಚರಣಕ್ಕೆ ಅರ್ಪಿಸುವಂತಾಯಿತು ಎಂದೆನಿಸುತ್ತದೆ. ಶ್ರೀರಾಮಕೃಷ್ಣರ ಅಣ್ಣ ರಾಮಕುಮಾರನು ಶ್ರೀ ಜಗದಂಬೆಯ ಅರ್ಚಕನಾಗಿ ಸೇರಿಕೊಂಡಾಗ ಅವರು ದೇವಸ್ಥಾನದ ಪ್ರಸಾದವನ್ನೂ ಸ್ವೀಕರಿಸಲಿಲ್ಲ, ಶೂದ್ರಾನ್ನವನ್ನು ಉಂಡಂತಾಗುವುದೆಂದು. ಅನಂತರವೂ ಗಂಗಾತೀರದಲ್ಲಿ ತಾವೇ ಅಡಿಗೆ ಮಾಡಿಕೊಂಡು ಉಣ್ಣುತ್ತಿದ್ದರು. ಮಥುರನು ಎಷ್ಟೋ ಅವರನ್ನು ಕರೆದರೂ ಪ್ರಾಪಂಚಿಕರೊಡನೆ ಮಾತನಾಡಬಾರದೆಂದು ಅವನೆಡೆಗೆ ಅವರು ಹೋಗುತ್ತಲೇ ಇರಲಿಲ್ಲ. ಮತ್ತೆ ಅನಂತರ ಕಾಳೀದೇವಿಯ ಅರ್ಚಕನಾಗಬೇಕೆಂದು ಅವನು ಮತ್ತೆ ಮತ್ತೆ ಒತ್ತಾಯಿಸಿದ್ದರೂ ಅವರು ನಿರಾಕರಿಸಿದ್ದರು. ಇವನ್ನೆಲ್ಲ ನೋಡಿದಾಗ ತಮ್ಮ ಅಭಿಮಾನವನ್ನೂ ಧನಮದವನ್ನೂ

ತ್ಯಜಿಸಿ ಈ ವಿಚಿತ್ರ ಸ್ವಭಾವದ ಶ್ರೀರಾಮಕೃಷ್ಣರನ್ನು ರಾಸಮಣಿ ಮತ್ತು ಮಥುರರು ಅಷ್ಟೊಂದು ಪ್ರೀತಿಸಿದುದು, ಗೌರವಿಸಿದುದು ಮತ್ತು ಕೊನೆಯವರೆಗೂ ಉಳಿಸಿಕೊಂಡುದು ಸಾಮಾನ್ಯವಾದ ವಿಷಯವಲ್ಲ.

7. ಶ್ರೀರಾಮಕೃಷ್ಣರಿಗೆ ಆಗ ವಿವಾಹವಾಗಿತ್ತು – ತುಂಬು ಯೌವನ. ಮದುವೆ ಮಾಡಿಕೊಂಡು ಪುನಃ ದಕ್ಷಿಣೇಶ್ವರಕ್ಕೆ ಬಂದು ಅರ್ಚಕ ಕೆಲಸವನ್ನು ಮುಂದುವರಿಸಿದರು. ಮತ್ತೆ ಅದೇ ದಿವ್ಯ ಉನ್ಮಾದ ಅವರನ್ನು ಆವರಿಸಿತು. ಭಗವಂತನು ಕಾಣಿಸಿಕೊಳ್ಳಲಿಲ್ಲವಲ್ಲ ಎಂದು ಆಗಾಗ ಭೂಮಿಯ ಮೇಲೆ ಬಿದ್ದು ಹೊರಳಾಡುತ್ತ 'ಮಾ, ಮಾ' ಎಂದು ರೋದಿಸುತ್ತಿದ್ದರು. ಜನ ಆಶ್ಚರ್ಯದಿಂದ ನಿಂತು ನೋಡುತ್ತಿದ್ದರು. ಅವರಿಗೆ ಏನೊ ಕಾಯಿಲೆಯಾಗಿರಬೇಕು : ಹೊಟ್ಟೆ ಬೇನೆಯಿಂದ ನರಳುತ್ತಿರಬೇಕು ಎಂದು ಜನ ಭಾವಿಸುತ್ತಿದ್ದರು. ಕೆಲವೊಮ್ಮೆ ಪೂಜೆಯ ವೇಳೆ ಹೂವನ್ನೆಲ್ಲ ತಮ್ಮ ತಲೆಯಮೇಲೇ ಇಟ್ಟುಕೊಂಡು ನಿಶ್ಚಲವಾಗಿ ಕುಳಿತುಬಿಡುತ್ತಿದ್ದರು. ಕೆಲವೊಮ್ಮೆ ಸಂತರ ಹಾಡುಗಳನ್ನು ಹಾಡುತ್ತ ಮೈಮರೆಯುತ್ತಿದ್ದರು. ಆದರೆ ಸಾಧಾರಣ ಸ್ಥಿತಿಯಲ್ಲಿದ್ದಾಗ ಯಾರೊಡನೆ ಹೇಗೆ ವರ್ತಿಸಬೇಕೊ ಹಾಗೆಯೆ ವರ್ತಿಸುತ್ತಿದ್ದರು. ಆಧ್ಯಾತ್ಮಿಕ ಭಾವಾವೇಶ ಉಂಟಾಯಿತೆಂದರೆ ಆಗ ಅವರು ಬೇರೆಯೇ ವ್ಯಕ್ತಿಯಾಗಿಬಿಡುತ್ತಿದ್ದರು – ಯಾರ ಮಾತನ್ನೂ ಕೇಳುತ್ತಿರಲಿಲ್ಲ, ಯಾವುದಕ್ಕೂ ಉತ್ತರವೇ ಇಲ್ಲ. ಆಗಲೂ ಅವರ ದಿವ್ಯವರ್ತನೆಯ ಮಾಧುರ್ಯದ ಪರಿಚಯ ಅನೇಕರಿಗೆ ಆಗುತ್ತಿತ್ತು ; ಆಗ ಯಾರಾದರೂ 'ಒಂದು ಭಜನೆ ಹಾಡಿ' ಎಂದು ಕೇಳಿಕೊಂಡರೆ ಕೂಡಲೆ ಶ್ರೀರಾಮಕೃಷ್ಣರು ಅವರ ಮನಸ್ಸಂತೋಷಪಡಿಸಲು ತಮ್ಮ ಮಧುರ ಕಂಠದಿಂದ ಹಾಡುತ್ತಿದ್ದರು ಮತ್ತು ಹಾಡುತ್ತ ಹಾಡುತ್ತ ಹಾಡಿನ ಭಾವದೊಡನೆ ಒಂದಾಗಿಬಿಡುತ್ತಿದ್ದರು.

8. ದೇವಸ್ಥಾನದ ಸಾಮಾನ್ಯ ಅಧಿಕಾರಿಗಳು ಮಾತ್ರವಲ್ಲದೆ, ಪ್ರಧಾನ ಅಧಿಕಾರಿಯೂ ಕೂಡ ಪೂಜೆಯ ಸಮಯದಲ್ಲಿ ಶ್ರೀರಾಮಕೃಷ್ಣರ 'ಅನಾಚಾರದ' ಬಗ್ಗೆ ರಾಣಿರಾಸಮಣಿ ಮತ್ತು ಮಥುರನಾಥರಿಗೆ ವರದಿ ಒಪ್ಪಿಸಿದರು. ''ಚಿಕ್ಕ ಭಟ್ಟಾಚಾರ್ಯನು (ಶ್ರೀರಾಮಕೃಷ್ಣರು) ಎಲ್ಲ ಹಾಳುಮಾಡುತ್ತಿದ್ದಾನೆ. ಪೂಜೆ ನೈವೇದ್ಯ ಏನೂ ಸರಿಯಾಗಿ ನಡೆಯುತ್ತಿಲ್ಲ. ಇಂಥ ವಿಧಿಹೀನ ಪೂಜೆಯನ್ನು ದೇವಿಯು ಸ್ವೀಕರಿಸುತ್ತಾಳೆಯೆ ?''– ಹೀಗೆ ಏನೇನೊ ದೂರುಗಳು ಹೋದವು. ಆದರೆ ಇವಾವುದರಿಂದಲೂ ಅವರು ನಿರೀಕ್ಷಿಸಿದಂತಾಗಲೇ ಇಲ್ಲ. ಮಥುರನು ಆಗಾಗ ಮುನ್ಸೂಚನೆಯಿಲ್ಲದೆ ದೇವಸ್ಥಾನಕ್ಕೆ ಇದ್ದಕ್ಕಿದ್ದಂತೆ ಬಂದುಬಿಡುವ ರೂಢಿಯಿತ್ತು. ಹಾಗೆ ಒಂದು ದಿನ ಬಂದಾಗ ಶ್ರೀರಾಮಕೃಷ್ಣರು ಪೂಜೆ ಮಾಡುವುದನ್ನು ಕದ್ದು ನೋಡಿದ. ಭಕ್ತಿವಿಹ್ವಲತೆಯಿಂದ ಅವರು ಮಗುವಿನಂತೆ ವರ್ತಿಸುತ್ತಿದ್ದರು, ಜಗನ್ಮಾತೆಯನ್ನು ಅತ್ತು ಬೇಡುತ್ತಿದ್ದರು, ಆನಂದದಿಂದ ಕಣ್ಣೀರು ಸುರಿಸುತ್ತಿದ್ದರು. ಇದನ್ನೆಲ್ಲ ನೋಡಿ ಅವನು ಪ್ರಭಾವಿತನಾಗಿ ಅಧಿಕಾರಿಗಳಿಗೆ ಆಜ್ಞಾಪಿಸಿದ : ''ಚಿಕ್ಕ ಭಟ್ಟಾಚಾರ್ಯರು

ಹೇಗೆ ಪೂಜೆ ಮಾಡುತ್ತಿರುವರೊ ಹಾಗೆಯೇ ಮುಂದುವರಿಸಲಿ. ನೀವು ಅವರಿಗೆ ಯಾವ ತೊಂದರೆಯನ್ನೂ ಕೊಡಬಾರದು, ಏನೂ ಹೇಳಬಾರದು. ಮೊದಲು ನನಗೆ ತಿಳಿಸಬೇಕು, ನಾನು ಹೇಳಿದಂತೆ ಮಾಡಬೇಕು."

ರಾಣಿ ರಾಸಮಣಿಯೂ ಆಗಾಗ ದೇವಿಯ ಅಲಂಕಾರವನ್ನು ನೋಡಲು ಶ್ರೀರಾಮಕೃಷ್ಣರ ಭಜನೆಯನ್ನು ಕೇಳಲು ದೇವಸ್ಥಾನಕ್ಕೆ ಬರುತ್ತಿದ್ದಳು. ಅವಳು ದೇವಸ್ಥಾನಕ್ಕೆ ಬಂದಾಗಲೆಲ್ಲ ಶ್ರೀರಾಮಕೃಷ್ಣರನ್ನು ಕರೆದು ಒಂದೆರಡು ಭಜನೆ ಹೇಳಲು ಒತ್ತಾಯಿಸುತ್ತಿದ್ದಳು. ಶ್ರೀರಾಮಕೃಷ್ಣರೂ ತಾವು ಯಾರಿಗಾಗಿ ಹಾಡುತ್ತಿದ್ದೇವೆಂಬುದನ್ನು ಮರೆತು ಭಾವಾವಿಷ್ಟರಾಗಿ ಜಗನ್ಮಾತೆಯನ್ನೇ ಉದ್ದೇಶವಾಗಿಟ್ಟುಕೊಂಡು ಹಾಡುತ್ತಿದ್ದರು. ಹೀಗೆ ದಿನಗಳು ಉರುಳುತ್ತಿವೆ. ಹೊರ ಜಗತ್ತಿನಲ್ಲಿಯಂತೆಯೇ ಆ ದೇವಸ್ಥಾನದ ಚಿಕ್ಕ ಸಂಸಾರದಲ್ಲಿಯೂ ಜನರು ತಮ್ಮ ತಮ್ಮ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ಸಾಂಸಾರಿಕ ಕೆಲಸ ಮತ್ತು ಸ್ವಾರ್ಥಚಿಂತೆ ಇವುಗಳೆಲ್ಲ ಮುಗಿದ ಮೇಲೆ ಎಲ್ಲೋ ಸ್ವಲ್ಪ ಸಮಯ ಸಿಕ್ಕಿದರೆ ಇತರರೊಡನೆ ಹರಟೆಹೊಡೆಯುತ್ತ, ಪರನಿಂದೆ ಮಾಡುತ್ತ ಜನರು ತಮ್ಮ ಒಂಟಿತನವನ್ನು ಹೇಗೊ ದೂರಮಾಡುತ್ತಿದ್ದಾರೆ. ಆ ಯುವಕ ಅರ್ಚಕನ ಮನಸ್ಸಿನೊಳಗೆ ಭಗವತ್ ಪ್ರೇಮವು ಉದಯಿಸಿ ಅವನಲ್ಲಿ ಎಂಥ ಪರಿವರ್ತನೆಯನ್ನು ಉಂಟು ಮಾಡುತ್ತಿದೆ ಎಂಬುದನ್ನು ಗಮನಿಸುವವರಾರು ? 'ಅವನು ಒಬ್ಬ ಹುಚ್ಚ. ಬಾಬುಗಳಿಗೆ (ದೇವಸ್ಥಾನದ ಒಡೆಯರು) ಹೇಗೊ ಅವನ ಮೇಲೆ ಪ್ರೀತಿಯುಂಟಾಗಿಬಿಟ್ಟಿದೆ. ಆದ್ದರಿಂದಲೇ ಕೆಲಸ ಉಳಿದಿದೆ. ಹೀಗೆ ಎಷ್ಟು ದಿನ ನಡೆಯುತ್ತದೆ ? ಎಂದೊ ಒಂದು ದಿನ ಏನೊ ವಿಪರೀತ ನಡೆಯುತ್ತದೆ. ಆಗ ಅವನನ್ನು ಓಡಿಸುತ್ತಾರೆ. ಈ ದೊಡ್ಡ ಮನುಷ್ಯರ ವ್ಯಾಪಾರ ! ಏನೂ ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಯಾವಾಗ ಖುಶಿಯಾಗಿ ಇರುತ್ತಾರೊ ಯಾವಾಗ ಕೋಪ ಮಾಡಿಕೊಳ್ಳುತ್ತಾರೊ ಹೇಳುವಂತಿಲ್ಲ' – ಹೀಗೆ ಅಧಿಕಾರಿಗಳು ಮಾತನಾಡಿಕೊಳ್ಳುತ್ತಿದ್ದರು. ಶ್ರೀರಾಮಕೃಷ್ಣರ ಸೋದರಳಿಯ ಹೃದಯನೂ ಆಗ ದಕ್ಷಿಣೇಶ್ವರದಲ್ಲಿ ಬಂದು ಸೇರಿಕೊಂಡಿದ್ದ.

9. ಒಂದು ದಿನ ರಾಣಿರಾಸಮಣಿ ದೇವಸ್ಥಾನಕ್ಕೆ ಬಂದಳು. ಎಲ್ಲ ಅಧಿಕಾರಿಗಳೂ ಗಡಿಬಿಡಿಯಲ್ಲಿದ್ದರು. ಕೆಲಸ ತಪ್ಪಿಸಿಕೊಳ್ಳುವವರೂ ಅಂದು ಬಹಳ ಕೆಲಸ ಮಾಡುತ್ತಿದ್ದರು. ಗಂಗೆಯಲ್ಲಿ ಸ್ನಾನಮಾಡಿ ರಾಸಮಣಿಯು ಕಾಳೀ ಮಂದಿರಕ್ಕೆ ಹೋದಳು. ಆಗ ದೇವಿಯ ಪೂಜೆ ಮತ್ತು ಅಲಂಕಾರ ನಡೆಯುತ್ತಿತ್ತು. ಜಗನ್ಮಾತೆಗೆ ನಮಸ್ಕರಿಸಿ ರಾಣಿಯು ಮಂದಿರದ ಮಧ್ಯದಲ್ಲಿ ಮೂರ್ತಿಯ ಹತ್ತಿರ ಆಸನದ ಮೇಲೆ ತನ್ನ ದೈನಿಕ ಪೂಜೆಯನ್ನು ನೆರವೇರಿಸಲು ಕುಳಿತಳು. ಹತ್ತಿರದಲ್ಲಿಯೇ ಶ್ರೀರಾಮಕೃಷ್ಣರು ಇದ್ದುದನ್ನು ಕಂಡು ದೇವಿಯ ಮೇಲೆ ಹಾಡು ಹೇಳಲು ಅವರನ್ನು ಕೇಳಿಕೊಂಡಳು. ಶ್ರೀರಾಮಕೃಷ್ಣರು ಹತ್ತಿರಬಂದು ರಾಮಪ್ರಸಾದ, ಕಮಲಾಕಾಂತ ಮುಂತಾದವರ ಭಜನೆಗಳನ್ನು ಹಾಡತೊಡಗಿದರು. ರಾಣಿಯು ಪೂಜೆ ಜಪಾದಿಗಳನ್ನು

ಮಾಡುತ್ತ ಅವರು ಹಾಡುವುದನ್ನು ಕೇಳುತ್ತಿದ್ದಳು. ಸ್ವಲ್ಪ ಹೊತ್ತು ಹೀಗೆಯೇ ಕಳೆಯಿತು. ಅನಂತರ ಶ್ರೀರಾಮಕೃಷ್ಣರು ಹಠಾತ್ತನೆ ಹಾಡುವುದನ್ನು ನಿಲ್ಲಿಸಿ ಕೋಪದಿಂದ, "ಇಲ್ಲಿಯೂ ಅದೇ ಚಿಂತೆಯೇ ?" ಎಂದು ಹೇಳುತ್ತ ರಾಣಿಯ ಕೆನ್ನೆಯ ಮೇಲೆ ಒಂದು ಹೊಡೆದರು. ಮಕ್ಕಳು ಏನಾದರೂ ತಪ್ಪು ಮಾಡಿದರೆ ತಂದೆ ಹೊಡೆದು ಅವರನ್ನು ತಿದ್ದುತ್ತಾರೆ – ಶ್ರೀರಾಮಕೃಷ್ಣರು ಅದೇ ಭಾವದಲ್ಲಿದ್ದರು ಈಗ. ಆದರೆ ಇದನ್ನು ಅರ್ಥಮಾಡಿಕೊಳ್ಳುವವರಾರು ?

10. ಮಂದಿರದ ಅಧಿಕಾರಿಗಳು ಮತ್ತು ರಾಣಿಯ ಸಹಚಾರಿಯರು ಎಲ್ಲ ಸೇರಿ ಗಲಾಟೆ ಎಬ್ಬಿಸಿದರು. ದ್ವಾರಪಾಲಕನು ಶ್ರೀರಾಮಕೃಷ್ಣರನ್ನು ಹಿಡಿಯಲು ಧಾವಿಸಿದ, ಮಂದಿರದ ಹೊರಗಿದ್ದ ಅಧಿಕಾರಿಗಳೆಲ್ಲ ಒಳಗಡೆಯ ಗಲಾಟೆ ಕೇಳಿ ಓಡಿಬಂದರು. ಆದರೆ ಈ ಎಲ್ಲ ಗಲಾಟೆಗೆ ಮುಖ್ಯ ಕಾರಣರಾದ ಶ್ರೀರಾಮಕೃಷ್ಣ ಮತ್ತು ರಾಸಮಣಿ ಸ್ಥಿರವಾಗಿಯೂ ಗಂಭೀರವಾಗಿಯೂ ಕುಳಿತಿದ್ದಾರೆ. ಅಧಿಕಾರಿಗಳ ಕೂಗಾಟ ಓಡಾಟಗಳು ನಡೆಯುತ್ತಿದ್ದರೆ ಶ್ರೀರಾಮಕೃಷ್ಣರು ಉದಾಸೀನರಾಗಿ ಮುಗುಳ್ನಗುತ್ತ ಕುಳಿತಿದ್ದಾರೆ. ಶ್ರೀಜಗನ್ಮಾತೆಯನ್ನು ಧ್ಯಾನಿಸದೆ ಯಾವುದೊ ಕೋರ್ಟಿನ ಕೇಸಿನ ಬಗ್ಗೆ ಚಿಂತಿಸುತ್ತಿದ್ದ ರಾಣಿಯೂ ಪಶ್ಚಾತ್ತಾಪದಿಂದ ಗಂಭೀರವಾಗಿ ಕುಳಿತಿದ್ದಳು. ಮತ್ತೆ ಈ ವಿಷಯ ಶ್ರೀರಾಮಕೃಷ್ಣರಿಗೆ ಹೇಗೆ ತಿಳಿಯಿತು ಎಂಬ ವಿಸ್ಮಯವೂ ಅವಳ ಮನಸ್ಸಿನಲ್ಲಿತ್ತು. ಅಧಿಕಾರಿಗಳ ಗದ್ದಲದಿಂದ ಅವಳು ಎಚ್ಚರಗೊಂಡಳು. ತಾನು ಸುಮ್ಮನಿದ್ದರೆ ನಿರಪರಾಧಿಯಾದ ಶ್ರೀರಾಮಕೃಷ್ಣರಿಗೆ ಅವರೇನಾದರೂ ತೊಂದರೆ ಮಾಡಬಹುದೆಂದು ಅಂಜಿ ಅವರಿಗೆ ಆಜ್ಞೆಯಿತ್ತಳು : 'ಭಟ್ಟಾಚಾರ್ಯ ಮಹಾಶಯರದು ಯಾವ ದೋಷವೂ ಇಲ್ಲ. ಅವರಿಗೆ ನೀವಾರೂ ಏನೂ ಮಾಡಬಾರದು.' ಅನಂತರ ಮಥುರನು ತನ್ನ ಅತ್ತೆಯಿಂದ ಎಲ್ಲ ವೃತ್ತಾಂತವನ್ನು ಕೇಳಿ ಅದೇ ಆಜ್ಞೆಯನ್ನು ಸಮರ್ಥಿಸಿದನು. ಇದರಿಂದ ಕೆಲವು ಅಧಿಕಾರಿಗಳಿಗೆ ತುಂಬ ನಿರಾಸೆಯಾಯಿತು. ಆದರೆ ಮಾಡುವುದೇನು, 'ದೊಡ್ಡವರ ಗೊಡವೆ ನಮಗೇಕೆ' ಎಂದು ಸುಮ್ಮನಾದರು.

11. ಈ ಘಟನೆಯನ್ನು ಕೇಳಿ ಓದುಗರು ಇದೆಂಥ ಗುರುಭಾವವಪ್ಪ ! ಎಂದು ಅಚ್ಚರಿಗೊಳ್ಳಬಹುದು. ಜನರಿಗೆ ಹೊಡೆಯುವುದೂ ಒಂದು ಗುರುಭಾವದ ಲಕ್ಷಣವೆ ? ನಾವು ಹೇಳುತ್ತೇವೆ: ಲೋಕ ಗುರುಗಳಾದ ಆಚಾರ್ಯರ ಜೀವನದಲ್ಲಿ ಇಂಥ ಘಟನೆಗಳ ಉಲ್ಲೇಖ ಬರುತ್ತದೆ. ಶ್ರೀಚೈತನ್ಯನು ಕಾಜಿಯನ್ನು ಅವನಿಗೆ ಬುದ್ಧಿಕಲಿಸಲು ಹೊಡೆದನು, ಹಾಗೆಯೇ ಅದ್ವೈತಗೋಸ್ವಾಮಿಯಲ್ಲಿ ಭಕ್ತಿಭಾವವನ್ನು ಕೆರಳಿಸಲು ಅವನನ್ನು ಹೊಡೆದನು. ಯೇಸುವಿನ ಜೀವನದಲ್ಲಿಯೂ ಇಂಥ ಘಟನೆಗಳಿಗೆ ಅಭಾವವಿಲ್ಲ.

ಶಿಷ್ಯಪರಿವಾರ ಸಮೇತನಾಗಿ ಯೇಸುಕ್ರಿಸ್ತನು ಜೆರುಸಲೇಂ ದೇವಸ್ಥಾನಕ್ಕೆ ಹೋದನು. ವಾರಾಣಸೀ, ವೃಂದಾವನ ಮುಂತಾದ ಯಾತ್ರಾಸ್ಥಳಗಳಿಗೆ ಹೋದರೆ ಹಿಂದೂಗಳಿಗೆ ಹೇಗೆ ಪವಿತ್ರ ಭಾವನೆಯುಂಟಾಗುವುದೊ ಹಾಗೆಯೇ ಯಹೂದಿಗಳಿಗೆ

ಜರೂಸಲೇಮಿಗೆ ಹೋದರೆ ಆಗುತ್ತದೆ. ಅದರಲ್ಲೂ ಭಾವಮುಖನಾದ ಯೇಸುವು ಅಲ್ಲಿಗೆ ಹೋದರೆ ಹೇಗಾಗುವುದೆಂಬುದನ್ನು ಹೇಳಬೇಕಾಗಿಯೇ ಇಲ್ಲ. ದೂರದಲ್ಲಿ ಮಂದಿರ ದರ್ಶನವಾಗುತ್ತಿದ್ದಂತೆಯೇ ಅವನು ಭಾವೋನ್ಮತ್ತನಾಗಿ ಭಗವದ್ದರ್ಶನಕ್ಕಾಗಿ ಓಡಿದನು. ಮಂದಿರದ ಬಾಗಿಲಿನಲ್ಲಿ ಮತ್ತು ಅಂಗಳದಲ್ಲಿ ಅನೇಕರು ಜನರನ್ನು ಮೋಸ ಪಡಿಸಿ ಹಣ ಸಂಪಾದನೆಯಲ್ಲಿ ನಿರತರಾಗಿದ್ದರು. ಅರ್ಚಕರು, ಪುರೋಹಿತರು ಯಾತ್ರಿಕರ ದೇವರ ದರ್ಶನದ ಕಡೆಗೆ ಗಮನವೇ ಇಲ್ಲದೆ, ಅವರಿಂದ ಹಣ ಸುಲಿಯುವು ದರಲ್ಲಿಯೇ ಮಗ್ನರಾಗಿದ್ದರು. ಮತ್ತೆ ಅಲ್ಲಿಯ ಅಂಗಡಿಕಾರರು ಯಾತ್ರಿಕರಿಗೆ ಪೂಜಾ ದ್ರವ್ಯಗಳನ್ನು ಮಾರಾಟ ಮಾಡಿ ಆದಷ್ಟು ಅವರಿಂದ ಹಣ ಸುಲಿಯುತ್ತಿದ್ದರು. ತಾನು ದೇವಸ್ಥಾನದಲ್ಲಿ ಭಗವತ್ ಸನ್ನಿಧಿಯಲ್ಲಿದ್ದೇನೆ ಎಂದು ಆಲೋಚಿಸುವವರಾರು ? ಭಾವಾವೇಶದಿಂದ ಮಂದಿರವನ್ನು ಪ್ರವೇಶಿಸುತ್ತಿದ್ದ ಯೇಸುವಿಗೆ ಇವಾವುವೂ ಕಣ್ಣಿಗೆ ಬೀಳಲಿಲ್ಲ. ನೇರವಾಗಿ ಮಂದಿರದೊಳಗೆ ಹೋಗಿ ದೇವರ ದರ್ಶನವನ್ನು ಪಡೆದು ಪರಮಾನಂದವನ್ನು ಅನುಭವಿಸಿದನು. ಭಗವಂತನು ತನ್ನ ಹೃದಯಾಂತರಾಳದಲ್ಲಿ ತನ್ನ ಅಂತರಾತ್ಮನಾಗಿ ನೆಲಸಿರುವನು ಎಂಬುದನ್ನು ಅರಿತುಕೊಂಡು ಅದೇ ಭಾವದಲ್ಲಿ ತನ್ಮಯನಾದನು. ದೇವಸ್ಥಾನ, ಅದರೊಳಗಿರುವ ವ್ಯಕ್ತಿಗಳು ಮತ್ತು ವಸ್ತುಗಳೆಲ್ಲ ತನಗೆ ಅತ್ಯಂತ ಸಮೀಪದವುಗಳಾಗಿ ಕಂಡವು ಅವನಿಗೆ. ಏಕೆಂದರೆ ಅಲ್ಲಿ ಅವನಿಗೆ ಅತ್ಯುನ್ನತ ಆಧ್ಯಾತ್ಮಿಕ ಸತ್ಯವನ್ನು ಅನುಭವಿಸುವ ಸುಯೋಗ ಲಭಿಸಿತು. ಅನಂತರ ಅವನು ಆ ಸ್ಥಿತಿಯಿಂದ ಕೆಳಗಿಳಿದು ಬಂದು ಆಂತರಿಕ ಭಾವವನ್ನು ಹೊರಗಡೆ ವ್ಯಕ್ತಿಗಳಲ್ಲಿ ನೋಡಲು ಪ್ರಯತ್ನಿಸುತ್ತಾನೆ – ಆದರೆ ಎಲ್ಲ ವಿಪರೀತ. ಯಾರೂ ಭಗವತ್ ಸೇವೆ ಯಲ್ಲಿ ನಿರತರಾಗಿಲ್ಲ, ಎಲ್ಲರೂ ಕಾಮ–ಕಾಂಚನ ಸೇವೆಯಲ್ಲಿಯೇ ನಿರತರು. ಆಗ ಅವನ ಮನಸ್ಸು ನಿರಾಶೆ ಮತ್ತು ದುಃಖದಿಂದ ತುಂಬಿಹೋಯಿತು. ಅವನು ಭಾವಿಸಿದ : 'ಇದೇನಿದು ? ನೀವು ಹೊರಗಡೆ ಸಂಸಾರದಲ್ಲಿ ಏನು ಮಾಡಬೇಕೊ ಮಾಡಿ, ಆದರೆ ಇಲ್ಲಿ ಏಕೆ ? ಇದು ಭಗವಂತನ ಸಾನಿಧ್ಯ – ಇಲ್ಲಿ ಈ ಪ್ರಾಪಂಚಿಕ ವ್ಯವಹಾರವೇಕೆ ? ಇಲ್ಲಿ ಬಂದು ಸಂಸಾರವನ್ನು ಮರೆತು ಭಗವಂತನನ್ನು ಚಿಂತಿಸುವುದು ಬಿಟ್ಟು ಇಲ್ಲಿಯೂ ಸಂಸಾರವನ್ನು ತಂದು ತುಂಬಿಸಿದ್ದೀರಿ.' ಹೀಗೆ ಯೋಚಿಸುತ್ತ ಅವನಿಗೆ ಕ್ರೋಧ ಉಕ್ಕಿ ಬಂತು. ಅವನು ಉಗ್ರ ರೂಪವನ್ನು ತಾಳಿ ಕೈಯಲ್ಲಿ ಬೆತ್ತವನ್ನು ಹಿಡಿದು ವ್ಯಾಪಾರಿ ಗಳನ್ನೂ ಮತ್ತಿತರರನ್ನೂ ದೇವಸ್ಥಾನದಿಂದ ಹೊಡೆದು ಓಡಿಸಿದನು. ಅವರಿಗೂ ಅವನ ಮಾತಿನಿಂದ ಸ್ವಲ್ಪ ಹೊತ್ತಿನ ಮಟ್ಟಿಗೆ ತಿಳಿವಳಿಕೆ ಬಂದು ತಮ್ಮ ತಪ್ಪಿನ ಅರಿವಾಗಿ ಎಲ್ಲರೂ ಅಲ್ಲಿಂದ ಕಾಲ್ಕಿತ್ತರು. ಯಾರಿಗೂ ಅವನನ್ನು ಪ್ರತಿಭಟಿಸುವ ಧೈರ್ಯವಿರಲಿಲ್ಲ.

ಶ್ರೀಕೃಷ್ಣನ ಜೀವನದಲ್ಲಿಯೂ ಇಂತಹ ಹಲವು ಘಟನೆಗಳಿವೆ. ಅವನ ಹೊಡೆತ ದಿಂದ ಜ್ಞಾನವನ್ನು ಪಡೆದು ಅವನನ್ನು ಭಗವಂತನೆಂದು ಸ್ತುತಿಸಿದ ಸಂದರ್ಭಗಳಿವೆ. ಅತ್ಯಂತ ಹೀನ ಬುದ್ಧಿಯ ವ್ಯಕ್ತಿಗಳು ಅವನ ಮೇಲೆ ಆಕ್ರಮಣ ಮಾಡಲು ಹೋಗಿ

ಅವನ ನಗುವಿನಿಂದ ಅಥವಾ ಮಾತಿನಿಂದ ಸ್ತಂಭಿತರಾಗಿ ನಿಃಸ್ತೇಜರಾದ ಸಂದರ್ಭಗಳಿವೆ. ಈಗ ಈ ವಿಷಯವನ್ನು ಇಲ್ಲಿಗೇ ನಿಲ್ಲಿಸೋಣ.

12. ಗುರುಭಾವದಲ್ಲಿ ತನ್ಮಯರಾಗಿ ಶ್ರೀರಾಮಕೃಷ್ಣರು ಯಾವ ರೀತಿ ಇತರರೊಡನೆ ವ್ಯವಹರಿಸುತ್ತಿದ್ದರು ಮತ್ತು ಅವರಿಗೆ ಬುದ್ಧಿ ಕಲಿಸುತ್ತಿದ್ದರು ಎಂಬುದಕ್ಕೆ ಈ ಮೇಲಿನ ಘಟನೆ ಒಂದು ಜ್ವಲಂತ ನಿದರ್ಶನವಾಗಿದೆ. ಈ ಘಟನೆಯನ್ನು ಸರಿಯಾಗಿ ವಿಮರ್ಶಿಸಿ ನೋಡಿದಾಗ ಇದು ಸಾಮಾನ್ಯ ಘಟನೆ ಎನಿಸುವುದಿಲ್ಲ. ಶ್ರೀರಾಮಕೃಷ್ಣರು ಆಗ ಒಬ್ಬ ವೇತನಕ್ಕಾಗಿ ಕೆಲಸ ಮಾಡುತ್ತಿದ್ದ ಅತ್ಯಂತ ಸಾಮಾನ್ಯ ಅರ್ಚಕರಷ್ಟೆ. ರಾಣಿರಾಸಮಣಿಯಾದರೊ ತನ್ನ ಶ್ರೀಮಂತಿಕೆ, ಮಾನ, ಬುದ್ಧಿ, ಧೈರ್ಯ ಸಾಹಸಗಳಿಂದಾಗಿ ಇಡೀ ಕಲಕತ್ತೆಯಲ್ಲಿಯೇ ಒಬ್ಬ ಪ್ರತಿಷ್ಠಿತ ವ್ಯಕ್ತಿಯಾಗಿ ಮೆರೆಯುತ್ತಿದ್ದವಳು. ದರಿದ್ರ ಬ್ರಾಹ್ಮಣನೊಬ್ಬನು ಆಕೆಯ ಹತ್ತಿರ ಹೋಗುವುದೇ ಅಸಾಧ್ಯ. ಒಂದು ವೇಳೆ ಹೋದರೂ ಅವಳನ್ನು ಹೇಗಾದರೂ ಮಾಡಿ ಸಂತೋಷಪಡಿಸಿ ಏನಾದರೂ ಪಡೆಯುವ ಉದ್ದೇಶದಿಂದ ನಡುಗುತ್ತ ಹೋಗಬೇಕು. ಆದರೆ ಇಲ್ಲಿ ಆದದ್ದೇ ಬೇರೆ. ಶ್ರೀರಾಮಕೃಷ್ಣರು ಅವಳ ತಪ್ಪನ್ನು ವಿರೋಧಿಸಿದುದು ಮಾತ್ರವಲ್ಲದೆ ಅವಳಿಗೆ ಹೊಡೆಯುವ ಸಾಹಸವನ್ನೂ ಮಾಡಿದರು. ಶ್ರೀರಾಮಕೃಷ್ಣರ ದೃಷ್ಟಿಯಿಂದ ನೋಡಿದಾಗ ಇದು ಸಾಮಾನ್ಯ ಘಟನೆ ಎನಿಸುವುದಿಲ್ಲ. ರಾಣಿಯ ದೃಷ್ಟಿಯಿಂದ ನೋಡಿದಾಗಲೂ ಅವಳು ಇದರಿಂದ ಕೋಪಗೊಂಡು ಅಭಿಮಾನದಿಂದ ಅವರಿಗೆ ಪ್ರತಿಶಿಕ್ಷೆ ನೀಡದಿದ್ದುದೂ ತುಂಬ ವಿಸ್ಮಯಕರವೇ. ಹಿಂದೆಯೇ ಹೇಳಿದಂತೆ ಯಾರು ಸ್ವಾರ್ಥಶೂನ್ಯರಾಗಿ ವಿಶ್ವ ಅಹಂತತ್ತ್ವದೊಡನೆ ಒಂದಾಗಿ ಗುರುಭಾವವನ್ನು ಪಡೆದಿರುತ್ತಾರೊ ಅವರ ಮುಂದೆ ಸಾಧಾರಣ ವ್ಯಕ್ತಿಗಳು, ತಮಗಿಷ್ಟವಿಲ್ಲದಿದ್ದರೂ, ತಲೆಬಾಗಲೇ ಬೇಕು. ರಾಸಮಣಿಯಂತಹ ಭಕ್ತಿಭಾವದ ಸಾತ್ತ್ವಿಕ ವ್ಯಕ್ತಿಗಳ ಬಗ್ಗೆ ಹೇಳಬೇಕಾಗಿಯೇ ಇಲ್ಲ ! ಏಕೆಂದರೆ ಅವರು ಗುರುವಿನ ಕೃಪೆಯಿಂದ ಗುರು ತಮಗೆ ಏನು ಹೇಳುತ್ತಾನೊ ಅದೆಲ್ಲ ತಮ್ಮ ಆಧ್ಯಾತ್ಮಿಕ ಉನ್ನತಿಗಾಗಿಯೇ ಎಂಬುದನ್ನು ಮನಗಂಡು ಅದರಂತೆ ನಡೆಯಲು ಪ್ರಯತ್ನಿಸುತ್ತಾರೆ. ಇನ್ನೊಂದು ವಿಷಯ. ಶ್ರೀರಾಮಕೃಷ್ಣರು ಹೇಳುತ್ತಿದ್ದರು : "ಭಗವಂತನ ವಿಶೇಷ ಅಂಶ ಒಳಗಡೆ ಇರದಿದ್ದರೆ ಯಾವ ವ್ಯಕ್ತಿಯೂ ಯಾವ ಕ್ಷೇತ್ರದಲ್ಲಿಯೂ ಶ್ರೇಷ್ಠನಾಗಲು ಸಾಧ್ಯವಿಲ್ಲ ; ಸ್ಥಾನ, ಮಾನ, ಅಧಿಕಾರಗಳನ್ನು ಅರಗಿಸಿಕೊಳ್ಳಲು ಅವನಿಗೆ ಸಾಧ್ಯವಾಗುವುದಿಲ್ಲ." ಆದ್ದರಿಂದ ರಾಣಿಯಲ್ಲಿಯೂ ಈ ರೀತಿಯ ಭಗವತ್ ಶಕ್ತಿ ಇದ್ದುದ್ದರಿಂದಲೇ ಶ್ರೀರಾಮಕೃಷ್ಣರ ಗುರುಭಾವದ ಈ ಉಗ್ರ ಅಭಿವ್ಯಕ್ತಿಯನ್ನು ಸಹಿಸಿಕೊಳ್ಳಲು ಸಾಧ್ಯವಾಯಿತು. ಶ್ರೀರಾಮಕೃಷ್ಣರು ಹೇಳುತ್ತಿದ್ದರು : "ರಾಣಿ ರಾಸಮಣಿಯು ಶ್ರೀಜಗನ್ಮಾತೆಯ ಎಂಟು ಜನ ಸಂಗಡಿಗರಲ್ಲಿ (ನಾಯಿಕೆಯರು) ಒಬ್ಬಳು. ಜಗನ್ಮಾತೆಯ ಪೂಜೆಯನ್ನು ಪ್ರಚಾರ ಮಾಡಲು ಅವಳು ಧರೆಗಿಳಿದು ಬಂದಿದ್ದಳು. ಅವಳ ಅಧಿಕಾರ ಮುದ್ರೆಯಲ್ಲಿ 'ಕಾಳೀಪದ ಅಭಿಲಾಷೀ ಶ್ರೀಮಂತಿ ರಾಸಮಣಿ ದಾಸಿ' ಎಂಬ ಅಂಕಿತವಿತ್ತು. ರಾಣಿಯ ಪ್ರತಿಯೊಂದು ಕಾರ್ಯ

ದಲ್ಲಿಯೂ ಈ ರೀತಿಯ ನಿಶ್ಚಲ ಭಕ್ತಿ ವ್ಯಕ್ತವಾಗಿತ್ತು."

13 ಇನ್ನೊಂದು ವಿಷಯ. ಎಲ್ಲ ರೀತಿಯಿಂದಲೂ ಭಗವಂತನಲ್ಲಿ ತನ್ಮಯವಾದ ಮನಸ್ಸು ವಿವಿಧ ಅವಸ್ಥೆಯಲ್ಲಿರುತ್ತದೆ ಎಂದು ಶಾಸ್ತ್ರ ಹೇಳುತ್ತದೆ. ಶಂಕರಾಚಾರ್ಯರು 'ವಿವೇಕಚೂಡಾಮಣಿ'ಯಲ್ಲಿ ಈ ವಿಷಯವನ್ನು ಸುಂದರವಾಗಿ ಹೇಳಿರುವರು ;

ದಿಗಂಬರೋ ವಾಪಿ ಚ ಸಾಂಬರೋ ವಾ ತ್ವಗಂಬರೋ ವಾಪಿ ಚಿದಂಬರಸ್ಥಃ ।
ಉನ್ಮತ್ತವತ್ ವಾಪಿ ಚ ಬಾಲವತ್ ವಾ ಪಿಶಾಚವತ್ ವಾ ವಿಚರತ್ಯವನ್ಯಾಮ್ ॥

''ಭಗವತ್ ಸಾಕ್ಷಾತ್ಕಾರವನ್ನು ಪಡೆದು ಆಸೆಗಳಿಂದ ಮುಕ್ತರಾದ ಸಿದ್ಧಪುರುಷರು ದಿಗಂಬರರಾಗಿ ಚಲಿಸಬಹುದು, ಬಟ್ಟೆಯನ್ನು ಧರಿಸಿರಬಹುದು ಅಥವಾ ಚರ್ಮವನ್ನು ಧರಿಸಿಕೊಂಡಿರಬಹುದು. ಹುಚ್ಚರಂತೆಯೂ, ಬಾಲಕರಂತೆಯೂ ಅಥವಾ ಪಿಶಾಚಿಯಂತೆಯೊ ಓಡಾಡಬಹುದು.''

14. ವಿಶ್ವ ಅಹಂನಲ್ಲಿ ಅವರು ಒಂದಾಗಿರುವುದರಿಂದ ಸಾಧಾರಣ ವ್ಯಕ್ತಿಗಳಿಗೆ ಅವರು ಹೀಗೆ ವಿಚಿತ್ರವಾಗಿ ಕಾಣುವರು. ಆದರೆ ನಿಜವಾಗಿಯೂ ಭಗವಂತನ ವಿಶೇಷ ಶಕ್ತಿಯಾದ ಗುರುಭಾವವು ಹರಿಯುವುದು ಇಂತಹ ವ್ಯಕ್ತಿಗಳ ಮೂಲಕವೇ, ಏಕೆಂದರೆ ಇವರು ತಮ್ಮ ಸ್ವಾರ್ಥವನ್ನು ಸಂಪೂರ್ಣ ತ್ಯಜಿಸಿ ವಿಶ್ವ ಅಹಂನೊಂದಿಗೆ ಒಂದಾಗಿರುತ್ತಾರೆ. ಅವರು ಸಾಧಾರಣ ವ್ಯಕ್ತಿಗಳಂತೆ ಕಂಡರೂ ಗುರುವಿನ ಗುರುತರ ಜವಾಬ್ದಾರಿ ಅವರ ಮೇಲಿರುತ್ತದೆ. ಅವರು ಇತರರಿಗೆ ಭೋಧಿಸಬೇಕಾಗಿರುವುದರಿಂದ ಸತ್ಯನಿಷ್ಠೆ, ಉತ್ತಮ ನಡತೆ, ಆತ್ಮ-ನಿಗ್ರಹ, ಬುದ್ಧಿವಂತಿಕೆ, ಶಾಸ್ತ್ರಜ್ಞಾನ ಮುಂತಾದ ವಿಶೇಷ ಗುಣಗಳನ್ನು ಅವರು ತೋರಿಸಬೇಕಾಗುತ್ತದೆ. 'ತೋರಿಸಬೇಕಾಗುತ್ತದೆ' ಎಂದು ಏಕೆ ಹೇಳುತ್ತಿರುವುದೆಂದರೆ, ಅವರು ಏಕಮೇವಾದ್ವಿತೀಯ ಸತ್ಯದ ಸಾಕ್ಷಾತ್ಕಾರವನ್ನು ಪಡೆದಿರುವುದರಿಂದ ಒಳಿತು-ಕೆಡುಕು, ಪಾಪ-ಪುಣ್ಯ, ಧರ್ಮ-ಅಧರ್ಮ ಮುಂತಾದ ಮಾಯಾ ರಾಜ್ಯಕ್ಕೆ ಸೇರಿದ ಭೇದಭಾವಗಳು ಅವರ ಅಂತರ್ಯದಲ್ಲಿ ಇರುವುದೇ ಇಲ್ಲ. ಇತರರಿಗೇ ಮಾಯಾರಾಜ್ಯದಿಂದ ಪಾರಾಗುವುದಕ್ಕೆ ಮಾರ್ಗದರ್ಶನ ಮಾಡಬೇಕಾಗಿರುವುದರಿಂದ ಅವರು ಈ ಉತ್ತಮ ಗುಣಗಳನ್ನು ಇಟ್ಟುಕೊಂಡು ಇರುತ್ತಾರೆ. ಇದು ಸಾಧಾರಣ ಗುರು ಅಥವಾ ಋಷಿಗಳ ವಿಚಾರವಾದರೆ ಇನ್ನು ಭಗವದವತಾರರಾದ ಲೋಕ ಗುರುಗಳ ಬಗ್ಗೆ ಹೇಳಬೇಕಾಗಿಯೇ ಇಲ್ಲ. ಆದ್ದರಿಂದ ಅವರನ್ನು ಅರ್ಥಮಾಡಿಕೊಳ್ಳುವುದು ಸಾಧಾರಣ ವ್ಯಕ್ತಿಗಳಿಗೆ ಅತ್ಯಂತ ಕಠಿಣ ವಿಶೇಷವಾಗಿ ವರ್ತಮಾನ ಯುಗದ ಶ್ರೀರಾಮಕೃಷ್ಣರ ರೀತಿ ನೀತಿಗಳನ್ನು ಅರ್ಥಮಾಡಿಕೊಳ್ಳುವುದು ಇನ್ನೂ ಕಠಿಣ. ಹಿಂದಿನ ಅವತಾರ ಪುರುಷರಲ್ಲಿ ಭಗವಂತನ ಶಕ್ತಿ ಅಥವಾ ವಿಭೂತಿ ವಿಶೇಷ ರೀತಿಯಲ್ಲಿ ಪ್ರಕಟಗೊಂಡಿತ್ತು. ಆದರೆ ಇವರಲ್ಲಿ ಅದು ಎಷ್ಟೊಂದು ಗುಪ್ತ ರೀತಿಯಲ್ಲಿ ಪ್ರಕಾಶಿಸುತ್ತಿತ್ತೆಂದರೆ ಅವರೊಡನೆ ಘನಿಷ್ಟ ಸಂಬಂಧವನ್ನು ಇಟ್ಟುಕೊಂಡವರಿಗೆ ಮಾತ್ರ ಅದು ತಿಳಿಯುತ್ತಿತ್ತೇ ವಿನಃ ಕೇವಲ ಒಂದೆರಡು ಬಾರಿ ಅವರನ್ನು ನೋಡಿ ಮೇಲುಮೇಲಕ್ಕೆ

ಅವರ ಪರಿಚಯವನ್ನು ಪಡೆದವರಿಗೆ ಅದು ತಿಳಿಯಲು ಸಾಧ್ಯವೇ ಇರಲಿಲ್ಲ. ಯಾವುದಾದರೂ ಬಾಹ್ಯ ಗುಣವನ್ನು ನೋಡಿ ಅವರೆಡೆಗೆ ಆಕರ್ಷಿತರಾಗಲು ಸಾಧ್ಯವೆ ? ಅವರು ವಿದ್ಯಾವಂತರೆ? ಇಲ್ಲ, ನಿರಕ್ಷರರೇದೇ ಹೇಳಬಹುದು. ಆದರೂ ಅವರು ತಮ್ಮ ಅದ್ಭುತ ಸ್ಮರಣ ಶಕ್ತಿಯಿಂದ ವೇದ ವೇದಾಂತಗಳನ್ನು ಕೇಳಿ ತಿಳಿದುಕೊಂಡಿದ್ದರು, ಎಲ್ಲ ಕರಗತ ಮಾಡಿಕೊಂಡಿದ್ದರು. ಅವರು ತುಂಬ ಬುದ್ಧಿಶಾಲಿಗಳೇ ಎಂದು ನೋಡಿದರೆ, ಅವರು ಯಾವಾಗಲೂ ಹೇಳುತ್ತಿದ್ದರು, "ನಾನು ಏನೂ ಅಲ್ಲ, ನನಗೇನೂ ತಿಳಿಯದು – ಎಲ್ಲ ನನ್ನ ತಾಯಿಗೇ ಗೊತ್ತು" ಎಂದು. ಯಾವಾಗಲೂ ಈ ರೀತಿ ಹೇಳುವವರ ಹತ್ತಿರ ಯಾವ ಉಪದೇಶವನ್ನು ಪಡೆಯಲು ಸಾಧ್ಯ ? ಆ ರೀತಿ ಪಡೆಯಲು ಹೋಗಿ "ತಾಯಿಯನ್ನು ಕೇಳು, ಅವಳು ಹೇಳುತ್ತಾಳೆ" ಎಂದು ಅವರು ಹೇಳಿದರೆ ಅವರ ಮಾತಿನಲ್ಲಿ ವಿಶ್ವಾಸವಿರಿಸಿ ಆ ರೀತಿ ಮಾಡಲು ಸಾಧ್ಯವೆ ? ನಿಮಗೆ ಅನ್ನಿಸಬಹುದು : 'ಇದೆಂಥ ಉಪದೇಶ ! ಭಗವಂತನೇ ಸರ್ವಜ್ಞ. ಸರ್ವಶಕ್ತ, ನಿರಾಕಾರ ಚೈತನ್ಯ ಸ್ವರೂಪ; ಅವನು ಇಷ್ಟಪಟ್ಟರೆ ಎಲ್ಲ ವಿಷಯವನ್ನು ತಿಳಿಸಿಕೊಡಬಲ್ಲನು – ಎಂದು ಮೊದಲಿನಿಂದ ಓದಿಕೊಂಡು ಬಂದಿದ್ದೇವೆ. ಆದರೆ ಆದರಂತೆ ನಡೆಯಲಾಗುವುದೆ ?' ಅವರು ಧನವಂತರೇ, ಕೀರ್ತಿವಂತರೆ ಎಂದು ನೋಡಿದರೆ ಅದೂ ಅಲ್ಲ. ಅವರಲ್ಲಿದ್ದ ಇತರರನ್ನು ಆಕರ್ಷಿಸುವಂತಹ ಗುಣವೆಂದರೆ ಪವಿತ್ರತೆ ಮತ್ತು ಭಗವದನುರಾಗ. ಇದರಿಂದ ನೀವು ಆಕೃಷ್ಟರಾದರೆ ಆಯಿತು, ಇಲ್ಲದಿದ್ದರೆ ಅವರನ್ನು ಅಳೆಯುವುದು ಅರ್ಥಮಾಡಿಕೊಳ್ಳುವುದು ಅಸಾಧ್ಯದ ಕೆಲಸ. ಆದ್ದರಿಂದಲೇ ನಾವು ಹೇಳುತ್ತೇವೆ: ರಾಣಿ ರಾಸಮಣಿಯು ಶ್ರೀರಾಮಕೃಷ್ಣರ ಈ ಉಗ್ರರೂಪದ ಗುರುಭಾವವನ್ನು ಅರ್ಥಮಾಡಿಕೊಂಡು ಅಭಿಮಾನಕ್ಕೆ ಒಳಗಾಗದೆ ಅವರ ಮಾತನ್ನು ಗ್ರಹಿಸಿದುದು ಸಾಮಾನ್ಯ ವಿಷಯವಲ್ಲ – ಇದು ಆಕೆಯ ದೊಡ್ಡ ಸೌಭಾಗ್ಯವೆಂದೇ ಹೇಳಬೇಕು.

ಆರನೆಯ ಅಧ್ಯಾಯ

ಗುರುಭಾವ ಮತ್ತು ಮಥುರನಾಥ

1. ದೊಡ್ಡ ಹೂವು ತಡವಾಗಿ ಅರಳುತ್ತದೆ 2. ಮಥುರನೊಡನೆ ಶ್ರೀರಾಮಕೃಷ್ಣರ ಅಪೂರ್ವ ಸಂಬಂಧ, ಮಥುರನ ಸ್ವಭಾವ 3. ಭಾವವಿಕಾಸಕ್ಕೆ ರಾಸಮಣಿ ಮತ್ತು ಮಥುರರ ಸಹಾಯ, ಶತ್ರುಮಿತ್ರರೆಲ್ಲರೂ ಅವತಾರ ಪುರುಷರ ಶಕ್ತಿ ವಿಕಾಸಕ್ಕೆ ಸಹಾಯಕರಾಗುತ್ತಾರೆ 4. ಸಾಧಾರಣ ಮಾನವನಲ್ಲಿಯೂ ಹೀಗೆಯೇ ಆಗುತ್ತದೆ 5. ಮಥುರನು ಭಕ್ತನಾದರೂ ಮೂರ್ಖನಾಗಿರಲಿಲ್ಲ 6. ಶ್ರೀರಾಮಕೃಷ್ಣರ ಕಡೆ ಮಥುರನ ಆಕರ್ಷಣೆ—ಅವರ ಬಗ್ಗೆ ಅವನ ಅಭಿಪ್ರಾಯ 7. ಭಕ್ತಿಯ ಸಂಕ್ರಾಮಿಕ ಶಕ್ತಿಯಿಂದ ಮಥುರನಲ್ಲಿ ಪರಿವರ್ತನೆ 8. ಶ್ರೀರಾಮಕೃಷ್ಣರೊಡನೆ ಅವನ ತರ್ಕ–ಕೆಂಪು ದಾಸವಾಳಗಿಡದಲ್ಲಿ ಬಿಳಿಹೂವು 9. ಶ್ರೀರಾಮಕೃಷ್ಣರ ಸ್ಥಿತಿಯ ಬಗ್ಗೆ ನಿತ್ಯ ಚರ್ಚಿಸುವುದು ಅವನಿಗೆ ಅನಿವಾರ್ಯವಾಗಿತ್ತು 10. 'ಮಹಿಮ್ನಃಸ್ತೋತ್ರ' ಪಠಿಸುತ್ತ ಶ್ರೀರಾಮಕೃಷ್ಣರ ಸಮಾಧಿ 11. ಅವರ ಹತ್ತಿರವಿದ್ದಾಗ ಇತರರಿಗೆ ಸುಲಭವಾಗಿ ಆಧ್ಯಾತ್ಮಿಕ ಪ್ರಗತಿ ಆಗುತ್ತಿತ್ತು 12. ಮಥುರನು ಅವರಲ್ಲಿ ಶಿವ ಶಕ್ತಿಯರನ್ನು ಕಂಡದ್ದು 13. ಈ ದರ್ಶನದ ಫಲ 14. ಮಥುರನ ಮಹಾಭಾಗ್ಯದ ಸಂಬಂಧವಾಗಿ ಶಾಸ್ತ್ರಪ್ರಮಾಣ 15. ಮಥುರನು ಶ್ರೀರಾಮಕೃಷ್ಣರನ್ನು ಯಾವರೀತಿ ಸೇವಿಸಿದನು ಮತ್ತು ಪರೀಕ್ಷಿಸಿದನು? 'ಹಲದಾರ ಪುರೋಹಿತನ ಅಸೂಯೆ 17. ವಾರಾಣಸಿ ಶಾಲಿನ ದುರ್ದಶೆ 18. ಶ್ರೀರಾಮಕೃಷ್ಣರ ನಿರ್ಲಿಪ್ತತೆ 19. ಹಲದಾರ ಪುರೋಹಿತನ ದುಷ್ಕೃತ್ಯ 20. ಮಥುರ ಮತ್ತು ಅವನ ಪತ್ನಿಯ ಗುರುಭಕ್ತಿ—ಅವರ ಕುಟುಂಬದೊಡನೆ ಶ್ರೀರಾಮಕೃಷ್ಣರ ಸಂಬಂಧ 21. ವಿರುದ್ಧ ಭಾವಗಳು ಶ್ರೀರಾಮಕೃಷ್ಣರಲ್ಲಿ ಸಮಾವೇಶಗೊಂಡಿದ್ದುವು 22 ಭಗ್ನ ಮೂರ್ತಿಯ ಬಗ್ಗೆ ಚರ್ಚಿಸಲು ಪಂಡಿತ ಸಭೆ 23. ಇದಕ್ಕೆ ಶ್ರೀರಾಮಕೃಷ್ಣರ ಪರಿಹಾರ

ಹಂತ ತೇ ಕಥಯಿಷ್ಯಾಮಿ ದಿವ್ಯಾ ಹ್ಯಾತ್ಮವಿಭೂತಯಃ ।
ಪ್ರಾಧಾನ್ಯತಃ ಕುರುಶ್ರೇಷ್ಠ ನಾಸ್ತ್ಯಂತೋ ವಿಸ್ತರಸ್ಯ ಮೇ ॥ ಭಗವದ್ಗೀತೆ 10. 19

"ಎಲೈ, ಅರ್ಜುನನೇ, ನನ್ನ ದಿವ್ಯ ವಿಭೂತಿಗಳನ್ನು ನಿನಗೆ ಹೇಳುತ್ತೇನೆ. ಅವುಗಳ ವಿಸ್ತಾರಕ್ಕೆ ಕೊನೆಯೇ ಇಲ್ಲ. ಆದ್ದರಿಂದ ಪ್ರಧಾನವಾದವುಗಳನ್ನು ಮಾತ್ರ ಹೇಳುತ್ತೇನೆ."

1. ಶ್ರೀರಾಮಕೃಷ್ಣರ ಗುರುಭಾವವು ರಾಣಿ ರಾಸಮಣಿ ಮತ್ತು

ಮಥುರನಾಥರ ಮುಂದೆಯೇ ಬಹುಮಟ್ಟಿಗೆ ಪ್ರಕಾಶಗೊಂಡಿತು. ಉಚ್ಚ ರೀತಿಯ ಭಾವವಿಕಾಸದ ಬಗ್ಗೆ ಶ್ರೀರಾಮಕೃಷ್ಣರು ಹೇಳುತ್ತಿದ್ದರು : "ದೊಡ್ಡ ಹೂವು ಅರಳುವುದು ತಡವಾಗಿ, ಸಾರವುಳ್ಳ ಮರ ಬೆಳೆಯುವುದಕ್ಕೆ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ." ಶ್ರೀರಾಮಕೃಷ್ಣರಲ್ಲಿಯೂ ಗುರುಭಾವವು ಪೂರ್ಣವಿಕಾಸಗೊಳ್ಳಲು ಹೆಚ್ಚು ಸಮಯ ಹಿಡಿಯಿತು, ಹೆಚ್ಚು ಸಾಧನೆ ಬೇಕಾಯಿತು. ಅವರು ಹನ್ನೆರಡು ವರ್ಷ ನಿರಂತರ ಕಠಿನ ಸಾಧನೆ ಮಾಡಬೇಕಾಯಿತು. ಆ ಸಾಧನೆಯ ಬಗ್ಗೆ ಮೊದಲೇ ಸವಿಸ್ತಾರವಾಗಿ ಹೇಳಿಯಾಗಿದೆ. ಇಲ್ಲಿ ಚಿತ್ ಸೂರ್ಯನ ಕಿರಣರಾಶಿಯು ಬಿದ್ದು ಸರಿಯಾಗಿ ಅರಳಿದ ಗುರುಭಾವವೆಂಬ ಪುಷ್ಪದೊಡನೆಯೇ ನಮ್ಮ ಸಂಬಂಧ, ಅದರ ಬಗ್ಗೆಯೇ ವಿಶೇಷವಾಗಿ ಹೇಳುತ್ತೇವೆ. ಆದರೆ ಆದ್ಯಂತವಾಗಿ ಅದರ ಬಗ್ಗೆ ಹೇಳುವಾಗ ಬೇರೆ ವಿಷಯವೂ ಮಧ್ಯೆ ಬಂದುಬಿಡುತ್ತದೆ. ಈ ಗುರುಭಾವದ ಬಗ್ಗೆ ವಿಸ್ತಾರವಾಗಿ ಹೇಳುವಾಗ ಅದಕ್ಕೆ ಸಂಬಂಧಪಟ್ಟ ವ್ಯಕ್ತಿಗಳ ವಿಚಾರವೂ ಬಂದೇಬರುತ್ತದೆ.

2. ಶ್ರೀರಾಮಕೃಷ್ಣರೊಡನೆ ಮಥುರನಾಥನ ಸಂಬಂಧ ತುಂಬ ವೈಶಿಷ್ಟ್ಯಪೂರ್ಣವಾದುದು. ಮಥುರನು ದೊಡ್ಡ ಶ್ರೀಮಂತ ಮತ್ತು ರಾಜಸಿಕ ಪ್ರವೃತ್ತಿಯವನು ; ವಿಷಯಾಸಕ್ತನಾದರೂ ಭಕ್ತ ; ಹಠಮಾರಿಯಾದರೂ ಬುದ್ಧಿವಂತ ; ತುಂಬ ಕೋಪಿಷ್ಠನಾದರೂ ಧೈರ್ಯವಂತನಾಗಿದ್ದ, ದೃಢಪ್ರತಿಜ್ಞೆಯುಳ್ಳವನಾಗಿದ್ದ. ಅವನು ಇಂಗ್ಲಿಷ್ ವಿದ್ಯೆ ಕಲಿತವನು ಮತ್ತು ತುಂಬ ವಾದಮಾಡುತ್ತಿದ್ದ. ಆದರೆ ಯಾರಾದರೂ ಏನಾದರೂ ಅವನಿಗೆ ತಿಳಿಸಲು ಹೋದರೆ ಉದ್ಧಟತನದಿಂದ ತಿರಸ್ಕರಿಸುತ್ತಿರಲಿಲ್ಲ. ಅವನು ದೈವಭಕ್ತನಾದರೂ ಧರ್ಮದ ವಿಷಯದಲ್ಲಿ ಯಾರು ಏನು ಹೇಳಿದರೂ ಕಣ್ಣು ಮುಚ್ಚಿಕೊಂಡು ಕೇಳುವ ಸ್ವಭಾವದವನಲ್ಲ–ಅದು ಶ್ರೀರಾಮಕೃಷ್ಣರೇ ಆಗಲಿ, ಗುರುವೇ ಆಗಲಿ, ಬೇರೆ ಇನ್ನಾರೇ ಆಗಲಿ. ಅವನು ಉದಾರ ಮತ್ತು ಸರಳ ಸ್ವಭಾವದವನು. ಅಂದಮಾತ್ರಕ್ಕೆ ಯಾವುದೇ ವಿಷಯದಲ್ಲಾದರೂ ಮೂರ್ಖನಂತೆ ವರ್ತಿಸುತ್ತಿರಲಿಲ್ಲ. ಬದಲು ಬಹಳ ಮುತ್ಸದ್ದಿತನದಿಂದ, ಕೆಲವೊಮ್ಮೆ ಆವಶ್ಯಕವಾದರೆ ಕುಹಕತೆಯಿಂದಲೂ ತನ್ನ ಕೆಲಸ ಸಾಧಿಸುತ್ತಿದ್ದ. ರಾಣಿ ರಾಸಮಣಿಗೆ ಗಂಡುಮಕ್ಕಳಿಲ್ಲದಿದ್ದುದರಿಂದ ಅವಳು ಮಥುರನಾಥನನ್ನೇ ಎಲ್ಲ ವಿಷಯದಲ್ಲಿಯೂ ಆಶ್ರಯಿಸಿದ್ದಳು. ಬೇರೆ ಅಳಿಯಂದಿರಿದ್ದರೂ ಅವರಾರೂ ಪ್ರಾಪಂಚಿಕ ವ್ಯವಹಾರದಲ್ಲಿ ಅಷ್ಟು ದಕ್ಷರಾಗಿರಲಿಲ್ಲ. ಆದ್ದರಿಂದ ಆಕೆ ಇವನ ಮೇಲೆ ತುಂಬ ಭರವಸೆಯನ್ನಿಟ್ಟುಕೊಂಡಿದ್ದಳು. ಅತ್ತೆ ಮತ್ತು ಅಳಿಯ– ಇವರಿಬ್ಬರ ಪ್ರತಿಭೆ ಒಟ್ಟುಗೂಡಿದ್ದರಿಂದಲೇ ರಾಸಮಣಿಯ ಕೀರ್ತಿ ಎಲ್ಲ ಕಡೆಯೂ ಹರಡಿತು.

3. ಓದುಗರು ಕೇಳಬಹುದು ಪ್ರಸ್ತುತದ ನಡುವೆ ಅಪ್ರಸ್ತುತದ ಪ್ರವೇಶವೇತಕ್ಕೆ, ಶ್ರೀರಾಮಕೃಷ್ಣರ ವಿಷಯವನ್ನು ಬಿಟ್ಟು ಮಥುರನ ವಿಷಯವೇಕೆ ? ಎಂದು. ಇದಕ್ಕೆ ಕಾರಣವಿದೆ. ಆಗ ಇನ್ನೂ ಶ್ರೀರಾಮಕೃಷ್ಣರ ಗುರುಭಾವ ತನ್ನ ಗೂಡನ್ನು ಒಡೆದು ಹೊರಬರುತ್ತಿತ್ತು. ಮಥುರನು ಅದನ್ನು ಗುರುತಿಸಿದವರಲ್ಲಿ ಮೊದಲಿಗ.

ಮುಂದಿನ ಅದರ ಹಿರಿಮೆಯನ್ನು ಗುರುತಿಸಿ ಅದನ್ನು ಪೋಷಿಸಿ ರಕ್ಷಿಸಲು ಅವನು ಸಹಾಯಕನಾದ. ಈ ವಿಶೇಷ ಭಾವವು ಮುಕ್ತವಾಗಿ ಪ್ರಕಟವಾಗಲು ಸಹಾಯಕನಾದ. ಒಂದು ಉತ್ತಮ ಕ್ಷೇತ್ರವನ್ನು ಕಲ್ಪಿಸಿದವಳು ರಾಸಮಣಿ. ಅದು ಬೆಳೆದು ಹೆಮ್ಮರವಾಗಲು ಬೇಕಾದ ಎಲ್ಲ ಆವಶ್ಯಕ ವಸ್ತುಗಳನ್ನು ಒದಗಿಸಿದವನು ಮಥುರನಾಥ. ತುಂಬ ವರ್ಷಗಳ ನಂತರ ನಮಗೆ ಈಗ ಇದು ಅರ್ಥವಾಗುತ್ತಿದೆ. ಸ್ವಲ್ಪಮಟ್ಟಿಗೆ ಅವರಿಬ್ಬರಿಗೆ ಅರ್ಥವಾಗಿದ್ದರೂ ತಾವು ಏಕೆ ಇಷ್ಟೆಲ್ಲ ಮಾಡುತ್ತಿರುವೆವೆಂಬುದರ ಪೂರ್ಣ ಅರಿವು ಅವರಿಗೆ ಆಗ ಇದ್ದಿರಲಿಕ್ಕಿಲ್ಲ. ಎಲ್ಲ ಯುಗದ ಮಹಾಪುರುಷರ ಜೀವನದಲ್ಲಿಯೂ ಈ ಒಂದು ಅಂಶ ನಮಗೆ ಕಂಡುಬರುತ್ತದೆ. ಒಂದು ಅಜ್ಞಾತ ಶಕ್ತಿಯು ಯಾರಿಗೂ ಕಾಣದಂತೆ ಅವರ ಹಿಂದೆ ಕೆಲಸಮಾಡುತ್ತಿರುತ್ತದೆ. ಅದು ಅವರ ಮಾರ್ಗದಲ್ಲಿ ಬರುವ ಎಲ್ಲ ಅಡಚಣೆಗಳನ್ನು ಹೋಗಲಾಡಿಸುತ್ತದೆ, ಇತರರನ್ನು ಅವರ ಪ್ರಭಾವಕ್ಕೆ ಒಳಗಾಗುವಂತೆ ಮಾಡಿ ಅವರನ್ನು ಎಲ್ಲ ರೀತಿಯಿಂದಲೂ ರಕ್ಷಿಸುತ್ತದೆ. ಹೀಗೆ ಆ ಮಹಾಪುರುಷರ ಜೀವನದಲ್ಲಿ ಬರುವ ಇತರ ವ್ಯಕ್ತಿಗಳಿಗೆ. ಅವರು ಮಿತ್ರರಾಗಿರಬಹುದು ಅಥವಾ ಶತ್ರುಗಳೇ ಆಗಿರಬಹುದು, ತಾವು ಆ ಅಜ್ಞಾತ ಶಕ್ತಿಯ ಕೇವಲ ಕೈಗೊಂಬೆಗಳು ಎಂಬುದು ತಿಳಿದಿರುವುದಿಲ್ಲ. ಆ ಮಹಾಪುರುಷರ ಅಂತಃಶಕ್ತಿಯನ್ನು ಹೊರಪಡಿಸಲು, ಅದರ ಮಹತ್ ಕಾರ್ಯದಲ್ಲಿ ಸಹಾಯಕರಾಗಲು ಇರುವ ಉಪಕರಣಗಳಂತೆ ತಾವು ವರ್ತಿಸುತ್ತಿದ್ದೇವೆ ಎಂಬುದು ಅವರಿಗೆ ಸ್ಪಷ್ಟವಿರುವುದಿಲ್ಲ. ಈ ವಿಷಯ ಎಷ್ಟು ಅಜ್ಞಾತವಾಗಿರುತ್ತದೆ ಎಂದರೆ ಮುಂದೆ ಇದರ ವೈಶಿಷ್ಟ್ಯವು ತಿಳಿದಾಗ ಎಲ್ಲರಿಗೂ ಅತ್ಯಾಶ್ಚರ್ಯವಾಗುತ್ತದೆ. ಕೈಕೇಯಿಯು ರಾಮಚಂದ್ರನನ್ನು ಕಾಡಿಗೆ ಕಳಿಸಿದ ಪ್ರಸಂಗವನ್ನು ನೋಡಿ ; ವಸುದೇವ ಮತ್ತು ದೇವಕಿಯರನ್ನು ಕಂಸನು ಸೆರೆಮನೆಯಲ್ಲಿರಿಸಿದುದರ ಅಂತಿಮ ಪರಿಣಾಮವೇನೆಂಬುದನ್ನು ಗಮನಿಸಿ ನೋಡಿ ; ಸಿದ್ಧಾರ್ಥನಿಗೆ ವೈರಾಗ್ಯ ಉಂಟಾಗಬಾರದೆಂದು ಅವನ ತಂದೆ ಶುದ್ಧೋಧನನು ಭೋಗದ ಮನೆಯನ್ನು ಕಟ್ಟಿಸಿದುದರ ಪರಿಣಾಮವೇನಾಯಿತೆಂಬುದನ್ನು ನೋಡಿ ; ಕಪಾಲಿಕ ಬೌದ್ಧರು ಶಂಕರಾಚಾರ್ಯರನ್ನು ಅಭಿಚಾರ ಮಂತ್ರದಿಂದ ಕೊಲ್ಲಲು ಮಾಡಿದ ಪ್ರಯತ್ನದಿಂದ ಏನಾಯಿತು ನೋಡಿ ; ಶ್ರೀ ಚೈತನ್ಯನು ಭಕ್ತಿಪಂಥವನ್ನು ಬೋಧಿಸುವುದಕ್ಕೆ ಸರ್ಕಾರದವರು ತಡೆಯುಂಟು ಮಾಡಿದುದರ ಪರಿಣಾಮವೇನಾಯಿತು ನೋಡಿ ; ಕೊನೆಯದಾಗಿ ಯೇಸುಕ್ರಿಸ್ತನನ್ನು ಸುಳ್ಳು ಆಪಾದನೆಯ ಮೇಲೆ ಕ್ರೂರ ರೀತಿಯಲ್ಲಿ ಕೊಂದುದರ ಪರಿಣಾಮವನ್ನು ಗಮನಿಸಿ ನೋಡಿ. ಮೇಲಿನ ಎಲ್ಲ ಸಂದರ್ಭಗಳಲ್ಲಿಯೂ ಮೂಲ ಉದ್ದೇಶಕ್ಕೆ ವಿರುದ್ಧವಾದ ಪರಿಣಾಮವೇ ಉಂಟಾಯಿತು. ಆದರೂ ಕೂಡ ಶಕ್ತಿಶಾಲಿ ಶತ್ರುಗಳು ಮತ್ತು ಪ್ರೀತಿಯ ಮಿತ್ರರು ತಾವಾಗಿಯೇ ತಮ್ಮದೇ ಉದ್ದೇಶಕ್ಕಾಗಿಯೇ ಎಲ್ಲ ಮಾಡುತ್ತಿರುವುದಾಗಿ ಭಾವಿಸಿದರು, ಮುಂದೆಯೂ ಹಾಗೆ ಮಾಡುತ್ತಾರೆ, ಇದಕ್ಕಾಗಿ ತಮ್ಮ ಎಲ್ಲ ಬುದ್ಧಿಶಕ್ತಿಯನ್ನೂ, ಚಾಣಾಕ್ಷತನವನ್ನೂ ಉಪಯೋಗಿಸುತ್ತಾರೆ. ಆದರೆ ಭಾಗವತ ಮುಂತಾದ ಗ್ರಂಥಗಳಿಂದ ನಮಗೆ ತಿಳಿದುಬರುವುದೇನೆಂದರೆ ಶತ್ರು

ಗಳಾಗಿ ಕೆಲಸ ಮಾಡಿದವರು ಆ ದಿವ್ಯ ಶಕ್ತಿಯ ಉದ್ದೇಶ ಮತ್ತು ಕೃತಿಗಳನ್ನು ಸ್ವಲ್ಪವೂ ಅರ್ಥ ಮಾಡಿಕೊಳ್ಳುವುದಿಲ್ಲ. ಆದರೆ ಇತರರು ಆ ದಿವ್ಯ ಶಕ್ತಿಯಲ್ಲಿ ಶ್ರದ್ಧಾಭಕ್ತಿಯನ್ನು ಇರಿಸಿದರೆ ಅದನ್ನು ಸ್ವಲ್ಪಮಟ್ಟಿಗಾದರೂ ಅರ್ಥಮಾಡಿಕೊಳ್ಳ ಬಹುದು. ಈ ಜ್ಞಾನದ ಸಹಾಯದಿಂದ ಅವರು ಮುಕ್ತಿಗೆ ಅರ್ಹತೆಯನ್ನು ಪಡೆಯ ಬಹುದು. ಮಥುರನು ಈ ಗುಂಪಿಗೆ ಸೇರಿದವನು.

4. ಅವತಾರ ಪುರುಷರ ಜೀವನದಲ್ಲಿ ಮಾತ್ರ ಈ ದಿವ್ಯ ಶಕ್ತಿಯ ಆಟವನ್ನು ನೋಡುವುದಲ್ಲ. ಆದರೆ ಅವರ ಜೀವನದಲ್ಲಿ ಅದು ಸುಸ್ಪಷ್ಟವಾಗಿ ಕಾಣುವುದನ್ನು ಗಮನಿಸಿ ನಮಗೆ ಆಶ್ಚರ್ಯವಾಗುತ್ತದೆ, ಅಷ್ಟೆ. ಅಲ್ಲದಿದ್ದರೆ ಪ್ರತಿಯೊಬ್ಬರ ದೈನಂದಿನ ಜೀವನದಲ್ಲಿಯೂ, ಲೋಕ ವ್ಯವಹಾರಗಳಲ್ಲಿಯೂ ಈ ವಿಶೇಷ ಶಕ್ತಿಯ ಕೈವಾಡವನ್ನು ನಾವು ಸ್ವಲ್ಪಮಟ್ಟಿಗಾದರೂ ಕಂಡೇ ಕಾಣುತ್ತೇವೆ. ಮಾನವ ಜೀವನದ ಎಲ್ಲ ಘಟನೆ ಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಮಾನವನು ಆ ದೈವೀ ಶಕ್ತಿಯ ಕೈಯಲ್ಲಿ ಆಟದ ಗೊಂಬೆಯಂತೆ ಆಡುತ್ತಿರುವನು ಎಂಬುದು ಸ್ಪಷ್ಟವಾಗುತ್ತದೆ. ಈ ದೃಷ್ಟಿ ಯಿಂದ ನೋಡಿದಾಗ ಅವತಾರ ಪುರುಷರ ಮತ್ತು ಸಾಧಾರಣ ಮಾನವನ ಜೀವನದ ನಡುವೆ ಒಂದು ಸಾಮ್ಯತೆ ಕಂಡು ಬರುತ್ತದೆ. ಇದರಲ್ಲೇನೂ ಆಶ್ಚರ್ಯವಿಲ್ಲ. ಏಕೆಂದರೆ ಆ ಮಹಾಪುರುಷರ ಅಲೌಕಿಕ ಜೀವನವನ್ನೇ ಮಾದರಿಯಾಗಿಟ್ಟುಕೊಂಡು ಸಾಧಾರಣ ಮಾನವನ ಜೀವನ ರೂಪಿತವಾಗಿದೆ. ಆದ್ದರಿಂದ ಅವತಾರ ಪುರುಷರ ಆವಶ್ಯಕತೆ ಸಾಧಾರಣ ಮಾನವರಿಗಿದೆ. ನಾನಾ ಭಾಷೆಯಿಂದ ನಾನಾ ಜಾತಿಯಿಂದ ಕೂಡಿದ ಈ ವಿಶಾಲ ಭಾರತದಲ್ಲಿ ರಾಮ, ಕೃಷ್ಣ, ಚೈತನ್ಯ – ಹೀಗೆ ಕೆಲವು ಮಹಾಪುರುಷರು ಮಾತ್ರ ಗಟ್ಟಿಯಾಗಿ ನೆಲೆನಿಂತಿರುವುದನ್ನು ನೋಡಿದಾಗ ನಮಗಿದು ಸ್ಪಷ್ಟವಾಗುತ್ತದೆ. ಹಿಂದಿನ ಎಲ್ಲ ಮಹಾಪುರುಷರ ಆದರ್ಶಗಳನ್ನೂ ಮೈಗೂಡಿಸಿಕೊಂಡು ಒಂದು ಅಪೂರ್ವ ಜೀವನವನ್ನು ನಡೆಸಿದ ವರ್ತಮಾನ ಯುಗದ ಶ್ರೀರಾಮಕೃಷ್ಣರು ಅತ್ಯಲ್ಪ ಕಾಲದಲ್ಲಿಯೇ ತಮ್ಮ ಪ್ರಭಾವವನ್ನು ವಿಸ್ತರಿಸುತ್ತ ಭಾರತದ ಜನಜೀವನದಲ್ಲಿ ಅಧಿಕಾರ ವನ್ನು ಸ್ಥಾಪಿಸುತ್ತಿರುವುದನ್ನು ನೋಡಿದಾಗಲೂ ನಮಗೆ ಈ ವಿಷಯ ಸ್ಪಷ್ಟವಾಗು ತ್ತದೆ. ಮುಂದೆ ಈ ಪ್ರಭಾವ ಎಷ್ಟರ ಮಟ್ಟಿಗೆ ವಿಸ್ತರಿಸಬಹುದು ಎಂಬುದನ್ನು ಓದುಗರೇ ಊಹಿಸಿಕೊಳ್ಳತಕ್ಕದ್ದು.

5. ಮಥುರನಾಥನ ಬಗ್ಗೆ ಇನ್ನೊಂದು ಮಾತನ್ನು ಹೇಳಬೇಕಾಗಿದೆ. ಶ್ರೀರಾಮಕೃಷ್ಣರ ಮೇಲೆ ಅವನ ಭಕ್ತಿ, ವಿಶ್ವಾಸ ಶೇಕಡ ನೂರಕ್ಕಿಂತಲೂ ಅಧಿಕ ಎಂಬ ಮಾತನ್ನು ಕೇಳಿದಾಗ ನಮ್ಮ ಸಂದೇಹಯುಕ್ತ ಮನಸ್ಸು ಕೂಡಲೆ ಹೇಳತೊಡಗುತ್ತದೆ : "ಈ ಮಥುರನು ಶುದ್ಧ ಮೂರ್ಖನಾಗಿದ್ದಿರಬೇಕು. ಇಲ್ಲದಿದ್ದರೆ ಒಬ್ಬ ವ್ಯಕ್ತಿ ಇನ್ನೊಬ್ಬರ ಮೇಲೆ ಅಷ್ಟೊಂದು ಭಕ್ತಿ, ಗೌರವ ಇರಿಸಲು ಸಾಧ್ಯವೇ ? ನಾವಾಗಿದ್ದರೆ ಶ್ರೀರಾಮಕೃಷ್ಣರು ಹಾಗೆ ತಮ್ಮ ಚಾರಿತ್ರಬಲದಿಂದ ನಮ್ಮ ಮನಸ್ಸನ್ನು ಸೂರೆಗೊಳ್ಳು

ವುದಕ್ಕೆ ಬಿಡುತ್ತಿರಲಿಲ್ಲ''— ಒಬ್ಬ ವ್ಯಕ್ತಿಯನ್ನು ಪ್ರೀತಿಸಿ ಗೌರವಿಸುವುದೇ ತಪ್ಪೊ ಎನ್ನುವಂತೆ ! ಆದರೆ ಮಥುರನ ಸ್ವಭಾವ ಅಂತಹುದೇನಲ್ಲ. ಮಥುರನ ಬಗ್ಗೆ ಶ್ರೀರಾಮಕೃಷ್ಣರಿಂದ ನಾವೇನೇನು ಕೇಳಿರುವೆವೊ ಅದರಿಂದ ನಮಗಿದು ಸ್ಪಷ್ಟವಾಗುತ್ತದೆ, ಅವನೂ ಕೂಡ ನಮ್ಮಂತೆಯೇ ಸಂದೇಹ ಬುದ್ಧಿಯುಳ್ಳವನು ಆಗಿದ್ದನು. ಅವನೂ ಶ್ರೀರಾಮಕೃಷ್ಣರ ಅಲೌಕಿಕ ಚರಿತ್ರೆ ಮತ್ತು ಕಾರ್ಯಕಲಾಪಗಳನ್ನು ಮೊದಮೊದಲು ಹೆಜ್ಜೆ ಹೆಜ್ಜೆಗೂ ಪರೀಕ್ಷಿಸಿದನು. ಆದರೇನಂತೆ ? ಜ್ಞಾನದ ಅಲೆಯಿಂದಲೂ ಭಕ್ತಿಯ ಸುಳಿಯಿಂದಲೂ ಕೂಡಿದ ಶ್ರೀರಾಮಕೃಷ್ಣರ ಭಾವಗಂಗೆಯ ಮಹಾ ಪ್ರವಾಹವನ್ನು ತಡೆಯುವ ಶಕ್ತಿ ಮಥುರನ ಸಂದೇಹ ಹಸ್ತಿಗೆ* ಇರಲು ಸಾಧ್ಯವೆ ? ಸ್ವಲ್ಪ ಹೊತ್ತಿನಲ್ಲಿಯೇ ಅದು ಪ್ರವಾಹದಲ್ಲಿ ಕೊಚ್ಚಿಕೊಂಡುಹೋಗಿ ಎಲ್ಲಿಯೋ ಅದೃಶ್ಯವಾಯಿತು. ಎಲ್ಲ ರೀತಿಯಿಂದಲೂ ಪರಾಭವಗೊಂಡ ಮಥುರನು ಇನ್ನೇನು ಮಾಡಲು ಸಾಧ್ಯ ? ಒಂದೇ ಮನಸ್ಸಿನಿಂದ ಶ್ರೀರಾಮಕೃಷ್ಣರಲ್ಲಿ ಶರಣಾಗತನಾದ. ಆದ್ದರಿಂದ ಮಥುರನ ಬಗ್ಗೆ ಹೇಳುವುದರ ಮೂಲಕವೂ ನಾವು ಶ್ರೀರಾಮಕೃಷ್ಣರ ಗುರುಭಾವದ ಮಹಿಮೆಯನ್ನೇ ಕೊಂಡಾಡುತ್ತಿದ್ದೇವೆ ಎಂಬುದು ಸುಸ್ಪಷ್ಟ.

6. ಶ್ರೀರಾಮಕೃಷ್ಣರ ಸರಳವಾದ ಬಾಲಕ ಸ್ವಭಾವ ಮತ್ತು ಸುಂದರ ರೂಪವನ್ನು ಕಂಡು ಮಥುರನು ಅವರ ಮೊದಲ ದರ್ಶನದಿಂದಲೆ ಅವರೆಡೆಗೆ ಆಕರ್ಷಿತನಾದನು. ಅನಂತರ ಶ್ರೀರಾಮಕೃಷ್ಣರು ಸಾಧನೆಯಲ್ಲಿ ಮುಳುಗಿ ದಿವ್ಯ ಉನ್ಮಾದಾವಸ್ಥೆಯನ್ನು ಪಡೆದರು. ಶ್ರೀಜಗನ್ಮಾತೆಯ ಪೂಜೆಮಾಡುತ್ತ ಅದರಲ್ಲಿಯೇ ತನ್ಮಯರಾಗಿ ಬಿಡುತ್ತಿದ್ದರು. ಕೆಲವೊಮ್ಮೆ ದೇವಿಯನ್ನು ತಮ್ಮಲ್ಲಿಯೇ ಕಾಣುತ್ತ ತಮಗೆ ಪೂಜೆ ಮಾಡಿಕೊಳ್ಳುತ್ತಿದ್ದರು. ಅವರು ವೈಧೀ ಭಕ್ತಿಯನ್ನು ಮೀರಿ, ಅನೇಕ ವಿಧಿನಿಯಮಗಳನ್ನು ಉಲ್ಲಂಘಿಸಿ ವರ್ತಿಸುತ್ತಿದ್ದರು. ಹೀಗೆ ಅವರು ಸಂಪ್ರದಾಯಸ್ಥರ ನಿಂದೆಗೆ ಪಾತ್ರರಾದರು. ಎಲ್ಲರೂ ಅವರನ್ನು ಸಂದೇಹ ದೃಷ್ಟಿಯಿಂದ ನೋಡತೊಡಗಿದರು. ಆಗ ಮಥುರನ ತೀಕ್ಷ್ಣ ಬುದ್ಧಿ ಮತ್ತು ನ್ಯಾಯಪರತೆ ಅವನನ್ನು ಹೀಗೆ ಚಿಂತಿಸುವಂತೆ ಮಾಡಿದವು : ''ನಾನು ಮೊದಲು ಅವರನ್ನು ತುಂಬ ಸರಳ ಸ್ವಭಾವದವರೆಂದು ಕೊಂಡಿ

---

* ಈ ರೂಪಕವು ಒಂದು ಪುರಾಣ ಕತೆಗೆ ಸಂಬಂಧಿಸಿದೆ. ಭಗೀರಥನು ಗಂಗೆಯನ್ನು ಭೂಮಿಗೆ ಕರೆದುಕೊಂಡು ಬರುತ್ತಿರುವಾಗ ಹಿಮಾಲಯದಲ್ಲಿ ಬಂಡೆಗಳನ್ನು ಸೀಳಿಕೊಂಡು ಬರಲು ಅವಳಿಗಾಗಲಿಲ್ಲ. ಬಂಡೆಗಳನ್ನು ಸೀಳಲು ಇಂದ್ರನ ಐರಾವತ ಆನೆಯನ್ನು ಕರೆದುಕೊಂಡು ಬರಲು ಗಂಗೆಯು ಭಗೀರಥನಿಗೆ ಹೇಳಿದಳು. ಅವನು ಆ ಆನೆಯನ್ನು ಕೇಳಿದಾಗ ಅದನು ಗರ್ವದಿಂದ ಗಂಗೆಯು ತನ್ನನ್ನು ಮದುವೆಯಾಗುವುದಾದರೆ ಬರುತ್ತೇನೆ ಎಂದನು. ಗಂಗೆಯು ತನ್ನ ಪ್ರವಾಹದ ರಭಸವನ್ನು ತಡೆಯಲು ಸಮರ್ಥನಾದರೆ ಮದುವೆಗೆ ಒಪ್ಪುತ್ತೇನೆ ಎಂದಳು. ಐರಾವತನು ಒಪ್ಪಿ ಬಂಡೆಯನ್ನು ಸೀಳಿದನು. ಆದರೆ ಗಂಗೆಯ ಮೊದಲನೆಯ ಅಲೆಯ ಹೊಡೆತವನ್ನು ತಡೆಯಲಾಗದೆ ನೀರಿನಲ್ಲಿ ಕೊಚ್ಚಿಕೊಂಡು ಹೋದನು.

ರುವೆ. ಆದ್ದರಿಂದ ಸ್ವತಃ ನೋಡದೆ ಅವರ ವಿರುದ್ಧವಾಗಿ ಯಾರ ಮಾತಿನಲ್ಲಿಯೂ ವಿಶ್ವಾಸವಿರಿಸುವುದು ಸರಿಯಲ್ಲ.' ಆದ್ದರಿಂದಲೇ ಅವನು ಯಾರಿಗೂ ತಿಳಿಸದೆ ದಕ್ಷಿಣೇಶ್ವರಕ್ಕೆ ಬಂದು ಶ್ರೀರಾಮಕೃಷ್ಣರು ಮಾಡುತ್ತಿದ್ದುದನ್ನೆಲ್ಲ ಕದ್ದು ನೋಡುತ್ತಿದ್ದ. ಇದರ ಫಲವಾಗಿ ಕೊನೆಗೆ ಅವನು ಒಂದು ಸಿದ್ಧಾಂತಕ್ಕೆ ಬಂದ : 'ಯುವಕ ಗದಾಧರನು ಭಕ್ತಿ ಮತ್ತು ಸರಳತೆಯ ಜೀವಂತ ಮೂರ್ತಿ. ಭಕ್ತಿವಿಶ್ವಾಸದ ಅತಿಶಯದಿಂದಾಗಿ ಅವನು ಈ ರೀತಿ ವರ್ತಿಸುತ್ತಿರುವನು.' ಹೀಗೆ ಅವನ ತೀಕ್ಷ್ಣಮತಿ ಇನ್ನೂ ಮುಂದು ಮರಿದು ಚಿಂತಿಸತೊಡಗಿತು : 'ತನಗೆ ಸರಿಯಾದುದನ್ನು, ಅದು ಬಹುಕಾಲ ಉಳಿಯುವುದಾದರೆ, ಮಾಡುವುದು ಒಳಿತು. ಭಕ್ತಿವಿಶ್ವಾಸಗಳಿರುವುದು ಒಳ್ಳೆಯದೆ. ಆದರೆ ಅದರಲ್ಲಿಯೇ ಮೈಮರೆತು ಬಿಡುವುದು ಒಳ್ಳೆಯದೆ ? ಅದರಿಂದಾಗಿ ಜನರ ನಿಂದೆಗೆ ಒಳಗಾಗಲೇ ಬೇಕಾಗುತ್ತದೆ. ಮತ್ತೆ ಹತ್ತುಜನ ಹೇಳುವುದನ್ನು ಕೇಳದೆ ತನಗಿಷ್ಟಬಂದಂತೆ ಮಾಡುತ್ತ ಹೋದರೆ ಅದರಿಂದ ಬುದ್ಧಿಭ್ರಮಣೆಯಾಗಿ ಹುಚ್ಚರಾಗುವ ಸಂಭವವುಂಟು. ಆದ್ದರಿಂದ ಅವರಿಗೆ ಈ ವಿಚಾರವಾಗಿ ಸ್ವಲ್ಪ ತಿಳಿಸಿಕೊಡುವುದು ಒಳಿತು.' ಆದರೆ ಅವನಲ್ಲಿದ್ದ ದೈವಭಕ್ತಿ ಮರುಕ್ಷಣವೇ ಜಾಗ್ರತಗೊಂಡು ಅವನನ್ನು ಈ ರೀತಿ ಭಾವಿಸುವಂತೆ ಮಾಡುತ್ತಿತ್ತು : 'ಆದರೆ ರಾಮಪ್ರಸಾದ ಮುಂತಾದ ಸಾಧಕರೂ ಈ ರೀತಿ ಹುಚ್ಚರಂತೆ ವ್ಯವಹರಿಸಿದರೆಂದು ಕೇಳುತ್ತೇವೆ. ಗದಾಧರನ ವರ್ತನೆಯೂ ಅದೇ ರೀತಿ ಆಗಿರಬಹುದಲ್ಲ ?' ಹೀಗೆಲ್ಲ ಯೋಚಿಸಿ, ಅವರಿಗೆ ಈಗೇನೂ ಅಡ್ಡಿಯನ್ನುಂಟುಮಾಡುವುದು ಬೇಡ, ಮುಂದೆ ಸರಿಯಾಗಿ ವಿಚಾರಿಸಿ ಯುಕ್ತವಾದುದನ್ನು ಏನು ಮಾಡಬಹುದೊ ಅದನ್ನು ಮಾಡೋಣ, ಎಂದು ತೀರ್ಮಾನಕ್ಕೆ ಬಂದನು. ಈ ವಿಷಯಾಸಕ್ತನಾದ ಶ್ರೀಮಂತನೊಬ್ಬನು ತನ್ನ ಕೈಕೆಳಗೆ ಕೆಲಸ ಮಾಡುತ್ತಿದ್ದ ಒಬ್ಬ ಬಡ ಬ್ರಾಹ್ಮಣನ ವಿಷಯದಲ್ಲಿ ಈ ರೀತಿ ವರ್ತಿಸುವುದು ಸಾಮಾನ್ಯ ಸಂಗತಿಯಲ್ಲ.

7, ಭಕ್ತಿಯೂ ಒಂದು ಸಂಕ್ರಾಮಿಕವೇ. ದೈಹಿಕ ರೋಗಗಳಂತೆ ಮಾನಸಿಕ ಭಾವಗಳೂ ಒಬ್ಬರಿಂದ ಒಬ್ಬರಿಗೆ ಹರಡುವುದನ್ನು ನಾವು ನೋಡುತ್ತೇವೆ. ಏಕೆಂದರೆ ಸ್ಥೂಲ ಮತ್ತು ಸೂಕ್ಷ್ಮ ಜಗತ್ತುಗಳು ಒಂದು ವಸ್ತುವಿನಿಂದ, ಒಂದೇ ನಿಯಮಾನುಸಾರವಾಗಿ, ಸೃಷ್ಟಿಸಲ್ಪಟ್ಟಿವೆ. ಇದನ್ನು ವೈದಿಕ ಋಷಿಗಳು ಹೇಳುವುದು ಮಾತ್ರವಲ್ಲದೆ ಇಂದಿನ ಜಡವಿಜ್ಞಾನವೂ ಇದನ್ನು ಸಮರ್ಥಿಸುತ್ತದೆ. ಆದ್ದರಿಂದ ಒಬ್ಬನಲ್ಲಿರುವ ಭಕ್ತಿಭಾವವು ಇನ್ನೊಬ್ಬನಲ್ಲಿ ಸುಪ್ತವಾಗಿರುವ ಅದೇ ಭಾವವನ್ನು ಜಾಗ್ರತಗೊಳಿಸುವುದರಲ್ಲಿ ಆಶ್ಚರ್ಯವೇನಿದೆ ? ಇದಕ್ಕಾಗಿಯೇ ಧರ್ಮವನ್ನು ಉದ್ದೀಪನಗೊಳಿಸಲು ಸಾಧುಸಂಗದ ಆವಶ್ಯಕತೆಯನ್ನು ಶಾಸ್ತ್ರವು ಒತ್ತಿ ಹೇಳುತ್ತದೆ. ಮಥುರನಾಥನ ವಿಷಯದಲ್ಲಿಯೂ ಹೀಗೆಯೇ ಆಯಿತು ಎಂಬುದನ್ನು ನಾವು ಊಹಿಸಬಹುದು, ಶ್ರೀರಾಮಕೃಷ್ಣರ ಕ್ರಿಯಾಕಲಾಪಗಳನ್ನು ದಿನದಿನವೂ ಹೆಚ್ಚು ಹೆಚ್ಚು ನೋಡುತ್ತಹೋದಂತೆಲ್ಲ ಅವನೊಳಗಿದ್ದ ಭಕ್ತಿಭಾವ ಅವನಿಗೆ ಅರಿವಿಲ್ಲದಂತೆಯೇ ಹೆಚ್ಚು ಹೆಚ್ಚು ಜಾಗ್ರತವಾಗತೊಡಗಿತು. ಅವನ ಮುಂದಿನ ಕ್ರಿಯೆಗಳಲ್ಲಿ ಇದನ್ನು ನಾವು ಸ್ಪಷ್ಟವಾಗಿ ಕಾಣಬಹುದು.

ಒಮ್ಮೆ ಭಕ್ತಿ ವಿಶ್ವಾಸ ಉದಯಿಸುತ್ತಿತ್ತು, ಅನಂತರ ಸಂದೇಹ ಮನಸ್ಸನ್ನು ಆವರಿಸು ತ್ತಿತ್ತು. ಶ್ರೀರಾಮಕೃಷ್ಣರು ಅವನ ಹೃದಯದಲ್ಲಿ ದೃಢವಾದ ಶಾಶ್ವತವಾದ ಸ್ಥಾನ ವನ್ನು ಪಡೆಯುವುದಕ್ಕೆ ಮೊದಲು ಅನೇಕ ದಿನಗಳು ಅವನ ಮನಸ್ಸು ದೋಲಾ ಯಮಾನ ಸ್ಥಿತಿಯಲ್ಲಿತ್ತು, ಆದ್ದರಿಂದಲೇ ನಾವು ನೋಡುತ್ತೇವೆ : ಶ್ರೀರಾಮ ಕೃಷ್ಣರ ವಿಚಿತ್ರವರ್ತನೆಗಳು ಅವರ ತೀವ್ರ ಭಕ್ತಿಯ ಪರಿಣಾಮವೆಂದು ಅವನಿಗೆ ಮೊದ ಮೊದಲು ಅನಿಸಿದರೂ ಮುಂದೆ ಅವನ ಮನಸ್ಸು ಬದಲಾಯಿತು–ಶ್ರೀರಾಮಕೃಷ್ಣರಿಗೆ ನಿಜವಾಗಿಯೂ ಬುದ್ಧಿಭ್ರಮಣೆ ಉಂಟಾಗಿರಬಹುದೇ ಎಂದೆನಿಸಿತು ಅವನಿಗೆ. ಈ ಸಂದೇಹ ಅವನಲ್ಲಿ ಅವರ ಬಗ್ಗೆ ದಯೆಯನ್ನು ಕೆರಳಿಸಿತು. ಅವರನ್ನು ಉತ್ತಮ ವೈದ್ಯಕೀಯ ಚಿಕಿತ್ಸೆಗೆ ಒಳಪಡಿಸಬೇಕೆಂದು ಅವನು ಭಾವಿಸಿದ.

8. ಮಥುರನು ಇಂಗ್ಲಿಷ್ ಶಿಕ್ಷಣವನ್ನು ಪಡೆದವನು, ಆದರೊಟ್ಟಿಗೆ ಪಾಶ್ಚಾತ್ಯ ಚಿಂತನಾಧಾರೆಯೂ ಅವನ ಮನಸ್ಸನ್ನು ಪ್ರವೇಶಿಸಿತ್ತು. ತಾನೊಬ್ಬ ಸಾಮಾನ್ಯ ವ್ಯಕ್ತಿಯಲ್ಲ ಎಂಬ ಅಭಿಮಾನವೂ ಅವನಲ್ಲಿತ್ತು. ಈ ರೀತಿಯ ಭಕ್ತಿಯ ಅತಿರೇಕ ಒಳ್ಳೆಯದಲ್ಲ ಎಂದು ಶ್ರೀರಾಮಕೃಷ್ಣರಿಗೆ ಉಪದೇಶ ಮಾಡುತ್ತಿದ್ದುದೂ ಉಂಟು, ಅಷ್ಟೇ ಅಲ್ಲದೆ ಧಾರ್ಮಿಕ ವಿಷಯದಲ್ಲಿ ಅವನು ಅವರೊಡನೆ ವಾದಿಸುತ್ತಿದ್ದ. ಭಗವಂತನು ತಾನೇ ಮಾಡಿದ ಜಾಗತಿಕ ನಿಯಮಗಳನ್ನು ಮೀರಿಹೋಗಬಲ್ಲನೊ ಇಲ್ಲವೊ ಎಂಬ ವಿಷಯದಲ್ಲಿ ಅವರಿಬ್ಬರ ನಡುವೆ ನಡೆದ ಚರ್ಚೆಯನ್ನು ಇಲ್ಲಿ ಉದಾಹರಿಸಬಹುದು. ಶ್ರೀರಾಮಕೃಷ್ಣರು ಹೇಳುತ್ತಿದ್ದರು : "ಮಥುರನು ಹೇಳಿದ : 'ಭಗವಂತನೂ ನಿಯಮಕ್ಕೆ ಅನುಸಾರವಾಗಿ ನಡೆಯಬೇಕು. ಅವನಿಗೆ ತಾನು ಮಾಡಿದ ನಿಯಮವನ್ನು ರದ್ದುಗೊಳಿಸುವ ಸಾಮರ್ಥ್ಯವಿಲ್ಲ.' ನಾನು ಹೇಳಿದೆ : 'ಇದೇನಯ್ಯ ನೀನು ಹೇಳುವುದು ? ಯಾರು ನಿಂತು ನಿಯಮವನ್ನು ಮಾಡಿರುವನೋ, ಅವನೇ ಅದನ್ನು ರದ್ದುಗೊಳಿಸಲಾರನೇನು ಅಥವಾ ಆ ಜಾಗದಲ್ಲಿ ಇನ್ನೊಂದು ನಿಯಮವನ್ನು ಜಾರಿಗೊಳಿಸಲಾರನೇನು ?' ಅವನು ನನ್ನ ಮಾತನ್ನು ಒಪ್ಪಲೇ ಇಲ್ಲ. ಹೇಳಿದ : 'ಕೆಂಪು ಹೂವಿನ ಗಿಡದಲ್ಲಿ ಕೆಂಪು ಹೂವೇ ಆಗುತ್ತದೆ, ಬಿಳಿಯ ಹೂವು ಆಗಲು ಸಾಧ್ಯವೇ ಇಲ್ಲ. ಏಕೆಂದರೆ ಅವನ ನಿಯಮವೇ ಹಾಗಿದೆ. ಕೆಂಪು ಹೂವಿನ ಗಿಡ ಬಿಳಿ ಹೂ ಬಿಡುವಂತೆ ಮಾಡಲಿ ಅವನು, ನೋಡೋಣ ?' ನಾನು ಹೇಳಿದೆ : 'ಅವನು ಇಚ್ಛಿಸಿದರೆ ಎಲ್ಲವನ್ನೂ ಮಾಡಬಲ್ಲ, ಇದನ್ನೂ ಮಾಡಬಲ್ಲ.' ಅವನು ನನ್ನ ಮಾತನ್ನು ಒಪ್ಪಿಕೊಳ್ಳಲಿಲ್ಲ. ಮಾರನೆದಿನ ನಾನು ಶೌಚಕ್ಕೆ ಹುಣಸೆಮರದ ಕಡೆ ಹೋಗಿದ್ದಾಗ ನೋಡಿದೆ—ಒಂದು ಕೆಂಪು ದಾಸವಾಳದ ಗಿಡ, ಆದರೆ ಒಂದು ಗೆಲ್ಲಿನಲ್ಲಿ ಬೇರೆ ಬೇರೆ ಬಣ್ಣದ ಎರಡು ಹೂವುಗಳಿದ್ದವು—ಒಂದು ಕೆಂಪು, ಮತ್ತೊಂದು ಸಂಪೂರ್ಣ ಬಿಳಿ. ಕೂಡಲೆ ಆ ಕೊಂಬೆಯನ್ನು ಕಿತ್ತು ತೆಗೆದುಕೊಂಡು ಹೋಗಿ ಮಥುರನ ಮುಂದೆ ಎಸೆದು 'ನೋಡಿಲ್ಲಿ' ಎಂದು ಹೇಳಿದೆ. ಆಗ ಅವನು ಹೇಳಿದ : 'ಹೌದು, ನಾನು ಸೋತೆ.'" ಮಥುರನು ದೈಹಿಕ ವಿಕಾರವೇ ಶ್ರೀರಾಮಕೃಷ್ಣರಲ್ಲಿ ಭಕ್ತಿರೂಪದ ಮಾನಸಿಕ ವಿಕಾರ

ವನ್ನು ಉಂಟುಮಾಡಿತ್ತು ಎಂದು ಕೆಲವೊಮ್ಮೆ ಭಾವಿಸಿದ್ದನು. ಈ ನಂಬಿಕೆಯಿಂದ ಅವನು ಅವರ ಆ ಭಾವವನ್ನು ಹೋಗಲಾಡಿಸಲು ಅವರೊಡನೆ ಬಹಳವಾಗಿ ಚರ್ಚಿಸುತ್ತಿದ್ದ.

9. ಕೆಲವೊಮ್ಮೆ ಕುತೂಹಲ ಕೆಲವೊಮ್ಮೆ ಶ್ರೀರಾಮಕೃಷ್ಣರ ಭಾವವಿಕಾರವು ದೈಹಿಕ ರೋಗದ ಫಲವೆಂದು ಅವರ ಮೇಲೆ ದಯೆ, ಮತ್ತೆ ಕೆಲವೊಮ್ಮೆ ಅವರ ವಿಚಿತ್ರ ವರ್ತನೆಗಳೆಲ್ಲ ನಿಜವಾದ ಭಗವದ್ಭಕ್ತಿಯ ಫಲವೆಂದು ಭಾವಿಸಿ ಅವರ ಮೇಲೆ ಭಕ್ತಿ ವಿಶ್ವಾಸ ತೋರಿಸುವುದು—ಹೀಗೆ ಮಥುರನು ಬಹಳಕಾಲ ಅವರ ಸ್ಥಿತಿಯ ಬಗ್ಗೆಯೇ ಚಿಂತಿಸುತ್ತಿದ್ದ. ಅವನು ನಿಶ್ಚಿಂತನಾಗಲು ಸಾಧ್ಯವೇ ಇರಲಿಲ್ಲ. ಶ್ರೀರಾಮಕೃಷ್ಣರು ನವಾನುರಾಗದ ಪ್ರಬಲ ಪ್ರವಾಹದಿಂದ ದಿನ ದಿನವೂ ಹೊಸ ಹೊಸ ರೀತಿಯಲ್ಲಿ ವರ್ತಿಸುತ್ತಿದ್ದರು. ಒಂದೊಂದು ದಿನ ಪೂಜೆಯ ಸಮಯದಲ್ಲಿ ಶ್ರೀಜಗನ್ಮಾತೆಯನ್ನು ತಮ್ಮಲ್ಲಿಯೇ ಕಾಣುತ್ತ ಪೂಜಾ ಸಾಮಗ್ರಿಗಳನ್ನು ತಮಗೇ ಅರ್ಪಿಸಿಕೊಂಡು ಬಿಡುತ್ತಿದ್ದರು. ಒಂದೊಂದು ದಿನ ಮೂರುಗಂಟೆಯ ಪರ್ಯಂತ ಆರತಿ ಮಾಡುತ್ತ ದೇವಾಲಯದ ಕೆಲಸಗಾರರೆಲ್ಲ ಸಿಡಿಮಿಡಿಗೊಳ್ಳುವಂತೆ ಮಾಡುತ್ತಿದ್ದರು. ಒಂದೊಂದು ದಿನ ಭಗವತ್ ಸಾಕ್ಷಾತ್ಕಾರವಾಗಲಿಲ್ಲವಲ್ಲ ಎಂಬ ವ್ಯಾಕುಲತೆಯಿಂದ ನೆಲದ ಮೇಲೆ ಬಿದ್ದು ಹೊರಳಾಡುತ್ತ ಅಳುತ್ತಿದ್ದರು. ಹೀಗೆ ಅವರ ವಿಚಿತ್ರ ವರ್ತನೆಗಳಿಗೆ ಕೊನೆಯೇ ಇರಲಿಲ್ಲ.

10. ಒಂದುದಿನ ಶಿವಮಂದಿರವನ್ನು ಪ್ರವೇಶಿಸಿ 'ಶಿವಮಹಿಮ್ನಃ ಸ್ತೋತ್ರ'ವನ್ನು ಪಠಿಸತೊಡಗಿದರು. ಈ ಕೆಳಗಿನ ಶ್ಲೋಕವನ್ನು ಪಠಿಸುವಾಗ ಅವರು ಭಾವೋನ್ಮತ್ತರಾದರು.

ಅಸಿತಗಿರಿಸಮಂ ಸ್ಯಾತ್ ಕಜ್ಜಲಂ ಸಿಂಧುಪಾತ್ರಂ
ಸುರತರುವರಶಾಖಾ ಲೇಖನೀ ಪತ್ರಮುರ್ವೀ।
ಲಿಖತಿ ಯದಿ ಗೃಹೀತ್ವಾ ಶಾರದಾ ಸರ್ವಕಾಲಂ
ತದಪಿ ತವ ಗುಣಾನಾಮೀಶ ಪಾರಂ ನ ಯಾತಿ॥

"ಹೇ ಮಹಾದೇವ, ಸಮುದ್ರವನ್ನೆ ಮಸಿಕುಡಿಕೆಯನ್ನಾಗಿ ಮಾಡಿಕೊಂಡು ಹಿಮಾಲಯದಷ್ಟು ಮಸಿಯನ್ನು ಹಾಕಿ, ಸುರತರುವನ್ನೇ ಲೇಖನಿಯಾಗಿ ಮಾಡಿ, ಭೂಮಿಯೆಂಬ ಕಾಗದದ ಮೇಲೆ ಸರಸ್ವತಿಯೇ ಸರ್ವಕಾಲವೂ ನಿನ್ನ ಮಹಿಮೆಯನ್ನು ಬರೆಯುತ್ತ ಹೋದರೂ ಅದಕ್ಕೆ ಕೊನೆಯಿರುವುದಿಲ್ಲ."

ಈ ಶ್ಲೋಕವನ್ನು ಪಠಿಸುತ್ತ ಶಿವಮಹಿಮೆಯನ್ನೇ ಚಿಂತಿಸುತ್ತ ಅದರಲ್ಲಿಯೇ ತನ್ಮಯರಾಗಿ ಸ್ತೋತ್ರವನ್ನೂ ಮರೆತರು, ಎಲ್ಲವನ್ನೂ ಮರೆತರು. ಅವರು ಭಾವೋದ್ವೇಗದಿಂದ ಕೂಗತೊಡಗಿದರು "ಓ ಮಹಾದೇವನೇ, ನಿನ್ನ ಗುಣವನ್ನು ನಾನು ಹೇಗೆ ಕೊಂಡಾಡಲಿ ?" ಎಂದು. ಅವರ ಕಣ್ಣುಗಳಿಂದ ಕಂಬನಿ ಧಾರಾಕಾರವಾಗಿ ಹರಿದು ಅವರ ಎದೆಯನ್ನೂ ಉಟ್ಟ ಬಟ್ಟೆಯನ್ನೂ ಒದ್ದೆ ಮಾಡಿ ಕೊನೆಗೆ ನೆಲಕ್ಕೆ ಇಳಿಯಿತು.

ಅವರ ರೋದನವನ್ನೂ ಅವರ ಹುಚ್ಚು ಮಾತನ್ನೂ ಕೇಳಿ ದೇವಸ್ಥಾನದ ಕೆಲಸಗಾರರೆಲ್ಲ ಅಲ್ಲಿಗೆ ಓಡಿಬಂದರು. ಅವರ ವಿಚಿತ್ರ ವರ್ತನೆಗಳನ್ನು ಕಂಡು ಮುಂದೆ ಏನಾಗುವುದೊ ಎಂಬ ಕುತೂಹಲದಿಂದ ಎಲ್ಲರೂ ನೋಡುತ್ತಿದ್ದರು. ಕೆಲವರು, "ಈ ಚಿಕ್ಕ ಭಟ್ಟಾಚಾರ್ಯನ ಹುಚ್ಚುತನಕ್ಕೆ ಏನು ಹೇಳುವುದು ? ಇಂದು ಇದು ಅತಿರೇಕಕ್ಕೆ ಹೋಗಿಬಿಟ್ಟಿದೆ," ಎಂದು ಹೇಳಿದರು. ಮತ್ತೆ ಕೆಲವರು ಹೇಳಿದರು : "ಶಿವನ ಹೆಗಲ ಮೇಲೇ ಕುಳಿತು ಬಿಡುತ್ತಾನೊ ಏನೊ ? ಏನು ಮಾಡುವುದು ? ಅವನನ್ನು ಈ ಕಡೆ ಎಳೆದು ಹಾಕುವುದು ಒಳ್ಳೆಯದು." ಹೀಗೆ ಒಬ್ಬೊಬ್ಬರು ಒಂದೊಂದು ರೀತಿ ಮಾತನಾಡುತ್ತಿದ್ದರು ಮತ್ತು ಹಾಸ್ಯ ಮಾಡಿ ನಗುತ್ತಿದ್ದರು.

ಶ್ರೀರಾಮಕೃಷ್ಣರಿಗೆ ಬಾಹ್ಯ ಜಗತ್ತಿನ ಅರಿವೇ ಇಲ್ಲ. ಶಿವಮಹಿಮೆಯಲ್ಲಿಯೇ ತಲ್ಲೀನವಾಗಿ ಅವರ ಮನಸ್ಸು ಈ ಜಗತ್ತಿನಿಂದ ಬಹುದೂರ ಮೇಲೆ ಹೋಗಿತ್ತು. ಅಲ್ಲಿಗೆ ಈ ಜಗತ್ತಿನ ಮೇಲಿನ ಭಾವರಾಶಿ ಮತ್ತು ಮಾತುಕತೆಗಳು ಮುಟ್ಟುವಂತಿರಲಿಲ್ಲ. ಜನ ಏನು ಭಾವಿಸುತ್ತಿದ್ದಾರೆ, ಏನು ಹೇಳುತ್ತಿದ್ದಾರೆ, ಏನು ಗೇಲಿ ಮಾಡುತ್ತಿದ್ದಾರೆ–ಇದಾವುದೂ ಅವರ ಗಮನಕ್ಕೆ ಬರುವಂತೆಯೇ ಇರಲಿಲ್ಲ.

ಅಂದು ಮಥುರನು ಕಾಳೀ ಮಂದಿರಕ್ಕೆ ಬಂದಿದ್ದ. ಈ ಎಲ್ಲ ಗಲಾಟೆಯನ್ನು ಕೇಳಿ ಅವನೂ ಅಲ್ಲಿಗೆ ಓಡಿಬಂದ. ಕೆಲಸಗಾರರೆಲ್ಲ ಸಂಭ್ರಮದಿಂದ ಅವನಿಗೆ ದಾರಿ ಬಿಟ್ಟುಕೊಟ್ಟರು. ಅವನು ಶ್ರೀರಾಮಕೃಷ್ಣರ ಭಕ್ತಿಭಾವವನ್ನು ನೋಡಿ ಮುಗ್ಧನಾದನು. ಆ ಸಂದರ್ಭದಲ್ಲಿ ಅಧಿಕಾರಿಯೊಬ್ಬನು ಶ್ರೀರಾಮಕೃಷ್ಣರನ್ನು ಶಿವನ ಹತ್ತಿರದಿಂದ ಎಳೆಯಬೇಕೆಂದು ಸೂಚಿಸಿದಾಗ ಮಥುರನು ಕ್ರುದ್ಧನಾಗಿ ಹೇಳಿದನು : "ಯಾರಿಗೆ ತಲೆ ಉಳಿಯಬೇಕೆಂದು ಇಷ್ಟವಿಲ್ಲವೊ ಅವರು ಈಗ ಭಟ್ಟಾಚಾರ್ಯರನ್ನು ಮುಟ್ಟಬಹುದು!" ಎಲ್ಲರೂ ಭಯದಿಂದ ಬಾಯಿ ಮುಚ್ಚಿಕೊಂಡರು. ಬಹಳ ಹೊತ್ತಿನ ನಂತರ ಶ್ರೀರಾಮಕೃಷ್ಣರಿಗೆ ಬಾಹ್ಯಪ್ರಜ್ಞೆ ಬಂತು. ಸುತ್ತಲೂ ಜನರು ನೆರೆದಿರುವುದನ್ನು ನೋಡಿ ಗಾಬರಿಯಿಂದ ಮಥುರನನ್ನು ಕೇಳಿದರು "ನನಗೆ ತಿಳಿಯದೆ ನಾನೇನಾದರೂ ತಪ್ಪು ಮಾಡಿದೆನೆ ?" ಎಂದು. ಮಥುರನು ಅವರಿಗೆ ನಮಸ್ಕರಿಸಿ ಹೇಳಿದನು : "ಇಲ್ಲ ನೀವೇನೂ ಮಾಡಲಿಲ್ಲ. ನೀವು ಸ್ತೋತ್ರ ಪಾಠ ಮಾಡುತ್ತಿದ್ದಿರಿ. ಇತರರು ತಿಳಿಯದೆ ನಿಮಗೆ ತೊಂದರೆಕೊಡಬಹುದು ಎಂದು ನಾನಿಲ್ಲಿ ನಿಂತುಕೊಂಡಿದ್ದೆ."

11. ಶ್ರೀರಾಮಕೃಷ್ಣರು ಒಂದುದಿನ ತಮ್ಮ ಸಾಧನೆಯ ಸಮಯದ ಸ್ಥಿತಿಯನ್ನು ಕುರಿತು ಹೀಗೆ ಹೇಳಿದರು : "ಆಗ ಯಾರಾದರೂ ನನ್ನೆಡೆಗೆ ಬಂದು ನನ್ನೊಡನೆ ಆಹಾರ ಸ್ವೀಕರಿಸಿದರೆ ಅವರಲ್ಲಿ ಬೇಗನೆ ಭಗವದ್‌ಭಾವ ಜಾಗ್ರತವಾಗುತ್ತಿತ್ತು. ಬಾರಾನಗರದಿಂದ ಇಬ್ಬರು ಬರುತ್ತಿದ್ದರು. ಅವರು ಕೀಳುಜಾತಿಯವರು—ಕೈವರ್ತಕ ಅಥವಾ ತಮಲಿ ಇರಬೇಕು. ತುಂಬ ಒಳ್ಳೆಯವರು. ನನ್ನ ಮೇಲೆ ತುಂಬ ಭಕ್ತಿ ವಿಶ್ವಾಸ, ಆಗಾಗ ಬರುತ್ತಿದ್ದರು. ಒಂದು ದಿನ ಪಂಚವಟಿಯಲ್ಲಿ ಅವರೊಡನೆ ಕುಳಿತಿದ್ದೆ. ಅವರಲ್ಲಿ ಒಬ್ಬನಿಗೆ ಏನೊ ಅವಸ್ಥಾಂತರವುಂಟಾಯಿತು, ನೋಡುತ್ತೇನೆ,

ಅವನ, ಎದೆ ಕೆಂಪೇರಿದೆ ; ಕಣ್ಣುಗಳೂ ತುಂಬ ಕೆಂಪಾಗಿವೆ, ಕಂಬನಿ ಧಾರಾಕಾರವಾಗಿ ಸುರಿಯುತ್ತಿದೆ. ಅವನಿಗೆ ಮಾತನಾಡಲಾಗುತ್ತಿಲ್ಲ. ಮೇಲೇಳಲೂ ಆಗುತ್ತಿಲ್ಲ. ಎರಡು ಬಾಟ್ಲಿ ಮದ್ಯ ಕುಡಿದರೆ ಹೇಗಾಗುವುದೊ ಹಾಗಿತ್ತು ಅವನ ಸ್ಥಿತಿ. ಏನೇ ಮಾಡಿದರೂ ಆ ಭಾವ ತಣ್ಣಗಾಗುತ್ತಿರಲಿಲ್ಲ. ಆಗ ನಾನು ಭಯದಿಂದ ತಾಯಿಗೆ ಹೇಳಿದೆ : 'ತಾಯಿ ! ಇದೇನು ಮಾಡಿದೆ ? ನಾನು ಏನೊ ಮಾಡಿಬಿಟ್ಟೆ ಎಂದು ಜನ ಹೇಳುತ್ತಾರೆ. ಅವನಿಗೆ ಮನೆಯಲ್ಲಿ ತಂದೆತಾಯಿಗಳೆಲ್ಲ ಇದ್ದಾರೆ. ಅವನೀಗಲೇ ಮನೆಗೆ ಹೋಗಬೇಕು.' ಹೀಗೆ ಹೇಳುತ್ತ ನಾನು ಅವನ ಎದೆಯ ಮೇಲೆ ಕೈಯಾಡಿಸಿದೆ. ಸ್ವಲ್ಪಹೊತ್ತಿನ ನಂತರ ಅವನ ಭಾವ ಇಳಿಯಿತು. ಮತ್ತೆ ಮನೆಗೆ ಹೋದ.''

12. ಶ್ರೀರಾಮಕೃಷ್ಣರ ಸಂಗದಿಂದ ಮಥುರನಿಗೂ ಇಂಥದೇ ಸ್ಥಿತಿ ಉಂಟಾಗಿತ್ತು ಮತ್ತು ಇದರಿಂದ ಅವನ ಭಕ್ತಿ ವಿಶ್ವಾಸ ನೂರ್ಮಡಿ ಅಧಿಕವಾಯಿತು. ಈ ವಿಷಯವನ್ನು ನಾವು ಶ್ರೀರಾಮಕೃಷ್ಣರ ಬಾಯಿಂದಲೇ ಕೇಳಿದ್ದೇವೆ. ಯಾವಾಗಲೂ ತಮ್ಮದೇ ಭಾವದಲ್ಲಿ ಮಗ್ನರಾಗಿರುತ್ತಿದ್ದರು ಶ್ರೀರಾಮಕೃಷ್ಣರು. ಒಂದು ದಿನ ಅವರು ಹೀಗೆ ತಮ್ಮ ಕೋಣೆಯ ಹೊರಗಿದ್ದ ವರಾಂಡದಲ್ಲಿ ಹಿಂದೆ ಮುಂದೆ ಓಡಾಡುತ್ತಿದ್ದರು. ಮಂದಿರ ಮತ್ತು ಪಂಚವಟಿಗೂ ಮಧ್ಯೆ ಒಂದು ಕಟ್ಟಡವಿತ್ತು. ಅದನ್ನು 'ಒಡೆಯನ ಮನೆ' ಎಂದು ಕರೆಯುತ್ತಿದ್ದರು. ಅದರ ಒಂದು ಕೋಣೆಯಲ್ಲಿ ಮಥುರನು ಆಗ ತನ್ನ ಪಾಡಿಗೆ ತಾನು ಕುಳಿತಿದ್ದನು. ಅವನು ಕುಳಿತಲ್ಲಿಂದ ಶ್ರೀರಾಮಕೃಷ್ಣರು ಓಡಾಡುತ್ತಿದ್ದ ಸ್ಥಳ ಬಹಳ ದೂರವಿರಲಿಲ್ಲ–ಸರಿಯಾಗಿ ಕಾಣಿಸುತ್ತಿತ್ತು. ಮಥುರನು ಅವರು ಓಡಾಡುವುದನ್ನು ನೋಡುತ್ತ ಅವರ ಬಗ್ಗೆಯೇ ವಿಚಾರ ಮಾಡುತ್ತಿದ್ದ, ಕೆಲವೊಮ್ಮೆ ಬೇರೆ ವಿಚಾರಗಳನ್ನು ಚಿಂತಿಸುತ್ತಿದ್ದ. ಮಥುರನು ತಮ್ಮನ್ನು ನೋಡುತ್ತಿರುವ ವಿಷಯ ಶ್ರೀರಾಮಕೃಷ್ಣರಿಗೆ ಸ್ವಲ್ಪವೂ ತಿಳಿಯದು. ತಿಳಿದಿದ್ದರೆ ತಾನೆ ಏನಂತೆ ? ಅವರಿಬ್ಬರ ಪ್ರಪಂಚವೇ ಬೇರೆ ಬೇರೆ. ಒಬ್ಬರ ಬಗ್ಗೆ ಮತ್ತೊಬ್ಬರು ಯೋಚಿಸುವ ಕಾರಣವೇ ಇರಲಿಲ್ಲ. ಶ್ರೀರಾಮಕೃಷ್ಣರು ತಮ್ಮದೇ ದಿವ್ಯ ಭಾವದಲ್ಲಿ ಇದ್ದುದರಿಂದ ಹೊರ ಪ್ರಪಂಚದ ಪರಿವೆಯೇ ಇರಲಿಲ್ಲ. ಒಂದು ವೇಳೆ ಮಥುರನ ಇರುವಿಕೆ ಅವರಿಗೆ ಗೊತ್ತಾಗಿದ್ದರೆ ತಾವೇ ಸಂಕೋಚದಿಂದ ಒಳಗೆ ಹೋಗುತ್ತಿದ್ದರೇನೊ. ಏಕೆಂದರೆ ಅತ್ಯಂತ ದೊಡ್ಡ ವ್ಯಕ್ತಿಯಾದ ಮಥುರನ ಮುಂದೆ ಎಲ್ಲರಿಂದಲೂ ಹುಚ್ಚು, ಮೂರ್ಖ ಎಂದು ಹೇಳಿಸಿಕೊಳ್ಳುವ ಅತ್ಯಂತ ಸಾಮಾನ್ಯ ಬಡ ಬ್ರಾಹ್ಮಣರಾದ ಶ್ರೀರಾಮಕೃಷ್ಣರು ಸಂಕೋಚಕ್ಕೊಳಗಾಗುವುದು ಸ್ವಾಭಾವಿಕವೇ. ಆದರೆ ನಡೆದದ್ದು ಇದಕ್ಕೆ ವಿರುದ್ಧವಾಗಿ. ಮಥುರನೇ ಹಠಾತ್ತನೆ ಸ್ತಂಭಿತನಾಗಿ ಶ್ರೀರಾಮಕೃಷ್ಣರೆಡೆಗೆ ಓಡಿಬಂದನು ಮತ್ತು ಅವರ ಪಾದವನ್ನು ಗಟ್ಟಿಯಾಗಿ ಹಿಡಿದುಕೊಂಡು ಅಳತೊಡಗಿದನು.

ಶ್ರೀರಾಮಕೃಷ್ಣರು ಹೇಳುತ್ತಾರೆ : ''ನಾನು ಹೇಳಿದೆ, 'ಇದೇನಯ್ಯ ನೀನು ಮಾಡುತ್ತಿರುವುದು ? ನೀನು ಅಷ್ಟು ದೊಡ್ಡ ಮನುಷ್ಯ, ರಾಣಿಯ ಅಳಿಯ. ಜನ ನೀನು ಹೀಗೆ ಮಾಡುತ್ತಿರುವುದನ್ನು ನೋಡಿದರೆ ಏನೆಂದುಕೊಂಡಾರು ? ಶಾಂತನಾಗು,

ಮೇಲೇಳು.' ಅವನು ಅದನ್ನು ಕೇಳುತ್ತಾನೆಯೆ ? ಸ್ವಲ್ಪ ಹೊತ್ತಿನನಂತರ ಶಾಂತನಾಗಿ ಏನಾಯಿತೆಂಬುದನ್ನು ತಿಳಿಸಿದ. ಅವನಿಗೆ ಒಂದು ಅದ್ಭುತ ದರ್ಶನವಾಗಿತ್ತು. ಅವನು ಹೇಳಿದ : 'ನೋಡಿ, ನೀವು ಓಡಾಡುತ್ತಿದ್ದಿರಿ. ನೀವು ಈ ಕಡೆ ಬರುತ್ತಿದ್ದಾಗ ನಿಮ್ಮ ರೂಪ ಕಾಣದೆ ನೀವು ಮಂದಿರದಲ್ಲಿರುವ ತಾಯಿಯಾಗಿ ಕಂಡಿರಿ. ಮತ್ತೆ ಹಿಂತಿರುಗಿ ಆ ಕಡೆ ಹೋಗುತ್ತಿದ್ದಾಗ ಸಾಕ್ಷಾತ್ ಮಹಾದೇವನಾಗಿ ಕಂಡಿರಿ. ನಾನಿದನ್ನು ಸ್ಪಷ್ಟವಾಗಿ ನೋಡಿದೆ. ಮೊದಲು ಇದು ಕಣ್ಣಿನ ದೋಷವಿರಬೇಕೆಂದು ಭಾವಿಸಿದೆ. ಕಣ್ಣನ್ನು ಒರಸಿಕೊಂಡು ಮತ್ತೆ ಮತ್ತೆ ನೋಡಿದೆ–ಅದೇ ದೃಶ್ಯ.' ಹೀಗೆ ಹೇಳುತ್ತ ಮತ್ತೆ ಅಳ ತೊಡಗಿದನು. 'ನನಗೇನೂ ಗೊತ್ತಿಲ್ಲಪ್ಪ' ಎಂದು ನಾನು ಹೇಳಿದೆ. ಆದರೆ ಅವನು ಕೇಳಬೇಕಲ್ಲ ? ನನಗೆ ಭಯವಾಯಿತು — ಈ ವಿಷಯವನ್ನು ಯಾರಾದರೂ ಕೇಳಿ ರಾಣಿ ರಾಸಮಣಿಗೆ ತಿಳಿಸಿಬಿಡುತ್ತಾರೊ ಎಂದು ! ಅವಳು ಏನು ಭಾವಿಸಿಯಾಳು ? ನಾನು ಅವನ ಮೇಲೆ ಏನೊ ಮಂತ್ರ ಹಾಕಿರಬಹುದೆಂದು ಭಾವಿಸಬಹುದು. ಅವನನ್ನು ಸಮಾಧಾನ ಮಾಡಲು ಬಹಳ ಹೊತ್ತು ಬೇಕಾಯಿತು. ಮಥುರನು ಸುಮ್ಮನೆ ಅಷ್ಟೆಲ್ಲ ಮಾಡಿದನೆ, ಅಷ್ಟೊಂದು ಪ್ರೀತಿಸಿದನೆ ? ತಾಯಿಯು ಅವನಿಗೆ ಅನೇಕ ಅನುಭವ ಗಳನ್ನು ನೀಡಿರುವಳು. ಮಥುರನ ಜಾತಕದಲ್ಲಿಯೇ ಬರೆದಿರುವುದು : ಅವನ ಇಷ್ಟ ದೇವತೆಗೆ ಅವನ ಮೇಲೆ ಎಷ್ಟೊಂದು ದಯೆಯೆಂದರೆ ಶರೀರವನ್ನು ಧರಿಸಿ ಅವನೊಡನೆ ಓಡಾಡುವನು, ಅವನನ್ನು ರಕ್ಷಿಸುವನು.''

13. ಈ ಘಟನೆಯನಂತರ ಮಥುರನ ವಿಶ್ವಾಸವು ಹೆಚ್ಚು ಪಕ್ವವಾಯಿತು. ಏಕೆಂದರೆ ಈ ಘಟನೆ ಶ್ರೀರಾಮಕೃಷ್ಣರು ಸಾಮಾನ್ಯ ವ್ಯಕ್ತಿಯಲ್ಲ ಎಂಬುದನ್ನು ಸ್ಪಷ್ಟ ವಾಗಿ ತೋರಿಸಿಕೊಟ್ಟಿತು. ಮೊದಲ ಭೇಟಿಯಲ್ಲಿಯೇ ಅವನು ಅವರೆಡೆಗೆ ಆಕರ್ಷಿತ ನಾಗಿದ್ದ, ಇತರರೆಲ್ಲ ಅವರನ್ನು ನಿಂದಿಸುತ್ತಿದ್ದರೆ, ಅವರ ಮಾನಸಿಕ ಸ್ಥಿತಿಯನ್ನು ಅವನು ಅರ್ಥಮಾಡಿಕೊಳ್ಳುತ್ತಿದ್ದ. ಈಗ ಅವನಿಗೆ ಸ್ಪಷ್ಟವಾಗಿ ತಿಳಿಯಿತು. ಜಗನ್ಮಾತೆಯೇ ತನ್ನ ಮೇಲಿನ ಕೃಪೆಯಿಂದ ಶ್ರೀರಾಮಕೃಷ್ಣರ ದೇಹದಲ್ಲಿ ನೆಲೆಸಿರು ವಳು, ಎಂದು. ತನ್ನ ಜಾತಕದಲ್ಲಿ ಹೇಳಿರುವಂತೆ ಮಂದಿರದಲ್ಲಿ ಮೂರ್ತಿ ರೂಪದಲ್ಲಿ ರುವ ದೇವಿಯೇ ಈಗ ದೇಹಧರಿಸಿ ತನ್ನೊಡನೆ ಓಡಾಡುತ್ತಿರುವಳು ಎಂಬುದು ಅಂದಿ ನಿಂದ ಅವನಿಗೆ ಸ್ಪಷ್ಟವಾಯಿತು. ಶ್ರೀರಾಮಕೃಷ್ಣರ ಮೇಲಿನ ಅವನ ಭಕ್ತಿ ವಿಶ್ವಾಸ ಇದರಿಂದಾಗಿ ಇನ್ನೂ ಗಾಢವಾಯಿತು.

14. ನಿಜವಾಗಿಯೂ ಮಥುರನು ತುಂಬ ಭಾಗ್ಯವಂತ. ಶಾಸ್ತ್ರ ಹೇಳುತ್ತದೆ, ಎಲ್ಲಿಯವರೆಗೆ ಶರೀರವಿರುತ್ತದೊ ಅಲ್ಲಿಯವರೆಗೆ ಮನುಷ್ಯನು ಒಳ್ಳೆಯ ಮತ್ತು ಕೆಟ್ಟ ಕರ್ಮಗಳನ್ನು ಮಾಡಲೇ ಬೇಕಾಗುತ್ತದೆ. ಸಾಧಾರಣ ವ್ಯಕ್ತಿಗಳ ಬಗ್ಗೆಯಂತೂ ಹೇಳ ಬೇಕಾಗಿಯೇ ಇಲ್ಲ, ಮುಕ್ತ ಪುರುಷರೂ ಕೂಡ ಆ ರೀತಿ ಮಾಡಬೇಕಾಗುತ್ತದೆ. ಸಾಧಾರಣ ಮನುಷ್ಯರು ತಾವೇ ಮಾಡಿದ ಸುಕೃತಿ ದುಷ್ಕೃತಿಗಳ ಫಲವನ್ನು ಭೋಗಿಸು ತ್ತಾರೆ, ಈಗ ಮುಕ್ತ ಪುರುಷರ ಶರೀರದಿಂದಾದ ಪಾಪ ಪುಣ್ಯಗಳ ಫಲವನ್ನು ಭೋಗಿ

ಸುವವರಾರು ? ತಾವೇ ಅದನ್ನು ಭೋಗಿಸಲಾಗುವುದಿಲ್ಲ. ಏಕೆಂದರೆ ಸುಖ ದುಃಖ ಗಳನ್ನು ಭೋಗಿಸಬೇಕಾದ ಅಭಿಮಾನ, ಅಹಂಕಾರಗಳು ಅವರನ್ನು ಬಿಟ್ಟು ಬಹುದೂರ ಹೋಗಿಬಿಟ್ಟಿವೆ. ಆದ್ದರಿಂದ ಅದನ್ನು ಭೋಗಿಸುವವರಾರು ? ಕರ್ಮಫಲವಂತೂ ಅನಿವಾರ್ಯ. ಮುಕ್ತಪುರುಷರ ಶರೀರವು ಒಣಗಿದ ಎಲೆಯಂತೆ ಎಲ್ಲಿಯವರೆಗೆ ಬಿದ್ದು ಹೋಗುವುದಿಲ್ಲವೊ ಅಲ್ಲಿಯವರೆಗೆ ಅದರ ಮೂಲಕ ಕೆಲವು ಒಳ್ಳೆಯ ಮತ್ತು ಕೆಟ್ಟ ಕರ್ಮಗಳು ನಡೆಯಲೇ ಬೇಕು. ಈಗ ಶಾಸ್ತ್ರ ಹೇಳುತ್ತದೆ : ಯಾರು ಮುಕ್ತ ಪುರುಷರ ಸೇವೆ ಮಾಡುವರೊ, ಅವರನ್ನು ಪ್ರೀತಿಸುವರೊ ಅವರು ಆ ಮುಕ್ತ ಪುರುಷರ ಶುಭ ಕರ್ಮಗಳ ಫಲವನ್ನು ಅನುಭವಿಸುತ್ತಾರೆ. ಮತ್ತೆ ಯಾರು ಅವರನ್ನು ದ್ವೇಷಿಸುವರೊ ಅವರು ಮುಕ್ತಪುರುಷರ ಅಶುಭ ಕರ್ಮಗಳ ಫಲವನ್ನು ಅನುಭವಿಸು ತ್ತಾರೆ.* ಸಾಧಾರಣ ಮುಕ್ತ ಪುರುಷರ ಸೇವೆಯಿಂದಲೇ ಈ ರೀತಿ ಫಲ ದೊರೆಯು ಬೇಕಾದರೆ ಇನ್ನು ಅವತಾರ ಪುರುಷರ ಸೇವೆ ಮಾಡಿದರೆ ಇನ್ನೆಷ್ಟು ಫಲ ದೊರೆಯು ಬಹುದೆಂದು ಹೇಳುವವರಾರು ?

15. ದಿನ ಕಳೆದಂತೆ ಮಥುರನಿಗೆ ಶ್ರೀರಾಮಕೃಷ್ಣರ ಗುರುಭಾವದ ಸ್ಪಷ್ಟ ಪರಿಚಯವಾಗತೊಡಗಿತು, ಹಾಗೆಯೇ ಅವರ ಮೇಲಿನ ಭಕ್ತಿಯೂ ನಿಶ್ಚಲವಾಯಿತು. ಈ ನಡುವೆ ಅನೇಕ ಘಟನೆಗಳು ನಡೆದುಹೋದವು ಉದಾಹರಣೆಗೆ : ಭಗವದ್ವಿರಹ ದಿಂದ ಶ್ರೀರಾಮಕೃಷ್ಣರ ದೇಹದಲ್ಲಿ ಉರಿ ಮತ್ತು ಅದರ ಚಿಕಿತ್ಸೆ ; ಭೈರವೀ ಬ್ರಾಹ್ಮಣೀ ಬಂದು ಮಥುರನು ಕರೆಸಿದ ಪಂಡಿತರುಗಳ ಮುಂದೆ ಶ್ರೀರಾಮಕೃಷ್ಣರು ಅವತಾರ ಪುರುಷರೆಂದು ಪ್ರತಿಪಾದಿಸಿದುದು ; ತೋತಾಪುರಿಯ ಆಗಮನ ಮತ್ತು ಶ್ರೀರಾಮ ಕೃಷ್ಣರ ಸಂನ್ಯಾಸ ಗ್ರಹಣ ; ಶ್ರೀರಾಮಕೃಷ್ಣರ ತಾಯಿ ದಕ್ಷಿಣೇಶ್ವರಕ್ಕೆ ಬಂದು ನೆಲೆಸಿ ದುದು — ಇವೇ ಮುಂತಾದುವುಗಳು. ಆದರೆ ಮೇಲೆ ಹೇಳಿದ ಅದ್ಭುತ ದರ್ಶನದ ನಂತರ ಶ್ರೀರಾಮಕೃಷ್ಣರ ಜೀವನದ ಪ್ರತಿಯೊಂದು ಆಗುಹೋಗುಗಳೊಡನೆಯೂ ಮಥುರನ ಸಂಬಂಧವಿದೆ. ಶ್ರೀರಾಮಕೃಷ್ಣರ ಚಿಕಿತ್ಸೆಗಾಗಿ ಕಲಕತ್ತೆಯ ಸುಪ್ರಸಿದ್ಧ ವೈದ್ಯ ಗಂಗಾಪ್ರಸಾದ ಸೇನ ಮತ್ತು ಮಹೇಂದ್ರಲಾಲ್‌ಸರ್ಕಾರ್ — ಇವರನ್ನು ಗೊತ್ತು ಪಡಿಸಿದ. ಉತ್ತರ ಪ್ರದೇಶದ ಸ್ತ್ರೀಯರು ಒಡವೆಗಳನ್ನು ಧರಿಸಿಕೊಳ್ಳುವಂತೆ ಶ್ರೀಜಗನ್ಮಾತೆಗೂ ಅದೇ ರೀತಿಯ ಅಲಂಕಾರ ಮಾಡಬೇಕೆಂದು ಶ್ರೀರಾಮಕೃಷ್ಣರಿಗೆ ಆಸೆಯಾಯಿತು. ಮಥುರನು ಅದಕ್ಕೆ ಬೇಕಾಗುವ ಎಲ್ಲ ಒಡವೆಗಳನ್ನು ತಂದು

---

* ತಸ್ಯ ಪುತ್ರಾ ದಾಯಮುಪಯಂತಿ ಸುಹೃದಃ ಸಾಧುಕೃತ್ಯಮ್ ದ್ವಿಷಂತಃ ಪಾಪಕೃತ್ಯಂ ||— ವೇದಾಂತಸೂತ್ರ 3-3-26. ಶಂಕರ ಭಾಷ್ಯದಲ್ಲಿ ಹೀಗಿದೆ : 'ತಥಾ ಶಾಟ್ಯಾಯನಿನಃ ಪಠಂತಿ, "ತಸ್ಯ ಪುತ್ರಾ ದಾಯಮುಪಯಂತಿ ಸುಹೃದಃ ಸಾಧುಕೃತ್ಯಂ ದ್ವಿಷಂತಃ ಪಾಪಕೃತ್ಯಮ್" ಇತಿ | ತಥೈವ ಕೌಶೀತಕಿನಃ – "ತತ್‌ಸುಕೃತದುಷ್ಕೃತೇ ವಿಧುನತೇ ತಸ್ಯ ಪ್ರಿಯಾಃ ಜ್ಞಾತಯಃ ಸುಕೃತ ಮುಪಯಂತ್ಯಪ್ರಿಯಾ ದುಷ್ಕೃತಮ್ ಇತಿ |'

ಕೊಟ್ಟನು. ಶ್ರೀರಾಮಕೃಷ್ಣರು ವೈಷ್ಣವ ಸಾಧನೆ ಮಾಡುವಾಗ ಅವರು ಸ್ತ್ರೀಯರಂತೆ ವೇಷಭೂಷಣಗಳನ್ನು ಧರಿಸಬೇಕಾಯಿತು. ಮಥುರನು ಕೂಡಲೇ ಅದಕ್ಕೆ ಎಲ್ಲ ವ್ಯವಸ್ಥೆ ಮಾಡಿದನು – ಸೀರೆ, ಒಡವೆ ಇತ್ಯಾದಿಗಳನ್ನೆಲ್ಲ ತರಿಸಿಕೊಟ್ಟನು. ಶ್ರೀರಾಮ ಕೃಷ್ಣರು ಪಾಣಿಹಾಟಿ ಉತ್ಸವಕ್ಕೆ ಹೋಗಬೇಕೆಂದಾಗ ಮಥುರನು ಅದಕ್ಕೆ ಎಲ್ಲ ವ್ಯವಸ್ಥೆ ಮಾಡಿದನು. ಅಷ್ಟೇ ಅಲ್ಲದೆ ಆ ಜನರ ನೂಕು ನುಗ್ಗಲಿನಲ್ಲಿ ಶ್ರೀರಾಮಕೃಷ್ಣರಿಗೆ ಕಷ್ಟ ವಾಗುವುದೆಂದು ಅವರನ್ನು ರಕ್ಷಿಸಲು ಅಂಗರಕ್ಷಕರೊಡನೆ ವೇಷ ಮರೆಸಿಕೊಂಡು ತಾನೇ ಅವರ ಹಿಂದೆ ಹೋಗಿದ್ದ. ಒಂದು ಕಡೆ ಈ ರೀತಿ ಅವರ ಸೇವೆ ಮಾಡಿದಂತೆಯೇ ಮಥುರನು ಅವರನ್ನು ಪರೀಕ್ಷಿಸುವ ಸಲುವಾಗಿ ಅವರಲ್ಲಿ ಪ್ರಲೋಭನೆ ಉಂಟು ಮಾಡಲು ಭ್ರಷ್ಟ ಹೆಂಗಸೊಬ್ಬಳನ್ನು ಅವರೆಡೆಗೆ ಕಳಿಸಿದ್ದನು. ದೇವಸ್ಥಾನದ ಆಸ್ತಿ ಯನ್ನೆಲ್ಲ ತಮ್ಮ ಹೆಸರಿನಲ್ಲಿ ಬರೆದಿಡುವುದಾಗಿ ಅವನು ಹೇಳಿದಾಗ ಶ್ರೀರಾಮಕೃಷ್ಣರು, "ನನ್ನನ್ನು ಪ್ರಾಪಂಚಿಕ ವ್ಯಕ್ತಿಯನ್ನಾಗಿ ಮಾಡಬೇಕೆಂದಿದ್ದೀಯಾ ?" ಎಂದು ಅವನನ್ನು ಹೊಡೆಯಲು ಹೋಗಿದ್ದರು. ಒಮ್ಮೆ ಆಸ್ತಿಯ ಸಂಬಂಧ ಹೊಡೆದಾಟವಾದಾಗ ಒಬ್ಬ ವ್ಯಕ್ತಿಯು ಸತ್ತುಹೋಗಿ ಮಥುರನು ದೊಡ್ಡ ಗಂಡಾಂತರಕ್ಕೆ ಸಿಕ್ಕಿಕೊಂಡಿದ್ದನು, ಆಗ ಶ್ರೀರಾಮಕೃಷ್ಣರು ಅವನನ್ನು ರಕ್ಷಿಸಿದ್ದರು. ಈ ಅಪಾಯದಿಂದ ಪಾರಾಗಲು ಅವನು ಎಲ್ಲವನ್ನೂ ಅವರ ಮುಂದೆ ಅರುಹಿಕೊಂಡು ಅವರಲ್ಲಿ ಸಂಪೂರ್ಣ ಶರಣಾಗಿದ್ದನು. ಇದೆಲ್ಲದರಿಂದ ನಮಗೆ ತಿಳಿದುಬರುವುದೇನೆಂದರೆ, ಶ್ರೀರಾಮಕೃಷ್ಣರ ಮೇಲಿನ ಭಕ್ತಿ ಮಥುರನಲ್ಲಿ ಹೆಚ್ಚು ಹೆಚ್ಚು ಆಳವಾಗಿ, ದೃಢವಾಗಿ ಬೇರುಬಿಡುತ್ತಿತ್ತು ಎಂಬುದು. ಈ ರೀತಿ ಆಗದೆ ಮತ್ತಿನ್ನೇನು ? ಒಂದು ಕಡೆ ಶ್ರೀರಾಮಕೃಷ್ಣರ ಅದ್ಭುತ ಅಲೌಕಿಕ ಸ್ವಭಾವವು ಮಥುರನ ಎಲ್ಲ ಪರೀಕ್ಷೆಗಳಲ್ಲಿಯೂ ಉತ್ತೀರ್ಣವಾಗಿ ಅವನ ಮುಂದೆ ಅತ್ಯುಜ್ವಲವಾಗಿ ಪ್ರಕಾಶಿಸುತ್ತಿತ್ತು, ಇನ್ನೊಂದು ಕಡೆ ಶ್ರೀರಾಮಕೃಷ್ಣರ ಅಹೇತುಕ ಪ್ರೀತಿ ಮಥುರನ ಹೃದಯದಲ್ಲಿ ತನ್ನ ಪೂರ್ಣ ಅಧಿಕಾರವನ್ನು ಸ್ಥಾಪಿಸಿತು. ಮಥುರನು ಭಾವಿಸಿದ : ಲಕ್ಷಾಂತರ ರೂಪಾಯಿನ ಸಂಪತ್ತನ್ನು ಅವರ ಮುಂದೆ ಇಟ್ಟರೂ ಅವರ ತ್ಯಾಗಬುದ್ಧಿ ಸ್ವಲ್ಪವೂ ವಿಚಲಿತವಾಗಲಿಲ್ಲ ; ಸುಂದರ ಸ್ತ್ರೀಯರ ಮೂಲಕವೂ ಇವರ ಮನಸ್ಸನ್ನು ಕೆಡಿಸಲಾಗಲಿಲ್ಲ ; ಮಾನ ಯಶಸ್ಸುಗಳಾವುವೂ ಇವರನ್ನು ಸ್ವಲ್ಪವೂ ವಿಚಲಿತಗೊಳಿಸಲಿಲ್ಲ – ಮನುಷ್ಯನನ್ನು ದೇವರೆಂದು ಪೂಜಿಸುವುದಕ್ಕಿಂತ ದೊಡ್ಡ ಮಾನ್ಯತೆ ಇನ್ನಾವುದಿದೆ – ಅದೂ ಕೂಡ ಅವರಲ್ಲಿ ಸ್ವಲ್ಪವೂ ಅಹಂಕಾರವನ್ನು ಉಂಟು ಮಾಡಲಿಲ್ಲ ; ಮತ್ತು ಪ್ರಾಪಂಚಿಕವಾದ ಯಾವ ವಸ್ತುವನ್ನೂ ಅವರು ಅಪೇಕ್ಷಿಸುತ್ತಿರ ಲಿಲ್ಲ. ಮತ್ತೆ ತನ್ನ ಎಲ್ಲ ದೋಷಗಳನ್ನು ನೋಡಿಯೂ ಸ್ವಲ್ಪವೂ ತಿರಸ್ಕರಿಸದೆ ತಮ್ಮವರಿ ಗಿಂತಲೂ ಹೆಚ್ಚಾಗಿ ಅವನನ್ನು ಅವರು ಪ್ರೀತಿಸುತ್ತಿದ್ದರು ; ವಿಪತ್ತುಗಳಿಂದ ಮತ್ತೆ ಮತ್ತೆ ರಕ್ಷಿಸುತ್ತಿರುವರು ; ಮತ್ತು ಯಾವ ರೀತಿಯಲ್ಲಿ ತನಗೆ ಹಿತವಾಗುವುದು–ಇದನ್ನೇ ಚಿಂತಿಸುತ್ತಿರುವರು. ಇದಕ್ಕೆಲ್ಲ ಕಾರಣವೇನು ? ಅವರು ಮಾನವ ಶರೀರವನ್ನು ಧರಿಸಿ

ದ್ದರೂ ನಿಜವಾಗಿಯೂ ಕತ್ತಲೆಯಿಲ್ಲದ ಲೋಕಕ್ಕೆ ಸೇರಿದವರು. ಅವರ ತ್ಯಾಗ ಅದ್ಭುತ, ಸಂಯಮ ಅದ್ಭುತ, ಜ್ಞಾನ ಅದ್ಭುತ ಭಕ್ತಿಯೂ ಅದ್ಭುತ. ಅವರ ಎಲ್ಲ ಕರ್ಮಗಳೂ ಅದ್ಭುತ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ತನ್ನಂತಹ ದುರ್ಬಲ ಅಹಂಕಾರಿ ವ್ಯಕ್ತಿಗಳ ಮೇಲೆ ಅವರ ಕರುಣೆ ಮತ್ತು ಪ್ರೀತಿ ಅದ್ಭುತ !

ಇವರ ಜೊತೆಗೆ ಇನ್ನೊಂದು ವಿಷಯವೂ ಅವನ ಹೃದಯವನ್ನು ತಾಕಿತು— ಅದೇ ಅವರ ಅದ್ಭುತ ಚಾರಿತ್ರ್ಯದಲ್ಲಿದ್ದ ಮಾಧುರ್ಯ. ಅಂತಹ ಅಲೌಕಿಕ ಭಗವತ್ ಶಕ್ತಿ ಅವರ ಮೂಲಕ ಪ್ರಕಾಶಗೊಳ್ಳುತ್ತಿದ್ದರೂ ಅವರು ಮಾತ್ರ ಎಂದಿನಂತೆಯೇ ಬಾಲಕರಾಗಿಯೇ ಇದ್ದರು – ಸ್ವಲ್ಪವೂ ಅಹಂಕಾರವಿಲ್ಲ ! ಇದು ನಿಜವಾಗಿಯೂ ಆಶ್ಚರ್ಯಕರವೇ ! ಮನಸ್ಸಿನಲ್ಲಿ ಯಾವುದೇ ಭಾವನೆ ಬರಲಿ, ಐದು ವರ್ಷದ ಬಾಲಕ ನಂತೆ, ಸ್ವಲ್ಪವೂ ಅದನ್ನು ಬಚ್ಚಿಡುತ್ತಿರಲಿಲ್ಲ. ಒಳಗೆ ಹೊರಗೆ ಎಲ್ಲ ಒಂದೇ ಭಾವ. ಮನಸ್ಸಿನಲ್ಲಿರುವುದೇ ಮಾತು ಕೃತಿಗಳಲ್ಲಿ ಪ್ರಕಟಗೊಳ್ಳುತ್ತಿತ್ತು. ಇತರರಿಗೆ ಯಾವುದೇ ರೀತಿಯಲ್ಲಿ ಹಾನಿಯಾಗುವಂತಹುದನ್ನು ಅವರೆಂದೂ ಹೇಳುತ್ತಿರಲಿಲ್ಲ. ತಮಗೆ ಶಾರೀರಿಕವಾಗಿ ಕಷ್ಟವಾಗುವಂತಿದ್ದರೂ ಅವರು ಹೇಳುತ್ತಿರಲಿಲ್ಲ. ಇದು ಮಾನವನಿಗೆ ಸಾಧ್ಯವಾಗುವಂತಹುದೇ ?

16 ಮಥುರನ ಕಾಳಿಘಾಟಿನ ಪುರೋಹಿತ ಹಲಧರನ ಮನಸ್ಸಿನಲ್ಲಿ ಅಸೂಯೆ ಕುದಿಯುತ್ತಿತ್ತು – ಮಥುರನಿಗೆ ಶ್ರೀರಾಮಕೃಷ್ಣರ ಮೇಲಿರುವ ಅಪಾರ ಭಕ್ತಿಯನ್ನು ನೋಡಿ ಅವನಿಗೆ ಸಹಿಸದಾಗಿತ್ತು. ಅವನು ಭಾವಿಸಿದ : 'ಈ ಮನುಷ್ಯ ಏನೊ ಮಂತ್ರ ತಂತ್ರದಿಂದ ಒಡೆಯನನ್ನು ವಶಪಡಿಸಿಕೊಂಡಿರಬೇಕು. ನಾನು ಅವರನ್ನು ನನ್ನ ಕೆಳಗೆ ಇರಿಸಿಕೊಳ್ಳಬೇಕೆಂದು ಎಷ್ಟೆಲ್ಲ ಪ್ರಯತ್ನಿಸಿದೆ! ಇವನು ಎಲ್ಲ ಹಾಳುಮಾಡಿಬಿಟ್ಟ. ಮತ್ತೆ ಸರಳ ಬಾಲಕನಂತೆ ಸೋಗುಹಾಕುತ್ತಾನೆ. ಇವನು ಅಷ್ಟೊಂದು ಸರಳನಾದರೆ 'ವಶೀಕರಣ' ಕ್ರಿಯೆಯನ್ನು ಹೇಳಿಬಿಡಲಿ. ನಾನು ಒಡೆಯರನ್ನು ಬಲೆಗೆ ಹಾಕಿ ಕೊಳ್ಳಲು ಎಷ್ಟೊ ವಿಧಾನಗಳನ್ನು ಮಾಡಿ ನೋಡಿದೆ. ಅವರು ಇನ್ನೇನು ನನ್ನ ಕೈವಶ ಆಗುವುದರಲ್ಲಿದ್ದರು. ನಡುವೆ ಈ ಮನುಷ್ಯ ಬಂದು ಎಲ್ಲ ಹಾಳುಮಾಡಿಬಿಟ್ಟ.'

ಶ್ರೀರಾಮಕೃಷ್ಣರ ಮೇಲೆ ಮಥುರನಿಗೆ ಭಕ್ತಿ ವೃದ್ಧಿಯಾದಷ್ಟೂ. ಸದಾ ಅವರೊಡನೆಯೇ ಇದ್ದು ಹೆಚ್ಚು ಹೆಚ್ಚು ಅವರ ಸೇವೆ ಮಾಡಬೇಕೆನಿಸುತ್ತಿತ್ತು ಅವನಿಗೆ. ಅದಕ್ಕಾಗಿಯೇ ಅವರನ್ನು ಬಲವಂತವಾಗಿ ಕಲಕತ್ತೆಯ ತನ್ನ ಮನೆಯಲ್ಲಿ ಕರೆದುಕೊಂಡು ಬಂದು ಇರಿಸಿಕೊಳ್ಳುತ್ತಿದ್ದನು. ಮಧ್ಯಾಹ್ನ ಅವರನ್ನು ಕಲಕತ್ತೆಯ ಈಡನ್‌ಗಾರ್ಡನ್ ಮತ್ತು ಬೇರೆ ಬೇರೆ ಮುಖ್ಯ ಸ್ಥಳಗಳಿಗೆ ಕರೆದುಕೊಂಡು ಹೋಗುತ್ತಿದ್ದನು. 'ತಂದೆಗೆ ಯಾವುದೆಂದರೆ ಅದರಲ್ಲಿ ಊಟ ಕೊಟ್ಟರೆ ನಡೆಯುವುದೆ '— ಎಂದು ಭಾವಿಸಿ ಅವನು ಅವರಿಗಾಗಿ ಒಂದು ಜೊತೆ ಚಿನ್ನ ಬೆಳ್ಳಿಯ ತಟ್ಟೆ,.ಲೋಟಗಳನ್ನು ಸಿದ್ಧವಿರಿಸಿ ದ್ದನು. ಉತ್ತಮ ಬೆಲೆಬಾಳುವ ಬಟ್ಟೆಗಳನ್ನು ಅವರಿಗೆ ಧರಿಸಲು ನೀಡುತ್ತಿದ್ದ, ಅವರಿಗೆ ಹೇಳುತ್ತಿದ್ದ : "ತಂದೆ, ನೀವೆ ಇದಕ್ಕೆ ಮಾಲಿಕರು. ನಾನು ಕೇವಲ ಇದನ್ನು

ನೋಡಿಕೊಳ್ಳುವವನು ಅಷ್ಟೆ. ನೋಡಿ ನೀವು ಈ ಚಿನ್ನದ ತಟ್ಟೆ, ಬೆಳ್ಳಿಯ ಲೋಟ ಇತ್ಯಾದಿಗಳಲ್ಲಿ ಉಂಡು ಅದರ ಕಡೆ ಸ್ವಲ್ಪವೂ ಗಮನ ಹರಿಸದೆ ಹೊರಟುಹೋಗುತ್ತೀರಿ — ಅನಂತರ ನಾನು ಅವುಗಳನ್ನು ತೊಳಸಿ, ನಿಮಗೆ ಮುಂದಿನ ಸಾರಿ ಬೇಕಾಗುತ್ತದೆ ಇರಲೆಂದು ಎಚ್ಚರಿಕೆ ವಹಿಸುತ್ತೇನೆ.''

17. ಆಗಿನ ಕಾಲದಲ್ಲಿ ಒಂದು ಸಾವಿರ ರೂಪಾಯಿ ಕೊಟ್ಟು ಮಥುರನು ಖರೀದಿಸಿದ ವಾರಾಣಸೀ ಶಾಲಿನ ಗತಿ ಏನಾಯಿತೆಂಬುದನ್ನು ನಾವು ಶ್ರೀರಾಮಕೃಷ್ಣರ ಬಾಯಿಂದ ಕೇಳಿರುವೆವು. ಇಂಥ ಬೆಲೆ ಬಾಳುವ ವಸ್ತುವನ್ನು ಶ್ರೀರಾಮಕೃಷ್ಣರಿಗಲ್ಲದೆ ಇನ್ನಾರಿಗೆ ನೀಡುವುದೆಂದು ಭಾವಿಸಿ ಅವನು ತನ್ನ ಕೈಯಿಂದಲೇ ಅದನ್ನು ಅವರಿಗೆ ಹೊದಿಸಿ ಮಹದಾನಂದಪಟ್ಟನು. ಶಾಲು ನಿಜವಾಗಿಯೂ ಅತ್ಯುತ್ತಮವಾದುದಾಗಿರ ಬೇಕು. ಏಕೆಂದರೆ ಆಗಲೇ ಅದಕ್ಕೆ ಅಷ್ಟೊಂದು ಬೆಲೆ ಇರುವಾಗ ಈಗ ಅಂಥ ಶಾಲು ದೊರೆಯುತ್ತದೊ ಇಲ್ಲವೊ. ಶಾಲನ್ನು ಹೊದ್ದುಕೊಂಡು ಶ್ರೀರಾಮಕೃಷ್ಣರು ಬಾಲಕ ನಂತೆ ಅತ್ತಿಂದಿತ್ತ ಸಂತೋಷದಿಂದ ಓಡಾಡಿದರು. ಮತ್ತೆ ಮತ್ತೆ ಅದನ್ನು ನೋಡಿ ದರು. ಎಲ್ಲರಿಗೂ ತೋರಿಸಿ ಮಥುರನು ತನಗಾಗಿ ಅಷ್ಟೊಂದು ಹಣ ಕೊಟ್ಟು ತಂದಿರು ವುದಾಗಿ ಹೇಳಿದರು. ಮರುಕ್ಷಣವೇ ಅವರ ಭಾವ ಬದಲಾಯಿತು. ಅವರು ಭಾವಿಸಿದರು: ''ಇದರಲ್ಲಿ ಏನಿದೆ ಮಹಾ ? ಇದರಲ್ಲಿರುವುದು ಕೇವಲ ಪ್ರಾಣಿಗಳ ರೋಮ ತಾನೆ ? ಯಾವ ಪಂಚ ಭೂತಗಳಿಂದ ಎಲ್ಲವೂ ಉತ್ಪನ್ನವಾಗಿವೆಯೊ ಇದು ಹಾಗೆಯೆ ? ಚಳಿ ಯನ್ನು ಹೋಗಲಾಡಿಸಲು ಸಾಮಾನ್ಯ ಕಂಬಳಿಯನ್ನು ಹೊದ್ದುಕೊಂಡರೂ ಆಗುತ್ತದೆ. ಇದರ ಉದ್ದೇಶವೂ ಅಷ್ಟೇ ತಾನೆ. ಬೇರೆ ಎಲ್ಲ ವಸ್ತುಗಳಂತೆಯೆ ಇದರಿಂದಲೂ ಭಗವಂತನನ್ನು ಪಡೆಯಲಾಗುವುದಿಲ್ಲ. ಹೊದ್ದುಕೊಂಡರೆ ನಾನು ಎಲ್ಲರಿಗೀತ ದೊಡ್ಡವನು ಎಂಬ ಜಂಬ ಬರುತ್ತದೆ. ಹೀಗೆ ಅಹಂಕಾರ ವೃದ್ಧಿಯಾಗಿ ಮನಸ್ಸು ಭಗವಂತನಿಂದ ದೂರ ಉಳಿಯುತ್ತದೆ. ಅಬ್ಬ, ಇದರ ದೋಷಗಳು ಎಷ್ಟೊಂದು ?'' ಹೀಗೆ ಭಾವಿಸಿ ಶಾಲನ್ನು ತೆಗೆದು ನೆಲಕ್ಕೆ ಎಸೆದರು. 'ಇದರಿಂದ ಭಗವಂತ ಸಿಕ್ಕುವು ದಿಲ್ಲ' ಎಂದು ಹೇಳುತ್ತ 'ಥೂ ಥೂ' ಎಂದು ಅದರ ಮೇಲೆ ಉಗಿದರು. ಮತ್ತೆ ಧೂಳಿ ನಲ್ಲಿ ಅದನ್ನು ಕಾಲಿನಿಂದ ಉಜ್ಜತೊಡಗಿದರು. ಇಷ್ಟಕ್ಕೆ ಅವರು ತೃಪ್ತರಾಗದೆ ಬೆಂಕಿ ಹಚ್ಚಿ ಅದನ್ನು ಸುಡುವುದರಲ್ಲಿದ್ದರು. ಅಷ್ಟು ಹೊತ್ತಿಗೆ ಸರಿಯಾಗಿ ಯಾರೊ ಬಂದು ಅದನ್ನು ಅವರ ಕೈಯಿಂದ ಪಾರುಗಾಣಿಸಿದರು. ಮಥುರನು ಶಾಲಿನ ದುರ್ದಶೆಯನ್ನು ಕೇಳಿ ಸ್ವಲ್ಪವೂ ಬೇಸರಗೊಳ್ಳಲಿಲ್ಲ. 'ತಂದೆ ಒಳ್ಳೆಯದನ್ನೇ ಮಾಡಿದರು' ಎಂದು ಹೇಳಿದ.

18. ಮಥುರನು ಶ್ರೀರಾಮಕೃಷ್ಣರನ್ನು ಸುಖ ಸೌಕರ್ಯಗಳಲ್ಲಿ ಇರಿಸಲು ಎಷ್ಟೇ ಪ್ರಯತ್ನಿಸಿದರೂ ಅವರ ಮನಸ್ಸು ಯಾವಾಗಲೂ ಉಚ್ಚ ಸ್ಥಿತಿಯಲ್ಲಿಯೇ ಇತ್ತು. ಅವರು ಎಲ್ಲೇ ಇರಲಿ ಅವರ ಮನಸ್ಸು ಪವಿತ್ರ ದಿವ್ಯ ಭಾವದಲ್ಲಿಯೇ ನೆಲಸಿರು ತ್ತಿತ್ತು. ಅವರ ಮನಸ್ಸು ಯಾವಾಗಲೂ ಆ ದಿವ್ಯ ಜ್ಯೋತಿಯನ್ನೇ ಕಾಣುತ್ತಿತ್ತು.

ಆ ಬೆಳಕಿನಲ್ಲಿ ನೆರಳಿಲ್ಲ, ಅದು ಹ್ರಸ್ವವೃದ್ಧಿ ಆಗುವುದಿಲ್ಲ. ಅದರ ಮುಂದೆ ಸಾಮಾನ್ಯ ಅಗ್ನಿಯ ಮಾತಿರಲಿ, ಸೂರ್ಯ ಚಂದ್ರರ ಬೆಳಕೂ ಅಂಧಕಾರಪ್ರಾಯವಾಗಿ ಕಾಣುವುದು. ಈ ಬೆಳಕಿನ ರಾಜ್ಯದಲ್ಲಿಯೇ ಅವರ ಮನಸ್ಸು ಯಾವಾಗಲೂ ನೆಲೆಸಿರುತ್ತಿತ್ತು. ಕಾಮಕ್ರೋಧಾದಿ ಗಳ ಈ ರಾಜ್ಯದಲ್ಲಿ ಎರಡು ದಿನಗಳ ಮಟ್ಟಿಗೆ ಕರುಣೆಯಿಂದ ಓಡಾಡಲು ಮಾತ್ರ ಅವರು ಬಂದಿರುವುದು. ಆದ್ದರಿಂದ ಭೋಗವಿಲಾಸಗಳಿಂದ ಕೂಡಿದ ಮಥುರರ ಜಾನ ಬಜಾರ್ ಮನೆಯಲ್ಲಿ ನೆಲಸಿರುವಾಗಲೂ ಶ್ರೀರಾಮಕೃಷ್ಣರು ಅದೇ ನಿರ್ಲಿಪ್ತತೆ, ನಿರಹಂಕಾರದಿಂದ ಕೂಡಿರುತ್ತಿದ್ದರು ಮತ್ತು ತಮ್ಮದೇ ಭಾವದಲ್ಲಿ ಯಾವಾಗಲೂ ನೆಲೆಸಿರುತ್ತಿದ್ದರು.

19. ಶ್ರೀರಾಮಕೃಷ್ಣರು ಜಾನಬಜಾರ್ ಮನೆಯಲ್ಲಿದ್ದ ಸಮಯ. ಒಂದು ದಿನ ಸಂಜೆ ಅವರು ಅರ್ಧಬಾಹ್ಯದಶೆಯಲ್ಲಿ ಇದ್ದರು, ಹತ್ತಿರ ಯಾರೂ ಇರಲಿಲ್ಲ. ಅವರ ಸಮಾಧಿ ಭಂಗವಾಗುತ್ತಿತ್ತು, ಅಲ್ಪಸ್ವಲ್ಪ ಬಾಹ್ಯ ಪ್ರಜ್ಞೆ ಬರುತ್ತಿತ್ತು. ಆ ಸಂದರ್ಭ ದಲ್ಲಿ ಮೇಲೆ ಹೇಳಿದ ಪುರೋಹಿತ ಹಲಧರನು ಅಲ್ಲಿಗೆ ಬಂದನು. ಶ್ರೀರಾಮಕೃಷ್ಣರು ಒಬ್ಬರೇ ಇದ್ದುದನ್ನು ಕಂಡು ಇದೇ ಒಳ್ಳೆಯ ಸಮಯವೆಂದು ಭಾವಿಸಿದ. ಸುತ್ತಮುತ್ತ ನೋಡುತ್ತ ಶ್ರೀರಾಮಕೃಷ್ಣರ ಹತ್ತಿರ ಹೋದ, ಅವರ ದೇಹವನ್ನು ಅಲುಗಾಡಿಸುತ್ತ ಕೇಳಿದ : "ಏ ಬ್ರಾಹ್ಮಣ, ಹೇಳು, ಒಡೆಯನನ್ನು ಏನು ಮಾಡಿ ವಶಪಡಿಸಿಕೊಂಡೆ ? ಏನು ಮಂತ್ರ ಹಾಕಿದೆ ಹೇಳು ? ಸುಮ್ಮನೆ ಸೋಗುಹಾಕಬೇಡ, ಹೇಳು ?" ಮತ್ತೆ ಮತ್ತೆ ಕೇಳಿದಾಗಲೂ ಶ್ರೀರಾಮಕೃಷ್ಣರು ಏನೂ ಹೇಳಲಿಲ್ಲ, ಅಥವಾ ಹೇಳಲಾಗಲಿಲ್ಲ. ಏಕೆಂದರೆ ಅವರು ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಪುರೋಹಿತನು ಕ್ರುದ್ಧನಾಗಿ "ಮೂರ್ಖ, ಬಾಯಿ ಬಿಡುವುದಿಲ್ಲವೆ ?' ಎಂದು ಹೇಳಿ ಅವರಿಗೆ ಒಂದು ಒದೆ ಕೊಟ್ಟು ಹೊರಟುಹೋದ. ಮಥುರನಿಗೆ ಈ ವಿಷಯವನ್ನು ತಿಳಿಸಿದರೆ ಆ ಪುರೋಹಿತನ ಗತಿ ಮುಗಿಯಬಹುದೆಂದು ಭಾವಿಸಿ ಶ್ರೀರಾಮಕೃಷ್ಣರು ಸುಮ್ಮನೆ ಇದ್ದರು. ಸ್ವಲ್ಪ ಸಮಯದ ನಂತರ ಬೇರೆ ಏನೋ ಒಂದು ತಪ್ಪಿಗಾಗಿ ಮಥುರನು ಆ ಪುರೋಹಿತನನ್ನು ಕೆಲಸದಿಂದ ತಪ್ಪಿಸಿ ಓಡಿಸಿದನು. ಇದಾದ ಮೇಲೆ ಮಾತಿನ ಸಂದರ್ಭದಲ್ಲಿ ಒಂದು ದಿನ ಶ್ರೀರಾಮಕೃಷ್ಣರು ಮಥುರನಿಗೆ ಈ ವಿಷಯವನ್ನು ತಿಳಿಸಿದರು. ಇದನ್ನು ಕೇಳಿ ಮಥುರನು ಕ್ರೋಧದಿಂದಲೂ ದುಃಖದಿಂದಲೂ ಹೇಳಿದ, "ತಂದೆ, ಈ ವಿಷಯ ನೀವು ಮೊದಲೇ ತಿಳಿಸಿದ್ದರೆ ಖಂಡಿತ ಆ ಪುರೋಹಿತನ ತಲೆ ಉಳಿಯುತ್ತಿರಲಿಲ್ಲ." ಎಂದು.

20. ಮಥುರನಾಥ ಮತ್ತು ಅವರ ಪತ್ನಿ ಇಬ್ಬರೂ ಶ್ರೀರಾಮಕೃಷ್ಣರ ಅನುಗ್ರಹಕ್ಕೆ ಪಾತ್ರರಾಗಿದ್ದರು. ಇಬ್ಬರೂ ಅವರನ್ನು ದೇವರೆಂದೇ ಭಾವಿಸಿ ಅವರಲ್ಲಿ ಸಂಪೂರ್ಣ ಶರಣಾಗಿದ್ದರು. ಇದಕ್ಕೆ ಒಂದು ಮುಖ್ಯ ಪ್ರಮಾಣ ಯಾವುದೆಂದರೆ, ಅವರಿಬ್ಬರೂ ತಮಗೆ ಸಂಬಂಧಪಟ್ಟುದಾವುದನ್ನೂ ಶ್ರೀರಾಮಕೃಷ್ಣರ ಮುಂದೆ ಬಚ್ಚಿಡುತ್ತಿರಲಿಲ್ಲ. ಇಬ್ಬರಿಗೂ ತಿಳಿದಿತ್ತು : 'ತಂದೆ ಮನುಷ್ಯರಲ್ಲ, ಅವರ ಹತ್ತಿರ ವಿಷಯವನ್ನು ಬಚ್ಚಿಟ್ಟುಕೊಂಡು ಮಾಡುವುದೇನು ? ಅವರಿಗೆ ಎಲ್ಲ ತಿಳಿಯುತ್ತೆ.

ಒಳಗಿರುವುದನ್ನೆಲ್ಲ ಅವರು ಗುರುತಿಸಬಲ್ಲರು. ' ಹೀಗೆ ಅವರು ಭಾವಿಸುತ್ತಿದ್ದುದು ಮಾತ್ರ ವಲ್ಲ, ಹಾಗೆಯೇ ಅನುಸರಿಸುತ್ತಿದ್ದರು. ಅನೇಕ ಬಾರಿ ಅವರು ಶ್ರೀರಾಮಕೃಷ್ಣರನ್ನು ಕರೆದುಕೊಂಡುಹೋಗಿ ಮೂವರೂ ಒಟ್ಟಿಗೆ ಊಟ ಮಾಡುವುದು, ತಿಂಡಿ ತಿನ್ನುವುದು, ಓಡಾಡುವುದು ಮಾಡಿರುವರು. ಶ್ರೀರಾಮಕೃಷ್ಣರು ಅವರ ಮನೆಯಲ್ಲಿ ಎಲ್ಲಿ ಬೇಕಾದರೂ ಓಡಾಡಬಹುದಿತ್ತು. ಅವರು ಒಳಮನೆಯನ್ನು ಪ್ರವೇಶಿಸಿದರೂ ಒಂದೆ, ಪ್ರವೇಶಿಸದಿದ್ದರೂ ಒಂದೆ. ಏಕೆಂದರೆ ತಮ್ಮ ಮನಸ್ಸಿನ ಅಂತರಾಳದಲ್ಲಿರು ವುದೆಲ್ಲ ಅವರಿಗೆ ತಿಳಿಯುತ್ತ ದೆಂಬುದಕ್ಕೆ ಅವರಿಬ್ಬರಿಗೆ ಅನೇಕ ಪ್ರಮಾಣಗಳು ದೊರೆ ತಿದ್ದವು. ಸ್ತ್ರೀಪುರುಷರ ಸಹವಾಸದಿಂದ ಉಂಟಾಗಬಹುದಾದ ಮಾನಸಿಕ ವಿಕಾರಗಳ ವಿಷಯದಲ್ಲಿ ಶ್ರೀರಾಮಕೃಷ್ಣರು ಒಂದು ಗೋಡೆ ಅಥವಾ ಇನ್ನಾವುದೊ ಜಡವಸ್ತುವಿ ನಂತೆಯೆ ಎಂದು ಹೇಳಬಹುದು. ಮನೆಯ ಇತರ ಸ್ತ್ರೀಯರಿಗೆ ಶ್ರೀರಾಮಕೃಷ್ಣರನ್ನು ನೋಡಿದಾಗ ಇತರ ಪುರುಷರನ್ನು ನೋಡಿದಾಗ ಆಗುವ ಲಜ್ಜೆ-ಸಂಕೋಚ ಭಾವಗಳು ಉಂಟಾಗುತ್ತಿರಲಿಲ್ಲ. ಅವರಿಗೆ ಅನಿಸುತ್ತಿತ್ತು ಅವರು ತಮ್ಮವರೆ ಒಬ್ಬರು ಅಥವಾ ಐದು ವರ್ಷದ ಮಗು ಎಂದು. ಶ್ರೀರಾಮಕೃಷ್ಣರು ಸಖೀಭಾವದ ಸಾಧನೆ ಮಾಡು ತ್ತಿದ್ದಾಗ ಸ್ತ್ರೀಯಂತೆ ವೇಷ ಹಾಕಿಕೊಂಡು ದುರ್ಗಾ ಪೂಜೆಯ ಸಮಯದಲ್ಲಿ ಮಥುರನ ಮನೆಯ ಇತರ ಸ್ತ್ರೀಯರೊಡನೆ ದುರ್ಗಾ ಪ್ರತಿಮೆಗೆ ಚಾಮರ ಹಾಕುತ್ತಿದ್ದರು. ಕೆಲವೊಮ್ಮೆ ಯಾರಾದರೂ ಮಹಿಳೆಯ ಪತಿ ಮನೆಗೆ ಬಂದಾಗ ಇವರೇ ಆಕೆಗೆ ಅಲಂಕರಿಸಿ, ಪತಿಯೊಡನೆ ಹೇಗೆ ವ್ಯವಹರಿಸಬೇಕೆಂಬುದನ್ನು ಹೇಳಿಕೊಟ್ಟು ಆಕೆಯನ್ನು ಪತಿಯ ಕೋಣೆಗೆ ಕರೆದುಕೊಂಡು ಹೋಗಿ ಬಿಡುತ್ತಿದ್ದರು. ಇಂತಹ ಎಷ್ಟೋ ವಿಷಯಗಳನ್ನು ಶ್ರೀರಾಮಕೃಷ್ಣರ ಬಾಯಿಂದ ಕೇಳಿದಾಗ ಮಥುರನ ಮನೆಯವರು ಹಾಗೂ ಶ್ರೀರಾಮ ಕೃಷ್ಣರ ನಡುವೆ ಎಂಥ ನಿಕಟ ಸಂಬಂಧವಿತ್ತು ಎಂಬುದನ್ನು ಭಾವಿಸಿ ನಮಗೆ ಆಶ್ಚರ್ಯ ವಾಗುತ್ತಿತ್ತು. ಅವರಿಗೆಲ್ಲ ಶ್ರೀರಾಮಕೃಷ್ಣರ ದೇವತ್ವದಲ್ಲಿ ಎಂಥ ಒಂದು ದೃಢವಿಶ್ವಾಸ ವಿತ್ತು, ಎಷ್ಟರ ಮಟ್ಟಿಗೆ ಅವರೆಲ್ಲ ಶ್ರೀರಾಮಕೃಷ್ಣರ ಅಹೇತುಕ ಪ್ರೀತಿಗೆ ಪಾತ್ರರಾಗಿ ಅವರನ್ನು ತಮ್ಮವರಿಗಿಂತಲೂ ಹೆಚ್ಚು ಸಮೀಪವರ್ತಿಗಳೆಂದು ಭಾವಿಸುತ್ತಿದ್ದರು, ಎಷ್ಟು ನಿಃಸಂಕೋಚವಾಗಿ ಅವರೊಡನೆ ವ್ಯವಹರಿಸುತ್ತಿದ್ದರು – ಎಂಬುದು ನಮ್ಮ ಕಲ್ಪನೆಗೂ ಮೀರಿದುದಾಗಿದೆ !

21. ಒಂದುಕಡೆ ಮಥುರನ ಒಳಮನೆಯ ಸ್ತ್ರೀಯರೊಡನೆ ಅವರ ಗೆಳತಿಯಂತೆ ಯಾವ ಕಾಮಭಾವನೆಯೂ ಇಲ್ಲದೆ ಮುಕ್ತ ರೀತಿಯಲ್ಲಿ ಶ್ರೀರಾಮಕೃಷ್ಣರು ಬೆರೆಯು ತ್ತಿದ್ದರು. ಇನ್ನೊಂದು ಕಡೆ ಅದೇ ಶ್ರೀರಾಮಕೃಷ್ಣರು ದೊಡ್ಡ ದೊಡ್ಡ ಪಂಡಿತ ರೊಡನೆ ಮಾತನಾಡುತ್ತ ತಮ್ಮ ಬುದ್ಧಿಚಾತುರ್ಯವನ್ನೂ ದಿವ್ಯಜ್ಞಾನವನ್ನೂ ತೋರ್ಪಡಿಸುತ್ತಿದ್ದರು. ಇದನ್ನೆಲ್ಲ ನೋಡಿದಾಗ ಯಾರೀ ರಹಸ್ಯಮಯ ವ್ಯಕ್ತಿ ಎಂದು ಅಚ್ಚರಿಯಾಗುತ್ತದೆ ! ಅನೇಕ ವಿಪರೀತ ಭಾವಗಳು ಒಂದೇ ಕಡೆ ಸಮಾವೇಶ ಗೊಂಡಿರುವ ಈ ಬಹುರೂಪೀ ವ್ಯಕ್ತಿ ಯಾರು ?

22. ದಕ್ಷಿಣೇಶ್ವರದ ರಾಧಾಗೋವಿಂದನ ದೇವಸ್ಥಾನದಲ್ಲಿ ಮಧ್ಯಾಹ್ನ ಮತ್ತು ರಾತ್ರಿ ಪೂಜೆಯ ನಂತರ ಮೂರ್ತಿಯನ್ನು ವಿಶ್ರಾಂತಿಗಾಗಿ ಮಲಗುವ ಕೋಣೆಗೆ ಕರೆದುಕೊಂಡು ಹೋಗುತ್ತಿದ್ದರು. ಸಂಜೆ ನಾಲ್ಕು ಗಂಟೆಗೆ ಮತ್ತು ಬೆಳಿಗ್ಗೆ ವಿಶ್ರಾಂತಿಯ ನಂತರ ಮತ್ತೆ ಮೂರ್ತಿಯನ್ನು ತಂದು ಪೀಠದ ಮೇಲೆ ಇರಿಸುತ್ತಿದ್ದರು. ಒಂದು ದಿನ ಅಮೃತ ಶಿಲೆಯ ನೆಲ ಒದ್ದೆಯಾಗಿತ್ತು. ಅರ್ಚಕನು ವಿಗ್ರಹವನ್ನು ತೆಗೆದುಕೊಂಡು ಹೋಗುವಾಗ ಜಾರಿ ಬಿದ್ದನು. ಆಗ ಮೂರ್ತಿಯೂ ಕೆಳಗೆ ಬಿದ್ದು ಅದರ ಒಂದು ಕಾಲು ಮುರಿದು ಹೋಯಿತು. ಈಗ ದೊಡ್ಡ ಕೋಲಾಹಲವೇ ಎದ್ದಿತು. ಅರ್ಚಕನಿಗೂ ಘಾಯವಾಗಿತ್ತು. ಅವನು ಭಯದಿಂದ ನಡುಗುತ್ತಿದ್ದ, ಸುದ್ದಿ ದೇವಸ್ಥಾನದ ಮಾಲಿಕರಿಗೆ ತಲುಪಿತು. ಈಗ ಅವರಿಗೊಂದು ಬಗೆಹರಿಯದ ಸಮಸ್ಯೆಯಾಯಿತು. ಮುರಿದ ವಿಗ್ರಹಕ್ಕೆ ಪೂಜೆ ಮಾಡುವಂತಿರಲಿಲ್ಲ. ಈಗೇನು ಮಾಡುವುದು ? ರಾಣಿ ರಾಸಮಣಿ ಮತ್ತು ಮಥುರನಾಥನು ನಗರದ ಪಂಡಿತರನ್ನೆಲ್ಲ ಇದರ ಬಗ್ಗೆ ಚರ್ಚಿಸಲು ಆಹ್ವಾನಿಸಿದರು. ಬರಲಾಗದ ದೂರದ ಪಂಡಿತರುಗಳ ಅಭಿಪ್ರಾಯವನ್ನೂ ಸಂಗ್ರಹಿಸಲಾಯಿತು. ಇದಕ್ಕಾಗಿ ಬಹಳ ಹಣ ಖರ್ಚು ಮಾಡಬೇಕಾಯಿತು. ಬ್ರಾಹ್ಮಣರು ಸುಮ್ಮನೆ ಬರುತ್ತಾರೆಯೆ ? ಅವರವರ ಯೋಗ್ಯತೆಗೆ ತಕ್ಕಂತೆ ಕಾಣಿಕೆ ಕೊಡಬೇಕು; ಪಂಡಿತರುಗಳೆಲ್ಲ ಕಾಲ ಮೇಲೆ ಕಾಲು ಹಾಕಿಕೊಂಡು ಕುಳಿತರು ; ತಮ್ಮ ಶಾಸ್ತ್ರಗ್ರಂಥಗಳನ್ನು ತೆರೆದರು ; ಮೂಗಿಗೆ ನಶ್ಯ ಏರಿಸಿದರು – ತಮ್ಮ ಬುದ್ಧಿಯನ್ನು ಚುರುಕುಗೊಳಿಸಲು ! ಅನಂತರ ತಲೆ ಸವರಿಕೊಳ್ಳುತ್ತ ತಮ್ಮ ಅಂತಿಮ ಅಭಿಪ್ರಾಯವನ್ನು ಹೊರಗೆಳೆದರು : "ಮುರಿದ ವಿಗ್ರಹವನ್ನು ಗಂಗೆಯಲ್ಲಿ ವಿಸರ್ಜಿಸಬೇಕು ಮತ್ತು ಒಂದು ಹೊಸ ವಿಗ್ರಹವನ್ನು ಪ್ರತಿಷ್ಠಾಪಿಸಬೇಕು." ಅದರಂತೆಯೆ ಒಂದು ಹೊಸ ವಿಗ್ರಹವನ್ನು ಮಾಡಿಸಲು ಶಿಲ್ಪಿಯನ್ನು ಗೊತ್ತುಪಡಿಸಲಾಯಿತು.

23. ಪಂಡಿತರ ಸಭೆ ಮುಗಿದ ಮೇಲೆ ಮಥುರನು ರಾಣಿ ರಾಸಮಣಿಗೆ ಒಂದು ಸಲಹೆಯಿತ್ತನು : "ಈ ವಿಷಯದಲ್ಲಿ ತಂದೆಯನ್ನು ವಿಚಾರಿಸಲೇ ಇಲ್ಲ ? ಅವರು ಏನು ಹೇಳುತ್ತಾರೆ ನೋಡುವುದೊಳ್ಳೆಯದು." ಅನಂತರ ಶ್ರೀರಾಮಕೃಷ್ಣರನ್ನು ವಿಚಾರಿಸಿದಾಗ ಅವರು ಭಾವಮುಖದಲ್ಲಿ ಹೇಳಿದರು : "ರಾಣಿಯ ಅಳಿಯಂದಿರಲ್ಲಿ ಒಬ್ಬನು ಕಾಲುಮುರಿದುಕೊಂಡರೆ ಅವನನ್ನು ತ್ಯಜಿಸಿ ಅವನ ಜಾಗಕ್ಕೆ ಬೇರೊಬ್ಬನನ್ನು ಕರೆತರುವರೇನು ? ಅಥವಾ ಅವನಿಗೇ ಚಿಕಿತ್ಸೆ ಮಾಡುತ್ತಾರೊ ? ಇಲ್ಲಿಯೂ ಅದೇ ರೀತಿ ಮಾಡುವುದು ಒಳ್ಳೆಯದು. ಮೂರ್ತಿಯನ್ನು ಸರಿಪಡಿಸಿ ಮೊದಲಿನಂತೆಯೇ ಪೂಜೆಯನ್ನು ಮಾಡುತ್ತ ಹೋಗಬೇಕು. ಮೂರ್ತಿಯನ್ನು ಏಕೆ ಎಸೆಯಬೇಕು ?" ಎಲ್ಲರಿಗೂ ಈ ಸಲಹೆಯನ್ನು ಕೇಳಿ ಆಶ್ಚರ್ಯವಾಯಿತು. ಇಂತಹ ಸಹಜವಾದ ಉಪಾಯ ಯಾರ ತಲೆಗೂ ಹೊಳೆಯುವುದಿಲ್ಲ. ಆ ಮೂರ್ತಿಯಲ್ಲಿ ಭಗವಂತನು ನಿಜವಾಗಿಯೂ ನೆಲೆಸಿರುವುದಾದರೆ ಅವನ ಅಭಿವ್ಯಕ್ತಿಯು ಭಕ್ತರ ಭಕ್ತಿಯನ್ನೂ ಮತ್ತು ಅವನ ಅನುಗ್ರಹವನ್ನೂ ಅವಲಂಬಿಸಿರುತ್ತದೆ. ಆದ್ದರಿಂದ ಅದೇ ಭಕ್ತಿ ಶ್ರದ್ಧೆ

ಇದ್ದರೆ ಭಂಗವಾದ ಮೂರ್ತಿಯಲ್ಲಿಯೂ ಅವನು ಅಭಿವ್ಯಕ್ತನಾಗಲಾರನೆ ? ಮೂರ್ತಿಯಲ್ಲಿಯ ದೋಷ ಅಭಿವ್ಯಕ್ತಿಗೆ ಮಾರಕವಾಗುವುದಿಲ್ಲ. ಅಷ್ಟೇ ಅಲ್ಲದೆ, ಇಷ್ಟು ದಿನವೂ ಪ್ರೀತಿ ವಿಶ್ವಾಸದಿಂದ ಪೂಜಿಸಿಕೊಂಡು ಬಂದ ಮೂರ್ತಿಯ ಒಂದು ಅಂಗ ಭಂಗವಾಗಲು ಕೂಡಲೆ ಮೂರ್ತಿಯ ಮೇಲಿನ ಆ ಪ್ರೀತಿ ಹೊರಟುಹೋಗುವುದೆ ? ಭಕ್ತನು ಭಗವಂತನನ್ನು ತನ್ನಂತೆಯೇ ಎಂದು ಭಾವಿಸಿ ಪೂಜಿಸಬೇಕೆಂದು ವೈಷ್ಣವಾಚಾರ್ಯರು ಹೇಳುತ್ತಾರೆ. ನಾವು ಯಾವ ಸ್ಥಿತಿಯಲ್ಲಿ ಏನನ್ನು ಬಯಸುತ್ತೇವೆಯೊ ಭಗವಂತನೂ ಅದನ್ನೇ ಬಯಸುತ್ತಾನೆ. ನಾವೂ ಅದರಂತೆಯೇ ಅವನ ಸೇವೆ ಮಾಡಬೇಕು. ಆದ್ದರಿಂದ ಈ ದೃಷ್ಟಿಯಿಂದಲೂ ಮೂರ್ತಿಯನ್ನು ತ್ಯಜಿಸುವುದು ಉಚಿತವಾಗುವುದಿಲ್ಲ ಭಗ್ನವಾದ ಮೂರ್ತಿಯನ್ನು ಪೂಜಿಸಬಾರದು ಎಂದು ಸ್ಮೃತಿಯಲ್ಲಿ ಹೇಳಿರುವುದು ಆಗ ತಾನೆ ಭಕ್ತಿಪಥವನ್ನು ಹಿಡಿದಿರುವವರ, ಪ್ರೇಮಹೀನರಾದ ಭಕ್ತರ ಸಲುವಾಗಿ, ಎಂಬುದು ನಿಶ್ಚಯ. ಪಂಡಿತರಲ್ಲಿ ಕೆಲವರು ಈ ಸಲಹೆಯನ್ನು ಕೇಳಿ ಬೇಸರಗೊಂಡರು. ತಮಗೆ ಬರುವ ಸಂಭಾವನೆ ಎಲ್ಲಿ ತಪ್ಪುವುದೊ ಎಂದು ಹೆದರಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಲಿಲ್ಲ. ಭಕ್ತಿ ವಿಶ್ವಾಸವುಳ್ಳ ಕೆಲವರು ಪಂಡಿತರು ಈ ಸಲಹೆಯನ್ನು ಕೇಳಿ ಸಂತೋಷಗೊಂಡರು. ಅನಂತರ ಶ್ರೀರಾಮಕೃಷ್ಣರೇ ಮೂರ್ತಿಯನ್ನು ಸರಿಪಡಿಸಿದರು ; ಮತ್ತೆ ಮೊದಲಿನಂತೆ ಪೂಜೆ ಮುಂದುವರಿಯಿತು. ಹೊಸದಾಗಿ ಮಾಡಿಸಿದ ಮೂರ್ತಿಯನ್ನು ಮಂದಿರದ ಒಂದು ಮೂಲೆಯಲ್ಲಿ ಇರಿಸಿದರು. ರಾಸಮಣಿ ಮತ್ತು ಮಥುರನಾಥ ಇವರು ಕಾಲವಾದ ಮೇಲೆ ಅವರ ವಂಶಸ್ಥರು ಆ ಹೊಸ ಮೂರ್ತಿಯನ್ನು ಪ್ರತಿಷ್ಠಾಪಿಸಲು ಅನೇಕ ಬಾರಿ ಪ್ರಯತ್ನಿಸಿದರು. ಆದರೆ ಪ್ರತಿ ಬಾರಿಯೂ ಏನಾದರೂ ಒಂದು ವಿಘ್ನ ಬಂದು ಕಾರ್ಯ ನೆರವೇರಲಿಲ್ಲ. ಈಗಲೂ ರಾಧಾಗೋವಿಂದನ ಹೊಸ ಮೂರ್ತಿ ಹಾಗೆಯೇ ಉಳಿದಿದೆ.

ಏಳನೆಯ ಅಧ್ಯಾಯ

ಗುರುಭಾವದಲ್ಲಿ ಮಥುರನನ್ನು ಅನುಗ್ರಹಿಸಿದುದು

1. ಜಾನಬಜಾರ್ ದುರ್ಗಾಪೂಜೆಯಲ್ಲಿ ಶ್ರೀರಾಮಕೃಷ್ಣರು 2. ಅವರ ಭಾವ ಸಮಾಧಿ ಮತ್ತು ಸೌಂದರ್ಯ 3. ಅವರ ದೇಹ ಸೌಂದರ್ಯವನ್ನು ನೋಡಲು ಕಾಮಾರಪುಕುರದಲ್ಲಿ ಜನಸಂದಣಿ 4. ಅವರ ದೇಹ ಸೌಂದರ್ಯವನ್ನು ಕುರಿತ ಒಂದು ಘಟನೆ ಮತ್ತು ಅವರ ನಮ್ರತೆ 5. ಶ್ರೀರಾಮಕೃಷ್ಣರನ್ನು ಸಮಾಧಿಯಿಂದ ಇಳಿಸಲು ಜಗದಂಬಾ ದಾಸಿಯ ಉಪಾಯ 6. ಅವರು ಸಮಾಧಿಯಿಂದ ಇಳಿಯುವ ವಿಧಾನ ಶಸ್ತ್ರಸಮ್ಮತವಾಗಿದೆ 7. ಸಖೀ ಭಾವದಲ್ಲಿ ದುರ್ಗೆಗೆ ಚಾಮರ ಸೇವೆ, ಮಥುರನಿಗೆ ಸ್ತ್ರೀವೇಶದಲ್ಲಿದ್ದ ಶ್ರೀರಾಮಕೃಷ್ಣರನ್ನು ಗುರುತಿಸಲಾಗಲಿಲ್ಲ 8. ವಿಜಯದಶಮಿ 9. ಮಥುರನು ಆನಂದದಲ್ಲಿ ವಿಗ್ರಹವಿಸರ್ಜನೆಯನ್ನು ಮರೆತೇ ಬಿಟ್ಟಿದ್ದನು 10. ವಿಗ್ರವಿಸರ್ಜನೆಯ ವಿಚಾರ ಅವನಿಗೆ ಆಘಾತವನ್ನಿತ್ತಿತು 11. ದೇವೀಮೂರ್ತಿಯನ್ನು ವಿಸರ್ಜಿಸುವುದಿಲ್ಲವೆಂಬ ಅವನ ಸಂಕಲ್ಪ 12. ಯಾರಿಗೂ ಅವನನ್ನು ಸಮಾಧಾನಪಡಿಸಲಾಗಲಿಲ್ಲ 13. ಶ್ರೀರಾಮಕೃಷ್ಣರು ಅವನಿಗೆ ಬುದ್ಧಿ ಹೇಳಿದರು 14. ಅವರ ಮಾತಿನ ಮತ್ತು ಸ್ಪರ್ಶದ ಅದ್ಭುತ ಶಕ್ತಿ 15. ಮಥುರನು ಹೇಗೆ ಸಾಮಾನ್ಯ ಸ್ಥಿತಿಗೆ ಬಂದನು ? 16. ಮಥುರನ ದೃಢವಾದ ಭಕ್ತಿ ವಿಶ್ವಾಸ ಅವನು ಅವರನ್ನು ಪರೀಕ್ಷಿಸಿದುದರ ಫಲ 17. ಮಥುರನಲ್ಲಿ ಭಾವಸಮಾಧಿ ಯನ್ನು ಪಡೆಯುವ ಇಚ್ಛೆ 18. ಇದಕ್ಕಾಗಿ ಅವನು ಶ್ರೀರಾಮಕೃಷ್ಣರನ್ನು ಪ್ರಾರ್ಥಿಸಿ ದುದು 19. ಉದ್ಧವ ಮತ್ತು ಗೋಪಿಯರ ದೃಷ್ಟಾಂತದ ಮೂಲಕ ಅವನಿಗೆ ತಿಳಿವಳಿಕೆ 20. ಮಥುರನ ಭಾವಸಮಾಧಿ ಮತ್ತು ಪ್ರಾರ್ಥನೆ 21. ತ್ಯಾಗಿಯಾಗದೆ ಭಾವಸಮಾಧಿ ಸ್ಥಿರವಾಗುವುದಿಲ್ಲ 22. ಇದಕ್ಕೆ ದೃಷ್ಟಾಂತ—ಕಾಶೀಪುರದಲ್ಲಿ ಯುವಕ ಭಕ್ತನೊಬ್ಬನ ಕಥೆ 23. ಆಧ್ಯಾತ್ಮಿಕ ಭಾವವಿಕಾರಗಳನ್ನು ಗುರುತಿಸುವ ಶಕ್ತಿ, ಗುರು ನಿಜವಾಗಿಯೂ ಭವರೋಗ ವೈದ್ಯ 24. ಆ ಯುವಕನ ಸ್ಥಿತಿಯ ಬಗ್ಗೆ ಶ್ರೀರಾಮಕೃಷ್ಣರ ಅಭಿಮತ 25. ಅವರು ಬಾಲಕನಂತೆ ಮಥುರನಿಗೆ ಎಲ್ಲವನ್ನೂ ಹೇಳಿ ಅವನ ಅಭಿಪ್ರಾಯವನ್ನು ಕೇಳುತ್ತಿದ್ದರು 26. ಅವನ ಹಿತದ ಕಡೆಗೆ ಅವರ ದೃಷ್ಟಿ 27. ಶ್ರೀರಾಮಕೃಷ್ಣರ ಕೊಠಡಿಗೆ ಪ್ರಸಾದವನ್ನು ಕಳಿಸುವ ಪದ್ಧತಿ 28. ವಿಶೇಷ ದಿನಗಳಲ್ಲಿ ಶ್ರೀರಾಮಕೃಷ್ಣರ ವಿಭಿನ್ನ ಭಾವಗಳು 29. ಅವರು ಪ್ರಸಾದವನ್ನು ಕೇಳಿ ತೆಗೆದುಕೊಳ್ಳುವುದರ ಬಗ್ಗೆ ಯೋಗಾನಂದರ ಭಾವನೆ 30. ಇದಕ್ಕೆ ನಿಜವಾದ ಕಾರಣ 31. ಮಥುರನೊಡನೆ ಶ್ರೀರಾಮಕೃಷ್ಣರ ಅದ್ಭುತ

ಸಂಬಂಧ 32. ಅವರನ್ನು ಮಗುವಿನಂತೆ ಸಮಾಧಾನ ಪಡಿಸಿದುದು 33. ಭಕ್ತರ ಆಗಮನದ ವಿಷಯ 34. ಶ್ರೀರಾಮಕೃಷ್ಣರ ಬಾಲಕಭಾವದ ದೃಷ್ಟಾಂತ 35. ಮಥುರನು ಶ್ರೀರಾಮಕೃಷ್ಣರಲ್ಲಿ ಶರಣಾಗುವುದು 36. ಜಿಪುಣ ಮಥುರನು ಅವರಿಗಾಗಿ ನಿಃಸಂಕೋಚವಾಗಿ ಖರ್ಚುಮಾಡುತ್ತಾನೆ 37. ಇದಕ್ಕೆ ವಿವಿಧ ದೃಷ್ಟಾಂತಗಳು : ಜಾತ್ರೆಯ ಪಾತ್ರಧಾರಿಗಳಿಗೆ ದಾನ 38. ಕಾಶಿಯಲ್ಲಿ ಶ್ರೀರಾಮ ಕೃಷ್ಣರ ಇಚ್ಛೆಯಂತೆ ಅವನು ಕಲ್ಪತರುವಾದುದು 39. ವೈದ್ಯನಾಥದಲ್ಲಿ ಬಡವರ ಸೇವೆ 40. ಅವರಿಬ್ಬರ ಈ ಸಂಬಂಧ ದೈವೇಚ್ಛೆಯಿಂದ. ಅವನ ಪುನರ್ಜನ್ಮದ ಬಗ್ಗೆ ಶ್ರೀರಾಮಕೃಷ್ಣರು.

ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ ।
ಅಹಮಾದಿಶ್ಚ ಮಧ್ಯಂ ಚ ಭೂತಾನಾಮಂತ ಏವ ಚ॥ ಭಗವದ್ಗೀತೆ 10–20

"ನಾನೇ ಅಂತರಾತ್ಮನಾಗಿ ಎಲ್ಲ ಭೂತಗಳಲ್ಲಿಯೂ ನೆಲೆಸಿರುವೆನು-ನಾನು ಎಲ್ಲ ವಸ್ತುಗಳ ಆದಿ, ಮಧ್ಯ ಮತ್ತು ಅಂತವಾಗಿರುವೆನು."

1. ಆ ವರ್ಷ ಮಥುರನಾಥನ ಜಾನಬಜಾರಿನ ಮನೆಯಲ್ಲಿ ದುರ್ಗಾ ಪೂಜೆಯು ವಿಶೇಷ ಆನಂದದಿಂದ ನಡೆಯುತ್ತಿತ್ತು. ಏಕೆಂದರೆ ಆ ವರ್ಷದ ಉತ್ಸವ ಪ್ರತಿ ವರ್ಷದಂತಲ್ಲ. ಶ್ರೀರಾಮಕೃಷ್ಣರು ಕೆಲವು ದಿನಗಳ ಮಟ್ಟಿಗೆ ಮನೆಗೆ ಬಂದು ಉತ್ಸವಕ್ಕೆ ಹೆಚ್ಚಿನ ಮೆರುಗನ್ನು ಇತ್ತಿದ್ದರು. ಆದ್ದರಿಂದ ಎಲ್ಲರ ಆನಂದಕ್ಕೆ ಪಾರವೇ ಇರಲಿಲ್ಲ. ಚಿಕ್ಕ ಮಗುವು ತಾಯಿಯ ಮುಂದೆ ನಿರ್ಭಯದಿಂದ ನಲಿದಾಡುವಂತೆ, ತಾಯಿಯನ್ನು ಒಲವಂತ ಪಡಿಸುವಂತೆ, 'ತಂದೆ'ಯೂ ಪ್ರತಿಮೆಯಲ್ಲಿ ಸಾಕ್ಷಾತ್ ಜಗನ್ಮಾತೆಯನ್ನೇ ಕಾಣುತ್ತ ಭಾವಾವೇಶದಲ್ಲಿ ಬಾಲಕರಂತೆ ವರ್ತಿಸುತ್ತಿದ್ದರು– ಪ್ರತಿಮೆಯು ಜೀವಂತವಾಗಿ ನಗುತ್ತಿರುವಂತೆ ಅನಿಸುತ್ತಿತ್ತು. ಆ ಪ್ರತಿಮೆಯಲ್ಲಿಯೂ ತಾಯಿಯ ಆವೇಶ ಮತ್ತು ಶ್ರೀರಾಮಕೃಷ್ಣರ ದಿವ್ಯ ಶರೀರ ಮನಸ್ಸಿನಲ್ಲಿಯೂ ತಾಯಿಯ ಆವೇಶ–ಇದರಿಂದ ಪೂಜಾಗೃಹವು ಒಂದು ಅಲೌಕಿಕ ಆಧ್ಯಾತ್ಮಿಕ ವಾತಾ ವರಣದಿಂದ ತುಂಬಿ ತುಳುಕುತ್ತಿತ್ತು. ಅತ್ಯಂತ ಜಡಮನಸ್ಸಿನವರಿಗೂ ಆ ವಾತಾ ವರಣದ ಬಿಸಿ ತಾಕುವಂತಿತ್ತು, ಈ ದಿವ್ಯ ಶೋಭೆ ಪೂಜಾಗೃಹವನ್ನು ಮಾತ್ರವಲ್ಲದೆ ಮನೆಯಲ್ಲಿದ್ದ ಎಲ್ಲರ ಹೃದಯವನ್ನೂ ಮತ್ತು ಮನೆಯ ಪ್ರತಿಯೊಂದು ಭಾಗವನ್ನೂ ಬೆಳಗುತ್ತಿತ್ತು.

ಹಾಗಾಗಲೇ ಬೇಕು, ಮಥುರನು ವಿಶೇಷ ಸಂಭ್ರಮದಿಂದ ಪೂಜೆಯ ವ್ಯವಸ್ಥೆ ಮಾಡಿದ್ದ. ಪೂಜೆಗೆ ಬೇಕಾಗುವ ಹೂವು, ಹಣ್ಣು, ಸಿಹಿತಿಂಡಿ ಇತ್ಯಾದಿಗಳು ; ಪ್ರತಿಮೆಯ ಅಲಂಕಾರಕ್ಕೆ ಬೇಕಾದ ವಸ್ತುಗಳು, ಒಡವೆಗಳು ; ಪೂಜಾಗೃಹದ ಅಲಂಕಾರಕ್ಕೆ ಬೇಕಾಗುವ ಹೂವು, ತಳಿರು, ತೋರಣಗಳು ; ಸಂಗೀತಕ್ಕಾಗಿ ವಿವಿಧ

ವಾದ್ಯಗಳು—ಹೀಗೆ ಎಲ್ಲದರ ವ್ಯವಸ್ಥೆ ಮಾಡಿದ್ದನು. ಪ್ರತಿಯೊಂದಕ್ಕೂ ಮನಸ್ಸನ್ನಿತ್ತು ಉದಾರಬುದ್ಧಿಯಿಂದ ಹಣವನ್ನು ವ್ಯಯಿಸಿ ಎಲ್ಲರಿಗೂ ತೃಪ್ತಿಯಾಗುವ ರೀತಿಯಲ್ಲಿ ಅಣಿಗೊಳಿಸಿದ್ದನು. ಇವುಗಳ ಜತೆಗೆ ಶ್ರೀರಾಮಕೃಷ್ಣರ ದಿವ್ಯ ಸಂನಿಧಿಯು ಈ ಎಲ್ಲ ಜಡವಸ್ತುಗಳೂ ಒಂದು ದಿವ್ಯ ಶೋಭೆಯಿಂದ ಬೆಳಗುವಂತೆ ಮಾಡಿತ್ತು. ಭವ್ಯ ಹಿಮಾಲಯ ಪರ್ವತದಲ್ಲಿ ಹಚ್ಚ ಹಸಿರು ದೇವದಾರು ಮರಗಳ ಕೆಳಗೆ ಕಾವಿ ಬಟ್ಟೆಯನ್ನುಟ್ಟು ತಪಸ್ಸು ಮಾಡುತ್ತಿರುವ ಸಾಧುಗಳು ಯಾವ ಶಾಂತಿಮಯ ಶೋಭೆಯನ್ನು ಸೃಷ್ಟಿಸುವರೋ, ಸುಂದರ ತಾಯಿಯ ಮಡಿಲಿನಲ್ಲಿ ಮಲಗಿ ತಾಯಿಯ ಎದೆಹಾಲನ್ನು ಕುಡಿಯುತ್ತಿರುವ ಸುಂದರ ಶಿಶು ಯಾವ ಒಂದು ಕರುಣಾಮಯ ವಾತಾವರಣವನ್ನು ಸೃಷ್ಟಿಸುವುದೊ, ಸುಂದರ ಮುಖದಲ್ಲಿ ವ್ಯಕ್ತವಾಗುವ ಪವಿತ್ರ ಭಾವನೆಯು ಯಾವ ಶೋಭೆಯನ್ನು ನೀಡುವುದೊ—ಇವೆಲ್ಲವೂ ಮಥುರನ ಭಾಗ್ಯದಿಂದ ಅವನ ಮನೆಯಲ್ಲಿ ಈಗ ಕಲೆತಿರುವುವು. ಮಥುರ ಮತ್ತು ಇತರರು ಪೂಜೆಗೆ ಅಣಿಗೊಳಿಸುವುದರಲ್ಲಿ ಸಂಪೂರ್ಣ ಮಗ್ನರಾಗಿದ್ದರೂ ಆ ದಿವ್ಯ ವಾತಾವರಣದ ಆನಂದವನ್ನು ಮನದಾಳದಲ್ಲಿ ನಿರಂತರವಾಗಿ ಸವಿಯುತ್ತಿದ್ದರೆಂಬುದನ್ನು ಪ್ರತ್ಯೇಕ ವಾಗಿ ಹೇಳಬೇಕಾಗಿಲ್ಲ.

ಹಗಲಿನ ಪೂಜೆ ಸಮಾಪ್ತಿಗೊಂಡಿತು. ಮಥುರ ಮತ್ತಿತರರು ಹೇಗೊ ಸಮಯ ಮಾಡಿಕೊಂಡು ಬಂದು ತಂದೆಯ ಮತ್ತು ದೇವಿಯ ಶ್ರೀಪಾದಗಳಿಗೆ ಪುಷ್ಪಾಂಜಲಿ ಯನ್ನು ಅರ್ಪಿಸಿದರು.

2. ಈಗ ಸಂಜೆಯಾಯಿತು. ದೇವಿಯ ಆರತಿ ಆಗಬೇಕು. ಶ್ರೀರಾಮಕೃಷ್ಣರು ದಿವ್ಯ ಭಾವದಲ್ಲಿ ತಮ್ಮ ಪುರುಷ ಶರೀರವನ್ನು ಮರತು ಒಳಗಡೆ ಹೋದರು. ಅವರ ಮಾತಿನಿಂದ, ವರ್ತನೆಯಿಂದ ತಿಳಿಯುತ್ತಿತ್ತು—ಅವರು ಚಿರಕಾಲವೂ ಜಗನ್ಮಾತೆಯ ಸಖಿ ಎಂದು. ಜಗನ್ಮಾತೆಯೇ ಅವರ ಪ್ರಾಣ, ಮನಸ್ಸು, ಸರ್ವಸ್ವವೂ ಕೂಡ. ಅವಳ ಸೇವೆ ಮಾಡುವುದಕ್ಕಾಗಿಯೇ ಅವರು ದೇಹ ಧರಿಸಿರುವುದು. ಅವರ ಮುಖಮಂಡಲ ಪ್ರೇಮದಿಂದ ಬೆಳಗುತ್ತಿತ್ತು. ತುಟಿಯಲ್ಲಿ ಮೃದು ನಗೆ ತಾಂಡವಾಡುತ್ತಿತ್ತು. ಅವರ ಕಣ್ಣುಗಳು, ಕೈಕಾಲುಗಳ ಚಲನೆ ಎಲ್ಲ ಸ್ತ್ರೀಯರದಂತೆಯೇ ಇತ್ತು. ಮಥುರನು ಕೊಟ್ಟಿದ್ದ ಸುಂದರ ರೇಷ್ಮೆ ಬಟ್ಟೆಯನ್ನು ಸೀರೆಯಂತೆ ಉಟ್ಟಿದ್ದರು. ಆಗ ಅವರು ಪುರುಷ ಎಂದು ಯಾರು ಹೇಳಬಲ್ಲರು ? ಆಗ ಶ್ರೀರಾಮಕೃಷ್ಣರ ಸೌಂದರ್ಯ ಮತ್ತು ಮೈ ಬಣ್ಣ ಎಷ್ಟು ಮೋಹಕವಾಗಿತ್ತೆಂದರೆ ಅದು ಹೊರಸೂಸಿ ಸುತ್ತಲೂ ಹರಡಿರುವಂತೆ ಇತ್ತು. ಅವರಲ್ಲಿ ದಿವ್ಯ ಭಾವ ಜಾಗೃತವಾದಾಗ ಅವರ ಮೈಬಣ್ಣವು ವಿಶೇಷ ಶೋಭೆಯಿಂದ ಬೆಳಗುತ್ತಿತ್ತು—ಅವರ ದೇಹದಿಂದ ಬೆಳಕು ಹೊರಬರುತ್ತಿರುವಂತೆ. ಅಂಥ ಸಂದರ್ಭದಲ್ಲಿ ಜನರು ಕಣ್ಣರಳಿಸಿ ಅವರನ್ನು ನೋಡುತ್ತಿದ್ದರು, ತಮ್ಮ ದೃಷ್ಟಿಯನ್ನು ಬೇರೆ ಕಡೆ ಹರಿಸಲೇ ಆಗುತ್ತಿರಲಿಲ್ಲ. ಅವರ ದೇಹದ ಬಣ್ಣ ಮತ್ತು ಅವರ ತೋಳಿನಲ್ಲಿದ್ದ ಒಂದು ಚಿನ್ನದ ತಾಯಿತದ (ಇಷ್ಟ

ದೇವತೆಯ ಪ್ರತೀಕ) ಬಣ್ಣ–ಇವೆರಡೂ ಒಂದಾಗಿದ್ದಂತೆ ಕಾಣುತ್ತಿತ್ತು ಎಂದು ಶ್ರೀಮಾತೆಯವರು ಹೇಳುತ್ತಾರೆ. ಶ್ರೀರಾಮಕೃಷ್ಣರೇ ನಮಗೆ ಹೇಳುತ್ತಿದ್ದರು : "ಆಗ ನನ್ನ ರೂಪ ಎಷ್ಟು ಸುಂದರವಾಗಿತ್ತೆಂದರೆ ಜನರು ಎವೆಯಿಕ್ಕದೆ ನನ್ನನ್ನು ನೋಡುತ್ತಿದ್ದರು. ಎದೆ, ಮುಖ ಎಲ್ಲ ಕೆಂಪಾಗಿರುತ್ತಿತ್ತು. ದೇಹದಿಂದ ಬೆಳಕು ಹೊರಬರುವಂತೆ ಕಾಣುತ್ತಿತ್ತು. ಜನರೆಲ್ಲ ನೋಡುತ್ತಿರುತ್ತಾರೆಂದು ಒಂದು ಮೇಲ್ವಸ್ತ್ರದಿಂದ ದೇಹವನ್ನು ಮುಚ್ಚಿಕೊಂಡಿರುತ್ತಿದ್ದೆ. ತಾಯಿಗೆ ಹೇಳುತ್ತಿದ್ದೆ : "ತಾಯಿ, ನಿನ್ನ ಈ ಬಾಹ್ಯರೂಪವನ್ನು ನೀನೇ ತೆಗೆದುಕೊ, ನನಗೆ ಆಂತರಿಕ ಸೌಂದರ್ಯವನ್ನು ಕೊಡು." ನನ್ನ ದೇಹದ ಮೇಲೆ ಕೈ ಆಡಿಸುತ್ತ ಮತ್ತೆ ಮತ್ತೆ ಹೊಡೆಯುತ್ತ 'ಒಳಗೆ ಹೋಗು' ಎಂದು ಹೇಳುತ್ತಿದ್ದೆ. ಬಹಳ ದಿನದ ನಂತರ ಮೈಕಾಂತಿಯು ಅಡಗಿ ಬಾಹ್ಯರೂಪವು ಈಗಿನಂತೆ ಸಾಮಾನ್ಯ ಸ್ಥಿತಿಗೆ ಬಂತು."

3. ರೂಪದ ವಿಷಯ ಹೇಳುವಾಗ ಶ್ರೀರಾಮಕೃಷ್ಣರ ಜೀವನದ ಇನ್ನೊಂದು ಘಟನೆ ನೆನಪಿಗೆ ಬರುತ್ತಿದೆ. ಆ ಸಮಯದಲ್ಲಿ ಶ್ರೀರಾಮಕೃಷ್ಣರು ಪ್ರತಿ ವರ್ಷ ಮೂರು ನಾಲ್ಕು ತಿಂಗಳು ಕಾಮಾರಪುಕುರದಲ್ಲಿ ಕಳೆಯುತ್ತಿದ್ದರು. ಅಲ್ಲಿರುವಾಗ ಹೃದಯನ ಊರಾದ ಶಿಹೋರಿಗೂ ಹೋಗುತ್ತಿದ್ದರು. ಶಿಹೋರಿಗೆ ಜಯರಾಂಬಾಟಿಯ ಮೂಲಕ ಹೋಗಬೇಕು. ಜನರ ಒತ್ತಾಯಕ್ಕೆ ಅಲ್ಲಿಯೂ ಕೆಲವು ದಿನ ಅವರು ಇರುತ್ತಿದ್ದರು. ಆಗ ಹೃದಯನು ಯಾವಾಗಲೂ ಅವರೊಡನಿದ್ದು ಎಲ್ಲ ಪ್ರಕಾರದ ಅವರ ಸೇವೆ ಮಾಡುತ್ತಿದ್ದ.

ಅವರು ಕಾಮಾರಪುಕುರದಲ್ಲಿರುವಾಗ ಅವರನ್ನು ನೋಡಲು ಮತ್ತು ಅವರ ಬಾಯಿಂದ ಕೆಲವು ಮಾತನ್ನು ಕೇಳಲು ಬೆಳಗಿನಿಂದ ಸಂಜೆಯವರೆಗೂ ಗ್ರಾಮಸ್ಥರು ಬಂದು ನೆರೆಯುತ್ತಿದ್ದರು. ಬೆಳಗಾಗುತ್ತಿದ್ದಂತೆಯೆ ನೆರೆಹೊರೆಯ ಸ್ತ್ರೀಯರು ಮನೆಗೆಲಸವನ್ನೆಲ್ಲ ಮುಗಿಸಿ ಸ್ನಾನ ಮಾಡಿ ನೀರು ತರಲು ಬಿಂದಿಗೆಯನ್ನು ಇಟ್ಟುಕೊಂಡು ಹೊರಡುತ್ತಿದ್ದರು. ಹಲದಾರಪುಕುರದ (ಕೊಳ) ಹತ್ತಿರ ಬಿಂದಿಗೆಯನ್ನಿರಿಸಿ ಚಟರ್ಜಿಯವರ ಮನೆಗೆ ಬಂದು ಕುಳಿತುಬಿಡುತ್ತಿದ್ದರು. ಒಂದು ಒಂದುವರೆ ಘಂಟೆ ಶ್ರೀರಾಮಕೃಷ್ಣರೊಡನೆ ಮತ್ತು ಇತರರೊಡನೆ ಮಾತನಾಡಿ ಅನಂತರ ಸ್ನಾನಕ್ಕೆ ಹೋಗುತ್ತಿದ್ದರು. ಪ್ರತಿನಿತ್ಯ ಹೀಗೆಯೇ ನಡೆಯುತ್ತಿತ್ತು. ಈ ಸಂದರ್ಭದಲ್ಲಿ ರಾತ್ರಿ ಮನೆಯಲ್ಲಿ ಏನಾದರೂ ತಿಂಡಿ ಮಾಡಿದರೆ ಅದರ ಅಗ್ರಭಾಗವನ್ನು ಶ್ರೀರಾಮಕೃಷ್ಣರಿಗಾಗಿ ತೆಗೆದಿರಿಸಿ ಮರುದಿನ ಅವರಿಗೆ ತಂದು ಕೊಡುತ್ತಿದ್ದರು. ಶ್ರೀರಾಮಕೃಷ್ಣರು ಹಾಸ್ಯಪ್ರಿಯರು. ಆ ಸ್ತ್ರೀಯರು ರಾತ್ರಿ ಕಳೆದು ಬೆಳಗಾಗುವುದರೊಳಗೆ ಬಂದುಬಿಡುತ್ತಿದ್ದುದನ್ನು ನೋಡಿ ಅವರು ನಗುತ್ತ ಹೇಳುತ್ತಿದ್ದರು : "ಶ್ರೀಬೃಂದಾವನದಲ್ಲಿ ಗೋಪಿಯರು ಶ್ರೀಕೃಷ್ಣನೆಂದರೆ ನಾನಾ ಭಾವದಲ್ಲಿ ನಾನಾ ಸಮಯದಲ್ಲಿ ಬರುತ್ತಿದ್ದರು. ನೀರು ತರಲು ಹೋದಾಗ ಮರಳಿನ ಮೇಲೆ ಗೋಷ್ಠ–ಮಿಲನವಾಗುತ್ತಿತ್ತು ; ಸಂಧ್ಯಾಕಾಲದಲ್ಲಿ ಅವನು ಹಸುಗಳನ್ನು ಹೊಡೆದುಕೊಂಡು ಬರುವಾಗ ಗೋಧೂಳೀ–ಮಿಲನ ;

ಅನಂತರ ರಾತ್ರಿಯಲ್ಲಿ ರಾಸ–ಮಿಲನ–ಹೀಗೆಲ್ಲ ಇವೆ. ನೋಡಿ, ಇದೇನು ಸ್ನಾನದ ಸಮಯದ ಮಿಲನವೆ ?'' ಅವರ ಮಾತನ್ನು ಕೇಳಿ ಸ್ತ್ರೀಯರೆಲ್ಲ ಬಿದ್ದು ಬಿದ್ದು ನಗುತ್ತಿದ್ದರು. ಸ್ತ್ರೀಯರೆಲ್ಲ ಅಡಿಗೆ ಮಾಡಲು ಮನೆಗೆ ಹೋದ ಮೇಲೆ ಗಂಡಸರು ಬಂದು ಎಷ್ಟು ಸಾಧ್ಯವೊ ಅಷ್ಟು ಹೊತ್ತು ಕುಳಿತು ಮಾತನಾಡುತ್ತಿದ್ದರು. ಮಧ್ಯಾಹ್ನ ಊಟದ ನಂತರ ಮತ್ತೆ ಸ್ತ್ರೀಯರು ಬರುತ್ತಿದ್ದರು. ಸಂಧ್ಯೆಯ ನಂತರ ರಾತ್ರಿ ಮತ್ತೆ ಗಂಡಸರು ಕೆಲವರು ಬಂದು ಸೇರುತ್ತಿದ್ದರು. ದೂರದಿಂದ ಬರುತ್ತಿದ್ದ ಸ್ತ್ರೀ–ಪುರುಷರು ಮಧ್ಯಾಹ್ನ ಬಂದು ಸಂಜೆಗೆ ಮುಂಚೆಯೇ ಹೊರಟುಹೋಗುತ್ತಿದ್ದರು. ಹೀಗೆ ಇಡೀ ದಿನ ದೋಲ–ಪೂರ್ಣಿಮೆ ಮತ್ತು ರಥಯಾತ್ರೆಯ ದಿನದಂತೆ ಜನಜಂಗುಳಿ ಇರುತ್ತಿತ್ತು.

4. ಒಮ್ಮೆ ಕಾಮಾರಪುಕುರದಿಂದ ಜಯರಾಂಬಾಟಿ ಮತ್ತು ಶಿಹೋರಿಗೆ ಹೋಗುವ ವ್ಯವಸ್ಥೆಯಾಗಿತ್ತು. ಶ್ರೀರಾಮಕೃಷ್ಣರು ಯಾವಾಗಲೂ ದಿವ್ಯ ಭಾವದಲ್ಲಿಯೇ ಇರುತ್ತಿದ್ದುದರಿಂದ ಅವರ ಶರೀರವು ಬಾಲಕನ ಅಥವಾ ಸ್ತ್ರೀಯಳ ಶರೀರದಂತೆ ತುಂಬ ಕೋಮಲವಾಗಿತ್ತು. ಸ್ವಲ್ಪ ದೂರ ಹೋಗಬೇಕಾದರೂ ಪಲ್ಲಕ್ಕಿ ಅಥವಾ ಗಾಡಿ ಬೇಕಾಗುತ್ತಿತ್ತು. ಆದ್ದರಿಂದ ಜಯರಾಂಬಾಟಿ ಮತ್ತು ಶಿಹೋರಿಗೆ ಹೋಗಲು ಪಲ್ಲಕ್ಕಿಯನ್ನು ತರಿಸಲಾಯಿತು. ಹೃದಯನು ಅವರ ಜೊತೆ ಹೋಗಲು ಸಿದ್ಧನಾಗಿದ್ದ. ಶ್ರೀರಾಮಕೃಷ್ಣರು ಊಟ ಮುಗಿಸಿ, ತಾಂಬೂಲ ಸೇವಿಸಿ, ಕೆಂಪು ರೇಶ್ಮೆಯ ಬಟ್ಟೆಯುಟ್ಟು, ತೋಳಿನಲ್ಲಿ ಚಿನ್ನದ ಇಷ್ಟ ಕವಚವನ್ನು ಧರಿಸಿ ಪಲ್ಲಕ್ಕಿ ಯನ್ನು ಹತ್ತಲು ಬಂದರು. ಸುತ್ತಲೂ ಸ್ತ್ರೀ-ಪುರುಷರನೇಕರು ನೆರೆದಿದ್ದಾರೆ. ಶ್ರೀರಾಮ ಕೃಷ್ಣರು ಆಶ್ಚರ್ಯದಿಂದ, 'ಇಷ್ಟೊಂದು ಜನರು ನೆರೆದಿದ್ದಾರಲ್ಲ, ಏಕೆ ?' ಎಂದು ಹೃದಯನನ್ನು ಕೇಳಿದರು.

ಹೃದಯ : ಮತ್ತೆ ಏಕೆ ? ಇಂದು ನೀವು ಅಲ್ಲಿಗೆ ಹೋಗುತ್ತಿದ್ದೀರಲ್ಲ, ಇನ್ನು ಕೆಲವು ದಿನ ನೀವು ನೋಡುವುದಕ್ಕೆ ಸಿಕ್ಕುವುದಿಲ್ಲ. ಅದಕ್ಕಾಗಿಯೇ ಈಗ ನಿಮ್ಮನ್ನು ನೋಡಲು ಇವರೆಲ್ಲ ನೆರೆದಿದ್ದಾರೆ.

ಶ್ರೀರಾಮಕೃಷ್ಣರು : ನನ್ನನ್ನು ಪ್ರತಿನಿತ್ಯ ನೋಡುತ್ತಾರೆ. ಇನ್ನೇನು ಹೊಸದಾಗಿ ನೋಡುವುದಿದೆ ?

ಹೃದಯ : ನೀವು ರೇಶ್ಮೆ ಬಟ್ಟೆಯುಟ್ಟು ತಂಬಾಕು ಸೇವಿಸುತ್ತ ನಿಮ್ಮ ತುಟಿಗಳು ರಕ್ತವರ್ಣದಿಂದ ಶೋಭಿಸುತ್ತಿರುವಾಗ ನೀವು ತುಂಬ ಸುಂದರವಾಗಿ ಕಾಣುತ್ತೀರಿ. ಅದಕ್ಕಾಗಿಯೇ ಅವರು ನಿಮ್ಮನ್ನು ನೋಡಬೇಕೆಂದು ಬಯಸುತ್ತಾರೆ, ಮತ್ತಿನ್ನೇನು?

ತಮ್ಮ ಸುಂದರ ರೂಪವನ್ನು ನೋಡಿಯೇ ಇವರೆಲ್ಲ ಆಕರ್ಷಿತರಾಗಿರುವರೆಂದು ಕೇಳಿ ಶ್ರೀರಾಮಕೃಷ್ಣರು ಅಪೂರ್ವ ಭಾವದಿಂದ ತುಂಬಿಹೋದರು, ಅವರಿಗನಿಸಿತು : ಇವರು ಈ ಹೊರ ರೂಪವನ್ನೇ ನೋಡಿ ಮುಗ್ಧರಾಗಿರುವರು. ಒಳಗಡೆ ಯಾರಿರು ವನೊ ಅವನನ್ನು ನೋಡಬಯಸುವುದಿಲ್ಲ. ಮೊದಲಿನಿಂದಲೂ ಅವರು ಬಾಹ್ಯ ಸೌಂದರ್ಯವನ್ನು ತುಚ್ಛೀಕರಿಸುತ್ತಿದ್ದರು, ಈ ಘಟನೆಯಿಂದ ಅದರ ಬಗ್ಗೆ ಅಸಹ್ಯ

ಭಾವನೆ ಇನ್ನೂ ಅಧಿಕವಾಯಿತು. ಅವರು ಹೇಳಿದರು : "ಏನು ? ಒಬ್ಬ ಮನುಷ್ಯನನ್ನು ನೋಡಲು ಇಷ್ಟೊಂದು ಜನ ಸೇರುವುದೇ ? ನಾನು ಎಲ್ಲಿಗೂ ಹೋಗುವುದಿಲ್ಲ. ನಾನು ಎಲ್ಲಿಗೆ ಹೋದರೂ ಅಲ್ಲೂ ಇದೇ ರೀತಿ ಜನ ಸೇರುತ್ತಾರೆ." ಹೀಗೆ ಹೇಳಿ ಶ್ರೀರಾಮಕೃಷ್ಣರು ಮನೆಯ ಒಳಗೆ ಹೋಗಿ ಬಟ್ಟೆಯನ್ನೆಲ್ಲ ತೆಗೆದು ದುಃಖದಿಂದ ಸುಮ್ಮನೆ ಕುಳಿತುಬಿಟ್ಟರು. ಅಂದು ಅವರು ಎಲ್ಲಿಗೂ ಹೋಗಲಿಲ್ಲ. ಮನೆಯವರೆಲ್ಲ ಎಷ್ಟು ಹೇಳಿದರೂ ಪ್ರಯೋಜನವಾಗಲಿಲ್ಲ. ತಮ್ಮ ಶರೀರದ ಬಗ್ಗೆ ಈ ಅಲೌಕಿಕ ಪುರುಷರಿಗೆ ಎಷ್ಟೊಂದು ತುಚ್ಛ ಭಾವವಿತ್ತು ಎಂಬುದನ್ನು ಇದರಿಂದ ತಿಳಿಯಬಹುದು. ನಾವು ಬಾಹ್ಯರೂಪಕ್ಕೆ ಎಷ್ಟೊಂದು ಪ್ರಾಮುಖ್ಯತೆ ನೀಡುತ್ತೇವೆ! ಎಷ್ಟೊಂದು ಉಜ್ಜುವುದೇನು, ತಿಕ್ಕುವುದೇನು! ಎಷ್ಟೊಂದು ಬಗೆಯ ಸೌಂದರ್ಯ ವರ್ಧಕಗಳು! ಕನ್ನಡಿ, ಬಾಚಣಿಗೆ, ಪೌಡರು, ಒಡವೆ–ಇಂಥ ಆಡಂಬರಗಳಿಗೆ ಕೊನೆಯೇ ಇಲ್ಲ. ಪಾಶ್ಚಾತ್ಯ ಅನುಕರಣೆಯ ಫಲವಾಗಿ ಈ ಎಲುಬು ಮಾಂಸದ ಹಂದರವನ್ನು ಅಲಂಕರಿಸಿ ಪೂಜಿಸುತ್ತ ಎಂಥ ಹೀನ ಮಟ್ಟಕ್ಕೆ ನಾವು ಇಳಿಯುತ್ತಿದ್ದೇವೆ! ಪವಿತ್ರ ಮನಸ್ಸನ್ನು ಪಡೆಯಲು ಶುದ್ಧವಾಗಿ ಸ್ವಚ್ಛವಾಗಿ ಇರುವುದೇ ಬೇರೆ, ಮತ್ತೆ ಅತಿಯಾಗಿ ಬಾಹ್ಯ ರೂಪಕ್ಕೆ ಪ್ರಾಧಾನ್ಯ ನೀಡುವುದೇ ಬೇರೆ. ಆಗಲಿ, ನಮ್ಮ ಮುಖ್ಯ ವಿಷಯಕ್ಕೆ ಬರೋಣ.

5. ಶ್ರೀಜಗನ್ಮಾತೆಯ ಆರತಿ ಆಗುವುದರಲ್ಲಿದೆ. ಆದರೆ ಶ್ರೀರಾಮಕೃಷ್ಣರು ಅದೇ ಭಾವದಲ್ಲಿದ್ದಾರೆ. ಅವರನ್ನು ಆರತಿಗೆ ಕರೆದುಕೊಂಡು ಬರಬೇಕಿತ್ತು. ಮಥುರನ ಪತ್ನಿ ಜಗದಂಬಾ ದಾಸಿಯು ಅವರನ್ನು ಭಾವಸಮಾಧಿಯಿಂದ ಎಚ್ಚರಿಸಲು ಪ್ರಯತ್ನಿಸಿದಳು. ಆದರೆ ಅವರ ಭಾವಕ್ಕೆ ಅಂತ್ಯವೇ ಇರಲಿಲ್ಲ. ಅವರನ್ನು ಒಬ್ಬರೇ ಬಿಟ್ಟು ಉಳಿದವರೆಲ್ಲ ಆರತಿಗೆ ಹೋಗುವುದೂ ಸರಿಯಾಗುವುದಿಲ್ಲ. ಅವಳು ಚಿಂತೆಗೀಡಾದಳು : 'ಏನು ಮಾಡುವುದು ? ನಾನು ಅವರನ್ನು ಬಿಟ್ಟು ಹೋದರೂ ಆರತಿ ಘಂಟೆ ಕೇಳಿದಾಕ್ಷಣ ಅವರು ಓಡಿಬರುವುದು ಖಂಡಿತ. ಅವರು ಭಾವವಿಹ್ವಲರಾದರೆ ಅವರು ತಮ್ಮ ಹಿಡಿತದಲ್ಲಿರುವುದಿಲ್ಲ. ಅವರು ಒಮ್ಮೆ ಭಾವಾವಸ್ಥೆಯಲ್ಲಿರುವಾಗ ಉರಿಯುವ ಕೆಂಡದ ಮೇಲೆ ಬಿದ್ದಿದ್ದರು. ಆಗಲೂ ಅವರಿಗೆ ಬಾಹ್ಯಜ್ಞಾನ ಬಂದಿರಲಿಲ್ಲ. ಆ ಗಾಯವನ್ನು ಗುಣಪಡಿಸಲು ಎಷ್ಟೊಂದು ಚಿಕಿತ್ಸೆ ಮಾಡಬೇಕಾಯಿತು! ಅವರು ಒಬ್ಬರನ್ನೇ ಬಿಟ್ಟು ಹೋದರೆ ಈ ರೀತಿ ಏನಾದರೂ ಅಪಾಯಕ್ಕೀಡಾದರೆ ಏನು ಗತಿ ?' ಹೀಗೆ ನಾನಾ ರೀತಿಯಲ್ಲಿ ಚಿಂತಿಸುತ್ತಿರುವಾಗ ಅವಳಿಗೆ ಒಂದು ಉಪಾಯ ಹೊಳೆಯಿತು. ಅವಳು ಕೂಡಲೇ ಹೋಗಿ ತನ್ನ ಒಡವೆಗಳನ್ನೆಲ್ಲ ತಂದು ಅವನ್ನೆಲ್ಲ ಶ್ರೀರಾಮಕೃಷ್ಣರಿಗೆ ತೊಡಿಸುತ್ತ ಅವರ ಕಿವಿಯಲ್ಲಿ ಹೇಳಿದಳು : "ತಂದೆ, ನಡೆಯಿರಿ, ತಾಯಿಗೆ ಆರತಿ ನಡೆಯುವುದು, ನೀವು ಚಾಮರ ಹಾಕುವುದಿಲ್ಲವೆ ?"

6. ಶ್ರೀರಾಮಕೃಷ್ಣರ ಭಾವಸಮಾಧಿಯಲ್ಲಿ ಒಂದು ವೈಶಿಷ್ಟ್ಯವಿತ್ತು. ಅವರ ಭಾವಸಮಾಧಿ ಎಷ್ಟೇ ಆಳವಾಗಿದ್ದರೂ, ಬಾಹ್ಯಜ್ಞಾನವನ್ನು ಅವರು ಎಷ್ಟೇ ಕಳೆದುಕೊಂಡಿದ್ದರೂ, ಯಾವ ಮೂರ್ತಿಯ ಸಂಬಂಧವಾಗಿ ಅವರು ಭಾವಸಮಾಧಿಯನ್ನು

ಹೊಂದಿದ್ದರೋ ಆ ಮೂರ್ತಿಯ ನಾಮವನ್ನು ಉಚ್ಚರಿಸಿದಾಗ ಅಥವಾ ಆ ಭಾವಕ್ಕೆ ಅನುಕೂಲವಾದ ವಿಷಯವನ್ನು ಹೇಳಿದಾಗ ಅವರ ಮನಸ್ಸು ಕೂಡಲೆ ಆಕರ್ಷಿತ ವಾಗುತ್ತಿತ್ತು. ಏಕಾಗ್ರ ಮನಸ್ಸುಳ್ಳವರಿಗೆ ಈ ರೀತಿಯಾಗುವುದೆಂದು ಪತಂಜಲಿಯ ಯೋಗಸೂತ್ರಗಳಲ್ಲಿ ಸೂಚಿತವಾಗಿದೆ. ಆದ್ದರಿಂದ ಶ್ರೀರಾಮಕೃಷ್ಣರ ಮನಸ್ಸಿನ ಈ ಸ್ವಭಾವವನ್ನು ಅರಿಯಲು ಶಾಸ್ತ್ರವನ್ನು ತಿಳಿದ ಓದುಗರಿಗೆ ಕಷ್ಟವಾಗುವುದಿಲ್ಲ. ಮತ್ತೆ ಬಹಳ ಪುಣ್ಯಫಲದಿಂದ ಯಾರು ಸ್ವಲ್ಪ ಮಟ್ಟಿಗಾದರೂ ಮನಸ್ಸಿನ ಏಕಾಗ್ರತೆಯನ್ನು ಪಡೆದಿರುವರೊ ಅವರಿಗೆ ಈ ಮಾತು ಸುಲಭವಾಗಿ ಅರ್ಥವಾಗುತ್ತದೆ. ಆದ್ದರಿಂದ ನಾವು ಈಗ ಪ್ರಸ್ತುತ ಘಟನೆಯನ್ನೇ ಮುಂದುವರಿಸಿಕೊಂಡು ಹೋಗುತ್ತೇವೆ.

7. ಮಥುರನಾಥನ ಪತ್ನಿಯ ಮಾತು ಶ್ರೀರಾಮಕೃಷ್ಣರ ಕಿವಿಯನ್ನು ಪ್ರವೇಶಿಸಿತು. ಅವರು ಅರ್ಧಬಾಹ್ಯದೆಶೆಯಲ್ಲಿ ಆನಂದತುಂದಿಲರಾಗಿ ಆಕೆಯೊಡನೆ ಹೊರಟರು. ಸ್ತ್ರೀಯರೆಲ್ಲರೂ ಶ್ರೀರಾಮಕೃಷ್ಣರೊಡನೆ ಪೂಜಾಗೃಹವನ್ನು ಪ್ರವೇಶಿಸಿದ ಕೂಡಲೇ ಆರತಿ ಆರಂಭವಾಯಿತು. ಶ್ರೀರಾಮಕೃಷ್ಣರು ಚಾಮರವನ್ನು ಬೀಸತೊಡಗಿ ದರು. ಒಂದು ಕಡೆ ಸ್ತ್ರೀಯರು ಮತ್ತೊಂದು ಕಡೆ ಪುರುಷರು ನಿಂತುಕೊಂಡು ಆರತಿ ನೋಡುತ್ತಿದ್ದಾರೆ. ಇದ್ದಕ್ಕಿದ್ದಂತೆ ಮಥುರನ ದೃಷ್ಟಿ ಸ್ತ್ರೀಯರ ಕಡೆ ಹರಿಯಿತು. ಅವರ ನಡುವೆ ತನ್ನ ಪತ್ನಿಯ ಪಕ್ಕದಲ್ಲಿ ವಿಚಿತ್ರ ವೇಷಭೂಷಣಗಳಿಂದ ಕೂಡಿದ ಅತ್ಯಂತ ಸುಂದರ ವ್ಯಕ್ತಿಯು ಚಾಮರ ಬೀಸುತ್ತ ನಿಂತಿರುವುದನ್ನು ಕಂಡನು. ಎಷ್ಟೇ ನೋಡಿದರೂ ಅವನಿಗೆ ಆ ವ್ಯಕ್ತಿಯ ಗುರುತು ಸಿಕ್ಕಲಿಲ್ಲ. ತನ್ನ ಪತ್ನಿಗೆ ಪರಿಚಿತಳಾದ ಯಾರೋ ನೆರೆಹೊರೆಯವಳಿರಬೇಕೆಂದು ಅವನು ಭಾವಿಸಿದನು.

ಆರತಿ ಮುಗಿಯಿತು. ಸ್ತ್ರೀಯರೆಲ್ಲರೂ ದೇವಿಗೆ ನಮಸ್ಕರಿಸಿ ತಮ್ಮ ತಮ್ಮ ಸ್ಥಳಗಳಿಗೆ ಹೊರಟುಹೋದರು ಮತ್ತು ತಮ್ಮ ಕೆಲಸದಲ್ಲಿ ಮಗ್ನರಾದರು. ಶ್ರೀರಾಮ ಕೃಷ್ಣರೂ ಮಥುರನ ಪತ್ನಿಯೊಡನೆ ಭಾವಾವಸ್ಥೆಯಲ್ಲಿಯೇ ಒಳಗೆ ಹೋದರು. ಕ್ರಮೇಣ ಅವರು ಸಾಧಾರಣ ಸ್ಥಿತಿಗೆ ಬಂದರು. ತಮ್ಮ ಅಲಂಕಾರಗಳನ್ನೆಲ್ಲ ತೆಗೆದು ಹಾಕಿ ಹೊರಗೆ ಬಂದು ಪುರುಷರೊಡನೆ ಆಧ್ಯಾತ್ಮಿಕ ವಿಚಾರವನ್ನು ಕುರಿತು ಮಾತ ನಾಡುತ್ತ ಕುಳಿತರು.

ಸ್ವಲ್ಪಹೊತ್ತಿನ ನಂತರ ಮಥುರನು ಮನೆಯ ಒಳಗೆ ಹೋದನು. ಮಾತಿನ ಸಂದರ್ಭದಲ್ಲಿ ತನ್ನ ಪತ್ನಿಯನ್ನು ವಿಚಾರಿಸಿದನು : "ಆರತಿಯ ಸಮಯದಲ್ಲಿ ನಿನ್ನ ಪಕ್ಕದಲ್ಲಿ ಚಾಮರ ಬೀಸುತ್ತಿದ್ದವರು ಯಾರು ?" ಆಕೆಯು ನಕ್ಕು ನುಡಿದಳು : "ನಿಮಗೆ ಗೊತ್ತಾಗಲಿಲ್ಲವೆ ? ತಂದೆಯವರು ಭಾವಾವಸ್ಥೆಯಲ್ಲಿ ಆ ರೀತಿ ಚಾಮರ ಹಾಕುತ್ತಿದ್ದರು. ಅದು ನಿಜ, ಅವರು ಸ್ತ್ರೀಯರಂತೆ ವೇಷ ಧರಿಸಿದರೆ ಅವರು ಪುರುಷ ರೆಂದು ತಿಳಿಯುವುದೇ ಇಲ್ಲ." ಅವಳು ಮಥುರನಿಗೆ ನಡೆದ ಘಟನೆಯನ್ನು ಸಾಂಗವಾಗಿ ವಿವರಿಸಿ ಹೇಳಿದಳು. ಮಥುರನಿಗೆ ಆಶ್ಚರ್ಯವಾಯಿತು. "ಸಾಮಾನ್ಯ ವಿಷಯದಲ್ಲಿಯೆ ಹೀಗಾದರೆ ಅವರನ್ನು ನಿಜವಾಗಿಯೂ ಗ್ರಹಿಸುವುದೆಂತು ? ಇಪ್ಪತ್ತನಾಲ್ಕು ಗಂಟೇ

ಅವರೊಡನಿದ್ದರೂ ಅವರನ್ನು ಗುರುತಿಸಲಾಗಲಿಲ್ಲವಲ್ಲ !"—ಎಂದು ಉದ್ಗರಿಸಿದನು.

8. ಸಪ್ತಮಿ, ಅಷ್ಟಮಿ ಮತ್ತು ನವಮಿ ದಿನಗಳು ಆನಂದದಿಂದ ಕಳೆದವು. ಇಂದು ವಿಜಯದಶಮಿಯ ಬೆಳಗಿನ ವೇಳೆ ಪುರೋಹಿತನು ಬೇಗನೆ ದೇವಿಯ ಸಂಕ್ಷೇಪ ಪೂಜೆ ಮಾಡಿ ಮುಗಿಸಿದನು. ಏಕೆಂದರೆ ನಿರ್ದಿಷ್ಟ ವೇಳೆಯಲ್ಲಿ ದರ್ಪಣ ವಿಸರ್ಜನೆ ಯಾಗಬೇಕಿತ್ತು. ಅನಂತರ ಸಂಜೆ ಪ್ರತಿಮೆಯ ವಿಸರ್ಜನೆ. ಮಥುರಬಾಬುವಿನ ಮನೆ ಯವರ ಎಲ್ಲರ ಮನಸ್ಸು ವಿಷಾದದಿಂದ ತುಂಬಿಹೋಗಿತ್ತು—ಏನೋ ಹೇಳಲಾಗದ ಒಂದು ಶೂನ್ಯತೆ ಅವರ ಮನಸ್ಸನ್ನು ಆವರಿಸಿತ್ತು. ತಮ್ಮ ಅತ್ಯಂತ ಪ್ರೀತಿಯ ವ್ಯಕ್ತಿ ಅಗಲಿ ಹೋಗುತ್ತಿರುವಂತೆ ಅವರಿಗೆ ಅನಿಸಿತು. ಈ ಪ್ರಪಂಚದಲ್ಲಿ ಅತ್ಯಂತ ಶುದ್ಧವಾದ ಆನಂದದ ಹಿಂದೆಯೂ ಈ ರೀತಿಯ ವಿಷಾದದ ಛಾಯೆ ಇದ್ದೇ ಇರುತ್ತದೆ. ಬಹುಶಃ ಇದಕ್ಕಾಗಿಯೇ ಅತ್ಯಂತ ಶ್ರೇಷ್ಠ ಭಗವದ್ಭಕ್ತನು ಭಗವದ್ವಿರಹದ ಸಂತಾಪವನ್ನು ಅನುಭವಿಸಬೇಕಾಗುವುದು. ಸಾಮಾನ್ಯ ಮಾನವರಾದ ನಮಗೂ ವಿಜಯದಶಮಿಯ ದಿನ ಪ್ರತಿಮೆಯನ್ನು ವಿಸರ್ಜಿಸಬೇಕಾದಾಗ ಹೃದಯ ಬಿರಿದಂತಾಗುತ್ತದೆ. ಮಥುರನ ಪತ್ನಿಗಂತೂ ಹೇಳತೀರದ ದುಃಖ. ಯಾವಾಗಲೂ ಸೆರಗಿನಿಂದ ಕಣ್ಣೀರೊರಸಿಕೊಳ್ಳು ತ್ತಲೇ ಮನೆಗೆಲಸ ಮಾಡುತ್ತಿದ್ದಳು.

9. ಮಥುರ ಬಾಬುವಿಗೆ ಹೊರಗಡೆ ಏನು ನಡೆಯುತ್ತಿದೆ ಎಂಬುದರ ಪರಿವೆಯೇ ಇಲ್ಲ. ಅವನು ಮೊದಲಿನಂತೆಯೇ ಆನಂದದಿಂದಲೇ ಇದ್ದಾನೆ. ಶ್ರೀ ಜಗನ್ಮಾತೆ ಮನೆಗೆ ಬಂದಿದ್ದಾಳೆ, ಇದರ ಜೊತೆಗೆ ಶ್ರೀರಾಮಕೃಷ್ಣರ ಪುಣ್ಯ ಸಾನ್ನಿಧ್ಯ ಮತ್ತು ಅವರ ಅಪಾರ ಕೃಪೆ–ಈ ಆನಂದದಲ್ಲಿಯೇ ಅವನು ಮೈಮರೆತಿದ್ದ. ಹೊರಗೆ ಏನು ನಡೆಯುತ್ತಿದೆ ಅಥವಾ ನಡೆಯುತ್ತಿಲ್ಲ ಎಂಬುದನ್ನು ಗಮನಿಸುವವರಾರು ? ಗಮನಿಸುವ ಅವಶ್ಯಕತೆಯಾದರೂ ಏನು ? ತಾಯಿ ಮತ್ತು ತಂದೆ ಇವರಿರುವಾಗ ಇನ್ನಾವುದರ ಚಿಂತೆ ? ಈ ಸಂದರ್ಭದಲ್ಲಿ ಪುರೋಹಿತರು ಹೇಳಿ ಕಳಿಸಿದರು : ಈಗ ದೇವಿಯ ವಿಸರ್ಜನೆಯಾಗುತ್ತದೆ. ಮಥುರ ಬಾಬುವು ಬಂದು ದೇವಿಗೆ ನಮಸ್ಕರಿಸಬೇಕು.

10. ಮೊದಲು ಮಥುರನಿಗೆ ಈ ಮಾತಿನ ಅರ್ಥವೇ ಆಗಲಿಲ್ಲ. ಮತ್ತೆ ವಿಚಾರಿಸಿದ ಮೇಲೆ ಅವನಿಗೆ ಹೊಳೆಯಿತು ಇಂದು ವಿಜಯದಶಮಿ ಎಂದು. ಕೂಡಲೆ ಅವನಿಗೆ ಒಂದು ಆಘಾತವಾದಂತಾಯಿತು. ಶೋಕಾಕುಲನಾಗಿ ಚಿಂತಿಸತೊಡಗಿದನು : "ತಾಯಿಯನ್ನು ಇಂದು ವಿಸರ್ಜಿಸಬೇಕೆ ? ತಂದೆ ಮತ್ತು ತಾಯಿ ಇವರ ಕೃಪೆಗೆ ಸ್ವಲ್ಪವೂ ಕೊರತೆ ಇಲ್ಲ. ಮನಸ್ಸಿನ ಸ್ವಲ್ಪ ಆನಂದದ ಕೊರತೆಯೂ ತಾಯಿಯ ಶುಭಾಗಮನದಿಂದ ಪೂರ್ಣವಾಗಿರುವುದು. ತಾಯಿಯನ್ನು ವಿಸರ್ಜಿಸಿ ಮತ್ತೆ ದುಃಖವನ್ನು ಆಹ್ವಾನಿಸುವುದೇ ಇಲ್ಲ, ಈ ಆನಂದೋತ್ಸವವನ್ನು ಕೊನೆಗಾಣಿಸಲಾರೆ. ತಾಯಿಯ ವಿಸರ್ಜಜನೆಯನ್ನು ಚಿಂತಿಸಿದರೇ ಹೃದಯ ಒಡೆದಂತಾಗುತ್ತದೆ." ಹೀಗೆ ಏನೇನೊ ಚಿಂತಿಸುತ್ತ ಕಂಬನಿ ಸುರಿಸತೊಡಗಿದನು.

11. ಈ ಕಡೆ ಸಮಯ ಮೀರಿಹೋಗುತ್ತಿದೆ. ಪುರೋಹಿತರು ಮತ್ತೆ ಮತ್ತೆ ಹೇಳಿಕಳಿಸುತ್ತಿದ್ದಾರೆ ಅವನು ಬರಬೇಕೆಂದು. ಮಥುರನು ಕೋಪೋದ್ರಿಕ್ತನಾಗಿ ಹೇಳಿ ಕಳಿಸಿದ : ''ತಾಯಿಯನ್ನು ವಿಸರ್ಜಿಸುವುದಕ್ಕೆ ನಾನು ಬಿಡುವುದಿಲ್ಲ. ಈಗ ಪೂಜೆ ನಡೆಯುತ್ತಿರುವಂತೆಯೇ ಮುಂದುವರಿಯಲಿ. ನನ್ನ ಅಭಿಮತಕ್ಕೆ ವಿರುದ್ಧ ವಾಗಿ ವಿಸರ್ಜನೆ ಮಾಡಿದರೆ ಗಂಭೀರ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ–ನಾನು ಕೊಲ್ಲುವುದಕ್ಕೂ ಹಿಂಜರಿಯುವುದಿಲ್ಲ.'' ಹೀಗೆ ಹೇಳಿ ಮಥುರನು ಗಂಭೀರವಾಗಿ ಕುಳಿತು ಬಿಟ್ಟನು. ಸೇವಕನು ಭಯದಿಂದ ತತ್ತರಿಸುತ್ತ ಹೋಗಿ ಪುರೋಹಿತರಿಗೆ ವಿಷಯವನ್ನು ತಿಳಿಸಿದನು. ಎಲ್ಲರೂ ಭಯಚಕಿತರಾದರು.

12. ಎಲ್ಲರೂ ಏನು ಮಾಡುವುದೆಂದು ಚರ್ಚಿಸತೊಡಗಿದರು. ಮಥುರನು ಗೌರವದಿಂದ ಕಾಣುತ್ತಿದ್ದ ಕೆಲವು ವ್ಯಕ್ತಿಗಳನ್ನು ಅವನಿಗೆ ತಿಳಿಸಿಹೇಳಲು ಕಳಿಸಿ ದರು. ಅವರ ಮಾತಿಗೂ ಅವನು ಬೆಲೆಕೊಡದೆ ಅವನು ಹೇಳಿದನು : ''ಏಕೆ ? ನಾನು ತಾಯಿಯ ನಿತ್ಯಪೂಜೆ ಮಾಡುತ್ತೇನೆ. ತಾಯಿಯ ಕೃಪೆಯಿಂದ ನನಗೆ ಸಾಮರ್ಥ್ಯ ವಿರುವಾಗ ವಿಸರ್ಜನೆ ಮಾಡುವುದೇಕೆ ?'' ಅವರೆಲ್ಲ ನಿರುತ್ತರರಾಗಿ ಹಿಂದಿರುಗಿದರು. ಮಥುರನಿಗೆ ತಲೆಕೆಟ್ಟಿರಬೇಕೆಂದು ಎಲ್ಲರೂ ತೀರ್ಮಾನಕ್ಕೆ ಬಂದರು. ಆದರೆ ಈ ತೀರ್ಮಾನಕ್ಕೆ ಬಂದ ಮಾತ್ರಕ್ಕೆ ಸಮಸ್ಯೆ ಪರಿಹಾರವಾದಂತಾಗಲಿಲ್ಲ. ಹಠಮಾರಿ ಯಾದ ಮಥುರನ ಸ್ವಭಾವ ಮನೆಯವರಿಗೆಲ್ಲ ತಿಳಿದಿತ್ತು. ಅವನು ಕೋಪ ಮಾಡಿಕೊಂಡರೆ ಹಿಂದೆ ಮುಂದೆ ನೋಡುವವನಲ್ಲ. ಈಗ ಅವನ ಇಚ್ಛೆಗೆ ವಿರುದ್ಧ ವಾಗಿ ದೇವಿಯ ವಿಸರ್ಜನೆಗೆ ಅನುಮತಿ ನೀಡುವ ಧೈರ್ಯ ಯಾರಿಗೆ ತಾನೆ ಬಂದೀತು ? ಈಗ ಶ್ರೀರಾಮಕೃಷ್ಣರೇ ಗತಿ ಎಂದು ಎಲ್ಲರಿಗೂ ಅನಿಸಿತು. ಈ ವಿಪತ್ತಿನಿಂದ ರಕ್ಷಿಸುವವರು ಇನ್ನಾರು ? ಮಥುರನಿಗೆ ನಿಜವಾಗಿಯೂ ತಲೆ ಕೆಟ್ಟಿದೆಯೇ ?

13. ಶ್ರೀರಾಮಕೃಷ್ಣರು ಮಥುರನ ಹತ್ತಿರ ಹೋದರು. ಅವನ ಮುಖ ಗಂಭೀರವಾಗಿತ್ತು. ರಕ್ತವರ್ಣದಿಂದ ಕೂಡಿತ್ತು, ಕಣ್ಣುಗಳು ಕೆಂಪಾಗಿದ್ದವು, ಹುಚ್ಚ ನಂತೆ ಅತ್ತಿಂದಿತ್ತ ಓಡಾಡುತ್ತಿದ್ದನು. ಅವರನ್ನು ನೋಡಿದ ಕೂಡಲೇ ಅವರ ಹತ್ತಿರ ಹೋಗಿ ಹೇಳಿದನು : ''ತಂದೆ, ಯಾರು ಏನೇ ಹೇಳಲಿ, ನಾನು ಪ್ರಾಣ ವಿರುವವರೆಗೂ ತಾಯಿಯನ್ನು ವಿಸರ್ಜಿಸಲು ಬಿಡುವುದಿಲ್ಲ. ನಿತ್ಯಪೂಜೆ ಮಾಡುವು ದಾಗಿ ಹೇಳಿಕಳಿಸಿದ್ದೇನೆ. ತಾಯಿಯನ್ನು ಬಿಟ್ಟು ಹೇಗೆ ಇರುವುದು ?''

ಶ್ರೀರಾಮಕೃಷ್ಣರು ಅವನ ಎದೆಯ ಮೇಲೆ ಕೈಯಾಡಿಸುತ್ತಾ ಹೇಳಿದರು : ''ಓಃ ಇದೇ ನಿನ್ನ ಭಯವೇ ? ನೀನು ತಾಯಿಯನ್ನು ಬಿಟ್ಟಿರಬೇಕೆಂದು ಯಾರು ಹೇಳುತ್ತಾರೆ? ವಿಸರ್ಜನೆ ಮಾಡಿದರೆ ತಾನೆ ಅವಳು ಹೋಗುವುದು ಎಲ್ಲಿಗೆ ? ಮಗುವನ್ನು ಬಿಟ್ಟು ತಾಯಿ ಎಂದಾದರೂ ಇರಬಲ್ಲಳೆ ? ಅವಳು ಮೂರು ದಿನ ಹೊರಗಡೆ ಪೂಜಾ ಗೃಹದಲ್ಲಿ ನಿನ್ನ ಪೂಜೆಯನ್ನು ಸ್ವೀಕರಿಸಿದಳು. ಇಂದಿನಿಂದ ಇನ್ನೂ ನಿನ್ನ ನಿಕಟವಿದ್ದು

ನಿನ್ನ ಹೃದಯದಲ್ಲಿಯೇ ಕುಳಿತು ನಿನ್ನ ಪೂಜೆಯನ್ನು ಸ್ವೀಕರಿಸುತ್ತಾಳೆ."

14. ಶ್ರೀರಾಮಕೃಷ್ಣರ ಸ್ಪರ್ಶದಲ್ಲಿ ಮತ್ತು ಮಾತಿನಲ್ಲಿ ಯಾವುದೊ ಸಂಮೋಹಿನೀ ಶಕ್ತಿ ಇತ್ತು. ಕೆಲವೊಮ್ಮೆ ಕೆಲವು ವ್ಯಕ್ತಿಗಳು ಬಂದು ಶ್ರೀರಾಮಕೃಷ್ಣರ ಅಭಿಪ್ರಾಯಕ್ಕೆ ವಿರುದ್ಧವಾಗಿ ಚರ್ಚಿಸುತ್ತಿದ್ದರು, ಎಷ್ಟು ಹೇಳಿದರೂ ತಮ್ಮ ಅಭಿಪ್ರಾಯವನ್ನು ಸ್ವೀಕರಿಸುತ್ತಿರಲಿಲ್ಲ. ಆಗ ಶ್ರೀರಾಮಕೃಷ್ಣರು ಚಾಕಚಕ್ಯತೆಯಿಂದ ಅವರ ಅಂಗವನ್ನು ಸ್ಪರ್ಶಿಸಿಬಿಡುತ್ತಿದ್ದರು. ಕೂಡಲೆ ಅವರ ಚಿಂತನಾಧಾರೆಯೇ ಬದಲಾಗಿ ಬಿಡುತ್ತಿತ್ತು, ಶ್ರೀರಾಮಕೃಷ್ಣರ ಸಿದ್ಧಾಂತವನ್ನು ಸಂಪೂರ್ಣ ಒಪ್ಪಿಕೊಂಡುಬಿಡುತ್ತಿದ್ದರು. ಇದರ ಸಂಬಂಧವಾಗಿ ಅವರು ನಮ್ಮಲ್ಲಿ ಕೆಲವರಿಗೆ ಹೇಳುತ್ತಿದ್ದರು : "ಮಾತನಾಡುತ್ತಾ ಮಾತನಾಡುತ್ತ ನಾನು ಆ ರೀತಿ ಸ್ಪರ್ಶಿಸುವುದಕ್ಕೆ ಕಾರಣವಿದೆ. ಅವರ ಮನಸ್ಸಿನಲ್ಲಿ ಯಾವುದೋ ಶಕ್ತಿಯು ತಡೆ ಇರುತ್ತದೆ. ಸ್ಪರ್ಶದಿಂದ ಆ ಶಕ್ತಿಯ ತೀವ್ರತೆಯು ಕಡಿಮೆಯಾಗಿ ಸತ್ಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ" ಸತ್ಯವನ್ನು ಯಥಾರ್ಥ ರೀತಿಯಲ್ಲಿ ತಿಳಿಯಲು ಇರುವ ಅಂತರಾಯ ಶಕ್ತಿಯನ್ನು ಅವರು ತಮ್ಮ ಸ್ಪರ್ಶದ ಮೂಲಕ ತಮ್ಮೊಳಗೆ ಎಳೆದುಕೊಂಡು ಅದರ ಪ್ರಭಾವವನ್ನು ಹ್ರಸ್ವಗೊಳಿಸುತ್ತಿದ್ದರು, ಇಲ್ಲವೆ ಅಡಚಣೆಗಳನ್ನೆಲ್ಲ ಶಾಶ್ವತವಾಗಿ ನಾಶಗೊಳಿಸುತ್ತಿದ್ದರು. ಇದಕ್ಕೆ ದೃಷ್ಟಾಂತವಾಗಿ ಅನೇಕ ಘಟನೆಗಳನ್ನು ಉದಾಹರಿಸಬಹುದು. ಯಾವುದೇ ಮಾತು ಇತರರ ಬಾಯಿಂದ ಹೊರಬಂದರೆ ಕೇಳುಗರ ಮನಸ್ಸಿನಲ್ಲಿ ಯಾವ ಪರಿಣಾಮವನ್ನೂ ಉಂಟುಮಾಡುವುದಿಲ್ಲವೊ ಅದೇ ಮಾತು ಶ್ರೀರಾಮಕೃಷ್ಣರ ಶ್ರೀಮುಖದಿಂದ ಹೊರಬಂದರೆ ಕೇಳುಗರ ಮನಸ್ಸಿನಲ್ಲಿ ಅದ್ಭುತ ಭಾವ ಪರಿವರ್ತನೆಯನ್ನು ಉಂಟುಮಾಡುತ್ತಿತ್ತು. ಅವರ ಜೀವನದ ಗತಿಯನ್ನೇ ಬದಲಾಯಿಸಿಬಿಡುತ್ತಿತ್ತು. ಇಂತಹ ಎಷ್ಟೊ ಘಟನೆಗಳನ್ನು ನಾವು ನೋಡಿರುವೆವು ಮತ್ತು ಕೇಳಿರುವೆವು. ಇದನ್ನು ಕುರಿತು ಮುಂದೆ ಹೇಳುವವರಿದ್ದೇವೆ. ಮಥುರಬಾಬುವಿನ ವಿಷಯವನ್ನು ಮುಂದುವರಿಸುತ್ತೇವೆ.

15. ಶ್ರೀರಾಮಕೃಷ್ಣರ ಮಾತಿನಿಂದ ಮತ್ತು ಸ್ಪರ್ಶದಿಂದ ಮಥುರನ ಮನಸ್ಸು ಸಮಾಧಾನಗೊಂಡಿತು. ಇದು ಶ್ರೀರಾಮಕೃಷ್ಣರ ಸ್ಪರ್ಶದಿಂದ ಉಂಟಾದ ಯಾವುದೇ ರೀತಿಯ ದಿವ್ಯದರ್ಶನದ ಪರಿಣಾಮವೊ ಏನೊ ತಿಳಿಯದು. ಅದರ ಸಾಧ್ಯತೆಯನ್ನು ನಾವು ಊಹಿಸಬಹುದು. ಅವನು ಶ್ರೀಜಗನ್ಮಾತೆಯ ಉಜ್ವಲಮೂರ್ತಿಯನ್ನು ತನ್ನ ಹೃದಯದಲ್ಲಿ ಕಂಡು ಪರಮಾನಂದವನ್ನು ಅನುಭವಿಸಿದ್ದಿರಬೇಕು. ಆದ್ದರಿಂದಲೇ ಬಾಹ್ಯಮೂರ್ತಿಯನ್ನು ಉಳಿಸಿಕೊಳ್ಳುವ ಹಠ ಕಡಮೆಯಾಗಿರಬೇಕು. ಯಥಾರ್ಥ ಗುರುವು ಶಿಷ್ಯನ ದೃಷ್ಟಿಯನ್ನು ಹೀಗೆಯೇ ಉನ್ನತ ಆದರ್ಶದೆಡೆಗೆ ಹರಿಸುತ್ತಾನೆ. ಇದರಿಂದಾಗಿ ಅವನ ಕೆಳಗಿನ ಸ್ತರದ ಭಾವ ದರ್ಶನಾದಿಗಳು ಸ್ವಾಭಾವಿಕವಾಗಿಯೇ ಮನಸ್ಸಿನಿಂದ ಕಳಚಿಬೀಳುವುವು.

16. ಶ್ರೀರಾಮಕೃಷ್ಣರ ಮೇಲಿನ ಮಥುರನ ಭಕ್ತಿವಿಶ್ವಾಸ ಅದ್ಭುತವಾದುದು

ನಿಜ. ಆದರೆ ಅದು ಅವರನ್ನು ಹಲವು ರೀತಿಯಲ್ಲಿ ಪರೀಕ್ಷಿಸಿದನಂತರ ಉಂಟಾದುದು ಎಂಬುದನ್ನು ನಾವು ಮರೆಯಬಾರದು. ಹಣದ ಮೂಲಕ, ಸುಂದರ ಸ್ತ್ರೀಯ ಮೂಲಕ' ತನ್ನ ಮತ್ತು ಮನೆಯವರ ಮೇಲೆ ಪ್ರಭುತ್ವವನ್ನು ನೀಡುವುದರ ಮೂಲಕ ಮತ್ತು ಅವರ ಸಂಬಂಧಿಕರಾದ ಹೃದಯ ಮುಂತಾದವರಿಗಾಗಿ ಹಣ ವ್ಯಯಿಸುವುದರ ಮೂಲಕ— ಹೀಗೆ ಹಲವು ರೀತಿಯಲ್ಲಿ ಅವನು ಅವರನ್ನು ಪರೀಕ್ಷಿಸಿರುವನು. ಇದರ ಫಲವಾಗಿ ಅವರು ಎಲ್ಲ ರೀತಿಯ ಪ್ರಲೋಭನೆಗಳನ್ನು ಮೀರಿದವರೆಂಬ ಅವನು ತೀರ್ಮಾನಕ್ಕೆ ಬಂದಿದ್ದನು. ಬಾಹ್ಯ ಭಾವ-ಭಕ್ತಿಯ ಕೃತಕ ಆವರಣವು ಅವರ ಸೂಕ್ಷ್ಮ ದೃಷ್ಟಿಯ ಮುಂದೆ ಬಹು ಕಾಲ ನಿಲ್ಲಲಾರದು—ಎಂಬುದನ್ನೂ ಅವನು ಕಂಡುಕೊಂಡನು. ನರಹತ್ಯವೇ ಮುಂತಾದ ದುಷ್ಕರ್ಮಗಳನ್ನು ಮಾಡಿಯೂ ಮಾತು ಮನಸ್ಸು ಒಂದು ಮಾಡಿ ಸರಳಭಾವದಿಂದ ಅವರಲ್ಲಿ ಶರಣಾದರೆ ಅವರು ಎಂಥ ತಪ್ಪನ್ನೂ ಕ್ಷಮಿಸಿ ಅವನನ್ನು ಸ್ವೀಕರಿಸುತ್ತಿದ್ದರು ಮತ್ತು ಉನ್ನತ ಲಕ್ಷ್ಯದೆಡೆಗೆ ಅವನ ಮನಸ್ಸು ಹರಿಯು ವಂತೆ ಮಾಡುತ್ತಿದ್ದರು. ಅವರ ವಿಶಿಷ್ಟ ಶಕ್ತಿಯ ಬಲದಿಂದ ಅವನ ಪಾಲಿಗೆ ಅಸಂಭವವೂ ಸಂಭವವಾಗುತ್ತಿತ್ತು.

17. ಶ್ರೀರಾಮಕೃಷ್ಣರ ಸಹವಾಸವನ್ನು ಮಾಡಿ ಅವರು ಭಾವಸಮಾಧಿಯಲ್ಲಿ ಅದ್ಭುತ ಆನಂದವನ್ನು ಅನುಭವಿಸುವುದನ್ನು ನೋಡಿ ಮಥುರನಿಗೆ ತಾನೂ ಆ ಅನುಭವ ವನ್ನು ಪಡೆಯಬೇಕೆಂದು ಮನಸ್ಸಾಯಿತು. ಅವರು ಮನಸ್ಸು ಮಾಡಿದರೆ ಅದು ಸಾಧ್ಯ ಎಂಬ ದೃಢವಿಶ್ವಾಸ ಅವನಿಗಿತ್ತು. ರಾಮ, ಕೃಷ್ಣ, ಕಾಳಿ, ಶಿವ ಎಲ್ಲ ಅವರೇ ಆಗಿರುವುದರಿಂದ ಅವರು ಇಷ್ಟಪಟ್ಟರೆ ಯಾರಿಗೆ ಬೇಕಾದರೂ ತಮ್ಮ ಯಾವುದೇ ರೂಪ ವನ್ನು ತೋರಿಸಬಹುದು ಎಂದು ಅವನು ನಂಬಿದ್ದನು. ಈ ವಿಶ್ವಾಸ ಸಾಮಾನ್ಯ ವಿಷಯವೇನಲ್ಲ. ಯಾರು ಶ್ರೀರಾಮಕೃಷ್ಣರನ್ನು ನೋಡಿ ಅವರೊಡನೆ ನಿಕಟ ಸಂಬಂಧ ವನ್ನು ಬೆಳಸಿಕೊಂಡಿರುವರೊ ಅವರೆಲ್ಲರ ಮನಸ್ಸಿನಲ್ಲಿ ಈ ವಿಶ್ವಾಸ ಕ್ರಮೇಣ ಉದಯ ವಾಗುತ್ತಿತ್ತು. ಅವರು ಇಷ್ಟಪಟ್ಟರೆ ಎಲ್ಲವೂ ಸಾಧ್ಯ ಎಂದು ಎಲ್ಲರಿಗೂ ಅನಿಸುತ್ತಿತ್ತು. ಅವರ ಇಚ್ಛೆಯಿಂದ ಎಲ್ಲ ಧಾರ್ಮಿಕ ಸತ್ಯಗಳನ್ನೂ ಯಾರು ಬೇಕಾದರೂ ತಿಳಿಯ ಬಹುದು ಎಂಬ ವಿಶ್ವಾಸ ಎಲ್ಲರಿಗೂ ಇತ್ತು. ತನ್ನ ಆಧ್ಯಾತ್ಮಿಕ ಶಕ್ತಿಯಿಂದ ಮತ್ತು ಚಾರಿತ್ರ್ಯದ ಬಲದಿಂದ ಒಬ್ಬ ವ್ಯಕ್ತಿಯಲ್ಲಿ ಆಧ್ಯಾತ್ಮಿಕ ಭಾವವನ್ನು ಜಾಗ್ರತಗೊಳಿಸು ವುದೇ ಕಠಿನ—ಇನ್ನು ಅನೇಕರಲ್ಲಿ ಆ ರೀತಿ ಜಾಗ್ರತಗೊಳಿಸುವುದು ದೂರದ ಮಾತು. ಇದು ಕೇವಲ ಅವತಾರಪುರುಷರಿಂದ ಮಾತ್ರ ಸಾಧ್ಯ. ಅವರ ಅವತಾರತ್ವವನ್ನು ದೃಢಪಡಿಸುವ ಪ್ರಮಾಣಗಳಲ್ಲಿ ಇದೊಂದು ಅತ್ಯಂತ ಪ್ರಧಾನವಾದುದು. ಸುಳ್ಳು ಮೋಸ ವಂಚನೆಗಳಿಂದ ತುಂಬಿದ ಈ ಜಗತ್ತಿನಲ್ಲಿ ಯಾರು ಬೇಕಾದರೂ ತಾವು ಅವತಾರ ಪುರುಷರೆಂದು ಜನರನ್ನು ವಂಚಿಸಬಹುದು. ಇದಕ್ಕಾಗಿಯೇ ಅವರು ಸಾರಿರುವರು : ''ನಾನು ಕಣ್ಮರೆಯಾದಮೇಲೆ ಅನೇಕ ಕಪಟಿಗಳು, 'ನಾನು ಅವತಾರ, ನಾನು ದುರ್ಬಲರಿಗೆ ಶರಣು ಮತ್ತು ಮುಕ್ತಿದಾತ' ಎಂದು ಹೇಳಿಕೊಂಡು ತಿರುಗುವರು. ಎಚ್ಚರಿಕೆ, ಅವರ

ಮಾತನ್ನು ನಂಬದಿರಿ."*

18. ಮಥುರನ ಮನಸ್ಸಿನಲ್ಲಿ ಈ ಭಾವನೆ ಬಂದಕೂಡಲೇ ಶ್ರೀರಾಮಕೃಷ್ಣರ ಹತ್ತಿರ ಹೋಗಿ ಹೇಳಿದ : "ತಂದೆ, ನನಗೂ ಭಾವಸಮಾಧಿ ಆಗುವಂತೆ ಮಾಡಿ." ಶ್ರೀರಾಮಕೃಷ್ಣರು ಇಂತಹ ಸಂದರ್ಭದಲ್ಲಿ ಯಾವಾಗಲೂ ಏನು ಹೇಳುತ್ತಿದ್ದರೊ ಹಾಗೆಯೇ ಹೇಳಿರಬೇಕು. ಅವರೆಂದರು : "ನೋಡಪ್ಪ, ಸಮಯ ಬಂದಾಗ ಆಗುವುದು. ಒಂದು ಬೀಜವನ್ನು ಬಿತ್ತಿದ ಕೂಡಲೇ ಮರವಾಗಿ ಹಣ್ಣು ಸಿಕ್ಕುವುದೆ? ನೋಡು, ನೀನು ಚೆನ್ನಾಗಿಯೇ ಇದ್ದೀಯೆ. ಪ್ರಪಂಚ ದೇವರು ಎರಡನ್ನೂ ಇಟ್ಟು ಕೊಂಡಿದ್ದೀಯೆ. ಭಾವಸಮಾಧಿಗಳೆಲ್ಲ ಆದರೆ ಈ ಕಡೆಯಿಂದ ಮನಸ್ಸು ಹೊರಟು ಹೋಗುತ್ತದೆ. ಆಗ ನಿನ್ನ ಆಸ್ತಿ, ಸಂಪತ್ತನ್ನೆಲ್ಲ ಯಾರು ನೋಡಿಕೊಳ್ಳುವವರು ? ಎಲ್ಲರೂ ಬಂದು ಅದನ್ನು ದೋಚಿಕೊಂಡು ಹೋಗುತ್ತಾರೆ. ಆಗೇನು ಮಾಡುತ್ತೀಯೆ ?"

19. ಅಂದು ಈ ಮಾತನ್ನು ಕೇಳುವವರಾರು ? ಮಥುರನು ಭಾವಸಮಾಧಿ ಆಗಲೇಬೇಕೆಂದು ಹಠಹಿಡಿದನು. ಈ ರೀತಿ ಹೇಳಿದರೆ ಪ್ರಯೋಜನವಿಲ್ಲವೆಂದು ಶ್ರೀರಾಮಕೃಷ್ಣರು ಉನ್ನತ ದೃಷ್ಟಿಯಿಂದ ಮಾತನಾಡತೊಡಗಿದರು : "ನೋಡು, ಭಕ್ತರು ದರ್ಶನವನ್ನು ಬಯಸುತ್ತಾರೇನು ? ಅವರು ಬಯಸುವುದು ಸೇವೆಯನ್ನು, ಭಗವದ್ದರ್ಶನದಿಂದ ಅವನ ಶಕ್ತಿಯ ಅರಿವಾಗಿ ಭಯವುಂಟಾಗುತ್ತದೆ, ಆಗ ಪ್ರೀತಿ ಮುಚ್ಚಿಹೋಗುತ್ತದೆ. ಶ್ರೀಕೃಷ್ಣನು ಮಥುರೆಗೆ ಹೋದಮೇಲೆ ಗೋಪಿಯರಿಗೆ ವಿರಹ ವೇದನೆಯುಂಟಾಯಿತು. ಶ್ರೀಕೃಷ್ಣನು ಅವರ ಸ್ಥಿತಿಯನ್ನು ಅರ್ಥಮಾಡಿಕೊಂಡು ಅವರಿಗೆ ತಿಳಿಸಿಹೇಳಲು ಉದ್ಧವನನ್ನು ಕಳಿಸಿದನು. ಉದ್ಧವನು ಜ್ಞಾನಿಯಷ್ಟೆ. ಬೃಂದಾವನದ ಈ ರೋದನ, ಭಾವ, ಕೃಷ್ಣನಿಗೆ ಉಣಿಸುವುದು, ಉಡಿಸುವುದು—ಇವಾವುವೂ ಅವನಿಗೆ ಅರ್ಥವಾಗಲಿಲ್ಲ. ಗೋಪಿಯರ ಶುದ್ಧ ಪ್ರೀತಿಯನ್ನು ಮಾಯೆ, ತುಚ್ಛವಾದುದು ಎಂದು ಅವನು ಭಾವಿಸಿದನು. ಅವನ್ನೆಲ್ಲ ನೋಡಿ ಅವನಿಗೂ ಬುದ್ಧಿ ಬರುವುದೆಂದು ಶ್ರೀಕೃಷ್ಣನು ಭಾವಿಸಿದ್ದಿರಬೇಕು, ಉದ್ಧವನು ಹೋಗಿ ಗೋಪಿಯರಿಗೆ ಉಪದೇಶಿಸತೊಡಗಿದನು : 'ನೀವುಗಳು ಕೃಷ್ಣ ಕೃಷ್ಣ ಎಂದು ಏಕೆ ಈ ರೀತಿ ಕೂಗಾಡುತ್ತಿದ್ದೀರಿ ? ಅವನು ಭಗವಂತ, ಎಲ್ಲೆಲ್ಲಿಯೂ ಇದ್ದಾನೆ. ಅವನು ಮಥುರೆಯಲ್ಲಿದ್ದಾನೆ, ಬೃಂದಾವನದಲ್ಲಿಲ್ಲ ಎಂದು ಹೇಳಲಾಗುವುದಿಲ್ಲ. ಈ ರೀತಿ ಹತಾಶರಾಗದೆ ಕಣ್ಣು ತೆರೆದು ನೋಡಿ, ಆ ನವಘನಶ್ಯಾಮ, ಮುರಳೀವದನ, ವನಮಾಲೀ ಕೃಷ್ಣನು ನಿಮ್ಮ ಹೃದಯದೊಳಗೇ ಇರುವನು." ಅದನ್ನು ಕೇಳಿ ಗೋಪಿಯರು ಹೇಳಿದರು : 'ಉದ್ಧವ, ನೀನು ಕೃಷ್ಣನ ಸಖ, ಜ್ಞಾನೀ, ನೀನು ಹೀಗೆ ಮಾತನಾಡುತ್ತಿರುವೆಯಲ್ಲ ! ನಾವು ಧ್ಯಾನಿ ಅಥವಾ ಜ್ಞಾನಿಗಳೆ ? ಋಷಿ ಮುನಿಗಳಂತೆ ಜಪ ತಪಗಳನ್ನು ಮಾಡಿ ಅವನನ್ನು

---

* ಬೈಬಲ್, ಮಾಥ್ಯು 24-11, 23, 25

ಪಡೆದಿರುವೆವೆ ? ನಾವು ಅವನಿಗೆ ಉಣಿಸಿರುವೆವು. ಬಟ್ಟೆ ತೊಡಿಸಿರುವೆವು, ಅಲಂಕರಿಸಿರುವೆವು, ಅವನೊಡನೆ ಆಟವಾಡಿರುವೆವು. ಧ್ಯಾನದ ಮೂಲಕ ಇದನ್ನೆಲ್ಲ ಮಾಡಲು ಸಾಧ್ಯವೆ ? ಧ್ಯಾನ ನಮ್ಮಿಂದ ಸಾಧ್ಯವೆ ? ಯಾವ ಮನಸ್ಸಿನಿಂದ ಧ್ಯಾನ ಜಪ ಮಾಡಬೇಕೊ ಆ ಮನಸ್ಸು ನಮ್ಮದಾಗಿದ್ದರೆ ಅದನ್ನು ಮಾಡಬಹುದು. ಆ ಮನಸ್ಸನ್ನು ಬಹಳ ಹಿಂದೆಯೇ ಕೃಷ್ಣನ ಪಾದಪದ್ಮದಲ್ಲಿ ಅರ್ಪಿಸಿರುವೆವು. ನಮ್ಮದು ಎನ್ನುವುದು ಏನಾದರೂ ಇದ್ದಿದ್ದರೆ ಅಹಂ–ಬುದ್ಧಿಯಿಂದ ಜಪ ಮಾಡಬಹುದಿತ್ತು.' ಉದ್ಧವನು ಕೇಳಿ ಬೆರಗಾದ. ಆಗ ಅವನಿಗೆ ತಿಳಿಯಿತು ಗೋಪಿಯರ ಪ್ರೀತಿ ಎಂತಹುದು ಎಂದು. ಅವನು ಅವರನ್ನು ಗುರುವೆಂದು ಭಾವಿಸಿ ಅವರಿಗೆ ನಮಸ್ಕರಿಸಿ ಹಿಂತಿರುಗಿ ಹೋದನು. ಇದರಿಂದ ನೋಡು, ನಿಜವಾದ ಭಕ್ತನು ಭಗವಂತನನ್ನು ನೋಡಲು ಬಯಸುವನೇನು ? ಅವನ ಸೇವೆಯೇ ಅವನಿಗೆ ಪರಮಾನಂದ. ಇದಕ್ಕಿಂತ ಹೆಚ್ಚಾಗಿ, ಆಧ್ಯಾತ್ಮಿಕ ದರ್ಶನಾದಿಗಳನ್ನು ಅವನು ಬಯಸುವುದಿಲ್ಲ. ಇದರಿಂದ ಅವನ ಭಾವ ನಷ್ಟವಾಗುತ್ತದೆ."

ಮಥುರನು ಈ ಮಾತಿನಿಂದಲೂ ಸುಮ್ಮನಾಗದಿರಲು ಶ್ರೀರಾಮಕೃಷ್ಣರು ಹೇಳಿದರು : "ನನಗೇನಪ್ಪ ಗೊತ್ತು ? ತಾಯಿಗೆ ಹೇಳುತ್ತೇನೆ, ಅವಳ ಇಷ್ಟದಂತೆ ಆಗುತ್ತದೆ."

20. ಇದಾದ ಕೆಲವು ದಿನಗಳ ನಂತರವೇ ಮಥುರನಿಗೆ ಭಾವಸಮಾಧಿಯಾಯಿತು. ಶ್ರೀರಾಮಕೃಷ್ಣರು ಹೇಳುತ್ತಿದ್ದರು : "ಅವನು ನನಗೆ ಹೇಳಿಕಳಿಸಿದನು ನಾನು ಹೋಗಿ ನೋಡಿದೆ, ಅವನು ಮನುಷ್ಯನಂತೆಯೇ ಕಾಣುತ್ತಿಲ್ಲ ! ಕಣ್ಣು ಕೆಂಪಾಗಿದೆ, ಕಂಬನಿ ಸುರಿಯುತ್ತಿದೆ. ಭಗವಂತನ ವಿಷಯವಾಗಿ ಮಾತನಾಡುತ್ತ ಕ್ರಂದಿಸುತ್ತಿದ್ದಾನೆ. ಎದೆ ಥರ ಥರ ನಡಗುತ್ತಿದೆ. ನನ್ನನ್ನು ನೋಡುತ್ತಲೇ ಓಡಿಬಂದು ಕಾಲನ್ನು ಹಿಡಿದುಕೊಂಡು ಹೇಳತೊಡಗಿದ : "ತಂದೆ, ನಾನು ತಪ್ಪು ಮಾಡಿದೆ. ಮೂರು ದಿನದಿಂದ ಈ ಅವಸ್ಥೆ. ವ್ಯವಹಾರದ ಕಡೆ ಎಷ್ಟೇ ಪ್ರಯತ್ನ ಮಾಡಿದರೂ ಮನಸ್ಸು ಹೋಗುತ್ತಿಲ್ಲ. ಎಲ್ಲ ಕೆಟ್ಟುಹೋಯಿತು. ನಿಮ್ಮ ಭಾವ ನಿಮಗೇ ಇರಲಿ, ನನಗೆ ಬೇಡ." ನಾನು ಹೇಳಿದೆ : 'ಏಕೆ ? ಭಾವಸಮಾಧಿ ಆಗಬೇಕೆಂದು ನೀನೇ ಹೇಳಿದ್ದೆಯಲ್ಲ ?' ಆಗ ಅವನೆಂದ : "ಹೇಳಿದ್ದು ನಿಜ. ಆನಂದವೂ ಇದೆ. ಆದರೇನಂತೆ, ಈ ಕಡೆ ಎಲ್ಲ ಹೊರಟುಹೋಗುತ್ತಿದೆ. ತಂದೆ, ನಿನ್ನ ಭಾವ ನಿನಗೇ ಭೂಷಣ, ನಮಗೆ ಅವೆಲ್ಲ ಬೇಡ. ಹಿಂತೆಗೆದುಕೊಳ್ಳಿ.' ನಾನು ನಗುತ್ತ 'ನಾನಿದನ್ನು ಮೊದಲೇ ಹೇಳಿರಲಿಲ್ಲವೆ ?' ಎಂದು ಕೇಳಿದೆ. ಅವನೆಂದ : 'ಹೌದು. ಆಗ ನನಗೆ ತಿಳಿದಿರಲಿಲ್ಲ, ಇದು ಭೂತದಂತೆ ಹೀಗೆ ಹಿಡಿದುಕೊಳ್ಳುವುದೆಂದು. ಇಪ್ಪತ್ತನಾಲ್ಕು ಗಂಟೆಯೂ ಅದು ಹೇಳಿದಂತೆ ಕುಣಿಯಬೇಕಾಗುವುದೆಂದು ಯಾರಿಗೆ ಗೊತ್ತು ? ನಾನು ಇಷ್ಟಪಟ್ಟರೂ ನನಗೆ ಏನೂ ಮಾಡಲಾಗುತ್ತಿಲ್ಲ.' ಆಗ ಅವನ ಎದೆಯ ಮೇಲೆ ಕೈ ಆಡಿಸಿದೆ."

21. ಕೇವಲ ಭಾವ ಅಥವಾ ಸಮಾಧಿಯಿಂದಲೇ ಏನೂ ಆಗುವುದಿಲ್ಲ. ಅದರ ತೀವ್ರತೆಯನ್ನು ಸಹಿಸಿಕೊಳ್ಳುವ, ಅದನ್ನು ಉಳಿಸಿಕೊಳ್ಳುವ ಯೋಗ್ಯತೆ ಎಷ್ಟು

ಜನರಿಗಿದೆ ? ಸ್ವಲ್ಪ ವಾಸನೆ ಇದ್ದರೂ ಆ ಯೋಗ್ಯತೆ ಬರುವುದಿಲ್ಲ. ಆದ್ದರಿಂದಲೇ ಮೊದಲು ವಾಸನೆಗಳಿಂದ ಮುಕ್ತರಾಗಬೇಕೆಂದು ಶಾಸ್ತ್ರ ಹೇಳುವುದು. 'ತ್ಯಾಗೇನೈಕೇ ಅಮೃತತ್ವಮಾನಶುಃ' – ತ್ಯಾಗದಿಂದಲೇ ಕೆಲವರು ಅಮೃತತ್ವವನ್ನು ಪಡೆದರು – ಎಂದು ಶಾಸ್ತ್ರ ಸಾರುತ್ತದೆ. ಕ್ಷಣಿಕ ಭಾವಾವೇಶದಿಂದ ಒಂದು ರೀತಿಯ ಸಮಾಧಿಯಾಗ ಬಹುದು, ಆದರೆ ಒಳಗಡೆ ಧನ ಬೇಕು, ಮಾನ ಬೇಕು – ಇತ್ಯಾದಿ ಆಸೆಗಳ ರಾಶಿ ಕೇದಿಯುತ್ತಿರುತ್ತದೆ. ಅಂತಹ ವ್ಯಕ್ತಿಗಳಲ್ಲಿ ಭಾವ ಸ್ಥಿರವಾಗಿ ಉಳಿಯುವುದಿಲ್ಲ. ಶಂಕರಾಚಾರ್ಯರು ಹೇಳುತ್ತಾರೆ :

> ಆಪಾತವೈರಾಗ್ಯವತೋ ಮುಮುಕ್ಷೂನ್ ಭವಾಬ್ಧಿಪಾರಂ ಪ್ರತಿಯಾತುಮುದ್ಯತಾನ್ ।
> ಆಶಾಗ್ರಾಹೋ ಮಜ್ಜಯತೇಽಂತರಾಲೇ ನಿಗೃಹ್ಯ ಕಂಠೇ ವಿನಿವರ್ತ್ಯ ವೇಗಾತ್ ॥
>
> ವಿವೇಕಚೂಡಾಮಣಿ 79.

ಅಂದರೆ, ನಿಜವಾದ ವೈರಾಗ್ಯವಿಲ್ಲದ ಮುಮುಕ್ಷುವು ಭವಸಾಗರವನ್ನು ದಾಟಲು ಹೋದರೆ ಆಸೆಯೆಂಬ ಮೊಸಳೆಯು ಅವನ ಕುತ್ತಿಗೆಯನ್ನು ಹಿಡಿದು ನೀರಿನ ಒಳಗೆ ವೇಗದಿಂದ ಎಳೆದುಕೊಂಡು ಹೋಗುತ್ತದೆ.

22. ಇದು ನಿಜ. ಎಷ್ಟೋ ಜನರಿಗೆ ಹೀಗಾದುದನ್ನು ನಾವು ನೋಡಿರು ವೆವು. ಶ್ರೀರಾಮಕೃಷ್ಣರು ಕಾಶೀಪುರದಲ್ಲಿ ವಾಸಿಸುತ್ತಿದ್ದಾಗ ಒಮ್ಮೆ ಒಬ್ಬ ವೈಷ್ಣವ ಭಕ್ತನು ಉನ್ಮತ್ತನಾಗಿದ್ದ ಯುವಕನೊಬ್ಬನನ್ನು ಕರೆದುಕೊಂಡು ಬಂದನು ಅವರು ಹಿಂದೆ ಎಂದೂ ಬಂದದ್ದನ್ನು ನಾವು ನೋಡಿರಲಿಲ್ಲ. ಅವರು ಬಂದ ಉದ್ದೇಶ, ಆ ಯುವಕನನ್ನು ಶ್ರೀರಾಮಕೃಷ್ಣರಿಗೆ ತೋರಿಸಿ ಅವನಲ್ಲುಂಟಾದ ವಿಚಿತ್ರ ಆಧ್ಯಾತ್ಮಿಕ ಪರಿವರ್ತನೆಯ ಬಗ್ಗೆ ಅವರ ಅಭಿಪ್ರಾಯವನ್ನು ತಿಳಿಯುವುದಾಗಿತ್ತು. ಯುವಕನ ಎದೆ ಮತ್ತು ಮುಖ ಕೆಂಪಾಗಿತ್ತು. ದೀನಭಾವದಿಂದ ಎಲ್ಲರ ಪಾದಧೂಳಿ ಯನ್ನು ಸ್ವೀಕರಿಸತೊಡಗಿದ. ಭಗವಂತನ ಹೆಸರನ್ನು ಉಚ್ಚರಿಸುತ್ತ ಗಡ ಗಡ ನಡುಗುತ್ತಿದ್ದ. ರೋಮಾಂಚನವಾಗುತ್ತಿತ್ತು. ಕಣ್ಣುಗಳಿಂದ ಧಾರಾಕಾರವಾಗಿ ನೀರು ಸುರಿಯುತ್ತಿತ್ತು. ಕಣ್ಣುಗಳು ಅತ್ಯಂತ ಕೆಂಪಾಗಿದ್ದವು ಮತ್ತು ಅರ್ಧ ಮುಚ್ಚಿದ್ದವು. ಮೈಬಣ್ಣ ಕಪ್ಪು. ದೇಹ ಸ್ಥೂಲವೂ ಅಲ್ಲ ಕೃಶವೂ ಅಲ್ಲ. ಮುಖಮಂಡಲ ಅವಯವ ಗಳೆಲ್ಲ ಶೋಭಾಯಮಾನವಾಗಿದ್ದವು. ತಲೆಯಲ್ಲಿ ಶಿಖೆಯಿತ್ತು. ಒಂದು ಕೊಳೆಯಾದ ಪಂಚೆಯನ್ನು ಉಟ್ಟಿದ್ದನು. ಉತ್ತರೀಯ ಇರಲಿಲ್ಲವೆಂದೇ ನೆನಪು. ಪಾದರಕ್ಷೆ ಧರಿಸಿರ ಲಿಲ್ಲ. ಶರೀರದ ಬಗ್ಗೆ ತುಂಬ ಉದಾಸೀನನಾಗಿದ್ದ. ಒಂದುದಿನ ಹರಿ ಕೀರ್ತನೆ ಯನ್ನು ಮಾಡುತ್ತಿರುವಾಗ ಈ ರೀತಿಯ ಭಾವೋನ್ಮತ್ತತೆ ಉಂಟಾಯಿತಂತೆ. ಅಂದಿ ನಿಂದ ಅವನು ಊಟ ಮಾಡಲಿಲ್ಲವೆಂದೇ ಹೇಳಬಹುದು, ನಿದ್ರೆಯಂತೂ ಇಲ್ಲವೇ ಇಲ್ಲ, ಭಗವದ್ದರ್ಶನವಾಗಲಿಲ್ಲವಲ್ಲ ಎಂದು ಹಗಲಿರುಳು ಅಳುತ್ತಿದ್ದನು, ಭೂಮಿಯ ಮೇಲೆ ಬಿದ್ದು ಹೊರಳಾಡುತ್ತಿದ್ದನು. ಈ ಸ್ಥಿತಿ ಉಂಟಾಗಿ ಕೆಲವು ದಿನಗಳು ಸಂದಿದ್ದವು.

23. ಆಧ್ಯಾತ್ಮಿಕ ಭಾವಗಳ ಅತಿರೇಕದಿಂದ ದೇಹದಲ್ಲಿ ಅನೇಕ ಬಗೆಯ ವಿಕಾರ

ಗಳು ಉಂಟಾಗುತ್ತವೆ. ಅವನ್ನೆಲ್ಲ ಗುರುತಿಸುವ ಮತ್ತು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಶ್ರೀರಾಮಕೃಷ್ಣರಲ್ಲಿ ಇದ್ದಷ್ಟು ನಮಗೆ ಮತ್ತಾರಲ್ಲೂ ಕಂಡುಬರಲಿಲ್ಲ. ಗುರುಗೀತೆಯಲ್ಲಿ ಶ್ರೀಗುರುವು 'ಭವರೋಗ ವೈದ್ಯ'ನೆಂದು ಕರೆಯಲ್ಪಟ್ಟಿರುವನು. ಇದರ ಹಿಂದಿರುವ ಗೂಢಾರ್ಥವು ಶ್ರೀರಾಮಕೃಷ್ಣರನ್ನು ನೋಡುವುದಕ್ಕೆ ಮುಂಚೆ ನಮಗೆ ಹೊಳೆದಿರಲಿಲ್ಲ. ಶ್ರೀಗುರುವು ನಿಜವಾಗಿಯೂ ಮಾನಸಿಕ ರೋಗದ ವೈದ್ಯ. ಬೇರೆ ಬೇರೆ ಆಧ್ಯಾತ್ಮಿಕ ಭಾವದಿಂದ ಮನಸ್ಸಿನಲ್ಲಿ ಉಂಟಾಗುವ ವಿಕಾರಗಳನ್ನು ನೋಡಿದ ಕೂಡಲೇ ಅವನು ಗುರುತಿಸುತ್ತಾನೆ. ಅವುಗಳ ಬಾಹ್ಯ ಲಕ್ಷಣಗಳಿಂದ ಅವು ಅನುಕೂಲಕರವೆಂದು ಅವನಿಗೆ ಕಂಡುಬಂದರೆ ಅವುಗಳ ಮೂಲಕ ಉನ್ನತ ಆಧ್ಯಾತ್ಮಿಕ ಸ್ತರಕ್ಕೆ ಏರಲು ಸಹಾಯ ಮಾಡುತ್ತಾನೆ. ಅವು ಪ್ರತಿಕೂಲವೆಂದು ಕಂಡು ಬಂದರೆ ಸಾಧಕನಿಗೆ ತೊಂದರೆಯಾಗದ ರೀತಿಯಲ್ಲಿ ಅವುಗಳಿಂದ ಮುಕ್ತವಾಗಲು ಸಹಾಯ ಮಾಡುತ್ತಾನೆ. ಈ ವಿಷಯ ಶ್ರೀರಾಮಕೃಷ್ಣರನ್ನು ನೋಡಿದಮೇಲೆಯೇ ನಮಗೆ ಸ್ಪಷ್ಟವಾಗಿ ಅರ್ಥವಾದದ್ದು. ಸ್ವಾಮಿ ವಿವೇಕಾನಂದರು ಮೊದಲ ಬಾರಿಗೆ ನಿರ್ವಿಕಲ್ಪ ಸಮಾಧಿಯನ್ನು ಪಡೆದಾಗ ಶ್ರೀರಾಮಕೃಷ್ಣರು ಅವರಿಗೆ ಹೇಳಿದ್ದರು : "ನೀನು ಕೆಲವು ದಿನ ಯಾರ ಕೈಯಿಂದಲೂ ಊಟ ಮಾಡಬೇಡ, ನೀನೇ ಅಡಿಗೆ ಮಾಡಿ ಊಟ ಮಾಡು. ಈ ಅವಸ್ಥೆಯಲ್ಲಿ ಹೆಚ್ಚೆಂದರೆ ಸ್ವಂತ ತಾಯಿ ಮಾಡಿದುದನ್ನು ಉಣ್ಣಬಹುದು, ಬೇರೆ ಯಾರು ಮಾಡಿದುದನ್ನು ಉಂಡರೂ ಭಾವ ನಷ್ಟವಾಗುತ್ತದೆ. ಮುಂದೆ ಅದು ಸಹಜ ವಾದ ಮೇಲೆ ಯಾವ ಭಯವೂ ಇಲ್ಲ." ಗೋಪಾಲನ ತಾಯಿಯು ವಾಯು ಪ್ರಕೋಪ ದಿಂದ ನರಳುತ್ತಿರುವಾಗ ಅವರು ಹೇಳಿದರು : "ನಿನ್ನಲ್ಲಿರುವ ವಾಯು ಹರಿಯ ವಾಯು. ಅದು ಹೋದರೆ ನಿನ್ನ ಗತಿಯೇನು ? ಅದು ಇರಲೇಬೇಕು. ಆದರೆ ತುಂಬ ವೇದನೆಯುಂಟಾದಾಗ ಏನಾದರೂ ಸ್ವಲ್ಪ ತಿನ್ನು." ಒಬ್ಬ ಭಕ್ತನು ಬಾಹ್ಯ ಶುಚಿತ್ವಕ್ಕೆ ಅತ್ಯಂತ ಪ್ರಾಧಾನ್ಯ ನೀಡುತ್ತಿದ್ದನು. ಅದೇ ಅಭ್ಯಾಸವಾಗಿ ಮನಸ್ಸು ಅದರಲ್ಲೇ ಆಸಕ್ತವಾಗಿದ್ದುದರಿಂದ ಅವನಿಗೆ ಭಗವಂತನನ್ನು ಚಿಂತಿಸುವುದಕ್ಕೆ ಆಗುತ್ತಿರಲಿಲ್ಲ. ಅವನಿಗೆ ಶ್ರೀರಾಮಕೃಷ್ಣರು ಈ ರೀತಿ ಸಲಹೆಯಿತ್ತರು : "ಜನರು ಎಲ್ಲಿ ಮಲ ಮೂತ್ರ ವಿಸರ್ಜನೆ ಮಾಡುತ್ತಾರೊ ಆ ಜಾಗದ ಮಣ್ಣನ್ನು ಹಣೆಗೆ ಹಚ್ಚಿ ಕೊಂಡು ಭಗವಚ್ಚಿಂತನೆ ಮಾಡು." ಒಬ್ಬನಿಗೆ ಸಂಕೀರ್ತನೆಯ ಸಮಯದಲ್ಲಿ ತೀವ್ರ ಶಾರೀರಿಕ ವಿಕಾರಗಳು ಉಂಟಾಗುತ್ತಿದ್ದುವು. ಅವು ಅವನ ಉನ್ನತಿಗೆ ಪ್ರತಿಕೂಲವೆಂದು ತಿಳಿದು ಅವರು ಅವನನ್ನು ಜರಿದು ಹೇಳಿದರು : "ಮೂರ್ಖ, ನನ್ನ ಮುಂದೆ ನಿನ್ನ ಆಧ್ಯಾತ್ಮಿಕ ಭಾವವನ್ನು ಪ್ರದರ್ಶಿಸಿಕೊಳ್ಳುತ್ತಿದ್ದೀಯ ? ನಿಜವಾದ ಆಧ್ಯಾತ್ಮಿಕ ಭಾವವುಂಟಾದರೆ ಈ ರೀತಿಯ ವಿಕಾರಗಳು ಕಾಣಿಸಿಕೊಳ್ಳುವುವೆ ? ಆಗ ಭಕ್ತನು ಭಾವ ದಲ್ಲಿ ಮುಳುಗಿಹೋಗುತ್ತಾನೆ, ಸ್ಥಿರವಾಗಿರುತ್ತಾನೆ. ಇದೇನಿದು ? ಸ್ಥಿರವಾಗಿರು. ಶಾಂತವಾಗಿರು. (ಬೇರೆಯವರನ್ನು ಉದ್ದೇಶಿಸಿ) ಇವೆಲ್ಲ ಎಂಥ ಭಾವ ಗೊತ್ತೆ ? ಒಂದು ಚಟಾಕು ಹಾಲನ್ನು ತಂದು ಕಡಾಯಿಯಲ್ಲಿ ಹಾಕಿ ಒಲೆಯ ಮೇಲೆ ಕಾಯಿಸಲು

ಇಟ್ಟರೆ ಏನಾಗುತ್ತದೆ ? ದೊಡ್ಡ ಪಾತ್ರೆಯಾದ್ದರಿಂದ ತುಂಬ ಹಾಲಿರುವಂತೆ ಅನಿಸು ತ್ತದೆ ಕೊನೆಗೆ ಕೆಳಗಿಳಿಸಿ ನೋಡಿದರೆ ಸ್ವಲ್ಪವೂ ಇಲ್ಲ. ಇದ್ದ ಸ್ವಲ್ಪ ಹಾಲೂ ಪಾತ್ರೆಗೆ ಅಂಟಿಕೊಂಡಿರುತ್ತದೆ. ಈ ಆಧ್ಯಾತ್ಮಿಕ ಭಾವವೂ ಅಂತಹದೇ.'' ಒಬ್ಬ ವ್ಯಕ್ತಿಯ ಮನೋಭಾವವನ್ನು ಅರಿತು ಅವರು ಹೇಳಿದರು : ''ತಿಳಿಗೇಡಿ, ಊಟ ಮಾಡು, ಬಟ್ಟೆತೊಡು ಎಲ್ಲ ಮಾಡು, ಆದರೆ ಇದೇ ಧರ್ಮಸಾಧನೆಯೆಂದು ತಿಳಿಯ ಬೇಡ.'' ಹೀಗೆ ಅನೇಕ ವ್ಯಕ್ತಿಗಳ ಉದಾಹರಣೆಗಳನ್ನು ನೀಡಬಹುದು.

24. ಆ ಯುವಕನನ್ನು ನೋಡಿದ ಕೂಡಲೇ ಶ್ರೀರಾಮಕೃಷ್ಣರು ಹೇಳಿದರು : ''ಇದು ಮಧುರ ಭಾವದ ಪೂರ್ವಚಿಹ್ನೆ. ಆದರೆ ಈ ಅವಸ್ಥೆ ಅವನಲ್ಲಿ ಉಳಿಯುವು ದಿಲ್ಲ, ಅವನದನ್ನು ಉಳಿಸಿಕೊಳ್ಳಲಾರ. ಅದನ್ನು ಉಳಿಸಿಕೊಳ್ಳುವುದು ತುಂಬ ಕಷ್ಟ. ಸ್ತ್ರೀಯನ್ನು ಮುಟ್ಟಿದ ಕೂಡಲೇ ಈ ಭಾವ ಹೊರಟುಹೋಗುತ್ತದೆ, ಉಳಿಯುವುದೇ ಇಲ್ಲ.'' ಏನೇ ಆಗಲಿ, ಯುವಕನಿಗೆ ತಲೆ ಕೆಟ್ಟಿಲ್ಲವೆಂಬುದು ಖಚಿತವಾಗಿ ಬಂದ ಭಕ್ತರು ಹಿಂತಿರುಗಿ ಹೊರಟುಹೋದರು. ಶ್ರೀರಾಮಕೃಷ್ಣರು ನುಡಿದಂತೆಯೇ ಆಯಿತು. ಸ್ವಲ್ಪ ಕಾಲದ ನಂತರ ಸುದ್ದಿ ಬಂತು ಆ ಯುವಕನು ಅವನತಿ ಹೊಂದಿದ ನೆಂದು. ಅದೃಷ್ಟವಶಾತ್ ಅವನು ಸಂಕೀರ್ತನೆಯ ಪ್ರಭಾವದಿಂದ ಉನ್ನತ ಭಾವಾವಸ್ಥೆ ಯನ್ನು ಏರಿದ್ದನು. ಆದರೆ ಕೊನೆಗೆ ಅವನು ಅಷ್ಟೆ ಕೆಳಮಟ್ಟಕ್ಕಿಳಿದನು. ಇದೇ ಕಾರಣಕ್ಕಾಗಿಯೇ ಸ್ವಾಮಿ ವಿವೇಕಾನಂದರು, ಜ್ಞಾನಮಿಶ್ರ ಭಕ್ತಿಯನ್ನು ಅಭ್ಯಸಿಸ ಬೇಕೆಂದು ಹೇಳುತ್ತಿದ್ದರು.

25. ಮಥುರನು ಶ್ರೀರಾಮಕೃಷ್ಣರ ಮುಂದೆ ಏನನ್ನೂ ಬಚ್ಚಿಡುತ್ತಿರಲಿಲ್ಲ. ಹಾಗೆಯೇ ಶ್ರೀರಾಮಕೃಷ್ಣರು ಕೂಡ. ಭಾವಸಮಾಧಿಯ ಸಮಯದಲ್ಲಿ ಬಿಟ್ಟರೆ ಬೇರೆ ಎಲ್ಲ ಸಮಯದಲ್ಲಿಯೂ ತಾಯಿಯ ಮುಂದೆ ಬಾಲಕನಂತೆ, ಸ್ನೇಹಿತನ ಮುಂದೆ ಸ್ನೇಹಿತನಂತೆ, ಎಲ್ಲವನ್ನೂ ಮನಬಿಚ್ಚಿ ಹೇಳಿಬಿಡುತ್ತಿದ್ದರು, ಎಲ್ಲ ವಿಷಯದ ಬಗ್ಗೆಯೂ ಅವನನ್ನು ವಿಚಾರಿಸುತ್ತಿದ್ದರು, ಅವನ ಅಭಿಪ್ರಾಯವನ್ನು ಆದರದಿಂದ ಸ್ವೀಕರಿಸುತ್ತಿದ್ದರು ಮತ್ತು ಅವನ ಪ್ರೀತಿಯಲ್ಲಿ ಭರವಸೆಯನ್ನು ಇಟ್ಟು ಕೊಂಡಿದ್ದರು, ಪರಾವಿದ್ಯೆಯ ಸರ್ವೋಚ್ಚ ಸ್ಥಿತಿಯನ್ನುಮುಟ್ಟಿದವರು ಉನ್ಮತ್ತ ರಂತೆ, ಪಿಶಾಚಿಗಳಂತೆ ಅಥವಾ ಬಾಲಕರಂತೆ ವರ್ತಿಸುತ್ತಾರೆಂದು ಶಾಸ್ತ್ರ ಹೇಳುತ್ತದೆ. ಇಷ್ಟೇ ಇಲ್ಲ, ಅವರು ಅಪಾರ ರಾಜ ವೈಭವವನ್ನು ಅನುಭವಿಸುತ್ತಿರಬಹುದು, ಅಥವಾ ಕೌಪೀನವನ್ನು ಧರಿಸಿ ಭಿಕ್ಷೆ ಬೇಡಿ ಉಣ್ಣುತ್ತಿರಬಹುದು–ಸಾಧಾರಣ ಜನರು ಯಾವು ದನ್ನು ಪರಮ ಸುಖ ಅಥವಾ ಪರಮ ದುಃಖ ಎಂದು ಪರಿಗಣಿಸುತ್ತಾರೊ ಇಂತಹ ಯಾವುದೇ ಸ್ಥಿತಿಯಲ್ಲಿ ಅವರು ಇದ್ದರೂ ಅದಾವುದರಿಂದಲೂ ಅವರು ಸ್ವಲ್ಪವೂ ವಿಚಲಿತರಾಗುವುದಿಲ್ಲ, ಯಾವಾಗಲೂ ಆತ್ಮಾನಂದದಲ್ಲಿಯೇ ಮಗ್ನರಾಗಿರುತ್ತಾರೆ. ಈ ವಿಷಯವನ್ನು ಶಂಕರಾಚಾರ್ಯರು ತಮ್ಮ 'ವಿವೇಕಚೂಡಾಮಣಿ'ಯಲ್ಲಿ ಸ್ಪಷ್ಟಪಡಿಸಿರುವರು :

ಕ್ವಚಿನ್ಮೂಢೋ ವಿದ್ವಾನ್ ಕ್ವಚಿದಪಿ ಮಹಾರಾಜವಿಭವಃ
ಕ್ವಚಿದ್ಭ್ರಾಂತಃ ಸೌಮ್ಯಃ ಕ್ವಚಿದಜಗರಾಚಾರಕಲಿತಃ ।
ಕ್ವಚಿತ್ ಪಾತ್ರೀಭೂತಃ ಕ್ವಚಿದವಮತಃ ಕ್ವಾಪ್ಯವಿದಿತ –
ಶ್ಚರತ್ಯೇವಂ ಪ್ರಾಜ್ಞಃ ಸತತಪರಮಾನಂದ ಸುಖಿತಃ ॥

– ವಿವೇಕಚೂಡಾಮಣಿ, 542

ಅಂದರೆ ; ಮುಕ್ತಪುರುಷನು ಕೆಲವೊಮ್ಮೆ ಮೂಢನಂತೆಯೂ, ಕೆಲವೊಮ್ಮೆ ಪಂಡಿತನಂತೆಯೂ, ಕೆಲವೊಮ್ಮೆ ರಾಜವೈಭವದಿಂದ ಕೂಡಿದವನಾಗಿಯೂ, ಕೆಲವೊಮ್ಮೆ ಹುಚ್ಚನಂತೆಯೂ, ಕೆಲವೊಮ್ಮೆ ಸೌಮ್ಯಮೂರ್ತಿಯಾಗಿಯೂ ಇರುತ್ತಾನೆ. ಕೆಲವೊಮ್ಮೆ ತನಗೆ ಅವಶ್ಯಕವಾದ ಆಹಾರಾದಿ ವಸ್ತುಗಳನ್ನು ಸಂಗ್ರಹಿಸುವ ಗೋಜಿಗೆ ಹೋಗದೆ ಅಜಗರನಂತೆ ಬಿದ್ದಿರುತ್ತಾನೆ. ಕೆಲವೊಮ್ಮೆ ಬಹಳ ಸತ್ಕಾರಕ್ಕೆ ಪಾತ್ರನಾಗಿರುತ್ತಾನೆ; ಮತ್ತೆ ಕೆಲವೊಮ್ಮೆ ಅಪಮಾನಕ್ಕೆ ಒಳಗಾಗುತ್ತಾನೆ. ಇನ್ನು ಕೆಲವೊಮ್ಮೆ ತೀರ ಅಪರಿಚಿತನಂತೆ ಇರುತ್ತಾನೆ. ಹೀಗೆ ಅವನು ಎಲ್ಲ ಅವಸ್ಥೆಗಳಲ್ಲಿಯೂ ಪರಮಾನಂದದಿಂದ ಕೂಡಿರುತ್ತಾನೆ, ಯಾವುದರಿಂದಲೂ ವಿಚಲಿತನಾಗುವುದಿಲ್ಲ. ಜೀವನ್ಮುಕ್ತ ಪುರುಷರ ವಿಚಾರವೇ ಹೀಗಾದರೆ ಅವತಾರಪುರುಷರು ಎಲ್ಲ ಅವಸ್ಥೆಗಳಲ್ಲಿ ಅವಿಚಲಿತರಾಗಿ ಬಾಲಕರಂತೆ ವ್ಯವಹರಿಸುವುದರಲ್ಲಿ ಆಶ್ಚರ್ಯವೇನಿದೆ ? ಆದ್ದರಿಂದ ಶ್ರೀರಾಮಕೃಷ್ಣರು ಮಥುರನೊಡನೆ ಆ ರೀತಿ ವರ್ತಿಸುತ್ತಿದ್ದುದು ವಿಚಿತ್ರವೇನಲ್ಲ. ಆದರೆ ಅವರೊಡನೆ ಅಷ್ಟೊಂದು ಕಾಲ ಗಾಢ ಸಂಬಂಧವನ್ನು ಇಟ್ಟುಕೊಂಡಿದ್ದುದು ಮಥುರನ ಪಾಲಿಗೆ ಮಹಾಭಾಗ್ಯ !

26. ಶ್ರೀರಾಮಕೃಷ್ಣರು ಮತ್ತು ಮಥುರನ ನಡುವೆ ಎಂಥ ಒಂದು ಮಧುರ ಸಂಬಂಧವಿತ್ತು ! ಸಾಧನೆಯ ಸಮಯದಲ್ಲಿ ಮತ್ತೆ ಅನಂತರವೂ ತಮಗೆ ಏನು ಬೇಕಾದರೂ ಮಥುರನಿಗೆ ಹೇಳಿಬಿಡುತ್ತಿದ್ದರು. ಸಮಾಧಿಯಲ್ಲಿ ಅಥವಾ ಬೇರೆ ಸಂದರ್ಭದಲ್ಲಿ ತಮಗೆ ಏನಾದರೂ ದಿವ್ಯದರ್ಶನಗಳಾದರೆ ಅದನ್ನು ಮಥುರನಿಗೆ ಹೇಳಿ, "ಹೀಗೇಕಾಯಿತು ಹೇಳು ನೋಡೋಣ ?", "ನಿನಗೆ ಹೇಗೆ ಅನಿಸುತ್ತೆ ಹೇಳು ನೋಡೋಣ ?" ಎಂದು ವಿಚಾರಿಸುತ್ತಿದ್ದರು. ಶ್ರೀರಾಮಕೃಷ್ಣರು ಮಥುರನ ಹಿತದ ಕಡೆಗೆ ಯಾವಾಗಲೂ ಗಮನ ಇಟ್ಟಿದ್ದರು. ಅವನು ಹಣವನ್ನು ಸರಿಯಾದ ರೀತಿಯಲ್ಲಿ ವಿನಿಯೋಗಿಸಬೇಕು, ದೇವಕಾರ್ಯಕ್ಕಾಗಿ ಮೀಸಲಿಟ್ಟ ಹಣ ಅದಕ್ಕಾಗಿಯೇ ಖರ್ಚಾಗಬೇಕು ; ಅತಿಥಿಗಳು, ಬಡವರು, ಸಾಧುಗಳು ಇವರುಗಳ ಸೇವೆಗೆ ಅದು ವಿನಿಯೋಗವಾಗಿ ಅದರಿಂದ ಅವನು ಪುಣ್ಯಸಂಪಾದನೆ ಮಾಡಬೇಕು—ಇದರ ಕಡೆಗೆ ಯಾವಾಗಲೂ ಅವರ ತೀಕ್ಷ್ಣ ದೃಷ್ಟಿ ಇತ್ತು. ಇದರ ವಿಷಯವಾಗಿ ನಾವು ಬಹಳಷ್ಟು ಕೇಳಿರುವೆವು. ಪುಣ್ಯವತಿ ರಾಸಮಣಿ ಮತ್ತು ಮಥುರ ಇವರ ದೇಹತ್ಯಾಗವಾಗಿ ಬಹಳಕಾಲದ ನಂತರ ನಾವು ಶ್ರೀರಾಮಕೃಷ್ಣರೆಡೆಗೆ ಹೋಗತೊಡಗಿದೆವು. ಆಗಲೂ ಕೂಡ ಶ್ರೀರಾಮಕೃಷ್ಣರು ಈ ವಿಷಯದಲ್ಲಿ ತುಂಬ ಆಸಕ್ತಿ ತೋರಿಸುತ್ತಿದ್ದುದನ್ನು ನಾವು ನೋಡಿರುವೆವು; ಇದಕ್ಕೆ ಇಲ್ಲಿ ಒಂದು ಉದಾಹರಣೆಯನ್ನು ನೀಡಬಹುದು.

27. ಮಥುರನ ಜೀವಿತಕಾಲದಿಂದಲೂ ಒಂದು ವ್ಯವಸ್ಥೆಯಿತ್ತು : ದೇವಿಕಾಳಿ ಮತ್ತು ರಾಧಾಗೋವಿಂದಜೀ ಮಂದಿರದಲ್ಲಿ ನೈವೇದ್ಯವಾದನಂತರ ಒಂದು ದೊಡ್ಡ ತಟ್ಟೆ ಅನ್ನ ಮತ್ತು ಇನ್ನೊಂದು ತಟ್ಟೆ ಹಣ್ಣು ಸಿಹಿತಿಂಡಿ ಇತ್ಯಾದಿಗಳು ಶ್ರೀರಾಮ ಕೃಷ್ಣರ ಕೊಠಡಿಗೆ ಹೋಗಬೇಕು. ಅವರು ಈ ಪ್ರಸಾದದಲ್ಲಿ ತಾವು ಸ್ವಲ್ಪ ತೆಗೆದು ಕೊಂಡು ತಮ್ಮೆಡೆಗೆ ಬರುತ್ತಿದ್ದ ಭಕ್ತಾದಿಗಳಿಗೆ ಅದನ್ನು ಹಂಚುತ್ತಿದ್ದರು. ಇದಲ್ಲದೆ ವಿಶೇಷ ದಿನಗಳಲ್ಲಿ ವಿಶೇಷ ನೈವೇದ್ಯಗಳಿದ್ದರೆ ಅದರ ಭಾಗವೂ ಶ್ರೀರಾಮಕೃಷ್ಣರ ಕೊಠಡಿಗೆ ಹೋಗಬೇಕಿತ್ತು.

ಆಗ ಮಳೆಗಾಲ. ಅಂದು ಫಲಹಾರಿಣೀ ಕಾಳಿಪೂಜೆ. ದೇವಸ್ಥಾನದಲ್ಲಿ ದೊಡ್ಡ ಆನಂದೋತ್ಸವ. ಕಾಳಿದೇವಿಗೆ ವಿಶೇಷ ಪೂಜೆ ಮಾಡಿ ಅನೇಕ ಬಗೆಯ ಹಣ್ಣುಹಂಪಲು ಸಿಹಿತಿಂಡಿಗಳನ್ನು ಅರ್ಪಿಸುತ್ತಿದ್ದರು. ಅಂದೂ ಅದೇ ರೀತಿ ನಡೆಯಿತು. ನಹಬತ್‌ನಲ್ಲಿ ವಾದ್ಯ ಮೊಳಗುತ್ತಿದೆ. ಶ್ರೀರಾಮಕೃಷ್ಣರ ಕೊಠಡಿಯಲ್ಲಿ ಸ್ವಾಮಿ ಯೋಗಾನಂದ ಮತ್ತಿತರರು ಇದ್ದಾರೆ.

28. ವಿಶೇಷಹಬ್ಬದ ದಿನಗಳಲ್ಲಿ ಶ್ರೀರಾಮಕೃಷ್ಣರಿಗೆ ವಿಶೇಷ ದೇವಭಾವಗಳು ಉಂಟಾಗುತ್ತಿದ್ದುವು. ವೈಷ್ಣವ ಉತ್ಸವಗಳಲ್ಲಿ ಅವರಿಗೆ ವಿಷ್ಣುಭಾವ ಉಂಟಾಗುತ್ತಿತ್ತು. ಹಾಗೆಯೇ ಶಾಕ್ತ ಉತ್ಸವಗಳಲ್ಲಿ ಶಕ್ತಿಸಂಬಂಧವಾದ ಭಾವಗಳು ಉಂಟಾಗುತ್ತಿದ್ದುವು. ಉದಾಹರಣೆಗೆ ದುರ್ಗಾಪೂಜೆಯ ಸಮಯದಲ್ಲಿ ಶ್ರೀರಾಮಕೃಷ್ಣರಿಗೆ ಜಗನ್ಮಾತೆಯ ಭಾವ ಉಂಟಾಗುತ್ತಿತ್ತು, ಕೆಲವೊಮ್ಮೆ ವರಾಭಯುಂಕರವಾಗಿ ಇರುತ್ತಿದ್ದರು. ಶ್ರೀಕೃಷ್ಣ ಜನ್ಮಾಷ್ಟಮಿಯ ದಿನ ಶ್ರೀಕೃಷ್ಣ ಅಥವಾ ಶ್ರೀರಾಧೆಯ ಭಾವ ಉಂಟಾಗುತ್ತಿತ್ತು. ಕಂಪನ, ಪುಲಕ ಮುಂತಾದ ಎಂಟು ಸಾತ್ತ್ವಿಕ ಲಕ್ಷಣಗಳು ಕಾಣಿಸಿಕೊಳ್ಳುತ್ತಿದ್ದವು. ಮತ್ತೆ ಈ ಭಾವಾವಸ್ಥೆಗಳು ತುಂಬ ಸಹಜವಾಗಿ ಉಂಟಾಗುತ್ತಿದ್ದವು—ಅವರ ಪ್ರಯತ್ನಪೂರ್ವಕ ವಾಗಿ ಆ ಭಾವವನ್ನು ಪಡೆಯುತ್ತಿದ್ದರೆಂದು ಸ್ವಲ್ಪವೂ ಮನಸ್ಸಿಗೆ ಅನಿಸುತ್ತಿರಲಿಲ್ಲ. ಕೆಲವೊಮ್ಮೆ ವಿಶೇಷ ದಿನಗಳಲ್ಲಿ ಅವರು ಬೇರೆ ಯಾವುದೊ ವಿಚಾರವಾಗಿ ಮಾತನಾಡು ತ್ತಿರುತ್ತಾರೆ. ಆ ದಿವಸ ಭಗವದ್ವಿಚಾರವನ್ನು ಮರತೆ ಬಿಟ್ಟಿರುತ್ತಾರೆ. ಆಗ ಹಠಾತ್ತನೆ ಅವರ ಎಲ್ಲ ಬಾಹ್ಯ ಕ್ರಿಯೆಗಳೂ ನಿಂತುಹೋಗಿ ಅಂದಿಗೆ ಸಂಬಂಧಿಸಿದ ಭಗವದ್ ಭಾವದಲ್ಲಿ ತಲ್ಲೀನರಾಗಿಬಿಡುತ್ತಿದ್ದರು—ಯಾರೊ ಅವರನ್ನು ಒತ್ತಾಯಪೂರ್ವಕವಾಗಿ ಆ ಸ್ಥಿತಿಗೆ ಒಯ್ದಂತೆ ! ಕಲಕತ್ತೆಯ ಶ್ಯಾಮಪುಕುರದಲ್ಲಿ ಅವರಿರುವಾಗ ಈ ರೀತಿ ಅನೇಕ ಬಾರಿ ಆಗಿರುದನ್ನು ನಾವು ನೋಡಿರುವೆವು. ಡಾ. ಮಹೇಂದ್ರಲಾಲ ಸರ್ಕಾರ್ ಮುಂತಾದ ಅನೇಕ ಭಕ್ತರು ಕೊಠಡಿಯಲ್ಲಿ ನೆರೆದಿದ್ದಾರೆ. ಅವರೊಡನೆ ಮಾತನಾಡುತ್ತಿರು ವಾಗ ದುರ್ಗಾಪೂಜೆಯ ಸಂಧಿಕ್ಷಣದಲ್ಲಿ ಶ್ರೀರಾಮಕೃಷ್ಣರಿಗೆ ಇದ್ದಕ್ಕಿದ್ದಂತೆಯೇ ಆ ರೀತಿಯ ಭಾವಾವೇಶ ಉಂಟಾಯಿತು. ಆಗಿನ ಮಂದಹಾಸದಿಂದ ಬೆಳಗುತ್ತಿದ್ದ ಜ್ಯೋತಿ ರ್ಮಯ ಮುಖಮಂಡಲವನ್ನು ಮತ್ತು ಸ್ವಲ್ಪ ಮುಂಚೆ ಅವರ ಕಾಯಿಲೆಯಿಂದ ಕುಂದಿದ ಮುಖವನ್ನು ನೋಡಿ ಅವರೇ ಇವರೆಂದು ಯಾರಿಗೆ ಹೇಳಲು ಸಾಧ್ಯ—ಇವರಿಗೆ ಏನಾದರೂ ಕಾಯಿಲೆ ಇದೆಯೆಂದು ಯಾರಿಗೆ ಹೇಳಲು ಸಾಧ್ಯ ?

ಅಂದಿನ ಫಲಹಾರಿಣಿ ಕಾಳಿಪೂಜೆಯ ದಿನವೂ ಮಧ್ಯೆ ಮಧ್ಯೆ ಅವರಿಗೆ ಭಾವಾವೇಶ ಉಂಟಾಗುತ್ತಿತ್ತು. ಕೆಲವೊಮ್ಮೆ ಆನಂದಭರಿತರಾಗಿ ಐದು ವರ್ಷದ ಬಾಲಕರಂತೆ ತಾಯಿಯ ಹಾಡನ್ನು ಹಾಡುತ್ತ ನರ್ತಿಸುತ್ತಿದ್ದರು. ಎಲ್ಲರೂ ಮುಗ್ಧರಾಗಿ ಅವರ ಮುಖದ ಅಪೂರ್ವ ಶೋಭೆಯನ್ನು ನೋಡುತ್ತಿದ್ದರು. ಈ ದೇವಮಾನವನ ಸಂಗ ಲಾಭದಿಂದ ಇತರರೂ ವಿವಿಧ ಬಗೆಯ ದಿವ್ಯಭಾವವನ್ನು ಅನುಭವಿಸುತ್ತಿದ್ದರು. ದೇವಿಯ ಪೂಜೆ ಮುಗಿಯುವ ಹೊತ್ತಿಗೆ ರಾತ್ರಿಯೂ ಮುಗಿಯುವ ವೇಳೆ ಆಗಿತ್ತು. ಸ್ವಲ್ಪ ವಿಶ್ರಾಂತಿ ಪಡೆಯುವಷ್ಟರಲ್ಲಿಯೇ ಬೆಳಗಾಯಿತು.

29. ಬೆಳಿಗ್ಗೆ ಎಂಟು ಅಥವಾ ಒಂಭತ್ತು ಗಂಟೆಯ ಸಮಯ. ಇನ್ನೂ ಪ್ರಸಾದದ ಹಣ್ಣು ತಿಂಡಿ ಮುಂತಾದವುಗಳು ಶ್ರೀರಾಮಕೃಷ್ಣರ ಕೊಠಡಿಗೆ ಬಂದಿರಲಿಲ್ಲ. ಅವರು ರಾಮಲಾಲನನ್ನು ಕರೆದು ವಿಚಾರಿಸಿದರು. ಅವನಿಗೆ ಏನೂ ತಿಳಿಯದು. ಅವನು ಹೇಳಿದ : "ಎಲ್ಲ ಪ್ರಸಾದದ ವಸ್ತುಗಳನ್ನು ಯಾವಾಗಲಿನಂತೆ ಖಜಾಂಚಿಯ ಹತ್ತಿರ ಕಳಿಸಲಾಗಿದೆ. ಅಲ್ಲಿಂದ ಯಾರು ಯಾರಿಗೆ ಹೋಗಬೇಕೊ ಅವರಿಗೆಲ್ಲ ಕಳಿಸಿಯಾಗಿದೆ. ಇಲ್ಲಿಗೆ ಬರಬೇಕಾದ್ದು ಏನಾಯಿತೊ ತಿಳಿಯದು." ಅವನ ಮಾತನ್ನು ಕೇಳಿ ಶ್ರೀರಾಮ ಕೃಷ್ಣರು ಚಿಂತಿತರಾದರು. "ಇನ್ನೂ ಏಕೆ ಪ್ರಸಾದ ಬರಲಿಲ್ಲ ?" ಎಂದು ಸಿಕ್ಕಿದವ ರನ್ನೆಲ್ಲ ಕೇಳತೊಡಗಿದರು. ಅವರ ಮನಸ್ಸಿನಲ್ಲಿ ಅದೇ ವಿಚಾರ ! ಹೀಗೆ ಸ್ವಲ್ಪ ಹೊತ್ತು ನಿರೀಕ್ಷಿಸಿ ಇನ್ನೂ ಪ್ರಸಾದ ಬರದಿರಲು ತಾವೇ ಚಪ್ಪಲಿ ಹಾಕಿಕೊಂಡು ಖಜಾಂಚಿಯ ಹತ್ತಿರ ಹೋಗಿ ವಿಚಾರಿಸಿದರು : "ನೋಡು, ಇದುವರೆಗೂ ಅಲ್ಲಿಗೆ ಬರ ಬೇಕಾದ ಪ್ರಸಾದ ಬರಲಿಲ್ಲವಲ್ಲ ಏಕೆ ? ಮರೆತು ಹೋಯಿತೆ ? ಬಹಳ ಕಾಲದಿಂದ ಈ ವ್ಯವಸ್ಥೆ ನಡೆದು ಬಂದಿದೆ. ಈಗ ಮರೆತುಬಿಡುವುದು ಬಹಳ ಅನ್ಯಾಯ." ಖಜಾಂಚಿಯು ಸ್ವಲ್ಪ ವಿಚಲಿತನಾಗಿ ಹೇಳಿದನು : "ಇನ್ನೂ ನಿಮಗೆ ಕಳಿಸಬೇಕಾದು ದನ್ನು ಕಳಿಸಿಲ್ಲವೇನು ? ದೊಡ್ಡ ಮೋಸವಾಯಿತು. ಈಗಲೇ ಕಳಿಸಿಕೊಡುತ್ತೇನೆ."

ಸ್ವಾಮಿ ಯೋಗಾನಂದರು ಆಗ ಇನ್ನೂ ಬಾಲಕ. ಅವರು ಉತ್ತಮ ಕುಲದಲ್ಲಿ ಜನಿಸಿದವರು, ಪ್ರಸಿದ್ಧ ಸಾವರ್ಣ ಚೌಧುರಿಗಳ ವಂಶಸ್ಥರು. ಆದರಿಂದಾಗಿ ಅವರಿಗೆ ಸ್ವಲ್ಪ ಹೆಮ್ಮೆ ಇತ್ತು. ದೇವಸ್ಥಾನದ ಅರ್ಚಕರು, ಅಧಿಕಾರಿಗಳು ಮತ್ತು ಖಜಾಂಚಿ ಇವರೆಲ್ಲ ಮನುಷ್ಯರೆಂದೇ ಅವರಿಗೆ ಅನಿಸುತ್ತಿರಲಿಲ್ಲ. ಆದರೆ ಶ್ರೀರಾಮಕೃಷ್ಣರ ಪ್ರೀತಿಗೆ ಮತ್ತು ಅವರ ಅಹೇತುಕ ಕೃಪೆಗೆ ಮಾರುಹೋಗಿ ಅವರ ಪಾದತಲದಲ್ಲಿ ತಮ್ಮನ್ನು ಅರ್ಪಿಸಿಕೊಂಡಿದ್ದರು. ಅವರ ಮನೆ ದಕ್ಷಿಣೇಶ್ವರದ ಹತ್ತಿರವೇ ಇತ್ತು. ಪ್ರತಿನಿತ್ಯ ಶ್ರೀರಾಮಕೃಷ್ಣರೆಡೆಗೆ ಬಂದು ಹೋಗುವುದು ಸುಲಭವಾಗಿತ್ತು. ಅವರೆಡೆಗೆ ಬಂದು ಹೋಗದಿರುವುದಾದರೂ ಹೇಗೆ ಸಾಧ್ಯ ? ಅವರ ಆಕರ್ಷಣೆ ಯೋಗಾನಂದರನ್ನು ನಿರ್ದಿಷ್ಟ ವೇಳೆಯಲ್ಲಿ ಎಳೆದು ತರುತ್ತಿತ್ತು. ಆದರೆ ಶ್ರೀರಾಮಕೃಷ್ಣರನ್ನು ಒಪ್ಪಿಕೊಂಡ ಮಾತ್ರಕ್ಕೆ ದೇವಸ್ಥಾನದವರನ್ನೆಲ್ಲ ಗೌರವಿಸಬೇಕೇನು ? ಪ್ರಸಾದ ಇನ್ನೂ ಬಂದಿಲ್ಲ

ವೆಂದು ಶ್ರೀರಾಮಕೃಷ್ಣರು ಚಡಪಡಿಸುತ್ತಿರುವುದನ್ನು ನೋಡಿ ಅವರೆಂದರು : "ಅದು ಬರದಿದ್ದರೆ ಏನಂತೆ ? ಅದೇನು ದೊಡ್ಡ ವಿಷಯವೇ ? ನಮಗೆ ಅದನ್ನೆಲ್ಲ ತಿಂದರೆ ಆಗುವುದಿಲ್ಲ, ನೀವು ತಿನ್ನುವುದೂ ಇಲ್ಲ. ಅವರು ಕೊಡದಿದ್ದರೆ ಏನಂತೆ ?" ಶ್ರೀರಾಮ ಕೃಷ್ಣರು ಅವರ ಮಾತನ್ನು ಗಮನಿಸದೆ ತಾವೇ ಖಜಾಂಚಿಯ ಹತ್ತಿರ ಹೊರಟಾಗ ಯೋಗಾನಂದರು ಭಾವಿಸತೊಡಗಿದರು ; "ಏನು ಆಶ್ಚರ್ಯ, ಈ ಸಾಮಾನ್ಯ ಹಣ್ಣು ಹಂಪಲುಗಳಿಗಾಗಿ ಇವರು ಇಷ್ಟೊಂದು ಕಾತರರಾಗಿದ್ದಾರಲ್ಲ ! ಇವರು ವಿಚಲಿತರಾಗಿ ದ್ದುದನ್ನು ನಾನು ನೋಡಿರಲಿಲ್ಲ. ಇಂದು ಏಕೆ ಹೀಗೆ ?" ಬಹಳ ಹೊತ್ತು ಯೋಚಿಸಿ ಅವರು ಒಂದು ತೀರ್ಮಾನಕ್ಕೆ ಬಂದರು : "ಈಗ ತಿಳಿಯಿತು. ದಿವ್ಯಪುರುಷನಾಗಲಿ, ದೊಡ್ಡ ಸಂತನಾಗಲಿ–ಸಹಜ ಗುಣಬಿಡಬೇಕಲ್ಲ ! ಇವರು ಅಕ್ಕಿ ಬೇಳೆ ತೆಗೆದುಕೊಂಡು ಹೋಗುವ ಪೂಜಾರಿ ಬ್ರಾಹ್ಮಣ ವಂಶದಲ್ಲಿ ಜನಿಸಿದವರು. ಆ ವಂಶದ ಗುಣ ಸ್ವಲ್ಪ ವಾದರೂ ಇರಲೇಬೇಕು, ಮತ್ತಿನ್ನೇನು ? ದೊಡ್ಡ ದೊಡ್ಡ ವಿಷಯದ ಕಡೆ ಗಮನ ವಿಲ್ಲ, ಆದರೆ ಸಾಮಾನ್ಯ ವಿಷಯದ ಬಗ್ಗೆ ಅಷ್ಟೊಂದು ಚಡಪಡಿಸುತ್ತಾರೆ. ಅದಿಲ್ಲ ದಿದ್ದರೆ, ತಾವೇನು ಅದನ್ನು ತಿನ್ನುವುದಿಲ್ಲ, ಅವರಿಗೆ ಅದರ ಅವಶ್ಯಕತೆಯೂ ಇಲ್ಲ, ಅಷ್ಟಾದರೂ ಅದರ ಬಗ್ಗೆ ಅಷ್ಟೊಂದು ಚಿಂತಿಸುವುದೇಕೆ ? ಇದು ವಂಶಾನುಗತ ಅಭ್ಯಾಸ !"

30. ಯೋಗಾನಂದರು ಈ ತೀರ್ಮಾನಕ್ಕೆ ಬಂದು ಕುಳಿತುಕೊಂಡಿದ್ದರು. ಅಷ್ಟರಲ್ಲಿ ಶ್ರೀರಾಮಕೃಷ್ಣರು ಹಿಂದಿರುಗಿದರು. ಯೋಗಾನಂದರನ್ನು ಉದ್ದೇಶಿಸಿ ಹೇಳತೊಡಗಿದರು : "ಏನು ಗೊತ್ತೆ ? ದೇವರಿಗೆ ನೈವೇದ್ಯವಾದಮೇಲೆ ಪ್ರಸಾದವನ್ನು ಸಾಧುಸಂತರಿಗೆ ಭಕ್ತರಿಗೆ ಹಂಚಬೇಕೆಂದು ರಾಸಮಣಿಯು ವ್ಯವಸ್ಥೆ ಮಾಡಿ ಹೋಗಿರು ವಳು. ಇಲ್ಲಿಗೆ ಬರುವ ಪ್ರಸಾದವನ್ನೆಲ್ಲ ಭಕ್ತರೆ ತಿನ್ನುವುದು. ಭಗವಂತನನ್ನು ತಿಳಿಯು ವುದಕ್ಕಾಗಿ ಇಲ್ಲಿಗೆ ಯಾರು ಬರುತ್ತಾರೊ ಅವರೇ ಅದನ್ನು ಸ್ವೀಕರಿಸುತ್ತಾರೆ. ಇದರಿಂದ ರಾಸಮಣಿಯ ಅಭೀಷ್ಟವು ಸಾರ್ಥಕವಾಗುತ್ತದೆ. ಆದರೆ ದೇವಸ್ಥಾನದ ಆ ಬ್ರಾಹ್ಮಣ ರೆಲ್ಲ ತೆಗೆದುಕೊಂಡು ಹೋಗುವ ಪ್ರಸಾದವು ಹೀಗೆಯೇ ವಿನಿಯೋಗವಾಗುತ್ತದೇನು ? ಅವರು ಅನ್ನವನ್ನು ಮಾರಿ ಹಣ ಮಾಡುತ್ತಾರೆ. ಮತ್ತೆ ಕೆಲವರಿಗೆ ವೇಶ್ಯೆಯರಿರುತ್ತಾರೆ, ಇವನ್ನೆಲ್ಲ ತೆಗೆದುಕೊಂಡು ಹೋಗಿ ತಿನ್ನಿಸುತ್ತಾರೆ. ರಾಸಮಣಿಯು ಯಾವ ಉದ್ದೇಶ ದಿಂದ ಈ ದಾನ ಮಾಡಿರುವಳೊ ಅದು ಸ್ವಲ್ಪ ಮಟ್ಟಿಗಾದರೂ ಸಾರ್ಥಕವಾಗಲಿ ಎಂದು ನಾನು ಇಷ್ಟೊಂದು ಜಗಳ ಮಾಡುತ್ತೇನೆ." ಯೋಗಾನಂದರು ಇದನ್ನು ಕೇಳಿ ಅವಾಕ್ಕಾದರು–ಶ್ರೀರಾಮಕೃಷ್ಣರ ಈ ಕಾರ್ಯದ ಹಿಂದೆಯೂ ಇಷ್ಟೊಂದು ಗೂಢಾರ್ಥ ವಿದೆಯಲ್ಲ !

31. ಈ ರೀತಿ ಶ್ರೀರಾಮಕೃಷ್ಣರು ಮಥುರನೊಡನೆ ಒಂದು ಮಧುರ ಸಂಬಂಧವನ್ನು ಇಟ್ಟುಕೊಂಡಿದ್ದರು. ಶ್ರೀರಾಮಕೃಷ್ಣರ ಮೇಲೆ ಮಥುರನ ಪ್ರೀತಿ ಎಷ್ಟೊಂದು ಗಾಢವಾಯಿತೆಂದರೆ ಕೊನೆಗೆ ಅವರೇ ಅವನ ಪ್ರಾಣವಾದರು, ಇದು

ಶ್ರೀರಾಮಕೃಷ್ಣರ ಅಹೇತುಕ ಕೃಪೆಯ ಫಲ ! ಇಷ್ಟೇ ಅಲ್ಲದೆ ಶ್ರೀರಾಮಕೃಷ್ಣರ ಬಾಲಕ ಸ್ವಭಾವವೂ ಮಥುರನನ್ನು ತುಂಬ ಆಕರ್ಷಿಸಿತು. ಯಾವ ಸಾಂಸಾರಿಕ ವಿಷಯವನ್ನೂ ತಿಳಿಯದ ಬಾಲಕನ ಕಡೆ ಯಾವ ಮನಸ್ಸು ತಾನೆ ಆಕರ್ಷಿತವಾಗು ವುದಿಲ್ಲ? ಅವನು ಆಟದಲ್ಲಿ ಮಗ್ನನಾಗಿರುವಾಗ ಬಿದ್ದು ಕೈಕಾಲು ಮುರಿದುಕೊಳ್ಳು ವನೊ ಎಂದು ಹೆದರಿ ಯಾರು ತಾನೆ ಅವನ ರಕ್ಷಣೆಗೆ ಮುಂದೆ ಬರುವುದಿಲ್ಲ? ಮತ್ತೆ ಅವರ ಬಾಲಕ ಸ್ವಭಾವದಲ್ಲಿ ಸ್ವಲ್ಪವೂ ಕೃತ್ರಿಮತೆ, ಸೋಗು ಇರಲಿಲ್ಲ. ಅವರು ಆ ಭಾವದಲ್ಲಿರುವಾಗ ತನ್ನನ್ನು ರಕ್ಷಿಸಿಕೊಳ್ಳಲಾಗದ ಚಿಕ್ಕ ಬಾಲಕನಂತೆಯೇ ಅವರು ಇರುತ್ತಿದ್ದರು. ವೀರ್ಯವಂತನೂ ಬುದ್ಧಿವಂತನೂ ಆದ ಮಥುರನು ಅವರನ್ನು ಎಲ್ಲ ಸಂದರ್ಭದಲ್ಲಿಯೂ ರಕ್ಷಿಸಲು ಮುಂದಾಗುತ್ತಿದ್ದುದರಲ್ಲಿ ಆಶ್ಚರ್ಯವೇನಿದೆ ? ಆದ್ದರಿಂದ ಒಂದುಕಡೆ ಶ್ರೀರಾಮಕೃಷ್ಣರ ದೈವಶಕ್ತಿಯಲ್ಲಿ ಸಂಪೂರ್ಣ ಭರವಸೆ ಇಟ್ಟುಕೊಂಡಿ ದ್ದರೂ ಇನ್ನೊಂದು ಕಡೆಯಿಂದ ಅವರು ಏನೂ ತಿಳಿಯದ ಎಳೆ ಹಸುಳೆಯೋಪಾದಿ ಅವರನ್ನು ರಕ್ಷಿಸುತ್ತಿದ್ದನು. ಸರ್ವಜ್ಞ ಗುರುಭಾವ ಮತ್ತು ಅಲ್ಪಜ್ಞ ಬಾಲಕಭಾವ– ಇವೆರಡೂ ಶ್ರೀರಾಮಕೃಷ್ಣರಲ್ಲಿ ಸಮಾವೇಶಗೊಂಡುದನ್ನು ಮಥುರನು ಕಂಡನು. ಎಲ್ಲ ಸಾಂಸಾರಿಕ ವಿಷಯದಲ್ಲಿಯೂ, ಅವರ ದೇಹರಕ್ಷಣೆಯ ವಿಷಯದಲ್ಲಿಯೂ ತಾನು ಅವರನ್ನು ನೋಡಿಕೊಳ್ಳಬೇಕೆಂದು ಮಥುರನು ನಿರ್ಧಾರಕ್ಕೆ ಬಂದಿದ್ದನು. ಮತ್ತೆ ಪಾರಮಾರ್ಥಿಕ ವಿಷಯದಲ್ಲಿ ಮಾತ್ರ 'ತಂದೆ'ಯೇ ತನ್ನನ್ನು ರಕ್ಷಿಸುತ್ತಾರೆ ಎಂಬ ಭರವಸೆ ಅವನಿಗಿತ್ತು. ಶ್ರೀರಾಮಕೃಷ್ಣರಲ್ಲಿ ಮಾನವತ್ವವೂ ಇತ್ತು, ದೇವತ್ವವೂ ಇತ್ತು; ಅವರು ಸರ್ವಜ್ಞರೂ ಆಗಿದ್ದರು ಅಲ್ಪಜ್ಞರೂ ಆಗಿದ್ದರು. ಅವರು ವಿರುದ್ಧ ಭಾವಗಳ ಸಂಕೀರ್ಣವಾಗಿದ್ದರು. ಇದರಿಂದಾಗಿ ಅವರ ಮೇಲಿನ ಮಥುರನ ಪ್ರೀತಿಯೂ ಸಂಕೀರ್ಣ ರೂಪದ್ದಾಗಿತ್ತು, ಎಂಬುದನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳಬಹುದು. ಭಾವ ಮುಖದಲ್ಲಿದ್ದ, ವರಾಭಯಂಕರರಾದ ಶ್ರೀರಾಮಕೃಷ್ಣರು ಮಥುರನ ಉಪಾಸ್ಯ ವಸ್ತು ವಾಗಿದ್ದರು. ಆದರೂ ಕೂಡ ಬಾಲಕರಂತೆ ಅತ್ಯಂತ ಸರಳರೂ, ನಿರ್ಭರತೆಯ ಘನ ಮೂರ್ತಿಯೂ ಆಗಿದ್ದ ಶ್ರೀರಾಮಕೃಷ್ಣರಿಗೇನೇ ಆಗಾಗ ಮಥುರನು ಅನೇಕ ವಿಷಯ ಗಳಲ್ಲಿ ತಿಳಿಸಿಕೊಡಬೇಕಾಗುತ್ತಿತ್ತು. ಅವರ ಮೇಲಿನ ಪ್ರೀತಿಯ ದೆಸೆಯಿಂದ ಅವರ ಪ್ರಶ್ನೆ ಮತ್ತು ಸಂದೇಹಗಳಿಗೆ ತಕ್ಕ ಪರಿಹಾರವನ್ನು ನೀಡುವ ಸಾಮರ್ಥ್ಯ ಅವನಿ ಗುಂಟಾಗಿತ್ತು.

32. ಒಂದುದಿನ ಶ್ರೀರಾಮಕೃಷ್ಣರು ಮಥುರನಾಥನೊಡನೆ ಮಾತನಾಡುತ್ತಿ ರುವಾಗ ಇದ್ದಕ್ಕಿದ್ದಂತೆ ಹೊರಗಡೆ ಹೊರಟುಹೋದರು. ತುಂಬ ಖಿನ್ನ ಮನಸ್ಕರಾಗಿ ಬಂದು ಮಥುರನಿಗೆ ಹಿಂತಿರುಗಿ ಹೇಳಿದರು : "ಇದೆಂಥ ಕಾಯಿಲೆ ಹೇಳು ? ನಾನು ಮೂತ್ರ ಮಾಡುತ್ತಿರುವಾಗ ಒಂದು ಹುಳ ಹೊರಗೆಬಿತ್ತು ! ಯಾರ ದೇಹದಲ್ಲಿಯೂ ಈ ರೀತಿಯ ಹುಳ ಇರುವುದಿಲ್ಲ. ನನಗೇನಾಗಿದೆ ?" ಇದಕ್ಕೆ ಸ್ವಲ್ಪ ಮುಂಚೆ ಅವರು ಗೂಢ ಆಧ್ಯಾತ್ಮಿಕ ವಿಷಯವನ್ನು ಅತ್ಯಂತ ಸರಳ ರೀತಿಯಲ್ಲಿ ಹೇಳುತ್ತ ತನ್ನನ್ನು

ಮುಗ್ಧಗೊಳಿಸಿದ್ದರು. ಅವರೇ ಈಗ ಬಾಲಕನಂತೆ ಏನೂ ತಿಳಿಯದೆ ಚಂಚಲರಾಗಿದ್ದಾರೆ, ಮಥುರನ ಆಶ್ವಾಸನೆಯನ್ನು ನಿರೀಕ್ಷಿಸುತ್ತಿದ್ದಾರೆ! ಮಥುರನು ಅವರ ಮಾತನ್ನು ಕೇಳಿ ಹೇಳಿದನು: "ಅದು ಒಳ್ಳೆಯದೇ ಆಯಿತು, ತಂದೆ. ಎಲ್ಲರ ದೇಹದಲ್ಲಿಯೂ ಕಾಮ-ಕೀಟವಿರುತ್ತದೆ. ಅದೇ ಮಾನವನ ಮನಸ್ಸಿನಲ್ಲಿ ದುಶ್ಚಿಂತನೆಗಳು ಏಳುವಂತೆ ಮಾಡಿ ಅವನನ್ನು ಕೆಟ್ಟಕಾರ್ಯದಲ್ಲಿ ತೊಡಗಿಸುವುದು, ದೇವಿಯ ಕೃಪೆಯಿಂದ ಆ ಕಾಮ-ಕೀಟವು ನಿಮ್ಮ ದೇಹದಿಂದ ಹೊರಟುಹೋಯಿತು. ಇದಕ್ಕೆ ಇಷ್ಟೊಂದು ಚಿಂತಿಸುವುದೇಕೆ?" ಇದನ್ನು ಕೇಳಿ ಶ್ರೀರಾಮಕೃಷ್ಣರು ಸಮಾಧಾನಗೊಂಡು ಹೇಳಿದರು: "ಸರಿಯಾಗಿ ಹೇಳಿದೆ. ಅದೃಷ್ಟವಶಾತ್ ನಿನ್ನನ್ನು ಕೇಳಿದ್ದು ಒಳ್ಳೆಯದಾಯಿತು." ಹೀಗೆ ಹೇಳಿ ಬಾಲಕನಂತೆ ಆನಂದವನ್ನು ವ್ಯಕ್ತಪಡಿಸಿದರು.

33. ಒಂದುದಿನ ಮಾತಿನ ಸಂದರ್ಭದಲ್ಲಿ ಅವರು ಹೇಳಿದರು: "ನೋಡು, ತಾಯಿ ನನಗೆ ತಿಳಿಸಿಕೊಟ್ಟಿರುವಳು, ಅನೇಕರು ಅಂತರಂಗ ಭಕ್ತರಾಗಿ ಇಲ್ಲಿಗೆ ಬರುವರು ಎಂದು. ಇಲ್ಲಿಂದ (ನನ್ನಿಂದ) ಭಗವದ್ವಿಷಯವನ್ನು ತಿಳಿದು ಭಗವಂತನನ್ನು ಅರಿತು ಪ್ರೇಮಭಕ್ತಿಯನ್ನು ಪಡೆಯುತ್ತಾರೆ, ಎಂದು ತೋರಿಸಿಕೊಟ್ಟಿರುವಳು. ಈ ಶರೀರದ ಮೂಲಕ ತಾಯಿ ಅನೇಕ ಆಟ ಆಡುತ್ತಾಳೆ, ಇದರಿಂದ ಅನೇಕರಿಗೆ ಉಪಕಾರವಾಗುತ್ತದೆ. ಆದ್ದರಿಂದಲೇ ಈ ದೇಹ ಇನ್ನೂ ಉಳಿದುಕೊಂಡಿದೆ. ನಿನಗೇನು ಅನಿಸುತ್ತೆ, ಹೇಳು. ಇದೆಲ್ಲ ನನ್ನ ಭ್ರಮೆಯೇ ಅಥವಾ ನಾನು ನೋಡಿರುವುದೆಲ್ಲ ನಿಜವೆ?"

ಮಥುರನು ಹೇಳಿದನು: "ಇದು ಬುದ್ಧಿಭ್ರಮಣೆ ಹೇಗಾಗುತ್ತದೆ, ತಂದೆ? ತಾಯಿ ಇದುವರೆಗೂ ನಿಮಗೆ ಅಸತ್ಯವಾದುದಾವುದನ್ನೂ ತೋರಿಸಲಿಲ್ಲ. ಹಾಗಿರುವಾಗ ಇದು ಮಾತ್ರ ಅಸತ್ಯವಾಗಲು ಹೇಗೆ ಸಾಧ್ಯ? ಇದೂ ಸತ್ಯವಾಗುತ್ತದೆ. ಆದರೆ ಅವರು ಇನ್ನೂ ಏಕೆ ಬರುತ್ತಿಲ್ಲ? ಅವರು ಬೇಗನೆ ಬರಲಿ, ನಾವು ಅವರೊಡನೆ ಕೂಡಿ ಆನಂದವನ್ನು ಅನುಭವಿಸೋಣ."

ತಾಯಿ ತೋರಿಸಿಕೊಟ್ಟಿರುವುದು ಸರಿ ಎಂದು ಶ್ರೀರಾಮಕೃಷ್ಣರು ಸಮಾಧಾನಗೊಂಡರು. ಅವರೆಂದರು, "ಅವರೆಲ್ಲ ಯಾವಾಗ ಬರುತ್ತಾರೊ ಏನೊ? ತಾಯಿಯೇನೊ ಹಾಗೆ ಹೇಳಿರುವಳು. ತಿಳಿಸಿಕೊಟ್ಟಿರುವಳು, ತಾಯಿಯ ಇಚ್ಛೆಯಂತೆ ಏನಾಗಬೇಕೊ ಹಾಗೆಯೇ ಆಗಲಿ."

34. ರಾಸಮಣಿಗೆ ಗಂಡುಮಕ್ಕಳಿರಲಿಲ್ಲ—ನಾಲ್ಕುಜನ ಹೆಣ್ಣು ಮಕ್ಕಳಿದ್ದರು. ಇವರಲ್ಲಿ ಕಡೆಯ ಇಬ್ಬರನ್ನು ಮಥುರನು ಮದುವೆಯಾಗಿದ್ದನು. ಮೂರನೆಯವಳು ತೀರಿ ಹೋದ ಮೇಲೆ ಕೊನೆಯ ಮಗಳನ್ನು ರಾಸಮಣಿ ಅವನಿಗೆ ಕೊಟ್ಟು ಮದುವೆ ಮಾಡಿಸಿದ್ದಳು. ಅಳಿಯಂದಿರಲ್ಲಿ ಸಂಪತ್ತಿನ ವಿಷಯದಲ್ಲಿ ವಿವಾದ ಉಂಟಾಗಬಹುದೆಂದು ರಾಸಮಣಿಯು ತಾನಿರುವಾಗಲೇ ತನ್ನ ಆಸ್ತಿಯನ್ನು ಎಲ್ಲರಿಗೂ ಪ್ರತ್ಯೇಕವಾಗಿ ವಿಭಾಗಿಸಿದ್ದಳು. ಈ ರೀತಿ ವಿಭಾಗವಾದ ಮೇಲೆ ಒಂದುದಿನ ಮಥುರನ ಪತ್ನಿಯು ಇನ್ನೊಬ್ಬರಿಗೆ ಸೇರಿದ ಭಾಗದಲ್ಲಿದ್ದ ಕೊಳಕ್ಕೆ ಸ್ನಾನಕ್ಕೆ ಹೋಗಿದ್ದಳು, ಅಲ್ಲಿ ಸುತ್ತಿ

ಎಂಬ ಹೆಸರಿನ ಸೊಪ್ಪು ಹುಲುಸಾಗಿ ಬೆಳೆದಿತ್ತು. ಅವಳು ಮನೆಗೆ ಬರುವಾಗ ಸ್ವಲ್ಪ ಆ ಸೊಪ್ಪನ್ನು ಕಿತ್ತುಕೊಂಡುಬಂದಳು. ಶ್ರೀರಾಮಕೃಷ್ಣರು ಮಾತ್ರ ಅದನ್ನು ನೋಡಿದ್ದರು. ಅವಳು ಹಾಗೆ ಮಾಡಿದುದನ್ನು ನೋಡಿ ಶ್ರೀರಾಮಕೃಷ್ಣರ ಮನಸ್ಸು ವಿಚಲಿತವಾಯಿತು. ಅವರಿಗೆ ತಿಳಿಸದೆ ಅವಳು ಅದನ್ನು ಕಿತ್ತುಕೊಂಡುಬಂದಳಲ್ಲ, ಇದು ಸರಿಯಲ್ಲ, ಆ ರೀತಿ ಕೇಳದೆ ತೆಗೆದುಕೊಂಡು ಹೋದರೆ ಕದ್ದಂತಾಗುತ್ತದೆ ಮತ್ತು ಇತರರ ವಸ್ತುವಿಗೆ ಆ ರೀತಿ ಆಸೆಪಡುವುದು ಸರಿಯಲ್ಲ—ಹೀಗೆಲ್ಲ ಅವರು ಯೋಚಿಸತೊಡಗಿದರು. ಅಷ್ಟು ಹೊತ್ತಿನಲ್ಲಿ ಆ ಭಾಗ ಯಾರಿಗೆ ಸೇರಿತ್ತೊ ಆ ಪುತ್ರಿ ಬಂದುಬಿಟ್ಟಳು. ಶ್ರೀರಾಮಕೃಷ್ಣರು ಕೂಡಲೇ ಆದ್ಯಂತವಾಗಿ ವಿಷಯವನ್ನು ಅವಳಿಗೆ ತಿಳಿಸಿಬಿಟ್ಟರು. ಇಷ್ಟು ಸಣ್ಣ ವಿಷಯದ ಬಗ್ಗೆ ಶ್ರೀರಾಮಕೃಷ್ಣರು ಅಷ್ಟು ಗಂಭೀರವಾಗಿ ಚಿಂತಿಸುವುದನ್ನು ನೋಡಿ ಅವಳು ನಗತೊಡಗಿದಳು. ಅವಳು ಹಾಸ್ಯಕ್ಕಾಗಿ ಹೇಳಿದಳು : "ಹೌದು ತಂದೆ ಅವಳು ತುಂಬ ಅನ್ಯಾಯ ಮಾಡಿದಳು." ಅದೇ ಸಮಯಕ್ಕೆ ಮಥುರನ ಪತ್ನಿಯೂ ಅಲ್ಲಿ ಹಾಜರಾದಳು. ಅವಳೂ ಆ ಹಾಸ್ಯದಲ್ಲಿ ಭಾಗವಹಿಸಿ ಶ್ರೀರಾಮಕೃಷ್ಣರನ್ನು ಕುರಿತು ಹೇಳಿದಳು : "ನೀವು ಇದನ್ನು ಅವರಿಗೆ ಹೇಳಿಬಿಡುವುದೇ ? ನಾನು ಯಾರಿಗೂ ಗೊತ್ತಾಗಬಾರದೆಂದು ಕದ್ದು ಸೊಪ್ಪನ್ನು ಕಿತ್ತುಕೊಂಡು ಹೋದೆ, ನೀವು ಅವಳಿಗೆ ಹೇಳಿಬಿಟ್ಟರಲ್ಲ ? ಎಂಥ ಅನ್ಯಾಯ ಮಾಡಿದಿರಿ ?" ಈಗ ಇಬ್ಬರು ಪುತ್ರಿಯರೂ ಜೋರಾಗಿ ನಗತೊಡಗಿದರು. ಆಗ ಶ್ರೀರಾಮಕೃಷ್ಣರು ನುಡಿದರು : "ನನಗೇನು ಗೊತ್ತಪ್ಪ ! ಆಸ್ತಿ ವಿಭಾಗವಾದ ಮೇಲೆ ಈ ರೀತಿ ಹೇಳದೆ ಕೇಳದೆ ಏನಾದರೂ ತೆಗೆದುಕೊಂಡು ಹೋಗುವುದು ಸರಿಯಲ್ಲ ಎಂದು ನಾನು ಎಲ್ಲ ಹೇಳಿಬಿಟ್ಟೆ—ಅವರು ಏನು ಬೇಕೊ ಅದನ್ನು ಮಾಡಲಿ ಎಂದು." ಅವರ ಮಾತನ್ನು ಕೇಳಿ ಆ ಪುತ್ರಿಯರು ಇನ್ನೂ ನಗತೊಡಗಿದರು. 'ತಂದೆ' ಎಂಥ ಸರಳ ಮತ್ತು ಬಿಚ್ಚು ಮನಸ್ಸಿನವರು ಎಂದು ಅವರು ಭಾವಿಸತೊಡಗಿದರು.

35. ಒಂದುಕಡೆ ಶ್ರೀರಾಮಕೃಷ್ಣರದು ಈ ರೀತಿ ಬಾಲಕಭಾವ! ಮಥುರನಿಗೂ ಮತ್ತು ಇನ್ನೊಬ್ಬ ಜಮೀಂದಾರನಿಗೂ ಜಗಳ ಬಡಿದಾಟವಾಗಿ ಆ ಜಮೀಂದಾರನ ಕಡೆಯವನೊಬ್ಬನು ಕೊಲೆಯಾದಾಗ ಆ ವಿಪತ್ತಿನಿಂದ ಪಾರಾಗಲು ಮಥುರನು ಈ ಬಾಲಕನನ್ನೇ ಮೊರೆಹೋಗಬೇಕಾಯಿತು ! ಶ್ರೀರಾಮಕೃಷ್ಣರು ಮೊದಲು ಅವನನ್ನು ಚೆನ್ನಾಗಿ ಬೈದರು : "ನೀನು ಪ್ರತಿದಿನ ಏನಾದರೂ ಗಂಡಾಂತರ ಹೂಡಿ 'ನನ್ನನ್ನು ರಕ್ಷಿಸಿ' ಎಂದು ಬರುತ್ತೀಯೆ. ನಾನೇನು ಮಾಡುವುದಕ್ಕಾಗುತ್ತದೆ ? ನೀನು ಮಾಡಿದ ತಪ್ಪಿಗೆ ನೀನು ಅನುಭವಿಸು, ಹೋಗು. ನನಗೇನು ಗೊತ್ತು ?" ಮಥುರನು ಅಂಗಲಾಚಿ ಬೇಡಿಕೊಳ್ಳಲು ಹೇಳಿದರು : "ಹೋಗು, ತಾಯಿಯ ಇಚ್ಛೆಯಂತೆ ಆಗಲಿ." ನಿಜವಾಗಿಯೂ ಅವನು ಆ ವಿಪತ್ತಿನಿಂದ ಪಾರಾದನು.

36. ಹೀಗೆ ಶ್ರೀರಾಮಕೃಷ್ಣರ ಉಭಯ ಭಾವಗಳನ್ನು ಪ್ರತಿಬಿಂಬಿಸುವ ಎಷ್ಟೊ ಉದಾಹರಣೆಗಳನ್ನು ಕೊಡಬಹುದು. ಇದನ್ನೆಲ್ಲ ನೋಡಿ ಕೇಳಿ ಮಥುರನಿಗೆ

ದೃಢವಿಶ್ವಾಸ ಉಂಟಾಗಿತ್ತು, ತನ್ನದೆಲ್ಲವೂ ಈ ಬಹುರೂಪಿ 'ತಂದೆ'ಯ ಕೃಪೆಯಿಂದಲೇ ಎಂದು. ತನ್ನ ಧನ ಮಾನ ಅಂತಸ್ತು ಅಧಿಕಾರ—ಎಲ್ಲವೂ ಅವರ ಕೃಪೆಯಿಂದಲೇ ಎಂದು ಅವನು ದೃಢವಾಗಿ ನಂಬಿದ್ದ. ಆದ್ದರಿಂದ ಅವರನ್ನು ಸಾಕ್ಷಾತ್ ಭಗವದವತಾರವೆಂದು ತಿಳಿದು ಅವರಿಗೆ ರಾಜಮರ್ಯಾದೆಯನ್ನು ನೀಡುವುದು, ಅವರಲ್ಲಿ ಅಚಲ ಭಕ್ತಿ ವಿಶ್ವಾಸವನ್ನು ಇರಿಸುವುದು ಅವನಿಗೆ ಸ್ವಾಭಾವಿಕವಾಗಿತ್ತು. ಪ್ರಾಪಂಚಿಕ ಶ್ರೀಮಂತರ ಭಕ್ತಿಯ ತೀವ್ರತೆಯನ್ನು ತಮ್ಮ ಭಕ್ತಿಗೆ ಪಾತ್ರರಾದವರಿಗಾಗಿ ಎಷ್ಟೊಂದು ಹಣ ಖರ್ಚು ಮಾಡುತ್ತಾರೆ ಎಂಬುದರ ಮೇಲೆ ನಿರ್ಣಯಿಸಬೇಕು. ಎಲ್ಲ ಲೆಕ್ಕಾಚಾರ ಬುದ್ಧಿಯ ವ್ಯಕ್ತಿಗಳಂತೆ ಮಥುರನೂ ಸ್ವಲ್ಪ ಜಿಪುಣನೇ ಆಗಿದ್ದ; ಆದರೆ ಶ್ರೀರಾಮಕೃಷ್ಣರ ವಿಷಯದಲ್ಲಿ ಮಾತ್ರ ಉದಾರ ಮನಸ್ಸಿನಿಂದ ಹಣ ಖರ್ಚು ಮಾಡುತ್ತಿದ್ದ. ಇದರಿಂದ ಅವನಿಗೆ ಅವರ ಮೇಲೆ ಎಷ್ಟೊಂದು ಭಕ್ತಿವಿಶ್ವಾಸವಿತ್ತು ಎಂಬುದನ್ನು ಸ್ಪಷ್ಟವಾಗಿ ತಿಳಿಯಬಹುದು.

37. ಒಮ್ಮೆ ಜಾತ್ರೆ(ಬಯಲು ನಾಟಕ)ಯ ಸಂದರ್ಭದಲ್ಲಿ ಮಥುರನು ಶ್ರೀರಾಮಕೃಷ್ಣರಿಗೆ ಉತ್ತಮ ಬೆಲೆಬಾಳುವ ಉಡಿಗೆಯನ್ನು ತೊಡಿಸಿ, ಒಳ್ಳೆಯ ಆಸನದ ಮೇಲೆ ಕೂಡಿಸಿದನು. ನಾಟಕದವರಿಗೆ ಬಹುಮಾನ ನೀಡಲೆಂದು ಅವರ ಮುಂದೆ ಪ್ರತ್ಯೇಕವಾಗಿ ಹತ್ತು ಹತ್ತು ರೂಪಾಯಿ ನಾಣ್ಯಗಳಂತೆ ಒಟ್ಟು ನೂರು ರೂಪಾಯಿಗೂ ಅಧಿಕ ಹಣವನ್ನು ಇರಿಸಿದನು. ಶ್ರೀರಾಮಕೃಷ್ಣರು ತಮಗೆ ನಾಟಕದಲ್ಲಿ ಯಾರ ಪಾತ್ರ ಮೆಚ್ಚಿಕೆಯಾಯಿತೊ ಅವರಿಗೆಲ್ಲ ಅಲ್ಲಿದ್ದ ಎಲ್ಲ ಹಣವನ್ನು ಕೊಟ್ಟುಬಿಡುತ್ತಿದ್ದರು; ಇದರಿಂದ ಮಥುರನಿಗೆ ಸ್ವಲ್ಪವೂ ಬೇಸರವಾಗಲಿಲ್ಲ. 'ಅವರ ಉನ್ನತ ಮನಸ್ಸಿಗನು ಗುಣವಾಗಿ ಬಹುಮಾನ ನೀಡಿರುವರು' ಎಂದು ನುಡಿದು ತನ್ನ ಆನಂದವನ್ನು ವ್ಯಕ್ತಪಡಿಸಿ, ಮತ್ತೆ ಅಲ್ಲಿ ಹಣವನ್ನು ಇರಿಸುತ್ತಿದ್ದನು. 'ಹಣವೇ ಮಣ್ಣು ಮಣ್ಣೆ ಹಣ' ಎಂದು ಹೇಳುವ ಭಾವಮುಖ ಸ್ಥಿತಿಯಲ್ಲಿದ್ದ ಶ್ರೀರಾಮಕೃಷ್ಣರ ಮುಂದೆ ಆ ಹಣ ಎಷ್ಟುಕಾಲ ಇರಲು ಸಾಧ್ಯ ? ಹೀಗೆ ಅವನು ಅನೇಕ ಬಾರಿ ಹಣ ಇಡಬೇಕಾಯಿತು. ಹಣವೆಲ್ಲ ಮುಗಿದು ಹೋಗಲು ಅವರು ಹೊದ್ದುಕೊಂಡಿದ್ದ ಶಾಲನ್ನು ಮತ್ತು ಇತರ ಅತ್ಯಂತ ಬೆಲೆಬಾಳುವ ಬಟ್ಟೆಗಳನ್ನೂ ತೆಗೆದುಕೊಟ್ಟರು, ಈಗ ಅವರು ಕೇವಲ ಭಾವಾಂಬರರಾಗಿ ಸಮಾಧಿಸ್ಥರಾಗಿ ಕುಳಿತರು. ತನ್ನ ಹಣ ಸಾರ್ಥಕತೆಯನ್ನು ಪಡೆಯಿತು ಎಂದು ಮಥುರನು ಭಾವಿಸಿ ಪರಮಾನಂದದಿಂದ 'ತಂದೆ'ಗೆ ಗಾಳಿ ಹಾಕತೊಡಗಿದನು.

38. ಮಥುರನು ಜಿಪುಣನಾದರೂ ಶ್ರೀರಾಮಕೃಷ್ಣರ ವಿಷಯದಲ್ಲಿ ಅವನ ಉದಾರತೆಯನ್ನು ಚಿತ್ರಿಸುವ ಎಷ್ಟೋ ಘಟನೆಗಳನ್ನು ಉದಾಹರಿಸಬಹುದು. ಅವನು ಕಾಶಿ, ಬೃಂದಾವನ, ಮುಂತಾದ ತೀರ್ಥಸ್ಥಳಗಳಿಗೆ ಯಾತ್ರೆ ಹೊರಟಾಗ ಶ್ರೀರಾಮಕೃಷ್ಣರನ್ನೂ ಕರೆದುಕೊಂಡು ಹೋದನು. ಕಾಶಿಯಲ್ಲಿ ಶ್ರೀರಾಮಕೃಷ್ಣರ ಇಚ್ಛೆಯಂತೆ ಅವನು 'ಕಲ್ಪತರು'ವಿನಂತೆ ದಾನ ಮಾಡಿದನು, ಯಾರಿಗೆ ಏನು ಬೇಕೊ ಏನು ಕೇಳುತ್ತಾರೊ ಅದೆಲ್ಲವನ್ನೂ ಕೊಟ್ಟನು. ಆಗ ಅವನು ಶ್ರೀರಾಮಕೃಷ್ಣರನ್ನು ತಮಗೇನು ಬೇಕು ಎಂದು

ಕೇಳಿದನು. ಅವರು ಎಷ್ಟೇ ಯೋಚಿಸಿದರೂ ಏನೂ ಹೊಳೆಯಲಿಲ್ಲ. ಕೊನೆಗೆ "ಒಂದು ಕಮಂಡಲುವನ್ನು ಕೊಡು" ಎಂದರು. ಅವರ ತ್ಯಾಗವನ್ನು ನೋಡಿ ಮಥುರನು ಕಣ್ಣೀರು ಸುರಿಸಿದನು.

39. ಯಾತ್ರೆಯ ಸಂದರ್ಭದಲ್ಲಿ ವೈದ್ಯನಾಥದ ಹತ್ತಿರ ಒಂದು ಗ್ರಾಮದಲ್ಲಿ ಜನರ ದುಃಖದಾರಿದ್ರ್ಯವನ್ನು ಕಂಡು ಶ್ರೀರಾಮಕೃಷ್ಣರ ಹೃದಯ ಕರಗಿತು. ಮಥುರನಿಗೆ ಹೇಳಿದರು : "ನೀನು ತಾಯಿಯ ಆಸ್ತಿಯನ್ನು ನೋಡಿಕೊಳ್ಳುವವನು ಅಷ್ಟೆ. ಇವರಿಗೆಲ್ಲ ತಲೆಗೆ ಎಣ್ಣೆ, ಬಟ್ಟೆ, ಒಂದುದಿನದ ಮಟ್ಟಿಗೆ ಹೊಟ್ಟೆತುಂಬ ಊಟಹಾಕು." ಮಥುರನು ಮೊದಲು ಸ್ವಲ್ಪ ಹಿಂದೆ ಮುಂದೆ ನೋಡಿದ : "ಯಾತ್ರೆಯ ಸಮಯದಲ್ಲಿ ತುಂಬ ಖರ್ಚು ಇರುತ್ತದೆ. ಇವರು ತುಂಬ ಜನರಿದ್ದಾರೆ. ಇವರಿಗೆಲ್ಲ ಊಟ ಬಟ್ಟೆ ನೀಡುತ್ತ ಹೋದರೆ ಹಣ ಕಡಮೆಯಾಗುತ್ತದೆ. ಈ ಅವಸ್ಥೆಯಲ್ಲಿ ಏನು ಮಾಡುವುದು ಹೇಳಿ ?" ಈ ಮಾತನ್ನೆಲ್ಲ ಕೇಳುವವರು ಯಾರು ? ಗ್ರಾಮವಾಸಿಗಳ ದುಃಖವನ್ನು ನೋಡಿ ಶ್ರೀರಾಮಕೃಷ್ಣರ ಕಣ್ಣುಗಳಿಂದ ನೀರು ಸುರಿಯುತ್ತಿದೆ, ಹೃದಯದಲ್ಲಿ ಅಪೂರ್ವ ಕರುಣೆಯ ಆವೇಶ ಉಂಟಾಗಿದೆ. ಅವರೆಂದರು : "ನೀನು ಹೊರಟು ಹೋಗು, ನಾನು ಕಾಶಿಗೆ ಬರುವುದಿಲ್ಲ. ನಾನು ಇವರೊಡನೆಯೇ ಇದ್ದುಬಿಡುತ್ತೇನೆ. ಇವರಿಗೆ ಯಾರೂ ಇಲ್ಲ. ಇವರನ್ನು ಬಿಟ್ಟು ನಾನು ಬರುವುದಿಲ್ಲ." ಹೀಗೆ ಹೇಳಿ ಅವರು ಬಾಲಕನಂತೆ ಹಠಹಿಡಿದು ಆ ಜನರ ಮಧ್ಯೆ ಹೋಗಿ ಕುಳಿತುಬಿಟ್ಟರು. ಅವರ ಆ ಕರುಣೆಯನ್ನು ನೋಡಿ ಕಲಕತ್ತೆಯಿಂದ ಬಟ್ಟೆಯನ್ನು ತರಿಸಿ ಅವರು ಹೇಳಿದಂತೆಯೇ ಎಲ್ಲ ಕಾರ್ಯವನ್ನು ನೆರವೇರಿಸಿದನು. ಶ್ರೀರಾಮಕೃಷ್ಣರು ಆ ಗ್ರಾಮವಾಸಿಗಳ ಆನಂದವನ್ನು ನೋಡಿ ಸಂತೋಷದಿಂದ ನಗುನಗುತ್ತ ಮಥುರನ ಜೊತೆ ಕಾಶಿಗೆ ಹೊರಟರು. ಇಂಥದೇ ಇನ್ನೊಂದು ಘಟನೆ ನಡೆಯಿತು. ರಾಣಾಘಾಟಿನಲ್ಲಿದ್ದ ಅವನ ಜಮೀನನ್ನು ನೋಡಲು ಅವರು ಮಥುರನ ಜೊತೆ ಹೋಗಿದ್ದರು. ಅಲ್ಲಿಯ ಗ್ರಾಮವಾಸಿಗಳ ದುರ್ದಶೆಯನ್ನು ನೋಡಿ ಶ್ರೀರಾಮಕೃಷ್ಣರ ಹೃದಯ ಕರುಣೆಯಿಂದ ತುಂಬಿ ಹೋಯಿತು. ಹಿಂದಿನಂತೆಯೇ ಮಥುರನ ಮೂಲಕ ಅವರಿಗೆಲ್ಲ ಊಟ ಬಟ್ಟೆ ಕೊಡಿಸಿದ್ದರು.

40 ಗುರುಭಾವಮುಖ ಸ್ಥಿತಿಯಲ್ಲಿದ್ದ ಶ್ರೀರಾಮಕೃಷ್ಣರು ಹೀಗೆ ಮಥುರನೊಡನೆ ಮಧುರ ಸಂಬಂಧದಿಂದ ಬದ್ಧರಾಗಿದ್ದರು. ಸಾಧನೆಯ ಸಮಯದಲ್ಲಿ ಒಮ್ಮೆ ಶ್ರೀರಾಮಕೃಷ್ಣರಿಗೆ ಒಂದು ಅದ್ಭುತ ಭಾವ ಉಂಟಾಗಿತ್ತು. ಆಗ ಅವರು ಶ್ರೀಜಗನ್ಮಾತೆಯನ್ನು ಹೀಗೆ ಪ್ರಾರ್ಥಿಸಿದ್ದರು : "ತಾಯಿ, ನನ್ನನ್ನು ಶುಷ್ಕ ಸಾಧುವನ್ನಾಗಿ ಮಾಡಬೇಡ, ನನ್ನನ್ನು ಆನಂದ ರಸದಲ್ಲಿರಿಸು." ಮಥುರನೊಡನೆ ಅವರಿಗಿದ್ದ ಮಧುರ ಸಂಬಂಧ ಈ ಪ್ರಾರ್ಥನೆಯ ಪರಿಣತ ಫಲ. ಏಕೆಂದರೆ, ಈ ಪ್ರಾರ್ಥನೆಯ ಫಲವಾಗಿಯೇ, ಅವರ ದೇಹರಕ್ಷಣೆಗಾಗಿ ನಾಲ್ಕು ಜನ ರಸದ್ದಾರರನ್ನು ಕಳಿಸಲಾಗಿದೆ, ಅವರಲ್ಲಿ ಮಥುರನೇ ಪ್ರಥಮನೂ ಪ್ರಮುಖನೂ ಆಗಿರುವನು, ಎಂದು ಶ್ರೀಜಗ

ನ್ಮಾತೆಯು ಅವರಿಗೆ ತೋರಿಸಿಕೊಟ್ಟಿದ್ದಳು. ಇದು ದೇವ ನಿಯಮಿತ ಸಂಬಂಧವಲ್ಲ ದ್ದಿದ್ದರೆ ಅಷ್ಟು ಕಾಲ ಅದು ಸ್ವಲ್ಪವೂ ಕುಂಠಿತವಾಗದೆ ಆ ರೀತಿ ಉಳಿಯುತ್ತಿತ್ತೆ ? ಈ ಪ್ರಪಂಚದಲ್ಲಿ ಇಂಥ ಶುದ್ಧ ಮಧುರ ಸಂಬಂಧವನ್ನು ಕಾಣುವುದು ಬಹಳ ಅಪರೂಪ. ಭೋಗವಾಸನೆಯು ಮಾನವ ಮನಸ್ಸನ್ನು ವಜ್ರಮುಷ್ಟಿಯಿಂದ ಹಿಡಿದು ಕೊಂಡಿರುವುದು. ಅಹೇತುಕ ಪ್ರೀತಿಯ ಪ್ರತಿಮೂರ್ತಿಯಂತಿರುವ ಶ್ರೀರಾಮಕೃಷ್ಣ ರನ್ನು ನೋಡಿಯೂ ಅವರ ಸಂಗಲಾಭವನ್ನು ಪಡೆದು ನಮ್ಮ ಮನಸ್ಸು ಆ ವಾಸನೆ ಯಿಂದ ಸಂಪೂರ್ಣ ದೂರವಾಗುತ್ತಿಲ್ಲ! ಒಮ್ಮೆ ಶ್ರೀರಾಮಕೃಷ್ಣರು ಮಥುರನ ಸಂಬಂಧವಾಗಿ ಹೇಳುತ್ತಿದ್ದರು. ಅವನ ಮಹಾ ಭಾಗ್ಯದ ವಿಷಯವನ್ನು ಕೇಳಿ ನಮ್ಮ ಸ್ನೇಹಿತರೊಬ್ಬರು ಕೇಳಿದರು : "(ಮೃತ್ಯುವಿನ ನಂತರ) ಮಥುರನಿಗೆ ಏನಾಯಿತು, ಮಹಾಶಯರೆ ? ಅವನಿಗೆ ನಿಜವಾಗಿಯೂ ಪುನರ್ಜನ್ಮವಿರಲಾರದು ?" ಶ್ರೀರಾಮ ಕೃಷ್ಣರು ಉತ್ತರಿಸಿದರು : "ಎಲ್ಲೊ ಒಬ್ಬ ರಾಜನಾಗಿ ಹುಟ್ಟಿರಬೇಕು. ಅವನಲ್ಲಿ ಭೋಗವಾಸನೆ ಇತ್ತು." ಹೀಗೆ ಹೇಳಿ ಅವರು ಬೇರೆ ವಿಷಯವನ್ನು ಎತ್ತಿದರು.

ಎಂಟನೆಯ ಅಧ್ಯಾಯ

ಗುರುಭಾವದಲ್ಲಿ ತಮ್ಮ ಗುರುಜನರೊಡನೆ ಸಂಬಂಧ

1. ಗುರುಭಾವ ಅವತಾರಪುರುಷರ ವಿಶೇಷ ಸಂಪತ್ತು 2. ಶ್ರೀರಾಮಕೃಷ್ಣರು ಅನೇಕ ಗುರುಗಳಿಂದ ದೀಕ್ಷೆ ಸ್ವೀಕರಿಸಿದರು 3. ಭೈರವೀ ಬ್ರಾಹ್ಮಣೀ 4. ಬ್ರಾಹ್ಮಣಿಯು ಶ್ರೀರಾಮಕೃಷ್ಣರಿಗೆ ಸಾಧನೆಯಲ್ಲಿ ಸಹಾಯ ಮಾಡಿದುದು 5. ಬ್ರಾಹ್ಮಣಿಯ ವಾತ್ಸಲ್ಯ ಭಾವ 6. ಬಾಹ್ಮಣಿಯ ಬಗ್ಗೆ ಮಥುರನ ಸಂದೇಹ 7. ಅವಳ ಪೂರ್ವ ಪರಿಚಯ 8, ಅವಳು ಉನ್ನತ ಮಟ್ಟದ ಸಾಧಕಿ 9. ಅವಳ ಶಿಷ್ಯ ಚಂದ್ರನ ಕಥೆ 10. ಪವಾಡಗಳು ಯೋಗಭ್ರಷ್ಟಗೊಳಿಸುತ್ತವೆ 11. ಪವಾಡದಿಂದಲೇ ಚಂದ್ರನ ಪತನ 12. ಬ್ರಾಹ್ಮಣಿಯ ಶಿಷ್ಯ ಗಿರಿಜ ಮತ್ತು ಅವನ ಪವಾಡ 13. ಗುರುಭಾವದಿಂದ ಶ್ರೀರಾಮಕೃಷ್ಣರು ಅವನ ಪವಾಡವನ್ನು ನಾಶ ಮಾಡಿದರು. 14. ಪವಾಡವೇ ಭಗವತ್ಸಾಕ್ಷಾತ್ಕಾರಕ್ಕೆ ಅಡ್ಡಿ—'ನದಿಯ ಮೇಲೆ ನಡೆಯುವುದು' 15 ಪವಾಡದಿಂದ ಅಹಂಕಾರ ವೃದ್ಧಿ—'ಆನೆಯನ್ನು ಕೊಂದು ಬದುಕಿಸುವುದು' 16. ಶ್ರೀರಾಮಕೃಷ್ಣರ ಪ್ರಭಾವದಿಂದ ಚಂದ್ರ ಮತ್ತು ಗಿರಿಜರಲ್ಲಿ ಆದ ಪರಿವರ್ತನೆ 17. ಬ್ರಾಹ್ಮಣಿಗೆ ಅದ್ವೈತಾನುಭವ ಉಂಟಾಗಿರಲಿಲ್ಲ 18. ಪಶು, ವೀರ ಮತ್ತು ದಿವ್ಯ ಭಾವಗಳ ವಿವರಣೆ 19. ವೀರಭಾವ ಸಾಧಕಿಯಾದ ಬ್ರಾಹ್ಮಣಿ ದಿವ್ಯ ಭಾವದ ಅರ್ಹತೆಯನ್ನು ಪಡೆದಿರಲಿಲ್ಲ 20. ಇದಕ್ಕೆ ಪ್ರಮಾಣ 21. ಶ್ರೀರಾಮಕೃಷ್ಣರ ಕೃಪೆಯಿಂದ ಬ್ರಾಹ್ಮಣಿಗೆ ತನ್ನ ಕೊರತೆಯ ಅರಿವಾಗಿ ತಪಸ್ಸಿಗೆ ಹೊರಟುದು 22. ತೋತಾಪುರಿಯ ಕಥೆ, ತೋತಾಪುರಿ ಮತ್ತು ಶ್ರೀರಾಮಕೃಷ್ಣರ ಭಾವವಿನಿಮಯ 23. ಬ್ರಹ್ಮಜ್ಞ ಪುರುಷರ ನಿರ್ಭಯ ಮತ್ತು ಸ್ವಾತಂತ್ರ್ಯದ ಬಗ್ಗೆ ಶಾಸ್ತ್ರ 24. ತೋತಾಪುರಿಯ ಉಚ್ಚ ಅವಸ್ಥೆ 25. ಅವನಿಗೆ ಭೈರವ ದರ್ಶನ 26. ತೋತಾಪುರಿಯ ಗುರುವಿನ ಕಥೆ 27. ತನ್ನ ಗುರು ಮತ್ತು ಮಠದ ಬಗ್ಗೆ ತೋತಾಪುರಿಯ ಹೇಳಿಕೆ 28. ಅವನ ವ್ಯಕ್ತಿತ್ವ ಪರಿಚಯ 29. ಭಕ್ತಿಮಾರ್ಗ ಅವನಿಗೆ ತಿಳಿದಿರಲಿಲ್ಲ 30. ಇದಕ್ಕೆ ಪ್ರಮಾಣ—'ಚಪಾತಿ ತಟ್ಟುತಿರುವೆಯಾ ?' 31. ತೋತಾಪುರಿಯ ಕ್ರೋಧತ್ಯಾಗ 32. ಮಾಯೆಯ ಕೃಪೆಯಿಲ್ಲದೆ ಭಗವತ್ಸಾಕ್ಷಾತ್ಕಾರವಿಲ್ಲ 33. ಇದಕ್ಕೊಂದು ದೃಷ್ಟಾಂತ ಕಥೆ 34. ಜಗನ್ಮಾತೆಯ ಕೃಪೆಯಿಂದಲೇ ತಾನು ಉಚ್ಚ ಅವಸ್ಥೆಯನ್ನು ಪಡೆದುದೆಂಬುದನ್ನು ಅವನು ಅರಿತಿರಲಿಲ್ಲ 35. ತೋತಾಪುರಿಯ ಕಾಯಿಲೆ 36. ಅವನು ತನ್ನ ಮನಸ್ಸಿನ ಸಂಕೇತವನ್ನು ಕಡೆಗಣಿಸಿದನು 37. ಅವನು

ಶ್ರೀರಾಮಕೃಷ್ಣರಿಂದ ಬೀಳ್ಕೊಳ್ಳುವ ಪ್ರಯತ್ನ—ಅವನ ಕಾಯಿಲೆಯ ಉಲ್ಬಣ 38. ಮನಸ್ಸನ್ನು ನಿಗ್ರಹಿಸಲಾರದೆ ಗಂಗೆಯಲ್ಲಿ ತನ್ನ ಶರೀರವನ್ನು ವಿಸರ್ಜಿಸುವ ಪ್ರಯತ್ನ—ಜಗನ್ಮಾತೆಯ ದರ್ಶನ 39. ತೋತಾಪುರಿ ಜಗನ್ಮಾತೆಯನ್ನು ಒಪ್ಪಿಕೊಂಡು ದಕ್ಷಿಣೇಶ್ವರದಿಂದ ಬೀಳ್ಕೊಳ್ಳುತ್ತಾನೆ 40. ಅವನಿಗೆ ರಸವಿದ್ಯೆ ತಿಳಿದಿತ್ತು 41. ಉಪಸಂಹಾರ.

ಸರ್ವಸ್ಯ ಚಾಹಂ ಹೃದಿ ಸಂನಿವಿಷ್ಟೋ ಮತ್ತಃ ಸ್ಮೃತಿರ್ಜ್ಞಾನಮಪೋಹನಂ ಚ ।
ವೇದೈಶ್ಚ ಸರ್ವೈರಹಮೇವ ವೇದ್ಯೋ ವೇದಾಂತಕೃದ್ವೇದವಿದೇವ ಚಾಹಮ್ ॥
ಭಗವದ್ಗೀತೆ 15.15

"ನಾನೇ ಎಲ್ಲರ ಹೃದಯದಲ್ಲಿ ಇರುವವನು : ನನ್ನಿಂದಲೇ ಸ್ಮೃತಿ, ಜ್ಞಾನ, ಮರೆವು ಎಲ್ಲ ಉಂಟಾಗುವುದು ; ವೇದಗಳ ಮೂಲಕ ತಿಳಿಯಲ್ಪಡುವವನು ನಾನೆ ಮತ್ತು ವೇದಾಂತವನ್ನು ಮಾಡಿದವನೂ ವೇದವಿದನೂ ನಾನೇ."

1. ಮೊದಲೇ ಹೇಳಿರುವಂತೆ, ಯಾರು ಗುರುವಾಗಿ ಜನ್ಮವೆತ್ತಿರುವರೊ ಅವರಲ್ಲಿ ಬಾಲ್ಯದಿಂದಲೂ ಆ ಗುರುಭಾವವನ್ನು ಕಾಣಬಹುದು. ಅವತಾರ ಪುರುಷರ ವಿಷಯದಲ್ಲಿ ಇದನ್ನು ಹೇಳಬೇಕಾಗಿಯೇ ಇಲ್ಲ. ಅವರು ಸಮಾಜದಲ್ಲಿ ಯಾವ ಭಾವವನ್ನು ಪ್ರತಿಷ್ಠಾಪಿಸಲು ಬಂದಿರುತ್ತಾರೆಯೊ ಬಾಲ್ಯಕಾಲದಲ್ಲಿಯೇ ಆ ಭಾವ ಅವರಲ್ಲಿ ಕಂಡು ಬರುತ್ತದೆ, ಆ ಭಾವದ ಪೂರ್ಣ ಅಭಿವ್ಯಕ್ತಿಗೆ ಅನುಕೂಲ ಪರಿಸ್ಥಿತಿ ಉಂಟಾಗುತ್ತದೆ. ಮತ್ತೆ ಅದಕ್ಕೆ ಸಹಾಯಕವಾಗಲು ಅವರ ಶರೀರ ಇಂದ್ರಿಯಗಳು ಪೂರ್ಣ ಬೆಳವಣಿಗೆಯನ್ನು ಪಡೆಯುತ್ತವೆ. ಈ ಎಲ್ಲ ಕಾರಣಗಳು ಅವರಲ್ಲಿ ಗುರು ಭಾವವು ಜನ್ಮತಾಳುವಂತೆ ಮಾಡಿ ಅವರನ್ನು ಗುರುವಾಗಿ ಮಾರ್ಪಡಿಸುವುವು ಎಂದು ಹೇಳಲಾಗುವುದಿಲ್ಲ. ಅದು ಅವರ ಸಂಪತ್ತು, ಅದನ್ನು ಪಡೆದೇ ಅವರು ಹುಟ್ಟಿರುತ್ತಾರೆ. ಅವರ ವರ್ತಮಾನ ಜೀವನದಲ್ಲಿ ಈ ಭಾವದ ಉತ್ಪತ್ತಿಯ ಕಾರಣ ವನ್ನು ನಾವು ಕಂಡುಹಿಡಿಯಲಾಗುವುದಿಲ್ಲ. ಶ್ರೀರಾಮಕೃಷ್ಣರ ಜೀವನದಲ್ಲಿ ಗುರು ಭಾವೋತ್ಪತ್ತಿಯ ಬಗ್ಗೆ ನಾವು ಆಲೋಚಿಸಿದಾಗಲೂ ಇದೇ ಸತ್ಯ ನಮ್ಮ ಗಮನಕ್ಕೆ ಬರುತ್ತದೆ. ಅವರ ಬಾಲ್ಯ ಕಾಲದಲ್ಲಿ, ಯೌವನದಲ್ಲಿ, ಸಾಧನೆಯ ಸಮಯದಲ್ಲಿ ಹೀಗೆ ಅವರ ಜೀವನದುದ್ದಕ್ಕೂ ಈ ಗುರುಭಾವವು ಯಾವುದಾದರೊಂದು ರೀತಿ ಯಲ್ಲಿ ಪ್ರಕಟವಾದುದನ್ನು ನಾವು ನೋಡುತ್ತೇವೆ. ಅವರ ಜೀವನದಲ್ಲಿ ಈ ಭಾವ ಮೊದಲು ಹೇಗೆ ಆರಂಭವಾಯಿತು ಎಂಬುದನ್ನು ಎಷ್ಟೇ ಚಿಂತಿಸಿದರೂ ನಿರ್ಧರಿಸ ಲಾಗುವುದಿಲ್ಲ. ಬಾಲ್ಯಜೀವನದ ಬಗ್ಗೆ ಇಲ್ಲಿ ಹೇಳುತ್ತ ಗ್ರಂಥವನ್ನು ವಿಸ್ತರಿಸಲು ನಾವು ಇಚ್ಛಿಸುವುದಿಲ್ಲ. ಶ್ರೀರಾಮಕೃಷ್ಣರ ಯೌವನ ಮತ್ತು ಸಾಧನ ಕಾಲದಲ್ಲಿ ಮಥುರನಾಥನ ಸಂಬಂಧವಾಗಿ ಗುರುಭಾವವು ಹೇಗೆ ಪ್ರಕಾಶಗೊಂಡಿತು ಎಂಬುದನ್ನು

ಹೇಳಿಯಹಾಗಿದೆ. ಅದೇ ಸಂದರ್ಭದಲ್ಲಿ ಆದ ಗುರುಭಾವದ ಪ್ರಕಾಶವನ್ನು ಕುರಿತು ಇನ್ನೂ ಹೇಳುವುದಿದೆ. ಈಗ ಅದನ್ನೇ ಓದುಗರಿಗೆ ತಿಳಿಸಿಕೊಡಬಯಸುತ್ತೇವೆ.

2. ಮಂತ್ರದೀಕ್ಷೆಯನ್ನು ನೀಡುವ ಗುರು ಒಬ್ಬನೇ ಆದರೂ ಉಪಗುರುಗಳು ಅಥವಾ ಶಿಕ್ಷಾಗುರುಗಳು ಅನೇಕರಿರಬಹುದು. ಈ ವಿಷಯವನ್ನು ಶ್ರೀರಾಮಕೃಷ್ಣರು ನಮಗೆ ಅನೇಕ ಬಾರಿ ಹೇಳಿರುವರು. ಇದಕ್ಕೆ ಉದಾಹಣೆಯಾಗಿ ಭಾಗವತದಲ್ಲಿ ಬರುವ ಅವಧೂತನ ಕತೆಯನ್ನು ಹೇಳುತ್ತಿದ್ದರು. ಅವಧೂತನು ಒಂದಾದ ಮೇಲೆ ಒಂದರಂತೆ ಇಪ್ಪತ್ತನಾಲ್ಕು ಗುರುಗಳಿಂದ ಪಾಠ ಕಲಿತು ಸಿದ್ಧಿಯನ್ನು ಪಡೆದನು. ಶ್ರೀರಾಮಕೃಷ್ಣರ ಜೀವನದಲ್ಲಿಯೂ ನಾವು ಅನೇಕ ಗುರುಗಳನ್ನು ಕಾಣುತ್ತೇವೆ. ಬೇರೆ ಬೇರೆ ರೀತಿಯ ಸಾಧನೆಗಳಿಗೆ ಬೇರೆ ಬೇರೆ ಗುರುಗಳ ಸಹಾಯವನ್ನು ಅವರು ಪಡೆಯುತ್ತಿದ್ದರು, ಇವರುಗಳ ಪೈಕಿ ಭೈರವೀ ಬ್ರಾಹ್ಮಣಿ, ತೋತಾಪುರಿ ಮತ್ತು ಮುಸಲ್ಮಾನನಾದ ಗೋವಿಂದ—ಇವರ ಬಗ್ಗೆ ಶ್ರೀರಾಮಕೃಷ್ಣರು ಹೆಚ್ಚು ಹೇಳುತ್ತಿದ್ದುದನ್ನು ನಾವು ಕೇಳಿರುವೆವು. ಹಿಂದೂ ಸಂಪ್ರದಾಯದ ಸಾಧನೆಗಳನ್ನು ಮಾಡುತ್ತಿರುವಾಗ ಅವರು ಬೇರೆ ಬೇರೆ ಗುರುಗಳಿಂದ ಶಿಕ್ಷಣವನ್ನು ಪಡೆದರೂ ಅವರುಗಳ ಹೆಸರನ್ನು ಅವರು ಹೆಚ್ಚು ಉಲ್ಲೇಖಿಸುತ್ತಿರಲಿಲ್ಲ. ಬೇರೆ ಬೇರೆ ಮತದ ಸಾಧನೆ ವಿಧಾನಗಳನ್ನು ಕಲಿತು ಮೂರು ದಿನಗಳಲ್ಲಿ ಆಯಾಯ ಮತಗಳ ಸಿದ್ಧಿಯನ್ನು ಪಡೆಯುತ್ತಿದ್ದೆ-ಎಂದಷ್ಟೇ ಅವರು ಹೇಳುತ್ತಿದ್ದರು. ಆ ಎಲ್ಲ ಗುರುಗಳ ಹೆಸರನ್ನು ಶ್ರೀರಾಮಕೃಷ್ಣರು ಮರೆತುಬಿಟ್ಟಿರಬೇಕು ಅಥವಾ ಅಷ್ಟೊಂದು ಪ್ರಾಮುಖ್ಯವಲ್ಲದಿದ್ದುದರಿಂದಲೋ ಏನೋ ಅವರ ಬಗ್ಗೆ ಹೇಳದೆ ಇದ್ದಿರಬಹುದು. ಇದರ ಬಗ್ಗೆ ಈಗ ನಿರ್ದಿಷ್ಟವಾಗಿ ಏನನ್ನೂ ಹೇಳಲಾಗುವುದಿಲ್ಲ, ಅವರುಗಳೊಡನೆ ಶ್ರೀರಾಮಕೃಷ್ಣರ ಸಂಬಂಧ ಸ್ವಲ್ಪ ಕಾಲದ ಮಟ್ಟಿಗೆ ಮಾತ್ರ ಇತ್ತು. ಆದ್ದರಿಂದ ಅವರನ್ನು ಕುರಿತಾಗಿ ವಿಶೇಷವಾಗಿ ಹೇಳಬೇಕಾದ್ದಿಲ್ಲ ಎಂದು ಹೇಳಬಹುದಷ್ಟೆ.

3. ಶ್ರೀರಾಮಕೃಷ್ಣರ ಶಿಕ್ಷಾಗುರುಗಳ ಪೈಕಿ ಭೈರವೀ ಬ್ರಾಹ್ಮಣಿ ಅವರೊಡನೆ ಬಹಳಕಾಲ ವಾಸಿಸಿದ್ದಳು. ಎಷ್ಟು ಕಾಲ ಆಕೆ ಅವರೊಡನಿದ್ದಳು ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಏಕೆಂದರೆ, ನಾವು ಶ್ರೀರಾಮಕೃಷ್ಣರ ಶ್ರೀಚರಣವನ್ನು ಆಶ್ರಯಿಸುವುದಕ್ಕೆ ಮುಂಚೆ ಅವಳು ದಕ್ಷಿಣೇಶ್ವರವನ್ನು ಬಿಟ್ಟು ಹೋಗಿದ್ದಳು. ಮತ್ತೆ ಆಕೆ ಹಿಂತಿರುಗಿ ಬರಲಿಲ್ಲ. ಇದಾದನಂತರ ಒಮ್ಮೆ ಮಾತ್ರ ಶ್ರೀರಾಮಕೃಷ್ಣರು ಅವಳನ್ನು ಸಂಧಿಸಿದ್ದರು. ಆಗ ಅವಳು ಕಾಶಿಯಲ್ಲಿ ವಾಸಿಸುತ್ತಿದ್ದಳು.

4. ಭೈರವೀ ಬ್ರಾಹ್ಮಣಿಯು ಬಹಳ ಕಾಲ ದಕ್ಷಿಣೇಶ್ವರದಲ್ಲಿಯೂ ಮತ್ತು ಅದರ ಪಕ್ಕದಲ್ಲಿದ್ದ ದೇವಮಂಡಲ ಘಾಟ್ ಮುಂತಾದ ಸ್ಥಳಗಳಲ್ಲಿ ವಾಸಿಸಿದ್ದಳು ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಅರವತ್ತನಾಲ್ಕು ಪ್ರಧಾನ ತಂತ್ರಗಳ ಸಾಧನೆಗಳನ್ನು ಶ್ರೀರಾಮಕೃಷ್ಣರ ಮೂಲಕ ಅವಳು ಮಾಡಿಸಿದಳು. ಅವಳು ಭಕ್ತಿ ಶಾಸ್ತ್ರದಲ್ಲಿಯೂ ಅಪಾರ ವಿದ್ವತ್ತನ್ನು ಪಡೆದಿದ್ದಳು. ಶ್ರೀರಾಮಕೃಷ್ಣರಿಗೆ ಸಖೀಭಾವ

ಮುಂತಾದ ವೈಷ್ಣವ ಸಾಧನೆಯಲ್ಲಿ ಸಹಾಯಮಾಡಿದಳು. ಅವಳು ಸುಮಾರು ಹನ್ನೆರಡು ವರ್ಷ ದಕ್ಷಿಣೇಶ್ವರದಲ್ಲಿದ್ದಳೆಂದು ಹೇಳುತ್ತಾರೆ — ಅವರ ಸಾಧನೆಯ ಕಾಲ ಮುಗಿದು ಅವಳ ಸಹಾಯ ಅವರಿಗೆ ಇನ್ನೇನೂ ಬೇಕಿರಲಿಲ್ಲದಿದ್ದರೂ ಅವಳು ಅಲ್ಲಿ ತನ್ನ ವಾಸವನ್ನು ಮುಂದುವರಿಸಿದಳು. ಅವಳು ಎಲ್ಲರ ಆದರ ಗೌರವಕ್ಕೆ ಪಾತ್ರಳಾಗಿದ್ದಳು. ಈ ಕಾಲಾವಧಿಯಲ್ಲಿಯೇ ಅವಳು ಶ್ರೀರಾಮಕೃಷ್ಣ ಮತ್ತು ಹೃದಯ ಇವರ ಜೊತೆ ಕಾಮಾರಪುಕುರಕ್ಕೆ ಹೋಗಿದ್ದಳು. ಆ ಸಂದರ್ಭದಲ್ಲಿ ಶ್ರೀಮಾತೆ ಶಾರದಾದೇವಿಯವರು ಅವಳನ್ನು ಅತ್ತೆಯಂತೆ ಗೌರವಿಸಿದರು ಮತ್ತು ಅವಳನ್ನು 'ತಾಯಿ' ಎಂದು ಕರೆಯುತ್ತಿದ್ದರು.

5. ಭೈರವೀ ಬ್ರಾಹ್ಮಣಿಯು ವೈಷ್ಣವ ಸಾಧನೆಗಳನ್ನು ಅನುಸರಿಸಿ ಸಖ್ಯ ವಾತ್ಸಲ್ಯ ಮುಂತಾದ ಭಾವರಸಗಳನ್ನು ಸ್ವಲ್ಪಮಟ್ಟಿಗೆ ತನ್ನ ಜೀವನದಲ್ಲಿ ಅನುಭವಿಸಿದ್ದಳು. ಅವಳು ದೇವಮಂಡಲ ಘಾಟ್‌ನಲ್ಲಿ ವಾಸಿಸುತ್ತಿದ್ದಾಗ ಶ್ರೀರಾಮಕೃಷ್ಣರ ಮೇಲಿನ ವಾತ್ಸಲ್ಯಭಾವದಿಂದ ಪ್ರೇರಿತಳಾಗಿ ಕೈಯಲ್ಲಿ ಬೆಣ್ಣೆಯನ್ನು ಹಿಡಿದು, ಕಂಬನಿಯಿಂದ ಬಟ್ಟೆಯೆಲ್ಲ ತೊಯ್ದವಳಾಗಿ 'ಗೋಪಾಲ' 'ಗೋಪಾಲ' ಎಂದು ಉಚ್ಚ ಕಂಠದಿಂದ ಕೂಗಿಕರೆಯುತ್ತಿದ್ದಳು. ಅದೇ ಸಂದರ್ಭದಲ್ಲಿ ದಕ್ಷಿಣೇಶ್ವರದಲ್ಲಿದ್ದ ಶ್ರೀರಾಮಕೃಷ್ಣರ ಮನಸ್ಸಿನಲ್ಲಿ ಭೈರವಿಯನ್ನು ನೋಡಬೇಕೆಂಬ ತೀವ್ರ ವ್ಯಾಕುಲತೆ ಉಂಟಾಗುತ್ತಿತ್ತು. ಆಗ ಅವರು ಮಗುವು ತಾಯಿಯೆಡೆಗೆ ಓಡುವಂತೆ ಸುಮಾರು ಒಂದು ಮೈಲಿ ದೂರ ಓಡುತ್ತ ಭೈರವಿಯ ಹತ್ತಿರ ಹೋಗುತ್ತಿದ್ದರು, ಮತ್ತು ಆಕೆಯ ಹತ್ತಿರ ಕುಳಿತು ಬೆಣ್ಣೆಯನ್ನು ತಿನ್ನುತ್ತಿದ್ದರು. ಕೆಲವೊಮ್ಮೆ ಅವಳು ಕೆಂಪು ವಾರಾಣಸೀ ಬಟ್ಟೆಯನ್ನು ಉಟ್ಟು ಆಭರಣಗಳನ್ನು ತೊಟ್ಟು ಅನೇಕ ತಿಂಡಿತಿನಸುಗಳನ್ನು ಸಂಗ್ರಹಿಸಿಕೊಂಡು ನೆರೆಹೊರೆಯ ಸ್ತ್ರೀಯರೊಡನೆ ಹಾಡು ಹೇಳುತ್ತ ದಕ್ಷಿಣೇಶ್ವರಕ್ಕೆ ಬರುತ್ತಿದ್ದಳು, ಶ್ರೀರಾಮಕೃಷ್ಣರಿಗೆ ಖಾದ್ಯವಸ್ತುಗಳನ್ನು ತಿನ್ನಿಸಿ ಹಿಂದಿರುಗುತ್ತಿದ್ದಳು. ಆಗ ಅವಳ ಕೆದರಿದ ಕೂದಲನ್ನೂ ಭಾವವಿಹ್ವಲ ಸ್ಥಿತಿಯನ್ನೂ ನೋಡಿದಾಗ ಗೋಪಾಲನ ವಿರಹದಿಂದ ಕಾತರಳಾದ ನಂದರಾಣಿ ಯಶೋದೆಯಂತೆಯೇ ಜನರಿಗೆ ಭಾಸವಾಗುತ್ತಿತ್ತು.

6. ಬ್ರಾಹ್ಮಣಿಯು ಗುಣವತಿಯಾಗಿರುವಂತೆಯೇ ಅತ್ಯಂತ ರೂಪವತಿಯೂ ಆಗಿದ್ದಳು. ಮೊದಮೊದಲು ಮಥುರನು ಆಕೆಯ ರೂಪಲಾವಣ್ಯವನ್ನು ನೋಡಿ ಮತ್ತು ಅವಳು ಏಕಾಕಿಯಾಗಿ ಊರೆಲ್ಲ ಸುತ್ತಾಡುವುದನ್ನು ಕೇಳಿ ಅವಳ ಚಾರಿತ್ರ್ಯದ ಬಗ್ಗೆ ಸಂದೇಹಪಟ್ಟಿದ್ದ ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಒಂದು ದಿನ ತಿರಸ್ಕಾರದಿಂದ ಅವನು ಅವಳನ್ನು ಕೇಳಿಯೇಬಿಟ್ಟನಂತೆ, "ಭೈರವೀ, ನಿನ್ನ ಭೈರವ ಎಲ್ಲಿ ?" ಎಂದು. ಬ್ರಾಹ್ಮಣಿಯು ಆಗ ಕಾಳಿಯ ಮಂದಿರದಿಂದ ಹೊರ ಬರುತ್ತಿದ್ದಳು. ಈ ಅನಿರೀಕ್ಷಿತ ಪ್ರಶ್ನೆಯಿಂದ ಸ್ವಲ್ಪವೂ ವಿಚಲಿತಳಾಗದೆ ಮಥುರನನ್ನೇ ನಿಟ್ಟಿಸಿ ನೋಡುತ್ತ ಕಾಳಿಯ ಕಾಲ್ಕೆಳಗೆ ಶವದಂತೆ ಮಲಗಿದ್ದ ಶಿವನ ಕಡೆ ಕೈ ತೋರಿಸಿದಳು. ಮಥುರನು ಅಷ್ಟರಿಂದಲೇ ಸುಮ್ಮನಾಗಲಿಲ್ಲ. 'ಆ ಭೈರವ ಅಚಲ ?" ಎಂದು ಮತ್ತೆ ತನ್ನ

ಸಂದೇಹವನ್ನು ವ್ಯಕ್ತಪಡಿಸಿದ. ಭೈರವಿಯು ಧೀರ ಗಂಭೀರ ಸ್ವರದಲ್ಲಿ ಹೇಳಿದಳು : "ಅಚಲನನ್ನು ಸಚಲನನ್ನಾಗಿ ಮಾಡಲಾಗದಿದ್ದರೆ ನಾನು ಭೈರವಿಯಾದದ್ದಾದರೂ ಏತಕ್ಕೆ ?" ಅವಳ ಗಂಭೀರ ಭಾವ ಮತ್ತು ಉತ್ತರದಿಂದ ಮಥುರನು ನಾಚಿ ಮರು ಮಾತಾಡದೆ ಸುಮ್ಮನಾದನು. ಮುಂದೆ ಅವಳ ಸ್ವಭಾವವನ್ನು ಅರಿತು ಅವಳ ವಿಶೇಷ ಗುಣಗಳ ಪರಿಚಯವಾದಮೇಲೆ ಅವನ ಮನಸ್ಸಿನ ಸಂದೇಹವೆಲ್ಲ ಹೊರಟುಹೋಯಿತು.

7. ಬ್ರಾಹ್ಮಣಿಯು ಪೂರ್ವಬಂಗಾಳದಲ್ಲಿ ಜನಿಸಿದವಳು. ಶ್ರೇಷ್ಠ ವಂಶದಿಂದ ಬಂದವಳೆಂದು ಅವಳನ್ನು ನೋಡಿದಾಕ್ಷಣ ಯಾರಿಗಾದರೂ ಹೊಳೆಯುತ್ತಿತ್ತು. ಅವಳು ಯಾವ ಊರಿನಲ್ಲಿ ಯಾರ ಮನೆಯಲ್ಲಿ ಜನಿಸದಳು ಎಂಬುದು ತಿಳಿಯದು. ಮದುವೆಯ ನಂತರ ಪ್ರೌಢ ವಯಸ್ಸಿನಲ್ಲಿ ಸಂನ್ಯಾಸ ಸ್ವೀಕರಿಸಿದಳೆ ಅಥವಾ ಮೊದಲೆ ಸಂನ್ಯಾಸಿನಿ ಯಾದಳೇ ಎಂಬ ಬಗ್ಗೆಯೂ ನಮಗೆ ತಿಳಿಯದು. ಈ ರೀತಿ ಸಂಸಾರವನ್ನು ತ್ಯಜಿಸಿ ಊರೂರು ಅಲೆಯುವುದಕ್ಕೆ ಏನಾದರೂ ಕಾರಣವಿದೆಯೇ ಎಂಬುದೂ ನಮಗೆ ತಿಳಿದು ಬಂದಿಲ್ಲ. ಶ್ರೀರಾಮಕೃಷ್ಣರು ಈ ವಿಷಯಗಳ ಬಗ್ಗೆ ನಮಗೇನೂ ಹೇಳಲಿಲ್ಲ. ಇನ್ನು ಅವಳು ಅಷ್ಟೊಂದು ಪಾಂಡಿತ್ಯವನ್ನು ಎಲ್ಲಿ ಯಾವಾಗ ಸಂಪಾದಿಸಿದಳು, ಮತ್ತು ಸಾಧನೆ ಯಲ್ಲಿ ಅಷ್ಟೊಂದು ಉನ್ನತ ಮಟ್ಟವನ್ನು ಹೇಗೆ ಮುಟ್ಟಿದಳು — ಎಂಬ ವಿಷಯ ದಲ್ಲಿಯೂ ನಮಗೇನೂ ತಿಳಿಯದು.

8. ಸಾಧನೆಯಲ್ಲಿ ಅವಳು ತುಂಬ ಉನ್ನತ ಮಟ್ಟಕ್ಕೆ ಏರಿದ್ದಳು ಎಂಬುದರಲ್ಲಿ ಸಂದೇಹವಿಲ್ಲ. ಶ್ರೀರಾಮಕೃಷ್ಣರಂತಹ ದಿವ್ಯಪುರುಷರಿಗೇ ಅವಳು ಗುರುವಾಗಿರುವುದು ಇದನ್ನು ಸ್ಪಷ್ಟಪಡಿಸುತ್ತದೆ. ಭೈರವಿಯು ಶ್ರೀರಾಮಕೃಷ್ಣರೂ ಸೇರಿದಂತೆ ತನ್ನ ಜೀವಿತ ಕಾಲದಲ್ಲಿ ಮೂವರಿಗೆ ಸಾಧನೆಯಲ್ಲಿ ಸಹಾಯ ಮಾಡಬೇಕಿತ್ತು. ಇದನ್ನು ಅವಳು ಶ್ರೀರಾಮಕೃಷ್ಣರನ್ನು ಸಂಧಿಸುವ ಮೊದಲೇ ಯೋಗಶಕ್ತಿಯಿಂದ ಅರಿತಿದ್ದಳು. ಈ ಮೂವರನ್ನು ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ಕಾಲದಲ್ಲಿ ಸಂಧಿಸಿದ ಕೂಡಲೇ ಅವಳು ಅವರ ಗುರುತು ಹಿಡಿದು ಅವರ ಸಾಧನೆಯಲ್ಲಿ ಸಹಾಯ ಮಾಡಿದ್ದಳು. ಈ ವಿಷಯವನ್ನು ನಾವು ಶ್ರೀರಾಮಕೃಷ್ಣರ ಬಾಯಿಂದಲೇ ಕೇಳಿರುವೆವು. ಇದರಿಂದ ಅವಳು ಸಾಧನೆಯಲ್ಲಿ ತುಂಬ ಮುಂದುವರಿದಿದ್ದಳೆಂಬುದಕ್ಕೆ ಯಾವ ಸಂದೇಹವೂ ಇಲ್ಲ.

ಬ್ರಾಹ್ಮಣಿಯು ಶ್ರೀರಾಮಕೃಷ್ಣರನ್ನು ಮೊದಲ ಬಾರಿಗೆ ಸಂಧಿಸಿದಾಗಲೇ ಚಂದ್ರ ಮತ್ತು ಗಿರಿಜ ಇವರ ಬಗ್ಗೆ ಅವರಿಗೆ ಹೇಳಿದ್ದಳು : "ನೋಡಪ್ಪ, ಅವರಿಬ್ಬರನ್ನು ನಾನು ಮೊದಲೇ ಸಂಧಿಸಿದ್ದೇನೆ, ಆದರೆ ನಿನಗಾಗಿ ಎಲ್ಲ ಕಡೆ ಸುತ್ತಾಡುತ್ತಿದ್ದೆ; ಇಂದು ನೀನು ಸಿಕ್ಕಿದೆ. ಅವರಿಬ್ಬರನ್ನು ಮುಂದೆ ನಿನಗೆ ಭೇಟಿ ಮಾಡಿಸುತ್ತೇನೆ." ಮುಂದೆ ನಿಜವಾಗಿಯೂ ಅವಳು ಅವರಿಬ್ಬರನ್ನು ದಕ್ಷಿಣೇಶ್ವರಕ್ಕೆ ಕರೆದುಕೊಂಡು ಬಂದು ಶ್ರೀರಾಮಕೃಷ್ಣರಿಗೆ ಅವರ ಪರಿಚಯ ಮಾಡಿಸಿದಳು. ಅವರಿಬ್ಬರೂ ಉತ್ತಮ ತರಗತಿಯ ಸಾಧಕರೆಂದು ಶ್ರೀರಾಮಕೃಷ್ಣರೇ ಹೇಳುತ್ತಿದ್ದರು. ಆದರೆ ಸಾಧನ ಮಾರ್ಗ

ದಲ್ಲಿ ತುಂಬ ಮುಂದುವರಿದಿದ್ದರೂ ಅವರು ಭಗವತ್‌ಸಾಕ್ಷಾತ್ಕಾರವನ್ನು ಪಡೆದಿರಲಿಲ್ಲ. ಅನೇಕ ಸಿದ್ಧಿಗಳನ್ನು ಪಡೆದು ಅವುಗಳ ಪ್ರಭಾವಕ್ಕೆ ಒಳಗಾಗಿ ಗುರಿತಪ್ಪಿದ್ದರು.

9. ಚಂದ್ರನು ಭಾವಪ್ರಧಾನ ವ್ಯಕ್ತಿಯಾಗಿದ್ದು ಭಗವದ್ಭಕ್ತನಾಗಿದ್ದ ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಅವನು 'ಘುಟಿಕಾಸಿದ್ಧಿ'ಯನ್ನು ಪಡೆದಿದ್ದನು. ಮಂತ್ರಪೂತವಾದ ಘುಟಿಕವನ್ನು ಅವನು ಧರಿಸಿಕೊಂಡರೆ ಇತರರ ದೃಷ್ಟಿಗೆ ಅದೃಶ್ಯನಾಗಿಬಿಡುತ್ತಿದ್ದ. ಹೀಗೆ ಅದೃಶ್ಯನಾಗಿ ಹೋಗಲಾಗದ ಪ್ರದೇಶಗಳಿಗೂ ಹೋಗಲು ಅವನಿಗೆ ಸಾಧ್ಯವಾಗುತ್ತಿತ್ತು. ಆದರೆ ಭಗವತ್ಸಾಕ್ಷಾತ್ಕಾರಕ್ಕೆ ಮುಂಚೆ ಇಂತಹ ಪವಾಡ ಸಿದ್ಧಿಸಿದರೆ ಸಾಧಕನಿಗೆ ಅಹಂಕಾರವುಂಟಾಗುತ್ತದೆ. ಈ ಅಹಂಕಾರವು ಉನ್ನತ ಗುರಿಯನ್ನು ಮುಟ್ಟಲು ದೊಡ್ಡ ತಡೆಯಾಗುತ್ತದೆ. ಅಷ್ಟೇ ಅಲ್ಲದೆ ಅವನ ಪತನಕ್ಕೂ ಕಾರಣವಾಗುತ್ತದೆ. ಅಹಂಕಾರ ವೃದ್ಧಿಯಿಂದಲೇ ಪಾಪದ ವೃದ್ಧಿ, ಅದು ಕಡಮೆಯಾದರೆ ಪುಣ್ಯಲಾಭ. ಅಹಂಕಾರ ವೃದ್ಧಿಯಾದರೆ ಕರ್ಮ ಹಾನಿಯಾಗುತ್ತದೆ, ಅದರ ನಾಶದಿಂದ ಧರ್ಮಲಾಭವಾಗುತ್ತದೆ. ಸ್ವಾರ್ಥಪರತೆಯೇ ಪಾಪ, ಸ್ವಾರ್ಥನಾಶವೇ ಪುಣ್ಯ. 'ನಾನು ಸತ್ತುಹೋದರೆ ಎಲ್ಲ ಝಂಜಾಟವೂ ಕೊನೆಗೊಳ್ಳುತ್ತದೆ' ಎಂದು ಶ್ರೀರಾಮಕೃಷ್ಣರು ನಮಗೆ ಮತ್ತೆ ಮತ್ತೆ ಹೇಳುತ್ತಿದ್ದರು.

10. ಅವರು ಹೇಳುತ್ತಿದ್ದರು : "ನೋಡು, ಶಾಸ್ತ್ರವು ಅಹಂಕಾರವನ್ನು ಚಿಜ್ಜಡಗ್ರಂಥಿ ಎಂದು ಕರೆಯುತ್ತದೆ. ಚಿತ್ ಎಂದರೆ ಜ್ಞಾನ ಸ್ವರೂಪವಾದ ಆತ್ಮ ; ಜಡ ಎಂದರೆ ದೇಹೇಂದ್ರಿಯಾದಿಗಳು. ಅಹಂಕಾರವು ಇವೆರಡನ್ನೂ ಒಟ್ಟಿಗೆ ಬಂಧಿಸಿ ಮಾನವ ಮನಸ್ಸಿನಲ್ಲಿ 'ನಾನು ದೇಹೇಂದ್ರಿಯಬುದ್ಧ್ಯಾದಿಗಳಿಂದ ಕೂಡಿದ ಜೀವ' ಎಂಬ ಭ್ರಮೆಯನ್ನು ಹುಟ್ಟಿಸುತ್ತದೆ. ಆ ಕಗ್ಗಂಟನ್ನು ಕತ್ತರಿಸದಿದ್ದರೆ ಇವುಗಳು ಹೋಗುವುದಿಲ್ಲ. ಅದನ್ನು ತ್ಯಜಿಸಬೇಕು. ಪವಾಡಗಳು ಮಲದಂತೆ ಹೇಯವಾದುದೆಂದು ತಾಯಿ ನನಗೆ ತೋರಿಸಿಕೊಟ್ಟಿರುವಳು. ಅವುಗಳ ಕಡೆ ಮನಸ್ಸನ್ನು ಹರಿಸಬಾರದು. ಸಾಧನೆಯಲ್ಲಿ ಮುಂದುವರಿಯುತ್ತಿರುವಾಗ ಅವುಗಳು ಕೆಲವೊಮ್ಮೆ ತಾವಾಗಿಯೆ ಬಂದುಬಿಡುವುವು. ಆದರೆ ಯಾವನು ಅವುಗಳಲ್ಲಿ ಮನಸ್ಸನ್ನಿರಿಸುವನೊ ಅವನ ಪ್ರಗತಿ ಅಲ್ಲಿಗೆ ಕುಂಠಿತವಾಗುತ್ತದೆ, ಭಗವಂತನ ಕಡೆ ಮುಂದುವರಿಯಲಾರ."

ಸ್ವಾಮಿ ವಿವೇಕಾನಂದರಿಗೆ ಧ್ಯಾನವೇ ಜೀವನದ ಸಹಜ ಸ್ಥಿತಿಯಾಗಿತ್ತು. ಉಣ್ಣುವಾಗ ಮಲಗುವಾಗ ಕುಳಿತುಕೊಳ್ಳುವಾಗ ಎಲ್ಲ ಸಮಯದಲ್ಲಿಯೂ ಅವರು ಭಗವಂತನನ್ನು ಧ್ಯಾನಿಸುತ್ತಿದ್ದರು. 'ಅವನು ಧ್ಯಾನಸಿದ್ಧ' ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಒಂದುದಿನ ಧ್ಯಾನ ಮಾಡುತ್ತಿರುವಾಗ ಅವರಿಗೆ ಅತೀಂದ್ರಿಯ ಶಕ್ತಿ (ಬಹುದೂರದಲ್ಲಿರುವ ವ್ಯಕ್ತಿಗಳು ಏನು ಮಾಡುತ್ತಾರೆ, ಏನು ಹೇಳುತ್ತಾರೆ ಎಂಬುದನ್ನು ತಿಳಿಯುವ ಶಕ್ತಿ) ಉಂಟಾಯಿತು. ಧ್ಯಾನ ಮಾಡುತ್ತಿರುವಾಗ ಅವರ ಮನಸ್ಸು ಯಾವುದೊ ಒಂದು ಸ್ತರಕ್ಕೆ ಏರಿತು. ಆಗ ಅವರಿಗೆ ಯಾವನೋ ವ್ಯಕ್ತಿ ಎಲ್ಲಿಯೋ ಕುಳಿತು ಏನೇನು ಮಾತನಾಡುತ್ತಿರುವನೊ ಅದೆಲ್ಲ ತಿಳಿದುಹೋಯಿತು. ತಾವು

ನೋಡುತ್ತಿರುವುದು ಕೇಳುತ್ತಿರುವುದು ಸತ್ಯವೇ ಎಂಬುದನ್ನು ತಿಳಿಯುವ ಕುತೂಹಲ ಅವರಿಗುಂಟಾಯಿತು. ಧ್ಯಾನದಿಂದ ಎದ್ದು ಅವರು ಆ ಸ್ಥಳಕ್ಕೆ ಹೋಗಿ ನೋಡಿದಾಗ ತಾವು ಕಂಡಿದ್ದೆಲ್ಲ ಸಂಪೂರ್ಣ ಸತ್ಯವೆಂದು ತಿಳಿದುಬಂತು. ಹೀಗೆ ಕೆಲವು ದಿನಗಳು ಆದ ಮೇಲೆ ಅವರು ಈ ವಿಷಯವನ್ನು ಶ್ರೀರಾಮಕೃಷ್ಣರಿಗೆ ತಿಳಿಸಿದರು. ಅವರೆಂದರು : "ಇವೆಲ್ಲ ಭಗವತ್ ಸಾಕ್ಷಾತ್ಕಾರಕ್ಕೆ ಇರುವ ಅಡಚಣೆಗಳು. ಇನ್ನು ಕೆಲವು ದಿನ ಧ್ಯಾನ ಮಾಡಬೇಡ."

11. ಘುಟಿಕಾಸಿದ್ಧಿಯನ್ನು ಪಡೆದ ಚಂದ್ರನಿಗೂ ತುಂಬ ಅಹಂಕಾರವುಂಟಾಯಿತು. ಶ್ರೀರಾಮಕೃಷ್ಣರು ಹೇಳುತ್ತಾರೆ : ಚಂದ್ರನ ಮನಸ್ಸಿನಲ್ಲಿ ಕ್ರಮೇಣ ಕಾಮ-ಕಾಂಚನಾಸಕ್ತಿ ವೃದ್ಧಿಯಾಯಿತು. ಅವನು ಒಬ್ಬ ಶ್ರೀಮಂತ ವ್ಯಕ್ತಿಯ ಮಗಳಲ್ಲಿ ಆಸಕ್ತನಾಗಿ ಅದೃಶ್ಯರೂಪದಲ್ಲಿ ಅವರ ಮನೆಗೆ ಹೋಗಿಬರತೊಡಗಿದ. ಕ್ರಮೇಣ ಅವನ ಅಹಂಕಾರ ಸ್ವಾರ್ಥತೆ ಅಧಿಕವಾಗಿ ತನ್ನ ಪವಾಡಶಕ್ತಿಯನ್ನು ಕಳೆದುಕೊಂಡನು.

12 ಗಿರಿಜನಿಗೂ ಅದ್ಭುತ ಶಕ್ತಿ ಇತ್ತೆಂದು ಶ್ರೀರಾಮಕೃಷ್ಣರು ಹೇಳುತ್ತಾರೆ ಒಂದುದಿನ ಶ್ರೀರಾಮಕೃಷ್ಣರು ಅವನೊಡನೆ ಶಂಭುಮಲ್ಲಿಕನ ತೋಟಕ್ಕೆ ಓಡಾಡಲು ಹೋಗಿದ್ದರು. ಶಂಭುಮಲ್ಲಿಕನಿಗೆ ಶ್ರೀರಾಮಕೃಷ್ಣರ ಮೇಲೆ ಬಹಳ ಪ್ರೀತಿ, ಅವರಿಗೆ ಏನಾದರು ಸೇವೆ ಮಾಡುವ ಅವಕಾಶ ಸಿಕ್ಕಿದರೆ ತನ್ನ ಮಹಾ ಭಾಗ್ಯ ಎಂದು ತಿಳಿಯುತ್ತಿದ್ದ. ಅವನು 250 ರೂಪಾಯಿಗೆ ದಕ್ಷಿಣೇಶ್ವರದ ಹತ್ತಿರ ಸ್ವಲ್ಪ ಜಾಗ ಕೊಂಡುಕೊಂಡು ಶ್ರೀಮಾತೆಯವರಿಗಾಗಿ ಒಂದು ಕೊಠಡಿಯನ್ನು ಕಟ್ಟಿಸಿದ್ದನು. ಶ್ರೀಮಾತೆಯವರು ದಕ್ಷಿಣೇಶ್ವರಕ್ಕೆ ಬಂದಾಗ ಅಲ್ಲಿಯೇ ಇಳಿದುಕೊಳ್ಳುತ್ತಿದ್ದರು. ಅವರು ಅಲ್ಲಿರುವಾಗ ಒಮ್ಮೆ ತೀವ್ರ ರಕ್ತಭೇಧಿಯಿಂದ ನರಳಬೇಕಾಯಿತು. ಆಗ ಶಂಭುಮಲ್ಲಿಕನೆ ಔಷಧೋಪಚಾರದ ಎಲ್ಲ ವ್ಯವಸ್ಥೆ ಮಾಡಿದ್ದನು. ಶಂಭುಮಲ್ಲಿಕನ ಪತ್ನಿಯೂ ಕೂಡ ಶ್ರೀರಾಮಕೃಷ್ಣರನ್ನೂ ಮತ್ತು ಶ್ರೀಮಾತೆಯವರನ್ನೂ ದೇವತಾಪುರುಷರೆಂದು ಪೂಜಿಸುತ್ತಿದ್ದಳು. ಶ್ರೀಮಾತೆಯವರು ದಕ್ಷಿಣೇಶ್ವರದಲ್ಲಿ ಇರುವಾಗ ಪ್ರತಿ ಮಂಗಳವಾರ ಅವರನ್ನು ಮನೆಗೆ ಕರೆದುಕೊಂಡು ಹೋಗಿ ಅವರನ್ನು ದೇವಿಯಂತೆ ಪೂಜಿಸುತ್ತಿದ್ದಳು. ಶ್ರೀರಾಮಕೃಷ್ಣರಿಗೆ ಕಲಕತ್ತೆಗೆ ಹೋಗಲು ಗಾಡಿಬಾಡಿಗೆಯನ್ನೂ ಅವರಿಗೆ ಬೇಕಾಗುವ ಎಲ್ಲ ಅವಶ್ಯಕ ವಸ್ತುಗಳನ್ನೂ ಶಂಭುಮಲ್ಲಿಕನು ಒದಗಿಸಿಕೊಡುತ್ತಿದ್ದ. ಮಥುರನಾಥನ ಸಾವಿನನಂತರ ಶಂಭುಮಲ್ಲಿಕನು ಅವನ ಸ್ಥಾನವನ್ನು ತುಂಬಿದ್ದನು. ಶ್ರೀರಾಮಕೃಷ್ಣರು ಅವನನ್ನು 'ದ್ವಿತೀಯ ರಸದ್ದಾರ' ಎಂದು ಕರೆಯುತ್ತಿದ್ದರು, ಆಗಾಗ ಅವನ ತೋಟಕ್ಕೆ ಹೋಗಿ ಅವನೊಡನೆ ಕೆಲವು ಗಂಟೆ ಆಧ್ಯಾತ್ಮಿಕ ವಿಚಾರವಾಗಿ ಮಾತನಾಡುತ್ತಿದ್ದರು.

ಅಂದು ಗಿರಿಜನ ಜೊತೆ ಅವನ ತೋಟಕ್ಕೆ ಹೋಗಿದ್ದಾಗ ಮಾತನಾಡುತ್ತ ಬಹಳ ಕಾಲ ಕಳೆದುಹೋಯಿತು. ಶ್ರೀರಾಮಕೃಷ್ಣರು ಹೇಳುತ್ತಿದ್ದರು ; "ಭಕ್ತರದು ಗಾಂಜಾ ಕೋರರ ಸ್ವಭಾವದಂತೆ. ಗಾಂಜಾಕೋರನು ಒಂದು ದಂ ಹೊಗೆಯನ್ನು ಎಳೆದು

ಕೊಂಡು ಗುಡಿಗುಡಿಯನ್ನು ಇನ್ನೊಬ್ಬನಿಗೆ ಕೊಡುತ್ತಾನೆ. ಅನಂತರ ಅವನು ಎಳೆದುಕೊಳ್ಳುತ್ತಿರುವಾಗ ತಾನು ನಿಧಾನವಾಗಿ ಹೊಗೆ ಬಿಡುತ್ತಾನೆ. ಒಬ್ಬ ಜೊತೆಗಾರ ಇಲ್ಲದೆ ಅವನಿಗೆ ಅಮಲಿನ ಸುಖ ಉಂಟಾಗುವುದಿಲ್ಲ. ಹೀಗೆಯೇ ಭಕ್ತರೂ ಕೂಡ ಒಟ್ಟಿಗೆ ಸೇರಿದರೆ ಒಬ್ಬನು ಭಗವದ್ವಿಷಯ ಮಾತನಾಡುತ್ತ ತನ್ಮಯನಾಗಿ ಸುಮ್ಮನೆ ಕುಳಿತುಕೊಳ್ಳುತ್ತಾನೆ. ಆಗ ಇನ್ನೊಬ್ಬನು ಮಾತನಾಡಲು ಪ್ರಾರಂಭಿಸುತ್ತಾನೆ. ಅದನ್ನು ಕೇಳುತ್ತ ಇವನು ಆನಂದಿಸುತ್ತಾನೆ.'' ಅಂದು ಶಂಭುಮಲ್ಲಿಕ, ಗಿರಿಜ ಮತ್ತು ಶ್ರೀರಾಮಕೃಷ್ಣರು ಒಟ್ಟಿಗೆ ಸೇರಿದ್ದರಿಂದ ಭಗವದ್ವಿಷಯವಾಗಿ ಮಾತನಾಡುತ್ತ ಸಮಯ ಹೋದದ್ದೇ ಯಾರಿಗೂ ತಿಳಿಯಲಿಲ್ಲ. ತುಂಬ ರಾತ್ರಿಯಾದ ಮೇಲೆ ಶ್ರೀರಾಮಕೃಷ್ಣರು ಗಿರಿಜನೊಡನೆ ದಕ್ಷಿಣೇಶ್ವರದ ಕಡೆ ಹೊರಟರು. ತುಂಬ ಕತ್ತಲೆಯಾಗಿದ್ದುದರಿಂದ ದಾರಿ ಕಾಣುತ್ತಿರಲಿಲ್ಲ, ಮಧ್ಯೆ ಮಧ್ಯೆ ದಾರಿ ತಪ್ಪಿಹೋಗುತ್ತಿತ್ತು. ಆಧ್ಯಾತ್ಮಿಕ ವಿಷಯವನ್ನು ಮಾತನಾಡುತ್ತ ಎಲ್ಲವನ್ನೂ ಮರೆತು ಬಿಡುತ್ತಿದ್ದರು. ಶಂಭುವಿನ ಹತ್ತಿರ ಒಂದು ಲಾಟೀನನ್ನು ತೆಗೆದುಕೊಂಡುಬರಬಹುದಿತ್ತು. ಈಗೇನು ಮಾಡುವುದು ? ಗಿರಿಜನ ಕೈಹಿಡಿದುಕೊಂಡು ತಡವುತ್ತ ಮುಂದೆ ಸಾಗಿದರು. ಆದರೆ ಕತ್ತಲೆಯಲ್ಲಿ ಮುಂದುವರಿಯುವುದು ತುಂಬ ಕಷ್ಟವಾಯಿತು. ಅವರ ಕಷ್ಟವನ್ನು ನೋಡಿ ಗಿರಿಜನು, ''ನೋಡಿ, ಸ್ವಲ್ಪ ನಿಲ್ಲಿ. ನಿಮಗೆ ನಾನು ಬೆಳಕು ತೋರಿಸುತ್ತೇನೆ.'' ಎಂದು ಹೇಳಿ ಬೆನ್ನು ತಿರುಗಿಸಿ ನಿಂತನು. ಅವನ ಬೆನ್ನಿನಿಂದ ಒಂದು ಉಜ್ವಲ ಬೆಳಕಿನ ಧಾರೆ ಹರಿದು ದಾರಿಯನ್ನು ಬೆಳಗಿಸಿತು. ಶ್ರೀರಾಮಕೃಷ್ಣರು ಹೇಳುತ್ತಿದ್ದರು : ''ಆ ಬೆಳಕಿನ ಧಾರೆ ದೇವಸ್ಥಾನದ ಮುಖಮಂಟಪದವರೆಗೂ ಕಾಣುತ್ತಿತ್ತು. ಆ ಬೆಳಕಿನ ಸಹಾಯದಿಂದ ನಾನು ಹಿಂತಿರುಗಿ ಬಂದೆ.''

13. ಈ ಪ್ರಸಂಗವನ್ನು ಹೇಳಿ ಶ್ರೀರಾಮಕೃಷ್ಣರು ಮುಗುಳ್ನಕ್ಕು ಮುಂದುವರಿಸಿದರು : ''ಆದರೆ ಅವನ ಆ ರೀತಿಯ ಶಕ್ತಿ ಬಹಳ ಕಾಲ ಉಳಿಯಲಿಲ್ಲ. ಇಲ್ಲಿ (ತಮ್ಮೊಡನೆ) ಕೆಲವು ಕಾಲ ಇರುತ್ತ ಆ ಎಲ್ಲ ಪವಾಡಗಳೂ ಹೊರಟುಹೋದವು.'' ಆ ರೀತಿ ಆಗಲು ಕಾರಣವೇನೆಂದು ನಾವು ಕೇಳಲು ಅವರೆಂದರು : ''ಅವನ ಹಿತದೃಷ್ಟಿಯಿಂದ ತಾಯಿಯು ಆ ಎಲ್ಲ ಶಕ್ತಿಗಳನ್ನು ಇದು (ತಮ್ಮ ಕಡೆ ಕೈತೋರಿಸಿ) ಸೆಳೆದುಕೊಳ್ಳುವಂತೆ ಮಾಡಿದಳು. ಹೀಗಾದ ಮೇಲೆ ಅವನ ಮನಸ್ಸು ಅವನ್ನೆಲ್ಲ ಬಿಟ್ಟು ಭಗವಂತನ ಕಡೆ ಹರಿಯಿತು.''

14. ಶ್ರೀರಾಮಕೃಷ್ಣರು ಮುಂದುವರಿಸಿದ್ದರು : ''ಆದರಲೆಲ್ಲ ಏನಿದೆ ? ಈ ಎಲ್ಲ ಸಿದ್ಧಿಗಳ ಬಂಧನದಲ್ಲಿ ಸಿಕ್ಕಿಕೊಂಡು ಮನಸ್ಸು ಸಚ್ಚಿದಾನಂದನಿಂದ ಹೊರ ಹೋಗುತ್ತದೆ. ಒಂದು ಕತೆಯನ್ನು ಕೇಳಿ : ಒಬ್ಬನಿಗೆ ಇಬ್ಬರು ಗಂಡು ಮಕ್ಕಳಿದ್ದರು. ಹಿರಿಯ ಮಗ ಯುವಕನಾಗಿರುವಾಗಲೇ ಸಂಸಾರವನ್ನು ತ್ಯಜಿಸಿ ಸಂನ್ಯಾಸಿಯಾಗಿ ದೂರ ಹೊರಟುಹೋದ. ಕಿರಿಯವನು ಶಿಕ್ಷಣವನ್ನು ಪಡೆದು ಪಂಡಿತನಾಗಿ ಗೃಹಸ್ಥ ಜೀವನವನ್ನು ನಡೆಸತೊಡಗಿದ. ಹನ್ನೆರಡು ವರ್ಷದ ನಂತರ ಇಷ್ಟವಾದರೆ ಒಮ್ಮೆ ಹುಟ್ಟೂ

ರಿಗೆ ಹೋಗಬಹುದೆಂಬ ಸಂನ್ಯಾಸಿಗಳ ಒಂದು ನಿಯಮವಿದೆ. ಆ ಸಂನ್ಯಾಸಿಯೂ ಕೂಡ ಹನ್ನೆರಡು ವರ್ಷದನಂತರ ಒಮ್ಮೆ ಹುಟ್ಟೂರಿಗೆ ಬಂದನು. ತನ್ನ ತಮ್ಮನ ಆಸ್ತಿ ಪಾಸ್ತಿಯನ್ನೆಲ್ಲ ನೋಡುತ್ತ ಅವನ ಮನೆಯ ಮುಂದೆ ಬಂದು ಅವನನ್ನು ಕರೆದನು. ತಮ್ಮನು ಹೊರಗೆ ಬಂದು ನೋಡುತ್ತಾನೆ, ಅಣ್ಣ ಬಂದಿದ್ದಾನೆ. ಅನೇಕ ವರ್ಷಗಳ ನಂತರ ಅಣ್ಣನನ್ನು ನೋಡಿ ಅವನ ಆನಂದಕ್ಕೆ ಪಾರವೇ ಇರಲಿಲ್ಲ. ಅಣ್ಣನನ್ನು ಒಳಗೆ ಕರೆದುಕೊಂಡು ಹೋಗಿ ಅವನಿಗೆ ಎಲ್ಲ ರೀತಿಯ ಉಪಚಾರ ಮಾಡಿದನು. ಊಟದ ನಂತರ ಅವರಿಬ್ಬರೂ ಮಾತನಾಡತೊಡಗಿದರು. ತಮ್ಮನು ಕೇಳಿದ : 'ಅಣ್ಣ ನೀನು ಸಂಸಾರ ಸುಖವನ್ನೆಲ್ಲ ತ್ಯಜಿಸಿ ಇಷ್ಟು ದಿನ ಸಂನ್ಯಾಸ ಜೀವನ ನಡೆಸಿರುವೆ. ಇದರಿಂದ ನೀನು ಏನು ಪಡೆದೆ ಎಂದು ಹೇಳುತ್ತೀಯ ?' 'ನೋಡಬೇಕೇನು ? ಬಾ ನನ್ನೊಡನೆ' ಎಂದು ಹೇಳಿ ಸಂನ್ಯಾಸಿಯು ತಮ್ಮನನ್ನು ನದಿಯ ತೀರಕ್ಕೆ ಕರೆದುಕೊಂಡು ಹೋದನು. 'ಈಗ ನೋಡು' ಎಂದು ಹೇಳಿ ಅವನು ನದಿಯ ನೀರಿನ ಮೇಲೆ ನಡೆದುಕೊಂಡು ಹೋಗಿ ಆಚೆಯ ದಡ ಸೇರಿದನು. ಅನಂತರ 'ನೋಡಿದೆಯೇನು ?' ಎಂದು ಹೆಮ್ಮೆ ಯಿಂದ ನುಡಿದನು. ಆಗ ತಮ್ಮನು ದೋಣಿಯವನಿಗೆ ಅರ್ಧ ಆಣೆ ಕೊಟ್ಟು ದೋಣಿಯ ಮೂಲಕ ಆಚೆಯ ದಡ ಸೇರಿ 'ಇದೇನು ಮಹಾ' ಎಂದನು. 'ನಡೆದುಕೊಂಡೇ ನದಿ ಯನ್ನು ದಾಟುವುದು ಕಡಮೆಯೇನು ?' ಎಂದು ಅಣ್ಣನು ಜಂಬಕೊಚ್ಚಿದನು. ಆಗ ತಮ್ಮನು ನಕ್ಕು ನುಡಿದನು : ''ಅಣ್ಣ ನೀನೆ ನೋಡಿದೆ, ನಾನು ಅರ್ಧ ಆಣೆ ಕೊಟ್ಟು ಈ ನದಿ ದಾಟಿಬಿಟ್ಟೆ. ನೀನು ಇದಕ್ಕಾಗಿ ಹನ್ನೆರಡು ವರ್ಷ ಕಷ್ಟಪಡಬೇಕಾಯಿತಲ್ಲ ! ನಾನು ಅರ್ಧ ಆಣೆಯಿಂದ ಅನಾಯಾಸವಾಗಿ ಏನನ್ನು ಪಡೆದೆನೊ ಅದನ್ನೇ ನೀನು ಪಡೆ ದಿರುವುದು. ನಿನ್ನ ಆ ಪ್ರಯತ್ನದ ಫಲ ಕೇವಲ ಅರ್ಧ ಆಣೆ !' ಈ ಮಾತನ್ನು ಕೇಳಿ ಅಣ್ಣನ ಕಣ್ಣು ತೆರೆಯಿತು, ಅವನು ಭಗವಂತನ ಕಡೆ ತನ್ನ ಮನಸ್ಸನ್ನು ಹರಿಸಿದನು.''

15. ಹೀಗೆ ಅನೇಕ ರೀತಿಯಲ್ಲಿ ಶ್ರೀರಾಮಕೃಷ್ಣರು, ಧರ್ಮಕ್ಷೇತ್ರದಲ್ಲಿ ಇಂತಹ ಪವಾಡ ಶಕ್ತಿಗಳೆಲ್ಲ ತುಂಬ ತುಚ್ಛವಾದವುಗಳು ಎಂದು ನಮಗೆ ತೋರಿಸಿ ಕೊಟ್ಟಿರುವರು. ಅವರು ಹೇಳುತ್ತಿದ್ದ ಇನ್ನೊಂದು ಕತೆಯನ್ನೂ ಇಲ್ಲಿ ಉಲ್ಲೇಖಿಸ ಬೇಕು ಎಂದೆನಿಸುತ್ತಿದೆ. ''ಒಬ್ಬ ಯೋಗಿಯು ಯೋಗ ಸಾಧನೆಯ ಮೂಲಕ ವಾಕ್ ಸಿದ್ಧಿಯನ್ನು ಪಡೆದನು. ಯಾರಿಗೆ ಏನು ಹೇಳಿದರೂ ಅದು ಹಾಗೆಯೇ ಆಗುತ್ತಿತ್ತು. ಅವನು ಯಾರಿಗಾದರೂ 'ಸಾಯಿ' ಎಂದರೆ ಕೂಡಲೇ ಸತ್ತು ಬಿಡುತ್ತಿದ್ದ, 'ಬದುಕು' ಎಂದರೆ ಕೂಡಲೇ ಜೀವವನ್ನು ಪಡೆದು ಮೇಲೇಳುತ್ತಿದ್ದ. ಒಂದು ದಿನ ಅವನು ಎಲ್ಲಿಗೊ ಹೋಗುತ್ತಿರುವಾಗ ದಾರಿಯಲ್ಲಿ ಒಬ್ಬ ಭಕ್ತನು ಸಿಕ್ಕಿದ. ಅವನು ಯಾವಾ ಗಲೂ ಭಗವಂತನ ಹೆಸರನ್ನು ಜಪಿಸುತ್ತಿದ್ದ. ಆ ಭಕ್ತನು ಅಲ್ಲಿ ಅನೇಕ ವರ್ಷಗಳಿಂದ ತಪಸ್ಸು ಮಾಡುತ್ತಿದ್ದ. ಅಹಂಕಾರಿಯಾದ ಯೋಗಿಯು ಆ ಭಕ್ತನನ್ನು ನೋಡಿ ಹೇಳಿದ : 'ನೋಡಪ್ಪ, ಎಷ್ಟೋ ಕಾಲದಿಂದ ನೀನು ಭಗವಂತನ ಹೆಸರನ್ನು ಕರೆಯು ತ್ತಿರುವೆ. ಆದರಿಂದ ನೀನು ಏನು ಪಡೆದೆ, ಹೇಳು ?' ಭಕ್ತನು ಹೇಳಿದ :

'ಇನ್ನೇನು ಪಡೆಯಲಿ ? ಅವನನ್ನು ಪಡೆಯುವುದಲ್ಲದೆ ನನಗಿನ್ನಾವ ಆಸೆಯೂ ಇಲ್ಲ. ಮತ್ತೆ ಅವನ ಕೃಪೆಯಿಲ್ಲದೆ ಅವನನ್ನು ಪಡೆಯಲಾಗುವುದಿಲ್ಲ. ಅದಕ್ಕಾಗಿಯೇ ಬಿದ್ದು ಬಿದ್ದು ಅವನನ್ನು ಕರೆಯುತ್ತಿದ್ದೇನೆ—ಎಂದಾದರೂ ಒಂದು ದಿನ ಈ ದೀನನ ಮೇಲೆ ಅವನ ದಯೆಯಾಗುವುದೆಂದು.' ಯೋಗಿಯು ಅವನ ಮಾತನ್ನು ಕೇಳಿ ಹೇಳಿದ: 'ಏನೂ ಸಿಗಲಿಲ್ಲ ಎಂದರೆ ಈ ಕಷ್ಟ ಏತಕ್ಕೆ ? ಯಾವುದರಿಂದ ಏನಾದರೂ ಸಿಗುವುದೊ ಅದನ್ನು ಮಾಡು.' ಭಕ್ತನು ಸ್ವಲ್ಪ ಹೊತ್ತು ಸುಮ್ಮನಿದ್ದು ಆನಂತರ ಹೇಳಿದ ; 'ಆಗಲಿ ಮಹಾಶಯರೆ, ನೀವೇನು ಪಡೆದಿದ್ದೀರಿ ಎಂಬುದನ್ನು ಹೇಳುತ್ತೀರಾ ?' 'ಹೇಳುವುದೇನು ಬಂತು ? ಮಾಡಿ ತೋರಿಸುತ್ತೇನೆ, ನೋಡು' ಎಂದು ಹೇಳಿ ಯೋಗಿಯು ಹತ್ತಿರದಲ್ಲಿಯೇ ಮರಕ್ಕೆ ಕಟ್ಟಿದ್ದ–ಆನೆಯನ್ನು ಕುರಿತು 'ಆನೆಯೆ, ನೀನು ಸಾಯಿ' ಎಂದನು. ಕೂಡಲೇ ಆನೆಯು ಸತ್ತು ಬಿತ್ತು. ಯೋಗಿಯು ಹುಬ್ಬು ಹಾರಿಸುತ್ತ 'ನೋಡಿದೆಯ ? ಮತ್ತೆ ನೋಡು' ಎಂದು ಹೇಳಿ ಸತ್ತ ಆನೆಯನ್ನು ಕುರಿತು ಮತ್ತೆ ನುಡಿದನು, 'ಆನೆಯೆ, ನೀನು ಬದುಕು' ಎಂದು. ಕೂಡಲೆ ಆನೆಯು ಮೈಕೊಡವಿ ಮೇಲೆದ್ದಿತು. 'ನೋಡಿದೆಯ ನನ್ನ ಶಕ್ತಿಯನ್ನು ?' ಎಂದು ಯೋಗಿಯು ಹೆಮ್ಮೆಯಿಂದ ನುಡಿದನು. ಭಕ್ತನು ಅಷ್ಟು ಹೊತ್ತು ಸುಮ್ಮನೆ ಕುಳಿತಿದ್ದವನು ಈಗ ಹೇಳಿದ : ''ಆನೆ ಸತ್ತಿತು ಮತ್ತೆ ಬದುಕಿತು, ಅಷ್ಟೆ. ಆನೆ ಸತ್ತು ಹುಟ್ಟಿದ್ದರಿಂದ ನಿಮಗೇನಾಯಿತು. ಹೇಳುತ್ತೀರಾ ? ಈ ಶಕ್ತಿಯಿಂದ ನೀವು ಜನ್ಮ-ಮೃತ್ಯುನಿಂದ ಪಾರಾಗಿರುವಿರೇನು ? ಜ್ವರ-ವ್ಯಾಧಿಗಳು ನಿಮ್ಮನ್ನು ಬಿಟ್ಟಿರುವುದೆ ? ಇಲ್ಲವೇ, ಅಖಂಡ ಸಚ್ಚಿದಾನಂದ ಸತ್ಯದ ಸಾಕ್ಷಾತ್ಕಾರವಾಗಿದೆಯೆ ?' ಯೋಗಿಯು ಇದನ್ನು ಕೇಳಿ ನಿರುತ್ತರನಾದನು. ಆಗ ಅವನಿಗೆ ಬುದ್ಧಿ ಬಂತು.

16. ಭೈರವಿ ಬ್ರಾಹ್ಮಣಿಯ ಸಹಾಯದಿಂದ ಚಂದ್ರ ಮತ್ತು ಗಿರಿಜ–ಇವರು ಸಾಧನ ಮಾರ್ಗದಲ್ಲಿ ತುಂಬ ಮುಂದುವರಿದಿದ್ದರೂ ಅಂತಿಮ ಸ್ಥಿತಿಯನ್ನು ಪಡೆದಿರಲಿಲ್ಲ. ಶ್ರೀರಾಮಕೃಷ್ಣರ ದರ್ಶನದಿಂದ, ಅವರ ದಿವ್ಯಶಕ್ತಿಯ ಸಹಾಯದಿಂದ ಅವರ ಅಹಂಕಾರವಮೂಲವಾಗಿದ್ದ ಆ ಪವಾಡಶಕ್ತಿಗಳು ನಾಶವಾಗಿ ಅವರು ಜಾಗ್ರತರಾಗಿ ಇಮ್ಮಡಿ ಉತ್ಸಾಹದಿಂದ ಭಗವತ್ಸಾಕ್ಷಾತ್ಕಾರಕ್ಕೆ ಪ್ರಯತ್ನವನ್ನು ಮುಂದುವರಿಸಿದರು.*

---

* 1899ರಲ್ಲಿ ಸ್ವಾಮಿ ವಿವೇಕಾನಂದರು ಬೇಲೂರು ಮಠದಲ್ಲಿದ್ದಾಗ ಒಬ್ಬ ವ್ಯಕ್ತಿಯು ಬಂದು ತಾನು 'ಚಂದ್ರ' ಎಂದು ತನ್ನ ಪರಿಚಯವನ್ನು ನೀಡಿದನು. ಸುಮಾರು ಒಂದು ತಿಂಗಳಿಗಿಂತಲೂ ಹೆಚ್ಚು ಕಾಲ ಅಲ್ಲಿ ಅವನು ವಾಸಿಸಿದ್ದನು. ಸ್ವಾಮಿ ಬ್ರಹ್ಮಾನಂದರು ಆಗ ಮಠದಲ್ಲಿಯೇ ಇದ್ದರು. ಅವರೊಡನೆ ಆ ವ್ಯಕ್ತಿಯು ಬಹಳ ಹೊತ್ತು ರಹಸ್ಯವಾಗಿ ಮಾತನಾಡುತ್ತಿದ್ದುದನ್ನು ನೋಡಿರುವೆವು. ಅವನು ಮತ್ತೆ ಮತ್ತೆ ಸ್ವಾಮೀಜೀಯವರನ್ನು ಕೇಳುತ್ತಿದ್ದನಂತೆ 'ನಿಮಗೆ ಇಲ್ಲಿ

17. ಭೈರವೀ ಬ್ರಾಹ್ಮಣಿಯು ಸಾಧನೆ ಮಾರ್ಗದಲ್ಲಿ ತುಂಬ ಮುಂದುವರಿದಿದ್ದರೂ ಅವಳಿನ್ನೂ ಅದರ ಅಂತಿಮ ಗುರಿಯನ್ನು ಮುಟ್ಟಿರಲಿಲ್ಲ ಎಂಬುದು ನಮಗೆ ಸ್ಪಷ್ಟವಾಗಿ ತಿಳಿದುಬರುತ್ತದೆ. ತೋತಾಪುರಿಯು ದಕ್ಷಿಣೇಶ್ವರಕ್ಕೆ ಬಂದಾಗ ಶ್ರೀರಾಮಕೃಷ್ಣರು ಆಗಲೆ ತಂತ್ರ ಸಾಧನೆಯನ್ನು ಮುಗಿಸಿದ್ದರು. ಅವನು ಅವರಿಗೆ ಸಂನ್ಯಾಸದೀಕ್ಷೆ ಇತ್ತು ಅದ್ವೈತ ವಿಚಾರವನ್ನು ಹೇಳತೊಡಗಿದಾಗ ಬ್ರಾಹ್ಮಣಿಯು ಅವರನ್ನು ತಡೆಯಲು ಬಹಳ ಪ್ರಯತ್ನಿಸಿದಳು. "ಮಗು, ಅವನ ಹತ್ತಿರ ಹೋಗಬೇಡ. ಅವರದೆಲ್ಲ ಶುಷ್ಕಜ್ಞಾನ. ಅವನ ಜೊತೆ ಬೆರೆತರೆ ನಿನ್ನ ಭಕ್ತಿಭಾವವೆಲ್ಲ ಹೊರಟುಹೋಗುತ್ತದೆ"—ಎಂದು ಶ್ರೀರಾಮಕೃಷ್ಣರಿಗೆ ಒತ್ತಿ ಹೇಳುತ್ತಿದ್ದಳು. ಯಾವ ನಿರ್ವಿಕಲ್ಪ ಜ್ಞಾನವನ್ನು ಅವಳು ಶುಷ್ಕವೆಂದು ಕರೆಯುತ್ತಿದ್ದಳೊ ಅದೇ ಪರಾಭಕ್ತಿಯು

ಏನಾದರು ಇಂಗಿತ ಸಿಕ್ಕಿದೆಯ ? ಅಂದರೆ, ಇಲ್ಲಿ ಶ್ರೀರಾಮಕೃಷ್ಣರು ಜಾಗ್ರತರಾಗಿರುವ ಅನುಭವವಾಗಿದೆಯೆ ? ಎಂದು.

ಶ್ರೀರಾಮಕೃಷ್ಣರು ತನ್ನ ಬಗ್ಗೆ ಹೇಳಿರುವುದೆಲ್ಲ ಹಾಗೆಯೇ ಆಗಿರುವುದೆಂದು ಅವನು ಹೇಳಿರುವನು. ಮೃತ್ಯುವಿಗೆ ಮುಂಚೆ ದರ್ಶನ ನೀಡುವುದಾಗಿ ಅವರು ಮಾತುಕೊಟ್ಟಿದ್ದರಂತೆ. ಅದಿನ್ನೂ ಪೂರ್ತಿಯಾಗಬೇಕಿತ್ತು. ಅವನು ಪ್ರತಿದಿನ ಮಠದ ದೇವಸ್ಥಾನಕ್ಕೆ ಹೋಗಿ ತುಂಬ ಭಕ್ತಿಭಾವದಿಂದ ಜಪ-ಧ್ಯಾನ ಮಾಡುತ್ತಿದ್ದ. ಆಗ ಅವನ ಕಣ್ಣಿನಿಂದ ಪ್ರೇಮಾಶ್ರು ಸುರಿಯುತ್ತಿತ್ತು. ಯಾರಾದರೂ ಶ್ರೀರಾಮಕೃಷ್ಣರ ಬಗ್ಗೆ ವಿಚಾರಿಸಿದರೆ ಅವನು ತನಗೆ ಗೊತ್ತಿರುವುದನ್ನು ತುಂಬ ಆನಂದದಿಂದ ಹೇಳುತ್ತಿದ್ದ. ಅವನು ತುಂಬ ಶಾಂತ ಸ್ವಭಾವದವನೆಂದು ಅನಿಸುತ್ತಿತ್ತು. ಅವನು ಒಂದು ಕಡೆ ಸುಮ್ಮನೆ ಕುಳಿತಿರುತ್ತಿದ್ದ ಮತ್ತು ಆಗಾಗ ಕಣ್ಣುಮುಚ್ಚಿಕೊಳ್ಳುತ್ತಿದ್ದ. ಇದನ್ನು ನೋಡಿ ಯಾರೊ 'ಏನು, ನಿಮಗೆ ಅಫೀಮಿನ ಅಭ್ಯಾಸವಿದೆಯೆ ?' ಎಂದು ಅಪಹಾಸ್ಯ ಮಾಡಿದ್ದರು. ಚಂದ್ರನು ವಿನೀತಭಾವದಿಂದ ಹೇಳಿದ : 'ನಾನು ಏನು ತಪ್ಪು ಮಾಡಿದೆ ಎಂದು ನೀವು ಈ ರೀತಿ ಮಾತನಾಡುತ್ತಿರುವಿರಿ ?'

ಶ್ರೀರಾಮಕೃಷ್ಣರ ಮಂದಿರಕ್ಕೆ ಹೋಗಿ ಮೊದಲು ಅವರಿಗೆ ಪ್ರಣಾಮ ಮಾಡಿ 'ಅಣ್ಣ' ಎಂದು ಹೇಳುತ್ತ ಕಣ್ಣೀರು ಸುರಿಸುತ್ತಿದ್ದ. ಅವನನ್ನು ನೋಡಿದರೆ ಸಾಧಾರಣ ವ್ಯಕ್ತಿಯೆಂದೇ ಅನಿಸುತ್ತಿತ್ತು. ಕಾವಿ ಬಟ್ಟೆಯಾಗಲಿ ಮುದ್ರೆಯೆ ಮುಂತಾದ ಆಡಂಬರಗಳಾಗಲಿ ಇರಲಿಲ್ಲ. ಒಂದು ಸಾಧಾರಣ ಪಂಚೆ ಉಟ್ಟಿದ್ದ, ಮತ್ತೆ ಒಂದು ಉತ್ತರೀಯ. ಕೈಯಲ್ಲಿ ಒಂದು ಬ್ಯಾಗು ಮತ್ತು ಛತ್ರಿ ಇತ್ತು. ಬ್ಯಾಗಿನಲ್ಲಿ ಇನ್ನೊಂದು ಪಂಚೆ, ಒಂದು ಟವಲು ಮತ್ತು ಬಹುಶಃ ನೀರು ಕುಡಿಯುವುದಕ್ಕೆ ಒಂದು ಲೋಟ-ಇವಿಷ್ಟು ಇದ್ದವು. ಹೀಗೆಯೇ ಅವನು ತೀರ್ಥಪರ್ಯಟನ ಮಾಡುತ್ತಿದ್ದನಂತೆ. ಸ್ವಾಮಿ ಬ್ರಹ್ಮಾನಂದರು ಅವನಿಗೆ ಆದರದಿಂದ ಸನ್ಮಾನ ಮಾಡಿ ಮಠದಲ್ಲಿಯೇ ಯಾವಾಗಲೂ ಇದ್ದುಬಿಡಬೇಕೆಂದು ಒತ್ತಾಯಿಸಿದರು. ಅವನು ಒಪ್ಪಿ ನುಡಿದಿದ್ದ : 'ಊರಿನಲ್ಲಿ ಜಮೀನಿನ ವ್ಯವಸ್ಥೆಮಾಡಿ ಬಂದು ಇಲ್ಲಿ ಇದ್ದು ಬಿಡುತ್ತೇನೆ.' ಆದರೆ ಮುಂದೆ ಅವನು ಎಂದೂ ಮಠಕ್ಕೆ ಬರಲಿಲ್ಲ.

ಪ್ರಥಮ ಸೋಪಾನ ಎಂಬುದು ಅವಳಿಗೆ ತಿಳಿದಿರಲಿಲ್ಲ ಎಂದು ಇದರಿಂದ ಗೊತ್ತಾಗುತ್ತದೆ. ಶುದ್ಧ ಬುದ್ಧ ಆತ್ಮಾರಾಮ ಪುರುಷರೇ ಪರಮಾತ್ಮನನ್ನು ಅಹೇತುಕವಾಗಿ ಪ್ರೀತಿಸಬಲ್ಲರು. ಶ್ರೀರಾಮಕೃಷ್ಣರು ಹೇಳುತ್ತಿದ್ದಂತೆ, ''ಶುದ್ಧಾ ಭಕ್ತಿ ಮತ್ತು ಶುದ್ಧ ಜ್ಞಾನ—ಇವೆರಡೂ ಒಂದೇ.'' ಬ್ರಾಹ್ಮಣಿಗೆ ಈ ವಿಷಯ ಅರ್ಥವಾಗಿರಲಿಲ್ಲ ಎಂದೆನಿಸುತ್ತದೆ. ಇದರಿಂದಾಗಿಯೇ ಶ್ರೀರಾಮಕೃಷ್ಣರು ತಮ್ಮ ತಾಯಿಗೆ ಸಂನ್ಯಾಸದ ವಿಷಯವನ್ನು ಹೇಗೆ ತಿಳಿಸಲಿಲ್ಲವೊ ಹಾಗೆಯೇ ಭೈರವಿಗೂ ತಿಳಿಯದ ರೀತಿಯಲ್ಲಿ ಸಂನ್ಯಾಸ ಗ್ರಹಣ ಮಾಡಿದ್ದರು. ಶ್ರೀರಾಮಕೃಷ್ಣರ ವೃದ್ಧ ತಾಯಿ ಆಗ ದಕ್ಷಿಣೇಶ್ವರದ ನಹಬತ್ತಿನ ಮೇಲಿನ ಮಹಡಿಯಲ್ಲಿ ವಾಸಿಸುತ್ತಿದ್ದಳು. ಶ್ರೀರಾಮಕೃಷ್ಣರು ನಿರ್ವಿಕಲ್ಪ ಸಮಾಧಿಯಲ್ಲಿರುವಾಗ ಮೂರುದಿನ ಯಾರಿಗೂ ಕಾಣಿಸಿಕೊಂಡಿರಲಿಲ್ಲ, ಕೋಣೆಯಿಂದ ಹೊರಬಂದಿರಲಿಲ್ಲ. ಕೇವಲ ತೋತಾಪುರಿ ಮಾತ್ರ ಆಗಾಗ ಒಳಗೆ ಹೋಗಿ ನೋಡಿ ಬರುತ್ತಿದ್ದ. ಭೈರವಿಯ ಮಾತಿಗೆ ಶ್ರೀರಾಮಕೃಷ್ಣರು ಕಿವಿಗೊಡಲಿಲ್ಲ ಎಂದು ಪ್ರತ್ಯೇಕ ಹೇಳಬೇಕಾಗಿಲ್ಲ.

18. ಭೈರವಿ ಬ್ರಾಹ್ಮಣಿಯು ತಂತ್ರದಲ್ಲಿ ಹೇಳಿರುವ ವೀರಭಾವದ ಸಾಧನೆಯಲ್ಲಿ ನಿರತಳಾಗಿದ್ದಳೆಂದು ಶ್ರೀರಾಮಕೃಷ್ಣರ ಮಾತಿನಿಂದ ತಿಳಿದುಬರುತ್ತದೆ. ತಂತ್ರದಲ್ಲಿ ಪಶು, ವೀರ ಮತ್ತು ದಿವ್ಯ ಎಂಬ ಮೂರು ಬಗೆಯ ಸಾಧನೆಯ ಉಲ್ಲೇಖವಿದೆ. ಪಶುಭಾವದ ಸಾಧಕರಲ್ಲಿ ಕಾಮಕ್ರೋಧಾದಿ ಗುಣಗಳು ಅಧಿಕವಾಗಿರುತ್ತವೆ. ಆದ್ದರಿಂದ ಅವರು ಎಲ್ಲ ರೀತಿಯ ಪ್ರಲೋಭನೆಗಳಿಂದ ದೂರವಿದ್ದು ಬಾಹ್ಯ ಶುದ್ಧಿಗೆ ಹೆಚ್ಚು ಗಮನ ಕೊಡುತ್ತ ನಾಮಜಪ, ಪುರಶ್ಚರಣ ಮುಂತಾದುವುಗಳಲ್ಲಿ ತೊಡಗಿರಬೇಕು. ವೀರಭಾವದ ಸಾಧಕರಲ್ಲಿ ಕಾಮಕ್ರೋಧಾದಿಗಳಿಗಿಂತ ಭಗವದ್ಭಕ್ತಿಯೇ ಪ್ರಬಲವಾಗಿರುತ್ತದೆ. ಕಾಮ–ಕಾಂಚನ, ರೂಪ–ರಸ ಮುಂತಾದ ಆಕರ್ಷಣೆಗಳು ಅವರಲ್ಲಿ ಭಗವದನುರಾಗವನ್ನೇ ಪ್ರಬಲಗೊಳಿಸುತ್ತವೆ. ಆದ್ದರಿಂದ ಅವರು ಕಾಮ–ಕಾಂಚನಾದಿ ಪ್ರಲೋಬನೆಗಳ ನಡುವೆ ಇದ್ದುಕೊಂಡು ಅವುಗಳ ಹೊಡತಕ್ಕೆ ಒಳಗಾಗದೆ ಸಂಪೂರ್ಣ ಮನಸ್ಸನ್ನು ಭಗವಂತನ ಕಡೆಗೆ ಹರಿಸಲು ಪ್ರಯತ್ನಿಸುತ್ತಾರೆ. ಯಾರಲ್ಲಿ ಭಗವದ್ಭಕ್ತಿಯ ಪ್ರಭಾವದಿಂದ ಕಾಮಕ್ರೋಧಾದಿಗಳೆಲ್ಲ ನಾಶವಾಗಿವೆಯೊ, ಯಾರಲ್ಲಿ ಕ್ಷಮೆ, ಆರ್ಜವ, ದಯೆ, ಸಂತೋಷ, ಸತ್ಯ ಮುಂತಾದ ಗುಣಗಳು ಉಸಿರಾಟದಂತೆ ಸ್ವಾಭಾವಿಕವಾಗಿವೆಯೊ ಅವರು ಮಾತ್ರ ದಿವ್ಯಭಾವದ ಸಾಧಕರಾಗಬಲ್ಲರು, ಇದು ಈ ಮೂರು ಬಗೆಯ ಸಾಧನೆಗಳ ಸ್ಥೂಲ ವಿವರಣೆ. ವೇದಾಂತದಲ್ಲಿ ಹೇಳಿರುವ ಉತ್ತಮ ಅಧಿಕಾರಿಯೇ ದಿವ್ಯಭಾವದ ಸಾಧಕ, ಮಧ್ಯಮ ಅಧಿಕಾರಿಯು ವೀರಭಾವದ ಸಾಧಕ ಮತ್ತು ಅಧಮ ಅಧಿಕಾರಿಯೇ ಪಶುಭಾವದ ಸಾಧಕ ಎಂದು ಹೇಳಬಹುದು.

19. ಭೈರವೀ ಬ್ರಾಹ್ಮಣಿಯು ವೀರಭಾವದ ಸಾಧಕಳಾಗಿದ್ದರೂ ಇನ್ನೂ ದಿವ್ಯಭಾವದ ಸಾಧನೆಯ ಮಟ್ಟಕ್ಕೆ ಏರಿರಲಿಲ್ಲ. ಶ್ರೀರಾಮಕೃಷ್ಣರ ಸಹವಾಸದಿಂದ ಮತ್ತು ಅವರ ಸಹಾಯದಿಂದ ಅವಳಲ್ಲಿ ದಿವ್ಯಭಾವದ ಕಡೆಗೆ ಒಲವು ಉಂಟಾಯಿತು,

ಸಿದ್ಧಿ ಅಥವಾ ಕಾರಣದ ಹೆಸರು ಕೇಳಿದರೆ ಸಾಕು ಶ್ರೀರಾಮಕೃಷ್ಣರ ಮನಸ್ಸು ಜಗತ್ಕಾರಣನಾದ ಭಗವಂತನಲ್ಲಿ ತನ್ಮಯವಾಗುತ್ತಿತ್ತು. ಯಾವುದೇ ಸ್ತ್ರೀಮೂರ್ತಿಯನ್ನು ನೋಡಿದರೂ ಅವರಿಗೆ ಜಗನ್ಮಾತೆಯ ನೆನಪಾಗಿ ಸಂತಾನಭಾವ ಅವರಲ್ಲಿ ಜಾಗ್ರತವಾಗುತ್ತಿತ್ತು, ಮತ್ತು ನಿದ್ರಿಸುತ್ತಿರುವಾಗಲೂ ಹಣ ಅಥವಾ ಲೋಹದ ಸ್ಪರ್ಶವಾದರೆ ಅವರಿಗೆ ಚೇಳು ಕಡಿದಂತಾಗುತ್ತಿತ್ತು. ಇದನ್ನೆಲ್ಲ ನೋಡಿದ ಬ್ರಾಹ್ಮಣಿಯ ಮನಸ್ಸಿನಲ್ಲಿ ಭಗವದನುರಾಗವು ಜ್ಯೋತಿಯಂತೆ ಪ್ರಜ್ವಲಿಸತೊಡಗಿತು. ಈ ಜ್ವಲಂತ ಅಗ್ನಿಯು (ಶ್ರೀರಾಮಕೃಷ್ಣರ) ಹತ್ತಿರ ಇದ್ದಾಗಲೂ ಯಾರ ವಿಷಯಾಸಕ್ತಿಯು ಭಸ್ಮವಾಗದೆ ಉಳಿದೀತು ? ಯಾರ ಮನಸ್ಸಿನಲ್ಲಿ ಭಗವಂತನೊಬ್ಬನೇ ವಸ್ತು ಉಳಿದುದೆಲ್ಲ ಅವಸ್ತು ಎಂಬ ವಿಶ್ವಾಸ ಜಾಗ್ರತವಾಗದೇ ಇದ್ದೀತು ? ಆದ್ದರಿಂದ ಬ್ರಾಹ್ಮಣಿಯು ತನ್ನ ಕೊನೆಗಾಲದಲ್ಲಿ ತೀವ್ರ ತಪಸ್ಸನ್ನಾಚರಿಸುತ್ತ ಜೀವನವನ್ನು ಕಳೆದಳೆಂದು ನಾವು ಕೇಳುತ್ತೇವೆ.

20. ಶ್ರೀರಾಮಕೃಷ್ಣರು ಇತರರೊಡನೆ ಹೆಚ್ಚಾಗಿ ಬೆರೆತರೆ ಅಥವಾ ಇತರ ಭಕ್ತ ಸಾಧಕರಿಗೆ ಹೆಚ್ಚು ಸನ್ಮಾನ ಮಾಡಿದರೆ ಭೈರವಿಗೆ ತುಂಬ ಬೇಸರವಾಗುತ್ತಿತ್ತು. ಬಹಳ ಮುದ್ದಿನಿಂದ ಸಾಕಿದ ಹುಡುಗ ದೊಡ್ಡವನಾದಮೇಲೆ ಮನೆಯಲ್ಲಿ ಇತರ ವ್ಯಕ್ತಿಯನ್ನು ಪ್ರೀತಿಸಿದರೆ ಅಥವಾ ಆದರಿಸಿದರೆ ಅಜ್ಜಿ ಅಥವಾ ಹಿರಿಯ ಮಹಿಳೆಯ ಮನಸ್ಸಿನಲ್ಲಿ ಅಸೂಯೆ ದುಃಖ ಉಂಟಾಗುತ್ತದೆ. ಹಾಗೆಯೇ ಬ್ರಾಹ್ಮಣಿಗೂ ಆಗಿರಬೇಕೆಂದು ನಮಗನಿಸುತ್ತದೆ. ಆದರೆ ಬ್ರಾಹ್ಮಣಿಯಂತಹ ಉಚ್ಚ ಮಟ್ಟದ ವ್ಯಕ್ತಿಯಲ್ಲಿ ಆ ರೀತಿ ಆಗುವುದು ಸರಿಯೆನಿಸುವುದಿಲ್ಲ. ಅವಳು ಶ್ರೀರಾಮಕೃಷ್ಣರನ್ನು ಎಲ್ಲ ಅವಸ್ಥೆಗಳಲ್ಲಿಯೂ ನೋಡಿದ್ದಳು, ಅವರ ಎಲ್ಲ ಕೃತಿಗಳನ್ನೂ ಎಲ್ಲ ಸ್ಥಿತಿಯನ್ನೂ ಹಲವು ವರ್ಷಗಳ ಪರ್ಯಂತ ಪರಿಶೀಲಿಸಿದ್ದಳು, ಆದರೂ ಅವಳಿಗೆ ಆ ರೀತಿ ಆದುದು ಆಶ್ಚರ್ಯ ! ಶ್ರೀರಾಮಕೃಷ್ಣರ ಪ್ರೀತಿ ವಿಶ್ವಾಸ ಇತರರದುತೆ ಕ್ಷಣಿಕವಾದುದಲ್ಲ ಎಂಬುದನ್ನು ಅವಳು ತಿಳಿಯಬೇಕಿತ್ತು. ಅವಳ ಮೇಲೆ ಪ್ರೀತಿ ವಿಶ್ವಾಸ ಅವರಲ್ಲಿ ಚಿರಕಾಲವೂ ಉಳಿಯುತ್ತದೆ, ಅದರಲ್ಲಿ ಏರುಪೇರುಗಳಿಲ್ಲ ಎಂಬುದನ್ನು ಅವಳು ಅರ್ಥಮಾಡಿಕೊಳ್ಳಬೇಕಿತ್ತು. ಸಾಮಾನ್ಯವಾಗಿ ಜನರು ತಮ್ಮ ಪ್ರೀತಿಯ ವ್ಯಕ್ತಿ ತಮಗೇ ಯಾವಾಗಲೂ ಬದ್ಧನಾಗಿರಬೇಕೆಂದು ಬಯಸುತ್ತಾರೆ, ಅವನಿಗೆ ಸ್ವಲ್ಪವೂ ಸ್ವಾತಂತ್ರ್ಯವನ್ನು ಕೊಡಲು ಇಚ್ಛಿಸುವುದಿಲ್ಲ. ಸ್ವಾತಂತ್ರ್ಯವನ್ನು ಕೊಟ್ಟರೆ ಅವನು ಬೇರೆಯವರನ್ನು ಪ್ರೀತಿಸುತ್ತಾನೆ ನಮ್ಮವನಾಗಿ ಉಳಿಯುವುದಿಲ್ಲ ಎಂದು ಭಾವಿಸುತ್ತಾರೆ. ಇದಕ್ಕೆ ಅವರ ಮನಸ್ಸಿನ ದುರ್ಬಲತೆಯೇ ಕಾರಣ. ಯಾವ ಪ್ರೀತಿಯು, ತನ್ನ ಪ್ರೀತಿಯ ವ್ಯಕ್ತಿಗೆ ಸ್ವಾತಂತ್ರ್ಯವನ್ನು ನೀಡುವುದಿಲ್ಲವೊ, ಆ ವ್ಯಕ್ತಿಯ ಸುಖದಲ್ಲಿಯೇ ಸುಖವನ್ನು ಕಾಣುವುದಿಲ್ಲವೊ ಆ ಪ್ರೀತಿಯು ಬಹುಬೇಗನೆ ನಶಿಸಿ ಹೋಗುತ್ತದೆ. ನಮಗೆ ಯಾರ ಮೇಲಾದರೂ ನಿಜವಾದ ನಿಃಸ್ವಾರ್ಥ ಪ್ರೀತಿ ಇರುವುದಾದರೆ ನಾವು ನಿಶ್ಚಿಂತೆಯಿಂದ ಇರಬಹುದು— ನಾವು ಪ್ರೀತಿಸುವ ವ್ಯಕ್ತಿ ಯಾವಾಗಲೂ ನಮ್ಮವನಾಗಿಯೆ ಉಳಿಯುವನು, ಮತ್ತು

ಆ ಶುದ್ಧ ಪ್ರೀತಿಯು ನಮ್ಮನ್ನು ಮಾತ್ರವಲ್ಲ, ಆ ವ್ಯಕ್ತಿಯನ್ನೂ ಭಗವಂತನೆಡೆಗೆ ಕರೆದುಕೊಂಡು ಹೋಗುತ್ತದೆ.

21. ಭೈರವೀ ಬ್ರಾಹ್ಮಣಿಯು ಉನ್ನತ ಮಟ್ಟದ ಭಕ್ತಿಪ್ರಧಾನ ಸಾಧಕಳಾಗಿದ್ದಳು. ಆದರೂ ಅವಳಿಗೆ ಈ ಮೇಲಿನ ವಿಷಯ ತಿಳಿದಿರಲಿಲ್ಲ ಅಥವಾ ತಿಳಿದಿದ್ದರೂ ಅದರಂತೆ ನಡೆಯಲು ಸಮರ್ಥಳಾಗಿರಲಿಲ್ಲ ಎಂಬುದು ಆಶ್ಚರ್ಯದ ವಿಷಯ. ಅವಳಲ್ಲಿ ನಿಜವಾಗಿಯೂ ಈ ಒಂದು ಪ್ರಜ್ಞೆ ಇರಲಿಲ್ಲ. ಭಾಗ್ಯವಶದಿಂದ ಶ್ರೀರಾಮಕೃಷ್ಣರ ಗುರುಸ್ಥಾನದಲ್ಲಿದ್ದು 'ನಾನು ಎಲ್ಲರಿಗಿಂತ ಮಿಗಿಲು, ಎಲ್ಲರೂ ನನ್ನ ಮಾತನ್ನು ಕೇಳಬೇಕು' ಎಂಬ ದುರಹಂಕಾರ ಅವಳಲ್ಲಿ ಕ್ರಮೇಣ ಅಧಿಕವಾಗುತ್ತಿತ್ತು. ಶ್ರೀರಾಮಕೃಷ್ಣರು ಶ್ರೀಮಾತೆಯವರಿಗೆ ಶಿಕ್ಷಣ ನೀಡುವುದನ್ನು ನೋಡಿಯೂ ಅವಳಲ್ಲಿ ಅಸೂಯೆಯುಂಟಾಗುತ್ತಿತ್ತು. ಇದರಿಂದಾಗಿ ಶ್ರೀಮಾತೆಯವರಿಗೆ ಅವಳನ್ನು ಕಂಡರೆ ಭಯ ಮತ್ತು ಸಂಕೋಚ. ಏನೇ ಆಗಲಿ, ಶ್ರೀರಾಮಕೃಷ್ಣರ ದಯೆಯಿಂದ ಬ್ರಾಹ್ಮಣಿಯು ತನ್ನ ದುರ್ಬಲತೆಯನ್ನು ಅರ್ಥಮಾಡಿಕೊಂಡಳು. ಶ್ರೀರಾಮಕೃಷ್ಣರಿಂದ ದೂರವಾದರೇನೇ ಈ ಮನೋಭಾವವನ್ನು ತೊಡೆದುಹಾಕಲು ಸಾಧ್ಯ, ಶ್ರೀರಾಮಕೃಷ್ಣರೆಡೆಗೆ ಇರುವ ತನ್ನ ಆಕರ್ಷಣೆ ಚಿನ್ನದ ಸರಪಳಿಯ ಬಂಧನದಂತಿದ್ದರೂ ಅದನ್ನು ಕಿತ್ತುಹಾಕಿ ತನ್ನ ಗುರಿಯೆಡೆಗೆ ಮುಂದೆ ಸಾಗಬೇಕು ಎಂದು ಅವಳು ಅರಿತುಕೊಂಡಳು. ಈ ಕಾರಣದಿಂದಲೇ ಅವಳು ಶ್ರೀರಾಮಕೃಷ್ಣರನ್ನು ಬಿಟ್ಟು ದಕ್ಷಿಣೇಶ್ವರವನ್ನು ತ್ಯಜಿಸಿ ದೂರ ಹೊರಟುಹೋದಳು. ''ಅಲೆಯುವ ಸಾಧು ಹರಿಯುವ ನೀರು ಎಂದಿಗೂ ಮಲಿನವಾಗುವುದಿಲ್ಲ'' ಎಂದು ಭಾವಿಸಿ ಅಸಂಗಳಾಗಿ ತೀರ್ಥಪರ್ಯಟನೆ ಮಾಡುತ್ತಾ, ತಪಸ್ಸನ್ನಾಚರಿಸುತ್ತಾ ಕಾಲ ಕಳೆದಳು. ಶ್ರೀರಾಮಕೃಷ್ಣರ ಗುರುಭಾವದ ಸಹಾಯದಿಂದಲೇ ಅವಳಲ್ಲಿ ಈ ರೀತಿಯ ಅಂತಃಪ್ರಜ್ಞೆ ಜಾಗ್ರತವಾಯಿತು ಎಂಬುದನ್ನು ಮತ್ತೆ ಹೇಳಬೇಕಾಗಿಲ್ಲ.

22 ತೋತಾಪುರಿಯು ಎತ್ತರವೂ ದೃಢಕಾಯನೂ ಆಗಿದ್ದ. ನಲ್ವತ್ತುವರ್ಷಗಳ ಧ್ಯಾನಧಾರಣ ಮತ್ತು ವೈರಾಗ್ಯದ ಫಲವಾಗಿ ಅವನು ನಿರ್ವಿಕಲ್ಪ ಸಮಾಧಿಯಲ್ಲಿ ಮನಸ್ಸನ್ನು ಸ್ಥಿರಗೊಳಿಸಿ ಅದನ್ನು ವೃತ್ತಿ ಶೂನ್ಯವಾಗುವಂತೆ ಮಾಡುವುದರಲ್ಲಿ ಸಮರ್ಥನಾಗಿದ್ದ. ಆದರೂ ಅವನು ಪ್ರತಿನಿತ್ಯ ಧ್ಯಾನಾನುಷ್ಠಾನ ಮತ್ತು ಸಮಾಧಿಯಲ್ಲಿ ಅನೇಕ ಸಮಯ ಕಳೆಯುತ್ತಿದ್ದ. ಯಾವಾಗಲೂ ಬಾಲಕನಂತೆ ನಗ್ನನಾಗಿರುತ್ತಿದ್ದುದರಿಂದ ಶ್ರೀರಾಮಕೃಷ್ಣರು ಅವನನ್ನು ನಗ್ನ ಸಾಧುವೆಂದು ಕರೆಯುತ್ತಿದ್ದರು. ವಿಶೇಷವಾಗಿ ಗುರುವಿನ ಹೆಸರನ್ನು ಹೇಳಬಾರದು ಅಥವಾ ಅವನ ಹೆಸರಿನ ಮೂಲಕ ಅವನನ್ನು ಕರೆಯಬಾರದು ಎಂಬ ದೃಷ್ಟಿಯಿಂದಲೂ ಅವರು ಅವನನ್ನು ಹಾಗೆ ಕರೆಯುತ್ತಿದ್ದಿರಬಹುದು. ತೋತಾಪುರಿಯು ಎಂದೂ ಮನೆಯಲ್ಲಿ ವಾಸಿಸುತ್ತಿರಲಿಲ್ಲ ಮತ್ತು ಅವನು ನಾಗಾ ಸಂಪ್ರದಾಯದವನಾದ್ದರಿಂದ ಅಗ್ನಿಯನ್ನು ಪೂಜಿಸುತ್ತಿದ್ದನು. ನಾಗಾ ಸಾಧುಗಳಿಗೆ ಅಗ್ನಿ ತುಂಬ ಪವಿತ್ರವಾದುದು. ಅವರು ಎಲ್ಲೇ ಇದ್ದರೂ ಸೌದೆಯನ್ನು

ಕಲೆಹಾಕಿ ತಮ್ಮ ಹತ್ತಿರ ಬೆಂಕಿ ಉರಿಸುವರು. ಆ ಅಗ್ನಿಯನ್ನು ಸಾಮಾನ್ಯವಾಗಿ 'ಧುನಿ' ಎಂದು ಕರೆಯುತ್ತಾರೆ. ನಾಗಾ ಸಾಧುಗಳು ಬೆಳಗ್ಗೆ ಮತ್ತು ಸಂಜೆ ಧುನಿಗೆ ಆರತಿ ಎತ್ತುತ್ತಾರೆ, ಭಿಕ್ಷೆ ಬೇಡಿ ತಂದ ಆಹಾರ ಪದಾರ್ಥವನ್ನು ಮೊದಲು ಆ ಅಗ್ನಿಗೆ ನಿವೇದಿಸಿ ಅನಂತರ ಉಳಿದುದನ್ನು ಪ್ರಸಾದರೂಪವಾಗಿ ಸ್ವೀಕರಿಸುತ್ತಾರೆ. ತೋತಾಪುರಿಯು ದಕ್ಷಿಣೇಶ್ವರದಲ್ಲಿರುವಾಗ ಪಂಚವಟಿಯಲ್ಲಿ ಮರದ ಕೆಳಗೇ ಇರುತ್ತಿದ್ದನು ಮತ್ತು ಪಕ್ಕದಲ್ಲಿ ಅಗ್ನಿಯನ್ನು ಹೊತ್ತಿಸಿಕೊಂಡಿರುತ್ತಿದ್ದನು. ಬಿಸಿಲಿರಲಿ ಮಳೆಯಿರಲಿ ಆ ಬೆಂಕಿ ಮಾತ್ರ ಯಾವಾಗಲೂ ಉರಿಯುತ್ತಿತ್ತು. ರಾತ್ರಿ ಎಲ್ಲರೂ ಮಲಗಿ ನಿದ್ರಿಸುತ್ತಿರುವಾಗ ತೋತಾಪುರಿಯು ಎದ್ದು ಬೆಂಕಿಯನ್ನು ಜೋರಾಗಿ ಉರಿಸಿ ಅಚಲ ಮೇರುಪರ್ವತದಂತೆ ಕುಳಿತುಕೊಂಡು ಮನಸ್ಸನ್ನು ನಿರ್ವಾತ ದೀಪದಂತೆ ಸ್ಥಿರಗೊಳಿಸಿ ಸಮಾಧಿಮಗ್ನನಾಗುತ್ತಿದ್ದನು. ಹಗಲಿನಲ್ಲಿಯೂ ಅವನು ಅನೇಕ ಬಾರಿ ಧ್ಯಾನ ಮಾಡುತ್ತಿದ್ದ, ಆದರೆ ಜನರಿಗೆ ತಿಳಿಯದಂತೆ ಮಾಡುತ್ತಿದ್ದ. ಆದ್ದರಿಂದಲೇ ಒಂದು ಉತ್ತರೀಯವನ್ನು ಪಾದದಿಂದ ತಲೆಯವರೆಗೂ ಹೊದ್ದುಕೊಂಡು ಧುನಿಯ ಪಕ್ಕದಲ್ಲಿ ಅವನು ಮಲಗಿರುತ್ತಿದ್ದುದನ್ನು ನೋಡಬಹುದಿತ್ತು. ಜನರು ನೋಡಿ ಇವನು ನಿದ್ರಿಸುತ್ತಿರುವನೆಂದು ಭಾವಿಸುತ್ತಿದ್ದರು.

ತೋತಾಪುರಿಯ ಹತ್ತಿರ ನೀರಿಗಾಗಿ ಒಂದು ಲೋಟ, ಒಂದು ಉದ್ದನೆಯ ಚಿಮಟ ಮತ್ತು ಒಂದು ಚರ್ಮದ ಆಸನ – ಇದಿಷ್ಟು ಇರುತ್ತಿದ್ದವು. ಒಂದು ಸಣ್ಣ ಉತ್ತರೀಯದಿಂದ ತನ್ನ ದೇಹವನ್ನು ಮುಚ್ಚಿಕೊಂಡಿರುತ್ತಿದ್ದ. ಲೋಟ ಮತ್ತು ಚಿಮಟವನ್ನು ಪ್ರತಿನಿತ್ಯ ತೊಳೆದು ಪಳಪಳ ಹೊಳೆಯುವಂತೆ ಇಟ್ಟಿರುತ್ತಿದ್ದ. ಅವನು ಪ್ರತಿನಿತ್ಯ ಧ್ಯಾನ ಮಾಡುತ್ತಿದ್ದುದನ್ನು ನೋಡಿ ಶ್ರೀರಾಮಕೃಷ್ಣರು ಒಮ್ಮೆ ಕೇಳಿದರು : "ನೀವು ಬ್ರಹ್ಮಜ್ಞಾನಿಗಳು, ಸಿದ್ಧ ಪುರುಷರು. ಆದರೂ ಪ್ರತಿನಿತ್ಯ ಧ್ಯಾನ ಮಾಡುವುದೇಕೆ ?" ತೋತಾಪುರಿಯು ಲೋಟದ ಕಡೆ ಕೈ ತೋರಿಸಿ ಹೇಳಿದನು: "ನೋಡು, ಅದು ಹೇಗೆ ಹೊಳೆಯುತ್ತಿದೆ ? ಆದರೆ ದಿನವೂ ತೊಳೆಯದಿದ್ದರೆ ಅದು ಕೊಳೆಯಾಗುತ್ತದೆ. ಮನಸ್ಸೂ ಹಾಗೆಯೇ, ತಿಳಿಯಿತೆ. ಧ್ಯಾನಾಭ್ಯಾಸದ ಮೂಲಕ ಅದನ್ನು ನಿತ್ಯ ತೊಳೆಯದಿದ್ದರೆ ಅದು ಮಲಿನವಾಗುತ್ತದೆ." ತೀಕ್ಷ್ಣಬುದ್ಧಿಯ ಶ್ರೀರಾಮಕೃಷ್ಣರು ಹೇಳಿದರು : "ಆದರೆ ಅದು ಚಿನ್ನದ ಲೋಟವಾದರೆ ? ಅದನ್ನು ನಿತ್ಯ ತೊಳೆಯದಿದ್ದರೂ ಅದು ಕೊಳೆಯಾಗುವುದಿಲ್ಲ." ತೋತಾಪುರಿಯು ನಕ್ಕು ' ಅದು ನಿಜ" ಎಂದನು. ನಿತ್ಯ ಧ್ಯಾನಾಭ್ಯಾಸದ ಪ್ರಯೋಜನವನ್ನು ಕುರಿತು ತೋತಾಪುರಿಯು ಹೇಳಿದ ವಿಚಾರ ಶ್ರೀರಾಮಕೃಷ್ಣರ ಮನಸ್ಸಿನಲ್ಲಿ ಯಾವಾಗಲೂ ಇತ್ತು – ನಮಗೆ ಆಗಾಗ ಹೇಳುತ್ತಿದ್ದರು. 'ಚಿನ್ನದ ಲೋಟ ಕೊಳೆಯಾಗುವುದಿಲ್ಲ' ಎಂಬ ಶ್ರೀರಾಮಕೃಷ್ಣರ ವಿಚಾರ ತೋತಾಪುರಿಯ ಮನಸ್ಸಿನಲ್ಲಿಯೂ ಚಿರಕಾಲ ಉಳಿಯಿತು ಎಂದು ನಮ್ಮ ನಂಬಿಕೆ. ಶ್ರೀರಾಮಕೃಷ್ಣರ ಮನಸ್ಸು ಚಿನ್ನದ ಲೋಟದಂತೆ ಉಜ್ವಲ ಎಂದು ತೋತಾಪುರಿ ತಿಳಿದಿದ್ದನು. ಹೀಗೆ ಗುರು–ಶಿಷ್ಯರ ಪರಸ್ಪರ ಶಿಕ್ಷಣ ಮೊದಲಿನಿಂದಲೇ

ಪ್ರಾರಂಭವಾಯಿತು.

23. ಬ್ರಹ್ಮಜ್ಞಾನವಾದರೆ ಮನುಷ್ಯನು ಭಯಶೂನ್ಯನಾಗುತ್ತಾನೆ ಎಂದು ವೇದಾಂತ ಹೇಳುತ್ತದೆ. ಸಂಪೂರ್ಣ ನಿರ್ಭಯನಾಗುವುದಕ್ಕೆ ಇದೊಂದೇ ಉಪಾಯ. ತಾನೇ ಅಖಂಡ ಸರ್ವವ್ಯಾಪಿ ಸಚ್ಚಿದಾನಂದ ಬ್ರಹ್ಮ ಎಂದು ತಿಳಿದವನಿಗೆ ಭಯವಿರಲು ಹೇಗೆ ಸಾಧ್ಯ ? ಯಾವುದರ ಭಯ ಅವನಿಗೆ ? ಇರುವುದೆಲ್ಲ ಒಂದೇ, ಎರಡಿಲ್ಲ ಎಂದು ಯಾವಾಗಲೂ ಅನುಭವಿಸುವವನಿಗೆ ಯಾವುದರಿಂದ ಭಯ ? ಅವನು ಎಲ್ಲ ಅವಸ್ಥೆಗಳಲ್ಲಿಯೂ ತಾನು ಅಖಂಡ ಸಚ್ಚಿದಾನಂದ ಸ್ವರೂಪ ಎಂದು ತಿಳಿದಿರುತ್ತಾನೆ, ಅವನು ಎಲ್ಲದರಲ್ಲಿಯೂ, ಎಲ್ಲೆಲ್ಲಿಯೂ ಯಾವಾಗಲೂ ಬ್ರಹ್ಮವಸ್ತುವನ್ನೇ ನೋಡುತ್ತಾನೆ. ಆ ಅಖಂಡ ಸತ್ಯವೇ ತಾನಾಗಿರುವುದರಿಂದ ಅವನಿಗೆ ಆಹಾರ ವಿಹಾರ ನಿದ್ರೆ ಜಾಗರಣ ಅಭಾವ ಆಲಸ್ಯ ಶೋಕ ಹರ್ಷ ಜನ್ಮ ಮೃತ್ಯು ಭೂತ ಭವಿಷ್ಯತ್ತು ಇವಾವುವೂ ಇಲ್ಲ. ಪಂಚೇಂದ್ರಿಯಗಳಿಂದ, ಮನಸ್ಸು ಬುದ್ಧಿಗಳಿಂದ ನೋಡುವುದು, ಕೇಳುವುದು, ಚಿಂತಿಸುವುದು, ಕಲ್ಪಿಸುವುದು ಇವಾವುದೂ ಅವನಿಗಿಲ್ಲ. ಈ ರೀತಿಯ ಅನುಭವವನ್ನೇ 'ನೇತಿ ನೇತಿ'ಯ ವಿರಾಮಾವಸ್ಥೆ ಎಂದು ಶಾಸ್ತ್ರ ವರ್ಣಿಸುತ್ತದೆ. ಇದರ ನಂತರವೇ ಪೂರ್ಣಾತ್ಮದಲ್ಲಿ ಒಂದಾಗುವುದು ಮತ್ತು ಆದರ ಪ್ರತ್ಯಕ್ಷದರ್ಶನವಾಗುವುದು. ಈ ಆತ್ಮದರ್ಶನ ಸದಾ ಆಗುತ್ತಿದ್ದರೆ ಅವನು 'ಜ್ಞಾನದಲ್ಲಿ ನೆಲೆನಿಂತಿರುವವನು' ಎಂದು ಹೇಳಬಹುದು. ಜ್ಞಾನದಲ್ಲಿ ನೆಲೆನಿಂತ ಮೇಲೆ ಎಲ್ಲ ರೀತಿಯ ಬಂಧನಗಳೂ ಕಳಚಿ ಬೀಳುತ್ತವೆ. ಹೀಗೆ ಪೂರ್ಣ ಜ್ಞಾನದಲ್ಲಿ ನೆಲೆನಿಂತ ಮೇಲೆ ಶರೀರವು ಇಪ್ಪತ್ತೊಂದು ದಿನ ಮಾತ್ರ ಉಳಿಯುತ್ತದೆ, ಅನಂತರ ಒಣಗಿದ ಎಲೆಯಂತೆ ಬಿದ್ದುಹೋಗುತ್ತದೆ ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಅನಂತರ ಅವನು ಅಹಂಜ್ಞಾನದೊಡನೆ ಈ ಸಂಸಾರಕ್ಕೆ ಹಿಂತಿರುಗಿ ಬರುವುದಿಲ್ಲ. ಜೀವನ್ಮುಕ್ತ ಪುರುಷರಿಗೆ ಆಗಾಗ ಸ್ವಲ್ಪ ಕಾಲದ ಮಟ್ಟಿಗೆ ಈ ಜ್ಞಾನ ಉಂಟಾಗಿ ಆತ್ಮದರ್ಶನವಾಗುತ್ತ ಕೊನೆಯಲ್ಲಿ ಅವರು ಈ ಜ್ಞಾನದ ಪೂರ್ಣಾವಸ್ಥೆಯನ್ನು ಮುಟ್ಟುವರು. ಜಗತ್ತಿನ ಹಿತಸಾಧನೆಗಾಗಿ ಜನ್ಮ ವೆತ್ತುವ ನಿತ್ಯಮುಕ್ತರಾದ ಈಶ್ವರಕೋಟಿಗಳೂ ಆಗಾಗ ಆ ಜ್ಞಾನ ಸ್ಥಿತಿಯನ್ನು ಸ್ವಲ್ಪ ಸಮಯದ ಮಟ್ಟಿಗೆ ಮುಟ್ಟುತ್ತಾರೆ. ಅವರು ಯಾವ ಉದ್ದೇಶಕ್ಕಾಗಿ ಬಂದಿದ್ದರೋ ಆ ಉದ್ದೇಶ ಸಫಲವಾದಮೇಲೆ ಪೂರ್ಣ ಜ್ಞಾನಾವಸ್ಥೆಯನ್ನು ತಲುಪುತ್ತಾರೆ. ಇನ್ನು ಭಗವಂತನ ಅವತಾರ ಪುರುಷರ ವಿಚಾರವೇ ಬೇರೆ. ಅವರಲ್ಲಿ ಅತ್ಯದ್ಭುತ ಅಲೌಕಿಕ ಆಧ್ಯಾತ್ಮಿಕ ಶಕ್ತಿ ಇರುತ್ತದೆ. ಅವರು ಬಾಲ್ಯದಿಂದಲೂ ಪೂರ್ಣ ಜ್ಞಾನಾವಸ್ಥೆಯನ್ನು ಏರಬಲ್ಲವರಾಗಿರುತ್ತಾರೆ, ತಮಗಿಷ್ಟಬಂದಂತೆ ಎಷ್ಟು ಕಾಲಬೇಕೊ ಅಷ್ಟು ಕಾಲ ಆ ಅವಸ್ಥೆಯಲ್ಲಿ ಇರುತ್ತಾರೆ, ಮತ್ತೆ ಜಗತ್ತಿನ ಹಿತಕ್ಕಾಗಿ ಜನ್ಮ ಜರಾ ಶೋಕ ಹರ್ಷಾದಿಗಳಿಂದ ಕೂಡಿದ ಈ ಸಂಸಾರಾವಸ್ಥೆಗೆ ಹಿಂದಿರುಗಿ ಬರುತ್ತಾರೆ.

24. ತೋತಾಪುರಿಯು ನಲವತ್ತು ವರ್ಷಗಳ ಕಠೋರ ಸಾಧನೆಯ ಮೂಲಕ ಮೇಲೆ ಹೇಳಿದ ಜೀವನ್ಮುಕ್ತಿಯ ಸ್ಥಿತಿಯನ್ನು ಪಡೆದಿದ್ದನು. ಆದ್ದರಿಂದ ಅವನ

ಆಹಾರ ವಿಹಾರಾದಿ ದೈನಂದಿನ ಆಚರಣೆಗಳು ಜನಸಾಮಾನ್ಯರದಂತೆ ಇರಲಿಲ್ಲ. ಗಾಳಿಯಂತೆ ಎಲ್ಲಿಂದರಲ್ಲಿಗೆ ಓಡಾಡಿಕೊಂಡು ಇರುತ್ತಿದ್ದ. ಗಾಳಿಯಂತೆಯೆ ಅವನಿಗೆ ಸಂಸಾರದ ಯಾವ ಗುಣ ದೋಷಗಳು ಅಂಟಿಕೊಳ್ಳುತ್ತಿರಲಿಲ್ಲ. ಗಾಳಿಯಂತೆಯೇ ಅವನು ಒಂದೆ ಕಡೆ ಸ್ಥಿರವಾಗಿ ಇರುತ್ತಿರಲಿಲ್ಲ. ಅವನು ಮೂರು ದಿನಗಳಿಗಿಂತ ಹೆಚ್ಚು ಕಾಲ ಎಲ್ಲಿಯೂ ಇರುತ್ತಿರಲಿಲ್ಲವೆಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಆದರೆ ಶ್ರೀರಾಮಕೃಷ್ಣರ ಆಕರ್ಷಣೆಯಿಂದಾಗಿ ಅವನು ನಿರಂತರ ಹನ್ನೊಂದು ತಿಂಗಳು ದಕ್ಷಿಣೇಶ್ವರದಲ್ಲಿದ್ದ. ಅವರ ಸಂಮೋಹಿನೀ ಶಕ್ತಿ ಅದ್ಭುತ !

25. ತೋತಾಪುರಿಯ ಧೈರ್ಯದ ಸಂಬಂಧವಾಗಿ ಶ್ರೀರಾಮಕೃಷ್ಣರು ಅನೇಕ ಘಟನೆಗಳನ್ನು ಹೇಳುತ್ತಿದ್ದರು. ಅವುಗಳಲ್ಲಿ ಭೂತದ ಕತೆಯೂ ಒಂದು : ಗಾಢ ರಾತ್ರಿಯಲ್ಲಿ ಒಂದು ದಿನ ತೋತಾ ಧುನಿಯನ್ನು ಹೊತ್ತಿಸಿ ಧ್ಯಾನಕ್ಕೆ ಕುಳಿತುಕೊಳ್ಳಲು ಸಿದ್ಧನಾಗಿದ್ದ. ಎಲ್ಲೆಲ್ಲೂ ನೀರವ, ನಿಸ್ತಬ್ಧ. ಆಗಾಗ ಮಿಡತೆಯ ಸದ್ದು ಮತ್ತು ಗೂಬೆಯ ಕೂಗು ಕೇಳಿಬರುತ್ತಿತ್ತು ಅಷ್ಟೆ. ಗಾಳಿಯೂ ನಿಶ್ಚಲವಾಗಿದೆ, ಇದ್ದಕ್ಕಿದ್ದಂತೆ ಪಂಚವಟಿಯ ಮರದ ಕೊಂಬೆಗಳು ಜೋರಾಗಿ ಅಲುಗಾಡತೊಡಗಿದವು. ಬೃಹದಾಕಾರದ ಮಾನವಾಕೃತಿಯ ವ್ಯಕ್ತಿಯೊಬ್ಬನು ಮರದ ಮೇಲಿಂದ ಕೆಳಗಿಳಿದು ತೋತಾಪುರಿಯನ್ನೇ ದಿಟ್ಟಿಸಿ ನೋಡುತ್ತ ನಿಧಾನವಾಗಿ ಹೆಜ್ಜೆಹಾಕುತ್ತ ಬಂದು ಧುನಿಯ ಪಕ್ಕದಲ್ಲಿ ಕುಳಿತನು. ತನ್ನಂತೆಯೇ ನಗ್ನನಾಗಿದ್ದ ಆ ವ್ಯಕ್ತಿಯನ್ನು ನೋಡಿ ಆಶ್ಚರ್ಯದಿಂದ ತೋತಾಪುರಿಯು 'ನೀನು ಯಾರು ?' ಎಂದು ವಿಚಾರಿಸಿದನು. ಆ ವ್ಯಕ್ತಿ ಉತ್ತರವಿತ್ತನು : "ನಾನು ಭೈರವ. ಈ ದೇವಸ್ಥಾನದ ರಕ್ಷಣೆಗಾಗಿ ಈ ಮರದಲ್ಲಿ ವಾಸಿಸುತ್ತಿರುವೆನು.' ತೋತಾಪುರಿ ಸ್ವಲ್ಪವೂ ಭಯಪಡದೆ ಹೇಳಿದ : "ಒಳ್ಳೆಯದು. ನೀನು ಏನೊ ನಾನೂ ಅದೇ. ನೀನು ಬ್ರಹ್ಮದ ಒಂದು ಆವಿರ್ಭಾವ, ನಾನೂ ಹಾಗೆಯೇ, ಬಾ, ಕುಳಿತುಕೊ, ಧ್ಯಾನ ಮಾಡು." ಆ ವ್ಯಕ್ತಿಯು ನಕ್ಕು ಗಾಳಿಯಲ್ಲಿ ಲೀನವಾದಂತೆ ಅದೃಶ್ಯನಾದನು. ತೋತಾಪುರಿಯೂ ಇದರಿಂದ ಸ್ವಲ್ಪವೂ ವಿಚಲಿತನಾಗದೆ ಧ್ಯಾನದಲ್ಲಿ ನಿರತನಾದನು, ಮರುದಿನ ಬೆಳಗ್ಗೆ ಅವನು ಈ ಘಟನೆಯನ್ನು ಶ್ರೀರಾಮಕೃಷ್ಣರಿಗೆ ತಿಳಿಸಿದ. ಶ್ರೀರಾಮಕೃಷ್ಣರು ಹೇಳಿದರು : "ಹೌದು, ಅವನು ಇಲ್ಲಿರುವುದು ನಿಜ. ನಾನು ಅವನನ್ನು ಅನೇಕ ಬಾರಿ ನೋಡಿರುವೆನು. ಅವನು ಕೆಲವೊಮ್ಮೆ ನನಗೆ ಮುಂದಾಗುವುದನ್ನು ತಿಳಿಸಿರುವನು. ಒಮ್ಮೆ ಕಂಪನಿಯು (ಬ್ರಿಟಿಷ್ ಸರ್ಕಾರ) ಮದ್ದುಗುಂಡುಗಳ ಕಾರ್ಖಾನೆಗಾಗಿ ಪಂಚವಟಿಯ ಜಾಗವನ್ನು ತೆಗೆದುಕೊಳ್ಳಬೇಕೆಂದು ಅಪೇಕ್ಷಿಸಿತ್ತು. ಅದನ್ನು ಕೇಳಿ ನಾನು ತುಂಬ ಚಿಂತಿತನಾದೆ. ಸಂಸಾರದ ಕೋಲಾಹಲದಿಂದ ದೂರವಿದ್ದು ನಿರ್ಜನ ಸ್ಥಾನದಲ್ಲಿ ತಾಯಿಯನ್ನು ಕರೆಯೋಣ ಎಂದುಕೊಂಡಿದ್ದೆ, ಇನ್ನು ಅದಾಗುವುದಿಲ್ಲ – ಎಂದು ಮನಸ್ಸಿಗೆ ವೇದನೆಯುಂಟಾಯಿತು. ಮಥುರನು ರಾಸಮಣಿಯ ಹೆಸರಿನಲ್ಲಿ ಕಂಪನಿಯ ವಿರುದ್ಧವಾಗಿ ಮೊಕದ್ದಮೆ ಹೂಡಿದ. ಆ ಸಮಯದಲ್ಲಿ ಒಮ್ಮೆ ಭೈರವನು ಕಾಣಿಸಿಕೊಂಡು ನನಗೆ ಹೇಳಿದ : "ಕಂಪನಿಗೆ ಜಾಗ

ವನ್ನು ತೆಗೆದುಕೊಳ್ಳಲಾಗುವುದಿಲ್ಲ, ಮೊಕದ್ದಮೆಯಲ್ಲಿ ಅದು ಸೋಲುತ್ತದೆ.' ನಿಜವಾಗಿಯೂ ಹಾಗೆಯೇ ಆಯಿತು.''

26. ಪಶ್ಚಿಮ ಭಾರತದಲ್ಲಿ ಒಂದು ಕಡೆ ತೋತಾಪುರಿಯು ಜನಿಸಿದನು. ಇದರ ಬಗ್ಗೆ ಶ್ರೀರಾಮಕೃಷ್ಣರು ಏನೂ ಹೇಳಿದುದನ್ನು ನಾವು ಕೇಳಿಲ್ಲ. ಶ್ರೀರಾಮಕೃಷ್ಣರೂ ಇದರ ಸಂಬಂಧವಾಗಿ ಅವನನ್ನು ವಿಚಾರಿಸುವ ಗೋಜಿಗೂ ಹೋಗಿರಲಿಕ್ಕಿಲ್ಲ. ಸಾಮಾನ್ಯವಾಗಿ ಹೆಸರು, ಊರು, ಗೋತ್ರ ಇತ್ಯಾದಿಗಳ ಬಗ್ಗೆ ಕೇಳುವುದನ್ನು ಸಂನ್ಯಾಸಿಗಳು ಇಷ್ಟಪಡುವುದಿಲ್ಲ. ''ಇವುಗಳ ಬಗ್ಗೆ ಸಂನ್ಯಾಸಿಯನ್ನು ವಿಚಾರಿಸುವುದು ಮತ್ತು ಸಂನ್ಯಾಸಿಯು ಅವಕ್ಕೆ ಉತ್ತರಿಸುವುದು – ಎರಡೂ ಶಾಸ್ತ್ರಕ್ಕೆ ವಿರುದ್ಧ'' ಎಂದು ಅವರು ಹೇಳುತ್ತಾರೆ. ಆದ್ದರಿಂದಲೇ ಶ್ರೀರಾಮಕೃಷ್ಣರು ತೋತಾಪುರಿಯನ್ನು ಇವುಗಳ ಸಂಬಂಧವಾಗಿ ವಿಚಾರಿಸದೆ ಇದ್ದಿರಬಹುದು. ಆದರೆ ಅವರ ದೇಹಾವಸಾನದ ನಂತರ ಅವರ ಸಂನ್ಯಾಸೀ ಶಿಷ್ಯರು ಭಾರತ ಪರಿಭ್ರಮಣ ಮಾಡುತ್ತಿರುವಾಗ ತೋತಾಪುರಿಯ ಬಗ್ಗೆ ಕೆಲವು ಮಾಹಿತಿಗಳನ್ನು ಸಂಗ್ರಹಿಸಿದರು. ತೋತಾಪುರಿಯು ಪಂಜಾಬ್ ಪ್ರದೇಶಕ್ಕೆ ಸೇರಿದವನು, ಅವನ ಗುರುಸ್ಥಾನ ಕುರುಕ್ಷೇತ್ರದ ಹತ್ತಿರ ಲೂಧಿಯಾನ. ಅವನು ಗುರು ಪ್ರಖ್ಯಾತ ಯೋಗಿಯಾಗಿದ್ದನು ಮತ್ತು ಅವನದೊಂದು ಮಠವಿತ್ತು. ಆ ಮಠವನ್ನು ಸ್ಥಾಪಿಸಿದವನು ಅವನ ಗುರುವೊ ಅಥವಾ ಹಿಂದಿನವರು ಯಾರಾದರೂ ಸ್ಥಾಪಿಸಿದ್ದರೊ ಎಂಬುದು ಸರಿಯಾಗಿ ತಿಳಿಯದು. ಆದರೆ ತೋತಾಪುರಿಯ ಗುರು ಆ ಮಠದ ಮಹಂತನಾಗಿದ್ದನು ಎಂಬುದು ನಿಜ. ಅವನ ಗೌರವಾರ್ಥವಾಗಿ ಈಗಲೂ ಹಳ್ಳಿಯ ಜನರೆಲ್ಲ ಸೇರಿ ದೊಡ್ಡ ಉತ್ಸವವನ್ನು ಆಚರಿಸುತ್ತಾರೆ. ಅವನು ಹೊಗೆಸೊಪ್ಪು ತಿನ್ನುತ್ತಿದ್ದುದರಿಂದ ಜನರು ಉತ್ಸವದ ಸಮಯದಲ್ಲಿ ಅದನ್ನು ತಂದು ಮಠಕ್ಕೆ ಕಾಣಿಕೆಯಾಗಿ ನೀಡುತ್ತಾರೆ, ಗುರುವಿನ ದೇಹಾವಸಾನವಾದ ಮೇಲೆ ತೋತಾಪುರಿಯೇ ಮಠದ ಮಹಂತ ಸ್ಥಾನವನ್ನು ಅಲಂಕರಿಸಿದ್ದನು.

27. ತೋತಾಪುರಿಯು ಬಾಲ್ಯದಲ್ಲಿಯೇ ತನ್ನ ಗುರುವಿನಿಂದ ವೇದಾಂತದ ಉಪದೇಶವನ್ನು ಪಡೆದಿದ್ದನು ಮತ್ತು ಅವನೊಡನಿದ್ದು ಸ್ವಾಧ್ಯಾಯದಲ್ಲಿ ನಿರತನಾಗಿದ್ದನು ಹಾಗೂ ಸಾಧನೆಯ ರಹಸ್ಯವನ್ನು ಅರತಿದ್ದನು. ಈ ವಿಷಯ ತೋತಾಪುರಿಯ ಮಾತಿನಿಂದಲೇ ತಿಳಿದುಬರುತ್ತದೆ. ಆ ಸಂನ್ಯಾಸೀ ಮಂಡಳಿಯಲ್ಲಿ ಏಳುನೂರು ಜನ ಸಂನ್ಯಾಸಿಗಳಿದ್ದರು ಮತ್ತು ಅವರೆಲ್ಲಾ ಗುರುವಿನ ಆದೇಶದಂತೆ ಸಾಧನೆ ಮಾಡುತ್ತಾ ವೇದಾಂತದಲ್ಲಿ ಹೇಳಿರುವ ಸತ್ಯವನ್ನು ಅನುಭವಿಸಲು ಪ್ರಯತ್ನಿಸುತ್ತಿದ್ದರು ಎಂದು ತೋತಾಪುರಿಯು ಶ್ರೀರಾಮಕೃಷ್ಣರಿಗೆ ಹೇಳಿದ್ದನು. ಆ ಮಂಡಳಿಯಲ್ಲಿ ಸಾಧನೆಯ ಬಗ್ಗೆ ಉತ್ತಮ ಶಿಕ್ಷಣ ದೊರೆಯುತ್ತಿತ್ತು ಎಂಬುದು ತೋತಾಪುರಿಯ ಮಾತಿನಿಂದ ತಿಳಿದುಬರುತ್ತದೆ. ಶ್ರೀರಾಮಕೃಷ್ಣರು ಈ ವಿಷಯವನ್ನು ನಮಗೆ ಮಾತಿನ ಸಂದರ್ಭದಲ್ಲಿ ಅನೇಕಸಲ ಹೇಳುತ್ತಿದ್ದರು. ಅವರು ಹೇಳುತ್ತಿದ್ದರು : ''ಅವರ ದಳದಲ್ಲಿ ಏಳುನೂರು ಜನ ನಗ್ನ ಸಾಧುಗಳಿದ್ದರೆಂದು ತೋತಾಪುರಿ ಹೇಳುತ್ತಿದ್ದ. ಧ್ಯಾನವನ್ನು

ಕಲಿಯುವವರು ಮೊದಲು ಮೆತ್ತನೆಯ ಆಸನದ ಮೇಲೆ ಕುಳಿತುಕೊಳ್ಳುತ್ತಿದ್ದರು. ಏಕೆಂದರೆ ಕಠಿಣ ಆಸನದ ಮೇಲೆ ಕುಳಿತು ಧ್ಯಾನ ಮಾಡಿದರೆ ಕಾಲು ನೋಯುವುದು. ಇದರಿಂದ ಮನಸ್ಸು ಭಗವಂತನ ಕಡೆ ಹರಿಯದೆ ದೇಹದ ಕಡೆಗೇ ಹೋಗುತ್ತದೆ. ಅನಂತರ ಧ್ಯಾನ ಆಳವಾದಂತೆಲ್ಲ ಹೆಚ್ಚು ಹೆಚ್ಚು ಕಠಿಣವಾದ ಆಸನದ ಮೇಲೆ ಕುಳಿತು ಅವರು ಧ್ಯಾನ ಮಾಡಬೇಕಾಗುತ್ತಿತ್ತು. ಕೊನೆಯಲ್ಲಿ ಅವರು ಕೇವಲ ಚರ್ಮದ ಮೇಲೆ ಅಥವಾ ನೆಲದ ಮೇಲೆ ಕುಳಿತು ಧ್ಯಾನಮಾಡಬೇಕಾಗಿತ್ತು. ಆಹಾರ ಮುಂತಾದ ಎಲ್ಲಾ ವಿಷಯಗಳಲ್ಲಿಯೂ ಕಠಿಣ ನಿಯಮಗಳನ್ನು ಪಾಲಿಸಬೇಕಾಗಿತ್ತು. ಉಡುಪಿನ ವಿಷಯದಲ್ಲಿಯೂ ಕ್ರಮೇಣ ಅವರು ನಗ್ನರಾಗಿರುವುದನ್ನು ಕಲಿಯಬೇಕಿತ್ತು. ಲಜ್ಜಾ ಘೃಣ. ಭಯ, ಜಾತಿ, ಶೀಲ, ಮಾನ ಇತ್ಯಾದಿ ಅಷ್ಟಪಾಶಗಳು ಮನುಷ್ಯನನ್ನು ಹುಟ್ಟಿನಿಂದಲೇ ಬಂಧಿಸಿವೆ. ಇವುಗಳೆಲ್ಲವನ್ನು ಒಂದೊಂದಾಗಿ ತ್ಯಾಗಮಾಡುವಂತೆ ಅವರಿಗೆ ಶಿಕ್ಷಣ ನೀಡಲಾಗುತ್ತಿತ್ತು. ಅನಂತರ ಮನಸ್ಸು ಧ್ಯಾನದಲ್ಲಿ ಪಕ್ವವಾಗಲು ಮೊದಲು ಇತರರೊಡನೆ ಕುಳಿತು ಧ್ಯಾನ ಮಾಡಬೇಕಾಗಿರುತ್ತಿತ್ತು. ಅನಂತರ ಏಕಾಕಿಯಾಗಿ ಓಡಾಡುತ್ತಾ ತೀರ್ಥಸ್ಥಾನಗಳನ್ನು ಸಂದರ್ಶಿಸಿ ಬರಬೇಕಾಗಿತ್ತು. ನಗ್ನ ಸಾಧುಗಳು ಈ ರೀತಿಯ ಅನೇಕ ನಿಯಮಗಳನ್ನು ಪಾಲಿಸುತ್ತಿದ್ದರು.'' ಈ ಸಂನ್ಯಾಸೀ ಮಂಡಳಿಯಲ್ಲಿ ಮಹಂತರನ್ನು ಆರಿಸುವ ವಿಧಾನದ ಬಗ್ಗೆಯೂ ಶ್ರೀರಾಮಕೃಷ್ಣರು ತಿಳಿದುಕೊಂಡಿದ್ದರು. ಮಾತಿನ ಸಂದರ್ಭದಲ್ಲಿ ಇದನ್ನು ನಮಗೆ ಒಂದುದಿನ ಹೇಳಿದ್ದರು : ''ನಗ್ನ ಸಾಧುಗಳ ಮಧ್ಯೆ ನಿಜವಾಗಿಯೂ ಯಾರು ಪರಮಹಂಸಾವಸ್ಥೆಯನ್ನು ಮುಟ್ಟಿರುವರೋ ಅವರನ್ನು ಎಲ್ಲರೂ ಸೇರಿ ಮಹಂತರನ್ನಾಗಿ ಆರಿಸುತ್ತಿದ್ದರು. ಹಾಗಿಲ್ಲದಿದ್ದರೆ ಧನ, ಮಾನ, ಇತ್ಯಾದಿಗಳೆಲ್ಲಾ ಇದ್ದುಕೂಡ ಮನಸ್ಸನ್ನು ಸಮಸ್ಥಿತಿಯಲ್ಲಿಟ್ಟುಕೊಂಡಿರಲು ಸಾಧ್ಯವೆ ? ತಲೆ ತಿರುಗಿಹೋಗುವುದಿಲ್ಲವೇ ? ಆದ್ದರಿಂದ ಯಾರ ಮನಸ್ಸು ಕಾಂಚನದಿಂದ ಸಂಪೂರ್ಣ ಮುಕ್ತವಾಗಿರುತ್ತಿತ್ತೋ ಅವನನ್ನೇ ಅಧಿಕಾರದಲ್ಲಿ ಕೂಡಿಸಿ ಆಸ್ತಿಯ ಜವಾಬ್ದಾರಿಯನ್ನು ನೀಡುತ್ತಿದ್ದರು. ಇದರಿಂದಾಗಿ ಆ ಹಣವು ದೇವತಾಕಾರ್ಯದಲ್ಲಿ ಸಾಧುಸೇವೆಯಲ್ಲಿ ಸದ್ವಿನಿಯೋಗವಾಗುತ್ತಿತ್ತು.''

28. ಈ ಮೇಲಿನ ವಿವರಣೆಯಿಂದ ತೋತಾಪುರಿಯು ಬಾಲ್ಯದಿಂದಲೂ ಕಾಮಕ್ರೋಧಾದಿ ಸಾಂಸಾರಿಕ ಬಂಧನಗಳಿಂದ ದೂರವಿದ್ದನು, ಒಂದು ಸ್ವರ್ಗೀಯ ವಾತಾವರಣದಲ್ಲಿ ಗುರುವಿನ ಲಾಲನೆ ಪಾಲನೆಗೆ ಒಳಗಾಗಿದ್ದನು ಎಂಬುದು ತಿಳಿದುಬರುತ್ತದೆ. ಭಾರತದ ಉತ್ತರ-ಪಶ್ಚಿಮ ದಿಕ್ಕಿನಲ್ಲಿ ಒಂದು ಪದ್ಧತಿಯಿತ್ತು : ದಂಪತಿಗಳು ತಮಗೆ ಬಹಳ ಕಾಲವಾದರೂ ಮಕ್ಕಳಾಗದಿದ್ದರೆ ತಮಗೆ ಹುಟ್ಟುವ ಮೊದಲನೆಯ ಮಗುವನ್ನು ಭಗವತ್ಸೇವೆಗೆ ಅರ್ಪಿಸುವುದಾಗಿ ಅವರು ದೇವಸ್ಥಾನದಲ್ಲಿ ಹರಕೆ ಹೊತ್ತುಕೊಳ್ಳುತ್ತಿದ್ದರು. ಅದೇ ರೀತಿ ಅವರು ಮಾಡುತ್ತಿದ್ದರು ಕೂಡ. ತೋತಾಪುರಿಯೂ ಅದೇ ರೀತಿ ಗುರುವಿಗೆ ಅರ್ಪಿಸಲ್ಪಟ್ಟಿದ್ದನೇನು ? ಯಾರಿಗೆ ಗೊತ್ತು ? ಅವನ ತಂದೆ ತಾಯಿ ಸಹೋದರ ಸಹೋದರಿಯರ ಸಂಬಂಧವಾಗಿ ಶ್ರೀರಾಮಕೃಷ್ಣರೂ ಏನೂ

ಹೇಳದೇ ಇದ್ದುದರಿಂದ ಹೀಗೆ ಊಹಿಸಬಹುದು.

ಪೂರ್ವಸಂಸ್ಕಾರದ ಫಲವಾಗಿ ತೋತಾಪುರಿಯ ಮನಸ್ಸು ಕೂಡ ಸರಳ ವಿಶ್ವಾಸ ಶ್ರದ್ಧೆಯಿಂದ ಕೂಡಿತ್ತು. "ಜಗತ್ತಿನಲ್ಲಿ ಮನುಷ್ಯತ್ವ, ಭಗವಂತನನ್ನು ಪಡೆಯುವ ಇಚ್ಛೆ ಮತ್ತು ಸದ್ಗುರುವಿನ ಆಶ್ರಯ—ಈ ಮೂರು ಒಟ್ಟಿಗೆ ಲಭಿಸುವುದು ಬಹಳ ಅಪರೂಪ, ಭಗವಂತನ ಅನುಗ್ರಹವಿಲ್ಲದೆ ಲಭಿಸುವುದಿಲ್ಲ"—ಎಂದು ಶಂಕರಾಚಾರ್ಯರು 'ವಿವೇಕಚೂಡಾಮಣಿ'ಯ ಪ್ರಾರಂಭದಲ್ಲಿ ಹೇಳುತ್ತಾರೆ. ತೋತಾಪುರಿಯು ಈ ಮೂರನ್ನೂ ಪಡೆದಿದ್ದುದು ಮಾತ್ರವಲ್ಲದೆ ತನ್ನ ಜೀವನದ ಚರಮ ಉದ್ದೇಶವನ್ನು ಸಾಧಿಸಲು ಅವನ್ನು ಸರಿಯಾಗಿ ಉಪಯೋಗಿಸಿಕೊಂಡನು. ಗುರು ಹೇಳಿದುದನ್ನೆಲ್ಲ ಗ್ರಹಿಸಿ ಅನುಷ್ಠಾನಕ್ಕೆ ತರುವಲ್ಲಿ ಅವನು ಸಮರ್ಥನಾಗಿದ್ದನು. ಮನಸ್ಸಿನ ಕುತಂತ್ರಕ್ಕೆ ಅವನು ಎಂದೂ ಬಲಿಯಾಗುತ್ತಿರಲಿಲ್ಲ. ವೈಷ್ಣವರಲ್ಲಿ ಒಂದು ಮಾತಿದೆ : "ಗುರು ಕೃಷ್ಣ ಮತ್ತು ವೈಷ್ಣವ—ಈ ಮೂರರ ದಯೆ ಲಭಿಸಿತು. ಆದರೆ ಒಂದರ ದಯೆಯಿಲ್ಲದೆ ಜೀವನ ಸರ್ವನಾಶವಾಯಿತು." ಇಲ್ಲಿ 'ಒಂದರ' ಎಂದರೆ ತನ್ನ ಸ್ವಂತ ಮನಸ್ಸಿನ. ತೋತಾಪುರಿಯು ಇಂಥ ದುಷ್ಟ ಮನಸ್ಸಿನ ಬಲೆಗೆ ಬೀಳಲಿಲ್ಲ ಎಂದು ಕಂಡುಬರುತ್ತದೆ. ಅವನ ಸರಳ ಮನಸ್ಸು ಭಗವಂತನಲ್ಲಿ ಸರಳ ವಿಶ್ವಾಸವನ್ನು ಹೊಂದಿತ್ತು. ಆದ್ದರಿಂದ ಗುರುವು ತೋರಿಸಿದ ಹಾದಿಯಲ್ಲಿ ಮುಂದುವರಿಯುತ್ತ, ಪ್ರಲೋಭನೆಗಳ ಕಡೆ ಅತೃಪ್ತ ಲಾಲಸೆಯಿಂದ ಅವನು ಎಂದೂ ದೃಷ್ಟಿ ಹಾಯಿಸಲಿಲ್ಲ. ಸ್ವಾಭಾವಿಕವಾಗಿಯೇ ಸ್ವಪ್ರಯತ್ನ, ಆತ್ಮನಿರ್ಭರತೆ, ಆತ್ಮವಿಶ್ವಾಸ—ಇವೇ ಅವನ ಸರ್ವಸ್ವವಾಗಿದ್ದವು. ಮನಸ್ಸು ತಿರುಗಿನಿಂತರೆ ಸ್ವಪ್ರಯತ್ನವು ಪ್ರಬಲ ಪ್ರವಾಹದ ಮುಂದೆ ಹುಲ್ಲಿನಂತೆ ಕೊಚ್ಚಿಹೋಗುತ್ತದೆ, ಆತ್ಮವಿಶ್ವಾಸದ ಸ್ಥಾನವನ್ನು ಅವಿಶ್ವಾಸವು ಆಕ್ರಮಿಸಿ ವ್ಯಕ್ತಿಯನ್ನು ಸಾಮಾನ್ಯ ಕೀಟದಂತೆ ದುರ್ಬಲಗೊಳಿಸುತ್ತದೆ ಎಂಬ ವಿಚಾರ ತೋತಾಪುರಿಗೆ ತಿಳಿದೇ ಇರಲಿಲ್ಲ ಎನ್ನಬಹುದು. ಭಗವಂತನ ಕೃಪೆಯಿಂದ ಹೊರಜಗತ್ತಿನಲ್ಲಿ ಎಲ್ಲವೂ ಅನುಕೂಲಕರವಾಗಿರದಿದ್ದರೆ ಸಾಧಕನು ಹಲವು ಕೆಟ್ಟ ಪ್ರಭಾವಗಳಿಗೆ ಒಳಗಾಗಿ ಇನ್ನಷ್ಟು ಬಂಧನವನ್ನು ಹೆಚ್ಚಿಸಿಕೊಳ್ಳುತ್ತಾನೆ. ಆದರೆ ತೋತಾಪುರಿ ಇದನ್ನು ಎಂದೂ ಭಾವಿಸಿದವನೇ ಅಲ್ಲ. ಭಾವಿಸುವುದಾದರೂ ಏತಕ್ಕೆ ? ಅವನು ಮೊದಲಿನಿಂದಲೂ ತಾನು ಹಿಡಿದುದನ್ನೆಲ್ಲ ಸಾಧಿಸಲು ಸಮರ್ಥನಾಗಿದ್ದ. ಯಾವುದು ಹಿತವೆನಿಸುತ್ತಿತ್ತೊ ಅದನ್ನು ಕೂಡಲೇ ಕಾರ್ಯಗತಗೊಳಿಸುತ್ತಿದ್ದ. 'ಮನಸ್ಸು ಅರ್ಥಮಾಡಿಕೊಳ್ಳುತ್ತಿದೆ, ಆದರೆ ಹೃದಯಕ್ಕೆ ತಿಳಿಯುತ್ತಿಲ್ಲ' ಎಂಬ ಸ್ಥಿತಿ ಅವನಿಗೆ ಇರಲೇ ಇಲ್ಲ ಎಂದು ಕಂಡು ಬರುತ್ತದೆ. ಮನುಷ್ಯನು ಮಾತು ಮನಸ್ಸುಗಳನ್ನು ಒಂದು ಮಾಡಲಾಗದೆ ನೂರಾರು ಚೇಳು ಕಡಿತದಿಂದ ತೊಳಲಾಡುತ್ತಾನೆ. ಮನಸ್ಸಿನ ಒಳಗೆ ಅನೇಕ ಕರ್ತೃಗಳಿರುತ್ತಾರೆ, ಇಂದ್ರಿಯಗಳು ತಮಗಿಷ್ಟಬಂದಂತೆ ಓಡುತ್ತವೆ. ಇದರಿಂದ ಅವನು ಯಾವ ನಿರ್ದಿಷ್ಟ ಗುರಿಯನ್ನೂ ಸಾಧಿಸಲಾಗದೆ ಹತಾಶನಾಗಿ ಅಂಧಕಾರದಲ್ಲಿ ದಾರಿಗಾಣದೆ ಪರದಾಡುತ್ತಾನೆ. ಮನುಷ್ಯನ ಇಂತಹ ಒಂದು ಸ್ಥಿತಿಯನ್ನು ತೋತಾಪುರಿಯು ಎಂದೂ

ಭಾವಿಸಿರಲಿಕ್ಕಿಲ್ಲ. ಭಾವಿಸಿದ್ದರೂ ಕೇಳಿ ಕಲಿಯುವುದಕ್ಕೂ, ನೋಡಿ ಕಲಿಯುವುದಕ್ಕೂ ಮತ್ತು ಅನುಭವಿಸಿ ಕಲಿಯುವುದಕ್ಕೂ ಬಹಳ ವ್ಯತ್ಯಾಸವಿದೆ. ಆದ್ದರಿಂದ ತೋತಾ ಪುರಿಯ ಮನಸ್ಸಿನಲ್ಲಿದ್ದ ಇಂತಹ ಸ್ಥಿತಿಯ ಚಿತ್ರ ಮತ್ತು ನಿಜವಾಗಿಯೂ ಅನುಭವಿಸು ತ್ತಿರುವ ವ್ಯಕ್ತಿಯ ಮನಸ್ಸಿನಲ್ಲಿರುವ ಚಿತ್ರ—ಇವೆರಡಕ್ಕೂ ಅಜಗಜಾಂತರ ವ್ಯತ್ಯಾಸ ವಿತ್ತು. ಇದರಿಂದಾಗಿ ಭಗವತ್‌ಶಕ್ತಿಯಾದ ಅವಿದ್ಯಾ ಮಾಯೆಯ ವಿಚಾರ ಅವನ ಮನಸ್ಸಿಗೆ ಹೊಳೆಯಲಿಲ್ಲ. ಆದ್ದರಿಂದ ದುರ್ಬಲವಾದ ಮಾನವ ಮನಸ್ಸಿನ ಚಟುವಟಿಕೆ ಗಳ ವಿಷಯದಲ್ಲಿ ಅವನು ಕ್ರೂರದೃಷ್ಟಿಯುಳ್ಳವನೇ ಹೊರತು ಸಹಾನುಭೂತಿಯುಳ್ಳವ ನಾಗಿರಲಿಲ್ಲವೆಂದೆನಿಸುತ್ತದೆ. ಶ್ರೀರಾಮಕೃಷ್ಣರ ಗುರುಭಾವದ ಸಂಪರ್ಕದಿಂದಾಗಿ ಅವನು ಈ ಒಂದು ಕೊರತೆಯಿಂದ ಮುಕ್ತನಾದನು. ಅವನು ಕೊನೆಯಲ್ಲಿ ಮಾಯಾ ಶಕ್ತಿಯನ್ನು ಒಪ್ಪಿಕೊಂಡು, ಬ್ರಹ್ಮ ಮತ್ತು ಶಕ್ತಿ ಅಭೇದವೆಂದು ತಿಳಿದು ಭಕ್ತಿಯಿಂದ ತುಂಬಿದ ಹೃದಯದವನಾಗಿ ದಕ್ಷಿಣೇಶ್ವರದಿಂದ ಬೀಳ್ಕೊಳ್ಳುವಂತಾಯಿತು. ನಾವು ಈಗ ಈ ವಿಷಯವನ್ನು ಹೇಳಲು ಆರಂಭಿಸುತ್ತೇವೆ.

29. ಬಾಲ್ಯದಿಂದಲೇ ಕಠಿನ ಬ್ರಹ್ಮಚರ್ಯವನ್ನು ಪಾಲಿಸುತ್ತಿದ್ದ ತೋತಾಪುರಿಗೆ ಭಕ್ತಿಮಾರ್ಗದ ಬಗ್ಗೆ ತಿರಸ್ಕಾರ ಭಾವನೆಯಿತ್ತು. ಭಗವದ್ಭಕ್ತಿಯು ಕ್ರಮೇಣ ಮನುಷ್ಯನಲ್ಲಿ ವೈರಾಗ್ಯವನ್ನು ಜಾಗ್ರತಗೊಳಿಸಿ ಭಗವತ್ಸಾಕ್ಷಾತ್ಕಾರವನ್ನು ನೀಡುವುದು, ಅಷ್ಟೇ ಅಲ್ಲದೆ ಭಕ್ತಿಯ ಚರಮಾವಸ್ಥೆಯಲ್ಲಿ ಅವನು ಅದ್ವೈತಜ್ಞಾನ ವನ್ನೂ ಪಡೆಯುತ್ತಾನೆ – ಎಂಬ ವಿಚಾರದಲ್ಲಿ ತೋತಾಪುರಿಗೆ ನಂಬಿಕೆಯಿರಲಿಲ್ಲ. ಆದ್ದರಿಂದ ಅವನು ಜಪ, ಕೀರ್ತನೆ, ಭಜನೆ, ಭಾವವಿಹ್ವಲತೆ ಇವುಗಳನ್ನೆಲ್ಲ ನಿಂದಿಸುತ್ತಿ ದ್ದನು. ಇದರಿಂದ ಅವನು ನಾಸ್ತಿಕನಾಗಿದ್ದ, ಭಗವದ್‌ಪ್ರೇಮ ಅವನಲ್ಲಿ ಇರಲೇ ಇಲ್ಲ ಎಂದು ಓದುಗರು ಭಾವಿಸಬಾರದು. ಶಮದಮಾದಿ ಸಂಪತ್ತಿನಿಂದ ಕೂಡಿದವನಾಗಿ ಶಾಂತ ಪ್ರಕೃತಿಯವನಾದ್ದರಿಂದ ಅವನು ಶಾಂತಭಾವದ ಭಕ್ತನಾಗಿದ್ದ ಮತ್ತು ಇತರರ ಲ್ಲಿಯೂ ಅದೇ ಭಾವದ ಭಕ್ತಿಯನ್ನು ಅರ್ಥಮಾಡಿಕೊಳ್ಳಬಲ್ಲವನಾಗಿದ್ದ. ಆದರೆ ಭಗವಂತನನ್ನು ಸಖ, ಪುತ್ರ, ಪತಿ ಎಂದು ಮುಂತಾಗಿ ಭಾವಿಸುತ್ತ ಅವನನ್ನು ಭಜಿಸ ಬಹುದು ಎಂದು ಅವನು ಭಾವಿಸಿರಲೇ ಇಲ್ಲ. ಭಗವದ್ವಿರಹದಿಂದ ವ್ಯಾಕುಲತೆಯಿಂದ ಅವನಿಗಾಗಿ ರೋದಿಸುವುದು ಭಗವದ್ಭಾವದಲ್ಲಿ ನಗುವುದು, ಆನಂದದಿಂದ ನರ್ತಿಸು ವುದು ಇವನ್ನೆಲ್ಲ ಹುಚ್ಚುತನ, ವ್ಯರ್ಥ ಪ್ರಲಾಪ ಎಂದು ಅವನು ಪರಿಗಣಿಸುತ್ತಿದ್ದ. ಇವುಗಳಿಂದಲೂ ಸಾಧಕನು ತನ್ನ ಗುರಿಯನ್ನು ತಲುಪಬಹುದು ಎಂದು ಅವನ ಕಲ್ಪನೆಗೇ ಬಂದಿರಲಿಲ್ಲ. ಶ್ರೀಜಗನ್ಮಾತೆಯ ಮೇಲೆ ಭಕ್ತಿಯಿರಿಸುವ ಅವಳನ್ನು ಸ್ತುತಿಸಿ ಭಜಿಸುವ ವಿಚಾರವಾಗಿ ಅವನ ಮತ್ತು ಶ್ರೀರಾಮಕೃಷ್ಣರ ನಡುವೆ ತುಂಬ ವಾದವಿವಾದ ನಡೆಯುತ್ತಿತ್ತು.

30. ಶ್ರೀರಾಮಕೃಷ್ಣರು ಬಾಲ್ಯಕಾಲದಿಂದಲೂ ಬೆಳಗ್ಗೆ ಮತ್ತು ಸಂಜೆ ಕರತಾಳದೊಂದಿಗೆ, ಮತ್ತೆ ಕೆಲವೊಮ್ಮೆ ನರ್ತಿಸುತ್ತಲೂ "ಹರಿಬೋಲ್

ಹರಿಬೋಲ್', 'ಹರಿ ಗುರು. ಗುರು ಹರಿ' : 'ಹರಿ ಪ್ರಾಣ. ಹೇ ಗೋವಿಂದ ಮಮ ಜೀವನ' ; 'ಮನ ಕೃಷ್ಣ ಪ್ರಾಣ ಕೃಷ್ಣ, ಜ್ಞಾನ ಕೃಷ್ಣ, ಧ್ಯಾನ ಕೃಷ್ಣ, ಬೋಧ ಕೃಷ್ಣ' ಬುದ್ಧಿ ಕೃಷ್ಣ' ; 'ನೀನೇ ಜಗತ್ತು, ನಿನ್ನಲ್ಲೇ ಜಗತ್ತು' ; 'ನಾನು ಯಂತ್ರ, ನೀನು ಯಂತ್ರಿ'– ಹೀಗೆ ಮುಂತಾಗಿ ಉಚ್ಚ ಕಂಠದಿಂದ ಸ್ವಲ್ಪಹೊತ್ತು ಪಠಿಸುತ್ತಿದ್ದರು. ವೇದಾಂತ ಸಾಧನೆಯ ನಂತರ ನಿರ್ವಿಕಲ್ಪ ಸಮಾಧಿಯನ್ನು ಪಡೆದಾದಮೇಲೂ ಅವರು ಈ ಅಭ್ಯಾಸವನ್ನು ಬಿಡಲಿಲ್ಲ. ಒಂದುದಿನ ಮಧ್ಯಾಹ್ನ ತೋತಾಪುರಿಯೊಂದಿಗೆ ಪಂಚವಟಿಯಲ್ಲಿ ಕುಳಿತಿದ್ದರು. ಮಾತನಾಡುತ್ತಾ ಮಾತನಾಡುತ್ತ ಸಂಜೆಯಾಯಿತು. ಶ್ರೀರಾಮಕೃಷ್ಣರು ಕೂಡಲೆ ಮಾತು ನಿಲ್ಲಿಸಿ ಕರತಾಳ ಹಾಕುತ್ತ ನಾಮಸ್ಮರಣೆ ಪ್ರಾರಂಭಿಸಿದರು. ತೋತಾಪುರಿಗೆ ಅದನ್ನು ನೋಡಿ ಆಶ್ಚರ್ಯವಾಯಿತು. ಇವರು ವೇದಾಂತದ ಅತ್ಯುತ್ತಮ ಅಧಿಕಾರಿ, ಮೂರೆ ದಿನದಲ್ಲಿ ನಿರ್ವಿಕಲ್ಪ ಸಮಾಧಿಯನ್ನು ಪಡೆದರು, ಆದರೂ ಕೆಳಮಟ್ಟದ ಅಧಿಕಾರಿಯಂತೆ ಆಚರಿಸುತ್ತಿರುವರಲ್ಲ :– ಎಂದು ಭಾವಿಸತೊಡಗಿದನು. "ಇದೇನು ರೊಟ್ಟಿ ತಟ್ಟುತ್ತಿರುವೆ ?" ಎಂದು ಹಂಗಿಸಿ ನುಡಿದನು. ಉತ್ತರ ಪಶ್ಚಿಮ ಭಾಗದಲ್ಲಿ ಜನರು ಮಣೆ ಲಟ್ಟಣಿಕೆ ಮುಂತಾದುವುಗಳನ್ನು ಉಪಯೋಗಿಸದೆ ಕೈಮೇಲೆಯೆ ರೊಟ್ಟಿಯನ್ನು ಪಟ ಪಟ ಎಂದು ತಟ್ಟುತ್ತಾರೆ. ಆದ್ದರಿಂದಲೆ ತೋತಾಪುರಿಯು ಹಾಗೆ ಕೇಳಿದನು. ಶ್ರೀರಾಮಕೃಷ್ಣರು ನಕ್ಕು ನುಡಿದರು : "ಹೋಗು, ನಾನು ಭಗವಂತನ ನಾಮೋಚ್ಚಾರಣೆ ಮಾಡುತ್ತಿದ್ದೇನೆ, ನೀನು ರೊಟ್ಟಿ ತಟ್ಟುತ್ತಿದ್ದೇನೆಂದು ಹೇಳುತ್ತಿದ್ದೀಯಲ್ಲ !" ತೋತಾಪುರಿಯೂ ಅವರ ಬಾಲಕ ಸಹಜವಾದ ಮಾತನ್ನು ಕೇಳಿ ನಕ್ಕನು. ಶ್ರೀರಾಮಕೃಷ್ಣರ ಆ ರೀತಿಯ ಆಚರಣೆಯಲ್ಲಿ ಏನೋ ಅರ್ಥವಿರಬೇಕು. ಅದು ತನಗೆ ಅರ್ಥವಾಗುತ್ತಿಲ್ಲ ಎಂದು ಅವನು ಭಾವಿಸಿದನು. ಈ ವಿಚಾರದಲ್ಲಿ ಅವರನ್ನು ವಿರೋಧಿಸುವುದು ಸರಿಯಲ್ಲ ಎಂದೆನಿಸಿತು ಅವನಿಗೆ.

31. ಇನ್ನೊಂದು ದಿನ ಶ್ರೀರಾಮಕೃಷ್ಣರು ತೋತಾಪುರಿಯ ಧುನಿಯ ಪಕ್ಕದಲ್ಲಿ ಕುಳಿತಿದ್ದರು. ಅವರಿಬ್ಬರು ಅತ್ಯಾಸಕ್ತಿಯಿಂದ ಭಗವತ್ಸಂಬಂಧವಾಗಿ ಮಾತನಾಡುತ್ತಿದ್ದರು, ಇಬ್ಬರ ಮನಸ್ಸೂ ಉನ್ನತ ಅದ್ವೈತ ಜ್ಞಾನದಲ್ಲಿ ತನ್ಮಯವಾಗುವುದರಲ್ಲಿತ್ತು. ಪಕ್ಕದಲ್ಲಿದ್ದ ಅಗ್ನಿಯೂ ಅದೇ ಅದ್ವೈತಾನಂದವನ್ನು ಅನುಭವಿಸುತ್ತಿರುವಂತೆ ಧಗಧಗಿಸಿ ಉರಿಯುತ್ತಿತ್ತು. ಆ ಸಮಯದಲ್ಲಿ ತೋಟದಲ್ಲಿ ಕೆಲಸ ಮಾಡುವವನೊಬ್ಬನಿಗೆ ಧೂಮಪಾನಮಾಡಬೇಕೆನಿಸಿತು. ಅವನು ಕೊಳವೆಗೆ ಹೊಗೆಸೊಪ್ಪನ್ನು ತುಂಬಿಸಿ ಬೆಂಕಿಗಾಗಿ ಅಲ್ಲಿಗೆ ಬಂದು ಉರಿಯುವ ಕೊಳ್ಳಿಯೊಂದನ್ನು ತೆಗೆದನು. ಶ್ರೀರಾಮಕೃಷ್ಣರೊಡನೆ ಉಚ್ಚ ಅದ್ವೈತದ ಬಗ್ಗೆ ಮಾತನಾಡುತ್ತ ಒಳಗೆ ಅದ್ವೈತಾನಂದವನ್ನು ಅನುಭವಿಸುತ್ತಿದ್ದ ತೋತಾಪುರಿಯ ಗಮನ ಅತ್ತಕಡೆ ಹರಿದಿರಲಿಲ್ಲ. ಆದರೆ ಈಗ ಕೂಡಲೆ ಅವನ ದೃಷ್ಟಿ ಆ ವ್ಯಕ್ತಿಯ ಕಡೆ ಹೊರಳಿತು. ಈಗ ಅವನ ಕೋಪ ನೆತ್ತಿಗೇರಿತು, ಬಾಯಿಗೆ ಬಂದಂತೆ ಅವನನ್ನು ಬೈಯ್ಯತೊಡಗಿದನು.

ಚಿಮುಟದಿಂದ ಆವನನ್ನು ಇರಿಯುವುದಾಗಿ ಹೆದರಿಸಿದನು. ಏಕೆಂದರೆ ನಾಗಾ ಸಾಧು ಗಳು ಧುನಿಯನ್ನು ಪೂಜ್ಯಭಾವದಿಂದ ಕಾಣುತ್ತಾರೆ.

ಶ್ರೀರಾಮಕೃಷ್ಣರು ಇದನ್ನು ನೋಡಿ ಜೋರಾಗಿ ನಗತೊಡಗಿದರು. ತೋತಾ ಪುರಿಯು ಆಶ್ಚರ್ಯದಿಂದ. ''ಹೀಗೇಕೆ ನಗುತ್ತಿರುವೆ ? ಆ ಮನುಷ್ಯ ಎಂಥ ಅನ್ಯಾಯ ಮಾಡಿದನೆಂದು ನೋಡಿದೆಯ'' ಎಂದು ಕೇಳಿದನು. ಶ್ರೀರಾಮಕೃಷ್ಣರು ನಗುತ್ತ ನುಡಿದರು : ''ಅದು ನಿಜ. ಆದರೊಂದಿಗೆ ನಿನ್ನ ಬ್ರಹ್ಮಜ್ಞಾನದ ಆಳವನ್ನೂ ನೋಡುತ್ತಿದ್ದೇನೆ; ಈಗತಾನೆ ಹೇಳುತ್ತಿದ್ದೆ ಬ್ರಹ್ಮನಿಗಿಂತ ಬೇರೆಯಾದುದು ಯಾವುದೂ ಇಲ್ಲ. ಎಲ್ಲ ವಸ್ತುಗಳೂ, ಎಲ್ಲ ವ್ಯಕ್ತಿಗಳೂ ಅವನ ಪ್ರಕಾಶವೇ ಎಂದು. ಮರುಕ್ಷಣವೇ ಅದನ್ನೆಲ್ಲ ಮರೆತು ಆ ವ್ಯಕ್ತಿಯನ್ನು ಹೊಡೆಯುವುದಕ್ಕೂ ಹೊರ ಟ್ಟಿದ್ದೆ. ಮಾಯೆಯ ಪ್ರಭಾವ ಎಂತಹುದು ಎಂದು ನಗುತ್ತಿದ್ದೆ.'' ಇದನ್ನು ಕೇಳಿ ತೋತಾಪುರಿ ಸ್ವಲ್ಪಹೊತ್ತು ಗಂಭೀರವಾಗಿ ಕುಳಿತು ಅನಂತರ ಹೇಳಿದನು : ''ನೀನು ಹೇಳಿದ್ದು ಸರಿ. ಕ್ರೋಧದಿಂದ ಎಲ್ಲವನ್ನು ಮರೆತುಬಿಟ್ಟೆ. ಕ್ರೋಧವು ತುಂಬ ಹೇಯವಾದುದು, ಇಂದಿನಿಂದ ಕೋಪಕ್ಕೊಳಗಾಗುವುದಿಲ್ಲ, ಕೋಪವನ್ನು ತ್ಯಜಿಸಿ ಬಿಟ್ಟೆ.'' ನಿಜವಾಗಿಯೂ ಅಂದಿನಿಂದ ಅವನು ಎಂದೂ ಕೋಪಗೊಂಡಿದ್ದು ಕಂಡು ಬರಲಿಲ್ಲ.

32, ಶ್ರೀರಾಮಕೃಷ್ಣರು ಹೇಳುತ್ತಿದ್ದರು : '' ಪಂಚ ಭೂತಗಳ ಬಲೆಯಲ್ಲಿ ಬಿದ್ದು ಬ್ರಹ್ಮನು ಅಳುತ್ತಾನೆ.'' ನೀವು ಕಣ್ಣುಮುಚ್ಚಿಕೊಂಡು 'ಮುಳ್ಳೂ ಇಲ್ಲ, ನೋವೂ ಇಲ್ಲ' ಎಂದು ಎಷ್ಟೇ ಹೇಳಿದರೂ, ಮುಳ್ಳು ಕೈಗೆ ಚುಚ್ಚಿದಾಗ ನೋವಿನಿಂದ 'ಊಹ್' ಎಂದು ನರಳುತ್ತೀರಿ. ಹಾಗೆಯೇ ನೀವು ಮನಸ್ಸಿಗೆ ಎಷ್ಟೇ ತಿಳಿಸಿಕೊಡ ಬಹುದು, ನನಗೆ ಜನ್ಮ, ಮೃತ್ಯು, ಪಾಪ, ಪುಣ್ಯ, ಶೋಕ, ದುಃಖ, ಹಸಿವು, ಬಾಯಾ ರಿಕೆ—ಇವಾವುವೂ ಇಲ್ಲ, ನಾನು ಜನ್ಮಜರಾದಿಗಳಿಲ್ಲದ ನಿರ್ವಿಕಾರ ಸಚ್ಚಿದಾನಂದ ಆತ್ಮ—ಎಂದು. ಆದರೆ ದೇಹಸ್ವಾಸ್ಥ್ಯ ಕೆಟ್ಟು ಹೋದರೆ, ಮನಸ್ಸು ಸಂಸಾರದ ರೂಪರಸಾದಿಗಳ ಪ್ರಲೋಭನೆಗಳಿಗೊಳಗಾದರೆ ಆಗ ಈ ವಿಚಾರ-ಆಚಾರಗಳೆಲ್ಲ ಮರೆತುಹೋಗುತ್ತವೆ. ಆಗ ಎಲ್ಲ ಮೋಹ, ಯಾತನೆ, ದುಃಖ ಮನಸ್ಸನ್ನು ಆವರಿಸಿ ಬಿಡುತ್ತವೆ, ನಿಮ್ಮ ಮನಸ್ಸಿನ ಶಾಂತಿಯನ್ನು ಕದಡಿಬಿಡುತ್ತವೆ. ಆದ್ದರಿಂದ ಭಗವಂತನ ಕೃಪೆಯಿಲ್ಲದೆ, ಮಾಯೆಯು ತನ್ನ ಬಾಗಿಲನ್ನು ತೆರೆಯದಿದ್ದರೆ ಆತ್ಮ- ಜ್ಞಾನ ಮತ್ತು ದುಃಖನಿವೃತ್ತಿ ಎರಡೂ ಸಾಧ್ಯವಿಲ್ಲ—ತಿಳಿಯಿತೆ ? 'ಚಂಡಿ'ಯಲ್ಲಿ ಹೇಳಿರುವುದನ್ನು ಕೇಳಿಲ್ಲವೆ, 'ಸೈಷಾ ಪ್ರಸನ್ನಾ ವರದಾ ನೃಣಾಂ ಭವತಿ ಮುಕ್ತಯೇ' ಎಂದು ? ಅಂದರೆ ತಾಯಿಯೇ ದಯೆ ತೋರಿ ಮಾರ್ಗವನ್ನು ಬಿಡದಿದ್ದರೆ ಏನೂ ನಡೆಯುವುದಿಲ್ಲ.

33. ''ರಾಮ, ಸೀತೆ ಮತ್ತು ಲಕ್ಷ್ಮಣ ಇವರು ಕಾಡಿನಲ್ಲಿ ಹೋಗುತ್ತಿ ದ್ದರು. ಕಾಡಿನಲ್ಲಿ ದಾರಿ ತುಂಬ ಕಿರಿದಾಗಿದ್ದುದರಿಂದ ಇಬ್ಬರೂ ಕೂಡ ಪಕ್ಕಪಕ್ಕ

ದಲ್ಲಿ ಹೋಗಲು ಸಾಧ್ಯವಿರಲಿಲ್ಲ. ರಾಮನು ಧನುರ್ಧಾರಿಯಾಗಿ ಮುಂದೆ ಹೋಗು ತ್ತಿದ್ದ, ಅವನ ಹಿಂದೆಯೇ ಸೀತೆ ಹೋಗುತ್ತಿದ್ದಳು. ಅವಳ ಹಿಂದೆ ಲಕ್ಷ್ಮಣನು ಧನುರ್ಬಾಣವನ್ನು ಹಿಡಿದು ಹೋಗುತ್ತಿದ್ದ. ಲಕ್ಷ್ಮಣನಿಗೆ ರಾಮನ ಮೇಲೆ ಎಷ್ಟೊಂದು ಪ್ರೀತಿಯಿತ್ತೆಂದರೆ ಯಾವಾಗಲೂ ನವಘನಶ್ಯಾಮ ರಾಮನ ರೂಪವನ್ನು ನೋಡುತ್ತಿರಬೇಕೆಂಬ ಆಸೆ. ಆದರೆ ಮಧ್ಯದಲ್ಲಿ ಸೀತೆಯಿದ್ದುದರಿಂದ ನಡೆಯುತ್ತಿರುವಾಗ ರಾಮನನ್ನು ಕಾಣದೆ ವ್ಯಾಕುಲನಾಗುತ್ತಿದ್ದ. ಸೀತೆಗೆ ಇದು ಅರ್ಥವಾಗಿ ಆಗಾಗ ಬದಿಗೆ ಸರಿದು 'ಈಗ ನೋಡು' ಎಂದು ಹೇಳುತ್ತಿದ್ದಳು. ಆಗ ಲಕ್ಷ್ಮಣನು ತನ್ನ ಇಷ್ಟ ಮೂರ್ತಿಯನ್ನು ಕಣ್ತುಂಬ ನೋಡುತ್ತಿದ್ದನು. ಹಾಗೆಯೇ ಜೀವ ಮತ್ತು ಈಶ್ವರರ ನಡುವೆ ಈ ಮಾಯಾ ರೂಪಿಣಿ ಸೀತೆ ಇರುವಳು. ಅವಳು ಜೀವರೂಪಿ ಲಕ್ಷ್ಮಣನ ದುಃಖವನ್ನು ನೋಡಿ ದಾರಿಬಿಟ್ಟು ಬಂಧನವನ್ನು ಕಳಚದಿದ್ದರೆ ಜೀವನು ಈಶ್ವರ ನನ್ನು ನೋಡಲಾಗುವುದಿಲ್ಲ, ಯಾರ ಮೇಲೆ ಅವಳ ಕೃಪೆಯಾಗಿದೆಯೊ ಅವನು ರಾಮರೂಪಿ ನಾರಾಯಣನ 'ದರ್ಶನವನ್ನು ಪಡೆದು ಎಲ್ಲ ಶೋಕತಾಪಗಳಿಂದಲೂ ಪಾರಾಗುತ್ತಾನೆ. ಅದಿಲ್ಲದಿದ್ದರೆ ನೀವು ಎಷ್ಟೇ ವಿಚಾರ ಮಾಡಿ, ಅದರಿಂದ ಏನೂ ನಡೆಯುವುದಿಲ್ಲ. ಓಮದ ಒಂದು ಕಾಳು ನೂರು ಕಾಳು ಅನ್ನವನ್ನು ಜೀರ್ಣಿಸು ವುದಂತೆ. ಆದರೆ ಹೊಟ್ಟೆಯೇ ಸರಿಯಿಲ್ಲದಿದ್ದರೆ ಓಮದ ನೂರು ಕಾಳು ಕೂಡ ಒಂದು ಕಾಳು ಅನ್ನವನ್ನು ಜೀರ್ಣಿಸಲಾರದು. ಇದೂ ಹಾಗೆಯೇ ಎಂದು ತಿಳಿ."

34. ತೋತಾಪುರಿಯು ಹುಟ್ಟಿದಂದಿನಿಂದಲೂ ಶ್ರೀಜಗನ್ಮಾತೆಯ ಕೃಪೆಗೆ ಪಾತ್ರನಾಗಿದ್ದನು. ಚಿಕ್ಕಂದಿನಿಂದಲೂ ಅವನು ಉತ್ತಮ ಸಂಸ್ಕಾರವುಳ್ಳವನೂ ಸರಳ ಮನೋಭಾವದವನೂ ಆಗಿದ್ದನು. ಅವನು ಯೋಗಿ ಮಹಾಪುರುಷರ ಸಂಗದಲ್ಲಿಯೇ ಬೆಳೆದವನು. ಅವನ ದೇಹವೂ ಬಲಿಷ್ಠವಾಗಿತ್ತು. ಭಗವತಿಯು ಎಂದೂ ಅವನಿಗೆ ತನ್ನ ಕರಾಳ ರೂಪವನ್ನು ತೋರಿಸಿರಲಿಲ್ಲ, ತನ್ನ ಅವಿದ್ಯಾಶಕ್ತಿಯ ಸುಳಿಯಲ್ಲಿ ಅವನನ್ನು ಎಂದೂ ಸಿಕ್ಕಿಸಿರಲಿಲ್ಲ. ಅವನು ಸ್ವಪ್ರಯತ್ನದ ಮೂಲಕವೇ ಸಾಧನೆ ಯಲ್ಲಿ ಮುಂದುವರಿದುದರಿಂದ ನಿರ್ವಿಕಲ್ಪ ಸಮಾಧಿ, ಆತ್ಮ ಜ್ಞಾನ ಇವೆಲ್ಲ ಸುಲಭ ಸಾಧ್ಯವೆನಿಸಿತ್ತು ಅವನಿಗೆ. ತಾಯಿಯೇ ಹಾದಿಯಲ್ಲಿರುವ ವಿಘ್ನಗಳನ್ನೆಲ್ಲ ಬದಿಗೆ ಸರಿಸಿ ಮಾರ್ಗವನ್ನು ಸುಗಮವನ್ನಾಗಿ ಮಾಡಿಕೊಟ್ಟಿದ್ದಳು ಅವನ ಪಾಲಿಗೆ ಎಂಬುದು ಅವನಿಗೆ ಹೊಳೆಯುವುದಾದರೂ ಹೇಗೆ ? ಇಷ್ಟು ದಿನಗಳಾದ ಮೇಲೆ ಈ ವಿಷಯ ವನ್ನು ಅವನಿಗೆ ತಿಳಿಸಿಕೊಡುವ ಇಚ್ಛೆಯಾಯಿತು ಅವಳಿಗೆ. ತನ್ನ ಮನಸ್ಸಿನ ಭ್ರಮೆ ಯನ್ನು ಅರಿಯುವ ಸಮಯ ಈಗ ಪ್ರಾಪ್ತವಾಯಿತು ಅವನಿಗೆ.

35. ತೋತಾಪುರಿಯದು ಪಶ್ಚಿಮದ ಕಡೆಯ ದೇಹ, ರೋಗ, ಅಜೀರ್ಣ ಮುಂತಾದ ನೂರಾರು ದೈಹಿಕ ದೋಷಗಳ ಬಗ್ಗೆ ಅವನಿಗೆ ತಿಳಿದಿರಲೇ ಇಲ್ಲ. ಅವನು ತಿಂದಿದ್ದೆಲ್ಲ ಜೀರ್ಣವಾಗುತ್ತಿತ್ತು, ಎಲ್ಲೇ ಮಲಗಿದರೂ ಅವನಿಗೆ ಒಳ್ಳೆಯ ನಿದ್ರೆಯಾಗುತ್ತಿತ್ತು. ಭಗವದ್ದರ್ಶನದಿಂದಾಗಿ ಅವನ ಮನಸ್ಸಿನಲ್ಲಿ ಉಲ್ಲಾಸ ಶಾಂತಿ

ಮನೆ ಮಾಡಿಕೊಂಡಿದ್ದವು. ಆದರೆ ಬಂಗಾಳದ ನೀರು ಮತ್ತು ತೇವಯುಕ್ತ ಗಾಳಿ ಅವನಿಗೆ ಹಿಡಿಸಲಿಲ್ಲ, ಕೆಲವೇ ತಿಂಗಳುಗಳಲ್ಲಿ ರೋಗವು ಅವನ ದೃಢಕಾಯವನ್ನು ಪ್ರವೇಶಿಸುವಂತಾಯಿತು. ಅವನು ತೀವ್ರ ರಕ್ತಬೇಧಿಯಿಂದ ನರಳತೊಡಗಿದ–ಹಗಲಿರುಳೂ ಬೇಧಿ, ಹೊಟ್ಟೆ ನೋವು. ಈಗ ಅವನ ಮನಸ್ಸು ಕ್ರಮೇಣ ದೇಹದ ಕಡೆ ಹರಿಯತೊಡಗಿತು. ಈಗ ಪಂಚಭೂತಗಳ ಬಲೆಯಲ್ಲಿ ಬ್ರಹ್ಮನು ಸಿಕ್ಕಿಕೊಂಡಿರುವನು, ಜಗನ್ಮಾತೆಯ ಕೃಪೆಯಿಲ್ಲದೆ ಬೇರೆ ಗತಿಯೇ ಇಲ್ಲ.

36. ಅವನಿಗೆ ಕಾಯಿಲೆ ಬರುವುದಕ್ಕೆ ಸ್ವಲ್ಪ ಮುಂಚೆಯೇ, ಇಲ್ಲಿದ್ದರೆ ಶರೀರ ಸರಿಯಾಗಿರುವುದಿಲ್ಲ, ಇನ್ನು ಇಲ್ಲಿ ಮುಂದುವರಿಯುವುದು ಒಳ್ಳೆಯದಲ್ಲ ಎಂದು ಅವನಿಗೆ ಅನಿಸಿತ್ತು. ಆದರೆ ಶ್ರೀರಾಮಕೃಷ್ಣರ ಸಂಗವನ್ನು ತ್ಯಜಿಸಿ ಶರೀರದ ಮೇಲಿನ ವ್ಯಾಮೋಹದಿಂದ ಹೊರಟುಹೋಗುವುದೆ ? ಈ ಶರೀರವಾದರೂ ಎಲುಬು ಮಾಂಸದ ಹಂದರ, ನಶ್ವರ ವಸ್ತು. ಇದರ ಅಸ್ತಿತ್ವವೇ ಭ್ರಮೆಯೆಂದು ವೇದಾಂತವು ಸಾರುತ್ತದೆ. ಇದರ ಸಲುವಾಗಿ ಅಪಾರ ಆನಂದವನ್ನು ನೀಡುತ್ತಿರುವ ಆ ದೇವ ಮಾನವರ ಸಂಗವನ್ನು ತ್ಯಜಿಸಿ ಹೊರಟು ಹೋಗುವುದೆ ? ಎಲ್ಲಿಗೆ ಹೋದರೂ ಶರೀರದ ರೋಗ ಇದ್ದೇ ಇರುತ್ತದೆ. ರೋಗ ಬಂದರೆ ತಾನೆ ಏನಂತೆ ? ಅದನ್ನು ಶರೀರ ಅನುಭವಿಸುತ್ತದೆ. ಅದು ಕೃಶವಾಗುತ್ತದೆ, ಹೆಚ್ಚೆಂದರೆ ನಾಶವಾಗಿ ಹೋಗುತ್ತದೆ. ಅದರಿಂದ ತನಗಾಗುವುದೇನು ? ತಾನು ನಿರ್ವಿಕಾರ ಆತ್ಮ, ತನಗೂ ಶರೀರಕ್ಕೂ ಯಾವ ಸಂಬಂಧವೂ ಇಲ್ಲ ಎಂಬುದನ್ನು ಪ್ರತ್ಯಕ್ಷವಾಗಿ ಅನುಭವಿಸಿದ್ದ. ಆದ್ದರಿಂದ ಯಾವುದರ ಭಯ ? ಹೀಗೆ ಅವನು ಮನಸ್ಸಿಗೆ ಸಮಾಧಾನ ತಂದುಕೊಂಡಿದ್ದನು.

37. ಕಾಯಿಲೆ ಶುರುವಾಗಿ ವೇದನೆ ಅಧಿಕವಾಗಲು ಅಲ್ಲಿಂದ ಬಿಟ್ಟುಹೋಗಬೇಕೆಂದು ಅವನಿಗೆ ಆಗಾಗ ಅನಿಸತೊಡಗಿತು. ಶ್ರೀರಾಮಕೃಷ್ಣರಿಂದ ಬೀಳ್ಕೊಳ್ಳಲು ಹೋದಾಗ ಬೇರೆ ಬೇರೆ ಆಧ್ಯಾತ್ಮಿಕ ವಿಚಾರಗಳನ್ನು ಮಾತನಾಡುತ್ತ ಆ ವಿಷಯ ಮರತೇಹೋಗಿಬಿಡುತ್ತಿತ್ತು ಅವನಿಗೆ. ಬೀಳ್ಕೊಳ್ಳುವ ವಿಷಯ ಮನಸ್ಸಿಗೆ ಬಂದರೂ ಯಾವುದೊ ಅಂತರಿಕ ಶಕ್ತಿಯ ಪ್ರಭಾವದಿಂದ ಅದನ್ನು ವ್ಯಕ್ತಪಡಿಸಲು ಅವನಿಗೆ ಆಗುತ್ತಿರಲಿಲ್ಲ. 'ಇವತ್ತು ಬೇಡ, ನಾಳೆ ಹೇಳಿದರಾಯಿತು' ಎಂದು ಭಾವಿಸಿ ಸುಮ್ಮನಾಗುತ್ತಿದ್ದ. ಹೀಗೆಯೇ ದಿನಗಳು ಕಳೆದವು. ಅವನ ರೋಗ ಹೆಚ್ಚು ಹೆಚ್ಚು ಉಲ್ಬಣವಾಯಿತು, ಶರೀರ ತುಂಬ ದುರ್ಬಲವಾಯಿತು. ಶ್ರೀರಾಮಕೃಷ್ಣರು ಮೊದಲೇ ಪಥ್ಯ ಔಷಧಿಗಳ ವ್ಯವಸ್ಥೆ ಮಾಡಿದ್ದರು. ಆದರೂ ರೋಗ ಉಲ್ಬಣವಾಗುತ್ತಲೇ ಇತ್ತು. ಶ್ರೀರಾಮಕೃಷ್ಣರು ಮಥುರನಿಗೆ ಹೇಳಿ ವಿಶೇಷ ಔಷಧೋಪಚಾರದ ವ್ಯವಸ್ಥೆ ಮಾಡಿದರು ಮತ್ತು ತಾವೂ ಅವನ ಸೇವೆ ಮಾಡತೊಡಗಿದರು. ಈಗಲೂ ತೋತಾಪುರಿಯು ಶರೀರವನ್ನು ಅದರ ಪಾಡಿಗೆ ರೋಗವನ್ನು ಅನುಭವಿಸಲು ಬಿಟ್ಟು ಮನಸ್ಸನ್ನು ಸಮಾಧಿಸ್ಥಿತಿಗೆ ಏರಿಸಿ ದೇಹದ ಯಾತನೆಯನ್ನು ಮರೆತು ಶಾಂತವಾಗಿ

ಇರುತ್ತಿದ್ದ.

38. ಅಂದು ರಾತ್ರಿ ವೇಳೆ. ಹೊಟ್ಟೆಯಲ್ಲಿ ಅಸಾಧ್ಯ ವೇದನೆ. ಶಾಂತವಾಗಿ ಮಲಗಲೂ ಅವನಿಗೆ ಆಗುತ್ತಿಲ್ಲ. ಸ್ವಲ್ಪಹೊತ್ತು ಮಲಗುತ್ತಾನೆ, ಮತ್ತೆ ಮೇಲೇಳುತ್ತಾನೆ. ಕುಳಿತುಕೊಂಡರೂ ನೋವು ಕಡಮೆಯಾಗುತ್ತಿರಲಿಲ್ಲ. ಮನಸ್ಸನ್ನು ಧ್ಯಾನದಲ್ಲಿ ತೊಡಗಿಸುತ್ತೇನೆ. ಶರೀರಕ್ಕೆ ಏನಾದರೂ ಆಗಲಿ–ಎಂದು ಭಾವಿಸಿ ಮನಸ್ಸನ್ನು ಏಕಾಗ್ರಗೊಳಿಸಲು ಪ್ರಯತ್ನಿಸಿದನು. ಆದರೆ ಮನಸ್ಸು ಶರೀರದ ಕಡೆಗೇ ಓಡುತ್ತಿತ್ತು. ಎಷ್ಟೇ ಪ್ರಯತ್ನಿಸಿದರೂ ಮನಸ್ಸನ್ನು ಶರೀರದಿಂದ ಪ್ರತ್ಯೇಕಿಸಿ ಸಮಾಧಿಯಲ್ಲಿ ಸ್ಥಿರಗೊಳಿಸಲು ಸಾಧ್ಯವಾಗಲೇ ಇಲ್ಲ. ಆಗ ಅವನಿಗೆ ತನ್ನ ಶರೀರದ ಬಗ್ಗೆ ತುಂಬ ಅಸಹ್ಯ ಭಾವನೆ ಉಂಟಾಯಿತು. ಅವನು ಭಾವಿಸಿದ : "ಈ ಹೊಲಸು ದೇಹದ ಯಾತನೆಯಿಂದ ಇಂದು ನನ್ನ ಮನಸ್ಸು ನನ್ನ ವಶದಲ್ಲಿಲ್ಲ. ಇದು ಹಾಳಾಗಿ ಹೋಗಲಿ. ನಾನು ಶರೀರವಲ್ಲವೆಂಬುದು ನನಗೆ ಖಾತ್ರಿಯಾಗಿದೆ. ಹಾಗಿರುವಾಗ ಈ ಶರೀರವನ್ನು ಕಟ್ಟಿಕೊಂಡು ಯಾಕೆ ಈ ಕಷ್ಟವನ್ನು ಅನುಭವಿಸುವುದು ? ಇನ್ನು ಈ ಶರೀರದಿಂದ ಏನಾಗಬೇಕಾಗಿದೆ ? ಇಂದು ಈ ಗಂಭೀರ ರಾತ್ರಿಯಲ್ಲಿ ಇದನ್ನು ಗಂಗೆಯಲ್ಲಿ ವಿಸರ್ಜಿಸಿಬಿಡುತ್ತೇನೆ." ಹೀಗೆ ಭಾವಿಸಿ ತೋತಾಪುರಿಯು ಮನಸ್ಸಿನಲ್ಲಿ ಬ್ರಹ್ಮನನ್ನು ಚಿಂತಿಸುತ್ತ ನಿಧಾನವಾಗಿ ಗಂಗಾನದಿಗಿಳಿದು ಆಳಆಳಕ್ಕೆ ಮುಂದುವರಿದನು. ಆದರೆ ನದಿಯಲ್ಲಿ ನೀರೇ ಕಡಮೆಯಾದಂತಿದೆ ! ಅಥವಾ ತೋತಾಪುರಿಯು ತನ್ನ ಮನಸ್ಸಿನೊಳಗಿನ ಚಿತ್ರವನ್ನೇ ಹೊರಗಡೆ ಈ ರೀತಿ ನೋಡುತ್ತಿರುವನೆ ? ಅವನು ನದಿಯ ನೀರಿನಲ್ಲಿ ಆಚೆಯ ದಡದವರೆಗೂ ಹೋದನು. ಆದರೆ ಶರೀರವು ಮುಳುಗುವಷ್ಟು ನೀರೇ ಇಲ್ಲ! ಆ ಅಂಧಕಾರದಲ್ಲಿ ಆಚೆ ದಡದ ಮರ ಮನೆಗಳು ನೆರಳಿನಂತೆ ಕಾಣಿಸತೊಡಗಲು ತೋತಾಪುರಿಯು ಅತ್ಯಾಶ್ಚರ್ಯದಿಂದ ಚಿಂತಿಸಿದನು : "ಇದೇನು ದೈವೀ ಮಾಯೆಯು! ಮುಳುಗಿ ಸಾಯುವಷ್ಟೂ ಈ ನದಿಯಲ್ಲಿ ನೀರಿಲ್ಲವಲ್ಲ ! ಭಗವಂತನ ಇದೆಂತಹ ಅಪೂರ್ವ ಲೀಲೆ!" ಆಗ ಯಾರೊ ಒಳಗಿನಿಂದ ಅವನ ಬುದ್ಧಿಯ ತೆರೆಯನ್ನು ಸರಿಸಿದಂತಾಯಿತು. ಅವನ ಮನಸ್ಸು ಉಜ್ವಲ ಪ್ರಕಾಶದಿಂದ ಬೆಳಗಿತು. ಆಗ ಅವನು ಎಲ್ಲೆಲ್ಲಿಯೂ ಜಗನ್ಮಾತೆಯನ್ನು ನೋಡಿದ. ಆ ಅಚಿಂತ್ಯಶಕ್ತಿರೂಪಿಣಿಯೇ ನೀರಿನಲ್ಲಿ, ನೆಲದಲ್ಲಿ, ಶರೀರದಲ್ಲಿ, ಮನದಲ್ಲಿ – ಎಲ್ಲೆಲ್ಲಿಯೂ ಇರುವಳು. ರೋಗವೂ ಅವಳೆ, ಆರೋಗ್ಯವೂ ಅವಳೆ, ಜ್ಞಾನವೂ ಅವಳೆ, ಅಜ್ಞಾನವೂ ಅವಳೆ, ಜೀವನವೂ ಅವಳೇ ಮೃತ್ಯುವೂ ಅವಳೆ, ನೋಡುತ್ತಿರುವುದು, ಕೇಳುತ್ತಿರುವುದು, ಭಾವಿಸುತ್ತಿರುವುದು ಎಲ್ಲ ಅವಳೇ, ಅವಳೇ ಇದ್ದುದನ್ನು ನೆಲ್ಲದಂತೆಯೂ, ಇಲ್ಲದ್ದನ್ನು ಇರುವಂತೆಯೂ ಮಾಡುತ್ತಾಳೆ. ಶರೀರದಲ್ಲಿ ಇರುವವರೆಗೂ ಅವಳ ಇಚ್ಛಾನುಸಾರವಾಗಿಯೇ ನಡೆಯಬೇಕು. ಅವಳ ಪ್ರಭಾವದಿಂದ ಮುಕ್ತರಾಗಲು ಯಾರಿಗೂ ಸಾಧ್ಯವಿಲ್ಲ. ಅವಳ ಇಚ್ಛೆಯಿಲ್ಲದೆ ಸಾಯುವುದಕ್ಕೂ ಸಾಧ್ಯವಿಲ್ಲ. ಮತ್ತೆ ಶರೀರ ಮನಸ್ಸು ಬುದ್ಧಿ–ಇವುಗಳನ್ನು ಮೀರಿದ ಸ್ಥಿತಿಯೂ ಅವಳೇ–ತುರೀಯ ನಿರ್ಗುಣ ಮಾತೆ ! ಇಷ್ಟುದಿನ ತೋತಾಪುರಿ

ಯಾರನ್ನು ಬ್ರಹ್ಮ ಎಂದು ಭಕ್ತಿವಿಶ್ವಾಸದಿಂದ ಉಪಾಸಿಸಿದನೊ ಅವನೇ ಈ ಜಗನ್ಮಾತೆ-ಬ್ರಹ್ಮ ಮತ್ತು ಬ್ರಹ್ಮ ಶಕ್ತಿ ಅಭೇದ.

ಹೋದ ದಾರಿಯಲ್ಲಿಯೇ ತೋತಾಪುರಿ ಹಿಂದಿರುಗಿದನು. ಆದರೆ ಅವನು ಈಗ ಬೇರೆಯೇ ವ್ಯಕ್ತಿಯಾಗಿದ್ದ, ಎಲ್ಲೆಲ್ಲಿಯೂ ಆ ಅಚಿಂತ್ಯ ಅವ್ಯಕ್ತ ವಿರಾಟ್ ಶಕ್ತಿಯನ್ನೇ ನೋಡುತ್ತ, ಭಕ್ತಿಪೂರ್ಣ ಹೃದಯದಿಂದ ಜಗನ್ಮಾತೆಯನ್ನು ಚಿಂತಿಸುತ್ತ, 'ತಾಯಿ ತಾಯಿ' ಎಂಬ ಧ್ವನಿಯಿಂದ ನಾಲ್ಕೂದಿಕ್ಕುಗಳನ್ನು ತುಂಬುತ್ತ ತೋತಾಪುರಿ ಹೋದಂತೆಯೆ ಮರಳಿ ನೀರಿನ ಮೂಲಕ ನಡೆದುಬಂದನು. ಶರೀರದಲ್ಲಿ ಯಾತನೆ ಇದ್ದರೂ ಅವನು ಅದನ್ನು ಅನುಭವಿಸುತ್ತಿರಲಿಲ್ಲ. ಹೃದಯ ಸಮಾಧಿಸ್ಮೃತಿಯಿಂದ ಉಲ್ಲಾಸಭರಿತವಾಗಿದೆ, ಮೆಲ್ಲಗೆ ಧುನಿಯ ಹತ್ತಿರ ಬಂದು ಕುಳಿತು ತೋತಾಪುರಿ ಇಡೀ ರಾತ್ರಿ ಜಗನ್ಮಾತೆಯ ನಾಮ ಚಿಂತನೆಯಲ್ಲಿ ಕಳೆದನು.


39. ಬೆಳಗ್ಗೆ ಶ್ರೀರಾಮಕೃಷ್ಣರು ಅವನ ಆರೋಗ್ಯವನ್ನು ವಿಚಾರಿಸಲು ಬಂದರು. ಅವನು ಸಂಪೂರ್ಣ ಬೇರೆಯೇ ವ್ಯಕ್ತಿಯಾಗಿ ಕಂಡನು. ಮುಖ ಆನಂದದಿಂದ ಬೆಳಗುತ್ತಿತ್ತು, ತುಟಿ ಮಂದಹಾಸದಿಂದ ಅರಳಿತ್ತು, ಶರೀರದಲ್ಲಿ ರೋಗದ ಚಿಹ್ನೆಯೇ ಕಾಣುತ್ತಿರಲಿಲ್ಲ. ತೋತಾಪುರಿ ಶ್ರೀರಾಮಕೃಷ್ಣರನ್ನು ಪಕ್ಕದಲ್ಲಿ ಕೂರಿಸಿಕೊಂಡು ರಾತ್ರಿ ನಡೆದಿದ್ದನ್ನೆಲ್ಲ ವಿವರಿಸಿದನು. ಅವನೆಂದ : "ರೋಗವೇ ನನಗೆ ಸ್ನೇಹಿತನಂತಾಯಿತು. ನಿನ್ನೆ ಶ್ರೀಜಗನ್ಮಾತೆಯ ದರ್ಶನವಾಯಿತು, ಈಗ ರೋಗವೂ ವಾಸಿಯಾಯಿತು. ಇಷ್ಟು ದಿನ ನಾನು ಅಜ್ಞಾನಿಯೇ ಆಗಿದ್ದೆನಲ್ಲ ! ಏನೇ ಆಗಲಿ, ಈಗ ನಿನ್ನ ತಾಯಿಗೆ ತಿಳಿಸಿ ನನಗೆ ಇಲ್ಲಿಂದ ಹೊರಡಲು ಅನುಮತಿ ಕೊಡು. ಅವಳೇ ನನಗೆ ಬುದ್ಧಿ ಕಲಿಸಲು ಎಷ್ಟೆಲ್ಲ ತಿರುಗಾಡಿಸಿ ಇಲ್ಲಿ ಇಷ್ಟು ದಿನ ಇರಿಸಿದ್ದಳು ಎಂದು ನನಗೆ ಈಗ ತಿಳಿಯಿತು. ನಾನು ಎಷ್ಟೋ ಹಿಂದೆಯೇ ಹೊರಡಬೇಕೆಂದಿದ್ದೆ, ನಿನ್ನಿಂದ ಬಿಳ್ಕೊಳ್ಳಬೇಕೆಂದು ಎಷ್ಟೋ ಬಾರಿ ಬಂದಿದ್ದೆ. ಆದರೆ ಏನೊ ಕಾರಣದಿಂದ ಆ ಮಾತನ್ನು ಎತ್ತುವುದಕ್ಕೆ ಆಗುತ್ತಿರಲಿಲ್ಲ. ಬೇರೆ ಯಾವ ಯಾವುದೋ ಮಾತಿನಲ್ಲಿ ಅದು ಮರತೇಹೋಗುತ್ತಿತ್ತು." ಶ್ರೀರಾಮಕೃಷ್ಣರು ಕೇಳಿ ನಕ್ಕು ನುಡಿದರು : "ತಾಯಿಯನ್ನು ನೀವು ಮೊದಲು ಒಪ್ಪುತ್ತಿರಲಿಲ್ಲ. ಶಕ್ತಿ ಎಲ್ಲ ಸುಳ್ಳು ಎಂದು ನನ್ನೊಂದಿಗೆ ವಾದ ಮಾಡುತ್ತಿದ್ದಿರಿ. ಈಗ ನೋಡಿದಿರಿ, ಕಣ್ಣು ಕಿವಿಯ ವಿವಾದ ಮುಕ್ತಾಯಗೊಂಡಿತು. 'ಬ್ರಹ್ಮ ಮತ್ತು ಶಕ್ತಿ ಅಭೇದ – ಅಗ್ನಿ ಮತ್ತು ಅದರ ಸುಡುವ ಶಕ್ತಿ ಇವು ಹೇಗೆ ಬೇರೆಯಲ್ಲವೊ ಹಾಗೆ' ಎಂದು ಅವಳು ನನಗೆ ಮೊದಲೇ ತಿಳಿಸಿಕೊಟ್ಟಿರುವಳು."

ಅನಂತರ ಆ ಇಬ್ಬರು ಮಹಾಪುರುಷರು ಮೇಲೆದ್ದು ಕಾಳೀ ಮಂದಿರಕ್ಕೆ ಹೋಗಿ ಶ್ರೀಮೂರ್ತಿಯನ್ನು ನಮಸ್ಕರಿಸಿದರು. ಈಗ ಜಗನ್ಮಾತೆಯು ಪ್ರಸನ್ನಳಾಗಿ ತೋತಾಪುರಿಗೆ ಹೊರಡಲು ಅನುಮತಿಯಿತ್ತಿರುವಳು ಎಂದು ಅವರಿಬ್ಬರಿಗೂ ವೇದ್ಯವಾಯಿತು. ಅವನು ಕೆಲವೇ ದಿನಗಳಲ್ಲಿ ಶ್ರೀರಾಮಕೃಷ್ಣರಿಂದ ಬೀಳ್ಕೊಂಡು

ದಕ್ಷಿಣೇಶ್ವರವನ್ನು ತ್ಯಜಿಸಿ ಪಶ್ಚಿಮದ ಕಡೆ ಹೊರಟನು. ತೋತಾಪುರಿಗೆ ದಕ್ಷಿಣೇಶ್ವರದ ಕಾಳೀಮಂದಿರದ ದರ್ಶನ ಇದೇ ಪ್ರಥಮ ಮತ್ತು ಕಡೆಯದು. ಏಕೆಂದರೆ ಅವನು ಮುಂದೆ ಎಂದೂ ಇತ್ತ ಕಡೆ ಬರಲಿಲ್ಲ.

40. ಇನ್ನೊಂದು ವಿಷಯವನ್ನು ಹೇಳಿದರೆ ಶ್ರೀರಾಮಕೃಷ್ಣರಿಂದ ತೋತಾಪುರಿಯ ಬಗ್ಗೆ ಏನೇನು ಕೇಳಿದ್ದೆವೊ ಅದನ್ನೆಲ್ಲ ಹೇಳಿಮುಗಿಸಿದಂತಾಗುತ್ತದೆ. ತೋತಾಪುರಿಗೆ ರಸವಿದ್ಯೆಯಲ್ಲಿ ವಿಶ್ವಾಸವಿತ್ತು. ಅಷ್ಟೇ ಅಲ್ಲ, ಆ ವಿದ್ಯೆಯ ಸಹಾಯದಿಂದ ತಾಮ್ರವೇ ಮುಂತಾದ ಲೋಹಗಳನ್ನು ಚಿನ್ನವಾಗಿ ಪರಿವರ್ತಿಸಲು ತಾನು ಅನೇಕ ಬಾರಿ ಸಮರ್ಥನಾಗಿದ್ದನೆಂದು ಅವನು ಶ್ರೀರಾಮಕೃಷ್ಣರಿಗೆ ಹೇಳಿದ್ದನು. ಅವನ ಸಾಧುಮಂಡಳಿಯಲ್ಲಿ ಆ ವಿದ್ಯೆ ಪ್ರಚಲಿತವಿತ್ತಂತೆ. ಅವನದನ್ನು ಪ್ರಾಚೀನ ಗುರುಪರಂಪರೆಯಿಂದ ಪಡೆದಿದ್ದನೆಂದು ಹೇಳಿರುವನು. ಅವನು ಇನ್ನೂ ಹೇಳಿದ್ದನು : "ಈ ವಿದ್ಯೆಯನ್ನು ಸ್ವಾರ್ಥಸಾಧನೆಗೆ ಅಥವಾ ಭೋಗವಿಲಾಸಕ್ಕೆ ಬಳಸುವುದು ಸಂಪೂರ್ಣ ನಿಷಿದ್ಧ. ಹಾಗೆ ಮಾಡಿದರೆ ಗುರುವಿನ ಶಾಪಕ್ಕೆ ಒಳಗಾಗಬೇಕಾಗುತ್ತಿತ್ತು. ಮಂಡಳಿಯಲ್ಲಿ ಅನೇಕ ಸಾಧುಗಳಿರುತ್ತಾರೆ. ಅವರನ್ನು ಕರೆದುಕೊಂಡು ಮಂಡಳಿಯ ನಾಯಕನು ಅನೇಕ ತೀರ್ಥಪರ್ಯಟನೆ ಮಾಡಬೇಕಾಗುತ್ತಿತ್ತು. ಅವರಿಗೆಲ್ಲ ಊಟದ ವ್ಯವಸ್ಥೆ ಮಾಡಬೇಕಾಗುತ್ತಿತ್ತು. ಅಂಥ ಸಂದರ್ಭದಲ್ಲಿ ಹಣದ ಕೊರತೆ ಇದ್ದರೆ ಆ ವಿದ್ಯೆಯನ್ನು ಪ್ರಯೋಗಿಸಬಹುದು – ಎಂದು ಗುರುವಿನ ಆದೇಶವಿತ್ತು."

41. ಹೀಗೆ ಶ್ರೀರಾಮಕೃಷ್ಣರ ಗುರುಭಾವದ ಸಹಾಯದಿಂದ ಭೈರವೀ ಬ್ರಾಹ್ಮಣಿ ಮತ್ತು ತೋತಾಪುರಿ ತಮ್ಮ ತಮ್ಮ ಗುರಿಯನ್ನು ಮುಟ್ಟಿ ಧನ್ಯತೆಯನ್ನು ಪಡೆದರು. ಶ್ರೀರಾಮಕೃಷ್ಣರ ಉಳಿದ ಶಿಕ್ಷಾಗುರುಗಳೂ ಶ್ರೀರಾಮಕೃಷ್ಣರ ಉದಾರ ಆಧ್ಯಾತ್ಮಿಕತೆಯಿಂದ ಲಾಭಪಡೆದಿದ್ದರು ಎಂದು ನಾವು ಇದರಿಂದ ಅನುಮಾನಿಸಬಹುದು.



ನಾಮ ಸೂಚಿ

ಅ

ಅಕ್ಷಯಕುಮಾರ : 31,65,74,117, 292–95, 325, 360
ಅರ್ಜುನ : 427, 429
ಅದ್ವೈತ ಗೋಸ್ವಾಮಿ : 180, 332, 454
ಅದ್ವೈತಾನಂದ : 366, 421, 422
ಅಭೇದಾನಂದ : 83, 84, 400, 401, 421
ಅಯನಘೋಷ್ : 240

ಇ

ಇಂದ್ರ : 355
ಇಂದ್ರಜಿತ್ : 428

ಈ

ಈಶಾನಚಂದ್ರ : 333
ಈಶಾನಚೌಧರಿ : 333

ಉ

ಉತ್ಸವಾನಂದ : 177, 318
ಉದ್ಧವ : 489, 490

ಏ

ಏಕಲವ್ಯ : 428

ಕ

ಕನಾಯ್‌ರಾಮ : 21, 27, 28
ಕನಾಯ್‌ಲಾಲ್ : 158
ಕಪಿಲ : 4
ಕಮಲಾಕಾಂತ : 453
ಕರುಣಾಮಯಿ : 194, 265
ಕಾತ್ಯಾಯಿನಿ : 22, 24, 32, 33
ಕಾಳಿದಾಸ : 28
ಕುಮಾರಿ : 194
ಕೃಷ್ಣ : 9,16,17,35,36,44,68-70, 74, 79, 80, 104, 112, 180, 219, 225, 231, 234, 236–7, 239, 240–2, 247–52, 337, 424, 427, 429, 443–8, 450, 455, 462, 481, 488, 495
ಕೃಷ್ಣಚಂದ್ರ : 28

ಕೇನಾರಾಮ : 29, 141, 164, 176
ಕೇಶವಸೇನ್ : 327–33
ಕ್ರಿಸ್ತ (ಯೇಸು, ಜೀಸಸ್): 17, 35, 79, 104, 225, 231, 235, 310–13, 337, 350–2, 424, 433, 434, 443, 448, 454, 455, 461
ಕ್ಷುಧಿರಾಮ : 21–23, 26, 28–34, 36–39, 40–50, 52,55, 60, 63, 68
ಕ್ಷೇತ್ರನಾಥ : 122, 137, 138

ಗ

ಗಯಾವಿಷ್ಣು : 59,60,73,109,278
ಗಂಗಾನಾರಾಯಣ : 290
ಗಂಗಾಪ್ರಸಾದಸೇನ್ : 161, 190, 267, 470
ಗಂಗಾಮಯಿ : 285
ಗಿರಿಜ : 508, 510, 511, 513
ಗಿರೀಶಚಂದ್ರಘೋಷ್ : 274,312, 347–50, 370, 399, 402, 403, 422
ಗೋಪಾಲ : 366
ಗೋಪೀಲಾಲ್ : 18
ಗೋವಿಂದ : 164, 237
ಗೋವಿಂದರಾಯ್ : 271, 272, 506
ಗೋವಿಂದಸಿಂಗ್ : 313
ಗೌತಮ : 225
ಗೌರಿ ಪಂಡಿತ : 317, 318

ಚ

ಚಂದ್ರ : 508, 509, 510, 513
ಚಂದ್ರಮಣಿದೇವಿ : 21, 26, 27, 29,31,32, 36–46, 49, 52–54, 58, 61, 63, 65–71, 74, 75,108,142,185–86, 188–91, 256, 257, 276, 283, 321, 325–26
ಚಂಡೀದಾಸ : 242
ಚಿಕ್ಕಗೋಪಾಲ್ : 421
ಚೈತನ್ಯ (ಗೌರಾಂಗ) : 8, 17, 35, 36, 70, 79, 104, 157, 180 198, 200, 201, 235–40, 248–9, 295,301,318,332, 350, 352, 424, 426, 433, 443, 453, 461, 462

ಜ

ಜಗದಂಬಾದಾಸಿ : 119, 194, 265, 266, 267, 275, 297, 334, 483
ಜಗಾಯ್ : 351
ಜಟಾಧಾರಿ : 164, 175, 222, 223, 227, 256

ಜನಕ : 166
ಜಯಗೋಪಾಲಸೇನ್ : 327
ಜಯನಾರಾಯಣ : 138
ಜೀವಗೋಸ್ವಾಮಿ : 242, 249
ಜುಡಾ : 225
ಜೋಸೆಫ್ : 434

ತ

ತುರೀಯಾನಂದ : 392–95
ತುಳಸೀದಾಸ : 253
ತ್ರೈಲಿಂಗಸ್ವಾಮಿ : 285
ತ್ರೈಲೋಕ್ಯನಾಥ್‌ಠಾಕೂರ್ : 124
ತೋತಾಪುರಿ : 164, 175, 179, 251, 257–64, 279–80, 292 378, 470, 506, 514, 517–31

ದ

ದ್ವಾರಕಾನಾಥ್ : 297
ದಿಗಂಬರ ಮಿತ್ರ : 114
ದೀನನಾಥ್ : 295
ದುರ್ಗಾದಾಸ್‌ಪಾಯಿನ್ : 69, 70
ದುರ್ಗಾಪ್ರಸಾದ : 190
ದೇವಕಿ : 461
ದೇವೇಂದ್ರನಾಥಠಾಕೂರ್ : 331
ದ್ರೋಣ : 428

ಧ

ಧನಿ ಕಾಮಾರಿಣಿ : 38, 39, 41, 42, 59, 112, 278, 435
ಧರ್ಮದಾಸ್‌ಲಾಹಾ : 45.58, 59, 67, 106

ನ

ನಟವರ ಗೋಸ್ವಾಮಿ : 332, 333
ನವೀನಚಂದ್ರನಿಯೋಗಿ : 199
ನಾನಕ್ : 313
ನಾರದ : 86, 376
ನಿತ್ಯಾನಂದ : 180, 200, 332
ನಿಧಿರಾಮ : 21, 27, 28
ನಿರಂಜನಾನಂದ : 135

ಪ

ಪತಂಜಲಿ : 244
ಪದ್ಮಮಣಿ : 194
ಪದ್ಮಲೋಚನ : 218, 250, 317, 318
ಪ್ರಸನ್ನಮಯಿ : 38, 39, 42, 58, 67, 106, 107, 278
ಪ್ರಾಣಕೃಷ್ಣ : 368
ಪ್ರೇಮಾನಂದ : 175

ಬ

ಬಲರಾಮ ಬಸು : 366,394,406, 438
ಬಾಲಗೋಪಾಲ : 80, 218
ಬುದ್ಧ : 17, 35, 36, 79,104, 225, 229, 312, 337, 424 443, 448
ಬ್ರಹ್ಮಾನಂದ (ರಾಖಾಲ್) : 366, 399

ಭ

ಭರ್ತೃಹರಿ : 169
ಭಾಗವತ ಬಂದ್ಯೋಪಾಧ್ಯಾಯ : 27
ಭೈರವೀ ಬ್ರಾಹ್ಮಣಿ : 158, 164, 175, 179, 180, 196–209 215, 218, 227, 234, 235, 244, 247, 249, 275, 280 281, 286, 300, 318, 378, 470, 506–8, 513–17, 531

ಮ

ಮಣಿಮೋಹನ ಸೇನ್ : 177, 323, 358–61
ಮಥುರನಾಥ : 118, 119, 124, 128,131–38,141,147,154, 155, 158–61, 176, 184, 190–92, 195–96, 200–2, 215–23, 246, 256, 265, 267, 272, 275, 283–88, 290, 294–99,303,316–18, 322, 334, 357,397–8,449, 451, 452, 454, 460–503, 505, 507, 510, 520, 528
ಮಧಾಯಸ್ : 351
ಮಹಮ್ಮದ್ ; 17, 448
ಮಹಾವೀರ (ತೀರ್ಥಂಕರ) : 313
ಮಹಾವೀರ (ಹನುಮಂತ) : 168, 219, 417, 418, 428
ಮಹೇಂದ್ರನಾಥ ಗುಪ್ತ : 367, 368, 369
ಮಹೇಂದ್ರನಾಥಪಾಲ್ : 333
ಮಹೇಂದ್ರಲಾಲ್ ಸರ್ಕಾರ್ : 181, 357, 421, 470, 495
ಮಹೇಶಚಂದ್ರ : 65, 122, 123, 124, 268
ಮಾಕ್ಸ್‌ಮುಲ್ಲರ್ : 435
ಮಾಣಿಕ್‌ರಾಜ್ : 20, 21,50,51, 56, 73
ಮೇರಿ : 35, 434

ಯ

ಯದುನಾಥ ಸರ್ಕಾರ್ : 47
ಯದುಮಲ್ಲಿಕ್ : 310
ಯಶೋದೆ : 80, 201,218,244, 507
ಯೋಗಾನಂದ : 333, 363,407, 495–97
ಯೋಗೇಶ್ವರಿ : 215, 216

ರ

ರತನ್‌ರಾಯ್ : 138
ರಮಾನಂದರಾಯ್ : 21, 22
ರಾಘವ : 28
ರಾಜಾರಾಮ : 28, 162
ರಾಜೇಂದ್ರನಾಥ ಸರ್ಕಾರ್ : 47
ರಾಜೇಂದ್ರಲಾಲ್: 284, 421
ರಾಧೆ : 197, 237, 239-41, 247-49, 429, 495
ರಾಮ : 9, 17, 21,22,25,35, 44, 74, 112,168,180,225, 253, 417, 425, 426, 428, 461-62, 526-27
ರಾಮಕುಮಾರ : 22, 24, 29-31, 41, 53-55, 59, 62-65,74, 75, 113-117,122-28,131, 134, 137, 140-42, 185, 255, 257, 292, 451
ರಾಮಕೃಷ್ಣಾನಂದ : 84
ರಾಮಚಂದ್ರ : 28, 44, 52, 54
ರಾಮಚಂದ್ರದಾಸ : 118
ರಾಮಚಂದ್ರ ಮುಖ್ಯೋಪಾಧ್ಯಾಯ : 188, 302, 303, 436
ರಾಮಜಯ : 50
ರಾಮತಾರಕ : 161
ರಾಮಧನ : 65, 123, 124
ರಾಮಪ್ರಸಾದ : 257, 353, 453, 464
ರಾಮಮೋಹನರಾಯ್ : 331
ರಾಮರತನ : 28, 162
ರಾಮಲಾಲ : 123, 322, 326, 367, 369, 406, 438, 443
ರಾಮಶೀಲ : 21, 27, 28, 50, 132
ರಾಮಸದಯ : 62, 63
ರಾಮೇಶ್ವರ : 22, 29, 56, 60, 62, 63, 65, 66,70,74,185 187,188,293,294, 320-22
ರಾಮಚರಣದಾಸ : 333
ರಾಸಮಣಿ : 118-25,128,134, 136-7,139,147,153,158-9 161, 169, 184, 193-96, 216, 221-2, 317, 449-54, 456, 458-61, 476-7, 497, 499
ರುಕ್ಮಿಣಿ : 70
ರೂಪಗೋಸ್ವಾಮಿ : 242

ಲ

ಲಕ್ಷ್ಮಣ : 225, 428, 526, 527

ವ

ವಸುದೇವ : 461
ವಿದ್ಯಾಪತಿ : 242
ವಿಭೀಷಣ : 425, 426
ವಿವೇಕಾನಂದ (ನರೇಂದ್ರ) : 81-83

183, 184, 206, 213, 237, 245, 331, 374, 375, 385, 395, 396, 399, 402–3, 421, 444, 448, 492, 493, 509
ವಿಶ್ವನಾಥ ಉಪಾಧ್ಯಾಯ : 323, 324, 327, 384
ವಿಷ್ಣು : 86, 428
ವೈಷ್ಣವ ಚರಣ : 177, 202, 249, 317, 318
ವ್ಯಾಸ : 165, 365

ಶ

ಶಂಕರಾಚಾರ್ಯ : 17, 35, 36, 79, 102, 229, 235, 337, 346, 417, 461, 491 493, 523
ಶಂಭುಚಂದ್ರ : 43
ಶಂಭುಮಲ್ಲಿಕ : 310, 322-25, 381, 382, 510, 511
ಶಚೀದೇವಿ : 36
ಶಶಧರ ತರ್ಕಚೂಡಾಮಣಿ : 395
ಶಾರದಾದೇವಿ (ಶ್ರೀಮಾತೆ): 279-80 300-8, 314, 317, 319, 323-25, 366, 381, 407, 438, 442-45
ಶಿವರಾಮ : 30
ಶುಕದೇವ : 165, 166, 248, 365, 376
ಶುದ್ಧೋಧನ : 461
ಶ್ರೀನಾಥ ಮಲ್ಲಿಕ : 333
ಶ್ರೀನಿವಾಸ ಶಾಂಖಾರಿ : 72, 278, 281

ಸ

ಸನಾತನ ಗೋಸ್ವಾಮಿ : 242
ಸರ್ವಮಂಗಳೆ : 46, 55, 62, 63, 74
ಸೀತಾನಾಥಪಾಯಿನ್ : 60, 68–70, 108
ಸೀತೆ : 169, 225, 526, 527
ಸಿದ್ಧಾರ್ಥ : 461
ಸುಖಲಾಲ : 18, 22, 23, 26, 40
ಸುಧಾಮ : 219
ಸುರೇಂದ್ರನಾಥ ಮಿತ್ರ : 182, 184

ಹ

ಹಜರಾ (ಪ್ರತಾಪ್) : 407
ಹಲಧರ : 472, 474
ಹಲಧಾರಿ : 28, 161, 162, 170-75, 179, 257
ಹೃದಯರಾಮ : 28, 32, 33, 123, 126, 132-39, 142-44 150, 152–54, 158, 160–62, 169, 172, 174, 187, 190, 197, 200–1, 215, 217–18, 247, 250, 256, 267, 272, 274–76,

281-300. 307-8, 317, 321
324–28, 332-34,436,446,
453, 481, 482, 507
ಹೇಮಾಂಗಿನಿ : 27, 53,122,132

“ಸ್ವಾಮಿ ಶಾರದಾನಂದರು ಪ್ರಮಾಣ
ತತ್ತ್ವಜ್ಞಾನಿ ಮತ್ತು ಇತಿಹಾಸಕಾರರು
ಗ್ರಂಥವು ತಾತ್ತ್ವಿಕ ಭಾವನೆಗಳಿಂದ ಶ್ರೀಮ
ಹಿಂದೂ ವೈಚಾರಿಕತೆಯ ಅದ್ಭುತ ಸ
ಶ್ರೀರಾಮಕೃಷ್ಣರ ಸ್ಥಾನವೇನು ಎಂಬುದ
ಗ್ರಂಥವು ನಿರ್ದಿಷ್ಟವಾದ ರೀತಿಯಲ್ಲಿ
ಅವರ ಗ್ರಂಥವನ್ನು ಓದುವ ಸಾಮ
ಸ್ವಾಮೀಜಿಯವರ ವಿಶಾಲ ಅನುಭವ,
ಪಾಂಡಿತ್ಯ ವೈಚಾರಿಕ ದೃಷ್ಟಿಕೋನ, ಮ
ವಾದ ಆಧ್ಯಾತ್ಮಿಕ ಅನುಭವದ ಪರಿಚಯ
ತ್ತದೆ. ವಿಷಯ ನಿರೂಪಣೆಯಲ್ಲಿ ಲೇಖಕರ
ವಾದ ಸಾಮರ್ಥ್ಯವನ್ನು ಪ್ರದರ್ಶಿಸಿದ್ದಾರ

- ರೋಮ
(ನೋಬೆಲ್ ಪಾರಿತೋಷಕ ವಿಜೇತ ಫ್ರೆಂಚ್



‘‘...ಸತ್ಯನಿಷ್ಠರೂ, ಪರರ ಕಷ್ಟವನ್ನು ಸಹಿಸಲಾರದೆ ಅವರ ಕಷ್ಟಗಳ ಪರಿಹಾರಕ್ಕೆ ಹಗಲಿರುಳೂ ಚಿಂತಿಸಿದವರೂ, ಈ ಜಗತ್ತಿನ ಸಹಸ್ರಾರು ವರ್ಷಗಳ ಇತಿಹಾಸದಲ್ಲಿ ಏಕೈಕರೂ ಎನ್ನುವಂತಹ ಮಹಾವ್ಯಕ್ತಿಯ ಜೀವನದ ನೂರಾರು ಸ್ವಾರಸ್ಯಮಯವೂ, ಆಶ್ಚರ್ಯಕರವೂ ಆದ ಸಂಗತಿಗಳನ್ನು ಸ್ವಯಂ ಸತ್ಯನಿಷ್ಠರೂ, ಮಹಾತಪಸ್ವಿಗಳೂ, ಅಸಾಧಾರಣ ಬುದ್ಧಿಶಾಲಿಗಳೂ ಆದ ಶ್ರೀಶಾರದಾನಂದರು ತಮ್ಮ ಈ ಗ್ರಂಥದಲ್ಲಿ ದಾಖಲುಗೊಳಿಸಿದ್ದಾರೆ. ಅನೇಕಾನೇಕ ಶಾಸ್ತ್ರಗಳ ಆಧಾರಗಳನ್ನು ನೀಡಿ ಪರಮಹಂಸರು ಹಾಗೆ ನುಡಿದದ್ದು ಏಕೆ, ನಡೆದದ್ದು ಏಕೆ ಎಂಬುದನ್ನು ನಮ್ಮ ಮತಿ ಒಪ್ಪಿಕೊಳ್ಳುವಂತೆ ಸಮರ್ಥಿಸಿದ್ದಾರೆ. ಸತ್ಯಯುತವೂ ಅರ್ಥಪೂರ್ಣವೂ ಆದ ಜೀವನವನ್ನು ನಡೆಸಬೇಕೆನ್ನುವ ಪ್ರತಿಯೊಬ್ಬ ವ್ಯಕ್ತಿಯೂ ‘‘ಶ್ರೀರಾಮಕೃಷ್ಣ ವಚನವೇದ’’ವನ್ನು ನಿತ್ಯವೂ, ಸ್ವಲ್ಪವಾದರೂ ಓದಬೇಕು. ಹಾಗೆಯೆ ಅಂತಹ ವೇದವಾಣಿಯನ್ನು ಯಾರು ನುಡಿದರೊ ಅವರ ಬದುಕಿನ ಅರ್ಥ, ಆಶಯಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ‘‘ಶ್ರೀರಾಮಕೃಷ್ಣ ಲೀಲಾಪ್ರಸಂಗ’’ವನ್ನು ಅಧ್ಯಯನ ಮಾಡಬೇಕು.’’

ಪ್ರಭುಶಂಕರರ ಮುನ್ನುಡಿಯಿಂದ

SRI RAMAKRISHNA LILAPRASANGA

Rs. 75.00

Sri Ramakrishna Ashrama Yadavagiri Mysore 570020